ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶಾಂತಿಪರ್ವ

ಸಂಪುಟ ೨೨

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 22

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್,M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ಪರಮಾತ್ಮನ ಕೃಪೆಯಿಂದಲೂ, ಗುರುಭಗವಂತನ ದಿವ್ಯಾನುಗ್ರಹ ದಿಂದಲೂ, ಸತ್ಪುರುಷರ ಸದಾಶಯಗಳಿಂದಲೂ ಶ್ರೀಮನ್ಮಹಾಭಾರತದ ೨೨ನೆಯ ಸಂಪುಟವನ್ನು ಸಿದ್ಧಪಡಿಸಿ ದಿವ್ಯಕುಸುಮರೂಪವಾಗಿರುವ ಈ ಸಂಪುಟವನ್ನು ಪರಮಾತ್ಮನ ದಿವ್ಯಪಾದಾರವಿಂದಗಳಲ್ಲಿ ಅರ್ಪಿಸಿ ಪ್ರಸಾದ ರೂಪವಾದ ಈ ಕುಸುಮವನ್ನು ವಾಚಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ.

ನಾಲ್ಕು ತಿಂಗಳ ಅಂತರದಲ್ಲಿಯೇ ಮೂರನೆಯ ಸಂಪುಟವನ್ನು ಪುನರ್ಮುದ್ರಣಮಾಡಿ, 22ನೆಯ ಸಂಪುಟವನ್ನೂ ಹೊರತಂದಿದ್ದೇವೆ. ಮುದ್ರಣಾಲಯದ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಯವು ನಡೆದಿರುವು ದೆಂದು ಹೇಳಬಹುದು. ಪುನರ್ಮುದ್ರಣವೆಂಬ ದೊಡ್ಡದಾದೊಂದು ಬೆಟ್ಟವೇ ಬೆಳೆಯುತ್ತಿರುವುದರಿಂದ ಈ ಬೆಟ್ಟವನ್ನು ಕರಗಿಸುವುದು ಹೇಗೆಂಬ ಸಮಸ್ಯೆಯು ಬಹಳವಾಗಿ ಕಾಡಿಸುತ್ತಿದೆ. ಎಷ್ಟೇ ಯೋಚಿಸಿದರೂ ಇದಕ್ಕೆ ಪರಿಹಾರಮಾರ್ಗವಿನ್ನೂ ಸಿಕ್ಕಿರುವುದಿಲ್ಲ. ಈವರೆಗೆ ಮೂರು ಪುನ ರ್ಮುದ್ರಣಗಳನ್ನು ಕಂಡ ಮೊದಲನೆಯ ಸಂಪುಟವೂ ಮುಗಿದುಹೋಗಿದೆ. ಮೊದಲನೆಯ ಸಂಪುಟವೇ ಇಲ್ಲವೆಂದರೆ ಉತ್ಸಾಹದಿಂದ ಬರುವ ನೂತನ ಗ್ರಾಹಕರು ಖಿನ್ನಮನಸ್ಕರಾಗುತ್ತಾರೆ. ಹಲವಾರು ಜನರಿಂದ ಬಂದ ಈ ಪ್ರತಿಕ್ರಿಯೆಯನ್ನು ಮನಗಂಡು ಮೊದಲನೆಯ ಸಂಪುಟವನ್ನು ಛಾಯಾ ಗ್ರಹಣಯಂತ್ರದ ಮೂಲಕವಾಗಿ ಪುನರ್ಮುದ್ರಣಕ್ಕೆ ಹೊಸ ಬಗೆಯ ಮುದ್ರಣಾಲಯಕ್ಕೆ ವಹಿಸಲಾಗಿದೆ. ಅಧಿಕವೆಚ್ಚವಾದರೂ ನಿರ್ವಾಹವಿಲ್ಲ. ಗ್ರಾಹಕರಿಗೆ ಬೇಸರವಾಗಕೂಡದೆಂಬ ಒಂದೇ ಆಶಯ. ಆದರೆ ಮುಗಿದಿರುವ ಎಲ್ಲ ಸಂಪುಟಗಳನ್ನೂ ಹೀಗೆ ಮುದ್ರಿಸಲು ಸಾಧ್ಯವಾಗುವುದಿಲ್ಲ. ಹೀಗೆ ಮಾಡಿಸುವುದಾದರೆ ಬರಿಯ ಮುದ್ರಣಕಾರ್ಯಕ್ಕೇ ಸುಮಾರು ಎರಡು ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಕಾಗದ ಮತ್ತು ಬೈಂಡಿಂಗಿಗಾಗಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಇದು ನಮ್ಮ ಶಕ್ತಿಗೆ ಮೀರಿದ ಮಾತಾಗಿದೆ. ಮೇಲಾಗಿ ಮೂಲಬೆಲೆಯೇ ಸುಮಾರು ಹತ್ತು ರೂ.ಗಳಿಗೂ ಹೆಚ್ಚಾಗುತ್ತದೆ. ಈ ಎಲ್ಲ ಕಾರಣಗಳಿಂದ ನಮ್ಮ ಮುದ್ರಣಾಲಯದಲ್ಲಿಯೇ ಹಿಂದಿನ ಸಂಪುಟಗಳನ್ನು ಪುನರ್ಮುದ್ರಿಸುವುದು ಅನಿವಾರ್ಯವಾಗಿದೆ. ಒಂದು ಹೊಸ ಸಂಪುಟವನ್ನೂ ಒಂದು ಹಳೆಯ ಸಂಪುಟವನ್ನೂ ಅನುಕ್ರಮ

ವಾಗಿ ಮುದ್ರಣಮಾಡಬೇಕೆಂಬ ನಿರ್ಧಾರಕ್ಕೆ ಬಂದಿರುತ್ತೇವೆ. ನಮ್ಮ ಹಳೆಯ ಗ್ರಾಹಕರೂ ಮತ್ತು ಹೊಸ ಗ್ರಾಹಕರೂ ದಯಮಾಡಿ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

ನೂತನ ಗ್ರಾಹಕರಿಗೆ ಹೃತ್ಪೂರ್ವಕವಾದ ಆಶ್ವಾಸನೆಯನ್ನು ಕೊಡಲು ಬಯಸುತ್ತೇವೆ : "ಮುಗಿದು ಹೋಗಿರುವ ಎಲ್ಲ ಸಂಪುಟಗಳನ್ನೂ ಖಂಡಿತ ವಾಗಿಯೂ ತಪ್ಪದೇ ಒದಗಿಸಿಕೊಡಲಾಗುವುದು. ಯಾರಿಗೂ ನಿರಾಶೆ ಯನ್ನುಂಟುಮಾಡುವುದಿಲ್ಲ. ಪ್ರತಿಯೊಬ್ಬರ ಮನೆಯಲ್ಲಿಯೂ ಶ್ರೀಮನ್ಮಹಾ ಭಾರತದ ಎಲ್ಲ ಸಂಪುಟಗಳೂ ಇರಬೇಕೆಂಬುದೇ ನಮ್ಮ ಏಕೈಕವಾದ ಉದ್ದೇಶವಾಗಿದೆ. ಆದುದರಿಂದ ಮಧ್ಯ-ಮಧ್ಯದಲ್ಲಿ ಸಂಪುಟಗಳು ಇಲ್ಲವೆಂದು ನಿರಾಶರಾಗದೇ ಪೂರ್ಣಮಾಲೆಯ ಸದಸ್ಯತ್ವವನ್ನು ಪಡೆದುಕೊಳ್ಳಬೇಕಾಗಿ ಕೋರುತ್ತೇವೆ. ಈ ಸಮಯದಲ್ಲಿ ತಾವು ಪೂರ್ಣಮಾಲೆಗಾಗಿ ಕೊಡುವ ಹಣವು ಪುನರ್ಮುದ್ರಣಕ್ಕೆ ವಿನಿಯೋಗವಾದಂತಾಗುತ್ತದೆ. ಆದುದರಿಂದ ಮಹಾಭಾರತದ ಪೂರ್ಣಮಾಲೆಗೆ ಗ್ರಾಹಕರಾಗಲು ನಿಮ್ಮ ಬಂಧು-ಮಿತ್ರರೊಡನೆ ಮುಂದೆ ಬನ್ನಿರಿ."

ನೂತನಗ್ರಾಹಕರ ಸಲುವಾಗಿಯೇ ಕೆನರಾ ಮತ್ತು ಸಿಂಡಿಕೇಟ್ ಬ್ಯಾಂಕುಗಳು ಪರಿಪತ್ರವನ್ನು ಹೊರಡಿಸಿ 1984ರ ಕಡೆಯವರೆಗೂ ಪೂರ್ಣ ಮಾಲೆಗೆ ಗ್ರಾಹಕರಾಗುವವರಿಗೆ ಸುಲಭ ಕಂತಿನ ಸಾಲವೊದಗಿಸಲು ತಮ್ಮ ಎಲ್ಲ ಶಾಖೆಗಳಿಗೂ ಆದೇಶವನ್ನಿತ್ತಿವೆ. ನಮ್ಮ ಕನ್ನಡಿಗರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಸಾವಿರಾರು ಸಂಖ್ಯೆಯಲ್ಲಿ ಗ್ರಾಹಕರಾಗಬೇಕು. ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕಿನವರೂ ಸಾಲಕೊಡುವ ಅವಧಿಯನ್ನು ವಿಸ್ತರಿಸಿದ್ದಾರೆ. ಕರ್ನಾಟಕ ಮತ್ತು ಕಾರ್ಪೊರೇಷನ್ ಬ್ಯಾಂಕಿನ ಮುಖ್ಯಾಧಿಕಾರಿಗಳನ್ನು ಸಾಲದ ಅವಧಿಯನ್ನು ವಿಸ್ತರಿಸಲು ಪ್ರಾರ್ಥಿಸಲಾಗಿದೆ. ಸ್ವಲ್ಪ ದಿವಸಗಳಲ್ಲಿಯೇ ಅವರೂ ಪರಿಪತ್ರವನ್ನು ಹೊರಡಿಸುವರೆಂಬ ಭರವಸೆಯಿದೆ.

22ನೆಯ ಸಂಪುಟದಲ್ಲಿ ರಾಜಧರ್ಮಾನುಶಾಸನಪರ್ವವು ಮುಗಿದಿದೆ. ಗಣತಂತ್ರರಾಜ್ಯದ ಉಲ್ಲೇಖವೂ ಈ ಪ್ರಕರಣದಲ್ಲಿ ಬಂದಿರುತ್ತದೆ. ರಾಜಕೀಯವನ್ನು ಪ್ರವೇಶಮಾಡಲು ಇಚ್ಛಿಸುವವರು ಈ ಎಲ್ಲ ಪ್ರಕರಣ ಗಳನ್ನೂ ಚೆನ್ನಾಗಿ ಅಧ್ಯಯನಮಾಡಬೇಕು.

21ನೆಯ ಸಂಪುಟ ಪ್ರಕಾಶನ ಸಮಾರಂಭವು 29-2-1981ನೇ ಶನಿವಾರ ರಾಜಾಜಿನಗರದ ಶ್ರೀರಾಮಮಂದಿರದಲ್ಲಿ ವಿಜೃಂಭಣೆಯಿಂದ ನಡೆಯಿತು. ವಿಧಾನಪರಿಷತ್ತಿನ ಮುಖ್ಯಸಚೇತಕರಾದ ಸನ್ಮಾನ್ಯ ಶ್ರೀ ಭಗವಾನರು ಸಂಪುಟವನ್ನು ಪ್ರಕಾಶನಗೊಳಿಸಿದರು. ಆಧ್ಯಾತ್ಮಪ್ರಕಾಶನದ ಶ್ರೀ ಶ್ರೀ ಜ್ಞಾನಾನಂದೇಂದ್ರ ಸರಸ್ವತಿಸ್ವಾಮಿಗಳವರು ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಘೋಷದೊಡನೆ ಸಮಾರಂಭವು ಪ್ರಾರಂಭವಾಯಿತು. ಶ್ರೀಮತಿ ವಿಜಯವಾಣಿಯವರು ಸ್ವಾಗತ ಪದ್ಯಮಾಲಿಕೆಯನ್ನು ಹಾಡಿದರು. ವಿದ್ವಾನ್ ಹೆಚ್. ಎಸ್. ರಂಗಸ್ವಾಮಿಯವರು ಸ್ವಾಗತ ಭಾಷಣವನ್ನು ಮಾಡಿದರು. ಶ್ರೀಮತಿ ಇಂದಿರಾ ವೆಂಕಟೇಶನ್‌ರವರು ಭೀಷ್ಮಸ್ತವರಾಜ ದಿಂದ ಆಯ್ದ ಕೆಲವು ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರು 21ನೆಯ ಸಂಪುಟದ ಪರಿಚಯವನ್ನು ಮಾಡಿಕೊಟ್ಟರು. ಬಳಿಕ ಮುಖ್ಯ ಅತಿಥಿಗಳಾಗಿದ್ದ ಶ್ರೀ ಭಗವಾನರು ಪ್ರಕಾಶನದ ಬಗೆಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ 20ನೆಯ ಸಂಪುಟದ ಪ್ರಕಾಶನಸಮಾರಂಭದಲ್ಲಿ ಮುಖ್ಯಮಂತ್ರಿಗಳು ಇತ್ತಿದ್ದ ಆಶ್ವಾಸನೆಯು ಕಾರ್ಯಗತವಾಗಲು ಪ್ರಯತ್ನಿಸುವುದಾಗಿ ಭರವಸೆಯನ್ನಿತ್ತರು. ಬಳಿಕ ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮೀಜಿಯವರು ಅನುಗ್ರಹಭಾಷಣವನ್ನು ಮಾಡಿದರು. ಶ್ರೀರಾಮಚಂದ್ರಾಪುರಮಠದ ಜಗದ್ಗುರು ಶ್ರೀಶಂಕರಾಚಾರ್ಯ ಶ್ರೀ ರಾಘವೇಂದ್ರ ಭಾರತೀಸ್ವಾಮಿಗಳು ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆಯನ್ನು ಸಂಪಾದಕ ಮಂಡಲಿಯವರಿಗೆ ಶ್ರೀ ಶ್ರೀಯವರು ಆಶೀರ್ವಾದಪೂರ್ವಕವಾಗಿ ಕೊಟ್ಟರು. ಪರಮಹಂಸಪರಿವ್ರಾಜಕಾಚಾರ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಶ್ರೀಮದಭಿನವ ವಿದ್ಯಾತೀರ್ಥಸ್ವಾಮಿಗಳವರು ಶೃಂಗೇರಿಮಠ–ಇವರೂ ಸಮಾರಂಭಕ್ಕೆ ಯಶಸ್ಸನ್ನು ಕೋರಿ ಸುವರ್ಣಮಂತ್ರಾಕ್ಷತೆಯನ್ನು ಕಳುಹಿಸಿ ಅನುಗ್ರಹಿಸಿದ್ದರು. ವಿದ್ವಾನ್ ಶ್ರೀ ರಾಮೇಶ್ವರಾವಧಾನಿಗಳು ವಂದನಾರ್ಪಣೆಯನ್ನು ಮಾಡಿದನಂತರ ಶಾಂತಿಪಾಠದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಶ್ರೀಭಗವಾನರು ಮಹಾಸಭೆಯಲ್ಲಿ ಕೊಟ್ಟ ಅಭಿವಚನದಂತೆ ಮುಖ್ಯ ಮಂತ್ರಿಯವರಿಗೆ ಪ್ರಕಾಶನದ ಪರವಾಗಿ ಪ್ರಭಾವಯುತವಾದ ಒಂದು

ಪತ್ರವನ್ನು ಬರೆದು ಉಪಕರಿಸಿದ್ದಾರೆ. ಆದರೆ ಇದುವರೆಗೂ ಸರ್ಕಾರದ ವತಿಯಿಂದ ಈ ಸಂಬಂಧವಾಗಿ ಯಾವ ಆಜ್ಞೆಯೂ ಹೊರಬಂದಿಲ್ಲ. ಒಳ್ಳೆಯ ಕಾರ್ಯಕ್ಕೆ ನೂರು ವಿಘ್ನಗಳೆಂಬ ಹಿರಿಯರ ಮಾತು ಎಲ್ಲ ಕಾಲಕ್ಕೂ ಸತ್ಯ. ಆದರೂ ನಾವು ಹತಾಶರಾಗದೇ ಸರ್ಕಾರದ ಕಡೆಯಿಂದ ನಮ್ಮ ಪ್ರಾರ್ಥನೆಗೆ ಅನುಸಾರವಾಗಿ ಆಜ್ಞೆಯು ಶೀಘ್ರದಲ್ಲಿ ಹೊರಬಹುದೆಂಬ ಭರವಸೆಯನ್ನೇ ಇಟ್ಟುಕೊಂಡಿರುತ್ತೇವೆ. ಪರಮಾತ್ಮನ ಇಚ್ಛೆಯಿದ್ದಂತಾಗುತ್ತದೆ. ಪ್ರಯತ್ನಿಸುವುದು ಮಾತ್ರವೇ ನಮ್ಮ ಕರ್ತವ್ಯವಾಗಿರುತ್ತದೆ.

ಸಂಪಾದಕಮಂಡಲಿಯವರು ಅವಿರತವಾಗಿ ಕಾರ್ಯಮಾಡುತ್ತಿದ್ದಾರೆ. ಈ ವಿದ್ವಾಂಸರ ಸೌಜನ್ಯವೇ ನಮಗೊಂದು ದೊಡ್ಡ ಬಂಡವಾಳವಾಗಿದೆ. ಪರಮಾತ್ಮನೇ ಕಲ್ಪಿಸಿಕೊಟ್ಟಿರುವ ಅತಿಮುಖ್ಯವಾದ ಬಂಡವಾಳವಾಗಿರುವ ಈ ವಿದ್ವಾಂಸರು ತಮ್ಮ ವೇಳೆಯೆಲ್ಲವನ್ನೂ ಈ ಪವಿತ್ರಕಾರ್ಯಕ್ಕೆ ಮೀಸಲಾಗಿಟ್ಟಿದ್ದಾರೆ. ಇವರ ವಿಷಯವಾಗಿ ಎಷ್ಟು ಬರೆದರೂ ಅಲ್ಪವೇ ಆಗುತ್ತದೆ. ದಯಾಮಯನಾದ ಪರಮಾತ್ಮನು ಇವರೆಲ್ಲರಿಗೂ ಆಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಪ್ರಸಕ್ತ ಏಳು ಸಂಪುಟಗಳೇ ಇಲ್ಲದಿರುವುದರಿಂದ ಪ್ರಚಾರಕಾರ್ಯವು ಸ್ವಲ್ಪ ಕುಂಠಿತವಾಗಿರುವುದೆಂದೇ ಹೇಳಬಹುದು. ನಾವು ಎಷ್ಟೇ ಆಶ್ವಾಸನೆಗಳನ್ನಿತ್ತರೂ ನಮ್ಮ ಪ್ರಚಾರಕರಿಗೆ ಗ್ರಾಹಕರನ್ನು ಒಪ್ಪಿಸಲು ಸ್ವಲ್ಪ ಕಷ್ಟವೇ ಆಗುತ್ತಿದೆ. ಆದರೂ ಧೃತಿಗೆಡದೇ ನಿಃಸ್ವಾರ್ಥಿಗಳಾದ ನಮ್ಮ ಪ್ರಚಾರಕರು ಪ್ರಚಾರಕಾರ್ಯವನ್ನು ಮುಂದುವರಿಸುತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಅಭಿನಂದನೆಗಳು.

ಈ ಸಂಪುಟಕ್ಕೆ ಪಠ್ಯಪುಸ್ತಕಗಳ ನಿರ್ದೇಶಕರಾಗಿದ್ದ ಶ್ರೀ ಟಿ. ವಿ. ತಿಮ್ಮೇಗೌಡ ಎಂ. ಎ., ಅವರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ತೆರೆಯ ಮರೆಯಲ್ಲಿ ನಿಂತು ಪ್ರಚಾರಕ್ಕಾಗಿ ಕಾರ್ಯಮಾಡುತ್ತಿರುವವರು ಅನೇಕರಿದ್ದಾರೆ. ಅವರೆಲ್ಲರಿಗೂ ಮತ್ತು ಮಹಾಭಾರತದ ಬಂಧುಗಳೆಲ್ಲರಿಗೂ ದಯಾಮಯನಾದ ಪರಮಾತ್ಮನು ಸುಖ-ಸಂತೋಷಗಳನ್ನು ದಯಪಾಲಿಸಲೆಂದು ಅಂತಃಕರಣದ ಪ್ರಾರ್ಥನೆಯೊಡನೆ ವಿರಮಿಸುವೆವು.

—ಪ್ರಕಾಶಕರು.

ಮುನ್ನುಡಿ

ನನ್ನ ಮಿತ್ರರಾದ ಶ್ರೀಮಾನ್ ಕೌಶಿಕರು 22ನೆಯ ಸಂಪುಟಕ್ಕೆ ಮುನ್ನುಡಿ ಬರೆದುಕೊಡಬೇಕೆಂದು ಕೇಳಿದಾಗ ಮಹಾಭಾರತಕ್ಕೆ ಮುನ್ನುಡಿಯ ಆವಶ್ಯಕತೆಯಿದೆಯೇ?–ಎಂದೆನ್ನಿಸಿತು. ಆದರೆ ಇವರು ಮುನ್ನುಡಿಯನ್ನು ಬರೆಸುವ ಪದ್ಧತಿಯನ್ನು ಇಟ್ಟುಕೊಂಡಿರುತ್ತಾರೆ. ಅನೇಕ ವಿದ್ವಾಂಸರುಗಳೂ ಇದುವರೆಗೆ ಮುನ್ನುಡಿಗಳನ್ನು ಬರೆದುಕೊಟ್ಟಿರುತ್ತಾರೆ. ಈ ಸಮಾಧಾನವನ್ನು ಕೇಳಿದನಂತರ ನಾನೂ ಬರೆಯಲು ಒಪ್ಪಿದೆನು.

ಈ ಮಹಾಗ್ರಂಥಕ್ಕೆ 'ಪಾಂಡವರ ಚರಿತ್ರೆ'–ಎಂಬುದಕ್ಕೆ ಬದಲಾಗಿ 'ಭಾರತ' ಎಂದೇಕೆ ಹೆಸರು ಬಂತು?

ಮಹತ್ತ್ವಾದ್ಭಾರವತ್ತ್ವಾಚ್ಚ–ಎಂದೇನೋ ವ್ಯಾಸರು ಹೇಳಿದ್ದಾರೆ. ಮಹತ್ತ್ವದಿಂದಲೂ–ಗ್ರಂಥವು ಅತ್ಯಂತಭಾರವಾಗಿರುವುದರಿಂದಲೂ 'ಭಾರತ' ಎಂದು ಹೆಸರು ಬಂದಿದೆ. ಸಂಪುಟಗಳ ಮೊದಲನೆಯ ಪುಟದಲ್ಲಿ **ಭಾತಿ ಸರ್ವೇಷು ವೇದೇಷು....ತೇನ ಭಾರತಮುಚ್ಯತೇ**–ಎಂದೂ ಒಂದು ಶ್ಲೋಕವನ್ನು ಉದ್ಧರಿಸಿದ್ದಾರೆ. ಎರಡೂ ಸರಿಯೇ. ಭರತನ ಪೀಳಿಗೆಯವರ ಕಥೆಯನ್ನು ಹೇಳಿರುವುದರಿಂದ 'ಭಾರತ' ಎಂಬ ಹೆಸರು ಬಂದಿತು–ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಕಾರಣದಿಂದಲೇ ನಮ್ಮ ದೇಶಕ್ಕೂ ಭಾರತವೆಂದೇ ಹೆಸರು. ನಮ್ಮ ದೇಶ ಭಾರತ–ನಮ್ಮ ಪೂಜ್ಯ ಗ್ರಂಥ ಭಾರತ–ಈ ಎರಡರಿಂದ ನಾವು ಭಾರತೀಯರು. ಭಾರತದಿಂದ ನಮ್ಮ ದೇಶವೂ ಭಾರತವಾಯಿತು. ನಾವೂ ಭಾರತೀಯರಾದೆವು. ಎಂದರೆ ನಾವು ಭಾರತೀಯರೆಂದು ಹೇಳಿಕೊಂಡೊಡನೆಯೇ ಮಹಾಭಾರತವು ನಮ್ಮ ಸ್ಮರಣೆಗೆ ಬರಲೇಬೇಕು. ಮಹಾಭಾರತವು ವಿಶ್ವಮಾನ್ಯಗ್ರಂಥ. ಭಾರತೀಯರಿಗೆ ಪರಮ ಪೂಜ್ಯ ಗ್ರಂಥ. ಆದರೆ ಈಗ ನಮಗೆ ಅದರ ಸ್ಮರಣೆಯೇ ತಪ್ಪಿ ಹೋಗಿದೆ. ಮಹಾಭಾರತ-ರಾಮಾಯಣಗಳ ಹೆಸರನ್ನು ಕೇಳದ ಭಾರತೀಯ ನಿಲ್ಲ–ಎಂಬುದು ನಿಜ. ಆದರೆ ಆಮೂಲಾಗ್ರವಾಗಿ ಮಹಾಭಾರತವನ್ನು ಎಷ್ಟುಮಂದಿ ಅಧ್ಯಯನಮಾಡಿದ್ದಾರೆ?–ಎಂಬುದು ಪ್ರಶ್ನೆ. ಜನಸಾಮಾನ್ಯರು ಅಧ್ಯಯನಮಾಡದೇ ಇರುವುದಕ್ಕೆ ಕಾರಣ : ಈ ಮಹಾಗ್ರಂಥವು ಸಂಸ್ಕೃತ ದಲ್ಲಿರುವುದು. ಸಂಸ್ಕೃತವು ನಮ್ಮ ದೇಶದಲ್ಲಿ ಸಾರ್ವಜನಿಕಭಾಷೆಯಾಗಿಲ್ಲ. ಆದುದರಿಂದ ಈ ಮಹಾಗ್ರಂಥವು ಪ್ರಾಂತೀಯಭಾಷೆಗಳಲ್ಲಿ ಅನುವಾದವಾಗ

ಬೇಕಾದುದು ಅನಿವಾರ್ಯ. ಅದರ ಕೊರತೆಯನ್ನು ತಪ್ಪಿಸುವ ಸಲುವಾಗಿ ಭಾರತ ದರ್ಶನ ಪ್ರಕಾಶನದವರು 30 ಸಂಪುಟಗಳಲ್ಲಿ ತರಲು ಯೋಜನೆಯೊಂದನ್ನು ಹಾಕಿಕೊಂಡು 22 ಸಂಪುಟಗಳನ್ನು ಇದುವರೆಗೆ ಹೊರತಂದು ಸಾಹಸದ ಕಾರ್ಯವನ್ನೇ ಮಾಡಿದ್ದಾರೆ.

ನಾನು ಪಠ್ಯಪುಸ್ತಕದ ಸಮಿತಿಗೆ ನಿರ್ದೇಶಕನಾಗಿದ್ದಾಗಲೇ ಸರ್ಕಾರವು ಪ್ರೌಢಶಾಲೆಗಳಿಗಾಗಿ ಒಂದು ಸಾವಿರ ಸಂಪುಟಗಳನ್ನು ತೆಗೆದುಕೊಳ್ಳಲು ನಿರ್ಧರಿಸಿತು. ಅಂದು ನನ್ನ ಮೂಲಕ ಈ ಕಾರ್ಯದ ಸಾಧನೆಯಾದುದಕ್ಕಾಗಿ ಇಂದು ನಾನು ಆನಂದಪಡುತ್ತಿದ್ದೇನೆ. ೩೦ನೆಯ ಸಂಪುಟವು ಎಂದು ಬರುವುದೋ ಎಂದು ಆಕಾಂಕ್ಷಿಸುತ್ತಿರುವವರಲ್ಲಿ ನಾನೂ ಒಬ್ಬನಾಗಿದ್ದೇನೆ. ಒಂದು ಸಾವಿರ ಶಾಲೆಗಳಿಗೆ ಶಿಫಾರ್ಸ್ ಮಾಡುವ ಬದಲು ರಾಜ್ಯದಲ್ಲಿರುವ 2,500 ಶಾಲೆಗಳಿಗೂ ಆಗಲೇ ಶಿಫಾರ್ಸ್ ಮಾಡಿದ್ದರೆ ಚೆನ್ನಾಗಿದ್ದಿತೋ ಏನೋ–ಎಂದು ಈಗ ನನಗೆ ಅನ್ನಿಸುತ್ತಿದೆ. ಎಲ್ಲ ಪ್ರೌಢಶಾಲೆಗಳಲ್ಲಿಯೂ, ಎಲ್ಲ ಮಾಧ್ಯಮಿಕಶಾಲೆಗಳಲ್ಲಿಯೂ, ಎಲ್ಲ ಕಾಲೇಜು ಲೈಬ್ರರಿಗಳಲ್ಲಿಯೂ ಮಹಾಭಾರತದ ಸಂಪುಟಗಳು ಇದ್ದೇ ಇರಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಸರ್ಕಾರದವರು ಕಡೆಯ ಪಕ್ಷ ಹತ್ತು ಸಾವಿರ ಪ್ರತಿಗಳನ್ನಾದರೂ ಕೊಂಡು ಶಾಲಾ-ಕಾಲೇಜ್ ಲೈಬ್ರರಿಗಳಿಗೆ ಈ ಮಹಾಗ್ರಂಥವನ್ನು ಒದಗಿಸಬೇಕೆಂದು ನಾನು ಆಶಿಸುತ್ತೇನೆ. ಶಾಲಾ-ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳು ಮಾತ್ರವಲ್ಲ ; ಉಪಾಧ್ಯಾಯರೂ ಈ ಮಹಾಗ್ರಂಥವನ್ನು ಅಧ್ಯಯನ ಮಾಡಬೇಕು. ಇಷ್ಟು ಸಂಪುಟಗಳನ್ನೂ ಯಾರು ಓದಿಯಾರೆಂದು ಯಾರಾದರೂ ಉದ್ಗರಿಸಬಹುದು. ಓದಲು ಪ್ರಾರಂಭಿಸಿದವರು ಕಡೆಯವರೆಗೂ ಓದದೇ ಇರುವುದಿಲ್ಲ. ಇದು ನನ್ನದೇ ಆದ ಅನುಭವ.

ಮಹಾಭಾರತದ ಯಾವುದೇ ಪುಟವನ್ನು ತೆಗೆದರೂ ಅಲ್ಲಿ ನಮಗೆ ಒಂದು ಸಂದೇಶವಾಕ್ಯವಿರುತ್ತದೆ. ಇದೇ ಮಹಾಭಾರತದ ಐತಿಹ್ಯ. ಶ್ರೀ ಕೌಶಿಕರು ಕೊಟ್ಟ ಮಾದರೀ ಪ್ರತಿಯನ್ನು ಓದಲು ತೆಗೆದಾಗ 867ನೇ ಪುಟದಲ್ಲಿ ಈ ಶ್ಲೋಕವಿದ್ದಿತು. 'ಭಗ್ನಶಸ್ತ್ರೋ ವಿಪನ್ನಶ್ಚ ಕೃತ್ತಜ್ಯೋ **ಹತವಾಹನಃ । ಚಿಕಿತ್ಸ್ಯಃ ಸ್ಯಾತ್ಸ್ವವಿಷಯೇ ಪ್ರಾಪ್ಯೋ ವಾ ಸ್ವಗೃಹೇ ಭವೇತ್ ॥** ಯಾವನ ಶಸ್ತ್ರವು (ಕತ್ತಿ-ಮುಂತಾದುವು) ಭಗ್ನವಾಗಿರು

ವುದೋ, ಯಾವನು ಆಪತ್ತಿನಲ್ಲಿರುವನೋ, ಯಾವನ ಧನುಸ್ಸಿನ ಶಿಂಜಿನಿಯು ಕತ್ತರಿಸಲ್ಪಟ್ಟಿರುವುದೋ, ಯಾವನ ವಾಹನಗಳು (ಕುದುರೆ- ಆನೆಗಳು) ಹತವಾಗಿರುವುವೋ–ಅಂತಹವನ ಮೇಲೆ ಶಸ್ತ್ರಪ್ರಯೋಗವನ್ನು ಮಾಡಬಾರದು. ತನ್ನ ರಾಜ್ಯದಲ್ಲಿಯೇ ಅವನಿಗೆ ಚಿಕಿತ್ಸೆಯನ್ನು ಮಾಡಿಸಬೇಕು. ಅಥವಾ ಅವನನ್ನು ಅವನ ಮನೆಗೆ ಕಳುಹಿಸಿಕೊಡಬೇಕು'. ಇದು ಯುದ್ಧಧರ್ಮಪ್ರಕರಣದಲ್ಲಿ ಬಂದಿರುವ ಶ್ಲೋಕ. ಯುದ್ಧದ ಸಂದರ್ಭದಲ್ಲಿಯೂ ಎಷ್ಟು ಉದಾತ್ತವಾಗಿರಬೇಕೆಂಬುದರ ಸಂದೇಶವಿದೆ.

ಮತ್ತೊಂದು ಪುಟ 798. '**ರಾಷ್ಟ್ರಮಪ್ಯತಿದುಗ್ಧಂ ಹಿ ನ ಕರ್ಮ ಕುರುತೇ ಮಹತ್ । ಯೋ ರಾಷ್ಟ್ರಮನುಗೃಹ್ಣಾತಿ ಪರಿರಕ್ಷನ್ಸ್ವಯಂ ನೃಪಃ। ಸಂಜಾತಮುಪಜೀವನ್ಸ ಲಭತೇ ಸುಮಹತ್ಫಲಮ್ ॥** 'ರಾಷ್ಟ್ರವನ್ನು ಅತಿಯಾಗಿ ಕರೆದರೆ ಅಂತಹ ರಾಷ್ಟ್ರವು ಯಾವ ಮಹತ್ತ್ವವನ್ನೂ ಸಾಧಿಸಲಾರದು. ಹೆಚ್ಚಿನ ತೆರಿಗೆಗಳನ್ನು ಹಾಕುವುದರಿಂದ ರಾಷ್ಟ್ರವು ಮಹತ್ತ್ವವನ್ನು ಸಾಧಿಸುವುದಿಲ್ಲ. ತೆರಿಗೆಯ ಪ್ರಮಾಣವು ಕಡಿಮೆಯಿರಬೇಕು. ಪ್ರಜೆಗಳಿಗೆ ಕಷ್ಟವಾಗದ ರೀತಿಯಲ್ಲಿರಬೇಕು.......'

ತೆರಿಗೆಯನ್ನು ಹೆಚ್ಚು ಹಾಕಬೇಕೇ ; ಕಡಿಮೆ ಹಾಕಬೇಕೇ?–ಎಂಬ ಜಿಜ್ಞಾಸೆಯು ಇಂದೂ ನಡೆಯುತ್ತಿದೆ. ಆದರೆ ಮಹಾಭಾರತದಲ್ಲಿ ಇದನ್ನು ಸಿದ್ಧಾಂತಮಾಡಿ ಹೇಳಿದ್ದಾರೆ. ಹೀಗೆ ಪ್ರತಿಯೊಂದು ಪುಟದಲ್ಲಿಯೂ ರಾಜ್ಯಾಡಳಿತಕ್ಕೆ ಸಂಬಂಧಿಸಿದಂತೆ–ನಮ್ಮ ಜೀವನಕ್ಕೆ ಸಂಬಂಧಿಸಿದಂತೆ ದಿವ್ಯೋಪದೇಶಗಳು ಇದ್ದೇಇರುತ್ತವೆ. 22ನೆಯ ಸಂಪುಟದ ಪೂರ್ತಿಯಾಗಿ ರಾಜಧರ್ಮವೇ ಇದೆ. ಚಿಕ್ಕ-ಚಿಕ್ಕ ಉಪಾಖ್ಯಾನಗಳ ಮೂಲಕವಾಗಿ ಸಾಮಾನ್ಯಮನುಷ್ಯನಿಗೂ ಮನದಟ್ಟಾಗುವ ರೀತಿಯಲ್ಲಿ ವಿಷಯದ ಉಲ್ಲೇಖವಿದೆ. ಸಂಪಾದಕಮಂಡಲಿಯ ವಿದ್ವಾಂಸರು ಸರಳ ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಆದುದರಿಂದ ನಮ್ಮ ಕನ್ನಡಬಾಂಧವರೆಲ್ಲರೂ ಈ ಮಹಾಗ್ರಂಥವನ್ನು ಅಧ್ಯಯನಮಾಡಬೇಕೆಂದು ಕಳಕಳಿಯಿಂದ ಹೇಳುತ್ತೇನೆ. ಮಹಾಗ್ರಂಥದ ಅಧ್ಯಯನದಿಂದ ನನಗಾಗಿರುವ ಅನುಭವದಿಂದ ಹೇಳುತ್ತಿದ್ದೇನೆ. ಭಾರತೀಯರು ಸುಸಂಸ್ಕೃತರಾಗಬೇಕಾದರೆ ಮಹಾಭಾರತಗ್ರಂಥವನ್ನು ಅಧ್ಯಯನಮಾಡಿ ಅದನ್ನು ಮೈಗೂಡಿಸಿಕೊಳ್ಳಬೇಕು.

ಮೇಲಾಗಿ ಮಹಾಭಾರತವನ್ನು ಪ್ರಚಾರಮಾಡುವ ದೃಷ್ಟಿಯಿಂದಲೇ ಇದರ ವ್ಯವಸ್ಥಾಪಕರು ಬಹಳ ಸುಲಭ ಬೆಲೆಗೆ ಇದನ್ನು ಹಂಚುತ್ತಿದ್ದಾರೆ. ಈ ಸದವಕಾಶವನ್ನು ಕನ್ನಡಬಂಧುಗಳು ಸದುಪಯೋಗಪಡಿಸಿಕೊಳ್ಳಲಿ. ಭಾರತದ ಅಧ್ಯಯನದಿಂದ ಎಲ್ಲರೂ ಸತ್ಪ್ರಜೆಗಳಾಗಲಿ. ಎರಡು ಮಾತುಗಳನ್ನು ಬರೆಯಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಭಾರತ ದರ್ಶನ ಪ್ರಕಾಶನದವರಿಗೆ ಕೃತಜ್ಞನಾಗಿರುತ್ತೇನೆ.

–ಟಿ. ವಿ. ತಿಮ್ಮೇಗೌಡ

ದ್ವಿತೀಯ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದ 22ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಮೊಳೆ ಜೋಡಿಸುವುದನ್ನು ಪ್ರಾರಂಭಿಸಿ ಸಂಪುಟವನ್ನು ವಿತರಣೆಗೆ ಸಿದ್ಧಗೊಳಿಸಬೇಕಾದರೆ ನಮ್ಮ ಹಿಂದಿನ ಅನುಭವದಂತೆ ಕಡೆಯಪಕ್ಷ 50 ದಿವಸಗಳು ಬೇಕಾಗುತ್ತದೆ. ಹಿಂದಿಗಿಂತಲೂ ಎಷ್ಟೋ ಸುಧಾರಣೆಯಾಗಿದೆ– ಎಂಬುದೇ ಒಂದು ಸಮಾಧಾನ. ಆದರೂ ಪುನರ್ಮುದ್ರಣ ಮಾಡಬೇಕಾಗಿರುವ ಸಂಪುಟಗಳ ಸಂಖ್ಯೆಯನ್ನು ನೆನೆಸಿಕೊಂಡಾಗ ಮನಸ್ಸಿಗೆ ಭಯವೇ ಆಗುತ್ತದೆ. ಈ ಸಂಪುಟವೂ ಸೇರಿದರೆ ನಮ್ಮಲ್ಲಿ ದೊರಕುವ ಸಂಪುಟಗಳು 32ರಲ್ಲಿ 14 ಮಾತ್ರ. ಇನ್ನೂ 18 ಸಂಪುಟಗಳನ್ನು ಪುನರ್ಮುದ್ರಣಮಾಡಬೇಕಾಗಿದೆ. 2 ತಿಂಗಳಿಗೆ ಒಂದು ಸಂಪುಟದಂತೆ ಪುನರ್ಮುದ್ರಣ ಮಾಡಿಕೊಡುವುದಾಗಿ ಹೇಳಿರುವ ನಮ್ಮ ಮಾತನ್ನು ದಯಾಮಯನಾದ ಪರಮಾತ್ಮನು ನಡೆಸಿಕೊಡುವನೆಂಬ ಭರವಸೆಯಿದೆ. ಅವನ ಅಭಯಹಸ್ತ ನಮ್ಮ ಬಂಡವಾಳ.

ಪ್ರಕೃತ ಶ್ರೀಮದ್ರಾಮಾಯಣದ ನಾಲ್ಕನೆಯ ಸಂಪುಟವನ್ನು ಮತ್ತು 2ನೇ ಸಂಪುಟದ ಪುನರ್ಮುದ್ರಣವನ್ನು ಪ್ರಾರಂಭಿಸಲಾಗಿದೆ. ಸೆಪ್ಟೆಂಬರ್ ಕಡೆಯ ವೇಳೆಗೆ ಎರಡು ಸಂಪುಟಗಳನ್ನೂ ಮುಗಿಸುವ ಆಶಯವಿದೆ. ಪರಮಾತ್ಮನ ಕೃಪೆಯಿರಬೇಕು.

ಈ ಸಂಪುಟದ ತಪ್ಪು-ಒಪ್ಪುಗಳನ್ನು ಸಂಪಾದಕಮಂಡಲಿಯ ಘನ ವಿದ್ವಾಂಸರು ನೋಡಿಕೊಟ್ಟಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಈ ಮಹಾಕಾರ್ಯ ಸುಗಮವಾಗಿ ನಡೆಯುವಂತೆ ಎಲ್ಲರೂ ಪರಮಾತ್ಮನನ್ನು ಪ್ರಾರ್ಥಿಸಬೇಕಾಗಿ ವಿನಂತಿಸುತ್ತೇವೆ.

–ಪ್ರಕಾಶಕರು.

ತೃತೀಯ ಪುನರ್ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದಲೂ ಮಹಾಗುರುವಿನ ದಿವ್ಯಾಶೀರ್ವಾದ ದಿಂದಲೂ ಸುಹೃದರ ಸಹಕಾರ-ಸದಾಶಯಗಳಿಂದಲೂ ಮಹಾಭಾರತದ 22ನೆಯ ಸಂಪುಟದ ಮೂರನೆಯ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ.

ಪುನರ್ಮುದ್ರಣಗಳು ಬೇಗ-ಬೇಗ ಆಗುತ್ತಿರುವಂತೆಯೇ ಸಂಪುಟಗಳೂ ಬೇಗ-ಬೇಗ ಮುಗಿದುಹೋಗುತ್ತಿವೆ. ಪುನರ್ಮುದ್ರಣವಾದ ಸಂಪುಟಗಳೂ ಮುಗಿದುಹೋಗುತ್ತಿವೆ. ಬಂಡವಾಳದ ಕೊರತೆಯಿಂದಾಗಿ ಹೆಚ್ಚು ಪ್ರತಿಗಳನ್ನು ಪುನರ್ಮುದ್ರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ 32 ಸಂಪುಟಗಳನ್ನು ಗ್ರಾಹಕರಿಗೆ ಒಟ್ಟಾಗಿ ನೀಡಬೇಕೆನ್ನುವ ನಮ್ಮ ಕನಸು ಕನಸಾಗಿಯೇ ಉಳಿದಿದೆ. ಆದರೆ ಪೂರ್ಣ ಮಾಲೆಯ ಗ್ರಾಹಕರಿಗೆ ಎಲ್ಲ ಸಂಪುಟಗಳನ್ನೂ ತಲುಪಿಸುವ ಹಂತಕ್ಕೆ ಬಂದಿದ್ದೇವೆ. ಇದೊಂದು ಸಮಾಧಾನದ ಸಂಗತಿ. ಪರಮಾತ್ಮನ ದಯೆಯಿಂದಲೇ ಇದು ಸಾಧ್ಯ ವಾಗಿದೆ. 21-22ನೇ ಸಂಪುಟಗಳನ್ನು ಕೊಟ್ಟರೆ ಸುಮಾರು 300 ಮಂದಿ ಪೂರ್ಣ ಮಾಲೆಯ ಗ್ರಾಹಕರಿಗೆ ಎಲ್ಲ ಸಂಪುಟಗಳನ್ನೂ ಕೊಟ್ಟಂತಾಗುತ್ತದೆ. ಇನ್ನೊಂದು ವರ್ಷದ ಅವಧಿಯಲ್ಲಿ ಪೂರ್ಣಮಾಲೆಯ ಗ್ರಾಹಕರೆಲ್ಲರಿಗೂ ಎಲ್ಲ ಸಂಪುಟಗಳನ್ನೂ ಒದಗಿಸಿಕೊಟ್ಟು ಧನ್ಯರಾಗುವೆವೆಂಬ ಆಶಯವಿದೆ. ಪರಮಾತ್ಮನ ದಯೆಯಿಂದ ಸಾಧ್ಯವಾಗಬೇಕಾಗಿದೆ. ದಯಾಮಯನಾದ ಪರಮಾತ್ಮನು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ. ಮಹಾಭಾರತದ ಪಠಣದಿಂದ ಎಲ್ಲರಿಗೂ ಶಾಂತಿಯು ಸಿಗಲಿ.

—ಪ್ರಕಾಶಕರು.

ಚತುರ್ಥ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಭಗವಂತನ ಕೃಪೆಯಿಂದಲೂ ಶ್ರೀರಂಗಮಹಾಗುರುವಿನ ಆಶೀರ್ವಾದದಿಂದಲೂ ಸತ್ಪುರುಷರ ಸಹಕಾರದಿಂದಲೂ ಮಹಾಭಾರತದ 22ನೇ ಸಂಪುಟದ 4ನೇ ಮುದ್ರಣವನ್ನು ಮುಗಿಸುತ್ತಿದ್ದೇವೆ. 32 ಸಂಪುಟಗಳನ್ನು ಸಿದ್ಧಪಡಿಸಿ ನಮ್ಮ ಪ್ರಿಯ ಗ್ರಾಹಕರಿಗೆ ವಿತರಣೆಮಾಡಬೇಕೆಂಬ ನಮ್ಮ ಆಶೆಯು ಇನ್ನೂ ಕೈಗೂಡಿರುವುದಿಲ್ಲ. ಪ್ರಸಕ್ತ 4 ಸಂಪುಟಗಳನ್ನು ಪುನರ್ಮುದ್ರಣ ಮಾಡಬೇಕಾಗಿದೆ. ಕೇವಲ ಭಗವಂತನ ಕೃಪೆಯಿಂದ ಇದು ಸಾಧ್ಯವಾದೀತು. ಕೇವಲ ಮನುಷ್ಯ ಪ್ರಯತ್ನದಿಂದ ಇಂತಹ ಮಹಾಕಾರ್ಯಗಳು ಸಾಧ್ಯವಾಗದೆಂದು ನಮ್ಮ ಖಚಿತವಾದ ಅಭಿಪ್ರಾಯವಾಗಿದೆ. ಭಗವಂತನು ಕೃಪೆದೋರಿ ಭಾರತ ದರ್ಶನ ಪ್ರಕಾಶನದಿಂದ ಪ್ರಕಟವಾಗಿರುವ 58 ಸಂಪುಟಗಳು ಗ್ರಾಹಕರಿಗೆ ಒಂದೇ ಬಾರಿಗೆ ಸಿಗುವಂತಾಗಲೆಂದು ನಾವೆಲ್ಲರೂ ದಯಾಮಯನಾದ ಪರಮಾತ್ಮನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸೋಣ.

—ಪ್ರಕಾಶಕರು.

ಮಹಾಭಾರತ : ಶಾಂತಿಪರ್ವ–ಇಪ್ಪತ್ತೆರಡನೆಯ ಸಂಪುಟದ ವಿಷಯಾನುಕ್ರಮಣಿಕೆ

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಶಾಂತಿಪರ್ವ ;

ಇಪ್ಪತ್ತೆರಡನೆಯ ಸಂಪುಟ

೬೪ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜಧರ್ಮದ ಶ್ರೇಷ್ಠತೆ : ಆ ವಿಷಯದಲ್ಲಿ ಇಂದ್ರರೂಪಧರನಾದ ವಿಷ್ಣುವಿಗೂ-ಮಾಂಧಾತನಿಗೂ ನಡೆದ ಸಂಭಾಷಣೆ

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಭೀಷ್ಮನು ರಾಜಧರ್ಮದ ಹಿರಿಮೆಯನ್ನು ಮುಂದುವರಿಸಿ ಹೇಳುತ್ತಾನೆ :

ಚಾತುರಾಶ್ರಮ್ಯಧರ್ಮಾಶ್ಚ ಯತಿಧರ್ಮಾಶ್ಚ ಪಾಣ್ಡವ ।
ಲೋಕವೇದೋತ್ತರಾಶ್ಚೈವ ಕ್ಷಾತ್ರಧರ್ಮೇ ಸಮಾಹಿತಾಃ ॥೧॥

"ಯುಧಿಷ್ಠಿರ! ನಾಲ್ಕು ಆಶ್ರಮಧರ್ಮಗಳೂ, ಯತಿಧರ್ಮಗಳೂ, ಶ್ರೇಷ್ಠವಾದ ಲೌಕಿಕ-ವೈದಿಕಧರ್ಮಗಳೂ ಕ್ಷಾತ್ರಧರ್ಮದಲ್ಲಿಯೇ ಪ್ರತಿಷ್ಠಿತವಾಗಿವೆ.

ಸರ್ವಾಣ್ಯೇತಾನಿ ಕರ್ಮಾಣಿ ಕ್ಷಾತ್ರೇ ಭರತಸತ್ತಮ ।
ನಿರಾಶಿಷೋ ಜೀವಲೋಕಾಃ ಕ್ಷತ್ರಧರ್ಮೇಽವ್ಯವಸ್ಥಿತೇ ॥೨॥

ಈ ಎಲ್ಲ ಕರ್ಮಗಳೂ ಕ್ಷಾತ್ರಧರ್ಮವನ್ನೇ ಅವಲಂಬಿಸಿವೆ. ಕ್ಷಾತ್ರಧರ್ಮವು ಅವ್ಯವಸ್ಥಿತವಾಗಿಬಿಟ್ಟರೆ-ಜೀವಲೋಕಗಳು (ಜಗತ್ತಿನ

ಅಪ್ರತ್ಯಕ್ಷಂ ಬಹುದ್ವಾರಂ ಧರ್ಮಮಾಶ್ರಮವಾಸಿನಾಮ್ ।
ಪ್ರರೂಪಯನ್ತಿ ತದ್ಭಾವಮಾಗಮೈರೇವ ಶಾಶ್ವತಮ್ ॥೩॥

ಆಶ್ರಮವಾಸಿಗಳ ಸನಾತನವಾದ ಧರ್ಮಗಳು ಅನೇಕ ಮಾರ್ಗವುಳ್ಳವುಗಳಾಗಿಯೂ ಅಪ್ರತ್ಯಕ್ಷವಾಗಿಯೂ ಇವೆ. ವಿದ್ವಾಂಸರು ವೇದ-ಶಾಸ್ತ್ರಗಳ ಮೂಲಕವಾಗಿಯೇ ಆಶ್ರಮವಾಸಿಗಳ ಸನಾತನಧರ್ಮದ ಸ್ವರೂಪವನ್ನು ನಿರ್ಣಯಿಸಿ ಹೇಳಿರುತ್ತಾರೆ.

ಅಪರೇ ವಚನೈಃ ಪುಣ್ಯೈರ್ವಾದಿತೋ ಲೋಕನಿಶ್ಚಯಮ್ ।
ಅನಿಶ್ಚಯಜ್ಞಾ ಧರ್ಮಾಣಾಮದೃಷ್ಟಾನ್ತೇ ಪರೇ ಹತಾಃ ॥೪॥

ಕೆಲವರು ಲೌಕಿಕವಿಷಯಗಳನ್ನು ಬಹಳ ಸುಂದರವಾದ ವೇದವಾಕ್ಯಗಳಿಂದ ನಿರೂಪಿಸುತ್ತಾರೆ. ಹೀಗೆ ಪರಸ್ಪರ ವಿರುದ್ಧವಾದ ವ್ಯಾಖ್ಯಾನಗಳನ್ನು ಕೇಳಿದವರು ಧರ್ಮಗಳ ನಿಶ್ಚಯತತ್ತ್ವವನ್ನು ತಿಳಿಯದವರಾಗಿ, ದೃಷ್ಟಾಂತವಿಲ್ಲದ ಧರ್ಮದ ವಿಷಯದಲ್ಲಿ ಸಂದೇಹವನ್ನು ಹೊಂದಿ ಹಾಳಾಗುತ್ತಾರೆ.

ಪ್ರತ್ಯಕ್ಷಂ ಸುಖಭೂಯಿಷ್ಠಮಾತ್ಮಸಾಕ್ಷಿಕಮಚ್ಛಲಮ್ ।
ಸರ್ವಲೋಕಹಿತಂ ಧರ್ಮಂ ಕ್ಷತ್ರಿಯೇಷು ಪ್ರತಿಷ್ಠಿತಮ್ ॥೫॥

ಯಾವ ಧರ್ಮವು ಪ್ರತ್ಯಕ್ಷವಾಗಿರುವುದೋ, ಅಧಿಕಸುಖಮಯವಾಗಿರುವುದೋ, ಆತ್ಮಸಾಕ್ಷಿಕವಾಗಿರುವುದೋ, ಕಪಟರಹಿತವಾಗಿರುವುದೋ, ಸರ್ವಲೋಕಗಳಿಗೂ ಹಿತವನ್ನುಂಟುಮಾಡುವುದೋ–ಆ ಧರ್ಮವು ಕ್ಷತ್ರಿಯರಲ್ಲಿ ಪ್ರತಿಷ್ಠಿತವಾಗಿದೆ. ಪ್ರತ್ಯಕ್ಷವಾಗಿ ಪ್ರಜೆಗಳಿಗೆ ಸುಖ ವನ್ನು ಒದಗಿಸಿಕೊಡುವ ಧರ್ಮವು ಕ್ಷತ್ರಿಯರಲ್ಲಿದೆ.

ಧರ್ಮಾಶ್ರಮೇಽಧ್ಯವಸಿನಾಂ ಬ್ರಾಹ್ಮಣಾನಾಂ ಯುಧಿಷ್ಠಿರ ।
ಯಥಾ ತ್ರಯಾಣಾಂ ವರ್ಣಾನಾಂ ಸಂಖ್ಯಾತೋಪಶ್ರುತಿಃ ಪುರಾ ।
ರಾಜಧರ್ಮೇಷ್ವನುಮತಾ ಲೋಕಾಃ ಸುಚರಿತೈಃ ಸಹ ॥೬॥

ಯುಧಿಷ್ಠಿರ! ಯಾವ ರೀತಿಯಲ್ಲಿ ಮೂರು ವರ್ಣಗಳವರ ಧರ್ಮಗಳೂ ಕ್ಷತ್ರಿಯಧರ್ಮದಲ್ಲಿಯೇ ಅಂತರ್ಭಾವವನ್ನು (ಆಶ್ರಯವನ್ನು) ಹೊಂದಿರುವುದೋ–ಅದೇ ರೀತಿಯಲ್ಲಿ ಬ್ರಹ್ಮಚಾರೀ, ವಾನಪ್ರಸ್ಥ ಮತ್ತು ಸಂನ್ಯಾಸಿ–ಈ ಮೂರು ಆಶ್ರಮಧರ್ಮಗಳೂ ಗೃಹಸ್ಥಾಶ್ರಮದಲ್ಲಿಯೇ

ಸಮಾವೇಶಗೊಂಡಿವೆ. ಹೀಗೆ ಧರ್ಮಾಶ್ರಮವಿಷಯಜ್ಞರಾದ ಬ್ರಾಹ್ಮಣರು ಹೇಳುತ್ತಾರೆ. (ಹೇಗೆ ಕ್ಷತ್ರಿಯಾದಿ ವರ್ಣತ್ರಯವೂ ವರ್ಣಾಶ್ರಮ ಧರ್ಮಜ್ಞರಾದ ಬ್ರಾಹ್ಮಣರನ್ನು ಆಶ್ರಯಿಸುತ್ತದೆಯೋ ಹಾಗೆಯೇ ಲೋಕದ ಸುಚರಿತವೆಲ್ಲವೂ (ಒಳ್ಳೆಯ ನಡತೆ) ಕ್ಷತ್ರಿಯಧರ್ಮವನ್ನು ಅವಲಂಬಿಸಿದೆ.)

ಉತ್ತಮವಾದ ಚಾರಿತ್ರ್ಯಗಳಿಂದ (ಧರ್ಮಗಳಿಂದ) ಕೂಡಿದ ಲೋಕ ಗಳು ರಾಜಧರ್ಮದಲ್ಲಿಯೇ ಅಂತರ್ಗತವಾಗಿವೆ. ಇದಕ್ಕೆ ಉದಾಹರಣೆ ಯಾಗಿ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಹಿಂದೆ ಬಹುಸಂಖ್ಯಾತ ರಾದ ಶೂರರಾದ ರಾಜರು ದಂಡನೀತಿಯನ್ನು ತಿಳಿದುಕೊಳ್ಳುವ ಸಲುವಾಗಿ ಸರ್ವಭೂತೇಶ್ವರನಾದ, ದೇವದೇವನಾದ, ಪ್ರಭುವಾದ ನಾರಾಯಣನನ್ನು ಆಶ್ರಯಿಸಿದರು. ಅದಕ್ಕೆ ಮೊದಲು ಆ ರಾಜರೆಲ್ಲರೂ ತಾವು ವರ್ಣಾಶ್ರಮ ಸಂಬಂಧವಾಗಿ ಮಾಡಿರುವ ಒಂದೊಂದು ಕರ್ಮವನ್ನೂ ದಂಡನೀತಿ ಯೊಡನೆ ತುಲನೆಮಾಡಿದ್ದರು. ಆದರೆ ಅವರಿಗೆ ದಂಡನೀತಿಯು ಹೆಚ್ಚೇ? ವರ್ಣಾಶ್ರಮೋಕ್ತವಾದ ಕರ್ಮಗಳು ಹೆಚ್ಚೇ?–ಎಂಬ ಸಂಶಯವು ಪರಿಹಾರ ವಾಗಲೇ ಇಲ್ಲ. ಆ ಸಂಶಯವನ್ನು ಪರಿಹರಿಸಿಕೊಳ್ಳುವುದಕ್ಕಾಗಿಯೂ ಮತ್ತು ಸಿದ್ಧಾಂತವನ್ನು ತಿಳಿದುಕೊಳ್ಳುವ ಸಲುವಾಗಿಯೂ ರಾಜರು ವಿಷ್ಣುವನ್ನು ಉಪಾಸನೆಮಾಡಿದರು. ಹಿಂದೆ ಆದಿದೇವನಾದ ಮಹಾವಿಷ್ಣುವಿನಿಂದಲೇ ಸೃಷ್ಟಿಸಲ್ಪಟ್ಟ ಸಾಧ್ಯರು, ದೇವತೆಗಳು, ವಸುಗಳು, ಅಶ್ವಿನೀದೇವತೆಗಳು, ಏಕಾದಶರುದ್ರರು, ವಿಶ್ವೇದೇವತೆಗಳು, ಮರುದ್ಗಣಗಳು ಮತ್ತು ಸಿದ್ಧರು– ಇವರೆಲ್ಲರೂ ಕ್ಷಾತ್ರಧರ್ಮದಲ್ಲಿಯೇ ಇರುವವರಾಗಿದ್ದಾರೆ. ತತ್ತ್ವಾರ್ಥವನ್ನು ನಿಶ್ಚಯಿಸಿದ ಒಂದು ಧರ್ಮಮಯವಾದ ಇತಿಹಾಸವನ್ನು ನಾನೀಗ ಉದಾಹರಿಸುತ್ತೇನೆ.

ಈ ಅಖಂಡವಿಶ್ವವು ರಾಕ್ಷಸರೆಂಬ ಸಮುದ್ರದಲ್ಲಿ ಮುಳುಗಿ (ರಾಕ್ಷಸ ಭೂಯಿಷ್ಠವಾಗಿ) ಧರ್ಮಮರ್ಯಾದೆಯನ್ನು ಮೀರಿ ವರ್ತಿಸುತ್ತಿರಲಾಗಿ, ಮಾಂಧಾತನೆಂಬ ವೀರ್ಯವಂತನಾದ ಕ್ಷತ್ರಿಯನು ಭೂಮಂಡಲಕ್ಕೆ ಚಕ್ರವರ್ತಿಯಾದನು. ಆ ಪೃಥಿವೀವಲ್ಲಭನು ಆದಿಮಧ್ಯಾಂತರಹಿತನಾದ, ದೇವದೇವನಾದ, ಪ್ರಭುವಾದ ನಾರಾಯಣನನ್ನು ಸಂದರ್ಶಿಸುವ ಇಚ್ಛೆಯಿಂದ

ಒಂದು ಯಜ್ಞವನ್ನು ಮಾಡಿದನು. ರಾಜಸಿಂಹನಾದ ಮಾಂಧಾತನು ಆ ಯಜ್ಞಸಮಯದಲ್ಲಿ ಮಹಾವಿಷ್ಣುವನ್ನೇ ಧ್ಯಾನಮಾಡುತ್ತಾ ಮಹಾತ್ಮನಾದ ವಿಷ್ಣುವಿನ ಪಾದಗಳಲ್ಲಿ ತನ್ನ ಮುಡಿಯನ್ನಿಟ್ಟು ನಮಸ್ಕರಿಸಿದನು. ಆ ಸಮಯದಲ್ಲಿ ಮಹಾವಿಷ್ಣುವು ಇಂದ್ರನ ರೂಪವನ್ನು ಧರಿಸಿ ಮಾಂಧಾತನಿಗೆ ಕಾಣಿಸಿಕೊಂಡನು. ಸತ್ಪುರುಷರಾದ ಭೂಪಾಲರಿಂದ ಪರಿವೃತನಾಗಿದ್ದ ಮಾಂಧಾತನು ಇಂದ್ರನ ರೂಪದಲ್ಲಿದ್ದ, ಪ್ರಭುವಾದ ಮಹಾವಿಷ್ಣುವನ್ನು ಯಥೋಚಿತವಾಗಿ ಸತ್ಕರಿಸಿದನು. ಆ ಸಮಯದಲ್ಲಿ ಪಾರ್ಥಿವಶ್ರೇಷ್ಠನಾದ ಮಾಂಧಾತನಿಗೂ ಮಹಾತ್ಮನಾದ ಇಂದ್ರನಿಗೂ ಮಹಾದ್ಯುತಿಯಾದ ಮಹಾವಿಷ್ಣುವಿನ ವಿಷಯವಾಗಿ ದೀರ್ಘವಾದ ಸಂವಾದವೇ ನಡೆಯಿತು.

ಇಂದ್ರನು ಹೇಳುತ್ತಾನೆ :

ಕಿಮಿಷ್ಯತೇ ಧರ್ಮಭೃತಾಂ ವರಿಷ್ಠ
ಯದ್ದ್ರಷ್ಟುಕಾಮೋಽಸಿ ತಮಪ್ರಮೇಯಮ್
ಅನನ್ತಮಾಯಾಮಿತಮನ್ತ್ರವೀರ್ಯಂ
ನಾರಾಯಣಂ ಹ್ಯಾದಿದೇವಂ ಪುರಾಣಮ್ ॥೧೬॥

“ಧರ್ಮಾತ್ಮರಲ್ಲಿ ಶ್ರೇಷ್ಠನಾದ ಮಾಂಧಾತನೇ! ಆದಿದೇವನಾದ, ಪುರಾಣಪುರುಷನಾದ ಭಗವಾನ್ ನಾರಾಯಣನು ಅಪ್ರಮೇಯನು. (ಯಾವ ವಿಧವಾದ ಅಳತೆಗೋಲಿಗೂ ಸಿಕ್ಕದವನು.) ಅನಂತವಾದ ಮಾಯಾಶಕ್ತಿ ಯುಳ್ಳವನೂ, ಅಮಿತವಾದ ಮಂತ್ರಶಕ್ತಿಯುಳ್ಳವನೂ, ವೀರ್ಯಸಂಪನ್ನನೂ ಆಗಿರುವ ಅಂತಹ ಮಹಾಮಹಿಮನನ್ನು ನೀನೇತಕ್ಕೆ ಸಂದರ್ಶಿಸಲು ಇಚ್ಛಿಸಿರುವೆ? ಅವನಿಂದ ನೀನು ಏನನ್ನು ಅಪೇಕ್ಷಿಸಿರುವೆ?

ನಾಸೌ ದೇವೋ ವಿಶ್ವರೂಪೋ ಮಯಾಪಿ
ಶಕ್ಯೋ ದ್ರಷ್ಟುಂ ಬ್ರಹ್ಮಣಾ ವಾಪಿ ಸಾಕ್ಷಾತ್ ।
ಯೇಽನ್ಯೇ ಕಾಮಾಸ್ತವರಾಜನ್ಹೃದಿಸ್ಥಾ
ದಾಸ್ಯೇ ಚೈತಾಂಸ್ತ್ವಂ ಹಿ ಮರ್ತ್ಯೇಷು ರಾಜಾ ॥೧೭॥

ವಿಶ್ವರೂಪನಾದ ಆ ಮಹಾವಿಷ್ಣುವನ್ನು ನಾನಾಗಲೀ, ಸಾಕ್ಷಾತ್ ಬ್ರಹ್ಮನೇ ಆಗಲೀ ನೋಡಲಾರೆವು. ನೀನು ಮನುಷ್ಯರಲ್ಲಿ ರಾಜನಾಗಿರು

ವುದರಿಂದ ನಿನ್ನ ಮನಸ್ಸಿನಲ್ಲಿ ಬೇರೆ ಯಾವುದಾದರೂ ಕಾಮನೆಗಳಿದ್ದರೆ ಆ ಕಾಮನೆಗಳೆಲ್ಲವನ್ನೂ ನಾನೇ ಅನುಗ್ರಹಿಸುವೆನು.

ಸತ್ಯೇ ಸ್ಥಿತೋ ಧರ್ಮಪರೋ ಜಿತೇನ್ದ್ರಿಯಃ
ಶೂರೋ ದೃಢಪ್ರೀತಿರತಃ ಸುರಾಣಾಮ್ ।
ಬುದ್ಧ್ಯಾ ಭಕ್ತ್ಯಾ ಚೋತ್ತಮಶ್ರದ್ಧಯಾ ಚ
ತತಸ್ತೇಽಹಂ ದದ್ಮಿ ವರಾನ್ಯಥೇಷ್ಟಮ್ ॥೧೮॥

ನರೇಶ್ವರ! ನೀನು ಸತ್ಯನಿಷ್ಠನಾಗಿರುವೆ. ಧರ್ಮಪರಾಯಣನಾಗಿರುವೆ. ಜಿತೇಂದ್ರಿಯನಾಗಿರುವೆ. ಶೂರನಾಗಿರುವೆ. ದೇವತೆಗಳಲ್ಲಿ ಅಚಲವಾದ ಪ್ರೇಮಭಾವವನ್ನಿಟ್ಟಿರುವೆ. ನಿನ್ನ ನಿಶ್ಚಲವಾದ ಬುದ್ಧಿ, ನಿಶ್ಚಲವಾದ ಭಕ್ತಿ ಮತ್ತು ಉತ್ತಮವಾದ ಶ್ರದ್ಧೆ–ಇವುಗಳಿಂದ ಸಂತುಷ್ಟನಾಗಿರುವ ನಾನು ನಿನಗೆ ಯಥೇಷ್ಟವಾದ ವರಗಳನ್ನು ಕೊಡುತ್ತೇನೆ.”

ಮಾಂಧಾತನು ಹೇಳುತ್ತಾನೆ :

ಅಸಂಶಯಂ ಭಗವನ್ನಾದಿದೇವಂ
ದ್ರಕ್ಷ್ಯಾಮಿ ತ್ವಾಹಂ ಶಿರಸಾ ಸಮ್ಪ್ರಸಾದ್ಯ ।
ತ್ಯಕ್ತ್ವಾ ಕಾಮಾನ್ಧರ್ಮಕಾಮೋ ಹ್ಯರಣ್ಯ-
ಮಿಚ್ಛೇ ಗನ್ತುಂ ಸತ್ಪಥಂ ಲೋಕದೃಷ್ಟಮ್ ॥೧೯॥

“ಭಗವನ್! ನಾನು ನಿನ್ನ ಅಡಿದಾವರೆಗಳಲ್ಲಿ ನನ್ನ ಶಿರಸ್ಸನ್ನಿಟ್ಟು, ನಿನ್ನನ್ನು ಪ್ರಸನ್ನಗೊಳಿಸಿ ನಿನ್ನ ಅನುಗ್ರಹದಿಂದಲೇ ಆದಿದೇವನಾದ ಮಹಾವಿಷ್ಣುವನ್ನು ಸಂದರ್ಶಿಸುತ್ತೇನೆ. ಇದರಲ್ಲಿ ಸಂದೇಹವಿಲ್ಲ. ನಿನ್ನಿಂದ ವರಗಳನ್ನು ಪಡೆದುಕೊಳ್ಳುವ ವಿಷಯವಾಗಿ ಹೇಳುವುದಾದರೆ ನಾನೀಗ ಸಮಸ್ತ ಕಾಮನೆಗಳನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ, ಕೇವಲ ಧರ್ಮಕಾಮನಾಗಿ ಲೋಕದಲ್ಲಿ ಎಲ್ಲ ಸತ್ಪುರುಷರೂ ಅಂತಿಮವಾಗಿ ಆಶ್ರಯಿಸುವ ಅರಣ್ಯಕ್ಕೆ ಹೋಗಬೇಕೆಂದಿರುತ್ತೇನೆ.

ಕ್ಷಾತ್ರಾದ್ಧರ್ಮಾದ್ವಿಪುಲಾದಪ್ರಮೇಯಾ-
ಲ್ಲೋಕಾಃ ಪ್ರಾಪ್ತಾಃ ಸ್ಥಾಪಿತಂ ಸ್ವಂ ಯಶಶ್ಚ ।
ಧರ್ಮೋ ಯೋಽಸಾವಾದಿದೇವಾತ್ಪ್ರವೃತ್ತೋ
ಲೋಕಶ್ರೇಷ್ಠಂ ತಂ ನ ಜಾನಾಮಿ ಕರ್ತುಮ್ ॥೨೦॥

ಇಂದ್ರದೇವ! ವಿಶಾಲವಾದ ಮತ್ತು ಅಪ್ರಮೇಯವಾದ ಕ್ಷಾತ್ರಧರ್ಮದ ಪ್ರಭಾವದಿಂದ ನಾನು ಅನೇಕವಾದ ಪುಣ್ಯಲೋಕಗಳನ್ನು ಪಡೆದು ಕೊಂಡಿರುತ್ತೇನೆ. ನನ್ನ ಯಶಸ್ಸೂ ಎಲ್ಲ ಲೋಕಗಳಲ್ಲಿಯೂ ಪ್ರತಿಷ್ಠಿತವಾಗಿದೆ. ಆದರೆ ಆದಿದೇವನಾದ ಮಹಾವಿಷ್ಣುವಿನಿಂದ ಪ್ರವೃತ್ತವಾದ ಯಾವ ಧರ್ಮವಿರುವುದೋ–ಅಂತಹ, ಲೋಕದಲ್ಲಿಯೇ ಅತ್ಯಂತಶ್ರೇಷ್ಠವಾದ ಧರ್ಮವನ್ನು (ಮೋಕ್ಷಧರ್ಮವನ್ನು) ಕಾರ್ಯರೂಪದಲ್ಲಿ ತರುವುದನ್ನು ನಾನು ತಿಳಿದುಕೊಂಡಿರುವುದಿಲ್ಲ. (ವಿಷ್ಣುಧರ್ಮದ ಆಚರಣೆಯು ಹೇಗೆಂಬುದು ನನಗೆ ತಿಳಿದಿಲ್ಲ.)"

ಇಂದ್ರನು ಹೇಳುತ್ತಾನೆ :

ಅಸೈನಿಕಾ ಧರ್ಮಪರಾಶ್ಚ ಧರ್ಮೇ
ಪರಾಂ ಗತಿಂ ನ ನಯನ್ತೇ ಹ್ಯಯುಕ್ತಮ್ ।
ಕ್ಷಾತ್ರೋ ಧರ್ಮೋ ಹ್ಯಾದಿದೇವಾತ್ಪ್ರವೃತ್ತಃ ।
ಪಶ್ಚಾದನ್ಯೇ ಶೇಷಭೂತಾಶ್ಚ ಧರ್ಮಾಃ ॥೨೧॥

"ಮಾಂಧಾತನೇ! ಸೈನ್ಯಸಂಪತ್ತಿಯಿಲ್ಲದವರು (ರಾಜ್ಯ-ಕೋಶಾದಿ ಗಳನ್ನು ಪರಿತ್ಯಜಿಸಿದವರು), ಧರ್ಮಪರಾಯಣರಾಗಿರತಕ್ಕವರು, ವಾನ ಪ್ರಸ್ಥಾಶ್ರಮದಲ್ಲಿ ಸುಪ್ರತಿಷ್ಠಿತರಾಗಿರತಕ್ಕವರು ಇತರರಿಗೂ ಶ್ರೇಷ್ಠವಾದ ಗತಿಯನ್ನು ಹೊಂದಿಸುವುದಿಲ್ಲ ಅಥವಾ ತಾವೂ ಹೊಂದುವುದಿಲ್ಲ–ಎಂದು ಹೇಳುವುದು ಯುಕ್ತವಲ್ಲ. ಆದರೆ ಶ್ರೇಷ್ಠಗತಿಯನ್ನು ಹೊಂದಲು ಅದೊಂದೇ ಮಾರ್ಗವಲ್ಲ. ಕ್ಷಾತ್ರಧರ್ಮವು ಆದಿದೇವನಾದ ನಾರಾಯಣನಿಂದಲೇ ಮೊದಲು ಹುಟ್ಟಿತು. ಕ್ಷಾತ್ರಧರ್ಮವು ಹುಟ್ಟಿದನಂತರವೇ ಉಳಿದೆಲ್ಲ ಧರ್ಮಗಳೂ ಅದಕ್ಕೆ ಅಂಗಭೂತಗಳಾಗಿ ಹುಟ್ಟಿದುವು. (ಈ ಕಾರಣದಿಂದ ಕ್ಷಾತ್ರಧರ್ಮವು ಅತ್ಯಂತಶ್ರೇಷ್ಠವಾದುದು.)

ಶೇಷಾಃ ಸೃಷ್ಟಾ ಹ್ಯನ್ತವನ್ತೋ ಹ್ಯನನ್ತಾಃ
ಸಪ್ರಸ್ಥಾನಾಃ ಕ್ಷಾತ್ರಧರ್ಮಾ ವಿಶಿಷ್ಟಾಃ ।
ಅಸ್ಮಿನ್ಧರ್ಮೇ ಸರ್ವಧರ್ಮಾಃ ಪ್ರವಿಷ್ಟಾ-
ಸ್ತಸ್ಮಾದ್ಧರ್ಮಂ ಶ್ರೇಷ್ಠಮಿಮಂ ವದನ್ತಿ ॥೨೨॥

ಕ್ಷಾತ್ರಧರ್ಮವೇ ಮೊದಲು ಹುಟ್ಟಿದುದು. ಅನಂತರ ಅನೇಕಧರ್ಮ

ಗಳು ಹುಟ್ಟಿಕೊಂಡಿವೆ. ಆದರೆ ಆ ಶೇಷಧರ್ಮಗಳೆಲ್ಲವೂ ಕಾಲಾನುಗುಣ ವಾಗಿ ಕ್ಷಯಿಸತಕ್ಕುವುಗಳು. ಉತ್ತಮಸಂಪ್ರದಾಯಗಳಿಂದ ಕೂಡಿರುವ ಕ್ಷಾತ್ರಧರ್ಮವು ಎಲ್ಲ ಧರ್ಮಗಳಿಗೂ ವಿಶಿಷ್ಟವಾಗಿದೆ. ಈ ಧರ್ಮದಲ್ಲಿಯೇ ಎಲ್ಲ ಧರ್ಮಗಳೂ ಸಮಾವೇಶಗೊಂಡಿವೆ. ಆದುದರಿಂದಲೇ ಕ್ಷತ್ರಿಯ ಧರ್ಮವನ್ನು ಶ್ರೇಷ್ಠತಮವಾದ ಧರ್ಮವೆಂದು ಹೇಳುತ್ತಾರೆ. (ಬೇರೆಯ ಧರ್ಮಗಳು ಇರಲಿ ; ಇಲ್ಲದಿರಲಿ ; ಆಡಳಿತವು ಇದ್ದೇ ಇರಬೇಕಲ್ಲವೇ?)

ಪೂರ್ವಕಾಲದಲ್ಲಿ ಭಗವಾನ್ ವಿಷ್ಣುವು ಕ್ಷಾತ್ರಧರ್ಮದ ಮೂಲಕ ವಾಗಿಯೇ ಶತ್ರುಗಳನ್ನು ಸಂಹರಿಸಿ ದೇವತೆಗಳನ್ನೂ, ಮಹಾತೇಜಸ್ವಿಗಳಾದ ಋಷಿಗಳನ್ನೂ ಸಂರಕ್ಷಿಸಿದನು.

ಯದಿ ಹ್ಯಸೌ ಭಗವಾನ್ನಾಹನಿಷ್ಯ-
ದ್ರಿಪೂನ್ಸರ್ವಾನಸುರಾನಪ್ರಮೇಯಃ ।
ನ ಬ್ರಾಹ್ಮಣಾ ನ ಚ ಲೋಕಾದಿಕರ್ತಾ
ನಾಯಂ ಧರ್ಮೋ ನಾದಿಧರ್ಮೋಽಭವಿಷ್ಯತ್ ॥೨೪॥

ಒಂದು ವೇಳೆ ಅಪ್ರಮೇಯನಾದ ಭಗವಂತನು ದೇವತೆಗಳ ಶತ್ರು ಗಳಾದ ಅಸುರರನ್ನು (ಕ್ಷತ್ರಧರ್ಮದ ಮೂಲಕವಾಗಿ) ಸಂಹಾರಮಾಡಿರ ದಿದ್ದರೆ–ಈ ವೇಳೆಗೆ ಬ್ರಾಹ್ಮಣರಾರೂ ಇರುತ್ತಿರಲಿಲ್ಲ. ಜಗತ್ತಿನ ಆದಿ ಸೃಷ್ಟಿಕರ್ತನಾದ ಬ್ರಹ್ಮನೂ ಇರುತ್ತಿರಲಿಲ್ಲ. ಕ್ಷಾತ್ರಧರ್ಮವೂ ಇರುತ್ತಿಲಿಲ್ಲ. ಬ್ರಹ್ಮಧರ್ಮವೂ ಇರುತ್ತಿರಲಿಲ್ಲ.

ಇಮಾಮುರ್ವೀಂ ನಾಜಯದ್ವಿಕ್ರಮೇಣ
ದೇವಶ್ರೇಷ್ಠಃ ಸಾಸುರಾಮಾದಿದೇವಃ ।
ಚಾತುರ್ವರ್ಣ್ಯಂ ಚಾತುರಾಶ್ರಮ್ಯಧರ್ಮಾಃ
ಸರ್ವೇ ನ ಸ್ಯುರ್ಬ್ರಾಹ್ಮಣಾನಾಂ ವಿನಾಶಾತ್ ॥೨೫॥

ದೇವಶ್ರೇಷ್ಠನಾದ, ಆದಿದೇವನಾದ ಮಹಾವಿಷ್ಣುವು ಅಸುರರಿಂದ ತುಂಬಿಹೋಗಿದ್ದ ಈ ಭೂಮಿಯನ್ನು ಪರಾಕ್ರಮದಿಂದ ಜಯಿಸದೇ ಇದ್ದಿದ್ದರೆ ಬ್ರಾಹ್ಮಣರು ಸಂಪೂರ್ಣವಾಗಿ ವಿನಾಶಹೊಂದುತ್ತಿದ್ದರು. ಬ್ರಾಹ್ಮಣರ ವಿನಾಶದಿಂದಾಗಿ ಚಾತುರ್ವರ್ಣ್ಯಗಳೂ ಎಲ್ಲ ಆಶ್ರಮಧರ್ಮಗಳೂ ಸಂಪೂರ್ಣವಾಗಿ ವಿನಾಶಹೊಂದುತ್ತಿದ್ದುವು.

ನಷ್ಟಾ ಧರ್ಮಾಃ ಶತಧಾ ಶಾಶ್ವತಾಸ್ತೇ
ಕ್ಷಾತ್ರೇಣ ಧರ್ಮೇಣ ಪುನಃ ಪ್ರವೃದ್ಧಾಃ ।
ಯುಗೇ ಯುಗೇ ಹ್ಯಾದಿಧರ್ಮಾಃ ಪ್ರವೃತ್ತಾ
ಲೋಕಜ್ಯೇಷ್ಠಂ ಕ್ಷಾತ್ರಧರ್ಮಂ ವದನ್ತಿ ॥೨೬॥

ಶಾಶ್ವತವಾದ ಸನಾತನಧರ್ಮಗಳು ಅಸುರ-ರಾಕ್ಷಸರ ಉಪಟಳ ದಿಂದಾಗಿ ನೂರಾರು ಬಾರಿ ವಿನಿಷ್ಟವಾಗಿವೆ. ಆದರೆ ಕ್ಷಾತ್ರಧರ್ಮದಿಂದಲೇ ಸನಾತನಧರ್ಮಗಳ ಪುನರುದ್ಧಾರವೂ ಆಗಿದೆ. ಪ್ರತಿಯೊಂದು ಯುಗ ದಲ್ಲಿಯೂ ಆದಿಧರ್ಮಗಳು (ಕ್ಷತ್ರಿಯಧರ್ಮಗಳು) ಅಸುರರ ವಿನಾಶಕ್ಕಾಗಿ ಪ್ರಾದುರ್ಭೂತವಾಗುತ್ತಲೇ ಇರುತ್ತವೆ. ಈ ಕಾರಣದಿಂದಲೇ ಕ್ಷಾತ್ರಧರ್ಮ ವನ್ನು ಲೋಕದಲ್ಲಿ ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ.

ಆತ್ಮತ್ಯಾಗಃ ಸರ್ವಭೂತಾನುಕಮ್ಪಾ
ಲೋಕಜ್ಞಾನಂ ಪಾಲನಂ ಮೋಕ್ಷಣಂ ಚ ।
ವಿಷಣ್ಣಾನಾಂ ಮೋಕ್ಷಣಂ ಪೀಡಿತಾನಾಂ
ಕ್ಷಾತ್ರೇ ಧರ್ಮೇ ವಿದ್ಯತೇ ಪಾರ್ಥಿವಾನಾಮ್ ॥೨೭॥

ಯುದ್ಧದಲ್ಲಿ ತಮ್ಮ ಶರೀರವನ್ನು ತ್ಯಾಗಮಾಡುವುದು, ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ದಯಾಪರತೆಯಿಂದಿರುವುದು, ಲೋಕ ವ್ಯವಹಾರಜ್ಞಾನ, ಪ್ರಜಾಪಾಲನ, ವಿಷಾದಗ್ರಸ್ತರಾದವರನ್ನು ವಿಷಾದ ರಹಿತರನ್ನಾಗಿ ಮಾಡುವುದು, ದುಃಖಪೀಡಿತರಾದವರನ್ನು ದುಃಖಹೀನರನ್ನಾಗಿ ಮಾಡುವುದು–ಇವೆಲ್ಲವೂ ರಾಜನ ಕ್ಷಾತ್ರಧರ್ಮದಲ್ಲಿರುವ ಅತಿಮುಖ್ಯವಾದ ಧರ್ಮಗಳಾಗಿವೆ.

ನಿರ್ಮರ್ಯಾದಾಃ ಕಾಮಮನ್ಯುಪ್ರವೃತ್ತಾ
ಭೀತಾ ರಾಜ್ಞೋ ನಾಧಿಗಚ್ಛನ್ತಿ ಪಾಪಮ್ ।
ಶಿಷ್ಟಾಶ್ಶಾನ್ಯೇ ಸರ್ವಧರ್ಮೋಪಪನ್ನಾಃ
ಸಾಧ್ವಾಚಾರಾಃ ಸಾಧು ಧರ್ಮಂ ವದನ್ತಿ ॥೨೮॥

ಯಾರು ಕಾಮ-ಕ್ರೋಧಾದಿಗಳಿಂದ ಕೂಡಿದವರಾಗಿ ಲೋಕ

ಮರ್ಯಾದೆಯನ್ನು ಮೀರಿ ನಡೆಯುತ್ತಾರೆಯೋ–ಅವರು ರಾಜರ ಭಯದಿಂದಾಗಿ ಪಾಪಕಾರ್ಯಗಳನ್ನು ಮಾಡುವುದಿಲ್ಲ. ಸರ್ವಧರ್ಮಸಂಪನ್ನರಾದ ಶಿಷ್ಟರು ರಾಜನಿಂದ ರಕ್ಷಿಸಲ್ಪಟ್ಟವರಾಗಿ ಸದಾಚಾರ-ಸದ್ವ್ಯವಹಾರಗಳಿಂದಿರುತ್ತಾ ಲೋಕಕ್ಕೆ ಧರ್ಮದ ಸದುಪದೇಶವನ್ನು ಮಾಡುತ್ತಾರೆ.

ಪುತ್ರವತ್ಪಾಲ್ಯಮಾನಾನಿ ರಾಜಧರ್ಮೇಣ ಪಾರ್ಥಿವೈಃ ।
ಲೋಕೇ ಭೂತಾನಿ ಸರ್ವಾಣಿ ಚರನ್ತೇ ನಾತ್ರ ಸಂಶಯಃ ॥೨೯॥

ಪಾರ್ಥಿವರು ರಾಜಧರ್ಮದಿಂದ ಪ್ರಜೆಗಳನ್ನು ತಮ್ಮ ಮಕ್ಕಳಂತೆಯೇ ಪಾಲನೆಮಾಡುತ್ತಾರೆ. ಈ ಕಾರಣದಿಂದಲೇ ಲೋಕದಲ್ಲಿ ಎಲ್ಲ ಪ್ರಾಣಿಗಳೂ (ಎಲ್ಲ ಪ್ರಜೆಗಳು) ಭಯರಹಿತರಾಗಿ ಸಂಚಾರಮಾಡುತ್ತಾರೆ. (ನಡೆಯು ತ್ತಾರೆ.) ಈ ವಿಷಯದಲ್ಲಿ ಸಂಶಯವೇ ಇಲ್ಲ.

ಸರ್ವಧರ್ಮಕರಂ ಕ್ಷಾತ್ರಂ ಲೋಕಶ್ರೇಷ್ಠಂ ಸನಾತನಮ್ ।
ಶಶ್ವದಕ್ಷರಪರ್ಯನ್ತಮಕ್ಷರಂ ಸರ್ವತೋಮುಖಮ್ ॥೩೦॥

ಈ ರೀತಿಯಲ್ಲಿ ಕ್ಷಾತ್ರಧರ್ಮವು ಲೋಕದಲ್ಲಿ ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವಾಗಿರುತ್ತದೆ. ಇತರ ಎಲ್ಲ ಧರ್ಮಗಳಿಗೂ ಜನ್ಮಸ್ಥಾನವಾಗಿರುತ್ತದೆ. ಸನಾತನವಾದ, ನಿತ್ಯವಾದ, ಅವಿನಾಶಿಯಾದ, ಮೋಕ್ಷಪ್ರಾಪಕವಾದ ಸರ್ವತೋಮುಖವಾದ ಧರ್ಮವಾಗಿರುತ್ತದೆ.”

ಅಳನೆಯ ಅಧ್ಯಾಯವು ಮುಗಿಯಿತು.

೬೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಇಂದ್ರ–ಮಾಂಧಾತರ ಸಂವಾದ

ಜನಮೇಜಯ! ಇಂದ್ರರೂಪಿಯಾದ ಮಹಾವಿಷ್ಣುವು ಮಾಂಧಾತನೊಡನೆ ಹೇಳುತ್ತಾನೆ :

“ಮಹಾರಾಜ! ಹೀಗೆ ಕ್ಷಾತ್ರಧರ್ಮವು ಅತ್ಯಂತವೀರ್ಯವತ್ತಾದುದು. ಸರ್ವಧರ್ಮಗಳಿಂದಲೂ ಸಂಪನ್ನವಾದುದು. (ಎಲ್ಲ ಧರ್ಮಗಳೂ ಈ ಕ್ಷಾತ್ರಧರ್ಮದಲ್ಲಿಯೇ ಅಧಿಷ್ಠಿತವಾಗಿವೆ.) ಕ್ಷಾತ್ರಧರ್ಮವು ಉಳಿದೆಲ್ಲ

ಧರ್ಮಗಳಿಗಿಂತಲೂ ಶ್ರೇಷ್ಠವಾದುದು. ಪರಮಶ್ರೇಷ್ಠವಾದ ಈ ಧರ್ಮವನ್ನು ನಿನ್ನಂತಹ ಉದಾರರೂ, ಲೋಕದ ಹಿತದಲ್ಲಿಯೇ ನಿರತರಾಗಿರತಕ್ಕವರೂ ಅಗತ್ಯವಾಗಿ ಪಾಲನೆಮಾಡಬೇಕು. ಒಂದು ವೇಳೆ ಹಾಗೆ ಪಾಲನೆ ಮಾಡದೇ



ಎಲ್ಲವನ್ನೂ ಪರಿತ್ಯಾಗಮಾಡಿ ಅರಣ್ಯಕ್ಕೆ ಹೊರಟುಹೋದರೆ ಪ್ರಜೆಗಳೇ ಇರುವುದಿಲ್ಲ. (ಅರಾಜಕತೆಯಿಂದಾಗಿ ಎಲ್ಲರೂ ವಿನಾಶಹೊಂದುತ್ತಾರೆ.)

ಭೂಸಂಸ್ಕಾರಂ ರಾಜಸಂಸ್ಕಾರಯೋಗ-
ಮಭೈಕ್ಷ್ಯಚರ್ಯಾಂ ಪಾಲನಂ ಚ ಪ್ರಜಾನಾಮ್ ।
ವಿದ್ಯಾದ್ರಾಜಾ ಸರ್ವಭೂತಾನುಕಮ್ಪೀ
ದೇಹತ್ಯಾಗಂ ಚಾಹವೇ ಧರ್ಮಮಗ್ರ್ಯಮ್ ॥೨॥

ಸರ್ವಪ್ರಾಣಿಗಳಲ್ಲಿಯೂ ಅನುಕಂಪದಿಂದಿರುವ ರಾಜನು ಭೂಸಂಸ್ಕಾರವನ್ನು ಮಾಡಬೇಕು. (ಭೂಮಿಯನ್ನು ಸಸ್ಯಶಾಲಿನಿಯನ್ನಾಗಿ ಮಾಡಬೇಕು.) ರಾಜಸೂಯಾಶ್ವಮೇಧಯಾಗಗಳ ಮೂಲಕವಾಗಿ ಅವಭೃಥಸ್ನಾನವನ್ನು ಮಾಡಿ ರಾಜಸಂಸ್ಕಾರದಿಂದ ಯುಕ್ತನಾಗಬೇಕು. ರಾಜನೆಂದಿಗೂ ಭಿಕ್ಷಾಚರಣೆಯನ್ನು ಮಾಡಬಾರದು. (ಸಂನ್ಯಾಸಿಯಾಗಬಾರದು.) ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸಬೇಕು. ಯುದ್ಧದಲ್ಲಿ ದೇಹತ್ಯಾಗಮಾಡಬೇಕು. ಇವು ರಾಜನ ಶ್ರೇಷ್ಠವಾದ ಧರ್ಮವಾಗಿರುತ್ತದೆ.

ತ್ಯಾಗಂ ಶ್ರೇಷ್ಠಂ ಮುನಯೋ ವೈ ವದನ್ತಿ
ಸರ್ವಶ್ರೇಷ್ಠಂ ಯಚ್ಛರೀರಂ ತ್ಯಜನ್ತಃ ।
ನಿತ್ಯಂ ಯುಕ್ತಾ ರಾಜಧರ್ಮೇಷು ಸರ್ವೇ
ಪ್ರತ್ಯಕ್ಷಂ ತೇ ಭೂಮಿಪಾಲಾ ಯಥೈವ ॥೩॥

ತ್ಯಾಗವೇ ಶ್ರೇಷ್ಠವಾದ ಧರ್ಮವೆಂದು ಮುನಿಗಳು ಹೇಳುತ್ತಾರೆ. ಆದರೆ ರಾಜರು ಯುದ್ಧದಲ್ಲಿ ಪ್ರಾಣತ್ಯಾಗಮಾಡುವುದು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವಾಗಿದೆ. ಸರ್ವಕಾಲಗಳಲ್ಲಿಯೂ ರಾಜಧರ್ಮದಲ್ಲಿಯೇ ನಿರತರಾಗಿರತಕ್ಕ ಭೂಮಿಪಾಲರು ಯಾವ ರೀತಿಯಲ್ಲಿ ಯುದ್ಧದಲ್ಲಿ ಪ್ರಾಣಬಿಡುವರೆಂಬುದು ನಿನಗೆ ಪ್ರತ್ಯಕ್ಷವಾಗಿಯೇ ಇದೆ.

ಬಹುಶ್ರುತ್ಯಾ ಗುರುಶುಶ್ರೂಷಯಾ ಚ
ಪರಸ್ಪರಂ ಸಂಹನನಾದ್ವದನ್ತಿ ।
ನಿತ್ಯಂ ಧರ್ಮಂ ಕ್ಷತ್ರಿಯೋ ಬ್ರಹ್ಮಚಾರೀ
ಚರೇದೇಕೋ ಹ್ಯಾಶ್ರಮಂ ಧರ್ಮಕಾಮಃ ॥೪॥

ಕ್ಷತ್ರಿಯಬ್ರಹ್ಮಚಾರಿಯು ಧರ್ಮಪಾಲನೆಯಲ್ಲಿಯೇ ಇಚ್ಛೆಯನ್ನಿಟ್ಟು ಕೊಂಡು ಗುರುಶುಶ್ರೂಷೆಯನ್ನು ಮಾಡುತ್ತಾ ಅನೇಕಶಾಸ್ತ್ರಗಳನ್ನು ಅಧ್ಯಯನಮಾಡಬೇಕು. ನಿತ್ಯವೂ ಬ್ರಹ್ಮಚರ್ಯಾಶ್ರಮದ ಧರ್ಮಗಳನ್ನು ಪರಿಪಾಲಿಸುತ್ತಿರಬೇಕು. ಈ ವಿಷಯವನ್ನು ಋಷಿಗಳು ಪರಸ್ಪರವಾಗಿ ಚರ್ಚಿಸಿ ಹೇಳಿರುತ್ತಾರೆ.

ಸಾಮಾನ್ಯಾರ್ಥೇ ವ್ಯವಹಾರೇ ಪ್ರವೃತ್ತೇ
ಪ್ರಿಯಾಪ್ರಿಯೇ ವರ್ಜಯನ್ನೇವ ಯತ್ನಾತ್ ।
ಚಾತುರ್ವರ್ಣ್ಯಸ್ಥಾಪನಾತ್ಪಾಲನಾಚ್ಚ
ತೈಸ್ತೈರ್ಯೋಗೈರ್ನಿಯಮೈರೌರಸೈಶ್ಚ ॥೫॥

ಸರ್ವೋದ್ಯೋಗೈರಾಶ್ರಮಂ ಧರ್ಮಮಾಹುಃ
ಕ್ಷಾತ್ರಂ ಶ್ರೇಷ್ಠಂ ಸರ್ವಧರ್ಮೋಪಪನ್ನಮ್ ।
ಸ್ವಂ ಸ್ವಂ ಧರ್ಮಂ ಯೇನ ಚರನ್ತಿ ವರ್ಣಾ-
ಸ್ತಾಂಸ್ತಾನ್ಧರ್ಮಾನನ್ಯಥಾರ್ಥಾನ್ವದನ್ತಿ ॥೬॥

ರಾಜನಾದವನು ಜನಸಾಮಾನ್ಯರ ವ್ಯವಹಾರಗಳಲ್ಲಿ ಪ್ರವೃತ್ತನಾದಾಗ ಪ್ರಯತ್ನಪೂರ್ವಕವಾಗಿ ಪ್ರಿಯರಾದವರು-ಅಪ್ರಿಯರಾದವರು ಎಂಬ ತಾರತಮ್ಯವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಎಲ್ಲರನ್ನೂ ಸಮಾನತೆಯಿಂದ ಕಾಣಬೇಕು. ಭಿನ್ನ-ಭಿನ್ನವಾದ ಉಪಾಯಗಳಿಂದಲೂ, ನಿಯಮಗಳಿಂದಲೂ, ಪೌರುಷದಿಂದಲೂ, ಸಕಲವಿಧವಾದ ಪ್ರಯತ್ನಗಳಿಂದಲೂ ಚಾತುರ್ವರ್ಣ್ಯವನ್ನು ಯಥಾಯೋಗ್ಯವಾಗಿ ಸ್ಥಾಪಿಸುವುದರಿಂದಲೂ ಮತ್ತು ಪರಿಪಾಲಿಸುವುದರಿಂದಲೂ–ಗೃಹಸ್ಥಾಶ್ರಮವನ್ನು ಎಲ್ಲ ಆಶ್ರಮಗಳಿಗಿಂತಲೂ ಶ್ರೇಷ್ಠವಾದ ಆಶ್ರಮವೆಂದೂ, ಕ್ಷಾತ್ರಧರ್ಮವನ್ನು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವೆಂದೂ ಮತ್ತು ಎಲ್ಲ ಧರ್ಮಗಳಿಂದಲೂ ಕ್ಷಾತ್ರಧರ್ಮವು ಸಂಪನ್ನವಾಗಿರುವುದೆಂದೂ ಹೇಳುತ್ತಾರೆ. ಏಕೆಂದರೆ : ಎಲ್ಲ ವರ್ಣಗಳ ಮತ್ತು ಆಶ್ರಮಗಳ ಜನರೂ ಕ್ಷಾತ್ರಧರ್ಮದ ಸಹಯೋಗದಿಂದಲೇ ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಕಾಪಾಡಿಕೊಳ್ಳುತ್ತಾರೆ. ಒಂದು ವೇಳೆ ವರ್ಣಾಶ್ರಮಧರ್ಮಗಳನ್ನು ಕಾಪಾಡುವ ಕ್ಷತ್ರಿಯಧರ್ಮವೇ ಇಲ್ಲದಿದ್ದರೆ–ಪ್ರಪಂಚದಲ್ಲಿ ಯಾವ ಧರ್ಮಗಳೂ ಉಳಿಯುತ್ತಲೇ ಇರಲಿಲ್ಲವೆಂದು ಋಷಿಗಳು ಹೇಳುತ್ತಾರೆ.

ನಿರ್ಮರ್ಯಾದಾನ್ನಿತ್ಯಮರ್ಥೇ ನಿವಿಷ್ಟಾ-
ನಾಹುಸ್ತಾಂಸ್ತಾನ್ವೈ ಪಶುಭೂತಾನ್ಮನುಷ್ಯಾನ್ ।
ಯಥಾ ನೀತಿಂ ಗಮಯತ್ಯರ್ಥಯೋಗಾ-
ಚ್ಛ್ರೇಯಸ್ತಸ್ಮಾದಾಶ್ರಮಾತ್ಕ್ಷತ್ರಧರ್ಮಃ ॥೭॥

ಯಾರು ಸದಾಕಾಲದಲ್ಲಿಯೂ ಮಾನ-ಮರ್ಯಾದೆ-ಭೂತದಯೆಗಳನ್ನು ತೊರೆದು ಎಲ್ಲೆಮೀರಿ ಅರ್ಥಸಂಗ್ರಹಣೆಯಲ್ಲಿಯೇ ಆಸಕ್ತರಾಗಿರುತ್ತಾರೆಯೋ ಅಂತಹವರನ್ನು ಪಶುಸದೃಶರಾದ ಮನುಷ್ಯರೆಂದೇ ಹೇಳುತ್ತಾರೆ. ಆದರೆ ಕ್ಷತ್ರಿಯಧರ್ಮವು ಅರ್ಥಸಂಗ್ರಹವನ್ನು ಮಾಡಿಕೊಡುವುದರ ಜೊತೆಗೆ ಉತ್ತಮನೀತಿಯ ಜ್ಞಾನವನ್ನೂ ಪ್ರಜೆಗಳಿಗೆ ಉಂಟುಮಾಡಿಕೊಡುತ್ತದೆ. ಆದುದರಿಂದಲೇ ಕ್ಷಾತ್ರಧರ್ಮವು ಎಲ್ಲ ಆಶ್ರಮಧರ್ಮಗಳಿಗಿಂತಲೂ ಶ್ರೇಷ್ಠವಾಗಿದೆ.

ತ್ರೈವಿದ್ಯಾನಾಂ ಯಾ ಗತಿರ್ಬ್ರಾಹ್ಮಣಾನಾಂ
ಯೇ ಚೈವೋಕ್ತಾಶ್ಚಾಶ್ರಮಾ ಬ್ರಾಹ್ಮಣಾನಾಮ್ ।
ಏತತ್ಕರ್ಮ ಬ್ರಾಹ್ಮಣಸ್ಯಾಹುರಗ್ರ್ಯ-
ಮನ್ಯತ್ಕುರ್ವಞ್ಛೂದ್ರವಚ್ಛಸ್ತ್ರವಧ್ಯಃ ॥೮॥

ವೇದಾಧಿಕಾರಿಗಳಾದ ಬ್ರಾಹ್ಮಣರಿಗೆ ಯಾವ ಷಟ್ಕರ್ಮಗಳು ಹೇಳಿವೆಯೋ ಮತ್ತು ಅವರಿಗಾಗಿಯೇ ಯಾವ ನಾಲ್ಕು ಆಶ್ರಮಧರ್ಮಗಳು ಹೇಳಿವೆಯೋ–ಅವುಗಳು ಬ್ರಾಹ್ಮಣರು ಮಾಡಲೇಬೇಕಾದ ಸರ್ವಶ್ರೇಷ್ಠವಾದ ಧರ್ಮಗಳೆಂದು ಹೇಳಲ್ಪಟ್ಟಿವೆ. ಆ ಧರ್ಮಗಳಿಗೆ ವಿಪರೀತವಾದ ಕರ್ಮಗಳನ್ನು ಮಾಡುವವನು ಶೂದ್ರನಿಗೆ ಸಮಾನನಾಗುತ್ತಾನೆ ಮತ್ತು ಅಂತಹವನು ಶಸ್ತ್ರದಿಂದ ವಧಿಸಲ್ಪಡಲೂ ಯೋಗ್ಯನಾಗುತ್ತಾನೆ. (ಅಂತಹ ಧರ್ಮಭ್ರಷ್ಟನಾದ ಬ್ರಾಹ್ಮಣನಿಗೆ ಮರಣದಂಡನೆಯನ್ನೇ ವಿಧಿಸಬೇಕು.)

ಚಾತುರಾಶ್ರಮ್ಯಧರ್ಮಾಶ್ಚ ವೇದಧರ್ಮಾಶ್ಚ ಪಾರ್ಥಿವ ।
ಬ್ರಾಹ್ಮಣೇನಾನುಗನ್ತವ್ಯಾ ನಾನ್ಯೋ ವಿದ್ಯಾತ್ಕದಾಚನ ॥೯॥

ಮಹಾರಾಜ! ನಾಲ್ಕು ಆಶ್ರಮಧರ್ಮಗಳನ್ನೂ ; ವೇದವಿಹಿತವಾದ ಯಜ್ಞಧರ್ಮಗಳನ್ನೂ ಬ್ರಾಹ್ಮಣನೇ ಅನುಸರಣೆ ಮಾಡಬೇಕು. ಬೇರೆಯವರಿಗೆ ಆ ಧರ್ಮಗಳಲ್ಲಿ ಯಾವ ವಿಧವಾದ ತಿಳಿವಳಿಕೆಯೂ ಇರುವುದಿಲ್ಲ.

ಅನ್ಯಥಾ ವರ್ತಮಾನಸ್ಯ ನಾಸೌ ವೃತ್ತಿಃ ಪ್ರಕಲ್ಪ್ಯತೇ ।
ಕರ್ಮಣಾ ವರ್ಧತೇ ಧರ್ಮೋ ಯಥಾಧರ್ಮಸ್ತಥೈವ ಸಃ ॥೧೦॥

ಬ್ರಾಹ್ಮಣನು ಆಶ್ರಮಗಳನ್ನೂ ವೇದವಿಹಿತವಾದ ಯಜ್ಞ-ಯಾಗಾದಿ

ಗಳನ್ನೂ ಮಾಡದೇ ಇತರ ಕರ್ಮಗಳನ್ನು ಮಾಡಿದರೆ ಅವನಿಗೆ ಬ್ರಾಹ್ಮಣನ ವೃತ್ತಿಯೇ ಸಲ್ಲದಾಗುತ್ತದೆ. (ಅವರಿಗೆ ಬ್ರಾಹ್ಮಣ ಜೀವನವೃತ್ತಿಯನ್ನು ಕಲ್ಪಿಸಲಾಗದು.) ಏಕೆಂದರೆ : ಕರ್ಮಮಾಡುವುದರಿಂದಲೇ ಧರ್ಮವು ವೃದ್ಧಿಹೊಂದುತ್ತದೆ. ಒಬ್ಬನಲ್ಲಿ ಧರ್ಮವು ಹೇಗಿರುತ್ತದೆಯೋ ಅವನ ಸ್ವರೂಪವೂ ಹಾಗೆಯೇ ಇರುತ್ತದೆ. ಬ್ರಾಹ್ಮಣನಲ್ಲಿ ಬ್ರಾಹ್ಮಣಧರ್ಮವಿದ್ದರೆ ಅವನು ಬ್ರಾಹ್ಮಣನಾಗಿ ವಿರಾಜಿಸುತ್ತಾನೆ. ಅದಕ್ಕೆ ವಿಪರೀತವಾದ ಧರ್ಮ ವಿದ್ದರೆ ಪತಿತನಾಗುತ್ತಾನೆ.

ಯೋ ವಿಕರ್ಮಸ್ಥಿತೋ ವಿಪ್ರೋ ನ ಸ ಸಮ್ಮಾನಮರ್ಹತಿ ।
ಕರ್ಮ ಸ್ವಂ ನೋಪಯುಞ್ಜಾನಮವಿಶ್ವಾಸ್ಯಂ ಹಿ ತಂ ವಿದುಃ ॥೧೧॥

ಯಾವ ಬ್ರಾಹ್ಮಣನು ತನ್ನ ವರ್ಣಾಶ್ರಮಧರ್ಮಗಳಿಗೆ ವಿರುದ್ಧವಾದ ಕರ್ಮಗಳನ್ನು ಮಾಡುವನೋ–ಅವನು ಸಮ್ಮಾನಕ್ಕೆ ಯೋಗ್ಯನಾಗುವುದಿಲ್ಲ. ಸ್ವಧರ್ಮೋಕ್ತವಾದ ಕರ್ಮಗಳನ್ನು ಮಾಡದಿರುವ ಬ್ರಾಹ್ಮಣನು ವಿಶ್ವಾಸಾರ್ಹ ನಲ್ಲವೆಂದೂ ವಿದ್ವಾಂಸರು ಭಾವಿಸುತ್ತಾರೆ.

ಏತೇ ಧರ್ಮಾಃ ಸರ್ವಸರ್ವೇಷು ಲೀನಾ
ಉತ್ಕೃಷ್ಟವ್ಯಾಃ ಕ್ಷತ್ರಿಯೈರೇಷ ಧರ್ಮಃ ।
ತಸ್ಮಾಜ್ಜ್ಯೇಷ್ಠಾ ವೀರಧರ್ಮಾ ನ ಚಾನ್ಯೇ
ವೀರ್ಯಜ್ಯೇಷ್ಠಾ ವೀರಧರ್ಮಾ ಮತಾ ಮೇ ॥೧೨॥

ಎಲ್ಲ ವರ್ಣದವರಲ್ಲಿಯೂ ಲೀನವಾಗಿರುವ ಈ ವರ್ಣಾಶ್ರಮಧರ್ಮ ಗಳನ್ನು ಕ್ಷತ್ರಿಯರೇ ಮೇಲಕ್ಕೆತ್ತಬೇಕು. ಇದೇ ಕ್ಷತ್ರಿಯರ ಧರ್ಮವಾಗಿದೆ. ಇತರ ಎಲ್ಲ ಧರ್ಮಗಳನ್ನೂ ಉದ್ಧಾರಮಾಡುವುದಾಗಿರುವುದರಿಂದಲೇ ಈ ರಾಜಧರ್ಮಗಳು ಎಲ್ಲ ಧರ್ಮಗಳಿಗಿಂತಲೂ ಹಿರಿಯದಾಗಿವೆ. ಬೇರೆ ಧರ್ಮಗಳಿಗೆ ಆ ಹಿರಿಮೆಯಿಲ್ಲ. ವೀರ್ಯವೇ ಹಿರಿಮೆಯಾಗಿ ಉಳ್ಳ ಕ್ಷತ್ರಿಯರು ವೀರಧರ್ಮರೆಂಬುದು ನನ್ನ ಅಭಿಪ್ರಾಯವಾಗಿದೆ.”

ಮಾಂಧಾತನು ಹೇಳುತ್ತಾನೆ :

ಯವನಾಃ ಕಿರಾತಾ ಗಾನ್ಧಾರಾಶ್ಚೀನಾಃ ಶಬರಬರ್ಬರಾಃ ।
ಶಕಾಸ್ತುಷಾರಾಃ ಕಙ್ಕಾಶ್ಚ ಪಹ್ಲವಾಶ್ಚಾನ್ಧ್ರಮದ್ರಕಾಃ ॥೧೩॥

ಪೌಣ್ಡ್ರಾಃ ಪುಲಿನ್ದಾ ರಮಠಾಃ ಕಾಮ್ಬೋಜಾಶ್ಚೈವ ಸರ್ವಶಃ ।
ಬ್ರಹ್ಮಕ್ಷತ್ರಪ್ರಸೂತಾಶ್ಚ ವೈಶ್ಯಾಃ ಶೂದ್ರಾಶ್ಚ ಮಾನವಾಃ ॥೧೪॥
ಕಥಂ ಧರ್ಮಾಂಶ್ಚರಿಷ್ಯನ್ತಿ ಸರ್ವೇ ವಿಷಯವಾಸಿನಃ ।
ಮದ್ವಿಧೈಶ್ಚ ಕಥಂ ಸ್ಥಾಪ್ಯಾಃ ಸರ್ವೇ ವೈ ದಸ್ಯುಜೀವಿನಃ ॥೧೫॥

"ಭಗವನ್! ನನ್ನ ರಾಜ್ಯದಲ್ಲಿ ಯವನರು, ಕಿರಾತರು, ಗಾಂಧಾರರು ಚೀನರು, ಶಬರರು, ಬರ್ಬರರು, ಶಕರು, ತುಷಾರರು, ಕಂಕರು, ಪಹ್ಲವರು, ಆಂಧ್ರರು, ಮದ್ರಕರು, ಪೌಂಡ್ರರು, ಪುಲಿಂದರು, ರಮಠರು, ಕಾಂಬೋಜರು–ಇವರೇ ಮೊದಲಾದ ದಸ್ಯುಗಣಗಳು ಎಲ್ಲ ಕಡೆಗಳಲ್ಲಿಯೂ ವಾಸಿಸುತ್ತಿದ್ದಾರೆ. ಅವರಲ್ಲಿ ಕೆಲವರು ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ ಹುಟ್ಟಿದವರೂ, ವೈಶ್ಯ-ಶೂದ್ರರೂ (ವೈಶ್ಯ-ಶೂದ್ರರಿಂದಲೂ ಹುಟ್ಟಿದವರೂ) ಇದ್ದಾರೆ. ನನ್ನ ರಾಜ್ಯದಲ್ಲಿ ವಾಸಮಾಡುತ್ತಿರುವ ಅವರೆಲ್ಲರೂ ಸಾಮಾನ್ಯವಾಗಿ ಕಳ್ಳತನ-ದರೋಡೆಗಳಿಂದಲೇ ಜೀವನವನ್ನು ನಡೆಸುತ್ತಿದ್ದಾರೆ. ಇಂತಹವರು ಹೇಗೆ ಧರ್ಮಾಚರಣೆ ಮಾಡುತ್ತಾರೆ? ನನ್ನಂತಹ ರಾಜರು ಇವರನ್ನು ಯಾವ ಧರ್ಮದ ಮರ್ಯಾದೆಗೆ ಒಳಪಡಿಸಬೇಕು ಮತ್ತು ಹೇಗೆ ಒಳಪಡಿಸಬೇಕು?

ಭಗವನ್! ಸುರೇಶ್ವರನೇ! ನಾನು ನಿನ್ನಿಂದ ಈ ಧರ್ಮದ ರಹಸ್ಯವನ್ನು ಕೇಳಿ ತಿಳಿಯಬೇಕೆಂದಿರುತ್ತೇನೆ. ದಯಮಾಡಿ ಈ ಎಲ್ಲ ವಿಷಯಗಳನ್ನು ಹೇಳು. ಏಕೆಂದರೆ ನೀನು ಕ್ಷತ್ರಿಯರಿಗೆ ಬಂಧುವೇ ಆಗಿರುವೆ."

ಇಂದ್ರನು ಹೇಳುತ್ತಾನೆ :

ಮಾತಾ ಪಿತ್ರೋರ್ಹಿ ಶುಶ್ರೂಷಾ ಕರ್ತವ್ಯಾ ಸರ್ವದಸ್ಯುಭಿಃ ।
ಆಚಾರ್ಯಗುರುಶುಶ್ರೂಷಾ ತಥೈವಾಶ್ರಮವಾಸಿನಾಮ್ ॥೧೬॥

"ಮಹಾರಾಜ! ನಿಶ್ಚಿತವಾದ ಧರ್ಮವನ್ನು ಅನುಸರಿಸದಿರುವ ದಸ್ಯುಗಳೂ ತಂದೆ-ತಾಯಿಗಳ, ಆಚಾರ್ಯ-ಗುರುಗಳ ಮತ್ತು ಆಶ್ರಮವಾಸಿಗಳಾದ ಮುನಿಗಳ ಶುಶ್ರೂಷೆಯನ್ನು ಮಾಡಬೇಕು. ಇದು ಅವರ ಮುಖ್ಯಧರ್ಮ ಅಥವಾ ಕರ್ತವ್ಯವಾಗಿರುತ್ತದೆ.

ಭೂಮಿಪಾನಾಂ ಚ ಶುಶ್ರೂಷಾ ಕರ್ತವ್ಯಾ ಸರ್ವದಸ್ಯುಭಿಃ ।
ವೇದಧರ್ಮಕ್ರಿಯಾಶ್ಚೈವ ತೇಷಾಂ ಧರ್ಮೋ ವಿಧೀಯತೇ ॥೧೭॥

ಎಲ್ಲ ದಸ್ಯುಗಳೂ ಭೂಮಿಪಾಲರ ಶುಶ್ರೂಷೆಯನ್ನು ಮಾಡಿಯೇ ತೀರಬೇಕು. ವೇದೋಕ್ತವಾದ ಧರ್ಮ-ಕರ್ಮಗಳನ್ನು ಮಾಡುವುದೂ ಅವರಿಗೆ ಶಾಸ್ತ್ರವಿಹಿತವಾದ ಧರ್ಮವೇ ಆಗಿರುತ್ತದೆ.

ಪಿತೃಯಜ್ಞಾಸ್ತಥಾ ಕೂಪಾಃ ಪ್ರಪಾಶ್ಚ ಶಯನಾನಿ ಚ ।
ದಾನಾನಿ ಚ ಯಥಾಕಾಲಂ ದ್ವಿಜೇಭ್ಯೋ ವಿಸೃಜೇತ್ಸದಾ ॥೧೯॥

ಪಿತೃಗಳಿಗೆ ಶ್ರಾದ್ಧಮಾಡುವುದು, ಬಾವಿಗಳನ್ನು ತೋಡಿಸುವುದು, ಅರವಟ್ಟಿಗೆಗಳನ್ನಿಡುವುದು, ಧರ್ಮಶಾಲೆಗಳನ್ನು ಕಟ್ಟಿಸುವುದು, ಯಥಾ ಯೋಗ್ಯವಾದ ಸಮಯಗಳಲ್ಲಿ ಬ್ರಾಹ್ಮಣರಿಗೆ ದಾನಗಳನ್ನು ಕೊಡುವುದು– ಇವು ದಸ್ಯುಗಳ ಕರ್ತವ್ಯವೂ ಆಗಿರುತ್ತದೆ.

ಅಹಿಂಸಾ ಸತ್ಯಮಕ್ರೋಧೋ ವೃತ್ತಿದಾಯಾನುಪಾಲನಮ್ ।
ಭರಣಂ ಪುತ್ರದಾರಾಣಾಂ ಶೌಚಮದ್ರೋಹ ಏವ ಚ ॥೨೦॥

ಅಹಿಂಸೆ, ಸತ್ಯನಿಷ್ಠೆ, ಕೋಪಗೊಳ್ಳದೆ ವ್ಯವಹರಿಸುವುದು, ಆನುವಂಶಿಕ ವಾದ ವೃತ್ತಿಯನ್ನೂ ಮತ್ತು ಪಿತೃಸಂಬಂಧವಾದ ಆಸ್ತಿಯನ್ನೂ ಪರಿಪಾಲನೆ ಮಾಡುವುದು, ಪತ್ನೀ-ಪುತ್ರರ ಭರಣ-ಪೋಷಣಗಳನ್ನು ಮಾಡುವುದು, ಅಂತಃಶುದ್ಧಿ-ಬಹಿಃಶುದ್ಧಿಯಿಂದಿರುವುದು, ಯಾರಿಗೇ ಆದರೂ ದ್ರೋಹ ವನ್ನೆಸಗದೇ ಇರುವುದು–ಇವುಗಳು ಎಲ್ಲ ದಸ್ಯುಗಳೂ ಪರಿಪಾಲಿಸಬೇಕಾದ ಧರ್ಮಗಳಾಗಿವೆ.

ದಕ್ಷಿಣಾ ಸರ್ವಯಜ್ಞಾನಾಂ ದಾತವ್ಯಾ ಭೂತಿಮಿಚ್ಛತಾ ।
ಪಾಕಯಜ್ಞಾ ಮಹಾರ್ಹಾಶ್ಚ ದಾತವ್ಯಾಃ ಸರ್ವದಸ್ಯುಭಿಃ ॥೨೧॥

ಕಲ್ಯಾಣವನ್ನು ಅಪೇಕ್ಷಿಸುವ ಮನುಷ್ಯನು ಎಲ್ಲ ವಿಧವಾದ ಯಜ್ಞ ಗಳನ್ನೂ ಮಾಡಿ ಹೇರಳವಾದ ದಕ್ಷಿಣೆಗಳನ್ನು ಕೊಡಬೇಕು. ಎಲ್ಲ ದಸ್ಯುಗಳೂ ಭೂರಿದಕ್ಷಿಣಾಕವಾದ ಪಾಕಯಜ್ಞಗಳನ್ನು ಮಾಡಿ ದಕ್ಷಿಣೆಗಳನ್ನು ಕೊಡಬೇಕು.

ಅನಘನೇ! ಮಹಾರಾಜ! ಹೀಗೆ ಪ್ರಜಾಪತಿಬ್ರಹ್ಮನು ಎಲ್ಲ ಮನುಷ್ಯರಿಗೂ ಅವರವರ ಕರ್ತವ್ಯಗಳೇನೆಂಬುದನ್ನು ಮೊದಲೇ ನಿಶ್ಚಯಿಸಿ

ರುತ್ತಾನೆ. ನಿನ್ನ ಪ್ರಜೆಗಳಾಗಿರುವ ದಸ್ಯುಗಳೂ ಈ ಕರ್ಮಗಳನ್ನೇ ಮಾಡುವುದು ಅವರ ಕರ್ತವ್ಯವಾಗಿರುತ್ತದೆ.”

ದೃಶ್ಯನ್ತೇ ಮಾನುಷೇ ಲೋಕೇ ಸರ್ವವರ್ಣೇಷು ದಸ್ಯವಃ ।
ಲಿಙ್ಗಾನ್ತರೇ ವರ್ತಮಾನಾ ಆಶ್ರಮೇಷು ಚತುರ್ಷ್ವಪಿ ॥೨೩॥

“ಭಗವನ್! ಮನುಷ್ಯಲೋಕದಲ್ಲಿ ನಾಲ್ಕು ವರ್ಣದವರಲ್ಲಿಯೂ ನಾಲ್ಕು ಆಶ್ರಮಗಳಲ್ಲಿಯೂ ಇಂತಹ ಧರ್ಮಭ್ರಷ್ಟರು ಕಾಣುತ್ತಿದ್ದಾರೆ. ಆದರೆ ಅವರೆಲ್ಲರೂ ಆಶ್ರಮಗಳಿಗೆ ಸಂಬಂಧಿಸಿದ ಮತ್ತು ವರ್ಣಗಳಿಗೆ ಸಂಬಂಧಿಸಿದ ವೇಷಗಳನ್ನು ಧರಿಸಿ ತಾವು ಕುತ್ಸಿತಕರ್ಮಿಗಳೆಂಬುದನ್ನು ಮರೆಮಾಚಿಕೊಂಡಿರುತ್ತಾರೆ.”

ಇಂದ್ರನು ಉತ್ತರಿಸುತ್ತಾನೆ :

ವಿನಷ್ಟಾಯಾಂ ದಣ್ಡನೀತ್ಯಾಂ ರಾಜಧರ್ಮೇ ನಿರಾಕೃತೇ ।
ಸಮ್ಪ್ರಮುಹ್ಯನ್ತಿ ಭೂತಾನಿ ರಾಜದೌರಾತ್ಮ್ಯತೋಽನಘ ॥೨೪॥

“ಮಹಾರಾಜ! ನೀನು ಹೇಳುವುದು ನಿಜ. ರಾಜನ ದೌರಾತ್ಮ್ಯದಿಂದ (ದುಷ್ಟಸ್ವಭಾವದಿಂದ) ದಂಡನೀತಿಯು ವಿನಾಶವಾಗುತ್ತದೆ. ದಂಡನೀತಿಯು ಹಾಳಾದನಂತರ ರಾಜಧರ್ಮವೇ ತಿರಸ್ಕೃತವಾಗುತ್ತದೆ. ಆ ಸಮಯದಲ್ಲಿ ಎಲ್ಲ ಪ್ರಾಣಿಗಳೂ (ಎಲ್ಲ ಮನುಷ್ಯರೂ) ‘ಯಾವುದನ್ನು ಮಾಡಬೇಕು; ಯಾವುದನ್ನು ಮಾಡಬಾರದು?”–ಎಂಬುದರಲ್ಲಿ ಭ್ರಾಂತರಾಗುತ್ತಾರೆ. (ಕರ್ತವ್ಯಾಕರ್ತವ್ಯವಿವೇಕಶೂನ್ಯರಾಗುತ್ತಾರೆ.)

ಅಸಂಖ್ಯಾತಾ ಭವಿಷ್ಯನ್ತಿ ಭಿಕ್ಷವೋ ಲಿಙ್ಗಿನಸ್ತಥಾ ।
ಆಶ್ರಮಾಣಾಂ ವಿಕಲ್ಪಾಶ್ಚ ನಿವೃತ್ತೇಽಸ್ಮಿನ್ಕೃತೇ ಯುಗೇ ॥೨೫॥

ಈ ಸತ್ಯಯುಗವು ಕಳೆದುಹೋದೊಡನೆಯೇ ನಾನಾವೇಷಧಾರಿಗಳಾದ ಅಸಂಖ್ಯಾತರಾದ ಭಿಕ್ಷುಗಳು (ಸಂನ್ಯಾಸಿಗಳು) ಹುಟ್ಟಿಕೊಳ್ಳುತ್ತಾರೆ. ಆಶ್ರಮಧರ್ಮಗಳೂ ವಿಕಲ್ಪವಾಗುತ್ತವೆ.

ಅಶೃಣ್ವಾನಾಃ ಪುರಾಣಾನಾಂ ಧರ್ಮಾಣಾಂ ಪರಮಾ ಗತಿಃ ।
ಉತ್ಪಥಂ ಪ್ರತಿಪದ್ಯನ್ತೇ ಕಾಮಮನ್ಯುಸಮೀರಿತಾಃ ॥೨೬॥

ಕಾಮ-ಕ್ರೋಧಗಳಿಂದ ಪ್ರೇರಿತರಾದ ಆ ಜನರು ನ್ಯಾಯವಲ್ಲದ ಮಾರ್ಗವನ್ನು ಹಿಡಿಯುತ್ತಾರೆ. ಪರಮಶ್ರೇಯಸ್ಕರವಾದ ಪುರಾತನವಾದ ಸನಾತನಧರ್ಮಗಳನ್ನು ಅವರು ಕೇಳುವುದೇ ಇಲ್ಲ.

ಯದಾ ನಿವರ್ತ್ಯತೇ ಪಾಪೋ ದಣ್ಡನೀತ್ಯಾ ಮಹಾತ್ಮಭಿಃ ।
ತದಾ ಧರ್ಮೋ ನ ಚಲತೇ ಸದ್ಭೂತಃ ಶಾಶ್ವತಃ ಪರಃ ॥೨೭॥

ಯಾವಾಗ ಮಹಾತ್ಮರಾದ ರಾಜರು ದಂಡನೀತಿಯ ಮೂಲಕವಾಗಿ ಪಾಪಿಷ್ಠರನ್ನು ಪಾಪಕರ್ಮಗಳಿಂದ ನಿವೃತ್ತಿಗೊಳಿಸುತ್ತಾರೆಯೋ–ಆಗ ಸತ್ಯ ರೂಪವಾದ ಪರಮೋತ್ಕೃಷ್ಟವಾದ ಸನಾತನಧರ್ಮವು ಕ್ಷೀಣವಾಗುವುದಿಲ್ಲ.

ಸರ್ವಲೋಕಗುರುಂ ಚೈವ ರಾಜಾನಂ ಯೋಽವಮನ್ಯತೇ ।
ನ ತಸ್ಯ ದತ್ತಂ ನ ಹುತಂ ನ ಶ್ರಾದ್ಧಂ ಫಲತೇ ಕ್ವಚಿತ್ ॥೨೮॥

ಎಲ್ಲ ಲೋಕಗಳಿಗೂ ಗುರುಸ್ವರೂಪನಾಗಿರುವ ರಾಜನನ್ನು ಯಾವ ಮನುಷ್ಯನು ಅವಮಾನಗೊಳಿಸುತ್ತಾನೆಯೋ–ಅಂತಹ ಮನುಷ್ಯನು ಮಾಡಿದ ದಾನವಾಗಲೀ, ಹೋಮ-ಹವನಾದಿಗಳಾಗಲೀ (ಯಜ್ಞಗಳಾಗಲೀ), ಶ್ರಾದ್ಧವಾಗಲೀ ಫಲದಾಯಕಗಳಾಗುವುದಿಲ್ಲ.

ಮಾನುಷಾಣಾಮಧಿಪತಿಂ ದೇವಭೂತಂ ಸನಾತನಮ್ ।
ದೇವಾಪಿ ನಾವಮನ್ಯನ್ತೇ ಧರ್ಮಕಾಮಂ ನರೇಶ್ವರಮ್ ॥೨೯॥

ಮನುಷ್ಯರೆಲ್ಲರಿಗೂ ಅಧಿಪತಿಯಾದ, ಸನಾತನದೇವಸ್ವರೂಪನಾದ, ಧರ್ಮಕಾಮನಾದ ರಾಜನನ್ನು ದೇವತೆಗಳು ಕೂಡ ನಿಹೀನಭಾವದಿಂದ ಕಾಣುವುದಿಲ್ಲ.

ಭಗವಾನ್ ಪ್ರಜಾಪತಿಬ್ರಹ್ಮನು ಈ ಎಲ್ಲ ಜಗತ್ತನ್ನೂ ಸೃಷ್ಟಿಮಾಡಿದನು. ಆ ಸಮಯದಲ್ಲಿ ಅವನು ಸತ್ಕರ್ಮಗಳ ಪ್ರವೃತ್ತಿಗೂ ದುಷ್ಕರ್ಮಗಳ ನಿವೃತ್ತಿಗೂ ಮತ್ತು ಧರ್ಮಗಳ ರಕ್ಷಣೆಗೂ ಕ್ಷಾತ್ರಬಲವನ್ನು ಅಪೇಕ್ಷಿಸಿದನು. ಯಾವ ಮನುಷ್ಯನು ಪ್ರವೃತ್ತಿಧರ್ಮದ ಮಾರ್ಗವನ್ನು ತನ್ನ ಬುದ್ಧಿಯಿಂದ ವಿಚಾರಮಾಡುತ್ತಾನೆಯೋ–ಅವನು ನನಗೆ ಮಾನ್ಯನೂ ಮತ್ತು ಪೂಜ್ಯನೂ ಆಗಿರುತ್ತಾನೆ. ಏಕೆಂದರೆ : ಪ್ರವೃತ್ತಿಧರ್ಮದಲ್ಲಿಯೇ ಕ್ಷಾತ್ರಧರ್ಮವು ಪ್ರತಿಷ್ಠಿತವಾಗಿದೆ.”

ಯುಧಿಷ್ಠಿರ! ದೇವತೆಗಳ ಸಮೂಹದಿಂದ ಪರಿವೃತನಾಗಿದ್ದ, ಪ್ರಭುವಾದ, ಇಂದ್ರರೂಪಿಯಾಗಿದ್ದ ಮಹಾವಿಷ್ಣುವು ಮಾಂಧಾತನೊಡನೆ ಹೀಗೆ ಹೇಳಿ ವಿಷ್ಣುವಿನ (ತನ್ನ) ಕ್ಷಯರಹಿತವಾದ, ಶಾಶ್ವತವಾದ ಪರಮಪದಕ್ಕೆ ತೆರಳಿದನು. ನಿಷ್ಪಾಪನೇ! ಪ್ರಾಚೀನಕಾಲದಲ್ಲಿ ಕ್ಷಾತ್ರಧರ್ಮವು ಈ ರೀತಿಯಲ್ಲಿ ಮಹಾವಿಷ್ಣುವಿನಿಂದಲೇ ಪ್ರವರ್ತಿತವಾಯಿತು ಮತ್ತು ಅನೇಕ ಸತ್ಪುರುಷರು ಈ ಧರ್ಮವನ್ನು ಆಚರಣೆಯಲ್ಲಿಟ್ಟುಕೊಂಡಿದ್ದರು. ಇಂತಹ ಕ್ಷಾತ್ರಧರ್ಮವನ್ನು ಬುದ್ಧಿವಂತನಾದ ಮತ್ತು ಅನೇಕಶಾಸ್ತ್ರಗಳನ್ನು ತಿಳಿದುಕೊಂಡಿರುವ ಯಾವನು ತಾನೇ ಅವಹೇಳನಮಾಡುತ್ತಾನೆ?

ಅನ್ಯಾಯೇನ ಪ್ರವೃತ್ತಾನಿ ನಿವೃತ್ತಾನಿ ತಥೈವ ಚ ।
ಅನ್ತರಾ ವಿಲಯಂ ಯಾನ್ತಿ ಯಥಾ ಪಥಿ ವಿಚಕ್ಷುಷಃ ॥೩೪॥

ಶ್ರೇಷ್ಠಧರ್ಮವಾದ ಕ್ಷಾತ್ರಧರ್ಮವನ್ನು ತಿರಸ್ಕರಿಸಿ ಅನ್ಯಾಯವಾಗಿ ಮಾಡುವ (ಕ್ಷತ್ರಧರ್ಮದ ರಕ್ಷಣೆಯಿಲ್ಲದೇ ಮಾಡುವ) ಪ್ರವೃತ್ತಿಕರ್ಮಗಳೂ ಮತ್ತು ನಿವೃತ್ತಿಕರ್ಮಗಳೂ–ಕುರುಡರು ನಡುದಾರಿಯಲ್ಲಿ ವಿನಾಶ ಹೊಂದುವಂತೆ–ಮಧ್ಯದಲ್ಲಿಯೇ ಹಾಳಾಗಿಹೋಗುತ್ತವೆ.

ಆದುದರಿಂದ ಸೃಷ್ಟಿಯ ಆದಿಯಲ್ಲಿಯೇ ಪ್ರವರ್ತಿತವಾದ ಮತ್ತು ಹಿಂದಿನ ಮಹಾಪುರುಷರಿಗೆ ಪರಮಾಶ್ರಯಭೂತವಾದ ರಾಜಧರ್ಮರೂಪವಾದ ಚಕ್ರದಲ್ಲಿ ಆಶ್ರಯವನ್ನು ಹೊಂದು. ಪುರುಷಸಿಂಹನೇ! ನಿಷ್ಪಾಪನೇ! ನೀನು ಕ್ಷತ್ರಿಯಧರ್ಮವನ್ನೇ ಆಶ್ರಯಿಸಿಕೊಂಡಿರಲು ಸಮರ್ಥನೆಂಬುದನ್ನು ನಾನು ಚೆನ್ನಾಗಿ ತಿಳಿದಿರುತ್ತೇನೆ."

ಅರುವತ್ತೈದನೆಯ ಅಧ್ಯಾಯವು ಮುಗಿಯಿತು.

ಅರುವತ್ತಾರನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜಧರ್ಮದ ಪಾಲನೆಯಿಂದಲೇ ನಾಲ್ಕು ಆಶ್ರಮಧರ್ಮಗಳ ಫಲಪ್ರಾಪ್ತಿ

ಪಾರಿಕ್ಷಿತ! ಯುಧಿಷ್ಠಿರನು ಭೀಷ್ಮನನ್ನು ಪ್ರಾರ್ಥಿಸುತ್ತಾನೆ :

"ಪಿತಾಮಹ! ನೀನು ಹೇಳಿದ ನಾಲ್ಕು ಮಾನವಾಶ್ರಮಗಳ ವಿವರಣೆ

ಯನ್ನೂ ನಾನು ಕೇಳಿದೆನು. ಈಗ ನಿನ್ನನ್ನು ಪ್ರಶ್ನಿಸುತ್ತಿರುವ ನನಗೆ ಅದೇ ನಾಲ್ಕು ಮಾನವಾಶ್ರಮಧರ್ಮಗಳ ವ್ಯಾಖ್ಯಾನವನ್ನು ಮತ್ತೂ ವ್ಯಾಪಕವಾಗಿ ಹೇಳು."

"ಮಹಾಬಾಹುವೇ! ಯುಧಿಷ್ಠಿರ! ಸಾಧುಸಮ್ಮತವಾದ ಈ ಮಾನವಧರ್ಮಗಳೆಲ್ಲವೂ ನನಗೆ ಹೇಗೆ ತಿಳಿದಿವೆಯೋ ಹಾಗೆಯೇ ನಿನಗೂ ತಿಳಿದಿರುತ್ತವೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಆದರೂ ವಿಭಿನ್ನಲಿಂಗ ಗಳಿಂದ ರೂಪಾಂತರಗೊಂಡಿರುವ ಸೂಕ್ಷ್ಮಧರ್ಮವನ್ನು (ಕ್ಷಾತ್ರಧರ್ಮವನ್ನು) ನನ್ನಿಂದ ಕೇಳಿ ತಿಳಿಯಬೇಕೆಂದಿರುವೆಯಲ್ಲವೇ? ಅದನ್ನೇ ನಾನೀಗ ನಿನಗೆ ಹೇಳುತ್ತೇನೆ. ಏಕಚಿತ್ತನಾಗಿ ಕೇಳು. ಕ್ಷತ್ರಿಯಧರ್ಮದಿಂದಲೇ ಉಳಿದ ಆಶ್ರಮಧರ್ಮಗಳ ಫಲವನ್ನು ಹೇಗೆ ಪಡೆಯಬಹುದೆಂಬುದನ್ನು ತಿಳಿಸುತ್ತೇನೆ.

ನಾಲ್ಕು ಆಶ್ರಮಧರ್ಮಗಳನ್ನೂ ಪರಿಪಾಲಿಸುವ ಸದಾಚಾರ ಪ್ರವೃತ್ತರಾದವರಿಗೆ ಯಾವ ಫಲಗಳಿವೆಯೋ–ಆ ಎಲ್ಲ ಫಲಗಳೂ ರಾಗ-ದ್ವೇಷಗಳನ್ನು ತ್ಯಜಿಸಿ ದಂಡನೀತಿಗೆ ಅನುಸಾರವಾಗಿ ವ್ಯವಹರಿಸುವ ರಾಜನಿಗೂ ಲಭಿಸುತ್ತವೆ.

ಅಕಾಮದ್ವೇಷಯುಕ್ತಸ್ಯ ದಣ್ಡನೀತ್ಯಾ ಯುಧಿಷ್ಠಿರ ।
ಸಮದರ್ಶಿನಶ್ಚ ಭೂತೇಷು ಭೈಕ್ಷ್ಯಾಶ್ರಮಪದಂ ಭವೇತ್ ॥೫॥

ಯುಧಿಷ್ಠಿರ! ರಾಜನಾದವನು ಸಂನ್ಯಾಸಿಯಾಗಬೇಕಾದ ಅವಶ್ಯಕತೆ ಯಿಲ್ಲ. ಕಾಮ-ದ್ವೇಷರಹಿತನಾಗಿ, ಪ್ರಾಣಿಗಳೆಲ್ಲವನ್ನೂ ಸರ್ವಸಮಭಾವ ದಿಂದ ಕಂಡುಕೊಂಡು ದಂಡನೀತಿಯಿಂದ ರಾಜ್ಯವಾಳುವ ಕ್ಷತ್ರಿಯನಿಗೂ ಸಂನ್ಯಾಸಾಶ್ರಮದಿಂದ ಪ್ರಾಪ್ತವಾಗಬಹುದಾದ ಪರಮಗತಿಯೇ ಲಭಿಸುತ್ತದೆ.

ವೇತ್ತಿ ಜ್ಞಾನಂ ವಿಸರ್ಗಂ ಚ ನಿಗ್ರಹಾನುಗ್ರಹಂ ತಥಾ ।
ಯಥೋಕ್ತವೃತ್ತೇರ್ಧೀರಸ್ಯ ಕ್ಷೇಮಾಶ್ರಮಪದಂ ಭವೇತ್ ॥೬॥

ಯಾವನು ತತ್ತ್ವಜ್ಞಾನವನ್ನು ತಿಳಿದುಕೊಂಡಿರುತ್ತಾನೆಯೋ, ಯಾವು ದನ್ನು ತ್ಯಾಗಮಾಡಬೇಕೆಂಬ ರಹಸ್ಯವನ್ನು ತಿಳಿದುಕೊಂಡಿರುವನೋ, ಇಂದ್ರಿಯಗಳ ನಿಗ್ರಹವನ್ನು ಮಾಡಿರುವನೋ ಪ್ರಾಣಿಗಳ ವಿಷಯದಲ್ಲಿ

ಅನುಗ್ರಹಬುದ್ಧಿಯಿಂದಿರುವನೋ (ದುಷ್ಟಶಿಕ್ಷಣ-ಶಿಷ್ಟಪರಿಪಾಲನಗಳಲ್ಲಿ ನಿಷ್ಠನಾಗಿರುವನೋ) ಬಾಯಲ್ಲಿ ಹೇಳಿದುದನ್ನು ಆಚರಣೆಯಲ್ಲಿಯೂ ಇಟ್ಟುಕೊಳ್ಳುವನೋ (ನುಡಿದಂತೆ ನಡೆಯುವನೋ) ಅಥವಾ ಹಿಂದೆ ಹೇಳಿರುವ ಸದಾಚಾರ-ಸದ್ವ್ಯವಹಾರವುಳ್ಳವನಾಗಿರುವನೋ–ಅಂತಹ ಧೀರನಾದ ಕ್ಷತ್ರಿಯನಿಗೆ ಗೃಹಸ್ಥಾಶ್ರಮಿಯ ಫಲವು ಲಭಿಸುತ್ತದೆ.

ಅರ್ಹಾನ್ಪೂಜಯತೋ ನಿತ್ಯಂ ಸಂವಿಭಾಗೇನ ಪಾಣ್ಡವ ।
ಸರ್ವತಸ್ತಸ್ಯ ಕೌನ್ತೇಯ ಭೈಕ್ಷ್ಯಾಶ್ರಮಪದಂ ಭವೇತ್ ॥೭॥

ಪೂಜಾರ್ಹರನ್ನು ಅವರಿಗೆ ಅಭೀಷ್ಟವಾದ ವಸ್ತುಪ್ರದಾನಗಳಿಂದ ಅನುದಿನವೂ ಸಮ್ಮಾನಿಸುತ್ತಾ ಇರುವ ಕ್ಷತ್ರಿಯನಿಗೆ ಬ್ರಹ್ಮಚರ್ಯಾಶ್ರಮಿಯ ಫಲವು ಲಭಿಸುತ್ತದೆ.

ಜ್ಞಾತಿಸಮ್ಬನ್ಧಿಮಿತ್ರಾಣಿ ವ್ಯಾಪನ್ನಾನಿ ಯುಧಿಷ್ಠಿರ ।
ಸಮಭ್ಯುದ್ಧರಮಾಣಸ್ಯ ದೀಕ್ಷಾಶ್ರಮಪದಂ ಭವೇತ್ ॥೮॥

ಸಂಕಟದಲ್ಲಿರುವ ಜ್ಞಾತಿಗಳನ್ನೂ, ಸಂಬಂಧಿಗಳನ್ನೂ, ಮಿತ್ರರನ್ನೂ ಉದ್ಧರಿಸುವ ಕ್ಷತ್ರಿಯನಿಗೆ ದೀಕ್ಷಾಶ್ರಮಿಯ (ವಾನಪ್ರಸ್ಥಾಶ್ರಮಿಯ) ಫಲವು ಲಭಿಸುತ್ತದೆ.

ಲೋಕಮುಖ್ಯೇಷು ಸತ್ಕಾರಂ ಲಿಙ್ಗಿಮುಖ್ಯೇಷು ಚಾಸಕೃತ್ ।
ಕುರ್ವತಸ್ತಸ್ಯ ಕೌನ್ತೇಯ ವನ್ಯಾಶ್ರಮಫಲಂ ಭವೇತ್ ॥೯॥

ಜಗತ್ತಿನಲ್ಲಿರುವ ಶ್ರೇಷ್ಠಪುರುಷರಿಗೂ, ವರ್ಣಾಶ್ರಮಧರ್ಮಿಗಳಿಗೂ ನಿರಂತರವಾಗಿ ಸತ್ಕಾರಮಾಡುವ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮಿಯ ಫಲವು ಸಿಕ್ಕುತ್ತದೆ.

ಆಹ್ನಿಕಂ ಪಿತೃಯಜ್ಞಾಂಶ್ಚ ಭೂತಯಜ್ಞಾನ್ಸಮಾನುಷಾನ್ ।
ಕುರ್ವತಃ ಪಾರ್ಥ ವಿಪುಲಾನ್ವನ್ಯಾಶ್ರಮಪದಂ ಭವೇತ್ ॥೧೦॥

ಪ್ರತಿನಿತ್ಯವೂ ಸಂಧ್ಯಾವಂದನೆಯೇ ಮೊದಲಾದ ನಿತ್ಯಕರ್ಮಗಳನ್ನೂ, ಶ್ರಾದ್ಧ-ತರ್ಪಣಾದಿಗಳ ಮೂಲಕವಾಗಿ ಪಿತೃಯಜ್ಞಗಳನ್ನೂ, ಭೂತಯಜ್ಞ

ಗಳನ್ನೂ, ಅತಿಥಿಸೇವಾರೂಪವಾದ ಮನುಷ್ಯಯಜ್ಞಗಳನ್ನೂ ಪ್ರಚುರವಾಗಿ ಮಾಡುವ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮಿಯ ಫಲವು ಲಭ್ಯವಾಗುತ್ತದೆ.

ಸಂವಿಭಾಗೇನ ಭೂತಾನಾಮತಿಥೀನಾಂ ತಥಾರ್ಚನಾತ್ ।
ದೇವಯಜ್ಞೈಶ್ಚ ರಾಜೇನ್ದ್ರ ವನ್ಯಾಶ್ರಮಪದಂ ಭವೇತ್ ॥೧೧॥

ಬಲಿಹರಣ-ವೈಶ್ವದೇವಾದಿಗಳ ಮೂಲಕವಾಗಿ ಪ್ರಾಣಿಗಳಿಗೆ ಸಲ್ಲಬೇಕಾದ ಭಾಗವನ್ನು ಕೊಡುವುದರಿಂದಲೂ, ಅತಿಥಿಗಳನ್ನು ಸತ್ಕರಿಸುವುದರಿಂದಲೂ, ದೇವತೆಗಳಿಗೆ ಸಂಬಂಧಿಸಿದ ಯಜ್ಞಗಳ ಅನುಷ್ಠಾನಗಳಿಂದಲೂ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮಿಯ ಫಲವು ಲಭ್ಯವಾಗುತ್ತದೆ.

ಮರ್ದನಂ ಪರರಾಷ್ಟ್ರಾಣಾಂ ಶಿಷ್ಟಾರ್ಥಂ ಸತ್ಯವಿಕ್ರಮ ।
ಕುರ್ವತಃ ಪುರುಷವ್ಯಾಘ್ರ ವನ್ಯಾಶ್ರಮಪದಂ ಭವೇತ್ ॥೧೨॥

ಪುರುಷವ್ಯಾಘ್ರನೇ! ಸತ್ಯವಿಕ್ರಮನೇ! ಶಿಷ್ಟರ ಸಂರಕ್ಷಣಾರ್ಥವಾಗಿ ಶತ್ರುರಾಷ್ಟ್ರಗಳ ಮರ್ದನವನ್ನು ಮಾಡುವ ಕ್ಷತ್ರಿಯನಿಗೂ ವಾನಪ್ರಸ್ಥಾಶ್ರಮಸ್ಥಾನದ ಫಲವು ಲಭ್ಯವಾಗುತ್ತದೆ. (ಶತ್ರುಗಳ ರಾಷ್ಟ್ರಗಳ ಮರ್ದನವನ್ನಾದರೂ ಮಾಡಿ ಶಿಷ್ಟರಾದವರನ್ನು ಸಂರಕ್ಷಿಸಬೇಕು. ಶಿಷ್ಟರಕ್ಷಣೆಯೇ ರಾಜನ ಅತಿಮುಖ್ಯವಾದ ಧರ್ಮ.)

ಪಾಲನಾತ್ಸರ್ವಭೂತಾನಾಂ ಸ್ವರಾಷ್ಟ್ರಪರಿಪಾಲನಾತ್ ।
ದೀಕ್ಷಾ ಬಹುವಿಧಾ ರಾಜನ್ಸತ್ಯಾಶ್ರಮಪದಂ ಭವೇತ್ ॥೧೩॥

ಸಮಸ್ತಪ್ರಾಣಿಗಳನ್ನೂ ಪಾಲನೆಮಾಡುವುದರಿಂದಲೂ, ತನ್ನ ರಾಷ್ಟ್ರವನ್ನು ಕಳ್ಳಕಾಕರ ಭಯವಿಲ್ಲದಂತೆ ಪರಿಪಾಲನೆ ಮಾಡುವುದರಿಂದಲೂ ಕ್ಷತ್ರಿಯನಿಗೆ, ಬಹುವಿಧವಾದ ಯಜ್ಞಗಳಲ್ಲಿ ದೀಕ್ಷಿತನಾಗುವುದರಿಂದ ಪ್ರಾಪ್ತವಾಗಬಹುದಾದ ಪುಣ್ಯವು ಲಭ್ಯವಾಗುತ್ತದೆ ಮತ್ತು ಸಂನ್ಯಾಸಾಶ್ರಮವನ್ನು ಸ್ವೀಕರಿಸುವುದರಿಂದ ಪ್ರಾಪ್ತವಾಗಬಹುದಾದ ಫಲವೂ ಲಭಿಸುತ್ತದೆ.

ವೇದಾಧ್ಯಯನನಿತ್ಯತ್ವಂ ಕ್ಷಮಾಥಾಚಾರ್ಯಪೂಜನಮ್ ।
ಅಥೋಪಾಧ್ಯಾಯಶುಶ್ರೂಷಾ ಬ್ರಹ್ಮಾಶ್ರಮಪದಂ ಭವೇತ್ ॥೧೪॥

ಪ್ರತಿನಿತ್ಯವೂ ವೇದಾಧ್ಯಯನವನ್ನು ಮಾಡುವುದರಿಂದಲೂ, ಕ್ಷಮಾ

ವಂತನಾಗಿರುವುದರಿಂದಲೂ, ಆಚಾರ್ಯರನ್ನು ಪೂಜಿಸುವುದರಿಂದಲೂ, ಉಪಾಧ್ಯಾಯರನ್ನು ಶುಶ್ರೂಷೆಮಾಡುವುದರಿಂದಲೂ ಕ್ಷತ್ರಿಯನು ಬ್ರಹ್ಮಾಶ್ರಮಿಯು (ಸಂನ್ಯಾಸಿಯು) ಪಡೆಯುವ ಫಲವನ್ನು ಪಡೆದು ಕೊಳ್ಳುತ್ತಾನೆ.

ಆಹ್ನಿಕಂ ಜಪಮಾನಸ್ಯ ದೇವಾನ್ಪೂಜಯತಃ ಸದಾ ।
ಧರ್ಮೇಣ ಪುರುಷವ್ಯಾಘ್ರ ಧರ್ಮಾಶ್ರಮಪದಂ ಭವೇತ್ ॥೧೫॥

ಯಾವನು ಪ್ರತಿದಿನವೂ ಇಷ್ಟದೇವತಾಮಂತ್ರವನ್ನು ಅಥವಾ ಗಾಯತ್ರೀಮಂತ್ರವನ್ನು ಜಪಿಸುವನೋ, ದೇವತೆಗಳನ್ನು ಸದಾಕಾಲ ದಲ್ಲಿಯೂ ಪೂಜಿಸುವನೋ–ಅಂತಹ ಗೃಹಸ್ಥಾಶ್ರಮಿಯ ಫಲವು ತನ್ನ ಧರ್ಮದಲ್ಲಿಯೇ ಇರುವ ಕ್ಷತ್ರಿಯನಿಗೆ ಆ ಧರ್ಮದ ಪ್ರಭಾವದಿಂದಲೇ ಲಭಿಸುತ್ತದೆ.

ಮೃತ್ಯುರ್ವಾ ರಕ್ಷಣಂ ವೇತಿ ಯಸ್ಯ ರಾಜ್ಞೋ ವಿನಿಶ್ಚಯಃ ।
ಪ್ರಾಣದ್ಯೂತೇ ತತಸ್ತಸ್ಯ ಬ್ರಹ್ಮಾಶ್ರಮಪದಂ ಭವೇತ್ ॥೧೬॥

ಯಾವ ರಾಜನು ಯುದ್ಧದಲ್ಲಿ ಪ್ರಾಣವನ್ನೇ ಪಣವನ್ನಾಗಿಟ್ಟು 'ಯುದ್ಧದಲ್ಲಿ ಪ್ರಾಣತ್ಯಾಗವನ್ನಾದರೂ ಮಾಡಬೇಕು ; ಇಲ್ಲವೇ ದೇಶದ ರಕ್ಷಣೆಯನ್ನಾದರೂ ಮಾಡಬೇಕು'–ಎಂದು ನಿಶ್ಚಯಿಸಿ ಯುದ್ಧವನ್ನು ಮಾಡುತ್ತಾನೆಯೋ–ಅಂತಹ ರಾಜನಿಗೆ ಸಂನ್ಯಾಸಾಶ್ರಮಿಯ ಫಲವು ಲಭಿಸುತ್ತದೆ.

ಅಜಿಹ್ಮಮಶಠಂ ಮಾರ್ಗಂ ವರ್ತಮಾನಸ್ಯ ಭಾರತ ।
ಸರ್ವದಾ ಸರ್ವಭೂತೇಷು ಬ್ರಹ್ಮಾಶ್ರಮಪದಂ ಭವೇತ್ ॥೧೭॥

ಭರತನಂದನ! ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಯಾವಾಗಲೂ ಋಜುತ್ವದಿಂದಲೂ ಮತ್ತು ನಿಷ್ಕಾಪಟ್ಯದಿಂದಲೂ ವರ್ತಿಸುವ ಕ್ಷತ್ರಿಯನು ಸಂನ್ಯಾಸಾಶ್ರಮಿಯ ಫಲವನ್ನು ಪಡೆದುಕೊಳ್ಳುತ್ತಾನೆ.

ವಾನಪ್ರಸ್ಥೇಷು ವಿಪ್ರೇಷು ತ್ರೈವಿದ್ಯೇಷು ಚ ಭಾರತ ।
ಪ್ರಯಚ್ಛತೋಽರ್ಥಾನ್ವಿಪುಲಾನ್ವನ್ಯಾಶ್ರಮಪದಂ ಭವೇತ್ ॥೧೮॥

ವಾನಪ್ರಸ್ಥಾಶ್ರಮಿಗಳಿಗೂ, ಬ್ರಾಹ್ಮಣರಿಗೂ, ಮೂರು ವೇದಗಳನ್ನೂ

ಅಧ್ಯಯನಮಾಡಿರುವ ವಿದ್ವಾಂಸರಿಗೂ ವಿಪುಲವಾದ ಐಶ್ವರ್ಯವನ್ನು ದಾನಮಾಡುವ ಕ್ಷತ್ರಿಯನು ವಾನಪ್ರಸ್ಥಾಶ್ರಮಿಯ ಫಲವನ್ನೇ ಪಡೆದುಕೊಳ್ಳುತ್ತಾನೆ.

ಸರ್ವಭೂತೇಷ್ವನುಕ್ರೋಶಂ ಕುರ್ವತಸ್ತಸ್ಯ ಭಾರತ ।
ಆನೃಶಂಸ್ಯಪ್ರವೃತ್ತಸ್ಯ ಸರ್ವಾವಸ್ಥಂ ಪದಂ ಭವೇತ್ ॥೧೯॥

ಯಾವ ಕ್ಷತ್ರಿಯನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪೂರ್ಣನಾಗಿರುವನೋ, ಯಾವನಿಗೆ ಕ್ರೌರ್ಯದಿಂದ ರಹಿತವಾಗಿರುವ ಕರ್ಮಗಳಲ್ಲಿಯೇ ಪ್ರವೃತ್ತಿಯಿರುವುದೋ–ಅಂತಹ ಕ್ಷತ್ರಿಯನು ನಾಲ್ಕು ಆಶ್ರಮಗಳ ಫಲವನ್ನೇ ಪಡೆದುಕೊಳ್ಳುತ್ತಾನೆ.

ಬಾಲವೃದ್ಧೇಷು ಕೌನ್ತೇಯ ಸರ್ವಾವಸ್ಥಂ ಯುಧಿಷ್ಠಿರ ।
ಅನುಕ್ರೋಶಕ್ರಿಯಾ ಪಾರ್ಥ ಸರ್ವಾವಸ್ಥಂ ಪದಂ ಭವೇತ್ ॥೨೦॥

ಯುಧಿಷ್ಠಿರ! ಯಾವ ರಾಜನು ಬಾಲಕರ ವಿಷಯದಲ್ಲಿಯೂ ಮತ್ತು ವೃದ್ಧರ ವಿಷಯದಲ್ಲಿಯೂ ಅತ್ಯಂತದಯಾಪೂರ್ಣನಾಗಿ ನಡೆದುಕೊಳ್ಳುತ್ತಾನೆಯೋ–ಅವನಿಗೆ ಎಲ್ಲ ಆಶ್ರಮಗಳ ಫಲವೂ ಲಭ್ಯವಾಗುತ್ತದೆ.

ಬಲಾತ್ಕೃತೇಷು ಭೂತೇಷು ಪರಿತ್ರಾಣಂ ಕುರೂದ್ವಹ ।
ಶರಣಾಗತೇಷು ಕೌರವ್ಯ ಕುರ್ವನ್ಗಾರ್ಹಸ್ಥ್ಯಮಾವಸೇತ್ ॥೨೧॥

ಬಲಾತ್ಕಾರಕ್ಕೊಳಗಾಗಿ ಸಂಕಟಪಡುತ್ತಿರುವ ಪ್ರಾಣಿಗಳನ್ನೂ ಮತ್ತು ಶರಣಾಗತರನ್ನೂ ಸಂರಕ್ಷಣೆಮಾಡುತ್ತಾ ಕ್ಷತ್ರಿಯನು ಗೃಹಸ್ಥಧರ್ಮದಲ್ಲಿಯೇ ಇರಬೇಕು.

ಸ್ಥಾವರ-ಜಂಗಮಪ್ರಾಣಿಗಳಿಗೆ ಸರ್ವಪ್ರಕಾರದಿಂದಲೂ ರಕ್ಷಣೆಯನ್ನೀಯಬೇಕು. ಪೂಜಾರ್ಹರಾದವರಿಗೆ ಯಥಾಯೋಗ್ಯವಾದ ಪೂಜೆಯನ್ನು ಸಲ್ಲಿಸುತ್ತಿರಬೇಕು. ಹೀಗೆ ಮಾಡುತ್ತಾ ರಾಜನು ಗೃಹಸ್ಥಾಶ್ರಮಿಯಾಗಿಯೇ ಇರಬೇಕು.

ಜ್ಯೇಷ್ಠಾನುಜ್ಯೇಷ್ಠಪತ್ನೀನಾಂ ಭ್ರಾತೄಣಾಂ ಪುತ್ರನಪ್ತೃಣಾಮ್ ।
ನಿಗ್ರಹಾನುಗ್ರಹೌ ಪಾರ್ಥ ಗಾರ್ಹಸ್ಥ್ಯಮಿತಿ ತತ್ತಪಃ ॥೨೨॥

ಹಿರಿಯ ಪತ್ನಿಯಾದರೂ ಸರಿಯೇ, ಕಿರಿಯ ಪತ್ನಿಯರಾದರೂ

ಸರಿಯೇ, ಅಣ್ಣ-ತಮ್ಮಂದಿರಾದರೂ ಸರಿಯೇ, ಮಗನಾದರೂ ಸರಿಯೇ, ಮೊಮ್ಮಗನಾದರೂ ಸರಿಯೇ–ತಪ್ಪುಮಾಡಿದರೆ ರಾಜನು ಶಿಕ್ಷೆಯನ್ನು ವಿಧಿಸಲೇಬೇಕು. ಅವರು ಧರ್ಮಾನುಗುಣವಾಗಿ ನಡೆಯುತ್ತಿದ್ದರೆ ಅನುಗ್ರಹವನ್ನು ಮಾಡಬೇಕು. ಇದು ಗೃಹಸ್ಥನಾದ ರಾಜನು ಮಾಡಲೇಬೇಕಾಗಿರುವ ಗಾರ್ಹಸ್ಥ್ಯಧರ್ಮ. ಇದನ್ನೇ 'ತಪಸ್ಸು' ಎಂದೂ ವಿದ್ವಾಂಸರು ಹೇಳುತ್ತಾರೆ. (ಹೆಂಡತಿ-ಮಕ್ಕಳು, ಮೊಮ್ಮಕ್ಕಳು, ಅಣ್ಣ-ತಮ್ಮಂದಿರು–ಎಂಬ ಪಕ್ಷಪಾತವಿಲ್ಲದೇ ದಂಡನೀತಿಯನ್ನು ಪರಿಪಾಲಿಸಬೇಕು. ಅವರು ಅಪರಾಧ ಮಾಡಿದರೆ ಶಿಕ್ಷೆಯನ್ನು ವಿಧಿಸಲೇಬೇಕು. ಇದು ಅತ್ಯಂತಕಷ್ಟಸಾಧ್ಯವಾದ ವಿಷಯ. ಆದುದರಿಂದ ರಾಜನು ಗೃಹಸ್ಥನಾಗಿ ಅನುಸರಿಸಬೇಕಾಗಿರುವ ತೀವ್ರತರವಾದ ಈ ಕಾರ್ಯಕ್ಕೆ ತಪಸ್ಸೆಂದೇ ಹೇಳುತ್ತಾರೆ.)

ಸಾಧೂನಾಮರ್ಚನೀಯಾನಾಂ ಪೂಜಾ ಸುವಿದಿತಾತ್ಮನಾಮ್ ।
ಪಾಲನಂ ಪುರುಷವ್ಯಾಘ್ರ ಗೃಹಾಶ್ರಮಪದಂ ಭವೇತ್ ॥೨೪॥

ಪೂಜನೀಯರಾದ, ಆತ್ಮಜ್ಞಾನಿಗಳಾದ ಸಾಧುಗಳ ಸತ್ಕಾರವನ್ನೂ ಮತ್ತು ರಕ್ಷಣೆಯನ್ನೂ ಮಾಡುವ ಕ್ಷತ್ರಿಯನಿಗೆ ಗೃಹಸ್ಥಾಶ್ರಮಿಯ ಫಲವು ಪ್ರಾಪ್ತವಾಗುತ್ತದೆ.

ಆಶ್ರಮಸ್ಥಾನಿ ಭೂತಾನಿ ಯಸ್ತು ವೇಶ್ಮನಿ ಭಾರತ ।
ಆದದೀತೇಹ ಭೋಜ್ಯೇನ ತದ್ಗಾರ್ಹಸ್ಥ್ಯಂ ಯುಧಿಷ್ಠಿರ ॥೨೫॥

ಯುಧಿಷ್ಠಿರ! ಆಶ್ರಮಸ್ಥವಾಗಿರುವ ಪ್ರಾಣಿಗಳನ್ನು (ಮನುಷ್ಯರನ್ನು) ಯಾವ ರಾಜನು ತನ್ನ ಮನೆಗೆ ಕರೆತಂದು ಅವರನ್ನು ಭೋಜನಾದಿಗಳಿಂದ ತೃಪ್ತಿಪಡಿಸುವನೋ–ಅಂತಹ ರಾಜನಿಗೆ ಅದೇ ಗೃಹಸ್ಥಧರ್ಮವಾಗಿರುತ್ತದೆ.

ಯಃ ಸ್ಥಿತಃ ಪುರುಷೋ ಧರ್ಮೇ ಧಾತ್ರಾ ಸೃಷ್ಟೇ ಯಥಾರ್ಥವತ್ ।
ಆಶ್ರಮಾಣಾಂ ಹಿ ಸರ್ವೇಷಾಂ ಫಲಂ ಪ್ರಾಪ್ನೋತ್ಯನಾಮಯಮ್ ॥

ಯಾವ ಪುರುಷನು ವಿಧಿವಿಹಿತವಾದ ವರ್ಣಾಶ್ರಮದಲ್ಲಿದ್ದುಕೊಂಡು ತತ್ತದ್ವರ್ಣೋಚಿತವಾದ ಧರ್ಮಗಳನ್ನು ಯಥಾವತ್ತಾಗಿ ಪರಿಪಾಲಿಸು

ತ್ತಾನೆಯೋ–ಅಂತಹ ಮನುಷ್ಯನು ಎಲ್ಲ ಆಶ್ರಮಗಳ ನಿರ್ದುಷ್ಟವಾದ ಫಲ ಗಳನ್ನೂ ಪಡೆದುಕೊಳ್ಳುತ್ತಾನೆ.

ಯಸ್ಮಿನ್ನ ನಶ್ಯನ್ತಿ ಗುಣಾಃ ಕೌನ್ತೇಯ ಪುರುಷೇ ಸದಾ ।
ಆಶ್ರಮಸ್ಥಂ ತಮಪ್ಯಾಹುರ್ನರಶ್ರೇಷ್ಠಂ ಯುಧಿಷ್ಠಿರ ॥೨೭॥

ಯುಧಿಷ್ಠಿರ! ಮನುಷ್ಯನು ಯಾವುದೇ ವರ್ಣದಲ್ಲಿರಲಿ, ಯಾವುದೇ ಆಶ್ರಮದಲ್ಲಿರಲಿ–ಅವನಲ್ಲಿರುವ ಸದ್ಗುಣಗಳು ಯಾವುದೇ ಕಾರಣದಿಂದಲೂ ಯಾವಾಗಲೂ ವಿನಾಶಹೊಂದುವುದಿಲ್ಲವೋ–ಅಂತಹವನು ಯಾವುದೇ ಒಂದು ಆಶ್ರಮಧರ್ಮದಲ್ಲಿದ್ದರೂ ಎಲ್ಲ ಆಶ್ರಮಧರ್ಮಗಳಲ್ಲಿಯೂ ಇರತಕ್ಕವನೆಂದೂ ಅಂತಹವನು ಮಾನವರಲ್ಲಿಯೇ ಶ್ರೇಷ್ಠನಾದವನೆಂದೂ ಹೇಳುತ್ತಾರೆ.

ಸ್ಥಾನಮಾನಂ ಕುಲೇ ಮಾನಂ ವಯೋಮಾನಂ ತಥೈವ ಚ ।
ಕುರ್ವನ್ವಸತಿ ಸರ್ವೇಷು ಹ್ಯಾಶ್ರಮೇಷು ಯುಧಿಷ್ಠಿರ ॥೨೮॥

ಯಾವ ರಾಜನು ಪ್ರಜೆಗಳ ಸ್ಥಾನಕ್ಕೂ, ಕುಲಕ್ಕೂ ಮತ್ತು ವಯಸ್ಸಿಗೂ ತಕ್ಕ ಗೌರವವನ್ನು ಕೊಟ್ಟು ಅವುಗಳಿಗೆ ಅನುಗುಣವಾಗಿ ಸ್ಥಾನ- ಮಾನಗಳನ್ನಿತ್ತು ಗೌರವಿಸುವನೋ–ಅಂತಹ ರಾಜನು ಎಲ್ಲ ಆಶ್ರಮಗಳ ಫಲವನ್ನೂ ಪಡೆದುಕೊಳ್ಳುತ್ತಾನೆ.

ದೇಶಧರ್ಮಾಂಶ್ಚ ಕೌನ್ತೇಯ ಕುಲಧರ್ಮಾಂಸ್ತಥೈವ ಚ ।
ಪಾಲಯನ್ಪುರುಷವ್ಯಾಘ್ರ ರಾಜಾ ಸರ್ವಾಶ್ರಮೀ ಭವೇತ್ ॥೨೯॥

ಯುಧಿಷ್ಠಿರ! ಪುರುಷವ್ಯಾಘ್ರನೇ! ಯಾವ ರಾಜನು ದೇಶಧರ್ಮ ಗಳನ್ನೂ ಮತ್ತು ಕುಲಧರ್ಮಗಳನ್ನೂ ಪರಿಪಾಲಿಸುತ್ತಾನೆಯೋ–ಅಂತಹ ವನಿಗೆ ಸರ್ವಾಶ್ರಮಗಳ ಫಲವೂ ಲಭಿಸುತ್ತದೆ.

ಕಾಲೇ ವಿಭೂತಿಂ ಭೂತಾನಾಮುಪಹಾರಾಂಸ್ತಥೈವ ಚ ।
ಅರ್ಹಯನ್ಪುರುಷವ್ಯಾಘ್ರ ಸಾಧೂನಾಮಾಶ್ರಮೇ ವಸೇತ್ ॥೩೦॥

ಯಾವ ರಾಜನು ಆಯಾಕಾಲಗಳಲ್ಲಿ ಐಶ್ವರ್ಯವನ್ನೂ ಮತ್ತು ಉಪ ಹಾರಗಳನ್ನೂ (ಭೋಜನಾದಿಗಳನ್ನೂ) ಯೋಗ್ಯರಾದ ಸಾಧುಪುರುಷರಿಗೆ

ಕೊಟ್ಟು ಗೌರವಿಸುತ್ತಾನೆಯೋ–ಆ ರಾಜನಿಗೆ ಸಾಧುಗಳ (ಸಂನ್ಯಾಸಾಶ್ರಮಿಗಳ) ಫಲವು ಲಭಿಸುತ್ತದೆ.

ದಶಧರ್ಮಗತಸ್ಯಾಪಿ ಯೋ ಧರ್ಮಂ ಪ್ರತ್ಯವೇಕ್ಷತೇ ।
ಸರ್ವಲೋಕಸ್ಯ ಕೌನ್ತೇಯ ರಾಜಾ ಭವತಿ ಸೋಽಽಶ್ರಮೀ ॥೩೧॥

* ಧೃತಿ, ಕ್ಷಮೆ, ದಮ, ಅಸ್ತೇಯ–ಇವೇ ಮುಂತಾದ ಮನುಪ್ರೋಕ್ತವಾದ ಹತ್ತು ಧರ್ಮಗಳು ಸರ್ವವರ್ಣದವರಿಗೂ ಸಮಾನವಾದ ಧರ್ಮಗಳು. ಈ ಧರ್ಮಗಳನ್ನು ಪರಿಪಾಲಿಸುವವನೂ ಮತ್ತು ಕ್ಷತ್ರಿಯಧರ್ಮದಲ್ಲಿಯೇ ಹೆಚ್ಚು ಆಸಕ್ತನಾಗಿರುವವನೂ ಸರ್ವಲೋಕಕ್ಕೂ ರಾಜನಾಗಲು ಅರ್ಹನಾಗುತ್ತಾನೆ ಮತ್ತು ಅವನು ಎಲ್ಲ ಆಶ್ರಮಗಳ ಫಲಕ್ಕೂ ಭಾಗಿಯಾಗುತ್ತಾನೆ.

ಯೇ ಧರ್ಮಕುಶಲಾ ಲೋಕೇ ಧರ್ಮಂ ಕುರ್ವನ್ತಿ ಭಾರತ ।
ಪಾಲಿತಾ ಯಸ್ಯ ವಿಷಯೇ ಧರ್ಮಾಂಶಸ್ತಸ್ಯ ಭೂಪತೇಃ ॥೩೨॥

ಯಾವ ರಾಜನ ರಾಜ್ಯದಲ್ಲಿ ಧರ್ಮಕುಶಲರಾದ ಜನರು ರಾಜನಿಂದ ರಕ್ಷಿಸಲ್ಪಟ್ಟವರಾಗಿ ಧರ್ಮಕಾರ್ಯಗಳನ್ನು ಮಾಡುತ್ತಿರುತ್ತಾರೆಯೋ–ಅವರು ಮಾಡುವ ಧರ್ಮದ ಆರನೆಯ ಒಂದು ಭಾಗವು ಆ ರಾಜನಿಗೂ ಲಭಿಸುತ್ತದೆ.

ಧರ್ಮಾರಾಮಾನ್ಧರ್ಮಪರಾನ್ಯೇ ನ ರಕ್ಷನ್ತಿ ಮಾನವಾನ್ ।
ಪಾರ್ಥಿವಾಃ ಪುರುಷವ್ಯಾಘ್ರ ತೇಷಾಂ ಪಾಪಂ ಹರನ್ತಿ ತೇ ॥೩೩॥

ಯಾರು ಧರ್ಮದಲ್ಲಿಯೇ ರಮಿಸುತ್ತಿರುವರೋ (ಧರ್ಮಕಾರ್ಯವನ್ನು ಮಾಡುವುದರಲ್ಲಿಯೇ ಹೆಚ್ಚಿನ ಆಸಕ್ತಿಯುಳ್ಳವರಾಗಿರುವರೋ) ಧರ್ಮಪರಾಯಣರಾಗಿರುವರೋ–ಅಂತಹ ಶ್ರೇಷ್ಠಮಾನವರನ್ನು ರಕ್ಷಿಸದೇ ಇರುವ ರಾಜನು ಧರ್ಮಿಷ್ಠರಲ್ಲಿರಬಹುದಾದ ಪಾಪಗಳನ್ನೇ ಪಡೆದುಕೊಳ್ಳುತ್ತಾನೆ. (ಧಾರ್ಮಿಕರನ್ನು ರಕ್ಷಿಸುವುದರಿಂದ ಅವರು ಮಾಡಿದ ಧರ್ಮದಲ್ಲಿ ಒಂದು ಭಾಗವು ರಾಜನಿಗೆ ಲಭಿಸುತ್ತದೆ. ರಕ್ಷಿಸದೇ ಇದ್ದರೆ ಅವರಲ್ಲಿರುವ

---

* ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿನ್ದ್ರಿಯನಿಗ್ರಹಃ । ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥೯೨॥ ಮನುಸ್ಮೃತಿಃ–ಅಧ್ಯಾಯ ೬.

ಪಾಪವನ್ನೂ ಪಡೆದುಕೊಳ್ಳುತ್ತಾನೆ. ಆದುದರಿಂದ ರಾಜನಾದವನು ಧರ್ಮಿಷ್ಠರನ್ನು ಅವಶ್ಯವಾಗಿ ರಕ್ಷಿಸಲೇಬೇಕು.)

ಯೇ ಚಾಪ್ಯತ್ರ ಸಹಾಯಾಃ ಸ್ಯುಃ ಪಾರ್ಥಿವಾನಾಂ ಯುಧಿಷ್ಠಿರ ।
ತೇ ಚೈವಾಂಶಹರಾಃ ಸರ್ವೇ ಧರ್ಮೇ ಪರಕೃತೇಽನಘ ॥೩೪॥

ಧರ್ಮದ ಸಂರಕ್ಷಣೆಯಲ್ಲಿ ರಾಜನಿಗೆ ಯಾರು ಸಹಾಯಕರಾಗಿರುವರೋ ಅವರಿಗೂ ಇತರರು ಮಾಡಿದ ಧರ್ಮಕಾರ್ಯದ ಫಲದ ಅಂಶವು ಲಭ್ಯವಾಗುತ್ತದೆ.

ಸರ್ವಾಶ್ರಮಪದೇಽಪ್ಯಾಹುರ್ಗಾರ್ಹಸ್ಥ್ಯಂ ದೀಪ್ತನಿರ್ಣಯಮ್ ।
ಪಾವನಂ ಪುರುಷವ್ಯಾಘ್ರ ಯಂ ಧರ್ಮಂ ಪರ್ಯುಪಾಸ್ಮಹೇ ॥೩೫॥

ಪುರುಷಸಿಂಹನೇ! ನಾವು ಯಾವ ಗಾರ್ಹಸ್ಥ್ಯಧರ್ಮವನ್ನು ಪರ್ಯುಪಾಸನೆ ಮಾಡುತ್ತಿರುವೆವೋ–ಆ ಧರ್ಮವೇ ಉಳಿದ ಆಶ್ರಮಗಳಿಗಿಂತಲೂ ಶ್ರೇಷ್ಠವೂ ಪಾವನವೂ ಆಗಿರುವುದೆಂಬ ಶಾಸ್ತ್ರಸಿದ್ಧಾಂತವನ್ನು ವಿದ್ವಾಂಸರು ಹೇಳಿರುತ್ತಾರೆ.

ಆತ್ಮೋಪಮಸ್ತು ಭೂತೇಷು ಯೋ ವೈ ಭವತಿ ಮಾನವಃ ।
ನ್ಯಸ್ತದಣ್ಡೋ ಜಿತಕ್ರೋಧಃ ಪ್ರೇತ್ಯೇಹ ಲಭತೇ ಸುಖಮ್ ॥೩೬॥

ಯಾವ ಮಾನವನು ಪ್ರಪಂಚದಲ್ಲಿರುವ ಸಕಲಪ್ರಾಣಿಗಳನ್ನೂ ತನಗೆ ಸಮಾನರೆಂದೇ ಭಾವಿಸುವನೋ (ಎಲ್ಲ ಪ್ರಾಣಿಗಳಲ್ಲಿಯೂ ಸರ್ವಾಂತರ್ಯಾಮಿಯಾದ ಪರಮಾತ್ಮನೊಬ್ಬನನ್ನೇ ಕಾಣುತ್ತಾನೆಯೋ, ಆ ಕಾರಣದಿಂದಲೇ ಯಾವ ವಿಧವಾದ ಭೇದಭಾವವನ್ನೂ ಎಣಿಸುವುದಿಲ್ಲವೋ), ದಂಡವನ್ನು ಪರಿತ್ಯಾಗಮಾಡಿರುವನೋ ಮತ್ತು ಕೋಪವನ್ನು ಜಯಿಸಿರುವನೋ ಅವನು ಇಲ್ಲಿಯೂ ಸುಖಿಯಾಗಿರುತ್ತಾನೆ ; ಅವಸಾನಾನಂತರದಲ್ಲಿ ಉತ್ತಮವಾದ ಲೋಕಗಳನ್ನು ಪಡೆದುಕೊಂಡು ಅಲ್ಲಿಯೂ ಸುಖಿಯಾಗಿರುತ್ತಾನೆ.

ಧರ್ಮೇ ಸ್ಥಿತಾ ಸತ್ತ್ವವೀರ್ಯಾ ಧರ್ಮಸೇತುವಟಾರಕಾ ।
ತ್ಯಾಗವಾತಾಧ್ವಗಾ ಶೀಘ್ರಾ ನೌಸ್ತಂ ಸಂತಾರಯಿಷ್ಯತಿ ॥೩೭॥

ರಾಜಧರ್ಮವು ಒಂದು ನೌಕೆಗೆ ಸಮಾನವಾಗಿದೆ. ಆ ನೌಕೆಯು

ಧರ್ಮರೂಪವಾದ ಸಮುದ್ರದಲ್ಲಿದೆ. ಸತ್ತ್ವಗುಣವೇ ನೌಕೆಯನ್ನು ನಡೆಸುವ ಬಲವಾಗಿದೆ. (ನಾವಿಕನ ರೂಪದಲ್ಲಿದೆ.) ಧರ್ಮಶಾಸ್ತ್ರವೇ ಆ ನೌಕೆಯನ್ನು ಬಂಧಿಸುವ ರಜ್ಜುವಾಗಿದೆ. ಆ ನೌಕೆಯು ತ್ಯಾಗರೂಪವಾದ ವಾಯುವಿನಿಂದ ಪ್ರೇರಿತವಾಗಿ ಸಂಸಾರರೂಪವಾದ ಸಮುದ್ರವನ್ನು ಶೀಘ್ರವಾಗಿ ದಾಟಿಸುತ್ತದೆ.

ಯದಾ ನಿವೃತ್ತಃ ಸರ್ವಸ್ಮಾತ್ಕಾಮೋ ಯೋಽಸ್ಯ ಹೃದಿ ಸ್ಥಿತಃ ।
ತದಾ ಭವತಿ ಸತ್ತ್ವಸ್ಥಸ್ತತೋ ಬ್ರಹ್ಮ ಸಮಶ್ನುತೇ ॥೩೮॥

ಮನುಷ್ಯನ ಮನಸ್ಸಿನಲ್ಲಿ ಯಾವ ಕಾಮನೆಯಿರುವುದೋ–ಆ ಕಾಮನೆಯು ಯಾವಾಗ ಎಲ್ಲ ವಸ್ತುಗಳಿಂದಲೂ ಹಿಂದಿರುಗುತ್ತದೆಯೋ (ಮನಸ್ಸು ಎಲ್ಲ ಕಾಮನೆಗಳಿಂದಲೂ ರಹಿತವಾಗುತ್ತದೆಯೋ) ಆಗ ಆ ಮಾನವನು ಸತ್ತ್ವಗುಣದಲ್ಲಿರುತ್ತಾನೆ. ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. (ಎಲ್ಲ ವಿಧವಾದ ಕಾಮನೆಗಳನ್ನೂ ತೊರೆದನಂತರವೇ ಆತ್ಮಸಾಕ್ಷಾತ್ಕಾರ ವಾಗುತ್ತದೆ.)

ಸುಪ್ರಸನ್ನಸ್ತು ಭಾವೇನ ಯೋಗೇನ ಚ ನರಾಧಿಪ ।
ಧರ್ಮಂ ಪುರುಷಶಾರ್ದೂಲ ಪ್ರಾಪ್ಸ್ಯತೇ ಪಾಲನೇ ರತಃ ॥೩೯॥

ಪುರುಷಶ್ರೇಷ್ಠನೇ! ನರೇಶ್ವರ! ಕರ್ಮಯೋಗರೂಪವಾದ ಯೋಗ ದಿಂದಲೂ, ಸರ್ವಸಮಭಾವದಿಂದಲೂ ಪ್ರಸನ್ನವಾದ ಅಂತಃಕರಣವುಳ್ಳ, ಪ್ರಜಾಪಾಲನಪರಾಯಣನಾದ ರಾಜನು ಶ್ರೇಷ್ಠವಾದ ಧರ್ಮವನ್ನು ಪರಿ ಪಾಲಿಸಿದ ಫಲವನ್ನು ಹೊಂದುತ್ತಾನೆ.

ವೇದಾಧ್ಯಯನಶೀಲಾನಾಂ ವಿಪ್ರಾಣಾಂ ಸಾಧುಕರ್ಮಣಾಮ್ ।
ಪಾಲನೇ ಯತ್ನಮಾತಿಷ್ಠ ಸರ್ವಲೋಕಸ್ಯ ಚೈವ ಹಿ ॥೪೦॥

ಯುಧಿಷ್ಠಿರ! ನೀನು ವೇದಾಧ್ಯಯನಶೀಲರಾದ, ಸತ್ಕರ್ಮನಿಷ್ಠರಾದ ಬ್ರಾಹ್ಮಣರ ಮತ್ತು ಇತರ ಎಲ್ಲ ಪ್ರಜೆಗಳ ರಕ್ಷಣೆಯಲ್ಲಿ ಪ್ರಯತ್ನಶೀಲನಾಗು.

ವನೇ ಚರನ್ತಿ ಯೇ ಧರ್ಮಮಾಶ್ರಮೇಷು ಚ ಭಾರತ ।
ರಕ್ಷಣಾತ್ತಚ್ಛತಗುಣಂ ಧರ್ಮಂ ಪ್ರಾಪ್ನೋತಿ ಪಾರ್ಥಿವಃ ॥೪೧॥

ಅರಣ್ಯಗಳಲ್ಲಿ ಋಷ್ಯಾಶ್ರಮಗಳಲ್ಲಿದ್ದುಕೊಂಡು ಯಾರು ಧರ್ಮವ

ನ್ನಾಚರಿಸುತ್ತಿರುತ್ತಾರೆಯೋ—ಅವರು ಪಡೆಯುವ ಫಲಕ್ಕಿಂತಲೂ ನೂರು ಪಟ್ಟು ಹೆಚ್ಚಾದ ಫಲವನ್ನು ಅವರನ್ನು (ಋಷಿಗಳನ್ನು) ಸಂರಕ್ಷಣೆಮಾಡುವ ರಾಜನು ಪಡೆದುಕೊಳ್ಳುತ್ತಾನೆ.

ಪಾಂಡವಶ್ರೇಷ್ಠನೇ! ಈಗ ನಿನಗೆ ವಿಧ-ವಿಧವಾದ ಧರ್ಮಗಳನ್ನು ಹೇಳಿರುತ್ತೇನೆ. ನಮ್ಮ ಹಿಂದಿನವರಿಂದ ಆಚರಿಸಲ್ಪಡುತ್ತಿದ್ದ ಸನಾತನವಾದ ಈ ಧರ್ಮವನ್ನು ನೀನೂ ಅನುಷ್ಠಾನಮಾಡು.

ಪುರುಷಸಿಂಹನೇ! ಪಾಂಡುಪುತ್ರ! ನಾಲ್ಕುವರ್ಣದವರೂ ಮತ್ತು ನಾಲ್ಕು ಆಶ್ರಮಗಳವರೂ ಅವರವರ ಧರ್ಮಗಳಲ್ಲಿ ನಿಷ್ಠರಾಗಿದ್ದುಕೊಂಡು ಪಡೆಯಬಹುದಾದ ಫಲಗಳನ್ನು ಈ ಪ್ರಜಾಪಾಲನಧರ್ಮವೊಂದರಿಂದಲೇ ನೀನು ಪಡೆದುಕೊಳ್ಳುವೆ.”

೬೬ನೆಯ ಅಧ್ಯಾಯವು ಮುಗಿಯಿತು.

೬೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಷ್ಟ್ರದ ರಕ್ಷಣೆಯಲ್ಲಿ ಮತ್ತು ಔನ್ನತ್ಯದ ವಿಷಯದಲ್ಲಿ ರಾಜನ ಅವಶ್ಯಕತೆಯ ಪ್ರತಿಪಾದನೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

“ಪಿತಾಮಹ! ನೀನೀಗ ನಾಲ್ಕು ಆಶ್ರಮಗಳ ಮತ್ತು ನಾಲ್ಕು ವರ್ಣಗಳ ಧರ್ಮಗಳನ್ನೂ ಹೇಳಿರುವೆ. ಈಗ ನೀನು ರಾಷ್ಟ್ರವು (ರಾಷ್ಟ್ರವಾಸಿಗಳಾದ ಜನರು) ಮಾಡಲೇಬೇಕಾದ ಕರ್ತವ್ಯವು ಯಾವುದೆಂಬುದನ್ನು ಹೇಳು.”

ಭೀಷ್ಮನು ಹೇಳುತ್ತಾನೆ :

ರಾಷ್ಟ್ರಸ್ಯೈತತ್ಕೃತ್ಯತಮಂ ರಾಜ್ಞ ಏವಾಭಿಷೇಚನಮ್ ।
ಅನಿನ್ದ್ರಮಬಲಂ ರಾಷ್ಟ್ರಂ ದಸ್ಯವೋಽಭಿಭವನ್ತ್ಯುತ ॥೨॥

“ಯುಧಿಷ್ಠಿರ! ರಾಷ್ಟ್ರದ ಅಥವಾ ರಾಷ್ಟ್ರವಾಸಿಗಳಾದ ಪ್ರಜೆಗಳ ಮುಖ್ಯಕರ್ತವ್ಯವೇನೆಂದರೆ ಯೋಗ್ಯನಾದ ರಾಜನಿಗೆ ಪಟ್ಟಗಟ್ಟುವುದು. ಏಕೆಂದರೆ : ರಾಜನಿಲ್ಲದ ರಾಜ್ಯವು ಬಲಹೀನವಾಗುತ್ತದೆ. ಅಂತಹ ರಾಷ್ಟ್ರವನ್ನು ಕಳ್ಳಕಾಕರು ಪೀಡಿಸುತ್ತಲೇ ಇರುತ್ತಾರೆ.

ಅರಾಜಕೇಷು ರಾಷ್ಟ್ರೇಷು ಧರ್ಮೋ ನ ವ್ಯವತಿಷ್ಠತೇ ।
ಪರಸ್ಪರಂ ಚ ಖಾದನ್ತಿ ಸರ್ವಥಾ ಧಿಗರಾಜಕಮ್ ॥೩॥

ರಾಜನಿಲ್ಲದ ರಾಷ್ಟ್ರಗಳಲ್ಲಿ ಧರ್ಮವೇ ಸ್ಥಿರವಾಗಿ ಉಳಿಯುವುದಿಲ್ಲ. ಅಂತಹ ರಾಷ್ಟ್ರದ ಜನಗಳು ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ನುಂಗಿಹಾಕಲು (ವಿನಾಶಗೊಳಿಸಲು) ಹವಣಿಸುತ್ತಿರುತ್ತಾರೆ. ಆದುದರಿಂದ ರಾಜನಿಲ್ಲದ ರಾಷ್ಟ್ರಕ್ಕೆ ಸರ್ವಥಾ ಧಿಕ್ಕಾರವಿರಲಿ!

ಇನ್ದ್ರಮೇವ ಪ್ರವೃಣುತೇ ಯದ್ರಾಜಾನಮಿತಿ ಶ್ರುತಿಃ ।
ಯಥೈವೇನ್ದ್ರಸ್ತಥಾ ರಾಜಾ ಸಮ್ಪೂಜ್ಯೋ ಭೂತಿಮಿಚ್ಛತಾ ॥೪॥

ಯಾವಾಗ ಪ್ರಜೆಗಳು ರಾಜನನ್ನು ವರಣಮಾಡುತ್ತಾರೆಯೋ ಆಗ ಅವರು ಇಂದ್ರನನ್ನೇ ವರಣಮಾಡುತ್ತಾರೆಂಬ ಶ್ರುತಿವಾಕ್ಯವೇ ಇದೆ. ಆದುದರಿಂದ ಲೋಕಕಲ್ಯಾಣವನ್ನು ಇಚ್ಛಿಸುವ ಪ್ರಜೆಯು ಇಂದ್ರನನ್ನು ಪೂಜಿಸಿ ಗೌರವಿಸುವಂತೆಯೇ ರಾಜನನ್ನೂ ಪೂಜಿಸಿ ಗೌರವಿಸಬೇಕು.

ನಾರಾಜಕೇಷು ರಾಷ್ಟ್ರೇಷು ವಸ್ತವ್ಯಮಿತಿ ರೋಚಯೇ ।
ನಾರಾಜಕೇಷು ರಾಷ್ಟ್ರೇಷು ಹವ್ಯಮಗ್ನಿರ್ವಹತ್ಯುತ ॥೫॥

ರಾಜನಿಲ್ಲದ ರಾಷ್ಟ್ರದಲ್ಲಿ ವಾಸಮಾಡುವುದೇ ನನಗೆ ರುಚಿಸುವುದಿಲ್ಲ. ಏಕೆಂದರೆ : ರಾಜನಿಲ್ಲದ ರಾಷ್ಟ್ರದಲ್ಲಿ ಅಗ್ನಿಯೂ ದೇವತೆಗಳಿಗೆ ಹವ್ಯವನ್ನು ಒಯ್ಯುವುದಿಲ್ಲ.

ಅಥ ಚೇದಾಭಿವರ್ತೇತ ರಾಜ್ಯಾರ್ಥೀ ಬಲವತ್ತರಃ ।
ಅರಾಜಕಾಣಿ ರಾಷ್ಟ್ರಾಣಿ ಹತವೀರ್ಯಾಣಿ ವಾ ಪುನಃ ॥೬॥

ಪ್ರತ್ಯುದ್ಗಮ್ಯಾಭಿಪೂಜ್ಯಃ ಸ್ಯಾದೇತದತ್ರ ಸುಮನ್ತ್ರಿತಮ್ ।
ನ ಹಿ ಪಾಪಾತ್ಪರತರಮಸ್ತಿ ಕಿಞ್ಚಿದರಾಜಕಾತ್ ॥೭॥

ಒಂದು ವೇಳೆ ಬಲಿಷ್ಠನಾದ, ರಾಜ್ಯಲೋಭಿಯಾದ ರಾಜನೇನಾದರೂ ರಾಜನಿಲ್ಲದ ಅಥವಾ ಶಕ್ತಿಗುಂದಿದ ರಾಜನುಳ್ಳ ರಾಜ್ಯಗಳನ್ನು ಆಕ್ರಮಿಸಲು ಬಂದುದೇ ಆದರೆ ಆ ದೇಶಗಳ ಪ್ರಜೆಗಳು ಮುಂದೆ ಬಂದು ಆ ರಾಜನನ್ನು ಸ್ವಾಗತಿಸಿ ಸತ್ಕರಿಸುವುದೇ ಯೋಗ್ಯಮಾರ್ಗವಾಗಿದೆ. ಇದು ದಕ್ಷ ರಾಜನಿಲ್ಲದ

ರಾಜ್ಯದಲ್ಲಿರುವ ಪ್ರಜೆಗಳಿಗೆ ಕೊಡುವ ಉತ್ತಮವಾದ ಸಲಹೆಯಾಗಿದೆ. ಏಕೆಂದರೆ : ಪಾಪಭೂಯಿಷ್ಠವಾದ ಅರಾಜಕತೆಗಿಂತಲೂ ಹೆಚ್ಚಿನ ಪಾಪವು ಮತ್ತೊಂದಿರುವುದಿಲ್ಲ.

ರಾಜನೇ ಇಲ್ಲದಿರುವ ರಾಜ್ಯದ ಪ್ರಜೆಗಳು ಬಲಿಷ್ಠನಾದ ರಾಜನನ್ನು ಸ್ವಾಗತಿಸುವುದರಲ್ಲಿ ಮತ್ತೊಂದು ಗುಣವೂ ಇದೆ.

ಸ ಚೇತ್ಸಮನುಪಶ್ಯೇತ ಸಮಗ್ರಂ ಕುಶಲಂ ಭವೇತ್ ।
ಬಲವಾನ್ಹಿ ಪ್ರಕುಪಿತಃ ಕುರ್ಯಾನ್ನಿಃಶೇಷತಾಮಪಿ ॥೮॥

ಆಕ್ರಮಣಕಾರನಾದ ಬಲಿಷ್ಠನಾದ ರಾಜನು ಪ್ರಜೆಗಳು ಕೊಟ್ಟ ಪುರಸ್ಕಾರದಿಂದ ಶಾಂತನಾಗಿ ಅವರನ್ನು ವಾತ್ಸಲ್ಯದೃಷ್ಟಿಯಿಂದಲೇ ಕಾಣ ಬಹುದು. ಆಗ ಸಮಗ್ರವಾದ ರಾಜ್ಯಕ್ಕೂ ಕ್ಷೇಮವೇ ಉಂಟಾಗುವುದು. ಒಂದು ವೇಳೆ ಅರಾಜಕತೆಯಿಂದ ದುರ್ಬಲವಾಗಿರುವ ರಾಷ್ಟ್ರದ ಪ್ರಜೆಗಳು ಆಕ್ರಮಣಕಾರನಾದ ರಾಜನನ್ನು ಪ್ರತಿಭಟಿಸಿ ಅವನನ್ನು ಕೋಪಗೊಳಿಸಿದ್ದೇ ಆದರೆ ಕೋಪಿಷ್ಠನೂ ಬಲಿಷ್ಠನೂ ಆದ ಆ ರಾಜನು ರಾಷ್ಟ್ರವನ್ನೇ ನಿರ್ನಾಮ ಮಾಡಿಬಿಡಬಹುದು. ಆದುದರಿಂದ ಅರಾಜಕತೆಯಿಂದ ದುರ್ಬಲವಾಗಿರುವ ರಾಷ್ಟ್ರದ ಪ್ರಜೆಗಳು ಬಲಿಷ್ಠನಾದ ಆಕ್ರಮಣಕಾರನನ್ನು ಸ್ವಾಗತಿಸಿ ಗೌರವಿ ಸುವುದೇ ಸಮಯೋಚಿತವಾದ ನೀತಿಯಾಗಿದೆ.

ಭೂಯಾಂಸಂ ಲಭತೇ ಕ್ಲೇಶಂ ಯಾ ಗೌರ್ಭವತಿ ದುರ್ದುಹಾ ।
ಅಥ ಯಾ ಸುದುಹಾ ರಾಜನ್ನೈವ ತಾಂ ವಿತುದನ್ತ್ಯಪಿ ॥೯॥

(ಪ್ರಜೆಗಳು ವಿನಮ್ರರಾಗಿದ್ದರೆ ಸುಖವಾಗಿರುತ್ತಾರೆ.) ಯಾವ ಹಸುವು ಬಹಳ ಕಷ್ಟಪಡಿಸಿ ಹಾಲುಕರೆಯುವುದೋ–ಆ ಹಸುವನ್ನು ಹೊಡೆಯು ತ್ತಾರೆ ; ಬಡಿಯುತ್ತಾರೆ. ಕಾಲುಗಳೆರಡನ್ನೂ ಬಿಗಿದಾದರೂ ಹಾಲು ಕರೆಯುತ್ತಾರೆ. ಅದು ಬಹಳವಾದ ಕ್ಲೇಶವನ್ನು ಅನುಭವಿಸುತ್ತದೆ. ಯಾವ ಹಸುವು ಒದೆಯದೇ, ತಂಟೆಮಾಡದೇ ಹಾಲುಕೊಡುತ್ತದೆಯೋ ಅಂತಹ ಹಸುವನ್ನು ಯಾರೂ ಪೀಡಿಸಹೋಗುವುದಿಲ್ಲ. ಅದನ್ನು ಚೆನ್ನಾಗಿ ಅಕ್ಕರೆಯಿಂದಲೇ ಸಾಕುತ್ತಾರೆ.

ಯದತಪ್ತಂ ಪ್ರಣಮತೇ ನೈತತ್ಸಂತಾಪಮರ್ಹತಿ ।
ಯತ್ಸ್ವಯಂ ನಮತೇ ದಾರು ನ ತತ್ಸಂನಾಮಯನ್ತ್ಯಪಿ ॥೧೧॥

ಕಾಯಿಸದೆಯೇ ಯಾವುದು ಬಗ್ಗುವುದೋ ಅಂತಹುದನ್ನು ಯಾರೂ ಕಾಯಿಸಲು ಹೋಗುವುದಿಲ್ಲ. ಬಗ್ಗಿಯೇ ಇರುವ ಕೋಲನ್ನು ಯಾರೂ ಪುನಃ ಬಗ್ಗಿಸಲು ಹೋಗುವುದಿಲ್ಲ. (ಅಂತೆಯೇ ವಿನಮ್ರರಾಗಿರುವ ಪ್ರಜೆಗಳಿಗೆ ಆಕ್ರಮಣಕಾರನಾದ ರಾಜನಾದರೂ ಯಾವ ವಿಧವಾದ ಕಷ್ಟವನ್ನೂ ಕೊಡುವುದಿಲ್ಲ.)

ವೀರನೇ! ಈ ಉಪಮೆಗಳನ್ನೇ ಮನನಮಾಡಿ ಮಾನವನು ಯಾವಾಗಲೂ ಬಲಿಷ್ಠನಾದವನಿಗೆ ತಗ್ಗಿನಡೆಯಬೇಕು. ಬಲಿಷ್ಠನಾದವನಿಗೆ ಯಾವನು ವಿನಮ್ರನಾಗಿರುವನೋ–ಅವನು ಇಂದ್ರನಿಗೆ ಪ್ರಣಾಮಮಾಡಿದಂತೆಯೇ ಆಗುತ್ತದೆ.

ತಸ್ಮಾದ್ರಾಜೈವ ಕರ್ತವ್ಯಃ ಸತತಂ ಭೂತಿಮಿಚ್ಛತಾ ।
ನ ಧನಾರ್ಥೋ ನ ದಾರಾರ್ಥಸ್ತೇಷಾಂ ಯೇಷಾಮರಾಜಕಮ್ ॥೧೨॥

ಆದುದರಿಂದ ಉನ್ನತಿಯನ್ನು ಇಚ್ಛಿಸುವ ಪ್ರಜೆಗಳು ಅಥವಾ ರಾಷ್ಟ್ರವು ಸಮರ್ಥನಾದ ರಾಜನಿಗೆ ಪಟ್ಟಕಟ್ಟುವುದೇ ಅವರ ಅತಿಮುಖ್ಯವಾದ ಕರ್ತವ್ಯ ವಾಗಿರುತ್ತದೆ. ಯಾವ ರಾಜ್ಯದಲ್ಲಿ ರಾಜನಿಲ್ಲವೋ ಅವರಿಗೆ ಧನದಿಂದಾಗಲೀ ಪತ್ನಿಯಿಂದಾಗಲೀ ಯಾವ ಪ್ರಯೋಜನವೂ ಇರುವುದಿಲ್ಲ. ಏಕೆಂದರೆ : ಅರಾಜಕತೆಯ ದೇಶದಲ್ಲಿ ಪ್ರಜೆಯು ಧನವನ್ನಾಗಲೀ ಪತ್ನಿಯನ್ನಾಗಲೀ ರಕ್ಷಿಸಿಕೊಳ್ಳಲಾರನು.

ಪ್ರೀಯತೇ ಹಿ ಹರನ್ಪಾಪಃ ಪರವಿತ್ತಮರಾಜಕೇ ।
ಯದಾಸ್ಯ ಉದ್ಧರನ್ತ್ಯನ್ಯೇ ತದಾ ರಾಜಾನಮಿಚ್ಛತಿ ॥೧೩॥

ಅರಾಜಕತೆಯಿಂದ ಕೂಡಿರುವ ಅಥವಾ ರಾಜನಿಲ್ಲದಿರುವ ದೇಶದಲ್ಲಿ ಪಾಪಿಷ್ಠನಾದವನು ಪರವಿತ್ತಾಪಹಾರಗಳನ್ನು ಮಾಡುತ್ತಾ ಸಂತೋಷಭರಿತ ನಾಗಿಯೇ ಇರುತ್ತಾನೆ. ಆದರೆ ಅವನಿಗಿಂತಲೂ ಬಲಿಷ್ಠರಾದ ಬೇರೆಯವರು

ಪಾಪಮಾರ್ಗದಿಂದಲೇ ಕೂಡಿಟ್ಟಿದ್ದ ಅವನ ಹಣವನ್ನೇನಾದರೂ ಅಪಹರಿಸಲು ಬಂದರೆ ಆ ಸಮಯದಲ್ಲಿ ಇವನೂ ದುಷ್ಟರನ್ನು ಶಿಕ್ಷಿಸುವ ರಾಜನನ್ನೇ ಅಪೇಕ್ಷಿಸುತ್ತಾನೆ. (ತನ್ನ ತಪ್ಪಿಗೆ ಶಿಕ್ಷೆಯಾಗಬಾರದು. ತನಗೆ ಅಪರಾಧವನ್ನೆಸಗಿದವರಿಗೆ ಶಿಕ್ಷೆಯಾಗಬೇಕು–ಎಂಬ ಅಪೇಕ್ಷೆಯು ಅವನಿಗಿರುತ್ತದೆ. ರಾಜನ ದಂಡನೀತಿಯು ವ್ಯವಸ್ಥಿತವಾಗಿದ್ದಲ್ಲಿ ಪಾಪಮಾರ್ಗದಿಂದ ಧನವನ್ನು ತಾನೂ ಸಂಪಾದಿಸಲು ಸಾಧ್ಯವಿರುತ್ತಿರಲಿಲ್ಲ–ಎಂದು ಅವನು ಭಾವಿಸುವುದಿಲ್ಲ. ರಾಜದಂಡದ ನಿಷ್ಕ್ರಿಯತೆಯ ಪರಿಣಾಮದ ಅರಿವು ತನಗೆ ಆಪತ್ತು ಒದಗಿದಾಗಲೇ ಉಂಟಾಗುತ್ತದೆ. ತನಗೆ ಆಪತ್ತು ಒದಗಿದಾಗ ಮಾತ್ರವೇ ಮನುಷ್ಯನು ದಂಡನೀತಿಯ ನಿಷ್ಕ್ರಿಯತೆಯ ಬಗೆಗೆ ಯೋಚಿಸುತ್ತಾನೆ. ತಾನು ತಪ್ಪುಮಾಡಿ ಸಿಕ್ಕಿಕೊಳ್ಳದಿದ್ದಾಗ ದಂಡನೀತಿಯ ನಿಷ್ಕ್ರಿಯತೆಯ ಬಗೆಗೆ ಅಪಹಾಸ್ಯಮಾಡುತ್ತಾನೆ. ಸಾಧಾರಣವಾಗಿ ತಪ್ಪುಮಾಡಿದ ಮನುಷ್ಯರ ಸ್ವಭಾವವೇ ಹೀಗಿರುತ್ತದೆ.)

ಪಾಪಾ ಹ್ಯಪಿ ತದಾ ಕ್ಷೇಮಂ ನ ಲಭನ್ತೇ ಕದಾಚನ ।
ಏಕಸ್ಯ ಹಿ ದ್ವೌ ಹರತೋ ದ್ವಯೋಶ್ಚ ಬಹವೋಽಪರೇ ॥೧೪॥

ಅರಾಜಕತೆಯಿರುವ ರಾಜ್ಯದಲ್ಲಿ ಪಾಪಿಷ್ಠರಿಗೂ ಕ್ಷೇಮವು ಲಭಿಸುವುದಿಲ್ಲ. ಪಾಪಮಾಡುವವರಿಗೆ ಯಾವ ವಿಧವಾದ ಶಿಕ್ಷೆಯೂ ಇಲ್ಲದಿದ್ದಾಗ ಒಬ್ಬ ಪಾಪಿಷ್ಠನು ಪಾಪಮಾರ್ಗದಿಂದ ಸಂಪಾದಿಸಿಟ್ಟಿದ್ದ ಹಣವನ್ನು ಇಬ್ಬರು ಪಾಪಿಷ್ಠರು ಸೇರಿ ಅಪಹರಿಸುತ್ತಾರೆ. ಇಬ್ಬರು ದರೋಡೆಯಿಂದ ಸಂಪಾದಿ ಸಿದ್ದ ಐಶ್ವರ್ಯವನ್ನು ಹಲವಾರು ಮಂದಿ ಒಟ್ಟಾಗಿ ಸೇರಿ ಅಪಹರಿಸುತ್ತಾರೆ. ಇದು ಹೀಗೆಯೇ ಬೆಳೆಯುತ್ತಾ ಹೋಗುವುದೇ ಹೊರತು ಪಾಪಿಷ್ಠರು ಕೂಡ ರಾಜನಿಲ್ಲದ ರಾಜ್ಯದಲ್ಲಿ ಸುಖವಾಗಿರಲು ಸಾಧ್ಯವಾಗುವುದಿಲ್ಲ.

ಅದಾಸಃ ಕ್ರಿಯತೇ ದಾಸೋ ಹ್ರಿಯನ್ತೇ ಚ ಬಲಾತ್ಸ್ತ್ರಿಯಃ ।
ಏತಸ್ಮಾತ್ಕಾರಣಾದ್ದೇವಾಃ ಪ್ರಜಾಪಾಲಾನ್ಪ್ರಚಕ್ರಿರೇ ॥೧೫॥

ಅರಾಜಕತೆಯಿರುವ ದೇಶದಲ್ಲಿ ದಾಸನಾಗಿಲ್ಲದೇ ಸ್ವತಂತ್ರನಾಗಿರುವವನನ್ನೂ ದಾಸನನ್ನಾಗಿ (ಗುಲಾಮನನ್ನಾಗಿ) ಮಾಡಿಕೊಳ್ಳುತ್ತಾರೆ. ಸ್ತ್ರೀಯ

ರನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗುತ್ತಾರೆ. ಈ ಕಾರಣ ದಿಂದಲೇ ದೇವತೆಗಳು ಪ್ರಜಾಪಾಲನದಕ್ಷರಾದ ರಾಜರನ್ನು ಸೃಷ್ಟಿಸಿದರು.

ರಾಜಾ ಚೇನ್ನ ಭವೇಲ್ಲೋಕೇ ಪೃಥಿವ್ಯಾಂ ದಣ್ಡಧಾರಕಃ ।
ಜಲೇ ಮತ್ಸ್ಯಾನಿವಾಭಕ್ಷ್ಯನ್ದುರ್ಬಲಂ ಬಲವತ್ತರಾಃ ॥೧೬॥

ದಂಡಧಾರಕನಾದ ರಾಜನೇನಾದರೂ ಪೃಥಿವಿಯಲ್ಲಿ ಇಲ್ಲದೇ ಹೋಗಿದ್ದರೆ–ನೀರಿನಲ್ಲಿ ದೊಡ್ಡ ಮೀನುಗಳು ಚಿಕ್ಕ ಮೀನುಗಳನ್ನು ತಿಂದುಹಾಕುವಂತೆ–ಬಲಿಷ್ಠರಾದವರು ದುರ್ಬಲರನ್ನು ನುಂಗಿಬಿಡುತ್ತಿದ್ದರು.

ನೀರಿನಲ್ಲಿರುವ ದೊಡ್ಡ ಮೀನುಗಳು ಚಿಕ್ಕ ಮೀನುಗಳನ್ನು ನುಂಗಿಬಿಡುವಂತೆ–ಹಿಂದೆ ರಾಜನಿಲ್ಲದ ದೇಶದಲ್ಲಿದ್ದ ಪ್ರಜೆಗಳು ಪರಸ್ಪರವಾಗಿ ಬಡಿದಾಡುತ್ತಾ ಕಟ್ಟಕಡೆಗೆ ಎಲ್ಲರೂ ವಿನಾಶಹೊಂದಿದರೆಂಬುದನ್ನು ನಾವು ಕೇಳಿದ್ದೇವೆ. ಆಗ ಅಳಿದುಳಿದಿದ್ದ ಕೆಲವರು ಒಟ್ಟಾಗಿ ಸೇರಿ ತಮ್ಮ ಉಳಿವಿಗಾಗಿ ಈ ನಿಯಮಗಳನ್ನು ಮಾಡಿಕೊಂಡರೆಂಬುದನ್ನೂ ನಾವು ಕೇಳಿದ್ದೇವೆ.

ವಾಕ್ಶೂರೋ ದಣ್ಡಪರುಷೋ ಯಶ್ಚ ಸ್ಯಾತ್ಪಾರಜಾಯಿಕಃ ।
ಯಃ ಪರಸ್ವಮಥಾದದ್ಯಾತ್ತ್ಯಾಜ್ಯಾ ನಸ್ತಾದೃಶಾ ಇತಿ ॥೧೮॥

'ನಮ್ಮಲ್ಲಿ ಯಾರು ನಿಷ್ಠುರವಾಗಿ ಮಾತನಾಡುವರೋ, ಅತ್ಯಂತ ಕಠೋರವಾಗಿ ಶಿಕ್ಷಿಸುವರೋ, ಪರಸ್ತ್ರೀಗಾಮಿಗಳಾಗಿರುವರೋ, ಇತರರ ಸ್ವತ್ತನ್ನು ಅಪಹರಿಸುವರೋ'–ಅಂತಹವರೆಲ್ಲರನ್ನೂ ನಾವು ನಮ್ಮ ಸಮಾಜದಿಂದಲೇ ಬಹಿಷ್ಕರಿಸೋಣ'–ಎಂಬುದಾಗಿ ಅವರು ನಾಲ್ಕೂ ವರ್ಣದವರ ವಿಶ್ವಾಸಾರ್ಥವಾಗಿ ನಿಯಮವನ್ನು ಮಾಡಿಕೊಂಡು, ಅದೇ ರೀತಿಯಲ್ಲಿ ತಮ್ಮ ಸಮೂಹದಲ್ಲಿದ್ದ ದುಷ್ಟರನ್ನು ದೂರಮಾಡಿ ಕೆಲವು ಕಾಲ ಸುಖದಿಂದಲೇ ಇದ್ದರು. ಆದರೆ ಅವರು ಪರಸ್ಪರವಾಗಿ ಮಾಡಿಕೊಂಡ ಕಟ್ಟುಪಾಡುಗಳು ಹೆಚ್ಚುಕಾಲ ಉಳಿಯಲಿಲ್ಲ. ದುಃಖಪೀಡಿತರಾದ ಅವರೆಲ್ಲರೂ ಒಟ್ಟಾಗಿ ಸೇರಿ ಪಿತಾಮಹನ ಬಳಿಗೆ ಹೋಗಿ ಹೇಳಿದರು :

ಅನೀಶ್ವರಾ ವಿನಶ್ಯಾಮೋ ಭಗವನ್ನೀಶ್ವರಂ ದಿಶ ।
ಯಂ ಪೂಜಯೇಮ ಸಮ್ಭೂಯ ಯಶ್ಚ ನಃ ಪ್ರತಿಪಾಲಯೇತ್ ॥

“ಭಗವನ್! ದುಷ್ಟರನ್ನು ಶಿಕ್ಷಿಸದ ರಾಜನಿಲ್ಲದಿದ್ದರೆ ನಾವೆಲ್ಲರೂ ವಿನಾಶಹೊಂದುತ್ತೇವೆ. ಯಾರು ಶಾಸನಮಾಡಲು ಸಮರ್ಥನೋ, ಯಾರು ನಮ್ಮನ್ನು ಪರಿಪಾಲಿಸುವನೋ ಮತ್ತು ಅದಕ್ಕೆ ಪ್ರತಿಯಾಗಿ ನಾವು ಯಾರನ್ನು ಪೂಜಿಸಿ ಗೌರವಿಸಬೇಕೋ–ಅಂತಹ ರಾಜನನ್ನು ದಯಪಾಲಿಸು.”



ಆಗ ಬ್ರಹ್ಮನು ಮಾನವರಿಗೆ ರಾಜನಾಗುವಂತೆ ಮನುವನ್ನು ನಿರ್ದೇಶಿಸಿದನು. ಆದರೆ ಮನುವು ಮಾತ್ರ ಪ್ರಜೆಗಳನ್ನು ಸ್ವೀಕಾರಮಾಡಲಿಲ್ಲ. (ರಾಜನಾಗಲು ಸಮ್ಮತಿಸಲಿಲ್ಲ.) ಅದಕ್ಕೆ ಕಾರಣವನ್ನು ನಿರೂಪಿಸುತ್ತಾ ಮನುವು ಬ್ರಹ್ಮನೊಡನೆ ಹೇಳಿದನು :

ಬಿಭೇಮಿ ಕರ್ಮಣಃ ಪಾಪಾದ್ರಾಜ್ಯಂ ಹಿ ಭೃಶದುಸ್ತರಮ್ ।
ವಿಶೇಷತೋ ಮನುಷ್ಯೇಷು ಮಿಥ್ಯಾವೃತ್ತೇಷು ನಿತ್ಯದಾ ॥೨೨॥

"ಬ್ರಹ್ಮದೇವ! ಜನರು ಮಾಡುವ ಪಾಪಕರ್ಮಗಳ ವಿಷಯವಾಗಿ ನಾನು ಬಹಳ ಭಯಪಡುತ್ತೇನೆ. ರಾಜ್ಯಭಾರವನ್ನು ನಡೆಸುವುದು ಅತ್ಯಂತಕಠಿನವಾದ ಕಾರ್ಯವಾಗಿರುತ್ತದೆ. ಅದರಲ್ಲಿಯೂ ವಿಶೇಷವಾಗಿ ಸರ್ವದಾ ಮಿಥ್ಯಾಚಾರಿಗಳಾಗಿರುವ ಮನುಷ್ಯರ ಮೇಲೆ ಆಧಿಪತ್ಯವನ್ನು ನಡೆಸುವುದು ಅತ್ಯಂತ ದುಸ್ತರವೇ ಸರಿ."

ಮನುವಿನ ಆ ಮಾತನ್ನು ಕೇಳಿ ಬ್ರಹ್ಮನ ಬಳಿಗೆ ನಿಯೋಗಹೋಗಿದ್ದ ಪ್ರಜೆಗಳು ಮನುವಿಗೆ ತಮ್ಮ ಪೂರ್ಣಸಹಕಾರದ ಆಶ್ವಾಸನೆಯನ್ನು ಕೊಡುತ್ತಾ ಹೇಳಿದರು :

ತಮಬ್ರುವನ್ಪ್ರಜಾ ಮಾ ಭೈಃ ಕರ್ತೄನೇನೋ ಗಮಿಷ್ಯತಿ ।
ಪಶೂನಾಮಧಿಪಞ್ಚಾಶದ್ಧಿರಣ್ಯಸ್ಯ ತಥೈವ ಚ ॥೨೩॥

ಧಾನ್ಯಸ್ಯ ದಶಮಂ ಭಾಗಂ ದಾಸ್ಯಾಮಃ ಕೋಶವರ್ಧನಮ್ ।
ಕನ್ಯಾಂ ಶುಲ್ಕೇ ಚಾರುರೂಪಾಂ ವಿವಾಹೇಷೂದ್ಯತಾಸು ಚ ॥೨೪॥

"ಮಹಾರಾಜ! ನೀನು ಹೆದರುವ ಕಾರಣವಿಲ್ಲ. ಪಾಪಮಾಡಿದವರ ಪಾಪವು ಅವರಿಗೇ ಸೇರುವುದೇ ಹೊರತು ರಾಜನಿಗೆ ಸೇರುವುದಿಲ್ಲ. ನಿನ್ನ ಭಂಡಾರವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಐವತ್ತು ಹಸುಗಳಲ್ಲಿ ಒಂದು ಹಸುವನ್ನೂ, ಐವತ್ತು ಸುವರ್ಣ ನಾಣ್ಯಗಳಲ್ಲಿ ಒಂದು ಸುವರ್ಣ ನಾಣ್ಯವನ್ನೂ ಮತ್ತು ಬೆಳೆದ ಧಾನ್ಯದಲ್ಲಿ ಹತ್ತನೆಯ ಒಂದು ಭಾಗವನ್ನೂ ನಿನಗೆ ನಾವು ಕಾಣಿಕೆಯಾಗಿ ಕೊಡುತ್ತೇವೆ. ಇಷ್ಟು ಮಾತ್ರವಲ್ಲದೇ ವಿವಾಹಯೋಗ್ಯರಾದ ಕನ್ಯೆಯರಲ್ಲಿ ಅತ್ಯಂತಸುಂದರಿಯಾಗಿರುವ ಕನ್ಯೆಯನ್ನೂ ನಿನಗೆ ಶುಲ್ಕರೂಪದಲ್ಲಿ ಕೊಡುತ್ತೇವೆ.

ದೇವತೆಗಳು ದೇವರಾಜನಾದ ಇಂದ್ರನನ್ನು ಅನುಸರಿಸಿ ಹೋಗುವಂತೆ–ಪ್ರಧಾನರಾದ ಮನುಷ್ಯರು ಪ್ರಮುಖವಾದ ಶಸ್ತ್ರಗಳೊಡನೆಯೂ ಮತ್ತು ವಾಹನಗಳೊಡನೆಯೂ ನಿನ್ನ ಹಿಂದೆ ಬರುತ್ತಾರೆ. ಪ್ರಜೆಗಳ ಇಂತಹ ಸಹಕಾರವನ್ನು ಪಡೆದ ನೀನು ಅಧಿಕಬಲಶಾಲಿಯಾಗಿ ಪ್ರತಾಪ

ವಂತನೂ, ಅನ್ಯರಿಂದ ಎದುರಿಸಲು ಅಸಾಧ್ಯನೂ ಆಗುವೆ. ಕುಬೇರನು ಯಕ್ಷ-ರಾಕ್ಷಸರನ್ನು ರಕ್ಷಿಸುತ್ತಾ ಅವರನ್ನು ಸುಖವಾಗಿಟ್ಟಿರುವಂತೆ–ನೀನೂ ನಮ್ಮೆಲ್ಲರನ್ನೂ ಸಂರಕ್ಷಿಸುತ್ತಾ ನಮ್ಮೆಲ್ಲರಿಗೂ ಸುಖದಾಯಕನಾಗು.

ಯಂ ಚ ಧರ್ಮಂ ಚರಿಷ್ಯನ್ತಿ ಪ್ರಜಾ ರಾಜ್ಞಾ ಸುರಕ್ಷಿತಾಃ ।
ಚತುರ್ಥಂ ತಸ್ಯ ಧರ್ಮಸ್ಯ ತ್ವತ್ಸಂಸ್ಥಂ ವೈ ಭವಿಷ್ಯತಿ ॥೨೭॥

ರಾಜನಿಂದ ರಕ್ಷಿಸಲ್ಪಡುವ ಪ್ರಜೆಗಳು ಯಾವ ಧರ್ಮಕಾರ್ಯವನ್ನೇ ಮಾಡಿದರೂ–ಆ ಧರ್ಮದ ನಾಲ್ಕನೆಯ ಒಂದು ಭಾಗವು ನಿನಗೆ ಸೇರಿದು ದಾಗುತ್ತದೆ. (ಪ್ರಜೆಗಳು ಗಳಿಸುವ ಪುಣ್ಯದಲ್ಲಿ ನಾಲ್ಕನೆಯ ಒಂದು ಭಾಗ ಪುಣ್ಯವು ಪ್ರಜೆಗಳನ್ನು ಯಾವ ವಿಧವಾದ ಈತಿಬಾಧೆಗಳೂ ಇಲ್ಲದಂತೆ ಸಂರಕ್ಷಿಸುವ ರಾಜನಿಗೆ ಸೇರುತ್ತದೆ.)

ಮನುವೇ! ಯಾವ ಶ್ರಮವೂ ಇಲ್ಲದೇ ಸುಖದಿಂದ ಪ್ರಾಪ್ತವಾಗುವ ಅಪಾರವಾದ ಪುಣ್ಯದಿಂದ ಕೂಡಿದವನಾಗಿ–ದೇವತೆಗಳನ್ನು ಇಂದ್ರನು ಸಂರಕ್ಷಿಸುವಂತೆ ಸರ್ವಪ್ರಕಾರಗಳಿಂದಲೂ ನಮ್ಮನ್ನು ಸಂರಕ್ಷಿಸು. ಮಹಾರಾಜ! ಪರಿತಪಿಸುವ ಸೂರ್ಯನಂತೆ ಶತ್ರುಗಳನ್ನು ಪರಿತಾಪಗೊಳಿಸಲು ವಿಜಯಯಾತ್ರೆಗೆ ಪ್ರಯಾಣಮಾಡು. ಶತ್ರುಗಳ ಅಹಂಕಾರವನ್ನು ಧೂಳೀಪಟಲಗೊಳಿಸು. ನಿನಗೆ ಯಾವಾಗಲೂ ವಿಜಯವು ಲಭಿಸಲಿ."

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಪ್ರಜೆಗಳು ಹೇಳಿದ ಮಾತನ್ನು ಕೇಳಿದನಂತರ ಅಪಾರವಾದ ಸೈನ್ಯಬಲದಿಂದ ಪರಿವೃತನಾದ, ಕುಲೀನನಾದ, ಮಹಾತೇಜಸ್ವಿ ಯಾದ ಮನುವು ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ವಿಶ್ವ ವನ್ನು ಬೆಳಗುತ್ತಾ ಬ್ರಹ್ಮನ ಆದೇಶದಂತೆ ಭೂಮಂಡಲದ ಸಾರ್ವಭೌಮತ್ವ ವನ್ನು ವಹಿಸಿಕೊಳ್ಳಲು ಹೊರಟನು. ದೇವತೆಗಳು ದೇವರಾಜನಾದ ಇಂದ್ರನ ಪ್ರಭಾವದಿಂದ ಪ್ರಭಾವಿತರಾಗುವಂತೆ–ಭೂಮಂಡಲದ ಜನರು ಮನುವಿನ ಮಹತ್ತ್ವವನ್ನು (ಮಹಾತೇಜಸ್ಸನ್ನು) ಕಂಡು ಭಯಗೊಂಡವರಾಗಿ ತಮ್ಮ-ತಮ್ಮ ಧರ್ಮಗಳಲ್ಲಿ ಸ್ಥಿರವಾಗಿ ಉಳಿಯಲು (ಸ್ವಧರ್ಮೋಚಿತ ವಾದ ಕರ್ಮಾನುಷ್ಠಾನಗಳನ್ನು ಮಾಡಿಕೊಂಡಿರಲು) ನಿಶ್ಚಯಿಸಿದರು.

ಬಳಿಕ ಮನುವು ಮಳೆಗರೆಯುವ ಮೇಘದಂತೆ ಪಾಪಕರ್ಮಿಗಳನ್ನು ತನ್ನ ಪ್ರಭಾವದಿಂದ ಉಪಶಮನಗೊಳಿಸುತ್ತಾ, ಪ್ರಜೆಗಳನ್ನು ಅವರವರ ವರ್ಣಾಶ್ರಮ ಧರ್ಮಗಳಲ್ಲಿ ನಿಷ್ಠರಾಗಿರುವಂತೆ ನಿಯೋಜಿಸುತ್ತಾ, ಭೂಮಂಡಲದ ನಾಲ್ಕು ದಿಕ್ಕುಗಳಲ್ಲಿಯೂ ಸಂಚರಿಸಿದನು. ಯುಧಿಷ್ಠಿರ! ಹೀಗೆ ಈ ಭೂಮಂಡಲದಲ್ಲಿ ಯಾವ ಪ್ರಜೆಗಳು ಐಶ್ವರ್ಯದ ವೃದ್ಧಿಯನ್ನು ಅಪೇಕ್ಷಿಸುವರೋ, ಅವರು ಎಲ್ಲಕ್ಕಿಂತಲೂ ಮೊದಲು ಪ್ರಜೆಗಳ ಅನುಗ್ರಹಾರ್ಥವಾಗಿ ಶ್ರೇಷ್ಠಪುರುಷನೊಬ್ಬನನ್ನು ರಾಜನನ್ನಾಗಿ ಮಾಡಿಕೊಳ್ಳಬೇಕು. ಶಿಷ್ಯರು ಗುರುವನ್ನು ಭಕ್ತಿಭಾವದಿಂದ ನಮಸ್ಕರಿಸುವಂತೆ–ದೇವತೆಗಳು ದೇವೇಂದ್ರನನ್ನು ಭಯ-ಭಕ್ತಿಗಳಿಂದ ನಮಸ್ಕರಿಸುವಂತೆ–ಪ್ರಜೆಗಳೂ ರಾಜನ ಸಮೀಪಕ್ಕೆ ಹೋಗಿ ಭಕ್ತಿಭಾವದಿಂದ ನಮಸ್ಕರಿಸುತ್ತಾರೆ.

ಸತ್ಕೃತಂ ಸ್ವಜನೇನೇಹ ಪರೋಽಪಿ ಬಹು ಮನ್ಯತೇ ।
ಸ್ವಜನೇನ ತ್ವವಜ್ಞಾತಂ ಪರೇ ಪರಿಭವನ್ತ್ಯುತ ॥೩೫॥

ಸ್ವಜನರಿಂದ ಸತ್ಕೃತನಾದವನನ್ನು ಇತರರೂ ಬಹುಮಾನಿಸುತ್ತಾರೆ. ಸ್ವಜನರಿಂದಲೇ ತಿರಸ್ಕೃತನಾದವನನ್ನು ಇತರರೂ ಅನಾದರಣೆಮಾಡುತ್ತಾರೆ.

ರಾಜನಿಗೇನಾದರೂ ಶತ್ರುಗಳಿಂದ ಪರಾಭವವುಂಟಾದರೆ ಅದು ರಾಜನಿಗೆ ಆಗುವ ಪರಾಭವವು ಮಾತ್ರವಲ್ಲ. ಅವನ ರಾಜ್ಯದಲ್ಲಿರುವ ಪ್ರಜೆಗಳೆಲ್ಲರಿಗೂ ಪರಾಭವವಾದಂತಾಗುತ್ತದೆ. ಆದುದರಿಂದ ಪ್ರಜೆಗಳು ರಾಜನನ್ನು ಎಲ್ಲ ಪ್ರಕಾರಗಳಿಂದಲೂ ಬಲಿಷ್ಠನನ್ನಾಗಿ ಮಾಡಬೇಕು. ಅವನಿಗೆ ಶ್ವೇತಚ್ಛತ್ರವನ್ನು ಕೊಡಬೇಕು. ವಾಹನಗಳನ್ನೂ, ಶ್ರೇಷ್ಠವಾದ ವಸ್ತ್ರಗಳನ್ನೂ, ಅಮೂಲ್ಯವಾದ ಆಭರಣಗಳನ್ನೂ ಭೋಜನಪರಿಕರಗಳನ್ನೂ, ಪಾನೀಯಗಳನ್ನೂ, ವಾಸಮಾಡಲು ಸಕಲವಿಧವಾದ ಸಾಮಗ್ರಿಗಳಿಂದಲೂ ಕೂಡಿರುವ ಸೌಧಗಳನ್ನೂ, ಶಯ್ಯಾಸನಗಳನ್ನೂ ಮತ್ತು ಸಕಲವಿಧವಾದ ಉಪಕರಣಗಳನ್ನೂ ಒದಗಿಸಿಕೊಡಬೇಕು. ಹೀಗೆ ಪ್ರಜೆಗಳಿಂದಲೇ ಪರಿಪುಷ್ಟನಾಗುವ ರಾಜನು ದುರ್ಧರ್ಷನೂ–ಪ್ರಜೆಗಳ ಪಾಲನೆಯಲ್ಲಿ ಸಮರ್ಥನೂ ಆಗುತ್ತಾನೆ. ರಾಜನಾದವನು ಪ್ರಜೆಗಳೊಡನೆ ಯಾವಾಗಲೂ ನಗುಮುಖದಿಂದಲೇ ಮಾತನಾಡಬೇಕು. ಪ್ರಜೆಗಳೇನಾದರೂ ರಾಜನನ್ನು ಯಾವುದಾದರೂ ವಿಷಯದಲ್ಲಿ ಪ್ರಶ್ನಿಸಿದರೆ ಮಧುರವಾದ ಮಾತಿನಿಂದಲೇ ಉತ್ತರಿಸಬೇಕು.

ಕೃತಜ್ಞೋ ದೃಢಭಕ್ತಿಃ ಸ್ಯಾತ್ಸಂವಿಭಾಗೀ ಜಿತೇನ್ದ್ರಿಯಃ ।
ಈಕ್ಷಿತಃ ಪ್ರತಿವೀಕ್ಷೇತ ಮೃದು ವಲ್ಗು ಚ ಸುಷ್ಠು ಚ ॥೩೯॥

ರಾಜನು ಯಾವಾಗಲೂ ಇತರರು ಮಾಡಿದ ಉಪಕಾರವನ್ನು (ಅದು ಅತ್ಯಲ್ಪವೇ ಆಗಿದ್ದರೂ) ಸ್ಮರಿಸಬೇಕು. ತನ್ನ ಭಕ್ತರಲ್ಲಿ (ತನ್ನನ್ನು ಆಶ್ರಯಿಸಿದವರಲ್ಲಿ) ಸುದೃಢವಾದ ಸ್ನೇಹವನ್ನಿಟ್ಟುಕೊಳ್ಳಬೇಕು. ಉಪಭೋಗಕ್ಕೆ ಯೋಗ್ಯವಾದ ವಸ್ತುಗಳನ್ನು ಇತರರಿಗೂ ಯಥಾಯೋಗ್ಯವಾಗಿ ಹಂಚಿಕೊಟ್ಟು ತಾನೂ ಉಪಭೋಗಿಸಬೇಕು. ಜಿತೇಂದ್ರಿಯನಾಗಿರಬೇಕು. ತನ್ನ ಕಡೆ ನೋಡಿದವರನ್ನು ತಾನೂ ನೋಡಬೇಕು. ಎಂದರೆ ಸಹಾಯಕ್ಕಾಗಿ ಯಾಚಿಸಿ ಬಂದವರನ್ನೂ ಅಥವಾ ಯಾವುದೇ ವಿಷಯವಾಗಿ ತನ್ನನ್ನು ಸಮೀಪಿಸಿದವರನ್ನೂ ಕೂಡಲೇ ವಿಚಾರಿಸಿಕೊಳ್ಳಬೇಕು. ಸ್ವಭಾವದಿಂದ ಮೃದುವಾಗಿಯೂ, ಮಾಧುರ್ಯದಿಂದ ಕೂಡಿದ ಮಾತುಳ್ಳವನೂ, ಸರಳನೂ ಆಗಿರಬೇಕು."

ಲ೭ನೆಯ ಅಧ್ಯಾಯವು ಮುಗಿಯಿತು.

ಲ೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಭೀಷ್ಮನು, ರಾಜನಿಲ್ಲದೇ ಇರುವುದರಿಂದ ಪ್ರಜೆಗಳಿಗೆ ಆಗುವ ಹಾನಿಯನ್ನೂ ರಾಜನಿರುವುದರಿಂದ ಪ್ರಜೆಗಳಿಗೆ ಆಗುವ ಲಾಭವನ್ನೂ ವಸುಮನಸ ಮತ್ತು ಬೃಹಸ್ಪತಿಗಳ ಸಂವಾದವನ್ನು ಉದ್ಧರಿಸಿ ಯುಧಿಷ್ಠಿರನಿಗೆ ಹೇಳಿದುದು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಮಾಹುರ್ದೈವತಂ ವಿಪ್ರಾ ರಾಜಾನಂ ಭರತರ್ಷಭ ।
ಮನುಷ್ಯಾಣಾಮಧಿಪತಿಂ ತನ್ಮೇ ಬ್ರೂಹಿ ಪಿತಾಮಹ ॥೧॥

"ಭರತಶ್ರೇಷ್ಠನೇ! ಪಿತಾಮಹ! ಮನುಷ್ಯರಿಗೆ ಅಧಿಪತಿಯಾದ ರಾಜನನ್ನು ಬ್ರಾಹ್ಮಣರು ದೇವತಾಸ್ವರೂಪನೆಂದೇಕೆ ಹೇಳುತ್ತಾರೆ? ಈ ವಿಷಯವನ್ನು ನನಗೆ ಹೇಳು."

"ಭಾರತನೇ! ಹಿಂದೆ ವಸುಮನಸನೂ ಬೃಹಸ್ಪತ್ಯಾಚಾರ್ಯರನ್ನು ಈ ವಿಷಯವಾಗಿಯೇ ಪ್ರಶ್ನಿಸಿದ್ದನು. ಹಿಂದಿನ ಇತಿಹಾಸರೂಪವಾದ ಅವರ

ಸಂಭಾಷಣೆಯನ್ನೇ ವಿದ್ವಾಂಸರು ಈಗಲೂ ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುತ್ತೇನೆ.

ಬುದ್ಧಿವಂತರಲ್ಲಿ ಶ್ರೇಷ್ಠನಾದ ವಸುಮನಸನೆಂಬ ಕೋಸಲದೇಶದ ರಾಜನು ವಿದ್ವಾಂಸರಾದ ಬೃಹಸ್ಪತಿಮಹರ್ಷಿಗಳನ್ನು ಒಮ್ಮೆ ಪ್ರಶ್ನಿಸಿದನು.

ಯಾರಲ್ಲಿ ಹೇಗೆ ವಿನಯದಿಂದ ನಡೆದುಕೊಳ್ಳಬೇಕೆಂಬುದನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದ, ಸರ್ವಲೋಕಗಳ ಹಿತದಲ್ಲಿಯೇ ಆಸಕ್ತನಾಗಿದ್ದ ವಸುಮನಸನು ಬೃಹಸ್ಪತ್ಯಾಚಾರ್ಯರು ಆಗಮಿಸಿದೊಡನೆಯೇ ಪ್ರತ್ಯುತ್ಥಾನಮಾಡಿ, ಅವರನ್ನು ಆದರದಿಂದ ಸ್ವಾಗತಿಸಿ, ಅರ್ಘ್ಯ-ಪಾದ್ಯಾದಿಗಳಿಂದ ಯಥೋಚಿತವಾಗಿ ಸತ್ಕರಿಸಿ, ಶ್ರೇಷ್ಠವಾದ ಆಸನದಲ್ಲಿ ಕುಳ್ಳಿರಿಸಿ ವಿಧಿಪೂರ್ವಕವಾಗಿ ಪ್ರದಕ್ಷಿಣನಮಸ್ಕಾರ ಮಾಡಿದನಂತರ, ಪ್ರಜೆಗಳ ಸುಖೋಪಾಯವನ್ನು ಚಿಂತಿಸುತ್ತಾ ಧರ್ಮಶೀಲರಾದ ಅವರನ್ನು ಕುರಿತು ರಾಜ್ಯಾಡಳಿತದ ವಿಧಿಯ ವಿಷಯವಾಗಿ ಪ್ರಶ್ನಿಸಿದನು.

ಕೇನ ಭೂತಾನಿ ವರ್ಧನ್ತೇ ಕ್ಷಯಂ ಗಚ್ಛನ್ತಿ ಕೇನ ವಾ ।
ಕಮರ್ಚನ್ತೋ ಮಹಾಪ್ರಾಜ್ಞ ಸುಖಮವ್ಯಯಮಾಪ್ನುಯುಃ ॥೬॥

"ಮಹಾಪ್ರಾಜ್ಞರಾದ ಆಚಾರ್ಯರೇ! ರಾಜ್ಯದಲ್ಲಿರುವ ಪ್ರಾಣಿಗಳು (ಪ್ರಜೆಗಳು) ಯಾರಿಂದ ಅಥವಾ ಯಾವ ಕಾರಣದಿಂದ ವೃದ್ಧಿಹೊಂದುತ್ತವೆ? ಯಾರಿಂದ ಅಥವಾ ಯಾವ ಕಾರಣದಿಂದ ಕ್ಷಯಿಸುತ್ತವೆ? ಯಾವ ದೇವತೆಯನ್ನು ಪೂಜಿಸುವುದರಿಂದ ಲೋಕದ ಜನರು ಶಾಶ್ವತವಾದ ಸುಖವನ್ನು ಪಡೆಯುವರು?"

ಯುಧಿಷ್ಠಿರ! ಮಹಾತೇಜಸ್ವಿಯಾದ, ಕೋಸಲಾಧಿಪತಿಯಾದ ವಸುಮನಸನು ಹೀಗೆ ಪ್ರಶ್ನಿಸಲಾಗಿ, ಮಹಾಪ್ರಾಜ್ಞರಾದ ಬೃಹಸ್ಪತ್ಯಾಚಾರ್ಯರು ಅವ್ಯಗ್ರತೆಯಿಂದ ಕೂಡಿದ ರಾಜಸತ್ಕಾರದಿಂದ ಎಂತಹ ಮಹಾಫಲವು ಪ್ರಾಪ್ತವಾಗುವುದೆಂಬುದನ್ನು ವಿವರವಾಗಿ ಹೇಳತೊಡಗಿದರು :

ರಾಜಮೂಲೋ ಮಹಾಪ್ರಾಜ್ಞ ಧರ್ಮೋ ಲೋಕಸ್ಯ ಲಕ್ಷ್ಯತೇ ।
ಪ್ರಜಾ ರಾಜಭಯಾದೇವ ನ ಖಾದನ್ತಿ ಪರಸ್ಪರಮ್ ॥೮॥

"ಮಹಾಪ್ರಾಜ್ಞನೇ! ಲೋಕದಲ್ಲಿ ಧರ್ಮವು ರಾಜನೇ ಮೂಲವಾಗಿ

ಉಳ್ಳದ್ದಾಗಿದೆಯೆಂಬುದು ಕಾಣಬರುತ್ತದೆ. ರಾಜನು ಶಿಕ್ಷಿಸುವವನೆಂಬ ಭಯದಿಂದ ಮಾತ್ರವೇ ಪ್ರಜೆಗಳು ಒಬ್ಬರನ್ನೊಬ್ಬರು ನುಂಗಿಹಾಕಲು ಪ್ರಯತ್ನಿಸುತ್ತಿಲ್ಲ.

ಲೋಕಮರ್ಯಾದೆಯನ್ನೇ ಮೀರಿ ನಡೆಯುವ, ಅನುಚಿತವಾದ ಭೋಗಗಳಲ್ಲಿಯೇ ಆಸಕ್ತರಾಗಿ ಅವುಗಳ ಪ್ರಾಪ್ತಿಗಾಗಿಯೇ ಉತ್ಕಂಠಿತರಾಗಿರುವ ಜಗತ್ತಿನ ಪ್ರಜೆಗಳನ್ನು, ರಾಜನು ಧರ್ಮಾನುಕೂಲವಾದ ಶಾಸನದ ಮೂಲಕವಾಗಿ ಪ್ರಸನ್ನಗೊಳಿಸುತ್ತಾನೆ. ಹೀಗೆ ಮಾಡುವುದರಿಂದ ತಾನೂ ಪ್ರಸನ್ನನಾಗಿ ವಿರಾಜಿಸುತ್ತಾನೆ.

ಯಥಾ ಹ್ಯನುದಿತೇ ರಾಜನ್ಭೂತಾನಿ ಶಶಿಸೂರ್ಯಯೋಃ ।
ಅನ್ಧೇ ತಮಸಿ ಮಜ್ಜೇಯುರಪಶ್ಯನ್ತಃ ಪರಸ್ಪರಮ್ ॥೧೦॥

ಯಥಾ ಹ್ಯನುದಕೇ ಮತ್ಸ್ಯಾ ನಿರಾಕ್ರನ್ದೇ ವಿಹಙ್ಗಮಾಃ ।
ವಿಹರೇಯುರ್ಯಥಾಕಾಮಂ ವಿಹಿಂಸನ್ತಃ ಪುನಃ ಪುನಃ ॥೧೧॥

ವಿಮಥ್ಯಾತಿಕ್ರಮೇರಂಶ್ಚ ವಿಷಹ್ಯಾಪಿ ಪರಸ್ಪರಮ್ ।
ಅಭಾವಮಚಿರೇಣೈವ ಗಚ್ಛೇಯುರ್ನಾತ್ರ ಸಂಶಯಃ ॥೧೨॥

ಏವಮೇವ ವಿನಾ ರಾಜ್ಞಾ ವಿನಶ್ಯೇಯುರಿಮಾಃ ಪ್ರಜಾಃ ।
ಅನ್ಧೇ ತಮಸಿ ಮಜ್ಜೇಯುರಗೋಪಾಃ ಪಶವೋ ಯಥಾ ॥೧೩॥

ವಸುಮನಸನೇ! ಯಾವ ರೀತಿಯಲ್ಲಿ ಸೂರ್ಯ-ಚಂದ್ರರ ಉದಯವಾಗದಿದ್ದರೆ ಪ್ರಾಣಿಗಳು ಗಾಢಾಂಧಕಾರದಲ್ಲಿ ಮುಳುಗಿಹೋಗುತ್ತವೆಯೋ ಮತ್ತು ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ನೋಡಲೂ ಸಾಧ್ಯವಾಗುವುದಿಲ್ಲವೋ–ಹಾಗೆಯೇ ರಾಜನಿಲ್ಲದಿದ್ದರೆ ಜನರು ಅರಾಜಕತೆಯೆಂಬ ಗಾಢಾಂಧಕಾರದಲ್ಲಿ ಮುಳುಗಿ ವಿನಾಶಹೊಂದುತ್ತಾರೆ. ನೀರಿಲ್ಲದ ಕೊಳದಲ್ಲಿರುವ ಮೀನುಗಳು ಸತ್ತುಹೋಗುವಂತೆ–ರಾಜನಿಲ್ಲದ ರಾಜ್ಯದಲ್ಲಿರುವ ಪ್ರಜೆಗಳು ವಿನಾಶಹೊಂದುತ್ತಾರೆ. ಹಿಂಸ್ರಮೃಗಗಳ ಗರ್ಜನೆಗಳಿಂದ ರಹಿತವಾದ ಅರಣ್ಯಪ್ರದೇಶದಲ್ಲಿ ಪಕ್ಷಿಗಳೇನೋ ಸ್ವೇಚ್ಛೆಯಿಂದ ಹಾರಾಡುತ್ತಿರುತ್ತವೆ. ಆದರೆ ಆ ಸಮಯದಲ್ಲಿ ಅವುಗಳು ಬೇರೊಬ್ಬರ ಭಯವಿಲ್ಲದೇ ಪರಸ್ಪರವಾಗಿಯೇ ಕಚ್ಚಾಡುತ್ತಿರುತ್ತವೆ. ಕೊಕ್ಕು ಮತ್ತು ಉಗುರುಗಳ ಪ್ರಹಾರ

ಗಳಿಂದಲೇ ಎದುರಾಳಿಗಳನ್ನು ಧ್ವಂಸಮಾಡಿಬಿಡುತ್ತವೆ. ಮತ್ತೊಮ್ಮೆ ಅವುಗಳೇ ಪೆಟ್ಟುತಿಂದು ಒದ್ದಾಡುತ್ತಿರುತ್ತವೆ. ಇಷ್ಟಾದರೂ ಅವುಗಳು ಸುಮ್ಮ ನಿರುವುದಿಲ್ಲ. ಅನವರತವೂ ಪರಸ್ಪರವಾಗಿ ಕಚ್ಚಾಡುತ್ತಲೇ ಇದ್ದು ಎಲ್ಲ ಪಕ್ಷಿ ಗಳೂ ಬಹಳಬೇಗ ವಿನಾಶಹೊಂದುತ್ತವೆ. ಹಿಂಸ್ರಮೃಗಗಳ ಭಯವಾದರೂ ಇದ್ದರೆ ಅವುಗಳು ಹೀಗೆ ಮಾಡುತ್ತಿರಲಿಲ್ಲ. ಯಾರೊಬ್ಬರ ಭಯವೂ ಇಲ್ಲದೇ ಇರುವುದರಿಂದಲೇ ಆ ಪಕ್ಷಿಗಳು ಪರಸ್ಪರವಾಗಿ ಕಚ್ಚಾಡಿ ವಿನಾಶಹೊಂದು ತ್ತವೆ. ಅದೇ ರೀತಿಯಲ್ಲಿ ರಾಜನಿಲ್ಲದಿದ್ದರೆ ಪ್ರಜೆಗಳೆಲ್ಲರೂ ಪರಸ್ಪರವಾಗಿ ಕಿತ್ತಾಡಿ ವಿನಾಶಹೊಂದುತ್ತಾರೆ. ರಕ್ಷಕರಿಲ್ಲದಿರುವ ಗೋವುಗಳಂತೆ ರಾಜ ನಿಲ್ಲದ ರಾಜ್ಯದ ಪ್ರಜೆಗಳು ಗಾಢಾಂಧಕಾರದಲ್ಲಿ ಮುಳುಗಿಹೋಗುತ್ತಾರೆ.

ಹರೇಯುರ್ಬಲವನ್ತೋऽಪಿ ದುರ್ಬಲಾನಾಂ ಪರಿಗ್ರಹಾನ್ ।
ಹನ್ಯುರ್ವ್ಯಾಯಚ್ಛಮಾನಾಂಶ್ಚ ಯದಿ ರಾಜಾ ನ ಪಾಲಯೇತ್ ॥೧೪॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡ ದಿದ್ದರೆ–ಬಲಿಷ್ಠರಾದವರು, ದುರ್ಬಲರಾದವರು ಸಂಗ್ರಹಿಸಿದ ವಸ್ತುಗಳೆಲ್ಲ ವನ್ನೂ (ಪತ್ನೀ-ಪುತ್ರಾದಿಗಳನ್ನೂ) ಅಪಹರಿಸುತ್ತಾರೆ. ತಮ್ಮ ಐಶ್ವರ್ಯವನ್ನು ರಕ್ಷಿಸಿಕೊಳ್ಳಲು ಬರುವವರನ್ನು ಬಲಿಷ್ಠರಾದವರು ಕೊಲೆಮಾಡಲೂ ಹೇಸುವುದಿಲ್ಲ.

ಮಮೇದಮಿತಿ ಲೋಕೇऽಸ್ಮಿನ್ನ ಭವೇತ್ಸಮ್ಪರಿಗ್ರಹಃ ।
ನ ದಾರಾ ನ ಚ ಪುತ್ರಃ ಸ್ಯಾನ್ನ ಧನಂ ನ ಪರಿಗ್ರಹಃ ।
ವಿಷ್ವಗ್ಲೋಪಃ ಪ್ರವರ್ತೇತ ಯದಿ ರಾಜಾ ನ ಪಾಲಯೇತ್ ॥೧೫॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ಈ ಜಗತ್ತಿನಲ್ಲಿ ಪತ್ನೀ-ಪುತ್ರ-ಧನ-ಗೃಹಾದಿಗಳ ಸಂಗ್ರಹವೇ ಸಾಧ್ಯವಾಗುತ್ತಿರಲಿಲ್ಲ. ಯಾವ ಪ್ರಜೆಯೂ ಯಾವುದನ್ನೂ 'ನನ್ನದು' ಎಂದು ಹೇಳಿಕೊಳ್ಳಲೂ ಸಾಧ್ಯವಾಗುತ್ತಿರಲಿಲ್ಲ. ಎಲ್ಲ ಕಡೆಗಳಲ್ಲಿಯೂ ಎಲ್ಲರ ಸಂಪತ್ತಿನ ವಿನಾಶವೂ ಆಗುತ್ತಿದ್ದಿತು.

ಯಾನಂ ವಸ್ತ್ರಮಲಙ್ಕಾರಾನ್ರತ್ನಾನಿ ವಿವಿಧಾನಿ ಚ ।
ಹರೇಯುಃ ಸಹಸಾ ಪಾಪಾ ಯದಿ ರಾಜಾ ನ ಪಾಲಯೇತ್ ॥೧೬॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ವಾಹನ, ವಸ್ತ್ರ, ಅಲಂಕಾರಾಭರಣಗಳು, ವಿಧ-ವಿಧವಾದ ರತ್ನಗಳು–ಇವೇ ಮೊದಲಾದ ಜನರ ಸಂಪತ್ತನ್ನು ಪಾಪಿಷ್ಠರಾದ ಜನರು ಒಡನೆಯೇ ಅಪಹರಿಸಿಬಿಡುತ್ತಿದ್ದರು.

ಪತೇದ್ಬಹುವಿಧಂ ಶಸ್ತ್ರಂ ಬಹುಧಾ ಧರ್ಮಚಾರಿಷು ।
ಅಧರ್ಮಃ ಪ್ರಗೃಹೀತಃ ಸ್ಯಾದ್ಯದಿ ರಾಜಾ ನ ಪಾಲಯೇತ್ ॥೧೭॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ಧರ್ಮಾತ್ಮರಾದ ಪುರುಷರ ಮೇಲೆ ಅನೇಕ ಪ್ರಕಾರವಾದ ಶಸ್ತ್ರಾಘಾತವು ಹಲವು ಬಾರಿ ನಡೆದುಬಿಡುತ್ತಿದ್ದಿತು. ಅಧರ್ಮವೇ ವಿಶ್ವವನ್ನು ಆವರಿಸಿಬಿಡುತ್ತಿದ್ದಿತು.

ಮಾತರಂ ಪಿತರಂ ವೃದ್ಧಮಾಚಾರ್ಯಮತಿಥಿಂ ಗುರುಮ್ ।
ಕ್ಲಿಶ್ನೀಯುರಪಿ ಹಿಂಸ್ಯುರ್ವಾ ಯದಿ ರಾಜಾ ನ ಪಾಲಯೇತ್ ॥೧೮॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ದುರಾಚಾರಿಗಳಾದ ಮನುಷ್ಯರು ತಾಯಿ, ವೃದ್ಧನಾದ ತಂದೆ, ಆಚಾರ್ಯ, ಅತಿಥಿ, ಗುರು–ಎಲ್ಲರನ್ನೂ ಅರ್ಥದಾಹದಿಂದ ಕ್ಲೇಶಗೊಳಿಸುತ್ತಿದ್ದರು ಅಥವಾ ಕೊಂದೇಬಿಡುತ್ತಿದ್ದರು.

ವಧಬನ್ಧಪರಿಕ್ಲೇಶೋ ನಿತ್ಯಮರ್ಥವತಾಂ ಭವೇತ್ ।
ಮಮತ್ವಂ ಚ ನ ವಿನ್ದೇಯುರ್ಯದಿ ರಾಜಾ ನ ಪಾಲಯೇತ್ ॥೧೯॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡದಿದ್ದರೆ–ಧನವಂತರ ವಧೆ, ಬಂಧನ ಮತ್ತು ಹಿಂಸೆಗಳು ನಿತ್ಯವೂ ನಡೆಯುತ್ತಿದ್ದುವು. ಯಾರೇ ಆಗಲೀ ಯಾವ ವಸ್ತುವನ್ನೇ ಆಗಲೀ (ಪತ್ನೀ-ಪುತ್ರರೇ ಆದಿಯಾಗಿ) ತನ್ನದೆಂದು ಹೇಳಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಅನ್ತಾಶ್ಚಾಕಾಲ ಏವ ಸ್ಯುರ್ಲೋಕೋಽಯಂ ದಸ್ಯುಸಾದ್ಭವೇತ್ ।
ಪತೇಯುರ್ನರಕಂ ಘೋರಂ ಯದಿ ರಾಜಾ ನ ಪಾಲಯೇತ್ ॥೨೦॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡದಿದ್ದರೆ–ಪ್ರಜೆಗಳೆಲ್ಲರೂ ಅಕಾಲದಲ್ಲಿಯೇ ಮೃತ್ಯುವಶರಾಗಿಬಿಡುತ್ತಿದ್ದರು.

ಲೋಕವೆಲ್ಲವೂ ಕಳ್ಳಕಾಕರ ವಶವಾಗಿಬಿಡುತ್ತಿದ್ದಿತು. ಎಲ್ಲೆಡೆಗಳಲ್ಲಿಯೂ ಪಾಪವೇ ತುಂಬಿಹೋಗಿ ಎಲ್ಲರೂ ಘೋರವಾದ ನರಕದಲ್ಲಿ ಬೀಳುತ್ತಿದ್ದರು.

ನ ಯೋನಿದೋಷೋ ವರ್ತೇತ ನ ಕೃಷಿರ್ನ ವಣಿಕ್ಪಥಃ ।
ಮಜ್ಜೇದ್ಧರ್ಮಸ್ತ್ರಯೀ ನ ಸ್ಯಾದ್ಯದಿ ರಾಜಾ ನ ಪಾಲಯೇತ್ ॥೨೧॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡದಿದ್ದರೆ–ವ್ಯಭಿಚಾರಮಾಡುವುದು ದೋಷಯುಕ್ತವೆಂದು ಯಾರೂ ಪರಿಗಣಿಸುತ್ತಿರಲಿಲ್ಲ. ಕೃಷಿ-ವಾಣಿಜ್ಯಾದಿಗಳೊಂದೂ ವ್ಯವಸ್ಥಿತವಾಗಿ ನಡೆಯುತ್ತಿರಲಿಲ್ಲ. ಧರ್ಮವೇ ಮುಳುಗಿಹೋಗುತ್ತಿದ್ದಿತು. ಮೂರು ವೇದಗಳೂ ಉಳಿಯುತ್ತಿರಲಿಲ್ಲ.

ನ ಯಜ್ಞಾಃ ಸಮ್ಪ್ರವರ್ತೇಯುರ್ವಿಧಿವತ್ಸ್ವಾಪ್ತದಕ್ಷಿಣಾಃ ।
ನ ವಿವಾಹಾಃ ಸಮಾಜೋ ವಾ ಯದಿ ರಾಜಾ ನ ಪಾಲಯೇತ್ ॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡದಿದ್ದರೆ–ವಿಧಿವತ್ತಾದ ಪರ್ಯಾಪ್ತವಾದ ದಕ್ಷಿಣೆಗಳಿಂದ ಕೂಡಿದ ಯಜ್ಞಾದಿಗಳೊಂದೂ ನಡೆಯುತ್ತಿರಲಿಲ್ಲ. ವಿವಾಹಾದಿ ಶುಭಕಾರ್ಯಗಳೊಂದೂ ನಡೆಯುತ್ತಿರಲಿಲ್ಲ. ಸಾಮಾಜಿಕವಾದ ಕಾರ್ಯಗಳೊಂದೂ ನಡೆಯುತ್ತಿರಲಿಲ್ಲ. ಸುವ್ಯವಸ್ಥಿತವಾದ ಸಮಾಜವೆಂಬುದೇ ಇರುತ್ತಿರಲಿಲ್ಲ.

ನ ವೃಷಾಃ ಸಮ್ಪ್ರವರ್ತೇರನ್ನ ಮಥ್ಯೇರಂಶ್ಚ ಗರ್ಗರಾಃ ।
ಘೋಷಾಃ ಪ್ರಣಾಶಂ ಗಚ್ಛೇಯುರ್ಯದಿ ರಾಜಾ ನ ಪಾಲಯೇತ್ ॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡದಿದ್ದರೆ–ಹೋರಿಗಳು ಹಸುಗಳಲ್ಲಿ ಗರ್ಭಾಧಾನವನ್ನೇ ಮಾಡುತ್ತಿರಲಿಲ್ಲ. ಮೊಸರು ತುಂಬಿದ ಪಾತ್ರೆಗಳು ಕಡೆಯಲ್ಪಡುತ್ತಿರಲಿಲ್ಲ. ಗೋಶಾಲೆಗಳೆಲ್ಲವೂ (ಗೊಲ್ಲರ ಹಳ್ಳಿಗಳು) ವಿನಾಶವನ್ನು ಹೊಂದುತ್ತಿದ್ದುವು.

ತ್ರಸ್ತಮುದ್ವಿಗ್ನಹೃದಯಂ ಹಾಹಾಭೂತಮಚೇತನಮ್ ।
ಕ್ಷಣೇನ ವಿನಶೇತ್ಸರ್ವಂ ಯದಿ ರಾಜಾ ನ ಪಾಲಯೇತ್ ॥೨೪॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ಜಗತ್ತು (ಪ್ರಜೆಗಳು) ಭಯಭೀತವಾಗುತ್ತಿತ್ತು. ಉದ್ವಿಗ್ನವಾದ ಮನಸ್ಸಿ

ನಿಂದ ಕೂಡಿರುತ್ತಿತ್ತು. ಸರ್ವತ್ರ ಹಾಹಾಕಾರಧ್ವನಿಗಳೇ ಕೇಳಿಬರುತ್ತಿದ್ದುವು. ಬುದ್ಧಿಯು ಶೂನ್ಯವಾಗಿ ಕ್ಷಣಮಾತ್ರದಲ್ಲಿ ಸರ್ವವಿನಾಶವೂ ಆಗಿಬಿಡುತ್ತಿತ್ತು.

ನ ಸಂವತ್ಸರಸತ್ರಾಣಿ ತಿಷ್ಠೇಯುರಕುತೋಭಯಾಃ ।
ವಿಧಿವದ್ದಕ್ಷಿಣಾವನ್ತಿ ಯದಿ ರಾಜಾ ನ ಪಾಲಯೇತ್ ॥೨೫॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ವಿಧಿಪೂರ್ವಕವಾದ, ದಕ್ಷಿಣಾಯುಕ್ತವಾದ ವಾರ್ಷಿಕಸತ್ರಗಳನ್ನು ನಿರಾತಂಕ ವಾಗಿ ಬ್ರಾಹ್ಮಣನು ನಡೆಸುತ್ತಿರಲಿಲ್ಲ.

ಬ್ರಾಹ್ಮಣಾಶ್ಚತುರೋ ವೇದಾನ್ನಾಧೀಯೀರಂಸ್ತಪಸ್ವಿನಃ ।
ವಿದ್ಯಾಸ್ನಾತಾ ವ್ರತಸ್ನಾತಾ ಯದಿ ರಾಜಾ ನ ಪಾಲಯೇತ್ ॥೨೬॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ವಿದ್ಯೆಗಳನ್ನು ಓದಿ ಸ್ನಾತಕರಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುವ ತಪಸ್ವಿಗಳಾದ ಬ್ರಾಹ್ಮಣರು ನಾಲ್ಕು ವೇದಗಳನ್ನೂ ಅಧ್ಯಯನಮಾಡುತ್ತಲೇ ಇರಲಿಲ್ಲ.

ನ ಲಭೇದ್ಧರ್ಮಸಂಶ್ಲೇಷಂ ಹತವಿಪ್ರಹತೋ ಜನಃ ।
ಹರ್ತಾ ಸ್ವಸ್ಥೇನ್ದ್ರಿಯೋ ಗಚ್ಛೇದ್ಯದಿ ರಾಜಾ ನ ಪಾಲಯೇತ್ ॥೨೭॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ವಿನಾಶಹೊಂದಿದ ವಿಪ್ರರಿಂದಲೂ ಮತ್ತು ವಿನಾಶಹೊಂದಿದ ಜನರಿಂದಲೂ ಲೋಕವು ವ್ಯಾಪ್ತವಾಗಿ ಧರ್ಮದ ಸಂಬಂಧವನ್ನೇ ಕಡಿದುಕೊಳ್ಳುತ್ತಿತ್ತು. ಕಳ್ಳತನ-ಲೂಟಿ-ದರೋಡೆಗಳನ್ನು ಮಾಡುವವರು ತಮ್ಮ ಶರೀರಕ್ಕಾಗಲೀ ಮನಸ್ಸಿಗಾಗಲೀ ಯಾವ ವಿಧವಾದ ಆತಂಕವೂ ಇಲ್ಲದೆ ಧನ-ಕನಕ-ವಸ್ತು-ವಾಹನಾದಿಗಳನ್ನು ಕೊಳ್ಳೆಹೊಡೆದುಕೊಂಡು ಹೊರಟುಹೋಗುತ್ತಿದ್ದರು.

ಹಸ್ತಾದ್ಧಸ್ತಂ ಪರಿಮುಷೇದ್ಭಿದ್ಯೇರನ್ಸರ್ವಸೇತವಃ ।
ಭಯಾರ್ತಂ ವಿದ್ರವೇತ್ಸರ್ವಂ ಯದಿ ರಾಜಾ ನ ಪಾಲಯೇತ್ ॥೨೮॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡ ದಿದ್ದರೆ–ಕಳ್ಳರು ಮತ್ತು ದರೋಡೆಕೋರರು ಕೈಯಲ್ಲಿಟ್ಟುಕೊಂಡಿರುವ

ವಸ್ತುಗಳನ್ನೇ ಅಪಹರಿಸಿಕೊಂಡು ಹೊರಟುಹೋಗುತ್ತಿದ್ದರು. ಹಗಲು ದರೋಡೆಯನ್ನೇ ಮಾಡುತ್ತಿದ್ದರು. ಧರ್ಮವೆಂಬ ಸೇತುವೆಯೇ ಭಗ್ನವಾಗಿ ಬಿಡುತ್ತಿತ್ತು. ಯಾವ ಕಟ್ಟುಪಾಡುಗಳೂ ಇರುತ್ತಿರಲಿಲ್ಲ. ಭಯಪೀಡಿತವಾದ ಎಲ್ಲ ಜನಸಮೂಹವೂ ದಿಕ್ಕುಗಾಣದೇ ಪಲಾಯನಮಾಡುತ್ತಿತ್ತು.

ಅನಯಾಃ ಸಮ್ಪ್ರವರ್ತೇರನ್ಭವೇದ್ವೈ ವರ್ಣಸಂಕರಃ ।
ದುರ್ಭಿಕ್ಷಮಾವಿಶೇದ್ರಾಷ್ಟ್ರಂ ಯದಿ ರಾಜಾ ನ ಪಾಲಯೇತ್ ॥೨೯॥

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ–ಅನ್ಯಾಯ ಮತ್ತು ಅತ್ಯಾಚಾರಗಳು ಸರ್ವತ್ರ ವ್ಯಾಪ್ತವಾಗಿಬಿಡುತ್ತಿದ್ದುವು. ವರ್ಣಸಂಕರವುಂಟಾಗಿ ಅದರ ಫಲವಾಗಿ ರಾಷ್ಟ್ರದ ಎಲ್ಲೆಡೆಗಳಲ್ಲಿಯೂ ದುರ್ಭಿಕ್ಷವುಂಟಾಗುತ್ತಿದ್ದಿತು.

ವಿವೃತ್ಯ ಹಿ ಯಥಾಕಾಮಂ ಗೃಹದ್ವಾರಾಣಿ ಶೇರತೇ ।
ಮನುಷ್ಯಾ ರಕ್ಷಿತಾ ರಾಜ್ಞಾ ಸಮನ್ತಾದಕುತೋಭಯಾಃ ॥೩೦॥

ರಾಜನಿಂದ ಸಂರಕ್ಷಿಸಲ್ಪಡುವ ಪ್ರಜೆಗಳು ತಮ್ಮ ಸುತ್ತಲೂ ಯಾವ ವಿಧವಾದ ಭಯವೂ ಇಲ್ಲದವರಾಗಿರುತ್ತಾರೆ. ಮನೆಯ ಬಾಗಿಲುಗಳನ್ನು ತೆರೆದುಕೊಂಡೇ ರಾತ್ರಿಯ ವೇಳೆಯಲ್ಲಿ ನಿರಾತಂಕವಾಗಿ ಮಲಗುತ್ತಾರೆ.

ನಾಕ್ರುಷ್ಟಂ ಸಹತೇ ಕಶ್ಚಿತ್ಕುತೋ ವಾ ಹಸ್ತಲಾಘವಮ್ ।
ಯದಿ ರಾಜಾ ನ ಸಮ್ಯಗ್ಗಾಂ ರಕ್ಷಯತ್ಯಪಿ ಧಾರ್ಮಿಕಃ ॥೩೧॥

ಧರ್ಮಾತ್ಮನಾದ ರಾಜನು ಒಂದು ವೇಳೆ ಈ ಭೂಮಂಡಲವನ್ನು ಧರ್ಮದಿಂದ ಪರಿಪಾಲನೆ ಮಾಡದಿದ್ದಲ್ಲಿ–ಒಬ್ಬನು ಬಯ್ಯುವುದನ್ನು ಮತ್ತೊಬ್ಬನು ಸಹಿಸಿಕೊಳ್ಳುತ್ತಿರಲಿಲ್ಲ. ಹೀಗಿರುವಾಗ ಒಬ್ಬನ ಪ್ರಹಾರವನ್ನು ಮತ್ತೊಬ್ಬನು ಹೇಗೆ ತಾನೇ ಸಹಿಸಿಕೊಳ್ಳುತ್ತಿದ್ದನು? (ಸಮಾಜದಲ್ಲಿ ದುಷ್ಟರೂ ಇರುತ್ತಾರೆ ; ಸತ್ಪುರುಷರೂ ಇರುತ್ತಾರೆ. ದುಷ್ಟನು ನಿಂದಿಸಿದರೆ ಸತ್ಪುರುಷನು ಅವನನ್ನು ನಿಂದಿಸಹೋಗುವುದಿಲ್ಲ. ಆದಷ್ಟೂ ಸಹಿಸಿಕೊಳ್ಳು ತ್ತಾನೆ. ತಾನೇ ಬಲಪ್ರಯೋಗಮಾಡಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಹೋಗುವುದಿಲ್ಲ. ಮಾತಿಗೆ ಮಾತು ಬೆಳೆದು ಜಗಳಕ್ಕೆ ಕಾರಣವಾಗುತ್ತದೆ. ಆದುದರಿಂದ ಸತ್ಪುರುಷನಾದವನು ರಾಜನಲ್ಲಿ ಮೊರೆಯಿಡುತ್ತಾನೆ. ನ್ಯಾಯ

ವನ್ನು ದೊರಕಿಸಿಕೊಳ್ಳುತ್ತಾನೆ. ಹಸ್ತಪ್ರಹಾರಕ್ಕೂ ಇದೇ ಅನ್ವಯಿಸುತ್ತದೆ. ಒಂದು ವೇಳೆ ರಾಜನೇ ಇಲ್ಲದಿದ್ದಲ್ಲಿ ಸತ್ಪುರುಷರೆಲ್ಲರೂ ದುಷ್ಟರಿಂದ ಪ್ರಹಾರಗಳನ್ನು ವಿಧಿಯಿಲ್ಲದೇ ಅನುಭವಿಸಬೇಕಾಗುತ್ತಿದ್ದಿತು. ಅಥವಾ ತಾವೂ ದೌಷ್ಟ್ಯವನ್ನೇ ಅನುಸರಿಸಬೇಕಾಗಿದ್ದಿತು. ದೇಶದಲ್ಲಿ ಶಾಂತಿಯೆಂಬುದೇ ಇರುತ್ತಿರಲಿಲ್ಲ. ಪ್ರತಿಯೊಬ್ಬರೂ ಸಹನೆಗೆಟ್ಟು ಕ್ರೌರ್ಯದಿಂದ ವರ್ತಿಸುತ್ತಿದ್ದರು. ಧರ್ಮಾತ್ಮನಾದ ರಾಜನು ಸತ್ಪುರುಷರನ್ನು ರಕ್ಷಿಸುತ್ತಾನೆ. ದುಷ್ಟರನ್ನು ಶಿಕ್ಷಿಸುತ್ತಾನೆ. ಆದುದರಿಂದ ಒಬ್ಬನಿಗೆ ತೊಂದರೆಯಾದರೆ ಅವನು ರಾಜನಿಗೆ ದೂರುಹೇಳುವನೇ ಹೊರತು ಪ್ರತಿಗೆ ಪ್ರತಿಯನ್ನು ಮಾಡಲು ಹೋಗುವುದಿಲ್ಲ.)

ಸ್ತ್ರಿಯಶ್ಚಾಪುರುಷಾ ಮಾರ್ಗಂ ಸರ್ವಾಲಙ್ಕಾರಭೂಷಿತಾಃ ।
ನಿರ್ಭಯಾಃ ಪ್ರತಿಪದ್ಯನ್ತೇ ಯದಿ ರಕ್ಷತಿ ಭೂಮಿಪಃ ॥೩೨॥

ರಾಜನಾದವನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದರೆ–ಸ್ತ್ರೀಯರು ಸರ್ವಾಲಂಕಾರಭೂಷಿತೆಯರಾಗಿ ಯಾವನೊಬ್ಬ ಪುರುಷನನ್ನೂ ಅಥವಾ ಗಂಡನನ್ನೂ ಜೊತೆಯಲ್ಲಿ ಕರೆದುಕೊಳ್ಳದಿದ್ದರೂ ನಿರ್ಭಯವಾಗಿ ರಾಜಮಾರ್ಗಗಳಲ್ಲಿ ಹೋಗುತ್ತಿರುತ್ತಾರೆ. (ಹೀಗೆ ಸ್ತ್ರೀಯರು ಒಂಟಿಯಾಗಿ ಯಾವ ರಾಜ್ಯದಲ್ಲಿ ಪ್ರಯಾಣಮಾಡಲು ಸಾಧ್ಯವಾಗುವುದಿಲ್ಲವೋ–ಆ ರಾಜ್ಯದ ರಾಜಶಾಸನವು ಶಿಥಿಲವಾಗಿದೆಯೆಂದು ಭಾವಿಸಬಹುದಾಗಿದೆ.)

ಧರ್ಮಮೇವ ಪ್ರಪದ್ಯನ್ತೇ ನ ಹಿಂಸನ್ತಿ ಪರಸ್ಪರಮ್ ।
ಅನುಗೃಹ್ಣನ್ತಿ ಚಾನ್ಯೋಽನ್ಯಂ ಯದಾ ರಕ್ಷತಿ ಭೂಮಿಪಃ ॥೩೩॥

ರಾಜನು ಧರ್ಮಮೂಲವಾಗಿ ರಾಜ್ಯವನ್ನು ಪರಿಪಾಲಿಸುತ್ತಿದ್ದರೆ–ಪ್ರಜೆಗಳೂ ಧರ್ಮಮಾರ್ಗವನ್ನೇ ಅನುಸರಿಸುತ್ತಾರೆ. ಪರಸ್ಪರವಾಗಿ ಕಚ್ಚಾಡುವುದಿಲ್ಲ. ಒಬ್ಬರಿಗೊಬ್ಬರು ಅನುಗ್ರಹಬುದ್ಧಿಯಿಂದ (ಪರಸ್ಪರ ಸಹಕಾರಬುದ್ಧಿಯಿಂದ) ಜೀವನವನ್ನು ನಿರ್ವಹಿಸುತ್ತಾರೆ.

ಯಜನ್ತೇ ಚ ಮಹಾಯಜ್ಞೈಸ್ತ್ರಯೋ ವರ್ಣಾಃ ಪೃಥಗ್ವಿಧೈಃ ।
ಯುಕ್ತಾಶ್ಚಾಧೀಯತೇ ವಿದ್ಯಾಂ ಯದಾ ರಕ್ಷತಿ ಭೂಮಿಪಃ ॥೩೪॥

ಯಾವಾಗ ರಾಜನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿರು

ತ್ತಾನೆಯೋ–ಆಗ ಮೂರು ವರ್ಣದವರೂ ನಾನಾವಿಧವಾದ ಮಹಾಯಜ್ಞ ಗಳಿಂದ ದೇವತೆಗಳನ್ನು ಆರಾಧಿಸುತ್ತಿರುತ್ತಾರೆ. ಏಕಾಗ್ರತೆಯಿಂದ ವಿದ್ಯೆಗಳನ್ನೂ ಅಧ್ಯಯನಮಾಡುತ್ತಿರುತ್ತಾರೆ.

ವಾರ್ತಾಮೂಲೋ ಹ್ಯಯಂ ಲೋಕಸ್ತ್ರಯ್ಯಾ ವೈ ಧಾರ್ಯತೇ ಸದಾ ।
ತತ್ಸರ್ವಂ ವರ್ತತೇ ಸಮ್ಯಗ್ಯದಾ ರಕ್ಷತಿ ಭೂಮಿಪಃ ॥೩೫॥

ಈ ಲೋಕವು ಕೃಷಿ-ವಾಣಿಜ್ಯ-ಗೋರಕ್ಷಣೆಗಳೇ ಮೊದಲಾದ ಉದ್ಯೋಗಮೂಲವಾಗಿದೆ. ಈ ಉದ್ಯೋಗಗಳಿಗೆ ಮೂಲಭೂತವಾದ ಮೂರು ವೇದಗಳಿಂದಲೇ ಈ ಜಗತ್ತು ಧರಿಸಲ್ಪಟ್ಟಿದೆ. (ವೇದವಿಹಿತವಾದ ಯಜ್ಞಗ್ಳಿಂದ ವೇದವಿಹಿತವಾದ ಧರ್ಮಾನುಸರಣೆಯಿಂದಲೇ ಜಗತ್ತು ಧರಿಸಲ್ಪಡುತ್ತದೆ.) ವಾರ್ತಾದಿಗಳೂ-ವೇದಧರ್ಮಗಳೂ ರಾಜನ ರಕ್ಷಣೆ ಯಿದ್ದರೆ ಚೆನ್ನಾಗಿ ನಡೆಯುತ್ತವೆ. ರಾಜನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದರೆ ಅಧ್ಯಯನ-ಅಧ್ಯಾಪನಗಳೂ ವೇದವಿಹಿತವಾದ ಯಜ್ಞ ಕರ್ಮಾನುಷ್ಠಾನಗಳೂ ನಡೆಯುತ್ತವೆ. ತತ್ಫಲವಾಗಿ ಮಳೆ-ಬೆಳೆಗಳೂ ಆಗಿ ಲೋಕವು ಸಂಪತ್ಸಮೃದ್ಧಿಯಿಂದ ಕೂಡಿರುತ್ತದೆ.

ಯದಾ ರಾಜಾ ಧುರಂ ಶ್ರೇಷ್ಠಾಮಾದಾಯ ವಹತಿ ಪ್ರಜಾಃ ।
ಮಹತಾ ಬಲಯೋಗೇನ ತದಾ ಲೋಕಃ ಪ್ರಸೀದತಿ ॥೩೬॥

ಯಾವಾಗ ರಾಜನು ವಿಶಾಲವಾದ ಸೈನ್ಯದ ಸಹಯೋಗದಿಂದ ಅತ್ಯಂತ ಭಾರಯುಕ್ತವಾದ (ದೊಡ್ಡದಾದ ಹೊಣೆಯಿಂದ ಕೂಡಿದ) ರಾಜ್ಯವನ್ನು ವಹಿಸಿಕೊಂಡು ಧರ್ಮದಿಂದ ರಾಜ್ಯಪಾಲನೆಯನ್ನು ಮಾಡುತ್ತಾನೆಯೋ– ಆಗ ಜಗತ್ತು (ಜನವು) ಪ್ರಸನ್ನವಾಗುತ್ತದೆ.

ಯಸ್ಯಾಭಾವೇನ ಭೂತಾನಾಮಭಾವಃ ಸ್ಯಾತ್ಸಮನ್ತತಃ ।
ಭಾವೇ ಚ ಭಾವೋ ನಿತ್ಯಂ ಸ್ಯಾತ್ಕಸ್ತಂ ನ ಪ್ರತಿಪೂಜಯೇತ್ ॥೩೭॥

ಯಾವ ರಾಜನ ಇಲ್ಲದಿರುವಿಕೆಯಿಂದ ಸರ್ವಪ್ರಕಾರದಿಂದಲೂ ಪ್ರಾಣಿ

ಗಳ ವಿನಾಶವುಂಟಾಗುವುದೋ ಮತ್ತು ಯಾವ ರಾಜನ ಇರುವಿಕೆಯಿಂದ ಪ್ರಪಂಚದ ಪ್ರಾಣಿಗಳ ಅಸ್ತಿತ್ವವಿರುತ್ತದೆಯೋ–ಅಂತಹ ಪ್ರಪಂಚದ ಭಾವಾಭಾವಗಳಿಗೆ ಕಾರಣನಾದ ರಾಜನನ್ನು ಯಾರು ತಾನೇ ಪುರಸ್ಕರಿಸು ವುದಿಲ್ಲ?

ತಸ್ಯ ಯೋ ವಹತೇ ಭಾರಂ ಸರ್ವಲೋಕಭಯಾವಹಮ್ ।
ತಿಷ್ಠನ್ಪ್ರಿಯಹಿತೇ ರಾಜ್ಞ ಉಭೌ ಲೋಕಾವಿಮೌ ಜಯೇತ್ ॥೩೮॥

ಯಾವನು ಇಂತಹ ರಾಜನಿಗೆ ಪ್ರಿಯವನ್ನುಂಟುಮಾಡುವುದರಲ್ಲಿಯೂ ಮತ್ತು ಹಿತವನ್ನುಂಟುಮಾಡುವುದರಲ್ಲಿಯೂ ನಿರತನಾಗಿದ್ದು ಸರ್ವಲೋಕಕ್ಕೂ ಭಯವನ್ನುಂಟುಮಾಡುವಂತಹ ರಾಜಶಾಸನದ ಭಾರವನ್ನು ವಹಿಸುತ್ತಾನೆಯೋ–ಅವನು ಇಹ-ಪರಗಳೆರಡನ್ನೂ ಜಯಿಸುತ್ತಾನೆ. (ರಾಜನ ಆಜ್ಞೆಗಳನ್ನು ಕಾರ್ಯರೂಪಕ್ಕೆ ತರುವ ಅಮಾತ್ಯರೇ ಮೊದಲಾದ ಅಧಿಕಾರಿಗಳಿಗೂ ಸದ್ಗತಿಯು ಪ್ರಾಪ್ತವಾಗುತ್ತದೆ.)

ಯಸ್ತಸ್ಯ ಪುರುಷಃ ಪಾಪಂ ಮನಸಾಪ್ಯನುಚಿನ್ತಯೇತ್ ।
ಅಸಂಶಯಮಿಹ ಕ್ಲಿಷ್ಟಃ ಪ್ರೇತ್ಯಾಪಿ ನರಕಂ ವ್ರಜೇತ್ ॥೩೯॥

ಇಂತಹ ಧರ್ಮಾತ್ಮನಾದ ರಾಜನ ವಿಷಯದಲ್ಲಿ ಯಾವನು ಮನಸ್ಸಿನಿಂದಲಾದರೂ ಅನಿಷ್ಟವನ್ನು ಬಯಸುವನೋ–ಅಂತಹವನು ಈ ಲೋಕದಲ್ಲಿಯೂ ಅನೇಕ ವಿಧವಾದ ಕ್ಲೇಶಗಳನ್ನು ಅನುಭವಿಸುತ್ತಾನೆ. ಅವಸಾನಾನಂತರದಲ್ಲಿ ನರಕಕ್ಕೂ ಹೋಗುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ನ ಹಿ ಜಾತ್ವವಮನ್ತವ್ಯೋ ಮನುಷ್ಯ ಇತಿ ಭೂಮಿಪಃ ।
ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ ॥೪೦॥

ನಮ್ಮಂತೆಯೇ ರಾಜನೂ ಒಬ್ಬ ಮನುಷ್ಯನಾಗಿರುವನೆಂದು ಭಾವಿಸಿ ಅವನನ್ನು ಯಾವಾಗಲೂ ಅವಹೇಳನಮಾಡಬಾರದು. ಏಕೆಂದರೆ : ರಾಜನೆಂಬುವನು ಮನುಷ್ಯರೂಪದಲ್ಲಿರುವ ಮಹಾದೇವತೆಯೇ ಆಗಿದ್ದಾನೆ. (ಮಹಾದೇವನೇ ಈ ಲೋಕದಲ್ಲಿ ರಾಜರೂಪವನ್ನು ಧರಿಸಿ ಉಪಸ್ಥಿತ ನಾಗಿದ್ದಾನೆ.)

ಕುರುತೇ ಪಞ್ಚರೂಪಾಣಿ ಕಾಲಯುಕ್ತಾನಿ ಯಃ ಸದಾ ।
ಭವತ್ಯಗ್ನಿಸ್ತಥಾದಿತ್ಯೋ ಮೃತ್ಯುರ್ವೈಶ್ರವಣೋ ಯಮಃ ॥೪೧॥

ಮಹಾದೇವತೆಯೆಂದು ಹೇಳಲು ಕಾರಣವಿಲ್ಲದೇ ಇಲ್ಲ. ರಾಜನೊಬ್ಬನೇ ಸಮಯಾನುಸಾರವಾಗಿ ಐದು ರೂಪಗಳನ್ನು ಧರಿಸಿ ಕಾರ್ಯ ಮಾಡುತ್ತಾನೆ. ಒಮ್ಮೆ ಅಗ್ನಿಯಾಗುತ್ತಾನೆ ; ಮತ್ತೊಮ್ಮೆ ಸೂರ್ಯನಾಗುತ್ತಾನೆ ; ಮೃತ್ಯುವಾಗುತ್ತಾನೆ ; ಕುಬೇರನಾಗುತ್ತಾನೆ ; ಯಮಧರ್ಮನೂ ಆಗುತ್ತಾನೆ.

ಯದಾ ಹ್ಯಾಸೀದತಃ ಪಾಪಾನ್ದಹತ್ಯುಗ್ರೇಣ ತೇಜಸಾ ।
ಮಿಥ್ಯೋಪಚರಿತೋ ರಾಜಾ ತದಾ ಭವತಿ ಪಾವಕಃ ॥೪೨॥

ಮಿಥ್ಯಾವ್ಯವಹಾರಗಳಿಂದ ವಂಚಿತನಾದ ರಾಜನು ತನ್ನ ಸಮೀಪಕ್ಕೆ ಬರುವ ಪಾಪಿಷ್ಠರನ್ನು ಪ್ರಖರವಾದ ತೇಜಸ್ಸಿನಿಂದ ಯಾವಾಗ ದಹಿಸಿ ಬಿಡುವನೋ–ಆಗ ಅವನು ಸಾಕ್ಷಾತ್ ಅಗ್ನಿಸ್ವರೂಪನೇ ಆಗುತ್ತಾನೆ. (ದುಷ್ಟರಿಂದ ವಂಚಿತನಾದ ರಾಜನು ತನ್ನನ್ನು ವಂಚಿಸಿದ ದುಷ್ಟರು ಸಿಕ್ಕಿಬಿದ್ದರೆಂದರೆ ಉರಿದುಬೀಳುತ್ತಾನೆ. ದುಷ್ಟರನ್ನು ಸುಟ್ಟುಬಿಡುತ್ತಾನೆ. ಆಗ ಅವನು ಸಾಕ್ಷಾತ್ ಯಜ್ಞೇಶ್ವರನೇ ಆಗುತ್ತಾನೆ.)

ಯದಾ ಪಶ್ಯತಿ ಚಾರೇಣ ಸರ್ವಭೂತಾನಿ ಭೂಮಿಪಃ ।
ಕ್ಷೇಮಂ ಚ ಕೃತ್ವಾ ವ್ರಜತಿ ತದಾ ಭವತಿ ಭಾಸ್ಕರಃ ॥೪೩॥

ಯಾವಾಗ ರಾಜನು ಗೂಢಚಾರರ ಮೂಲಕವಾಗಿ ತನ್ನ ರಾಜ್ಯದ ಎಲ್ಲ ಪ್ರದೇಶಗಳನ್ನೂ ನೋಡುತ್ತಿರುತ್ತಾನೆಯೋ ಮತ್ತು ಆ ಚಾರರ ಮೂಲಕವಾಗಿಯೇ ದೇಶದ ಪರಿಸ್ಥಿತಿಯನ್ನು ಚೆನ್ನಾಗಿ ಅರಿತು ಪ್ರಜೆಗಳ ಯೋಗ-ಕ್ಷೇಮಗಳನ್ನು ನೋಡಿಕೊಳ್ಳುತ್ತಿರುವನೋ–ಆ ಸಮಯದಲ್ಲವನು ಸೂರ್ಯನೇ ಆಗುತ್ತಾನೆ.

ಅಶುಚೀಂಶ್ಚ ಯದಾ ಕ್ರುದ್ಧಃ ಕ್ಷಿಣೋತಿ ಶತಶೋ ನರಾನ್ ।
ಸಪುತ್ರಪೌತ್ರಾನ್ಸಾಮಾತ್ಯಾಂಸ್ತದಾ ಭವತಿ ಸೋಽನ್ತಕಃ ॥೪೪॥

ಯಾವಾಗ ರಾಜನು ಪರಮಕ್ರುದ್ಧನಾಗಿ ಪುತ್ರ-ಪೌತ್ರ-ಅಮಾತ್ಯ

ಸಹಿತರಾದ ನೂರಾರು ದುರಾಚಾರಿಗಳನ್ನು (ಶತ್ರುರಾಜರನ್ನು) ಸಂಹಾರ ಮಾಡುವನೋ–ಆ ಸಮಯದಲ್ಲವನು ಮೃತ್ಯುವೇ ಆಗುತ್ತಾನೆ.

ಯದಾ ತ್ವಧಾರ್ಮಿಕಾನ್ಸರ್ವಾಂಸ್ತೀಕ್ಷ್ಣೈರ್ದಣ್ಡೈರ್ನಿಯಚ್ಛತಿ ।
ಧಾರ್ಮಿಕಾಂಶ್ಚಾನುಗೃಹ್ಣಾತಿ ಭವತ್ಯಥ ಯಮಸ್ತದಾ ॥೪೫॥

ಯಾವಾಗ ರಾಜನು ಅಧರ್ಮಿಷ್ಠರಾದ ಸರ್ವಜನರನ್ನೂ ಉಗ್ರವಾದ ಶಿಕ್ಷೆಗಳಿಂದ ಸನ್ಮಾರ್ಗಪ್ರವೃತ್ತರನ್ನಾಗಿ ಮಾಡುವನೋ ಮತ್ತು ಧಾರ್ಮಿಕ ರಾದವರನ್ನು ಅನುಗ್ರಹಬುದ್ಧಿಯಿಂದ ನೋಡುವನೋ–ಆ ಸಮಯದಲ್ಲಿ ಯಮಧರ್ಮನೇ ಆಗುತ್ತಾನೆ.

ಯದಾ ತು ಧನಧಾರಾಭಿಸ್ತರ್ಪಯತ್ಯುಪಕಾರಿಣಃ ।
ಆಚ್ಛಿನತ್ತಿ ಚ ರತ್ನಾನಿ ವಿವಿಧಾನ್ಯಪಕಾರಿಣಾಮ್ ॥೪೬॥

ಶ್ರಿಯಂ ದದಾತಿ ಕಸ್ಮೈಚಿತ್ಕಸ್ಮಾಚ್ಚಿದಪಕರ್ಷತಿ ।
ತದಾ ವೈಶ್ರವಣೋ ರಾಜಾ ಲೋಕೇ ಭವತಿ ಭೂಮಿಪಃ ॥೪೭॥

ಯಾವಾಗ ರಾಜನು ಉಪಕಾರಮಾಡಿದವರ ಮೇಲೆ ಧನದ ಮಳೆ ಯನ್ನೇ ಸುರಿಸುವನೋ (ವಿಶೇಷವಾದ ಧನೋಪಹಾರಗಳಿಂದ ಉಪಕಾರಿ ಗಳನ್ನು ತೃಪ್ತಿಪಡಿಸುವನೋ), ಅಪಕಾರಿಗಳ (ಶತ್ರುಗಳ) ವಿಧ-ವಿಧವಾದ ರತ್ನಗಳನ್ನು (ಐಶ್ವರ್ಯವನ್ನು) ತನ್ನ ಭುಜಬಲ-ಪರಾಕ್ರಮಗಳಿಂದ ಅಪಹರಿಸಿಕೊಂಡು ಬರುವನೋ, ರಾಜ್ಯದ ಹಿತಚಿಂತಕನಿಗೆ ಐಶ್ವರ್ಯವನ್ನೇ ತುಂಬಿಕೊಡುವನೋ, ರಾಜದ್ರೋಹಿಯ ಐಶ್ವರ್ಯವೆಲ್ಲವನ್ನೂ ಅಪಹರಿ ಸುವನೋ–ಆಗ ಆ ರಾಜನು ಲೋಕದಲ್ಲಿ ಕುಬೇರನೇ ಆಗುತ್ತಾನೆ.

ನಾಸ್ಯಾಪವಾದೇ ಸ್ಥಾತವ್ಯಂ ದಕ್ಷೇಣಾಕ್ಲಿಷ್ಟಕರ್ಮಣಾ ।
ಧರ್ಮ್ಯಮಾಕಾಂಕ್ಷತಾ ಲೋಕಮೀಶ್ವರಸ್ಯಾನಸೂಯತಾ ॥೪೮॥

ಯಾವನು ಎಲ್ಲ ಕಾರ್ಯಗಳಲ್ಲಿಯೂ ನಿಪುಣನಾಗಿರುವನೋ, ಅನಾಯಾಸವಾಗಿ ಕಾರ್ಯಗಳನ್ನು ಸಾಧಿಸಲು ಸಮರ್ಥನಾಗಿರುವನೋ, ಲೋಕದಲ್ಲಿ ಧರ್ಮಯುಕ್ತವಾದ ಜೀವನವನ್ನು ನಡೆಸುವ ಇಚ್ಛೆಯಿಂದಿರು ವನೋ ಮತ್ತು ಅಸೂಯಾರಹಿತನಾಗಿರುವನೋ–ಅಂತಹ ಮನುಷ್ಯನು ತನ್ನ ರಾಜ್ಯಕ್ಕೆ ಈಶ್ವರನಾದ ರಾಜನ ನಿಂದೆಯಲ್ಲಿ ತೊಡಗಬಾರದು.

ನ ಹಿ ರಾಜ್ಞಃ ಪ್ರತೀಪಾನಿ ಕುರ್ವನ್ಸುಖಮವಾಪ್ನುಯಾತ್ ।
ಪುತ್ರೋ ಭ್ರಾತಾ ವಯಸ್ಯೋ ವಾ ಯದ್ಯಪ್ಯಾತ್ಮಸಮೋ ಭವೇತ್ ॥

ರಾಜನಿಗೆ ವಿರುದ್ಧವಾಗಿ ಕಾರ್ಯಮಾಡುವವನು ರಾಜನ ಪುತ್ರನೇ ಆಗಿರಲಿ ; ಸೋದರನೇ ಆಗಿರಲಿ ; ಮಿತ್ರನೇ ಆಗಿರಲಿ ; ರಾಜನಿಗೆ ಸಮಾನನೇ ಆಗಿರಲಿ–ಎಲ್ಲರೂ ಕಷ್ಟಕ್ಕೆ ಒಳಗಾಗುತ್ತಾರೆ. ಸುಖವನ್ನು ಹೊಂದುವುದಿಲ್ಲ.

ಕುರ್ಯಾತ್ಕೃಷ್ಣಗತಿಃ ಶೇಷಂ ಜ್ವಲಿತೋಽನಿಲಸಾರಥಿಃ ।
ನ ತು ರಾಜಾಭಿಪನ್ನಸ್ಯ ಶೇಷಂ ಕ್ವಚನ ವಿದ್ಯತೇ ॥೫೦॥

ಗಾಳಿಯ ಸಹಾಯದಿಂದ ಪ್ರಜ್ವಲಿಸುತ್ತಿರುವ ಧೂಮಕೇತುವಾದ ಯಜ್ಞೇಶ್ವರನಾದರೂ ಸ್ವಲ್ಪಭಾಗವನ್ನು ದಹಿಸದೇ ಬಿಟ್ಟುಬಿಡಬಹುದು. ಆದರೆ ರಾಜನಿಗೆ ಅಪರಾಧವನ್ನೆಸಗಿದವನ ಶೇಷವು ಸ್ವಲ್ಪವಾದರೂ ಉಳಿಯುವುದಿಲ್ಲ. (ರಾಜದ್ರೋಹಿಯ ಕುಲವೇ ವಿನಾಶವಾಗಿಹೋಗುತ್ತದೆ.)

ತಸ್ಯ ಸರ್ವಾಣಿ ರಕ್ಷ್ಯಾಣಿ ದೂರತಃ ಪರಿವರ್ಜಯೇತ್ ।
ಮೃತ್ಯೋರಿವ ಜುಗುಪ್ಸೇತ ರಾಜಸ್ವಹರಣಾನ್ನರಃ ॥೫೧॥

ಮಾನವನು ರಾಜನ ರಕ್ಷಣೆಗೊಳಪಟ್ಟ ಸರ್ವವಸ್ತುಗಳಿಂದಲೂ ದೂರವಿರಬೇಕು. (ರಾಜನ ವಸ್ತುವೆಂದು ತಿಳಿದೊಡನೆಯೇ ದೂರಸರಿಯಬೇಕು.) ಅದರ ಹತ್ತಿರವೂ ಸುಳಿಯಬಾರದು. ಮಾನವನು ಮೃತ್ಯುವನ್ನು ನೆನೆದರೆ ಎಷ್ಟು ಜುಗುಪ್ಸೆಪಡುವನೋ (ಭಯಪಡುವನೋ) ಅದೇ ರೀತಿಯಲ್ಲಿ ರಾಜಧನಾಪಹಾರದಲ್ಲಿಯೂ ಭಯಪಡಬೇಕು. ರಾಜನ ಸ್ವತ್ತನ್ನು ಅಪಹರಿಸುವುದೂ, ಮೃತ್ಯುವನ್ನು ಅಪ್ಪಿಕೊಳ್ಳುವುದೂ ಒಂದೇ ಆಗಿರುತ್ತದೆ. ಮೃತ್ಯುವಿಗೆ ಹೆದರುವಂತೆ ರಾಜಧನಾಪಹಾರಕ್ಕೂ ಭಯಪಡಬೇಕು. ರಾಜ್ಯಕ್ಕೆ–ರಾಷ್ಟ್ರಕ್ಕೆ ಯಾವುದೇ ವಿಧದಲ್ಲಿ ಹಾನಿಯುಂಟುಮಾಡುವ ಕ್ರಿಯೆಗಳು ಎಂದರೆ ಲಂಚ ತೆಗೆದುಕೊಳ್ಳುವುದು–ಮುಂತಾದುವುಗಳೂ ರಾಜಸ್ವಾಪಹಾರವೇ ಆಗುತ್ತವೆ. ಇವುಗಳಿಂದ ದೂರವಿರಬೇಕು.

ನಶ್ಯೇದಭಿಮೃಶನ್ಸದ್ಯೋ ಮೃಗಃ ಕೂಟಮಿವ ಸ್ಪೃಶನ್ ।
ಆತ್ಮಸ್ವಮಿವ ರಕ್ಷೇತ ರಾಜಸ್ವಮಿಹ ಬುದ್ಧಿಮಾನ್ ॥೫೨॥

ಮೃಗವು ತನ್ನನ್ನು ಹಿಡಿಯಲು ಸಿದ್ಧಪಡಿಸಿರುವ ಬೋನು ಮುಂತಾದ ಬಂಧನಸಾಮಗ್ರಿಗಳನ್ನು ಮುಟ್ಟಿದೊಡನೆಯೇ ಅದರಲ್ಲಿ ಸಿಕ್ಕಿಕೊಂಡು ವಿನಾಶಹೊಂದುವಂತೆ–ರಾಜನ ಸ್ವತ್ತನ್ನು ಮುಟ್ಟಿದವನೂ ವಿನಾಶಹೊಂದುತ್ತಾನೆ. ಆದುದರಿಂದ ಬುದ್ಧಿವಂತನಾದವನು ತನ್ನ ಸ್ವತ್ತನ್ನು ರಕ್ಷಿಸುವಂತೆಯೇ ರಾಜನ ಸ್ವತ್ತನ್ನೂ ಜಾಗರೂಕತೆಯಿಂದ ಸಂರಕ್ಷಿಸಬೇಕು. (ರಾಜಧನವನ್ನು ತಾನೂ ಮುಟ್ಟಬಾರದು. ಬೇರೆಯವರೂ ಮುಟ್ಟದಂತೆ ನೋಡಿಕೊಳ್ಳಬೇಕು. ಅಥವಾ ತನ್ನ ಸ್ವತ್ತನ್ನು ಹೇಗೆ ಸ್ವಲ್ಪವೂ ಪೋಲಾಗದ ರೀತಿಯಲ್ಲಿ, ಹಾಳಾಗದ ರೀತಿಯಲ್ಲಿ ಎಚ್ಚರಿಕೆಯಿಂದ ಕಾಪಾಡಿಕೊಳ್ಳುತ್ತಾನೆಯೋ–ಅಂತೆಯೇ ರಾಜನ, ರಾಷ್ಟ್ರದ ಸ್ವತ್ತನ್ನೂ ಕಾಪಾಡಬೇಕು.)

ಮಹಾನ್ತಂ ನರಕಂ ಘೋರಮಪ್ರತಿಷ್ಠಮಚೇತನಮ್ ।
ಪತನ್ತಿ ಚಿರರಾತ್ರಾಯ ರಾಜವಿತ್ತಾಪಹಾರಿಣಃ ॥೫೩॥

ರಾಜನ ಸ್ವತ್ತನ್ನು ಅಪಹರಿಸುವ ಮನುಷ್ಯರು ಇಹದಲ್ಲಿ ವಿನಾಶಹೊಂದುವುದು ಮಾತ್ರವಲ್ಲದೇ–ದೀರ್ಘಕಾಲಾವಧಿಯ ವಿಶಾಲವಾದ, ಭಯಂಕರವಾದ, ಅಸ್ಥಿರವಾದ (ನಿಲ್ಲಲು ಸಾಧ್ಯವಿಲ್ಲದ), ಚೇತನಾಶಕ್ತಿಯನ್ನೇ ವಿಹೀನಗೊಳಿಸುವ ನರಕದಲ್ಲಿಯೂ ಬೀಳುತ್ತಾರೆ.

ಭೋಜ, ವಿರಾಟ್, ಸಮ್ರಾಟ್, ಕ್ಷತ್ರಿಯ, ಭೂಪತಿ ಮತ್ತು ನೃಪ–ಇವೇ ಮುಂತಾದ ಶ್ರೇಷ್ಠವಾದ ಶಬ್ದಗಳಿಂದ ಸ್ತುತಿಸಲ್ಪಡುವ ಭೂಪಾಲನನ್ನು ಯಾರು ತಾನೇ ಸತ್ಕರಿಸಿ ಪೂಜಿಸುವುದಿಲ್ಲ? ಆದುದರಿಂದ ತನ್ನ ಔನ್ನತ್ಯವನ್ನು ಅಪೇಕ್ಷಿಸುವ ಮೇಧಾವಿಯಾದ, ಸ್ಮರಣಶಕ್ತಿಸಂಪನ್ನನಾದ, ಕಾರ್ಯದಕ್ಷನಾದ ಪುರುಷನು–ಜಿತೇಂದ್ರಿಯನಾಗಿ, ಜಿತಮನಸ್ಕನಾಗಿ ಧಾರ್ಮಿಕನಾದ ರಾಜನನ್ನು ಆಶ್ರಯಿಸಬೇಕು. ರಾಜನಾದವನು ಕೃತಜ್ಞನಾದ, ವಿದ್ವಾಂಸನಾದ ಕ್ಷುದ್ರಬುದ್ಧಿಯಿಲ್ಲದ, ಜಿತೇಂದ್ರಿಯನಾದ, ಸರ್ವದಾ ಧರ್ಮಪರಾಯಣನಾದ, ನೀತಿಜ್ಞನಾದ, ದೃಢವಾದ ರಾಜಭಕ್ತಿಯಿಂದ ಯುಕ್ತನಾದ ಮಂತ್ರಿಯನ್ನು ಗೌರವಿಸಿ ಸತ್ಕರಿಸಬೇಕು. ಅಂತೆಯೇ ದೃಢವಾದ ರಾಜಭಕ್ತಿಯುಳ್ಳ, ಯುದ್ಧಶಾಸ್ತ್ರನಿಪುಣನಾದ, ಧರ್ಮಜ್ಞನಾದ, ಜಿತೇಂದ್ರಿಯನಾದ, ಶೂರನಾದ, ಶ್ರೇಷ್ಠವಾದ ಕಾರ್ಯಗಳನ್ನು

ಮಾಡುವ–'ನಾನೊಬ್ಬನೇ ಈ ಕಾರ್ಯವನ್ನು ಮಾಡಬಲ್ಲೆನು. ಈ ಕಾರ್ಯಕ್ಕೆ ಬೇರೆಯವರ ಸಹಾಯ ಸಂಪತ್ತಿಗಳು ಬೇಕಾಗಿಲ್ಲ'–ಎಂಬ ಅಭಿಮಾನದ ಕೆಚ್ಚಿನಿಂದ ಕೂಡಿರುವ ವೀರನನ್ನು ಸೇನಾಪತಿಯನ್ನಾಗಿ ಮಾಡಿಕೊಳ್ಳಬೇಕು.

ರಾಜಾ ಪ್ರಗಲ್ಭಂ ಕುರುತೇ ಮನುಷ್ಯಂ
ರಾಜಾ ಕೃತಂ ವೈ ಕುರುತೇ ಮನುಷ್ಯಮ್ ।
ರಾಜಾಭಿಪನ್ನಸ್ಯ ಕುತಃ ಸುಖಾನಿ
ರಾಜಾಭ್ಯುಪೇತಂ ಸುಖಿನಂ ಕರೋತಿ ॥೫೮॥

ರಾಜಾ ಪ್ರಜಾನಾಂ ಹೃದಯಂ ಗರೀಯೋ
ಗತಿಃ ಪ್ರತಿಷ್ಠಾ ಸುಖಮುತ್ತಮಂ ಚ ।
ಸಮಾಶ್ರಿತಾ ಲೋಕಮಿಮಂ ಪರಂ ಚ
ಜಯನ್ತಿ ಸಮ್ಯಕ್ಪುರುಷಾ ನರೇನ್ದ್ರ ॥೫೯॥

ರಾಜನು ಮನುಷ್ಯನನ್ನು (ತನಗೆ ಆಪ್ತನಾದವನನ್ನು) ಧೃಷ್ಟನನ್ನಾಗಿಯೂ ಬಲಿಷ್ಠನನ್ನಾಗಿಯೂ ಮಾಡುತ್ತಾನೆ. ರಾಜನು ಮನುಷ್ಯನನ್ನು (ತನಗೆ ಅಹಿತನಾದವನನ್ನು) ಕೃಶನನ್ನಾಗಿ (ದುರ್ಬಲನನ್ನಾಗಿ) ಮಾಡುತ್ತಾನೆ. ರಾಜನ ಎದುರಾಳಿಗೆ ಸುಖವೆಂಬುದೆಲ್ಲಿದೆ? ರಾಜನು ತನಗೆ ಶರಣು ಬಂದವರನ್ನು ಸುಖಿಯನ್ನಾಗಿ ಮಾಡುತ್ತಾನೆ.

ರಾಜನು ಪ್ರಜೆಗಳಿಗೆ ಗುರುತರವಾದ ಹೃದಯವಿದ್ದಂತೆ. ರಾಜನೇ ಉತ್ತಮಗತಿಯು (ಆಶ್ರಮಸ್ಥಾನವು.) ಉತ್ತಮವಾದ ಪ್ರತಿಷ್ಠೆ-ಗೌರವಗಳೂ, ಶ್ರೇಷ್ಠವಾದ ಸುಖವೂ ರಾಜನಿಂದಲೇ ಲಭಿಸುತ್ತವೆ. ರಾಜನನ್ನು ಆಶ್ರಯಿಸಿದ ಜನರು ಈ ಲೋಕವನ್ನೂ ಮತ್ತು ಪರಲೋಕವನ್ನೂ ಸಂಪೂರ್ಣವಾಗಿ ಜಯಿಸುತ್ತಾರೆ. (ಇಹದಲ್ಲಿ ಸುಖವನ್ನೂ ಪರದಲ್ಲಿ ಪುಣ್ಯತಮಲೋಕಗಳನ್ನೂ ಪಡೆಯುತ್ತಾರೆ.)

ನರಾಧಿಪಶ್ಚಾಪ್ಯನುಶಿಷ್ಯ ಮೇದಿನೀಂ
ದಮೇನ ಸತ್ಯೇನ ಚ ಸೌಹೃದೇನ ।

ಮಹದ್ಭಿರಿಷ್ಟ್ವಾ ಕ್ರತುಭಿರ್ಮಹಾಯಶಾ-
ಸ್ತ್ರಿವಿಷ್ಟಪೇ ಸ್ಥಾನಮುಪೈತಿ ಶಾಶ್ವತಮ್ ॥೬೦॥

ನರಾಧಿಪನಾದ ರಾಜನೂ ಇಂದ್ರಿಯನಿಗ್ರಹದಿಂದಲೂ, ಸತ್ಯನಿಷ್ಠೆಯಿಂದಲೂ ಮತ್ತು ಸೌಹಾರ್ದಭಾವದಿಂದಲೂ ಭೂಮಿಯನ್ನು ಆಳುತ್ತಾ, ಮಹಾಯಾಗಗಳನ್ನು ಮಾಡಿ ದೇವತೆಗಳನ್ನು ಸಂತೃಪ್ತಿಗೊಳಿಸಿ, ಮಹಾಯಶೋವಂತನಾಗಿ ಅವಸಾನಾನಂತರದಲ್ಲಿ ಸ್ವರ್ಗದಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದುಕೊಳ್ಳುತ್ತಾನೆ."

ಯುಧಿಷ್ಠಿರ! ಬೃಹಸ್ಪತ್ಯಾಚಾರ್ಯರು ಹೀಗೆ ಹೇಳಿದನಂತರ ಕೋಸಲೇಶ್ವರನಾದ ವಸುಮನಸನು ಪ್ರಯತ್ನಪೂರ್ವಕವಾಗಿ ಪ್ರಜೆಗಳ ರಕ್ಷಣೆಯನ್ನು ಮಾಡತೊಡಗಿದನು."

೬೮ನೆಯ ಅಧ್ಯಾಯವು ಮುಗಿಯಿತು.

೬೯ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ಪ್ರಧಾನಕರ್ತವ್ಯಗಳು : ದಂಡನೀತಿಯಿಂದಲೇ ನಾಲ್ಕು ಯುಗಗಳ ಆವಿರ್ಭಾವ

ಜನಮೇಜಯಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಪಿತಾಮಹ! ರಾಜನು ಮಾಡಲೇಬೇಕಾದ ಕರ್ತವ್ಯಗಳ ವಿಷಯವಾಗಿ ನೀನು ಈಗಾಗಲೇ ಅನೇಕ ವಿಷಯಗಳನ್ನು ಹೇಳಿರುವೆ. ರಾಜನು ಮಾಡಬೇಕಾಗಿರುವ ಮತ್ತಾವ ಕರ್ತವ್ಯವು ಉಳಿದಿದೆ? ಇನ್ನೂ ಯಾವ ಯಾವ ಕಾರ್ಯಗಳನ್ನು ಅವನು ಮಾಡಬೇಕು? ಅದರಲ್ಲಿಯೂ ವಿಶೇಷವಾಗಿ ರಾಜನಾದವನು ದೇಶವನ್ನು ಹೇಗೆ ಸಂರಕ್ಷಣೆಮಾಡಬೇಕು? ಶತ್ರುಗಳನ್ನು ಹೇಗೆ ಜಯಿಸಬೇಕು? ಗುಪ್ತಚಾರರನ್ನು ಹೇಗೆ ಮತ್ತು ಯಾವ ಕಾರ್ಯಗಳಲ್ಲಿ ನಿಯೋಜಿಸಬೇಕು? ನಾಲ್ಕುವರ್ಣದವರಿಗೂ ರಾಜನ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ಹೇಗೆ ಹುಟ್ಟಿಸಬೇಕು? (ಯಾವ ಕಾರ್ಯವನ್ನು ಮಾಡುವುದರಿಂದ ನಾಲ್ಕು ವರ್ಣದವರೂ ರಾಜನ ವಿಷಯದಲ್ಲಿ ಸಂಪೂರ್ಣವಾದ ವಿಶ್ವಾಸವನ್ನಿಟ್ಟುಕೊಳ್ಳುತ್ತಾರೆ?) ಸೇವಕರನ್ನೂ,

ಪತ್ನಿಯರನ್ನೂ, ಪುತ್ರರನ್ನೂ ಹೇಗೆ ನೋಡಿಕೊಳ್ಳಬೇಕು? ಸೇವಕ-ಪತ್ನೀ-ಪುತ್ರರಿಗೆ ರಾಜನ ವಿಷಯದಲ್ಲಿ ವಿಶ್ವಾಸಹುಟ್ಟಬೇಕಾದರೆ ರಾಜನಾದವನು ಯಾವ ಕಾರ್ಯವನ್ನು ಮಾಡಬೇಕು?–ಈ ಎಲ್ಲ ವಿಷಯಗಳನ್ನು ನನಗೆ ವಿಶದೀಕರಿಸು."

ಭೀಷ್ಮನು ಉತ್ತರಿಸುತ್ತಾನೆ :

"ಯುಧಿಷ್ಠಿರ! ರಾಜನಾದವನು ಅಥವಾ ರಾಜನ ಪರವಾಗಿ ಕಾರ್ಯಗಳನ್ನು ನಿರ್ವಹಿಸುವವನು (ಮಂತ್ರಿಯೇ ಮೊದಲಾದ ಅಧಿಕಾರಿಗಳು) ಮೊದಲು ಯಾವ ಕಾರ್ಯವನ್ನು ಮಾಡಬೇಕೆಂಬುದನ್ನು ಹೇಳುವೆನು. ರಾಜನಿಗೆ ಸಂಬಂಧಿಸಿದ ಈ ಆಚಾರ-ವ್ಯವಹಾರಗಳೆಲ್ಲವನ್ನೂ ಸಾವಧಾನ ಚಿತ್ತನಾಗಿ ಕೇಳು.

ಆತ್ಮಾ ಜೇಯಃ ಸದಾ ರಾಜ್ಞಾ ತತೋ ಜೇಯಾಶ್ಚ ಶತ್ರವಃ ।
ಅಜಿತಾತ್ಮಾ ನರಪತಿರ್ವಿಜಯೇತ ಕಥಂ ರಿಪೂನ್ ॥೪॥

ರಾಜನಾದವನು ಮೊಟ್ಟಮೊದಲು ತನ್ನ ಮನಸ್ಸನ್ನು ಜಯಿಸಬೇಕು. ಸಕಲವಿಧವಾದ ಅನಾಹುತಗಳಿಗೂ ಕಾರಣವಾಗಬಹುದಾದ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಮನಸ್ಸಿಗೆ ಅಧೀನನಾಗಿ ಮನಸ್ಸು ಹರಿದಂತೆ ರಾಜಕಾರ್ಯಗಳನ್ನು ಮಾಡಲು ಹೋಗಬಾರದು. ಸ್ವಭಾವತಃ ಹರಿದುಹೋಗುವ ಮತ್ತು ಚಂಚಲವಾದ ಮನಸ್ಸನ್ನು ಧರ್ಮ ಮತ್ತು ವಿವೇಕ–ಎಂಬ ಹಗ್ಗಗಳಿಂದ ಬಿಗಿದು ಸ್ವಾಧೀನಪಡಿಸಿಕೊಳ್ಳಬೇಕು. ಅನಂತರ ಶತ್ರುಗಳನ್ನು ಜಯಿಸಲು ಪ್ರಯತ್ನಮಾಡಬೇಕು. ತನ್ನ ಮನಸ್ಸನ್ನೇ ಸ್ವಾಧೀನದಲ್ಲಿಟ್ಟುಕೊಳ್ಳಲು ಸಮರ್ಥನಾಗದ ರಾಜನು ಶತ್ರುಗಳನ್ನು ಹೇಗೆ ಗೆಲ್ಲುತ್ತಾನೆ? ಮನಸ್ಸಿನ ನಿಗ್ರಹ ಅಥವಾ ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದು–ಎಂದರೇನು? ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್–ಈ ಐದು ಇಂದ್ರಿಯಗಳನ್ನೂ ನಿಗ್ರಹಿಸುವುದೇ ಆತ್ಮಜಯ ಅಥವಾ ಮನೋಜಯವೆನಿಸಿಕೊಳ್ಳುತ್ತದೆ. ಹೀಗೆ ಮನಸ್ಸನ್ನು ಜಯಿಸಿದ ನರಪತಿಯು ಶತ್ರುಗಳನ್ನು ನಿಗ್ರಹಿಸಲು ಸಮರ್ಥನಾಗುತ್ತಾನೆ.

ನ್ಯಸೇತ ಗುಲ್ಮಾನ್ದುರ್ಗೇಷು ಸನ್ಧೌ ಚ ಕುರುನನ್ದನ ।
ನಗರೋಪವನೇ ಚೈವ ಪುರೋದ್ಯಾನೇಷು ಚೈವ ಹ ॥೬॥

ರಾಜನು ಕೋಟೆಗಳಲ್ಲಿಯೂ, ರಾಜ್ಯದ ಎಲ್ಲೆಗಳಲ್ಲಿಯೂ, ನಗರದ ಉಪವನಗಳಲ್ಲಿಯೂ ಮತ್ತು ಪಟ್ಟಣಗಳ ಉದ್ಯಾನವನಗಳಲ್ಲಿಯೂ ಸೈನ್ಯದ ತುಕ್ಕಡಿಗಳನ್ನಿಟ್ಟಿರಬೇಕು.

ಸಂಸ್ಥಾನೇಷು ಚ ಸರ್ವೇಷು ಪುರೇಷು ನಗರೇಷು ಚ ।
ಮಧ್ಯೇ ಚ ನರಶಾರ್ದೂಲ ತಥಾ ರಾಜನಿವೇಶನೇ ॥೭॥

ಹಾಗೆಯೇ ರಾಜ್ಯದ ಎಲ್ಲ ಪ್ರಾಂತಗಳಲ್ಲಿಯೂ, ದೊಡ್ಡ-ದೊಡ್ಡ ಊರುಗಳಲ್ಲಿಯೂ, ನಗರಪ್ರದೇಶಗಳಲ್ಲಿಯೂ, ಎಲ್ಲೆಗಳ ಪ್ರದೇಶ ಗಳಲ್ಲಿಯೂ, ನಗರಗಳ ಮಧ್ಯಭಾಗಗಳಲ್ಲಿಯೂ ಮತ್ತು ರಾಜನ ಅರಮನೆ ಯಲ್ಲಿಯೂ ಸೈನ್ಯದ ತುಕ್ಕಡಿಗಳನ್ನು ಇಟ್ಟೇ ಇರಬೇಕು.

ಪ್ರಣಿಧೀಂಶ್ಚ ತತಃ ಕುರ್ಯಾಜ್ಜಡಾನ್ಧಬಧಿರಾಕೃತೀನ್ ।
ಪುಂಸಃ ಪರೀಕ್ಷಿತಾನ್ಪ್ರಾಜ್ಞಾನ್ ಕ್ಷುತ್ಪಿಪಾಸಾಶ್ರಮಕ್ಷಮಾನ್ ॥೮॥

ಆಚಾರ-ವ್ಯವಹಾರ-ಕುಲ-ಗೋತ್ರಗಳೆಲ್ಲವನ್ನೂ ಸಂಪೂರ್ಣವಾಗಿ ಪರೀಕ್ಷಿಸಿದನಂತರ ಪ್ರಾಜ್ಞರಾದ ಪುರುಷರನ್ನೇ ಗೂಢಚಾರರನ್ನಾಗಿ ಇಟ್ಟು ಕೊಳ್ಳಬೇಕು. ಗೂಢಚಾರರೆಲ್ಲರೂ ಸಾಮಾನ್ಯವಾಗಿ ಜಡರಂತೆಯೂ (ಮಂಕರಂತೆಯೂ), ಕುರುಡರಂತೆಯೂ, ಕಿವುಡರಂತೆಯೂ ತೋರಿಸಿ ಕೊಳ್ಳಬೇಕು. ಅವರಿಗೆ ಹಸಿವು-ಬಾಯಾರಿಕೆಗಳ ಶ್ರಮವನ್ನು ಸಹಿಸಿಕೊಳ್ಳುವ ಸಾಮರ್ಥ್ಯವೂ ಇರಬೇಕು. ಇಂತಹವರನ್ನೇ ರಾಜನು ಗುಪ್ತಚಾರರನ್ನಾಗಿ ಇಟ್ಟುಕೊಳ್ಳಬೇಕು.

ಅಮಾತ್ಯೇಷು ಚ ಸರ್ವೇಷು ಮಿತ್ರೇಷು ವಿವಿಧೇಷು ಚ ।
ಪುತ್ರೇಷು ಚ ಮಹಾರಾಜ ಪ್ರಣಿದಧ್ಯಾತ್ಸಮಾಹಿತಃ ॥೯॥

ರಾಜನಾದವನು ಗೂಢಚಾರರನ್ನು 'ಎಲ್ಲಿಡಬೇಕು ; ಎಲ್ಲಿ ಇಡ ಕೂಡದು'–ಎಂಬುದೇನೂ ಇಲ್ಲ. ಧರ್ಮದಿಂದ ರಾಜ್ಯವನ್ನು ಪರಿಪಾಲಿಸುವುದರಲ್ಲಿಯೇ ಏಕಾಗ್ರಚಿತ್ತನಾಗಿರುವ ರಾಜನು ಮಂತ್ರಿಗಳ ಮೇಲೆಯೂ ಗೂಢಚಾರರನ್ನಿಟ್ಟಿರಬೇಕು. ರಾಜಾನೋ ಬಹುಮಿತ್ರಾಶ್ಚ– ರಾಜರು ಅನೇಕ ಪ್ರಕಾರವಾದ ಮಿತ್ರರನ್ನು ಹೊಂದಿರುತ್ತಾರೆ. ಅಂತಹ ಹಲವು ರೀತಿಯ ಮಿತ್ರರಲ್ಲಿಯೂ ಗೂಢಚಾರರನ್ನಿಡಬೇಕು. ಮಕ್ಕಳ ಮೇಲೂ ಗೂಢಚಾರರನ್ನಿಡಬೇಕು. ಎಂದರೆ ಮಕ್ಕಳ ಆಚಾರ-ವ್ಯವಹಾರ,

ಸ್ನೇಹಿತರು–ಇವುಗಳ ಬಗೆಗೆ ಸರ್ವದಾ ಎಚ್ಚರದಿಂದಿದ್ದು ಮಕ್ಕಳು ದುರ್ಮಾರ್ಗವನ್ನು ಹಿಡಿಯದಂತೆ ನೋಡಿಕೊಳ್ಳಬೇಕು.

ಪುರೇ ಜನಪದೇ ಚೈವ ತಥಾ ಸಾಮನ್ತರಾಜಸು ।
ಯಥಾ ನ ವಿದ್ಯುರನ್ಯೋನ್ಯಂ ಪ್ರಣಿಧೇಯಾಸ್ತಥಾ ಹಿ ತೇ ॥೧೦॥

ಊರುಗಳಲ್ಲಿಯೂ, ದೇಶಗಳಲ್ಲಿಯೂ ಸಾಮಂತರಾಜರ ಮೇಲೆಯೂ ಒಬ್ಬರಿಗೊಬ್ಬರು ಪರಸ್ಪರವಾಗಿ ಸಂಪರ್ಕಿಸದಂತೆ ಗೂಢಚಾರರನ್ನಿಟ್ಟಿರಬೇಕು. ಒಬ್ಬ ಗೂಢಚಾರನು ಮತ್ತೊಬ್ಬ ಗೂಢಾಚಾರನನ್ನು ಗುರುತಿಸಲು ಶಕ್ಯವಾಗದ ರೀತಿಯಲ್ಲಿ ಎಲ್ಲ ಕಡೆಗಳಲ್ಲಿಯೂ ಗೂಢಚಾರರನ್ನಿಟ್ಟಿರಬೇಕು. (ಗೂಢಚಾರನನ್ನು ಬೇರೆಯವರು ಗುರುತಿಸುವುದಂತಿರಲಿ ; ಗೂಢಚಾರನೇ ಮತ್ತೊಬ್ಬ ಗೂಢಚಾರನನ್ನು ಗುರುತಿಸುವಂತಿರಬಾರದು. ಈ ರೀತಿಯಲ್ಲಿ ರಾಜನು ಗೂಢಚಾರರನ್ನು ನಿಯಮಿಸಬೇಕು.)

ಚಾರಾಂಶ್ಚ ವಿದ್ಯಾತ್ಪ್ರಹಿತಾನ್ಪರೇಣ ಭರತರ್ಷಭ ।
ಆಪಣೇಷು ವಿಹಾರೇಷು ಸಮಾಜೇಷು ಚ ಭಿಕ್ಷುಷು ॥೧೧॥

ಆರಾಮೇಷು ತಥೋದ್ಯಾನೇ ಪಣ್ಡಿತಾನಾಂ ಸಮಾಗಮೇ ।
ದೇಶೇಷು ಚತ್ವರೇ ಚೈವ ಸಭಾಸ್ವಾವಸಥೇಷು ಚ ॥೧೨॥

ಏವಂ ವಿಚಿನುಯಾದ್ರಾಜಾ ಪರಚಾರಂ ವಿಚಕ್ಷಣಃ ।
ಚಾರೇ ಹಿ ವಿದಿತೇ ಪೂರ್ವಂ ಹಿತಂ ಭವತಿ ಪಾಣ್ಡವ ॥೧೩॥

ಪಾಂಡವ! ಶತ್ರುಗಳಿಂದ ಕಳುಹಿಸಲ್ಪಟ್ಟಿರುವ ಗೂಢಚಾರರನ್ನು ರಾಜನು ತನ್ನ ಗೂಢಚಾರರ ಮೂಲಕವಾಗಿ ಅಂಗಡಿ-ಮುಂಗಟ್ಟುಗಳಲ್ಲಿಯೂ, ವಿಹಾರಸ್ಥಳಗಳಲ್ಲಿಯೂ, ಸಮಾಜೋತ್ಸವಗಳಲ್ಲಿಯೂ, ಭಿಕ್ಷುಕರ ಅಥವಾ ಸಂನ್ಯಾಸಿಗಳ ಸಮುದಾಯಗಳಲ್ಲಿಯೂ, ತೋಟಗಳಲ್ಲಿಯೂ, ಉದ್ಯಾನವನಗಳಲ್ಲಿಯೂ, ಪಂಡಿತರ ಸಮ್ಮೇಳನಗಳಲ್ಲಿಯೂ, ಭಿನ್ನ-ಭಿನ್ನ ಪ್ರಾಂತಗಳಲ್ಲಿಯೂ, ನಾಲ್ಕು ಹಾದಿಗಳು ಸೇರುವ ಚೌಕಗಳಲ್ಲಿಯೂ, ಸಭೆಗಳಲ್ಲಿಯೂ, ಧರ್ಮಶಾಲೆಗಳಲ್ಲಿಯೂ ಕಣ್ಣಿಟ್ಟು ಹುಡುಕಿಸಬೇಕು. ಹೀಗೆ ವಿಚಕ್ಷಣನಾದ ರಾಜನು ವಿಚಕ್ಷಣರಾದ ಗೂಢ

ಚಾರರ ಮೂಲಕವಾಗಿ ಶತ್ರುವಿನ ಕಡೆಯ ಗುಪ್ತಚಾರರನ್ನು ಪತ್ತೆಹಚ್ಚಬೇಕು. ಶತ್ರುವಿನ ಕಡೆಯ ಗೂಢಚಾರರನ್ನು ಪತ್ತೆಹಚ್ಚಿ ಅವರ ವಿದ್ಯಮಾನಗಳನ್ನು ಮೊದಲು ತಿಳಿದುಕೊಳ್ಳುವುದರಿಂದ ರಾಜ್ಯಕ್ಕೆ ಮತ್ತು ರಾಜನಿಗೆ ಹಿತವುಂಟಾಗುತ್ತದೆ.

ಯದಾ ತು ಹೀನಂ ನೃಪತಿರ್ವಿದ್ಯಾದಾತ್ಮಾನಮಾತ್ಮನಾ ।
ಅಮಾತ್ಯೈಃ ಸಹ ಸಮ್ಮನ್ತ್ರ್ಯ ಕುರ್ಯಾತ್ಸಂಧಿಂ ಬಲೀಯಸಾ ॥೧೪॥

ಯುದ್ಧೋದ್ಯತನಾದ ರಾಜನು, ತನ್ನ ಪಕ್ಷವು ಶತ್ರುಪಕ್ಷಕ್ಕಿಂತಲೂ ದುರ್ಬಲವಾಗಿರುವುದೆಂಬುದನ್ನು ಸ್ವತಃ ತಿಳಿದೊಡನೆಯೇ ಮಂತ್ರಿಗಳೊಡನೆ ಸಮಾಲೋಚಿಸಿ ಬಲಿಷ್ಠನಾದ ರಾಜನೊಡನೆ ಸಂಧಿಮಾಡಿಕೊಳ್ಳಬೇಕು.

ಅಜ್ಞಾಯಮಾನೇ ಹೀನತ್ವೇ ಸಂಧಿಂ ಕುರ್ಯಾತ್ಪರೇಣ ವೈ ।
ಲಿಪ್ಸುರ್ವಾ ಕಂಚಿದೇವಾರ್ಥಂ ತ್ವರಮಾಣೋ ವಿಚಕ್ಷಣಃ ॥೧೫॥

ಆದರೆ ಅಲ್ಪ-ಸ್ವಲ್ಪವಾದರೂ ಪ್ರಯೋಜನವನ್ನು ಸಂಧಿಯ ಮೂಲಕ ಸಾಧಿಸಿಕೊಳ್ಳಲಿಚ್ಛಿಸುವ ವಿಚಕ್ಷಣನಾದ ರಾಜನು–'ದೌರ್ಬಲ್ಯದಿಂದ ತನ್ನೊಡನೆ ಸಂಧಿಮಾಡಿಕೊಳ್ಳಲು ಬಂದಿದ್ದಾನೆ'–ಎಂಬುದು ಶತ್ರುವಿಗೆ ಅರಿವಾಗುವುದರ ಮೊದಲೇ ಪ್ರಬಲಶತ್ರುವಿನೊಡನೆ ಶೀಘ್ರವಾಗಿಯೇ ಸಂಧಿಯನ್ನು ಮಾಡಿಕೊಳ್ಳಬೇಕು. ತಾನು ಶತ್ರುವಿಗಿಂತಲೂ ದುರ್ಬಲನೆಂಬುದು ಸ್ಪಷ್ಟವಾಗಿ ತಿಳಿಯದಿರುವಾಗಲೂ ಸಂಧಿಯಿಂದ ಅಲ್ಪ-ಸ್ವಲ್ಪವಾದರೂ ಪ್ರಯೋಜನವಾಗುವುದಾಗಿದ್ದರೆ–ಬುದ್ಧಿವಂತನಾದ ರಾಜನು ಬೇಗನೆ ಸಂಧಿಮಾಡಿಕೊಳ್ಳಬೇಕು.

ಗುಣವನ್ತೋ ಮಹೋತ್ಸಾಹಾ ಧರ್ಮಜ್ಞಾಃ ಸಾಧವಶ್ಚ ಯೇ ।
ಸಂದಧೀತ ನೃಪಸ್ತೈಶ್ಚ ರಾಷ್ಟ್ರಂ ಧರ್ಮೇಣ ಪಾಲಯನ್ ॥೧೬॥

ರಾಜನು ರಾಜ್ಯವನ್ನು ಧರ್ಮದಿಂದ ಪರಿಪಾಲನೆಮಾಡುತ್ತಾ ಗುಣವಂತರಾದ, ಉತ್ಸಾಹಶಾಲಿಗಳಾದ, ಧರ್ಮಜ್ಞರಾದ ಸತ್ಪುರುಷರಾದ ರಾಜರೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು.

ಉಚ್ಛಿದ್ಯಮಾನಮಾತ್ಮಾನಂ ಜ್ಞಾತ್ವಾ ರಾಜಾ ಮಹಾಮತಿಃ ।
ಪೂರ್ವಾಪಕಾರಿಣೋ ಹನ್ಯಾಲ್ಲೋಕದ್ವಿಷ್ಟಾಂಶ್ಚ ಸರ್ವಶಃ ॥೧೭॥

ಭೂಮಂಡಲಾಧಿಪತಿಯಾದ ರಾಜನು ಗುಪ್ತಚಾರರ ಮೂಲದಿಂದ ತನಗೆ ಪ್ರಾಣಾಪಾಯವಿರುವುದೆಂಬುದನ್ನು ತಿಳಿದುಕೊಂಡು ಒಡನೆಯೇ ತನಗೆ ಹಿಂದೆ ಅಪಕಾರಮಾಡಿದವರನ್ನೂ ಮತ್ತು ಪ್ರಜಾದ್ವೇಷಿಗಳನ್ನೂ ಸಂಪೂರ್ಣವಾಗಿ ವಿನಾಶಮಾಡಬೇಕು.

ಯೋ ನೋಪಕರ್ತುಂ ಶಕ್ನೋತಿ ನಾಪಕರ್ತುಂ ಮಹೀಪತಿಃ ।
ನ ಶಕ್ಯರೂಪಶ್ಚೋದ್ಧರ್ತುಮುಪೇಕ್ಷ್ಯಸ್ತಾದೃಶೋ ಭವೇತ್ ॥೧೮॥

ಯಾವ ರಾಜನು ಮಿತ್ರರಿಗೆ ಉಪಕಾರಮಾಡಲೂ, ಶತ್ರುಗಳಿಗೆ ಅಪಕಾರಮಾಡಲೂ ಅಸಮರ್ಥನೋ ಮತ್ತು ಯಾವ ರಾಜನನ್ನು ಉದ್ಧಾರ ಮಾಡಲು (ಉನ್ನತಸ್ಥಿತಿಗೆ ತರಲು) ಯಾರಿಂದಲೂ ಸಾಧ್ಯವೇ ಇಲ್ಲವೋ ಅಂತಹ ರಾಜನು ಎಲ್ಲರಿಂದಲೂ ಉಪೇಕ್ಷಿತನಾಗುತ್ತಾನೆ. (ಎಲ್ಲರೂ ಅಂತಹವನನ್ನು ಉಪೇಕ್ಷಿಸುತ್ತಾರೆ.)

ಯಾತ್ರಾಯಾಂ ಯದಿ ವಿಜ್ಞಾತಮನಾಕ್ರನ್ದಮನನ್ತರಮ್ ।
ವ್ಯಾಸಕ್ತಂ ಚ ಪ್ರಮತ್ತಂ ಚ ದುರ್ಬಲಂ ಚ ವಿಚಕ್ಷಣಃ ॥೧೯॥

ಯಾತ್ರಾಮಾಜ್ಞಾಪಯೇದ್ವೀರಃ ಕಲ್ಯಃ ಪುಷ್ಟಬಲಃ ಸುಖೀ ।
ಪೂರ್ವಂ ಕೃತ್ವಾ ವಿಧಾನಂ ಚ ಯಾತ್ರಾಯಾಂ ನಗರೇ ತಥಾ ॥೨೦॥

ಶತ್ರುರಾಜರ ಮೇಲೆ ಯುದ್ಧಕ್ಕೆ ಹೋಗಬೇಕಾದರೆ ಯುದ್ಧಕ್ಕೆ ಹೊರಡುವ ಮೊದಲು ಗಮನಿಸಬೇಕಾದ ಅಂಶಗಳಿವು : ಶತ್ರುರಾಜನು ಮಿತ್ರಹೀನನಾಗಿರುವನೇ? ಸಹಾಯಕರಿಂದಲೂ ಮತ್ತು ಬಂಧುಗಳಿಂದಲೂ ರಹಿತನಾಗಿರುವನೇ? ಮತ್ತೊಬ್ಬ ಶತ್ರುವಿನೊಡನೆ ಯುದ್ಧದಲ್ಲಿ ತೊಡಗಿರುವನೇ? ಪ್ರಮತ್ತನಾಗಿರುವನೇ? ದುರ್ಬಲನಾಗಿರುವನೇ?–ಈ ಎಲ್ಲ ವಿಷಯಗಳನ್ನೂ ತಿಳಿದುಕೊಂಡು ಪುಷ್ಟವಾದ ಚತುರಂಗಸೈನ್ಯವನ್ನು ಹೊಂದಿರುವ ವಿಚಕ್ಷಣನಾದ, ವೀರನಾದ, ಸಮರ್ಥನಾದ ಮತ್ತು ಸುಖಸಾಧನ ಸಂಪನ್ನನಾದ ರಾಜನು ಮೊದಲು ತನ್ನ ನಗರದ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ ಬಳಿಕ ಸೈನಿಕರಿಗೆ ಯುದ್ಧಕ್ಕೆ ಸಿದ್ಧರಾಗಲು ಆಜ್ಞೆಯನ್ನು ನೀಡಬೇಕು.

ನ ಚ ವಶ್ಯೋ ಭವೇದಸ್ಯ ನೃಪೋ ಯಶ್ಚಾತಿವೀರ್ಯವಾನ್ ।
ಹೀನಶ್ಚ ಬಲವೀರ್ಯಾಭ್ಯಾಂ ಕರ್ಷಯಂಸ್ತತ್ಪರೋ ವಸೇತ್ ॥೨೧॥

ಬಲ ಮತ್ತು ವೀರ್ಯಗಳಲ್ಲಿ ತಾನು ಅತ್ಯಂತಹೀನನಾಗಿದ್ದರೂ–ಶತ್ರುವು ಅತ್ಯಂತಪ್ರಬಲನೇ ಆಗಿದ್ದರೂ–ರಾಜನಾದವನು ಸಂಪೂರ್ಣವಾಗಿ ಶತ್ರುವಿಗೆ ಅಧೀನನಾಗಬಾರದು. ಶತ್ರುವನ್ನು ಉಪಾಯಾಂತರಗಳಿಂದ ಕ್ಷೀಣಗೊಳಿಸಲು ಪ್ರಯತ್ನಮಾಡುತ್ತಲೇ ಇರಬೇಕು.

ರಾಷ್ಟ್ರಂ ಚ ಪೀಡಯೇತ್ತಸ್ಯ ಶಸ್ತ್ರಾಗ್ನಿವಿಷಮೂರ್ಛನೈಃ ।
ಅಮಾತ್ಯವಲ್ಲಭಾನಾಂ ಚ ವಿವಾದಾಂಸ್ತಸ್ಯ ಕಾರಯೇತ್ ॥೨೨॥

ಆಗಿಂದಾಗ್ಗೆ ಸಣ್ಣ-ಪುಟ್ಟ ಬಂಡಾಯಗಳನ್ನು ನಡೆಸುತ್ತಾ ಕಿರುಕುಳ ಯುದ್ಧದ ಮೂಲಕವಾಗಿ ಶತ್ರುರಾಷ್ಟ್ರಕ್ಕೆ ಪೀಡೆಯನ್ನುಂಟುಮಾಡುತ್ತಿರಬೇಕು. ಸಮಯವನ್ನು ನೋಡಿ ಬೆಂಕಿಯನ್ನಿಡಬೇಕು. ಆಹಾರಪದಾರ್ಥಗಳ ಮೂಲಕವಾಗಿ ಮತ್ತು ನೀರಿನ ಮೂಲಕವಾಗಿ ವಿಷಪ್ರಯೋಗಮಾಡಬೇಕು. ಮಾದಕಪದಾರ್ಥಗಳನ್ನು ತಿನ್ನಿಸಿ ಮತ್ತುಗೊಳಿಸಬೇಕು. ಅಮಾತ್ಯರ ಮತ್ತು ರಾಜನ ನಡುವೆ ವಿರಸವುಂಟಾಗುವಂತೆ ಮಾಡಬೇಕು. (ದುರ್ಬಲನಾದ ರಾಜನೂ ಪ್ರಬಲನಾದ ರಾಜನಿಗೆ ಉಂಟುಮಾಡಬಹುದಾದ ಪೀಡೆಗಳಿವು.)

ವರ್ಜನೀಯಂ ಸದಾ ಯುದ್ಧಂ ರಾಜ್ಯಕಾಮೇನ ಧೀಮತಾ ।
ಉಪಾಯೈಸ್ತ್ರಿಭಿರಾದಾನಮರ್ಥಸ್ಯಾಹ ಬೃಹಸ್ಪತಿಃ ॥೨೩॥

ಸಾನ್ತ್ವೇನ ತು ಪ್ರದಾನೇನ ಭೇದೇನ ಚ ನರಾಧಿಪ ।
ಯದರ್ಥಂ ಶಕ್ನುಯಾತ್ಪ್ರಾಪ್ತುಂ ತೇನ ತುಷ್ಯೇತ ಪಣ್ಡಿತಃ ॥೨೪॥

ಬುದ್ಧಿವಂತನಾದ, ರಾಜ್ಯಕಾಮನಾದ ರಾಜನು ಯುದ್ಧದ ಮೂಲಕವಾಗಿ ರಾಜ್ಯವನ್ನು ವಿಸ್ತರಿಸುವ ಯೋಚನೆಯನ್ನೇ ಬಿಟ್ಟುಬಿಡಬೇಕು. ಆದರೆ ರಾಜ್ಯಕಾಮನೇ ಆಗಬಾರದೆ?–ಎಂಬುದಕ್ಕೆ ಬೃಹಸ್ಪತ್ಯಾಚಾರ್ಯರು ಮೂರು ವಿಧವಾದ ಉಪಾಯಗಳಿಂದ ರಾಜ್ಯವನ್ನು ವಿಸ್ತರಿಸಬಹುದು–ಎನ್ನುತ್ತಾರೆ. ಸಾಮ-ದಾನಗಳಿಂದ–'ನಾನು ಇದನ್ನು ನಿನಗೆ ಕೊಡುತ್ತೇನೆ ; ನೀನು ಅದನ್ನು ನನಗೆ ಕೊಡು'–ಎಂಬುದಾಗಿ ಹೇಳಿ ಒಪ್ಪಿಸಿ ತನಗೆ ಬೇಕಾದ ವಸ್ತುವನ್ನು ಸಂಗ್ರಹಿಸುವುದು. ಭೇದ-ಇಬ್ಬರು ಮಿತ್ರರಾಜರಲ್ಲಿ ವೈಷಮ್ಯವನ್ನು ತಂದೊಡ್ಡಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವುದು. ರಾಜ ಮತ್ತು

ಮಂತ್ರಿ-ಸೇನಾಪತಿಗಳಲ್ಲಿ ವಿರಸವುಂಟಾಗುವಂತೆ ಮಾಡಿ ಕಾರ್ಯವನ್ನು ಸಾಧಿಸಿಕೊಳ್ಳುವುದು. ಹೀಗೆ ಸಾಮ-ದಾನ-ಭೇದೋಪಾಯಗಳಿಂದ ಎಷ್ಟು ಪ್ರಯೋಜನವನ್ನು ಪಡೆದುಕೊಳ್ಳಲು ಸಾಧ್ಯವಾಗುವುದೋ ಅಷ್ಟರಿಂದಲೇ ವಿದ್ವಾಂಸನಾದ ರಾಜನು ತೃಪ್ತಿಯನ್ನು ಹೊಂದಬೇಕು.

ಆದದೀತ ಬಲಿಂ ಚಾಪಿ ಪ್ರಜಾಭ್ಯಃ ಕುರುನನ್ದನ ।
ಸ ಷಡ್ಭಾಗಮಪಿ ಪ್ರಾಜ್ಞಸ್ತಾಸಾಮೇವಾಭಿಗುಪ್ತಯೇ ॥೨೫॥

ಕುರುನಂದನನೇ! ಬುದ್ಧಿವಂತನಾದ ರಾಜನು ಪ್ರಜೆಗಳ ರಕ್ಷಣೆಯ ಸಲುವಾಗಿಯೇ ಪ್ರಜೆಗಳಿಂದ ಬರುವ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ರಾಜಾದಾಯವನ್ನಾಗಿ ಪಡೆದುಕೊಳ್ಳಬೇಕು.

***ದಶಧರ್ಮಗತೇಭ್ಯೋ ಯದ್ವಸು ಬಹ್ವಲ್ಪಮೇವ ಚ ।**
ತದಾದದೀತ ಸಹಸಾ ಪೌರಾಣಾಂ ರಕ್ಷಣಾಯ ವೈ ॥೨೬॥

ದಂಡನೀಯರಾದ ಮತ್ತ, ಉನ್ಮತ್ತ, ದಸ್ಯು, ತಸ್ಕರ, ಪ್ರತಾರಕ (ವಂಚಕ), ಶಠ, ಲಂಪಟ, ಜೂಜುಗಾರ, ಕೃತ್ರಿಮಲೇಖಕ (ಸುಳ್ಳುಪತ್ರ ತಯಾರಿಸುವವನು) ಮತ್ತು ಲಂಚಕೋರ–ಇಂತಹವರ ಬಳಿಯಲ್ಲಿ ಐಶ್ವರ್ಯವು ಅಲ್ಪವಾಗಿಯೇ ಇರಲಿ ; ಬಹಳವಾಗಿಯೇ ಇರಲಿ–ಎಲ್ಲವನ್ನೂ ಪಟ್ಟಣಿಗರ ರಕ್ಷಣೆಯ ಸಲುವಾಗಿ ಒಡನೆಯೇ ಮುಟ್ಟುಗೋಲು ಹಾಕಿಕೊಳ್ಳಬೇಕು.

ಯಥಾ ಪುತ್ರಾಸ್ತಥಾ ಪೌರಾ ದ್ರಷ್ಟವ್ಯಾಸ್ತೇ ನ ಸಂಶಯಃ ।
ಭಕ್ತಿಶ್ಚೈಷಾಂ ನ ಕರ್ತವ್ಯಾ ವ್ಯವಹಾರೇ ಪ್ರದರ್ಶಿತೇ ॥೨೭॥

ತನ್ನ ಮಕ್ಕಳನ್ನು ಕಾಣುವಂತೆಯೇ ಪ್ರಜೆಗಳನ್ನೂ ಕಾಣಬೇಕು. ಇದರಲ್ಲಿ ಸಂಶಯವೇ ಇಲ್ಲ. ಪ್ರಜೆಗಳನ್ನು ಮಕ್ಕಳಂತೆಯೇ ಪರಿಪಾಲನೆ ಮಾಡಬೇಕು. ಆದರೆ ವ್ಯವಹಾರದ ವಿಷಯವು ಬಂದಾಗ (ನ್ಯಾಯಾನ್ಯಾಯ

---

* 'ದಶಧರ್ಮ' ವೆಂದರೆ ಸಾಮಾನ್ಯವಾಗಿ ಎಲ್ಲ ಪಂಗಡದವರಿಗೂ ಸಮಾನವಾದ ಧೃತಿ, ಕ್ಷಮಾ ಇತ್ಯಾದಿ ಹತ್ತು ಧರ್ಮಗಳು–ಎಂದಾಗುತ್ತದೆ. ಆದರೆ ಪ್ರಕರಣಾನುಸಾರವಾಗಿ ವ್ಯಾಖ್ಯಾನಕಾರರು ಇಲ್ಲಿ ದಶಧರ್ಮಗತರೆಂಬುದಕ್ಕೆ ಮತ್ತೋನ್ಮತ್ತಾದಯಃ ಎಂದು ವ್ಯಾಖ್ಯಾನಿಸಿದ್ದಾರೆ.

ಗಳನ್ನು ನಿರ್ಧಾರಮಾಡಬೇಕಾದಾಗ) ಸ್ನೇಹವಶನಾಗಿ ಪಕ್ಷಪಾತವನ್ನು ಮಾಡ ಬಾರದು.

ಶ್ರೋತುಂ ಚೈವ ನ್ಯಸೇದ್ರಾಜಾ ಪ್ರಾಜ್ಞಾನ್ಸರ್ವಾರ್ಥದರ್ಶಿನಃ ।
ವ್ಯವಹಾರೇಷು ಸತತಂ ತತ್ರ ರಾಜ್ಯಂ ಪ್ರತಿಷ್ಠಿತಮ್ ॥೨೮॥

ವಾದಿ-ಪ್ರತಿವಾದಿಗಳ ಹೇಳಿಕೆಗಳನ್ನು ಕೇಳಲು ರಾಜನು ಸರ್ವಾರ್ಥ ದರ್ಶಿಗಳಾದ ಪ್ರಾಜ್ಞರಾದ ವಿದ್ವಾಂಸರನ್ನು ನಿಯಮಿಸಿಕೊಳ್ಳಬೇಕು. ಏಕೆಂದರೆ: ವಿಶುದ್ಧವಾದ ನ್ಯಾಯದ ತೀರ್ಪನ್ನು ಕೊಡುವುದರಲ್ಲಿಯೇ ರಾಜ್ಯವು ಪ್ರತಿಷ್ಠಿತವಾಗಿದೆ. (ಪಕ್ಷಪಾತರಹಿತವಾದ ನ್ಯಾಯಾಸ್ಥಾನವೇ ರಾಜ್ಯಾಂಗದ ಬಲವಾದ ಅಡಿಪಾಯವಾಗಿರುತ್ತದೆ.)

ಆಕರೇ ಲವಣೇ ಶುಲ್ಕೇ ತರೇ ನಾಗಬಲೇ ತಥಾ ।
ನ್ಯಸೇದಮಾತ್ಯಾನ್ನೃಪತಿಃ ಸ್ವಾಪ್ತಾನ್ವಾ ಪುರುಷಾನ್ಹಿತಾನ್ ॥೨೯॥

ಸುವರ್ಣವೇ ಮೊದಲಾದ ಬಹುಮೂಲ್ಯವಾದ ಲೋಹಗಳಿರುವ ಖನಿಜಗಳ ಪ್ರದೇಶಗಳಲ್ಲಿ, ಉಪ್ಪನ್ನು ಉತ್ಪತ್ತಿಮಾಡುವ ಸ್ಥಳದಲ್ಲಿ, ಧಾನ್ಯಾದಿ ಗಳನ್ನು ವಿಕ್ರಯಮಾಡುವ ಸ್ಥಳಗಳಲ್ಲಿ, ತೆರಿಗೆಗಳನ್ನು ತೆಗೆದುಕೊಳ್ಳುವ ಸ್ಥಳಗಳಲ್ಲಿ, ನದಿಯನ್ನು ದಾಟಿಸುವ ದೋಣಿಗಳಿರುವ ಸ್ಥಳಗಳಲ್ಲಿ, ಗಜಸೈನ್ಯದ ಬಳಿಯಲ್ಲಿ–ರಾಜನು ಅತ್ಯಂತಾಪ್ತರಾದ, ಹಿತೈಷಿಗಳಾದ, ವಿಶ್ವಸನೀಯರಾದ ಅಮಾತ್ಯರನ್ನಾಗಲೀ ಅಧಿಕಾರಿಗಳನ್ನಾಗಲೀ ನಿಯಮಿಸಬೇಕು. ಇವೆಲ್ಲವೂ ರಾಜಾದಾಯಗಳು ಬರತಕ್ಕ ಸ್ಥಾನಗಳಾಗಿವೆ.

ಸಮ್ಯಗ್ದಣ್ಡಧರೋ ನಿತ್ಯಂ ರಾಜಾ ಧರ್ಮಮವಾಪ್ನುಯಾತ್ ।
ನೃಪಸ್ಯ ಸತತಂ ದಣ್ಡಃ ಸಮ್ಯಗ್ಧರ್ಮಃ ಪ್ರಶಸ್ಯತೇ ॥೩೦॥

ಅನುದಿನವೂ ದಂಡನೀತಿಯನ್ನು ವಿವೇಕದಿಂದ ಪ್ರಯೋಗಿಸುವ ಅಥವಾ ಅನುಸರಿಸುವ ರಾಜನು ಧರ್ಮಕ್ಕೆ (ಪುಣ್ಯಕ್ಕೆ) ಭಾಗಿಯಾಗುತ್ತಾನೆ. ನಿರಂತರವಾಗಿ ದಂಡಧಾರಣೆಮಾಡಿ ಶಿಷ್ಟರನ್ನು ಪರಿಪಾಲಿಸುತ್ತಾ ದುಷ್ಟರನ್ನು ಶಿಕ್ಷಿಸುತ್ತಾ ಇರುವುದೇ ಶ್ರೇಷ್ಠವಾದ ಧರ್ಮವಾಗಿರುತ್ತದೆ. ಇಂತಹ ದಂಡಧಾರಣಧರ್ಮವು ಎಲ್ಲರಿಂದಲೂ ಪ್ರಶಂಸಿಸಲ್ಪಡುತ್ತದೆ.

ವೇದವೇದಾಙ್ಗವಿತ್ಪ್ರಾಜ್ಞಃ ಸುತಪಸ್ವೀ ನೃಪೋ ಭವೇತ್ ।
ದಾನಶೀಲಶ್ಚ ಸತತಂ ಯಜ್ಞಶೀಲಶ್ಚ ಭಾರತ ॥೩೧॥

ಭಾರತನೇ! ರಾಜನು ವೇದವೇದಾಂಗಪಾರಂಗತನಾಗಿರಬೇಕು. ಪ್ರಾಜ್ಞನಾಗಿರಬೇಕು. ಸಕಲಶಾಸ್ತ್ರಗಳನ್ನೂ ತಿಳಿದುಕೊಂಡಿರಬೇಕು. ತಪಸ್ವಿಯಾಗಿರಬೇಕು. ದಾನಶೀಲನೂ, ಯಜ್ಞಪರಾಯಣನೂ ಆಗಿರಬೇಕು.

ಏತೇ ಗುಣಾಃ ಸಮಸ್ತಾಃ ಸ್ಯುರ್ನೃಪಸ್ಯ ಸತತಂ ಸ್ಥಿರಾಃ ।
ವ್ಯವಹಾರಲೋಪೇ ನೃಪತೇಃ ಕುತಃ ಸ್ವರ್ಗಃ ಕುತೋ ಯಶಃ ॥೩೨॥

ರಾಜನಾದವನಲ್ಲಿ ಈ ಎಲ್ಲ ಗುಣಗಳೂ ಪೂರ್ಣರೂಪದಲ್ಲಿ ಸರ್ವ ಕಾಲಗಳಲ್ಲಿಯೂ ಸ್ಥಿರವಾಗಿರಬೇಕು. ನ್ಯಾಯೋಚಿತವಾದ ವ್ಯವಹಾರಗಳನ್ನು ನಡೆಸಲು ಈ ಗುಣಗಳು ಅತ್ಯಾವಶ್ಯಕ. ಈ ಗುಣಗಳಿಂದ ರಾಜನು ವಿಹೀನನಾಗಿದ್ದರೆ ನ್ಯಾಯೋಚಿತವ್ಯವಹಾರಗಳೇ ಲುಪ್ತವಾಗುತ್ತವೆ. ಹಾಗಾದಾಗ ರಾಜನಿಗೆ ಯಶಸ್ಸೆಲ್ಲಿಯದು? ಸ್ವರ್ಗವೆಲ್ಲಿಯದು? ನ್ಯಾಯೋಚಿತವಾದ ವ್ಯವಹಾರವಿಲ್ಲದಿರುವ ರಾಜನಿಗೆ ಇಹದಲ್ಲಿ ಯಶಸ್ಸೂ ಲಭಿಸುವುದಿಲ್ಲ; ಪರದಲ್ಲಿ ಸ್ವರ್ಗವೂ ಲಭಿಸುವುದಿಲ್ಲ.

ಯದಾ ತು ಪೀಡಿತೋ ರಾಜಾ ಭವೇದ್ರಾಜ್ಞಾ ಬಲೀಯಸಾ ।
ತದಾಭಿಸಂಶ್ರಯೇದ್ದುರ್ಗಂ ಬುದ್ಧಿಮಾನ್ಪೃಥಿವೀಪತಿಃ ॥೩೩॥

ಬಲಿಷ್ಠನಾದ ಶತ್ರುರಾಜನು ಆಕ್ರಮಿಸಲು ಬಂದಾಗ ಬುದ್ಧಿವಂತನಾದ ರಾಜನು ದುರ್ಗವನ್ನು ಆಶ್ರಯಿಸಿ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಆ ಸಮಯದಲ್ಲಿ ಮಾಡಬೇಕಾದ ಕರ್ತವ್ಯವನ್ನು ಪರ್ಯಾಲೋಚಿಸುವ ಸಲುವಾಗಿ ಮಿತ್ರರ ಆಶ್ರಯವನ್ನು ಪಡೆದು ಅವರ ಸಲಹೆಯಂತೆ ಮೊದಲು ತನ್ನ ರಕ್ಷಣೆಯ ವಿಧಾನವನ್ನು ಕಲ್ಪಿಸಿಕೊಳ್ಳಬೇಕು. ಬಳಿಕ ಸಾಮ-ದಾನ-ಭೇದ-ದಂಡೋಪಾಯಗಳನ್ನಾಶ್ರಯಿಸಿ ಶತ್ರುವನ್ನು ಎದುರಿಸುವ ಸಲುವಾಗಿ ಉಪಯುಕ್ತವಾದ ವಿಧಾನವನ್ನು ಸಿದ್ಧಗೊಳಿಸಿಕೊಳ್ಳಬೇಕು. ಘೋಷಣೆ ಮಾಡುವವರನ್ನು (ಸಾರುವವರನ್ನು) ರಾಜಮಾರ್ಗದಲ್ಲಿ ನಿಲ್ಲಿಸಬೇಕು.

ತಳವಾರರಿಂದ ಘೋಷಣೆಯನ್ನು ಸಾರಿಸಿ (ಡಂಗೂರ ಹೊಡೆಸಿ) ಗ್ರಾಮದಲ್ಲಿರುವ ಜನರನ್ನು ಎಚ್ಚರಿಸಬೇಕು. ಬಳಿಕ ಗ್ರಾಮದವರೆಲ್ಲರನ್ನೂ ಉಪನಗರಗಳಿಗೆ ಪ್ರವೇಶಿಸುವಂತೆ ಮಾಡಬೇಕು. ಬಳಿಕ ಐಶ್ವರ್ಯವಂತರನ್ನೂ, ಸೇನಾಪತಿಗಳನ್ನೂ ಬಾರಿ-ಬಾರಿಗೂ ಸಂತೈಸುತ್ತಾ ಅವರೆಲ್ಲರನ್ನೂ, ಗೂಢವಾಗಿಯೂ ದುರ್ಗಮವಾಗಿಯೂ ಇರುವ ಪ್ರದೇಶಗಳಲ್ಲಿ ಪ್ರವೇಶಿಸುವಂತೆ ಮಾಡಬೇಕು. ರಾಜನೇ ಸ್ವತಃ ಎಚ್ಚರಿಕೆಯನ್ನು ವಹಿಸಿ ಕೊಯ್ಲಿಗೆ ಬಂದಿರುವ ಭತ್ತವೇ ಮೊದಲಾದ ಪೈರನ್ನು ಕಟಾವುಮಾಡಿ, ಧಾನ್ಯವನ್ನು ವಿಂಗಡಿಸಿ, ಕೋಟೆಯೊಳಗೆ ಇಡುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಹಾಗೆ ಮಾಡಲು ಸಾಧ್ಯವಾಗದಿದ್ದರೆ ಆಹಾರಧಾನ್ಯಗಳು ಶತ್ರುರಾಜನ ವಶವಾಗದಂತೆ ಪೈರು-ಪಚ್ಚೆಗಳಿಂದ ತುಂಬಿರುವ ಹೊಲ-ಗದ್ದೆಗಳನ್ನೇ ಸುಟ್ಟುಹಾಕಬೇಕು. ಸಸ್ಯಗಳು ಹೊಲ-ಗದ್ದೆಗಳಲ್ಲಿರುವಾಗ ಶತ್ರುವಿನ ಕಡೆಯ ಜನರನ್ನೇ ಹತ್ತಿಕ್ಕಿ ಧ್ವಂಸಮಾಡುವಂತೆ ಮಾಡಬೇಕು. ಅಥವಾ ತನ್ನ ಕಡೆಯ ಸೈನಿಕರನ್ನೇ ಕಳುಹಿಸಿ ವಿನಾಶಗೊಳಿಸಬೇಕು. ಆಹಾರಧಾನ್ಯಗಳು ಶತ್ರುಗಳ ಕೈಗಂತೂ ಸಿಕ್ಕಲೇಬಾರದು.

ನದೀಮಾರ್ಗೇಷು ಚ ತಥಾ ಸಂಕ್ರಮಾನವಸಾದಯೇತ್ ।
ಜಲಂ ವಿಸ್ರಾವಯೇತ್ಸರ್ವಮವಿಸ್ರಾವ್ಯಂ ಚ ದೂಷಯೇತ್ ॥೬॥

ನದಿಗಳನ್ನು ದಾಟುವ ಮಾರ್ಗಗಳಲ್ಲಿರುವ ಸೇತುವೆಗಳನ್ನು ಧ್ವಂಸ ಮಾಡಬೇಕು. ನೀರಿನ ಒಡ್ಡುಗಳನ್ನೊಡೆದು ಶತ್ರುವಿಗೆ ನೀರಿನ ಆಸರೆಯು ಸಿಕ್ಕದಂತೆ ಮಾಡಬೇಕು. ಕಟ್ಟೆಯನ್ನು ಒಡೆದುಹಾಕಲು ಸಾಧ್ಯವಾಗದ ಬಾವಿಗಳೇನಾದರೂ ಶತ್ರುವು ಬರುವ ಮಾರ್ಗದಲ್ಲಿದ್ದರೆ ಆ ಬಾವಿಯ ನೀರನ್ನೂ ಕುಡಿಯಲು ಸಾಧ್ಯವಾಗದಂತೆ ಆ ನೀರಿಗೆ ವಿಷಾದಿಗಳನ್ನು ಬೆರೆಸಬೇಕು. ವರ್ತಮಾನಕಾಲದಲ್ಲಾಗಲೀ ಭವಿಷ್ಯತ್ಕಾಲದಲ್ಲಿಯೇ ಆಗಲೀ ಮಿತ್ರನ ಸಲುವಾಗಿ ಮಾಡಬೇಕಾದ ಕಾರ್ಯವು ಸನ್ನಿಹಿತವಾಗಿದ್ದರೂ ಆ ಕಾರ್ಯವನ್ನೂ ಬದಿಗೊತ್ತಿ, ತನ್ನ ಶತ್ರುವಿಗೆ ಶತ್ರುವಾದವನ ಆಶ್ರಯವನ್ನು ಪಡೆದು, ಶತ್ರುವು ಇರುವ ಸ್ಥಳದ ಪಕ್ಕದಲ್ಲಿಯೇ ನಿವಾಸಮಾಡಿಕೊಂಡಿದ್ದು ಸಮಯವು ಸಿಕ್ಕಿದಾಗ ಶತ್ರುವನ್ನು ಕೊಲ್ಲಬೇಕು. (ದುರ್ಬಲನಾದ ರಾಜನು ಆಹಾರಧಾನ್ಯಗಳೆಲ್ಲವನ್ನೂ ನಾಶಮಾಡಿ ಪ್ರಜೆಗಳೊಡನೆ

ಸುಭದ್ರವಾದ ಕೋಟೆಯೊಳಗೆ ಸೇರಿಕೊಳ್ಳಬೇಕು. ಶತ್ರುವು ಬೇಗ ತನ್ನ ಸಮೀಪಕ್ಕೆ ಬರಲಾಗದಂತೆ ನದಿಗಳ ಮೇಲಿರುವ ಸೇತುವೆಗಳನ್ನು ಧ್ವಂಸ ಮಾಡಬೇಕು. ಶತ್ರುವಿಗೆ ನೀರು-ನೆಳಲು ಸಿಕ್ಕದಂತೆ ಕೆರೆ-ಕಟ್ಟೆಗಳನ್ನು ಒಡೆದುಹಾಕಬೇಕು. ಉಪಯೋಗಿಸಲು ಸಾಧ್ಯವಾಗದಂತೆ ಬಾವಿಯ ನೀರಿಗೆ ವಿಷವನ್ನು ಬೆರೆಸಬೇಕು. ಬಳಿಕ ಆಕ್ರಮಣಮಾಡಲು ಬಂದಿರುವ ಶತ್ರುವಿನ ಶತ್ರುವು ಯಾರೆಂಬುದನ್ನು ತಿಳಿದುಕೊಂಡು ಅವನೊಡನೆ ಸ್ನೇಹ ಬೆಳೆಸಬೇಕು. ರಾಜ್ಯದ ರಕ್ಷಣೆ ಮತ್ತು ಶತ್ರುನಾಶ–ಈ ಕಾರ್ಯಗಳನ್ನುಳಿದು ಮತ್ತಾವ ಕಾರ್ಯವನ್ನೂ ಮಾಡಲು ಹೋಗಬಾರದು. ಹೀಗಿದ್ದುಕೊಂಡು ಸಮಯವರಿತು ಶತ್ರುವನ್ನು ಧ್ವಂಸಮಾಡಬೇಕು.)

ಶತ್ರುವಿಗೆ ಅಡಗಿಕೊಳ್ಳಲು ಅಥವಾ ನೆಳಲಿನಲ್ಲಿ ತಂಗಲು ಸಾಧ್ಯವಾಗ ದಂತೆ ದುರ್ಗದ ಸುತ್ತಲೂ ಇರುವ ಎಲ್ಲ ಚಿಕ್ಕ-ಪುಟ್ಟ ಮರಗಳನ್ನೂ ಬುಡಸಹಿತವಾಗಿ ಕಡಿದುಹಾಕಬೇಕು. ಆದರೆ ಅಶ್ವತ್ಥಾದಿ ಪೂಜಾವೃಕ್ಷಗಳನ್ನು ವಿನಾಶಗೊಳಿಸಬಾರದು.

ಪ್ರವೃದ್ಧಾನಾಂ ಚ ವೃಕ್ಷಾಣಾಂ ಶಾಖಾಂ ಪ್ರಚ್ಛೇದಯೇತ್ತಥಾ ।
ಚೈತ್ಯಾನಾಂ ಸರ್ವಥಾ ತ್ಯಾಜ್ಯಮಪಿ ಪತ್ರಸ್ಯ ಪಾತನಮ್ ॥೪೨॥

ದೊಡ್ಡ-ದೊಡ್ಡದಾಗಿ ಬೆಳೆದಿರುವ ವೃಕ್ಷಗಳ ರೆಂಬೆಗಳನ್ನು ಕತ್ತರಿಸಿ ಹಾಕಬೇಕು. ಆದರೆ ಅಶ್ವತ್ಥಾದಿ ವೃಕ್ಷಗಳ ರೆಂಬೆಗಳನ್ನು ಮಾತ್ರವಲ್ಲ ಎಲೆಗಳನ್ನೂ ಕೀಳಬಾರದು.

ಪ್ರಗಣ್ಡೀಃ ಕಾರಯೇತ್ಸಮ್ಯಗಾಕಾಶಜನನೀಸ್ತಥಾ ।
ಆಪೂರಯೇಚ್ಚ ಪರಿಖಾಂ ಸ್ಥಾಣುನಕ್ರಝಷಾಕುಲಾಮ್ ॥೪೩॥

ಕೋಟೆಯ ನಾಲ್ಕು ಕಡೆಗಳಲ್ಲಿಯೂ ಆಯಕಟ್ಟಿನ ಸ್ಥಳಗಳಲ್ಲಿ ಶತ್ರುಗಳ ಚಲನ-ವಲನಗಳನ್ನು ನಿರೀಕ್ಷಿಸಲು ಸಾಧ್ಯವಾಗುವಂತೆ* ಪ್ರಗಂಡಿ

* ಪ್ರಗಂಡಿಯ ಲಕ್ಷಣವನ್ನು ಹೀಗೆ ಹೇಳಿದ್ದಾರೆ : **ಸಂಚಾರೋ ಯತ್ರ ಲೋಕಾನಾಂ ದೂರಾದೇವಾವಬುಧ್ಯತೇ । ಪ್ರಗಣ್ಡೀ ಸಾ ಚ ವಿಜ್ಞೇಯಾ ಬಹಿಃಪ್ರಾಕಾರಸಂಜ್ಞಿತಾ ॥** ಜನರ ಸಂಚಾರವು ಬಹಳ ದೂರದಿಂದಲೇ ತಿಳಿಯಲ್ಪಡುವ ಸ್ಥಾನಕ್ಕೆ ಪ್ರಗಂಡೀ ಎಂದು ಹೆಸರು. ಅದಕ್ಕೆ ಬಹಿಃಪ್ರಾಕಾರವೆಂದೂ ಹೆಸರು.

ಗಳನ್ನೂ (ವೀರರ ಶಿಬಿರಗಳನ್ನು) ನಿರ್ಮಿಸಬೇಕು. ಆ ಶಿಬಿರಗಳ ಮೂಲಕ ಶತ್ರುಗಳ ಮೇಲೆ ಗುಂಡುಹೊಡೆಯಲು ಸಾಧ್ಯವಾಗುವಂತೆ ಆಕಾಶ ಜನನಿಗಳನ್ನು (ಸಣ್ಣ ರಂಧ್ರಗಳನ್ನು) ಮಾಡಿರಬೇಕು. ಕೋಟೆಯ ಸುತ್ತಲೂ ಕಂದಕಗಳನ್ನು ತೋಡಿಸಿ ಆ ಕಂದಕಗಳನ್ನು ಮೇಲ್ಮುಖವಾದ ತ್ರಿಶೂಲ ಗಳಿಂದಲೂ, ಮೀನುಗಳಿಂದಲೂ, ನಕ್ರಗಳಿಂದಲೂ, ಮೊಸಳೆಗಳಿಂದಲೂ ತುಂಬಿರುವಂತೆ ಮಾಡಬೇಕು.

ಸಂಕಟದ್ವಾರಕಾಣಿ ಸ್ಯುರುಚ್ಛ್ವಾಸಾರ್ಥಂ ಪುರಸ್ಯ ಚ ।
ತೇಷಾಂ ಚ ದ್ವಾರವದ್ಗುಪ್ತಿಃ ಕಾರ್ಯಾ ಸರ್ವಾತ್ಮನಾ ಭವೇತ್ ॥೪೪॥

ಪಟ್ಟಣದ ಉಚ್ಛ್ವಾಸ-ನಿಃಶ್ವಾಸಾರ್ಥವಾಗಿ (ಪುರದೊಳಗಡೆ ಗಾಳಿ ಯಾಡಲು), ಅವಶ್ಯಕ ವಸ್ತುಗಳು ಪಟ್ಟಣಕ್ಕೆ ಬರುವುದಕ್ಕಾಗಿ ಮತ್ತು ಕಷ್ಟ ಸಮಯದಲ್ಲಿ ಹೊರಕ್ಕೆ ಹೋಗಲು ಸಣ್ಣ-ಸಣ್ಣ ಬಾಗಿಲುಗಳನ್ನು ಮಾಡಿರಬೇಕು. ಆ ಸಣ್ಣ ದ್ವಾರಗಳನ್ನೂ ಮಹಾದ್ವಾರವನ್ನು ರಕ್ಷಿಸುವಂತೆಯೇ ರಕ್ಷಿಸಬೇಕು.

ದ್ವಾರೇಷು ಚ ಗುರೂಣ್ಯೇವ ಯನ್ತ್ರಾಣಿ ಸ್ಥಾಪಯೇತ್ಸದಾ ।
ಆರೋಪಯೇಚ್ಛತಘ್ನೀಶ್ಚ ಸ್ವಾಧೀನಾನಿ ಚ ಕಾರಯೇತ್ ॥೪೫॥

ಆ ದ್ವಾರಗಳಲ್ಲಿ ದೊಡ್ಡದಾದ ಯಂತ್ರಗಳನ್ನು ಸ್ಥಾಪಿಸಬೇಕು. ಆ ಯಂತ್ರಗಳ ಮೇಲೆ ಫಿರಂಗಿಗಳನ್ನು ಇಟ್ಟಿರಬೇಕು. ಅವುಗಳೆಲ್ಲವನ್ನೂ ರಾಜನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರಬೇಕು.

ಕೋಟೆಯೊಳಗಡೆ ಕಟ್ಟಿಗೆಯನ್ನು ಸಂಗ್ರಹಿಸಿಟ್ಟಿರಬೇಕು. ಬಾವಿಗಳನ್ನು ತೋಡಿಸಬೇಕು. ನೀರನ್ನಪೇಕ್ಷಿಸುವ ಜನರು ಅದಕ್ಕೆ ಹಿಂದೆ ತೋಡಿಸಿದ್ದ ಬಾವಿಗಳನ್ನು ಶೋಧಿಸಿಕೊಳ್ಳಬೇಕು. ಅದರಲ್ಲಿರುವ ಕೆಸರುಮಣ್ಣನ್ನು ತೆಗೆದುಹಾಕಿ ನೀರು ತುಂಬುವಂತೆಯೂ ಶುದ್ಧವಾಗುವಂತೆಯೂ ಮಾಡ ಬೇಕು. ಹೊಸ ಬಾವಿಗಳನ್ನು ತೋಡಿಸುವುದರ ಜೊತೆಗೆ ಹಿಂದಿನ ಬಾವಿಗಳ ದುರಸ್ತಿಯನ್ನೂ ಮಾಡಬೇಕು.

ತೃಣಚ್ಛನ್ನಾನಿ ವೇಶ್ಮಾನಿ ಪಙ್ಕೇನಾಥ ಪ್ರಲೇಪಯೇತ್ ।
ನಿರ್ಹರೇಚ್ಚ ತೃಣಂ ಮಾಸಿ ಚೈತ್ರೇ ವಹ್ನಿಭಯಾತ್ತಥಾ ॥೪೬॥

ಯುದ್ಧದ ಸಂದರ್ಭದಲ್ಲಿ ಹುಲ್ಲಿನಿಂದ ಆಚ್ಛಾದಿತವಾಗಿರುವ ಗುಡಿಸಲುಗಳ ಮೇಲ್ಭಾಗವನ್ನು ಕೆಸರುಮಣ್ಣಿನಿಂದ ಲೇಪಿಸಬೇಕು. ಚೈತ್ರಮಾಸದಲ್ಲಿ ಬೆಂಕಿಯ ಭಯವಿರುವುದರಿಂದ ಗ್ರಾಮದಲ್ಲಿರುವ ಹುಲ್ಲನ್ನೂ ಹೊರಕ್ಕೆ ಹಾಕಬೇಕು. (ದೂರದಲ್ಲಿಡಬೇಕು.)

ನಕ್ತಮೇವ ಚ ಭಕ್ತಾನಿ ಪಾಚಯೇತ ನರಾಧಿಪಃ ।
ನ ದಿವಾ ಜ್ವಾಲಯೇದಗ್ನಿಂ ವರ್ಜಯಿತ್ವಾಗ್ನಿಹೋತ್ರಿಕಮ್ ॥೪೮॥

ಯುದ್ಧದ ಸಮಯಗಳಲ್ಲಿ ರಾಜನು ತನ್ನ ಪ್ರಜೆಗಳಿಗೆ ರಾತ್ರಿಯಲ್ಲಿ ಮಾತ್ರವೇ ಅಡಿಗೆಮಾಡುವಂತೆ ಆಜ್ಞೆಯನ್ನು ನೀಡಬೇಕು. ಹಗಲಿನಲ್ಲಿ ಅಗ್ನಿಹೋತ್ರಾಗ್ನಿಯೊಂದನ್ನು ಬಿಟ್ಟು ಬೆಂಕಿಯನ್ನು ಬೇರೆ ಯಾವ ಕಾರಣದಿಂದಲೂ ಉರಿಸಬಾರದು.

ಕರ್ಮಾರಾರಿಷ್ಟಶಾಲಾಸು ಜ್ವಲೇದಗ್ನಿಃ ಸುರಕ್ಷಿತಃ ।
ಗೃಹಾಣಿ ಚ ಪ್ರವೇಶ್ಯಾನ್ತರ್ವಿಧೇಯಃ ಸ್ಯಾದ್ಧುತಾಶನಃ ॥೪೯॥

ಕಮ್ಮಾರನ ಕುಲುಮೆಯಲ್ಲಿಯೂ ಸೂತಿಕಾಗೃಹದಲ್ಲಿಯೂ ಬೆಂಕಿ ಯನ್ನು ಬಹಳ ಎಚ್ಚರಿಕೆಯಿಂದ ಉರಿಸಬೇಕು. ಮನೆಗಳ ಒಳಭಾಗಕ್ಕೆ ತೆಗೆದುಕೊಂಡು ಹೋಗಿ ಬೆಂಕಿಯನ್ನು ಬಹಳ ಗೋಪ್ಯವಾಗಿಡಬೇಕು.

ಮಹಾದಣ್ಡಶ್ಚ ತಸ್ಯ ಸ್ಯಾದ್ಯಸ್ಯಾಗ್ನಿರ್ವೈ ದಿವಾ ಭವೇತ್ ।
ಪ್ರಘೋಷಯೇದಥೈವಂ ಚ ರಕ್ಷಣಾರ್ಥಂ ಪುರಸ್ಯ ಚ ॥೫೦॥

ನಗರದ ರಕ್ಷಣೆಯ ಸಲುವಾಗಿ "ಹಗಲಿನಲ್ಲಿ ಬೆಂಕಿಯನ್ನು ಹೊತ್ತಿಸುವವನಿಗೆ ಅಪಾರವಾದ ದಂಡವು ವಿಧಿಸಲ್ಪಡುತ್ತದೆ"–ಎಂದು ತಳವಾರರ ಮೂಲಕ ಡಂಗುರ ಹೊಡೆಸಬೇಕು. ಬೆಂಕಿಯಿದ್ದ ಕಡೆ ಹೊಗೆಯೇಳುತ್ತದೆ. ಅದರಿಂದ ಶತ್ರುಗಳಿಗೆ ಕೋಟೆಯೊಳಗಿನ ಆಯಕಟ್ಟಿನ ಸ್ಥಾನಗಳ ಸುಳಿವು ತಿಳಿದುಹೋಗುತ್ತದೆ.

ಭಿಕ್ಷುಕಾಂಶ್ಚಾಕ್ರಿಕಾಂಶ್ಚೈವ ಕ್ಲೀಬೋನ್ಮತ್ತಾನ್ಕುಶೀಲವಾನ್ ।
ಬಾಹ್ಯಾನ್ಕುರ್ಯಾನ್ನರಶ್ರೇಷ್ಠ ದೋಷಾಯ ಸ್ಯುರ್ಹಿ ತೇಽನ್ಯಥಾ ॥೫೧॥

ಯುದ್ಧವು ಪ್ರಾರಂಭವಾದೊಡನೆಯೇ ರಾಜನು ರಾಜ್ಯದಲ್ಲಿರುವ ಭಿಕ್ಷುಕರನ್ನೂ, ಹೊಗಳುಭಟರನ್ನೂ, ಬಂಡಿಯವರನ್ನೂ, ನಪುಂಸಕರನ್ನೂ,

ಹುಚ್ಚರನ್ನೂ, ನಟ-ಗಾಯಕರನ್ನೂ ಹೊರಕ್ಕೆ ಹಾಕಬೇಕು. ನರಶ್ರೇಷ್ಠನೇ! ಹಾಗೆ ಅವರನ್ನು ಹೊರಹಾಕದಿದ್ದರೆ ಅವರಿಂದಲೇ ವಿಪತ್ತುಂಟಾಗುತ್ತದೆ. ಶತ್ರು ಗೂಢಚಾರರೂ ಆ ವೇಷಗಳಲ್ಲಿದ್ದು ನಮ್ಮ ತಂಡಗಳಲ್ಲಿ ಸೇರಿ ರಾಷ್ಟ್ರಕ್ಕೇ ತೊಂದರೆಯನ್ನುಂಟುಮಾಡಬಹುದು.

ಚತ್ವರೇಷ್ವಥ ತೀರ್ಥೇಷು ಸಭಾಸ್ವಾವಸಥೇಷು ಚ ।
ಯಥಾರ್ಥವರ್ಣಂ ಪ್ರಣಿಧಿಂ ಕುರ್ಯಾತ್ಸರ್ವಸ್ಯ ಪಾರ್ಥಿವಃ ॥೫೨॥

ರಾಜನಾದವನು ಪ್ರಜೆಗಳ ಅಭಿಪ್ರಾಯವನ್ನು ತಿಳಿಯುವ ಸಲುವಾಗಿ ನಾಲ್ಕು ಮಾರ್ಗಗಳು ಸೇರುವ ಚೌಕಗಳಲ್ಲಿಯೂ, ತೀರ್ಥಕ್ಷೇತ್ರಗಳಲ್ಲಿಯೂ, ಸಭೆಗಳಲ್ಲಿಯೂ, ಧರ್ಮಶಾಲೆಗಳಲ್ಲಿಯೂ ಶುದ್ಧವರ್ಣನಾದ (ವರ್ಣಸಂಕರ ದಿಂದ ಹುಟ್ಟಿರದ) ಪುರುಷನನ್ನು ಗೂಢಚಾರನನ್ನಾಗಿ ನಿಯಮಿಸಬೇಕು.

ವಿಶಾಲಾನ್ರಾಜಮಾರ್ಗಾಂಶ್ಚ ಕಾರಯೀತ ನರಾಧಿಪಃ ।
ಪ್ರಪಾಶ್ಚ ವಿಪಣಾಂಶ್ಚೈವ ಯಥೋದ್ದೇಶಂ ಸಮಾವಿಶೇತ್ ॥೫೩॥

ರಾಜನಾದವನು ವಿಶಾಲವಾದ ರಾಜಮಾರ್ಗಗಳನ್ನು ಮಾಡಿಸಬೇಕು. ಅವಶ್ಯಕತೆಗೆ ಅನುಸಾರವಾಗಿ ಅರವಟ್ಟಿಗೆಗಳನ್ನೂ ಅಂಗಡಿಗಳನ್ನೂ ಇಡಿಸಬೇಕು.

ಭಾಣ್ಡಾಗಾರಾಯುಧಾಗಾರಾನ್ಯೋಧಾಗಾರಾಂಶ್ಚ ಸರ್ವಶಃ ।
ಅಶ್ವಾಗಾರಾನ್ಗಜಾಗಾರಾನ್ಬಲಾಧಿಕರಣಾನಿ ಚ ॥೫೪॥

ಪರಿಖಾಶ್ಚೈವ ಕೌರವ್ಯ ಪ್ರತೋಲೀರ್ನಿಷ್ಕುಟಾನಿ ಚ ।
ನ ಜಾತ್ವನ್ಯಃ ಪ್ರಪಶ್ಯೇತ ಗುಹ್ಯಮೇತದ್ಯುಧಿಷ್ಠಿರ ॥೫೫॥

ಧಾನ್ಯಗಳ ಕಣಜಗಳನ್ನೂ, ಆಯುಧಗಳ ಕೋಠಿಗಳನ್ನೂ, ಸೈನಿಕರು ವಾಸಮಾಡುವ ಸ್ಥಳಗಳನ್ನೂ, ಕುದುರೆಲಾಯಗಳನ್ನೂ, ಗಜಾಲಯಗಳನ್ನೂ, ಸೈನ್ಯದ ಶಿಬಿರಗಳನ್ನೂ, ಕಂದಕಗಳನ್ನೂ ಮತ್ತು ರಾಜನ ಉದ್ಯಾನವನಗಳನ್ನೂ–ಶತ್ರುಗಳ ದೃಷ್ಟಿಗೆ ಬೀಳದಂತೆ ಎಚ್ಚರಿಕೆ ವಹಿಸಿ ಕಾಯಬೇಕು. ಇವಿಷ್ಟೂ ಶತ್ರುವಿನಿಂದ ಗೋಪ್ಯವಾಗಿಡತಕ್ಕ ಸ್ಥಳಗಳು.

ಶತ್ರುಸೈನ್ಯದಿಂದ ಪೀಡಿತನಾದ ರಾಜನು ಅರ್ಥಸಂಚಯವನ್ನು ಮಾಡಬೇಕು. ಅದರ ಜೊತೆಗೆ ಗಾಯಾಳುಗಳ ಚಿಕಿತ್ಸೆಗಾಗಿ ತೈಲ

ಮೇದಸ್ಸು, ಜೇನುತುಪ್ಪ, ತುಪ್ಪ, ಎಲ್ಲ ವಿಧವಾದ ಔಷಧಗಳು, ಇದ್ದಿಲು, ದರ್ಭೆ, ಮೌಂಜಿ ಹುಲ್ಲು, ಮುತ್ತುಗ, ಬಾಣ, ಬಣ್ಣದ ವಸ್ತುಗಳು, ಹುಲ್ಲು, ಕಟ್ಟಿಗೆ, ವಿಷಯುಕ್ತವಾದ ಬಾಣಗಳು–ಇವುಗಳೆಲ್ಲವನ್ನೂ ಕೂಡಿಹಾಕಬೇಕು. ಇದೇ ರೀತಿಯಲ್ಲಿ ರಾಜನು–ಶಕ್ತಿ, ಋಷ್ಟಿ, ಪ್ರಾಸಗಳೇ ಮುಂತಾದ ಸಕಲವಿಧವಾದ ಆಯುಧಗಳನ್ನೂ, ಕವಚಗಳನ್ನೂ ಇನ್ನೂ ಇತರ ಅವಶ್ಯಕ ವಸ್ತುಗಳನ್ನೂ ಸಂಗ್ರಹಿಸಬೇಕು. ಸಕಲವಿಧವಾದ ಔಷಧಗಳನ್ನೂ, ಫಲ, ಮೂಲಗಳನ್ನೂ (ಗೆಡ್ಡೆ-ಗೆಣಸುಗಳನ್ನೂ,) ವಿಷವನ್ನು ಹೋಗಲಾಡಿಸುವ, ಗಾಯದ ಮೇಲೆ ಪಟ್ಟಿಯನ್ನು ಕಟ್ಟುವ, ರೋಗವನ್ನು ಹೋಗಲಾಡಿಸುವ ಮತ್ತು ಆಭಿಚಾರಿಕ ಕೃತ್ಯಗಳನ್ನು ನಿವಾರಿಸುವ ನಾಲ್ಕು ಬಗೆಯ ವೈದ್ಯರನ್ನೂ ವಿಶೇಷ ರೀತಿಯಿಂದ ಸಂಗ್ರಹಿಸಬೇಕು. (ಇಂತಹವರನ್ನು ಯಾವಾಗಲೂ ಹತ್ತಿರದಲ್ಲಿಯೇ ಇಟ್ಟುಕೊಂಡಿರಬೇಕು.)

ಯಾವ ವಿಧವಾದ ಶತ್ರುಗಳ ಬಾಧೆಗಳಾಗಲೀ ಉಪದ್ರವಗಳಾಗಲೀ ಇಲ್ಲದಿರುವಾಗ ರಾಜನು ನಟ-ನರ್ತಕರನ್ನೂ, ಮಲ್ಲಯುದ್ಧಮಾಡುವವರನ್ನೂ, ಇಂದ್ರಜಾಲ-ಮಹೇಂದ್ರಜಾಲಮಾಡುವವರನ್ನೂ ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಏಕೆಂದರೆ : ಇವರು ಪಟ್ಟಣಕ್ಕೆ ಶೋಭೆಯನ್ನು ಉಂಟು ಮಾಡುವವರಾಗಿರುತ್ತಾರೆ ಮತ್ತು ನಗರದ ಪ್ರಜೆಗಳನ್ನು ಸರ್ವಪ್ರಕಾರದಿಂದಲೂ ಉಲ್ಲಾಸಗೊಳಿಸುತ್ತಾರೆ.

ಯತಃ ಶಙ್ಕಾ ಭವೇಚ್ಚಾಪಿ ಭೃತ್ಯತೋಽಥಾಪಿ ಮನ್ತ್ರಿತಃ ।
ಪೌರೇಭ್ಯೋ ನೃಪತೇರ್ವಾಪಿ ಸ್ವಾಧೀನಾನ್ಕಾರಯೀತ ತಾನ್ ॥೬೧॥

ರಾಜನಿಗೆ ಸೇವಕನ ಕಡೆಯಿಂದಾಗಲೀ, ಮಂತ್ರಿಯ ಕಡೆಯಿಂದಾಗಲೀ ಪಟ್ಟಣಿಗರ ಕಡೆಯಿಂದಾಗಲೀ, ಮತ್ತೊಬ್ಬ ರಾಜನ ಕಡೆಯಿಂದಾಗಲೀ ಅಪಾಯವು ಒದಗುವುದೆಂದು ಸಂದೇಹವುಂಟಾದರೆ–ಉಪಾಯಾಂತರಗಳಿಂದ ಅಂತಹವರನ್ನು ಒಡನೆಯೇ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. (ಅಂತಹವರನ್ನು ಉಪಾಯಾಂತರದಿಂದ ಬಂಧಿಸಬೇಕು.)

ಕೃತೇ ಕರ್ಮಣಿ ರಾಜೇನ್ದ್ರ ಪೂಜಯೇದ್ಧನಸಂಚಯೈಃ ।
ದಾನೇನ ಚ ಯಥಾರ್ಹೇಣ ಸಾನ್ತ್ವೇನ ವಿವಿಧೇನ ಚ ॥೬೨॥

ಯಾವನಾದರೂ ಅಭೀಷ್ಟವಾದ ಕಾರ್ಯವನ್ನು ಮಾಡಿಕೊಟ್ಟರೆ ಅಂತಹವನನ್ನು ಯಥೇಚ್ಛವಾದ ಧನಪ್ರದಾನದಿಂದಲೂ, ಯಥಾಯೋಗ್ಯ ವಾದ ಪುರಸ್ಕಾರದಿಂದಲೂ, ಸುಮಧುರವಾದ ಮಾತುಗಳಿಂದಲೂ ಸತ್ಕರಿಸಬೇಕು.

ನಿರ್ವೇದಯಿತ್ವಾ ತು ಪರಂ ಹತ್ವಾ ವಾ ಕುರುನನ್ದನ ।
ತತೋಽನೃಣೋ ಭವೇದ್ರಾಜಾ ಯಥಾ ಶಾಸ್ತ್ರೇ ನಿದರ್ಶಿತಮ್ ॥೬೪॥

ಶತ್ರುರಾಜನನ್ನು ಪ್ರಹಾರಾದಿಗಳಿಂದ ಖಿನ್ನನಾಗುವಂತೆ ಮಾಡಿದರೆ ಅಥವಾ ಯುದ್ಧದಲ್ಲಿ ಸಂಹರಿಸಿದರೆ ಶಾಸ್ತ್ರದೃಷ್ಟವಾದ ವಿಧಿ-ವಿಧಾನಗಳಿಂದ ಶತ್ರುರಾಜನ ವಂಶೀಯರಿಗೇ ರಾಜ್ಯದಲ್ಲಿ ಪಟ್ಟಗಟ್ಟಿ ಪುರಸ್ಕರಿಸುವುದರಿಂದ ರಾಜನು ಆ ಋಣದಿಂದ ವಿಮುಕ್ತನಾಗುತ್ತಾನೆ.

ಯುಧಿಷ್ಠಿರ! ರಾಜನಾದವನು ಏಳು ವಸ್ತುಗಳನ್ನು ರಕ್ಷಿಸಿಯೇ ತೀರಬೇಕು. ಅವುಗಳು ಯಾವುವೆಂಬುದನ್ನು ಕೇಳು.

ಆತ್ಮಾಮಾತ್ಯಾಶ್ಚ ಕೋಶಾಶ್ಚ ದಣ್ಡೋ ಮಿತ್ರಾಣಿ ಚೈವ ಹಿ ।
ತಥಾ ಜನಪದಾಶ್ಚೈವ ಪುರಂ ಚ ಕುರುನನ್ದನ ।
ಏತತ್ಸಪ್ತಾತ್ಮಕಂ ರಾಜ್ಯಂ ಪರಿಪಾಲ್ಯಂ ಪ್ರಯತ್ನತಃ ॥೬೫॥

ತನ್ನ ಶರೀರ, ಮಂತ್ರಿಗಳು, ಬೊಕ್ಕಸಗಳು, ದಂಡ (ಸೈನ್ಯ), ಸ್ನೇಹಿತರು, ರಾಷ್ಟ್ರ ಮತ್ತು ರಾಜಧಾನೀ–ಇವುಗಳೇ ಆ ಏಳು ವಸ್ತುಗಳು. ರಾಜ್ಯವೆಂಬುದು ಯಾವಾಗಲೂ ಈ ಏಳು ವಸ್ತುಗಳಿಂದ ಕೂಡಿದುದಾಗಿರುತ್ತದೆ. ರಾಜನು ಪ್ರಯತ್ನಪೂರ್ವಕವಾಗಿ ಇವುಗಳನ್ನು ರಕ್ಷಿಸಬೇಕು.

ಪುರುಷವ್ಯಾಘ್ರನೇ! ಯಾವ ರಾಜನು ಆರು ಗುಣಗಳನ್ನೂ, ತ್ರಿವರ್ಗಗಳನ್ನೂ, ಮೂರು ಪರಮವರ್ಗಗಳನ್ನೂ ಚೆನ್ನಾಗಿ ತಿಳಿದು ಕೊಂಡಿರುವನೋ–ಅಂತಹ ರಾಜನು ಈ ಭೂಮಂಡಲವನ್ನು ಚೆನ್ನಾಗಿ ಉಪಭೋಗಿಸಬಲ್ಲನು.

ಷಡ್ಗುಣಗಳು ಯಾವುವೆಂಬುದನ್ನು ಹೇಳುವೆನು ಕೇಳು :

ಸಂಧಾನಾಸನಮಿತ್ಯೇವ ಯಾತ್ರಾಸಂಧಾನಮೇವ ಚ ।

ವಿಗೃಹ್ಯಾಸನಮಿತ್ಯೇವ ಯಾತ್ರಾಂ ಸಮ್ಪರಿಗೃಹ್ಯ ಚ ।
ದ್ವೈಧೀಭಾವಸ್ತಥಾನ್ಯೇಷಾಂ ಸಂಶ್ರಯೋಽಥ ಪರಸ್ಯ ಚ ॥೬೮॥

ಸಂಧಾನಾಸನಂ ಅಥವಾ ಸಂಧಾಯಾಸನಂ–ಸಮಾನಬಲವುಳ್ಳ ರಾಜರು ಯುದ್ಧದಲ್ಲಿ ಶಕ್ತಿಗುಂದಿ ಸಂಧಿಮಾಡಿಕೊಂಡು ಕುಳಿತುಕೊಳ್ಳುವುದು **ಯಾತ್ರಾಸಂಧಾನಂ ಅಥವಾ ಸಂಧಾಯಾಸನಂ**–ಪ್ರಬಲನಾದ ಶತ್ರುವಿನೊಡನೆ ಹೋರಾಡಿ ಪರಾಜಿತನಾದ ರಾಜನು ಶತ್ರು ಅಥವಾ ಮಿತ್ರನೊಡನೆ ಸೇರಿಕೊಂಡು ಕುಳಿತುಕೊಳ್ಳುವುದು. **ವಿಗೃಹ್ಯಾಸನಂ**–ಶತ್ರುವು ಮುತ್ತಿಗೆ ಹಾಕಿದನಂತರ ಅಶಕ್ತನಾದ ರಾಜನು ಕೋಟೆಯನ್ನು ಪ್ರವೇಶಿಸಿ ಆತ್ಮರಕ್ಷಣೆಯನ್ನು ಮಾಡಿಕೊಂಡು ಕುಳಿತುಕೊಳ್ಳುವುದು. **ಯಾತ್ರಾಸಂಪರಿಗ್ರಹಾಸನಂ ಅಥವಾ ಪ್ರಸಂಗಾಸನಂ**–ಶತ್ರುವಿನೊಡನೆ ಯುದ್ಧಕ್ಕೆ ಹೊರಟು ಮಧ್ಯದಲ್ಲಿ ಮಿತ್ರನಿಗಾಗಿ ನಿರೀಕ್ಷಿಸಿ ಕುಳಿತುಕೊಳ್ಳುವುದು. **ದ್ವೈಧೀಭಾವಃ**–ಪ್ರಬಲರಾದ ಇಬ್ಬರು ಶತ್ರುಗಳಲ್ಲಿ ಅವರಿಬ್ಬರಿಗೂ ತಿಳಿಯದಂತೆ ಇಬ್ಬರಿಗೂ ಸಮನಾಗಿರುವಂತೆ ನಟಿಸುತ್ತಾ ಕಪಟದಿಂದ ವ್ಯವಹರಿಸುತ್ತಿರುವುದು ಅಥವಾ ಶತ್ರುವಿನ ಸೈನ್ಯವನ್ನು ಬೇರ್ಪಡಿಸಿ ಮೂಲಬಲದೊಡನೆ ಸ್ನೇಹಮಾಡಿಕೊಂಡು ಶತ್ರುವಿನೊಡನೆ ಯುದ್ಧಮಾಡುವುದು. **ಪರಸಂಶ್ರಯಃ**–ಪ್ರಬಲನಾದ ಶತ್ರುವಿನೊಡನೆ ಸಂಧಿಮಾಡಿಕೊಂಡು ದುರ್ಬಲನೊಡನೆ ಯುದ್ಧಮಾಡುವುದು ಇವೇ ಆ ಆರು ಗುಣಗಳು.

ಯುಧಿಷ್ಠಿರ! ತ್ರಿವರ್ಗವೆಂದು ಯಾವುದು ಹೇಳಲ್ಪಟ್ಟಿರುವುದೋ ಅದನ್ನೂ ನೀನು ಏಕಾಗ್ರಚಿತ್ತನಾಗಿ ಕೇಳು :

ಕ್ಷಯಃ ಸ್ಥಾನಂ ಚ ವೃದ್ಧಿಶ್ಚ ತ್ರಿವರ್ಗಃ ಪರಮಸ್ತಥಾ ।
ಧರ್ಮಶ್ಚಾರ್ಥಶ್ಚ ಕಾಮಶ್ಚ ಸೇವಿತವ್ಯೋಽಥ ಕಾಲತಃ ।
ಧರ್ಮೇಣ ಚ ಮಹೀಪಾಲಶ್ಚಿರಂ ಪಾಲಯತೇ ಮಹೀಮ್ ॥೭೦॥

* ಕ್ಷಯ, ಸ್ಥಾನ, ವೃದ್ಧಿ–ಇವು ತ್ರಿವರ್ಗಗಳು. ಶತ್ರುವಿಗಿಂತಲೂ ಕಡಿಮೆ

---

* ಅರ್ಥಶಾಸ್ತ್ರಜ್ಞರು ಇದಕ್ಕೆ ಈ ವಿಧವಾದ ವಿವರಣೆಯನ್ನು ಕೊಟ್ಟಿರುತ್ತಾರೆ. ಸ್ವಕರ್ಮಣಾಮುಪಘಾತಂ ಪಶ್ಯೇತ್–ನೇತರಸ್ಯ, ತಸ್ಮಿನ್ನತಿಷ್ಠೇತ್-ಏಷ ಕ್ಷಯಃ ತನ್ನ ಕೆಲಸಗಳಿಗೆ ಹಾನಿಯುಂಟಾಗುವುದೆಂದೂ ಮತ್ತು ಶತ್ರುಗಳ ಕೆಲಸಗಳಿಗೆ ಹಾನಿ

ಯಾದ ಶಕ್ತಿಯಿರುವುದು ಕ್ಷಯ. ಶತ್ರುವಿಗಿಂತಲೂ ಮಿಗಿಲಾದ ಶಕ್ತಿಯನ್ನು ಹೊಂದಿರುವುದು ವೃದ್ಧಿ. ಹೆಚ್ಚುಕಡಿಮೆಗಳೆರಡೂ ಇಲ್ಲದೇ ಸಮಾನ ವಾಗಿರುವುದು ಸ್ಥಾನ. ಈ ವಿಷಯಗಳನ್ನು ರಾಜನು ಚೆನ್ನಾಗಿ ತಿಳಿದು ಕೊಂಡಿರಬೇಕು.

ಪರಮತ್ರಿವರ್ಗಗಳೆಂದರೆ ಧರ್ಮಾರ್ಥಕಾಮಗಳು. ಇವುಗಳನ್ನು ರಾಜನು ಕಾಲಾನುಗುಣವಾಗಿ ಸೇವಿಸಬೇಕು. ರಾಜನು ಧರ್ಮಾನುಸಾರವಾಗಿ ನಡೆದುಕೊಂಡುದೇ ಆದರೆ ಅವನು ಚಿರಕಾಲದವರೆಗೂ ಭೂಮಂಡಲವನ್ನು ಪಾಲನೆಮಾಡಲು ಸಮರ್ಥನಾಗುತ್ತಾನೆ.

ಯಾದವೀಪುತ್ರ! ನಿನಗೆ ಮಂಗಳವಾಗಲಿ. ಇದೇ ಅರ್ಥವುಳ್ಳ ಎರಡು ಶ್ಲೋಕಗಳನ್ನು ಸ್ವತಃ ಬೃಹಸ್ಪತ್ಯಾಚಾರ್ಯರೇ ಹೇಳಿದ್ದಾರೆ. ಅವುಗಳನ್ನು ನೀನೂ ಕೇಳು.

ಕೃತ್ವಾ ಸರ್ವಾಣಿ ಕಾರ್ಯಾಣಿ ಸಮ್ಯಕ್ಸಮ್ಪಾಲ್ಯ ಮೇದಿನೀಮ್ ।
ಪಾಲಯಿತ್ವಾ ತಥಾ ಪೌರಾನ್ಪರತ್ರ ಸುಖಮೇಧತೇ ॥೭೨॥

ಎಲ್ಲ ಕರ್ತವ್ಯಗಳನ್ನೂ ಶಾಸ್ತ್ರೋಕ್ತರೀತಿಯಲ್ಲಿ ಮುಗಿಸಿ, ಚೆನ್ನಾಗಿ ರಾಜ್ಯವಾಳುತ್ತಾ, ಪ್ರಜೆಗಳನ್ನೂ ಮಕ್ಕಳಂತೆ ಚೆನ್ನಾಗಿ ರಕ್ಷಿಸುತ್ತಾ ಇರುವ ರಾಜನು ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ.

ಕಿಂ ತಸ್ಯ ತಪಸಾ ರಾಜ್ಞಃ ಕಿಂ ಚ ತಸ್ಯಾಧ್ವರೈರಪಿ ।
ಸುಪಾಲಿತಪ್ರಜೋ ಯಃ ಸ್ಯಾತ್ಸರ್ವಧರ್ಮವಿದೇವ ಸಃ ॥೭೩॥

ತನ್ನ ಪ್ರಜೆಗಳನ್ನು ಚೆನ್ನಾಗಿ ಪರಿಪಾಲನೆಮಾಡುವ ರಾಜನಿಗೆ ತಪಸ್ಸಿನಿಂದೇನಾಗಬೇಕಾಗಿದೆ? ಯಾಗಗಳಿಂದೇನಾಗಬೇಕಾಗಿದೆ? (ಧರ್ಮದಿಂದ ಪ್ರಜೆಗಳನ್ನು ಪಾಲನೆಮಾಡುವ ರಾಜನು ತಪಸ್ಸನ್ನೂ ಮಾಡಬೇಕಾಗಿಲ್ಲ;

ಯುಂಟಾಗುವುದಿಲ್ಲವೆಂದೂ ತೋರುವ ಗುಣವನ್ನು ಆಶ್ರಯಿಸುವುದು ಕ್ಷಯಕ್ಕೆ (ವಿನಾಶಕ್ಕೆ) ಕಾರಣವಾಗುವುದರಿಂದ ಅದು ಕ್ಷಯವು. ಯಸ್ಮಿನ್ವಾ **ಗುಣೇ** ಸ್ಥಿತಃ ಸ್ವಕರ್ಮವೃದ್ಧಿಂ ಕ್ಷಯಂ ವಾ ನಾಭಿಪಶ್ಯೇತ್ ಏತತ್ ಸ್ಥಾನಂ–ತನಗೆ ವೃದ್ಧಿಯನ್ನಾಗಲೀ ಕ್ಷಯವನ್ನಾಗಲೀ ಉಂಟುಮಾಡದಿರುವ ಗುಣಾಶ್ರಯವು ಕೋಶ-ದಂಡಗಳ ಯಥಾಸ್ಥಿತಿಗೆ ಕಾರಣವಾಗುವುದರಿಂದ ಅದು ಸ್ಥಾನ. ಯಸ್ಮಿನ್ವಾ **ಗುಣೇ** ಸ್ಥಿತಃ

ಯಾಗಾದಿಗಳನ್ನೂ ಮಾಡಬೇಕಾಗಿಲ್ಲ.) ಪ್ರಜಾಪಾಲನನಿಷ್ಠನಾದ ರಾಜನು ಸ್ವತಃ ಎಲ್ಲ ಧರ್ಮಗಳನ್ನೂ ತಿಳಿದವನಾಗಿರುತ್ತಾನೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದಣ್ಡನೀತಿಶ್ಚ ರಾಜಾ ಚ ಸಮಸ್ತೌ ತಾವುಭಾವಪಿ ।
ಕಸ್ಯ ಕಿಂ ಕುರ್ವತಃ ಸಿದ್ಧ್ಯೇತ್ತನ್ಮೇ ಬ್ರೂಹಿ ಪಿತಾಮಹ ॥೭೪॥

"ಪಿತಾಮಹ! ದಂಡನೀತಿ ಮತ್ತು ರಾಜ–ಈ ಎರಡೂ ಸೇರಿದರೆ ರಾಜಕಾರ್ಯವು ನಡೆಯುತ್ತದೆ. ಯಾರಿಗೆ ಏನನ್ನು ಮಾಡಿದರೆ ಈ ಪ್ರಜಾಪರಿಪಾಲನಾಕಾರ್ಯವು ಸಿದ್ಧಿಸುತ್ತದೆಯೆಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ :

"ಭರತನಂದನ! ದಂಡನೀತಿಯಿಂದ ರಾಜನಿಗೂ ಮತ್ತು ಪ್ರಜೆಗಳಿಗೂ ಎಂತಹ ಮಹಾಸೌಭಾಗ್ಯವುಂಟಾಗುವುದೆಂಬುದನ್ನು ಲೋಕಪ್ರಸಿದ್ಧವಾದ ಮತ್ತು ಯುಕ್ತಿಯುಕ್ತವಾದ ಶಬ್ದಗಳ ಮೂಲಕವಾಗಿ ಹೇಳುವ ನನ್ನ ಮಾತನ್ನು ಯಥಾವತ್ತಾಗಿ ಕೇಳು.

ದಣ್ಡನೀತಿಃ ಸ್ವಧರ್ಮೇಭ್ಯಶ್ಚಾತುರ್ವರ್ಣ್ಯಂ ನಿಯಚ್ಛತಿ ।
ಪ್ರಯುಕ್ತಾ ಸ್ವಾಮಿನಾ ಸಮ್ಯಗಧರ್ಮೇಭ್ಯೋ ನಿಯಚ್ಛತಿ ॥೭೬॥

ರಾಜನೇನಾದರೂ ದಂಡನೀತಿಯನ್ನು ಉತ್ತಮರೀತಿಯಿಂದ ಪ್ರಯೋಗಿಸಿದ್ದೇ ಆದರೆ–ನಾಲ್ಕು ವರ್ಣದವರೂ ತಮ್ಮ ತಮ್ಮ ವರ್ಣಾಶ್ರಮೋಕ್ತವಾದ ಧರ್ಮದಲ್ಲಿಯೇ ಇರುವಂತಾಗುತ್ತದೆ. ಸಮ್ಯಕ್ಪ್ರಯುಕ್ತವಾದ ದಂಡನೀತಿಯು ವರ್ಣಸಂಕರವಾಗುವುದನ್ನೂ, ಪ್ರಜೆಗಳು ವರ್ಣಾಶ್ರಮಧರ್ಮ

ಪಶ್ಯೇತ್ ಇಹಸ್ಥಃ ಶಕ್ಷ್ಯಾಮಿ ದುರ್ಗಸೇತುಕರ್ಮವಣಿಕ್ಪಥಶೂನ್ಯನಿವೇಶಖನಿದ್ರವ್ಯಹಸ್ತಿವನಕರ್ಮಾಣ್ಯಾತ್ಮನಃ ಪ್ರವರ್ತಯಿತುಂ ಪರಸ್ಯ ಚೈತಾನಿ ಕರ್ಮಾಣ್ಯುಪಹನ್ತುಂ ಇತಿ ತಮಾತಿಷ್ಠೇತ್–ಸಾ ವೃದ್ಧಿಃ –ದುರ್ಗದ ಕೆಲಸ, ನೀರಾವರಿ, ಸಾರಿಗೆ ಮಾರ್ಗಗಳು, ಕೃಷಿ, ಆಕರ–ಇವೇ ಮುಂತಾದುವನ್ನು ನಿರ್ವಹಿಸಿ ಶತ್ರುಗಳಲ್ಲಿರುವ ಇವುಗಳನ್ನು ನಾಶಮಾಡಲು ತಾನು ಸಮರ್ಥನೆಂಬ ಗುಣವನ್ನಾಶ್ರಯಿಸುವುದು ವೃದ್ಧಿ. ಒಟ್ಟಿನಲ್ಲಿ ಹೇಳುವುದಾದರೆ : ಕೋಶ-ದಂಡಗಳು ಕಡಿಮೆಯಾಗುವುದು ಕ್ಷಯ. ಕೋಶ-ದಂಡಗಳು ಇದ್ದಂತೆಯೇ ಇರುವುದು ಸ್ಥಾನ. ಕೋಶ-ದಂಡಗಳ ಆಧಿಕ್ಯವು ವೃದ್ಧಿ.

ಗಳಿಂದ ಭ್ರಷ್ಟರಾಗುವುದನ್ನೂ ತಡೆಯುತ್ತದೆ. ಪ್ರಜೆಗಳು ಅಧರ್ಮದ ಹಾದಿಯನ್ನು ಹಿಡಿಯದಂತೆ ತಡೆಹಾಕುತ್ತದೆ.

ಚಾತುರ್ವರ್ಣ್ಯೇ ಸ್ವಕರ್ಮಸ್ಥೇ ಮರ್ಯಾದಾನಾಮಸಂಕರೇ ।
ದಣ್ಡನೀತಿಕೃತೇ ಕ್ಷೇಮೇ ಪ್ರಜಾನಾಮಕುತೋಭಯೇ ॥೭೭॥

ಸ್ವಾಮ್ಯೇ ಪ್ರಯತ್ನಂ ಕುರ್ವನ್ತಿ ತ್ರಯೋ ವರ್ಣಾ ಯಥಾವಿಧಿ ।
ತಸ್ಮಾದೇವ ಮನುಷ್ಯಾಣಾಂ ಸುಖಂ ವಿದ್ಧಿ ಸಮಾಹಿತಮ್ ॥೭೮॥

ಯುಧಿಷ್ಠಿರ! ಸಮ್ಯಕ್ಪ್ರಯುಕ್ತವಾದ ದಂಡನೀತಿಯಿಂದಾಗಿ ಸರ್ವತ್ರ ಪ್ರಜಾಕ್ಷೇಮವುಂಟಾಗಲಾಗಿ, ನಾಲ್ಕು ವರ್ಣದವರೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿರುತ್ತಾರೆ. ವರ್ಣಧರ್ಮದ ಮರ್ಯಾದೆಗಳ ಸಂಕರವಾಗುವುದಿಲ್ಲ. (ಬ್ರಾಹ್ಮಣನು ಕ್ಷತ್ರಿಯಧರ್ಮವನ್ನಾಗಲೀ ಕ್ಷತ್ರಿಯನು ಬ್ರಾಹ್ಮಣನ ಧರ್ಮವನ್ನಾಗಲೀ ಅನುಸರಿಸಲು ಹೋಗುವುದಿಲ್ಲ.) ಪ್ರಜೆಗಳೆಲ್ಲರೂ ಭಯರಹಿತರಾಗಿ ಕುಶಲಿಗಳಾಗಿರುತ್ತಾರೆ. ಆಗ ಮೂರು ವರ್ಣದವರೂ ಮನಶ್ಶಾಂತಿಗಾಗಿ (ಆಧ್ಯಾತ್ಮಸಾಧನೆಗಾಗಿ) ಪ್ರಯತ್ನಮಾಡುತ್ತಾರೆ. ಆದುದರಿಂದ ದಂಡನೀತಿಯಲ್ಲಿಯೇ ಎಲ್ಲರ ಸುಖವೂ ಅಡಗಿರುವುದೆಂಬುದನ್ನು ನೀನು ಚೆನ್ನಾಗಿ ಅವಧರಿಸು.

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾ ಭೂದ್ರಾಜಾ ಕಾಲಸ್ಯ ಕಾರಣಮ್ ॥೭೯॥

ಯುಧಿಷ್ಠಿರ! ಕಾಲಾನುಗುಣವಾಗಿ ರಾಜನಿರುತ್ತಾನೆಯೇ? ರಾಜಾನುಗುಣವಾಗಿ ಕಾಲವಿರುತ್ತದೆಯೇ? ಕಾಲದ ವೈಪರೀತ್ಯದಿಂದಾಗಿ ರಾಜರು ಬಂದುಹೋಗುತ್ತಿರುತ್ತಾರೆಯೇ? ದೇಶದಲ್ಲಿ ನಡೆಯುವ ಸುಖ-ಕಷ್ಟಗಳೆಲ್ಲಕ್ಕೂ ಕಾಲವೇ ಕಾರಣವಾಗುತ್ತದೆಯೇ? 'ದುಷ್ಕಾಲವು ಬಂದಿತು. ಅದರಿಂದ ಹೀಗಾಯಿತು' ಎನ್ನುವುದು ಸರಿಯೇ? ಕಾಲದ ವೈಪರೀತ್ಯಕ್ಕಾಗಲೀ ಸ್ವಾಸ್ಥ್ಯಕ್ಕಾಗಲೀ ರಾಜನು ಕಾರಣನಾಗುತ್ತಾನೆಯೇ?—ಎಂಬ ಸಂಶಯವು ನಿನಗುಂಟಾಗುವುದು ಬೇಡ. ಕಾಲದ ವೈಪರೀತ್ಯಕ್ಕಾಗಲೀ ಸ್ವಾಸ್ಥ್ಯಕ್ಕಾಗಲೀ ಸರ್ವಪ್ರಕಾರದಿಂದಲೂ ರಾಜನೇ ಕಾರಣನಾಗುತ್ತಾನೆ. ದುಷ್ಕಾಲವು ಬಂತೆಂದರೆ ದುರ್ನೀತಿಯ ರಾಜನು ರಾಜ್ಯವನ್ನಾಳುತ್ತಿರುವ

ನೆಂದೇ ಅರ್ಥ. ರಾಜನ ಸಮ್ಯಕ್ಪ್ರಯುಕ್ತವಾದ ಅಥವಾ ಅಸಮ್ಯಕ್ಪ್ರಯುಕ್ತವಾದ ದಂಡನೀತಿಗೆ ಅನುಸಾರವಾಗಿ ಸುಭಿಕ್ಷ ಅಥವಾ ದುರ್ಭಿಕ್ಷಕಾಲಗಳು ಉಂಟಾಗುತ್ತವೆಯೇ ಹೊರತು ಸುಭಿಕ್ಷವಾಗಲು ಅಥವಾ ದುರ್ಭಿಕ್ಷವಾಗಲು ಕಾಲಕ್ಕೆ ಯಾವ ವಿಧವಾದ ಸ್ವಾಯತ್ತತೆಯೂ ಇಲ್ಲ. ರಾಜನು ಧರ್ಮಿಷ್ಠನಾಗಿದ್ದರೆ ಕಾಲವೂ ಧರ್ಮಿಷ್ಠವಾಗಿರುತ್ತದೆ. ರಾಜನು ಅಧರ್ಮಿಷ್ಠ ನಾದರೆ ಕಾಲವೂ ಅಧರ್ಮದಿಂದಲೇ ತುಂಬಿ-ತುಳುಕಾಡುತ್ತಿರುತ್ತದೆ. ಆದುದರಿಂದ ಕಾಲಕ್ಕೆ ರಾಜನೇ ಕಾರಣನೆಂಬುದು ನಿಸ್ಸಂದೇಹವಾದ ವಿಷಯವಾಗಿರುತ್ತದೆ.

ದಣ್ಡನೀತ್ಯಾಂ ಯದಾ ರಾಜಾ ಸಮ್ಯಕ್ಕಾರ್ತ್ಸ್ನ್ಯೇನ ವರ್ತತೇ ।
ತದಾ ಕೃತಯುಗಂ ನಾಮ ಕಾಲಸೃಷ್ಟಂ ಪ್ರವರ್ತತೇ ॥೮೦॥

ಚತುರ್ಯುಗಗಳೂ ಅಥವಾ ಯುಗಧರ್ಮಗಳೂ ರಾಜನು ಪ್ರಯೋಗಿಸುವ ದಂಡನೀತಿಗೆ ಅನುಸಾರವಾಗಿಯೇ ಪರಿವರ್ತನೆಯನ್ನು ಹೊಂದುತ್ತಿರುತ್ತವೆ. ಯಾವಾಗ ರಾಜನು ದಂಡನೀತಿಯನ್ನು ಸಂಪೂರ್ಣವಾಗಿ ಮತ್ತು ಚೆನ್ನಾಗಿ ಪ್ರಯೋಗಿಸುತ್ತಾನೆಯೋ, ದಂಡನೀತಿಯ ಪ್ರಯೋಗದಲ್ಲಿ ಯಾವ ವಿಧವಾದ ದೋಷವೂ ಇರುವುದಿಲ್ಲವೋ–ಆಗ ದಂಡನೀತಿಯ ಪ್ರಭಾವದಿಂದಾಗಿ ಕಾಲವು ಸಂಪೂರ್ಣವಾಗಿ ಧರ್ಮದಿಂದ ಕೂಡಿದ ಕೃತಯುಗವೆಂಬ ಹೆಸರಿನ ಕಾಲವಾಗಿ ಪರಿವರ್ತನೆಯನ್ನು ಹೊಂದುತ್ತದೆ.

ತತಃ ಕೃತಯುಗೇ ಧರ್ಮೋ ನಾಧರ್ಮೋ ವಿದ್ಯತೇ ಕ್ವಚಿತ್ ।
ಸರ್ವೇಷಾಮೇವ ವರ್ಣಾನಾಂ ನಾಧರ್ಮೇ ರಮತೇ ಮನಃ ॥೮೧॥

ರಾಜನ ಸುಪ್ರಯುಕ್ತವಾದ ದಂಡನೀತಿಯ ಪರಿಣಾಮವಾಗಿ ಪರಿವರ್ತಿತವಾದ ಕೃತಯುಗದಲ್ಲಿ ಸರ್ವತ್ರ ಧರ್ಮವೇ ಇರುತ್ತದೆ. ಯಾವುದೇ ಸ್ಥಳದಲ್ಲಾಗಲೀ ಯಾರ ಹೃದಯದಲ್ಲಾಗಲೀ ಅಧರ್ಮವು ಲೇಶಮಾತ್ರವೂ ಇರುವುದಿಲ್ಲ. ಎಲ್ಲ ವರ್ಣಗಳವರ ಮನಸ್ಸೂ ಅಧರ್ಮಕಾರ್ಯಗಳನ್ನು ಮಾಡಲು ಇಚ್ಛೆಪಡುವುದಿಲ್ಲ. ಅಧರ್ಮದ ಕಡೆಗೆ ಸತ್ಯಯುಗದ ಜನಗಳ ಮನಸ್ಸೇ ಹರಿಯುವುದಿಲ್ಲ.

ಯೋಗಕ್ಷೇಮಾಃ ಪ್ರವರ್ತನ್ತೇ ಪ್ರಜಾನಾಂ ನಾತ್ರ ಸಂಶಯಃ ।
ವೈದಿಕಾನಿ ಚ ಸರ್ವಾಣಿ ಭವನ್ತ್ಯಪಿ ಗುಣಾನ್ಯುತ ॥೮೨॥

ರಾಜನ ಸುನೀತಿಯಿಂದ ಕಾಲವು ಕೃತಯುಗಕ್ಕೆ ಪರಿವರ್ತಿತವಾಗಿ ಪ್ರಜೆಗಳಿಗೆ ಯೋಗ-ಕ್ಷೇಮಗಳುಂಟಾಗುತ್ತವೆ. ಸಕಲವಿಧವಾದ ವೇದೋಕ್ತವಾದ ಕರ್ಮಗಳೂ ಉತ್ಕರ್ಷವನ್ನು ಹೊಂದುತ್ತವೆ.

ಋತವಶ್ಚ ಸುಖಾಃ ಸರ್ವೇ ಭವನ್ತ್ಯುತ ನಿರಾಮಯಾಃ ।
ಪ್ರಸೀದನ್ತಿ ನರಾಣಾಂ ಚ ಸ್ವರವರ್ಣಮನಾಂಸಿ ಚ ॥೮೩॥

ಸರ್ವರ್ತುಗಳೂ ಮಾನವನಿಗೆ ಸುಖಾವಹವಾಗಿಯೇ ಇರುತ್ತವೆ. ಎಲ್ಲರೂ ನೀರೋಗದೃಢಕಾಯರಾಗಿರುತ್ತಾರೆ. ಸತ್ಯಯುಗದಲ್ಲಿ ಸ್ವರ-ವರ್ಣ-ಮನಸ್ಸುಗಳು ಮಾನವರಿಗೆ ಪ್ರಸನ್ನವಾಗಿರುತ್ತವೆ. ಮಾನವರು ಶುದ್ಧಮನಸ್ಕರೂ, ಸ್ಪಷ್ಟಗಂಭೀರಸ್ವರವುಳ್ಳವರೂ, ಪ್ರಶಾಂತಮನಸ್ಕರೂ ಮತ್ತು ಪ್ರಸನ್ನಮುಖವುಳ್ಳವರೂ ಆಗಿರುತ್ತಾರೆ.

ವ್ಯಾಧಯೋ ನ ಭವನ್ತ್ಯತ್ರ ನಾಲ್ಪಾಯುರ್ದೃಶ್ಯತೇ ನರಃ ।
ವಿಧವಾ ನ ಭವನ್ತ್ಯತ್ರ ಕೃಪಣೋ ನ ತು ಜಾಯತೇ ॥೮೪॥

ಸತ್ಯಯುಗದಲ್ಲಿ ರೋಗ-ರುಜಿನಗಳೇ ಇರುವುದಿಲ್ಲ. ಅಲ್ಪಾಯುವಾದ ಮನುಷ್ಯನೇ ಎಲ್ಲಿಯೂ ಕಾಣುವುದಿಲ್ಲ. (ಎಲ್ಲರೂ ದೀರ್ಘಾಯುಷ್ಮಂತರಾಗಿರುತ್ತಾರೆ.) ಸ್ತ್ರೀಯರು ವಿಧವೆಯರಾಗುವುದಿಲ್ಲ. ಸತ್ಯಯುಗದಲ್ಲಿ ಕೃಪಣನು ಇರುವುದೇ ಇಲ್ಲ.

ಅಕೃಷ್ಟಪಚ್ಯಾ ಪೃಥಿವೀ ಭವನ್ತ್ಯೋಷಧಯಸ್ತಥಾ ।
ತ್ವಕ್ಪತ್ರಫಲಮೂಲಾನಿ ವೀರ್ಯವನ್ತಿ ಭವನ್ತಿ ಚ ॥೮೫॥

ಕೃಷಿ ಮಾಡದೆಯೇ ಭೂಮಿಯಲ್ಲಿ ಬೆಳೆಗಳು ಬೆಳೆಯುತ್ತವೆ. ಓಷಧಿಲತೆಗಳೂ ತಾವೇ ತಾವಾಗಿ ಬೆಳೆಯುತ್ತವೆ. ತೊಗಟೆಗಳೂ, ಎಲೆಗಳೂ, ಫಲಗಳೂ ಮತ್ತು ಬೇರುಗಳೂ ಎಲ್ಲವೂ ವೀರ್ಯವತ್ತಾಗಿರುತ್ತವೆ. (ರಸವತ್ತಾಗಿರುತ್ತವೆ.)

ನಾಧರ್ಮೋ ವಿದ್ಯತೇ ತತ್ರ ಧರ್ಮ ಏವ ತು ಕೇವಲಮ್ ।
ಇತಿ ಕಾರ್ತಯುಗಾನೇತಾನ್ಧರ್ಮಾನ್ವಿದ್ಧಿ ಯುಧಿಷ್ಠಿರ ॥೮೬॥

ಯುಧಿಷ್ಠಿರ! ಸತ್ಯಯುಗದಲ್ಲಿ ಅಧರ್ಮವೆಂಬುದೇ ಇರುವುದಿಲ್ಲ.

ಕೇವಲ ಧರ್ಮವೇ ಸರ್ವತ್ರ ಪ್ರಚಲಿತವಾಗಿರುತ್ತದೆ. ರಾಜನ ಸುಪ್ರಯುಕ್ತವಾದ ದಂಡನೀತಿಯ ಪರಿಣಾಮದಿಂದಾಗಿ ಕಾಲವು ಸತ್ಯಯುಗವಾಗಿ ಪರಿವರ್ತಿತವಾದಾಗ ಆ ಯುಗಕ್ಕೆ ಸಂಬಂಧಿಸಿದಂತೆ ಈ ಧರ್ಮಗಳು ಇರುತ್ತವೆಯೆಂಬುದನ್ನು ತಿಳಿ.

ದಣ್ಡನೀತ್ಯಾಂ ಯದಾ ರಾಜಾ ತ್ರೀನಂಶಾನನುವರ್ತತೇ ।
ಚತುರ್ಥಮಂಶಮುತ್ಸೃಜ್ಯ ತದಾ ತ್ರೇತಾ ಪ್ರವರ್ತತೇ ॥೮೭॥

ಅಶುಭಸ್ಯ ಚತುರ್ಥಾಂಶಸ್ತ್ರೀನಂಶಾನನುವರ್ತತೇ ।
ಕೃಷ್ಟಪಚ್ಯೈವ ಪೃಥಿವೀ ಭವನ್ತ್ಯೋಷಧಯಸ್ತಥಾ ॥೮೮॥

ಯಾವಾಗ ರಾಜನು ದಂಡನೀತಿಯನ್ನು ಪೂರ್ಣರೂಪದಿಂದ ಪ್ರಯೋಗಿಸದೇ ಮೂರು ಪಾದಗಳನ್ನು ಮಾತ್ರವೇ ಪ್ರಯೋಗಿಸುತ್ತಾನೆಯೋ (ದಂಡನೀತಿಯಲ್ಲಿ ಸ್ವಲ್ಪ ಶೈಥಿಲ್ಯವುಂಟಾಗುವುದೋ) ಆಗ ಕಾಲವು ತ್ರೇತಾಯುಗವಾಗಿ ಪರಿವರ್ತನೆಯನ್ನು ಹೊಂದುತ್ತದೆ. ತ್ರೇತಾಯುಗದಲ್ಲಿ ಬೆಳೆಯನ್ನು ಬೆಳೆಯಲು ಮತ್ತು ಓಷಧಿಲತೆಗಳನ್ನು ಬೆಳೆಯಲು ಭೂಮಿಯನ್ನು ಕೃಷಿಮಾಡಲೇಬೇಕು. ಕೃಷಿಮಾಡಿದ ಭೂಮಿಯು ಮಾತ್ರವೇ ಫಸಲನ್ನು ನೀಡುತ್ತದೆ.

ಅರ್ಧಂ ತ್ಯಕ್ತ್ವಾ ಯದಾ ರಾಜಾ ನೀತ್ಯರ್ಧಮನುವರ್ತತೇ ।
ತತಸ್ತು ದ್ವಾಪರಂ ನಾಮ ಸ ಕಾಲಃ ಸಮ್ಪ್ರವರ್ತತೇ ॥೮೯॥

ಯಾವಾಗ ರಾಜನು ದಂಡನೀತಿಯಲ್ಲಿ ಅರ್ಧಭಾಗವನ್ನು ಮಾತ್ರವೇ ಪ್ರಯೋಗಿಸುತ್ತಾನೆಯೋ (ದಂಡನೀತಿಯು ಮತ್ತಷ್ಟು ಶಿಥಿಲಗೊಳ್ಳುವುದೋ)–ಆಗ ಕಾಲವು ದ್ವಾಪರಯುಗವಾಗಿ ಪರಿವರ್ತನೆಗೊಳ್ಳುತ್ತದೆ.

ಅಶುಭಸ್ಯ ಯದಾ ತ್ವರ್ಧಂ ದ್ವಾವಂಶಾವನುವರ್ತತೇ ।
ಕೃಷ್ಟಪಚ್ಯೈವ ಪೃಥಿವೀ ಭವತ್ಯರ್ಧಫಲಾ ತಥಾ ॥೯೦॥

ಆ ಯುಗದಲ್ಲಿ ಪಾಪದ ಅರ್ಧಭಾಗವನ್ನು ಪುಣ್ಯದ ಅರ್ಧಭಾಗವು ಅನುಸರಿಸುವುದರಿಂದ ಕೃಷಿಯಿಂದಲೇ ಬೆಳೆಯಾಗುವುದು ಮಾತ್ರವಲ್ಲದೇ ಬೆಳೆಯಾದರೂ ತ್ರೇತಾಯುಗದಲ್ಲಾಗುವ ಬೆಳೆಯ ಅರ್ಧಭಾಗದಷ್ಟು ಮಾತ್ರವೇ ಬೆಳೆಯಾಗುತ್ತದೆ.

ದಣ್ಡನೀತಿಂ ಪರಿತ್ಯಜ್ಯ ಯದಾ ಕಾರ್ತ್ಸ್ನ್ಯೇನ ಭೂಮಿಪಃ ।
ಪ್ರಜಾಃ ಕ್ಲಿಶ್ನಾತ್ಯಯೋಗೇನ ಪ್ರವರ್ತೇತ ತದಾ ಕಲಿಃ ॥೯೧॥

ಯಾವಾಗ ರಾಜನು ದಂಡನೀತಿಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ ಅಯೋಗ್ಯವಾದ ಉಪಾಯಗಳಿಂದ ಪ್ರಜೆಗಳಿಗೆ ಕಷ್ಟವನ್ನುಂಟುಮಾಡುತ್ತಾನೆಯೋ–ಆಗ ಕಾಲವು ಕಲಿಯುಗವಾಗಿ ಪರಿವರ್ತನೆ ಹೊಂದುತ್ತದೆ.

ಕಲಾವಧರ್ಮೋ ಭೂಯಿಷ್ಠಂ ಧರ್ಮೋ ಭವತಿ ನ ಕ್ವಚಿತ್ ।
ಸರ್ವೇಷಾಮೇವ ವರ್ಣಾನಾಂ ಸ್ವಧರ್ಮಾಚ್ಚ್ಯವತೇ ಮನಃ ॥೯೨॥

ಕಲಿಯುಗದಲ್ಲಿ ಅಧರ್ಮವು ಅಧಿಕವಾಗಿರುತ್ತದೆ. ಧರ್ಮವು ಎಲ್ಲಿಯೂ ಸ್ವಲ್ಪವಾದರೂ ಇರುವುದಿಲ್ಲ. ಎಲ್ಲ ವರ್ಣದವರಿಗೂ ತಮ್ಮ ತಮ್ಮ ಧರ್ಮದಿಂದ ಮನಸ್ಸು ಜಾರುತ್ತದೆ. (ಸ್ವಧರ್ಮನಿರತರಾಗಿರಬೇಕೆಂದು ಯಾವ ವರ್ಣದವರೂ ಅಪೇಕ್ಷಿಸುವುದಿಲ್ಲ.)

ಶೂದ್ರಾ ಭೈಕ್ಷೇಣ ಜೀವನ್ತಿ ಬ್ರಾಹ್ಮಣಾಃ ಪರಿಚರ್ಯಯಾ ।
ಯೋಗಕ್ಷೇಮಸ್ಯ ನಾಶಶ್ಚ ವರ್ತತೇ ವರ್ಣಸಂಕರಃ ॥೯೩॥

ಶೂದ್ರರು ಭಿಕ್ಷಾಟನೆಮಾಡುತ್ತಾ ಜೀವನವನ್ನು ನಿರ್ವಹಿಸುತ್ತಾರೆ. ಅಥವಾ ಸಂನ್ಯಾಸವೃತ್ತಿಯನ್ನು ಅವಲಂಬಿಸುತ್ತಾರೆ. ಬ್ರಾಹ್ಮಣರು ಸೇವಾವೃತ್ತಿಯಿಂದ ಜೀವನ ನಡೆಸುತ್ತಾರೆ. ಪ್ರಜೆಗಳ ಯೋಗ-ಕ್ಷೇಮಗಳು ವಿನಾಶಹೊಂದುತ್ತವೆ. ಜೀವನದಲ್ಲಿ 'ನೆಮ್ಮದಿ' ಎಂಬುದೇ ಇರುವುದಿಲ್ಲ. ವರ್ಣಸಂಕರವು ಅಬಾಧಿತವಾಗಿ ನಡೆಯುತ್ತದೆ.

ವೈದಿಕಾನಿ ಚ ಕರ್ಮಾಣಿ ಭವನ್ತಿ ವಿಗುಣಾನ್ಯುತ ।
ಋತವೋ ನ ಸುಖಾಃ ಸರ್ವೇ ಭವನ್ತ್ಯಾಮಯಿನಸ್ತಥಾ ॥೯೪॥

ವೇದೋಕ್ತವಾದ ಕರ್ಮಗಳೆಲ್ಲವೂ ವಿಧಿಪೂರ್ವಕವಾಗಿ ನಡೆಯದೇ ಇರುವುದರಿಂದ ಗುಣಹೀನ (ಸತ್ತ್ವಹೀನ)ಗಳಾಗುತ್ತವೆ. ಯಾವ ಋತುವೂ ಮನುಷ್ಯನಿಗೆ ಸುಖಾವಹವಾಗುವುದಿಲ್ಲ. ಎಲ್ಲ ಋತುಗಳೂ ಪ್ರಜೆಗಳಿಗೆ ರೋಗದಾಯಕಗಳಾಗುತ್ತವೆ. (ಜನರು ರೋಗಿಗಳಾಗುತ್ತಾರೆ.)

ಹ್ರಸನ್ತಿ ಚ ಮನುಷ್ಯಾಣಾಂ ಸ್ವರವರ್ಣಮನಾಂಸ್ಯುತ ।
ವ್ಯಾಧಯಶ್ಚ ಭವನ್ತ್ಯತ್ರ ಮ್ರಿಯನ್ತೇ ಚ ಗತಾಯುಷಃ ॥೯೫॥

ಮನುಷ್ಯರ ಧ್ವನಿಯೂ ಮುಖಕಾಂತಿಯೂ ಹಾನಿಹೊಂದುತ್ತವೆ. ಮನಸ್ಸು ಮಲಿನವಾಗುತ್ತದೆ. ರೋಗ-ರುಜಿನಗಳು ಮನುಷ್ಯರನ್ನು ಬಹಳ ವಾಗಿ ಕಿತ್ತು ತಿನ್ನುತ್ತಿರುತ್ತವೆ. ಚಿಕ್ಕವಯಸ್ಸಿನಲ್ಲಿಯೇ ಮನುಷ್ಯರು ಮರಣ ಹೊಂದುತ್ತಾರೆ.

ವಿಧವಾಶ್ಚ ಭವನ್ತ್ಯತ್ರ ನೃಶಂಸಾ ಜಾಯತೇ ಪ್ರಜಾ ।
ಕ್ವಚಿದ್ವರ್ಷತಿ ಪರ್ಜನ್ಯಃ ಕ್ವಚಿತ್ಸಸ್ಯಂ ಪ್ರರೋಹತಿ ॥೯೬॥

ಕಲಿಯುಗದಲ್ಲಿ ವಿಧವೆಯರ ಸಂಖ್ಯೆಯು ಹೆಚ್ಚುತ್ತದೆ. ಪ್ರಜೆಗಳು ಕ್ರೂರಿಗಳಾಗುತ್ತಾರೆ. ಕೆಲವು ಕಡೆ ಮಾತ್ರ ಮಳೆಯು ಸುರಿಯುತ್ತದೆ. ಕೆಲವು ಕಡೆ ಮಾತ್ರ ಪೈರು-ಪಚ್ಚೆಗಳು ಬೆಳೆಯುತ್ತವೆ.

ರಸಾಃ ಸರ್ವೇ ಕ್ಷಯಂ ಯಾನ್ತಿ ಯದಾ ನೇಚ್ಛತಿ ಭೂಮಿಪಃ ।
ಪ್ರಜಾಃ ಸಂರಕ್ಷಿತುಂ ಸಮ್ಯಗ್ದಣ್ಡನೀತಿಸಮಾಹಿತಃ ॥೯೭॥

ಯಾವಾಗ ರಾಜನು ದಂಡನೀತಿಯಲ್ಲಿಯೇ ಏಕಾಗ್ರಚಿತ್ತನಾಗಿ ಪ್ರಜೆ ಗಳನ್ನು ರಕ್ಷಣೆಮಾಡಲು ಇಚ್ಛಿಸುವುದಿಲ್ಲವೋ–ಆಗ ಕಾಲವು ಕಲಿಯುಗವಾಗಿ ಪರಿವರ್ತನೆಹೊಂದಿ ಪೃಥ್ವಿಯಲ್ಲಿರುವ ರಸಗಳೆಲ್ಲವೂ ಕ್ಷಯಿಸಿಹೋಗುತ್ತವೆ. (ಎಲ್ಲ ವಸ್ತುಗಳೂ ನೀರಸವಾಗುತ್ತವೆ.)

ಈ ಕಾರಣಗಳಿಂದ ರಾಜನೇ ಸತ್ಯಯುಗದ ಸೃಷ್ಟಿಕರ್ತನಾಗಿದ್ದಾನೆ. ತ್ರೇತಾ, ದ್ವಾಪರ ಮತ್ತು ಕಲಿಯುಗಗಳ ಸೃಷ್ಟಿಕರ್ತನೂ ರಾಜನೇ ಆಗಿರುತ್ತಾನೆ. ರಾಜನ ದಂಡನೀತಿಯನ್ನೇ ಅನುಸರಿಸಿ ಕಾಲವು ಕೃತ-ತ್ರೇತಾ-ದ್ವಾಪರ-ಕಲಿಯುಗಗಳಾಗಿ ಪರಿವರ್ತನೆಯನ್ನು ಹೊಂದುತ್ತದೆ. ದಂಡನೀತಿ ಯನ್ನು ಪೂರ್ಣರೂಪದಿಂದ ಪ್ರಯೋಗಿಸಿ ಕಾಲವನ್ನು ಸತ್ಯಯುಗವನ್ನಾಗಿ ಪರಿವರ್ತಿಸಿದ ರಾಜನು ಅಕ್ಷಯವಾದ ಸ್ವರ್ಗಲೋಕವನ್ನು ಹೊಂದುತ್ತಾನೆ. ದಂಡನೀತಿಯನ್ನು ಪೂರ್ಣರೂಪದಿಂದ ಪ್ರಯೋಗಿಸದೇ ನಾಲ್ಕು ಭಾಗಗಳಲ್ಲಿ ಮೂರು ಭಾಗಗಳನ್ನು ಮಾತ್ರವೇ ಪ್ರಯೋಗಿಸಿ ಕಾಲವನ್ನು ತ್ರೇತಾಯುಗ ವನ್ನಾಗಿ ಪರಿವರ್ತಿಸುವುದರಿಂದ ಸ್ವರ್ಗವನ್ನೇನೋ ಪಡೆಯುತ್ತಾನೆ. ಆದರೆ ಅಕ್ಷಯರೂಪವಾದ ಪುನರಾವೃತ್ತಿರಹಿತವಾದ ಸ್ವರ್ಗವು ಅವನಿಗೆ ಲಭಿಸುವು

ದಿಲ್ಲ. ಅರ್ಧಭಾಗದಷ್ಟು ಮಾತ್ರವೇ ದಂಡನೀತಿಯನ್ನು ಪ್ರಯೋಗಿಸಿ ಕಾಲವನ್ನು ದ್ವಾಪರಯುಗವನ್ನಾಗಿ ಪರಿವರ್ತಿಸುವ ರಾಜನಿಗೂ ಯತ್ಕಿಂಚಿತ್ಪುಣ್ಯವು ಲಭಿಸುತ್ತದೆ. ಅವನಿಗೆ ಸ್ವಲ್ಪಕಾಲ ಮಾತ್ರವೇ ಸ್ವರ್ಗದಲ್ಲಿರಲು ಸಾಧ್ಯವಾಗುತ್ತದೆ. ದಂಡನೀತಿಯನ್ನು ಸರಿಯಾಗಿ ಪ್ರಯೋಗಿಸದೇ ದುರುಪಯೋಗಪಡಿಸಿಕೊಂಡು ಕಾಲವನ್ನು ಕಲಿಯುಗವನ್ನಾಗಿ ಪರಿವರ್ತಿಸುವ ರಾಜನು ಮಹಾಪಾಪಿಷ್ಠನಾಗುತ್ತಾನೆ. ಪ್ರಜೆಗಳು ಮಾಡುವ ಪಾಪದಲ್ಲಿ ಮುಳುಗಿಹೋಗುವ ಅಂತಹ ರಾಜನು ದುಷ್ಕೀರ್ತಿಯನ್ನೂ ಪಾಪವನ್ನೂ ಪಡೆದುಕೊಳ್ಳುತ್ತಾನೆ. (ದುಷ್ಕರ್ಮಿಯಾದ ಆ ರಾಜನು ಅವಸಾನಾನಂತರದಲ್ಲಿ ಅನಂತಾನಂತವರ್ಷಗಳವರೆಗೆ ನರಕದಲ್ಲಿ ವಾಸಮಾಡುತ್ತಾನೆ.)

ಕ್ಷತ್ರಿಯನಾದವನು ಯಾವಾಗಲೂ ದಂಡನೀತಿಯನ್ನೇ ಮುಂದಿಟ್ಟುಕೊಂಡು ತನಗೆ ಯಾವ ವಸ್ತುಗಳು ಲಭಿಸಿಲ್ಲವೆಂಬುದನ್ನು ಪರ್ಯಾಲೋಚಿಸಿ ಆ ವಸ್ತುಗಳನ್ನು ಪಡೆದುಕೊಳ್ಳುವ ಇಚ್ಛೆಯುಳ್ಳವನಾಗಬೇಕು. (ದಂಡನೀತಿಯ ಮೂಲಕವಾಗಿ ಪಡೆದುಕೊಳ್ಳಬೇಕು.) ಹಾಗೆ ಪಡೆದುಕೊಂಡ ವಸ್ತುಗಳನ್ನು ರಕ್ಷಣೆಮಾಡಬೇಕು. ಅದರಿಂದ ಪ್ರಜೆಗಳಿಗೆ ಯೋಗ-ಕ್ಷೇಮ ಗಳುಂಟಾಗುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಲೋಕಸ್ಯ ಸೀಮನ್ತಕರೀ ಮರ್ಯಾದಾ ಲೋಕಭಾವಿನೀ ।
ಸಮ್ಯಙ್ನೀತಾ ದಣ್ಡನೀತಿರ್ಯಥಾ ಮಾತಾ ಯಥಾ ಪಿತಾ ॥೧೦೩॥

ಯಾವ ದಂಡನೀತಿಯು ಲೋಕದ ಪ್ರಜೆಗಳನ್ನು ಅವರವರ ವರ್ಣಾಶ್ರಮಧರ್ಮದಲ್ಲಿಯೇ ಇರುವಂತೆ ಮಾಡುವುದೋ, ಧರ್ಮಮರ್ಯಾದೆಯನ್ನು ಮೀರದಂತೆ ನೋಡಿಕೊಳ್ಳುವುದೋ ಮತ್ತು ಜಗತ್ತಿನ ರಕ್ಷಣೆಗೆ ಸಮರ್ಥವಾಗಿರುವುದೋ–ಅಂತಹ ದಂಡನೀತಿಯನ್ನು ಸುವ್ಯವಸ್ಥಿತರೀತಿಯಲ್ಲಿ ಆಚರಿಸಿದರೆ ಅದು ತಂದೆ-ತಾಯಿಗಳು ಮಕ್ಕಳನ್ನು ಪೋಷಿಸಿ-ಪಾಲಿಸುವಂತೆ–ಪ್ರಜೆಗಳನ್ನು ಪೋಷಿಸಿ-ಪಾಲಿಸುತ್ತದೆ.

ಯಸ್ಯಾಂ ಭವನ್ತಿ ಭೂತಾನಿ ತದ್ವಿದ್ಧಿ ಮನುಜರ್ಷಭ ।
ಏಷ ಏವ ಪರೋ ಧರ್ಮೋ ಯದ್ರಾಜಾ ದಣ್ಡನೀತಿಮಾನ್ ॥೧೦೪॥

ನರಶ್ರೇಷ್ಠನೇ! ಈ ಪ್ರಪಂಚದಲ್ಲಿರುವ ಸಕಲಪ್ರಾಣಿಗಳೂ (ಪ್ರಜೆ

ಗಳೂ) ದಂಡನೀತಿಯಲ್ಲಿಯೇ ಪ್ರತಿಷ್ಠಿತವಾಗಿವೆ. ದಂಡನೀತಿಯ ಆಧಾರದಿಂದಲೇ ಅವು ತಮ್ಮ ಜೀವನವನ್ನು ನಿರ್ವಹಿಸುತ್ತವೆ. ಲೋಕಮರ್ಯಾದೆಯನ್ನೂ ಮೀರದೇ ನಡೆದುಕೊಳ್ಳುತ್ತವೆ. ತಮ್ಮ-ತಮ್ಮ ಧರ್ಮಗಳಲ್ಲಿಯೇ ಆಸಕ್ತವಾಗಿರುತ್ತವೆ. ಭರತರ್ಷಭನೇ! ಈ ವಿಷಯವನ್ನು ನೀನು ಚೆನ್ನಾಗಿ ತಿಳಿದುಕೊಳ್ಳಬೇಕು. ರಾಜನು ದಂಡನೀತಿಯುಳ್ಳವನಾಗಬೇಕು. ದಂಡನೀತಿಯನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸಬೇಕು. ಇದೇ ಅವನ ಶ್ರೇಷ್ಠವಾದ ಧರ್ಮವಾಗಿರುತ್ತದೆ.

ತಸ್ಮಾತ್ಕೌರವ್ಯ ಧರ್ಮೇಣ ಪ್ರಜಾಃ ಪಾಲಯ ನೀತಿಮಾನ್ ।
ಏವಂವೃತ್ತಃ ಪ್ರಜಾ ರಕ್ಷನ್ಸ್ವರ್ಗಂ ಜೇತಾಸಿ ದುರ್ಜಯಮ್ ॥೧೦೫॥

ಕೌರವ್ಯನೇ! ದಂಡನೀತಿಯನ್ನು ಆಶ್ರಯಿಸಿ ಧರ್ಮದಿಂದ ಪ್ರಜೆಗಳನ್ನು ಪರಿಪಾಲಿಸು. ನೀತಿಯುಕ್ತವಾದ ರಾಜ್ಯಾಂಗದಲ್ಲಿ ಆಸಕ್ತನಾಗಿ ಪ್ರಜೆಗಳನ್ನು ಪರಿಪಾಲಿಸುತ್ತಿದ್ದರೆ ದುರ್ಜಯವಾದ ಸ್ವರ್ಗಲೋಕವನ್ನೂ ಜಯಿಸುವೆ."

೬೯ನೆಯ ಅಧ್ಯಾಯವು ಮುಗಿಯಿತು.

೭೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನಿಗೆ ಐಹಿಕಾಮುಷ್ಮಿಕಫಲಗಳನ್ನು ನೀಡುವ ಮೂವತ್ತಾರು ಗುಣಗಳ ವರ್ಣನೆ

ಪಾರಿಕ್ಷಿತ! ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸುತ್ತಾನೆ :

"ಸದಾಚಾರ-ಸದ್ವ್ಯವಹಾರಗಳನ್ನು ತಿಳಿದಿರುವ ಪಿತಾಮಹನೇ! ರಾಜನಾದವನು ಯಾವ ವಿಧವಾದ ಆಚಾರ-ವ್ಯವಹಾರಗಳಿಂದ ಇಹಲೋಕ-ಪರಲೋಕಗಳೆರಡರಲ್ಲಿಯೂ ಸುಖಕೊಡುವಂತಹ ವಸ್ತುಗಳನ್ನು ಅನಾಯಾಸವಾಗಿ ಪಡೆದುಕೊಳ್ಳುತ್ತಾನೆ?"

ಭೀಷ್ಮನು ಹೇಳುತ್ತಾನೆ :

ಅಯಂ ಗುಣಾನಾಂ ಷಟ್‌ತ್ರಿಂಶತ್ಷಟ್‌ತ್ರಿಂಶದ್ಗುಣಸಂಯುತಃ ।
ಯಾನ್ಗುಣಾಂಸ್ತು ಗುಣೋಪೇತಃ ಕುರ್ವನ್ಗುಣಮವಾಪ್ನುಯಾತ್ ॥೨॥

“ಮಗು ಯುಧಿಷ್ಠಿರ! ದಯೆ, ಔದಾರ್ಯತೆ, ಸಹಿಷ್ಣುತೆ–ಇವೇ ಮುಂತಾದ ಗುಣಗಳಿಂದ ಯುಕ್ತನಾದ ರಾಜನು ಯಾವ ಗುಣಗಳನ್ನು ಹೊಂದಿರುವುದರಿಂದ ಉತ್ಕರ್ಷವನ್ನು ಹೊಂದುತ್ತಾನೆಯೋ–ಅಂತಹ ಗುಣಗಳ ಸಂಖ್ಯೆಯು ಮೂವತ್ತಾರು. ರಾಜನಾದವನು ಆ ಮೂವತ್ತಾರು ಗುಣಗಳನ್ನೂ ಹೊಂದಿರಬೇಕು.

ಚರೇದ್ಧರ್ಮಾನಕಟುಕೋ ಮುಞ್ಚೇತ್ಸ್ನೇಹಂ ನ ಚಾಸ್ತಿಕಃ ।
ಅನೃಶಂಸಶ್ಚರೇದರ್ಥಂ ಚರೇತ್ಕಾಮಮನುದ್ಧತಃ ॥೩॥

(೧) ಯಾರೊಡನೆಯೂ ಕಟುವಾದ ಮಾತುಗಳನ್ನಾಡದೇ (ರಾಗ-ದ್ವೇಷರಹಿತನಾಗಿ) ಧರ್ಮವನ್ನು ಆಚರಿಸಬೇಕು. (೨) ಆಸ್ತಿಕನಾಗಿರಬೇಕು. ಎಲ್ಲರೊಡನೆಯೂ ಆದರಪೂರ್ವಕವಾದ ವ್ಯವಹಾರವನ್ನಿಟ್ಟುಕೊಳ್ಳಬೇಕು. ಯಾರನ್ನೂ ದ್ವೇಷಿಸಬಾರದು. (೩) ದಯಾಪರನಾಗಿಯೇ ಇದ್ದುಕೊಂಡು ಅರ್ಥಸಂಗ್ರಹಣೆಯನ್ನು ಮಾಡಬೇಕು. ಕ್ರೂರವಾಗಿ ಶಿಕ್ಷಿಸುವುದರ ಮೂಲಕ ಅರ್ಥಸಂಗ್ರಹಣೆಯನ್ನು ಮಾಡಬಾರದು. (೪) ಲೋಕಮರ್ಯಾದೆಯನ್ನು ಅತಿಕ್ರಮಿಸದೇ ಧರ್ಮಾರ್ಥಗಳಿಗೆ ವಿರೋಧವಾಗದ ರೀತಿಯಲ್ಲಿ ವಿಷಯಸುಖಗಳನ್ನು ಅನುಭವಿಸಬೇಕು.

ಪ್ರಿಯಂ ಬ್ರೂಯಾದಕೃಪಣಃ ಶೂರಃ ಸ್ಯಾದವಿಕತ್ಥನಃ ।
ದಾತಾ ನಾಪಾತ್ರವರ್ಷೀ ಸ್ಯಾತ್ಪ್ರಗಲ್ಭಃ ಸ್ಯಾದನಿಷ್ಠುರಃ ॥೪॥

(೫) ಕೃಪಣತೆಯಿಲ್ಲದೇ ಪ್ರಿಯವಾದ ಮಾತುಗಳನ್ನು ಆಡುತ್ತಲೇ ಇರಬೇಕು. (೬) ಶೂರನಾಗಿದ್ದರೂ ಆತ್ಮಪ್ರಶಂಸೆಯ ಮಾತುಗಳನ್ನಾಡ ಬಾರದು. (೭) ದಾನಶೀಲನಾಗಿರಬೇಕು ; ಆದರೆ ಅಪಾತ್ರರಲ್ಲಿ ದಾನಮಾಡ ಬಾರದು. (೮) ಸಾಹಸಿಯಾಗಿರಬೇಕು ; ದಯಾಪರನೂ ಆಗಿರಬೇಕು. ನಿಷ್ಠುರವಾದ ಮಾತುಗಳನ್ನಾಡಬಾರದು.

ಸಂದಧೀತ ನ ಚಾನಾರ್ಯೈರ್ವಿಗೃಹ್ಣೀಯಾನ್ನ ಬನ್ಧುಭಿಃ ।
ನಾಭಕ್ತಂ ಚಾರಯೇಚ್ಚಾರಂ ಕುರ್ಯಾತ್ಕಾರ್ಯಮಪೀಡಯಾ ॥೫॥

(೯) ಅನಾರ್ಯರೊಡನೆ (ದುಷ್ಟರೊಡನೆ) ಸಂಬಂಧವನ್ನಿಟ್ಟುಕೊಳ್ಳ

ಬಾರದು. (೧೦) ಬಂಧುಗಳೊಡನೆ ಜಗಳವಾಡಬಾರದು. (೧೧) ರಾಜನಲ್ಲಿ ಭಕ್ತಿಯಿಲ್ಲದೇ ಇರುವವನನ್ನು ಗೂಢಚಾರನನ್ನಾಗಿ ನಿಯಮಿಸಿಕೊಳ್ಳಬಾರದು. (೧೨) ಯಾರಿಗೂ ಪೀಡೆಯಾಗದ ರೀತಿಯಲ್ಲಿ ರಾಜಕಾರ್ಯಗಳನ್ನು ಸಾಧಿಸಿಕೊಳ್ಳಬೇಕು.

ಅರ್ಥಂ ಬ್ರೂಯನ್ನ ಚಾಸತ್ಸು ಗುಣಾನ್ಬ್ರೂಯಾನ್ನ ಚಾತ್ಮನಃ ।
ಆದದ್ಯಾನ್ನ ಚ ಸಾಧುಭ್ಯೋ ನಾಸತ್ಪುರುಷಮಾಶ್ರಯೇತ್ ॥೬॥

(೧೩) ದುಷ್ಟಜನರೊಡನೆ ಅಭೀಷ್ಟವಾದ ರಾಜಕಾರ್ಯಗಳನ್ನು ಹೇಳಬಾರದು. (೧೪) ತನ್ನ ಗುಣಗಳನ್ನು ತಾನೇ ಹೊಗಳಿಕೊಳ್ಳಬಾರದು. (೧೫) ಸಾಧು-ಸತ್ಪುರುಷರಿಂದ ರಾಜಕಾಣಿಕೆಯನ್ನು ಪಡೆದುಕೊಳ್ಳಬಾರದು. (೧೬) ನೀಚಮನುಷ್ಯರನ್ನು ಆಶ್ರಯಿಸಬಾರದು.

ನಾಪರೀಕ್ಷ್ಯ ನಯೇದ್ದಣ್ಡಂ ನ ಚ ಮನ್ತ್ರಂ ಪ್ರಕಾಶಯೇತ್ ।
ವಿಸೃಜೇನ್ನ ಚ ಲುಬ್ಧೇಭ್ಯೋ ವಿಶ್ವಸೇನ್ನಾಪಕಾರಿಷು ॥೭॥

(೧೭) ಅಪರಾಧಮಾಡಿರುವವನೆಂಬುದನ್ನು ಸಾಕ್ಷಿ-ಸಾಹಿತ್ಯಗಳಿಂದ ಚೆನ್ನಾಗಿ ವಿಮರ್ಶಿಸದೇ ಯಾರಿಗೂ ದಂಡನೆಯನ್ನು ವಿಧಿಸಬಾರದು. (೧೮) ಮಂತ್ರಾಲೋಚನೆಗಳನ್ನು ಬಹಿರಂಗಪಡಿಸಬಾರದು. (೧೯) ಲೋಭಿಗಳಾದವರಿಗೆ ಹಣವನ್ನು ಕೊಡಬಾರದು. (೨೦) ಒಮ್ಮೆ ಅಪಕಾರ ಮಾಡಿದವರಲ್ಲಿ ಪುನಃ ವಿಶ್ವಾಸವನ್ನಿಡಬಾರದು.

ಅನೀರ್ಷುರ್ಗುಪ್ತದಾರಃ ಸ್ಯಾಚ್ಚೋಕ್ಷಃ ಸ್ಯಾದಘೃಣೀ ನೃಪಃ ।
ಸ್ತ್ರಿಯಃ ಸೇವೇತ ನಾತ್ಯರ್ಥಂ ಮೃಷ್ಟಂ ಭುಞ್ಜೀತ ನಾಹಿತಮ್ ॥೮॥

(೨೧) ಪರಸ್ಪರವಾಗಿ ಈರ್ಷ್ಯೆಗೆ ಅವಕಾಶವಾಗದಂತೆ ತನ್ನ ಪತ್ನಿಯರನ್ನು ಸಂರಕ್ಷಿಸಬೇಕು. (೨೨) ದಕ್ಷನಾಗಿರಬೇಕು. ಅತಿಕಾರುಣ್ಯವಿರಬಾರದು. (೨೩) ಸ್ತ್ರೀಯರಲ್ಲಿ ಹೆಚ್ಚು ಅನುರಕ್ತನಾಗಬಾರದು. (೨೪) ಶುದ್ಧವಾದ ಮತ್ತು ರುಚಿಕರವಾದ ಭೋಜನವನ್ನೇ ಮಾಡಬೇಕು. ಆದರೆ ಅಹಿತಕರವಾದ ಪದಾರ್ಥಗಳನ್ನು ತಿನ್ನಬಾರದು.

ಅಸ್ತಬ್ಧಃ ಪೂಜಯೇನ್ಮಾನ್ಯಾನ್ಗುರೂನ್ಸೇವೇದಮಾಯಯಾ ।
ಅರ್ಚೇದ್ದೇವಾನದಮ್ಭೇನ ಶ್ರಿಯಮಿಚ್ಛೇದಕುತ್ಸಿತಾಮ್ ॥೯॥

(೨೫) ಯಾವ ವಿಧವಾದ ಆಡಂಬರವನ್ನೂ ತೋರಿಸದೇ ವಿನಯ ಭಾವದಿಂದಲೇ ಮಾನನೀಯರಾದವರನ್ನು ಸತ್ಕರಿಸಬೇಕು. (೨೬) ನಿಷ್ಕಾಪಟ್ಯದಿಂದ ಗುರುಜನರ ಸೇವೆಯನ್ನು ಮಾಡಬೇಕು. (೨೭) ದಂಭಾಹಂಕಾರರಹಿತನಾಗಿ ಭಕ್ತಿ-ವಿನಯಗಳಿಂದ ದೇವತೆಗಳನ್ನು ಅರ್ಚಿಸ ಬೇಕು. (೨೮) ದೋಷರಹಿತವಾದ ಸಂಪತ್ತಿನ ಸಂಗ್ರಹದಲ್ಲಿಯೇ ಆಸಕ್ತಿ ಯುಳ್ಳವನಾಗಬೇಕು.

ಸೇವೇತ ಪ್ರಣಯಂ ಹಿತ್ವಾ ದಕ್ಷಃ ಸ್ಯಾನ್ನತ್ವಕಾಲವಿತ್ ।
ಸಾನ್ತ್ವಯೇನ್ನ ಚ ಮೋಕ್ಷಾಯ ಅನುಗೃಹ್ಣನ್ನ ಚಾಕ್ಷಿಪೇತ್ ॥೧೦॥

(೨೯) ಯಾವ ವಿಧವಾದ ಪಕ್ಷಪಾತವೂ ಇಲ್ಲದಂತೆ ಪ್ರಜೆಗಳನ್ನು ಪರಿಪಾಲಿಸಬೇಕು. ರಾಜನಾದವನಿಗೆ ಅಹಿತನು-ಹಿತನು ಎಂಬ ತಾರತಮ್ಯ ವಿರಬಾರದು. (೩೦) ಕಾರ್ಯಕುಶಲನಾಗಿರಬೇಕು. ಆದರೆ ಕಾಲ-ದೇಶ-ವರ್ತಮಾನಗಳನ್ನು ವಿವೇಚಿಸಿ ಕಾರ್ಯಮಾಡಬೇಕು. ಕಾರ್ಯಮಾಡಲು ಕಾಲಾಕಾಲಗಳನ್ನು ತಿಳಿಯದವನಾಗಿರಬಾರದು. (೩೧) ಒಬ್ಬನನ್ನು ಕಳುಹಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಸಂತೈಸಬಾರದು. ಎಂದರೆ ಬಂದವನನ್ನು ಕೇವಲ ಸಾಂತ್ವನದ ಮಾತುಗಳನ್ನಾಡಿ ಬರಿಗೈಯಲ್ಲಿ ಕಳುಹಿಸ ಬಾರದು. (೩೨) ಒಬ್ಬನ ವಿಷಯದಲ್ಲಿ ಕೃಪೆದೋರುವಾಗ ಅವನನ್ನು ನಿಂದಿಸಬಾರದು. (ಬೈದು ಭಿಕ್ಷೆಹಾಕಬಾರದು.)

ಪ್ರಹರೇನ್ನ ತ್ವವಿಜ್ಞಾಯ ಹತ್ವಾ ಶತ್ರೂನ್ನ ಶೋಚಯೇತ್ ।
ಕ್ರೋಧಂ ಕುರ್ಯಾನ್ನ ಚಾಕಸ್ಮಾನ್ಮೃದುಃ ಸ್ಯಾನ್ನಾಪಕಾರಿಷು ॥೨೧॥

(೩೩) ಶತ್ರುಗಳನ್ನು ಪ್ರಹರಿಸಬೇಕು ; ಆದರೆ ಶತ್ರುವೆಂದು ಸ್ಪಷ್ಟವಾಗಿ ತಿಳಿಯದೆ ಯಾರನ್ನೂ ಪ್ರಹರಿಸಬಾರದು. (೩೪) ಶತ್ರುಗಳನ್ನು ಸಂಹರಿಸಿದ ನಂತರ ಅವರು ಸಂಬಂಧಿಗಳೇ ಆಗಿದ್ದರೂ ಶೋಕಪಡಬಾರದು. (೩೫) ಕಾರಣವಿಲ್ಲದೇ ಯಾರ ಮೇಲೆಯೂ ಕೋಪಗೊಳ್ಳಬಾರದು. (೩೬) ಮೃದುಸ್ವಭಾವದವನಾಗಿರಬೇಕು ; ಆದರೆ ಅಪಕಾರಿಗಳ ವಿಷಯದಲ್ಲಿ ಮೃದುಭಾವದಿಂದಿರಬಾರದು.

ಯುಧಿಷ್ಠಿರ! ನೀನು ಈ ಲೋಕದಲ್ಲಿ ಶ್ರೇಯಸ್ಸನ್ನು ಇಚ್ಛಿಸುವೆ

ಯಾದರೆ ನಾನು ಹೇಳಿದ ಈ ಮೂವತ್ತಾರು ಗುಣಗಳನ್ನೂ ಮೈಗೂಡಿಸಿ ಕೊಂಡು ಅದರಂತೆ ಆಚರಿಸು. ಇದಕ್ಕೆ ವಿಪರೀತವಾಗಿ ನಡೆದುಕೊಳ್ಳುವ ರಾಜನು ಭಯವನ್ನು ಹೊಂದುತ್ತಾನೆ. ಸುದಾರುಣವಾದ ಆಪತ್ತಿಗೆ ಒಳಗಾಗುತ್ತಾನೆ. ಯಾವ ರಾಜನು ಯಥಾವತ್ತಾಗಿ ಹೇಳಿರುವ ಈ ಮೂವತ್ತಾರು ಗುಣಗಳನ್ನೂ ಕಾರ್ಯರೂಪಕ್ಕೆ ತರುತ್ತಾನೆಯೋ, ಅವನು ಇಲ್ಲಿ ಸಕಲವಿಧವಾದ ಕಲ್ಯಾಣಗಳಿಗೂ ಭಾಜನನಾಗಿ ಅವಸಾನಾನಂತರದಲ್ಲಿ ಸ್ವರ್ಗಲೋಕದಲ್ಲಿ ವಿರಾಜಿಸುತ್ತಾನೆ."

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ :

ಮಹಾರಾಜ! ಪಾಂಡವಮುಖ್ಯರಿಂದ ಪರಿವೃತನಾಗಿ ಕುಳಿತಿದ್ದ ಯುಧಿಷ್ಠಿರನು ಭೀಷ್ಮನು ಹೇಳಿದ ಮಾತುಗಳನ್ನು ಏಕಾಗ್ರಚಿತ್ತನಾಗಿ ಕೇಳುತ್ತಿದ್ದನು. ಬಳಿಕ ಸಮಾಧಾನಹೊಂದಿದವನಾಗಿ ಪಿತಾಮಹನಾದ ಭೀಷ್ಮನಿಗೆ ನಮಸ್ಕರಿಸಿದನು. ಬುದ್ಧಿವಂತನಾದ ಯುಧಿಷ್ಠಿರನು ಭೀಷ್ಮನು ಹೇಳಿದ ಮೂವತ್ತಾರು ಗುಣಗಳನ್ನೂ ಆಚರಣೆಗೆ ತರಲು ನಿಶ್ಚಯಿಸಿದನು.

೭೦ನೆಯ ಅಧ್ಯಾಯವು ಮುಗಿಯಿತು.

೭೧ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಧರ್ಮದ ಮೂಲಕವಾಗಿ ಪ್ರಜೆಗಳನ್ನು ಪರಿಪಾಲನೆ ಮಾಡುವುದೇ ರಾಜನ ಮುಖ್ಯಧರ್ಮವೆಂಬುದರ ಪ್ರತಿಪಾದನೆ

ಜನಮೇಜಯ! ಯುಧಿಷ್ಠಿರನು ಭೀಷ್ಮನನ್ನು ಕುರಿತು ಹೇಳುತ್ತಾನೆ :

"ಪಿತಾಮಹ! ರಾಜನು ಯಾವ ರೀತಿಯಲ್ಲಿ ಪ್ರಜೆಗಳನ್ನು ಪರಿಪಾಲನೆ ಮಾಡುತ್ತಿದ್ದರೆ ಚಿಂತೆಯಲ್ಲಿ ಮಗ್ನನಾಗುವುದಿಲ್ಲ ಮತ್ತು ಧರ್ಮದ ವಿಷಯದಲ್ಲಿ ಅಪರಾಧಿಯಾಗುವುದಿಲ್ಲ–ಎಂಬುದನ್ನು ಹೇಳು."

"ಯುಧಿಷ್ಠಿರ! ನಾನು ಸಂಕ್ಷೇಪವಾಗಿಯೇ ಎಲ್ಲ ಧರ್ಮಗಳನ್ನೂ ಹೇಳುತ್ತೇನೆ. ನಾನೇನಾದರೂ ಈ ಎಲ್ಲ ಧರ್ಮಗಳನ್ನೂ ವಿಸ್ತಾರವಾಗಿಯೇ ಹೇಳಲು ಹೋದರೆ ಅದು ಮುಗಿಯುವುದೇ ಇಲ್ಲ.

ಧರ್ಮನಿಷ್ಠಾಞ್ಶ್ರುತವತೋ ವೇದವ್ರತಸಮಾಹಿತಾನ್ ।
ಅರ್ಚಯಿತ್ವಾ ಯಜೇಥಾಸ್ತ್ವಂ ಗೃಹೇ ಗುಣವತೋ ದ್ವಿಜಾನ್ ॥೩॥

ಪ್ರತ್ಯುತ್ಥಾಯೋಪಸಂಗೃಹ್ಯ ಚರಣಾವಭಿವಾದ್ಯ ಚ ।
ಅಥ ಸರ್ವಾಣಿ ಕುರ್ವೀಥಾಃ ಕಾರ್ಯಾಣಿ ಸಪುರೋಹಿತಃ ॥೪॥

ವೇದವ್ರತಪರಾಯಣರಾದ, ಶಾಸ್ತ್ರಜ್ಞರಾದ, ಧರ್ಮಿಷ್ಠರಾದ, ಗುಣವಂತರಾದ ಬ್ರಾಹ್ಮಣರು ನಿನ್ನ ಮನೆಗೆ ಬಂದೊಡನೆಯೇ ಪ್ರತ್ಯುತ್ಥಾನಮಾಡಿ ಅವರನ್ನು ಸ್ವಾಗತಿಸಬೇಕು. ಅವರ ಚರಣಾರವಿಂದಗಳಿಗೆ ಅಭಿವಾದನ ಪೂರ್ವಕವಾಗಿ ನಮಸ್ಕಾರಮಾಡಿ ಅವರನ್ನು ಯಥಾವಿಧಿಯಾಗಿ ಪೂಜಿಸಿ ಸತ್ಕರಿಸಬೇಕು. ಬಳಿಕ ಪುರೋಹಿತರೊಡನೆ ಸಕಲವಿಧವಾದ ವೈದಿಕಕರ್ಮಗಳನ್ನೂ ಮಾಡಬೇಕು.

ಧರ್ಮಕಾರ್ಯಾಣಿ ನಿರ್ವರ್ತ್ಯ ಮಙ್ಗಲಾನಿ ಪ್ರಯುಜ್ಯ ಚ ।
ಬ್ರಾಹ್ಮಣಾನ್ವಾಚಯೇಥಾಸ್ತ್ವಮರ್ಥಸಿದ್ಧಿಜಯಾಶಿಷಃ ॥೫॥

ಹೀಗೆ ಪ್ರಾತಃಕಾಲದಲ್ಲಿ ಸಂಧ್ಯಾವಂದನ–ಅಗ್ನಿಹೋತ್ರಾದಿ ಧರ್ಮಕಾರ್ಯಗಳೆಲ್ಲವನ್ನೂ ಮುಗಿಸಿ, ಮಂಗಳದಾಯಕವಾದ ವಸ್ತುಗಳನ್ನು (ಪೂರ್ಣಕುಂಭವೇ ಮೊದಲಾದುವುಗಳನ್ನು) ಸ್ಪರ್ಶಿಸಿ, ಮಂಗಳಕಾರ್ಯಗಳನ್ನು ಮಾಡಿ ಅರ್ಥಸಿದ್ಧಿಗಾಗಿ ಮತ್ತು ವಿಜಯಕ್ಕಾಗಿ ಬ್ರಾಹ್ಮಣರ ಮೂಲಕ ಸ್ವಸ್ತಿವಾಚನವನ್ನು ಮಾಡಿಸಿಕೊಳ್ಳಬೇಕು.

ಆರ್ಜವೇನ ಚ ಸಮ್ಪನ್ನೋ ಧೃತ್ಯಾ ಬುದ್ಧ್ಯಾ ಚ ಭಾರತ ।
ಯಥಾರ್ಥಂ ಪ್ರತಿಗೃಹ್ಣೀಯಾತ್ಕಾಮಕ್ರೋಧೌ ಚ ವರ್ಜಯೇತ್ ॥೬॥

ರಾಜನಾದವನು ಸರಳತೆಯಿಂದಿರಬೇಕು. ಧೈರ್ಯದಿಂದಲೂ ಬುದ್ಧಿಯಿಂದಲೂ ಸಂಪನ್ನನಾಗಿರಬೇಕು. ಯಥಾರ್ಥವಾದುದನ್ನೇ (ಸತ್ಯವನ್ನೇ) ಪ್ರತಿಗ್ರಹಿಸಬೇಕು. (ಸತ್ಯನಿಷ್ಠನಾಗಿರಬೇಕು.) ಕಾಮ-ಕ್ರೋಧಗಳೆರಡನ್ನೂ ಪರಿತ್ಯಜಿಸಬೇಕು.

ಕಾಮಕ್ರೋಧೌ ಪುರಸ್ಕೃತ್ಯ ಯೋಽರ್ಥಂ ರಾಜಾನುತಿಷ್ಠತಿ ।
ನ ಸ ಧರ್ಮಂ ನ ಚಾಪ್ಯರ್ಥಂ ಪ್ರತಿಗೃಹ್ಣಾತಿ ಬಾಲಿಶಃ ॥೭॥

ಕಾಮ-ಕ್ರೋಧಗಳನ್ನು ಮುಂದಿಟ್ಟುಕೊಂಡು ಯಾವ ರಾಜನು ಅರ್ಥ ಸಂಗ್ರಹಕ್ಕೆ ಪ್ರಯತ್ನಿಸುತ್ತಾನೆಯೋ–ಅಂತಹ ಮೂರ್ಖರಾಜನು ಧರ್ಮ ವನ್ನಾಗಲೀ ಅರ್ಥವನ್ನಾಗಲೀ ಪ್ರತಿಗ್ರಹಿಸಲಾರನು. (ಕಾಮ-ಕ್ರೋಧವಶ ನಾಗಿರುವವನಿಗೆ ಧರ್ಮಾರ್ಥಗಳು ಸಿದ್ಧಿಸಲಾರವು.)

ಮಾ ಸ್ಮ ಲುಬ್ಧಾಂಶ್ಚ ಮೂರ್ಖಾಂಶ್ಚ ಕಾಮಾರ್ಥೇ ಚ ಪ್ರಯೂಯುಜಃ ।
ಅಲುಬ್ಧಾನ್ಬುದ್ಧಿಸಮ್ಪನ್ನಾನ್ಸರ್ವಕರ್ಮಸು ಯೋಜಯೇತ್ ॥೮॥

ಯುಧಿಷ್ಠಿರ! ನೀನು ಕೃಪಣರನ್ನಾಗಲೀ, ಮೂರ್ಖರನ್ನಾಗಲೀ ಕಾಮಾರ್ಥಗಳ ಸಾಧನೆಗೆ ನಿಯೋಜಿಸಬೇಡ. ರಾಜನಾದವನು ಕೃಪಣರಲ್ಲ ದವರನ್ನು ಬುದ್ಧಿಸಂಪನ್ನರನ್ನು ಎಲ್ಲ ಕಾರ್ಯಗಳಲ್ಲಿಯೂ ನಿಯಮಿಸಿಕೊಳ್ಳ ಬೇಕು.

ಮೂರ್ಖೋ ಹ್ಯಧಿಕೃತೋಽರ್ಥೇಷು ಕಾರ್ಯಾಣಾಮವಿಶಾರದಃ ।
ಪ್ರಜಾಃ ಕ್ಲಿಶ್ನಾತ್ಯಯೋಗೇನ ಕಾಮಕ್ರೋಧಸಮನ್ವಿತಃ ॥೯॥

ಕಾರ್ಯದಲ್ಲಿ ಅಕುಶಲನಾದ, ಕಾಮ-ಕ್ರೋಧಗಳಿಗೆ ಅಡಿಯಾಳಾಗಿ ರುವ ಮೂರ್ಖನನ್ನು ಅರ್ಥಸಂಗ್ರಹಕ್ಕೆ ಅಧಿಕಾರಿಯನ್ನಾಗಿ ನಿಯಮಿಸಿ ಕೊಂಡರೆ ಅವನು ಕುತ್ಸಿತವಾದ ಉಪಾಯಗಳಿಂದ ಪ್ರಜೆಗಳನ್ನು ಕ್ಲೇಶ ಗೊಳಿಸುತ್ತಾನೆ.

ಬಲಿಷಷ್ಠೇನ ಶುಲ್ಕೇನ ದಣ್ಡೇನಾಥಾಪರಾಧಿನಾಮ್ ।
ಶಾಸ್ತ್ರನೀತೇನ ಲಿಪ್ಸೇಥಾ ವೇತನೇನ ಧನಾಗಮಮ್ ॥೧೦॥

ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ರಾಜಾದಾಯ ವನ್ನಾಗಿ ಪಡೆದು ಅರ್ಥವನ್ನು ಸಂಗ್ರಹಿಸಬೇಕು. ಅಪರಾಧಿಗಳಿಗೆ ದಂಡವನ್ನು ವಿಧಿಸುವುದರ ಮೂಲಕ ಅರ್ಥವನ್ನು ಸಂಗ್ರಹಿಸಬೇಕು. ಶಾಸ್ತ್ರಾನುಸಾರವಾಗಿ ರಾಜಸೇವಕರಿಂದ ಸಂರಕ್ಷಿತರಾದ ವ್ಯಾಪಾರಿಗಳಿಂದ ಕೊಡಲ್ಪಡುವ ರಾಜ ವೇತನದಿಂದಲೂ ಧನವನ್ನು ಸಂಗ್ರಹಿಸಬೇಕು. ಇವು ರಾಜನ ಧನಸಂಗ್ರಹಕ್ಕೆ ಮಾರ್ಗಗಳಾಗಿವೆ.

ದಾಪಯಿತ್ವಾ ಕರಂ ಧರ್ಮ್ಯಂ ರಾಷ್ಟ್ರಂ ನೀತ್ಯಾ ಯಥಾವಿಧಿ ।
ತಥೈತಂ ಕಲ್ಪಯೇದ್ರಾಜಾ ಯೋಗಕ್ಷೇಮಮತನ್ದ್ರಿತಃ ॥೧೧॥

ರಾಜನು ಧರ್ಮಾನುಕೂಲವಾಗಿ ಪ್ರಜೆಗಳಿಂದ ಕರವನ್ನು ತೆಗೆದು ಕೊಂಡು, ನೀತಿಶಾಸ್ತ್ರಾನುಸಾರವಾಗಿ ರಾಷ್ಟ್ರವನ್ನು ಪರಿಪಾಲಿಸುತ್ತಾ, ಅಲಸಿಕೆಯಿಲ್ಲದವನಾಗಿ ಜಾಗರೂಕನಾಗಿದ್ದುಕೊಂಡು ಪ್ರಜೆಗಳ ಯೋಗ-ಕ್ಷೇಮಗಳ ವ್ಯವಸ್ಥೆಯನ್ನು ಏರ್ಪಡಿಸಬೇಕು.

ಗೋಪಾಯಿತಾರಂ ದಾತಾರಂ ಧರ್ಮನಿತ್ಯಮತನ್ದ್ರಿತಮ್ ।
ಅಕಾಮದ್ವೇಷಸಂಯುಕ್ತಮನುರಜ್ಯನ್ತಿ ಮಾನವಾಃ ॥೧೨॥

ಯಾವ ರಾಜನು ಆಲಸ್ಯರಹಿತನಾಗಿರುವನೋ, ಧರ್ಮನಿತ್ಯನಾಗಿರು ವನೋ, ರಾಗ-ದ್ವೇಷಗಳಿಂದ ರಹಿತನಾಗಿರುವನೋ, ಸದಾಕಾಲದಲ್ಲಿಯೂ ಪ್ರಜೆಗಳ ರಕ್ಷಣೆಯಲ್ಲಿಯೇ ತತ್ಪರನಾಗಿರುವನೋ, ದಾನಶೀಲನಾಗಿರು ವನೋ–ಅಂತಹ ರಾಜನ ವಿಷಯದಲ್ಲಿ ಸಮಸ್ತಪ್ರಜೆಗಳೂ ಅನುರಾಗವುಳ್ಳ ವರಾಗಿರುತ್ತಾರೆ.

ಮಾ ಸ್ಮಾಧರ್ಮೇಣ ಲೋಭೇನ ಲಿಪ್ಸೇಥಾಸ್ತ್ವಂ ಧನಾಗಮಮ್ ।
ಧರ್ಮಾರ್ಥಾವಧ್ರುವೌ ತಸ್ಯ ಯೋ ನ ಶಾಸ್ತ್ರಪರೋ ಭವೇತ್ ॥೧೩॥

ಯುಧಿಷ್ಠಿರ! ನೀನು ಲೋಭವಶನಾಗಿ ಅಧರ್ಮಮಾರ್ಗದಿಂದ ಧನ ಸಂಗ್ರಹಮಾಡುವ ಆಶೆಯುಳ್ಳವನಾಗಬೇಡ. ಏಕೆಂದರೆ : ಯಾವನು ನೀತಿ ಶಾಸ್ತ್ರಾನುಸಾರವಾಗಿ ನಡೆದುಕೊಳ್ಳುವುದಿಲ್ಲವೋ–ಅಂತಹವನಲ್ಲಿ ಧರ್ಮಾರ್ಥ ಗಳೆರಡೂ ಅಸ್ಥಿರವಾಗಿರುತ್ತವೆ. (ಶಾಶ್ವತವಾಗಿ ಉಳಿಯುವುದಿಲ್ಲ.)

ಅಪಶಾಸ್ತ್ರಪರೋ ರಾಜಾ ಧರ್ಮಾರ್ಥಾನ್ನಾಧಿಗಚ್ಛತಿ ।
ಅಸ್ಥಾನೇ ಚಾಸ್ಯ ತದ್ವಿತ್ತಂ ಸರ್ವಮೇವ ವಿನಶ್ಯತಿ ॥೧೪॥

ಶಾಸ್ತ್ರಕ್ಕೆ ವಿರುದ್ಧವಾಗಿ ವರ್ತಿಸುವ ರಾಜನು ಧರ್ಮಮೂಲವಾಗಿ ಅರ್ಥವನ್ನೂ ಪಡೆದುಕೊಳ್ಳುವುದಿಲ್ಲ. ಅವನು ಅಧರ್ಮಮೂಲವಾಗಿ ಸಂಗ್ರಹಿಸಿದ ಹಣವೆಲ್ಲವೂ ದುರ್ವ್ಯಯವಾಗಿ ವಿನಾಶಹೊಂದುತ್ತದೆ.

ಅರ್ಥಮೂಲೋಽಪಿ ಹಿಂಸಾಂ ಚ ಕುರುತೇ ಸ್ವಯಮಾತ್ಮನಃ ।
ಕರೈರಶಾಸ್ತ್ರದೃಷ್ಟೈರ್ಹಿ ಮೋಹಾತ್ಸಮ್ಪೀಡಯನ್ಪ್ರಜಾಃ ॥೧೫॥

ಅರ್ಥವನ್ನೇ ಪ್ರಧಾನವನ್ನಾಗಿಟ್ಟುಕೊಂಡಿರುವ ಲೋಭಿಯಾದ ಯಾವ ರಾಜನು ಮೋಹವಶನಾಗಿ ಶಾಸ್ತ್ರವಿರುದ್ಧವಾದ ರೀತಿಯಲ್ಲಿ ಅಧಿಕವಾದ ತೆರಿಗೆಗಳಿಂದ ಪ್ರಜೆಗಳನ್ನು ಪೀಡಿಸುತ್ತಾನೆಯೋ–ಅಂತಹ ರಾಜನು ತನಗೆ ತಾನೇ ಹಿಂಸೆಯನ್ನು ಮಾಡಿಕೊಳ್ಳುತ್ತಾನೆ. ಪ್ರಜೆಗಳನ್ನು ಪೀಡಿಸಿ ಅಧಿಕವಾದ ತೆರಿಗೆಯನ್ನು ತೆಗೆದುಕೊಳ್ಳುವುದರಿಂದ ರಾಜನಿಗೇ ಪೀಡೆಯುಂಟಾಗುತ್ತದೆ.

ಊಧಶ್ಛಿನ್ದ್ಯಾತ್ತು ಯೋ ಧೇನ್ವಾಃ ಕ್ಷೀರಾರ್ಥೀ ನ ಲಭೇತ್ಪಯಃ ।
ಏವಂ ರಾಷ್ಟ್ರಮಯೋಗೇನ ಪೀಡಿತಂ ನ ವಿವರ್ಧತೇ ॥೧೬॥

ಹಾಲನ್ನು ಅಪೇಕ್ಷಿಸುವ ಮನುಷ್ಯನು ಹಸುವು ಕೊಡುವಷ್ಟು ಹಾಲನ್ನು ಕೆಚ್ಚಲಿನಿಂದ ಕರೆದುಕೊಂಡು ತೃಪ್ತನಾಗಬೇಕೇ ಹೊರತು ಕೆಚ್ಚಲನ್ನೇ ಕತ್ತರಿಸಿಬಿಡಬಾರದು. ಹಾಗೆ ಮಾಡುವುದರಿಂದ ಅವನಿಗೆ ಹಾಲಿನ ಹನಿಯೂ ಸಿಕ್ಕುವುದಿಲ್ಲ. ಹಾಗೆಯೇ ರಾಜನು ಪ್ರಜೆಗಳಿಗೆ ಸ್ವಲ್ಪವೂ ತೊಂದರೆಯಾಗ ದಂತೆ ಅವರಿಂದ ತೆರಿಗೆಯನ್ನು ಪಡೆದುಕೊಳ್ಳಬೇಕು. ಕುತ್ಸಿತವಾದ ಉಪಾಯಗಳಿಂದ ನಾನಾವಿಧವಾದ ತೆರಿಗೆಗಳನ್ನು ಹೇರಿ ಜನರನ್ನು ಕ್ಲೇಶಗೊಳಿಸುವ ರಾಷ್ಟ್ರವು ಅಭಿವೃದ್ಧಿಯನ್ನು ಹೊಂದುವುದಿಲ್ಲ. (ಯಾವನಿಂದ ರಾಷ್ಟ್ರವು ಪೀಡಿಸಲ್ಪಡುವುದೋ ಆ ರಾಜನು ವೃದ್ಧಿಹೊಂದುವುದಿಲ್ಲ.)

ಯೋ ಹಿ ದೋಗ್ಧ್ರೀಮುಪಾಸ್ತೇ ಚ ಸ ನಿತ್ಯಂ ವಿನ್ದತೇ ಪಯಃ ।
ಏವಂ ರಾಷ್ಟ್ರಮುಪಾಯೇನ ಭುಞ್ಜಾನೋ ಲಭತೇ ಫಲಮ್ ॥೧೭॥

ಯಾವನು ಹಾಲುಕೊಡುವ ಹಸುವನ್ನು ಚೆನ್ನಾಗಿ ಸಾಕುತ್ತಾನೆಯೋ ಅವನು ಅನುದಿನವೂ ಆ ಹಸುವಿನಿಂದ ಹಾಲನ್ನು ಪಡೆದುಕೊಳ್ಳುತ್ತಾನೆ. ಹಾಗೆಯೇ ರಾಜನು ಪ್ರಜೆಗಳನ್ನು ಚೆನ್ನಾಗಿ ಸಂರಕ್ಷಿಸಬೇಕು. ಅನಂತರ ಅವರಿಂದ ನೀತಿಶಾಸ್ತ್ರಾನುಸಾರವಾಗಿ ತೆರಿಗೆಯನ್ನು ತೆಗೆದುಕೊಳ್ಳಬೇಕು. ಹೀಗೆ ಉಚಿತವಾದ ರೀತಿಯಲ್ಲಿ ರಾಜ್ಯವನ್ನು ರಕ್ಷಣೆಮಾಡುವ ರಾಜನು ಸಂಪೂರ್ಣಫಲವನ್ನು ಪಡೆದುಕೊಳ್ಳುತ್ತಾನೆ.

ಅಥ ರಾಷ್ಟ್ರಮುಪಾಯೇನ ಭುಜ್ಯಮಾನಂ ಸುರಕ್ಷಿತಮ್ ।
ಜನಯತ್ಯತುಲಾ ನಿತ್ಯಂ ಕೋಶವೃದ್ಧಿಂ ಯುಧಿಷ್ಠಿರ ॥೧೮॥

ಯುಧಿಷ್ಠಿರ! ನ್ಯಾಯೋಚಿತವಾದ ಉಪಾಯಗಳಿಂದ ಸಂರಕ್ಷಿಸಲ್ಪಟ್ಟು ರಾಜನಿಂದ ಉಪಭೋಗಿಸಲ್ಪಡುವ ರಾಷ್ಟ್ರವು ಅಪಾರವಾದ ಕೋಶವೃದ್ಧಿಯನ್ನು ನಿತ್ಯವೂ ಉಂಟುಮಾಡುತ್ತಿರುತ್ತದೆ. (ಪ್ರಜೆಗಳನ್ನು ರಕ್ಷಣೆಮಾಡುವುದು, ನ್ಯಾಯೋಚಿತವಾದ ರೀತಿಯಲ್ಲಿ ತೆರಿಗೆಯನ್ನು ತೆಗೆದುಕೊಂಡು ತಾನೂ ಸುಖಪಡುವುದು–ಇಷ್ಟು ಮಾಡುತ್ತಿದ್ದರೆ ಸಾಕು. ರಾಜನು ಧನಕ್ಕಾಗಿ ಧಾವಂತಪಡಬೇಕಾಗಿಲ್ಲ. ಇಂತಹ ಸುರಾಷ್ಟ್ರವೇ ಬೊಕ್ಕಸವನ್ನು ತುಂಬಿಸುತ್ತದೆ.)

ದೋಗ್ಧ್ರೀ ಧಾನ್ಯಂ ಹಿರಣ್ಯಂ ಚ ಮಹೀ ರಾಜ್ಞಾ ಸುರಕ್ಷಿತಾ ।
ನಿತ್ಯಂ ಸ್ವೇಭ್ಯಃ ಪರೇಭ್ಯಶ್ಚ ತೃಪ್ತಾ ಮಾತಾ ಯಥಾ ಪಯಃ ॥೧೯॥

ಪುಷ್ಟಿಕರವಾದ ಆಹಾರದಿಂದ ತೃಪ್ತಳಾದ ತಾಯಿಯು ಮಗುವಿಗೂ ಬೇಕಾದಷ್ಟು ಹಾಲುಣಿಸುವಂತೆ–ಸುರಕ್ಷಿತವಾದ ಹಸುವು ತನ್ನ ಕರುವನ್ನೂ ಪೋಷಿಸಿ ಬೇಕಾದವರಿಗೆಲ್ಲಾ ಅಮೃತವನ್ನು ನೀಡುವಂತೆ–ರಾಜನಿಂದ ಸಂರಕ್ಷಿತವಾದ ಭೂಮಿಯು ರಾಜನ ಕಡೆಯವರಿಗೂ ಮತ್ತು ಇತರರಿಗೂ ಯಥೇಚ್ಛವಾದ ಧಾನ್ಯವನ್ನೂ ಸುವರ್ಣವನ್ನೂ ನೀಡುತ್ತದೆ.

ಮಾಲಾಕಾರೋಪಮೋ ರಾಜನ್ಭವ ಮಾಙ್ಗಾರಿಕೋಪಮಃ ।
ತಥಾಯುಕ್ತಶ್ಚಿರಂ ರಾಜ್ಯಂ ಭೋಕ್ತುಂ ಶಕ್ಷ್ಯಸಿ ಪಾಲಯನ್ ॥೨೦॥

ಯುಧಿಷ್ಠಿರ! ನೀನು ಹೂವುಗಳನ್ನು ಮಾಲೆಕಟ್ಟಿ ಮಾರುವ ಹೂವಾಡಿಗನಂತಾಗು. ಇದ್ದಿಲುಮಾಡುವವನಂತಾಗಬೇಡ. ಹೂವಾಡಿಗನು ಮೊದಲು ಗಿಡಗಳಿಗೆ ನೀರು ಹಾಕಿ ಬೆಳೆಸಿ ಅನಂತರ ಅವುಗಳಲ್ಲಿರುವ ಹೂವುಗಳನ್ನು ಕಿತ್ತು ಮಾಲೆಗಳನ್ನು ಮಾಡಿ ಮಾರಿ ತನ್ನ ಜೀವನವನ್ನು ಸುಖವಾಗಿ ಸಾಗಿಸುತ್ತಾನೆ. ಮಾಲಾಕಾರನಂತೆ ರಾಜನು ಮೊದಲು ಪ್ರಜೆಗಳನ್ನು ಪಾಲಿಸಿ-ಪೋಷಿಸಿ, ಅನಂತರ ತೊಂದರೆಯಾಗದ ರೀತಿಯಲ್ಲಿ ಅವರಿಂದ ತೆರಿಗೆಗಳನ್ನು ತೆಗೆದುಕೊಂಡು ಸುಖಪಡಬೇಕು. ಇದ್ದಿಲು ಮಾಡುವವನಂತಾಗಬಾರದು. ಇದ್ದಿಲು ಮಾಡುವವನು ಫಲ-ಪುಷ್ಪಭರಿತವಾದ ವೃಕ್ಷಗಳನ್ನೇ ಸುಟ್ಟುಹಾಕಿ ಇದ್ದಿಲನ್ನು ಮಾಡುತ್ತಾನೆ. ಅದರಿಂದ ಕಟ್ಟಕಡೆಗೆ ಸುಡಲು ವೃಕ್ಷಗಳೇ ಸಿಕ್ಕದೇ ಅವನ ಜೀವನವೇ ಹಾಳಾಗುತ್ತದೆ. ರಾಜನು ಹೀಗಾಗಬಾರದು.

ಪ್ರಜೆಗಳಿಂದ ಬಲಾತ್ಕಾರವಾಗಿ ತೆರಿಗೆಗಳನ್ನು ತೆಗೆದುಕೊಂಡರೆ ಅವರೂ ವಿನಾಶಹೊಂದುತ್ತಾರೆ. ಪ್ರಜೆಗಳ ವಿನಾಶದಿಂದ ರಾಜನೂ ವಿನಾಶ ಹೊಂದುತ್ತಾನೆ. ಆದುದರಿಂದ ಧೀಮಂತನಾದ ರಾಜನು ಪ್ರಜೆಗಳ ವಿಷಯದಲ್ಲಿ ಹೂವಾಡಿಗನು ಹೂಗಿಡಗಳ ವಿಷಯದಲ್ಲಿ ನಡೆದುಕೊಳ್ಳುವಂತೆ ನಡೆದುಕೊಂಡರೆ ರಾಜ್ಯವನ್ನು ಚಿರಕಾಲದವರೆಗೆ ಉಪಭೋಗಿಸಲು ಸಮರ್ಥನಾಗುತ್ತಾನೆ.

ಪರಚಕ್ರಾಭಿಯಾನೇನ ಯದಿ ತೇ ಸ್ಯಾದ್ಧನಕ್ಷಯಃ ।
ಅಥ ಸಾಮ್ನೈವ ಲಿಪ್ಸೇಥಾ ಧನಮಬ್ರಾಹ್ಮಣೇಷು ಯತ್ ॥೨೧॥

(ಯಾವ ವಿಧವಾದ ಉಪದ್ರವಗಳೂ ಇಲ್ಲದಿದ್ದರೆ ಅಲ್ಪಕರಗ್ರಹಣದಿಂದಲೇ ರಾಜ್ಯಭಾರ ಮಾಡಬಹುದು ; ರಾಜನೂ ಸುಖವಾಗಿರಬಹುದು. ಯಾವುದಾದರೂ ಉಪದ್ರವಗಳು ತಲೆದೋರಿದರೆ ಏನು ಮಾಡಬೇಕು?– ಎಂಬುದಕ್ಕೆ ಭೀಷ್ಮನು ಸಮಾಧಾನ ಹೇಳುತ್ತಾನೆ.) ಶತ್ರುಗಳ ಆಕ್ರಮಣದಿಂದ ನಿನಗೇನಾದರೂ ಧನವು ನಷ್ಟವಾಗಿಹೋದಲ್ಲಿ ಆಗ ಸಾಮೋಪಾಯದಿಂದಲೇ ಧನಿಕರಾದ ಕ್ಷತ್ರಿಯ-ವೈಶ್ಯ-ಶೂದ್ರರಿಂದ ಧನವನ್ನು ಪಡೆದುಕೊಳ್ಳಲು ಇಚ್ಛೆಪಡುವುದು ಯುಕ್ತವಾಗಿದೆ. (ಅಂತಹ ಸಂದಿಗ್ಧಸಮಯದಲ್ಲಿಯೂ ಬಲಾತ್ಕಾರವಾಗಿ ಪ್ರಜೆಗಳಿಂದ ಧನಾಪಹರಣ ಮಾಡಬಾರದು.)

ಮಾ ಸ್ಮ ತೇ ಬ್ರಾಹ್ಮಣಂ ದೃಷ್ಟ್ವಾ ಧನಸ್ಥಂ ಪ್ರಚಲೇನ್ಮನಃ ।
ಅನ್ತ್ಯಾಯಾಮಪ್ಯವಸ್ಥಾಯಾಂ ಕಿಮು ಸ್ಫೀತಸ್ಯ ಭಾರತ ॥೨೨॥

ನೀನು ಎಂತಹುದೇ ದುರವಸ್ಥೆಯಲ್ಲಿದ್ದರೂ, ಅಂತ್ಯಾವಸ್ಥೆಯಲ್ಲಿದ್ದರೂ, ಧನಾಭಾವದಿಂದಾಗಿ ಪ್ರಾಣಹೋಗುವ ಸಂದರ್ಭವೇ ಒದಗಿಬಂದಿದ್ದರೂ, ಐಶ್ವರ್ಯವಂತನಾದ ಬ್ರಾಹ್ಮಣನನ್ನು ನೋಡಿ ಅವನಿಂದ ಧನವನ್ನು ಸಂಗ್ರಹಿಸಬೇಕೆಂಬ ಚಾಂಚಲ್ಯವು ನಿನ್ನ ಮನಸ್ಸಿನಲ್ಲುಂಟಾಗದಿರಲಿ. ಹೀಗಿರುವಾಗ ನೀನು ಐಶ್ವರ್ಯಸಂಪನ್ನನಾಗಿರುವಾಗ ಬ್ರಾಹ್ಮಣನ ಸ್ವತ್ತಿನ ವಿಷಯದಲ್ಲಿ ಹೇಗಿರಬೇಕೆಂಬುದನ್ನು ಹೇಳಲೇಬೇಕಾಗಿಲ್ಲ.

ಧನಾನಿ ತೇಭ್ಯೋ ದದ್ಯಾಸ್ತ್ವಂ ಯಥಾಶಕ್ತಿ ಯಥಾರ್ಹತಃ ।
ಸಾನ್ತ್ವಯನ್ಪರಿರಕ್ಷಂಶ್ಚ ಸ್ವರ್ಗಮಾಪ್ಸ್ಯಸಿ ದುರ್ಜಯಮ್ ॥೨೩॥

ನೀನು ಬ್ರಾಹ್ಮಣರನ್ನು ಸಂತೈಸುತ್ತಿರಬೇಕು. ಅವರ ರಕ್ಷಣೆಯನ್ನು ಮಾಡುತ್ತಿರಬೇಕು. ಅವರಿಗೆ ಯಥಾಶಕ್ತಿ ಯಥಾಯೋಗ್ಯವಾಗಿ ಧನವನ್ನು ಕೊಡುತ್ತಿರಬೇಕು. ಹೀಗೆ ಮಾಡುವುದರಿಂದಲೇ ನೀನು ದುರ್ಜಯವಾದ ಸ್ವರ್ಗವನ್ನು ಪಡೆದುಕೊಳ್ಳುವೆ.

ಯುಧಿಷ್ಠಿರ! ಇಂತಹ ಧರ್ಮಮೂಲವಾದ ಸದ್ವೃತ್ತದಲ್ಲಿ ಇದ್ದುಕೊಂಡು ನೀನು ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆಮಾಡು. ಅದರಿಂದ ಪುಣ್ಯವನ್ನು ಪಡೆಯುವೆ. ನಿನಗೆ ಶಾಶ್ವತವಾದ ಕೀರ್ತಿಯೂ ಲಭಿಸುವುದು. ಧರ್ಮಾನುಗುಣವಾಗಿ ವ್ಯವಹರಿಸುತ್ತಿದ್ದರೆ. ಮಾನಸಿಕ ವ್ಯಥೆಯ ಬಂಧನಕ್ಕೆ ಒಳಗಾಗಬೇಕಾಗುವುದಿಲ್ಲ.

ಏಷ ಏವ ಪರೋ ಧರ್ಮೋ ಯದ್ರಾಜಾ ರಕ್ಷತಿ ಪ್ರಜಾಃ ।
ಭೂತಾನಾಂ ಹಿ ಯಥಾ ಧರ್ಮೋ ರಕ್ಷಣಂ ಪರಮಾ ದಯಾ ॥೨೬॥

'ರಾಜನು ಪ್ರಜೆಗಳನ್ನು ಧರ್ಮದಿಂದ ರಕ್ಷಿಸುತ್ತಿದ್ದಾನೆ'–ಎಂಬುದೇ ರಾಜನಾದವನಿಗೆ ಅತ್ಯಂತಶ್ರೇಷ್ಠವಾದ ಧರ್ಮವಾಗಿರುತ್ತದೆ. ಸರ್ವಪ್ರಾಣಿಗಳನ್ನೂ ರಕ್ಷಿಸುವುದು ಮತ್ತು ಅವುಗಳ ವಿಷಯದಲ್ಲಿ ಅತ್ಯಂತದಯಾಳುವಾಗಿರುವುದು–ಇವೇ ರಾಜನ ಧರ್ಮಗಳಾಗಿರುತ್ತವೆ.

ಈ ಕಾರಣದಿಂದಲೇ ರಾಜನು ಪ್ರಜಾಪಾಲನತತ್ಪರನಾಗಿರುವುದನ್ನೂ ಪ್ರಾಣಿಗಳ ವಿಷಯದಲ್ಲಿ ದಯಾಳುವಾಗಿರುವುದನ್ನೂ ಪರಮಶ್ರೇಷ್ಠವಾದ ಧರ್ಮವೆಂದು ಧರ್ಮಕೋವಿದರು ತಿಳಿಯುತ್ತಾರೆ.

ಯದಹ್ನಾ ಕುರುತೇ ಪಾಪಮರಕ್ಷನ್ಭಯತಃ ಪ್ರಜಾಃ ।
ರಾಜಾ ವರ್ಷಸಹಸ್ರೇಣ ತಸ್ಯಾನ್ತಮಧಿಗಚ್ಛತಿ ॥೨೮॥

ರಾಜನು ಒಂದೇ ಒಂದು ಹಗಲು ಪ್ರಜೆಗಳನ್ನು ಭಯಾದಿಗಳಿಂದ ರಕ್ಷಣೆಮಾಡದೇ ಪಾಪಮಾಡಿದರೆ ಒಂದು ಸಾವಿರ ವರ್ಷಗಳು ನರಕದಲ್ಲಿ ಕಳೆದನಂತರ ಆ ಪಾಪದ ಪರಿಹಾರವಾಗುತ್ತದೆ. ಪ್ರಜಾರಕ್ಷಣೆಯೆಂಬುದು ಎಷ್ಟು ಪುಣ್ಯಪ್ರದವೋ ಪ್ರಜೆಗಳ ಅರಕ್ಷಣೆಯೆಂಬುದು ಅಷ್ಟೇ ಪಾಪಕರ. ಪ್ರಜೆಗಳನ್ನು ರಕ್ಷಿಸದಿದ್ದರೆ ಅರಮನೆಯಲ್ಲಿರುವ ತನಗೇನೂ ಆಗಲಾರದೆಂದು ಭಾವಿಸುವುದು ತಪ್ಪು. ಪ್ರಜೆಗಳನ್ನು ರಕ್ಷಿಸದಿರುವ ಮಹಾಪಾಪವು

ರಾಜನಾದವನನ್ನು ಸಾವಿರಾರು ವರ್ಷಗಳ ಪರ್ಯಂತವಾಗಿ ಕಾಡುತ್ತಲೇ ಇರುತ್ತದೆ.

ಯದಹ್ನಾ ಕುರುತೇ ಧರ್ಮಂ ಪ್ರಜಾ ಧರ್ಮೇಣ ಪಾಲಯನ್ ।
ದಶವರ್ಷಸಹಸ್ರಾಣಿ ತಸ್ಯ ಭುಂಕ್ತೇ ಫಲಂ ದಿವಿ ॥೨೯॥

ರಾಜನು ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡುತ್ತಾ ಒಂದು ಹಗಲಿನಲ್ಲಿ ಮಾಡಿದ ಧರ್ಮದ ಫಲವನ್ನು ಹತ್ತುಸಾವಿರ ವರ್ಷಗಳ ಕಾಲ ಸ್ವರ್ಗಲೋಕದಲ್ಲಿ ಅನುಭವಿಸುತ್ತಾನೆ.

ಸ್ವಿಷ್ಟಿಃ ಸ್ವಧೀತಿಃ ಸುತಪಾ ಲೋಕಾಂಜ್ಜಯತಿ ಯಾವತಃ ।
ಕ್ಷಣೇನ ತಾನವಾಪ್ನೋತಿ ಪ್ರಜಾ ಧರ್ಮೇಣ ಪಾಲಯನ್ ॥೩೦॥

ಉತ್ತಮವಾದ ಯಜ್ಞಗಳನ್ನು ಮಾಡುವುದರಿಂದ ಗೃಹಸ್ಥನೂ, ಸರ್ವದಾ ಅಧ್ಯಯನಪರಾಯಣನಾಗಿರುವಿಕೆಯಿಂದ ಬ್ರಹ್ಮಚಾರಿಯೂ, ಸದಾ ತಪಸ್ಸಿನಲ್ಲಿಯೇ ನಿರತನಾಗಿರುವುದರಿಂದ ವಾನಪ್ರಸ್ಥನೂ ಎಷ್ಟು ಲೋಕಗಳನ್ನು ಜಯಿಸುತ್ತಾರೆಯೋ–ಅಷ್ಟು ಲೋಕಗಳನ್ನು ರಾಜನು ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡುವುದರ ಮೂಲಕವಾಗಿಯೇ ಕ್ಷಣಮಾತ್ರದಲ್ಲಿ ಹೊಂದುತ್ತಾನೆ.

ಕುಂತೀಪುತ್ರ! ಹೀಗೆ ನೀನು ಪ್ರಯತ್ನಪೂರ್ವಕವಾಗಿ ಧರ್ಮದಿಂದ ರಾಜ್ಯವನ್ನು ಪರಿಪಾಲಿಸು. ಇದರಿಂದ ನೀನು ಪುಣ್ಯಫಲವನ್ನು ಪಡೆದು ನಿಶ್ಚಿಂತನಾಗುವೆ. ರಾಜನಾದವನು (ಕ್ಷತ್ರಿಯನಾದವನು) ಮಾತ್ರವೇ ಇಂತಹ ಧರ್ಮದ ಫಲವನ್ನು ಪಡೆದುಕೊಳ್ಳುತ್ತಾನೆ. ಬೇರೆಯವರಿಗೆ ಈ ಧರ್ಮದ ಫಲವು ಸಿಕ್ಕುವ ಸಾಧ್ಯತೆಯಿಲ್ಲ. ಧೈರ್ಯವಂತನಾಗಿರುವ ನೀನು ಈ ರಾಜ್ಯವನ್ನು ಧರ್ಮದಿಂದ ಪರಿಪಾಲನೆಮಾಡು. ಯಜ್ಞಮಾಡುವುದರ ಮೂಲಕವಾಗಿ ಇಂದ್ರನನ್ನು ಸೋಮರಸದಿಂದಲೂ–ಸುಹೃದರನ್ನು ಮನೋವಾಂಛಿತವಾದ ವಸ್ತುಗಳಿಂದಲೂ ತೃಪ್ತಿಗೊಳಿಸು.”

೭೧ನೆಯ ಅಧ್ಯಾಯವು ಮುಗಿಯಿತು.

ರಾಜನಿಗೆ ಸದಾಚಾರಿಯಾದ, ವಿದ್ವಾಂಸನಾದ ಪುರೋಹಿತನ ಆವಶ್ಯಕತೆ : ಪ್ರಜಾಪಾಲನೆಯ ಮಹತ್ತ್ವ

ಪಾರಿಕ್ಷಿತ! ಭೀಷ್ಮನು ಪ್ರವಚನವನ್ನು ಮುಂದುವರಿಸಿ ಹೇಳುತ್ತಾನೆ :

ಯ ಏವ ತು ಸತೋ ರಕ್ಷೇದಸತಶ್ಚ ನಿವರ್ತಯೇತ್ ।
ಸ ಏವ ರಾಜ್ಞಃ ಕರ್ತವ್ಯೋ ರಾಜನ್ರಾಜಪುರೋಹಿತಃ ॥೧॥

"ಯುಧಿಷ್ಠಿರಮಹಾರಾಜ! ಯಾವನು ರಾಜನ ಸತ್ಕರ್ಮಗಳನ್ನು ರಕ್ಷಿಸಿಕೊಂಡು ಹೋಗುವನೋ, ಅಸತ್ಕರ್ಮಗಳನ್ನು ದೂರಸರಿಸುವನೋ– ಅಂತಹ ವಿದ್ವಾಂಸನಾದ ಬ್ರಾಹ್ಮಣನನ್ನೇ ರಾಜನು ರಾಜಪುರೋಹಿತನನ್ನಾಗಿ ಮಾಡಿಕೊಳ್ಳಬೇಕು.

ಈ ವಿಷಯದಲ್ಲಿ ವಿದ್ವಾಂಸರು ಇಲಾಪುತ್ರನಾದ ಪುರೂರವನಿಗೂ ಮತ್ತು ವಾಯುವಿಗೂ ನಡೆದ ಸಂವಾದವನ್ನು ಉದಾಹರಿಸುತ್ತಾರೆ :

ಪುರೂರವನು ವಾಯುದೇವನನ್ನು ಪ್ರಶ್ನಿಸುತ್ತಾನೆ :

ಕುತಃಸ್ವಿದ್ಬ್ರಾಹ್ಮಣೋ ಜಾತೋ ವರ್ಣಾಶ್ಚಾಪಿ ಕುತಸ್ತ್ರಯಃ ।
ಕಸ್ಮಾಚ್ಚ ಭವತಿ ಶ್ರೇಷ್ಠಸ್ತನ್ಮೇ ವ್ಯಾಖ್ಯಾತುಮರ್ಹಸಿ ॥೩॥

"ವಾಯುದೇವ! ಬ್ರಾಹ್ಮಣನ ಉತ್ಪತ್ತಿಯು ಎಲ್ಲಿಂದಾಯಿತು? ಉಳಿದ ಮೂರು ವರ್ಣಗಳೂ ಯಾರಿಂದ ಉತ್ಪನ್ನವಾದುವು? ಯಾವ ಕಾರಣದಿಂದ ಬ್ರಾಹ್ಮಣನು ಈ ಮೂರು ವರ್ಣದವರಿಗಿಂತಲೂ ಶ್ರೇಷ್ಠನಾಗುತ್ತಾನೆ? ಈ ವಿಷಯವನ್ನು ನನಗೆ ಸ್ಪಷ್ಟವಾಗಿ ಹೇಳು."

ಅದಕ್ಕೆ ವಾಯುದೇವನು ಹೇಳುತ್ತಾನೆ :

ಬ್ರಾಹ್ಮಣೋ ಮುಖತಃ ಸೃಷ್ಟೋ ಬ್ರಹ್ಮಣೋ ರಾಜಸತ್ತಮ ।
ಬಾಹುಭ್ಯಾಂ ಕ್ಷತ್ರಿಯಃ ಸೃಷ್ಟ ಊರುಭ್ಯಾಂ ವೈಶ್ಯ ಏವ ಚ ॥೪॥

"ರಾಜಶ್ರೇಷ್ಠನೇ! ಬ್ರಾಹ್ಮಣನು ಬ್ರಹ್ಮನ ಮುಖದಿಂದ ಹುಟ್ಟಿದನು.

ಬ್ರಹ್ಮನ ಬಾಹುಗಳಿಂದ ಕ್ಷತ್ರಿಯನು ಹುಟ್ಟಿದನು. ತೊಡೆಗಳಿಂದ ವೈಶ್ಯನು ಹುಟ್ಟಿದನು.

ವರ್ಣಾನಾಂ ಪರಿಚರ್ಯಾರ್ಥಂ ತ್ರಯಾಣಾಂ ಭರತರ್ಷಭ ।
ವರ್ಣಶ್ಚತುರ್ಥಃ ಪಶ್ಚಾತ್ತು ಪದ್ಭ್ಯಾಂ ಶೂದ್ರೋ ವಿನಿರ್ಮಿತಃ ॥೫॥

ಭರತರ್ಷಭನೇ! ಮೂರು ವರ್ಣಗಳ ಸೃಷ್ಟಿಯಾದನಂತರ ಮೂರೂ ವರ್ಣಗಳ ಸೇವೆಗಾಗಿ ಶೂದ್ರನು ಬ್ರಹ್ಮನ ಪಾದಗಳಿಂದ ಪ್ರಾದುರ್ಭವಿಸಿದನು.

ಬ್ರಾಹ್ಮಣೋ ಜಾಯಮಾನೋ ಹಿ ಪೃಥಿವ್ಯಾಮನುಜಾಯತೇ ।
ಈಶ್ವರಃ ಸರ್ವಭೂತಾನಾಂ ಧರ್ಮಕೋಶಸ್ಯ ಗುಪ್ತಯೇ ॥೬॥

ಬ್ರಾಹ್ಮಣನು ಹುಟ್ಟಿದಾಗಿನಿಂದಲೇ ಭೂಮಿಯಲ್ಲಿ ಧರ್ಮಕೋಶದ ರಕ್ಷಣಾರ್ಥವಾಗಿ ಎಲ್ಲ ಪ್ರಾಣಿಗಳಿಗೂ ನಿಯಂತೃವಾಗುತ್ತಾನೆ.

ಅತಃ ಪೃಥಿವ್ಯಾ ಯನ್ತಾರಂ ಕ್ಷತ್ರಿಯಂ ದಣ್ಡಧಾರಿಣಮ್ ।
ದ್ವಿತೀಯಂ ವರ್ಣಮಕರೋತ್ಪ್ರಜಾನಾಮನುಗುಪ್ತಯೇ ॥೭॥

ಧರ್ಮಕೋಶದ ರಕ್ಷಣಾರ್ಥವಾಗಿ ಬ್ರಾಹ್ಮಣರನ್ನು ಸೃಷ್ಟಿಸಿದನಂತರ ಬ್ರಹ್ಮನು ಪ್ರಜೆಗಳ ರಕ್ಷಣೆಗಾಗಿ ದಂಡಧಾರಿಯಾದ, ಭೂಮಿಯಲ್ಲಿ ಆಡಳಿತ ವನ್ನು ನಡೆಸಿಕೊಂಡುಹೋಗುವ ಎರಡನೆಯದಾದ ಕ್ಷತ್ರಿಯವರ್ಣವನ್ನು ಸೃಷ್ಟಿಸಿದನು.

ವೈಶ್ಯಸ್ತು ಧನಧಾನ್ಯೇನ ತ್ರೀನ್ವರ್ಣಾನ್ಬಿಭೃಯಾದಿಮಾನ್ ।
ಶೂದ್ರೋ ಹ್ಯೇತಾನ್ಪರಿಚರೇದಿತಿ ಬ್ರಹ್ಮಾನುಶಾಸನಮ್ ॥೮॥

ವೈಶ್ಯನು ಧನ-ಧಾನ್ಯಗಳ ಮೂಲಕವಾಗಿ ಈ ಮೂರು ವರ್ಣಗಳವ ರನ್ನೂ ಪೋಷಣೆಮಾಡಬೇಕೆಂಬುದೂ ಮತ್ತು ಶೂದ್ರನು ಈ ಮೂರು ವರ್ಣಗಳವರ ಸೇವೆಯನ್ನೂ ಮಾಡಬೇಕೆಂಬುದೂ ಬ್ರಹ್ಮನ ಶಾಸನ ವಾಗಿದೆ.”

ಇಲಾಪುತ್ರನು ಪುನಃ ಪ್ರಶ್ನಿಸುತ್ತಾನೆ :

ದ್ವಿಜಸ್ಯ ಕ್ಷತ್ರಬನ್ಧೋರ್ವಾ ಕಸ್ಯೇಯಂ ಪೃಥಿವೀ ಭವೇತ್ ।
ಧರ್ಮತಃ ಸಹ ವಿತ್ತೇನ ಸಮ್ಯಗ್ವಾಯೋ ಪ್ರಚಕ್ಷ್ವ ಮೇ ॥೯॥

“ವಾಯುದೇವ! ಧನ-ಧಾನ್ಯಸಹಿತವಾದ ಈ ಭೂಮಂಡಲವು ಧರ್ಮದ ದೃಷ್ಟಿಯಲ್ಲಿ ಯಾರದ್ದಾಗಿದೆ? ಇದು ಬ್ರಾಹ್ಮಣನದಾಗಿರುವುದೇ ಅಥವಾ ಕ್ಷತ್ರಿಯನದಾಗಿರುವುದೇ?–ಈ ವಿಷಯವನ್ನು ನನಗೆ ಸ್ಪಷ್ಟವಾಗಿ ಹೇಳು.”

ವಾಯುವು ಹೇಳುತ್ತಾನೆ :

ವಿಪ್ರಸ್ಯ ಸರ್ವಮೇವೈತದ್ಯತ್ಕಿಂಚಿಜ್ಜಗತೀಗತಮ್ ।
ಜ್ಯೇಷ್ಠೇನಾಭಿಜನೇನೇಹ ತದ್ಧರ್ಮಕುಶಲಾ ವಿದುಃ ॥೧೦॥

“ಉತ್ತಮವಾದ ಬ್ರಹ್ಮನ ಮುಖಸ್ಥಾನದಲ್ಲಿ ಹುಟ್ಟಿರುವುದರಿಂದಲೂ ಮತ್ತು ಎಲ್ಲರಿಗೂ ಮೊದಲು ಹುಟ್ಟಿರುವುದರಿಂದಲೂ (ಜ್ಯೇಷ್ಠನಾಗಿರುವುದ ರಿಂದಲೂ) ಈ ಭೂಮಂಡಲದಲ್ಲಿರುವ ಸಕಲವೂ ಬ್ರಾಹ್ಮಣನದೇ ಎಂದು ಧರ್ಮಜ್ಞರು ತಿಳಿದಿರುತ್ತಾರೆ.

ಸ್ವಮೇವ ಬ್ರಾಹ್ಮಣೋ ಭುಙ್ಕ್ತೇ ಸ್ವಂ ವಸ್ತೇ ಸ್ವಂ ದದಾತಿ ಚ ।
ಗುರುರ್ಹಿ ಸರ್ವವರ್ಣಾನಾಂ ಜ್ಯೇಷ್ಠಃ ಶ್ರೇಷ್ಠಶ್ಚ ವೈ ದ್ವಿಜಃ ॥೧೧॥

ಬ್ರಾಹ್ಮಣನದೇ ಈ ಭೂಮಂಡಲವಾಗಿರುವುದರಿಂದ ಅವನು ಯಾವುದನ್ನು ಊಟಮಾಡುತ್ತಾನೆಯೋ ಅದು ಅವನದೇ ಆಗಿದೆ ; ಯಾವು ದನ್ನು ಹೊದೆಯುತ್ತಾನೆಯೋ ಅದೂ ಅವನದೇ ಆಗಿದೆ. ಯಾವುದನ್ನು ಅವನು ಕೊಡುತ್ತಾನೆಯೋ ಅದೂ ಅವನದೇ ಆಗಿರುತ್ತದೆ. ಈ ಕಾರಣದಿಂದಲೇ ಬ್ರಾಹ್ಮಣನು ಎಲ್ಲ ವರ್ಣಗಳವರಿಗೂ ಗುರುವೂ, ಜ್ಯೇಷ್ಠನೂ, ಶ್ರೇಷ್ಠನೂ ಆಗಿರುತ್ತಾನೆ.

ಪತ್ಯಭಾವೇ ಯಥೈವ ಸ್ತ್ರೀ ದೇವರಂ ಕುರುತೇ ಪತಿಮ್ ।
ಆನನ್ತರ್ಯಾತ್ತಥಾ ಕ್ಷತ್ರಂ ಪೃಥಿವೀ ಕುರುತೇ ಪತಿಮ್ ।
ಏಷ ತೇ ಪ್ರಥಮಃ ಕಲ್ಪ ಆಪದ್ಯನ್ಯೋ ಭವೇತ್ತತಃ ॥೧೨॥

ಸ್ತ್ರೀಯು ಪತಿಯ ಅಭಾವವುಂಟಾದಾಗ (ವಾಗ್ದಾನವಾದ ಬಳಿಕ ವಿವಾಹಾತ್ಪೂರ್ವದಲ್ಲಿ ನಿಶ್ಚಿತಪತಿಯು ಮರಣಹೊಂದಿದರೆ) ಯಾವ ರೀತಿ ಯಲ್ಲಿ ಪತಿಯ ತಮ್ಮನನ್ನು (ದೇವರನನ್ನು) ಪತಿಯನ್ನಾಗಿ ಮಾಡಿಕೊಳ್ಳು

ವಳೋ–ಅದೇ ರೀತಿಯಲ್ಲಿ ಬ್ರಾಹ್ಮಣರು ಭೂದೇವಿಯನ್ನು ಬಿಟ್ಟನಂತರ ಅವಳು ಕ್ಷತ್ರಿಯನನ್ನೇ ತನ್ನ ಪತಿಯನ್ನಾಗಿ ಮಾಡಿಕೊಂಡಳು. ಪುರೂರವ! ಮುಖ್ಯಕಲ್ಪವೆಂದು ಇದನ್ನು ನಿನಗೆ ಹೇಳುತ್ತಿದ್ದೇನೆ. ಆಪತ್ಕಾಲದಲ್ಲಿ ಇದಕ್ಕಿಂತಲೂ ಬೇರೆಯದಾದ ಮತ್ತೊಂದು ನಿಯಮವೂ ಬರಬಹುದು. (ಇಂದು ಕ್ಷತ್ರಿಯರು ರಾಜ್ಯವಾಳುತ್ತಿದ್ದರೆ ಮುಂದೆ ಇತರ ವರ್ಣಗಳೂ ರಾಜ್ಯವಾಳಬಹುದು.)

ಯದಿ ಸ್ವರ್ಗಂ ಪರಂ ಸ್ಥಾನಂ ಸ್ವಧರ್ಮೇ ಪರಿಮಾರ್ಗಸಿ ।
ಯತ್ಕಿಂಚಿಜ್ಜಯಸೇ ಭೂಮಿಂ ಬ್ರಾಹ್ಮಣಾಯ ನಿವೇದಯ ॥೧೩॥

ಶ್ರುತವೃತ್ತೋಪಪನ್ನಾಯ ಧರ್ಮಜ್ಞಾಯ ತಪಸ್ವಿನೇ ।
ಸ್ವಧರ್ಮಪರಿತೃಪ್ತಾಯ ಯೋ ನ ವಿತ್ತಪರೋ ಭವೇತ್ ॥೧೪॥

ನೀನೇನಾದರೂ ಸ್ವಧರ್ಮಪಾಲನಾಫಲರೂಪವಾದ ಶ್ರೇಷ್ಠಸ್ಥಾನವನ್ನು ಸ್ವರ್ಗದಲ್ಲಿ ಅಪೇಕ್ಷಿಸುವುದಾದರೆ–ನೀನು ಜಯಿಸಿರುವ ಯತ್ಕಿಂಚಿದ್ಭೂಮಿಯನ್ನು ವಿದ್ಯಾ-ವಿನಯಸಂಪನ್ನನಾದ, ಧರ್ಮಜ್ಞನಾದ, ತಪಸ್ವಿಯಾದ, ಸ್ವಧರ್ಮಾನುಷ್ಠಾನದಲ್ಲಿಯೇ ತೃಪ್ತಿಯನ್ನು ಹೊಂದಿರುವ, ವಿತ್ತಾಪೇಕ್ಷಿಯಲ್ಲದ ಬ್ರಾಹ್ಮಣನಿಗೆ ಸಮರ್ಪಿಸು.

ಯೋ ರಾಜಾನಂ ನಯೇದ್ಬುದ್ಧ್ಯಾ ಸರ್ವತಃ ಪರಿಪೂರ್ಣಯಾ ।
ಬ್ರಾಹ್ಮಣೋ ಹಿ ಕುಲೇ ಜಾತಃ ಕೃತಪ್ರಜ್ಞೋ ವಿನೀತವಾನ್ ॥೧೫॥

ಶ್ರೇಯೋ ನಯತಿ ರಾಜಾನಂ ಬ್ರುವಂಶ್ಚಿತ್ರಾಂ ಸರಸ್ವತೀಮ್ ।
ರಾಜಾ ಚರತಿ ಯದ್ಧರ್ಮಂ ಬ್ರಾಹ್ಮಣೇನ ನಿದರ್ಶಿತಮ್ ॥೧೬॥

ಸತ್ಕುಲಪ್ರಸೂತನಾದ, ಪ್ರಾಜ್ಞನಾದ, ವಿನೀತನಾದ ಬ್ರಾಹ್ಮಣನು ತನ್ನ ಪರಿಪೂರ್ಣವಾದ ಬುದ್ಧಿಯಿಂದ ರಾಜನನ್ನು ಸರ್ವಪ್ರಕಾರದಿಂದಲೂ ಸನ್ಮಾರ್ಗಪ್ರವೃತ್ತನನ್ನಾಗಿ ಮಾಡುತ್ತಾನೆ. ಚಿತ್ರತರವಾದ ಮಾತುಗಳ ಮೂಲಕವಾಗಿ ರಾಜನಿಗೆ ಬುದ್ಧಿಯನ್ನು ಹೇಳುತ್ತಾ ಅವನನ್ನು ಶ್ರೇಯಸ್ಸಿನ ಕಡೆಗೆ ಒಯ್ಯುತ್ತಾನೆ. ಈ ಕಾರಣದಿಂದಲೇ ಬ್ರಾಹ್ಮಣನು ನಿರ್ದೇಶಿಸಿದ ಧರ್ಮವನ್ನು ರಾಜನು ಆಚರಣೆಗೆ ತರುತ್ತಾನೆ.

ಶುಶ್ರೂಷುರನಹಂವಾದೀ ಕ್ಷತ್ರಧರ್ಮವ್ರತೇ ಸ್ಥಿತಃ ।
ತಾವತಾ ಸತ್ಕೃತಃ ಪ್ರಾಜ್ಞಶ್ಚಿರಂ ಯಶಸಿ ತಿಷ್ಠತಿ ।
ತಸ್ಯ ಧರ್ಮಸ್ಯ ಸರ್ವಸ್ಯ ಭಾಗೀ ರಾಜಪುರೋಹಿತಃ ॥೧೭॥

ಕ್ಷತ್ರಧರ್ಮದಲ್ಲಿಯೇ ನಿರತನಾಗಿರುವ, ಅಹಂಕಾರಶೂನ್ಯನಾದ, ಪುರೋಹಿತನ ಮಾತುಗಳನ್ನು ಕೇಳಲಿಚ್ಛೆಯುಳ್ಳ, ಅದರಿಂದಲೇ (ಕ್ಷತ್ರ ಧರ್ಮಾನುಷ್ಠಾನದಿಂದಲೇ) ತಾನು ಸಮ್ಮಾನಿತನಾದೆನೆಂದು ಭಾವಿಸುವ ಪ್ರಾಜ್ಞನಾದ ರಾಜನು ಚಿರಕಾಲದವರೆಗೂ ಯಶೋವಂತನಾಗಿ ಬಾಳುತ್ತಾನೆ. ರಾಜನು ಮಾಡುವ ಎಲ್ಲ ಧರ್ಮಗಳಿಗೂ ಪುರೋಹಿತನೂ ಭಾಗಿ ಯಾಗುತ್ತಾನೆ.

ಹೀಗೆ ಅಂತಹ ರಾಜನ ಆಶ್ರಯದಲ್ಲಿರುವ ಎಲ್ಲ ಪ್ರಜೆಗಳೂ ಸದಾಚಾರ ಪರಾಯಣರಾಗಿ, ತಮ್ಮ-ತಮ್ಮ ವರ್ಣಾಶ್ರಮಧರ್ಮಗಳಲ್ಲಿಯೇ ನಿರತರಾಗಿ, ಯಾವ ಕಡೆಯಿಂದಲೂ, ಭಯವಿಲ್ಲದವರಾಗಿ ಜೀವನನಿರ್ವಹಣೆಯನ್ನು ಮಾಡುತ್ತಿರುತ್ತಾರೆ.

ರಾಷ್ಟ್ರೇ ಚರನ್ತಿ ಯಂ ಧರ್ಮಂ ರಾಜ್ಞಾ ಸಾಧ್ವಭಿರಕ್ಷಿತಾಃ ।
ಚತುರ್ಥಂ ತಸ್ಯ ಧರ್ಮಸ್ಯ ರಾಜಾ ಭಾಗಂ ತು ವಿನ್ದತಿ ॥೧೯॥

ರಾಜನಿಂದ ಚೆನ್ನಾಗಿ ರಕ್ಷಿಸಲ್ಪಡುವ ಪ್ರಜೆಗಳು ತಮ್ಮ ರಾಷ್ಟ್ರದಲ್ಲಿ ಯಾವ ಧರ್ಮಾಚರಣೆಯನ್ನು ಮಾಡುವರೋ–ಆ ಧರ್ಮಾಚರಣೆಯ ನಾಲ್ಕನೆಯ ಒಂದು ಭಾಗ ಪುಣ್ಯವನ್ನು ರಾಜನು ಪಡೆದುಕೊಳ್ಳುತ್ತಾನೆ.

ದೇವತೆಗಳು, ಮನುಷ್ಯರು, ಪಿತೃದೇವತೆಗಳು, ಗಂಧರ್ವರು, ಉರಗರು, ರಾಕ್ಷಸರು–ಇವರೆಲ್ಲರೂ ಧರ್ಮಾತ್ಮನಾದ ರಾಜನ ರಾಜ್ಯದಲ್ಲಿ ಕಾಲ-ಕಾಲಕ್ಕೆ ನಡೆಯುವ ಯಜ್ಞವನ್ನೇ ಅವಲಂಬಿಸಿ ಜೀವನನಿರ್ವಹಣೆ ಯನ್ನು ಮಾಡುತ್ತಾರೆ. ಆದರೆ ಧರ್ಮಾತ್ಮನಾದ ರಾಜನೇ ಇಲ್ಲದಿರುವ ರಾಷ್ಟ್ರದಲ್ಲಿ ಯಜ್ಞ-ಯಾಗಾದಿಗಳೇ ನಡೆಯುವುದಿಲ್ಲ.

ದೇವಾ ಮನುಷ್ಯಾಃ ಪಿತರೋ ಗನ್ಧರ್ವೋರಗರಾಕ್ಷಸಾಃ ।
ಯಜ್ಞಮೇವೋಪಜೀವನ್ತಿ ನಾಸ್ತಿ ಚೇಷ್ಟಮರಾಜಕೇ ॥೨೦॥

ಇತೋ ದತ್ತೇನ ಜೀವನ್ತಿ ದೇವತಾಃ ಪಿತರಸ್ತಥಾ ।
ರಾಜನ್ಯೇವಾಸ್ಯ ಧರ್ಮಸ್ಯ ಯೋಗಕ್ಷೇಮಃ ಪ್ರತಿಷ್ಠಿತಃ ॥೨೧॥

ದೇವತೆಗಳೂ ಮತ್ತು ಪಿತೃಗಳೂ ಈ ಲೋಕದಲ್ಲಿ ಮಾಡುವ ಯಜ್ಞ-ಶ್ರಾದ್ಧಾದಿಗಳಿಂದಲೇ ಜೀವನ ನಿರ್ವಹಣೆಯನ್ನು ಮಾಡುತ್ತಾರೆ. ಆದುದರಿಂದಲೇ ಯಜ್ಞ-ಶ್ರಾದ್ಧಧರ್ಮಗಳ ಯೋಗ-ಕ್ಷೇಮಗಳು (ಇವುಗಳ ಪ್ರವರ್ತನೆಯು) ಧರ್ಮಿಷ್ಠನಾದ ರಾಜನಲ್ಲಿಯೇ ಪ್ರತಿಷ್ಠಿತವಾಗಿದೆ.

ಛಾಯಾಯಾಮಪ್ಸು ವಾಯೌ ಚ ಸುಖಮುಷ್ಣೇಽಧಿಗಚ್ಛತಿ ।
ಅಗ್ನೌ ವಾಸಸಿ ಸೂರ್ಯೇ ಚ ಸುಖಂ ಶೀತೇಽಧಿಗಚ್ಛತಿ ॥೨೨॥

ಬೇಸಿಗೆಯಲ್ಲಿ ಮರದ ನೆರಳಿನಲ್ಲಿ ಕುಳಿತುಕೊಳ್ಳುವುದರಿಂದ, ನೀರಿನಲ್ಲಿ ಮುಳುಗುವುದರಿಂದ ಮತ್ತು ಗಾಳಿಯನ್ನು ಬೀಸಿಕೊಳ್ಳುವುದರಿಂದ ಸುಖವುಂಟಾಗುತ್ತದೆ. ಶೀತಕಾಲದಲ್ಲಿ ಬೆಂಕಿಯನ್ನು ಕಾಯಿಸಿಕೊಳ್ಳುವುದರಿಂದ, ಬಟ್ಟೆಯನ್ನು ಬೆಚ್ಚಗೆ ಹೊದ್ದುಕೊಳ್ಳುವುದರಿಂದ ಮತ್ತು ಬಿಸಿಲು ಕಾಯಿಸುವುದರಿಂದ ಸುಖವುಂಟಾಗುತ್ತದೆ. (ಆದರೆ ಧರ್ಮಿಷ್ಠನಾದ ರಾಜನಿಲ್ಲದ ದೇಶದಲ್ಲಿ ಯಾವುದರಿಂದಲೂ ಸುಖವುಂಟಾಗುವುದಿಲ್ಲ. ಯಾರಿಂದಲೂ ರಕ್ಷಣೆಯಿಲ್ಲವೆಂಬ ಭಯವೇ ಇದಕ್ಕೆ ಕಾರಣವಾಗಿರುತ್ತದೆ.)

ಶಬ್ದೇ ಸ್ಪರ್ಶೇ ರಸೇ ರೂಪೇ ಗನ್ಧೇ ಚ ರಮತೇ ಮನಃ ।
ತೇಷು ಭೋಗೇಷು ಸರ್ವೇಷು ನ ಭೀತೋ ಲಭತೇ ಸುಖಮ್ ॥೨೩॥

ಅಭಯಸ್ಯ ಹಿ ಯೋ ದಾತಾ ತಸ್ಯೈವ ಸುಮಹತ್ಫಲಮ್ ।
ನ ಹಿ ಪ್ರಾಣಸಮಂ ದಾನಂ ತ್ರಿಷು ಲೋಕೇಷು ವಿದ್ಯತೇ ॥೨೪॥

ಮನುಷ್ಯನ ಮನಸ್ಸು ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳಲ್ಲಿ ಆಸಕ್ತವಾಗಿರುತ್ತದೆ. ಆದರೆ ಭೀತನಾದವನು ಎಲ್ಲ ವಿಧವಾದ ಭೋಗಗಳಿಂದಲೂ ಸುಖವನ್ನು ಹೊಂದುವುದಿಲ್ಲ. ಅಂತಹ ಭಯಗ್ರಸ್ತನಾದವನಿಗೆ ಯಾರು ಅಭಯವನ್ನು ನೀಡುತ್ತಾರೆಯೋ–ಅಂತಹ ಅಭಯದಾತರಿಗೆ ಮಹಾಫಲವು ಲಭಿಸುತ್ತದೆ. ಪ್ರಾಣದಾನಕ್ಕೆ ಸಮಾನವಾದ ದಾನವು ಮೂರು ಲೋಕಗಳಲ್ಲಿಯೂ ಬೇರಾವುದೂ ಇಲ್ಲ. (ರಾಜನೇ ಅಭಯದಾಯಕನು ಮತ್ತು ಪ್ರಾಣದಾಯಕನು. ಆದುದರಿಂದಲೇ ಅವನ ಹಿರಿಮೆ.)

ಇನ್ದ್ರೋ ರಾಜಾ ಯಮೋ ರಾಜಾ ಧರ್ಮೋ ರಾಜಾ ತಥೈವ ಚ ।
ರಾಜಾ ಬಿಭರ್ತಿ ರೂಪಾಣಿ ರಾಜ್ಞಾ ಸರ್ವಮಿದಂ ಧೃತಮ್ ॥೨೫॥

ರಾಜನೇ ಇಂದ್ರನು ; ರಾಜನೇ ಯಮನು ; ರಾಜನೇ ಧರ್ಮನು. ಇದು ಹೀಗೆಯೇ ಸರಿ. ರಾಜನು ನಾನಾವಿಧವಾದ ರೂಪಗಳನ್ನು ಧರಿಸುತ್ತಾನೆ. ರಾಜನಿಂದಲೇ ಈ ಅಖಂಡ ಭೂಮಂಡಲವೂ ಧರಿಸಲ್ಪಟ್ಟಿದೆ.”

ಌ೨ನೆಯ ಅಧ್ಯಾಯವು ಮುಗಿಯಿತು.

ಌ೩ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ವಿದ್ವಾಂಸನಾದ, ಸದಾಚಾರನಿರತನಾದ ಪುರೋಹಿತನ ಆವಶ್ಯಕತೆ : ಬ್ರಾಹ್ಮಣ-ಕ್ಷತ್ರಿಯರು ಜೊತೆಗೂಡಿ ಇರುವುದರಿಂದ ಪ್ರಾಪ್ತವಾಗುವ ಲಾಭ ; ಈ ವಿಷಯದಲ್ಲಿ ಪುರೂರವನ ಉಪಾಖ್ಯಾನ

ಜನಮೇಜಯ! ಭೀಷ್ಮನು ಮುಂದುವರಿದು ಹೇಳುತ್ತಾನೆ :

“ಯುಧಿಷ್ಠಿರ! ಆದುದರಿಂದ ರಾಜನಾದವನು–ಧರ್ಮಾರ್ಥ ಗಳೆರಡರ ಗತಿಯೂ ಅತ್ಯಂತಗಹನವಾದುದೆಂದು ತಿಳಿದು, ಬಹುಶ್ರುತನಾದ, ವಿದ್ವಾಂಸನಾದ ಬ್ರಾಹ್ಮಣನನ್ನು ಪುರೋಹಿತನನ್ನಾಗಿ ಮಾಡಿಕೊಳ್ಳಬೇಕು. ಯಾವ ರಾಷ್ಟ್ರದಲ್ಲಿ ಧರ್ಮಾತ್ಮನಾದ. ಮಂತ್ರಾಲೋಚನೆಯಲ್ಲಿ ನಿಷ್ಣಾತನಾದ ಬ್ರಾಹ್ಮಣನು ಪುರೋಹಿತನಾಗಿರುವನೋ ಮತ್ತು ರಾಜನೂ ಧರ್ಮಾತ್ಮನಾಗಿಯೂ ಮತ್ತು ಮಂತ್ರವಿದನಾಗಿಯೂ ಇರುವನೋ–ಆ ದೇಶದ ಜನರು ನಿತ್ಯಕುಶಲಿಗಳಾಗಿರುತ್ತಾರೆ.

ಉಭೌ ಪ್ರಜಾ ವರ್ಧಯತೋ ದೇವಾನ್ಸರ್ವಾನ್ಸುತಾನ್ಪಿತೄನ್ ।
ಭವೇಯಾತಾಂ ಸ್ಥಿತೌ ಧರ್ಮೇ ಶ್ರದ್ಧೇಯೌ ಸುತಪಸ್ವಿನೌ ॥೩॥

ಪರಸ್ಪರಸ್ಯ ಸುಹೃದೌ ವಿಹಿತೌ ಸಮಚೇತಸೌ ।
ಬ್ರಹ್ಮಕ್ಷತ್ರಸ್ಯ ಸಮ್ಮಾನಾತ್ಪ್ರಜಾ ಸುಖಮವಾಪ್ನುಯಾತ್ ॥೪॥

ರಾಜ ಮತ್ತು ಪುರೋಹಿತರಿಬ್ಬರೂ ಧರ್ಮನಿಷ್ಠರಾಗಿದ್ದುದಾದರೆ,

ಪ್ರಜೆಗಳ ಯೋಗ-ಕ್ಷೇಮಗಳಲ್ಲಿ ಶ್ರದ್ಧಾವಂತರಾಗಿದ್ದುದಾದರೆ, ತಪಸ್ವಿಗಳಾಗಿದ್ದುದಾದರೆ, ಪರಸ್ಪರವಾಗಿ ಸೌಹಾರ್ದದಿಂದಿದ್ದುದ್ದಾದರೆ, ಸಮಾನ ಮನಸ್ಕರಾಗಿದ್ದುದಾದರೆ–ಇಬ್ಬರೂ ಸೇರಿ ದೇಶವನ್ನೂ ಪ್ರಜೆಗಳನ್ನೂ ಅಭಿವೃದ್ಧಿಗೊಳಿಸುತ್ತಾರೆ. ಯಜ್ಞ-ಶ್ರಾದ್ಧಾದಿ ಕರ್ಮಗಳಿಂದ ದೇವತೆಗಳಿಗೂ ಪಿತೃಗಳಿಗೂ ತೃಪ್ತಿಯನ್ನುಂಟುಮಾಡುತ್ತಾರೆ. ಮಕ್ಕಳ ಮತ್ತು ಪ್ರಜೆಗಳ ಅಭ್ಯುದಯ-ನಿಃಶ್ರೇಯಸಗಳಿಗೆ ಕಾರಣರಾಗುತ್ತಾರೆ. ಅಂತಹ ಬ್ರಾಹ್ಮಣನನ್ನು (ಪುರೋಹಿತನನ್ನು) ಮತ್ತು ಕ್ಷತ್ರಿಯನನ್ನು (ರಾಜನನ್ನು) ಸಮ್ಮಾನಿಸುವುದರಿಂದ ಪ್ರಜೆಗಳು ಸೌಖ್ಯವನ್ನು ಹೊಂದುತ್ತಾರೆ.)

ವಿಮಾನನಾತ್ತಯೋರೇವ ಪ್ರಜಾ ನಶ್ಯೇಯುರೇವ ಹಿ ।
ಬ್ರಹ್ಮಕ್ಷತ್ರಂ ಹಿ ಸರ್ವೇಷಾಂ ವರ್ಣಾನಾಂ ಮೂಲಮುಚ್ಯತೇ ॥೫॥

ಧರ್ಮಿಷ್ಠರಾದ ರಾಜನನ್ನೂ ಮತ್ತು ಪುರೋಹಿತರನ್ನೂ ಅನಾದರಣೆ ಮಾಡುವುದರಿಂದ ಪ್ರಜೆಗಳೇ ವಿನಾಶಹೊಂದುತ್ತಾರೆ. ಎಲ್ಲ ವರ್ಣಗಳಿಗೂ ಬ್ರಹ್ಮ-ಕ್ಷತ್ರಗಳೇ ಮೂಲವೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ.

ಈ ವಿಷಯದಲ್ಲಿ ಬಹಳ ಹಿಂದೆ ನಡೆದ ಇತಿಹಾಸರೂಪವಾದ ಐಲ-ಕಶ್ಯಪರ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಯುಧಿಷ್ಠಿರ! ನೀನದನ್ನು ಕೇಳು.

ಹಿಂದೊಮ್ಮೆ ಪುರೂರವನು ಕಶ್ಯಪರನ್ನು ಸಂಧಿಸಿ ಪ್ರಶ್ನಿಸುತ್ತಾನೆ :

ಯದಾ ಹಿ ಬ್ರಹ್ಮ ಪ್ರಜಹಾತಿ ಕ್ಷತ್ರಂ
ಕ್ಷತ್ರಂ ಯದಾ ವಾ ಪ್ರಜಹಾತಿ ಬ್ರಹ್ಮ ।
ಅನ್ವಗ್ಬಲಂ ಕತಮೇಽಸ್ಮಿನ್ಭಜನ್ತೇ
ತಥಾ ವರ್ಣಾಃ ಕತಮೇಽಸ್ಮಿನ್ಧ್ರಿಯನ್ತೇ ॥೭॥

"ಮಹರ್ಷಿಗಳೇ! ಬ್ರಾಹ್ಮಣ-ಕ್ಷತ್ರಿಯರಿಬ್ಬರೂ ಸೇರಿ ರಾಜ್ಯಭಾರ ಮಾಡಿದರೆ ಪ್ರಜೆಗಳೂ ಅಭಿವೃದ್ಧಿಯನ್ನು ಹೊಂದುತ್ತಾರೆ ಮತ್ತು ರಾಷ್ಟ್ರವೂ ಅಭಿವೃದ್ಧಿಯನ್ನು ಹೊಂದುತ್ತದೆ. ರಾಜನೂ ಮತ್ತು ಪುರೋಹಿತರೂ ನಿತ್ಯವಾದ ಶ್ರೇಯಸ್ಸನ್ನು ಪಡೆದುಕೊಳ್ಳುತ್ತಾರೆ. ಆದರೆ ಯಾವು

ದಾದರೂ ಕಾರಣದಿಂದ ಬ್ರಾಹ್ಮಣನು ಕ್ಷತ್ರಿಯನನ್ನು ಪರಿತ್ಯಜಿಸಿದರೆ ಅಥವಾ ಕ್ಷತ್ರಿಯನು ಬ್ರಾಹ್ಮಣನನ್ನು ಪರಿತ್ಯಜಿಸಿದರೆ–ಉಳಿದ ವರ್ಣಗಳವರು ಈ



ಇಬ್ಬರಲ್ಲಿ ಯಾರನ್ನು ಆಶ್ರಯಿಸುತ್ತಾರೆ? ಈ ಇಬ್ಬರಲ್ಲಿ ಯಾರು ಎಲ್ಲರಿಗೂ ಆಶ್ರಯವನ್ನು ನೀಡಬಲ್ಲರು?"

ಕಶ್ಯಪರು ಹೇಳುತ್ತಾರೆ :

ವಿದ್ಧಂ ರಾಷ್ಟ್ರಂ ಕ್ಷತ್ರಿಯಸ್ಯ ಭವತಿ
ಬ್ರಹ್ಮ ಕ್ಷತ್ರಂ ಯತ್ರ ವಿರುದ್ಧ್ಯತೀಹ ।
ಅನ್ವಗ್ಬಲಂ ದಸ್ಯವಸ್ತದ್ಭಜನ್ತೇ
ತಥಾ ವರ್ಣಂ ತತ್ರ ವಿದನ್ತಿ ಸನ್ತಃ ॥೮॥

"ಮಹಾರಾಜ! ಸತ್ಪುರುಷರು ಈ ವಿಷಯದಲ್ಲಿ ಭಾವಿಸಿಕೊಂಡಿರುವುದೇನೆಂದರೆ : ಯಾವ ರಾಜ್ಯದಲ್ಲಿ ಬ್ರಾಹ್ಮಣನಿಗೂ ಮತ್ತು ಕ್ಷತ್ರಿಯನಿಗೂ ವಿರೋಧವುಂಟಾಗುತ್ತದೆಯೋ-ಆಗ ಕ್ಷತ್ರಿಯನ ಆ ರಾಜ್ಯವೇ ಒಡೆದು ಹೋಗುತ್ತದೆ. ಕಳ್ಳ-ಕಾಕರು ಸೈನ್ಯಸಮೇತರಾಗಿ ಬಂದು ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ. ಅಂತೆಯೇ ಎಲ್ಲ ವರ್ಣಗಳವರನ್ನೂ ತಮ್ಮ ಅಡಿಯಾಳುಗಳನ್ನಾಗಿ ಮಾಡಿಕೊಳ್ಳುತ್ತಾರೆ.

ನೈಷಾಂ ಬ್ರಹ್ಮ ಚ ವರ್ಧತೇ ನೋತ ಪುತ್ರಾ
ನ ಗರ್ಗರೋ ಮಥ್ಯತೇ ನೋ ಯಜನ್ತೇ ।
ನೈಷಾಂ ಪುತ್ರಾ ವೇದಮಧೀಯತೇ ಚ
ಯದಾ ಬ್ರಹ್ಮ ಕ್ಷತ್ರಿಯಾಃ ಸಂತ್ಯಜನ್ತಿ ॥೯॥

ಯಾವಾಗ ಕ್ಷತ್ರಿಯರು ಬ್ರಾಹ್ಮಣರನ್ನು ತ್ಯಾಗಮಾಡುತ್ತಾರೆಯೋ ಆಗ ಕ್ಷತ್ರಿಯರಲ್ಲಿ ವೇದಾಧ್ಯಯನವು ವರ್ಧಿಸುವುದಿಲ್ಲ. (ವೇದವನ್ನು ಹೇಳಿ ಕೊಡುವ ಬ್ರಾಹ್ಮಣರನ್ನು ದೂರಮಾಡಿದನಂತರ ವೇದಾಧ್ಯಯನವು ಹೇಗೆ ಮುಂದುವರಿದೀತು?) ಅಧ್ಯಯನವು ಲುಪ್ತವಾದನಂತರ ರಾಜಪುತ್ರರೂ ಅಭಿವೃದ್ಧಿಯನ್ನು ಹೊಂದುವುದಿಲ್ಲ. ಮೊಸರು ಕಡೆಯುವ ಪಾತ್ರೆಯಲ್ಲಿ ಕಡೆಗೋಲನ್ನಿಟ್ಟು ಕಡೆಯುವುದೂ ನಿಂತುಹೋಗುತ್ತದೆ. (ಗೋಸಂಪತ್ತೇ ಕ್ಷೀಣಿಸಿಹೋಗುತ್ತದೆ.) ಯಜ್ಞ-ಯಾಗಾದಿಗಳೂ ನಡೆಯುವುದಿಲ್ಲ. ಕ್ಷತ್ರಿಯರನ್ನಗಲಿದ ಬ್ರಾಹ್ಮಣರ ಮಕ್ಕಳೂ (ಸರಿಯಾದ ರಕ್ಷಣೆಯಿಲ್ಲದಿರುವುದರಿಂದ) ವೇದಾಧ್ಯಯನವನ್ನು ಮಾಡುವುದಿಲ್ಲ.

ನೈಷಾಮರ್ಥೋ ವರ್ಧತೇ ಜಾತು ಗೇಹೇ
ನಾಧೀಯತೇ ಸುಪ್ರಜಾ ನೋ ಯಜನ್ತೇ ।
ಅಪಧ್ವಸ್ತಾ ದಸ್ಯುಭೂತಾ ಭವನ್ತಿ
ಯೇ ಬ್ರಾಹ್ಮಣಾನ್ ಕ್ಷತ್ರಿಯಾಃ ಸಂತ್ಯಜನ್ತಿ ॥೧೦॥

ಯಾವ ಕ್ಷತ್ರಿಯರು ಬ್ರಾಹ್ಮಣರನ್ನು ಪರಿತ್ಯಜಿಸುವರೋ–ಅವರ ಮನೆಯಲ್ಲಿ (ಮಂಗಳಕಾರ್ಯಗಳು ನಿಂತುಹೋಗುವುದರಿಂದ) ಧನವು ವೃದ್ಧಿಯಾಗುವುದಿಲ್ಲ. ಅವರ ಮಕ್ಕಳು ವೇದಶಾಸ್ತ್ರಗಳನ್ನು ಅಧ್ಯಯನಮಾಡುವು

ದಿಲ್ಲ. ಅದರ ಫಲವಾಗಿ ಯಜ್ಞವನ್ನೂ ಮಾಡುವುದಿಲ್ಲ. ಅಂತಹ ಕ್ಷತ್ರಿಯರು ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟವರಾಗಿ ಕಳ್ಳ-ಕಾಕರ ರೀತಿಯಲ್ಲಿ (ದಸ್ಯಗಳಂತೆ) ಕಳ್ಳತನ-ದರೋಡೆಗಳನ್ನು ಮಾಡಿಕೊಂಡಿರುತ್ತಾರೆ.

ಏತೌ ಹಿ ನಿತ್ಯಂ ಸಂಯುಕ್ತಾವಿತರೇತರಧಾರಣೇ ।
ಕ್ಷತ್ರಂ ವೈ ಬ್ರಹ್ಮಣೋ ಯೋನಿರ್ಯೋನಿಃ ಕ್ಷತ್ರಸ್ಯ ವೈ ದ್ವಿಜಾಃ ॥೧೧॥

ಬ್ರಾಹ್ಮಣ-ಕ್ಷತ್ರಿಯರು ಯಾವಾಗಲೂ ಸಮ್ಮಿಳಿತರಾಗಿಯೇ ಇರಬೇಕು. ಹಾಗೆ ಕೂಡಿಕೊಂಡಿದ್ದಾಗಲೇ ಒಬ್ಬರು ಮತ್ತೊಬ್ಬರನ್ನು ರಕ್ಷಿಸಲು ಸಮರ್ಥರಾಗುತ್ತಾರೆ. ಕ್ಷತ್ರಿಯನ ವೃದ್ಧಿಗೆ ಬ್ರಾಹ್ಮಣನು ಕಾರಣನಾಗುತ್ತಾನೆ. ಬ್ರಾಹ್ಮಣನ ವೃದ್ಧಿಗೆ ಕ್ಷತ್ರಿಯನು ಕಾರಣನಾಗುತ್ತಾನೆ.

ಉಭಾವೇತೌ ನಿತ್ಯಮಭಿಪ್ರಪನ್ನೌ
ಸಮ್ಪ್ರಾಪತುರ್ಮಹತೀಂ ಸಮ್ಪ್ರತಿಷ್ಠಾಮ್ ।
ತಯೋಃ ಸಂಧಿರ್ಭಿದ್ಯತೇ ಚೇತ್ಪುರಾಣ-
ಸ್ತತಃ ಸರ್ವಂ ಭವತಿ ಹಿ ಸಮ್ಪ್ರಮೂಢಮ್ ॥೧೨॥

ಈ ಎರಡು ವರ್ಣಗಳವರೂ ಯಾವಾಗ ಒಬ್ಬರಿಗೆ ಮತ್ತೊಬ್ಬರು ಆಶ್ರಯಭೂತರಾಗಿ ಇರುತ್ತಾರೆಯೋ, ಆಗ ಬ್ರಹ್ಮ-ಕ್ಷತ್ರರಿಬ್ಬರೂ ಸುಪ್ರತಿಷ್ಠಿತರಾಗುತ್ತಾರೆ. ಪ್ರಾಚೀನಕಾಲದಿಂದ ಬಂದಿರುವ ಬ್ರಹ್ಮ-ಕ್ಷತ್ರರ ಮೈತ್ರಿಯು ಒಡೆದುಹೋಯಿತೆಂದರೆ–ಇಬ್ಬರೂ ವಿನಾಶಹೊಂದುವುದು ಮಾತ್ರವಲ್ಲ ; ಪ್ರಪಂಚವೇ ಕಿಂಕರ್ತವ್ಯತಾಮೂಢವಾಗುತ್ತದೆ. (ಮೋಹವಶವಾಗುತ್ತದೆ.)

ನಾತ್ರ ಪಾರಂ ಲಭತೇ ಪಾರಗಾಮೀ
ಮಹಾಗಾಧೇ ನೌರಿವ ಸಮ್ಪ್ರಪನ್ನಾ ।
ಚಾತುರ್ವರ್ಣ್ಯಂ ಭವತಿ ಹಿ ಸಮ್ಪ್ರಮೂಢಂ
ಪ್ರಜಾಸ್ತತಃ ಕ್ಷಯಸಂಸ್ಥಾ ಭವನ್ತಿ ॥೧೩॥

ಅಗಾಧವಾದ ಸಮುದ್ರಮಧ್ಯದಲ್ಲಿ ಒಡೆದುಹೋದ ನೌಕೆಯಂತೆ–ಕಷ್ಟಗಳ ಕೊನೆಯನ್ನು ಮುಟ್ಟಬೇಕೆಂದಿರುವವನು ಕೊನೆಯನ್ನು ಮುಟ್ಟಲಾರನು. ಈ ಪ್ರಪಂಚದಲ್ಲಿ ಬ್ರಹ್ಮ-ಕ್ಷತ್ರಿಯರ ಮೈತ್ರಿಯು ಒಡೆದುಹೋದ

ನಂತರ ಜೀವನಯಾತ್ರೆಯನ್ನು ಸುಗಮವಾಗಿ ನಡೆಸಬೇಕೆನ್ನುವ ಮಾನವನಿಗೆ ಆಸರೆಯೇ ಇಲ್ಲದಾಗುತ್ತದೆ. ಪ್ರಪಂಚವೇ ಅಸ್ತವ್ಯಸ್ತವಾಗುತ್ತದೆ. ನಾಲ್ಕು ವರ್ಣಗಳವರೂ ಮೋಹವಶರಾಗುತ್ತಾರೆ. ಪ್ರಜೆಗಳು ಬದುಕಿದ್ದರೂ ಮೃತಪ್ರಾಯರಾಗುತ್ತಾರೆ.

ಬ್ರಹ್ಮವೃಕ್ಷೋ ರಕ್ಷ್ಯಮಾಣೋ ಮಧು ಹೇಮ ಚ ವರ್ಷತಿ ।
ಅರಕ್ಷ್ಯಮಾಣಃ ಸತತಮಶ್ರು ಪಾಪಂ ಚ ವರ್ಷತಿ ॥೧೪॥

ಚೆನ್ನಾಗಿ ರಕ್ಷಿಸಲ್ಪಡುವ ಬ್ರಹ್ಮವೆಂಬ ವೃಕ್ಷವು ಸುಮಧುರಸುಖವನ್ನೂ (ಸುಖವೆಂಬ ಮಧುವನ್ನೂ)–ಸುವರ್ಣವನ್ನೂ ಸುರಿಸುತ್ತದೆ. ರಕ್ಷಿಸಲ್ಪಡದಿರುವ ಬ್ರಹ್ಮವೃಕ್ಷವು ದುಃಖದ ಕಣ್ಣೀರನ್ನೂ–ಪಾಪವನ್ನೂ ಸುರಿಸುತ್ತದೆ.

ನ ಬ್ರಹ್ಮಚಾರೀ ಚರಣಾದಪೇತೋ
ಯದಾ ಬ್ರಹ್ಮ ಬ್ರಹ್ಮಣಿ ತ್ರಾಣಮಿಚ್ಛೇತ್ ।
ಆಶ್ಚರ್ಯತೋ ವರ್ಷತಿ ತತ್ರ ದೇವ–
ಸ್ತತ್ರಾಭೀಕ್ಷ್ಣಂ ದುಃಸಹಾಶ್ಚಾವಿಶನ್ತಿ ॥೧೫॥

ಬ್ರಾಹ್ಮಣಬ್ರಹ್ಮಚಾರಿಯು (ಕ್ಷತ್ರಿಯ ಬ್ರಹ್ಮಚಾರಿಯಲ್ಲ) ದಸ್ಯುಗಳಿಂದ ತಡೆಯಲ್ಪಟ್ಟು ವೇದಾಧ್ಯಯನದಿಂದ ವಂಚಿತನಾಗಿ ತನ್ನನ್ನು ಸೃಷ್ಟಿಸಿದ ಬ್ರಹ್ಮನಲ್ಲಿ ಮೊರೆಯಿಡುವ ಕಾಲ ಒದಗಿದಾಗ ಇಂದ್ರನು ಮಳೆಗರೆಯುವುದೂ ಅತ್ಯಾಶ್ಚರ್ಯವೇ ಸರಿ. (ವೇದಾಧ್ಯಯನವನ್ನು ಮಾಡಲೂ ಬ್ರಾಹ್ಮಣನಿಗೆ ತೊಂದರೆಯುಂಟಾದಾಗ ಇಂದ್ರನೂ ಮಳೆಗರೆಯುವುದಿಲ್ಲ.) ಬಹಳ ಬೇಗ ದುರ್ಭಿಕ್ಷಾದಿ ಉಪದ್ರವಗಳು ತಲೆದೋರುತ್ತವೆ. (ಅಬ್ರಹ್ಮಚಾರೀ–ಎಂಬ ಪಾಠಾಂತರದ ಪ್ರಕಾರ ಯಾವಾಗ ಬ್ರಾಹ್ಮಣನು ಬ್ರಹ್ಮಚಾರಿಯೂ ಆಗಿರದೇ ವೇದಾಧ್ಯಯನದಿಂದ ವಂಚಿತನಾಗಿ ರಕ್ಷಣೆಗಾಗಿ ಬ್ರಹ್ಮನನ್ನೇ ಮರೆಹೋಗುವ ಕಾಲವು ಸನ್ನಿಹಿತವಾಗುವುದೋ-ಆಗ ಇಂದ್ರನೂ ಮಳೆಗರೆಯುವುದಿಲ್ಲ. ದೇಶದಲ್ಲಿ ದುರ್ಭಿಕ್ಷವುಂಟಾಗುತ್ತದೆ.)

ಸ್ತ್ರಿಯಂ ಹತ್ವಾ ಬ್ರಾಹ್ಮಣಂ ಚಾಪಿ ಪಾಪಃ
ಸಭಾಯಾಂ ಯತ್ರ ಲಭತೇಽನುವಾದಮ್ ।

ರಾಜ್ಞಃ ಸಕಾಶೇ ನ ಬಿಭೇತಿ ಚಾಪಿ
ತತೋ ಭಯಂ ವಿದ್ಯತೇ ಕ್ಷತ್ರಿಯಸ್ಯ ॥೧೬॥

ಯಾವಾಗ ಪಾಪಿಷ್ಠನಾದ ಮನುಷ್ಯನು–ಸ್ತ್ರೀಯನ್ನೂ, ಬ್ರಾಹ್ಮಣನನ್ನೂ ಕೊಂದು ಸಭೆಗಳಲ್ಲಿ ಪ್ರಶಂಸೆಯನ್ನು ಪಡೆಯುತ್ತಾನೆಯೋ, ತಾನು ಮಾಡಿದ ಹೇಯಕಾರ್ಯಕ್ಕೆ ರಾಜನ ಸಮೀಪದಲ್ಲಿಯೂ ಭಯಗೊಳ್ಳದಿರುವನೋ–ಅಂತಹ ಕಾಲವು ಒದಗಿಬಂದಾಗ ಕ್ಷತ್ರಿಯರಾಜನಿಗೆ ದೊಡ್ಡದಾದ ವಿಪತ್ತು ಕಾದಿರುವುದೆಂದು ಹೇಳಬಹುದಾಗಿದೆ.

ಪಾಪೈಃ ಪಾಪೇ ಕ್ರಿಯಮಾಣೇ ಹಿ ಚೈಲ
ತತೋ ರುದ್ರೋ ಜಾಯತೇ ದೇವ ಏಷಃ ।
ಪಾಪೈಃ ಪಾಪಾಃ ಸಂಜನಯನ್ತಿ ರುದ್ರಂ
ತತಃ ಸರ್ವಾನ್ಸಾಧ್ವಸಾಧೂನ್ಹಿನಸ್ತಿ ॥೧೭॥

ಇಲಾನಂದನ! ಪಾಪಿಷ್ಠರಿಂದ ಪಾಪಕಾರ್ಯಗಳು ಅವ್ಯಾಹತವಾಗಿ ನಡೆಯುತ್ತಿರುವಾಗ ಆ ಸಮಯದಲ್ಲಿ ಸಕಲಸಂಹಾರಕನಾದ ರುದ್ರನೆಂಬ ದೇವನು ಆವಿರ್ಭವಿಸುತ್ತಾನೆ. ಪಾಪಿಷ್ಠರಾದ ಜನರು ತಮ್ಮ ಪಾಪಗಳಿಂದಲೇ ರುದ್ರನನ್ನು ಸೃಷ್ಟಿಸುತ್ತಾರೆ. ಹಾಗೆ ಹುಟ್ಟಿದ ರುದ್ರನು ಸಾಧುಗಳನ್ನೂ–ಅಸಾಧುಗಳನ್ನೂ ಏಕಕಾಲದಲ್ಲಿ ಧ್ವಂಸಮಾಡುತ್ತಾನೆ."

ಐಲನು ಕಶ್ಯಪರನ್ನು ಪ್ರಶ್ನಿಸುತ್ತಾನೆ :

ಕುತೋ ರುದ್ರಃ ಕೀದೃಶೋ ವಾಪಿ ರುದ್ರಃ
ಸತ್ತ್ವೈಃ ಸತ್ತ್ವಂ ದೃಶ್ಯತೇ ವಧ್ಯಮಾನಮ್ ।
ಏತತ್ಸರ್ವಂ ಕಶ್ಯಪ ಮೇ ಪ್ರಚಕ್ಷ್ವ
ಕುತೋ ರುದ್ರೋ ಜಾಯತೇ ದೇವ ಏಷಃ ॥೧೮॥

"ಕಶ್ಯಪಮಹಾಮುನಿಗಳೇ! ರುದ್ರನೆಲ್ಲಿಂದ ಬರುತ್ತಾನೆ? ಅವನು ಹೇಗಿದ್ದಾನೆ? ರುದ್ರದೇವನು ಸಾಧುಗಳನ್ನೂ–ಅಸಾಧುಗಳನ್ನೂ ಸಂಹಾರ ಮಾಡುವನೆಂದು ಹೇಳುತ್ತೀರಿ. ಆದರೆ ಇಲ್ಲಿ ಪ್ರಾಣಿಗಳಿಂದ ಪ್ರಾಣಿಗಳು ವಿನಾಶಹೊಂದುತ್ತಿರುವುದು ಕಾಣುತ್ತಿದೆ. ಇದರಲ್ಲಿ ರುದ್ರನ ಪಾತ್ರ

ವೆಲ್ಲಿದೆ? ರುದ್ರದೇವನು ಎಲ್ಲಿಂದ ಹುಟ್ಟಿದನು? ಈ ಎಲ್ಲ ವಿಷಯಗಳನ್ನೂ ನನಗೆ ವಿಶದವಾಗಿ ಹೇಳಿರಿ."

ಆತ್ಮಾ ರುದ್ರೋ ಹೃದಯೇ ಮಾನವಾನಾಂ
ಸ್ವಂ ಸ್ವಂ ದೇಹಂ ಪರದೇಹಂ ಚ ಹನ್ತಿ ।
ವಾತೋತ್ಪಾತೈಃ ಸದೃಶಂ ರುದ್ರಮಾಹು-
ರ್ದೇವೈರ್ಜೀಮೂತೈಃ ಸದೃಶಂ ರೂಪಮಸ್ಯ ॥೧೯॥

"ಮಹಾರಾಜ! ರುದ್ರನು ಮಾನವರ ಹೃದಯಗಳಲ್ಲಿ ಆತ್ಮಸ್ವರೂಪನಾಗಿದ್ದಾನೆ. ಸಮಯವೊದಗಿದಾಗ ತನ್ನ ದೇಹವನ್ನೂ ನಾಶಪಡಿಸಿಕೊಳ್ಳುತ್ತಾನೆ. ಪರದೇಹವನ್ನೂ ನಾಶಪಡಿಸುತ್ತಾನೆ. ರುದ್ರನು ಚಂಡಮಾರುತಕ್ಕೆ ಮತ್ತು ಉತ್ಪಾತಗಳಿಗೆ ಸಮಾನನಾಗಿರುವನೆಂದು ವಿದ್ವಾಂಸರು ಹೇಳುತ್ತಾರೆ. ಅವನಿಗೆ ಮೇಘದೇವತೆಗಳ ರೂಪಕ್ಕೆ ಸಮಾನವಾದ ರೂಪವಿರುವುದೆಂದೂ ಹೇಳುತ್ತಾರೆ."

ನ ವೈ ವಾತಃ ಪರಿವೃಣೋತಿ ಕಶ್ಚಿ-
ನ್ನ ಜೀಮೂತೋ ವರ್ಷತಿ ನಾಪಿ ದೇವಃ ।
ತಥಾಯುಕ್ತೋ ದೃಶ್ಯತೇ ಮಾನುಷೇಷು
ಕಾಮದ್ವೇಷಾದ್ಬಧ್ಯತೇ ಮುಹ್ಯತೇ ಚ ॥೨೦॥

"ಮಹರ್ಷಿಗಳೇ! ಗಾಳಿಯು ಯಾರನ್ನೂ ಸುತ್ತುಗಟ್ಟುವುದಿಲ್ಲ. ಮೇಘವಾಗಲೀ–ರುದ್ರದೇವನಾಗಲೀ ಮಳೆಗರೆಯುವುದಿಲ್ಲ. ಆದರೆ ವಾಯು-ಜೀಮೂತಗಳು ಕೂಡಿಕೊಂಡಿರುತ್ತವೆ. ಅದೇ ರೀತಿಯಲ್ಲಿ ಮನುಷ್ಯರ ದೇಹಗಳಲ್ಲಿಯೂ ಆತ್ಮೇಂದ್ರಿಯ-ಮನಸ್ಸುಗಳು ಕೂಡಿಕೊಂಡಿರುವಂತೆ ಕಾಣುತ್ತವೆ. ಆದರೆ ಅವುಗಳು ರಾಗ-ದ್ವೇಷಗಳಿಂದ ಬಂಧಿಸಲ್ಪಟ್ಟುವುಗಳಾಗಿ ಮೋಹಗೊಂಡಿರುತ್ತವೆ. (ಕಾಮ-ದ್ವೇಷಗಳಿಗೆ ಮಾನವರು ಸಿಕ್ಕಿಬಿದ್ದು ಬಂಧನವನ್ನೂ–ಮೋಹವನ್ನೂ ಹೊಂದುತ್ತಾರೆ.)"

ಯಥೈಕಗೇಹೇ ಜಾತವೇದಾಃ ಪ್ರದೀಪ್ತಃ
ಕೃತ್ಸ್ನಂ ಗ್ರಾಮಂ ದಹತೇ ಚತ್ವರಂ ವಾ ।

ವಿಮೋಹನಂ ಕುರುತೇ ದೇವ ಏಷ
ತತಃ ಸರ್ವಂ ಸ್ಪೃಶ್ಯತೇ ಪುಣ್ಯಪಾಪೈಃ ॥೨೧॥

ಕಶ್ಯಪರು ಹೇಳುತ್ತಾರೆ :

"ಪುರೂರವ! ಯಾವ ರೀತಿ ಒಂದು ಮನೆಯಲ್ಲಿ ಹೊತ್ತಿಕೊಂಡ ಯಜ್ಞೇಶ್ವರನು ನಾಲ್ಕು ಬೀದಿಗಳನ್ನೂ ವ್ಯಾಪಿಸಿ ಸಂಪೂರ್ಣಗ್ರಾಮವನ್ನೇ ಅನುಕ್ರಮವಾಗಿ ದಹಿಸಿಬಿಡುವನೋ–ಅದೇ ರೀತಿಯಲ್ಲಿ ರುದ್ರದೇವನು ಮನುಷ್ಯರ ಮನಸ್ಸಿನಲ್ಲಿ ವಿಮೋಹವನ್ನುಂಟುಮಾಡಿ ಪುಣ್ಯ-ಪಾಪಗಳ ಮೂಲಕವಾಗಿ ಸಮಸ್ತಪ್ರಾಣಿಗಳನ್ನೂ ಸ್ಪರ್ಶಿಸುತ್ತಾನೆ."

ಐಲನು ಪ್ರಶ್ನಿಸುತ್ತಾನೆ :

ಯದಿ ದಣ್ಡಃ ಸ್ಪೃಶತೇಪುಣ್ಯಪಾಪಂ
ಪಾಪೈಃ ಪಾಪೇ ಕ್ರಿಯಮಾಣೇ ವಿಶೇಷಾತ್ ।
ಕಸ್ಯ ಹೇತೋಃ ಸುಕೃತಂ ನಾಮ ಕುರ್ಯಾ–
ದ್ದುಷ್ಕೃತಂ ವಾ ಕಸ್ಯ ಹೇತೋರ್ನ ಕುರ್ಯಾತ್ ॥೨೨॥

"ಭಗವನ್! ದಂಡವು ಅಥವಾ ರುದ್ರನು ಪುಣ್ಯವನ್ನು ಮಾಡಿದವ ರನ್ನೂ ಮುಟ್ಟುತ್ತಾನೆ ; ಪಾಪವನ್ನು ಮಾಡಿದವರನ್ನೂ ಮುಟ್ಟುತ್ತಾನೆ– ಎಂಬುದು ಹೇಗೆ ಸಮಂಜಸವಾಗುತ್ತದೆ? ವಿಶೇಷವಾಗಿ ಪಾಪಿಗಳಿಂದ ಪಾಪವು ಮಾಡಲ್ಪಡುತ್ತಲೇ ಇರುತ್ತದೆ. ಇಂತಹವರ ವಿಷಯದಲ್ಲಿ ದಂಡ ಸ್ಪರ್ಶವು ಯುಕ್ತವಾಗಿದೆ. ಪುಣ್ಯಮಾಡಿದವರಿಗೂ ಈ ದಂಡಸ್ಪರ್ಶವು ಇರುವುದೆನ್ನುವುದಾದರೆ ಮಾನವರು ಏತಕ್ಕಾಗಿ ಪುಣ್ಯಕಾರ್ಯಗಳನ್ನೇ ಮಾಡುತ್ತಾರೆ? ಪಾಪಕೃತ್ಯಗಳನ್ನು ಏತಕ್ಕಾಗಿ ಮಾಡುವುದಿಲ್ಲ?"

ಕಶ್ಯಪರು ಹೇಳುತ್ತಾರೆ :

ಅಸಂತ್ಯಾಗಾತ್ಪಾಪಕೃತಾಮಪಾಪಾಂ–
ಸ್ತುಲ್ಯೋ ದಣ್ಡಃ ಸ್ಪೃಶತೇ ಮಿಶ್ರಭಾವಾತ್ ।
ಶುಷ್ಕೇಣಾರ್ದ್ರಂ ದಹ್ಯತೇ ಮಿಶ್ರಭಾವಾ–
ನ್ನ ಮಿಶ್ರಃ ಸ್ಯಾತ್ಪಾಪಕೃದ್ಭಿಃ ಕಥಂಚಿತ್ ॥೨೩॥

"ಪುರೂರವ! ಕಟ್ಟಿಗೆಯು ಹಸಿಯಾಗಿದ್ದರೂ ಒಣಗಿದ ಕಟ್ಟಿಗೆ

ಯೊಡನೆ ಮಿಶ್ರಭಾವವಿರುವುದರಿಂದ ಸುಟ್ಟುಹೋಗುತ್ತದೆ. ಹಾಗೆಯೇ ಪಾಪಚಾರಿಗಳಾದವರ ಸಂಸರ್ಗವನ್ನು ಬಿಡದೇ ಇರುವುದರಿಂದ (ಅವರಲ್ಲಿ ಮಿಶ್ರಭಾವವಿರುವುದರಿಂದ) ಪಾಪರಹಿತರಾದ ಧರ್ಮಾತ್ಮರನ್ನೂ ದಂಡವು ಸ್ಪರ್ಶಿಸುತ್ತದೆ. ಆದುದರಿಂದ ಸತ್ಪುರುಷರು ಪಾಪಿಷ್ಠರೊಡನೆ ಯಾವುದೇ ಕಾರಣದಿಂದಲೂ ಸೇರಬಾರದು."

ಪುರೂರವನು ಹೇಳುತ್ತಾನೆ :

ಸಾಧ್ವಸಾಧೂನ್ಧಾರಯತೀಹ ಭೂಮಿಃ
ಸಾಧ್ವಸಾಧೂಂಸ್ತಾಪಯತೀಹ ಸೂರ್ಯಃ ।
ಸಾಧ್ವಸಾಧೂಂಶ್ಚಾಪಿ ವಾತೀಹ ವಾಯು-
ರಾಪಸ್ತಥಾ ಸಾಧ್ವಸಾಧೂನ್ಪುನನ್ತಿ ॥೨೪॥

"ಕಶ್ಯಪರೇ! ಈ ಭೂಮಿಯು ಸತ್ಪುರುಷರನ್ನೂ–ದುಷ್ಟರನ್ನೂ ಧರಿಸಿದೆ. ಸೂರ್ಯನು ಸಾಧುಗಳನ್ನೂ-ಅಸಾಧುಗಳನ್ನೂ ತಾಪಗೊಳಿಸುತ್ತಾನೆ. ವಾಯುವೂ ಕೂಡ ಸಾಧುಗಳ ಮೇಲೂ–ಅಸಾಧುಗಳ ಮೇಲೂ ಬೀಸುತ್ತಾನೆ. ನೀರು ಸಾಧುಗಳನ್ನೂ ಪವಿತ್ರಗೊಳಿಸುತ್ತದೆ ; ಅಸಾಧುಗಳನ್ನೂ ಪವಿತ್ರಗೊಳಿಸುತ್ತದೆ."

ಕಶ್ಯಪರು ಹೇಳುತ್ತಾರೆ :

ಏವಮಸ್ಮಿನ್ವರ್ತತೇ ಲೋಕ ಏವ
ನಾಮುತ್ರೈವಂ ವರ್ತತೇ ರಾಜಪುತ್ರ ।
ಪ್ರೇತ್ಯೈತಯೋರನ್ತರಾವಾನ್ವಿಶೇಷೋ
ಯೋ ವೈ ಪುಣ್ಯಂ ಚರತೇ ಯಶ್ಚ ಪಾಪಮ್ ॥೨೫॥

"ರಾಜಕುಮಾರ! ಹೀಗೆ ನಡೆಯುವುದು ಈ ಲೋಕದಲ್ಲಿ ಮಾತ್ರ. ಪರಲೋಕದಲ್ಲಿ ಹೀಗೆ ನಡೆಯುವುದಿಲ್ಲ. ಪುಣ್ಯ-ಪಾಪಗಳನ್ನು ಮಾಡಿದವರು ಈ ಲೋಕದಲ್ಲಿ ಸರ್ವಸಮಾನವಾದ ಅನುಭವಗಳನ್ನು ಪಡೆದುಕೊಳ್ಳುತ್ತಿದ್ದರೂ ಅವರಿಬ್ಬರೂ ಮೃತ್ಯುವಶರಾಗಿ ಪರಲೋಕಗಳಿಗೆ ಹೋದನಂತರ ಅವರಿಬ್ಬರಲ್ಲಿ ಅಪಾರವಾದ ಅಂತರವಿರುತ್ತದೆ. ಪರಲೋಕದಲ್ಲವರು ಒಂದೇ ವಿಧವಾದ ಅನುಭವವನ್ನು ಹೊಂದುವುದಿಲ್ಲ.

ಪುಣ್ಯಸ್ಯ ಲೋಕೋ ಮಧುಮಾನ್ಘೃತಾರ್ಚಿ-
ರ್ಹಿರಣ್ಯಜ್ಯೋತಿರಮೃತಸ್ಯ ನಾಭಿಃ ।
ತತ್ರ ಪ್ರೇತ್ಯ ಮೋದತೇ ಬ್ರಹ್ಮಚಾರೀ
ನ ತತ್ರ ಮೃತ್ಯುರ್ನ ಜರಾ ನೋತ ದುಃಖಮ್ ॥೨೬॥

ಪುಣ್ಯಾತ್ಮರು ಪಡೆಯುವ ಲೋಕಗಳು ಮಧುರತಮವಾದ ಸುಖ ದಿಂದ ತುಂಬಿರುತ್ತವೆ. ಅಲ್ಲಿ ಬ್ರಹ್ಮಾನಂದರೂಪವಾದ ತುಪ್ಪದ ದೀಪವು ಉರಿಯುತ್ತಿರುತ್ತದೆ. ಆ ದೀಪದಿಂದ ಸುವರ್ಣದ ಪ್ರಭೆಗೆ ಸಮಾನವಾದ ಬ್ರಹ್ಮಜ್ಞಾನದ ಪ್ರಭೆಯು ಹೊರಸೂಸುತ್ತಿರುತ್ತದೆ. ಆ ಲೋಕವು ಅಮೃತಕ್ಕೆ ಕೇಂದ್ರವಾಗಿರುತ್ತದೆ. ಬ್ರಹ್ಮನಿಷ್ಠನಾದ ಬ್ರಹ್ಮಚಾರಿಯು ಆ ಲೋಕಕ್ಕೆ ಹೋಗಿ ಆನಂದಪಡುತ್ತಾನೆ. ಆ ಲೋಕದಲ್ಲಿ ಮೃತ್ಯುವಿನ ಭಯವಿರುವುದಿಲ್ಲ. ಮುಪ್ಪಿನ ಭಯವಿಲ್ಲ. ಅಲ್ಲಿ ದುಃಖವೆಂಬುದೇ ಇಲ್ಲ.

ಪಾಪಸ್ಯ ಲೋಕೋ ನಿರಯೋಽಪ್ರಕಾಶೋ
ನಿತ್ಯಂ ದುಃಖಂ ಶೋಕಭೂಯಿಷ್ಠಮೇವ ।
ತತ್ರಾತ್ಮಾನಂ ಶೋಚತಿ ಪಾಪಕರ್ಮಾ
ಬಹ್ವೀಃ ಸಮಾಃ ಪ್ರತಪನ್ನಪ್ರತಿಷ್ಠಃ ॥೨೭॥

ಪಾಪಿಷ್ಠರಾದವರಿಗೆ ನರಕಲೋಕವು ಲಭಿಸುತ್ತದೆ. ಅಲ್ಲಿ ಯಾವಾಗಲೂ ಅಂಧಕಾರವು ಕವಿದಿರುತ್ತದೆ. ನಿತ್ಯದುಃಖವಿರುತ್ತದೆ. ಶೋಕದಿಂದಲೇ ಆ ನರಕವು ತುಂಬಿಹೋಗಿರುತ್ತದೆ. ಪಾಪಕರ್ಮಿಯು ಅನೇಕವರ್ಷಗಳ ಪರ್ಯಂತವಾಗಿ ಅಲ್ಲಿಯೇ ಪರಿತಪಿಸುತ್ತಾ ನಿಂತಲ್ಲಿ ನಿಲ್ಲದೇ ತನ್ನ ಉದ್ಧಾರಕ್ಕಾಗಿ ಶೋಕಿಸುತ್ತಿರುತ್ತಾನೆ. (ತಾನು ಮಾಡಿದ ಪಾಪಕ್ಕಾಗಿ ಪಶ್ಚಾತ್ತಾಪಪಡುತ್ತಾನೆ.)

ಮಿಥೋಭೇದಾದ್ಬ್ರಾಹ್ಮಣಕ್ಷತ್ರಿಯಾಣಾಂ
ಪ್ರಜಾ ದುಃಖಂ ದುಃಸಹಂ ಚಾವಿಶನ್ತಿ ।
ಏವಂ ಜ್ಞಾತ್ವಾ ಕಾರ್ಯ ಏವೇಹ ನಿತ್ಯಂ
ಪುರೋಹಿತೋ ನೈಕವಿದ್ಯೋ ನೃಪೇಣ ॥೨೮॥

ಬ್ರಾಹ್ಮಣ-ಕ್ಷತ್ರಿಯರಲ್ಲಿ ಪರಸ್ಪರಭೇದವುಂಟಾಗುವುದರಿಂದ ಪ್ರಜೆಗಳು ದುಸ್ಸಹವಾದ ದುಃಖಕ್ಕೆ ಈಡಾಗುತ್ತಾರೆ. ಈ ಎಲ್ಲ ವಿಷಯಗಳನ್ನೂ

ಮನನಮಾಡಿಕೊಂಡು ರಾಜನು ಸರ್ವಕಾಲಕ್ಕೂ ಬಹುಶ್ರುತನಾದ ಬ್ರಾಹ್ಮಣನೊಬ್ಬನನ್ನು ಪುರೋಹಿತನನ್ನಾಗಿ ಮಾಡಿಕೊಳ್ಳಬೇಕು.

ತಂ ಚೈವಾನ್ವಭಿಷಿಚ್ಯೇತ ತಥಾ ಧರ್ಮೋ ವಿಧೀಯತೇ ।
ಅಗ್ರ್ಯೋ ಹಿ ಬ್ರಾಹ್ಮಣಃ ಪ್ರೋಕ್ತಃ ಸರ್ವಸ್ಯೈವೇಹ ಧರ್ಮತಃ ॥೨೯॥

ರಾಜನು ಮೊದಲು ಪುರೋಹಿತನನ್ನು ವರಣಮಾಡಬೇಕು. ಬಳಿಕ ಅವನಿಂದ ತಾನು ಪಟ್ಟಾಭಿಷಿಕ್ತನಾಗಬೇಕು. ಧರ್ಮವೇ ಹೀಗೆ ವಿಧಾಯಕ ಮಾಡುತ್ತದೆ. ಏಕೆಂದರೆ ಧರ್ಮಾನುಸಾರವಾಗಿ ಬ್ರಾಹ್ಮಣನೇ ಎಲ್ಲರಿಗಿಂತಲೂ ಹಿರಿಯನಾದವನು.

ಪೂರ್ವಂ ಹಿ ಬ್ರಹ್ಮಣಃ ಸೃಷ್ಟಿರಿತಿ ಬ್ರಹ್ಮವಿದೋ ವಿದುಃ ।
ಜ್ಯೇಷ್ಠೇನಾಭಿಜನೇನಾಸ್ಯ ಪ್ರಾಪ್ತಂ ಪೂರ್ವಂ ಯದುತ್ತರಮ್ ॥೩೦॥

ಬ್ರಾಹ್ಮಣನ ಸೃಷ್ಟಿಯು ಎಲ್ಲರಿಗಿಂತಲೂ ಮೊದಲಾಯಿತೆಂದು ಬ್ರಹ್ಮವಿದರು ತಿಳಿದುಕೊಂಡಿರುತ್ತಾರೆ. ಬ್ರಾಹ್ಮಣನು ಎಲ್ಲರಿಗಿಂತಲೂ ಜ್ಯೇಷ್ಠನಾದುದರಿಂದಲೂ, ಬ್ರಹ್ಮನ ಮುಖದಲ್ಲಿ ಹುಟ್ಟಿರುವುದರಿಂದಲೂ–ಉತ್ತಮವಾದ ವಸ್ತುಗಳೆಲ್ಲಕ್ಕೂ ಅವನೇ ಮೊದಲು ಅಧಿಕಾರಿಯಾಗುವನು.

ತಸ್ಮಾನ್ಮಾನ್ಯಶ್ಚ ಪೂಜ್ಯಶ್ಚ ಬ್ರಾಹ್ಮಣಃ ಪ್ರಸೃತಾಗ್ರಭುಕ್ ।
ಸರ್ವಂ ಶ್ರೇಷ್ಠಂ ವಿಶಿಷ್ಟಂ ಚ ನಿವೇದ್ಯಂ ತಸ್ಯ ಧರ್ಮತಃ ।
ಅವಶ್ಯಮೇವ ಕರ್ತವ್ಯಂ ರಾಜ್ಞಾ ಬಲವತಾಪಿ ಹಿ ॥೩೧॥

ಎಲ್ಲರಿಗಿಂತಲೂ ಮೊದಲು ಆಪೋಶನವನ್ನು ತೆಗೆದುಕೊಂಡು ಭೋಜನ ಮಾಡುವ ಬ್ರಾಹ್ಮಣನು ಮಾನ್ಯನೂ–ಪೂಜ್ಯನೂ ಆಗಿರುತ್ತಾನೆ. ಶ್ರೇಷ್ಠವಾದ ಮತ್ತು ಉತ್ತಮವಾದ ಎಲ್ಲ ವಸ್ತುಗಳನ್ನೂ ಮೊದಲು ಧರ್ಮತಃ ಬ್ರಾಹ್ಮಣನಿಗೇ ಒಪ್ಪಿಸಬೇಕು. ಯದ್ಯಪಿ ರಾಜನು ಬಲಿಷ್ಠನೇ ಆಗಿದ್ದರೂ ಹೀಗೆ ಮಾಡುವುದು ಅವನ ಅವಶ್ಯಕರ್ತವ್ಯವಾಗಿರುತ್ತದೆ.

ಬ್ರಹ್ಮ ವರ್ಧಯತಿ ಕ್ಷತ್ರಂ ಕ್ಷತ್ರತೋ ಬ್ರಹ್ಮ ವರ್ಧತೇ ।
ಏವಂ ರಾಜ್ಞಾ ವಿಶೇಷೇಣ ಪೂಜ್ಯಾ ವೈ ಬ್ರಾಹ್ಮಣಾಃ ಸದಾ ॥೩೨॥

ಬ್ರಾಹ್ಮಣನು ಕ್ಷತ್ರಿಯನನ್ನು ಅಭಿವೃದ್ಧಿಪಡಿಸುತ್ತಾನೆ. ಕ್ಷತ್ರಿಯನಿಂದ ಬ್ರಾಹ್ಮಣನಿಗೆ ಔನ್ನತ್ಯವುಂಟಾಗುತ್ತದೆ. ಹೀಗಿರುವುದರಿಂದ ರಾಜನು ವಿಶೇಷವಾಗಿ ಬ್ರಾಹ್ಮಣರನ್ನು ಸತ್ಕರಿಸಬೇಕು."

೭೩ನೆಯ ಅಧ್ಯಾಯವು ಮುಗಿಯಿತು.

೭೪ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಬ್ರಾಹ್ಮಣ-ಕ್ಷತ್ರಿಯರು ಕೂಡಿದ್ದರೆ ದೇಶಕ್ಕೂ ಪ್ರಜೆಗಳಿಗೂ ಲಾಭವುಂಟಾಗುತ್ತದೆಂಬುದರ ಪ್ರತಿಪಾದನೆ : ಮುಚುಕುಂದನ ಉಪಾಖ್ಯಾನ

ಪಾರಿಕ್ಷಿತ! ಭೀಷ್ಮನು ಮುಂದುವರಿದು ಹೇಳುತ್ತಾನೆ :

ಯೋಗಕ್ಷೇಮೋ ಹಿ ರಾಷ್ಟ್ರಸ್ಯ ರಾಜನ್ಯಾಯತ್ತ ಉಚ್ಯತೇ ।
ಯೋಗಕ್ಷೇಮೋ ಹಿ ರಾಜ್ಞೋ ಹಿ ಸಮಾಯತ್ತಃ ಪುರೋಹಿತೇ ॥೧॥

"ಮಗು ಯುಧಿಷ್ಠಿರ! ರಾಷ್ಟ್ರದ ಯೋಗ-ಕ್ಷೇಮಗಳು ರಾಜನ ಅಧೀನವಾಗಿರುವುವೆಂದು ಹೇಳುತ್ತಾರೆ. ರಾಜನ ಯೋಗ-ಕ್ಷೇಮಗಳು ಪುರೋಹಿತನ ಅಧೀನವಾಗಿರುತ್ತವೆ.

ಯತ್ರಾದೃಷ್ಟಂ ಭಯಂ ಬ್ರಹ್ಮ ಪ್ರಜಾನಾಂ ಶಮಯತ್ಯುತ ।
ದೃಷ್ಟಂ ಚ ರಾಜಾ ಬಾಹುಭ್ಯಾಂ ತದ್ರಾಜ್ಯಂ ಸುಖಮೇಧತೇ ॥೨॥

ಯಾವ ರಾಜ್ಯದಲ್ಲಿ ಅದೃಷ್ಟವಾದ (ಕಣ್ಣಿಗೆ ಕಾಣಿಸದ, ದೈವಿಕವಾದ) ಪ್ರಜೆಗಳ ಭಯವನ್ನು ಬ್ರಾಹ್ಮಣನು ಉಪಶಮನಗೊಳಿಸುತ್ತಾನೆಯೋ ಕಣ್ಣಿಗೆ ಕಾಣಿಸುವ (ಲೌಕಿಕವಾದ) ಭಯವನ್ನು ರಾಜನು ತನ್ನ ಬಾಹುಗಳಿಂದ ಉಪಶಮನಗೊಳಿಸುತ್ತಾನೆಯೋ–ಆ ರಾಜ್ಯವು ಸುಖವನ್ನು ಹೊಂದುತ್ತದೆ.

ಈ ವಿಷಯದಲ್ಲಿ ಬಹಳ ಹಿಂದೆ ನಡೆದ ಇತಿಹಾಸರೂಪವಾದ ಮುಚುಕುಂದ-ಕುಬೇರರ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಪೃಥಿವೀಪತಿಯಾದ ಮುಚುಕುಂದನು ಈ ಭೂಮಂಡಲವನ್ನು ಜಯಿಸಿ ತನ್ನ ಸೈನ್ಯದ ವಿಷಯವಾಗಿ ಜಿಜ್ಞಾಸೆಮಾಡುತ್ತಾ ಕುಬೇರನ ಬಳಿಗೆ

ಹೋದನು. ತನ್ನ ಸೈನ್ಯಕ್ಕಿಂತಲೂ ಅತ್ಯಧಿಕಶಕ್ತಿಯುಳ್ಳ ಸೈನ್ಯವೇ ಇಲ್ಲವೆಂಬುದು ಅವನ ಅಭಿಪ್ರಾಯವಾಗಿದ್ದಿತು. ಮುಚುಕುಂದನು ಸೈನ್ಯಸಮೇತನಾಗಿ ಬಂದೊಡನೆಯೇ ಕುಬೇರನು ರಾಕ್ಷಸರನ್ನು ಸೃಷ್ಟಿಸಿದನು. ಆ ರಾಕ್ಷಸರು ಕ್ಷಣಮಾತ್ರದಲ್ಲಿ ಮುಚುಕುಂದನ ಸೈನ್ಯವನ್ನು ಸದೆಬಡಿದರು. ನರಪತಿಯಾದ, ಅರಿಂದಮನಾದ ಮುಚುಕುಂದನು ತನ್ನ ಸೈನ್ಯವೆಲ್ಲವೂ ಹೀಗೆ ರಾಕ್ಷಸರಿಂದ ವಿಧ್ವಸ್ತವಾಗಲಾಗಿ ತನ್ನ ಪುರೋಹಿತರನ್ನು ನಿಂದಿಸಿದನು. ಮುಚುಕುಂದನ ಪುರೋಹಿತರಾದ ಧರ್ಮವಿದರಾದ ವಸಿಷ್ಠರು ಅತ್ಯುಗ್ರವಾದ ತಪಸ್ಸುಮಾಡಿ ತಪಃಶಕ್ತಿಯಿಂದ ರಾಕ್ಷಸರೆಲ್ಲರನ್ನೂ ಧ್ವಂಸಮಾಡಿ ಮುಚುಕುಂದನ ವಿಜಯಕ್ಕೆ ಅವಕಾಶಮಾಡಿಕೊಟ್ಟರು.

ತನ್ನ ರಾಕ್ಷಸಸೈನ್ಯವೆಲ್ಲವೂ ವಿಧ್ವಸ್ತವಾಗಲಾಗಿ ಕುಬೇರನು ಮುಚುಕುಂದನ ಬಳಿಗೆ ಬಂದು ಹೇಳಿದನು :

"ಮುಚುಕುಂದ! ಈ ಹಿಂದೆಯೂ ನಿನ್ನಂತೆಯೇ ಬಲಿಷ್ಠರಾದ ರಾಜರೂ ಪುರೋಹಿತರೊಡನೆಯೇ ಇಲ್ಲಿಗೆ ಬಂದಿದ್ದರು. ಆದರೆ ನೀನೀಗ ವರ್ತಿಸಿದಂತೆ ಅವರು ಆಗ ವರ್ತಿಸಲಿಲ್ಲ. ಹಿಂದೆ ಬಂದಿದ್ದ ಭೂಪಾಲರೂ ಅಸ್ತ್ರವಿದ್ಯಾಕುಶಲರಾಗಿದ್ದರು. ಮಹಾಬಲಿಷ್ಠರಾಗಿದ್ದರು. ಮಾನವರಿಗೆ ಸುಖ-ದುಃಖಗಳನ್ನು ಕೊಡಲು ಸಮರ್ಥನಾಗಿರುವ ನನ್ನನ್ನು ಈಶ್ವರನೆಂದೇ ಭಾವಿಸಿ ಉಪಾಸನೆಮಾಡುತ್ತಿದ್ದರು. ನಿನ್ನಲ್ಲೇನಾದರೂ ಬಾಹುಬಲವಿದ್ದರೆ ನನ್ನ ಮುಂದೆ ಅದನ್ನು ಪ್ರದರ್ಶಿಸುವುದು ಯುಕ್ತವಾಗಿತ್ತು. ಬ್ರಾಹ್ಮಣನ ಬಲವಿದ್ದ ಮಾತ್ರದಿಂದ ನೀನು ನನಗಿಂತಲೂ ಅಧಿಕನಾಗಿರುವಂತೆ ಏಕೆ ಮಿತಿಮೀರಿ ವರ್ತಿಸುವೆ?"

ಕುಬೇರನು ಹೇಳಿದ ಮಾತನ್ನು ಕೇಳಿ ಪರಮಕ್ರುದ್ಧನಾದ ಮುಚುಕುಂದನು ನ್ಯಾಯಪೂರ್ವವಾದ, ರೋಷರಹಿತವಾದ, ಭ್ರಾಂತಿರಹಿತ ವಾದ (ನಿಃಸಂದಿಗ್ಧವಾದ,) ಈ ಮಾತನ್ನು ಕುಬೇರನೊಡನೆ ಹೇಳಿದನು :

ಬ್ರಹ್ಮಕ್ಷತ್ರಮಿದಂ ಸೃಷ್ಟಮೇಕಯೋನಿ ಸ್ವಯಮ್ಭುವಾ ।
ಪೃಥಗ್ಬಲವಿಧಾನಂ ತನ್ನ ಲೋಕಂ ಪರಿಪಾಲಯೇತ್ ॥೧೩॥

"ಕುಬೇರ! ಬ್ರಾಹ್ಮಣ-ಕ್ಷತ್ರಿಯರ ಜನ್ಮಸ್ಥಾನವು ಒಂದೇ ಆಗಿರು

ವುದು. ಸ್ವಯಂಭೂಬ್ರಹ್ಮನೇ ಇಬ್ಬರಿಗೂ ಜನ್ಮದಾತನಾಗಿದ್ದಾನೆ. ಬ್ರಹ್ಮ- ಕ್ಷತ್ರರ ಬಲ ಮತ್ತು ಪ್ರಯತ್ನಗಳು ಪ್ರತ್ಯೇಕ-ಪ್ರತ್ಯೇಕವಾಗಿಯೇ ಇದ್ದರೆ ಲೋಕವನ್ನು ಸಂರಕ್ಷಿಸಲು ಸಾಧ್ಯವೇ ಆಗುವುದಿಲ್ಲ.

ತಪೋ ಮನ್ತ್ರಬಲಂ ನಿತ್ಯಂ ಬ್ರಾಹ್ಮಣೇಷು ಪ್ರತಿಷ್ಠಿತಮ್ ।
ಅಸ್ತ್ರಬಾಹುಬಲಂ ನಿತ್ಯಂ ಕ್ಷತ್ರಿಯೇಷು ಪ್ರತಿಷ್ಠಿತಮ್ ॥೧೪॥

ಬ್ರಾಹ್ಮಣರಲ್ಲಿ ಸರ್ವದಾ ತಪೋಬಲವೂ-ಮಂತ್ರಬಲವೂ ಪ್ರತಿಷ್ಠಿತ ವಾಗಿರುತ್ತದೆ. ಕ್ಷತ್ರಿಯರಲ್ಲಿ ಸರ್ವಾದ ಅಸ್ತ್ರಬಲವೂ-ಬಾಹುಬಲವೂ ಪ್ರತಿಷ್ಠಿತವಾಗಿರುತ್ತದೆ. ಆದುದರಿಂದ ಬ್ರಾಹ್ಮಣ-ಕ್ಷತ್ರಿಯರಿಬ್ಬರೂ ಸೇರಿಯೇ ಪ್ರಜೆಗಳನ್ನು ಪಾಲನೆಮಾಡಬೇಕು. ಅಲಕಾಧಿಪನೇ! ಅದರಂತೆಯೇ ಆಚರಿಸುತ್ತಿರುವ ನನ್ನನ್ನು ನೀನೇಕೆ ನಿಂದಿಸುವೆ?"

ಬಳಿಕ ಕುಬೇರನು ಪುರೋಹಿತರೊಡನಿದ್ದ ಮುಚುಕುಂದನೊಡನೆ ಹೇಳಿದನು :

"ಮುಚುಕುಂದ! ನಾನು ಈಶ್ವರನ ಆಜ್ಞೆಯಿಲ್ಲದೆ ನನ್ನ ಈ ರಾಜ್ಯವನ್ನು ಯಾರಿಗೂ ಕೊಡುವುದಿಲ್ಲ. ಈಶ್ವರನ ಆಜ್ಞೆಯಿಲ್ಲದೇ ನಾನು ಯಾರೊಬ್ಬರ ರಾಜ್ಯವನ್ನು ಅಪಹರಿಸುವುದೂ ಇಲ್ಲ. ಆದರೂ ಕೂಡ ನಾನು ನಿನಗೆ ಈ ಅಖಂಡಭೂಮಂಡಲವನ್ನೂ ಕೊಡುತ್ತೇನೆ. ನಾನು ಕೊಡುವ ಈ ಅಖಂಡಭೂಮಂಡಲವನ್ನೂ ನೀನು ಅನುಶಾಸನಮಾಡು."

ವೈಶ್ರವಣನು ಹೀಗೆ ಹೇಳಿದನಂತರ ಪುನಃ ಮುಚುಕುಂದನು ಕುಬೇರನೊಡನೆ ಹೇಳಿದನು :

ನಾಹಂ ರಾಜ್ಯಂ ಭವದ್ದತ್ತಂ ಭೋಕ್ತುಮಿಚ್ಛಾಮಿ ಪಾರ್ಥಿವ ।
ಬಾಹುವೀರ್ಯಾರ್ಜಿತಂ ರಾಜ್ಯಮಶ್ನೀಯಾಮಿತಿ ಕಾಮಯೇ ॥೧೬॥

"ಕುಬೇರರಾಜ! ನಾನು ನಿನ್ನಿಂದ ದಾನವಾಗಿ ಕೊಡಲ್ಪಡುವ ರಾಜ್ಯವನ್ನು ಉಪಭುಂಜಿಸಲು ಇಷ್ಟಪಡುವುದಿಲ್ಲ. ನನ್ನ ಭುಜಬಲ- ಪರಾಕ್ರಮಗಳಿಂದ ಜಯಿಸಲ್ಪಟ್ಟ ರಾಜ್ಯವನ್ನು ಮಾತ್ರವೇ ಉಪಭುಂಜಿಸಲು ಇಚ್ಛಿಪಡುತ್ತೇನೆ."

ಯುಧಿಷ್ಠಿರ! ಮುಚುಕುಂದನು ಯಾವ ವಿಧವಾದ ಆತಂಕವೂ

ಇಲ್ಲದೇ ಕ್ಷತ್ರಧರ್ಮದಲ್ಲಿ ಸುಪ್ರತಿಷ್ಠಿತನಾಗಿರುವುದನ್ನು ಕಂಡು ಕುಬೇರನಿಗೆ ಪರಮಾಶ್ಚರ್ಯವಾಯಿತು.

ಅನಂತರ ಕ್ಷತ್ರಿಯಧರ್ಮಾನುಷ್ಠಾನಪರನಾಗಿದ್ದ ಮುಚುಕುಂದನು ತನ್ನ ಮಾತಿನಂತೆಯೇ ಬಾಹುಬಲ-ಪರಾಕ್ರಮಗಳಿಂದ ಭೂಮಂಡಲವನ್ನು ಜಯಿಸಿ, ಹಾಗೆ ಜಯಿಸಿದ ಭೂಮಂಡಲವನ್ನು ಧರ್ಮದಿಂದ ಪರಿಪಾಲನೆ ಮಾಡುತ್ತಿದ್ದನು.

ಹೀಗೆ ಯಾವ ರಾಜನು ಮೊದಲು ಬ್ರಾಹ್ಮಣನ ಆಶ್ರಯವನ್ನು ಪಡೆದು ಅವನ ಸಹಾಯದಿಂದ ರಾಜ್ಯಕಾರ್ಯದಲ್ಲಿ ಪ್ರವೃತ್ತನಾಗುವನೋ ಅಂತಹ ರಾಜನು ಹಿಂದೆ ಜಯಿಸಲಾಗದಿದ್ದ ರಾಜ್ಯವನ್ನೂ ಜಯಿಸುತ್ತಾನೆ. ಮಹಾಯಶಸ್ಸನ್ನೂ ಪಡೆದುಕೊಳ್ಳುತ್ತಾನೆ.

ನಿತ್ಯೋದಕೀ ಬ್ರಾಹ್ಮಣಃ ಸ್ಯಾನ್ನಿತ್ಯಶಸ್ತ್ರಶ್ಚ ಕ್ಷತ್ರಿಯಃ ।
ತಯೋರ್ಹಿ ಸರ್ವಮಾಯತ್ತಂ ಯತ್ಕಿಂಚಿಜ್ಜಗತೀಗತಮ್ ॥೨೨॥

ಬ್ರಾಹ್ಮಣನು ಯಾವಾಗಲೂ ಉದಕಪಾತ್ರವನ್ನು ಧರಿಸಿರಬೇಕು. ಕ್ಷತ್ರಿಯನು ಯಾವಾಗಲೂ ಶಸ್ತ್ರಧಾರಿಯೇ ಆಗಿರಬೇಕು. ಈ ಭೂಮಂಡಲ ದಲ್ಲಿ ಯಾವುದೇ ವಸ್ತುಗಳಿವೆಯೋ–ಆ ಎಲ್ಲ ವಸ್ತುಗಳೂ ಬ್ರಹ್ಮ-ಕ್ಷತ್ರರ ಅಧೀನವೇ ಆಗಿರುತ್ತವೆ."

೭೪ನೆಯ ಅಧ್ಯಾಯವು ಮುಗಿಯಿತು.

೭೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ಕರ್ತವ್ಯವರ್ಣನೆ : ಯುಧಿಷ್ಠಿರನು ರಾಜ್ಯದ ವಿಷಯದಲ್ಲಿ ಪುನಃ ವಿರಕ್ತಿಯನ್ನು ತಳೆದುದು : ರಾಜ್ಯದ ಮಹಿಮೆಯನ್ನು ಭೀಷ್ಮನು ಪುನಃ ಪ್ರತಿಪಾದಿಸಿದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಪಿತಾಮಹ! ರಾಜನಾದವನು ಯಾವ ವೃತ್ತಿಯಿಂದಿದ್ದರೆ (ಯಾವ ಕರ್ಮಗಳನ್ನು ಮಾಡಿದರೆ) ಪ್ರಜೆಗಳ ಅಭಿವೃದ್ಧಿಯನ್ನು ಸಾಧಿಸುತ್ತಾನೆ ಮತ್ತು ಪ್ರಜೆಗಳಿಂದ ಮಾನ್ಯತೆಯನ್ನು ಪಡೆದು ಪುಣ್ಯಲೋಕಗಳನ್ನು ಜಯಿಸುತ್ತಾನೆ? ಈ ವಿಷಯವನ್ನು ತಿಳಿಸು."

ದಾನಶೀಲೋ ಭವೇದ್ರಾಜಾ ಯಜ್ಞಶೀಲಶ್ಚ ಭಾರತ ।
ಉಪವಾಸತಪಃಶೀಲಃ ಪ್ರಜಾನಾಂ ಪಾಲನೇ ರತಃ ॥೨॥

"ಯುಧಿಷ್ಠಿರ! ರಾಜನು ದಾನಶೀಲನಾಗಿರಬೇಕು. ಯಜ್ಞಶೀಲನೂ ಆಗಿರಬೇಕು. ವ್ರತೋಪವಾಸಾದಿಗಳನ್ನೂ ಮಾಡಬೇಕು. ತಪಃಶೀಲನೂ ಆಗಿರಬೇಕು. ಹೀಗಿದ್ದುಕೊಂಡು ಪ್ರಜೆಗಳ ಪಾಲನೆಯಲ್ಲಿಯೇ ನಿರತನಾದ ರಾಜನು ನೀನು ಹೇಳುವಂತೆ ಎಲ್ಲವನ್ನೂ ಪಡೆದುಕೊಳ್ಳುತ್ತಾನೆ.

ಸರ್ವಾಶ್ಚೈವ ಪ್ರಜಾ ನಿತ್ಯಂ ರಾಜಾ ಧರ್ಮೇಣ ಪಾಲಯನ್ ।
ಉತ್ಥಾನೇನ ಪ್ರದಾನೇನ ಪೂಜಯೇಚ್ಚಾಪಿ ಧಾರ್ಮಿಕಾನ್ ॥೩॥

ರಾಜನು ಎಲ್ಲ ಪ್ರಜೆಗಳನ್ನೂ ಧರ್ಮದಿಂದ ಪರಿಪಾಲನೆಮಾಡುತ್ತಾ, ಧಾರ್ಮಿಕರನ್ನು ಪ್ರತ್ಯುತ್ಥಾನಮಾಡಿ ಸ್ವಾಗತಿಸುವುದರಿಂದಲೂ–ಉತ್ತಮ ವಸ್ತುಗಳ ಪ್ರದಾನಗಳಿಂದಲೂ ಯಥಾಯೋಗ್ಯವಾಗಿ ಸತ್ಕರಿಸಬೇಕು.

ರಾಜ್ಞಾ ಹಿ ಪೂಜಿತೋ ಧರ್ಮಸ್ತತಃ ಸರ್ವತ್ರ ಪೂಜ್ಯತೇ ।
ಯದ್ಯದಾಚರತೇ ರಾಜಾ ತತ್ಪ್ರಜಾನಾಂ ಸ್ಮ ರೋಚತೇ ॥೪॥

ರಾಜನಿಂದ ಗೌರವಿಸಲ್ಪಟ್ಟ ಧರ್ಮವು ಸರ್ವತ್ರ ಗೌರವಿಸಲ್ಪಡುತ್ತದೆ. ರಾಜನು ಯಾವು-ಯಾವುದನ್ನು ಆಚರಿಸುವನೋ ಅವೆಲ್ಲವೂ ಪ್ರಜೆಗಳಿಗೂ ಸಮೀಚೀನವಾಗಿ ಕಾಣುತ್ತದೆ.

ನಿತ್ಯಮುದ್ಯತದಣ್ಡಶ್ಚ ಭವೇನ್ಮೃತ್ಯುರಿವಾರಿಷು ।
ನಿಹನ್ಯಾತ್ಸರ್ವತೋ ದಸ್ಯೂನ್ನ ಕಾಮಾತ್ಕಸ್ಯಚಿತ್ಕ್ಷಮೇತ್ ॥೫॥

ರಾಜನು ನಿತ್ಯವೂ ಎತ್ತಲ್ಪಟ್ಟ ದಂಡವುಳ್ಳವನಾಗಿದ್ದು (ಸದಾ ದಂಡ ಪಾಣಿಯಾಗಿ) ಶತ್ರುಗಳ ವಿಷಯದಲ್ಲಿ ಮೃತ್ಯುಪ್ರಾಯನಾಗಿರಬೇಕು. ತನ್ನ ದೇಶದಲ್ಲಿರುವ ಕಳ್ಳ-ಕಾಕರೆಲ್ಲರನ್ನೂ ಧ್ವಂಸಮಾಡಬೇಕು. ಪಕ್ಷಪಾತಿಯಾಗಿ ಯಾವ ಅಪರಾಧಿಗಳಿಗೂ ಕ್ಷಮೆಯನ್ನು ನೀಡಬಾರದು. (ಪ್ರಿಯನೇ ಆಗಿರಲಿ, ಸಾಮಾನ್ಯನೇ ಆಗಿರಲಿ, ದ್ವೇಷಿಯೇ ಆಗಿರಲಿ–ಅಪರಾಧಿಗಳ ವಿಷಯದಲ್ಲಿ ತಾರತಮ್ಯವಿಲ್ಲದೇ ವರ್ತಿಸಬೇಕು.)

ಯಂ ಹಿ ಧರ್ಮಂ ಚರನ್ತೀಹ ಪ್ರಜಾ ರಾಜ್ಞಾ ಸುರಕ್ಷಿತಾಃ ।
ಚತುರ್ಥಂ ತಸ್ಯ ಧರ್ಮಸ್ಯ ರಾಜಾ ಭಾರತ ವಿನ್ದತಿ ॥೬॥

ಭಾರತನೇ! ರಾಜನಿಂದ ಸಂರಕ್ಷಿತರಾದ ಪ್ರಜೆಗಳು ಇಲ್ಲಿ ಯಾವ ಧರ್ಮವನ್ನು ಆಚರಿಸುತ್ತಾರೆಯೋ–ಆ ಧರ್ಮದ ನಾಲ್ಕನೆಯ ಒಂದು ಭಾಗದಷ್ಟು ಫಲವನ್ನು ರಾಜನು ಪಡೆದುಕೊಳ್ಳುತ್ತಾನೆ.

ಯದಧೀತೇ ಯದ್ದದಾತಿ ಯಜ್ಜುಹೋತಿ ಯದರ್ಚತಿ ।
ರಾಜಾ ಚತುರ್ಥಭಾಕ್ತಸ್ಯ ಪ್ರಜಾ ಧರ್ಮೇಣ ಪಾಲಯನ್ ॥೭॥

ರಾಜನಿಂದ ಸುರಕ್ಷಿತನಾದ ಪ್ರಜೆಯು ಯಾವ ಅಧ್ಯಯನವನ್ನು ಮಾಡುವನೋ, ಯಾವ ದಾನವನ್ನು ಮಾಡುವನೋ, ಯಾವ ಹೋಮ ವನ್ನು ಮಾಡುವನೋ, ಯಾವ ದೇವತಾರ್ಚನಾದಿಗಳನ್ನು ಮಾಡುವನೋ– ಅವುಗಳಿಂದ ಪ್ರಾಪ್ತವಾಗುವ ಪುಣ್ಯದಲ್ಲಿ ನಾಲ್ಕನೆಯ ಒಂದು ಭಾಗವನ್ನು– ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುವ–ರಾಜನು ಪಡೆದುಕೊಳ್ಳು ತ್ತಾನೆ.

ಯದ್ರಾಷ್ಟ್ರೇಽಕುಶಲಂ ಕಿಂಚಿದ್ರಾಜ್ಞೋಽರಕ್ಷಯತಃ ಪ್ರಜಾಃ ।
ಚತುರ್ಥಂ ತಸ್ಯ ಪಾಪಸ್ಯ ರಾಜಾ ಭಾರತ ವಿನ್ದತಿ ॥೮॥

ಭಾರತನೇ! ಪ್ರಜೆಗಳನ್ನು ರಕ್ಷಿಸದೇ ಇರುವ ರಾಜನ ರಾಜ್ಯದಲ್ಲಿ ಪ್ರಜೆಗಳಿಗೆ ರಕ್ಷಣೆಯೇ ಇಲ್ಲದುದರ ಫಲವಾಗಿ ಸಂಭವಿಸುವ ಪಾಪದ ನಾಲ್ಕನೆಯ ಒಂದು ಭಾಗದಷ್ಟು ಪಾಪವನ್ನು ರಾಜನು ಪಡೆದುಕೊಳ್ಳುತ್ತಾನೆ. (ಅರಕ್ಷಿತರಾದ ಪ್ರಜೆಗಳು ದಸ್ಯುಗಳ ಕೈಗೆ ಸಿಕ್ಕಿ ಪ್ರಾಣಗಳನ್ನು ಕಳೆದುಕೊಂಡರೆ ನರಹತ್ಯಾಪಾಪದಲ್ಲಿ ನಾಲ್ಕನೆಯ ಒಂದು ಭಾಗವು ಪ್ರಜೆಗಳಿಗೆ ರಕ್ಷಣೆಯನ್ನು ಕೊಡದಿರುವ ರಾಜನಿಗೂ ಸೇರುತ್ತದೆ.)

ಅಪ್ಯಾಹುಃ ಸರ್ವಮೇವೇತಿ ಭೂಯೋಽರ್ಧಮಿತಿ ನಿಶ್ಚಯಃ ।
ಕರ್ಮಣಃ ಪೃಥಿವೀಪಾಲ ನೃಶಂಸೋಽನೃತವಾಗಪಿ ॥೯॥

ಕೆಲವರು ಎಲ್ಲ ಪಾಪವೂ ಪೂರ್ಣವಾಗಿ ರಾಜನಿಗೇ ಸೇರುವುದೆಂದು ಹೇಳುತ್ತಾರೆ. ಕೆಲವರು ಅರ್ಧಭಾಗ ಪಾಪವು ಸೇರುವುದೆಂದು ಹೇಳುತ್ತಾರೆ. ಒಟ್ಟಿನಲ್ಲಿ ರಾಜನು ಪಾಪಕ್ಕೆ ಭಾಗಿಯಾಗುವುದಂತೂ ನಿಶ್ಚಯ. ಅಂತಹ ಕರ್ಮದಿಂದ ರಾಜನು ಕ್ರೂರಿಯೆಂದೂ ಮತ್ತು ಮಿಥ್ಯಾವಾದಿಯೆಂದೂ ಕರೆಯಲ್ಪಡುತ್ತಾನೆ.

ಯುಧಿಷ್ಠಿರ! ರಾಜನು ಎಂತಹ ಪಾಪದಿಂದ ಹೇಗೆ ವಿಮುಕ್ತನಾಗುವನೆಂಬುದನ್ನು ಹೇಳುವೆನು ; ಕೇಳು.

ಪ್ರತ್ಯಾಹರ್ತುಮಶಕ್ಯಂ ಸ್ಯಾದ್ಧನಂ ಚೋರೈರ್ಹೃತಂ ಯದಿ ।
ತತ್ಸ್ವಕೋಶಾತ್ಪ್ರದೇಯಂ ಸ್ಯಾದಶಕ್ತೇನೋಪಜೀವತಃ ॥೧೦॥

ಕಳ್ಳರು ಪ್ರಜೆಯ ಧನವನ್ನು ದೋಚಿಕೊಂಡು ಹೋದಾಗ, ಕಳ್ಳರನ್ನು ಪತ್ತೆಹಚ್ಚಿ ಧನವನ್ನು ಪಡೆಯಲು ರಾಜನು ಅಸಮರ್ಥನಾಗುವ ಸಂದರ್ಭಗಳಲ್ಲಿ–ಆ ರಾಜನು ತನ್ನನ್ನೇ ಆಶ್ರಯಿಸಿರುವ ಪ್ರಜೆಗೆ ತನ್ನ ಬೊಕ್ಕಸದಿಂದಲೇ ಅವನು ಕಳೆದುಕೊಂಡಿರುವಷ್ಟು ಧನವನ್ನು ಕೊಡಬೇಕು. ಹೀಗೆ ಮಾಡುವುದರಿಂದ ರಾಜನು ಪಾಪದಿಂದ ಮುಕ್ತನಾಗುತ್ತಾನೆ.

ಸರ್ವವರ್ಣೈಃ ಸದಾ ರಕ್ಷ್ಯಂ ಬ್ರಹ್ಮಸ್ವಂ ಬ್ರಾಹ್ಮಣಾ ಯಥಾ ।
ನ ಸ್ಥೇಯಂ ವಿಷಯೇ ತೇನ ಯೋಽಪಕುರ್ಯಾದ್ದ್ವಿಜಾತಿಷು ॥೧೧॥

ಎಲ್ಲ ವರ್ಣಗಳವರಿಂದಲೂ ಬ್ರಾಹ್ಮಣರು ರಕ್ಷಿಸಲ್ಪಡಬೇಕಾಗಿರುವಂತೆ ಎಲ್ಲ ವರ್ಣಗಳವರೂ ಬ್ರಾಹ್ಮಣರ ಸ್ವತ್ತನ್ನೂ ಸದಾ ರಕ್ಷಿಸಬೇಕು. ಬ್ರಾಹ್ಮಣರಿಗೆ ಯಾರು ಅಪಕಾರಮಾಡುವರೋ ಅಂತಹವರನ್ನು ರಾಜನಾದವನು ತನ್ನ ರಾಜ್ಯದಲ್ಲಿ ಇಟ್ಟುಕೊಳ್ಳಬಾರದು.

ಬ್ರಹ್ಮಸ್ವೇ ರಕ್ಷ್ಯಮಾಣೇ ತು ಸರ್ವಂ ಭವತಿ ರಕ್ಷಿತಮ್ ।
ತಸ್ಮಾತ್ತೇಷಾಂ ಪ್ರಸಾದೇನ ಕೃತಕೃತ್ಯೋ ಭವೇನ್ನೃಪಃ ॥೧೨॥

ಬ್ರಾಹ್ಮಣನ ಸ್ವತ್ತು ರಕ್ಷಿಸಲ್ಪಡುತ್ತಿದೆಯೆಂದರೆ–ಆ ರಾಷ್ಟ್ರದಲ್ಲಿ ಎಲ್ಲವೂ ಸುರಕ್ಷಿತವೇ ಆಗಿರುವುದೆಂಬ ಅಭಿಪ್ರಾಯವುಂಟಾಗುತ್ತದೆ. ಆದುದರಿಂದ ಬ್ರಾಹ್ಮಣರ ಸ್ವತ್ತನ್ನು ಸಂರಕ್ಷಿಸುವುದೂ ರಾಜನ ಮುಖ್ಯಕರ್ತವ್ಯವಾಗಿರುತ್ತದೆ. ಬ್ರಾಹ್ಮಣರ ಕೃಪಾವಿಶೇಷದಿಂದಲೇ ರಾಜನು ಕೃತಕೃತ್ಯನಾಗುತ್ತಾನೆ.

ಪರ್ಜನ್ಯಮಿವ ಭೂತಾನಿ ಮಹಾದ್ರುಮಮಿವ ದ್ವಿಜಾಃ ।
ನರಾಸ್ತಮುಪಜೀವನ್ತಿ ನೃಪಂ ಸರ್ವಾರ್ಥಸಾಧಕಮ್ ॥೧೩॥

ಎಲ್ಲ ಪ್ರಾಣಿಗಳೂ ಪರ್ಜನ್ಯನನ್ನು (ಮಳೆಯನ್ನು) ಆಶ್ರಯಿಸಿ ಜೀವಿಸು

ವಂತೆ–ಎಲ್ಲ ಪಕ್ಷಿಗಳೂ ಮಹಾವೃಕ್ಷವನ್ನಾಶ್ರಯಿಸಿ ಜೀವಿಸುವಂತೆ– ಸರ್ವಾರ್ಥಸಾಧಕನಾದ ರಾಜನನ್ನೇ ಆಶ್ರಯಿಸಿ ಪ್ರಜೆಗಳು ಜೀವನ ನಿರ್ವಹಣೆಯನ್ನು ಮಾಡುತ್ತಾರೆ.

ನ ಹಿ ಕಾಮಾತ್ಮನಾ ರಾಜ್ಞಾ ಸತತಂ ಕಾಮಬುದ್ಧಿನಾ ।
ನೃಶಂಸೇನಾತಿಲುಬ್ಧೇನ ಶಕ್ಯಂ ಪಾಲಯಿತುಂ ಪ್ರಜಾಃ ॥೧೪॥

ಯಾವ ರಾಜನು ಕಾಮಾಸಕ್ತನಾಗಿ ಯಾವಾಗಲೂ ಕಾಮಕ್ಕೆ ಸಂಬಂಧಿಸಿದ ವಿಷಯಗಳನ್ನೇ ಯೋಚಿಸುತ್ತಿರುವನೋ, ಯಾವನು ಕ್ರೂರಿಯೋ ಮತ್ತು ಲುಬ್ಧನೋ–ಅಂತಹ ರಾಜನಿಂದ ಪ್ರಜೆಗಳನ್ನು ಪಾಲಿಸಲು ಶಕ್ಯವಾಗುವುದಿಲ್ಲ. (ಕಾಮಿಯೂ, ಕ್ರೂರಿಯೂ, ಲುಬ್ಧನೂ ಆದ ರಾಜನು ರಾಜ್ಯವನ್ನು ಪರಿಪಾಲನೆಮಾಡಲಾರನು.")

ಯುಧಿಷ್ಠಿರನು ಹೇಳುತ್ತಾನೆ :

ನಾಹಂ ರಾಜ್ಯಸುಖಾನ್ವೇಷೀ ರಾಜ್ಯಮಿಚ್ಛಾಮ್ಯಪಿ ಕ್ಷಣಮ್ ।
ಧರ್ಮಾರ್ಥಂ ರೋಚಯೇ ರಾಜ್ಯಂ ಧರ್ಮಶ್ಚಾತ್ರ ನ ವಿದ್ಯತೇ ॥೧೫॥

"ಪಿತಾಮಹ! ನಾನು ರಾಜ್ಯಸುಖವನ್ನು ಅರಸಿಕೊಂಡು ಹೋಗುವುದಿಲ್ಲ. ರಾಜ್ಯಸುಖಾಪೇಕ್ಷಿಯಾಗಿ ಒಂದು ಕ್ಷಣಕಾಲವಾದರೂ ರಾಜ್ಯದ ಅಧಿಕಾರವನ್ನು ಇಚ್ಛಿಸುವುದಿಲ್ಲ. ಧರ್ಮದ ಸಿದ್ಧಿಗಾಗಿ ನಾನು ರಾಜ್ಯವನ್ನು ಅಪೇಕ್ಷಿಸುತ್ತೇನೆ. ಆದರೆ ನೀನು ಹೇಳಿದುದೆಲ್ಲವನ್ನು ಕ್ರೋಡೀಕರಿಸಿ ವಿವೇಚಿಸಿದರೆ ರಾಜ್ಯಾಡಳಿತದಲ್ಲಿ ಧರ್ಮದ ಸಿದ್ಧಿಯಾಗುವುದಿಲ್ಲ.

ತದಲಂ ಮಮ ರಾಜ್ಯೇನ ಯತ್ರ ಧರ್ಮೋ ನ ವಿದ್ಯತೇ ।
ವನಮೇವ ಗಮಿಷ್ಯಾಮಿ ತಸ್ಮಾದ್ಧರ್ಮಚಿಕೀರ್ಷಯಾ ॥೧೬॥

ಯಾವ ರಾಜ್ಯವನ್ನು ವಹಿಸುವುದರಿಂದ ಧರ್ಮದ ಸಿದ್ಧಿಯಾಗುವುದಿಲ್ಲವೋ–ಅಂತಹ ರಾಜ್ಯವಿನ್ನು ನನಗೆ ಸಾಕು. ನನಗೆ ಈ ರಾಜ್ಯದ ಆವಶ್ಯಕತೆಯಿಲ್ಲ. ಆದುದರಿಂದ ಧರ್ಮಸಿದ್ಧಿಗಾಗಿ ನಾನು ಅರಣ್ಯಕ್ಕೇ ಹೋಗುತ್ತೇನೆ.

ತತ್ರ ಮೇಧ್ಯೇಷ್ವರಣ್ಯೇಷು ನ್ಯಸ್ತದಣ್ಡೋ ಜಿತೇನ್ದ್ರಿಯಃ ।
ಧರ್ಮಮಾರಾಧಯಿಷ್ಯಾಮಿ ಮುನಿರ್ಮೂಲಫಲಾಶನಃ ॥೧೭॥

ಪವಿತ್ರವಾದ ಆ ಅರಣ್ಯಸ್ಥಳಗಳಲ್ಲಿ ಹಿಂಸೆಯನ್ನು ಸರ್ವಥಾ ತ್ಯಜಿಸಿ ಜಿತೇಂದ್ರಿಯನಾಗಿದ್ದುಕೊಂಡು ಕಂದ-ಮೂಲ-ಫಲಗಳನ್ನೇ ತಿನ್ನುತ್ತಾ, ಮುನಿವೃತ್ತಿಯನ್ನೇ ಆಶ್ರಯಿಸಿ ಧರ್ಮವನ್ನೇ ಆರಾಧಿಸುತ್ತೇನೆ. (ಧರ್ಮ ಸಿದ್ಧಿಗಾಗಿ ಪ್ರಯತ್ನಿಸುತ್ತೇನೆ.")

ಭೀಷ್ಮನು ಸಮಾಧಾನವನ್ನು ಹೇಳುತ್ತಾನೆ :

"ಯುಧಿಷ್ಠಿರ! ನಿನ್ನ ಬುದ್ಧಿಯು ಕೇವಲ ದಯಾಪೂರ್ಣವಾಗಿರುವುದೆಂಬುದನ್ನು ನಾನು ತಿಳಿದಿರುತ್ತೇನೆ. ನಿಜ! ಸಂಪೂರ್ಣವಾಗಿ ದಯಾರಸಪೂರ್ಣನಾಗಿರುವವನಿಂದ ರಾಜ್ಯಶಾಸನಮಾಡಲು ಸಾಧ್ಯವಾಗುವುದಿಲ್ಲ. **ನ ಚ ಶುದ್ಧಾನೃಶಂಸ್ಯೇನ ಶಕ್ಯಂ ರಾಜ್ಯಮುಪಾಸಿತುಮ್ ।** ಆದರೆ ನೀನಿದನ್ನು ತಪ್ಪಿಸಿಕೊಳ್ಳುವಂತೆಯೂ ಇಲ್ಲ. ರಾಜವಂಶದಲ್ಲಿ ಹುಟ್ಟಿ ಧರ್ಮದಿಂದ ನೀನು ರಾಜ್ಯವನ್ನಾಳದೇ ಕಾಡಿಗೆ ಹೋದರೆ ನಿನ್ನನ್ನು ಎಲ್ಲರೂ ತೆಗಳುತ್ತಾರೆ.

ಅಪಿ ತು ತ್ವಾಂ ಮೃದುಪ್ರಜ್ಞಮತ್ಯಾರ್ಯಮತಿಧಾರ್ಮಿಕಮ್ ।
ಕ್ಲೀಬಂ ಧರ್ಮಘೃಣಾಯುಕ್ತಂ ನ ಲೋಕೋ ಬಹು ಮನ್ಯತೇ ॥

ನಿನ್ನ ಬುದ್ಧಿಯು ಅತ್ಯಂತ ಮೃದುವಾಗಿದ್ದರೂ, ನೀನು ಮಹಾ ಸತ್ಪುರುಷನಾಗಿದ್ದರೂ, ಅತ್ಯಂತ ಧರ್ಮಾತ್ಮನಾಗಿದ್ದರೂ, ಅತ್ಯಂತ ದಯಾ-ಧರ್ಮಪರನಾಗಿದ್ದರೂ–ರಾಜನಿಗೆ ಇರಬೇಕಾದ ಸ್ವಭಾವಕ್ಕೆ ಈ ನಿನ್ನ ಸ್ವಭಾವವು ಸಂಪೂರ್ಣವಾಗಿ ವಿರುದ್ಧವಾಗಿರುವುದರಿಂದ–ಲೋಕವು ನಿನ್ನನ್ನು ನಪುಂಸಕನೆಂದೇ ಭಾವಿಸುತ್ತದೆ. ನಿನ್ನನ್ನು ಪ್ರಜೆಗಳು ಗೌರವಿಸುವುದಿಲ್ಲ.

ನಿನ್ನ ತಾತ-ಮುತ್ತಾತಂದಿರಿಗೆ ಸಮುಚಿತವಾಗಿದ್ದ ಆಚಾರ-ವ್ಯವಹಾರಗಳನ್ನೇ ನೀನೂ ಅಪೇಕ್ಷಿಸಬೇಕಾಗಿದೆ. ನೀನು ಹೇಗೆ ಜೀವನನಿರ್ವಹಣೆಯನ್ನು ಮಾಡುವೆಯೆಂದು ಅಪೇಕ್ಷಿಸಿರುವೆಯೋ–ಅದು ನಿನ್ನ ಪೂರ್ವ ರಾಜರ ವೃತ್ತಿಯಾಗಿರಲಿಲ್ಲ. ಆದರೆ ವ್ಯಾಕುಲತೆಯಿಂದ ಹುಟ್ಟಿದ ದಯಾರಸದಲ್ಲಿ ಮುಳುಗಿರುವ ನೀನು ಪ್ರಜಾಪಾಲನದಿಂದ ಸುಲಭವಾಗಿ ಪ್ರಾಪ್ತವಾಗುವ ಧರ್ಮಫಲವನ್ನು ಖಂಡಿತವಾಗಿಯೂ ಪಡೆದುಕೊಳ್ಳಲಾರೆ. (ಕ್ಷತ್ರಿಯನಾದ ನಿನಗೆ ಪ್ರಜಾಪಾಲನದಿಂದ ಅತಿಸುಲಭವಾಗಿ ಧರ್ಮವು

ಸಿದ್ಧಿಸುವುದೇ ಹೊರತು ವ್ಯಾಕುಲಮೂಲವಾಗಿರುವ ದಯಾರಸವನ್ನು ತುಂಬಿಕೊಂಡು ಕಾಡಿಗೆ ಹೋಗುವುದರಿಂದ ಧರ್ಮದ ಸಿದ್ಧಿಯಾಗುವುದಿಲ್ಲ.)

ನ ಹ್ಯೇತಾಮಾಶಿಷಂ ಪಾಣ್ಡುರ್ನ ಚ ಕುನ್ತೀ ತ್ವಯಾಚತ ।
ತಥೈತತ್ಪ್ರಜ್ಞಯಾ ತಾತ ಯಥಾಚರಸಿ ಮೇಧಯಾ ॥೨೨॥

ಸ್ವಂತ ಪ್ರಜ್ಞೆಯಿಂದಲೂ ಮತ್ತು ಮೇಧಾಶಕ್ತಿಯಿಂದಲೂ ವಿವೇಚಿಸಿ ನೀನು ಯಾವುದನ್ನು ಆಚರಿಸಲು ಹೊರಟಿರುವೆಯೋ–ಇದನ್ನು ನಿನ್ನ ತಂದೆಯಾದ ಪಾಂಡುವಾಗಲೀ–ತಾಯಿಯಾದ ಕುಂತಿಯಾಗಲೀ ಹಾರೈಸಿರಲಿಲ್ಲ. (ತಂದೆ-ತಾಯಿಗಳ ಅಭಿಪ್ರಾಯಕ್ಕೂ ವಿರುದ್ಧವಾದ ಮತ್ತು ವರ್ಣಾಶ್ರಮಧರ್ಮಗಳಿಗೂ ಸಲ್ಲದ ಕಾರ್ಯವನ್ನೇ ನೀನೀಗ ಮಾಡಲು ಇಚ್ಛಿಸಿರುವೆ.)

ಶೌರ್ಯಂ ಬಲಂ ಚ ಸತ್ಯಂ ಚ ಪಿತಾ ತವ ಸದಾಬ್ರವೀತ್ ।
ಮಾಹಾತ್ಮ್ಯಂ ಚ ಮಹೌದಾರ್ಯಂ ಭವತಃ ಕುನ್ತ್ಯಯಾಚತ ॥೨೩॥

ನಿನ್ನ ತಂದೆಯಾದ ಪಾಂಡುವು ನಿನ್ನ ವಿಷಯವಾಗಿ ಹೇಳಿಕೊಳ್ಳುತ್ತಿದ್ದುದೇನೆಂದರೆ : 'ನನ್ನ ಮಗನು ಶೂರನಾಗಬೇಕು; ಬಲಿಷ್ಠನಾಗಬೇಕು ಸತ್ಯನಿಷ್ಠನಾಗಿರಬೇಕು'–ಎಂದು. ನಿನ್ನ ತಾಯಿಯಾದ ಕುಂತಿಯು ಆಶಿಸುತ್ತಿದ್ದುದೇನೆಂದರೆ : 'ನನ್ನ ಮಗನು ಮಹಾತ್ಮನಾಗಬೇಕು–ಮಹೋದಾರಿಯಾಗಬೇಕು'–ಎಂದು. ಅವರಿಬ್ಬರ ಅಭಿಪ್ರಾಯಕ್ಕೂ ವಿರುದ್ಧವಾಗಿಯೇ ನಿನ್ನ ಈಗಿನ ವರ್ತನೆಯಿದೆ.

ನಿತ್ಯಂ ಸ್ವಾಹಾ ಸ್ವಧಾ ನಿತ್ಯಂ ಚೋಭೇ ಮಾನುಷ ದೈವತೇ ।
ಪುತ್ರೇಷ್ವಾಶಾಸತೇ ನಿತ್ಯಂ ಪಿತರೋ ದೈವತಾನಿ ಚ ॥೨೪॥

ಪಿತೃಗಳು ಪುತ್ರರಲ್ಲಿ ನಿತ್ಯವೂ ಸ್ವಾಹಾ-ಸ್ವಧಾಶೀಲತೆಯನ್ನೂ, ಮಾನುಷ-ದೈವತಕಾರ್ಯಗಳನ್ನೂ ಹಾರೈಸುತ್ತಾರೆ. ದೇವತೆಗಳೂ ಇದನ್ನೇ ಅಪೇಕ್ಷಿಸುತ್ತಾರೆ. (ನಿತ್ಯವೂ ಯಜ್ಞ ಮತ್ತು ಶ್ರಾದ್ಧ–ಈ ಎರಡು ಕರ್ಮಗಳೂ ಕ್ರಮವಾಗಿ ದೇವತೆಗಳಿಗೂ ಮತ್ತು ಪಿತೃಗಳಿಗೂ ಆನಂದವನ್ನುಂಟು ಮಾಡತಕ್ಕುವುಗಳಾಗಿವೆ. ಆ ಎರಡು ಕರ್ಮಗಳನ್ನೂ ಪಿತೃಗಳೂ ಮತ್ತು ದೇವತೆಗಳೂ ಸುಪುತ್ರರಿಂದ ಅಪೇಕ್ಷಿಸುತ್ತಾರೆ.)

ದಾನಮಧ್ಯಯನಂ ಯಜ್ಞಂ ಪ್ರಜಾನಾಂ ಪರಿಪಾಲನಮ್ ।
ಧರ್ಮಮೇತದಧರ್ಮಂ ವಾ ಜನ್ಮನೈವಾಭ್ಯಜಾಯಥಾಃ ॥೨೫॥

ದಾನಮಾಡುವುದು, ವೇದಾಧ್ಯಯನಮಾಡುವುದು, ಯಜ್ಞಮಾಡುವುದು ಮತ್ತು ಪ್ರಜೆಗಳ ಪರಿಪಾಲನೆ–ಇವಿಷ್ಟು ಕರ್ಮಗಳೂ ನಿನಗೆ ಜನ್ಮದಿಂದಲೇ ನಿನ್ನೊಡನೆ ಹುಟ್ಟಿಬಂದ ಕರ್ಮಗಳಾಗಿವೆ. ಪ್ರಜಾಪಾಲನವು ಅಧರ್ಮವೆಂದು ನೀನು ಭಾವಿಸಿದರೂ ಅದು ನಿನಗೆ ಧರ್ಮವೇ ಆಗಿದೆ. ಕ್ಷತ್ರಿಯನಾಗಿ ಹುಟ್ಟಿರುವ ನೀನು ಈ ಧರ್ಮಗಳನ್ನು ಬಿಡುವಂತಿಲ್ಲ. ಅಧರ್ಮವೆಂದು ಭಾವಿಸಿ ಈ ಧರ್ಮಗಳನ್ನು ಬಿಡುವುದೇ ಅಧರ್ಮವಾಗುತ್ತದೆ.

ಕಾಲೇ ಧುರಿ ಚ ಯುಕ್ತಾನಾಂ ವಹತಾಂ ಭಾರಮಾಹಿತಮ್ ।
ಸೀದತಾಮಪಿ ಕೌನ್ತೇಯ ನ ಕೀರ್ತಿರವಸೀದತಿ ॥೨೬॥

ಸಮಯದಲ್ಲಿ ನೊಗಕ್ಕೆ ಕಟ್ಟಿರುವ ಭಾರವನ್ನು ವಹಿಸಿರುವ ಎತ್ತುಗಳ ಮೇಲೆ ಮತ್ತಷ್ಟು ಭಾರವನ್ನು ಹಾಕಿದರೆ ಅವು ತತ್ತರಿಸಿ ಕೆಳಗೆ ಬೀಳಬಹುದು. ಆದರೆ ಅವುಗಳ ಕೀರ್ತಿಯು ಮಾತ್ರ ಹಾಳಾಗುವುದಿಲ್ಲ. ಅದರಂತೆ ಇದುವರೆಗೂ ಯುದ್ಧದ ಹೊರೆಯನ್ನು ಹೊತ್ತಿದ್ದ ನಿನಗೆ ರಾಜ್ಯದ ಭಾರವನ್ನು ವಹಿಸಲು ಕಷ್ಟವಾಗಬಹುದು. ಇದರಿಂದ ನೀನು ತತ್ತರಿಸಿ ಮುಗ್ಗರಿಸಲೂಬಹುದು. ಆದರೂ ಇದರಿಂದ ನಿನ್ನ ಕೀರ್ತಿಗೆ ಕುಂದಿಲ್ಲ. ಇದಕ್ಕೆ ಬದಲಾಗಿ ರಾಜ್ಯದ ಭಾರವನ್ನೇ ಹೊರಲು ನಿರಾಕರಿಸಿದರೆ ನಿನಗೆ ನಿಂದನೆಯು ತಪ್ಪಿದ್ದಲ್ಲ.

ಸಮನ್ತತೋ ವಿನಯತೋ ವಹತ್ಯಸ್ಖಲಿತೋ ಹಿ ಯಃ ।
ನಿರ್ದೋಷಃ ಕರ್ಮವಚನಾತ್ಸಿದ್ಧಿಃ ಕರ್ಮಣ ಏವ ಸಾ ॥೨೭॥

ಯಾವ ಮನುಷ್ಯನು ಎಲ್ಲ ಕಡೆಗಳಿಂದಲೂ ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಸ್ವಾಧೀನಪಡಿಸಿಕೊಂಡು ತನ್ನ ಮೇಲಿರುವ ರಾಜ್ಯ ಭಾರವನ್ನು–ಯಾವುದರಲ್ಲಿಯೇ ಆಗಲಿ ಸ್ವಲ್ಪವಾದರೂ ಸ್ಖಾಲಿತ್ಯವಿಲ್ಲದಂತೆ ಧರಿಸುತ್ತಾನೆಯೋ-ಅವನು ನಿರ್ದೋಷಿಯಾಗಿರುತ್ತಾನೆ. ಅಂತಹವನನ್ನು ಯಾವ ದೋಷವೂ ಸ್ಪರ್ಶಿಸುವುದಿಲ್ಲ. ಏಕೆಂದರೆ ಶಾಸ್ತ್ರದಲ್ಲಿ ಕರ್ಮವನ್ನು

ಮಾಡಬೇಕೆಂದು ಹೇಳಿದೆ. ರಾಜ್ಯವನ್ನು ಭರಿಸುವ ಕರ್ಮವನ್ನು ಮಾಡುವುದರಿಂದಲೇ ಅರಣ್ಯಕ್ಕೆ ಹೋಗಿ ನೀನು ಸಾಧಿಸಬೇಕೆಂದಿರುವ ಆ ಧರ್ಮವೂ ಸಿದ್ಧಿಸುತ್ತದೆ.

ನೈಕಾನ್ತವಿನಿಪಾತೇನ ವಿಚಚಾರೇಹ ಕಶ್ಚನ ।
ಧರ್ಮೀ ಗೃಹೀ ವಾ ರಾಜಾ ವಾ ಬ್ರಹ್ಮಚಾರೀ ಯಥಾ ಪುನಃ ॥೨೮॥

ಸಂಪೂರ್ಣವಾಗಿ ಧರ್ಮದಲ್ಲಿಯೇ ನಿಷ್ಠೆಯುಳ್ಳವನೇ ಆಗಲೀ ; ಗೃಹಸ್ಥನೇ ಆಗಲೀ ; ರಾಜನೇ ಆಗಲೀ ; ಬ್ರಹ್ಮಚಾರಿಯೇ ಆಗಲೀ–ತಾನು ಮಾಡಬೇಕಾದ ಕರ್ಮಗಳನ್ನು ಪೂರ್ಣರೂಪದಿಂದ ಮಾಡಲು ಸಾಧ್ಯವಾಗುವುದಿಲ್ಲ. ಧರ್ಮಕಾರ್ಯಗಳಲ್ಲಿ ಯಾವುದಾದರೂ ನ್ಯೂನತೆಗಳು ಇದ್ದೇ ಇರುತ್ತವೆ. ಧರ್ಮದ ಗತಿಯು ಅತಿಸೂಕ್ಷ್ಮವಾದುದರಿಂದ ಅದನ್ನು ಪೂರ್ಣರೂಪದಲ್ಲಿ ಆಚರಿಸುವುದು ಎಂತಹವನಿಗೇ ಆದರೂ ಬಹಳ ಕಷ್ಟವೇ ಸರಿ.

ಅಲ್ಪಂ ಹಿ ಸಾರಭೂಯಿಷ್ಠಂ ಯತ್ಕರ್ಮೋದಾರಮೇವ ತತ್ ।
ಕೃತಮೇವಾಕೃತಾಚ್ಛ್ರೇಯೋ ನ ಪಾಪೀಯೋಽಸ್ತ್ಯಕರ್ಮಣಃ ॥೨೯॥

ಕಾರ್ಯವು ಅಲ್ಪವಾಗಿದ್ದರೂ ಸಾರಭೂಯಿಷ್ಠವಾಗಿದ್ದರೆ ಅದು ಮಹಾಕಾರ್ಯವೆಂದೇ ಹೇಳಿಸಿಕೊಳ್ಳುತ್ತದೆ. ಕರ್ಮವನ್ನು ಮಾಡದೇ ಇರುವುದಕ್ಕಿಂತಲೂ ಕರ್ಮಮಾಡುವುದು ಶ್ರೇಯಸ್ಕರ. ಏಕೆಂದರೆ : ಕರ್ಮವನ್ನೇ ಮಾಡದಿರುವವನಷ್ಟು ಪಾಪಿಷ್ಠನು ಬೇರೊಬ್ಬನಿಲ್ಲ. ಆದುದರಿಂದ ಕರ್ಮಗಳನ್ನೆಲ್ಲಾ ಪರಿತ್ಯಜಿಸಿ ನೀನು ಕಾಡಿಗೆ ಹೋಗುವುದು ಸೂಕ್ತವಲ್ಲ.

ಯದಾ ಕುಲೀನೋ ಧರ್ಮಜ್ಞಃ ಪ್ರಾಪ್ನೋತ್ಯೈಶ್ವರ್ಯಮುತ್ತಮಮ್ ।
ಯೋಗಕ್ಷೇಮಸ್ತದಾ ರಾಜ್ಞಃ ಕುಶಲಾಯೈವ ಕಲ್ಪತೇ ॥೩೦॥

ಯಾವಾಗ ಕುಲೀನನೂ, ಧರ್ಮಜ್ಞನೂ ಆದ ಪುರುಷನು ಐಶ್ವರ್ಯವನ್ನು (ರಾಜ್ಯಾಧಿಕಾರವನ್ನು) ವಹಿಸಿಕೊಳ್ಳುವನೋ ಆಗ ಆ ರಾಜನ ಯೋಗ-ಕ್ಷೇಮಗಳು ರಾಜ್ಯದ ಒಳ್ಳೆಯದಕ್ಕೇ ಆಗುತ್ತವೆ.

ದಾನೇನಾನ್ಯಂ ಬಲೇನಾನ್ಯಮನ್ಯಂ ಸೂನೃತಯಾ ಗಿರಾ ।
ಸರ್ವತಃ ಪ್ರತಿಗೃಹ್ಣೀಯಾದ್ರಾಜ್ಯಂ ಪ್ರಾಪ್ಯೇಹ ಧಾರ್ಮಿಕಃ ॥೩೧॥

ಧರ್ಮಾತ್ಮನಾದ ರಾಜನು ರಾಜ್ಯಭಾರವನ್ನು ವಹಿಸಿಕೊಂಡನಂತರ ಕೆಲವರನ್ನು ದಾನದಿಂದಲೂ, ಕೆಲವರನ್ನು ಬಲದಿಂದಲೂ, ಕೆಲವರನ್ನು ಸುಮಧುರವಾದ ಮಾತುಗಳಿಂದಲೂ ಎಲ್ಲ ಕಡೆಗಳಿಂದಲೂ ತನ್ನ ಅಧೀನ ರನ್ನಾಗಿ ಮಾಡಿಕೊಳ್ಳಬೇಕು.

ಯಂ ಹಿ ವೈದ್ಯಾಃ ಕುಲೇ ಜಾತಾ ಹ್ಯವೃತ್ತಿಭಯಪೀಡಿತಾಃ ।
ಪ್ರಾಪ್ಯ ತೃಪ್ತಾಃ ಪ್ರತಿಷ್ಠನ್ತಿ ಧರ್ಮಃ ಕೋಽಭ್ಯಧಿಕಸ್ತತಃ ॥೩೨॥

ಜೀವನನಿರ್ವಹಣೆಗೆ ಯಾವ ಉಪಾಯವೂ ಇಲ್ಲದೇ ಭಯಪೀಡಿತ ರಾದ, ಸತ್ಕುಲಪ್ರಸೂತರಾದ ವಿದ್ವಾಂಸರು ಯಾವ ರಾಜನ ಆಶ್ರಯವನ್ನು ಹೊಂದಿದನಂತರ ಸಂತುಷ್ಟರಾಗುತ್ತಾರೆಯೋ–ಅಂತಹ ರಾಜನ ಧರ್ಮ ಕ್ಕಿಂತಲೂ ಅಧಿಕವಾದ ಬೇರೆ ಯಾವ ಧರ್ಮವಿದೆ? (ಧರ್ಮ ಎಂದ ರೇನು?–ಅರಣ್ಯಕ್ಕೆ ಹೋಗಿ ನಿಷ್ಕರ್ಮನಾಗಿರುವುದು ರಾಜೋಚಿತವಾದ ಧರ್ಮವಲ್ಲ. ರಾಜನು ನಿಷ್ಕರ್ಮನಾಗಿದ್ದರೆ ಅವನು ಪಾಪಿಷ್ಠನಾಗುತ್ತಾನೆ. ರಾಜನಾದವನು ಅಲ್ಪವಾದ ಕಾರ್ಯದಿಂದಲೇ ಮಹಾಧರ್ಮವನ್ನು ಗಳಿಸಬಹುದು. ಸತ್ಕುಲಪ್ರಸೂತರಾದ ವಿದ್ವಾಂಸರು ಜೀವನಕ್ಕೆ ನೆಲೆಯಿಲ್ಲದೇ ಅಲೆದಾಡುತ್ತಿರುತ್ತಾರೆ. ಅಂತಹ ವಿದ್ವಾಂಸರನ್ನು ಕರೆಯಿಸಿ ಅವರಿಗೆ ಆಶ್ರಯವನ್ನಿತ್ತು ರಕ್ಷಿಸುವುದು ರಾಜನ ಧರ್ಮ. ಆ ಕಾರ್ಯದಿಂದ ವಿದ್ವಾಂಸರು ತೃಪ್ತಿಹೊಂದಿದರೆ ಧರ್ಮವು ಸಿದ್ಧಿಸಿದಂತೆ. ಇಲ್ಲಿ ಕಾರ್ಯವೇನೋ ಅಲ್ಪವಾಗಿರಬಹುದು. ಆದರೆ ಫಲವು ಅಪಾರ.)”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ತಾತ ಪರಮಂ ಸ್ವರ್ಗ್ಯಂ ಕಾ ತತಃ ಪ್ರೀತಿರುತ್ತಮಾ ।
ಕಿಂ ತತಃ ಪರಮೈಶ್ವರ್ಯಂ ಬ್ರೂಹಿ ಮೇ ಯದಿ ಪಶ್ಯಸಿ ॥೩೩॥

“ಪಿತಾಮಹ! ಸ್ವರ್ಗಪ್ರಾಪ್ತಿಗೆ ಶ್ರೇಷ್ಠವಾದ ಸಾಧನವು ಯಾವುದು? ಅದರಿಂದ ಎಂತಹ ಪ್ರಸನ್ನತೆಯುಂಟಾಗುತ್ತದೆ? ಅದಕ್ಕಿಂತಲೂ ಅತಿಶಯ ವಾದ ಪರಮೈಶ್ವರ್ಯವೆಂಬುದು ಯಾವುದು?–ಈ ವಿಷಯಗಳೇನಾದರೂ ನಿನಗೆ ತಿಳಿದಿದ್ದರೆ ನನಗೂ ಹೇಳು.”

ಯಸ್ಮಿನ್ಭಯಾರ್ದಿತಃ ಸಮ್ಯಕ್ಕ್ಷೇಮಂ ವಿನ್ದತ್ಯಪಿ ಕ್ಷಣಮ್ ।
ಸ ಸ್ವರ್ಗಜಿತ್ತಮೋಽಸ್ಮಾಕಂ ಸತ್ಯಮೇತದ್ಬ್ರವೀಮಿ ತೇ ॥೩೪॥

"ಯುಧಿಷ್ಠಿರ! ಭಯಭೀತನಾಗಿರುವ ಮನುಷ್ಯನೊಬ್ಬನು ಅಭಯವನ್ನು ಕೇಳಿದಾಗ, ರಾಜನ ಅಭಯಪ್ರದಾನದಿಂದಾಗಿ ಅಗಂತುಕನು ಒಂದು ಕ್ಷಣವಾದರೂ ಸಮಾಧಾನಹೊಂದಿದರೆ ಆ ರಾಜನು ಸ್ವರ್ಗವನ್ನು ಜಯಿಸಿದವರಲ್ಲಿ ಅತ್ಯಂತಶ್ರೇಷ್ಠನಾಗುತ್ತಾನೆ. ಈ ವಿಷಯವನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ.

ತ್ವಮೇವ ಪ್ರೀತಿಮಾಂಸ್ತಸ್ಮಾತ್ಕುರೂಣಾಂ ಕುರುಸತ್ತಮ ।
ಭವ ರಾಜಾ ಜಯ ಸ್ವರ್ಗಂ ಸತೋ ರಕ್ಷಾಸತೋ ಜಹಿ ॥೩೫॥

ಕುರುಸತ್ತಮನೇ! ಕುರುದೇಶೀಯರಿಗೆ ಅತ್ಯಂತಪ್ರೀತಿಪಾತ್ರನಾದವನು ನೀನೇ ಆಗಿರುವೆ. ಆದುದರಿಂದ ಕುರುಗಳಿಗೆ ನೀನೇ ರಾಜನಾಗು. ಭಯವನ್ನುಂಟುಮಾಡುವ ದುಷ್ಟರನ್ನು ನಿಗ್ರಹಿಸಿ, ಸತ್ಪುರುಷರನ್ನು ರಕ್ಷಿಸು. ಈ ಮೂಲಕವಾಗಿ ನೀನು ಸ್ವರ್ಗವನ್ನು ಜಯಿಸು.

ಪ್ರಾಣಿಗಳು ಪರ್ಜನ್ಯನನ್ನು ಆಶ್ರಯಿಸಿರುವಂತೆ–ಪಕ್ಷಿಗಳು ಸ್ವಾದಿಷ್ಟವಾದ ಹಣ್ಣುಗಳಿರುವ ವೃಕ್ಷಗಳನ್ನಾಶ್ರಯಿಸಿರುವಂತೆ–ಸುಹೃದರು ಸತ್ಪುರುಷರೊಡನೆ ನಿನ್ನನ್ನೇ ಆಶ್ರಯಿಸಿಕೊಂಡು ಜೀವನನಿರ್ವಹಣೆಮಾಡಲಿ. ಭಯರಹಿತನಾಗಿರುವ, ಶೂರನಾದ, ಪ್ರಹಾರಕುಶಲನಾದ, ದಯಾಳುವಾದ, ಜಿತೇಂದ್ರಿಯನಾದ, ಪ್ರಜಾವತ್ಸಲನಾದ, ದಾನಶೀಲನಾದ ರಾಜನ ಆಶ್ರಯವನ್ನು ಪಡೆದು ಪ್ರಜೆಗಳು ತಮ್ಮ ಜೀವನನಿರ್ಹಹಣೆಯನ್ನು ಮಾಡುತ್ತಾರೆ."

೭೫ನೆಯ ಅಧ್ಯಾಯವು ಮುಗಿಯಿತು.

೭೬ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಉತ್ತಮಾಧಮಬ್ರಾಹ್ಮಣರೊಡನೆ ರಾಜನ ವ್ಯವಹಾರನಿರ್ವಹಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸ್ವಕರ್ಮಣ್ಯಪರೇ ಯುಕ್ತಾಸ್ತಥೈವಾನ್ಯೇ ವಿಕರ್ಮಣಿ ।
ತೇಷಾಂ ವಿಶೇಷಮಾಚಕ್ಷ್ವ ಬ್ರಾಹ್ಮಣಾನಾಂ ಪಿತಾಮಹ ॥೧॥

"ಪಿತಾಮಹ! ಕೆಲವು ಬ್ರಾಹ್ಮಣರು ತಮ್ಮ ವರ್ಣೋಚಿತವಾದ ಕರ್ಮಗಳಲ್ಲಿ ನಿರತರಾಗಿರುತ್ತಾರೆ. ಕೆಲವು ಬ್ರಾಹ್ಮಣರು ತಮ್ಮ ವರ್ಣಧರ್ಮಕ್ಕೆ ವಿರುದ್ಧವಾದ ಕರ್ಮಗಳನ್ನೇ ಮಾಡುತ್ತಿರುತ್ತಾರೆ. ಸ್ವಕರ್ಮ ನಿರತರಾಗಿರತಕ್ಕವರು, ಸ್ವಕರ್ಮಕ್ಕೆ ವಿಪರೀತವಾದ ಕರ್ಮಮಾಡುತ್ತಿರುವವರು–ಈ ಬ್ರಾಹ್ಮಣರಲ್ಲಿ ಯಾವ ವಿಧವಾದ ಅಂತರವಿರುವುದೆಂಬುದನ್ನು ಹೇಳು."

ವಿದ್ಯಾಲಕ್ಷಣಸಮ್ಪನ್ನಾಃ ಸರ್ವತ್ರ ಸಮದರ್ಶಿನಃ ।
ಏತೇ ಬ್ರಹ್ಮಸಮಾ ರಾಜನ್ಬ್ರಾಹ್ಮಣಾಃ ಪರಿಕೀರ್ತಿತಾಃ ॥೨॥

"ಧರ್ಮಜ! ಬ್ರಾಹ್ಮಣರಲ್ಲಿ ವಿದ್ಯಾ-ವಿನಯಸಂಪನ್ನರೂ, ಎಲ್ಲರಲ್ಲಿಯೂ ಸಮಾನವಾದ ದೃಷ್ಟಿಯಿರುವವರೂ–ಬ್ರಹ್ಮನಿಗೆ ಸಮಾನರೆಂದು ಹೇಳಲ್ಪಟ್ಟಿರುತ್ತಾರೆ.

ಋಗ್ಯಜುಃಸಾಮಸಮ್ಪನ್ನಾಃ ಸ್ವೇಷು ಕರ್ಮಸ್ವವಸ್ಥಿತಾಃ ।
ಏತೇ ದೇವಸಮಾ ರಾಜನ್ಬ್ರಾಹ್ಮಣಾನಾಂ ಭವನ್ತ್ಯುತ ॥೩॥

ಋಗ್ಯಜುಃ-ಸಾಮವೇದಗಳನ್ನು ಅಧ್ಯಯನಮಾಡಿರತಕ್ಕವರೂ, ಸ್ವಕರ್ಮಾನುಷ್ಠಾನಪರರಾಗಿರತಕ್ಕವರೂ–ಬ್ರಾಹ್ಮಣರಲ್ಲಿ ದೇವತೆಗಳಿಗೆ ಸಮಾನರು ಎನಿಸಿಕೊಳ್ಳುತ್ತಾರೆ.

ಜನ್ಮಕರ್ಮವಿಹೀನಾ ಯೇ ಕದರ್ಯಾ ಬ್ರಹ್ಮಬನ್ಧವಃ ।
ಏತೇ ಶೂದ್ರಸಮಾ ರಾಜನ್ಬ್ರಾಹ್ಮಣಾನಾಂ ಭವನ್ತ್ಯುತ ॥೪॥

ಯಾರು ತಮ್ಮ ವರ್ಣೋಚಿತವಾದ ಕರ್ಮಗಳಿಂದ ವಿಹೀನರಾಗಿರುವರೋ, ಕುತ್ಸಿತವಾದ ಕರ್ಮಗಳನ್ನು ಮಾಡುತ್ತಾ ಬ್ರಹ್ಮಬಂಧುಗಳಾಗಿರುವರೋ (ಹೆಸರಿಗೆ ಮಾತ್ರವೇ ಬ್ರಾಹ್ಮಣರಾಗಿರುವರೋ)–ಅವರು ಬ್ರಾಹ್ಮಣರಲ್ಲಿ ಶೂದ್ರರಿಗೆ ಸಮಾನರಾದವರೆಂದೂ ಹೇಳಲ್ಪಡುತ್ತಾರೆ.

ಅಶ್ರೋತ್ರಿಯಾಃ ಸರ್ವ ಏವ ಸರ್ವೇ ಚಾನಾಹಿತಾಗ್ನಯಃ ।
ತಾನ್ಸರ್ವಾನ್ಧಾರ್ಮಿಕೋ ರಾಜಾ ಬಲಿಂ ವಿಷ್ಟಿಂ ಚ ಕಾರಯೇತ್ ॥೫॥

ಯಾವ ಬ್ರಾಹ್ಮಣರು ವೇದ-ಶಾಸ್ತ್ರಜ್ಞಾನಗಳಿಂದ ಶೂನ್ಯರಾಗಿರುವರೋ

ಮತ್ತು ಅಗ್ನಿಹೋತ್ರವನ್ನು ಮಾಡುತ್ತಿಲ್ಲವೋ–ಅವರೆಲ್ಲರೂ ಶೂದ್ರಸಮಾನರೇ ಸರಿ. ಧಾರ್ಮಿಕನಾದ ರಾಜನು ಅವರಿಂದ ತೆರಿಗೆಯನ್ನು ತೆಗೆದುಕೊಳ್ಳುವುದಲ್ಲದೇ *ವೇತನವನ್ನೂ ಕೊಡದೇ ಅವರಿಂದ ಸೇವೆಯನ್ನು ಮಾಡಿಸಿಕೊಳ್ಳಬೇಕು.

ಆಹ್ವಾಯಕಾ ದೇವಲಕಾ ನಾಕ್ಷತ್ರಾ ಗ್ರಾಮಯಾಜಕಾಃ ।
ಏತೇ ಬ್ರಾಹ್ಮಣಚಾಣ್ಡಾಲಾ ಮಹಾಪಥಿಕಪಞ್ಚಮಾಃ ॥೬॥

ನ್ಯಾಯಾಲಯಗಳಲ್ಲಿ ವಾದಿ-ಪ್ರತಿವಾದಿಗಳ ಮತ್ತು ಸಾಕ್ಷಿಗಳ ಹೆಸರುಗಳನ್ನು ಕರೆಯುವವರು, ವೇತನವನ್ನು ತೆಗೆದುಕೊಂಡು ದೇವಮಂದಿರಗಳಲ್ಲಿ ಪೂಜೆಯನ್ನು ಮಾಡುವವರು, ನಕ್ಷತ್ರವಿದ್ಯೆಯಿಂದ ಜೀವನವನ್ನು ನಡೆಸುವವರು (ಜ್ಯೌತಿಷಿಕರು), ಗ್ರಾಮದ ಪೌರೋಹಿತ್ಯವನ್ನು ನಡೆಸುವವರು ಮತ್ತು ಸಮುದ್ರಯಾನಮಾಡುವವರು–ಈ ಐವರೂ ಬ್ರಾಹ್ಮಣರಲ್ಲಿ ಚಾಂಡಾಲರೆನಿಸಿಕೊಳ್ಳುತ್ತಾರೆ.

ಋತ್ವಿಕ್ಪುರೋಹಿತೋ ಮನ್ತ್ರೀ ದೂತೋ ವಾರ್ತಾನುಕರ್ಷಕಃ ।
ಏತೇ ಕ್ಷತ್ರಸಮಾ ರಾಜನ್ಬ್ರಾಹ್ಮಣಾನಾಂ ಭವನ್ತ್ಯುತ ॥೭॥

ರಾಜರ ಆರ್ತ್ವಿಜ್ಯವನ್ನು ವಹಿಸುವವರು, ರಾಜಪುರೋಹಿತರು, ಮಂತ್ರಿಗಳು, ರಾಜದೂತರು, ಸಂದೇಶವಾಹಕರು–ಇವರುಗಳನ್ನು ಬ್ರಾಹ್ಮಣರಲ್ಲಿ ಕ್ಷತ್ರಿಯರಿಗೆ ಸಮಾನರಾದವರೆಂದು ಹೇಳುತ್ತಾರೆ.

ಅಶ್ವಾರೋಹಾ ಗಜಾರೋಹಾ ರಥಿನೋಽಥ ಪದಾತಯಃ ।
ಏತೇ ವೈಶ್ಯಸಮಾ ರಾಜನ್ಬ್ರಾಹ್ಮಣಾನಾಂ ಭವನ್ತ್ಯುತ ॥೮॥

ಬ್ರಾಹ್ಮಣರಲ್ಲಿ ಅಶ್ವಾರೋಹಿಗಳೂ, ಗಜಾರೋಹಿಗಳೂ, ರಥಿಗಳೂ ಮತ್ತು ಪದಾತಿಗಳೂ ಆಗಿರುವವರು ವೈಶ್ಯರಿಗೆ ಸಮಾನರಾದವರೆಂದು ಪರಿಗಣಿಸಲ್ಪಟ್ಟಿದ್ದಾರೆ.

---

* ವಿಷ್ಟಿಂ ಎಂಬುದಕ್ಕೆ ವ್ಯಾಖ್ಯಾನಕಾರರು ವಿನಾ ವೇತನಂ ರಾಜಸೇವಾಂ–ಎಂದು ಅರ್ಥಮಾಡಿರುತ್ತಾರೆ.

ಏತೇಭ್ಯೋ ಬಲಿಮಾದದ್ಯಾದ್ಧೀನಕೋಶೋ ಮಹೀಪತಿಃ ।
ಋತೇ ಬ್ರಹ್ಮಸಮೇಭ್ಯಶ್ಚ ದೇವಕಲ್ಪೇಭ್ಯ ಏವ ಚ ॥೯॥

ಬೊಕ್ಕಸದಲ್ಲಿ ಹಣದ ಕೊರತೆಯುಂಟಾದಾಗ ರಾಜನು, ಬ್ರಹ್ಮಸದೃಶರಾದ ಬ್ರಾಹ್ಮಣರನ್ನೂ–ದೇವಸದೃಶರಾದ ಬ್ರಾಹ್ಮಣರನ್ನೂ ಬಿಟ್ಟು ಉಳಿದೆಲ್ಲ ಬ್ರಾಹ್ಮಣರಿಂದಲೂ ತೆರಿಗೆಯನ್ನು ತೆಗೆದುಕೊಳ್ಳಬಹುದು.

ಅಬ್ರಾಹ್ಮಣಾನಾಂ ವಿತ್ತಸ್ಯ ಸ್ವಾಮೀ ರಾಜೇತಿ ವೈದಿಕಮ್ ।
ಬ್ರಾಹ್ಮಣಾನಾಂ ಚ ಯೇ ಕೇಚಿದ್ವಿಕರ್ಮಸ್ಥಾ ಭವನ್ತ್ಯುತ ॥೧೦॥

ರಾಜನು ಬ್ರಾಹ್ಮಣರನ್ನು ಬಿಟ್ಟು ಉಳಿದ ವರ್ಣದವರ ವಿತ್ತಕ್ಕೆ ಸ್ವಾಮಿಯೆಂಬುದು ವೈದಿಕಸಿದ್ಧಾಂತವಾಗಿದೆ. ಬ್ರಾಹ್ಮಣರಲ್ಲಿ ಯಾರು ತಮ್ಮ ವರ್ಣಾಶ್ರಮಧರ್ಮಗಳಿಗೆ ವಿಪರೀತವಾದ ಕರ್ಮಗಳನ್ನು ಮಾಡುವರೋ–ಅಂತಹವರ ಧನವೂ ರಾಜನಿಗೆ ಸೇರಿದ್ದಾಗುವುದು.

ವಿಕರ್ಮಸ್ಥಾಶ್ಚ ನೋಪೇಕ್ಷ್ಯಾ ವಿಪ್ರಾ ರಾಜ್ಞಾ ಕಥಂಚನ ।
ನಿಯಮ್ಯಾಃ ಸಂವಿಭಜ್ಯಾಶ್ಚ ಧರ್ಮಾನುಗ್ರಹಕಾರಣಾತ್ ॥೧೧॥

ರಾಜನು ಯಾವುದೇ ಕಾರಣದಿಂದಲೂ ಧರ್ಮಭ್ರಷ್ಟರಾದ ಬ್ರಾಹ್ಮಣರ ವಿಷಯದಲ್ಲಿ ಉಪೇಕ್ಷೆಮಾಡಬಾರದು. ಧರ್ಮದ ಮೇಲೆ ಅನುಗ್ರಹ ಮಾಡುವ ಕಾರಣದಿಂದ (ಧರ್ಮವನ್ನು ಸಂರಕ್ಷಿಸುವ ಕಾರಣದಿಂದ) ಅವರನ್ನು ದಂಡಿಸಬೇಕು ಮತ್ತು ಅವರನ್ನು ಬ್ರಹ್ಮಕಲ್ಪ-ದೇವಕಲ್ಪಬ್ರಾಹ್ಮಣ ಸಮೂಹದಿಂದ ಪ್ರತ್ಯೇಕಿಸಬೇಕು.

ಯಸ್ಯ ಸ್ಮ ವಿಷಯೇ ರಾಜಂಸ್ತೇನೋ ಭವತಿ ವೈ ದ್ವಿಜಃ ।
ರಾಜ್ಞ ಏವಾಪರಾಧಂ ತಂ ಮನ್ಯನ್ತೇ ತದ್ವಿದೋ ಜನಾಃ ॥೧೨॥

ಯಾವ ರಾಜನ ರಾಜ್ಯದಲ್ಲಿ ಬ್ರಾಹ್ಮಣನು ಕಳ್ಳನಾಗುವನೋ–ಆ ರಾಜ್ಯದ ಪರಿಸ್ಥಿತಿಯನ್ನು ತಿಳಿದಿರುವ ಜನರು, ರಾಜನ ಅಪರಾಧವೇ ಬ್ರಾಹ್ಮಣನು ಕಳ್ಳನಾಗುವುದಕ್ಕೆ ಕಾರಣವೆಂದು ಭಾವಿಸುತ್ತಾರೆ. (ರಾಜನೇ ಅಪರಾಧಿಯೆಂದು ಭಾವಿಸುತ್ತಾರೆ.)

ಅವೃತ್ತ್ಯಾ ಯೋ ಭವೇತ್ಸ್ತೇನೋ ವೇದವಿತ್ಸ್ನಾತಕಸ್ತಥಾ ।
ರಾಜನ್ಸ ರಾಜ್ಞಾ ಭರ್ತವ್ಯ ಇತಿ ವೇದವಿದೋ ವಿದುಃ ॥೧೩॥

ವೇದಗಳನ್ನು ಅಧ್ಯಯನಮಾಡಿರುವ ಅಥವಾ ಸ್ನಾತಕನಾದ ಬ್ರಾಹ್ಮಣನು ಜೀವಿಕೆಗೆ ಅವಕಾಶವಿಲ್ಲದೇ ಕಳ್ಳನಾಗಿದ್ದ ಪಕ್ಷದಲ್ಲಿ–ಅಂತಹವನ ಭರಣ-ಪೋಷಣೆಗಳ ವ್ಯವಸ್ಥೆಯನ್ನು ರಾಜನೇ ಮಾಡಬೇಕೆಂದು ವೇದ ವಿದರು ಹೇಳುತ್ತಾರೆ.

ಸ ಚೇನ್ನೋ ಪರಿವರ್ತೇತ ಕೃತವೃತ್ತೀ ಪರಂತಪ ।
ತತೋ ನಿರ್ವಾಸನೀಯಃ ಸ್ಯಾತ್ತಸ್ಮಾದ್ದೇಶಾತ್ಸಬಾನ್ಧವಃ ॥೧೪॥

ಅಂತಹ ಬ್ರಾಹ್ಮಣನಿಗೆ ಭರಣ-ಪೋಷಣೆಗಳಿಗೆ ವ್ಯವಸ್ಥೆಮಾಡಿ ಕೊಟ್ಟರೂ ಅವನು ಪರಿವರ್ತನೆಯನ್ನು ಹೊಂದದೇ ಹಿಂದಿನಂತೆಯೇ ಚೌರ್ಯವೃತ್ತಿಯನ್ನೇ ಅವಲಂಬಿಸಿದ್ದೇ ಆದರೆ–ಅಂತಹವನನ್ನು ಬಂಧುಗಳ ಸಮೇತನಾಗಿ ದೇಶದಿಂದಲೇ ಹೊರಗಟ್ಟಬೇಕು.”

೭೬ನೆಯ ಅಧ್ಯಾಯವು ಮುಗಿಯಿತು.

೭೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಕೇಕಯರಾಜ ಮತ್ತು ರಾಕ್ಷಸರ ಉಪಾಖ್ಯಾನ : ಕೇಕಯರಾಜನ ಶ್ರೇಷ್ಠತೆ

ಜನಮೇಜಯಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇಷಾಂ ಪ್ರಭವತೇ ರಾಜಾ ವಿತ್ತಸ್ಯ ಭರತರ್ಷಭ ।
ಕಯಾ ಚ ವೃತ್ತ್ಯಾ ವರ್ತೇತ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹ! ರಾಜನಿಗೆ ಯಾರ ಐಶ್ವರ್ಯದ ಮೇಲೆ ಅಧಿಕಾರವಿದೆ? ರಾಜನು ಎಂತಹ ವೃತ್ತಿಯನ್ನು ಅವಲಂಬಿಸಿರಬೇಕು? ಈ ವಿಷಯವನ್ನು ನನಗೆ ಹೇಳು.”

“ಯುಧಿಷ್ಠಿರ! ನಾನು ಈ ಹಿಂದೆ ಹೇಳಿದಂತೆ ಬ್ರಾಹ್ಮಣರ ಸ್ವತ್ತನ್ನು ಬಿಟ್ಟು ಉಳಿದೆಲ್ಲ ವರ್ಣದವರ ಸ್ವತ್ತಿನ ಮೇಲೆ ರಾಜನಿಗೆ ಅಧಿಕಾರವಿರುವು ದೆಂದು ವೈದಿಕಸಿದ್ಧಾಂತವು ಹೇಳುತ್ತದೆ. ಬ್ರಾಹ್ಮಣರಲ್ಲಿಯೂ ಕೂಡ ತಮ್ಮ ವರ್ಣಾಶ್ರಮಧರ್ಮಗಳಿಗೆ ವಿರುದ್ಧವಾಗಿ ವರ್ತಿಸುವವರ (ಭ್ರಷ್ಟರಾದ

ಬ್ರಾಹ್ಮಣರ) ಸ್ವತ್ತಿನ ಮೇಲಿನ ಅಧಿಕಾರವೂ ರಾಜನಿಗಿದೆ. ರಾಜನಾದವನು ಧರ್ಮಭ್ರಷ್ಟರಾದ ಬ್ರಾಹ್ಮಣರನ್ನು ಯಾವುದೇ ಕಾರಣದಿಂದಲೂ ಉಪೇಕ್ಷಿಸಬಾರದು. ಅವರಿಗೆ ಯಥಾನುರೂಪವಾದ ಶಿಕ್ಷೆಯನ್ನು ವಿಧಿಸಿ ಅವರು ಸ್ವಕರ್ಮಾನುಷ್ಠಾನಪರರಾಗುವಂತೆ ಮಾಡಬೇಕಾದುದು ರಾಜನ ಮುಖ್ಯಕರ್ತವ್ಯವಾಗಿರುತ್ತದೆ. ಪ್ರಾಚೀನಕಾಲದಲ್ಲಿ ರಾಜರು ಹೀಗೆ ವ್ಯವಹರಿಸುತ್ತಿದ್ದರೆಂದು ಸತ್ಪುರುಷರು ಹೇಳುತ್ತಾರೆ. ಒಂದು ರಾಜ್ಯದಲ್ಲಿ ಬ್ರಾಹ್ಮಣನು ಕಳ್ಳನಾಗುವುದಕ್ಕೆ ಆ ರಾಜನ ಅಪರಾಧವೇ ಕಾರಣವೆಂದು ತಿಳಿದವರು ಭಾವಿಸುತ್ತಾರೆ.

ಅಭಿಶಸ್ತಮಿವಾತ್ಮಾನಂ ಮನ್ಯನ್ತೇ ಯೇನ ಕರ್ಮಣಾ ।
ತಸ್ಮಾದ್ರಾಜರ್ಷಯಃ ಸರ್ವೇ ಬ್ರಾಹ್ಮಣಾನನ್ವಪಾಲಯನ್ ॥೫॥

ತನ್ನ ರಾಜ್ಯದಲ್ಲಿ ಬ್ರಾಹ್ಮಣನೇನಾದರೂ ಕಳ್ಳತನಮಾಡಬೇಕಾದ ಪರಿಸ್ಥಿತಿಯೊದಗಿಬಿಟ್ಟಿತೆಂದರೆ, ಆಗಿನ ಕಾಲದ ರಾಜರು ತಾವು ಕಲಂಕಿತ ರೆಂದೇ ಭಾವಿಸುತ್ತಿದ್ದರು. ಆದುದರಿಂದ ರಾಜರ್ಷಿಗಳೆಲ್ಲರೂ ಬ್ರಾಹ್ಮಣರನ್ನು ವಿಶೇಷವಾದ ಎಚ್ಚರಿಕೆಯಿಂದ ಅವರು ಧರ್ಮಭ್ರಷ್ಟರಾಗಲು ಅವಕಾಶ ವಾಗದ ರೀತಿಯಲ್ಲಿ–ಸಂರಕ್ಷಿಸುತ್ತಿದ್ದರು.

ಈ ವಿಷಯದಲ್ಲಿ ರಾಕ್ಷಸನಿಂದ ಸೆಳೆಯಲ್ಪಡುತ್ತಿದ್ದ ಕೇಕಯರಾಜನಿಂದ ಹೇಳಲ್ಪಟ್ಟ ಪುರಾತನವಾದ ಐತಿಹಾಸಿಕವಾದ ಗೀತೆಯನ್ನು ಉದಾಹರಿಸು ತ್ತಾರೆ.

ಅರಣ್ಯದಲ್ಲಿ ಕಠೋರವ್ರತನಿಷ್ಠನಾಗಿ ವೇದಾಧ್ಯಯನಮಾಡುತ್ತಿದ್ದ ಕೇಕಯರಾಜನನ್ನು ಭಯಂಕರನಾದ ರಾಕ್ಷಸನೊಬ್ಬನು ಹಿಡಿದುಕೊಂಡನು. (ರಾಜನ ಶರೀರದಲ್ಲಿ ಆವಿಷ್ಟನಾದನು.) ಒಡನೆಯೇ ರಾಜನು ರಾಕ್ಷಸನೊಡನೆ ಹೇಳಿದನು :

ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪಃ ।
ನಾನಾಹಿತಾಗ್ನಿರ್ನಾಯಜ್ವಾ ಮಾಮಕಾನ್ತರಮಾವಿಶಃ ॥೮॥

"ರಾಕ್ಷಸ! ನನ್ನ ದೇಶದಲ್ಲಿ ಒಬ್ಬ ಕಳ್ಳನೂ ಇಲ್ಲ; ನೀಚನಿಲ್ಲ; ಮದ್ಯಪಾನವನ್ನು ಮಾಡುವವನೂ ಇಲ್ಲ. ಅಗ್ನಿಹೋತ್ರವನ್ನು ಮಾಡದವ

ನಾಗಲೀ, ಯಜ್ಞವನ್ನು ಮಾಡದವನಾಗಲೀ ಇಲ್ಲ. ಹೀಗಿದ್ದರೂ ನೀನು ನನ್ನ ದೇಹವನ್ನು ಪ್ರವೇಶಿಸಿರುವೆ. (ಇಂತಹ ಅನುಪದ್ರವವಾದ ರಾಜ್ಯಕ್ಕೆ ರಾಜನಾಗಿರುವ ನನ್ನೊಳಗೆ ಪ್ರವೇಶಿಸಲು ಅಥವಾ ನನ್ನನ್ನು ಗ್ರಹಣಮಾಡಲು ನಿನಗೆ ಹೇಗೆ ಸಾಧ್ಯವಾಯಿತು?)



ನ ಚ ಮೇ ಬ್ರಾಹ್ಮಣೋಽವಿದ್ವಾನ್ನಾವ್ರತೀ ನಾಪ್ಯಸೋಮಪಃ ।
ನಾನಾಹಿತಾಗ್ನಿರ್ನಾಯಜ್ವಾ ಮಾಮಕಾನ್ತರಮಾವಿಶಃ ॥೯॥

ನನ್ನ ರಾಜ್ಯದಲ್ಲಿ ವಿದ್ವಾಂಸನಲ್ಲದ ಬ್ರಾಹ್ಮಣನಿಲ್ಲ. ಉತ್ತಮವಾದ ವ್ರತಗಳನ್ನು ಅನುಷ್ಠಾನಮಾಡದೇ ಇರುವವನಿಲ್ಲ. ಯಜ್ಞದಲ್ಲಿ ಸೋಮ ಪಾನಮಾಡದೇ ಇರುವವನಿಲ್ಲ. ಆಧಾನಪೂರ್ವಕವಾಗಿ ಸಂಸ್ಕೃತವಾದ ಅಗ್ನಿ

ಯಿಲ್ಲದೇ ಇರುವವನಿಲ್ಲ. ಯಜ್ಞಮಾಡದವನಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ನಾನಾಪ್ರದಕ್ಷಿಣೈರ್ಯಜ್ಞೈರ್ಯಜನ್ತೇ ವಿಷಯೇ ಮಮ ।
ನಾಧೀತೇ ನಾವ್ರತೀ ಕಶ್ಚಿನ್ಮಾಮಕಾನ್ತರಮಾವಿಶಃ ॥೧೦॥

ನನ್ನ ರಾಜ್ಯದಲ್ಲಿ ಬ್ರಾಹ್ಮಣರು ಉತ್ತಮದಕ್ಷಿಣಾಯುಕ್ತವಾದ ನಾನಾವಿಧವಾದ ಯಾಗಗಳಿಂದ ದೇವತೆಗಳನ್ನು ಆರಾಧಿಸುತ್ತಾರೆ. ಬ್ರಹ್ಮ ಚರ್ಯವ್ರತವನ್ನು ಕೈಗೊಳ್ಳದೇ ಯಾವನೊಬ್ಬನೂ ನನ್ನ ದೇಶದಲ್ಲಿ ವೇದಾಧ್ಯಯನವನ್ನು ಮಾಡುವುದಿಲ್ಲ. ಹೀಗಿದ್ದರೂ ನೀನೇಕೆ ನನ್ನ ಶರೀರವನ್ನು ಪ್ರವೇಶಿಸಿರುವೆ?

ಅಧೀಯತೇಽಧ್ಯಾಪಯನ್ತಿ ಯಜನ್ತೇ ಯಾಜಯನ್ತಿ ಚ ।
ದದತಿ ಪ್ರತಿಗೃಹ್ಣನ್ತಿ ಷಟ್ಸು ಕರ್ಮಸ್ವವಸ್ಥಿತಾಃ ॥೧೧॥

ನನ್ನ ರಾಜ್ಯದಲ್ಲಿ ಷಟ್ಕರ್ಮನಿರತರಾಗಿರುವ ಬ್ರಾಹ್ಮಣರು ಅಧ್ಯಯನ ಮಾಡುತ್ತಾರೆ ಮತ್ತು ಶಿಷ್ಯರಿಗೆ ಅಧ್ಯಯನವನ್ನೂ ಮಾಡಿಸುತ್ತಾರೆ. ಯಜ್ಞಮಾಡುತ್ತಾರೆ ಮತ್ತು ಯಜ್ಞವನ್ನೂ ಮಾಡಿಸುತ್ತಾರೆ. ದಾನಗಳನ್ನು ಕೊಡುತ್ತಾರೆ ಮತ್ತು ದಾನಗಳನ್ನೂ ತೆಗೆದುಕೊಳ್ಳುತ್ತಾರೆ.

ಪೂಜಿತಾಃ ಸಂವಿಭಕ್ತಾಶ್ಚ ಮೃದವಃ ಸತ್ಯವಾದಿನಃ ।
ಬ್ರಾಹ್ಮಣಾ ಮೇ ಸ್ವಕರ್ಮಸ್ಥಾ ಮಾಮಕಾನ್ತರಮಾವಿಶಃ ॥೧೨॥

ನನ್ನ ರಾಜ್ಯದಲ್ಲಿ ಮೃದುಸ್ವಭಾವದ, ಸತ್ಯನಿಷ್ಠರಾದ ಬ್ರಾಹ್ಮಣರೆಲ್ಲರೂ ತಮ್ಮ-ತಮ್ಮ ಧರ್ಮಾನುಷ್ಠಾನಗಳಲ್ಲಿ ನಿರತರಾಗಿರುತ್ತಾರೆ. ಅವರ ಜೀವಿಕೆಗೆ ಸಾಕಾಗುವಷ್ಟು ವ್ಯವಸ್ಥೆಮಾಡಲಾಗಿದೆ. ನನ್ನಿಂದವರು ಯಥೋಕ್ತವಾದ ಸಮಯಗಳಲ್ಲಿ ಪೂಜಿಸಲ್ಪಡುತ್ತಿದ್ದಾರೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ನ ಯಾಚನ್ತೇ ಪ್ರಯಚ್ಛನ್ತಿ ಸತ್ಯಧರ್ಮವಿಶಾರದಾಃ ।
ನಾಧ್ಯಾಪಯನ್ತ್ಯಧೀಯನ್ತೇ ಯಜನ್ತೇ ಯಾಜಯನ್ತಿ ನ ॥೧೩॥

ಬ್ರಾಹ್ಮಣಾನ್ಪರಿರಕ್ಷನ್ತಿ ಸಂಗ್ರಾಮೇಷ್ವಪಲಾಯಿನಃ ।
ಕ್ಷತ್ರಿಯಾ ಮೇ ಸ್ವಕರ್ಮಸ್ಥಾ ಮಾಮಕಾನ್ತರಮಾವಿಶಃ ॥೧೪॥

ನನ್ನ ರಾಷ್ಟ್ರದಲ್ಲಿರುವ ಕ್ಷತ್ರಿಯರೆಲ್ಲರೂ ತಮ್ಮ-ತಮ್ಮ ಕರ್ಮಾನುಷ್ಠಾನಗಳಲ್ಲಿ ನಿರತರಾಗಿರುತ್ತಾರೆ. ಸತ್ಯಧರ್ಮವಿಶಾರದರಾದ ಆ ಕ್ಷತ್ರಿಯರು ದಾನಕೊಡುತ್ತಾರೆ. ದಾನವನ್ನು ತೆಗೆದುಕೊಳ್ಳುವುದಿಲ್ಲ. ವೇದಾಧ್ಯಯನವನ್ನು ಮಾಡುತ್ತಾರೆ. ವೇದವನ್ನು ಮತ್ತೊಬ್ಬರಿಗೆ ಹೇಳಿಕೊಡುವುದಿಲ್ಲ. ಯಜ್ಞವನ್ನು ಮಾಡುತ್ತಾರೆ. ಮತ್ತೊಬ್ಬರಿಗೆ ಮಾಡಿಸಲು ಹೋಗುವುದಿಲ್ಲ. ಬ್ರಾಹ್ಮಣರನ್ನು ರಕ್ಷಣೆಮಾಡುತ್ತಾರೆ. ಯುದ್ಧಭೂಮಿಯಿಂದ ಪಲಾಯನಮಾಡುವುದಿಲ್ಲ. ನಾನು ಇಂತಹ ಧರ್ಮರಾಷ್ಟ್ರದ ಅಧಿಪತಿಯಾಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ಕೃಷಿಗೋರಕ್ಷ್ಯವಾಣಿಜ್ಯಮುಪಜೀವನ್ತ್ಯಮಾಯಯಾ ।
ಅಪ್ರಮತ್ತಾಃ ಕ್ರಿಯಾವನ್ತಃ ಸುವ್ರತಾಃ ಸತ್ಯವಾದಿನಃ ॥೧೫॥

ಸಂವಿಭಾಗಂ ದಮಂ ಶೌಚಂ ಸೌಹೃದಂ ಚ ವ್ಯಪಾಶ್ರಿತಾಃ ।
ಮಮ ವೈಶ್ಯಾಃ ಸ್ವಕರ್ಮಸ್ಥಾ ಮಾಮಕಾನ್ತರಮಾವಿಶಃ ॥೧೬॥

ನನ್ನ ರಾಜ್ಯದಲ್ಲಿರುವ ವೈಶ್ಯರು ಅವರವರ ವರ್ಣಾಶ್ರಮೋಕ್ತವಾದ ಕರ್ಮಾನುಷ್ಠಾನಗಳಲ್ಲಿ ನಿರತರಾಗಿರುತ್ತಾರೆ. ಅವರು ಮೋಸ-ವಂಚನೆಗಳು ಯಾವುದೂ ಇಲ್ಲದೇ ಕೃಷಿ, ಗೋಸೇವೆ ಮತ್ತು ವಾಣಿಜ್ಯಗಳಿಂದ ತಮ್ಮ ಜೀವನವನ್ನು ನಡೆಸುತ್ತಾರೆ. ಜಾಗರೂಕರಾಗಿಯೂ, ಕಾರ್ಯತತ್ಪರರಾಗಿಯೂ, ವ್ರತಾನುಷ್ಠಾನಪರರಾಗಿಯೂ, ಸತ್ಯನಿಷ್ಠರಾಗಿಯೂ ಇರುತ್ತಾರೆ. ಸಂವಿಭಾಗವನ್ನೂ (ಇತರರಿಗೂ ಕೊಟ್ಟು ತಾನೂ ತಿನ್ನುವುದನ್ನೂ), ಜಿತೇಂದ್ರಿಯತೆಯನ್ನೂ, ಶೌಚಾಚಾರವನ್ನೂ ಮತ್ತು ಸೌಹಾರ್ದವನ್ನೂ ನನ್ನ ದೇಶದ ವೈಶ್ಯರು ಆಶ್ರಯಿಸಿರುತ್ತಾರೆ. (ಅತಿಥಿಸತ್ಕಾರಮಾಡುತ್ತಾರೆ. ಜಿತೇಂದ್ರಿಯರಾಗಿರುತ್ತಾರೆ. ಪರಿಶುದ್ಧರಾಗಿರುತ್ತಾರೆ. ಎಲ್ಲರಲ್ಲಿಯೂ ಪ್ರೀತ್ಯಾದರಗಳಿಂದ ಕೂಡಿದವರಾಗಿರುತ್ತಾರೆ.) ನಾನು ಇಂತಹ ಧಾರ್ಮಿಕರಾದ ಪ್ರಜೆಗಳಿಗೆ ಅಧಿಪತಿಯಾಗಿದ್ದರೂ ನನ್ನ ಶರೀರವನ್ನು ನೀನು ಪ್ರವೇಶಿಸಿರುವೆ.

ತ್ರೀನ್ವರ್ಣಾನುಪಜೀವನ್ತಿ ಯಥಾವದನಸೂಯಕಾಃ ।
ಮಮ ಶೂದ್ರಾಃ ಸ್ವಕರ್ಮಸ್ಥಾ ಮಾಮಕಾನ್ತರಮಾವಿಶಃ ॥೧೭॥

ನನ್ನ ರಾಷ್ಟ್ರದಲ್ಲಿರುವ ಶೂದ್ರರು ಅಸೂಯಾರಹಿತರಾಗಿ ಸ್ವಕರ್ಮ ನಿರತರಾಗಿದ್ದು ಮೂರು ವರ್ಣಗಳವರನ್ನೂ ಯಥಾವತ್ತಾಗಿ ಸೇವೆ ಮಾಡುತ್ತಾ ಜೀವನನಿರ್ವಹಣೆಯನ್ನು ಮಾಡುತ್ತಿದ್ದಾರೆ. ಆದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ಕೃಪಣಾನಾಥವೃದ್ಧಾನಾಂ ದುರ್ಬಲಾತುರಯೋಷಿತಾಮ್ ।
ಸಂವಿಭಕ್ತಾಸ್ಮಿ ಸರ್ವೇಷಾಂ ಮಾಮಕಾನ್ತರಮಾವಿಶಃ ॥೧೮॥

ದೀನರಿಗೂ, ಅನಾಥರಿಗೂ, ವೃದ್ಧರಿಗೂ, ದುರ್ಬಲರಿಗೂ, ರೋಗಿಗಳಿಗೂ, ಸ್ತ್ರೀಯರಿಗೂ ಅನ್ನ-ವಸ್ತ್ರ-ಔಷಧಿಗಳನ್ನು ಕಾಲ-ಕಾಲಕ್ಕೆ ಒದಗಿಸುತ್ತಾ ಸಂರಕ್ಷಿಸುತ್ತಿದ್ದೇನೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ಕುಲದೇಶಾದಿಧರ್ಮಾಣಾಂ ಪ್ರಥಿತಾನಾಂ ಯಥಾವಿಧಿ ।
ಅವ್ಯುಚ್ಛೇತ್ತಾಸ್ಮಿ ಸರ್ವೇಷಾಂ ಮಾಮಕಾನ್ತರಮಾವಿಶಃ ॥೧೯॥

ನಾನು ಸುವಿಖ್ಯಾತವಾದ ಕುಲಧರ್ಮ, ದೇಶಧರ್ಮ ಮತ್ತು ಜಾತಿ ಧರ್ಮಗಳ ಪರಂಪರೆಯನ್ನು ಯಥಾವತ್ತಾಗಿ ಪಾಲನೆಮಾಡಿಕೊಂಡು ಬರುತ್ತಿದ್ದೇನೆ. ಯಾರೂ ಈ ಎಲ್ಲ ಧರ್ಮಗಳಿಂದಲೂ ಚ್ಯುತರಾಗದಂತೆ ನೋಡಿಕೊಳ್ಳುತ್ತಿದ್ದೇನೆ. ಹೀಗಿದ್ದರೂ ನನ್ನ ಶರೀರವನ್ನು ನೀನು ಪ್ರವೇಶಿಸಿರುವೆ.

ತಪಸ್ವಿನೋ ಮೇ ವಿಷಯೇ ಪೂಜಿತಾಃ ಪರಿಪಾಲಿತಾಃ ।
ಸಂವಿಭಕ್ತಾಶ್ಚ ಸತ್ಕೃತ್ಯ ಮಾಮಕಾನ್ತರಮಾವಿಶಃ ॥೨೦॥

ನನ್ನ ದೇಶದಲ್ಲಿರುವ ತಪಸ್ವಿಗಳನ್ನು ಪೂಜಿಸಿ ಸತ್ಕರಿಸುತ್ತಿದ್ದೇನೆ. ಅವರಿಗೆ ಬೇಕು-ಬೇಕಾದುವುಗಳೆಲ್ಲವನ್ನೂ ಒದಗಿಸಿಕೊಟ್ಟು ಅವರ ರಕ್ಷಣೆಯನ್ನು ಮಾಡುತ್ತಿದ್ದೇನೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ನಾಸಂವಿಭಜ್ಯ ಭೋಕ್ತಾಸ್ಮಿ ನಾವಿಶಾಮಿ ಪರಸ್ತ್ರಿಯಮ್ ।
ಸ್ವತನ್ತ್ರೋ ಜಾತು ನ ಕ್ರೀಡೇ ಮಾಮಕಾನ್ತರಮಾವಿಶಃ ॥೨೧॥

ದೇವತಾತಿಥಿ-ಪಿತೃಗಳಿಗೆ ಅವರವರ ಭಾಗಗಳನ್ನು ಅನುದಿನವೂ ಸಮರ್ಪಿಸದೇ ನಾನು ಭೋಜನವನ್ನು ಮಾಡುವುದಿಲ್ಲ. ಪರಸ್ತ್ರೀಗಮನವನ್ನು

ಮಾಡುವುದಿಲ್ಲ. ಸ್ವಚ್ಛಂದವಾಗಿ ವಿಹರಿಸುವುದಿಲ್ಲ. ಇಷ್ಟು ಧಾರ್ಮಿಕನಾಗಿದ್ದರೂ ನೀನು ನನ್ನನ್ನು ಪ್ರವೇಶಿಸಿರುವೆ.

ನಾಬ್ರಹ್ಮಚಾರೀ ಭಿಕ್ಷಾವಾನ್ಭಿಕ್ಷುರ್ವಾಽಬ್ರಹ್ಮಚರ್ಯವಾನ್ ।
ಅನೃತ್ವಿಜಾ ಹುತಂ ನಾಸ್ತಿ ಮಾಮಕಾನ್ತರಮಾವಿಶಃ ॥೨೨॥

ನನ್ನ ರಾಜ್ಯದಲ್ಲಿ ಬ್ರಹ್ಮಚರ್ಯವ್ರತನಿಷ್ಠನಲ್ಲದವನು ಭಿಕ್ಷೆಬೇಡುವು ದಿಲ್ಲ. ಭಿಕ್ಷುವು (ಸಂನ್ಯಾಸಿಯು) ಬ್ರಹ್ಮಚರ್ಯವನ್ನು (ಬ್ರಹ್ಮನಿಷ್ಠೆಯನ್ನು) ಪಾಲಿಸದೇ ಇರುವುದಿಲ್ಲ. ಋತ್ವಿಜನಲ್ಲದವನಿಂದ ಹೋಮಕಾರ್ಯವು ನಡೆಯುವುದಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ನಾವಜಾನಾಮ್ಯಹಂ ವೈದ್ಯಾನ್ನ ವೃದ್ಧಾನ್ನ ತಪಸ್ವಿನಃ ।
ರಾಷ್ಟ್ರೇ ಸ್ವಪತಿ ಜಾಗರ್ಮಿ ಮಾಮಕಾನ್ತರಮಾವಿಶಃ ॥೨೩॥

ನಾನು ವಿದ್ವಾಂಸರನ್ನಾಗಲೀ, ವೃದ್ಧರನ್ನಾಗಲೀ, ತಪಸ್ವಿಗಳನ್ನಾಗಲೀ ತಿರಸ್ಕಾರದೃಷ್ಟಿಯಿಂದ ಕಾಣುವುದಿಲ್ಲ. ನನ್ನ ರಾಷ್ಟ್ರವು ಮಲಗಿ ಸುಖನಿದ್ರೆಯಲ್ಲಿದ್ದಾಗ ನಾನು ಅದರ ರಕ್ಷಣೆಯನ್ನು ಮಾಡುತ್ತಾ ಜಾಗ್ರತನಾಗಿರುತ್ತೇನೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ಆತ್ಮವಿಜ್ಞಾನಸಮ್ಪನ್ನಸ್ತಪಸ್ವೀ ಸರ್ವಧರ್ಮವಿತ್ ।
ಸ್ವಾಮೀ ಸರ್ವಸ್ಯ ರಾಷ್ಟ್ರಸ್ಯ ಧೀಮಾನ್ಮಮ ಪುರೋಹಿತಃ ॥೨೪॥

ಆತ್ಮಜ್ಞಾನಸಂಪನ್ನರಾದ, ತಪಸ್ವಿಗಳಾದ, ಸರ್ವಧರ್ಮಗಳನ್ನೂ ತಿಳಿದಿರುವ, ಬುದ್ಧಿವಂತರಾದ ಬ್ರಾಹ್ಮಣರು ನನಗೆ ಪುರೋಹಿತರಾಗಿದ್ದಾರೆ. ಅವರೇ ನನ್ನ ರಾಷ್ಟ್ರಕ್ಕೆ ಸ್ವಾಮಿಗಳಾಗಿರುತ್ತಾರೆ. ಇಂತಹವರನ್ನು ಪುರೋಹಿತರನ್ನಾಗಿ ಪಡೆದಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ದಾನೇನ ವಿದ್ಯಾಮಭಿವಾಞ್ಛಯಾಮಿ
ಸತ್ಯೇನಾರ್ಥಂ ಬ್ರಾಹ್ಮಣಾನಾಂ ಚ ಗುಪ್ತ್ಯಾ ।
ಶುಶ್ರೂಷಯಾ ಚಾಪಿ ಗುರೂನುಪೈಮಿ
ನ ಮೇ ಭಯಂ ವಿದ್ಯತೇ ರಾಕ್ಷಸೇಭ್ಯಃ ॥೨೫॥

ಧನವನ್ನು ಕೊಟ್ಟು ವಿದ್ಯೆಯನ್ನು ಕಲಿಯಲು ಇಚ್ಛೆಪಡುತ್ತೇನೆ.

ಸತ್ಯನಿಷ್ಠೆಯಿಂದಲೂ, ಬ್ರಾಹ್ಮಣರ ರಕ್ಷಣೆಯಿಂದಲೂ ಅಭೀಷ್ಟಾರ್ಥವನ್ನು (ಪುಣ್ಯಲೋಕಗಳ ಮೇಲಿನ ಅಧಿಕಾರವನ್ನು) ಪಡೆಯಲು ಇಚ್ಛಿಸುತ್ತೇನೆ. ಸೇವೆಯಿಂದಲೂ ಶುಶ್ರೂಷೆಯಿಂದಲೂ ಗುರುಜನರನ್ನು ತೃಪ್ತಿಗೊಳಿಸುವ ಸಲುವಾಗಿ ಅವರ ಸಮೀಪಕ್ಕೆ ಹೋಗುತ್ತೇನೆ. ಹೀಗಿರುವ ನನಗೆ ರಾಕ್ಷಸರಿಂದ ಖಂಡಿತವಾಗಿಯೂ ಭಯವಿಲ್ಲ.

ನ ಮೇ ರಾಷ್ಟ್ರೇ ವಿಧವಾ ಬ್ರಹ್ಮಬನ್ಧು-
ರ್ನ ಬ್ರಾಹ್ಮಣಃ ಕಿತವೋ ನೋತ ಚೋರಃ ।
ಅಯಾಜ್ಯಯಾಜೀ ನ ಚ ಪಾಪಕರ್ಮಾ
ನ ಮೇ ಭಯಂ ವಿದ್ಯತೇ ರಾಕ್ಷಸೇಭ್ಯಃ ॥೨೬॥

ನನ್ನ ರಾಷ್ಟ್ರದಲ್ಲಿ ಯಾವ ಸ್ತ್ರೀಯೂ ವಿಧವೆಯಾಗಿರುವುದಿಲ್ಲ. ಅಧಮನಾದ ಬ್ರಾಹ್ಮಣನಿರುವುದಿಲ್ಲ. ಜೂಜುಗಾರನಾಗಲೀ, ಕಳ್ಳನಾಗಲೀ, ಅನಧಿಕಾರಿಗಳಿಗೆ ಯಜ್ಞಮಾಡಿಸುವವನಾಗಲೀ, ಪಾಪಕರ್ಮಗಳನ್ನು ಮಾಡುವವನಾಗಲೀ–ಇರುವುದಿಲ್ಲ. ಆದುದರಿಂದ ನನಗೆ ರಾಕ್ಷಸರಿಂದ ಯಾವ ವಿಧವಾದ ಭಯವೂ ಇರುವುದಿಲ್ಲ.

ನ ಮೇ ಶಸ್ತ್ರೈರನಿರ್ಭಿನ್ನಂ ಗಾತ್ರೇ ದ್ವ್ಯಙ್ಗುಲಮನ್ತರಮ್ ।
ಧರ್ಮಾರ್ಥಂ ಯುಧ್ಯಮಾನಸ್ಯ ಮಾಮಕಾನ್ತರಮಾವಿಶಃ ॥೨೭॥

ಧರ್ಮದ ಸಂರಕ್ಷಣೆಗಾಗಿ ಯುದ್ಧಮಾಡುವ ಸ್ವಭಾವವುಳ್ಳ ನನ್ನ ಶರೀರದಲ್ಲಿ ಶಸ್ತ್ರಾಘಾತವಾಗದಿರತಕ್ಕ ಎರಡು ಅಂಗುಲಗಳಷ್ಟು ಸ್ಥಳವೂ ಇರುವುದಿಲ್ಲ. (ಧರ್ಮರಕ್ಷಣೆಗಾಗಿಯೇ ಯುದ್ಧಮಾಡುವ ನನ್ನ ಶರೀರಾದ್ಯಂತವಾಗಿ ಗಾಯಗಳಾಗಿವೆ.) ಒಂದು ಗಾಯಕ್ಕೂ ಮತ್ತೊಂದು ಗಾಯಕ್ಕೂ ಎರಡು ಅಂಗುಲಗಳಷ್ಟು ಅಂತರವೂ ಇಲ್ಲ. ಹಾಗಿದ್ದೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ.

ಗೋಬ್ರಾಹ್ಮಣೇಭ್ಯೋ ಯಜ್ಞೇಭ್ಯೋ ನಿತ್ಯಂ ಸ್ವಸ್ತ್ಯಯನಂ ಮಮ ।
ಆಶಾಸತೇ ಜನಾ ರಾಷ್ಟ್ರೇ ಮಾಮಕಾನ್ತರಮಾವಿಶಃ ॥೨೮॥

ನನ್ನ ರಾಷ್ಟ್ರದಲ್ಲಿ ವಾಸಮಾಡುತ್ತಿರುವ ಜನರೆಲ್ಲರೂ ಅನುದಿನವೂ ಗೋ-ಬ್ರಾಹ್ಮಣರಿಗೂ, ಯಜ್ಞಗಳಿಗೂ ಮಂಗಳಾಶಾಸನೆಗಳನ್ನು ಮಾಡು

ತ್ತಾರೆ. 'ಗೋಬ್ರಾಹ್ಮಣೇಭ್ಯಃ ಯಜ್ಞೇಭ್ಯಃ ಶುಭಮಸ್ತು ನಿತ್ಯಂ' ಎಂದು ಅನುದಿನವೂ ಹೇಳುತ್ತಾರೆ. ಇಂತಹ ಧರ್ಮಪ್ರಧಾನವಾದ ದೇಶಕ್ಕೆ ರಾಜನಾಗಿರುವ ನನ್ನ ಶರೀರವನ್ನು ನೀನು ಪ್ರವೇಶಿಸಿರುವೆ."

ರಾಕ್ಷಸನು ಹೇಳುತ್ತಾನೆ :

ಯಸ್ಮಾತ್ಸರ್ವಾಸ್ವವಸ್ಥಾಸು ಧರ್ಮಮೇವಾನ್ವವೇಕ್ಷಸೇ ।
ತಸ್ಮಾತ್ಪ್ರಾಪ್ನುಹಿ ಕೈಕೇಯ ಗೃಹಂ ಸ್ವಸ್ತಿ ವ್ರಜಾಮ್ಯಹಮ್ ॥೨೯॥

"ಕೇಕಯನರೇಶ! ನೀನು ಎಲ್ಲ ಅವಸ್ಥೆಗಳಲ್ಲಿಯೂ ಧರ್ಮದ ಮೇಲೆಯೇ ದೃಷ್ಟಿಯನ್ನಿಟ್ಟಿರುವೆ. ಆದುದರಿಂದ ನೀನು ಸಕುಶಲನಾಗಿ ಮನೆಗೆ ಹೋಗಬಹುದು. ನಿನಗೆ ಮಂಗಳವಾಗಲಿ. ನಾನು ಹೊರಟುಹೋಗುತ್ತೇನೆ.

ಯೇಷಾಂ ಗೋಬ್ರಾಹ್ಮಣಂ ರಕ್ಷ್ಯಂ ಪ್ರಜಾ ರಕ್ಷ್ಯಾಶ್ಚ ಕೇಕಯ ।
ನ ರಕ್ಷೋಭ್ಯೋ ಭಯಂ ತೇಷಾಂ ಕುತ ಏವ ತು ಪಾವಕಾತ್ ॥

ಕೇಕಯರಾಜನೇ! ಯಾವ ರಾಜರು ಗೋ-ಬ್ರಾಹ್ಮಣರನ್ನು ರಕ್ಷಿಸುವರೋ, ಪ್ರಜೆಗಳನ್ನು ಪಾಲನೆಮಾಡುವುದೇ ತಮ್ಮ ಮುಖ್ಯಧರ್ಮವೆಂದು ಭಾವಿಸುವರೋ–ಅಂತಹ ರಾಜರಿಗೆ ರಾಕ್ಷಸರಿಂದಲೂ ಭಯವಿಲ್ಲವೆಂದ ಮೇಲೆ ಅಗ್ನಿಯಿಂದ ಭಯವು ಹೇಗೆ ತಾನೇ ಉಂಟಾದೀತು?

ಯೇಷಾಂ ಪುರೋಗಮಾ ವಿಪ್ರಾಯೇಷಾಂ ಬ್ರಹ್ಮಪರಂ ಬಲಮ್ ।
ಅತಿಥಿಪ್ರಿಯಾಸ್ತಥಾ ಪೌರಾಸ್ತೇ ವೈ ಸ್ವರ್ಗಜಿತೋ ನೃಪಾಃ ॥೩೦॥

ಯಾರು ಬ್ರಾಹ್ಮಣಪುರಃಸರರಾಗಿರುವರೋ, ಯಾರಿಗೆ ಎಲ್ಲಕ್ಕಿಂತಲೂ ಹೆಚ್ಚಾದ ಬಲವು ಬ್ರಾಹ್ಮಣನೇ ಆಗಿರುವನೋ, ಯಾರ ರಾಜ್ಯದಲ್ಲಿ ನಾಗರಿಕರು ಅತಿಥಿಪ್ರಿಯರಾಗಿರುವರೋ (ಅತಿಥಿಸತ್ಕಾರ ಮಾಡಲು ಆಸಕ್ತಿಯುಳ್ಳವರಾಗಿರುವರೋ)–ಅಂತಹ ರಾಜರು ನಿಶ್ಚಯವಾಗಿಯೂ ಸ್ವರ್ಗವನ್ನೂ ಜಯಿಸುತ್ತಾರೆ."

ಭೀಷ್ಮನು ಹೇಳುತ್ತಾನೆ :

ತಸ್ಮಾದ್ದ್ವಿಜಾತೀನ್ರಕ್ಷೇತ ತೇ ಹಿ ರಕ್ಷನ್ತಿ ರಕ್ಷಿತಾಃ ।
ಆಶೀರೇಷಾಂ ಭವೇದ್ರಾಜನ್ರಾಜ್ಞಾಂ ಸಮ್ಯಕ್ಪ್ರವರ್ತತಾಮ್ ॥೩೨॥

ಯುಧಿಷ್ಠಿರ! ಆದುದರಿಂದ ಬ್ರಾಹ್ಮಣರನ್ನು ಸರ್ವದಾ ರಕ್ಷಿಸಬೇಕು. ರಾಜನಿಂದ ರಕ್ಷಿತರಾದ ಬ್ರಾಹ್ಮಣರು ರಾಜನನ್ನೂ ರಕ್ಷಿಸುತ್ತಾರೆ. ಸದ್ವ್ಯವಹಾರವುಳ್ಳ ರಾಜರಿಗೆ ಬ್ರಾಹ್ಮಣರ ಆಶೀರ್ವಾದವು ಲಭಿಸುತ್ತದೆ.

ತಸ್ಮಾದ್ರಾಜ್ಞಾ ವಿಶೇಷೇಣ ವಿಕರ್ಮಸ್ಥಾ ದ್ವಿಜಾತಯಃ ।
ನಿಯಮ್ಯಾಃ ಸಂವಿಭಜ್ಯಾಶ್ಚ ತದನುಗ್ರಹಕಾರಣಾತ್ ॥೩೩॥

ಆದುದರಿಂದ ರಾಜನು ಧರ್ಮಭ್ರಷ್ಟರಾದ ಬ್ರಾಹ್ಮಣರನ್ನು ಅನುಗ್ರಹಿಸುವುದಕ್ಕಾಗಿಯೇ ವಿಶೇಷವಾಗಿ ದಂಡಿಸಬೇಕು ಮತ್ತು ಬ್ರಹ್ಮ ರೂಪರಾದ ಮತ್ತು ದೇವರೂಪರಾದ ಬ್ರಾಹ್ಮಣರಿಂದ ಅವರನ್ನು ಪ್ರತ್ಯೇಕವಾಗಿಡಬೇಕು.

ಯುಧಿಷ್ಠಿರ! ಯಾವ ರಾಜನು ತನ್ನ ನಗರದ ಮತ್ತು ರಾಷ್ಟ್ರದ ಪ್ರಜೆಗಳೊಡನೆ ಇಂತಹ ಸದ್ವ್ಯವಹಾರಗಳನ್ನು ಇಟ್ಟುಕೊಂಡಿರುವನೋ–ಅವನು ಇಹದಲ್ಲಿ ಮಂಗಳರೂಪವಾದ ಸುಖವನ್ನು ಪಡೆದು ಅವಸಾನಾ ನಂತರದಲ್ಲಿ ಇಂದ್ರಲೋಕವನ್ನೇ ಸೇರುತ್ತಾನೆ."

೭೭ನೆಯ ಅಧ್ಯಾಯವು ಮುಗಿಯಿತು.

೭೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಆಪತ್ಕಾಲದಲ್ಲಿ ಬ್ರಾಹ್ಮಣನಿಂದ ವೈಶ್ಯವೃತ್ತಿಯ ಅವಲಂಬನೆ : ಆತ್ಮರಕ್ಷಣೆಗಾಗಿ ಎಲ್ಲ ವರ್ಣಗಳ ಜನರಿಗೂ ಶಸ್ತ್ರಧಾರಣೆಯ ಅಧಿಕಾರ : ರಕ್ಷಕನಿಗೆ ಮಾನ್ಯತೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ವ್ಯಾಖ್ಯಾತಾ ರಾಜಧರ್ಮೇಣ ವೃತ್ತಿರಾಪತ್ಸು ಭಾರತ ।
ಕಥಂ ಸ್ವಿದ್ವೈಶ್ಯಧರ್ಮೇಣ ಸಂಜೀವೇದ್ಬ್ರಾಹ್ಮಣೋ ನ ವಾ ॥೧॥

"ಪಿತಾಮಹ! ಈ ಹಿಂದೆ ನೀನು ಬ್ರಾಹ್ಮಣರು ಆಪತ್ಕಾಲದಲ್ಲಿ ರಾಜಧರ್ಮದಿಂದ (ಕ್ಷತ್ರಿಯಧರ್ಮದಿಂದ) ಜೀವಿಕೆಯನ್ನು ನಡೆಸಬಹು ದೆಂದು ಹೇಳಿರುವೆ. ಆಪತ್ಕಾಲದಲ್ಲಿ ವೈಶ್ಯಧರ್ಮವನ್ನು ಆಶ್ರಯಿಸಿ ಬ್ರಾಹ್ಮಣನು ಜೀವಿಕೆಯನ್ನು ನಡೆಸಬಹುದೇ? ಅಥವಾ ನಡೆಸಬಾರದೇ?–ಎಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ :

ಅಶಕ್ತಃ ಕ್ಷತ್ರಧರ್ಮೇಣ ವೈಶ್ಯಧರ್ಮೇಣ ವರ್ತಯೇತ್ ।
ಕೃಷಿಗೋರಕ್ಷ್ಯಮಾಸ್ಥಾಯ ವ್ಯಸನೇ ವೃತ್ತಿಸಂಕ್ಷಯೇ ॥೨॥

"ಮಹಾರಾಜ! ಬ್ರಾಹ್ಮಣನಿಗೆ ತನ್ನ ವೃತ್ತಿಯಿಂದ ಜೀವನ ನಿರ್ವಹಣೆಮಾಡಲು ಸಾಧ್ಯವಾಗದಿದ್ದರೆ ಆಪದ್ಧರ್ಮವನ್ನು ಅನುಸರಿಸಿ ಕ್ಷತ್ರಿಯವೃತ್ತಿಯಿಂದ ಜೀವಿಕೆಯನ್ನು ನಡೆಸಬಹುದು. ಒಂದು ವೇಳೆ ಅಶಕ್ತತೆಯಿಂದಾಗಿ ಕ್ಷತ್ರಿಯವೃತ್ತಿಯಿಂದಲೂ ಜೀವಿಕೆಯನ್ನು ನಡೆಸಲು ಸಾಧ್ಯವಾಗದಿದ್ದರೆ ವೈಶ್ಯಧರ್ಮಾನುಸಾರವಾಗಿ ಕೃಷಿ-ಗೋರಕ್ಷ್ಯ-ವಾಣಿಜ್ಯ ಗಳಿಂದ ಜೀವನವನ್ನು ನಡೆಸಬಹುದು."

ಧರ್ಮಜನು ಪ್ರಶ್ನಿಸುತ್ತಾನೆ :

ಕಾನಿ ಪಣ್ಯಾನಿ ವಿಕ್ರೀಯ ಸ್ವರ್ಗಲೋಕಾನ್ನ ಹೀಯತೇ ।
ಬ್ರಾಹ್ಮಣೋ ವೈಶ್ಯಧರ್ಮೇಣ ವರ್ತಯನ್ಭರತರ್ಷಭ ॥೩॥

"ಭರತರ್ಷಭನೇ! ಬ್ರಾಹ್ಮಣನು ವೈಶ್ಯಧರ್ಮದಿಂದ ಜೀವಿಕೆಯನ್ನು ನಡೆಸುವಾಗ ಯಾವ ಯಾವ ಪದಾರ್ಥಗಳನ್ನು ವಿಕ್ರಯಮಾಡುವುದರಿಂದ ಸ್ವರ್ಗಲೋಕದಿಂದ ಚ್ಯುತನಾಗುವುದಿಲ್ಲ?"

ಸುರಾ ಲವಣಮಿತ್ಯೇವ ತಿಲಾನ್ಕೇಸರಿಣಃ ಪಶೂನ್ ।
ವೃಷಭಾನ್ಮಧುಮಾಂಸಂ ಚ ಕೃತಾನ್ನಂ ಚ ಯುಧಿಷ್ಠಿರ ॥೪॥

ಸರ್ವಾಸ್ವವಸ್ಥಾಸ್ವೇತಾನಿ ಬ್ರಾಹ್ಮಣಃ ಪರಿವರ್ಜಯೇತ್ ।
ಏತೇಷಾಂ ವಿಕ್ರಯಾತ್ತಾತ ಬ್ರಾಹ್ಮಣೋ ನರಕಂ ವ್ರಜೇತ್ ॥೫॥

"ಯುಧಿಷ್ಠಿರ! ಮದ್ಯ, ಉಪ್ಪು, ಸಿದ್ಧಪಡಿಸಿದ ದ್ರವಪದಾರ್ಥಗಳು, ಎಳ್ಳು, ಕುದುರೆ, ಕುರಿ, ಆಡು, ಹಸು, ಗೂಳಿ ಮುಂತಾದ ಪಶುಗಳು, ಜೇನುತುಪ್ಪ, ಮಾಂಸ, ಸಿದ್ಧಪಡಿಸಿದ ಅನ್ನ–ಇವುಗಳನ್ನು ಬ್ರಾಹ್ಮಣನು ಯಾವುದೇ ನಿಕೃಷ್ಟವಾದ ಅವಸ್ಥೆಯಲ್ಲಿದ್ದರೂ ವಿಕ್ರಯಮಾಡಬಾರದು. ಈ ಪದಾರ್ಥಗಳನ್ನು ಬ್ರಾಹ್ಮಣನು ವಿಕ್ರಯಮಾಡಿದ್ದೇ ಆದರೆ ನರಕಕ್ಕೆ ಹೋಗುತ್ತಾನೆ.

ಅಜೋಽಗ್ನಿರ್ವರುಣೋ ಮೇಷಃ ಸೂರ್ಯೋಽಶ್ವಃ ಪೃಥಿವೀ ವಿರಾಟ್ ।
ಧೇನುರ್ಯಜ್ಞಶ್ಚ ಸೋಮಶ್ಚ ನ ವಿಕ್ರೇಯಾಃ ಕಥಂಚನ ॥೬॥

ಆಡು ಅಗ್ನಿಯ ರೂಪವಾಗಿದೆ. ಟಗರು ವರುಣನ ರೂಪವಾಗಿದೆ. ಕುದುರೆಯು ಸೂರ್ಯನ ರೂಪವಾಗಿದೆ. ಪೃಥ್ವಿಯು ವಿರಾಡ್ರೂಪವಾಗಿದೆ. ಹಸುವು ಯಜ್ಞದ ಮತ್ತು ಸೋಮನ ರೂಪವಾಗಿದೆ. ಆದುದರಿಂದ ಆಡು, ಟಗರು, ಕುದುರೆ, ಭೂಮಿ, ಹಸು–ಇವುಗಳನ್ನು ಬ್ರಾಹ್ಮಣನು ಯಾವುದೇ ಕಾರಣದಿಂದಲೂ ವಿಕ್ರಯಮಾಡಬಾರದು.

ಪಕ್ವೇನಾಮಸ್ಯ ನಿಮಯಂ ನ ಪ್ರಶಂಸನ್ತಿ ಸಾಧವಃ ।
ನಿಮಯೇತ್ಪಕ್ವಮಾಮೇನ ಭೋಜನಾರ್ಥಾಯ ಭಾರತ ॥೭॥

(ಕ್ರಯ-ವಿಕ್ರಯಗಳೆಂದರೆ ನಾವು ತಿಳಿದಿರುವಂತೆ ದ್ರವ್ಯದ ಮೂಲಕ ವಾಗಿಯೇ ಆಗಬೇಕೆಂಬ ನಿಯಮವೇನೂ ಇರುವುದಿಲ್ಲ. ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಕ್ರಯ-ವಿಕ್ರಯಗಳು ಪದಾರ್ಥಗಳ ವಿನಿಮಯದಿಂದಲೂ ನಡೆಯುತ್ತಿದ್ದುವು. ವಿನಿಮಯನಿಯಮವನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ.) ಪಕ್ವವಾದ ಪದಾರ್ಥಗಳಿಂದ ಅಪಕ್ವವಾದ ಪದಾರ್ಥಗಳ ವಿನಿಮಯಮಾಡುವುದನ್ನು ಸತ್ಪುರುಷರು ಒಪ್ಪುವುದಿಲ್ಲ. ಭೋಜನಾರ್ಥ ವಾಗಿ ಅಪಕ್ವವಾದ ಪದಾರ್ಥವನ್ನು ಪಕ್ವವಾದ ಪದಾರ್ಥದೊಡನೆ ವಿನಿಮಯ ಮಾಡಬಹುದು. (ಅಕ್ಕಿಯನ್ನು ಕೊಟ್ಟು ಅನ್ನವನ್ನು ಪಡೆದುಕೊಳ್ಳಬಹುದು.)

ವಯಂ ಸಿದ್ಧಮಶಿಷ್ಯಾಮೋ ಭವಾನ್ಸಾಧಯತಾಮಿದಮ್ ।
ಏವಂ ಸಂವೀಕ್ಷ್ಯ ನಿಮಯೇನ್ನಾಧರ್ಮೋಽಸ್ತಿ ಕಥಂಚನ ॥೮॥

"ನಾವು ಸಿದ್ಧವಾದ ಅನ್ನವನ್ನು ಊಟಮಾಡುತ್ತೇವೆ. ನೀನು ಈ ಅಪಕ್ವವಾದ ಪದಾರ್ಥವನ್ನು ತೆಗೆದುಕೊಂಡು ಭೋಜನಕ್ಕೆ ಅನುಕೂಲ ವಾಗುವಂತೆ ಸಿದ್ಧಮಾಡಿಡು"–ಹೀಗೆಂಬುದಾಗಿ ಹೇಳಿ, ತಾನು ಕೊಟ್ಟ ಹಸಿಯ ಪದಾರ್ಥದಿಂದಲೇ ಬೇಯಿಸಿದ ಪದಾರ್ಥವು ಸಿದ್ಧವಾಗಿರುವು ದೆಂಬುದನ್ನು ಪರಿಶೀಲಿಸಿ ಅದನ್ನು ಭಕ್ಷಿಸಬಹುದು. (ಅಕ್ಕಿಯನ್ನು ಕೊಟ್ಟು

ಆ ಅಕ್ಕಿಯಿಂದಲೇ ಆದ ಅನ್ನವನ್ನು ಪಡೆದುಕೊಳ್ಳಬಹುದು.) ಇಂತಹ ವಿನಿಮಯದಿಂದ ಯಾವ ವಿಧವಾದ ಅಧರ್ಮವೂ ಕಿಂಚಿತ್ತಾದರೂ ಇಲ್ಲ ವೆಂದು ಹೇಳುತ್ತಾರೆ.

ಯುಧಿಷ್ಠಿರ! ಈ ಸಂದರ್ಭದಲ್ಲಿ ವ್ಯವಹಾರಪರಾಯಣರಾದ ಜನರ ಸನಾತನಧರ್ಮವು ಹೇಗಿತ್ತೆಂಬುದನ್ನು ಹೇಳುವೆನು, ಕೇಳು.

ಭವತೇಽಹಂ ದದಾನೀದಂ ಭವಾನೇತತ್ಪ್ರಯಚ್ಛತು ।
ರುಚಿತೋ ವರ್ತತೇ ಧರ್ಮೋ ನ ಬಲಾತ್ಸಮ್ಪ್ರವರ್ತತೇ ॥೧೦॥

‘ನಿನಗೆ ನಾನು ಇದನ್ನು ಕೊಡುತ್ತೇನೆ. ಇದಕ್ಕೆ ಬದಲಾಗಿ ನೀನು ನನಗೆ ಆ ವಸ್ತುವನ್ನು ಕೊಡು’–ಎಂಬುದಾಗಿ ಪರಸ್ಪರಸಮ್ಮತಿಯಿಂದಲೂ, ಮತ್ತು ಸಂತೋಷದಿಂದಲೂ ಪದಾರ್ಥಗಳನ್ನು ವಿನಿಮಯಮಾಡಿಕೊಳ್ಳುವುದು ಧರ್ಮವಾಗಿರುತ್ತದೆ. ಪರಸ್ಪರಸಮ್ಮತಿ-ಸಂತೋಷಗಳಿಲ್ಲದೇ ಬಲಾತ್ಕಾರವಾಗಿ ಬಲಿಷ್ಠನು ದುರ್ಬಲನಲ್ಲಿರುವ ವಸ್ತುವನ್ನು ತೆಗೆದುಕೊಳ್ಳುವುದು ಅಧರ್ಮ ವಾಗುತ್ತದೆ.

ಹಿಂದಿನ ಕಾಲದಲ್ಲಿ ಋಷಿಗಳಿಗೂ ಮತ್ತು ಇತರರಿಗೂ ಎಲ್ಲ ವ್ಯವ ಹಾರಗಳೂ ಇದೇ ರೀತಿಯಲ್ಲಿ ನಡೆಯುತ್ತಿದ್ದುವು. ಹೀಗೆ ವ್ಯವಹರಿಸುವುದು ಸಾಧುವೂ ಆಗಿದೆಯೆಂಬುದರಲ್ಲಿ ಸಂಶಯವೇ ಇಲ್ಲ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಥ ತಾತ ಯದಾ ಸರ್ವಾಃ ಶಸ್ತ್ರಮಾದದತೇ ಪ್ರಜಾಃ ।
ವ್ಯುತ್ಕ್ರಾಮನ್ತಿ ಸ್ವಧರ್ಮೇಭ್ಯಃ ಕ್ಷತ್ರಸ್ಯ ಕ್ಷೀಯತೇ ಬಲಮ್ ॥೧೨॥

ರಾಜಾ ತ್ರಾತಾ ತು ಲೋಕಸ್ಯ ಕಥಂ ಚ ಸ್ಯಾತ್ಪರಾಯಣಮ್ ।
ಏತನ್ಮೇ ಸಂಶಯಂ ಬ್ರೂಹಿ ವಿಸ್ತರೇಣ ನರಾಧಿಪ ॥೧೩॥

“ಭೀಷ್ಮಪಿತಾಮಹ! ಒಂದು ದುರ್ಭರಪ್ರಸಂಗದಲ್ಲಿ ರಾಜ್ಯದ ರಕ್ಷಣೆ ಗಾಗಿಯೋ, ಜೀವಿಕೆಗಾಗಿಯೋ ದೇಶದಲ್ಲಿರುವ ಪ್ರಜೆಗಳೆಲ್ಲರೂ ಶಸ್ತ್ರಗ್ರಹಣ ಮಾಡಬೇಕಾಗುತ್ತದೆ. ಆ ಸಮಯದಲ್ಲವರು ತಮ್ಮ-ತಮ್ಮ ಧರ್ಮಾನು ಷ್ಠಾನಗಳಿಂದ ಭ್ರಷ್ಟರಾಗುತ್ತಾರೆ. ಬ್ರಾಹ್ಮಣನು ಅಧ್ಯಯನ-ಅಧ್ಯಾಪನಾದಿ

ಗಳನ್ನು ಮಾಡುವುದಿಲ್ಲ. ವೈಶ್ಯನು ಕೃಷಿ-ವಾಣಿಜ್ಯ-ಗೋರಕ್ಷಣೆಗಳನ್ನು ಮಾಡುವುದಿಲ್ಲ. ಶೂದ್ರನು ಸೇವೆಯನ್ನೂ ಮಾಡುವುದಿಲ್ಲ. ನೀನು ಹೇಳಿದಂತೆ ಪ್ರಜೆಗಳು ಸ್ವಧರ್ಮಭ್ರಷ್ಟರಾದರೆಂದರೆ ಕ್ಷತ್ರಿಯನ ಬಲವು ಕ್ಷೀಣಿಸುತ್ತದೆ. ಆ ಸಮಯದಲ್ಲಿ ಲೋಕರಕ್ಷಕನಾದ ರಾಜನು ಎಲ್ಲರಿಗೂ ಆಶ್ರಯನು ಹೇಗಾಗುತ್ತಾನೆ? ನನಗೆ ಉಂಟಾಗಿರುವ ಈ ಸಂಶಯವನ್ನು ವಿಸ್ತಾರವಾದ ವ್ಯಾಖ್ಯಾನದಿಂದ ನಿವಾರಿಸು."

ದಾನೇನ ತಪಸಾ ಯಜ್ಞೈರದ್ರೋಹೇಣ ದಮೇನ ಚ ।
ಬ್ರಾಹ್ಮಣಪ್ರಮುಖಾ ವರ್ಣಾಃ ಕ್ಷೇಮಮಿಚ್ಛೇಯುರಾತ್ಮನಃ ॥೧೪॥

"ಧರ್ಮಜ! ಬ್ರಾಹ್ಮಣನೇ ಮೊದಲಾದ ಎಲ್ಲ ವರ್ಣಗಳ ಜನರೂ ದಾನ, ತಪಸ್ಸು, ಯಜ್ಞ, ಅದ್ರೋಹ (ಯಾವ ಪ್ರಾಣಿಗೂ ಯಾವ ವಿಧವಾದ ದ್ರೋಹವನ್ನೂ ಮಾಡದಿರುವುದು,) ಜಿತೇಂದ್ರಿಯತೆ–ಇವುಗಳ ಮೂಲಕ ವಾಗಿ ತಮ್ಮ ಕಲ್ಯಾಣವನ್ನು ಅಪೇಕ್ಷಿಸಬೇಕು.

ತೇಷಾಂ ಯೇ ವೇದಬಲಿನಸ್ತೇಽಭ್ಯುತ್ಥಾಯ ಸಮನ್ತತಃ ।
ರಾಜ್ಞೋ ಬಲಂ ವರ್ಧಯೇಯುರ್ಮಹೇನ್ದ್ರಸ್ಯೇವ ದೇವತಾಃ ॥೧೫॥

ಅವರಲ್ಲಿ ಯಾವ ಬ್ರಾಹ್ಮಣರಲ್ಲಿ ವೇದಾಧ್ಯಯನದ ಬಲವಿರುವುದೋ ಅವರು ಎಲ್ಲ ಕಡೆಗಳಿಂದಲೂ ಮೇಲೆದ್ದು ತಮ್ಮ ವೇದವಾಣಿಯ ಮೂಲಕವಾಗಿ–ದೇವತೆಗಳು ಇಂದ್ರನ ಬಲವನ್ನು ಸಂವರ್ಧಿಸುವಂತೆ–ರಾಜನ ಬಲವನ್ನು ಸಂವರ್ಧಿಸುತ್ತಾರೆ.

ರಾಜ್ಞೋಽಪಿ ಕ್ಷೀಯಮಾಣಸ್ಯ ಬ್ರಹ್ಮೈವಾಹುಃ ಪರಾಯಣಮ್ ।
ತಸ್ಮಾದ್ಬ್ರಹ್ಮಬಲೇನೈವ ಸಮುತ್ಥೇಯಂ ವಿಜಾನತಾ ॥೧೬॥

ಕ್ಷೀಣಿಸುತ್ತಿರುವ ರಾಜನಿಗೆ ಬ್ರಾಹ್ಮಣನೇ ಆಶ್ರಯನೆಂದು ತಿಳಿದವರು ಹೇಳುತ್ತಾರೆ. ಆದುದರಿಂದ ಪ್ರಜೆಗಳು ಧರ್ಮಭ್ರಷ್ಟರಾದುದರಿಂದ ಕ್ಷೀಣಿಸಿದ ರಾಜನು ಬ್ರಹ್ಮಬಲದಿಂದಲೇ ಅಭ್ಯುದಯವನ್ನು ಹೊಂದಬೇಕು.

ಯದಾ ಭುವಿ ಜಯೀ ರಾಜಾ ಕ್ಷೇಮಂ ರಾಷ್ಟ್ರೇಽಭಿಸಂದಧೇತ್ ।
ತದಾ ವರ್ಣಾ ಯಥಾಧರ್ಮಂ ನಿವಿಶೇಯುಃ ಕಥಂಚನ ॥೧೭॥

ಯಾವಾಗ ರಾಜನು ವಿಜಯಿಯಾಗುತ್ತಾನೆಯೋ, ರಾಷ್ಟ್ರದಲ್ಲಿ ಯೋಗ-ಕ್ಷೇಮಗಳನ್ನು ಪುನಃ ಸ್ಥಾಪಿಸುತ್ತಾನೆಯೋ–ಆಗ ಎಲ್ಲ ವರ್ಣಗಳ ಜನರೂ ತಮ್ಮ-ತಮ್ಮ ಧರ್ಮಗಳಲ್ಲಿ ನಿರತರಾಗುವಂತೆ ಮಾಡಬೇಕು. (ಎಲ್ಲರೂ ಶಸ್ತ್ರವನ್ನು ಹಿಡಿಯಬೇಕೆಂಬುದು ಆಪದ್ಧರ್ಮವೇ ಹೊರತು ಅವರು ನಿರಂತರವಾಗಿ ಅದೇ ಧರ್ಮವನ್ನೇ ಅನುಸರಿಸುತ್ತಿರಬಾರದು. ಶಾಂತಿಯ ವಾತಾವರಣವು ಮೂಡಿದೊಡನೆಯೇ ಎಲ್ಲರೂ ತಮ್ಮ ಕರ್ಮಾನುಷ್ಠಾನಗಳನ್ನು ಯಥಾಪೂರ್ವವಾಗಿ ಮಾಡಿಕೊಂಡು ಹೋಗುವಂತೆ ರಾಜನು ವ್ಯವಸ್ಥೆಗೊಳಿಸಬೇಕು.)

ಉನ್ಮರ್ಯಾದೇ ಪ್ರವೃತ್ತೇ ತು ದಸ್ಯುಭಿಃ ಸಂಕರೇ ಕೃತೇ ।
ಸರ್ವೇ ವರ್ಣಾ ನ ದುಷ್ಯೇಯುಃ ಶಸ್ತ್ರವನ್ತೋ ಯುಧಿಷ್ಠಿರ ॥೧೮॥

ಯುಧಿಷ್ಠಿರ! ಕಳ್ಳ-ಕಾಕರೂ ದರೋಡೆಕೋರರೂ ಲೋಕಮರ್ಯಾದೆಯನ್ನೇ ಮೀರಿ ಪ್ರವರ್ತಿಸುತ್ತಿದ್ದರೆ, ವರ್ಣಸಂಕರವು ನಡೆಯುತ್ತಿದ್ದರೆ–ಎಲ್ಲ ವರ್ಣಗಳವರೂ ಶಸ್ತ್ರಗಳನ್ನು ಹಿಡಿದು ದಂಗೆಕೋರರನ್ನು ಧ್ವಂಸಮಾಡಲೇಬೇಕು. ಹೀಗೆ ಎಲ್ಲ ವರ್ಣಗಳವರೂ ಸಮಯದಲ್ಲಿ ಶಸ್ತ್ರಗಳನ್ನು ಹಿಡಿಯುವುದರಿಂದ ಧರ್ಮಕ್ಕೆ ಯಾವ ವಿಧವಾದ ಚ್ಯುತಿಯೂ ಉಂಟಾಗುವುದಿಲ್ಲ ಮತ್ತು ಚಾತುರ್ವರ್ಣ್ಯದವರೂ ಇದರಿಂದ ದೋಷಭಾಗಿಗಳೂ ಆಗುವುದಿಲ್ಲ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಥ ಚೇತ್ಸರ್ವತಃ ಕ್ಷತ್ರಂ ಪ್ರದುಷ್ಯೇದ್ಬ್ರಾಹ್ಮಣಂ ಪ್ರತಿ ।
ಕಸ್ತಸ್ಯ ಬ್ರಾಹ್ಮಣಸ್ತ್ರಾತಾ ಕೋ ಧರ್ಮಃ ಕಿಂ ಪರಾಯಣಮ್ ॥೧೯॥

"ಪಿತಾಮಹ! ಒಂದು ವೇಳೆ ಕ್ಷತ್ರಿಯರೇ ಎಲ್ಲ ಪ್ರಕಾರಗಳಿಂದಲೂ ಬ್ರಾಹ್ಮಣನನ್ನು ದೂಷಿಸತೊಡಗಿದರೆ (ಹಿಂಸಿಸಲು ಉಪಕ್ರಮಿಸಿದರೆ)–ಆ ಬ್ರಾಹ್ಮಣನ ರಕ್ಷಣೆಯನ್ನು ಮತ್ತಾವ ಬ್ರಾಹ್ಮಣನು ಮಾಡುತ್ತಾನೆ? ಅಂತಹ ಸಮಯದಲ್ಲಿ ಆ ಬ್ರಾಹ್ಮಣನ ಧರ್ಮವೇನು? ಅವನಿಗೆ ಆಶ್ರಯವು ಯಾವುದು?"

ಭೀಷ್ಮನು ಹೇಳುತ್ತಾನೆ :

ತಪಸಾ ಬ್ರಹ್ಮಚರ್ಯೇಣ ಶಸ್ತ್ರೇಣ ಚ ಬಲೇನ ಚ ।
ಅಮಾಯಯಾ ಮಾಯಯಾ ಚ ನಿಯನ್ತವ್ಯಂ ತದಾ ಭವೇತ್ ॥೨೦॥

"ಧರ್ಮಜ! ಆ ಸಮಯದಲ್ಲಿ ಬ್ರಾಹ್ಮಣನು ತಪಸ್ಸಿನಿಂದ, ಬ್ರಹ್ಮಚರ್ಯದಿಂದ, ಶಸ್ತ್ರಗಳಿಂದ, ಬಲದಿಂದ, ನಿಷ್ಕಪಟವ್ಯವಹಾರಗಳಿಂದ ಅಥವಾ ಭೇದನೀತಿಯಿಂದ ಕ್ಷತ್ರಿಯರನ್ನು ಹತೋಟಿಗೆ ತರಬೇಕು.

ಕ್ಷತ್ರಿಯಸ್ಯಾತಿವೃತ್ತಸ್ಯ ಬ್ರಾಹ್ಮಣೇಷು ವಿಶೇಷತಃ ।
ಬ್ರಹ್ಮೈವ ಸಂನಿಯನ್ತೃ ಸ್ಯಾತ್ಕ್ಷತ್ರಂ ಹಿ ಬ್ರಹ್ಮಸಮ್ಭವಮ್ ॥೨೧॥

ಕ್ಷತ್ರಿಯನು (ರಾಜನು) ಪ್ರಜೆಗಳ ಮೇಲೆ ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನ ಮೇಲೆ ಅತ್ಯಾಚಾರವನ್ನೆಸಗತೊಡಗಿದರೆ–ಬ್ರಾಹ್ಮಣನೇ ಅವನನ್ನು ನಿಯಂತ್ರಿಸಬೇಕು. ಏಕೆಂದರೆ ಕ್ಷತ್ರಿಯನು ಬ್ರಾಹ್ಮಣನಿಂದ ಹುಟ್ಟಿದವನಾಗಿದ್ದಾನೆ.

ಅದ್ಭ್ಯೋಽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್ ।
ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥೨೨॥

ನೀರಿನಿಂದ ಅಗ್ನಿಯು ಹುಟ್ಟಿದೆ. ಬ್ರಾಹ್ಮಣನಿಂದ ಕ್ಷತ್ರಿಯನು ಹುಟ್ಟಿದ್ದಾನೆ. ಕಲ್ಲಿನಿಂದ ಲೋಹವು ಹುಟ್ಟಿದೆ. ಸರ್ವತ್ರವ್ಯಾಪಿಸುವ ಇವುಗಳ ತೇಜಸ್ಸು ತಮ್ಮ ಜನ್ಮಸ್ಥಾನಗಳಲ್ಲಿಯೇ ಶಾಂತವಾಗುತ್ತದೆ.

ಯದಾ ಛಿನತ್ತ್ಯಯೋಽಶ್ಮಾನಮಗ್ನಿಶ್ಚಾಪೋಽಭಿಗಚ್ಛತಿ ।
ಕ್ಷತ್ರಂ ಚ ಬ್ರಾಹ್ಮಣಂ ದ್ವೇಷ್ಟಿ ತದಾ ನಶ್ಯನ್ತಿ ತೇ ತ್ರಯಃ ॥೨೩॥

ಯಾವಾಗ ಲೋಹವು ಕಲ್ಲನ್ನು ಭೇದಿಸಲು ಹೋಗುವುದೋ, ಅಗ್ನಿಯು ನೀರಿನೊಳಗೆ ಪ್ರವೇಶಿಸುವುದೋ, ಕ್ಷತ್ರಿಯನು ಬ್ರಾಹ್ಮಣನನ್ನು ದ್ವೇಷಿಸುವನೋ–ಆಗ ಈ ಮೂರೂ ನಾಶಹೊಂದುತ್ತವೆ.

ತಸ್ಮಾದ್ಬ್ರಹ್ಮಣಿ ಶಾಮ್ಯನ್ತಿ ಕ್ಷತ್ರಿಯಾಣಾಂ ಯುಧಿಷ್ಠಿರ ।
ಸಮುದೀರ್ಣಾನ್ಯಜೇಯಾನಿ ತೇಜಾಂಸಿ ಚ ಬಲಾನಿ ಚ ॥೨೪॥

ಆದುದರಿಂದ ಕ್ಷತ್ರಿಯರ ಪ್ರಚಂಡವಾದ ಮತ್ತು ಅಜೇಯವಾದ

ತೇಜಸ್ಸುಗಳೂ ಮತ್ತು ಬಲಗಳೂ ಬ್ರಾಹ್ಮಣರಲ್ಲಿ ಉಪಶಮನವನ್ನು ಹೊಂದುತ್ತವೆ.

ಬ್ರಹ್ಮವೀರ್ಯೇ ಮೃದುಭೂತೇ ಕ್ಷತ್ರವೀರ್ಯೇ ಚ ದುರ್ಬಲೇ ।
ದುಷ್ಟೇಷು ಸರ್ವವರ್ಣೇಷು ಬ್ರಾಹ್ಮಣಾನ್ಪ್ರತಿ ಸರ್ವಶಃ ॥೨೫॥

ಯೇ ತತ್ರ ಯುದ್ಧಂ ಕುರ್ವನ್ತಿ ತ್ಯಕ್ತ್ವಾ ಜೀವಿತಮಾತ್ಮನಃ ।
ಬ್ರಾಹ್ಮಣಾನ್ಪರಿರಕ್ಷನ್ತೋ ಧರ್ಮಮಾತ್ಮಾನಮೇವ ಚ ॥೨೬॥

ಮನಸ್ವಿನೋ ಮನ್ಯುಮನ್ತಃ ಪುಣ್ಯಶ್ಲೋಕಾ ಭವನ್ತಿ ತೇ ।
ಬ್ರಾಹ್ಮಣಾರ್ಥಂ ಹಿ ಸರ್ವೇಷಾಂ ಶಸ್ತ್ರಗ್ರಹಣಮಿಷ್ಯತೇ ॥೨೭॥

ಬ್ರಾಹ್ಮಣನ ವೀರ್ಯವೂ (ತೇಜಸ್ಸು) ಮಂದವಾಗಲಾಗಿ, ಬ್ರಾಹ್ಮಣನನ್ನು ರಕ್ಷಿಸಬೇಕಾದ ಕ್ಷತ್ರಿಯನೂ ದುರ್ಬಲನಾಗಲಾಗಿ, ಎಲ್ಲ ವರ್ಣಗಳವರೂ ಬ್ರಾಹ್ಮಣರ ಬಗೆಗೆ ದುಷ್ಟತೆಯಿಂದ ವರ್ತಿಸುತ್ತಿರಲಾಗಿ, ಮನನಶೀಲರಾದ ಯಾರು ತಮ್ಮ ಜೀವನದ ಹಂಗನ್ನೇ ತೊರೆದು ಕ್ರೋಧವಶರಾಗಿ ಬ್ರಾಹ್ಮಣರನ್ನೂ, ಧರ್ಮವನ್ನೂ ಮತ್ತು ತಮ್ಮನ್ನೂ ಸಂರಕ್ಷಿಸಿಕೊಳ್ಳುತ್ತಾ ಯುದ್ಧಮಾಡುತ್ತಾರೆಯೋ–ಅವರು ಪುಣ್ಯಶ್ಲೋಕರಾಗುತ್ತಾರೆ. (ಪವಿತ್ರವಾದ ಯಶಸ್ಸನ್ನು ಗಳಿಸುತ್ತಾರೆ.) ಬ್ರಾಹ್ಮಣರ ರಕ್ಷಣಾರ್ಥವಾಗಿ ಶಸ್ತ್ರಗ್ರಹಣಮಾಡಲು ಎಲ್ಲರಿಗೂ ಅಧಿಕಾರವಿದೆ.

ಅತಿಸ್ವಿಷ್ಟಸ್ವಧೀತಾನಾಂ ಲೋಕಾನತಿತಪಸ್ವಿನಾಮ್ ।
ಅನಾಶನಾಗ್ನ್ಯೋರ್ವಿಶತಾಂ ಶೂರಾ ಯಾನ್ತಿ ಪರಾಂ ಗತಿಮ್ ॥೨೮॥

ಯಜ್ಞಮಾಡಿದವರಿಗೂ, ವೇದಾಧ್ಯಯನಮಾಡಿದವರಿಗೂ, ತಪಸ್ಸು ಮತ್ತು ಉಪವಾಸವ್ರತಗಳನ್ನು ಮಾಡಿದವರಿಗೂ, ಆತ್ಮಶುದ್ಧಿಗಾಗಿ ಅಗ್ನಿ ಪ್ರವೇಶಮಾಡಿದವರಿಗೂ ಯಾವ ಪುಣ್ಯಲೋಕಗಳು ಲಭಿಸುತ್ತವೆಯೋ– ಅವುಗಳಿಗಿಂತಲೂ ಉತ್ತಮವಾದ ಪುಣ್ಯಲೋಕಗಳು ಬ್ರಾಹ್ಮಣರನ್ನು ರಕ್ಷಿಸುವ ಶೂರರಿಗೆ ಲಭಿಸುತ್ತವೆ.

ಬ್ರಾಹ್ಮಣಸ್ತ್ರಿಷು ವರ್ಣೇಷು ಶಸ್ತ್ರಂ ಗೃಹ್ಣನ್ನ ದುಷ್ಯತಿ ।
ಏವಮೇವಾತ್ಮನಸ್ತ್ಯಾಗಾನ್ನಾನ್ಯಂ ಧರ್ಮಂ ವಿದುರ್ಜನಾಃ ॥೨೯॥

ಬ್ರಾಹ್ಮಣನೂ ಉಳಿದ ಮೂರು ವರ್ಣಗಳವರ ರಕ್ಷಣೆಗಾಗಿ ಶಸ್ತ್ರ

ಗ್ರಹಣ ಮಾಡಿದರೆ ದೂಷ್ಯನಾಗುವುದಿಲ್ಲ. ಹೀಗೆಯೇ ಧರ್ಮಯುದ್ಧದಲ್ಲಿಯೇ ಪ್ರಾಣಪರಿತ್ಯಾಗಕ್ಕಿಂತಲೂ ಮಿಗಿಲಾದ ಬೇರೊಂದು ತ್ಯಾಗವನ್ನು ವಿದ್ವಾಂಸರು ತಿಳಿದವರಾಗಿಲ್ಲ.

ತೇಭ್ಯೋ ನಮಶ್ಚ ಭದ್ರಂ ಚ ಯೇ ಶರೀರಾಣಿ ಜುಹ್ವತೇ ।
ಬ್ರಹ್ಮದ್ವಿಷೋ ನಿಯಚ್ಛನ್ತಸ್ತೇಷಾಂ ನೋಽಸ್ತು ಸಲೋಕತಾ ।
ಬ್ರಹ್ಮಲೋಕಜಿತಃ ಸ್ವರ್ಗ್ಯಾನ್ವೀರಾಂಸ್ತಾನ್ಮನುರಬ್ರವೀತ್ ॥೩೦॥

ಬ್ರಾಹ್ಮಣದ್ವೇಷಿಗಳನ್ನು ಧ್ವಂಸಮಾಡುತ್ತಾ ಯಾರು ತಮ್ಮ ಶರೀರಗಳನ್ನು ಯುದ್ಧವೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆಯೋ–ಅವರಿಗೆ ನಮಸ್ಕಾರವಿರಲಿ! ಅವರಿಗೆ ಕಲ್ಯಾಣವುಂಟಾಗಲಿ! ಅವರೊಡನೆ ನಮಗೂ ಸಮಾನವಾದ ಲೋಕಗಳೇ ಲಭಿಸಲಿ! ಮನುವು ಸ್ವರ್ಗೀಯರಾದ ಇಂತಹವರನ್ನು ಬ್ರಹ್ಮಲೋಕವನ್ನು ಜಯಿಸಿದ ಮಹಾವೀರರೆಂದೇ ಹೇಳಿದ್ದಾನೆ.

ಯಥಾಶ್ವಮೇಧಾವಭೃಥೇ ಸ್ನಾತಾಃ ಪೂತಾ ಭವನ್ತ್ಯುತ ।
ದುಷ್ಕೃತಸ್ಯ ಪ್ರಣಾಶೇನ ತತಃ ಶಸ್ತ್ರಹತಾ ರಣೇ ॥೩೧॥

ಯಾವ ರೀತಿಯಲ್ಲಿ ಅಶ್ವಮೇಧಯಜ್ಞಾನಂತರ ಅವಭೃಥಸ್ನಾನ ಮಾಡಿದವರು ಪಾಪರಹಿತರೂ ಪವಿತ್ರರೂ ಆಗುವರೋ–ಅದೇ ರೀತಿಯಲ್ಲಿ ಯುದ್ಧದಲ್ಲಿ ಶಸ್ತ್ರಗಳ ಮೂಲಕವಾಗಿ ಅಸುವನ್ನು ತೊರೆದ ವೀರರೂ, ಪಾಪಗಳೆಲ್ಲವೂ ನಷ್ಟವಾಗಿ ಹೋಗುವುದರಿಂದ ಪವಿತ್ರರಾಗುತ್ತಾರೆ.

ಭವತ್ಯಧರ್ಮೋ ಧರ್ಮೋ ಹಿ ಧರ್ಮಾಧರ್ಮಾವುಭಾವಪಿ ।
ಕಾರಣಾದ್ದೇಶಕಾಲಸ್ಯ ದೇಶಕಾಲಃ ಸ ತಾದೃಶಃ ॥೩೨॥

ದೇಶ-ಕಾಲಗಳ ಪರಿಸ್ಥಿತಿಯ ಕಾರಣದಿಂದಾಗಿ ಅಧರ್ಮವು ಧರ್ಮವಾಗುತ್ತದೆ. ಧರ್ಮವು ಅಧರ್ಮವಾಗುತ್ತದೆ. ಒಂದು ರೀತಿಯಲ್ಲಿ ಧರ್ಮವೂ ಮತ್ತೊಂದು ರೀತಿಯಲ್ಲಿ ಅಧರ್ಮವೂ ಆಗಿ ಉಭಯರೂಪವೂ ಆಗಬಹುದು. ಏಕೆಂದರೆ : ದೇಶ-ಕಾಲಗಳ ಪರಿಸ್ಥಿತಿಯೇ ಅಂತಹುದಾಗಿದೆ.

ಮೈತ್ರಾಃ ಕ್ರೂರಾಣಿ ಕುರ್ವನ್ತೋ ಜಯನ್ತಿ ಸ್ವರ್ಗಮುತ್ತಮಮ್ ।
ಧರ್ಮ್ಯಾಃ ಪಾಪಾನಿ ಕುರ್ವಾಣಾ ಗಚ್ಛನ್ತಿ ಪರಮಾಂ ಗತಿಮ್ ॥೩೩॥

ಎಲ್ಲರಲ್ಲಿಯೂ ಮೈತ್ರಿಯಿಂದಿರುವ ಮನುಷ್ಯರು ಸಮಯವು ಬಂದಾಗ ಮತ್ತೊಬ್ಬರ ರಕ್ಷಣೆಗಾಗಿ ಕ್ರೂರಕಾರ್ಯವನ್ನು ಮಾಡಿ (ದುಷ್ಟರನ್ನು ಸಂಹರಿಸಿ) ಸ್ವರ್ಗಲೋಕದ ಮೇಲಿನ ಅಧಿಕಾರವನ್ನು ಹೊಂದುತ್ತಾರೆ. ಧರ್ಮಾತ್ಮರಾದ ಪುರುಷರೂ ಸಮಯಗಳಲ್ಲಿ ಮತ್ತೊಬ್ಬರ ರಕ್ಷಣೆಗಾಗಿ ಹಿಂಸೆಯೇ ಮೊದಲಾದ ಪಾಪಕಾರ್ಯಗಳನ್ನು ಮಾಡಿದರೂ ಸದ್ಗತಿಯನ್ನು ಪಡೆಯುತ್ತಾರೆ. ಈ ಎರಡು ಸಂದರ್ಭಗಳಲ್ಲಿಯೂ ಅಹಿಂಸೆಯೇ ಶ್ರೇಷ್ಠವಾದ ಧರ್ಮವೆಂದು ಭಾವಿಸಿ ದುಷ್ಟನಿಗ್ರಹವನ್ನು ಮಾಡದಿದ್ದರೆ ಅದು ಅಧರ್ಮವಾಗುತ್ತದೆ.

ಬ್ರಾಹ್ಮಣಸ್ತ್ರಿಷು ಕಾಲೇಷು ಶಸ್ತ್ರಂ ಗೃಹ್ಣನ್ನ ದುಷ್ಯತಿ ।
ಆತ್ಮತ್ರಾಣೇ ವರ್ಣದೋಷೇ ದುರ್ದಮ್ಯನಿಯಮೇಷು ಚ ॥೩೪॥

ಬ್ರಾಹ್ಮಣನು ತನ್ನ ಆತ್ಮರಕ್ಷಣೆಗಾಗಿ–ಅನ್ಯವರ್ಣದವರೇನಾದರೂ ತೊಂದರೆಮಾಡಲು ಬಂದಾಗ–ದುರ್ದಾಂತರಾದ ದುಷ್ಟರನ್ನು ಅಡಗಿಸ ಬೇಕಾಗಿ ಬಂದಾಗ–ಈ ಮೂರು ಸಮಯಗಳಲ್ಲಿ ಶಸ್ತ್ರಧಾರಣಮಾಡಿದರೆ ದೋಷಕ್ಕೆ ಭಾಜನನಾಗುವುದಿಲ್ಲ."

ಯುಧಿಷ್ಠಿರನು ಹೇಳುತ್ತಾನೆ :

ಅಭ್ಯುತ್ಥಿತೇ ದಸ್ಯುಬಲೇ ಕ್ಷತ್ರಾರ್ಥೇ ವರ್ಣಸಂಕರೇ ।
ಸಮ್ಪ್ರಮೂಢೇಷು ವರ್ಣೇಷು ಯದ್ಯನ್ಯೋಽಭಿಭವೇದ್ಬಲೀ ॥೩೫॥

ಬ್ರಾಹ್ಮಣೋ ಯದಿ ವಾ ವೈಶ್ಯಃ ಶೂದ್ರೋ ವಾ ರಾಜಸತ್ತಮ ।
ದಸ್ಯುಭ್ಯೋಽಥ ಪ್ರಜಾ ರಕ್ಷೇದ್ದಣ್ಡಂ ಧರ್ಮೇಣ ಧಾರಯನ್ ॥೩೬॥

ಕಾರ್ಯಂ ಕುರ್ಯಾನ್ನವಾ ಕುರ್ಯಾತ್ಸಂವಾರ್ಯೋ ವಾ ಭವೇನ್ನ ವಾ।
ತಸ್ಮಾಚ್ಛಸ್ತ್ರಂ ಗ್ರಹೀತವ್ಯಮನ್ಯತ್ರ ಕ್ಷತ್ರಬನ್ಧುತಃ ॥೩೭॥

"ಪಿತಾಮಹ! ಕಳ್ಳ-ಕಾಕರ, ದರೋಡೆಕಾರರ ಉಪಟಳವು ಅತ್ಯಧಿಕವಾಗಿಬಿಡುತ್ತದೆ. ಸಮಾಜದಲ್ಲಿ ವರ್ಣಸಂಕರವು ಹೆಚ್ಚುತ್ತಿರು ತ್ತದೆ. ಕ್ಷತ್ರಿಯನನ್ನು ಅಡಗಿಸುವುದಕ್ಕಾಗಿ ದಸ್ಯುಗಳ ಸೈನ್ಯವು ಮೇಲೆ ದ್ದಿರುತ್ತದೆ. ಎಲ್ಲರೂ ಕಳ್ಳ-ಕಾಕರ ಭಯದಿಂದಾಗಿ ಏನು ಮಾಡಬೇಕೆಂಬುದೇ

ತೋಚದೇ ಮೂಢರಾಗಿರುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ವೀರನಾದೊಬ್ಬ ಬ್ರಾಹ್ಮಣನೋ, ವೈಶ್ಯನೋ ಅಥವಾ ಶೂದ್ರನೋ ಧರ್ಮತಃ ದಂಡವನ್ನು ಧರಿಸಿ (ರಾಜನಂತೆಯೇ ದಂಡವನ್ನು ಧರಿಸಿ) ಕಳ್ಳ-ಕಾಕರ ಭಯದಿಂದ ಪ್ರಜೆಗಳನ್ನು ರಕ್ಷಿಸುತ್ತಾನೆ. ಬ್ರಾಹ್ಮಣ-ವೈಶ್ಯ-ಶೂದ್ರರಲ್ಲಿ ಯಾರಾದರೊಬ್ಬರು ದಂಡವನ್ನು ಧರಿಸಿ ರಾಜನು ಮಾಡಬೇಕಾಗಿದ್ದ ಕಾರ್ಯವನ್ನು ಮಾಡಬಹುದೇ? ಅವನಿಗೆ ಪರಾಕ್ರಮವಿದ್ದರೂ ಶಾಸ್ತ್ರದೃಷ್ಟ್ಯಾ ಅವನು ಹಾಗೆ ಮಾಡಬಾರದೆ? ಈ ಮೂರು ವರ್ಣಗಳವರಲ್ಲಿ ಯಾರಾದರೂ ಹಾಗೆ ಹೊರಟರೆ ಅವರನ್ನು ತಡೆಹಿಡಿಯಬೇಕೆ? ಅಥವಾ ಅವರಿಗೆ ಪ್ರೋತ್ಸಾಹ ನೀಡಬೇಕೇ? ನನ್ನ ಅಭಿಮತವೇನೆಂದರೆ : ಅಂತಹ ಸಂದರ್ಭದಲ್ಲಿ ಕ್ಷತ್ರಿಯರಿಂದ ಭಿನ್ನರಾದವರೂ ಶಸ್ತ್ರಧಾರಣೆಮಾಡಿ ರಾಜರಂತೆಯೇ ಪ್ರಜೆಗಳನ್ನು ಪಾಲನೆ ಮಾಡಬಹುದು. ಇದರಲ್ಲಿ ನಿನ್ನ ಅಭಿಪ್ರಾಯವೇನು?"

ಭೀಷ್ಮನು ಹೇಳುತ್ತಾನೆ :

ಅಪಾರೇ ಯೋ ಭವೇತ್ಪಾರಮಪ್ಲವೇ ಯಃ ಪ್ಲವೋ ಭವೇತ್ ।
ಶೂದ್ರೋ ವಾ ಯದಿ ವಾಪ್ಯನ್ಯಃ ಸರ್ವಥಾ ಮಾನಮರ್ಹತಿ ॥೩೮॥

"ಮಗು ಯುಧಿಷ್ಠಿರ! ಅಪಾರವಾದ ತೀರವೇ ಕಾಣದಿರುವ ಕಷ್ಟ ಸಾಗರದಲ್ಲಿ ಸಿಕ್ಕಿಕೊಂಡು ತಲ್ಲಣಿಸುತ್ತಿರುವ ಪ್ರಜೆಗಳಿಗೆ ಯಾವನು ತೀರದಂತೆ ಆಶ್ರಯವನ್ನು ನೀಡಬಲ್ಲನೋ, ಕಷ್ಟಸಾಗರವನ್ನು ದಾಟಲು ನೌಕೆಯು (ಬೇರೆಯ ಸಾಧನವು) ಇಲ್ಲದಿರುವಾಗ ಹಡಗಿನ ರೂಪವಾಗಿ ಕಷ್ಟಸಮುದ್ರ ದಿಂದ ದಾಟಿಸುವನೋ ಅವನು ಶೂದ್ರನೇ ಆಗಿರಲಿ ; ಮತ್ತಾರೇ ಆಗಿರಲಿ– ಮಾನಾರ್ಹನೇ ಸರಿ.

ಯಮಾಶ್ರಿತ್ಯ ನರಾ ರಾಜನ್ವರ್ತಯೇಯುರ್ಯಥಾಸುಖಮ್ ।
ಅನಾಥಾಸ್ತಪ್ಯಮಾನಾಶ್ಚ ದಸ್ಯುಭಿಃ ಪರಿಪೀಡಿತಾಃ ॥೩೯॥

ತಮೇವ ಪೂಜಯೇಯುಸ್ತೇ ಪ್ರೀತ್ಯಾ ಸ್ವಮಿವ ಬಾನ್ಧವಮ್ ।
ಆಭೀರಭೀಕ್ಷ್ಣಂ ಕೌರವ್ಯ ಕರ್ತಾ ಸಮ್ಮಾನಮರ್ಹತಿ ॥೪೦॥

ಕಳ್ಳ-ಕಾಕರಿಂದ ಅತ್ಯಂತವಾಗಿ ಪೀಡಿಸಲ್ಪಟ್ಟು ಬಹಳವಾಗಿ ಸಂಕಟ ಪಡುತ್ತಿರುವ ಅನಾಥರಾದ ಮಾನವರು ಯಾರ ಆಶ್ರಯವನ್ನು ಪಡೆದು

ಸುಖಜೀವನವನ್ನು ನಡೆಸುವವರೋ–ಅಂತಹ ಆಶ್ರಯದಾತರನ್ನೇ ಯಾವ ವಿಧವಾದ ವರ್ಣಭೇದವೂ ಇಲ್ಲದೇ ತಮ್ಮ ಬಂಧುವಿನಂತೆಯೇ ಆ ಜನರು ಪ್ರೀತಿಯಿಂದ ಗೌರವಿಸಬೇಕು. ಯಾವನು ನಿರ್ಭಯನಾಗಿ ಇತರರ ಕಷ್ಟ-ಸುಖಗಳನ್ನು ಬಾರಿ-ಬಾರಿಗೂ ವಿಚಾರಿಸುತ್ತಾ ಅವರ ಕಷ್ಟಗಳನ್ನು ಪರಿಹಾರಮಾಡುವನೋ–ಅವನು ರಾಜೋಚಿತವಾದ ಸಮ್ಮಾನಕ್ಕೆ ಅರ್ಹನಾಗುತ್ತಾನೆ.

ಕಿಂ ತೈರ್ಯೇಽನಡುಹೋ ನೋಹ್ಯಾಃ
ಕಿಂ ಧೇನ್ವಾ ವಾಪ್ಯದುಗ್ಧಯಾ ।
ವನ್ಧ್ಯಯಾ ಭಾರ್ಯಯಾ ಕೋಽರ್ಥಃ
ಕೋಽರ್ಥೋ ರಾಜ್ಞಾಪ್ಯರಕ್ಷತಾ ॥೪೧॥

ರಾಜನೇ ಆದರೂ ಪ್ರಜೆಗಳ ರಕ್ಷಣೆಯನ್ನು ಮಾಡಲು ಅಸಮರ್ಥನಾದರೆ ರಾಜೋಚಿತವಾದ ಸಮ್ಮಾನಕ್ಕೆ ಅವನು ಅರ್ಹನಾಗುವುದಿಲ್ಲ. ಭಾರವನ್ನು ಹೊರಲು ಅಸಮರ್ಥವಾದ ಎತ್ತುಗಳು ಎಷ್ಟಿದ್ದರೂ ಪ್ರಯೋಜನವೇನು? ಹಾಲಿಲ್ಲದಿರುವ ಹಸುವಿದ್ದೂ ಪ್ರಯೋಜನವೇನು? ಬಂಜೆಯಾದ ಹೆಂಡತಿಯಿಂದ ಯಾವ ಪ್ರಯೋಜನವಿದೆ? ಹಾಗೆಯೇ ರಕ್ಷಿಸಲು ಅಸಮರ್ಥನಾದ ರಾಜನಿದ್ದೇನು ಪ್ರಯೋಜನ?

ಯಥಾ ದಾರುಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ ।
ಯಥಾ ಹ್ಯನರ್ಥಃ ಷಣ್ಢೋ ವಾ ಪಾರ್ಥ ಕ್ಷೇತ್ರಂ ಯಥೋಷರಮ್ ॥

ಏವಂ ವಿಪ್ರೋಽನಧೀಯಾನೋ ರಾಜಾ ಯಶ್ಚ ನ ರಕ್ಷಿತಾ ।
ಮೇಘೋ ನ ವರ್ಷತೇ ಯಶ್ಚ ಸರ್ವಥಾ ತೇ ನಿರರ್ಥಕಾಃ ॥೪೩॥

ಮರದಿಂದ ಮಾಡಿದ ಆನೆಯು ಹೇಗೋ, ಒಳಗೆ ಹುಲ್ಲು ತುಂಬಿ ಮೇಲೆ ಚರ್ಮದ ಹೊದ್ದಿಕೆಯನ್ನು ಹೊದ್ದಿಸಿರುವ ಜಿಂಕೆಯು ಹೇಗೋ, ಅಪ್ರಯೋಜಕನಾದ ಷಂಡನು ಹೇಗೋ, ಬೆಳೆಯು ಬೆಳೆಯದೇ ಇರುವ ಚೌಳುಮಣ್ಣಿನ ಭೂಮಿಯು ಹೇಗೋ–ಹಾಗೆಯೇ ಮಳೆಗರೆಯದಿರುವ

ಮೇಘವೂ, ವೇದಾಧ್ಯಯನಮಾಡದ ಬ್ರಾಹ್ಮಣನೂ ಮತ್ತು ಪ್ರಜೆಗಳನ್ನು ರಕ್ಷಿಸಲು ಅಸಮರ್ಥನಾದ ರಾಜನೂ ನಿಷ್ಪ್ರಯೋಜಕರೇ ಸರಿ.

ನಿತ್ಯಂ ಯಸ್ತು ಸತೋ ರಕ್ಷೇದಸತಶ್ಚ ನಿವರ್ತಯೇತ್ ।
ಸ ಏವ ರಾಜಾ ಕರ್ತವ್ಯಸ್ತೇನ ಸರ್ವಮಿದಂ ಧೃತಮ್ ॥೪೪॥

ನಿತ್ಯವೂ ಯಾವನು ಸತ್ಪುರುಷರನ್ನು ರಕ್ಷಿಸುವನೋ, ದುಷ್ಟರನ್ನು ನಿಗ್ರಹಿಸುವನೋ–ಅಂತಹವನನ್ನೇ ರಾಜನನ್ನಾಗಿ ಮಾಡಿಕೊಳ್ಳಬೇಕು. ಅಂತಹವನಿಂದಲೇ ಈ ಜಗತ್ತು ಧರಿಸಲ್ಪಡುತ್ತದೆ."

ಌನೆಯ ಅಧ್ಯಾಯವು ಮುಗಿಯಿತು.

ೠನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಋತ್ವಿಜರ ಲಕ್ಷಣ : ಯಜ್ಞ ಮತ್ತು ದಕ್ಷಿಣೆಗಳ ಮಹತ್ವ: ತಪಸ್ಸಿನ ಶ್ರೇಷ್ಠತೆ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕ್ವಸಮುತ್ಥಾಃ ಕಥಂ ಶೀಲಾ ಋತ್ವಿಜಃ ಸ್ಯುಃ ಪಿತಾಮಹ ।
ಕಥಂವಿಧಾಶ್ಚ ರಾಜೇನ್ದ್ರ ತದ್ಬ್ರೂಹಿ ವದತಾಂ ವರ ॥೧॥

"ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ಋತ್ವಿಜರ ಉತ್ಪತ್ತಿಯು ಯಾವ ಕಾರಣದಿಂದಾಯಿತು? ಅವರ ಗುಣ-ಸ್ವಭಾವಗಳು ಹೇಗಿರಬೇಕು? ಅವರು ಯಾವ ರೀತಿಯಲ್ಲಿರುತ್ತಾರೆ?–ಈ ಎಲ್ಲ ವಿಷಯಗಳನ್ನೂ ಹೇಳು."

ಭೀಷ್ಮನು ಹೇಳುತ್ತಾನೆ :

ಪ್ರತಿಕರ್ಮ ಪರಾಚಾರ ಋತ್ವಿಜಾಂ ಸ್ಮ ವಿಧೀಯತೇ ।
ಛನ್ದಃ ಸಾಮಾದಿ ವಿಜ್ಞಾಯ ದ್ವಿಜಾನಾಂ ಶ್ರುತಮೇವ ಚ ॥೨॥

"ಋತ್ವಿಜರಾಗತಕ್ಕ ಬ್ರಾಹ್ಮಣರ ಛಂದಃಶಾಸ್ತ್ರಜ್ಞಾನ, ಋಗ್ಯಜು ಸ್ಸಾಮವೇದಗಳ ಜ್ಞಾನ, ಋಷಿಪ್ರಣೀತವಾದ ಸ್ಮೃತಿಗಳ ಮತ್ತು ಪೂರ್ವೋತ್ತರಮೀಮಾಂಸಾಶಾಸ್ತ್ರಗಳ ಜ್ಞಾನ–ಇವುಗಳನ್ನು ತಿಳಿದುಕೊಂಡು ಪ್ರತಿಕರ್ಮಕ್ಕೂ ಶ್ರೇಷ್ಠವಾದ ಆಚಾರವುಳ್ಳ ಋತ್ವಿಜರನ್ನು ನಿಯಮಿಸಿಕೊಳ್ಳ

ಬೇಕು. ರಾಜನಿಗಾಗಿ ಶಾಂತಿ ಮತ್ತು ಪೌಷ್ಟಿಕವಾದ ಕರ್ಮಗಳನ್ನು ಮಾಡುವುದೇ ಋತ್ವಿಜರ ಮುಖ್ಯಕರ್ತವ್ಯವಾಗಿರುತ್ತದೆ.

ಯೇ ತ್ವೇಕರತಯೋ ನಿತ್ಯಂ ಧೀರಾಶ್ಚ ಪ್ರಿಯವಾದಿನಃ ।
ಪರಸ್ಪರಸ್ಯ ಸುಹೃದಃ ಸಮನ್ತಾತ್ಸಮದರ್ಶಿನಃ ।
ಅನೃಶಂಸಾಃ ಸತ್ಯವಾಕ್ಯಾ ಅಕುಸೀದಾ ಅಥಾರ್ಜವಃ ॥೩॥

ಯಾರು ಯಜಮಾನನ ಏಕಮಾತ್ರ ಹಿತದಲ್ಲಿಯೇ ತತ್ಪರರಾಗಿರುವರೋ, ಧೀರರೋ, ಪ್ರಿಯವಾದಿಗಳೋ, ಪರಸ್ಪರವಾಗಿ ಸೌಹಾರ್ದದಿಂದಿರುವರೋ, ಎಲ್ಲರ ವಿಷಯದಲ್ಲಿಯೂ ಸಮಾನದೃಷ್ಟಿಯುಳ್ಳವರಾಗಿರುವರೋ–ಅಂತಹ ಬ್ರಾಹ್ಮಣರು ಋತ್ವಿಜರಾಗಲು ಯೋಗ್ಯರಾಗಿರುತ್ತಾರೆ. ಋತ್ವಿಜರು ಕ್ರೌರ್ಯದಿಂದ ವಿಹೀನರಾಗಿರಬೇಕು. ಸತ್ಯವಾದ ಮಾತನ್ನೇ ಹೇಳುವವರಾಗಿರಬೇಕು. ಬಡ್ಡಿಹಣದಿಂದ ಜೀವಿಸುವವರು ಆಗಬಾರದು. ಋಜುಸ್ವಭಾವದವರಾಗಿರಬೇಕು.

ಅದ್ರೋಹೋಽನಭಿಮಾನಶ್ಚ ಹ್ರೀಸ್ತಿತಿಕ್ಷಾ ದಮಃ ಶಮಃ ।
ಯಸ್ಮಿನ್ನೇತಾನಿ ದೃಶ್ಯನ್ತೇ ಸ ಪುರೋಹಿತ ಉಚ್ಯತೇ ॥೪॥

ಯಾರಿಗೂ ದ್ರೋಹವನ್ನು ಬಗೆಯದಿರುವಿಕೆ, ನಿರಭಿಮಾನ, ಲಜ್ಜಾಶೀಲತೆ, ಸಹನಶೀಲತೆ, ಅಂತರಿಂದ್ರಿಯ–ಬಹಿರಿಂದ್ರಿಯಗಳ ನಿಗ್ರಹ–ಈ ಸಮಸ್ತಗುಣಗಳೂ ಯಾರಲ್ಲಿ ಇರುವುವೋ–ಅಂತಹವರನ್ನು ಪುರೋಹಿತರೆಂದು ಕರೆಯುತ್ತಾರೆ. (ಅಂತಹವನನ್ನು ಪುರೋಹಿತನನ್ನಾಗಿ ಮಾಡಿಕೊಳ್ಳಬೇಕು.)

ಧೀಮಾನ್ಸತ್ಯಧೃತಿರ್ದಾನ್ತೋ ಭೂತಾನಾಮವಿಹಿಂಸಕಃ ।
ಅಕಾಮದ್ವೇಷಸಂಯುಕ್ತಸ್ತ್ರಿಭಿಃ ಶುಕ್ಲೈಃ ಸಮನ್ವಿತಃ ॥೫॥
ಅಹಿಂಸಕೋ ಜ್ಞಾನತೃಪ್ತಃ ಸ ಬ್ರಹ್ಮಾಸನಮರ್ಹತಿ ।
ಏತೇ ಮಹರ್ತ್ವಿಜಸ್ತಾತ ಸರ್ವೇ ಮಾನ್ಯಾ ಯಥಾರ್ಹತಃ ॥೬॥

ಯಾವನು ಬುದ್ಧಿವಂತನೋ, ಸತ್ಯನಿಷ್ಠೆಯುಳ್ಳವನೋ, ಜಿತೇಂದ್ರಿಯನೋ, ಪ್ರಾಣಿಗಳಿಗೆ ಹಿಂಸೆಮಾಡದವನೋ, ಕಾಮ-ದ್ವೇಷವಿಲ್ಲದವನೋ, ಶಾಸ್ತ್ರಜ್ಞಾನ-ಸದಾಚಾರ-ಸತ್ಕುಲಪ್ರಸೂತಿ–ಈ ಮೂರನ್ನೂ ಹೊಂದಿರುವನೋ, ಅಹಿಂಸಕನೋ, ಜ್ಞಾನ-ವಿಜ್ಞಾನಗಳ ಮನನ-ನಿದಿ

ಧ್ಯಾಸನಗಳಿಂದ ತೃಪ್ತಾತ್ಮನಾಗಿರುವನೋ–ಅಂತಹವನು ಬ್ರಹ್ಮತ್ವಕ್ಕೆ (ಬ್ರಹ್ಮನ ಸ್ಥಾನಕ್ಕೆ) ಯೋಗ್ಯನಾಗಿರುತ್ತಾನೆ. ಇವರೆಲ್ಲರೂ ಋತ್ವಿಜರಲ್ಲಿ ಶ್ರೇಷ್ಠರಾಗಿರುತ್ತಾರೆ. ಎಲ್ಲರೂ ಯಥಾಯೋಗ್ಯವಾಗಿ ಮಾನಾರ್ಹರೇ ಆಗಿರುತ್ತಾರೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿದಂ ವೇದವಚನಂ ದಕ್ಷಿಣಾಸು ವಿಧೀಯತೇ ।
ಇದಂ ದೇಯಮಿದಂ ದೇಯಂ ನ ಕ್ವಚಿದ್ವ್ಯವತಿಷ್ಠತೇ ॥೭॥

"ಪಿತಾಮಹ! ಯಜ್ಞಸಂಬಂಧವಾದ ದಕ್ಷಿಣೆಯ ವಿಷಯದಲ್ಲಿ 'ಇದಂ ದೇಯಂ ಇದಂ ದೇಯಂ'–'ಇದನ್ನು ಕೊಡಬೇಕು–ಇದನ್ನು ಕೊಡಬೇಕು'–ಎಂಬ ವೇದವಚನವಿದೆ. 'ಇದನ್ನೂ ಕೊಡಬೇಕು ; ಇದನ್ನೂ ಕೊಡಬೇಕು'–ಎಂಬುದು ಬೆಳೆಯುತ್ತಾ ಹೋಗುತ್ತದೆಯೇ ಹೊರತು ಇದು ಎಲ್ಲಿಯೂ ನಿಲ್ಲುವುದೇ ಇಲ್ಲ.

ನೇದಂ ಪ್ರತಿಧನಂ ಶಾಸ್ತ್ರಮಾಪದ್ಧರ್ಮಾನುಶಾಸ್ತ್ರತಃ ।
ಆಜ್ಞಾ ಶಾಸ್ತ್ರಸ್ಯ ಘೋರೇಯಂ ನ ಶಕ್ತಿಂ ಸಮವೇಕ್ಷತೇ ॥೮॥

ಯಜ್ಞದಲ್ಲಿ ದಕ್ಷಿಣೆಯನ್ನು ಕೊಡುವ ವಿಷಯದಲ್ಲಿ ಯಾವ 'ಇದಂ ದೇಯಮಿದಂ ದೇಯಂ' ಎಂಬ ವೇದವಚನವಿರುವುದೋ ಅದು ಆಪತ್ಕಾಲದ ಧರ್ಮಶಾಸ್ತ್ರಾನುಸಾರವಾಗಿ ಹೇಳಲ್ಪಟ್ಟಿರುವುದಿಲ್ಲ. ಆ ವೇದವಚನವು ಆಜ್ಞೆಯಾಗಿದೆ. ಅಪಾರವಾದ ದಕ್ಷಿಣೆಯನ್ನು ಕೊಡಲು ಒಬ್ಬನಿಗೆ ಸಾಮರ್ಥ್ಯವಿರುವುದೇ ಇಲ್ಲವೇ?–ಎಂಬ ವಿವೇಚನೆಗೆ ಇಲ್ಲಿ ಅವಕಾಶವಿಲ್ಲ. ಆದುದರಿಂದ ಆಜ್ಞಾರೂಪವಾದ ಈ ವೇದವಾಕ್ಯವು ಬಹಳ ಘೋರವಾದುದೆಂದೇ ನನ್ನ ಅಭಿಪ್ರಾಯವಾಗಿದೆ.

ಶ್ರದ್ಧಾವತಾ ಚ ಯಷ್ಟವ್ಯಮಿತ್ಯೇಷಾ ವೈದಿಕೀ ಶ್ರುತಿಃ ।
ಮಿಥ್ಯೋಪೇತಸ್ಯ ಯಜ್ಞಸ್ಯ ಕಿಮು ಶ್ರದ್ಧಾ ಕರಿಷ್ಯತಿ ॥೯॥

ಮತ್ತೊಂದು ಕಡೆಯಲ್ಲಿ 'ಶ್ರದ್ಧಾವತಾ ಚ ಯಷ್ಟವ್ಯಂ'–'ಶ್ರದ್ಧಾವಂತನು ಯಾಗಮಾಡಬೇಕು'–ಎಂಬ ಶ್ರುತ್ಯಾಜ್ಞೆಯೂ ಇದೆ. ಈ ಆಜ್ಞಾನುಸಾರವಾಗಿ ದರಿದ್ರನೊಬ್ಬನು ಯಜ್ಞವನ್ನು ಮಾಡಲು ಪ್ರಾರಂಭಿಸಿ 'ಇದಂ ದೇಯಮಿದಂ ದೇಯಂ' ಎಂಬ ಶ್ರುತ್ಯಾಜ್ಞೆಯಂತೆ ಯಥೋಕ್ತ

ವಾದ ದಕ್ಷಿಣೆಯನ್ನು ಕೊಡದಿದ್ದರೆ ಯಜ್ಞವು ನಿಷ್ಫಲವಾಗುತ್ತದೆ. ಅಂತಹ ಸಮಯದಲ್ಲಿ ಕೇವಲ ಶ್ರದ್ಧೆಯೇನು ಮಾಡುತ್ತದೆ? (ಈ ಎರಡು ವಿಷಯ ಗಳನ್ನು ಸಮನ್ವಯಿಸುವುದು ಹೇಗೆ?")

(ಯುಧಿಷ್ಠಿರನು ಪ್ರಶ್ನೆಯನ್ನು ಕೇಳಿದೊಡನೆಯೇ ಭೀಷ್ಮನು ಎಚ್ಚರಿಸು ತ್ತಾನೆ.)

ನ ವೇದಾನಾಂ ಪರಿಭವಾನ್ನ ಶಾಠ್ಯೇನ ನ ಮಾಯಯಾ ।
ಕಶ್ಚಿನ್ಮಹದವಾಪ್ನೋತಿ ಮಾ ತೇಽಭೂದ್ಬುದ್ಧಿರೀದೃಶೀ ॥೧೦॥

"ಯುಧಿಷ್ಠಿರ! ವೇದಗಳನ್ನು ನಿಂದೆಮಾಡುವುದರಿಂದಾಗಲೀ, ಔದ್ಧತ್ಯ ದಿಂದಾಗಲೀ, ವಂಚನೆಯಿಂದಾಗಲೀ–ಮಹತ್ತ್ವವನ್ನು ಯಾರೂ ಪಡೆಯು ವುದಿಲ್ಲ. ಆದುದರಿಂದ ನಿನ್ನ ಬುದ್ಧಿಯು ಹೀಗಾಗದಿರಲಿ.

ಯಜ್ಞಾಙ್ಗಂ ದಕ್ಷಿಣಾ ತಾತ ವೇದಾನಾಂ ಪರಿಬೃಂಹಣಮ್ ।
ನ ಯಜ್ಞಾ ದಕ್ಷಿಣಾಹೀನಾಸ್ತಾರಯನ್ತಿ ಕಥಂಚನ ॥೧೧॥

ದಕ್ಷಿಣೆಯು ಯಜ್ಞದ ಅಂಗವಾಗಿದ್ದು–ವೇದಗಳ ವಿಸ್ತಾರವೇ ಆಗಿದ್ದು ಯಜ್ಞದಲ್ಲಿ ಉಂಟಾಗಬಹುದಾದ ನ್ಯೂನತೆಯನ್ನು ಪರಿಹರಿಸುವುದಾಗಿದೆ. ದಕ್ಷಿಣೆಯಿಂದ ಹೀನವಾದ ಯಜ್ಞಗಳು ಯಜಮಾನನನ್ನು ಉದ್ಧರಿಸುವುದಿಲ್ಲ.

ಶಕ್ತಿಸ್ತು ಪೂರ್ಣಪಾತ್ರೇಣ ಸಂಮಿತಾ ನ ಸಮಾಭವತ್ ।
ಅವಶ್ಯಂ ತಾತ ಯಷ್ಟವ್ಯಂ ತ್ರಿಭಿರ್ವರ್ಣೈರ್ಯಥಾವಿಧಿ ॥೧೨॥

ದರಿದ್ರನಿಗೆ ದಕ್ಷಿಣೆಯನ್ನು ಕೊಡುವ ಸಾಮರ್ಥ್ಯವಿಲ್ಲವೆಂದೂ–ಆದರೆ ಅವನಿಗೆ ಶ್ರದ್ಧೆಯಿರುವುದೆಂದೂ ನೀನು ಹೇಳಿದೆ. ದಕ್ಷಿಣೆಯನ್ನು ಕೊಡುವ ಶಕ್ತಿಯು ಯಾವಾಗ ಅಸಮವಾಗಿದೆಯೋ (ಬಲ್ಲಿದನು ಕೊಡುವ ದಕ್ಷಿಣೆ ಯನ್ನು ಬಡವನು ಕೊಡುವುದಕ್ಕಾಗುವುದಿಲ್ಲವೋ) ಆಗ ಪೂರ್ಣಪಾತ್ರ ದಕ್ಷಿಣೆಯೇ ಉಕ್ತದಕ್ಷಿಣೆಗೆ ಸಮನಾಗುವುದು. ದರಿದ್ರನು ತನ್ನ ಶಕ್ತಿಗೆ ಅನುಸಾರವಾಗಿ ಮಾಡುವ ಪೂರ್ಣಪಾತ್ರದ (೨೫೬ ಹಿಡಿಧಾನ್ಯ) ದಕ್ಷಿಣೆಯೇ ಪರ್ಯಾಪ್ತವಾಗಿದೆ. ಎಲ್ಲಿ ಧನಿಕನಿಗೆ ಸುವರ್ಣರೂಪದ ದಕ್ಷಿಣೆಗಳನ್ನು ಕೊಡುವ ವಿಧಾನವಿದೆಯೋ–ಅಲ್ಲಿಯೇ ಬಡವನಾದವನಿಗೆ

ಪೂರ್ಣಪಾತ್ರರೂಪದ ದಕ್ಷಿಣೆಯನ್ನು ಕೊಡುವ ವಿಧಾನವೂ ಇದೆ. ಆದುದರಿಂದ ಮೂರು ವರ್ಣಗಳವರೂ ಯಥಾವಿಧಿ ಯಥಾಶಕ್ತಿ ದಕ್ಷಿಣೆಯ ಮೂಲಕವಾಗಿ ಯಾಗವನ್ನು ಮಾಡಲೇಬೇಕು.

ಸೋಮೋ ರಾಜಾ ಬ್ರಾಹ್ಮಣಾನಾಮಿತ್ಯೇಷಾ ವೈದಿಕೀ ಶ್ರುತಿಃ ।
ತಂ ಚ ವಿಕ್ರೇತುಮಿಚ್ಛಂತಿ ನ ವೃಥಾ ವೃತ್ತಿರಿಷ್ಯತೇ ॥೧೩॥

'ಸೋಮೋ ವೈ ಬ್ರಾಹ್ಮಣಾನಾಗ್ಂ ರಾಜಾ' 'ಸೋಮನು ಬ್ರಾಹ್ಮಣರಿಗೆ ರಾಜನು'–ಎಂಬುದು ವೇದಗಳ ಸಿದ್ಧಾಂತವಾಗಿದೆ. ಆದರೆ ಬ್ರಾಹ್ಮಣರು ಸೋಮನಿಗೆ ಸಂಬಂಧಿಸಿದ ಸೋಮಲತೆಯನ್ನೇ ವಿಕ್ರಯಿಸಲು ಇಚ್ಛಿಸುತ್ತಾರೆ. ಆದರೆ ಈ ಸೋಮವಿಕ್ರಯವೃತ್ತಿಯು ವ್ಯರ್ಥವಾದುದೇನೂ ಅಲ್ಲ.

ತೇನ ಕ್ರೀತೇನ ಯಜ್ಞೇನ ತತೋ ಯಜ್ಞಃ ಪ್ರತಾಯತೇ ।
ಇತ್ಯೇವಂ ಧರ್ಮತೋ ಧ್ಯಾತಮೃಷಿಭಿರ್ಧರ್ಮಚಾರಿಭಿಃ ॥೧೪॥

ಹಾಗೆ ಕೊಂಡುಕೊಂಡ ಸೋಮಲತೆಯಿಂದ ಯಜ್ಞವು ವೃದ್ಧಿ ಹೊಂದುತ್ತದೆ. (ಸೋಮಲತೆಯ ವಿಕ್ರಯದಿಂದ ಎರಡು ಪ್ರಯೋಜನ ಗಳಿವೆ. ಯಜ್ಞಾಂಗವಾದ ಸೋಮರಸವನ್ನು ಯಜಮಾನನಿಗೆ ಒದಗಿಸಿ ಕೊಡುವುದು. ಸೋಮಲತೆಯ ವಿಕ್ರಯದಿಂದ ಬಂದ ಧನದಿಂದ ತಾನೂ ಯಜ್ಞಮಾಡುವುದು.) ಈ ಕಾರಣಗಳಿಂದ ಸೋಮಲತೆಯ ವಿಕ್ರಯವು ಯಜ್ಞದ ವೃದ್ಧಿಗೆ ಕಾರಣವಾಗುತ್ತದೆ. ಧರ್ಮಚಾರಿಗಳಾದ ಋಷಿಗಳು ಈ ವಿಷಯದಲ್ಲಿ ಧರ್ಮಾನುಸಾರವಾದ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿರು ತ್ತಾರೆ.

ಪುಮಾನ್ಯಜ್ಞಶ್ಚ ಸೋಮಶ್ಚ ನ್ಯಾಯವೃತ್ತೋ ಯದಾ ಭವೇತ್ ।
ಅನ್ಯಾಯವೃತ್ತಃ ಪುರುಷೋ ನ ಪರಸ್ಯ ನ ಚಾತ್ಮನಃ ॥೧೫॥

ಯಜ್ಞಕರ್ತನಾದ ಯಜಮಾನ, ಯಜ್ಞ ಮತ್ತು ಸೋಮರಸ–ಈ ಮೂರೂ ನ್ಯಾಯಸಂಪನ್ನವಾಗಿದ್ದರೆ ಯಜ್ಞವೂ ಯಥಾರ್ಥರೂಪದಲ್ಲಿ ಪರ್ಯವಸಾನವಾಗುತ್ತದೆ. ಅನ್ಯಾಯವೃತ್ತಿಯ ಪುರುಷನು ತನಗೂ ಒಳ್ಳೆಯದನ್ನು ಮಾಡಿಕೊಳ್ಳುವುದಿಲ್ಲ. ಇತರರಿಗೂ ಒಳ್ಳೆಯದನ್ನು ಮಾಡುವುದಿಲ್ಲ.

(ದ್ರವ್ಯಯಜ್ಞಮಾಡಲು ಶಕ್ತಿಯಿಲ್ಲದವರು ತಪೋಯಜ್ಞವನ್ನು ಮಾಡಬಹುದೆಂದು ಭೀಷ್ಮನು ಹೇಳುತ್ತಾನೆ.)

ಶರೀರವೃತ್ತಮಾಸ್ಥಾಯ ಇತ್ಯೇಷಾ ಶ್ರೂಯತೇ ಶ್ರುತಿಃ ।
ನಾತಿಸಮ್ಯಕ್ಪ್ರಣೀತಾನಿ ಬ್ರಾಹ್ಮಣಾನಾಂ ಮಹಾತ್ಮನಾಮ್ ॥೧೬॥

ಕೇವಲ ಶರೀರಧಾರಣೆಗಾಗಿ ಉಂಛವೃತ್ತಿಯಿಂದ ಜೀವಿಸುವ ಮಹಾತ್ಮರಾದ ಬ್ರಾಹ್ಮಣರಿಗೆ ಪ್ರಣೀತಾಗ್ನಿಸಾಧ್ಯವಾದ ಯಜ್ಞ-ಹೋಮಾದಿಗಳು ಅವಶ್ಯಕವಲ್ಲ. ಏಕೆಂದರೆ ಅವುಗಳಿಂದ ಅವರಿಗೆ ಹಿಂಸೆಯಾಗುತ್ತದೆ. (ಅವುಗಳಲ್ಲಿ ಹಿಂಸೆಯಿದೆ.) ಹೀಗೂ ಶ್ರುತಿವಚನವಿದೆ.

ತಪೋ ಯಜ್ಞಾದಪಿ ಶ್ರೇಷ್ಠಮಿತ್ಯೇಷಾ ಪರಮಾ ಶ್ರುತಿಃ ।
ತತ್ತೇ ತಪಃ ಪ್ರವಕ್ಷ್ಯಾಮಿ ವಿದ್ವಂಸ್ತದಪಿ ಮೇ ಶೃಣು ॥೧೭॥

'ತಪೋ ಯಜ್ಞಾದಪಿ ಶ್ರೇಷ್ಠಂ'–'ಯಜ್ಞಕ್ಕಿಂತಲೂ ತಪಸ್ಸೇ ಶ್ರೇಷ್ಠವಾದುದು'–ಎಂದು ಶ್ರುತಿಯ ಶ್ರೇಷ್ಠವಾದ ವಚನವಿದೆ. ವಿದ್ವಾಂಸನೇ! ಆ ತಪಸ್ಸು ಎಂತಹುದೆಂಬುದನ್ನು ನಿನಗೆ ಹೇಳುತ್ತೇನೆ ; ಕೇಳು :

ಅಹಿಂಸಾ ಸತ್ಯವಚನಮಾನೃಶಂಸ್ಯಂ ದಮೋ ಘೃಣಾ ।
ಏತತ್ತಪೋ ವಿದುರ್ಧೀರಾ ನ ಶರೀರಸ್ಯ ಶೋಷಣಮ್ ॥೧೮॥

ಕೇವಲ ಶರೀರಶೋಷಣೆಯೇ ತಪಸ್ಸಲ್ಲ. ಅಹಿಂಸೆ, ಸತ್ಯವಚನ, ಅಕ್ರೌರ್ಯ, ಜಿತೇಂದ್ರಿಯತೆ ಮತ್ತು ದಯಾಪರತೆ–ಈ ಗುಣಗಳಿಂದ ಕೂಡಿರುವುದಕ್ಕೆ ಧೀರರು ತಪಸ್ಸು ಎಂದು ಹೇಳುತ್ತಾರೆ.

ಅಪ್ರಾಮಾಣ್ಯಂ ಚ ವೇದಾನಾಂ ಶಾಸ್ತ್ರಾಣಾಂ ಚಾಭಿಲಙ್ಘನಮ್ ।
ಅವ್ಯವಸ್ಥಾ ಚ ಸರ್ವತ್ರ ತದ್ವೈ ನಾಶನಮಾತ್ಮನಃ ॥೧೯॥

ವೇದವು ಪ್ರಮಾಣವಲ್ಲವೆಂದು ಹೇಳುವುದು, ಶಾಸ್ತ್ರದ ಆಜ್ಞೆಗಳನ್ನು ಉಲ್ಲಂಘಿಸಿ ನಡೆಯುವುದು, ಎಲ್ಲೆಡೆಗಳಲ್ಲಿಯೂ ಅವ್ಯವಸ್ಥೆಯಿಂದಲೇ ನಡೆದುಕೊಳ್ಳುವುದು–ಇವುಗಳು ಆತ್ಮನಾಶಕವಾದುವುಗಳು.

ನಿಬೋಧ ದೇವಹೋತ್ರೂಣಾಂ ವಿಧಾನಂ ಪಾರ್ಥ ಯಾದೃಶಮ್ ।
*** ಚಿತ್ತಿಃ ಸ್ರುಕ್ಚಿತ್ತಮಾಜ್ಯಂ ಚ ಪವಿತ್ರಂ ಜ್ಞಾನಮುತ್ತಮಮ್ ॥೨೦॥**

---

* ಹೋತೃಗಳಿಗೆ ಸಂಬಂಧಿಸಿದ ದಶದ್ರವ್ಯಗಳ ವಿಷಯವಾಗಿ ಶ್ರುತಿಪಾಠವು ಹೀಗಿದೆ :

ಯುಧಿಷ್ಠಿರ! ದೈವೀಸಂಪತ್ತಿನಿಂದ ಕೂಡಿರುವ ಹೋತೃಗಳಿಗೆ ಯಜ್ಞ ಸಂಬಂಧವಾದ ಉಪಕರಣಗಳು ಯಾವ ರೀತಿಯಲ್ಲಿ ಇರುವುವು– ಎಂಬುದನ್ನು ಹೇಳುವೆನು ; ಕೇಳು : ಚಿತ್ತಿಯೇ (ಬುದ್ಧಿಯೇ) ಸ್ರುಕ್, ಚಿತ್ತವು (ಮನಸ್ಸು) ಆಜ್ಯ. ಉತ್ತಮವಾದ ಜ್ಞಾನವೇ ಯಜ್ಞಸಮಯದಲ್ಲಿ ಕೈಗೆ ತೊಟ್ಟುಕೊಳ್ಳುವ ಪವಿತ್ರ.

ಸರ್ವಂ ಜಿಹ್ಮಂ ಮೃತ್ಯುಪದಮಾರ್ಜವಂ ಬ್ರಹ್ಮಣಃ ಪದಮ್ ।
ಏತಾವಾಞ್ಜ್ಞಾನವಿಷಯಃ ಕಿಂ ಪ್ರಲಾಪಃ ಕರಿಷ್ಯತಿ ॥೨೧॥

ಯುಧಿಷ್ಠಿರ! ಸಕಲವಿಧವಾದ ಕುಟಿಲತೆಯೂ ಮೃತ್ಯುವಿನ ಸ್ಥಾನ ವಾಗಿದೆ. ಸಕಲವಿಧವಾದ ಸರಳತೆಯೂ ಬ್ರಹ್ಮನ ಪ್ರಾಪ್ತಿಗೆ ಸ್ಥಾನವಾಗಿದೆ. (ಕುಟಿಲತೆಯೇ ಮೃತ್ಯು. ಸರಳತೆಯೇ ಬ್ರಹ್ಮ) ಜ್ಞಾನದ ವಿಷಯವು ಇಷ್ಟು ಮಾತ್ರವಾಗಿದೆ. ಉಳಿದುವೆಲ್ಲಾ ವ್ಯರ್ಥಪ್ರಲಾಪಮಾತ್ರವಾಗಿವೆ. ಅವುಗಳೇನು ಮಾಡುತ್ತವೆ?”

೭೯ನೆಯ ಅಧ್ಯಾಯವು ಮುಗಿಯಿತು.

೮೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನು ಮಿತ್ರರನ್ನೂ ಶತ್ರುಗಳನ್ನೂ ಗುರುತಿಸುವ ರೀತಿ : ಮಂತ್ರಿಗಳ ಲಕ್ಷಣ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಪ್ಯಲ್ಪತರಂ ಕರ್ಮ ತದಪ್ಯೇಕೇನ ದುಷ್ಕರಮ್ ।
ಪುರುಷೇಣಾಸಹಾಯೇನ ಕಿಮು ರಾಜ್ಞಾ ಪಿತಾಮಹ ॥೧॥

“ಪಿತಾಮಹ! ಕಾರ್ಯವು ಎಷ್ಟೇ ಅಲ್ಪವೇ ಆಗಿದ್ದರೂ ಇತರರ ಸಹಾಯವಿಲ್ಲದೇ ಒಬ್ಬನೇ ಮಾಡಿಮುಗಿಸುವುದು ಕಷ್ಟಸಾಧ್ಯವೇ ಸರಿ. ಹೀಗಿರುವಾಗ ರಾಜನ ವಿಷಯದಲ್ಲಿ ಹೇಳಬೇಕಾದುದೇನಿದೆ? (ರಾಜನ

ಚಿತ್ತಿಃ ಸ್ರುಕ್ । ಚಿತ್ತಮಾಜ್ಯಂ । ವಾಗ್ವೇದಿಃ । ಆಧೀತಂ ಬರ್ಹಿಃ । ಕೇತೋ ಅಗ್ನಿಃ । ವಿಜ್ಞಾತಮಗ್ನಿಃ । ವಾಕ್ಪತಿರ್ಹೋತಾ । ಮನ ಉಪವಕ್ತಾ । ಪ್ರಾಣೋ ಹವಿಃ । ಸಾಮಾಧ್ವರ್ಯುಃ(ತೈ. ಯಜುರಾರಣ್ಯಕ)

ಕಾರ್ಯಭಾರವು ದೊಡ್ಡದಾಗಿರುವುದರಿಂದ ಅವನಿಗೆ ಸಹಾಯಕರೂ ಅಪಾರ ಸಂಖ್ಯೆಯಲ್ಲಿಯೇ ಇರಬೇಕಾಗುತ್ತದೆ.)

ಕಿಂ ಶೀಲಃ ಕಿಂ ಸಮಾಚಾರೋ ರಾಜ್ಞೋಽಥ ಸಚಿವೋ ಭವೇತ್ ।
ಕೀದೃಶೇ ವಿಶ್ವಸೇದ್ರಾಜಾ ಕೀದೃಶೇ ನ ಚ ವಿಶ್ವಸೇತ್ ॥೨॥

ಎಂತಹ ಶೀಲಸ್ವಭಾವದವನು, ಎಂತಹ ಆಚಾರ-ವ್ಯವಹಾರವುಳ್ಳವನು ರಾಜನಿಗೆ ಸಚಿವನಾಗಬೇಕು? ರಾಜನು ಎಂತಹವರಲ್ಲಿ ವಿಶ್ವಾಸವನ್ನಿಡಬೇಕು? ಎಂತಹವರಲ್ಲಿ ವಿಶ್ವಾಸವನ್ನಿಡಬಾರದು?–ಈ ಎಲ್ಲ ವಿಷಯ ಗಳನ್ನೂ ಹೇಳು.”

ಭೀಷ್ಮನು ಹೇಳುತ್ತಾನೆ :

ಚತುರ್ವಿಧಾನಿ ಮಿತ್ರಾಣಿ ರಾಜ್ಞಾಂ ರಾಜನ್ಭವನ್ತ್ಯುತ ।
ಸಹಾರ್ಥೋ ಭಜಮಾನಶ್ಚ ಸಹಜಃ ಕೃತ್ರಿಮಸ್ತಥಾ ॥೩॥

“ಯುಧಿಷ್ಠಿರ! ರಾಜರಿಗೆ ಸಹಾಯಕರು ಅಥವಾ ಮಿತ್ರರು ನಾಲ್ಕು ಪ್ರಕಾರವಾಗಿದ್ದಾರೆ. ‘ನಾನು ನಿನಗೆ ಈ ಸಹಾಯಮಾಡುತ್ತೇನೆ. ಇದಕ್ಕೆ ಪ್ರತಿಯಾಗಿ ನೀನು ನನಗೆ ಇಂತಹ ಸಮಯದಲ್ಲಿ ಇಂತಹ ಸಹಾಯಮಾಡಬೇಕು’–ಇವೇ ಮುಂತಾದ ನಿಬಂಧನೆಯೊಡನೆ ಪರಸ್ಪರ ಪ್ರಯೋಜನವನ್ನು ಉದ್ದೇಶಿಸಿ ಮಾಡಿಕೊಳ್ಳುವ ಮೈತ್ರಿಯು **ಸಹಾರ್ಥಮೈತ್ರೀ.** ವಂಶ ಸಂಬಂಧದಿಂದ ಪರಂಪರೆಯಾಗಿ ಬಂದ ಮೈತ್ರಿಯು **ಭಜಮಾನಮೈತ್ರೀ.** ಹುಟ್ಟಿದಾಗಿನಿಂದ ಜೊತೆಯಲ್ಲಿರುವುದು ; ವಿದ್ಯಾಭ್ಯಾಸದ ಸಮಯದಲ್ಲಿ ಜೊತೆಯಲ್ಲಿರುವುದು ; ಒಟ್ಟಿಗೆ ಕೆಲಸಮಾಡುವುದು–ಈ ಕಾರಣಗಳಿಂದ ಸ್ವಭಾವೈಕ್ಯದಿಂದ ಉಂಟಾಗುವ ಮೈತ್ರಿಯು **ಸಹಜಮೈತ್ರೀ.** ಮನಃಪೂರ್ವಕವಾಗಿ ಮೈತ್ರಿಯಿಲ್ಲದಿದ್ದರೂ ಸಂದರ್ಭಕ್ಕೆ ತಕ್ಕಂತೆ ಮಿತ್ರನಂತೆ ವರ್ತಿಸುವುದು. **ಕೃತ್ರಿಮಮೈತ್ರೀ**–ಹೀಗೆ ನಾಲ್ಕು ಪ್ರಕಾರವಾದ ಮಿತ್ರರಿರುತ್ತಾರೆ.

ಧರ್ಮಾತ್ಮಾ ಪಞ್ಚಮಶ್ಚಾಪಿ ಮಿತ್ರಂ ನೈಕಸ್ಯ ನ ದ್ವಯೋಃ ।
ಯತೋ ಧರ್ಮಸ್ತತೋ ವಾ ಸ್ಯಾದ್ಧರ್ಮಸ್ಥೋ ವಾ ತತೋ ಭವೇತ್ ॥೪॥

ಯಸ್ತಸ್ಯಾರ್ಥೋ ನ ರೋಚೇತ ನ ತಂ ತಸ್ಯ ಪ್ರಕಾಶಯೇತ್ ।
ಧರ್ಮಾಧರ್ಮೇಣ ರಾಜಾನಶ್ಚರನ್ತಿ ವಿಜಿಗೀಷವಃ ॥೫॥

ಈ ನಾಲ್ವರೇ ಅಲ್ಲದೆ ರಾಜನಿಗೆ ಐದನೆಯ ಮಿತ್ರನೂ ಇದ್ದಾನೆ. ಅವನು ಧರ್ಮಾತ್ಮನಾದವನು. ಅವನು ಯಾವ ಒಂದು ಪಕ್ಷವನ್ನೂ ಸೇರುವವನಲ್ಲ. ಎರಡು ಕಡೆಗಳಲ್ಲಿಯೂ ಮಿತ್ರನೆಂದು ಹೇಳಿಕೊಂಡು ಧನವನ್ನು ಸಂಪಾದಿಸುವವನೂ ಅಲ್ಲ. ಯಾವ ಪಕ್ಷದಲ್ಲಿ ಧರ್ಮವಿರುವುದೋ ಆ ಪಕ್ಷಕ್ಕೇ ಯಾವಾಗಲೂ ಅವನ ಒಲವಿರುತ್ತದೆ. ಅಥವಾ ಯಾವ ರಾಜನು ಧರ್ಮಪರಾಯಣನಾಗಿರುವನೋ ಆ ರಾಜನ ಆಶ್ರಯವನ್ನು ಪಡೆದುಕೊಳ್ಳುತ್ತಾನೆ. ಸಂಪೂರ್ಣವಾಗಿ ಧರ್ಮದಲ್ಲಿಯೇ ಆಸಕ್ತನಾಗಿರುವ ಇಂತಹ ಮಿತ್ರನಿಗೆ ಯಾವ ಕಾರ್ಯವು ರುಚಿಸುವುದಿಲ್ಲವೋ ಅಂತಹ ಕಾರ್ಯವನ್ನು ಅವನ ಮುಂದೆ ಬಹಿರಂಗಪಡಿಸಬಾರದು. ಹಾಗೆ ಬಹಿರಂಗ ಪಡಿಸಿದರೆ ಅದಕ್ಕವನು ಅಡ್ಡಿಬರುತ್ತಾನೆ. ಮೇಲಾಗಿ ವಿಜಯೇಚ್ಛುಗಳಾದ ರಾಜರು ಕಾರ್ಯಸಾಧನೆಗಾಗಿ ಧರ್ಮ ಮತ್ತು ಅಧರ್ಮ ಎರಡನ್ನೂ ಅವಲಂಬಿಸಬೇಕಾಗುತ್ತದೆ. ಎರಡು ಮಾರ್ಗಗಳಲ್ಲಿಯೂ ಅವರು ಸಮಯಾನುಸಾರವಾಗಿ ಪ್ರವೃತ್ತರಾಗುತ್ತಾರೆ.

ಚತುರ್ಣಾಂ ಮಧ್ಯಮೌ ಶ್ರೇಷ್ಠೌ ನಿತ್ಯಂ ಶಙ್ಕ್ಯೌ ತಥಾಪರೌ ।
ಸರ್ವೇ ನಿತ್ಯಂ ಶಙ್ಕಿತವ್ಯಾಃ ಪ್ರತ್ಯಕ್ಷಂ ಕಾರ್ಯಮಾತ್ಮನಃ ॥೬॥

ಹಿಂದೆ ಹೇಳಿದ ನಾಲ್ಕು ರೀತಿಯ ಮಿತ್ರರಲ್ಲಿ ಪಾರಂಪರ್ಯವಾಗಿ ಬಂದ ಭಜಮಾನಮಿತ್ರ ಮತ್ತು ಸ್ವಭಾವೈಕ್ಯದಿಂದ ಮಿತ್ರನಾಗುವ ಸಹಜಮಿತ್ರ ಈ ಇಬ್ಬರೂ ಶ್ರೇಷ್ಠರು. ಉಳಿದಿಬ್ಬರು ಸಂದೇಹನೀಯರು. ಸಹಾರ್ಥ-ಕೃತ್ರಿಮರನ್ನು ಸುಲಭವಾಗಿ ನಂಬಬಾರದು. ಒಟ್ಟಿನಲ್ಲಿ ಹೇಳುವುದಾದರೆ ತನ್ನ ಕಾರ್ಯಸಿದ್ಧಿಯಲ್ಲಿಯೇ ದೃಷ್ಟಿಯಿರುವ ರಾಜನು ನಾಲ್ವರು ಮಿತ್ರರ ವಿಷಯದಲ್ಲಿಯೂ ಸಂದೇಹಗ್ರಸ್ತನಾಗಿಯೇ ಇರಬೇಕು.

ನ ಹಿ ರಾಜ್ಞಾ ಪ್ರಮಾದೋ ವೈ ಕರ್ತವ್ಯೋ ಮಿತ್ರರಕ್ಷಣೇ ।
ಪ್ರಮಾದಿನಂ ಹಿ ರಾಜಾನಂ ಲೋಕಾಃ ಪರಿಭವನ್ತ್ಯುತ ॥೭॥

ರಾಜನು ತನ್ನ ಮಿತ್ರರ ರಕ್ಷಣೆಯ ವಿಷಯದಲ್ಲಿ ಯಾವಾಗಲೂ

ಪ್ರಮತ್ತನಾಗಬಾರದು. ಜಾಗರೂಕತೆಯಿಂದಿರಬೇಕು. ಮಿತ್ರರ ರಕ್ಷಣೆಯ ವಿಷಯದಲ್ಲಿ ಜಾಗರೂಕನಾಗಿಲ್ಲದ ರಾಜನನ್ನು ಪ್ರಜೆಗಳು ತಿರಸ್ಕರಿಸುತ್ತಾರೆ.

ಅಸಾಧುಃ ಸಾಧುತಾಮೇತಿ ಸಾಧುರ್ಭವತಿ ದಾರುಣಃ ।
ಅರಿಶ್ಚ ಮಿತ್ರಂ ಭವತಿ ಮಿತ್ರಂ ಚಾಪಿ ಪ್ರದುಷ್ಯತಿ ॥೮॥

ಅನಿತ್ಯಚಿತ್ತಃ ಪುರುಷಸ್ತಸ್ಮಿನ್ಕೋ ಜಾತು ವಿಶ್ವಸೇತ್ ।
ತಸ್ಮಾತ್ಪ್ರಧಾನಂ ಯತ್ಕಾರ್ಯಂ ಪ್ರತ್ಯಕ್ಷಂ ತತ್ಸಮಾಚರೇತ್ ॥೯॥

ದುಷ್ಟಮನುಷ್ಯನು ಒಳ್ಳೆಯ ಮನುಷ್ಯನಾಗುತ್ತಾನೆ. ಸಾಧುವಾಗಿದ್ದವನು ಅತಿದಾರುಣನಾದ ದುಷ್ಟನಾಗುತ್ತಾನೆ. ಶತ್ರುವು ಮಿತ್ರನಾಗುತ್ತಾನೆ. ಮಿತ್ರನಾಗಿದ್ದವನು ದೂಷ್ಯನಾಗುತ್ತಾನೆ. (ದ್ರೋಹಿಯಾಗುತ್ತಾನೆ.) ಇದಕ್ಕೆ ಕಾರಣವೇನೆಂದರೆ : ಮನುಷ್ಯನು ಯಾವಾಗಲೂ ಸ್ಥಿರಚಿತ್ತನಾಗಿರುವುದಿಲ್ಲ. ಇಂತಹ ಮನುಷ್ಯನಲ್ಲಿ ವಿಶ್ವಾಸವನ್ನಿಡುವುದಾದರೂ ಹೇಗೆ ಸಾಧ್ಯವಾಗುತ್ತದೆ? ಆದುದರಿಂದ ಪ್ರಧಾನಭೂತವಾದ ಕಾರ್ಯಗಳನ್ನು ರಾಜನಾದವನು ಪ್ರತ್ಯಕ್ಷವಾಗಿಯೇ ಇದ್ದು ಮಾಡಿಸಬೇಕು. ಮಿತ್ರರಿಗೇ ವಹಿಸಿ ಸುಮ್ಮನಿರಬಾರದು.

ಏಕಾನ್ತೇನ ಹಿ ವಿಶ್ವಾಸಃ ಕೃತ್ಸ್ನೋ ಧರ್ಮಾರ್ಥನಾಶಕಃ ।
ಅವಿಶ್ವಾಸಶ್ಚ ಸರ್ವತ್ರ ಮೃತ್ಯುನಾ ಚ ವಿಶಿಷ್ಯತೇ ॥೧೦॥

ಯಾರೊಬ್ಬರ ಮೇಲೆಯೇ ಆದರೂ ಅತ್ಯಂತವಿಶ್ವಾಸವನ್ನಿಡುವುದು ಧರ್ಮಾರ್ಥಗಳೆರಡರ ನಾಶಕವೂ ಆಗುತ್ತದೆ. ಯಾರ ಮೇಲೂ ವಿಶ್ವಾಸ ವನ್ನಿಡದೇ ಇರುವುದೂ ಕೂಡ ಮೃತ್ಯುವಿಗಿಂತಲೂ ಮಿಗಿಲಾದುದಾಗುತ್ತದೆ. (ಒಬ್ಬನನ್ನೇ ಬಹಳವಾಗಿ ನಂಬಿಬಿಡಬಾರದು. ಎಲ್ಲರನ್ನೂ ಎಲ್ಲ ಕಾಲ ಗಳಲ್ಲಿಯೂ ನಂಬದೆಯೂ ಇರಬಾರದು. ಈ ಎರಡರಿಂದಲೂ ಅಪಾಯ ವಿದೆ.)

ಅಕಾಲಮೃತ್ಯುರ್ವಿಶ್ವಾಸೋ ವಿಶ್ವಸನ್ಹಿ ವಿಪದ್ಯತೇ ।
ಯಸ್ಮಿನ್ಕರೋತಿ ವಿಶ್ವಾಸಮಿಚ್ಛತಸ್ತಸ್ಯ ಜೀವತಿ ॥೧೧॥

ಮತ್ತೊಬ್ಬರ ಮೇಲಿಡುವ ಅತ್ಯಂತವಿಶ್ವಾಸವು ಅಕಾಲಮೃತ್ಯುವಿಗೆ

ಸಮಾನವಾಗಿರುತ್ತದೆ. ಹೇಗೆಂದರೆ : ಒಬ್ಬನ ಮೇಲೆ ನಾವು ಸಂಪೂರ್ಣವಾದ ವಿಶ್ವಾಸವನ್ನಿಟ್ಟುಕೊಂಡು ನಮ್ಮ ಸಂಪೂರ್ಣಜೀವನವನ್ನೂ ಆ ವಿಶ್ವಾಸದ ಅವಲಂಬನೆಯಿಂದಲೇ ನಡೆಸುತ್ತಿರುತ್ತೇವೆ. ನಾವು ಯಾವನಲ್ಲಿ ವಿಶ್ವಾಸ ವಿಟ್ಟಿರುವೆವೋ ಅವನ ಇಚ್ಛಾನುಸಾರವಾಗಿಯೇ ನಾವು ಬದುಕುತ್ತೇವೆ. ಅವನು ವಿಶ್ವಾಸದ್ರೋಹಮಾಡಿದರೆ ಅವನನ್ನು ನಂಬಿದವನು ಸಂಪೂರ್ಣವಾಗಿ ನಾಶವಾಗುತ್ತಾನೆ. ಆದುದರಿಂದ ಒಬ್ಬನ ಮೇಲೆಯೇ ಸಂಪೂರ್ಣವಾಗಿ ವಿಶ್ವಾಸವನ್ನಿಡಬಾರದು.

ತಸ್ಮಾದ್ವಿಶ್ವಸಿತವ್ಯಂ ಚ ಶಙ್ಕಿತವ್ಯಂ ಚ ಕೇಷುಚಿತ್ ।
ಏಷಾ ನೀತಿಗತಿಸ್ತಾತ ಲಕ್ಷ್ಯಾ ಚೈವ ಸನಾತನೀ ॥೧೨॥

ಆದುದರಿಂದ ರಾಜನಾದವನು ಯೋಗ್ಯರಾದ ಕೆಲವರನ್ನು ಆರಿಸಿ ಕೊಂಡು ಅವರಲ್ಲಿ ವಿಶ್ವಾಸವನ್ನಿಡಬೇಕು. ಕೆಲವರಲ್ಲಿ ಶಂಕಿತನಾಗಿಯೇ ಇರಬೇಕು. ಇದು ಸನಾತನವಾದ ನೀತಿಯ ಮಾರ್ಗವಾಗಿದೆ. ಇದನ್ನು ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು.

ಯಂ ಮನ್ಯೇತ ಮಮಾಭಾವಾದಿಮಮರ್ಥಾಗಮಃ ಸ್ಪೃಶೇತ್ ।
ನಿತ್ಯಂ ತಸ್ಮಾಚ್ಛಙ್ಕಿತವ್ಯಮಮಿತ್ರಂ ತದ್ವಿದುರ್ಬುಧಾಃ ॥೧೩॥

"ನಾನು ಸತ್ತೊಡನೆಯೇ ಇವನು ರಾಜನಾಗುತ್ತಾನೆ. ನನ್ನ ಬೊಕ್ಕಸ ದಲ್ಲಿರುವ ಐಶ್ವರ್ಯವೆಲ್ಲವನ್ನೂ ಇವನು ಸ್ವಾಧೀನಪಡಿಸಿಕೊಳ್ಳುತ್ತಾನೆ"– ಹೀಗೆ ಯಾರ ವಿಷಯವಾಗಿ ರಾಜನ ಭಾವನೆಯಿರುವುದೋ ಆ ವ್ಯಕ್ತಿಯು ಮಗನೇ ಆಗಿರಬಹುದು ; ತಮ್ಮನೇ ಆಗಿರಬಹುದು ; ಸ್ನೇಹಿತನೇ ಆಗಿರ ಬಹುದು–ಅಂತಹವನ ವಿಷಯದಲ್ಲಿ ಅನುದಿನವೂ ಸಂದೇಹಗ್ರಸ್ತನಾಗಿಯೇ ಇರಬೇಕು. ಹಾಗೆ ರಾಜನು ಬದುಕಿರುವಾಗಲೇ ಅವನ ಸಿಂಹಾಸನದ ಮೇಲೆ ದೃಷ್ಟಿಯಿಡುವವನನ್ನು ದ್ವೇಷಿಯೆಂದೇ ತಿಳಿದವರು ಹೇಳುತ್ತಾರೆ.

ಯಸ್ಯ ಕ್ಷೇತ್ರಾದಪ್ಯುದಕಂ ಕ್ಷೇತ್ರಮನ್ಯಸ್ಯ ಗಚ್ಛತಿ ।
ನ ತತ್ರಾನಿಚ್ಛತಸ್ತಸ್ಯ ಭಿದ್ಯೇರನ್ಸರ್ವಸೇತವಃ ॥೧೪॥

ಒಬ್ಬನ ಕ್ಷೇತ್ರದಿಂದ (ಗದ್ದೆಯಿಂದ) ತಗ್ಗಿನಲ್ಲಿರುವ ಮತ್ತೊಬ್ಬನ

ಕ್ಷೇತ್ರಕ್ಕೆ ನೀರು ಹೋಗಬೇಕಾಗಿರುವ ಸಂದರ್ಭದಲ್ಲಿ ತಗ್ಗಿನಲ್ಲಿರುವ ಗದ್ದೆಯವನು ಅನುಮತಿಯನ್ನು ಕೊಡದಿದ್ದರೆ ಅವನ ಕಟ್ಟೆಗಳು ಒಡೆದು ಹೋಗುವುದಿಲ್ಲ.

ತಥೈವಾತ್ಯುದಕಾದ್ಭೀತಸ್ತಸ್ಯ ಭೇದನಮಿಚ್ಛತಿ ।
ಯಮೇವಂಲಕ್ಷಣಂ ವಿದ್ಯಾತ್ತಮಮಿತ್ರಂ ವಿನಿರ್ದಿಶೇತ್ ॥೧೫॥

ಆದರೆ ಮೇಲುಗದ್ದೆಯವನು ತನ್ನ ಗದ್ದೆಯು ಮುಳುಗಿಹೋಗುವುದೆಂಬ ಭಯದಿಂದಾಗಿ ಕಟ್ಟೆಯನ್ನು ಒಡೆಯಲು ಇಚ್ಛಿಸುತ್ತಾನೆ. ಮೊದಲು ಈ ಉಪಮಾನದ ಲಕ್ಷಣವೇನೆಂಬುದನ್ನು ತಿಳಿಯಬೇಕು. ಅನಂತರ ಇಲ್ಲಿ ಶತ್ರುವು ಯಾರೆಂಬುದನ್ನು ನಿರ್ದೇಶಿಸಬೇಕು. (ಈ ಶ್ಲೋಕಕ್ಕೆ ವ್ಯಾಖ್ಯಾನಕಾರರ ವಿವರಣೆಯು ಹೀಗಿದೆ. **ಯಥಾ ಮಹಾತಟಾಕಸೇತುಸಮೀಪೇ ಯಸ್ಯ ಕ್ಷೇತ್ರಂ ಸ ಚೇತ್ಸೇತುಂ ರಕ್ಷತಿ ತತೋರ್ವಾಚೀನಾನಿ ಕ್ಷೇತ್ರಾಣಿ ಸಮೋದಕಾನಿ ಸಮ್ಯಕ್ಫಲನ್ತಿ**= ಮಹಾತಟಾಕದ ಅಣೆಕಟ್ಟಿನ ಸಮೀಪದಲ್ಲಿ ಯಾವನ ಕ್ಷೇತ್ರವಿದೆಯೋ (ಗದ್ದೆಯಿದೆಯೋ) ಅವನು ಆ ಅಣೆಕಟ್ಟನ್ನು ರಕ್ಷಿಸುತ್ತಿದ್ದರೆ ಅವನ ಕ್ಷೇತ್ರವೂ ಉಳಿಯುತ್ತದೆ ; ಅವನ ಕ್ಷೇತ್ರದ ಕೆಳಗಿರುವ ಕ್ಷೇತ್ರಗಳೂ ಸಮೋದಕಗಳಾಗಿ (ಸಮಪ್ರಮಾಣದ ನೀರಿನಿಂದಾಗಿ) ಧಾನ್ಯಸಮೃದ್ಧವಾಗುತ್ತವೆ. **ಸ ಚೇತ್ಸೇತುಂ ಭಿನತ್ತಿ ತದಾತಿಜಲಪ್ರವಾಹಾತ್ ಕ್ಷೇತ್ರಾಣಾಂ ಅಪಘಾತೋ ಭವತಿ**–ಒಂದು ವೇಳೆ ಅಣೆಕಟ್ಟಿನ ಪಕ್ಕದಲ್ಲಿರುವವನೇ ಅಣೆಕಟ್ಟನ್ನು ಭಗ್ನಗೊಳಿಸಿದರೆ ಜಲಪ್ರವಾಹದಿಂದ ಎಲ್ಲ ಕ್ಷೇತ್ರಗಳಿಗೂ ಅಪಘಾತವುಂಟಾಗುತ್ತದೆ. ಏವಂ ಮಹತಿ ಶತ್ರೌ ಸೀಮಾನ್ತಪಾಲಃ ಸಮ್ಯಕ್ಸೀಮಾಂ ಪಾಲಯತಿ ತದಾ ಪರರಾಷ್ಟ್ರಾದುತ್ತಮಪಣ್ಯಾಗಮೇನ ಸ್ವರಾಷ್ಟ್ರಂ ಸುಖಭಾಗ್ಭವತಿ ।–ಹೀಗೆ ಮಹಾತಟಾಕರೂಪವಾಗಿರುವ ಮಹಾಶತ್ರುವಿರಲಾಗಿ ಅಣೆಕಟ್ಟಿನ ರೂಪವಾದ ಎಲ್ಲೆಯನ್ನು ಜಾಗರೂಕತೆಯಿಂದ ರಕ್ಷಿಸುತ್ತಿದ್ದರೆ, ಆಗ ಪರರಾಷ್ಟ್ರಗಳಿಂದ ವಿಕ್ರಯಿಸಲು ಅರ್ಹವಾದ ಧಾನ್ಯಾದಿ ಉತ್ತಮ ಪದಾರ್ಥಗಳು ಬಂದು ಸ್ವರಾಷ್ಟ್ರವು ಸುಖವನ್ನು ಭುಂಜಿಸುತ್ತದೆ. ರಾಷ್ಟ್ರಕ್ಕೆ ನೆಮ್ಮದಿಯಿರುತ್ತದೆ. **ಸ ಚೇತ್ಸೀಮಾಂ ಭಿನತ್ತಿ ತದಾ ಸ್ವಂ ರಾಜ್ಯಂ ವಿಪಕ್ಷಪ್ರವೇಶಾನ್ನಶ್ಯತಿ ।**–ಸೀಮಾಪಾಲಕನೇ ಎಲ್ಲೆಯನ್ನು ರಕ್ಷಿಸದೇ ಒಡೆದು

ಬಿಟ್ಟರೆ ಆಗ ಅವನ ಪಕ್ಕದ ರಾಜ್ಯವು, ವಿಪಕ್ಷೀಯರು ಮುತ್ತಿಗೆ ಹಾಕುವುದರಿಂದ ಕ್ಷಿಪ್ರದಲ್ಲಿಯೇ ನಶಿಸಿ ಹೋಗುತ್ತದೆ. **ಯಸ್ಮಾತ್ಸೀ- ಮಾನ್ತಪಾಲಾದ್ಭಯಂ ಸಂಭಾವಿತಂ ಸ ಶತ್ರುರಿತಿಜ್ಞೇಯಂ**–ಸೀಮಾಂತ ಪಾಲನಿಂದಲೇ ಭಯವು ಒದಗಿರುವುದರಿಂದ ಅವನನ್ನು ಶತ್ರುವೆಂದೇ ಪರಿಗಣಿಸಬೇಕು. ಆದುದರಿಂದ ಸೀಮಾಂತಪಾಲನ ವಿಷಯದಲ್ಲಿಯೂ ವಿಶ್ವಾಸವನ್ನಿಡಬಾರದು.

ಈ ಶ್ಲೋಕಗಳ ಅಂತರಾರ್ಥವನ್ನು ಹೀಗೆ ವಿವರಿಸಬಹುದಾಗಿದೆ. ಎರಡು ಪ್ರಬಲವಾದ ದೇಶಗಳ ಮಧ್ಯದಲ್ಲಿ ಒಂದು ದೇಶವಿದೆ. ಅದರ ಒಡೆಯನು ಸೀಮಾಂತಪಾಲನೆಂದು ವ್ಯಾಖ್ಯಾನಕಾರರು ಹೇಳಿರುತ್ತಾರೆ. (ನೇಪಾಳವು ಚೀನಾ-ಭಾರತಗಳ ಮಧ್ಯದಲ್ಲಿರುವಂತೆ.) ಇಂತಹ ಸೀಮಾಂತ ಪಾಲನು ಅವಕಾಶಕೊಡದಿದ್ದರೆ ಘರ್ಷಣೆಗೆ ಅವಕಾಶವಿರುವುದಿಲ್ಲ. ಅವನು ತನಗೆ ತೊಂದರೆ ಬರುವುದೆಂದು ಭಾವಿಸಿದಾಗ (ಮೇಲಿನಿಂದ ಹೆಚ್ಚು ನೀರು ಬಂದಾಗ ಅದನ್ನು ಕೆಳಕ್ಕೆ ಬಿಡುವಂತೆ) ಶತ್ರುಸೈನ್ಯವು ತನ್ನ ದೇಶದ ಮೂಲಕವಾಗಿ ಹಾದುಹೋಗಲು ಅವಕಾಶಕೊಡಬಹುದು. ಆಗ ಅವನನ್ನು ಶತ್ರು–ಎನ್ನಬೇಕಾಗುತ್ತದೆ. ಆದುದರಿಂದ ಅವನನ್ನು ನಂಬಬಾರದು.

ಯಸ್ತು ವೃದ್ಧ್ಯಾ ನ ತೃಪ್ಯೇತ ಕ್ಷಯೇ ದೀನತರೋ ಭವೇತ್ ।
ಏತದುತ್ತಮಮಿತ್ರಸ್ಯ ನಿಮಿತ್ತಮಿತಿ ಚಕ್ಷತೇ ॥೧೬॥

ಯಾವನು ರಾಜನ ಔನ್ನತ್ಯದಿಂದ ತೃಪ್ತಿಹೊಂದುವುದಿಲ್ಲವೋ (ತನ್ನ ಸ್ವಾಮಿಯು ಇನ್ನೂ ಹೆಚ್ಚು ಔನ್ನತ್ಯವನ್ನು ಹೊಂದಬೇಕೆಂದು ಆಶಿಸುವನೋ) ರಾಜನು ಕ್ಷೀಣಿಸಿದ ಸಮಯದಲ್ಲಿ ಅತ್ಯಂತ ವ್ಯಥಿತನಾಗುವನೋ–ಅವನು ಉತ್ತಮಮಿತ್ರನೆಂದು ಪರಿಗಣಿಸಲ್ಪಡುತ್ತಾನೆ. ರಾಜನ ಔನ್ನತ್ಯವನ್ನು ಅನುದಿನವೂ ಆಶಿಸುತ್ತಲೇ ಇರುವುದೂ ಮತ್ತು ರಾಜನ ಕ್ಷೀಣದೆಶೆಯಲ್ಲಿ ತಾನೂ ಅತ್ಯಂತದೀನನಾಗಿ ವರ್ತಿಸುವುದೂ ಉತ್ತಮ ಮಿತ್ರನ ಲಕ್ಷಣಗಳಾಗಿರುತ್ತವೆ.

ಯನ್ಮನ್ಯೇತ ಮಮಾಭಾವಾದಸ್ಯಾಭಾವೋ ಭವೇದಿತಿ ।
ತಸ್ಮಿನ್ಕುರ್ವೀತ ವಿಶ್ವಾಸಂ ಯಥಾ ಪಿತರಿ ವೈ ತಥಾ ॥೧೭॥

'ನಾನು ಇಲ್ಲದಿದ್ದರೆ ಇವನು ಉಳಿಯುವುದೇ ಇಲ್ಲ'–ಎಂಬ ಮಮಕಾರವನ್ನು ಯಾವನು ಇಟ್ಟುಕೊಂಡಿರುವನೋ–ಅಂತಹವನಲ್ಲಿ ತಂದೆಯಲ್ಲಿ ವಿಶ್ವಾಸವನ್ನಿಡುವಂತೆ ವಿಶ್ವಾಸವಿಡಬೇಕು. ಅವನೇ ನಿಶ್ಚಯವಾದ ಹಿತಚಿಂತಕನು. ಅಂತಹವನಿಗೆ ತನ್ನ ಯೋಗ-ಕ್ಷೇಮಗಳಿಗಿಂತಲೂ ಹೆಚ್ಚಾಗಿ ತಾನು ಪ್ರೀತಿಸುವ ರಾಜನ ಯೋಗ-ಕ್ಷೇಮಗಳಲ್ಲಿಯೇ ಹೆಚ್ಚು ಆಸಕ್ತಿಯಿರುತ್ತದೆ.

ತಂ ಶಕ್ತ್ಯಾ ವರ್ಧಮಾನಶ್ಚ ಸರ್ವತಃ ಪರಿಬೃಂಹಯೇತ್ ।
ನಿತ್ಯಂ ಕ್ಷತಾದ್ವಾರಯತಿ ಯೋ ಧರ್ಮೇಷ್ವಪಿ ಕರ್ಮಸು ॥೧೮॥

ಕ್ಷತಾದ್ಭೀತಂ ವಿಜಾನೀಯಾದುತ್ತಮಂ ಮಿತ್ರಲಕ್ಷಣಮ್ ।
ಯೇ ತಸ್ಯ ಕ್ಷತಮಿಚ್ಛನ್ತಿ ತೇ ತಸ್ಯ ರಿಪವಃ ಸ್ಮೃತಾಃ ॥೧೯॥

ಪ್ರವರ್ಧಮಾನಕ್ಕೆ ಬರುತ್ತಿರುವ ರಾಜನು ಅಂತಹ ಮಿತ್ರನನ್ನು ಪ್ರಯತ್ನಪೂರ್ವಕವಾಗಿ ಎಲ್ಲ ರೀತಿಗಳಿಂದಲೂ ಸಮೃದ್ಧನನ್ನಾಗಿ ಮಾಡ ಬೇಕು. ಯಾವನು ರಾಜನ ಧಾರ್ಮಿಕಕಾರ್ಯಗಳಲ್ಲಿಯೂ ಆಗುವ ನ್ಯೂನತೆಗಳನ್ನು ಹೋಗಲಾಡಿಸುವನೋ ಮತ್ತು ರಾಜನಿಗೆ ಹಾನಿಯಾದೀ ತೆಂಬ ವಿಷಯದಲ್ಲಿ ಅತ್ಯಂತವಾಗಿ ಭಯಗ್ರಸ್ತನಾಗಿರುವನೋ–ಅಂತಹವನು ಉತ್ತಮಮಿತ್ರನೆನಿಸಿಕೊಳ್ಳುತ್ತಾನೆ. ಧರ್ಮಕ್ಕೂ ರಾಜನಿಗೂ ಹಾನಿಯಾಗದಂತೆ ನೋಡಿಕೊಳ್ಳುವುದು ಉತ್ತಮಮಿತ್ರನ ಲಕ್ಷಣ. ಯಾರು ರಾಜನಿಗೂ, ರಾಜನು ಮಾಡುವ ಧರ್ಮಕಾರ್ಯಗಳಿಗೂ ಹಾನಿಯನ್ನು ಇಚ್ಛಿಸುವರೋ ಅವರೇ ಶತ್ರುಗಳು.

ವ್ಯಸನಾನ್ನಿತ್ಯಭೀತೋ ಯಃ ಸಮೃದ್ಧ್ಯಾ ಯೋ ನ ದುಷ್ಯತಿ ।
ಯತ್ಸ್ಯಾದೇವಂವಿಧಂ ಮಿತ್ರಂ ತದಾತ್ಮಸಮಮುಚ್ಯತೇ ॥೨೦॥

ಮಿತ್ರನಾದ ರಾಜನಿಗೆ ವಿಪತ್ತಿಯು ಒದಗಿಬಿಡಬಹುದೆಂದು ಯಾವನು ಸರ್ವಕಾಲದಲ್ಲಿಯೂ ಭಯಭೀತನಾಗಿರುವನೋ, ಅವನ ಯೋಗ-ಕ್ಷೇಮಗಳನ್ನೇ ನಿರಂತರವಾಗಿ ಆಕಾಂಕ್ಷಿಸುತ್ತಿರುವನೋ ಮತ್ತು ರಾಜನ ಸಮೃದ್ಧಿಯನ್ನು ನೋಡಿ ಯಾವನು ಅಸೂಯೆಪಡುವುದಿಲ್ಲವೋ–ಅಂತಹವನನ್ನು ರಾಜನು ತನ್ನ ಆತ್ಮಸಮನೆಂದೇ ಭಾವಿಸಬೇಕು.

ರೂಪವರ್ಣಸ್ವರೋಪೇತಸ್ತಿತಿಕ್ಷುರನಸೂಯಕಃ ।
ಕುಲೀನಃ ಶೀಲಸಮ್ಪನ್ನಃ ಸ ತೇ ಸ್ಯಾತ್ಪ್ರತ್ಯನನ್ತರಃ ॥೨೧॥

ಯಾವನ ರೂಪವು ಸುಂದರವಾಗಿಯೂ, ವರ್ಣವು ಮನೋಹರವಾಗಿಯೂ, ಸ್ವರವು ಮೃದುವಾಗಿಯೂ ಇರುವುದೋ, ಯಾವನು ಕ್ಷಮಾಶೀಲನಾಗಿರುವನೋ, ಅಸೂಯಾರಹಿತನಾಗಿರುವನೋ, ಸತ್ಕುಲಪ್ರಸೂತನೋ, ಶೀಲಸಂಪನ್ನನೋ–ಅವನು ನಿನಗೆ ಪ್ರಧಾನಸಚಿವನಾಗಲಿ.

ಮೇಧಾವೀ ಸ್ಮೃತಿಮಾನ್ದಕ್ಷಃ ಪ್ರಕೃತ್ಯಾ ಚಾನೃಶಂಸ್ಯವಾನ್ ।
ಯೋ ಮಾನಿತೋಽಮಾನಿತೋ ವಾ ನ ಚ ದುಷ್ಯೇತ್ಕದಾಚನ ॥೨೨॥
ಋತ್ವಿಗ್ವಾ ಯದಿ ವಾಽಚಾರ್ಯಃ ಸಖಾ ವಾತ್ಯನ್ತಸಂಸ್ತುತಃ ।
ಗೃಹೇ ವಸೇದಮಾತ್ಯಸ್ತೇ ಸ ಸ್ಯಾತ್ಪರಮಪೂಜಿತಃ ॥೨೩॥

ಯಾವನು ಬುದ್ಧಿವಂತನಾಗಿಯೂ–ಸ್ಮರಣಶಕ್ತಿಯುಳ್ಳವನಾಗಿಯೂ ಇರುವನೋ, ಕಾರ್ಯವನ್ನು ಮಾಡುವುದರಲ್ಲಿಯೂ–ಮಾಡಿಸುವುದರಲ್ಲಿಯೂ ಸಮರ್ಥನೋ, ಸ್ವಭಾವತಃ ದಯಾಳುವೋ, ಮಾನಾಪಮಾನಗಳೆರಡನ್ನೂ ಸಮಾನವಾಗಿ ಕಾಣುವನೋ (ಮರ್ಯಾದೆಮಾಡಿದರೆ ಹಿಗ್ಗದೆಯೂ ಅವಮಾನಗೊಳಿಸಿದರೆ ಕುಗ್ಗದೆಯೂ ಇರುವನೋ)–ಅಂತಹವನು ಋತ್ವಿಜನೇ ಆಗಿರಲೀ, ಆಚಾರ್ಯನೇ ಆಗಿರಲೀ, ಅತ್ಯಂತಪ್ರಶಂಸೆಗೆ ಪಾತ್ರನಾದ ನಿನ್ನ ಮಿತ್ರನೇ ಆಗಿರಲೀ–ಅವನನ್ನು ಮಂತ್ರಿಯನ್ನಾಗಿ ನಿಯೋಜಿಸಿ ಯಾವಾಗಲೂ ನಿನ್ನ ಅರಮನೆಯಲ್ಲಿಯೇ ವಾಸಮಾಡಿಕೊಂಡಿರುವಂತೆ ಏರ್ಪಡಿಸು. ಅವನನ್ನು ನೀನು ಯಾವಾಗಲೂ ಬಹಳವಾಗಿ ಗೌರವಿಸುತ್ತಿರಬೇಕು.

ಸ ತೇ ವಿದ್ಯಾತ್ಪರಂ ಮನ್ತ್ರಂ ಪ್ರಕೃತಿಂ ಚಾರ್ಥಧರ್ಮಯೋಃ ।
ವಿಶ್ವಾಸಸ್ತೇ ಭವೇತ್ತತ್ರ ಯಥಾ ಪಿತರಿ ವೈ ತಥಾ ॥೨೪॥

ಪ್ರಧಾನಮಂತ್ರಿಯಾದವನು ನಿನ್ನ ಅತ್ಯಂತನಿಗೂಢವಾದ ವಿಷಯಗಳನ್ನೂ ತಿಳಿದವನಾಗಿರಬೇಕು. ಗುಪ್ತವಿಷಯಗಳನ್ನೂ ಅವನೊಡನೆ ಪರ್ಯಾಲೋಚಿಸಬೇಕು. ನಿನ್ನ ದೇಶದ ಅರ್ಥ-ಧರ್ಮಗಳ *ಪ್ರಕೃತಿ

---

* ಪ್ರಕೃತಿಗಳು ಮೂರು ವಿಧ : ಅರ್ಥಪ್ರಕೃತಿ ; ಧರ್ಮಪ್ರಕೃತಿ ; ಅರ್ಥ-ಧರ್ಮಪ್ರಕೃತಿ. ಅರ್ಥಪ್ರಕೃತಿಯಲ್ಲಿ ಕೃಷಿರ್ವಣಿಕ್ಪಥೋ ದುರ್ಗಂ ಸೇತುಃ ಕುಞ್ಜರಬನ್ಧನಮ್ ।

ಗಳನ್ನೂ ಅವನು ಚೆನ್ನಾಗಿ ತಿಳಿದವನಾಗಿರಬೇಕು. ನಿನ್ನ ತಂದೆಯಲ್ಲಿ ನೀನು ವಿಶ್ವಾಸವನ್ನಿಡುವಂತೆಯೇ ನಿನ್ನ ಅಮಾತ್ಯನಲ್ಲಿಯೂ ವಿಶ್ವಾಸವನ್ನಿಡಬೇಕು.

ನೈವ ದ್ವೌ ನ ತ್ರಯಃ ಕುರ್ಯಾ ನ ಮೃಷ್ಯೇರನ್ಪರಸ್ಪರಮ್ ।
ಏಕಾರ್ಥೇ ಹ್ಯೇವ ಭೂತಾನಾಂ ಭೇದೋ ಭವತಿ ಸರ್ವದಾ ॥೨೫॥

ಒಂದು ಕಾರ್ಯಕ್ಕೆ ಒಬ್ಬನೇ ವ್ಯಕ್ತಿಯನ್ನು ಯೋಜಿಸಬೇಕು. ಇಬ್ಬರು ಮೂವರನ್ನು ಯೋಜಿಸಬಾರದು. ಅನೇಕರನ್ನು ಒಂದೇ ಕಾರ್ಯಕ್ಕೆ ಯೋಜಿಸಿದರೆ ಅವರಲ್ಲಿಯೇ ಪರಸ್ಪರವಾಗಿ ಭಿನ್ನಾಭಿಪ್ರಾಯವುಂಟಾಗುತ್ತದೆ. ಕಾರ್ಯವು ನಡೆಯುವುದೂ ಇಲ್ಲ; ಮುಗಿಯುವುದೂ ಇಲ್ಲ. ಒಂದೇ ವಿಷಯದಲ್ಲಿ ಅನೇಕವಿಧವಾದ ಅಭಿಪ್ರಾಯಗಳಿರುವುದು ಮನುಷ್ಯಮಾತ್ರ ದವರ ಸ್ವಭಾವವೇ ಆಗಿದೆ.

ಕೀರ್ತಿಪ್ರಧಾನೋ ಯಸ್ತು ಸ್ಯಾದ್ಯಶ್ಚ ಸ್ಯಾತ್ಸಮಯೇ ಸ್ಥಿತಃ ।
ಸಮರ್ಥಾನ್ಯಶ್ಚ ನ ದ್ವೇಷ್ಟಿ ನಾನರ್ಥಾನ್ಕುರುತೇ ಚ ಯಃ ॥೨೬॥

ಯೋ ನ ಕಾಮಾದ್ಭಯಾಲ್ಲೋಭಾತ್ಕ್ರೋಧಾದ್ವಾ ಧರ್ಮಮುತ್ಸೃಜೇತ್ ।
ದಕ್ಷಃ ಪರ್ಯಾಪ್ತವಚನಃ ಸ ತೇ ಸ್ಯಾತ್ಪ್ರತ್ಯನನ್ತರಃ ॥೨೭॥

ಯಾವನು ಕೀರ್ತಿಗೆ ಪ್ರಾಧಾನ್ಯವನ್ನು ಕೊಡುವನೋ, ನೀತಿ ಮತ್ತು ಮರ್ಯಾದೆಗಳ ಚೌಕಟ್ಟಿನಲ್ಲಿರುವನೋ, ಆಡಳಿತದಲ್ಲಿ ಸಮರ್ಥ

ಖನ್ಯಾಕರಕರಾದಾನಂ ಶೂನ್ಯಾನಾಂ ಚ ನಿವೇಶನಮ್ । ಅಷ್ಟೌ ಸಂಧಾನಕರ್ಮಾಣಿ ಪ್ರತ್ಯುಕ್ತಾನಿ ಮನೀಷಿಭಿಃ ॥ ಕೃಷಿ, ವಾಣಿಜ್ಯ, ದುರ್ಗ, ಅಣೆಕಟ್ಟೆ, ಕಾಡಿನಲ್ಲಿ ಆನೆಗಳನ್ನು ಹಿಡಿಯುವ ಜಾಗ (ಖೆಡ್ಡಾ), ಲೋಹಗಳ ಗಣಿಗಳು, ತೆರಿಗೆ, ಶೂನ್ಯಸ್ಥಾನಗಳು–ಇವುಗಳು ಅರ್ಥಪ್ರಾಪ್ತಿಗೆ ಸಾಧಕವಾದ ಸ್ಥಾನಗಳು. ಮಂತ್ರಿಯಾದವನು ಇವುಗಳ ವಿಷಯವನ್ನು ಚೆನ್ನಾಗಿ ತಿಳಿದಿರಬೇಕು. ದುರ್ಗಾಧ್ಯಕ್ಷೋ ಬಲಾಧ್ಯಕ್ಷೋ ಧರ್ಮಾಧ್ಯಕ್ಷಶ್ಚಮೂಪತಿಃ। ಪುರೋಧಾವೈದ್ಯದೈವಜ್ಞಾ ಸಪ್ತ ಪ್ರಕೃತಯಸ್ತ್ವಿಮಾಃ ॥ ದುರ್ಗಾಧ್ಯಕ್ಷ, ಬಲಾಧ್ಯಕ್ಷ, ಧರ್ಮಾಧ್ಯಕ್ಷ, ಸೇನಾಪತಿ, ಪುರೋಹಿತ, ವೈದ್ಯ, ಜ್ಯೌತಿಷಿಕ–ಈ ಏಳು ಪ್ರಕೃತಿಗಳಲ್ಲಿ ಧರ್ಮಾಧ್ಯಕ್ಷನು ಧರ್ಮಪ್ರಕೃತಿ ; ಉಳಿದವರು ಅರ್ಥ-ಧರ್ಮಪ್ರಕೃತಿಗಳು. ಇವರೆಲ್ಲರ ಮೇಲ್ವಿಚಾರಕನು ಮಂತ್ರಿಯಾಗಿರುತ್ತಾನೆ.

ರಾದವರನ್ನು ಯಾರು ದ್ವೇಷಿಸುವುದಿಲ್ಲವೋ, ಅನರ್ಥಕಾರಿಗಳಾದ ಕಾರ್ಯಗಳನ್ನು ಮಾಡುವುದಿಲ್ಲವೋ, ಕಾಮದಿಂದಾಗಲೀ–ಭಯದಿಂದಾಗಲೀ-ಲೋಭದಿಂದಾಗಲೀ-ಕ್ರೋಧದಿಂದಾಗಲೀ ಧರ್ಮವನ್ನು ಪರಿತ್ಯಜಿಸುವುದಿಲ್ಲವೋ, ಕಾರ್ಯದಕ್ಷನೋ, ಮಿತಭಾಷಿಯೋ–ಅಂತಹವನು ನಿನ್ನ ಪ್ರಧಾನಮಂತ್ರಿಯಾಗಿರಲಿ.

ಕುಲೀನಃ ಶೀಲಸಮ್ಪನ್ನಸ್ತಿತಿಕ್ಷುರವಿಕತ್ಥನಃ ।
ಶೂರಶ್ಚಾರ್ಯಶ್ಚ ವಿದ್ವಾಂಶ್ಚ ಪ್ರತಿಪತ್ತಿವಿಶಾರದಃ ॥೨೮॥

ಏತೇ ಹ್ಯಮಾತ್ಯಾಃ ಕರ್ತವ್ಯಾಃ ಸರ್ವಕರ್ಮಸ್ವವಸ್ಥಿತಾಃ ।
ಪೂಜಿತಾಃ ಸಂವಿಭಕ್ತಾಶ್ಚ ಸುಸಹಾಯಾಃ ಸ್ವನುಷ್ಠಿತಾಃ ॥೨೯॥

ಸತ್ಕುಲಪ್ರಸೂತರೂ, ಶೀಲಸಂಪನ್ನರೂ, ಕ್ಷಮಾವಂತರೂ, ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದವರೂ, ಶೂರರೂ, ಶ್ರೇಷ್ಠರೂ, ವಿದ್ವಾಂಸರೂ, ಕರ್ತವ್ಯಾಕರ್ತವ್ಯಗಳನ್ನು ತಿಳಿಯುವುದರಲ್ಲಿ ಕುಶಲರೂ ಆಗಿರುವವರನ್ನೇ ನೀನು ಅಮಾತ್ಯರನ್ನಾಗಿ ಮಾಡಿಕೊಳ್ಳಬೇಕು. ನಿನ್ನಿಂದ ಸನ್ಮಾನ್ಯರಾಗಿ ಉತ್ತಮವೇತನಾದಿಗಳನ್ನು ಪಡೆದು ಎಲ್ಲ ಕಾರ್ಯಗಳಲ್ಲಿಯೂ ನಿಯುಕ್ತರಾಗುವ ಅವರು ಉತ್ತಮರೀತಿಯಲ್ಲಿ ಸಹಾಯಕರಾಗುತ್ತಾರೆ.

ಕೃತ್ಸ್ನಮೇತೇ ವಿನಿಕ್ಷಿಪ್ತಾಃ ಪ್ರತಿರೂಪೇಷು ಕರ್ಮಸು ।
ಯುಕ್ತಾ ಮಹತ್ಸು ಕಾರ್ಯೇಷು ಶ್ರೇಯಾಂಸ್ಯುತ್ಥಾಪಯನ್ತ್ಯುತ ॥೩೦॥

ಅವರನ್ನು ಅನುರೂಪವಾದ ಕಾರ್ಯಗಳಲ್ಲಿ ಸಂಪೂರ್ಣವಾಗಿ ಯೋಜಿಸಿದರೆ–ಒಂದು ಕಾರ್ಯವನ್ನು ಪೂರೈಸುವ ಹೊಣೆಯನ್ನು ಅವರಿಗೆ ಒಪ್ಪಿಸಿದರೆ–ಅವರು ಆ ಕಾರ್ಯವನ್ನು ಯಶಸ್ವಿಯಾಗಿ ಮಾಡಿಮುಗಿಸುವುದೇ ಅಲ್ಲದೇ–ಮುಂದೆ ಮಹಾಕಾರ್ಯಗಳಲ್ಲಿಯೂ ತೊಡಗಿ ರಾಜನ ಶ್ರೇಯಸ್ಸನ್ನು ವೃದ್ಧಿಗೊಳಿಸಲು ಪ್ರಯತ್ನಿಸುತ್ತಾರೆ.

ಏತೇ ಕರ್ಮಾಣಿ ಕುರ್ವನ್ತಿ ಸ್ಪರ್ಧಮಾನಾ ಮಿಥಃ ಸದಾ ।
ಅನುತಿಷ್ಠನ್ತಿ ಚೈವಾರ್ಥವಾಚಕ್ಷಾಣಾಃ ಪರಸ್ಪರಮ್ ॥೩೧॥

ಆ ಅಧಿಕಾರಿಗಳು ಪರಸ್ಪರಸ್ಪರ್ಧೆಯಿಂದ ಕಾರ್ಯಮಾಡುತ್ತಿರುತ್ತಾರೆ.

ತಮ್ಮಲ್ಲಿಯೇ ಪರಸ್ಪರವಾಗಿ ವಿಚಾರವಿನಿಮಯವನ್ನು ಮಾಡಿಕೊಂಡು ರಾಜನ ಅರ್ಥಸಿದ್ಧಿಗಾಗಿ ನಿರಂತರವಾಗಿ ಪ್ರಯತ್ನಿಸುತ್ತಿರುತ್ತಾರೆ.

ಜ್ಞಾತಿಭ್ಯಶ್ಚೈವ ಬುಧ್ಯೇಥಾ ಮೃತ್ಯೋರಿವ ಭಯಂ ಸದಾ ।
ಉಪರಾಜೇವ ರಾಜರ್ಧಿಂ ಜ್ಞಾತಿರ್ನ ಸಹತೇ ಸದಾ ॥೩೨॥

ಪ್ರಾಣಿಗಳು ಮೃತ್ಯುವಿಗೆ ಹೆದರುವಂತೆ–ನಿನ್ನ ಜ್ಞಾತಿಗಳ ವಿಷಯದಲ್ಲಿ ಯಾವಾಗಲೂ ಭಯಗ್ರಸ್ತನಾಗಿಯೇ ಇರಬೇಕು. ಮೃತ್ಯುವೆಂದೇ ನೀನವರನ್ನು ಭಾವಿಸಿಕೊಳ್ಳಬೇಕು. ಯಾವ ರೀತಿಯಲ್ಲಿ ಸಾಮಂತರಾಜನು ಚಕ್ರವರ್ತಿಯ ಅಭಿವೃದ್ಧಿಯನ್ನು ಸಹಿಸಿಕೊಳ್ಳುವುದಿಲ್ಲವೋ–ಹಾಗೆಯೇ ಜ್ಞಾತಿಗಳೂ ರಾಜನ ಅಭ್ಯುದಯವನ್ನು ಸಹಿಸಿಕೊಳ್ಳುವುದಿಲ್ಲ.

ಋಜೋರ್ಮೃದೋರ್ವದಾನ್ಯಸ್ಯ ಹ್ರೀಮತಃ ಸತ್ಯವಾದಿನಃ ।
ನಾನ್ಯೋ ಜ್ಞಾತೇರ್ಮಹಾಬಾಹೋ ವಿನಾಶಮಭಿನನ್ದತಿ ॥೩೩॥

ಸರಳನಾದ, ಕೋಮಲಸ್ವಭಾವದವನಾದ, ಉದಾರಿಯಾದ, ಲಜ್ಜಾ ಶೀಲನಾದ, ಸತ್ಯವಾದಿಯಾದ ರಾಜನ ವಿನಾಶವನ್ನು–ಅವನ ಜ್ಞಾತಿಗಳು ಅಭಿನಂದಿಸುತ್ತಾರೆಯೇ ಹೊರತು ಮತ್ತಾರೂ ಅಭಿನಂದಿಸುವುದಿಲ್ಲ.

ಅಜ್ಞಾತಿನೋಽಪಿ ನ ಸುಖಾ ನಾವಜ್ಞೇಯಾಸ್ತತಃ ಪರಮ್ ।
ಅಜ್ಞಾತಿಮನ್ತಂ ಪುರುಷಂ ಪರೇ ಚಾಭಿಭವನ್ತ್ಯುತ ॥೩೪॥

ಆದರೆ ಜ್ಞಾತಿಗಳಲ್ಲಿ ಈ ದೋಷವಿದ್ದರೂ, ಸಂಪೂರ್ಣವಾಗಿ ಜ್ಞಾತಿ ಗಳಿಂದ ವಿಹೀನನಾಗಿದ್ದರೂ ರಾಜನು ಸುಖಿಯಾಗುವುದಿಲ್ಲ. ಆದುದರಿಂದ ಜ್ಞಾತಿಗಳನ್ನೂ ಕೂಡ ಯಾವುದೇ ಕಾರಣದಿಂದಲೂ ಅನಾದರಣೆಮಾಡ ಬಾರದು. ಜ್ಞಾತಿ-ಬಾಂಧವರೇ ಇಲ್ಲದ ರಾಜನನ್ನು ಬೇರೆಯವರು ಅಥವಾ ಶತ್ರುಗಳು ಬಹಳವಾಗಿ ಪೀಡಿಸುತ್ತಾರೆ.

ನಿಕೃತಸ್ಯ ನರೈರನ್ಯೈರ್ಜ್ಞಾತಿರೇವ ಪರಾಯಣಮ್ ।
ನಾನ್ಯೈರ್ನಿಕಾರಂ ಸಹತೇ ಜ್ಞಾತಿರ್ಜ್ಞಾತೇಃ ಕಥಂಚನ ॥೩೫॥

ಇತರರಿಂದ ವಂಚಿಸಲ್ಪಟ್ಟ ಮನುಷ್ಯನಿಗೆ ಜ್ಞಾತಿಯೇ ಆಶ್ರಯನಾಗುತ್ತಾನೆ. ಏಕೆಂದರೆ : ಜ್ಞಾತಿಯಾದವನು ತನ್ನ ಜ್ಞಾತಿಗೆ ಇತರರಿಂದ ಅಪಮಾನವಾಗುವುದನ್ನು ಖಂಡಿತವಾಗಿಯೂ ಸಹಿಸುವುದಿಲ್ಲ. ಜ್ಞಾತಿಬಾಂಧವರಲ್ಲಿ ಪರಸ್ಪರ ಕಚ್ಚಾಟವಿದ್ದರೂ ಬೇರೊಬ್ಬನು ಸಜಾತೀಯನಿಗೆ ಅವಮಾನಗೊಳಿಸಲು ಬಂದರೆ ಜ್ಞಾತಿ-ಬಾಂಧವರೆಲ್ಲರೂ ಒಟ್ಟಾಗಿ ಸೇರಿ ಅವನನ್ನು ಸದೆಬಡಿಯುತ್ತಾರೆ. ತಮ್ಮ ಜ್ಞಾತೀಯನಿಗೆ ಆಗುವ ಅಪಮಾನವನ್ನು ಅವರು ಸಹಿಸುವುದಿಲ್ಲ. ಹೀಗೆ ಜ್ಞಾತಿಗಳಲ್ಲಿ ಗುಣಗಳೂ ಇರುತ್ತವೆ ; ಅವಗುಣಗಳೂ ಇರುತ್ತವೆ. ಆದುದರಿಂದ ಜ್ಞಾತಿಯ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕೇ ಹೊರತು ಅವನೊಡನೆ ದ್ವೇಷವನ್ನೇ ಕಟ್ಟಿಕೊಳ್ಳಬಾರದು.

ನಾಜ್ಞಾತಿರನುಗೃಹ್ಣಾತಿ ನ ಚಾಜ್ಞಾತಿರ್ನಮಸ್ಯತಿ ।
ಉಭಯಂ ಜ್ಞಾತಿವರ್ಗೇಷು ದೃಶ್ಯತೇ ಸಾಧ್ವಸಾಧು ಚ ॥೩೭॥

ಜ್ಞಾತಿಯಲ್ಲದ ಮನುಷ್ಯನು ಅನುಗ್ರಹವನ್ನು ಮಾಡುವುದಿಲ್ಲ. ನಮಸ್ಕಾರವನ್ನೂ ಮಾಡುವುದಿಲ್ಲ. ಜ್ಞಾತಿಯಾದವನು ಸಮಯದಲ್ಲಿ ಅನುಗ್ರಹವನ್ನು ಮಾಡುತ್ತಾನೆ. ನಮಸ್ಕಾರವನ್ನೂ ಮಾಡುತ್ತಾನೆ. ಅಂತೆಯೇ ತೊಂದರೆಯನ್ನೂ ಮಾಡುತ್ತಾನೆ. ಆದುದರಿಂದ ಜ್ಞಾತಿವರ್ಗದವರಲ್ಲಿ ಒಳ್ಳೆಯದೂ ಇದೆ ; ಕೆಟ್ಟುದೂ ಇದೆ.

ಸಮ್ಮಾನಯೇತ್ಪೂಜಯೇಚ್ಚ ವಾಚಾ ನಿತ್ಯಂ ಚ ಕರ್ಮಣಾ ।
ಕುರ್ಯಾಚ್ಚ ಪ್ರಿಯಮೇತೇಭ್ಯೋ ನಾಪ್ರಿಯಂ ಕಿಂಚಿದಾಚರೇತ್ ॥

ರಾಜನು ತನ್ನ ಜ್ಞಾತಿ-ಬಾಂಧವರೊಡನೆ ಚೆನ್ನಾಗಿ ಮಾತನಾಡಿಕೊಂಡಿರಬೇಕು. ಅವರನ್ನು ಸಮ್ಮಾನಿಸುತ್ತಿರಬೇಕು ಮತ್ತು ಸತ್ಕರಿಸು ತ್ತಿರಬೇಕು. ಅವರಿಗೆ ಪ್ರಿಯವಾಗುವುದನ್ನೇ ಯಾವಾಗಲೂ ಮಾಡಬೇಕು. ಅಪ್ರಿಯವಾಗುವುದನ್ನು ಯಾವುದೇ ಕಾರಣದಿಂದಲೂ ಯಾವಾಗಲೂ ಮಾಡಬಾರದು.

ವಿಶ್ವಸ್ತವದವಿಶ್ವಸ್ತಸ್ತೇಷು ವರ್ತೇತ ಸರ್ವದಾ ।
ನ ಹಿ ದೋಷೋ ಗುಣೋ ವೇತಿ ನಿರೂಪ್ಯಸ್ತೇಷು ದೃಶ್ಯತೇ ॥೩೯॥

ಜ್ಞಾತಿಗಳ ವಿಷಯದಲ್ಲಿ ಅವಿಶ್ವಾಸವೇ ಇದ್ದರೂ ಅತ್ಯಂತವಿಶ್ವಾಸಿ

ಯಾಗಿರುವಂತೆಯೇ ವರ್ತಿಸಬೇಕು. ಜ್ಞಾತಿಗಳಲ್ಲಿ ಗುಣವಿರುವುದೇ ಅಥವಾ ದೋಷವಿರುವುದೇ–ಎಂಬುದನ್ನು ನಿರ್ಣಯಿಸುವ ಅವಶ್ಯಕತೆಯೂ ಇರುವುದಿಲ್ಲ.

ಹೀಗೆ ನಡೆದುಕೊಳ್ಳುವ, ಜಾಗರೂಕನಾಗಿರುವ, ಯಾವಾಗಲೂ ಎಲ್ಲರೊಡನೆಯೂ ಪ್ರಿಯವಾದ ಮಾತುಗಳನ್ನೇ ಆಡುವವನ ಶತ್ರುಗಳೂ ಪ್ರಸನ್ನರಾಗುತ್ತಾರೆ. ಅಷ್ಟು ಮಾತ್ರವಲ್ಲ ; ಶತ್ರುಗಳೂ ಮಿತ್ರರೇ ಆಗುತ್ತಾರೆ. ಹೀಗೆ ಯಾರು ಜ್ಞಾತಿ-ಬಂಧುಗಳ ವಿಷಯದಲ್ಲಿ, ಮಿತ್ರರ ವಿಷಯದಲ್ಲಿ, ಶತ್ರುಗಳ ವಿಷಯದಲ್ಲಿ, ಮಿತ್ರಾಮಿತ್ರರ ವಿಷಯದಲ್ಲಿ ಮತ್ತು ಮಧ್ಯಸ್ಥರ ವಿಷಯದಲ್ಲಿ ನಡೆದುಕೊಳ್ಳುತ್ತಾರೆಯೋ–ಅವರು ಚಿರಕಾಲದವರೆಗೆ ಯಶೋವಂತರಾಗಿ ಬಾಳುತ್ತಾರೆ."

ಲ೦ನೆಯ ಅಧ್ಯಾಯವು ಮುಗಿಯಿತು.

ಲ೧ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಕುಟುಂಬದ ಜನರಲ್ಲಿ ಪಕ್ಷ-ಪ್ರತಿಪಕ್ಷಗಳಾದಾಗ ಯಜಮಾನನ ಕರ್ತವ್ಯದ ವಿಷಯದಲ್ಲಿ ಕೃಷ್ಣ-ನಾರದರ ಸಂವಾದ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಏವಮಗ್ರಾಹ್ಯಕೇ ತಸ್ಮಿನ್ ಜ್ಞಾತಿಸಮ್ಬನ್ಧಿಮಣ್ಡಲೇ ।
ಮಿತ್ರೇಷ್ವಮಿತ್ರೇಷ್ವಪಿ ಚ ಕಥಂ ಭಾವೋ ವಿಭಾವ್ಯತೇ ॥೧॥

"ಪಿತಾಮಹ! ಸಜಾತೀಯಬಂಧುಗಳ ಮತ್ತು ಜ್ಞಾತಿಗಳ ಮಧ್ಯದಲ್ಲಿ ಪರಸ್ಪರಸ್ಪರ್ಧೆಯ ಕಾರಣದಿಂದಾಗಿ ಎರಡು ಕಡೆಯವರನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ಪಕ್ಷದವರನ್ನು ಆದರಿಸಿದರೆ ಮತ್ತೊಂದು ಪಕ್ಷದವರು ಕೋಪಗೊಳ್ಳುತ್ತಾರೆ. ಮಿತ್ರರು ಶತ್ರುಗಳೂ ಆಗಬಹುದು. ಅಂತಹ ಸಂದರ್ಭವು ಒದಗಿದಾಗ ಎಲ್ಲರ ಮನಸ್ಸನ್ನೂ ಹೇಗೆ ವಶೀಕರಿಸಿಕೊಳ್ಳಬಹುದು?–ಈ ವಿಷಯವನ್ನು ನನಗೆ ತಿಳಿಸು."

ಭೀಷ್ಮನು ಉತ್ತರಿಸುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ನಡೆದ ವಾಸುದೇವ- ನಾರದರ ಸಂವಾದರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಅದನ್ನೇ ನಿನಗೂ ತಿಳಿಸುವೆನು.

ಹಿಂದೊಮ್ಮೆ ನಾರದ-ಕೃಷ್ಣರು ಒಂದೆಡೆಯಲ್ಲಿ ಸೇರಿದ್ದಾಗ ಶ್ರೀಕೃಷ್ಣನು ನಾರದರೊಡನೆ ಹೇಳಿದನು :

ನಾಸುಹೃತ್ಪರಮಂ ಮನ್ತ್ರಂ ನಾರದಾರ್ಹತಿ ವೇದಿತುಮ್ ।
ಅಪಣ್ಡಿತೋ ವಾಪಿ ಸುಹೃತ್ಪಣ್ಡಿತೋ ವಾಪ್ಯನಾತ್ಮವಾನ್ ॥೨॥

"ನಾರದರೇ! ಗೋಪನೀಯವಾದ ವಿಷಯಗಳನ್ನು ಸುಹೃದನಲ್ಲದವನು ತಿಳಿಯಲು ಯೋಗ್ಯನಾಗುವುದಿಲ್ಲ. ಒಂದು ವೇಳೆ ಸುಹೃದನೇ ಆಗಿದ್ದರೂ ಅವಿದ್ಯಾವಂತನಾಗಿದ್ದರೆ ಅಂತಹವನೂ ತಿಳಿಯಲು ಯೋಗ್ಯನಾಗುವುದಿಲ್ಲ. ವಿದ್ಯಾವಂತನೂ, ಸುಹೃದನೂ ಆಗಿದ್ದರೂ–ಜಿತೇಂದ್ರಿಯನಲ್ಲದವನು ಗೋಪನೀಯವಿಷಯಗಳನ್ನು ತಿಳಿಯಲು ಯೋಗ್ಯನಾಗುವುದಿಲ್ಲ.

ಸ ತೇ ಸೌಹೃದಮಾಸ್ಥಾಯ ಕಿಂಚಿದ್ವಕ್ಷ್ಯಾಮಿ ನಾರದ ।
ಕೃತ್ಸ್ನಂ ಬುದ್ಧಿಬಲಂ ಪ್ರೇಕ್ಷ್ಯ ಸಂಪೃಚ್ಛೇ ತ್ರಿದಿವಂಗಮ ॥೪॥

ಸ್ವರ್ಗಲೋಕಸಂಚಾರಿಗಳಾದ ನಾರದರೇ! ನಾನು ತಮ್ಮ ಸೌಹಾರ್ದದ ಮೇಲೆ ಭರವಸೆಯನ್ನಿಟ್ಟು ಕೆಲವು ವಿಷಯಗಳನ್ನು ಹೇಳುತ್ತೇನೆ. ಮನುಷ್ಯನು ಮತ್ತೊಬ್ಬ ಮನುಷ್ಯನ ಬುದ್ಧಿಬಲವನ್ನು ಸಂಪೂರ್ಣವಾಗಿ ತಿಳಿದು ಅವನನ್ನು ಪ್ರಶ್ನಿಸಬೇಕು. ಅದೇ ರೀತಿಯಲ್ಲಿ ನಾನೂ ನಿಮ್ಮನ್ನು ಪ್ರಶ್ನಿಸುತ್ತೇನೆ.

ದಾಸ್ಯಮೈಶ್ವರ್ಯವಾದೇನ ಜ್ಞಾತೀನಾಂ ನ ಕರೋಮ್ಯಹಮ್ ।
ಅರ್ಧಂ ಭೋಕ್ತಾಸ್ಮಿ ಭೋಗಾನಾಂ ವಾಗ್ದುರುಕ್ತಾನಿ ಚ ಕ್ಷಮೇ ॥೫॥

ನಾನು ನನ್ನ ಪ್ರಭುತ್ವವನ್ನು ಪ್ರದರ್ಶಿಸಿ ಜ್ಞಾತಿ-ಬಾಂಧವರನ್ನು ನನ್ನ ದಾಸರನ್ನಾಗಿ ಮಾಡಿಕೊಳ್ಳಲು ಇಚ್ಛೆಪಡುವುದಿಲ್ಲ. ನನಗೆ ಪ್ರಾಪ್ತವಾಗುವ ಭೋಗಸಾಮಗ್ರಿಗಳಲ್ಲಿ ಅರ್ಧಭಾಗವನ್ನು ಮಾತ್ರವೇ ನಾನು ಉಪಯೋಗಿಸುತ್ತೇನೆ. ಉಳಿದರ್ಧವನ್ನು ನನ್ನ ಜ್ಞಾತಿ-ಬಾಂಧವರಿಗೆ ಹಂಚಿಬಿಡುತ್ತೇನೆ.

ಹಾಗೂ ಅವರು ನನ್ನ ವಿಷಯದಲ್ಲಿ ಕೆಟ್ಟಮಾತುಗಳನ್ನಾಡಿದರೆ ಅದನ್ನೂ ಸಹಿಸಿಕೊಳ್ಳುತ್ತೇನೆ.

ಅರಣೀಮಗ್ನಿಕಾಮೋ ವಾ ಮಥ್ನಾತಿ ಹೃದಯಂ ಮಮ ।
ವಾಚಾ ದುರುಕ್ತಂ ದೇವರ್ಷೇ ತನ್ಮೇ ದಹತಿ ನಿತ್ಯದಾ ॥೬॥

ದೇವರ್ಷಿಗಳೇ! ಅಗ್ನಿಯನ್ನು ಅಪೇಕ್ಷಿಸುವವನು ಯಾವ ರೀತಿಯಲ್ಲಿ ಮಂಥನದಾರುವನ್ನು ಕಡೆಯುವನೋ–ಅದೇ ರೀತಿಯಲ್ಲಿ ನನ್ನ ಜ್ಞಾತಿ ಬಾಂಧವರಾಡುವ ಕಟುವಾದ ಮಾತುಗಳು ನನ್ನ ಹೃದಯವನ್ನು ಅಲ್ಲೋಲ ಕಲ್ಲೋಲಗೊಳಿಸುತ್ತವೆ ಮತ್ತು ಸುಟ್ಟುಹಾಕುತ್ತಿವೆ.

ಬಲಂ ಸಂಕರ್ಷಣೇ ನಿತ್ಯಂ ಸೌಕುಮಾರ್ಯಂ ಪುನರ್ಗದೇ ।
ರೂಪೇಣ ಮತ್ತಃ ಪ್ರದ್ಯುಮ್ನಃ ಸೋಽಸಹಾಯೋಽಸ್ಮಿ ನಾರದ ॥೭॥

ನಮ್ಮಣ್ಣನಾದ ಸಂಕರ್ಷಣನಿಗೆ ಅಪಾರವಾದ ಬಲವಿದೆ. (ಆ ಬಲ ದಿಂದಲೇ ಅವನು ಮತ್ತನಾಗಿದ್ದಾನೆ.) ಗದನಲ್ಲಿ ಸೌಕುಮಾರ್ಯವಿದೆ. (ಸುಕುಮಾರನಾದವನು ಯಾವ ಕಾರ್ಯವನ್ನೂ ಮಾಡಲು ಒಲ್ಲನು.) ಪ್ರದ್ಯುಮ್ನನು ರೂಪದಿಂದಲೇ ಮತ್ತನಾಗಿದ್ದಾನೆ. ಆದುದರಿಂದ ನಾನು ಇವರೆಲ್ಲರೊಡನಿದ್ದರೂ ಈಗ ಅಸಹಾಯನೇ ಆಗಿದ್ದೇನೆ.

ಅನ್ಯೇ ಹಿ ಸುಮಹಾಭಾಗ ಬಲವನ್ತೋ ದುರುತ್ಸಹಾಃ ।
ನಿತ್ಯೋತ್ಥಾನೇನ ಸಮ್ಪನ್ನಾ ನಾರದಾನ್ಧಕವೃಷ್ಣಯಃ ॥೮॥

ನಾರದರೇ! ಅಂಧಕ-ವೃಷ್ಣಿಗಳಲ್ಲಿ ಮಹಾಭಾಗ್ಯಶಾಲಿಗಳಾದ, ಬಲಿಷ್ಠ ರಾದ, ದುಃಸಹಪರಾಕ್ರಮಿಗಳಾದ ಇನ್ನೂ ಅನೇಕ ವೀರರಿದ್ದಾರೆ. ಅವರೆಲ್ಲರೂ ಸರ್ವದಾ ಉದ್ಯೋಗಶೀಲರಾಗಿಯೇ ಇರುತ್ತಾರೆ.

ಯಸ್ಯ ನ ಸ್ಯುರ್ನ ವೈ ಸ ಸ್ಯಾದ್ಯಸ್ಯ ಸ್ಯುಃ ಕೃತ್ಸ್ನಮೇವ ತತ್ ।
ದ್ವಾಭ್ಯಾಂ ನಿವಾರಿತೋ ನಿತ್ಯಂ ವೃಣೋಮ್ಯೇಕತರಂ ನ ಚ ॥೯॥

ಅಂಧಕ-ವೃಷ್ಣಿಗಳು ಯಾರ ಕಡೆಗೆ ಸೇರುವುದಿಲ್ಲವೋ ಆ ಪಕ್ಷವು ನಾಶವಾದಂತೆಯೇ ಸರಿ. ಯಾವ ಕಡೆಗೆ ಸೇರುತ್ತಾರೆಯೋ ಅವರು ಸಂಪೂರ್ಣವಾಗಿ ವಿಜಯಿಗಳಾದಂತೆಯೇ ಸರಿ. ಆದರೆ ಆಹುಕ ಮತ್ತು ಅಕ್ರೂರರು ಪರಸ್ಪರ ಬದ್ಧವೈರಿಗಳಾಗಿದ್ದಾರೆ. ಅಂಧಕರು ವೃಷ್ಣಿಗಳ ಕಡೆಗೆ

ಹೋಗಬಾರದೆಂದೂ ವೃಷ್ಣಿಗಳು ಅಂಧಕರ ಪಕ್ಷವನ್ನು ವಹಿಸಬಾರದೆಂದೂ ನನ್ನನ್ನು ತಡೆಯುತ್ತಾರೆ. ಆದರೆ ನಾನು ಯಾವ ಒಂದು ಪಕ್ಷವನ್ನೂ ಸೇರದೆ ಸುಮ್ಮನಿದ್ದುಬಿಟ್ಟಿದ್ದೇನೆ.

ಸ್ಯಾತಾಂ ಯಸ್ಯಾಹುಕಾಕ್ರೂರೌ ಕಿಂ ನು ದುಃಖತರಂ ತತಃ ।
ಯಸ್ಯ ಚಾಪಿ ನ ತೌ ಸ್ಯಾತಾಂ ಕಿಂ ನು ದುಃಖತರಂ ತತಃ ॥೧೦॥

ಪರಸ್ಪರವಾಗಿ ಕಚ್ಚಾಡುವ ಆಹುಕಾಕ್ರೂರರು ಯಾರಿಗೆ ಬಂಧು ಗಳೋ–ಅವರಿಗೆ ಇದಕ್ಕಿಂತಲೂ ದುಃಖತರವಾದುದು ಬೇರೇನಿದೆ? ಇಬ್ಬರಿಗೂ ಬೇಕಾದ ಬಂಧುಗಳು ಅವರ ಪರಸ್ಪರ ಮೈಮನಸ್ಯವನ್ನು ಕಂಡು ಬಹಳವಾಗಿ ದುಃಖಿಸುತ್ತಾರೆ. ಅವರಿಬ್ಬರೂ ಯಾರಿಗೆ ಸುಹೃದರಲ್ಲವೋ– ಅವರಿಗೂ ಸುಹೃದರಾಗದೇ ಇರುವುದರಿಂದ ಉಂಟಾಗುವ ದುಃಖಕ್ಕಿಂತಲೂ ಅಧಿಕವಾದ ದುಃಖವು ಮತ್ತಾವುದಿದೆ? ಆಹುಕಾಕ್ರೂರರ ವೈಮನಸ್ಯವು ಅವರ ಬಂಧುಗಳಿಗೂ ದುಃಖವನ್ನುಂಟುಮಾಡಿದೆ. ಇದು ಸ್ವಾಭಾವಿಕವೇ ಸರಿ. ಆದರೆ ಅವರಿಬ್ಬರ ಸ್ನೇಹಸಂಬಂಧವನ್ನು ಹೊಂದದವರೂ ಇಂತಹ ಸತ್ಪುರುಷರ ಸ್ನೇಹಸಂಬಂಧವು ಸಿಕ್ಕಲಿಲ್ಲವಲ್ಲಾ ಎಂದು ದುಃಖಪಡುತ್ತಾರೆ. (ಒಟ್ಟಿನಲ್ಲಿ ಆಹುಕಾಕ್ರೂರರ ಪರಸ್ಪರವೈಮನಸ್ಯದಿಂದಾಗಿ ಅವರ ಬಂಧುಗಳಿಗೂ ದುಃಖ ; ಬಂಧುಗಳಲ್ಲದವರಿಗೂ ದುಃಖ)

ಸೋಽಹಂ ಕಿತವಮಾತೇವ ದ್ವಯೋರಪಿ ಮಹಾಮತೇ ।
ಏಕಸ್ಯ ಜಯಮಾಶಂಸೇ ದ್ವಿತೀಯಸ್ಯಾಪರಾಜಯಮ್ ॥೧೧॥

ಮಹಾಮತಿಗಳೇ! ನಾನು ಈ ಸಂದರ್ಭದಲ್ಲಿ ಜೂಜುಗಾರರಿಬ್ಬರ ತಾಯಿಯಂತೆ ನಡೆದುಕೊಳ್ಳುತ್ತಿದ್ದೇನೆ. ಒಬ್ಬ ತಾಯಿಗಿರುವ ಇಬ್ಬರು ಮಕ್ಕಳೂ ಜೂಜುಗಾರರಾಗಿರುತ್ತಾರೆ. ಇಬ್ಬರೂ ಜೂಜಾಡುವ ಮೊದಲು ತಾಯಿಗೆ ನಮಸ್ಕಾರಮಾಡಿ ಹೋಗುತ್ತಾರೆ. ಆಗ ತಾಯಿಯು ಒಬ್ಬನಿಗೆ 'ಜಯವಾಗಲಿ' ಎಂದು ಹೇಳುತ್ತಾಳೆ. ಮತ್ತೊಬ್ಬನಿಗೆ 'ಪರಾಜಯವಾಗದಿರಲಿ'–ಎಂದು ಹೇಳುತ್ತಾಳೆ. ಅದೇ ರೀತಿಯಲ್ಲಿ ನಾನಾದರೂ ಇಬ್ಬರಲ್ಲಿ ಒಬ್ಬನಿಗೆ ವಿಜಯವಾಗಲೆಂದು ಹೇಳುತ್ತೇನೆ. ಮತ್ತೊಬ್ಬನಿಗೆ ಪರಾಜಯವಾಗದಿರಲಿ'– ಎನ್ನುತ್ತೇನೆ.

ಮಮ್ಯೈವಂ ಕ್ಲಿಶ್ಯಮಾನಸ್ಯ ನಾರದೋಭಯತಃ ಸದಾ ।
ವಕ್ತುಮರ್ಹಸಿ ಯಚ್ಛ್ರೇಯೋ ಜ್ಞಾತೀನಾಮಾತ್ಮನಸ್ತಥಾ ॥೧೨॥

ನಾರದರೇ! ಹೀಗೆ ಎರಡು ಕಡೆಗಳವರಿಂದಲೂ ಪರಿಕ್ಲಿಷ್ಟನಾಗಿ ನಿರಂತರವಾಗಿ ಭಯದಿಂದ ಸಂಕಟಪಡುತ್ತಿರುವ ನನಗೂ ಮತ್ತು ನನ್ನ ಜ್ಞಾತಿ-ಬಾಂಧವರಿಗೂ ಶ್ರೇಯಃಸಾಧನಮಾರ್ಗವನ್ನು ತಿಳಿಸುವ ಕೃಪೆ ಮಾಡಿರಿ.”

ನಾರದರು ಹೇಳುತ್ತಾರೆ :

ಆಪದೋ ದ್ವಿವಿಧಾಃ ಕೃಷ್ಣ ಬಾಹ್ಯಾಶ್ಚಾಭ್ಯನ್ತರಾಶ್ಚ ಹ ।
ಪ್ರಾದುರ್ಭವನ್ತಿ ವಾರ್ಷ್ಣೇಯ ಸ್ವಕೃತಾ ಯದಿ ವಾನ್ಯತಃ ॥೧೩॥

“ವೃಷ್ಣಿನಂದನ! ಆಪತ್ತುಗಳು ಎರಡು ವಿಧಗಳಾಗಿರುತ್ತವೆ. ಮೊದಲನೆಯದು ಬಾಹ್ಯ (ಹೊರಗಿನದು.) ಎರಡನೆಯದು ಆಭ್ಯಂತರ (ಒಳಗಿನದು.) ಇವುಗಳು ಸ್ವಕೃತ ಮತ್ತು ಪರಕೃತ–ಎಂದು ಎರಡು ಪ್ರಕಾರವಾಗಿರುತ್ತವೆ.

ಸೇಯಮಾಭ್ಯನ್ತರಾ ತುಭ್ಯಮಾಪತ್ಕೃಚ್ಛ್ರಾ ಸ್ವಕರ್ಮಣಾ ।
ಅಕ್ರೂರಭೋಜಪ್ರಭವಾ ಸರ್ವೇ ಹ್ಯೇತೇ ತ್ವದನ್ವಯಾಃ ॥೧೪॥

ನಿನಗೆ ಅಕ್ರೂರ ಮತ್ತು ಆಹುಕರಿಂದ ಉಂಟಾಗಿರುವ ಈ ಕಷ್ಟದಾಯಕ ವಾದ ಆಪತ್ತು ಆಭ್ಯಂತರವಾಗಿದ್ದು, ಸ್ವಕರ್ಮದಿಂದಲೇ ಉಂಟಾಗಿರುವ ಆಪತ್ತಾಗಿದೆ. ಏಕೆಂದರೆ ಅವರೆಲ್ಲರೂ ನಿನ್ನ ವಂಶಕ್ಕೆ ಸೇರಿದವರೇ ಆಗಿರುತ್ತಾರೆ.

ಅರ್ಥಹೇತೋರ್ಹಿ ಕಾಮಾದ್ವಾ ವಾಚಾ ಬೀಭತ್ಸಯಾಪಿ ವಾ ।
ಆತ್ಮನಾ ಪ್ರಾಪ್ತಮೈಶ್ವರ್ಯಮನ್ಯತ್ರ ಪ್ರತಿಪಾದಿತಮ್ ॥೧೫॥

ಈ ಆಪತ್ತು ಹಣದ ಕಾರಣದಿಂದಲೇ ಸಂಭವಿಸಿದೆ. ನಿನ್ನ ಇಚ್ಛೆ ಯಿಂದಲೋ, ಬೇರೆಯವರು ನಿಂದಿಸಬಹುದೆಂಬ ಭಾವನೆಯಿಂದಲೋ ನಿನಗೆ ಪ್ರಾಪ್ತವಾಗಿದ್ದ ಐಶ್ವರ್ಯವನ್ನು ನೀನು ಬೇರೆಯವರಿಗೆ ಕೊಟ್ಟು ಬಿಟ್ಟಿರುವೆ. ಬೇರೆಯವನನ್ನು ರಾಜನನ್ನಾಗಿ ಮಾಡಿರುವೆ. (ಐಶ್ವರ್ಯವನ್ನು ಹಂಚಿಕೊಟ್ಟಿರುವೆ.)

ಕೃತಮೂಲಮಿದಾನೀಂ ತಜ್ಜ್ಞಾತಿವೃನ್ದಂ ಸಹಾಯವಾನ್ ।
ನ ಶಕ್ಯಂ ಪುನರಾದಾತುಂ ವಾನ್ತಮನ್ನಮಿವ ತ್ವಯಾ ॥೧೬॥

ಸಹಾಯವಂತನಾದ ಶ್ರೀಕೃಷ್ಣ! ನೀನು ಕೊಟ್ಟಿರುವ ಐಶ್ವರ್ಯವೆಲ್ಲವೂ ನಿನ್ನ ಜ್ಞಾತಿ-ಬಾಂಧವರಲ್ಲಿ ದೃಢವಾಗಿ ಬೇರುಬಿಟ್ಟಿದೆ. ವಾಂತಿಮಾಡಿದ ಅನ್ನವನ್ನು ಪುನಃ ಭಕ್ಷಿಸಲು ಸಾಧ್ಯವಾಗದಂತೆ–ಅವರಲ್ಲಿರುವ ಐಶ್ವರ್ಯವನ್ನು ಪುನಃ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೆ ತೆಗೆದುಕೊಳ್ಳುವುದು ಸಮಂಜಸವೂ ಆಗುವುದಿಲ್ಲ.

ಬಭ್ರೂಗ್ರಸೇನಯೋಃ ರಾಜ್ಯಂ ನಾಪ್ತುಂ ಶಕ್ಯಂ ಕಥಂಚನ ।
ಜ್ಞಾತಿಭೇದಭಯಾತ್ಕೃಷ್ಣ ತ್ವಯಾ ಚಾಪಿ ವಿಶೇಷತಃ ॥೧೭॥

ಜ್ಞಾತಿಗಳಲ್ಲಿ ಪರಸ್ಪರವಾಗಿ ವೈಮನಸ್ಯವುಂಟಾಗುವುದೆಂಬ ಭಯ ದಿಂದಾಗಿ ಅಕ್ರೂರ ಮತ್ತು ಉಗ್ರಸೇನರ ಅಧಿಕಾರದಲ್ಲಿರುವ ರಾಜ್ಯವನ್ನು ಯಾವುದೇ ಕಾರಣದಿಂದಲೂ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ನಿನ್ನಿಂದಂತೂ ಸಾಧ್ಯವೇ ಇಲ್ಲ.

ತಚ್ಚ ಸಿಧ್ಯೇತ್ಪ್ರಯತ್ನೇನ ಕೃತ್ವಾ ಕರ್ಮ ಸುದುಷ್ಕರಮ್ ।
ಮಹಾಕ್ಷಯಂ ವ್ಯಯೋ ವಾ ಸ್ಯಾದ್ವಿನಾಶೋ ವಾ ಪುನರ್ಭವೇತ್ ॥

ಒಂದು ವೇಳೆ ಬಹಳವಾದ ಪ್ರಯತ್ನದಿಂದ ಅತ್ಯಂತದುಷ್ಕರವಾದ, ಬಹುಜನಸಂಹಾರಕವಾದ ಯುದ್ಧವನ್ನು ಮಾಡಿ ರಾಜ್ಯವನ್ನು ಪಡೆದು ಕೊಳ್ಳಬಹುದು. ಆದರೆ ಅದರಿಂದ ಅಪಾರವಾಗಿ ಧನವ್ಯಯವಾಗುತ್ತದೆ. ಸರ್ವವಿನಾಶವೇ ಆಗುತ್ತದೆ.

ಅನಾಯಸೇನ ಶಸ್ತ್ರೇಣ ಮೃದುನಾ ಹೃದಯಚ್ಛಿದಾ ।
ಜಿಹ್ವಾಮುದ್ಧರ ಸರ್ವೇಷಾಂ ಪರಿಮೃಜ್ಯಾನುಮೃಜ್ಯ ಚ ॥೧೯॥

ಶ್ರೀಕೃಷ್ಣ! ಆದುದರಿಂದ ಲೋಹಮಯವಲ್ಲದ, ಮೃದುವಾದ ಆದರೂ ಹೃದಯವನ್ನು ಭೇದಿಸುವ ಶಸ್ತ್ರದಿಂದ ನಿನ್ನ ಜ್ಞಾತಿ-ಬಾಂಧವರ ನಾಲಿಗೆಯನ್ನು–ಕ್ಷಮೆ, ಸರಳತೆ ಮುಂತಾದ ಗುಣಗಳ ಮೂಲಕ ಪರಿ ಮಾರ್ಜನಗೊಳಿಸಿ, ಸೇವಾ-ಸತ್ಕಾರಗಳ ಮೂಲಕ ಅನುಮಾರ್ಜನಗೊಳಿಸಿ

ತೆಗೆದುಹಾಕು. (ಅವರು ಪುನಃ ಪರಸ್ಪರವೈಷಮ್ಯದಿಂದ ಮಾತನಾಡದಂತೆ ವ್ಯವಹರಿಸು.)"

ಶ್ರೀಕೃಷ್ಣನು ಪ್ರಶ್ನಿಸುತ್ತಾನೆ :

ಅನಾಯಸಂ ಮುನೇ ಶಸ್ತ್ರಂ ಮೃದು ವಿದ್ಯಾಮಹಂ ಕಥಮ್ ।
ಯೇನೈಷಾಮುದ್ಧರೇ ಜಿಹ್ವಾಂ ಪರಿಮೃಜ್ಯಾನುಮೃಜ್ಯ ಚ ॥೨೦॥

"ನಾರದರೇ! ಲೋಹಮಯವಲ್ಲದ ಮೃದುವಾದ ಶಸ್ತ್ರವನ್ನು ನಾನು ಹೇಗೆ ತಿಳಿಯಬಲ್ಲೆನು? ಅಂತಹ ಅಲೋಹಶಸ್ತ್ರದಿಂದ ಶುದ್ಧಮಾಡಿ ನಾನು ಹೇಗೆ ನನ್ನ ಜ್ಞಾತಿಗಳ ನಾಲಿಗೆಯನ್ನು ತೆಗೆದುಹಾಕಬಲ್ಲೆನು?–ವಿಶದವಾಗಿ ಹೇಳಿರಿ."

ನಾರದರು ಹೇಳುತ್ತಾರೆ :

ಶಕ್ತ್ಯಾನ್ನದಾನಂ ಸತತಂ ತಿತಿಕ್ಷಾರ್ಜವಮಾರ್ದವಮ್ ।
ಯಥಾರ್ಹಪ್ರತಿಪೂಜಾ ಚ ಶಸ್ತ್ರಮೇತದನಾಯಸಮ್ ॥೨೧॥

"ವಾಸುದೇವ! ಯಥಾಶಕ್ತಿ ಸತತವಾಗಿ ಅನ್ನದಾನಮಾಡುವುದು, ಕ್ಷಮೆ, ಸರಳತೆ, ಕೋಮಲತೆ, ಯಥಾಯೋಗ್ಯವಾಗಿ ಪೂಜಾ-ಸತ್ಕಾರಗಳನ್ನು ಮಾಡುವುದು–ಇವು ಅಲೋಹಶಸ್ತ್ರಗಳಾಗುತ್ತವೆ. ಲೋಹಮಯವಾದ ಶಸ್ತ್ರವು ಶರೀರದ ಮೇಲೆ ಪರಿಣಾಮವನ್ನುಂಟುಮಾಡಿದರೆ ಈ ಅಲೋಹಶಸ್ತ್ರಗಳು ಮನುಷ್ಯನ ಮನಸ್ಸಿನ ಮೇಲೆ ಸತ್ಪರಿಣಾಮವನ್ನುಂಟು ಮಾಡುತ್ತವೆ.

ಜ್ಞಾತೀನಾಂ ವಕ್ತುಕಾಮಾನಾಂ ಕಟುಕಾನಿ ಲಘೂನಿ ಚ ।
ಗಿರಾ ತ್ವಂ ಹೃದಯಂ ವಾಚಂ ಶಮಯಸ್ವ ಮನಾಂಸಿ ಚ ॥೨೨॥

ಜ್ಞಾತಿಗಳೇನಾದರೂ ನಿನ್ನ ವಿಷಯದಲ್ಲಿ ಕಟುವಾದ ಮತ್ತು ತುಚ್ಛವಾದ ಮಾತುಗಳನ್ನಾಡಬೇಕೆಂದಿದ್ದರೆ–ಆ ಸಮಯದಲ್ಲಿ ನೀನು ಸುಮಧುರವಾದ ಮಾತುಗಳಿಂದ ಅವರ ಕಠೋರಹೃದಯವನ್ನೂ, ಕಟುವಾಕ್ಯಗಳನ್ನೂ ಮತ್ತು ಉದ್ರಿಕ್ತವಾದ ಮನಸ್ಸನ್ನೂ ಶಮನಗೊಳಿಸು.

ನಾಮಹಾಪುರುಷಃ ಕಶ್ಚಿನ್ನಾನಾತ್ಮಾ ನಾಸಹಾಯವಾನ್ ।
ಮಹತೀಂ ಧುರಮಾಧತ್ತೇ ತಾಮುದ್ಯಮ್ಯೋರಸಾ ವಹ ॥೨೩॥

ಮಹಾಪುರುಷನಲ್ಲದವನು, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳ ದವನು, ಸಹಾಯಶೂನ್ಯನಾದವನು ಮಹಾಭಾರವನ್ನು ವಹಿಸಲಾರನು. ನೀನು ಮಹಾಪುರುಷನಾಗಿರುವೆ. ಜಿತೇಂದ್ರಿಯನಾಗಿರುವೆ ಮತ್ತು ಸಸಹಾಯನೂ ಆಗಿರುವೆ. ಆದುದರಿಂದ ನೀನು ಆ ಮಹಾಭಾರವನ್ನು ಹೃದಯದಿಂದ ಮೇಲೆತ್ತಿ ಧರಿಸು.

ಸರ್ವ ಏವ ಗುರುಂ ಭಾರಮನಡ್ವಾನ್ವಹತೇ ಸಮೇ ।
ದುರ್ಗೇ ಪ್ರತೀತಃ ಸುಗವೋ ಭಾರಂ ವಹತಿ ದುರ್ವಹಮ್ ॥೨೪॥

ಎಲ್ಲ ಎತ್ತುಗಳೂ ಸಮತಲವಾದ ಮಾರ್ಗಗಳಲ್ಲಿ ಭಾರವನ್ನು ಹೊರು ತ್ತವೆ. ಆದರೆ ದುರ್ಗಮಪ್ರದೇಶಗಳಲ್ಲಿ ಹೊರಲು ಅತ್ಯಂತದುಸ್ತರವಾದ ಭಾರವನ್ನು ಮಹಾಬಲಿಷ್ಠಶಾಲಿಯಾದ ಎತ್ತು ಮಾತ್ರವೇ ಹೊರಬಲ್ಲುದು.

ಭೇದಾದ್ವಿನಾಶಃ ಸಂಘಾನಾಂ ಸಂಘಮುಖ್ಯೋಽಸಿ ಕೇಶವ ।
ಯಥಾ ತ್ವಾಂ ಪ್ರಾಪ್ಯ ನೋತ್ಸೀದೇದಯಂ ಸಂಘಸ್ತಥಾ ಕುರು ॥೨೫॥

ಕೇಶವ! ನೀನು ಯಾದವರ ಸಂಘಕ್ಕೆ ಮುಖ್ಯಸ್ಥನಾಗಿರುವೆ. ಪರಸ್ಪರವೈಷಮ್ಯದಿಂದ ಸಂಘವೇ ಒಡೆದು ವಿನಾಶಹೊಂದುತ್ತದೆ. ಮಹಾನುಭಾವ! ನಿನ್ನನ್ನೇ ಮುಖ್ಯಸ್ಥನನ್ನಾಗಿ ಪಡೆದಿರುವ ಈ ಮಹಾ ಯಾದವಸಂಘವು ಯಾವ ರೀತಿಯಲ್ಲಿ ಒಡೆದುಹೋಗುವುದಿಲ್ಲವೋ ಹಾಗೆ ನೀನು ವರ್ತಿಸು.

ನಾನ್ಯತ್ರ ಬುದ್ಧಿಕ್ಷಾನ್ತಿಭ್ಯಾಂ ನಾನ್ಯತ್ರೇನ್ದ್ರಿಯನಿಗ್ರಹಾತ್ ।
ನಾನ್ಯತ್ರ ಧನಸಂತ್ಯಾಗಾದ್ಗಣಃ ಪ್ರಾಜ್ಞೇಽವತಿಷ್ಠತೇ ॥೨೬॥

ಬುದ್ಧಿ, ಕ್ಷಮೆ ಮತ್ತು ಇಂದ್ರಿಯನಿಗ್ರಹಗಳಿಲ್ಲದೇ, ಧನ-ವೈಭವಗಳನ್ನು ತ್ಯಾಗಮಾಡದೇ ಯಾವುದೇ ಗಣವು ಅಥವಾ ಸಂಘವು ಬುದ್ಧಿವಂತನಾದ ಮನುಷ್ಯನ ಆಜ್ಞೆಗೆ ಒಳಪಡುವುದಿಲ್ಲ.

ಧನ್ಯಂ ಯಶಸ್ಯಮಾಯುಷ್ಯಂ ಸ್ವಪಕ್ಷೋದ್ಭಾವನಂ ಸದಾ ।
ಜ್ಞಾತೀನಾಮವಿನಾಶಃ ಸ್ಯಾದ್ಯಥಾ ಕೃಷ್ಣ ತಥಾ ಕುರು ॥೨೭॥

ಸ್ವಪಕ್ಷವನ್ನು ಅಭಿವೃದ್ಧಿಸ್ಥಿತಿಗೆ ತರುವುದು ಧನ್ಯವೂ, ಯಶಸ್ಕರವೂ ಆಯುಷ್ಕರವೂ ಆಗಿದೆ. ಕೃಷ್ಣ! ಹೇಗೆ ನಿನ್ನ ಜ್ಞಾತಿಗಳ ವಿನಾಶವು ಸಂಭವಿಸುವುದಿಲ್ಲವೋ ಹಾಗೆ ಮಾಡು.

ಆಯತ್ಯಾಂ ಚ ತದಾತ್ವೇ ಚ ನ ತೇಽಸ್ತ್ಯವಿದಿತಂ ಪ್ರಭೋ ।
ಷಾಡ್ಗುಣ್ಯಸ್ಯ ವಿಧಾನೇನ ಯಾತ್ರಾಯಾನವಿಧೌ ತಥಾ ॥೨೮॥

ಪ್ರಭುವೇ! ಭವಿಷ್ಯದಲ್ಲಿ ಮತ್ತು ವರ್ತಮಾನಕಾಲದಲ್ಲಿ ಮಾಡಬೇಕಾದುದೆಲ್ಲವೂ ನಿನಗೆ ತಿಳಿದೇ ಇದೆ. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಮಾಶ್ರಯ–ಈ ಆರು ಗುಣಗಳನ್ನು ಯಾವ-ಯಾವ ಸಂದರ್ಭಗಳಲ್ಲಿ ಪ್ರಯೋಗಿಸಬೇಕೆಂಬ ವಿಷಯವೂ, ಶತ್ರುವಿನೊಡನೆ ಯುದ್ಧಕ್ಕೆ ಹೋಗಲು ಯಾವ ಕಾಲವು ಅನುಕೂಲವಾಗಿರುವುದೆಂಬ ವಿಷಯವೂ ನಿನಗೆ ತಿಳಿಯದೇ ಇಲ್ಲ.

ಯಾದವಾಃ ಕುಕುರಾ ಭೋಜಾಃ ಸರ್ವೇ ಚಾನ್ಧಕವೃಷ್ಣಯಃ ।
ತ್ವಯ್ಯಾಸಕ್ತಾ ಮಹಾಬಾಹೋ ಲೋಕೇ ಲೋಕೇಶ್ವರಾಶ್ಚ ಯೇ ।
ಉಪಾಸತೇ ಹಿ ತ್ವದ್ಬುದ್ಧಿಮೃಷಯಶ್ಚಾಪಿ ಮಾಧವ ॥೨೯॥

ಮಹಾಬಾಹುವೇ! ಮಾಧವ! ಯಾದವರೂ, ಕುಕುರರೂ, ಭೋಜರೂ, ಎಲ್ಲ ಅಂಧಕ-ವೃಷ್ಣಿಗಳೂ ನಿನ್ನಲ್ಲಿಯೇ ಆಸಕ್ತವಾದ ಮನಸ್ಸುಳ್ಳವರಾಗಿರುತ್ತಾರೆ. ಸಕಲಲೋಕಗಳೂ, ಸಕಲಲೋಕೇಶ್ವರರೂ ಋಷಿಗಳೂ ನಿನ್ನ ಬುದ್ಧಿಯನ್ನೇ ಆಶ್ರಯಿಸಿರುತ್ತಾರೆ.

ತ್ವಂ ಗುರುಃ ಸರ್ವಭೂತಾನಾಂ ಜಾನೀಷೇ ತ್ವಂ ಗತಾಗತಮ್ ।
ತ್ವಾಮಾಸಾದ್ಯ ಯದುಶ್ರೇಷ್ಠಮೇಧನ್ತೇ ಯಾದವಾಃ ಸುಖಮ್ ॥೩೦॥

ಕೃಷ್ಣ! ಎಲ್ಲ ಪ್ರಾಣಿಗಳಿಗೂ ನೀನೇ ಗುರುವಾಗಿರುವೆ. ಹಿಂದೆ ಆಗಿಹೋದುದು ; ಮುಂದೆ ಆಗುವುದು–ಈ ಎಲ್ಲವನ್ನೂ ನೀನು ತಿಳಿದವನಾಗಿರುವೆ. ಯದುಶ್ರೇಷ್ಠನಾದ ನಿನ್ನನ್ನು ಆಶ್ರಯಿಸಿ ಯಾದವರು ಸುಖವನ್ನು ಹೊಂದಿ ಅಭಿವೃದ್ಧಿಯನ್ನು ಹೊಂದುತ್ತಾರೆ.”

ಎಂಭತ್ತೊಂದನೆಯ ಅಧ್ಯಾಯವು ಮುಗಿಯಿತು.

೮೨ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಮಂತ್ರಿಗಳ ಪರೀಕ್ಷಾವಿಷಯದಲ್ಲಿ ಕಾಲಕವೃಕ್ಷೀಯಮುನಿಗಳ ಉಪಾಖ್ಯಾನ

ಭೀಷ್ಮನು ಹೇಳುತ್ತಾನೆ :

ಏಷಾ ಪ್ರಥಮತೋ ವೃತ್ತಿರ್ದ್ವಿತೀಯಾಂ ಶೃಣು ಭಾರತ ।
ಯಃ ಕಶ್ಚಿಜ್ಜನಯೇದರ್ಥಂ ರಾಜ್ಞಾ ರಕ್ಷ್ಯಃ ಸದಾ ನರಃ ॥೧॥

"ಯುಧಿಷ್ಠಿರ! ನಾನು ಇದುವರೆಗೆ ಹೇಳಿರುವುದು ರಾಜನ ಮೊದಲನೆಯ ಆಚರಣೆಯಾಗಿದೆ ಅಥವಾ ರಾಜನೀತಿಯ ಪ್ರಥಮಚರಣವಾಗಿದೆ. ಈಗ ರಾಜನ ಎರಡನೆಯ ವೃತ್ತಿಯೇನೆಂಬುದನ್ನು ಹೇಳುವೆನು, ಕೇಳು. ರಾಜನ ಬೊಕ್ಕಸವು ಅಭಿವೃದ್ಧಿಹೊಂದುವಂತೆ ಕಾರ್ಯಾಚರಣೆಯನ್ನು ಮಾಡುವ ಮನುಷ್ಯನನ್ನು ರಾಜನು ಸದಾಕಾಲದಲ್ಲಿಯೂ ರಕ್ಷಿಸಬೇಕು.

ಹ್ರಿಯಮಾಣಮಮಾತ್ಯೇನ ಭೃತ್ಯೋ ವಾ ಯದಿ ವಾ ಭೃತಃ ।
ಯೋ ರಾಜಕೋಶಂ ನಶ್ಯನ್ತಮಾಚಕ್ಷೀತ ಯುಧಿಷ್ಠಿರ ॥೨॥

ಶ್ರೋತವ್ಯಮಸ್ಯ ಚ ರಹೋ ರಕ್ಷ್ಯಶ್ಚಾಮಾತ್ಯತೋ ಭವೇತ್ ।
ಅಮಾತ್ಯಾ ಹ್ಯಪಹರ್ತಾರೋ ಭೂಯಿಷ್ಠಂ ಘ್ನನ್ತಿ ಭಾರತ ॥೩॥

ಮಂತ್ರಿಯೇ ರಾಜನ ಭಂಡಾರವನ್ನು ಕೊಳ್ಳೆಹೊಡೆಯುತ್ತಿರುವ ಸಂದರ್ಭದಲ್ಲಿ–ಅದನ್ನು ಗಮನಿಸಿದ ರಾಜಸೇವಕನೋ ಅಥವಾ ರಾಜನ ಉಪ್ಪುತಿಂದ ಮತ್ತಾರೋ-ರಾಜಕೋಶವು ಅನುದಿನವೂ ಕ್ಷೀಣಿಸುತ್ತಿರುವು ದನ್ನು ರಾಜನಿಗೆ ತಿಳಿಯಪಡಿಸಿದಾಗ, ರಾಜನು ಆ ಸೇವಕನ ಅಹವಾಲನ್ನು ರಹಸ್ಯದಲ್ಲಿ ಕೇಳಬೇಕು ಮತ್ತು ಸಂಬಂಧಪಟ್ಟ ಮಂತ್ರಿಯಿಂದ ಅವನನ್ನು ರಕ್ಷಿಸಬೇಕು. ರಾಜನ ಭಂಡಾರವನ್ನು ಕೊಳ್ಳೆಹೊಡೆಯುವ ಮಂತ್ರಿಗಳು ತಾವು ಮಾಡುವ ಕಾರ್ಯವು ಇಂತಹವನಿಂದ ರಾಜನಿಗೆ ತಿಳಿಯಿತೆಂಬ ವಿಷಯವು ತಿಳಿದೊಡನೆಯೇ ಆ ವಾರ್ತಾವಾಹಕನನ್ನು ಪ್ರಾಯಶಃ ಕೊಂದೇಬಿಡುತ್ತಾರೆ.

ರಾಜಕೋಶಸ್ಯ ಗೋಪ್ತಾರಂ ರಾಜಕೋಶವಿಲೋಪಕಾಃ ।
ಸಮೇತ್ಯ ಸರ್ವೇ ಬಾಧನ್ತೇ ಸ ವಿನಶ್ಯತ್ಯರಕ್ಷಿತಃ ॥೪॥

ರಾಜನ ಬೊಕ್ಕಸವನ್ನು ರಕ್ಷಿಸುವವನು ಒಬ್ಬನಾದರೆ ಅದನ್ನು ಕೊಳ್ಳೆ ಹೊಡೆಯುವವರು ಹತ್ತಾರು ಮಂದಿ ಇರುತ್ತಾರೆ. ಈ ಕಾರಣದಿಂದಲೇ ರಾಜಕೋಶವನ್ನು ಅಪಹರಿಸುತ್ತಿರುವ ಅಧಿಕಾರಿಗಳೆಲ್ಲರೂ ಒಟ್ಟಾಗಿ ಸೇರಿಕೊಂಡು ರಾಜಕೋಶರಕ್ಷಕನನ್ನು ಬಾಧೆಪಡಿಸುತ್ತಾರೆ. ಅಂತಹವನನ್ನು ರಾಜನು ರಕ್ಷಿಸದಿದ್ದರೆ ಅವನು ವಿನಾಶವನ್ನೇ ಹೊಂದುತ್ತಾನೆ.

ಈ ವಿಷಯದಲ್ಲಿ ಕಾಲಕವೃಕ್ಷೀಯ-ಕೌಸಲ್ಯರ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು, ಕೇಳು. ಕ್ಷೇಮದರ್ಶೀ ಎಂಬ ರಾಜನು ಕೋಸಲದೇಶದ ಆಧಿಪತ್ಯವನ್ನು ವಹಿಸಿಕೊಂಡ ಸಮಯದಲ್ಲಿ ಕಾಲಕವೃಕ್ಷೀಯನೆಂಬ ಮುನಿಯು ಅಲ್ಲಿಗೆ ಬಂದನೆಂಬುದನ್ನು ನಾವು ಕೇಳಿದ್ದೇವೆ.

ಕಾಲಕವೃಕ್ಷೀಯಮುನಿಯು ಒಂದು ಕಾಗೆಯನ್ನು ಪಂಜರದಲ್ಲಿಟ್ಟು ಕೊಂಡು ಕ್ಷೇಮದರ್ಶಿಯ ದೇಶದ ಪರಿಸ್ಥಿತಿಯನ್ನು (ವೃತ್ತಾಂತವನ್ನು) ತಿಳಿಯುವ ಸಲುವಾಗಿ ರಾಜ್ಯಾದ್ಯಂತವಾಗಿ ಹಲವು ಬಾರಿ ಸಂಚರಿಸಿದನು.

ಆ ಮುನಿಯು ದೇಶದಲ್ಲಿ ಪರ್ಯಟನಮಾಡುತ್ತಿದ್ದಾಗ ಜನರನ್ನು ಉದ್ದೇಶಿಸಿ ಹೀಗೆ ಹೇಳುತ್ತಿದ್ದನು :

ಅಧೀಧ್ವಂ ವಾಯಸೀಂ ವಿದ್ಯಾಂ ಶಂಸನ್ತಿ ಮಮ ವಾಯಸಾಃ ।
ಅನಾಗತಮತೀತಂ ಚ ಯಚ್ಚ ಸಮ್ಪ್ರತಿವರ್ತತೇ ॥೮॥

“ಸಜ್ಜನರೇ! ವಾಯಸೀವಿದ್ಯೆಯನ್ನು ಕಲಿಯಿರಿ. (ಕಾಗೆಗಳು ಏನು ಮಾತನಾಡುತ್ತವೆಯೆಂಬುದನ್ನು ತಿಳಿಯಿರಿ.) ಕಾಗೆಗಳು ಹಿಂದಿನ ವಿಷಯ, ಮುಂದಾಗುವ ವಿಷಯ ಮತ್ತು ಈಗ ನಡೆಯುತ್ತಿರುವ ವಿಷಯ ಈ ಎಲ್ಲವನ್ನೂ ಯಥಾವತ್ತಾಗಿ ನನಗೆ ಹೇಳುತ್ತವೆ.”

ಕಾಲಕವೃಕ್ಷೀಯಮುನಿಯು ಹೀಗೆ ಹೇಳುತ್ತಾ ಕೋಸಲದೇಶದ ಆದ್ಯಂತವಾಗಿ ಸಂಚರಿಸುತ್ತಾ ಅನೇಕ ಜನರನ್ನು ಸಂಧಿಸಿ ಅವರವರ ಮನೋಗತವಾದ ಅಭಿಪ್ರಾಯಗಳನ್ನು ಸಂಗ್ರಹಿಸಿದನು. ಹಾಗೆಯೇ ಆ ಮುನಿಯು ರಾಜಕಾರ್ಯದಲ್ಲಿ ನಿಯುಕ್ತರಾಗಿದ್ದ ಸಮಸ್ತಕರ್ಮಚಾರಿಗಳೂ ಮಾಡುತ್ತಿದ್ದ ದುಷ್ಕರ್ಮಗಳನ್ನೂ ಪ್ರತ್ಯಕ್ಷವಾಗಿ ನೋಡಿದನು. ಆ ಮುನಿಯು

ಆ ರಾಷ್ಟ್ರದ ಪರಿಸ್ಥಿತಿಯನ್ನು ಸರ್ವಪ್ರಕಾರದಿಂದಲೂ ತಿಳಿದುಕೊಂಡವನಾಗಿ ರಾಜಧನವನ್ನು ಅಪಹರಿಸುತ್ತಿರುವ ಕರ್ಮಚಾರಿಗಳೆಲ್ಲರನ್ನೂ ಅಲ್ಲಲ್ಲಿಯೇ ಪತ್ತೆಹಚ್ಚಿ ಅನಂತರ ರಾಜನನ್ನು ನೋಡಲು ರಾಜಧಾನಿಗೆ ಆಗಮಿಸಿದನು. ಕಠೋರವ್ರತನಿಷ್ಠನಾದ ಮುನಿಯು ಬರುತ್ತಿರುವಾಗಲೇ 'ಸರ್ವಜ್ಞೋಽಸ್ಮಿ'–



'ನಾನು ಸರ್ವಜ್ಞನಾಗಿದ್ದೇನೆ!' ಎಂದು ಹೇಳಿಕೊಂಡೇ ಅರಮನೆಯನ್ನು ಪ್ರವೇಶಿಸಿದನು.

ಆ ಮುನಿಯು ಕ್ಷೇಮದರ್ಶಿಯ ಅರಮನೆಯನ್ನು ಪ್ರವೇಶಿದನಂತರ ರಾಜನ ಸಿಂಹಾಸನದ ಪಕ್ಕದಲ್ಲಿ ಸಮಲಂಕೃತನಾಗಿ ಠೀವಿಯಿಂದ ಕುಳಿತಿದ್ದ ಮಂತ್ರಿಯನ್ನು ಕುರಿತು ಕಾಗೆಯ ಮಾತಿಗೆ ಅನುಸಾರವಾಗಿ ಈ ಮಾತುಗಳನ್ನು ಹೇಳಿದನು :

“ಇಂತಹ ಸ್ಥಳದಲ್ಲಿ ನೀನು ರಾಜಧನವನ್ನು ಅಪಹರಣಮಾಡಿರುವೆ. ನೀನು ಅಪಹರಿಸಿರುವುದನ್ನು ಇಂತಿಂತಹ ಅಧಿಕಾರಿಗಳು ತಿಳಿದಿರುತ್ತಾರೆ. ನೀನೀಗ ರಾಜಕೋಶದ ಅಪಹಾರಕನಾಗಿರುವೆ. ಹೀಗೆಂಬುದಾಗಿ ಈ ನನ್ನ ಕಾಗೆಯು ಹೇಳುತ್ತಿದೆ. ಈ ಅಪರಾಧವನ್ನು ನೀನೀಗಲೇ ಒಪ್ಪಿಕೊ.”

ಹೀಗೆಯೇ ಆ ಕಾಲಕವೃಕ್ಷೀಯನು ರಾಜಧನಾಪಹಾರಕರಾದ ಇನ್ನೂ ಹಲವರ ಹೆಸರುಗಳನ್ನು ಹೇಳಿದನು. ಅವನು ಹೇಳಿದ ಯಾವ ಒಂದು ಮಾತೂ ಸುಳ್ಳಾದುದೇ ಎಲ್ಲಿಯೂ ಕೇಳಿಬರಲಿಲ್ಲ.

ಅದರಿಂದ ಅಪಮಾನಿತರಾದ ರಾಜನ ಎಲ್ಲ ಕರ್ಮಚಾರಿಗಳೂ ಒಟ್ಟಾಗಿ ಸೇರಿ, ರಾತ್ರಿಯಲ್ಲಿ ಮಲಗಿದ್ದ ಕಾಲಕವೃಕ್ಷೀಯಮುನಿಯ ಕಾಗೆಯನ್ನು ಬಾಣದಿಂದ ಕೊಂದುಹಾಕಿದರು. ಬ್ರಾಹ್ಮಣನು ಪಂಜರದಲ್ಲಿದ್ದ ಕಾಗೆಯು ಬಾಣದಿಂದ ಹತವಾದುದನ್ನು ನೋಡಿ, ಬೆಳಗ್ಗೆ ರಾಜನಾದ ಕ್ಷೇಮದರ್ಶಿಯನ್ನು ಸಂಧಿಸಿ ಹೇಳಿದನು :

ರಾಜಂಸ್ತ್ವಾಮಭಯಂ ಯಾಚೇ ಪ್ರಭುಂ ಪ್ರಾಣಧನೇಶ್ವರಮ್ ।
ಅನುಜ್ಞಾತಸ್ತ್ವಯಾ ಬ್ರೂಯಾಂ ವಚನಂ ಭವತೋ ಹಿತಮ್ ॥

“ಮಹಾರಾಜ! ನೀನು ಪ್ರಜೆಗಳ ಪ್ರಾಣಕ್ಕೂ ಮತ್ತು ಧನಕ್ಕೂ ಸ್ವಾಮಿಯಾಗಿರುವೆ. ನಾನು ನಿನ್ನಿಂದ ಅಭಯವನ್ನು ಯಾಚಿಸುತ್ತಿದ್ದೇನೆ. ನೀನು ಅನುಜ್ಞೆಯನ್ನು ನೀಡಿದರೆ ನಿನಗೆ ಹಿತಕರವಾದ ಮಾತನ್ನು ಹೇಳುತ್ತೇನೆ.

ಮಿತ್ರನಾದ ನಿನ್ನ ಹಿತಾರ್ಥವಾಗಿ ಸಂಪೂರ್ಣಭಕ್ತಿಭಾವದಿಂದ ಇಲ್ಲಿಗೆ ಆಗಮಿಸಿರುವ ನಾನು ರಾಜಕರ್ಮಚಾರಿಗಳ ಕಾರ್ಯದಿಂದಾಗಿ ಸಂತಪ್ತ ನಾಗಿದ್ದೇನೆ. ಸಾರಥಿಯಾದವನು ಒಳ್ಳೆಯ ಕುದುರೆಯನ್ನು ಹುರಿದುಂಬಿಸು ವಂತೆ ಸನ್ಮಿತ್ರನನ್ನು ಸಂಬೋಧಿಸಲು ಇಚ್ಛಿಸಿರುವ ಮತ್ತು ಮಿತ್ರನಿಗಾಗುತ್ತಿರುವ ಹಾನಿಯನ್ನು ನೋಡಿ ಅಸಹನಶೀಲನಾಗಿರುವ ನಾನು **‘ಅಯಂ ತವಾರ್ಥೋ ಹ್ರಿಯತೇ’**–‘ನಿನ್ನ ಐಶ್ವರ್ಯವು ಲೂಟಿಯಾಗುತ್ತಿದೆ’–ಎಂದು ಹೇಳಿ ಮಿತ್ರನಾದ ನಿನ್ನನ್ನು ಎಚ್ಚರಗೊಳಿಸಲು ಇಚ್ಛಿಸುತ್ತಿದ್ದೇನೆ. ಐಶ್ವರ್ಯ ಕಾಮನಾದ, ತನಗೆ ಹಿತವಾಗಬೇಕೆಂಬ ಅಭಿಲಾಷೆಯಿಂದ ಕೂಡಿರುವ

ಮಿತ್ರನಾದ ಪುರುಷನು (ರಾಜನು) ಅಂತಹ ಹಿತಕರ ಸ್ನೇಹಿತನಾದ ನನ್ನ ವಿಷಯದಲ್ಲಿ ಕ್ಷಮೆಯನ್ನು ತಾಳಬೇಕು."

ಕಾಲಕವೃಕ್ಷೀಯಮುನಿಯ ಮಾತನ್ನು ಕೇಳಿ ರಾಜನು ಹೇಳಿದನು :

"ಬ್ರಾಹ್ಮಣೋತ್ತಮ! ನೀನು ನನ್ನೊಡನೆ ಏನನ್ನು ಹೇಳಬೇಕೆಂದಿರುವೆಯೋ ಅದನ್ನು ಸ್ವಲ್ಪವೂ ಭಯವಿಲ್ಲದೇ ಹೇಳು. ಆತ್ಮಹಿತವನ್ನೇ ಬಯಸುತ್ತಿರುವ ನಾನು ನಿನ್ನ ವಿಷಯದಲ್ಲಿ ಕ್ಷಮೆಯನ್ನೇಕೆ ತೋರದಿರಲಿ? ನಿನಗೆ ನಾನು ಅನುಮತಿಯನ್ನು ನೀಡಿದ್ದೇನೆ. ನೀನು ಹೇಳಲು ಇಷ್ಟಪಟ್ಟಿರುವುದನ್ನು ಸ್ಪಷ್ಟವಾಗಿ ಹೇಳು. ವಿಪ್ರವರನೇ! ನೀನು ಏನು ಹೇಳುವೆಯೋ ಆ ನಿನ್ನ ಮಾತನ್ನು ನಾನು ಖಂಡಿತವಾಗಿ ನಡೆಸಿಕೊಡುತ್ತೇನೆ."

"ಮಹಾರಾಜ! 'ನಿನ್ನ ಕರ್ಮಚಾರಿಗಳಲ್ಲಿ ಯಾರು ಅಪರಾಧಿಗಳಾಗಿದ್ದಾರೆ? ಮತ್ತು ಯಾರು ನಿರಪರಾಧಿಗಳಾಗಿದ್ದಾರೆ?'–ಎಂಬುದೆಲ್ಲವನ್ನೂ ದೇಶಾಟನೆಯಿಂದ ತಿಳಿದುಕೊಂಡು, ಭೃತ್ಯರ ಕಡೆಯಿಂದ ನಿನಗಿರುವ ಭಯವನ್ನೂ ತಿಳಿದುಕೊಂಡು, ಅವರ ಆಚಾರ-ವ್ಯವಹಾರಗಳೆಲ್ಲವನ್ನೂ ನಿನಗೆ ಭಕ್ತಿಪೂರ್ವಕವಾಗಿ ತಿಳಿಯಹೇಳಲು ನಾನು ನಿನ್ನ ಸಮೀಪಕ್ಕೆ ಬಂದೆನು. 'ರಾಜಸೇವಕರ ಈ ಜೀವನವು ಪಾಪಭೂಯಿಷ್ಠವಾದದು ಮತ್ತು ಅತ್ಯಂತತುಚ್ಛವಾದುದು'–ಎಂದು ನೃಪಸೇವಿಗಳಿಗಿರುವ ಈ ದೋಷವನ್ನು ಹಿಂದೆಯೇ ಅನೇಕಾಚಾರ್ಯರು ಹೇಳಿರುತ್ತಾರೆ. ರಾಜಸೇವೆಯು ಬೇರೆಗತಿಯಿಲ್ಲದವರು ಆಶ್ರಯಿಸುವ ಪಾಪಕರವಾದ ವೃತ್ತಿಯಾಗಿದೆ.

ಆಶೀವಿಷೈಶ್ಚ ತಸ್ಯಾಹುಃ ಸಂಗತಂ ಯಸ್ಯ ರಾಜಭಿಃ ।
ಬಹುಮಿತ್ರಾಶ್ಚ ರಾಜಾನೋ ಬಹ್ವಮಿತ್ರಾಸ್ತಥೈವ ಚ ॥೨೫॥

ತೇಭ್ಯಃ ಸರ್ವೇಭ್ಯ ಏವಾಹುರ್ಭಯಂ ರಾಜೋಪಜೀವಿನಾಮ್ ।
ತಥೈಷಾಂ ರಾಜತೋ ರಾಜನ್ಮುಹೂರ್ತಾದೇವ ಭೀರ್ಭವೇತ್ ॥೨೬॥

'ರಾಜರೊಡನೆ ನಿಕಟಸಂಪರ್ಕವು ಸರ್ಪಗಳೊಡನೆ ಸರಸವಾಡುವಂತೆ'–ಎಂದು ನೀತಿಶಾಸ್ತ್ರಜ್ಞರು ಹೇಳುತ್ತಾರೆ. ರಾಜರಿಗೆ ಬಹುಜನ ಮಿತ್ರರೂ–ಬಹುಜನ ಶತ್ರುಗಳೂ ಇರುತ್ತಾರೆ. ರಾಜೋಪಜೀವಿಗಳಿಗೆ

ಅವರೆಲ್ಲರಿಂದಲೂ ಭಯವಿರುತ್ತದೆ. ಅಲ್ಲದೇ ರಾಜನಿಂದಲೂ ಕ್ಷಣ- ಕ್ಷಣಕ್ಕೂ ಭಯವಿದ್ದೇ ಇರುತ್ತದೆ.

ನೈಕಾನ್ತೇನ ಪ್ರಮಾದೋ ಹಿ ಶಕ್ಯಃ ಕರ್ತುಂ ಮಹೀಪತೌ ।
ನ ತು ಪ್ರಮಾದಃ ಕರ್ತವ್ಯಃ ಕಥಂಚಿದ್ಭೂತಿಮಿಚ್ಛತಾ ॥೨೭॥

ರಾಜನ ಸಮೀಪದಲ್ಲಿಯೇ ಇರುವವನು ಯಾವಾಗಲೂ ಯಾವುದೇ ವಿಧವಾದ ಪ್ರಮಾದವನ್ನೂ ಮಾಡಲು ಸಾಧ್ಯವಾಗುವುದಿಲ್ಲ. ತನಗೆ ಒಳ್ಳೆಯದನ್ನು ಅಪೇಕ್ಷಿಸುವವನು ರಾಜನ ವಿಷಯದಲ್ಲಿ ಯಾವ ಪ್ರಮಾದವನ್ನೂ ಮಾಡಕೂಡದು.

ಪ್ರಮಾದಾದ್ಧಿ ಸ್ಖಲೇದ್ರಾಜಾ ಸ್ಖಲಿತೇ ನಾಸ್ತಿ ಜೀವಿತಮ್ ।
ಅಗ್ನಿಂ ದೀಪ್ತಮಿವಾಸೀದೇದ್ರಾಜಾನಮುಪಶಿಕ್ಷಿತಃ ॥೨೮॥

ರಾಜನ ವಿಷಯದಲ್ಲಿ ಎಚ್ಚರತಪ್ಪಿ ತಪ್ಪುಮಾಡಿದರೆ ರಾಜನೂ ಸ್ಖಾಲಿತ್ಯವನ್ನು ಹೊಂದಬಹುದು. ಹಾಗೇನಾದರೂ ರಾಜನು ಸ್ಖಾಲಿತ್ಯವನ್ನು ಹೊಂದಿದರೆ ರಾಜಸೇವಿಯ ಪ್ರಾಣವೇ ಹೋಗಿಬಿಡಬಹುದು. ಆದುದರಿಂದ ಸುಶಿಕ್ಷಿತನಾದ ಮನುಷ್ಯನು ಧಗ-ಧಗಿಸುವ ಬೆಂಕಿಯ ಸಮೀಪದಲ್ಲಿ ಎಚ್ಚರಿಕೆಯಿಂದ ಇರುವಂತೆ ರಾಜನ ಸಮೀಪದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು ಮತ್ತು ಮಾತುಗಳನ್ನೂ ಬಹಳ ಎಚ್ಚರಿಕೆಯಿಂದಲೇ ಆಡಬೇಕು.

ಆಶೀವಿಷಮಿವ ಕ್ರುದ್ಧಂ ಪ್ರಭುಂ ಪ್ರಾಣಧನೇಶ್ವರಮ್ ।
ಯತ್ನೇನೋಪಚರೇನ್ನಿತ್ಯಂ ನಾಹಮಸ್ಮೀತಿ ಮಾನವಃ ॥೨೯॥

ಪ್ರಾಣ-ಧನಗಳೆರಡಕ್ಕೂ ಸ್ವಾಮಿಯಾದ, ಪ್ರಭುವಾದ ರಾಜನನ್ನು ಕೋಪಗೊಂಡ ವಿಷಸರ್ಪದಂತೆಯೇ ಕಾಣಬೇಕು. (ರಾಜನೊಡನೆ ಸರಸವಾಡಬಾರದು.) ವಿಷಸರ್ಪದೊಡನೆ ಸರಸವಾಡಲು ಹೋದರೆ ಪ್ರಾಣ ಉಳಿಯದಂತೆ ರಾಜನೊಡನೆ ಸರಸವಾಡಲು ಹೋದರೆ 'ತಾನು ಉಳಿಯಲಾರೆ' ಎಂಬುದನ್ನು ಮನಗಂಡು ಬುದ್ಧಿವಂತನಾದ ಮನುಷ್ಯನು ಪ್ರಯತ್ನಪೂರ್ವಕವಾಗಿ ಭಯ-ಭಕ್ತಿಗಳಿಂದ ರಾಜನನ್ನು ನಿತ್ಯವೂ ಉಪಚರಿಸಬೇಕು.

ದುರ್ವಾಕ್ಯಹೃತಾಚ್ಛಙ್ಕಮಾನೋ ದುಷ್ಕೃತಾದುದ್ದರಧಿಷ್ಠಿತಾತ್ ।
ದುರಾಸಿತಾದ್ದುರ್ವ್ರಜಿತಾದಿಙ್ಗಿತಾದಙ್ಗಚೇಷ್ಟಿತಾತ್ ॥೩೦॥

ಬಾಯಿಂದ ಕೆಟ್ಟಮಾತು ಬರಬಾರದು. ಕೆಟ್ಟಕೆಲಸವನ್ನು ಮಾಡಬಾರದು. ಯಾವುದನ್ನು ಮಾಡಿದರೆ ಏನಾಗುವುದೋ ಎಂಬ ಶಂಕೆಯನ್ನು ಯಾವಾಗಲೂ ಮನಸ್ಸಿನಲ್ಲಿ ಇಟ್ಟುಕೊಂಡೇ ಇರಬೇಕು. ರಾಜನ ಎದುರಿನಲ್ಲಿ ಹೇಗೋ ಹಾಗೆ ನಿಂತುಕೊಳ್ಳಬಾರದು ; ತೋರಿದಂತೆ ಕುಳಿತುಕೊಳ್ಳಕೂಡದು; ಹೇಗೋ ಹಾಗೆ ಓಡಾಡಕೂಡದು. ರಾಜನ ಎದುರಿನಲ್ಲಿ ಸಂಕೇತಗಳನ್ನು ಮಾಡಬಾರದು ಮತ್ತು ಅಂಗಚೇಷ್ಟೆಗಳನ್ನೂ ಮಾಡಬಾರದು.

ದೇವತೇವ ಹಿ ಸರ್ವಾರ್ಥಾನ್ಕುರ್ಯಾದ್ರಾಜಾ ಪ್ರಸಾದಿತಃ ।
ವೈಶ್ವಾನರ ಇವ ಕ್ರುದ್ಧಃ ಸಮೂಲಮಪಿ ನಿರ್ದಹೇತ್ ॥೩೧॥

ಸೇವಕನ ಸೇವೆಯಿಂದ ರಾಜನೇನಾದರೂ ಪ್ರಸನ್ನನಾದರೆ–ದೇವತೆಯೋಪಾದಿಯಲ್ಲಿ ಸರ್ವಾರ್ಥಗಳನ್ನೂ ಅನುಗ್ರಹಿಸಿಕೊಡುತ್ತಾನೆ. ಸೇವಕನ ಪ್ರಮಾದದಿಂದ ರಾಜನೇನಾದರೂ ಕ್ರುದ್ಧನಾದರೆ ಅಗ್ನಿಯೋಪಾದಿಯಲ್ಲಿ ಸೇವಕನ ವಂಶವನ್ನೇ ನಿರ್ನಾಮಗೊಳಿಸುತ್ತಾನೆ.

ಮಹಾರಾಜ! ರಾಜನ ವಿಷಯವಾಗಿ ಹೇಳುವಾಗ ಯಮಧರ್ಮನೇ ಈ ಮಾತನ್ನು ಹೇಳಿದ್ದಾನೆ. ಅವನು ಹೇಳಿರುವುದು ಯಥಾರ್ಥವಾಗಿದೆ. ಆದುದರಿಂದ ನಾನೂ ನಿನ್ನ ಸಲುವಾಗಿ ಮಹಾರ್ಥಸಾಧನೆಯ ವಿಷಯದಲ್ಲಿ ಪುನಃ ಪುನಃ ಹೇಳುವೆನು.

ದದಾತ್ಯಸ್ಮದ್ವಿಧೋಽಮಾತ್ಯೋ ಬುದ್ಧಿಸಾಹಾಯ್ಯಮಾಪದಿ ।
ವಾಯಸಸ್ತ್ವೇಷ ಮೇ ರಾಜನ್ನನು ಕಾರ್ಯಾಭಿಸಂಹಿತಃ ॥೩೩॥

ನನ್ನಂತಹ ಅಮಾತ್ಯರು ಆಪತ್ಕಾಲದಲ್ಲಿ ರಾಜನಿಗೆ ಬುದ್ಧಿಸಹಾಯವನ್ನು ಮಾಡುತ್ತಾರೆ. (ಬುದ್ಧಿಹೇಳುತ್ತಾರೆ.) ನನ್ನ ಕಾಗೆಯೂ ನಿನ್ನ ಅರ್ಥ ಸಾಧನೆಯಲ್ಲಿಯೇ ಆಸಕ್ತವಾಗಿದ್ದಿತು. (ಆದರೆ ಅದು ಸತ್ತುಹೋಯಿತು.)

ನ ಚ ಮೇಽತ್ರ ಭವಾನ್ಗರ್ಹ್ಯೋ ನ ಚ ಯೇಷಾಂ ಭವಾನ್ಪ್ರಿಯಃ ।
ಹಿತಾಹಿತಾಂಸ್ತು ಬುದ್ಧ್ಯೇಥಾ ಮಾ ಪರೋಕ್ಷಮತಿರ್ಭವೇಃ ॥೩೪॥

ನನ್ನ ಕಾಗೆಯು ಮರಣಹೊಂದಿದುದಕ್ಕೆ ನಿನ್ನ ದೋಷವೇನೂ ಇರುವುದಿಲ್ಲ. ನಾನು ನಿನ್ನನ್ನು ನಿಂದಿಸಲಾರೆ. ನೀನು ಯಾರ ಪ್ರೀತಿಗೆ ಪಾತ್ರ

ನಾಗಿರುವೆಯೋ ಅವರನ್ನೂ ನಿಂದಿಸುವುದಿಲ್ಲ. ನೀನು 'ನಿನಗೆ ಹಿತಚಿಂತಕರು ಯಾರು? ಅಹಿತರು ಯಾರು?'–ಎಂಬುದನ್ನು ಪ್ರತ್ಯಕ್ಷವಾಗಿ ಪ್ರಮಾಣಿಸಿ ತಿಳಿದುಕೊಳ್ಳಬೇಕು. ಬೇರೆಯವರು ಹೇಳಿದುದನ್ನು ಕೇಳುವ ಬುದ್ಧಿಯು ನಿನ್ನದಾಗದಿರಲಿ.

ಯಾರು ನಿನ್ನ ಬೊಕ್ಕಸದಿಂದ ಸಂಪತ್ತನ್ನು ಲೂಟಿಮಾಡುವುದರಲ್ಲಿಯೇ ಆಸಕ್ತರಾಗಿರುವರೋ–ಅಂತಹವರು ನಿನ್ನ ಅರಮನೆಯಲ್ಲಿಯೇ ವಾಸವಾಗಿದ್ದಾರೆ. ಅವರಿಗೆ ಪ್ರಜೆಗಳಿಗೆ ಒಳ್ಳೆಯದಾಗಬೇಕೆಂಬ ಉದ್ದೇಶ ವೇನೂ ಇರುವುದಿಲ್ಲ. ಅಂತಹವರೊಡನೆ ನನಗೆ ವೈರವುಂಟಾಗಿದೆ. ಯಾವನು ನಿನ್ನ ವಿನಾಶದಿಂದ ತೆರವಾದ ಈ ರಾಜ್ಯವನ್ನು ನಿನ್ನ ಅವಸಾನಾನಂತರದಲ್ಲಿ ಪಡೆದುಕೊಳ್ಳಲು ಇಚ್ಛಿಸುವನೋ–ಅವನು ಅಂತಃಪುರದ ರಾಜದ್ರೋಹಿಗಳಾದ ಸೇವಕರೊಡನೆ ಸೇರಿಕೊಂಡು ನಿನ್ನನ್ನು ವಿನಾಶಗೊಳಿಸುವ ಕಾರ್ಯವನ್ನು ಮಾಡಿದರೆ ಸಿದ್ಧಿಯನ್ನು ಹೊಂದುತ್ತಾನೆ. ಒಳಗಿನವರ ಸಹಕಾರವಿಲ್ಲದಿದ್ದರೆ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಲಾರನು. ಅಂತಹ ಒಳಗಿನ ಶತ್ರುಗಳ ಭಯದಿಂದಲೇ ನಾನು ಬೇರೆಯ ಆಶ್ರಮಕ್ಕೆ ಹೊರಟುಹೋಗುತ್ತಿದ್ದೇನೆ. ಪ್ರಭುವೇ! ನನ್ನ ಮೇಲೆ ಅವರು ಗುರಿಯಿಟ್ಟಿದ್ದ ಬಾಣವು ಕಾಗೆಗೆ ತಗುಲಿ ನನ್ನ ಬದಲಾಗಿ ಅದು ಸತ್ತುಹೋಯಿತು. ನನ್ನ ಕಾಗೆಯೊಡನೆ ನಾನು ಇಲ್ಲಿಗೆ ಯಾವ ಸ್ವಪ್ರಯೋಜನಾರ್ಥವಾಗಿಯೂ ಬಂದಿರಲಿಲ್ಲ. ಆದರೂ ಮೋಸದ ಕಾರ್ಯದಲ್ಲಿಯೇ ತತ್ಪರರಾಗಿರುವ ನಿನ್ನ ಸೇವಕರಿಂದ ನನ್ನ ಕಾಗೆಯು ಕೊಲ್ಲಲ್ಪಟ್ಟಿತು. ತಪಸ್ಸಿನ ಮೂಲಕವಾಗಿ ಪ್ರಾಪ್ತವಾಗಿರುವ ದಿವ್ಯದೃಷ್ಟಿಯಿಂದ ನಾನಿದನ್ನು ತಿಳಿದುಕೊಂಡೆನು.

ಬಹುನಕ್ರಝಷಗ್ರಾಹಾಂ ತಿಮಿಙ್ಗಿಲಗಣೈರ್ಯುತಾಮ್ ।
ಕಾಕೇನ ಬಾಲಿಶೇನೇಮಾಂ ಯಾಮತಾರ್ಷಮಹಂ ನದೀಮ್ ॥೯॥

ಈ ರಾಜ್ಯವು ಒಂದು ನದಿಗೆ ಸಮಾನವಾಗಿದೆ. ರಾಜಕೀಯ ಪುರುಷರು ಆ ನದಿಯಲ್ಲಿನ ಮೀನು, ಮೊಸಳೆ, ತಿಮಿ, ತಿಮಿಂಗಿಲಗಳ ಸಮೂಹಕ್ಕೆ ಸಮಾನರಾಗಿದ್ದಾರೆ. ಬಡಪಾಯಿಯಾದ ಕಾಗೆಯ ಸಹಾಯದಿಂದ ನಾನು ದುರ್ಗಮವಾದ ನದಿಯನ್ನು ದಾಟಿಬಂದೆನು.

ಸ್ಥಾಣ್ವಶ್ಮಕಣ್ಟಕವತೀಂ ಸಿಂಹವ್ಯಾಘ್ರಸಮಾಕುಲಾಮ್ ।
ದುರಾಸದಾಂ ದುಷ್ಪ್ರಸಹಾಂ ಗುಹಾಂ ಹೈಮವತೀಮಿವ ॥೪೦॥

ಮೋಟುಮರಗಳಿಂದಲೂ, ಕಲ್ಲುಬಂಡೆಗಳಿಂದಲೂ, ಮುಳ್ಳು ಗಳಿಂದಲೂ ಕೂಡಿರುವ–ಸಿಂಹಗಳಿಂದಲೂ, ಹುಲಿಗಳಿಂದಲೂ ಸಮಾಕುಲ ವಾಗಿರುವ–ಪ್ರವೇಶಿಸಲು ದುಃಸಾಧ್ಯವಾದ–ವಾಸಮಾಡಲು ಅಸಹ್ಯವಾದ ಹಿಮವತ್ಪರ್ವತದ ಗುಹೆಯಂತೆ ನಿನ್ನ ರಾಜ್ಯವಿದೆ. ಸಿಂಹ-ವ್ಯಾಘ್ರಗಳಿಗೆ ಸಮಾನರಾದ ರಾಜಕರ್ಮಚಾರಿಗಳಿರುವ ಕಾರಣದಿಂದ ಸತ್ಪುರುಷರಿಗೆ ಇಲ್ಲಿ ಪ್ರವೇಶಿಸಲು ಸಾಧ್ಯವೇ ಆಗುವುದಿಲ್ಲ. (ಕಾಗೆಯ ಬೆಂಬಲದಿಂದ ನಾನು ಈ ಕಷ್ಟಸಾಧ್ಯವಾದ ಕಾರ್ಯವನ್ನು ಮಾಡಿದೆನು.)

ಅಗ್ನಿನಾ ತಾಮಸಂ ದುರ್ಗಂ ನೌಭಿರಾಪ್ಯಂ ಚ ಗಮ್ಯತೇ ।
ರಾಜದುರ್ಗಾವತರಣೇ ನೋಪಾಯಂ ಪಣ್ಡಿತಾ ವಿದುಃ ॥೪೧॥

ಅಂಧಕಾರಮಯವಾಗಿರುವ ದುರ್ಗವನ್ನು ಪಂಜಿನ ಬೆಳಕಿನಿಂದ ದಾಟ ಬಹುದು. ಜಲದುರ್ಗವನ್ನು ನೌಕೆಯಿಂದ ದಾಟಬಹುದು. ಆದರೆ ರಾಜನೆಂಬ ದುರ್ಗವನ್ನು ದಾಟಲು ಪಂಡಿತರಾದವರಿಗೂ ಯಾವ ಉಪಾಯವೂ ಇದುವರೆಗೂ ಹೊಳೆದಿಲ್ಲ.

ಗಹನಂ ಭವತೋ ರಾಜ್ಯಮನ್ಧಕಾರಂ ತಮೋಽನ್ವಿತಮ್ ।
ನೇಹ ವಿಶ್ವಸಿತುಂ ಶಕ್ಯಂ ಭವತಾಪಿ ಕುತೋ ಮಯಾ ॥೪೨॥

ನಿನ್ನ ರಾಜ್ಯವು ಅತಿಗಹನವಾಗಿದೆ. ಅಜ್ಞಾನದಿಂದ ಆವೃತವಾಗಿ ದುಃಖದಿಂದ ಪರಿಪೂರ್ಣವಾಗಿದೆ. ಈ ನಿನ್ನ ರಾಜ್ಯದಲ್ಲಿನ ಅಧಿಕಾರಿಗಳ ವಿಷಯವಾಗಿ ನೀನೇ ವಿಶ್ವಾಸವಿಡಲು ಸಾಧ್ಯವಿಲ್ಲ. ಇನ್ನು ನನ್ನ ವಿಷಯವಾಗಿ ಹೇಳುವುದೇನಿದೆ? (ನಿನ್ನನ್ನೇ ವಿನಾಶಗೊಳಿಸಲು ಅಧಿಕಾರಿಗಳು ಸಂಚು ಮಾಡುತ್ತಿರುವಾಗ ನನ್ನನ್ನು ಇಲ್ಲಿ ಉಳಿಸುವರೇ?)

ಅತೋ ನಾಯಂ ಶುಭೋ ವಾಸಸ್ತುಲ್ಯೇ ಸದಸತೀ ಇಹ ।
ವಧೋ ಹ್ಯೇವಾತ್ರ ಸುಕೃತೇ ದುಷ್ಕೃತೇ ನ ಚ ಸಂಶಯಃ ॥೪೩॥

ಆದುದರಿಂದ ಈ ದೇಶದಲ್ಲಿ ವಾಸಮಾಡುವುದರಿಂದ ಯಾರಿಗೂ

ಕಲ್ಯಾಣವುಂಟಾಗುವುದಿಲ್ಲ. ಏಕೆಂದರೆ : ಇಲ್ಲಿ ಕೆಟ್ಟುದಕ್ಕೂ ಮತ್ತು ಒಳ್ಳೆಯದಕ್ಕೂ ಒಂದೇ ಸ್ಥಾನವಿದೆ. ಇಲ್ಲಿ ಸತ್ಕಾರ್ಯವನ್ನು ಮಾಡಿದವರೂ ಕೊಲೆಗೆ ಈಡಾಗುತ್ತಾರೆ : ದುಷ್ಕಾರ್ಯವನ್ನು ಮಾಡಿದವರೂ ಸಾಯುತ್ತಾರೆ. ಇದರಲ್ಲಿ ಸಂದೇಹವೇ ಇಲ್ಲ.

ನ್ಯಾಯತೋ ದುಷ್ಕೃತೇ ಘಾತಃ ಸುಕೃತೇ ನ ಕಥಂಚನ ।
ನೇಹ ಯುಕ್ತಂ ಸ್ಥಿರಂ ಸ್ಥಾತುಂ ಜವೇನೈವಾವ್ರಜೇದ್ಬುಧಃ ॥೪೪॥

ನ್ಯಾಯವಾಗಿ ನೋಡಿದರೆ ದುಷ್ಕಾರ್ಯಮಾಡಿದವನಿಗೆ ಶಿಕ್ಷೆಯಾಗಲೇ ಬೇಕು. ಸತ್ಕಾರ್ಯಮಾಡಿದವನಿಗೆ ಯಾವುದೇ ಕಾರಣದಿಂದಲೂ ಶಿಕ್ಷೆಯಾಗಬಾರದು. ಸತ್ಪುರುಷನ ರಕ್ಷಣೆಯಾಗಬೇಕು. ಆದರೆ ಇಲ್ಲಿ ಹಾಗೆ ನಡೆಯುತ್ತಿಲ್ಲ. ಸತ್ಪುರುಷರೂ-ದುಷ್ಟರೂ ಏಕಮುಖವಾದ ಶಿಕ್ಷೆಯನ್ನು ಅನುಭವಿಸಬೇಕಾಗಿದೆ. ಆದುದರಿಂದ ಇಂತಹ ದೇಶದಲ್ಲಿ ಶಾಶ್ವತವಾಗಿ ನೆಲೆಸುವುದು ಖಂಡಿತವಾಗಿಯೂ ಯುಕ್ತವಲ್ಲ. ವಿದ್ಯಾವಂತನಾದವನು ಅತಿಶೀಘ್ರದಲ್ಲಿಯೇ ಈ ದೇಶವನ್ನು ಬಿಟ್ಟುಹೋಗಬೇಕು.

ಸೀತಾ ನಾಮ ನದೀ ರಾಜನ್ಪ್ಲವೋ ಯಸ್ಯಾಂ ನಿಮಜ್ಜತಿ ।
ತಥೋಪಮಾಮಿಮಾಂ ಮನ್ಯೇ ವಾಗುರಾಂ ಸರ್ವಘಾತಿನೀಮ್ ॥೪೫॥

ಮಹಾರಾಜ! 'ಸೀತಾ' ಎಂಬ ಸುಪ್ರಸಿದ್ಧವಾದ ನದಿಯೊಂದಿದೆ. ಆ ನದಿಯಲ್ಲಿ ನಾವೆಗಳೆಲ್ಲವೂ ಮುಳುಗಿಹೋಗುತ್ತವೆ. ಆ ಉಪಮೆಯೇ ನಿನ್ನ ಈ ರಾಜ್ಯಕ್ಕೂ ಹೊಂದಿಕೊಳ್ಳುತ್ತದೆ. ರಾಜನನ್ನು ಆಪತ್ತಿನಿಂದ ಪಾರುಮಾಡಬೇಕೆಂಬ ಆಶಯವುಳ್ಳ ನಮ್ಮಂತಹವರೂ ಈ ರಾಜ್ಯದಲ್ಲಿ ವಿನಾಶ ಹೊಂದುತ್ತಾರೆ. ನಿನ್ನ ರಾಜ್ಯವು, ಎಲ್ಲ ಪ್ರಾಣಿಗಳಿಗೂ ಘಾತವನ್ನುಂಟುಮಾಡುವ ದೊಡ್ಡ ಬಲೆಯಂತೆ ಇರುವುದೆಂದೇ ನಾನು ಭಾವಿಸುತ್ತೇನೆ.

ಮಧುಪ್ರಪಾತೋ ಹಿ ಭವಾನ್ಭೋಜನಂ ವಿಷಸಂಯುತಮ್ ।
ಅಸತಾಮಿವ ತೇ ಭಾವೋ ವರ್ತತೇ ನ ಸತಾಮಿವ ॥೪೬॥

ನೀನು ಪ್ರಪಾತದಲ್ಲಿ ಕಟ್ಟಿರುವ ಜೇನುಗೂಡಿನಂತಿರುವೆ. ರಾಜನ ಅನುಗ್ರಹವು ಲಭ್ಯವಾಗುವುದೆಂಬ ಆಸೆಯಿಂದ ನಿನ್ನ ಬಳಿಗೆ ಬಂದವರೆಲ್ಲರೂ

ಪ್ರಪಾತದಲ್ಲಿರುವ ಜೇನುತುಪ್ಪದ ಆಸೆಗಾಗಿ ಹೋಗಿ ಕೆಳಗೆ ಬಿದ್ದು ಸಾಯುವ ಮನುಷ್ಯರಂತೆ ವಿನಾಶಹೊಂದುತ್ತಾರೆ. ನೀನು ವಿಷಯುಕ್ತವಾದ ಭೋಜನಕ್ಕೆ ಸಮಾನನಾಗಿರುವೆ. ನಿನ್ನ ಸ್ವಭಾವವು ದುರ್ಜನರ ಸ್ವಭಾವಕ್ಕೆ ಸಮಾನವಾಗಿದೆ. ಸಜ್ಜನರ ಸ್ವಭಾವಕ್ಕೆ ಅನುಗುಣವಾಗಿಲ್ಲ.

ಆಶೀವಿಷೈಃ ಪರಿವೃತಃ ಕೂಪಸ್ತ್ವಮಸಿ ಪಾರ್ಥಿವ ।
ದುರ್ಗತೀರ್ಥಾ ಬೃಹತ್ಕೂಲಾ ಕಾರೀರಾ ವೇತ್ರಸಂಯುತಾ ।
ನದೀ ಮಧುರಪಾನೀಯಾ ಯಥಾ ರಾಜಂಸ್ತಥಾ ಭವಾನ್ ॥೪೭॥

ಮಹಾರಾಜ! ನೀನು ವಿಷಸರ್ಪಗಳಿಂದ ಸಮಾವೃತವಾಗಿರುವ ಬಾವಿಯಂತಿರುವೆ. ಬಹಳ ಕಷ್ಟದಿಂದಲೂ ಹೊಂದಲು ಸಾಧ್ಯವಾಗದ, ಎತ್ತರವಾದ ತೀರಪ್ರದೇಶಗಳಿಂದ ಕೂಡಿರುವ, ಜಲ್ಲೆಗಳಿಂದ ಕೂಡಿದ ಬೆತ್ತಗಳಿಂದ ಆಚ್ಛಾದಿತವಾಗಿರುವ, ರುಚಿಕರವಾದ ನೀರಿನಿಂದ ಕೂಡಿರುವ ನದಿಯಂತಿರುವೆ. (ನದಿಯ ನೀರು ಸುಮಧುರವಾಗಿದೆ. ಆದರೆ ನದಿಗಿಳಿದು ನೀರುಕುಡಿಯುವ ಸಾಧ್ಯತೆಯಿಲ್ಲ.)

ಶ್ವಗೃಧ್ರಗೋಮಾಯುಯುತೋ ರಾಜಹಂಸಸಮೋ ಹ್ಯಸಿ ।
ಯಥಾಶ್ರಿತ್ಯ ಮಹಾವೃಕ್ಷಂ ಕಕ್ಷಃ ಸಂವರ್ಧತೇ ಮಹಾನ್ ॥೪೮॥

ತತಸ್ತಂ ಸಂವೃಣೋತ್ಯೇವತಮತೀತ್ಯ ಚ ವರ್ಧತೇ ।
ತೇನೈವೋಗ್ರೇನ್ಧನೇನೈನಂ ದಾವೋ ದಹತಿ ದಾರುಣಃ ।
ತಥೋಪಮಾ ಹ್ಯಮಾತ್ಯಾಸ್ತೇ ರಾಜಂಸ್ತಾನ್ಪರಿಶೋಧಯ ॥೪೯॥

ಮಹಾರಾಜ! ರಾಜಹಂಸವು ನಾಯಿಗಳಿಂದಲೂ, ಹದ್ದುಗಳಿಂದಲೂ, ಗುಳ್ಳೇನರಿಗಳಿಂದಲೂ ಪರಿವೃತವಾಗಿರುವಂತೆ–ನೀನು ದುಷ್ಟರಾದ ಕರ್ಮ ಚಾರಿಗಳಿಂದಲೇ ಪರಿವೃತನಾಗಿರುವೆ. ಮಹಾವೃಕ್ಷದ ಪಕ್ಕದಲ್ಲಿ ಹುಟ್ಟಿದ ಪೊದರೊಂದು ಆ ವೃಕ್ಷವನ್ನೇ ಆಶ್ರಯಿಸಿ ಬೆಳೆಯುತ್ತದೆ. ಸ್ವಲ್ಪ ಕಾಲ ದಲ್ಲಿಯೇ ಆ ಪೊದರು ದೊಡ್ಡದಾಗಿ ಬೆಳೆಯುತ್ತದೆ. ಮತ್ತೆ ಕೆಲವು ದಿವಸ ಗಳಲ್ಲಿಯೇ ಮಹಾವೃಕ್ಷವನ್ನೇ ಸಂಪೂರ್ಣವಾಗಿ ಆವರಿಸಿಬಿಡುತ್ತದೆ. ವೃಕ್ಷ ವನ್ನೇ ಸಂಪೂರ್ಣವಾಗಿ ಮುಚ್ಚಿ ಅದಕ್ಕೂ ಮೇಲೆ ಬೆಳೆಯುತ್ತದೆ. ಹೀಗೆ ಬೆಳೆದನಂತರ ಆ ಪೊದರು ಒಣಗಿಹೋಗುತ್ತದೆ. ದಾರುಣವಾದ ದಾವಾ

ಗ್ನಿಯು ಒಣಗಿದ ಪೊದರಿಗೆ ಹೊತ್ತಿಕೊಂಡು ಕ್ಷಣಮಾತ್ರದಲ್ಲಿ ಪೊದರಿನ ಸಹಿತವಾಗಿ ಪೊದರಿಗೆ ಆಶ್ರಯವನ್ನಿತ್ತ ಮಹಾವೃಕ್ಷವನ್ನೇ ಸುಟ್ಟುಹಾಕುತ್ತದೆ. ಇದರ ಉಪಮೆಯು ನಿನಗೂ ಅನ್ವಯಿಸುತ್ತದೆ. ನಿನ್ನ ಆಶ್ರಯದಲ್ಲಿಯೇ ನಿನ್ನ ದುಷ್ಟರಾದ ಅಮಾತ್ಯರು ಬೆಳೆಯುತ್ತಿದ್ದಾರೆ. ಅನುಕ್ರಮವಾಗಿ ಅವರು ನಿನ್ನ ಬೊಕ್ಕಸವನ್ನೇ ಲೂಟಿಹೊಡೆದು ನಿನಗಿಂತಲೂ ಪ್ರಬಲರಾಗುತ್ತಿದ್ದಾರೆ. ದಾವಾನಲರೂಪವಾದ ಅವರ ಅರ್ಥದಾಹ ಮತ್ತು ಅಧಿಕಾರದಾಹಗಳು ಅವರನ್ನೂ ವಿನಾಶಗೊಳಿಸುತ್ತದೆ. ಜೊತೆಯಲ್ಲಿಯೇ ನಿನ್ನನ್ನೂ ವಿನಾಶಗೊಳಿಸುತ್ತದೆ. ಆದುದರಿಂದ ನಿನ್ನ ವಿಷಯದಲ್ಲಿ ಯಾವ ಅಧಿಕಾರಿಗಳು ಹೇಗೆ ನಡೆದುಕೊಳ್ಳುತ್ತಿರುವರೆಂಬುದನ್ನು ಕೂಡಲೇ ಪರಿಶೋಧಿಸು.

ತ್ವಯಾ ಚೈವ ಕೃತಾ ರಾಜನ್ಭವತಾ ಪರಿಪಾಲಿತಾಃ ।
ಭವನ್ತಮಭಿಸಂಧಾಯ ಜಿಘಾಂಸನ್ತಿ ಭವತ್ಪ್ರಿಯಮ್ ॥೫೧॥

ಮಹಾರಾಜ! ನೀನೇ ಅವರನ್ನು ರಾಜ್ಯದ ಅಧಿಕಾರಿಗಳನ್ನಾಗಿ ನಿಯಮಿಸಿರುವೆ. ನೀನೇ ಅವರಿಗೆ ಯಥೋಚಿತವಾದ ವೇತನಾದಿಗಳನ್ನಿತ್ತು ಪರಿಪಾಲಿಸುತ್ತಿರುವೆ. ಆದರೆ ಅಂತಹವರೇ ಇಂದು ನಿನ್ನ ವಿಷಯದಲ್ಲಿ ಕಪಟ ಭಾವವನ್ನಿಟ್ಟುಕೊಂಡು ನಿನಗೆ ಪ್ರಿಯವಾಗುವುದೆಲ್ಲವನ್ನೂ ವಿನಾಶಗೊಳಿಸುತ್ತಿದ್ದಾರೆ.

ಉಷಿತಂ ಶಙ್ಕಮಾನೇನ ಪ್ರಮಾದಂ ಪರಿರಕ್ಷತಾ ।
ಅನ್ತಃಸರ್ಪ ಇವಾಗಾರೇ ವೀರಪತ್ನ್ಯಾ ಇವಾಲಯೇ ।
ಶೀಲಂ ಜಿಜ್ಞಾಸಮಾನೇನ ರಾಜ್ಞಶ್ಚ ಸಹಜೀವಿನಃ ॥೫೨॥

ನಾನು ರಾಜನ ಸಮೀಪದಲ್ಲಿರುವ ರಾಜನ ಕರ್ಮಚಾರಿಗಳ ಶೀಲ-ಸ್ವಭಾವಗಳನ್ನು ತಿಳಿದುಕೊಳ್ಳಲು ಇಚ್ಛಿಸಿದೆನು. ಅವರ ಮೇಲೆ ಸಂಶಯವನ್ನು ಹೊಂದಿ ತಪ್ಪಿ ನಡೆಯದಂತೆ ಎಚ್ಚರವಾಗಿದ್ದುಕೊಂಡು–ಸರ್ಪವಿರುವ ಮನೆಯಲ್ಲಿರುವವನಂತೆ ಅಥವಾ ವೀರಪತ್ನಿಯ ಮನೆಯಲ್ಲಿರುವವನಂತೆ ಭೀತ-ಭೀತನಾಗಿಯೇ ನಾನಿಲ್ಲಿ ವಾಸಮಾಡಿಕೊಂಡಿರುತ್ತೇನೆ.

ಕಚ್ಚಿಜ್ಜಿತೇನ್ದ್ರಿಯೋ ರಾಜಾ ಕಚ್ಚಿದಸ್ಯಾನ್ತರಾಜಿತಾಃ ।

ಕಚ್ಚಿದೇಷಾಂ ಪ್ರಿಯೋ ರಾಜಾ ಕಚ್ಚಿದ್ರಾಜ್ಞಃ ಪ್ರಿಯಾಃ ಪ್ರಜಾಃ ।
ವಿಜಿಜ್ಞಾಸುರಿಹ ಪ್ರಾಪ್ತಸ್ತವಾಹಂ ರಾಜಸತ್ತಮ ॥೫೪॥

ಈ ದೇಶದಲ್ಲಿ ರಾಜನು ಜಿತೇಂದ್ರಿಯನಾಗಿರುವನೇ? ಇವನ ಬಳಿಯಲ್ಲಿರುವ ರಾಜಸೇವಕರು ಇವನಿಗೆ ಅಧೀನರಾಗಿರುವರೇ? ಇಲ್ಲಿರುವ ಪ್ರಜೆಗಳಿಗೆ ರಾಜನ ಮೇಲೆ ಪ್ರೀತಿಯಿರುವುದೇ? ರಾಜನಾದರೂ ಪ್ರಜೆಗಳನ್ನು ಮಕ್ಕಳಂತೆ ಪ್ರೀತಿಸುತ್ತಿರುವನೇ?–ಈ ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳುವ ಸಲುವಾಗಿಯೇ ನಾನು ನಿನ್ನ ಬಳಿಗೆ ಬಂದೆನು.

ತಸ್ಯ ಮೇ ರೋಚತೇ ರಾಜನ್ಕ್ಷುಧಿತಸ್ಯೇವ ಭೋಜನಮ್ ।
ಅಮಾತ್ಯಾ ಮೇ ನ ರೋಚನ್ತೇ ವಿತೃಷ್ಣಸ್ಯ ಯಥೋದಕಮ್ ॥೫೫॥

ಹಸಿವಿನಿಂದ ಕೂಡಿರುವವನಿಗೆ ಭೋಜನವು ರುಚಿಸುವಂತೆ–ನಿನ್ನ ದರ್ಶನವು ನನಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ. ಆದರೆ ಬಾಯಾರಿಕೆಯಿಲ್ಲದವನಿಗೆ ನೀರು ರುಚಿಸದಂತೆ–ನಿನ್ನ ಮಂತ್ರಿಗಳ ಶೀಲ ಸ್ವಭಾವಗಳು ನನಗೆ ತೃಪ್ತಿಯನ್ನುಂಟುಮಾಡಿಲ್ಲ.

ಭವತೋಽರ್ಥಕೃದಿತ್ಯೇವಂ ಮಯಿ ದೋಷೋ ಹಿ ತೈಃ ಕೃತಃ ।
ವಿದ್ಯತೇ ಕಾರಣಂ ನಾನ್ಯದಿತಿ ಮೇ ನಾತ್ರ ಸಂಶಯಃ ॥೫೬॥

ನಾನು ನಿನಗೆ ಹಿತಚಿಂತಕನಾಗಿರುವೆನೆಂಬ ಕಾರಣದಿಂದಲೇ ನಿನ್ನ ಮಂತ್ರಿಗಳು ನನ್ನಲ್ಲಿ ದೋಷವೆಣಿಸಿದ್ದಾರೆ. ಇದರ ಹೊರತಾಗಿ ನನ್ನನ್ನು ದ್ವೇಷಿಸಲು ಅಥವಾ ನನ್ನ ಕಾಗೆಯನ್ನು ಕೊಲ್ಲಲು ಅವರಿಗೆ ಬೇರೆ ಯಾವ ಕಾರಣವೂ ಇರುವುದಿಲ್ಲ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ನ ಹಿ ತೇಷಾಮಹಂ ದ್ರುಗ್ಧಸ್ತತ್ತೇಷಾಂ ದೋಷದರ್ಶನಮ್ ।
ಅರೇರ್ಹಿ ದುರ್ಹೃದಾದ್ಭೇಯಂ ಭಗ್ನಪುಚ್ಛಾದಿವೋರಗಾತ್ ॥೫೭॥

ಅವರ ವಿಷಯದಲ್ಲಿ ನಾನು ದ್ರೋಹವನ್ನೆಸಗದಿದ್ದರೂ ಅವರಿಗೆ ನನ್ನ ವಿಷಯದಲ್ಲಿ ದೋಷದೃಷ್ಟಿಯೇ ಇದೆ. ಬಾಲವನ್ನು ಕಳೆದುಕೊಂಡು ಅತ್ಯಂತರುಷ್ಟವಾಗಿರುವ ಹಾವಿಗೆ ಭಯಪಡುವಂತೆ–ಕೆಟ್ಟ ಮನಸ್ಸುಳ್ಳ ಶತ್ರುವಿನ ವಿಷಯದಲ್ಲಿ ಭಯಪಡಬೇಕು.”

ರಾಜನು ಹೇಳುತ್ತಾನೆ :

ಭೂಯಸಾ ಪರಿಹಾರೇಣ ಸತ್ಕಾರೇಣ ಚ ಭೂಯಸಾ ।
ಪೂಜಿತೋ ಬ್ರಾಹ್ಮಣಶ್ರೇಷ್ಠ ಭೂಯೋ ವಸ ಗೃಹೇ ಮಮ ॥೫೮॥

"ಬ್ರಾಹ್ಮಣಶ್ರೇಷ್ಠನೇ! ನೀನು ಭಯಪಡುವ ಕಾರಣವಿಲ್ಲ. ನಿನಗೆ ವಿಶೇಷವಾದ ರಕ್ಷಣೆಯನ್ನು ಕೊಟ್ಟು ನಿನಗೊದಗಿರುವ ಅಪಾಯವನ್ನು ಪರಿಹಾರಮಾಡುತ್ತೇನೆ. ನಿನ್ನ ಮಾರ್ಗದರ್ಶನಕ್ಕಾಗಿ ಮತ್ತು ಹಿತಚಿಂತನೆಗಾಗಿ ನಿನ್ನನ್ನು ಬಹಳವಾಗಿ ಸತ್ಕರಿಸುತ್ತೇನೆ. ನನ್ನಿಂದ ಸತ್ಕೃತನಾದ ನೀನು ಬಹಳ ಕಾಲದವರೆಗೂ ನನ್ನ ಅರಮನೆಯಲ್ಲಿಯೇ ಇರು.

ಯೇ ತ್ವಾಂ ಬ್ರಾಹ್ಮಣ ನೇಚ್ಛಂತಿ ತೇ ನ ವತ್ಸ್ಯಂತಿ ಮೇ ಗೃಹೇ ।
ಭವತೈವ ಹಿ ತಜ್ಜ್ಞೇಯಂ ಯತ್ತದೇಷಾಮನನ್ತರಮ್ ॥೫೯॥

ಬ್ರಾಹ್ಮಣ! ನೀನು ನನ್ನ ಮನೆಯಲ್ಲಿರುವುದನ್ನು ಯಾರು ಇಚ್ಛಿಸುವುದಿಲ್ಲವೋ–ಅಂತಹವರು ಇನ್ನು ಮುಂದೆ ನನ್ನ ಮನೆಯಲ್ಲಿಯೇ ಇರಲಾರರು. ಆ ದ್ರೋಹಿಗಳನ್ನು ದಮನಮಾಡಲು ಮಾಡಬೇಕಾದ ಯಾವ ಕರ್ತವ್ಯವಿರುವುದೋ–ಅದನ್ನೂ ನೀನೇ ಯೋಚಿಸಿ ಹೇಳಬೇಕು.

ಯಥಾ ಸ್ಯಾತ್ಸುಧೃತೋ ದಣ್ಡೋ ಯಥಾ ಚ ಸುಕೃತಂ ಕೃತಮ್ ।
ತಥಾ ಸಮೀಕ್ಷ್ಯ ಭಗವಞ್ಛ್ರೇಯಸೇ ವಿನಿಯುಂಕ್ಷ್ವ ಮಾಮ್ ॥೬೦॥

ಭಗವನ್! ನನ್ನಿಂದ ದಂಡವು ಹೇಗೆ ಸರಿಯಾದ ರೀತಿಯಲ್ಲಿ ಪ್ರಯೋಗಿಸಲ್ಪಡಬೇಕೋ ಮತ್ತು ನನ್ನಿಂದ ಒಳ್ಳೆಯ ಕಾರ್ಯಗಳು ಹೇಗೆ ಮಾಡಲ್ಪಡಬೇಕೋ–ಹೇಗೆ ಮಾಡಿದರೆ ಒಳ್ಳೆಯದಾಗುವುದೋ ಹಾಗೆ ಚೆನ್ನಾಗಿ ಆಲೋಚಿಸಿ ಶ್ರೇಯಃಸಾಧಕವಾದ ಕಾರ್ಯವನ್ನು ಮಾಡುವುದಕ್ಕೆ ನನ್ನನ್ನು ಯೋಜಿಸು. (ದಂಡವನ್ನು ನೀತಿಯುಕ್ತವಾಗಿ ಹೇಗೆ ಪ್ರಯೋಗಿಸಬೇಕೆಂಬುದನ್ನೂ ಮತ್ತು ಸತ್ಕಾರ್ಯಗಳನ್ನು ಹೇಗೆ ಮಾಡಬೇಕೆಂಬುದನ್ನೂ ನನಗೆ ತಿಳಿಯಪಡಿಸು.)

ಮಹಾಮುನಿಯೇ! ನೀನು ಈ ಎಲ್ಲ ವಿಷಯಗಳನ್ನೂ ಚೆನ್ನಾಗಿ ಯೋಚಿಸಿ ಶ್ರೇಯಸ್ಸಿನ ಮಾರ್ಗದಲ್ಲಿ ನನ್ನನ್ನು ವಿನಿಯೋಜಿಸು."

ಮುನಿಯು ಹೇಳುತ್ತಾನೆ :

ಅದರ್ಶಯನ್ನಿಮಂ ದೋಷಮೇಕೈಕಂ ದುರ್ಬಲೀ ಕುರು ।
ತತಃ ಕಾರಣಮಾಜ್ಞಾಯ ಪುರುಷಂ ಪುರುಷಂ ಜಹಿ ॥೬೧॥

"ಮಹಾರಾಜ! ನನ್ನ ಕಾಗೆಯನ್ನು ಕೊಂದಿರುವ ಈ ದೋಷವನ್ನು ನೀನು ಹೊರಗೆಡಹಲೇ ಬೇಡ. ಭ್ರಷ್ಟ ಅಧಿಕಾರಿಗಳನ್ನು ಅವರವರ ಸ್ಥಾನಗಳಿಂದ ಪದಚ್ಯುತಿಗೊಳಿಸಿ ದುರ್ಬಲರನ್ನಾಗಿ ಮಾಡು. (ಅವರೆಲ್ಲರೂ ಅಧಿಕಾರವಿರುವವರೆಗೂ ಬಲಿಷ್ಠರಾಗಿರುತ್ತಾರೆ. ಆದರೆ ಅಧಿಕಾರವನ್ನು ಕಳೆದುಕೊಂಡನಂತರ ಅವರು ಅತ್ಯಂತ ದುರ್ಬಲರಾಗುವರು.) ಅನಂತರ ಅವರನ್ನು ವಿಚಾರಣೆಗೊಳಪಡಿಸಿ ಅವರ ಅಪರಾಧಕ್ಕೆ ಕಾರಣವನ್ನು ಅವರಿಂದಲೇ ತಿಳಿದುಕೊಂಡು ಆ ಮಹಾಪರಾಧಕ್ಕಾಗಿ ಒಬ್ಬೊಬ್ಬ ಮನುಷ್ಯ ನನ್ನೂ ಶಿಕ್ಷಿಸು.

ಏಕದೋಷಾ ಹಿ ಬಹವೋ ಮೃದ್ನೀಯುರಪಿ ಕಣ್ಟಕಾನ್ ।
ಮನ್ತ್ರಭೇದಭಯಾದ್ರಾಜಂಸ್ತಸ್ಮಾದೇತದ್ಬ್ರವೀಮಿ ತೇ ॥೬೨॥

ನರೇಶ್ವರ! ಒಂದೇ ದೋಷದಿಂದ ಕೂಡಿರುವ ಅನೇಕರು ಒಟ್ಟಾಗಿ ಸೇರಿ ಮುಳ್ಳುಗಳ ರಾಶಿಯನ್ನೇ ಪುಡಿ-ಪುಡಿ ಮಾಡಿಬಿಟ್ಟಾರು. ತಮಗೊದಗುವ ಕಂಟಕಗಳೆಲ್ಲವನ್ನೂ (ಪ್ರತಿಬಂಧಕಗಳೆಲ್ಲವನ್ನೂ) ಪರಿಹರಿಸಿಕೊಂಡು ಬಿಡುವರು. ನೀನು ಹಿಂದೆ-ಮುಂದೆ ನೋಡದೇ ಎಲ್ಲರನ್ನೂ ಅಪರಾಧಿ ಗಳೆಂದು ಘೋಷಿಸಿದಲ್ಲಿ ಅವರೆಲ್ಲರೂ ಒಟ್ಟಾಗಿ ಸೇರಿ ನಿನ್ನನ್ನೇ ಧ್ವಂಸಮಾಡಿ ಬಿಡಬಹುದು. ಆದುದರಿಂದ ಒಬ್ಬಬ್ಬರನ್ನೂ ಅಧಿಕಾರದಿಂದ ಕೆಳಗಿಳಿಸಿ ಅನಂತರವೇ ಒಬ್ಬೊಬ್ಬರಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಮರಣದಂಡನೆಯನ್ನು ವಿಧಿಸಬೇಕು. ನಮ್ಮ ಮಂತ್ರಾಲೋಚನೆಯು ಭಗ್ನವಾಗಿಬಿಡಬಹುದೆಂಬ ಭಯದಿಂದಲೇ ನಾನು ನಿನಗೆ ಈ ಮಾತನ್ನು ಹೇಳುತ್ತಿದ್ದೇನೆ.

ವಯಂ ತು ಬ್ರಾಹ್ಮಣಾ ನಾಮ ಮೃದುದಣ್ಡಾಃ ಕೃಪಾಲವಃ ।
ಸ್ವಸ್ತಿ ಚೇಚ್ಛಾಮ ಭವತಃ ಪರೇಷಾಂ ಚ ಯಥಾತ್ಮನಃ ॥೬೩॥

ನಾವು ಬ್ರಾಹ್ಮಣರಾಗಿರುವುದು ಸರಿಯಷ್ಟೆ. ಆದುದರಿಂದ ನಾವು ಮೃದುತ್ವವನ್ನೇ ನಮ್ಮ ದಂಡರೂಪದಲ್ಲಿಟ್ಟುಕೊಂಡಿದ್ದೇವೆ. (ಮೃದುತ್ವವೇ ನಮ್ಮ ಮುಖ್ಯವಾದ ದಂಡವಾಗಿರುತ್ತದೆ.) ಕೃಪಾಳುಗಳು ನಾವು. ಈ ಕಾರಣದಿಂದಲೇ ನಾವು ನಮಗೆ ಶುಭವನ್ನು ಕೋರಿಕೊಳ್ಳುವಂತೆ ನಿನಗೂ ಮಂಗಳವನ್ನು ಕೋರುತ್ತೇವೆ. ಇತರರಿಗೂ ಶುಭವನ್ನೇ ಕೋರುತ್ತೇವೆ.

ರಾಜನ್ನಾತ್ಮಾನಮಾಚಕ್ಷೇ ಸಮ್ಬನ್ಧೀ ಭವತೋ ಹ್ಯಹಮ್ ।
ಮುನಿಃ ಕಾಲಕವೃಕ್ಷೀಯ ಇತ್ಯೇವಮಭಿಸಂಜ್ಞಿತಃ ॥೬೪॥

ಮಹಾರಾಜ! ನಾನಾರೆಂಬುದನ್ನು ಈಗ ಹೇಳಿಕೊಳ್ಳುತ್ತೇನೆ. ಕಾಲಕ ವೃಕ್ಷೀಯಮುನಿ–ಎಂಬ ಹೆಸರಿನ ನಾನು ನಿನ್ನ ಸಂಬಂಧಿಯೂ ಆಗಿದ್ದೇನೆ. ನಾನು ನಿನ್ನ ತಂದೆಗೆ ಪರಮಾದರಣೀಯನಾದ, ಸತ್ಯನಿಷ್ಠನಾದ ಸ್ನೇಹಿತ ನಾಗಿದ್ದೆನು. ನಿನ್ನ ತಂದೆಯು ಸ್ವರ್ಗತನಾದನಂತರ ನಿನ್ನ ರಾಜ್ಯಕ್ಕೆ ದೊಡ್ಡದಾದ ಆಪತ್ತು ಒದಗಿಬಂದಿತು. ಆ ಸಮಯದಲ್ಲಿ ನಾನು ನನ್ನೆಲ್ಲ ಕಾಮನೆಗಳನ್ನೂ ಪರಿತ್ಯಜಿಸಿ ನಿನ್ನ ಹಿತಾರ್ಥವಾಗಿಯೇ ತಪಸ್ಸುಮಾಡಲು ಹೊರಟು ಹೋದೆನು. ನಿನ್ನ ಮೇಲಿನ ಸ್ನೇಹದ ಕಾರಣದಿಂದಾಗಿ ನಾನು ತಪಸ್ಸಿನಿಂದ ವಿರತನಾಗಿ ಪುನಃ ನಿನ್ನ ಬಳಿಗೆ ಬಂದಿರುತ್ತೇನೆ. ನೀನು ಪುನಃ ವಿಪತ್ತಿನಲ್ಲಿ ಬೀಳಕೂಡದೆಂಬ ಆಶಯದಿಂದಲೇ ನಿನಗೆ ಈ ಎಲ್ಲ ವಿಷಯಗಳನ್ನೂ ಹೇಳುತ್ತಿದ್ದೇನೆ.

ಉಭೇ ದೃಷ್ಟ್ವಾ ದುಃಖಸುಖೇ ರಾಜ್ಯಂ ಪ್ರಾಪ್ಯ ಯದೃಚ್ಛಯಾ ।
ರಾಜ್ಯೇನಾಮಾತ್ಯಸಂಸ್ಥೇನ ಕಥಂ ರಾಜನ್ಪ್ರಮಾದ್ಯಸಿ ॥೬೫॥

ಮಹಾರಾಜ! ನೀನು ದುಃಖ-ಸುಖಗಳೆರಡನ್ನೂ ಕಂಡಿರುವೆ. ದೈವಯೋಗದಿಂದಲೇ ಈ ರಾಜ್ಯವು ನಿನಗೆ ಪ್ರಾಪ್ತವಾಗಿದೆ. ಹೀಗಿದ್ದರೂ ನೀನು ಮಂತ್ರಿಗಳ ಮೇಲೆ ರಾಜ್ಯದ ಹೊರೆಯನ್ನು ವಹಿಸಿ (ಅವರಿಗೆ ಎಲ್ಲ ಅಧಿಕಾರ ಗಳನ್ನೂ ಬಿಟ್ಟುಕೊಟ್ಟು) ಇಂತಹ ಪ್ರಮಾದವನ್ನೇಕೆ ಮಾಡುತ್ತಿರುವೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕಾಲಕವೃಕ್ಷೀಯನ ಮಾತುಗಳನ್ನು ಕೇಳಿದನಂತರ

ಕ್ಷೇಮದರ್ಶಿಯು ಮುನಿಯನ್ನೇ ತನ್ನ ಪುರೋಹಿತನನ್ನಾಗಿ ಮಾಡಿಕೊಂಡನು. ಕಾಲಕವೃಕ್ಷೀಯಮುನಿಯು ರಾಜನಿಗೆ ಪುರೋಹಿತನಾದನಂತರ ಪುನಃ ರಾಜಕುಲದಲ್ಲಿ ಬಹಳವಾದ ಸಂತೋಷವು ಪ್ರಾದುರ್ಭವಿಸಿತು. ಕಾಲಕವೃಕ್ಷೀಯಮುನಿಯು ತನ್ನ ಬುದ್ಧಿಕೌಶಲದಿಂದ ಯಶೋವಂತನಾದ ಕ್ಷೇಮದರ್ಶಿಯನ್ನು ಭೂಮಂಡಲಕ್ಕೆ ಏಕಚ್ಛತ್ರಸಮ್ರಾಟನನ್ನಾಗಿ ಮಾಡಿ ಅನೇಕಾನೇಕ ಯಜ್ಞಗಳ ಮೂಲಕವಾಗಿ ದೇವತೆಗಳನ್ನೂ ತೃಪ್ತಿಪಡಿಸಿದನು. ಕೋಸಲರಾಜನೂ ಪುರೋಹಿತನ ಹಿತವಚನಗಳನ್ನು ಕೇಳುತ್ತಾ ಅಖಂಡ ಭೂಮಂಡಲವನ್ನೇ ಜಯಿಸಿದನು. ಅನಂತರವೂ ಪೂಜ್ಯನಾದ ಕಾಲಕ ವೃಕ್ಷೀಯಮುನಿಯು ಹೇಳಿದಂತೆಯೇ ರಾಜನು ನಡೆದುಕೊಳ್ಳುತ್ತಿದ್ದನು.”

ಲ೨ನೆಯ ಅಧ್ಯಾಯವು ಮುಗಿಯಿತು.

ಲ೩ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸಭಾಸದರೇ ಮೊದಲಾದವರ ಲಕ್ಷಣ : ಗುಪ್ತಸಲಹೆಗಳನ್ನು ಪರ್ಯಾಲೋಚಿಸಲು ಅಧಿಕಾರಿಗಳ ಮತ್ತು ಅನಧಿಕಾರಿಗಳ ವಿವರಣೆ : ಗುಪ್ತಾಲೋಚನೆಯ ವಿಧಿ ಮತ್ತು ಸ್ಥಾನಗಳ ನಿರ್ದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸಭಾಸದಃ ಸಹಾಯಾಶ್ಚ ಸುಹೃದಶ್ಚ ವಿಶಾಮ್ಪತೇ ।
ಪರಿಚ್ಛದಾಸ್ತಥಾಮಾತ್ಯಾಃ ಕೀದೃಶಾಃ ಸ್ಯುಃ ಪಿತಾಮಹ ॥೧॥

“ಪಿತಾಮಹನೇ! ರಾಜನ ಸಭಾಸದರೂ, ಸಹಾಯಕರೂ, ಸುಹೃದರೂ, ಪರಿಚ್ಛದರೂ (ಸೇನಾಪತಿಯೇ ಮುಂತಾದವರು), ಅಮಾತ್ಯರೂ–ಎಂತಹವರಾಗಿರಬೇಕು?”

ಭೀಷ್ಮನು ಉತ್ತರಿಸುತ್ತಾನೆ :

ಹ್ರೀನಿಷೇವಾಸ್ತಥಾ ದಾನ್ತಾಃ ಸತ್ಯಾರ್ಜವಸಮನ್ವಿತಾಃ ।
ಶಕ್ತಾಃ ಕಥಯಿತುಂ ಸಮ್ಯಕ್ತೇ ತವ ಸ್ಯುಃ ಸಭಾಸದಃ ॥೨॥

"ಧರ್ಮಜ! ಲಜ್ಜಾಶೀಲರೂ, ಜಿತೇಂದ್ರಿಯರೂ, ಸತ್ಯನಿಷ್ಠರೂ, ಸರಳಸ್ವಭಾವದವರೂ, ವಿಷಯಗಳನ್ನು ಚೆನ್ನಾಗಿ ಪ್ರತಿಪಾದಿಸಿ ಹೇಳಲು ಸಮರ್ಥರೂ–ಆದವರೇ ನಿನ್ನ ಸಭಾಸದರಾಗಿರಬೇಕು.

ಅಮಾತ್ಯಾಂಶ್ಚಾತಿಶೂರಾಂಶ್ಚ ಬ್ರಾಹ್ಮಣಾಂಶ್ಚ ಪರಿಶ್ರುತಾನ್ ।
ಸುಸನ್ತುಷ್ಟಾಂಶ್ಚ ಕೌನ್ತೇಯ ಮಹೋತ್ಸಾಹಾಂಶ್ಚ ಕರ್ಮಸು ।
ಏತಾನ್ಸಹಾಯಾಲ್ಲಿಪ್ಸೇಥಾಃ ಸರ್ವಾಸ್ವಾಪತ್ಸು ಭಾರತ ॥೩॥

ಅಮಾತ್ಯರನ್ನೂ, ಮಹಾಶೂರರನ್ನೂ, ಬಹುಶ್ರುತರಾದ ಬ್ರಾಹ್ಮಣರನ್ನೂ, ನಿತ್ಯಸಂತುಷ್ಟರಾಗಿರುವವರನ್ನೂ, ಕಾರ್ಯಗಳಲ್ಲಿ ಮಹೋತ್ಸಾಹವಿರುವವರನ್ನೂ–ಸಕಲವಿಧವಾದ ಆಪತ್ತುಗಳ ಸಮಯಗಳಲ್ಲಿಯೂ ಸಹಾಯಕರನ್ನಾಗಿ ಅಪೇಕ್ಷಿಸಬೇಕು.

ಕುಲೀನಃ ಪೂಜಿತೋ ನಿತ್ಯಂ ನ ಹಿ ಶಕ್ತಿಂ ನಿಗೂಹತಿ ॥೪॥

ಪ್ರಸನ್ನಮಪ್ರಸನ್ನಂ ವಾ ಪೀಡಿತಂ ಹತಮೇವ ವಾ ।
ಆವರ್ತಯತಿ ಭೂಯಿಷ್ಠಂ ತದೇವ ಹ್ಯನುಪಾಲಿತಮ್ ॥೫॥

ನಿತ್ಯವೂ ಸಮ್ಮಾನಿಸಲ್ಪಡುವ ಸತ್ಕುಲಪ್ರಸೂತನಾದ ಪುರುಷನು ತನ್ನ ಶಕ್ತಿಯನ್ನು ಮರೆಮಾಚುವುದಿಲ್ಲ. ಶಕ್ತಿಮೀರಿ ರಾಜಸೇವೆಯನ್ನು ಮಾಡುತ್ತಾನೆ. ರಾಜನು ಪ್ರಸನ್ನನಾಗಿರಲಿ ; ಅಪ್ರಸನ್ನನಾಗಿರಲಿ ; ಶತ್ರುವಿನಿಂದ ಪೀಡಿತನಾಗಿರಲಿ ; ಆಹತನೇ ಆಗಿರಲಿ–ರಾಜನ ಅನುಸರಣೆಯನ್ನೇ ಮಾಡುತ್ತಿರುತ್ತಾನೆ. ಅಂತಹವನೇ ಸುಹೃದನಾಗಲು ಯೋಗ್ಯನಾಗಿರುತ್ತಾನೆ.

ಕುಲೀನಾ ದೇಶಜಾಃ ಪ್ರಾಜ್ಞಾ ರೂಪವನ್ತೋ ಬಹುಶ್ರುತಾಃ ।
ಪ್ರಗಲ್ಭಾಶ್ಚಾನುರಕ್ತಾಶ್ಚ ತೇ ತವ ಸ್ಯುಃ ಪರಿಚ್ಛದಾಃ ॥೬॥

ನಿನ್ನ ಪರಿಚ್ಛದರು (ಸೇನಾಪತಿಯೇ ಮುಂತಾದವರು) ಸತ್ಕುಲಪ್ರಸೂತರಾಗಿರಬೇಕು. ನಿನ್ನ ದೇಶದಲ್ಲಿಯೇ ಹುಟ್ಟಿದವರಾಗಿರಬೇಕು. ಪ್ರಾಜ್ಞರಾಗಿರಬೇಕು. ರೂಪವಂತರೂ–ಬಹುಶ್ರುತರೂ ಆಗಿರಬೇಕು. ಪ್ರತಿಭೆಯಿಂದ ಕೂಡಿದವರಾಗಿಬೇಕು. ನಿನ್ನಲ್ಲಿ ವಿಶೇಷವಾದ ಅನುರಕ್ತಿಯುಳ್ಳವರೂ ಆಗಿರಬೇಕು.

ದೌಷ್ಕುಲೇಯಾಶ್ಚ ಲುಬ್ಧಾಶ್ಚ ನೃಶಂಸಾ ನಿರಪತ್ರಪಾಃ ।
ತೇ ತ್ವಾಂ ತಾತ ನಿಷೇವೇಯುರ್ಯಾವದಾರ್ದ್ರಕಪಾಣಯಃ ॥೭॥

ದುಷ್ಕುಲಪ್ರಸೂತರೂ, ಲುಬ್ಧರೂ, ಕ್ರೂರಿಗಳೂ, ನಾಚಿಕೆಗೆಟ್ಟವರೂ ಆದ ಸೇವಕರೂ ಕೈಯಿನ (ಊಟಮಾಡಿ ಕೈತೊಳೆದನಂತರ ಕೈಯಿನ) ನೀರು ಒಣಗಿಹೋಗುವವರೆಗೂ, ಕೈ ಒದ್ದೆಯಾಗಿರುವವರೆಗೆ ಮಾತ್ರವೇ ನಿನ್ನನ್ನು ಸೇವಿಸುತ್ತಾರೆ. (ನೀನು ಅವರಿಗೆ ಆಗಾಗ ಬಹುಮಾನಾದಿಗಳನ್ನು ಕೊಡುತ್ತಿರುವವರೆಗೂ ನಿನ್ನ ಸೇವೆಯನ್ನು ಮಾಡುತ್ತಿರುತ್ತಾರೆ. ಕೊಡುವುದನ್ನು ನಿಲ್ಲಿಸಿದೊಡನೆಯೇ ಅವರೂ ಸೇವೆಯನ್ನು ನಿಲ್ಲಿಸಿಬಿಡುತ್ತಾರೆ. 'ಕೊಡುವ ವೇತನಕ್ಕೆ ಸರಿಯಾಗಿ ಕೆಲಸಮಾಡುತ್ತೇನೆ. ಇದಕ್ಕೆ ಕೃತಜ್ಞನಾಗಿರುವುದೇತಕ್ಕೆ? ನನ್ನ ಮತ್ತು ಯಜಮಾನನ ಸಂಬಂಧ ಇಷ್ಟೇ'–ಎಂದು ಮುಂತಾಗಿ ಯೋಚಿಸುವ ಉಪಕಾರಸ್ಮರಣೆಯಿಲ್ಲದ ಇಂತಹವರಿಂದ ಯಾವ ಪ್ರಯೋಜನವೂ ಇಲ್ಲ.)

ಕುಲೀನಾಞ್ಶೀಲಸಮ್ಪನ್ನಾನಿಙ್ಗಿತಜ್ಞಾನನಿಷ್ಠುರಾನ್ ।
ದೇಶಕಾಲವಿಧಾನಜ್ಞಾನ್ಭರ್ತೃಕಾರ್ಯಹಿತೈಷಿಣಃ ।
ನಿತ್ಯಮರ್ಥೇಷು ಸರ್ವೇಷು ರಾಜಾ ಕುರ್ವೀತ ಮನ್ತ್ರಿಣಃ ॥೮॥

ತನ್ನ ಸಕಲವಿಧವಾದ ರಾಜಕಾರ್ಯಗಳ ಸಾಧನೆಗಾಗಿ ರಾಜನಾದವನು ಸತ್ಕುಲಪ್ರಸೂತರಾದವರನ್ನೂ, ಶೀಲವಂತರನ್ನೂ, ಮುಖಾವಲೋಕನ ಮಾತ್ರದಿಂದಲೇ ರಾಜನ ಇಂಗಿತವನ್ನು ತಿಳಿಯುವ ಸಾಮರ್ಥ್ಯವಿರುವವರನ್ನೂ, ನಿಷ್ಠುರರಲ್ಲದವರನ್ನೂ (ದಯಾಳುಗಳನ್ನೂ,) ದೇಶ-ಕಾಲಗಳ ವಿಧಾನಗಳನ್ನು ತಿಳಿದಿರುವವರನ್ನೂ, ಒಡೆಯನಿಗೆ ಅಭೀಷ್ಟವಾದ ಮತ್ತು ಹಿತವಾದ ಕಾರ್ಯಗಳನ್ನು ಮಾಡುವವರನ್ನೂ–ಮಂತ್ರಿಗಳನ್ನಾಗಿ ಮಾಡಿಕೊಳ್ಳಬೇಕು.

ಅರ್ಥಮಾನಾರ್ಘ್ಯಸತ್ಕಾರೈರ್ಭೋಗೈರುಚ್ಚಾವಚೈಃ ಪ್ರಿಯಾನ್ ।
ಯಾನರ್ಥಭಾಜೋ ಮನ್ಯೇಥಾಸ್ತೇ ತೇ ಸ್ಯುಃ ಸುಖಭಾಗಿನಃ ॥೯॥

ನೀನು ಯಾರನ್ನು ನಿನ್ನ ಪ್ರಿಯರನ್ನಾಗಿ ಭಾವಿಸುವೆಯೋ–ಅವರನ್ನು ಧನ-ಸಮ್ಮಾನ-ಅರ್ಘ್ಯ-ಸತ್ಕಾರಗಳಿಂದಲೂ, ನಾನಾವಿಧವಾದ ಭೋಗಗಳ

ಮೂಲಕವಾಗಿಯೂ ಸಂತುಷ್ಟಿಗೊಳಿಸಬೇಕು. ನಿನ್ನ ಪ್ರಿಯಜನರು ಧನ ಮತ್ತು ಸುಖಗಳಲ್ಲಿ ನಿನ್ನೊಡನೆ ಸಹಭಾಗಿಗಳಾಗಬೇಕು.

ಅಭಿನ್ನವೃತ್ತಾ ವಿದ್ವಾಂಸಃ ಸದ್ವೃತ್ತಾಶ್ಚರಿತವ್ರತಾಃ ।
ನ ತ್ವಾಂ ನಿತ್ಯಾರ್ಥಿನೋ ಜಹ್ಯುರಕ್ಷುದ್ರಾಃ ಸತ್ಯವಾದಿನಃ ॥೧೦॥

ಯಾರ ಸದಾಚಾರಗಳು ಭ್ರಷ್ಟವಾಗಿ ಹೋಗಿಲ್ಲವೋ (ಯಾರು ಒಂದೇ ವಿಧವಾದ ನಡತೆಯುಳ್ಳವರೋ), ಯಾರು ವಿದ್ವಾಂಸರೋ, ಸದ್ವೃತ್ತಿಯುಳ್ಳವರೋ, ಉತ್ತಮವಾದ ವ್ರತಗಳನ್ನು ಪರಿಪಾಲನೆ ಮಾಡತಕ್ಕವರೋ, ಅಕ್ಷುದ್ರರೋ, ಸತ್ಯವಾದಿಗಳೋ, ನಿತ್ಯವೂ ನಿನ್ನನ್ನು ತಮ್ಮ ಅವಶ್ಯವಸ್ತುಗಳಿಗಾಗಿ ಪ್ರಾರ್ಥಿಸುತ್ತಿರುವರೋ–ಅಂತಹವರು ನಿನ್ನನ್ನು ಯಾವುದೇ ಕಾರಣದಿಂದಲೂ ಬಿಟ್ಟುಹೋಗುವುದಿಲ್ಲ.

ಅನಾರ್ಯಾ ಯೇ ನ ಜಾನನ್ತಿ ಸಮಯಂ ಮನ್ದಚೇತಸಃ ।
ತೇಭ್ಯಃ ಪರಿಜುಗುಪ್ಸೇಥಾ ಯೇ ಚಾಪಿ ಸಮಯಚ್ಯುತಾಃ ॥೧೧॥

ಯಾರು ಅನಾರ್ಯರೋ, ತಿಳಿವಳಿಕೆಯಿಲ್ಲದವರೋ, ಪ್ರತಿಜ್ಞಾ ಪಾಲನೆಯೆಂಬುದನ್ನೇ ಅರಿಯರೋ, ಮಾಡಿದ ಪ್ರತಿಜ್ಞೆಯಿಂದ ಭ್ರಷ್ಟರಾಗಿರುವರೋ–ಅಂತಹವರಿಂದ ನೀನು ನಿನ್ನನ್ನು ರಕ್ಷಿಸಿಕೊಳ್ಳಬೇಕು. (ಅಂತಹವರ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು.)

ನೈಕಮಿಚ್ಛೇದ್ಗಣಂ ಹಿತ್ವಾ ಸ್ಯಾಚ್ಚೇದನ್ಯತರಗ್ರಹಃ ।
ಯಸ್ತ್ವೇಕೋ ಬಹುಭಿಃ ಶ್ರೇಯಾನ್ಕಾಮಂ ತೇನ ಗಣಂ ತ್ಯಜೇತ್ ॥೧೨॥

ಒಂದು ಪಕ್ಷದಲ್ಲಿ ಒಬ್ಬನೇ ವ್ಯಕ್ತಿಯಿದ್ದು ಮತ್ತೊಂದು ಪಕ್ಷದಲ್ಲಿ ಬಹುಜನರ ಸಮೂಹವೇ ಇದ್ದು ಆ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದಾಗ–ಏಕಾಕಿಯಾದವನನ್ನು ಆರಿಸಿಕೊಳ್ಳಬಾರದು. ಜನರ ಸಮೂಹವನ್ನೇ ಆರಿಸಿಕೊಳ್ಳಬೇಕು. ಆದರೆ ಒಬ್ಬನೇ ಮನುಷ್ಯನು ಇತರ ಹಲವು ಜನರಿಗಿಂತಲೂ ಗುಣ-ಶೀಲ-ಶೌರ್ಯಾದಿಗಳಲ್ಲಿ ವಿಶಿಷ್ಟನಾಗಿರುವುದಾದರೆ–ಅಂತಹ ಸಂದರ್ಭದಲ್ಲಿ ಆ ಒಬ್ಬ ವ್ಯಕ್ತಿಯನ್ನೇ ಆರಿಸಿಕೊಳ್ಳುವುದು ಶ್ರೇಯಸ್ಕರ. ಆಗ ಸಮೂಹವನ್ನೇ ತ್ಯಜಿಸಬೇಕು. (ಮೂರ್ಖರಾದ

ಬಹುಜನರನ್ನಾದರೂ ತೊರೆದು ಬುದ್ಧಿವಂತನಾದ ಒಬ್ಬನನ್ನೇ ಸಂಪಾದಿಸಿಕೊಳ್ಳಬೇಕು.)

ಶ್ರೇಯಸೋ ಲಕ್ಷಣಂ ಚೈತದ್ವಿಕ್ರಮೋ ಯಸ್ಯ ದೃಶ್ಯತೇ ।
ಕೀರ್ತಿಪ್ರಧಾನೋ ಯಶ್ಚ ಸ್ಯಾತ್ಸಮಯೇ ಯಶ್ಚ ತಿಷ್ಠತಿ ॥೧೩॥

ಸಮರ್ಥಾನ್ಪೂಜಯೇದ್ಯಶ್ಚ ನಾಸ್ಪರ್ಧ್ಯೈಃ ಸ್ಪರ್ಧತೇ ಚ ಯಃ ।
ನ ಚ ಕಾಮಾದ್ಭಯಾತ್ಕ್ರೋಧಾಲ್ಲೋಭಾದ್ವಾ ಧರ್ಮಮುತ್ಸೃ-
ಜೇತ್ ॥೧೪॥

ಅಮಾನೀ ಸತ್ಯವಾನ್ಕ್ಷಾನ್ತೋ ಜಿತಾತ್ಮಾ ಮಾನಸಂಯುತಃ ।
ಸ ತೇ ಮನ್ತ್ರಸಹಾಯಃ ಸ್ಯಾತ್ಸರ್ವಾವಸ್ಥಾಪರೀಕ್ಷಿತಃ ॥೧೫॥

ಯುಧಿಷ್ಠಿರ! ಯಾರ ಪರಾಕ್ರಮವು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗಿರುವುದೋ, ಯಾವನು ಕೀರ್ತಿಪ್ರಧಾನನಾಗಿರುವನೋ, ಮಾಡಿದ ಪ್ರತಿಜ್ಞೆಯನ್ನು ಉಳಿಸಿಕೊಳ್ಳುವನೋ, ಸಮರ್ಥರಾದವರನ್ನು ಯಾವನು ಗೌರವಿಸುವನೋ ತನಗೆ ಸಮಾನರಲ್ಲದವರಲ್ಲಿ ಯಾವನು ಸ್ಪರ್ಧಿಸುವುದಿಲ್ಲವೋ, ಕಾಮದಿಂದಾಗಲೀ–ಭಯದಿಂದಾಗಲೀ–ಕ್ರೋಧದಿಂದಾಗಲೀ–ಲೋಭದಿಂದಾಗಲೀ ಯಾವನು ಧರ್ಮವನ್ನು ಪರಿತ್ಯಾಗಮಾಡುವುದಿಲ್ಲವೋ, ಯಾವನು ದುರಭಿಮಾನರಹಿತನೋ, ಸತ್ಯನಿಷ್ಠನೋ, ಕ್ಷಮಾವಂತನೋ, ಜಿತೇಂದ್ರಿಯನೋ, ಮಾನಿಷ್ಠನೋ–ಅಂತಹವನು ಸರ್ವಾವಸ್ಥೆಗಳಲ್ಲಿಯೂ ಪರೀಕ್ಷಿತನಾದ ಬಳಿಕ ಮಂತ್ರಾಲೋಚನೆಗೆ ಅರ್ಹನಾಗುತ್ತಾನೆ. ಪರಾಕ್ರಮ, ಕೀರ್ತಿಕಾಮನೆ, ಪ್ರತಿಜ್ಞಾಪರಿಪಾಲನೆ, ಸಮರ್ಥರಾದವರನ್ನು ಗೌರವಿಸುವುದು–ಇವೇ ಮುಂತಾದುವುಗಳು ಮಂತ್ರಾಲೋಚಕನ ಶುಭಲಕ್ಷಣಗಳಾಗಿವೆ.

ಕುಲೀನಃ ಕುಲಸಮ್ಪನ್ನಸ್ತಿತಿಕ್ಷುರ್ದಕ್ಷ ಆತ್ಮವಾನ್ ।
ಶೂರಃ ಕೃತಜ್ಞಃ ಸತ್ಯಶ್ಚ ಶ್ರೇಯಸಃ ಪಾರ್ಥ ಲಕ್ಷಣಮ್ ॥೧೬॥

ಕುಂತೀಪುತ್ರ! ಕುಲೀನತೆ, ಸತ್ಕುಲಪ್ರಸೂತರೊಡನೆ ಸಂಪರ್ಕ, ಸಹನಶೀಲತೆ, ಕಾರ್ಯದಕ್ಷತೆ, ಜಿತೇಂದ್ರಿಯತೆ, ಶೌರ್ಯ, ಕೃತಜ್ಞತೆ ಮತ್ತು ಸತ್ಯನಿಷ್ಠೆ–ಇವು ಶ್ರೇಷ್ಠಪುರುಷನ ಲಕ್ಷಣಗಳಾಗಿವೆ.

ಇಂತಹ ಸದ್ಗುಣಗಳಿಂದ ಸಂಪನ್ನನಾದ, ವಿದ್ವಾಂಸನಾದ ಪುರುಷನ ವಿಷಯದಲ್ಲಿ ಶತ್ರುಗಳೂ ಪ್ರಸನ್ನರಾಗಿ ಅವನೊಡನೆ ಮೈತ್ರಿಯನ್ನು ಬೆಳೆಸುತ್ತಾರೆ.

ಈ ವಿಷಯಗಳೆಲ್ಲವನ್ನೂ ತಿಳಿದುಕೊಂಡನಂತರ ಜಿತೇಂದ್ರಿಯನಾದ, ಬುದ್ಧಿವಂತನಾದ ಮತ್ತು ಐಶ್ವರ್ಯಕಾಮನಾದ ರಾಜನು ತನ್ನ ಮಂತ್ರಿಗಳಲ್ಲಿರುವ ಗುಣಾವಗುಣಗಳನ್ನು ಪರೀಕ್ಷಿಸಬೇಕು.

ಸಮ್ಬನ್ಧಿಪುರುಷೈರಾಪ್ತೈರಭಿಜಾತೈಃ ಸ್ವದೇಶಜೈಃ ।
ಅಹಾರ್ಯೈರವ್ಯಭೀಚಾರೈಃ ಸರ್ವಶಃ ಸುಪರೀಕ್ಷಿತೈಃ ॥೧೯॥
ಯೌನಾಃ ಶ್ರೌತಾಸ್ತಥಾ ಮೌಲಾಸ್ತಥೈವಾಪ್ಯನಹಂಕೃತಾಃ ।
ಕರ್ತವ್ಯಾ ಭೂತಿಕಾಮೇನ ಪುರುಷೇಣ ಬುಭೂಷತಾ ॥೨೦॥

ಯಾರೊಡನೆ ಯಾವುದಾದರೂ ರಕ್ತಸಂಬಂಧವಿರುವುದೋ, ಯಾರು ಆಪ್ತರಾಗಿರುವರೋ, ಸತ್ಕುಲಪ್ರಸೂತರೋ, ಸ್ವದೇಶದಲ್ಲಿ ಹುಟ್ಟಿದವರೋ, ಯಾರು ಲಂಚ-ರುಷುವತ್ತುಗಳನ್ನು ತೆಗೆದುಕೊಳ್ಳುವುದಿಲ್ಲವೋ, ವ್ಯಭಿಚಾರ ದೋಷದಿಂದ ರಹಿತರಾಗಿರುವರೋ, ಒಡೆಯನ ವಿಷಯದಲ್ಲಿ ತಪ್ಪಿ ನಡೆಯುವುದಿಲ್ಲವೋ (ದ್ರೋಹಮಾಡುವುದಿಲ್ಲವೋ), ಸರ್ವಪ್ರಕಾರದಿಂದಲೂ ಪರೀಕ್ಷಿಸಲ್ಪಟ್ಟಿರುವರೋ–ಅಂತಹವರಿಂದ ಮಂತ್ರಿಗಳನ್ನು ಪರೀಕ್ಷಿಸಬೇಕು. ಯಾರು ಉತ್ತಮವಂಶಜರೋ, ವೇದಮಾರ್ಗಾವಲಂಬಿಗಳೋ, ಉತ್ತಮವಾದ ಪರಂಪರೆಯುಳ್ಳವರೋ, ಅಹಂಕಾರದಿಂದ ರಹಿತರೋ–ಅಂತಹವರನ್ನು ಐಶ್ವರ್ಯಕಾಮನಾದ ರಾಜನು ಮಂತ್ರಿಗಳನ್ನಾಗಿ ಮಾಡಿಕೊಳ್ಳಬೇಕು.

ಯೇಷಾಂ ವೈನಯಿಕೀ ಬುದ್ಧಿಃ ಪ್ರಕೃತಿಶ್ಚೈವ ಶೋಭನಾ ।
ತೇಜೋ ಧೈರ್ಯಂ ಕ್ಷಮಾ ಶೌಚಮನುರಾಗಃ ಸ್ಥಿತಿರ್ಧೃತಿಃ ॥೨೧॥
ಪರೀಕ್ಷ್ಯ ಚ ಗುಣಾನ್ನಿತ್ಯಂ ಪ್ರೌಢಭಾವಾನ್ಧುರಂಧರಾನ್ ।
ಪಞ್ಚೋಪಧಾವ್ಯತೀತಾಂಶ್ಚ ಕುರ್ಯಾದ್ರಾಜಾರ್ಥಕಾರಿಣಃ ॥೨೨॥

ಯಾರಲ್ಲಿ ವಿನಯಯುಕ್ತವಾದ ಬುದ್ಧಿಯಿರುವುದೋ, ಸರಳವಾದ ಸ್ವಭಾವವಿರುವುದೋ, ತೇಜಸ್ಸು-ಧೈರ್ಯ-ಕ್ಷಮೆ-ಪವಿತ್ರತೆ-ಪ್ರೇಮ-ಸ್ಥಿರ ಬುದ್ಧಿಗಳಿರುವುವೋ–ಅಂತಹವನೇ ಅಧಿಕಾರಿಯಾಗಲು ಅರ್ಹನು. ಈ ಗುಣ

ಗಳು ಅವರಲ್ಲಿರುವುದೇ ಎಂಬುದನ್ನು ನಿತ್ಯಪರೀಕ್ಷೆಗಳಿಂದ ಸ್ಥಿರಪಡಿಸಿ ಕೊಂಡು, ರಾಜನ ಕಾರ್ಯವನ್ನು ನಿರ್ವಹಿಸುವುದರಲ್ಲಿ ಪ್ರೌಢರಾಗಿರುವ, ರಾಜ್ಯಭಾರವನ್ನು ಹೊರಲು ಸಮರ್ಥರಾಗಿರುವ ಮತ್ತು ನಿಷ್ಕಪಟಿಗಳಾಗಿರುವ ಐವರನ್ನು (ಪಂಚೋಪಧೆಗಳಿಂದ ರಹಿತರಾಗಿರುವವರನ್ನು) ಅರ್ಥ ಸಚಿವರುಗಳನ್ನಾಗಿ ರಾಜನು ನಿಯಮಿಸಿಕೊಳ್ಳಬೇಕು.

ಪರ್ಯಾಪ್ತವಚನಾನ್ವೀರಾನ್ಪ್ರತಿಪತ್ತಿವಿಶಾರದಾನ್ ।
ಕುಲೀನಾನ್ಸತ್ತ್ವಸಮ್ಪನ್ನಾನಿಙ್ಗಿತಜ್ಞಾನನಿಷ್ಠುರಾನ್ ॥೨೩॥

ದೇಶಕಾಲವಿಧಾನಜ್ಞಾನ್ಭರ್ತೃಕಾರ್ಯಹಿತೈಷಿಣಃ ।
ನಿತ್ಯಮರ್ಥೇಷು ಸರ್ವೇಷು ರಾಜನ್ಕುರ್ವೀತ ಮನ್ತ್ರಿಣಃ ॥೨೪॥

ಮಾತನಾಡುವುದರಲ್ಲಿ ಯಾರು ಕುಶಲರೋ, ಶೌರ್ಯಸಂಪನ್ನರೋ, ಕಾರ್ಯನಿರ್ವಹಣೆಯಲ್ಲಿ ಚತುರರೋ, ಸತ್ಕುಲಪ್ರಸೂತರೋ, ಸತ್ತ್ವಗುಣ ಸಂಪನ್ನರೋ, ಇಂಗಿತಜ್ಞರೋ, ದಯಾಳುಗಳೋ, ದೇಶ-ಕಾಲವಿಧಾನ ಗಳನ್ನು ತಿಳಿದಿರುವರೋ, ಒಡೆಯನ ಹಿತೈಷಿಗಳೋ, ಕಾರ್ಯಸಾಧಕರೋ– ಅಂತಹ ಪುರುಷರನ್ನು ಸರ್ವಾರ್ಥಸಿದ್ಧಿಗಾಗಿ ರಾಜನು ಮಂತ್ರಿಗಳನ್ನಾಗಿ ಮಾಡಿಕೊಳ್ಳಬೇಕು.

ಹೀನತೇಜೋಽಭಿಸಂಸೃಷ್ಟೋ ನೈವ ಜಾತು ವ್ಯವಸ್ಯತಿ ।
ಅವಶ್ಯಂ ಜನಯತ್ಯೇವ ಸರ್ವಕರ್ಮಸು ಸಂಶಯಮ್ ॥೨೫॥

ತೇಜೋಹೀನನಾದ ಮಂತ್ರಿಯ ಸಹವಾಸದಲ್ಲಿರುವ ರಾಜನು ಕರ್ತವ್ಯಾಕರ್ತವ್ಯಗಳನ್ನು ನಿರ್ಣಯಿಸಲು ಯಾವಾಗಲೂ ಸಮರ್ಥನಾಗುವು ದಿಲ್ಲ. ಅಂತಹ ತೇಜೋಹೀನನಾದ ಮಂತ್ರಿಯು ಮಾಡುವ ಎಲ್ಲ ಕಾರ್ಯ ಗಳಲ್ಲಿಯೂ ಅವಶ್ಯವಾಗಿ ಸಂದೇಹಗಳನ್ನೇ ತಂದೊಡ್ಡುತ್ತಾನೆ. (ಯಾವ ಕೆಲಸವನ್ನು ಸಾಧಿಸುವುದೂ ಸಂಶಯಾಸ್ಪದವೇ ಆಗುತ್ತದೆ.)

ಏವಮಲ್ಪಶ್ರುತೋ ಮನ್ತ್ರೀ ಕಲ್ಯಾಣಾಭಿಜನೋಽಪ್ಯುತ ।
ಧರ್ಮಾರ್ಥಕಾಮಸಂಯುಕ್ತೋ ನಾಲಂ ಮನ್ತ್ರಂ ಪರೀಕ್ಷಿತುಮ್ ॥೨೬॥

ಹೀಗೆಯೇ ಅಲ್ಪಶ್ರುತನಾದ (ಹೆಚ್ಚು ವಿದ್ಯಾವಂತನಲ್ಲದ) ಮಂತ್ರಿಯೂ

ಸತ್ಕುಲಪ್ರಸೂತನಾಗಿದ್ದರೂ ಧರ್ಮಾರ್ಥ-ಕಾಮಗಳ ಸ್ವರೂಪಗಳನ್ನು ತಿಳಿದವನಾಗಿದ್ದರೂ ರಹಸ್ಯವಿಷಯಗಳನ್ನು ಪರೀಕ್ಷಿಸಲು ಸಮರ್ಥ ನಾಗುವುದಿಲ್ಲ.

ತಥೈವಾನಭಿಜಾತೋಽಪಿ ಕಾಮಮಸ್ತು ಬಹುಶ್ರುತಃ ।
ಅನಾಯಕ ಇವಾಚಕ್ಷುರ್ಮುಹ್ಯತ್ಯಣುಷು ಕರ್ಮಸು ॥೨೭॥

ಸತ್ಕುಲಪ್ರಸೂತನಲ್ಲದಿದ್ದರೂ ಬಹುಶ್ರುತನೂ ಮಹಾವಿದ್ವಾಂಸನೂ ಆಗಿರುವವನು ಮಂತ್ರಿಯಾಗಬಹುದಲ್ಲವೇ?–ಎಂದರೆ : ಸತ್ಕುಲಪ್ರಸೂತ ನಲ್ಲದವನು ಮಹಾವಿದ್ವಾಂಸನೇ ಆಗಿದ್ದರೂ ಮಂತ್ರಿಯಾಗಲು ಅರ್ಹನಲ್ಲ. ಕೈಹಿಡಿದು ನಡೆಸುವವರಿಲ್ಲದ ಕುರುಡನಂತೆ ಸತ್ಕುಲಪ್ರಸೂತನಲ್ಲದ ವಿದ್ವಾಂಸನು ಅಣುಮಾತ್ರದ (ಅತ್ಯಲ್ಪವಾದ) ಕಾರ್ಯಗಳಲ್ಲಿಯೂ ಮೋಹ ಗೊಂಡು ಭ್ರಾಂತನಾಗುತ್ತಾನೆ.

ಯೋ ವಾಪ್ಯಸ್ಥಿರಸಂಕಲ್ಪೋ ಬುದ್ಧಿಮಾನಾಗತಾಗಮಃ ।
ಉಪಾಯಜ್ಞೋಽಪಿ ನಾಲಂ ಸ ಕರ್ಮ ಪ್ರಾಪಯಿತುಂ ಚಿರಮ್ ॥

ಮಂತ್ರಿಯಾದವನಿಗೆ ಸ್ಥಿರವಾದ ಸಂಕಲ್ಪವಿಲ್ಲದಿರುವುದೂ ಒಂದು ಮಹಾದೋಷವೇ ಸರಿ. ಅಸ್ಥಿರಬುದ್ಧಿಯವನು (ಕ್ಷಣಚಿತ್ತನು) ಬುದ್ಧಿವಂತನೇ ಆಗಿರಲಿ, ಶಾಸ್ತ್ರಜ್ಞನೇ ಆಗಿರಲಿ, ಚತುರುಪಾಯಗಳನ್ನೂ ತಿಳಿದವನೇ ಆಗಿರಲಿ–ಬಹಳ ಕಾಲ ಕಳೆದರೂ ಒಂದು ಕಾರ್ಯವನ್ನು ಕೂಡ ಮಾಡಿ ಮುಗಿಸಲು ಸಮರ್ಥನಾಗುವುದಿಲ್ಲ.

ಕೇವಲಾತ್ಪುನರಾದಾನಾತ್ಕರ್ಮಣೋ ನೋಪಪದ್ಯತೇ ।
ಪರಾಮರ್ಶೋ ವಿಶೇಷಾಣಾಮಶ್ರುತಸ್ಯೇಹ ದುರ್ಮತೇಃ ॥೨೯॥

ಯಾವನು ಕೆಟ್ಟಬುದ್ಧಿಯವನಾಗಿರುವನೋ ಮತ್ತು ಶಾಸ್ತ್ರಜ್ಞಾನವಿಲ್ಲ ದವನಾಗಿರುವನೋ–ಅಂತಹವನು ಮಂತ್ರಿಪದವಿಯನ್ನು ಪಡೆದ ಮಾತ್ರ ದಿಂದ ಯಾವ ವಿಧವಾದ ಪ್ರಯೋಜನವೂ ಆಗುವುದಿಲ್ಲ. ವಿಶೇಷಕಾರ್ಯ ಗಳ ನಿರ್ವಹಣೆಯಲ್ಲಿ ಅಂತಹವನು ಮಾಡುವ ಪರಾಮರ್ಶೆಯು ಯುಕ್ತಿಸಂಗತವಾಗಿಯೂ ಇರುವುದಿಲ್ಲ.

ಮನ್ತ್ರಿಣ್ಯನನುರಕ್ತೇ ತು ವಿಶ್ವಾಸೋ ನೋಪಪದ್ಯತೇ ।
ತಸ್ಮಾದನನುರಕ್ತಾಯ ನೈವ ಮನ್ತ್ರಂ ಪ್ರಕಾಶಯೇತ್ ॥೩೦॥

ಮಂತ್ರಿಯು ರಾಜನ ವಿಷಯದಲ್ಲಿ ಅನುರಕ್ತನಾಗಿಲ್ಲದಿದ್ದರೆ ಅವನು ವಿಶ್ವಸನೀಯನಾಗುವುದಿಲ್ಲ. ಆದುದರಿಂದ ರಾಜನು ತನ್ನ ಅನುರಾಗರಹಿತ ನಾದ ಮಂತ್ರಿಯಲ್ಲಿ ರಾಜರಹಸ್ಯಗಳನ್ನು ಹೊರಗೆಡಹಬಾರದು.

ವ್ಯಥಯೇದ್ಧಿ ಸ ರಾಜಾನಂ ಮನ್ತ್ರಿಭಿಃ ಸಹಿತೋಽನೃಜುಃ ।
ಮಾರುತೋಪಹಿತಚ್ಛಿದ್ರೈಃ ಪ್ರವಿಶ್ಯಾಗ್ನಿರಿವ ದ್ರುಮಮ್ ॥೩೧॥

ಕಪಟಿಯಾದ ಮಂತ್ರಿಯು ರಾಜರಹಸ್ಯವನ್ನೇನಾದರೂ ತಿಳಿದಲ್ಲಿ ಇತರ ಮಂತ್ರಿಗಳೊಡನೆ ಕೂಡಿಕೊಂಡು-ಗಾಳಿಯಿಂದ ಕೂಡಿದ ಮರದ ಪೊಟರೆಗಳಲ್ಲಿ ಸೇರಿಕೊಂಡು ಆ ದೊಡ್ಡ ಮರವನ್ನೇ ದಹಿಸಿಬಿಡುವ ಅಗ್ನಿ ಯಂತೆ–ತನಗೆ ಆಶ್ರಯವನ್ನಿತ್ತ ರಾಜನನ್ನೇ ಬಹಳವಾಗಿ ಪೀಡಿಸುತ್ತಾನೆ.

ಸಂಕ್ರುದ್ಧಶ್ಚೈಕದಾ ಸ್ವಾಮೀ ಸ್ಥಾನಾಚ್ಚೈವಾಪಕರ್ಷತಿ ।
ವಾಚಾ ಕ್ಷಿಪತಿ ಸಂರಬ್ಧಃ ಪುನಃ ಪಶ್ಚಾತ್ಪ್ರಸೀದತಿ ॥೩೨॥

ಒಮ್ಮೆ ರಾಜನು ಕ್ರುದ್ಧನಾಗಿ ಮಂತ್ರಿಯನ್ನು ಅವನ ಸ್ಥಾನದಿಂದಲೇ ತೆಗೆದುಹಾಕಬಹುದು. ರೋಷಪೂರಿತನಾಗಿ ನಿಂದಿಸಬಹುದು. ಕಡೆಯಲ್ಲಿ ಪುನಃ ಪ್ರಸನ್ನನೂ ಆಗಬಹುದು.

ತಾನಿ ತಾನ್ಯನುರಕ್ತೇನ ಶಕ್ಯಾನಿ ಹಿ ತಿತಿಕ್ಷಿತುಮ್ ।
ಮನ್ತ್ರಿಣಾಂ ಚ ಭವೇತ್ಕ್ರೋಧೋ ವಿಸ್ಫೂರ್ಜಿತಮಿವಾಶನೇಃ ॥೩೩॥

ರಾಜನ ಅಂತಹ ಸ್ವಭಾವವನ್ನು ರಾಜನಲ್ಲಿಯೇ ಅನುರಕ್ತನಾದ ಮಂತ್ರಿಗೆ ಮಾತ್ರವೇ ಸಹಿಸಿಕೊಳ್ಳಲು ಶಕ್ಯವಾಗುತ್ತದೆ. ಅನುರಾಗರಹಿತನಾದ ಮಂತ್ರಿಯ ಕೋಪವು ಅಂತಹ ಸಂದರ್ಭಗಳಲ್ಲಿ ಸಿಡಿಲಿಗೆ ಸಮಾನವಾಗಿ ಭಯಂಕರವಾಗುತ್ತದೆ.

ಯಸ್ತು ಸಂಸಹತೇ ತಾನಿ ಭರ್ತುಃ ಪ್ರಿಯಚಿಕೀರ್ಷಯಾ ।
ಸಮಾನಸುಖದುಃಖಂ ತಂ ಪೃಚ್ಛೇದರ್ಥೇಷು ಮಾನವಮ್ ॥೩೪॥

ಒಡೆಯನಿಗೆ ಒಳ್ಳೆಯದನ್ನು ಮಾಡಬೇಕೆನ್ನುವ ಇಚ್ಛೆಯಿಂದ ಯಾವ

ಮಂತ್ರಿಯು ರಾಜನ ಕ್ಷಣರುಷ್ಟ-ಕ್ಷಣತುಷ್ಟಸ್ವಭಾವವನ್ನು ಸಹಿಸಿ ಕೊಳ್ಳುವನೋ–ಅವನನ್ನು ರಾಜನಲ್ಲಿ ಹೆಚ್ಚು ಅನುರಕ್ತನಾದವನೆಂದು ತಿಳಿಯಬೇಕು. ರಾಜನ ಸುಖ-ದುಃಖಗಳನ್ನು ತನ್ನ ಸುಖ-ದುಃಖಗಳಿಗೆ ಸಮಾನವೆಂದೇ ಭಾವಿಸುವ ಅಂತಹ ಮನುಷ್ಯನೊಡನೆ ಸಕಲವಿಧವಾದ ಕಾರ್ಯವಿಷಯಗಳಲ್ಲಿಯೂ ಸಮಾಲೋಚನೆಯನ್ನು ನಡೆಸಬೇಕು.

ಅನೃಜುಸ್ತ್ವನುರಕ್ತೋಽಪಿ ಸಮ್ಪನ್ನಶ್ಚೇತರೈರ್ಗುಣೈಃ ।
ರಾಜ್ಞಃ ಪ್ರಜ್ಞಾನಯುಕ್ತೋಽಪಿ ನ ಮನ್ತ್ರಂ ಶ್ರೋತುಮರ್ಹತಿ ॥೩೫॥

ರಾಜನಲ್ಲಿ ಅತ್ಯಂತಾನುರಕ್ತನಾಗಿದ್ದರೂ, ಸಕಲಗುಣಸಂಪನ್ನನಾಗಿ ದ್ದರೂ, ಮಹಾಬುದ್ಧಿವಂತನೇ ಆಗಿದ್ದರೂ ಕಪಟಿಯಾಗಿದ್ದರೆ–ಅಂತಹ ಮಂತ್ರಿಯು ರಾಜರಹಸ್ಯಗಳನ್ನು ಕೇಳಲು ಅನರ್ಹನಾಗುತ್ತಾನೆ.

ಯೋಽಮಿತ್ರೈಃ ಸಹ ಸಮ್ಬದ್ಧೋ ನ ಪೌರಾನ್ಬಹು ಮನ್ಯತೇ ।
ಅಸುಹೃತ್ತಾದೃಶೋ ಜ್ಞೇಯೋ ನ ಮನ್ತ್ರಂ ಶ್ರೋತುಮರ್ಹತಿ ॥೩೬॥

ಯಾರಿಗೆ ಶತ್ರುಗಳೊಡನೆಯೂ ಸಂಬಂಧವಿರುವುದೋ, ಯಾರು ಜನರ ಯೋಗ-ಕ್ಷೇಮಗಳನ್ನು ಮುಖ್ಯವೆಂದು ಭಾವಿಸುವುದಿಲ್ಲವೋ– ಅಂತಹವನು ರಾಜರಹಸ್ಯವನ್ನು ಕೇಳಲು ಅನರ್ಹನಾಗುತ್ತಾನೆ.

ಅವಿದ್ವಾನಶುಚಿಃ ಸ್ತಬ್ಧಃ ಶತ್ರುಸೇವೀ ವಿಕತ್ಥನಃ ।
ಅಸುಹೃತ್ಕ್ರೋಧನೋ ಲುಬ್ಧೋ ನ ಮನ್ತ್ರಂ ಶ್ರೋತುಮರ್ಹತಿ ॥೩೭॥

ಮೂರ್ಖನೂ, ಅಶುದ್ಧನೂ, ಜಡನೂ, ಶತ್ರುಗಳೊಡನೆ ಸಲಿಗೆ ಯಿಂದಿರುವವನೂ, ಬಡಾಯಿಕೊಚ್ಚುವವನೂ, ಕೋಪಿಷ್ಠನೂ, ಲೋಭಿಯೂ ಮತ್ತು ಅಸುಹೃದನೂ ರಾಜರಹಸ್ಯವನ್ನು ಕೇಳಲು ಅರ್ಹನಲ್ಲ.

ಆಗನ್ತುಶ್ಚಾನುರಕ್ತೋಽಪಿ ಕಾಮಮಸ್ತು ಬಹುಶ್ರುತಃ ।
ಸತ್ಕೃತಃ ಸಂವಿಭಕ್ತೋ ವಾ ನ ಮನ್ತ್ರಂ ಶ್ರೋತುಮರ್ಹತಿ ॥೩೮॥

ರಾಜನಲ್ಲಿ ಅತ್ಯಂತಾನುರಕ್ತನೇ ಆಗಿದ್ದರೂ ಮಹಾವಿದ್ವಾಂಸನೇ ಆಗಿದ್ದರೂ, ಎಲ್ಲರಿಂದಲೂ ಸತ್ಕಾರವನ್ನು ಪಡೆದಿದ್ದರೂ, ಯಥೇಚ್ಛವಾದ

ಬಹುಮಾನಗಳನ್ನು ಪಡೆದುಕೊಂಡಿದ್ದರೂ–ಅವನು ಹೊರದೇಶದಿಂದ ಬಂದವನಾಗಿದ್ದರೆ (ಹೊಸದಾಗಿ ಬಂದವನಾಗಿದ್ದರೆ) ರಾಜರಹಸ್ಯವನ್ನು ಕೇಳಲು ಅನರ್ಹನಾಗುತ್ತಾನೆ.

ವಿಧರ್ಮತೋ ವಿಪ್ರಕೃತಃ ಪಿತಾ ಯಸ್ಯಾಭವತ್ಪುರಾ ।
ಸತ್ಕೃತಃ ಸ್ಥಾಪಿತಃ ಸೋಽಪಿ ನ ಮನ್ತ್ರಂ ಶ್ರೋತುಮರ್ಹತಿ ॥೩೯॥

ತಂದೆಯು ಅಧರ್ಮಾಚರಣೆಯ ಕಾರಣದಿಂದ ದೇಶಭ್ರಷ್ಟನಾಗಿ ಮಾಡಲ್ಪಟ್ಟನಂತರ ತಂದೆಯ ಅಧಿಕಾರದಲ್ಲಿಯೇ ನಿಯುಕ್ತನಾಗಿ ರಾಜನಿಂದ ಸತ್ಕೃತನಾಗುವ ಧರ್ಮಚಾರಿಯಾದ ಮಗನೂ ರಾಜರಹಸ್ಯವನ್ನು ತಿಳಿಯಲು ಅನರ್ಹನಾಗುತ್ತಾನೆ. (ತಂದೆಯು ಉನ್ನತಾಧಿಕಾರಿಯಾಗಿರುತ್ತಾನೆ. ಅಧರ್ಮಾಚರಣೆಯ ಕಾರಣದಿಂದ ರಾಜನು ಆ ಅಧಿಕಾರಿಯನ್ನು ದೇಶ ಭ್ರಷ್ಟನನ್ನಾಗಿ ಮಾಡುತ್ತಾನೆ. ವಿದ್ವಾಂಸನಾದ ಆ ಅಧಿಕಾರಿಯ ಮಗನನ್ನೇ ಅಧಿಕಾರಿಯನ್ನಾಗಿ ರಾಜನು ನಿಯಮಿಸಿಕೊಳ್ಳುತ್ತಾನೆ. ಅವನು ಧರ್ಮ ಚಾರಿಯೂ ಆಗಿರುತ್ತಾನೆ. ಹೀಗಿದ್ದರೂ ಹಿಂದಿನ ಅಧಿಕಾರಿಯ ಮಗನಿಗೆ ರಾಜರಹಸ್ಯವನ್ನು ತಿಳಿಸಕೂಡದು.)

ಯಃ ಸ್ವಲ್ಪೇನಾಪಿ ಕಾರ್ಯೇಣ ಸುಹೃದಾಕ್ಷಾರಿತೋ ಭವೇತ್ ।
ಪುನರನ್ಯೈರ್ಗುಣೈರ್ಯುಕ್ತೋ ನ ಮನ್ತ್ರಂ ಶ್ರೋತುಮರ್ಹತಿ ॥೪೦॥

ಅತ್ಯಲ್ಪವಾದ ಅನುಚಿತಕಾರ್ಯವನ್ನು ಮಾಡಿದುದಕ್ಕಾಗಿ ದಂಡವನ್ನು ವಿಧಿಸಿ ನಿರ್ಧನನಾಗಿ ಮಾಡಲ್ಪಟ್ಟವನು ಮಿತ್ರನೇ ಆಗಿದ್ದರೂ, ಸಕಲಗುಣ ಸಂಪನ್ನನೇ ಆಗಿದ್ದರೂ–ರಾಜರಹಸ್ಯವನ್ನು ಕೇಳಲು ಅನರ್ಹನಾಗುತ್ತಾನೆ.

ಕೃತಪ್ರಜ್ಞಶ್ಚ ಮೇಧಾವೀ ಬುಧೋ ಜಾನಪದಃ ಶುಚಿಃ ।
ಸರ್ವಕರ್ಮಸು ಯಃ ಶುದ್ಧಃ ಸ ಮನ್ತ್ರಂ ಶ್ರೋತುಮರ್ಹತಿ ॥೪೧॥

ಯಾವನ ಬುದ್ಧಿಯು ತೀಕ್ಷ್ಣವಾಗಿಯೂ–ಧಾರಣಾಶಕ್ತಿಯು ಪ್ರಬಲವಾಗಿಯೂ ಇರುವುದೋ, ಯಾವನು ವಿದ್ವಾಂಸನೋ, ದೇಶೀಯನೋ, ಶುದ್ಧಾಚರಣೆಯುಳ್ಳವನೋ, ಎಲ್ಲ ಕಾರ್ಯಗಳಲ್ಲಿಯೂ ಶುದ್ಧನಾಗಿರುವನೋ–ಅಂತಹವನು ರಾಜರಹಸ್ಯವನ್ನು ತಿಳಿಯಲು ಅರ್ಹನಾಗುತ್ತಾನೆ.

ಜ್ಞಾನವಿಜ್ಞಾನಸಮ್ಪನ್ನಃ ಪ್ರಕೃತಿಜ್ಞಃ ಪರಾತ್ಮನೋಃ ।
ಸುಹೃದಾತ್ಮಸಮೋ ರಾಜ್ಞಃ ಸ ಮನ್ತ್ರಂ ಶ್ರೋತುಮರ್ಹತಿ ॥೪೨॥

ಯಾವನು ಜ್ಞಾನ-ವಿಜ್ಞಾನಸಂಪನ್ನನೋ-ತನ್ನ ಪಕ್ಷದ ಮತ್ತು ತನ್ನ (ರಾಜನ) ಮತ್ತು ಬೇರೆಯವರ (ಶತ್ರುಗಳ) ಸ್ವಭಾವವನ್ನು ತಿಳಿದಿರುವನೋ, ರಾಜನಿಗೆ ಆತ್ಮಸಮನಾಗಿರುವನೋ (ರಾಜನ ಸುಖ-ದುಃಖಗಳನ್ನು ತನ್ನ ಸುಖ-ದುಃಖಗಳೆಂದೇ ಭಾವಿಸುವನೋ)–ಅಂತಹವನು ರಾಜರಹಸ್ಯವನ್ನು ತಿಳಿಯಲು ಅರ್ಹನಾಗುತ್ತಾನೆ.

ಸತ್ಯವಾಕ್ಶೀಲಸಮ್ಪನ್ನೋ ಗಮ್ಭೀರಃ ಸತ್ರಪೋ ಮೃದುಃ ।
ಪಿತೃಪೈತಾಮಹೋ ಯಃ ಸ್ಯಾತ್ಸ ಮನ್ತ್ರಂ ಶ್ರೋತುಮರ್ಹತಿ ॥೪೩॥

ಯಾವನು ಸತ್ಯವಾದಿಯೋ, ಶೀಲಸಂಪನ್ನನೋ, ಗಾಂಭೀರ್ಯದಿಂದ ಕೂಡಿರುವನೋ, ಲಜ್ಜಾಶೀಲನೋ, ಮೃದುಸ್ವಭಾವದವನೋ, ಯಾವನ ತಂದೆ-ತಾತಂದಿರೂ ರಾಜಸೇವೆಯಲ್ಲಿಯೇ ನಿರತರಾಗಿದ್ದರೋ–ಅಂತಹವನು ರಾಜರಹಸ್ಯವನ್ನು ಕೇಳಲು ಅರ್ಹನಾಗುತ್ತಾನೆ.

ಸಂತುಷ್ಟಃ ಸಮ್ಮತಃ ಸತ್ಯಃ ಶೌಟೀರೋ ದ್ವೇಷ್ಯಪಾಪಕಃ ।
ಮನ್ತ್ರವಿತ್ಕಾಲವಿಚ್ಛೂರಃ ಸ ಮನ್ತ್ರಂ ಶ್ರೋತುಮರ್ಹತಿ ॥೪೪॥

ಯಾವನು ನಿತ್ಯಸಂತುಷ್ಟನೋ, ಸತ್ಪುರುಷಸಮ್ಮತನೋ, ಸತ್ಯಪರಾಯಣನೋ, ಶೂರನೋ, ಪಾಪವನ್ನು ದ್ವೇಷಿಸುವನೋ, ರಾಜಕೀಯವಾದ ಮಂತ್ರಾಲೋಚನೆಗಳನ್ನು ತಿಳಿದಿರುವನೋ, ದೇಶ-ಕಾಲವಿಧಾನಗಳನ್ನು ತಿಳಿದಿರುವನೋ, ಶೌರ್ಯಸಂಪನ್ನನೋ–ಅಂತಹವನು ರಾಜರಹಸ್ಯವನ್ನು ತಿಳಿಯಲು ಅರ್ಹನಾಗುತ್ತಾನೆ.

ಸರ್ವಲೋಕಮಿಮಂ ಶಕ್ತಃ ಸಾನ್ತ್ವೇನ ಕುರುತೇ ವಶೇ ।
ತಸ್ಮೈ ಮನ್ತ್ರಃ ಪ್ರಯೋಕ್ತವ್ಯೋ ದಣ್ಡಮಾಧಿತ್ಸತಾ ನೃಪ ॥೪೫॥

ಯಾವ ರಾಜನು ರಾಜದಂಡವನ್ನು ಧರಿಸಿ ಬಹಳ ಕಾಲದವರೆಗೂ ಪ್ರಜೆಗಳ ಪಾಲನೆಯನ್ನು ಮಾಡಲು ಇಚ್ಛಿಸುವನೋ–ಅಂತಹ ರಾಜನು ಎಲ್ಲ ಲೋಕಗಳನ್ನೂ ಸಾಂತ್ವನದಿಂದಲೇ ತನ್ನ ವಶಪಡಿಸಿಕೊಳ್ಳಲು ಸಾಮರ್ಥ್ಯವಿರುವವನಲ್ಲಿಯೇ ರಾಜರಹಸ್ಯಗಳನ್ನು ಪರ್ಯಾಲೋಚಿಸಬೇಕು.

ಪೌರಜಾನಪದಾ ಯಸ್ಮಿನ್ವಿಶ್ವಾಸಂ ಧರ್ಮತೋ ಗತಾಃ ।
ಯೋದ್ಧಾ ನಯವಿಪಶ್ಚಿಚ್ಚ ಸ ಮನ್ತ್ರಂ ಶ್ರೋತುಮರ್ಹತಿ ॥೪೬॥

ನಗರ-ಪಟ್ಟಣ-ಹಳ್ಳಿಗಳ ಜನರು ಯಾವನಲ್ಲಿ ಧರ್ಮತಃ ವಿಶ್ವಾಸವನ್ನಿಟ್ಟುಕೊಂಡಿರುವರೋ, ಯಾವನು ಯುದ್ಧದಲ್ಲಿ ಕುಶಲನಾಗಿರುವನೋ, ನೀತಿಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವನೋ–ಅಂತಹವನು ರಾಜರಹಸ್ಯವನ್ನು ತಿಳಿಯಲು ಅರ್ಹನಾಗುತ್ತಾನೆ.

ಯುಧಿಷ್ಠಿರ! ಆದುದರಿಂದ ಶ್ರೇಯಸ್ಕಾಮನಾದ ರಾಜನು-ಹಿಂದೆ ಹೇಳಿದ ಸಕಲಸದ್ಗುಣಸಂಪನ್ನರಾದ, ಪ್ರಜೆಗಳ ಸ್ವಭಾವ-ಗುಣಗಳನ್ನು ತಿಳಿದಿರುವ, ಜನರಿಂದ ಸಮ್ಮಾನ್ಯರಾದ, ಮಹತ್ವಾಕಾಂಕ್ಷಿಗಳಾದ ಜನರನ್ನು ಮಂತ್ರಿಗಳನ್ನಾಗಿ ನಿಯಮಿಸಿಕೊಳ್ಳಬೇಕು. ಇಂತಹ ಮಂತ್ರಿಗಳ ಸಂಖ್ಯೆಯು ಕನಿಷ್ಠಪಕ್ಷ ಮೂರಾದರೂ ಇರಬೇಕು.

ಸ್ವಾಸು ಪ್ರಕೃತಿಷು ಚ್ಛಿದ್ರಂ ಲಕ್ಷಯೇರನ್ಪರಸ್ಯ ಚ ।
ಮನ್ತ್ರಿಣಾಂ ಮನ್ತ್ರಮೂಲಂ ಹಿ ರಾಜ್ಞೋ ರಾಷ್ಟ್ರಂ ವಿವರ್ಧತೇ ॥೪೮॥

ತಮ್ಮ ಮತ್ತು ಶತ್ರುಗಳ ಪ್ರಕೃತಿಗಳಲ್ಲಿರುವ ದೋಷ-ದುರ್ಬಲತೆಗಳನ್ನು ಮಂತ್ರಿಗಳು ಲಕ್ಷಿಸುತ್ತಿರಬೇಕು. ಏಕೆಂದರೆ : ಮಂತ್ರಿಗಳು ಕೊಡುವ ಸಲಹೆಗಳೇ ರಾಜನ ರಾಷ್ಟ್ರವರ್ಧನೆಗೆ ಮೂಲವಾಗಿರುತ್ತವೆ.

ನಾಸ್ಯ ಚ್ಛಿದ್ರಂ ಪರಂ ಪಶ್ಯೇಚ್ಛಿದ್ರೇಷು ಪರಮನ್ವಿಯಾತ್ ।
ಗೂಹೇತ್ಕೂರ್ಮ ಇವಾಙ್ಗಾನಿ ರಕ್ಷೇದ್ವಿವರಮಾತ್ಮನಃ ॥೪೯॥

ತನ್ನಲ್ಲಿರುವ ಲೋಪ-ದೋಷಗಳನ್ನು ಶತ್ರುವು ತಿಳಿದುಕೊಳ್ಳಲು ಸಾಧ್ಯವಾಗದಂತೆ ಎಚ್ಚರಿಕೆಯಿಂದಿರಬೇಕು. ಶತ್ರುವಿನ ದೋಷ-ದೌರ್ಬಲ್ಯಗಳನ್ನು ಗೂಢಚಾರರ ಮೂಲಕವಾಗಿ ತಾನು ತಿಳಿದುಕೊಳ್ಳುತ್ತಿರಬೇಕು. ಆಮೆಯು ತನ್ನ ಅವಯವಗಳನ್ನು ಒಳಕ್ಕೆ ಸೆಳೆದುಕೊಂಡು ಮುಚ್ಚಿಕೊಳ್ಳುವಂತೆ–ರಾಜನು ರಾಜರಹಸ್ಯಗಳನ್ನೂ ಮತ್ತು ತನ್ನಲ್ಲಿರುವ ನ್ಯೂನತೆಗಳನ್ನೂ ಮುಚ್ಚಿಕೊಳ್ಳಬೇಕು.

ಮನ್ತ್ರಗೂಢಾ ಹಿ ರಾಜ್ಯಸ್ಯ ಮನ್ತ್ರಿಣೋ ಯೇ ಮನೀಷಿಣಃ ।
ಮನ್ತ್ರಸಂಹನನೋ ರಾಜಾ ಮನ್ತ್ರಾಙ್ಗಾನೀತರೇ ಜನಾಃ ॥೫೦॥

ಬುದ್ಧಿವಂತರಾದ ಮಂತ್ರಿಗಳೇ ರಾಜ್ಯದ ರಾಜರಹಸ್ಯಗಳನ್ನು ನಿಗೂಢವಾಗಿಡುತ್ತಾರೆ. ಏಕೆಂದರೆ : ಮಂತ್ರಾಲೋಚನೆಯೇ ರಾಜನ ದೇಹವಾಗಿದೆ. ಸದಸ್ಯರೇ ಮೊದಲಾದವರು ರಾಜರಹಸ್ಯಕ್ಕೆ ಅಂಗಭೂತ ರಾಗಿರುತ್ತಾರೆ.

ರಾಜ್ಯಂ ಪ್ರಣಿಧಿಮೂಲಂ ಹಿ ಮನ್ತ್ರಸಾರಂ ಪ್ರಚಕ್ಷತೇ ।
ಸ್ವಾಮಿನಂ ತ್ವನುವರ್ತನ್ತೇ ವೃತ್ತ್ಯರ್ಥಮಿಹ ಮನ್ತ್ರಿಣಃ ॥೫೧॥

ಗುಪ್ತಚಾರರೇ ರಾಜ್ಯದ ಅಭಿವೃದ್ಧಿಗೆ ಮೂಲಕಾರಣರೆಂದು ವಿದ್ವಾಂಸರು ಹೇಳುತ್ತಾರೆ. ಗುಪ್ತಚಾರರ ಸಾರಭೂತವಾದ ಕಾರ್ಯವೆಂದರೆ ಗುಪ್ತಮಂತ್ರಾಲೋಚನೆಯೇ ಆಗಿದೆ. ಮಂತ್ರಿಗಳಾದರೋ ತಮ್ಮ ಜೀವಿಕೆಗಾಗಿ ರಾಜನನ್ನು ಆಶ್ರಯಿಸಿಕೊಂಡಿರುತ್ತಾರೆ.

ಸಂವಿನೀಯ ಮದಕ್ರೋಧೌ ಮಾನಮೀರ್ಷ್ಯಾಂ ಚ ನಿರ್ವೃತಾಃ ।
ನಿತ್ಯಂ ಪಞ್ಚೋಪಧಾತೀತೈರ್ಮನ್ತ್ರಯೇತ್ಸಹ ಮನ್ತ್ರಿಭಿಃ ॥೫೨॥

ಮದ ಮತ್ತು ಕ್ರೋಧಗಳನ್ನು ಪರಿತ್ಯಜಿಸಿರುವವರು, ಅಭಿಮಾನ ದಿಂದಲೂ–ಈರ್ಷ್ಯೆಯಿಂದಲೂ ರಹಿತರಾದವರು ಗುಪ್ತಚಾರರಾಗಬೇಕು. ಕಾಯಕ, ವಾಚಕ, ಮಾನಸಿಕ, ಕರ್ಮಕೃತ ಮತ್ತು ಸಂಕೇತಜನಿತಗಳೆಂಬ ಐದು ವಿಷಯಗಳಲ್ಲಿಯೂ ರಾಜನಿಂದ ಪರೀಕ್ಷಿಸಲ್ಪಟ್ಟು ಉತ್ತೀರ್ಣರಾದ ಮಂತ್ರಿಗಳೊಡನೆ ರಾಜನು ಸಮಾಲೋಚಿಸಬೇಕು.

ತೇಷಾಂ ತ್ರಯಾಣಾಂ ವಿವಿಧಂ ವಿಮರ್ಶಂ
ವಿಬುದ್ಧ್ಯ ಚಿತ್ತಂ ವಿನಿವೇಶ್ಯ ತತ್ರ ।
ಸ್ವನಿಶ್ಚಯಂ ತಂ ಪರನಿಶ್ಚಯಂ ಚ
ನಿವೇದಯೇದುತ್ತರಮನ್ತ್ರಕಾಲೇ ॥೫೩॥

ಮಂತ್ರಾಲೋಚನೆಯಲ್ಲಿ ಸೇರಿದ ಮೂವರು ಮಂತ್ರಿಗಳ ಪ್ರತ್ಯೇಕ ವಾದ ಸಲಹೆಗಳನ್ನು ತಿಳಿದುಕೊಂಡು, ತಾನೂ ಸಹ ಆ ವಿಷಯವನ್ನು ಚೆನ್ನಾಗಿ ಮನಸ್ಸಿನಲ್ಲಿ ಮಥಿಸಿ, ತನ್ನ ನಿಶ್ಚಯವನ್ನೂ ಉಳಿದ ಮೂವರು ಮಂತ್ರಿಗಳು ಕೊಟ್ಟಿರುವ ಮೂರು ವಿಧವಾದ ಸಲಹೆಗಳನ್ನೂ ಕ್ರೋಢೀ

ಕರಿಸಿ ಆಚಾರ್ಯರೊಡನೆ ಅಥವಾ ಪುರೋಹಿತರೊಡನೆ ಸಮಾಲೋಚನೆ ಮಾಡುವಾಗ ಅವರ ಮುಂದಿಡಬೇಕು.

ಧರ್ಮಾರ್ಥಕಾಮಜ್ಞಮುಪೇತ್ಯ ಪೃಚ್ಛೇ-
ದ್ಯುಕ್ತೋ ಗುರುಂ ಬ್ರಾಹ್ಮಣಮುತ್ತರಾರ್ಥಮ್ ।
ನಿಷ್ಠಾ ಕೃತಾ ತೇನ ಯದಾ ಸಹಃ ಸ್ಯಾ-
ತ್ತಂ ಮನ್ತ್ರಮಾರ್ಗಂ ಪ್ರಣಯೇದಸಕ್ತಃ ॥೫೪॥

ರಾಜನು ಸಾವಧಾನಚಿತ್ತನಾಗಿ ಧರ್ಮಾರ್ಥಕಾಮಗಳ ವಿಷಯದಲ್ಲಿ ನಿಷ್ಣಾತರಾದ ಬ್ರಾಹ್ಮಣಗುರುಗಳ ಬಳಿಗೆ ಹೋಗಿ ಉತ್ತರಾರ್ಥವಾಗಿ ಅವರನ್ನು ಪ್ರಶ್ನಿಸಬೇಕು. ಗುರುಗಳ ಅಂತ್ಯನಿರ್ಧಾರವು ಉಳಿದ ನಾಲ್ವರ ಅಭಿಪ್ರಾಯಗಳಿಗೂ ಹೊಂದಿಕೊಳ್ಳುವಂತಿದ್ದರೆ ಒಡನೆಯೇ ಮಂತ್ರಮಾರ್ಗವನ್ನು (ಮಂತ್ರಾಲೋಚನೆಯ ಮೂಲಕವಾಗಿ ನಿರ್ಣಯಿಸಿರುವುದನ್ನು) ಕಾರ್ಯರೂಪಕ್ಕೆ ತರಬೇಕು.

ಏವಂ ಸದಾ ಮನ್ತ್ರಯಿತವ್ಯಮಾಹು-
ರ್ಯೇ ಮನ್ತ್ರತತ್ತ್ವಾರ್ಥವಿನಿಶ್ಚಯಜ್ಞಾಃ ।
ತಸ್ಮಾತ್ತಮೇವಂ ಪ್ರಣಯೇತ್ಸದೈವ
ಮನ್ತ್ರಂ ಪ್ರಜಾಸಂಗ್ರಹಣೇ ಸಮರ್ಥಮ್ ॥೫೫॥

ಮಂತ್ರತತ್ತ್ವಾರ್ಥದಲ್ಲಿ ನಿಶ್ಚಯಜ್ಞಾನವುಳ್ಳ ವಿದ್ವಾಂಸರು ಯಾವಾಗಲೂ ಇದೇ ರೀತಿಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ರಾಜ್ಯದಲ್ಲಾಗಬೇಕಾದ ಕಾರ್ಯಗಳನ್ನು ನಿಶ್ಚಯಿಸಬೇಕೆಂದು ಹೇಳುತ್ತಾರೆ. ಯಾವ ಕಾರ್ಯದ ಸಮಾಲೋಚನೆಯು ಪ್ರಜಾಸಂಗ್ರಹಣದಲ್ಲಿ (ಪ್ರಜೆಗಳಿಗೆ ಒಳ್ಳೆಯದನ್ನು ಮಾಡುವುದರ ಮೂಲಕ ಅವರನ್ನು ಆಕರ್ಷಿಸುವುದರಲ್ಲಿ) ಸಮರ್ಥವಾಗಿರುವುದೋ–ಅಂತಹ ವಿಷಯವನ್ನೇ ಮಂತ್ರಾಲೋಚನೆಗೆ ವಿಷಯವನ್ನಾಗಿ ಆರಿಸಿಕೊಳ್ಳಬೇಕು ಮತ್ತು ನಿರ್ಣೀತವಾದ ಯೋಜನೆಯನ್ನು ಒಡನೆಯೇ ಕಾರ್ಯರೂಪಕ್ಕೂ ತರಬೇಕು.

ನ ವಾಮನಾಃ ಕುಬ್ಜ ಕೃಶಾ ನ ಖಞ್ಜಾ
ನಾನ್ಧೋ ಜಡಃ ಸ್ತ್ರೀ ಚ ನಪುಂಸಕಶ್ಚ ।

ನ ಚಾತ್ರ ತಿರ್ಯಕ್ಚ ಪುರೋ ನ ಪಶ್ಚಾ-
ನ್ನೋರ್ಧ್ವಂ ನ ಚಾಧಃ ಪ್ರಚರೇತ್ಕಥಂಚಿತ್ ॥೫೭॥

ರಹಸ್ಯಮಂತ್ರಾಲೋಚನೆಗಳು ನಡೆಯಬೇಕಾಗಿರುವ ಸ್ಥಳದ ಹಿಂದೆ-ಮುಂದೆ, ಎಡ-ಬಲಭಾಗಗಳಲ್ಲಿ, ಮೇಲೆ-ಕೆಳಗೆ-ವಾಮನರೂ, ಕುಬ್ಜರೂ, ಕೃಶರಾಗಿರತಕ್ಕವರೂ, ಕುಂಟರೂ, ಕುರುಡರೂ, ಜಡರೂ, ಸ್ತ್ರೀಯರೂ, ನಪುಂಸಕರೂ ಸುಳಿದಾಡಲೂ ಬಾರದು.

ಆರುಹ್ಯ ವಾ ವೇಶ್ಮ ತಥೈವ ಶೂನ್ಯಂ
ಸ್ಥಲಂ ಪ್ರಕಾಶಂ ಕುಶಕಾಶಹೀನಮ್ ।
ವಾಗಙ್ಗದೋಷಾನ್ಪರಿಹೃತ್ಯ ಸರ್ವಾ-
ನ್ಸಮ್ಮನ್ತ್ರಯೇತ್ಕಾರ್ಯಮಹೀನಕಾಲಮ್ ॥೫೮॥

ಅರಮನೆಯ ಉಪ್ಪರಿಗೆಯ ಮೇಲಾದರೂ ಕುಳಿತು ಮಂತ್ರಾಲೋಚನೆ ಮಾಡಬಹುದು. ಅಥವಾ ನಿರ್ಜನವಾಗಿರುವ, ವಿಶಾಲವಾಗಿರುವ, ಬೆಳಕಿನಿಂದ ಕೂಡಿರುವ, ಜಂಬುಹುಲ್ಲಿನಿಂದಲೂ ದರ್ಭೆಯಿಂದಲೂ ಗರಿಕೆಯಿಂದಲೂ ವಿಹೀನವಾಗಿರುವ ಬಯಲು ಜಾಗದಲ್ಲಿ ಕುಳಿತು–ಕೆಲಸಕ್ಕೆ ಬಾರದ ಮಾತುಗಳನ್ನಾಡುವುದನ್ನೂ ಅಂಗಚೇಷ್ಟೆಗಳನ್ನೂ ದೂರೀಕರಿಸಿ–ಮುಂದಿನ ಕಾರ್ಯಗಳ ವಿಷಯವಾಗಿ ರಾಜನು ಮಂತ್ರಿಗಳೊಡನೆ ಸಮಾಲೋಚಿಸಬೇಕು.”

ಎಂಭತ್ತಮೂರನೆಯ ಅಧ್ಯಾಯವು ಮುಗಿಯಿತು.

೮೪ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸಾಂತ್ವಪೂರ್ಣವಾದ ಮಧುರವಚನದ ಮಹತ್ತ್ವದಲ್ಲಿ ಇಂದ್ರ ಮತ್ತು ಬೃಹಸ್ಪತಿಗಳ ಸಂಭಾಷಣೆ

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಪುರಾತನವಾದ ಬೃಹಸ್ಪತಿ-ಶುಕ್ರರ ಸಂವಾದರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಅದನ್ನೇ ನಾನು ನಿನಗೂ ಹೇಳುವೆನು ; ಕೇಳು.

ಇಂದ್ರನೊಮ್ಮೆ ಬೃಹಸ್ಪತಿಯನ್ನು ಸಂಧಿಸಿದಾಗ ಅವನನ್ನು ಪ್ರಶ್ನಿಸಿದನು:

ಕಿಂ ಸ್ವಿದೇಕಪದಂ ಬ್ರಹ್ಮನ್ಪುರುಷಃ ಸಮ್ಯಗಾಚರನ್ ।
ಪ್ರಮಾಣಂ ಸರ್ವಭೂತಾನಾಂ ಯಶಶ್ಚೈವಾಪ್ನುಯಾನ್ಮಹತ್ ॥೨॥

"ಬ್ರಾಹ್ಮಣೋತ್ತಮ! ಆ ಒಂದು ಪದವು ಯಾವುದು? ಆ ಪದದ ಅರ್ಥವನ್ನು ಅನುಸಂಧಾನಮಾಡಿಕೊಂಡು ಸದ್ವ್ಯವಹಾರವನ್ನು ಮಾಡು ವವನು ಸಕಲಪ್ರಾಣಿಗಳಿಗೂ ಪ್ರಿಯನಾಗುವನೆಂದೂ (ಪ್ರಮಾಣಭೂತ ನಾಗುವನೆಂದೂ) ಮತ್ತು ಶಾಶ್ವತವಾದ ಮಹಾಯಶಸ್ಸನ್ನೂ ಗಳಿಸುವನೆಂದೂ ನಾನು ಕೇಳಿದ್ದೇನೆ."

ಬೃಹಸ್ಪತಿಯು ಹೇಳುತ್ತಾನೆ :

ಸಾನ್ತ್ವಮೇಕಪದಂ ಶಕ್ರ ಪುರುಷಃ ಸಮ್ಯಗಾಚರನ್ ।
ಪ್ರಮಾಣಂ ಸರ್ವಭೂತಾನಾಂ ಯಶಶ್ಚೈವಾಪ್ನುಯಾನ್ಮಹತ್ ॥೩॥

"ಇಂದ್ರ! 'ಸಾಂತ್ವನ' ಎಂಬುದೇ ಆ ಒಂದು ಪದವಾಗಿದೆ. ಅದೊಂದು ಗುಣ. ಆ ಗುಣವನ್ನು ಚೆನ್ನಾಗಿ ಆಚರಣೆಯಲ್ಲಿ ತಂದುಕೊಂಡವನು ಎಲ್ಲ ಪ್ರಾಣಿಗಳಿಗೂ ಪ್ರಿಯನಾಗುತ್ತಾನೆ. (ಪ್ರಮಾಣಭೂತನಾಗುತ್ತಾನೆ) ಮತ್ತು ಮಹಾಯಶಸ್ಸನ್ನೂ ಗಳಿಸುತ್ತಾನೆ.

ಏತದೇಕಪದಂ ಶಕ್ರ ಸರ್ವಲೋಕಸುಖಾವಹಮ್ ।
ಆಚರನ್ಸರ್ವಭೂತೇಷು ಪ್ರಿಯೋ ಭವತಿ ಸರ್ವದಾ ॥೪॥

ಶಕ್ರ! ಈ ಒಂದು ಪದವೇ ಸರ್ವಲೋಕಗಳಿಗೂ ಸುಖದಾಯಕ ವಾಗಿದೆ. ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಾಂತ್ವನವನ್ನು ಬಳಸಿದ್ದೇ ಆದರೆ–ಎಲ್ಲ ಕಾಲಗಳಲ್ಲಿಯೂ ಅವನು ಸರ್ವಪ್ರಾಣಿಗಳಿಗೂ ಪ್ರಿಯನಾಗಿರು ತ್ತಾನೆ.

ಯೋ ಹಿ ನಾಭಾಷತೇ ಕಿಂಚಿತ್ಸರ್ವದಾ ಭ್ರುಕುಟೀಮುಖಃ ।
ದ್ವೇಷ್ಯೋ ಭವತಿ ಭೂತಾನಾಂ ಸ ಸಾನ್ತ್ವಮಿಹ ನಾಚರನ್ ॥೫॥

ಯಾವಾಗಲೂ ಹುಬ್ಬುಗಳನ್ನು ಗಂಟುಹಾಕಿಕೊಂಡೇ ಇದ್ದು ಯಾರೊಡನೆಯೂ ಯಾವ ವಿಷಯವನ್ನೂ ಮಾತನಾಡುವುದಿಲ್ಲವೋ–

ಅಂತಹ ಮನುಷ್ಯನು 'ಸಾಂತ್ವನ'ವನ್ನು ಬಳಸದೇ ಇರುವುದರಿಂದ ಎಲ್ಲ ಪ್ರಾಣಿಗಳಿಗೂ ದ್ವೇಷ್ಯನಾಗುತ್ತಾನೆ.

ಯಸ್ತು ಸರ್ವಮಭಿಪ್ರೇಕ್ಷ್ಯ ಪೂರ್ವಮೇವಾಭಿಭಾಷತೇ ।
ಸ್ಮಿತಪೂರ್ವಾಭಿಭಾಷೀ ಚ ತಸ್ಯ ಲೋಕಃ ಪ್ರಸೀದತಿ ॥೬॥

ಯಾವನು ಎಲ್ಲವನ್ನೂ (ಎಲ್ಲರನ್ನೂ) ನೋಡುತ್ತಾ ಅವರು ಮಾತನಾಡುವುದಕ್ಕಿಂತಲೂ ಮೊದಲೇ ಮಾತನಾಡುವನೋ ಮತ್ತು ನಗು-ನಗುತ್ತಾ ಮಾತನಾಡುವನೋ ಅಂತಹವನ ವಿಷಯದಲ್ಲಿ ಲೋಕವೇ ಪ್ರಸನ್ನವಾಗಿರುತ್ತದೆ. (ಸ್ಮಿತಭಾಷಿಯನ್ನೂ ಪೂರ್ವಭಾಷಿಯನ್ನೂ ಎಲ್ಲರೂ ಪ್ರೀತಿಸುತ್ತಾರೆ.)

ದಾನಮೇವ ಹಿ ಸರ್ವತ್ರ ಸಾನ್ತ್ವೇನಾನಭಿಜಲ್ಪಿತಮ್ ।
ನ ಪ್ರೀಣಯತಿ ಭೂತಾನಿ ನಿರ್ವ್ಯಂಜನಮಿವಾಶನಮ್ ॥೭॥

ಯಾವ ರೀತಿಯಲ್ಲಿ ವ್ಯಂಜನವಿಲ್ಲದ (ಉಪ್ಪಿನಕಾಯಿ, ಪಲ್ಯ ಮೊದ ಲಾದುವುಗಳಿಲ್ಲದ) ಭೋಜನವು ಮನುಷ್ಯನಿಗೆ ತೃಪ್ತಿಯನ್ನುಂಟುಮಾಡುವು ದಿಲ್ಲವೋ–ಹಾಗೆಯೇ ಮಧುರವಚನಪೂರ್ವಕವಾಗಿಲ್ಲದ ದಾನವು ಮನುಷ್ಯ ರಿಗೆ ಸಂತೋಷವನ್ನುಂಟುಮಾಡುವುದಿಲ್ಲ.

ಆದಾನಾದಪಿ ಭೂತಾನಾಂ ಮಧುರಾಮೀರಯನ್ಗಿರಮ್ ।
ಸರ್ವಲೋಕಮಿಮಂ ಶಕ್ರ ಸಾನ್ತ್ವೇನ ಕುರುತೇ ವಶೇ ॥೮॥

ಇಂದ್ರ! ಪ್ರಾಣಿಗಳಿಂದ ತನಗೆ ಬೇಕಾದ ವಸ್ತುವನ್ನು ಪಡೆದುಕೊಂಡ ಬಳಿಕ ಮಧುರವಾದ ಮಾತುಗಳನ್ನಾಡುತ್ತಾ ಎಲ್ಲ ಲೋಕಗಳನ್ನೂ ಮಧುರ ವಚನಗಳಿಂದಲೇ ವಶಪಡಿಸಿಕೊಳ್ಳಲು ಸಮರ್ಥನಾಗುತ್ತಾನೆ.

ತಸ್ಮಾತ್ಸಾನ್ತ್ವಂ ಪ್ರಯೋಕ್ತವ್ಯಂ ದಣ್ಡಮಾಧಿತ್ಸತೋಽಪಿ ಹಿ ।
ಫಲಂ ಚ ಜನಯತ್ಯೇವಂ ನ ಚಾಸ್ಯೋದ್ವಿಜತೇ ಜನಃ ॥೯॥

ಒಬ್ಬನನ್ನು ಶಿಕ್ಷಿಸುವ ಇಚ್ಛೆಯೇ ರಾಜನಿಗಿದ್ದರೂ–ಅವನೊಡನೆಯೂ ರಾಜನು ಸಾಂತ್ವನದ ಮಾತುಗಳನ್ನೇ ಆಡಬೇಕು. ಹೀಗೆ ಸಾಂತ್ವನಪೂರ್ವಕ ವಾಗಿ ಎಲ್ಲರೊಡನೆಯೂ ಮಾತನಾಡುವುದರಿಂದ ಹೆಚ್ಚು ಪ್ರಯೋಜನವಿದೆ. ರಾಜನು ಮಧುರಭಾಷಿಯಾದರೆ ಜನರು ಉದ್ವಿಗ್ನರಾಗುವುದಿಲ್ಲ.

ಸುಕೃತಸ್ಯ ಹಿ ಸಾನ್ತ್ವಸ್ಯ ಶ್ಲಕ್ಷ್ಣಸ್ಯ ಮಧುರಸ್ಯ ಚ ।
ಸಮ್ಯಗಾಸೇವ್ಯಮಾನಸ್ಯ ತುಲ್ಯಂ ಜಾತು ನ ವಿದ್ಯತೇ ॥೧೦॥

ಚೆನ್ನಾಗಿ ಅನುನಯಪೂರ್ವಕವಾಗಿ ಸಮಾಧಾನಗೊಳಿಸುವಿಕೆ, ಸ್ನೇಹ ಪೂರ್ಣವಾಗಿ–ಸುಮಧುರವಾಗಿ ಮಾತನಾಡುವಿಕೆ–ಇವುಗಳನ್ನು ಆಶ್ರಯಿ ಸಿರುವವನು ವಿಶ್ವದ ಎಲ್ಲವನ್ನೂ ವಶೀಕರಣಮಾಡಿಕೊಳ್ಳಬಲ್ಲನು. ಅವುಗಳಿಗೆ ಸಮಾನವಾಗಿ ಜನರನ್ನು ಸಂಗ್ರಹಿಸಲು ಬೇರೆ ಯಾವುದರಿಂದಲೂ ಸಾಧ್ಯವಾಗುವುದಿಲ್ಲ."

ಯುಧಿಷ್ಠಿರ! ಬೃಹಸ್ಪತಿಯು ಹೀಗೆ ಹೇಳಿದನಂತರ ಇಂದ್ರನು ಗುರುವು ಹೇಳಿದಂತೆಯೇ ಆಚರಿಸಿದನು. ಹಾಗೆಯೇ ನೀನೂ ಕೂಡ ಸಾಂತ್ವನಗುಣವನ್ನೇ ಆಚರಣೆಯಲ್ಲಿಟ್ಟುಕೋ. ಅದರಿಂದ ಪ್ರಜಾಸಂಗ್ರಹ ವಾಗುವುದು."

ಌಳನೆಯ ಅಧ್ಯಾಯವು ಮುಗಿಯಿತು.

ಌ೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ವ್ಯವಹಾರ : ಮಂತ್ರಿಮಂಡಲದ ಸಂಘಟನೆ : ಮಂತ್ರಿ–ಸೇನಾಪತಿ–ದೂತರ ಗುಣ–ಲಕ್ಷಣಗಳು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಸ್ವಿದಿಹ ರಾಜೇನ್ದ್ರ ಪಾಲಯನ್ಪಾರ್ಥಿವಃ ಪ್ರಜಾಃ ।
ಪ್ರೀತಿಂ ಧರ್ಮವಿಶೇಷೇಣ ಕೀರ್ತಿಮಾಪ್ನೋತಿ ಶಾಶ್ವತೀಮ್ ॥೧॥

"ರಾಜೇಂದ್ರ! ಈ ಪ್ರಪಂಚದಲ್ಲಿರುವ ರಾಜನು ಯಾವ ವಿಶೇಷ ಧರ್ಮದಿಂದ ಪ್ರಜೆಗಳನ್ನು ಪಾಲನೆಮಾಡಿದರೆ–ಪ್ರಜೆಗಳ ಪ್ರೀತಿಯನ್ನೂ ಮತ್ತು ಶಾಶ್ವತವಾದ ಕೀರ್ತಿಯನ್ನೂ ಪಡೆದುಕೊಳ್ಳುತ್ತಾನೆ?"

ಭೀಷ್ಮನು ಹೇಳುತ್ತಾನೆ :

ವ್ಯವಹಾರೇಣ ಶುದ್ಧೇನ ಪ್ರಜಾಪಾಲನತತ್ಪರಃ ।
ಪ್ರಾಪ್ಯ ಧರ್ಮಂ ಚ ಕೀರ್ತಿಂ ಚ ಲೋಕಾವಾಪ್ನೋತ್ಯುಭೌ ಶುಚಿಃ ॥

"ಯುಧಿಷ್ಠಿರ! ಯಾವ ರಾಜನು ಶುದ್ಧವಾದ ವ್ಯವಹಾರವುಳ್ಳವ

ನಾಗಿ ಅಂತಃಶುದ್ಧಿ-ಬಹಿಃಶುದ್ಧಿಗಳಿಂದ ಕೂಡಿದವನಾಗಿರುವನೋ ಪ್ರಜಾ ಪಾಲನತತ್ಪರನಾಗಿರುವನೋ–ಅಂತಹ ರಾಜನು ಧರ್ಮ-ಕೀರ್ತಿಗಳೆರಡನ್ನೂ ಸಾಧಿಸಿಕೊಂಡು ಇಹಲೋಕ-ಪರಲೋಕಗಳೆರಡನ್ನೂ ಹೊಂದುತ್ತಾನೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೀದೃಶೈರ್ವ್ಯವಹಾರೈಸ್ತು ಕೈಶ್ಚ ವ್ಯವಹರೇನ್ನೃಪಃ ।
ಏತತ್ಪೃಷ್ಟೋ ಮಹಾಪ್ರಾಜ್ಞ ಯಥಾವದ್ವಕ್ತುಮರ್ಹಸಿ ॥೩॥

"ಮಹಾಪ್ರಾಜ್ಞನೇ! ಎಂತಹ ವ್ಯವಹಾರಗಳಿಂದ ಎಂತಹವರೊಡನೆ ರಾಜನು ಹೀಗೆ ವ್ಯವಹರಿಸಬೇಕು? ನನ್ನ ಈ ಪ್ರಶ್ನೆಗೆ ನೀನು ಯಥಾವತ್ತಾದ ಉತ್ತರವನ್ನು ಹೇಳು.

ಯೇ ಚೈವ ಪೂರ್ವಂ ಕಥಿತಾ ಗುಣಾಸ್ತೇ ಪುರುಷಂ ಪ್ರತಿ ।
ನೈಕಸ್ಮಿನ್ಪುರುಷೇ ಹ್ಯೇತೇ ವಿದ್ಯಂತ ಇತಿ ಮೇ ಮತಿಃ ॥೪॥

ನೀನು ಈ ಹಿಂದೆ ಒಬ್ಬ ಪುರುಷನಲ್ಲಿ ಯಾವ ಯಾವ ಗುಣಗಳಿರಬೇಕೆಂದು ಹೇಳಿರುವೆಯೋ–ಆ ಎಲ್ಲ ಗುಣಗಳೂ ಒಬ್ಬನಲ್ಲಿಯೇ ಇರಲಾರವೆಂಬುದು ನನ್ನ ಅಭಿಪ್ರಾಯವಾಗಿದೆ."

ಏವಮೇತನ್ಮಹಾಪ್ರಾಜ್ಞ ಯಥಾ ವದಸಿ ಬುದ್ಧಿಮಾನ್ ।
ದುರ್ಲಭಃ ಪುರುಷಃ ಕಶ್ಚಿದೇಭಿರ್ಯುಕ್ತೋ ಗುಣೈಃ ಶುಭೈಃ ॥೫॥

"ಮಹಾಪ್ರಾಜ್ಞನೇ! ಬುದ್ಧಿವಂತನೇ! ಯುಧಿಷ್ಠಿರ! ಇದು ಹೀಗೆಯೇ ಸರಿ. ನೀನು ಹೇಳಿದಂತೆ ನಾನು ಹೇಳಿರುವ ಸಕಲಗುಣಗಳಿಂದಲೂ ಸಂಪನ್ನನಾದ ಒಬ್ಬ ಪುರುಷನಾದರೂ ಸಿಕ್ಕುವುದು ಕಷ್ಟವೇ ಸರಿ.

ಆದರೂ ದುರ್ಲಭವಾದ ಈ ಶೀಲವನ್ನು ಪ್ರಯತ್ನಪೂರ್ವಕವಾಗಿ ಸಂಕ್ಷೇಪವಾಗಿ ಹೇಳುತ್ತೇನೆ. ನೀನು ಯಾವ ರೀತಿಯಲ್ಲಿ ಎಂತಹ ಅಮಾತ್ಯರನ್ನು ಇಟ್ಟುಕೊಳ್ಳಬೇಕು–ಎಂಬುದನ್ನೂ ಹೇಳುತ್ತೇನೆ :

ಚತುರೋ ಬ್ರಾಹ್ಮಣಾನ್ವೈದ್ಯಾನ್ಪ್ರಗಲ್ಭಾನ್ಸ್ನಾತಕಾಞ್ಶುಚೀನ್ ।
ಕ್ಷತ್ರಿಯಾಂಶ್ಚ ತಥಾ ಚಾಷ್ಟೌ ಬಲಿನಃ ಶಸ್ತ್ರಪಾಣಿನಃ ॥೭॥

ವೈಶ್ಯಾನ್ವಿತ್ತೇನ ಸಮ್ಪನ್ನಾನೇಕವಿಂಶತಿಸಂಖ್ಯಯಾ ।
ತ್ರೀಂಶ್ಚ ಶೂದ್ರಾನ್ವಿನೀತಾಂಶ್ಚ ಶುಚೀನ್ಕರ್ಮಣಿ ಪೂರ್ವಕೇ ॥೮॥

ಅಷ್ಟಾಭಿಶ್ಚ ಗುಣೈರ್ಯುಕ್ತಂ ಸೂತಂ ಪೌರಾಣಿಕಂ ತಥಾ ।
ಪಞ್ಚಾಶದ್ವರ್ಷವಯಸಂ ಪ್ರಗಲ್ಭಮನಸೂಯಕಮ್ ॥೯॥

ಶ್ರುತಿಸ್ಮೃತಿಸಮಾಯುಕ್ತಂ ವಿನೀತಂ ಸಮದರ್ಶಿನಮ್ ।
ಕಾರ್ಯೇ ವಿವದಮಾನಾನಾಂ ಶಕ್ತಮರ್ಥೇಷ್ವಲೋಲುಪಮ್ ॥೧೦॥

ವರ್ಜಿತಂ ಚೈವ ವ್ಯಸನೈಃ ಸುಘೋರೈಃ ಸಪ್ತಭಿರ್ಭೃಶಮ್ ।
ಅಷ್ಟಾನಾಂ ಮನ್ತ್ರಿಣಾಂ ಮಧ್ಯೇ ಮನ್ತ್ರಂ ರಾಜೋಪಧಾರಯೇತ್ ॥೧೧॥

ಪ್ರತಿಭೆಯಿಂದ ಕೂಡಿರುವ, ಅಂತಃಕರಣಶುದ್ಧಿಯಿರುವ, ಸ್ನಾತಕರಾದ, ವಿದ್ವಾಂಸರಾದ ನಾಲ್ವರು ಬ್ರಾಹ್ಮಣರನ್ನೂ–ಬಲಿಷ್ಠರಾದ, ಶಸ್ತ್ರಪಾಣಿಗಳಾದ ಎಂಟು ಮಂದಿ ಕ್ಷತ್ರಿಯರನ್ನೂ–ಐಶ್ವರ್ಯಸಂಪನ್ನರಾದ ಇಪ್ಪತ್ತೊಂದು ಮಂದಿ ವೈಶ್ಯರನ್ನೂ–ಪವಿತ್ರವಾದ ಆಚಾರ-ವ್ಯವಹಾರಗಳಿಂದ ಕೂಡಿರುವ ವಿನಯಶೀಲರಾದ ಮೂವರು ಶೂದ್ರರನ್ನೂ–ಎಂಟುಗುಣಗಳಿಂದ ಯುಕ್ತನಾದ, ಪುರಾಣಗಳನ್ನು ಚೆನ್ನಾಗಿ ತಿಳಿದಿರುವ ಸೂತನನ್ನೂ ಸೇರಿಸಿಕೊಂಡು ಮೂವತ್ತೇಳು ಜನರಿಂದ ಕೂಡಿರುವ ಒಂದು ಮಹಾಮಂತ್ರಿಮಂಡಲವನ್ನು ರಾಜನು ರಚಿಸಬೇಕು.*

ಸೂತನ ವಯಸ್ಸು ಐವತ್ತಕ್ಕೆ ಕಡಿಮೆಯಿರಬಾರದು. ಅವನು ಪ್ರತಿಭಾ

---

* ಸೂತನಿಗಿರಬೇಕಾದ ಎಂಟು ಗುಣಗಳು : ಶುಶ್ರೂಷಾ, ಶ್ರವಣಂ, ಗ್ರಹಣಂ, ಧಾರಣಂ, ಊಹನಂ, ಅಪೋಹನಂ, ವಿಜ್ಞಾನಂ, ತತ್ತ್ವಜ್ಞಾನಂ ಚ = ಶುಶ್ರೂಷೆ ಮಾಡುವುದು, ಹೇಳಿದುದನ್ನು ಕೇಳುವುದು, ಕೇಳಿದುದನ್ನು ಗ್ರಹಣಮಾಡುವುದು, ಗ್ರಹಣಮಾಡಿದುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು, ಇಂತಹ ಕಾರ್ಯದ ಪರಿಣಾಮ ವೇನಾಗುವುದೆಂಬುದನ್ನು ಊಹಿಸುವುದು, ಕಾರ್ಯವು ಸಿದ್ಧಿಯಾಗದಿದ್ದರೆ ಮುಂದೇನು ಮಾಡಬೇಕೆಂಬುದನ್ನು ಯೋಚಿಸುವುದು–ಶಿಲ್ಪವೇ ಮೊದಲಾದ ವಿಜ್ಞಾನಗಳನ್ನು ತಿಳಿದಿರುವುದು, ತತ್ತ್ವಜ್ಞಾನವನ್ನು ತಿಳಿದಿರುವುದು–ಇವು ಸೂತನಿಗಿರಬೇಕಾದ ಎಂಟು ಗುಣಗಳು. ಇಲ್ಲಿ ಸೂತ ಎಂದರೆ ಸೂತಜಾತಿಯವನಲ್ಲ. ಪೌರಾಣಿಕನಾದ ಸೂತ.

ಶಾಲಿಯಾಗಿರಬೇಕು. ಇತರರಲ್ಲಿ ದೋಷವನ್ನೆಣಿಸುವವನಾಗಬಾರದು. ಶ್ರುತಿ-ಸ್ಮೃತಿಗಳ ಜ್ಞಾನದಿಂದ ಕೂಡಿದವನಾಗಿರಬೇಕು. ವಿನೀತನಾಗಿರ ಬೇಕು. ಸರ್ವಸಮಭಾವದಿಂದಿರಬೇಕು. ಕಾರ್ಯದ ಸಂಬಂಧದಲ್ಲಿ ವಿವಾದ ಮಾಡುವ ಎರಡು ಪಕ್ಷಗಳನ್ನೂ ಸೇರಿಸಿ ಸಮಾಧಾನಗೊಳಿಸುವ ಸಾಮರ್ಥ್ಯ ವನ್ನು ಹೊಂದಿರಬೇಕು. ಲೋಭರಹಿತನಾಗಿರಬೇಕು. ಬಹು ಭಯಂಕರ ಗಳಾದ *ಏಳು ಬಗೆಯ ದುರ್ವ್ಯಸನಗಳಿಂದ ದೂರವಿರುವವನಾಗಬೇಕು. ಇಂತಹ ಒಬ್ಬ ಸೂತನನ್ನೂ, ನಾಲ್ವರು ಬ್ರಾಹ್ಮಣರನ್ನೂ ಮತ್ತು ಮೂವರು ಶೂದ್ರರನ್ನೂ ಒಟ್ಟು ಎಂಟುಮಂದಿ ಮಂತ್ರಿಗಳನ್ನೊಳಗೊಂಡಿರುವ ಉಪಮಂತ್ರಿಮಂಡಲದ ಮಧ್ಯದಲ್ಲಿ ರಾಜನು ರಾಜರಹಸ್ಯಗಳನ್ನು ಚರ್ಚಿಸಬೇಕು.

ತತಃ ಸಮ್ಪ್ರೇಷಯೇದ್ರಾಷ್ಟ್ರೇ ರಾಷ್ಟ್ರೀಯಾಯ ಚ ದರ್ಶಯೇತ್ ।
ಅನೇನ ವ್ಯವಹಾರೇಣ ದ್ರಷ್ಟವ್ಯಾಸ್ತೇ ಪ್ರಜಾಃ ಸದಾ ॥೧೨॥

ಆ ಮಂತ್ರಿಮಂಡಲದಲ್ಲಿ ಅಂಗೀಕೃತವಾದ ನಿರ್ಣಯವನ್ನು ದೇಶದಲ್ಲಿ ಪ್ರಚುರಗೊಳಿಸಬೇಕು. ರಾಜನ ಭಾವಮೈದುನನೇ ಮೊದಲಾದ ಮೇಲಿನ ಅಧಿಕಾರಿಗಳಿಗೂ ಆ ನಿರ್ಣಯದ ಪ್ರಯೋಜನವೇನೆಂಬುದನ್ನು ಮನಗಾಣಿಸಿ ಕೊಡಬೇಕು. ಈ ವಿಧವಾದ ವ್ಯವಹಾರವನ್ನಿಟ್ಟುಕೊಂಡು ಸರ್ವಕಾಲಗಳ ಲ್ಲಿಯೂ ಪ್ರಜೆಗಳನ್ನು ನೋಡಿಕೊಳ್ಳುತ್ತಿರಬೇಕು.

ನ ಚಾಪಿ ಗೂಢಂ ದ್ರವ್ಯಂ ತೇ ಗ್ರಾಹ್ಯಂ ಕಾರ್ಯೋಪಘಾತಕಮ್ ।
ಕಾರ್ಯೇ ಖಲು ವಿಪನ್ನೇ ತ್ವಾಂ ಸೋಽಧರ್ಮಸ್ತಾಂಶ್ಚ
ಪೀಡಯೇತ್ ॥೧೩॥

ಯುಧಿಷ್ಠಿರ! ನೀನು ಯಾರಿಂದಲೂ ಯಾವ ವಿಧವಾದ ಗುಪ್ತಧನ ವನ್ನೂ ತೆಗೆದುಕೊಳ್ಳಬಾರದು. ಏಕೆಂದರೆ : ಅದು ನಿನ್ನ ಕರ್ತವ್ಯವನ್ನೂ

* ಏಳು ವ್ಯಸನಗಳು. ಮೃಗಯಾಕ್ಷಾಃ ಸ್ತ್ರೀಯಃ ಪಾನಂ –ಬೇಟೆಯಾಡುವುದು, ಜೂಜಾಡುವುದು, ಸದಾ ಸ್ತ್ರೀಸಹವಾಸದಲ್ಲಿರುವುದು, ಸದಾ ಮದ್ಯಪಾನಪ್ರಿಯನಾಗಿರು ವುದು–ಇವು ನಾಲ್ಕು ಕಾಮಜನ್ಯವಾದ ವ್ಯಸನಗಳು. ದಂಡಪಾತನಂ, ವಾಕ್ಪಾರುಷ್ಯಂ, ಅರ್ಥದೂಷಣಂ–ಕಠೋರವಾಗಿ ಶಿಕ್ಷಿಸುವುದು, ಕಠಿನವಾಗಿ ಮಾತನಾಡುವುದು ಮತ್ತು ಅರ್ಥವನ್ನು ದೂಷಿಸುವುದು–ಇವು ಮೂರು ಕ್ರೋಧಜನ್ಯವಾದ ವ್ಯಸನಗಳು.

ನ್ಯಾಯಧರ್ಮವನ್ನೂ ವಿನಾಶಗೊಳಿಸುತ್ತದೆ. ನ್ಯಾಯಧರ್ಮದ ನಾಶವೇನಾದರೂ ಆದರೆ ಅದು ನಿನಗೂ ಗುಪ್ತಧನವನ್ನು ಕೊಟ್ಟವರಿಗೂ ಪೀಡೆಯನ್ನುಂಟುಮಾಡುತ್ತದೆ.

ವಿದ್ರವೇಚ್ಚೈವ ರಾಷ್ಟ್ರಂ ತೇ ಶ್ಯೇನಾತ್ಪಕ್ಷಿಗಣಾ ಇವ ।
ಪರಿಸ್ರವೇಚ್ಚ ಸತತಂ ನೌರ್ವಿಶೀರ್ಣೇವ ಸಾಗರೇ ॥೧೪॥

ಗುಪ್ತಧನವನ್ನು ತೆಗೆದುಕೊಂಡರೆ–ಗಿಡಗವನ್ನು ಕಂಡು ಹೆದರಿ ದೂರಕ್ಕೆ ಹೋಗುವ ಹಕ್ಕಿಗಳಂತೆ–ಜನರು ಹೆದರಿ ದೂರಕ್ಕೆ ಓಡಿಹೋಗುತ್ತಾರೆ. ಸಾಗರದಲ್ಲಿ ಒಡೆದ ಹಡಗು ನೀರುತುಂಬಿ ಸುತ್ತುತ್ತಿರುವಂತೆ ದಿಕ್ಕುತೋಚದೆ ಜನರು ಸುತ್ತಾಡುತ್ತಾರೆ. (ಕೊನೆಗೆ ಮುಳುಗಿಹೋಗುತ್ತಾರೆ.)

ಪ್ರಜಾಃ ಪಾಲಯತೋಽಸಮ್ಯಗಧರ್ಮೇಣೇಹ ಭೂಪತೇಃ ।
ಹಾರ್ದಂ ಭಯಂ ಸಮ್ಭವತಿ ಸ್ವರ್ಗಶ್ಚಾಸ್ಯ ವಿರುದ್ಧ್ಯತೇ ॥೧೫॥

ಯಾವ ರಾಜನು ಚೆನ್ನಾಗಿ ಪ್ರಜೆಗಳನ್ನು ಪರಿಪಾಲಿಸದೇ ಅಧರ್ಮದಿಂದ ರಾಜ್ಯಭಾರವನ್ನು ಮಾಡುವನೋ–ಅಂತಹ ರಾಜನ ಹೃದಯದಲ್ಲಿ ಭಯವು ಆವರಿಸುತ್ತದೆ. ಅವನಿಗೆ ಪರಲೋಕವೂ ವಿಪರೀತವಾಗಿ ಪರಿಣಮಿಸುತ್ತದೆ. (ಪರಲೋಕವೂ ಸಿಗುವುದಿಲ್ಲ.)

ಅಥ ಯೋಽಧರ್ಮತಃ ಪಾತಿ ರಾಜಾಮಾತ್ಯೋಽಥವಾತ್ಮಜಃ ।
ಧರ್ಮಾಸನೇ ಸಂನಿಯುಕ್ತೋ ಧರ್ಮಮೂಲೇ ನರರ್ಷಭ ॥೧೬॥

ಕಾರ್ಯೇಷ್ವಧಿಕೃತಾಃ ಸಮ್ಯಗಕುರ್ವನ್ತೋ ನೃಪಾನುಗಾಃ ।
ಆತ್ಮಾನಂ ಪುರತಃ ಕೃತ್ವಾ ಯಾನ್ತ್ಯಧಃ ಸಹಪಾರ್ಥಿವಾಃ ॥೧೭॥

ರಾಜನಾಗಲೀ, ಅಮಾತ್ಯನಾಗಲೀ, ರಾಜಪುತ್ರನಾಗಲೀ–ಧರ್ಮಮೂಲವಾದ ಧರ್ಮಾಸನದಲ್ಲಿ ಕುಳಿತು ಅಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದರೆ ನರಕಕ್ಕೆ ಹೋಗುತ್ತಾನೆ. ರಾಜಕಾರ್ಯದಲ್ಲಿ ನಿಯುಕ್ತರಾದ ರಾಜನ ಅನುಯಾಯಿಗಳು ತಮ್ಮ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡದಿದ್ದರೆ–ತಮ್ಮನ್ನೇ ಮುಂದೆಮಾಡಿಕೊಂಡು ತಮ್ಮನ್ನು ನಿಯಮಿಸಿದ ರಾಜರೊಡನೆಯೇ ನರಕದಲ್ಲಿ ಬೀಳುತ್ತಾರೆ.

ಬಲಾತ್ಕೃತಾನಾಂ ಬಲಿಭಿಃ ಕೃಪಣಂ ಬಹು ಜಲ್ಪತಾಮ್ ।
ನಾಥೋ ವೈ ಭೂಮಿಪೋ ನಿತ್ಯಮನಾಥಾನಾಂ ನೃಣಾಂ ಭವೇತ್ ॥

ಅಂತಹ ಸಂದರ್ಭದಲ್ಲಿ ಬಲಿಷ್ಠರ ಬಲಾತ್ಕಾರಕ್ಕೊಳಗಾಗಿ ದೈನ್ಯಭಾವದಿಂದ ಕೂಗಿಕೊಳ್ಳುವ ಅನಾಥರಾದ ಜನರಿಗೆ ರಾಜನು ರಕ್ಷಣೆಯನ್ನು ಕೊಡುವ ನಾಥನಾಗಬೇಕು.

ತತಃ ಸಾಕ್ಷಿಬಲಂ ಸಾಧು ದ್ವೈಧವಾದಕೃತಂ ಭವೇತ್ ।
ಅಸಾಕ್ಷಿಕಮನಾಥಂ ವಾ ಪರೀಕ್ಷ್ಯಂ ತದ್ವಿಶೇಷತಃ ॥೧೯॥

ಹಣವನ್ನು ತೆಗೆದುಕೊಂಡವನು ನ್ಯಾಯಾಧೀಶರ ಮುಂದೆ 'ಹಣವನ್ನು ತೆಗೆದುಕೊಂಡುದು ಉಂಟು'–ಎಂದು ಹೇಳಿದರೆ, ಹಣವನ್ನು ಎಷ್ಟು ದಿವಸಗಳಲ್ಲಿ ಕೊಡಬೇಕೆನ್ನುವ ಬಗೆಗೆ ನ್ಯಾಯಾಧೀಶನು ತೀರ್ಪನ್ನು ಕೊಡುತ್ತಾನೆ. ಆ ಸಂದರ್ಭದಲ್ಲಿ ಸಾಕ್ಷಿ-ಪ್ರಮಾಣಗಳ ಆವಶ್ಯಕತೆಯೇ ಇರುವುದಿಲ್ಲ. ಆದರೆ ಹಣವನ್ನು ತೆಗೆದುಕೊಂಡವನು ತೆಗೆದುಕೊಂಡಿಲ್ಲವೆಂದರೆ–ಹಣವನ್ನು ಕೊಡದೆಯೇ ಕೊಟ್ಟಿರುವೆನೆಂದು ಲೇವಾದೇವಿ ಮಾಡುವವನು ಹೇಳಿದರೆ–ಕೊಟ್ಟ ಹೇಳಿಕೆಯನ್ನು ಊರ್ಜಿತಗೊಳಿಸಲು ಪ್ರಮಾಣದೊಂದಿಗೆ ಸಾಕ್ಷಿಯೂ ಬೇಕಾಗುತ್ತದೆ. ಸಾಕ್ಷಿವಾದವನ್ನು ಕೇಳಿ ಅನಂತರ ಎರಡೂ ಪಕ್ಷಗಳ ಹೇಳಿಕೆಗಳನ್ನು ತೆಗೆದುಕೊಂಡು ನ್ಯಾಯಾಧೀಶನು ತೀರ್ಪು ಕೊಡಬೇಕಾಗುತ್ತದೆ. ಆದರೆ ಸಾಕ್ಷಿಗಳು ಐಶ್ವರ್ಯವಂತರಿಗೆ ಸಿಕ್ಕುವಷ್ಟು ಸುಲಭವಾಗಿ ಅನಾಥರಿಗೆ ಸಿಕ್ಕುವುದಿಲ್ಲ. ಅಥವಾ ಸಾಕ್ಷಿಗಳೇ ಇಲ್ಲದ ವ್ಯವಹಾರಗಳೂ ಇರಬಹುದು. ಸಾಕ್ಷಿಗಳಿಲ್ಲದ ಅನಾಥರನ್ನು ವಿಶೇಷರೀತಿ ಯಲ್ಲಿ ಪರೀಕ್ಷಿಸಿ ನ್ಯಾಯವು ಸಿಕ್ಕುವಂತೆ ಮಾಡುವುದು ರಾಜನ ಕರ್ತವ್ಯ ವಾಗಿರುತ್ತದೆ.

ಅಪರಾಧಾನುರೂಪಂ ಚ ದಣ್ಡಂ ಪಾಪೇಷು ಧಾರಯೇತ್ ।
ವಿಯೋಜಯೇದ್ಧನೈರ್ಋದ್ಧಾನಧನಾನಥ ಬನ್ಧನೈಃ ॥೨೦॥

ಅಪರಾಧಿಗಳಿಗೆ ಅವರವರ ಅಪರಾಧಗಳಿಗೆ ಅನುಗುಣವಾದ ಶಿಕ್ಷೆಯನ್ನೇ ಕೊಡಬೇಕು. ಅಪರಾಧಿಯಾದವನು ಧನಿಕನಾಗಿದ್ದರೆ ಅವನನ್ನು ಧನದಂಡದಿಂದ ವಿಯುಕ್ತಿಗೊಳಿಸಬೇಕು. (ಧನದಂಡರೂಪವಾದ ಶಿಕ್ಷೆಯನ್ನೇ

ವಿಧಿಸಬೇಕು.) ಅಪರಾಧಿಯು ನಿರ್ಧನನಾಗಿದ್ದರೆ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಬೇಕು.

ವಿನಯೇಚ್ಚಾಪಿ ದುರ್ವೃತ್ತಾನ್ಪ್ರಹಾರೈಶ್ಚಾಪಿ ಪಾರ್ಥಿವಃ ।
ಸಾನ್ತ್ವೇನೋಪಪ್ರದಾನೇನ ಶಿಷ್ಟಾಂಶ್ಚ ಪರಿಪಾಲಯೇತ್ ॥೨೧॥

ದುರಾಚಾರಿಗಳನ್ನು ಪ್ರಹಾರಗಳಿಂದಾದರೂ (ಥಡಿಏಟಿನ ಶಿಕ್ಷೆಯಿಂದಾದರೂ) ಸನ್ಮಾರ್ಗಕ್ಕೆ ತರಲು ಪ್ರಯತ್ನಿಸಬೇಕು. ಸತ್ಪುರುಷರನ್ನು ಸಾಂತ್ವವಚನಗಳಿಂದಲೂ–ವಸ್ತುಗಳ ಪ್ರದಾನದಿಂದಲೂ ಪರಿಪಾಲಿಸಬೇಕು.

ರಾಜ್ಞೋ ವಧಂ ಚಿಕೀರ್ಷೇದ್ಯಸ್ತಸ್ಯ ಚಿತ್ರೋ ವಧೋ ಭವೇತ್ ।
ಆದೀಪಕಸ್ಯ ಸ್ತೇನಸ್ಯ ವರ್ಣಸಂಕರಿಕಸ್ಯ ಚ ॥೨೨॥

ರಾಜನನ್ನು ಕೊಲ್ಲಲು ಸಂಚುಹೂಡಿದವನಿಗೆ, ಮನೆಗಾಗಲೀ–ಗ್ರಾಮಕ್ಕಾಗಲೀ ಬೆಂಕಿಯಿಡಲು ಪ್ರಯತ್ನಿಸಿದವನಿಗೆ, ಕಳ್ಳನಿಗೆ, ವ್ಯಭಿಚಾರದ ಮೂಲಕವಾಗಿ ವರ್ಣಸಂಕರವನ್ನು ಮಾಡುವವನಿಗೆ–ಚಿತ್ರಹಿಂಸೆಯನ್ನು ಕೊಟ್ಟು ಅನಂತರವೇ ಅವನನ್ನು ಕೊಲ್ಲಬೇಕು.

ಸಮ್ಯಕ್ಪ್ರಣಯತೋ ದಣ್ಡಂ ಭೂಮಿಪಸ್ಯ ವಿಶಾಮ್ಪತೇ ।
ಯುಕ್ತಸ್ಯ ವಾ ನಾಸ್ತ್ಯಧರ್ಮೋ ಧರ್ಮ ಏವ ಹಿ ಶಾಶ್ವತಃ ॥೨೩॥

ಯಾವ ರಾಜನು ಚೆನ್ನಾಗಿ ವಿಚಾರಮಾಡಿ ಅಪರಾಧಿಯೆಂಬುದು ನಿಶ್ಚಯವಾದನಂತರ ಅಪರಾಧಿಗಳಿಗೆ ಅವರವರ ಅಪರಾಧಗಳಿಗೆ ಅನುರೂಪವಾದ ದಂಡವನ್ನು ವಿಧಿಸುತ್ತಾನೆಯೋ ಮತ್ತು ತನ್ನ ಕರ್ತವ್ಯಪರಿಪಾಲನೆಯಲ್ಲಿ ಸರ್ವದಾ ಜಾಗರೂಕನಾಗಿರುತ್ತಾನೆಯೋ–ಅಂತಹ ರಾಜನಿಗೆ ಅಪರಾಧಿಯನ್ನು ವಧಿಸುವುದರಿಂದ ಅಥವಾ ಬಂಧಿಸುವುದರಿಂದ ಯಾವ ವಿಧವಾದ ಪಾಪವೂ ಉಂಟಾಗುವುದಿಲ್ಲ. ಹಾಗೆ ದಂಡವಿಧಿಸುವುದು ಅಧರ್ಮವೂ ಆಗುವುದಿಲ್ಲ. ಅಪರಾಧಕ್ಕೆ ತಕ್ಕುದಾದ ಶಿಕ್ಷೆಯನ್ನು ವಿಧಿಸುವುದೇ ಸನಾತನವಾದ ಧರ್ಮ.

ಕಾಮಕಾರೇಣ ದಣ್ಡಂ ತು ಯಃ ಕುರ್ಯಾದವಿಚಕ್ಷಣಃ ।
ಸ ಇಹಾಕೀರ್ತಿಸಂಯುಕ್ತೋ ಮೃತೋ ನರಕಮೃಚ್ಛತಿ ॥೨೪॥

ವಿಚಕ್ಷಣನಲ್ಲದ ಯಾವ ರಾಜನು ಯಾವುದೊಂದನ್ನೂ ವಿವೇಚಿಸದೇ ಮನಬಂದಂತೆ ಅಪರಾಧಿಗಳಿಗೂ, ನಿರಪರಾಧಿಗಳಿಗೂ ಸ್ವೇಚ್ಛಾಪೂರ್ವಕವಾಗಿ ಶಿಕ್ಷೆಯನ್ನು ವಿಧಿಸುತ್ತಾನೆಯೋ–ಅಂತಹ ರಾಜನು ಇಹದಲ್ಲಿ ದುಷ್ಕೀರ್ತಿಯನ್ನು ಗಳಿಸುವುದಲ್ಲದೇ ಅವಸಾನಾನಂತರದಲ್ಲಿ ನರಕಕ್ಕೂ ಹೋಗುತ್ತಾನೆ.

ನ ಪರಸ್ಯ ಪ್ರವಾದೇನ ಪರೇಷಾಂ ದಣ್ಡಮರ್ಪಯೇತ್ ।
ಆಗಮಾನುಗಮಂ ಕೃತ್ವಾ ಬಧ್ನೀಯಾನ್ಮೋಕ್ಷಯೀತ ವಾ ॥೨೫॥

ಬೇರೆಯವರು ಆಡುವ ಮಾತನ್ನು ಕೇಳಿಕೊಂಡು ಒಬ್ಬನಿಗೆ ಶಿಕ್ಷೆಯನ್ನು ವಿಧಿಸಬಾರದು. ಶಾಸ್ತ್ರಾನುಸಾರವಾಗಿ ಸಾಕ್ಷಿ-ಪ್ರಮಾಣಾದಿಗಳಿಂದ ವಿಚಾರ ಮಾಡಿ ಅಪರಾಧಮಾಡಿರುವುದು ನಿಶ್ಚಯವೆಂಬುದು ಕಂಡುಬಂದರೆ ಅವನನ್ನು ಬಂಧನದಲ್ಲಿಡಬೇಕು. ಅಪರಾಧಮಾಡಿರುವುದು ನಿಜವಲ್ಲವೆಂದು ಕಂಡುಬಂದರೆ ಬಿಟ್ಟುಬಿಡಬೇಕು.

ನ ತು ಹನ್ಯಾನ್ನೃಪೋ ಜಾತು ದೂತಂ ಕಸ್ಯಾಂಚಿದಾಪದಿ ।
ದೂತಸ್ಯ ಹನ್ತಾ ನಿರಯಮಾವಿಶೇತ್ಸಚಿವೈಃ ಸಹ ॥೨೬॥

ಎಂತಹ ವಿಪತ್ತಿನ ಸನ್ನಿವೇಶದಲ್ಲಿಯೇ ಆಗಲೀ–ರಾಜನಾದವನು ಯಾವುದೇ ಕಾರಣದಿಂದಾದರೂ ಯಾವುದೇ ಸಮಯದಲ್ಲಿಯೂ ರಾಜ ದೂತನನ್ನು ಕೊಲ್ಲಬಾರದು. ರಾಜದೂತನನ್ನು ಕೊಂದ ರಾಜನು ತನ್ನ ಮಂತ್ರಿಗಳ ಸಮೇತವಾಗಿಯೇ ನರಕದಲ್ಲಿ ಬೀಳುತ್ತಾನೆ.

ಯಥೋಕ್ತವಾದಿನಂ ದೂತಂ ಕ್ಷತ್ರಧರ್ಮರತೋ ನೃಪಃ ।
ಯೋ ಹನ್ಯಾತ್ಪಿತರಸ್ತಸ್ಯ ಭ್ರೂಣಹತ್ಯಾಮವಾಪ್ನುಯುಃ ॥೨೭॥

ಕ್ಷತ್ರಧರ್ಮದಲ್ಲಿಯೇ ನಿರತನಾದ ಯಾವ ರಾಜನು–ತನ್ನ ಸ್ವಾಮಿಯು ಹೇಳಿದ ಮಾತುಗಳನ್ನೇ ಯಥಾವತ್ತಾಗಿ ಹೇಳಲು ಬಂದಿರುವ ದೂತನನ್ನು ಅವಿವೇಕದಿಂದ ಕೊಲ್ಲುತ್ತಾನೆಯೋ–ಅಂತಹ ರಾಜನ ಪಿತೃಗಳು ಭ್ರೂಣ ಹತ್ಯಾಪಾಪಕ್ಕೆ ಭಾಗಿಗಳಾಗುತ್ತಾರೆ.

ಕುಲೀನಃ ಶೀಲಸಮ್ಪನ್ನೋ ವಾಗ್ಮೀ ದಕ್ಷಃ ಪ್ರಿಯಂವದಃ ।
ಯಥೋಕ್ತವಾದೀ ಸ್ಮೃತಿಮಾನ್ದೂತಃ ಸ್ಯಾತ್ಸಪ್ತಭಿರ್ಗುಣೈಃ ॥೨೮॥

ರಾಜದೂತನು ಕುಲೀನನಾಗಿರಬೇಕು. ಶೀಲಸಂಪನ್ನನಾಗಿರಬೇಕು. ವಾಗ್ಮಿಯಾಗಿರಬೇಕು. ಕಾರ್ಯದಕ್ಷನಾಗಿರಬೇಕು. ಮಧುರಭಾಷಿಯಾಗಿರಬೇಕು. ತನ್ನ ಸ್ವಾಮಿಯು ಹೇಳಿಕಳುಹಿಸಿರುವ ಮಾತುಗಳನ್ನೇ ಹೇಳುವವನಾಗಿರಬೇಕು. ಜ್ಞಾಪಕಶಕ್ತಿಯುಳ್ಳವನಾಗಿರಬೇಕು. ಹೀಗೆ ಕುಲ-ಸೌಶೀಲ್ಯಾದಿ ಸಪ್ತಗುಣಗಳಿಂದ ಕೂಡಿದವನಾಗಿರಬೇಕು.

ಏತೈರೇವ ಗುಣೈರ್ಯುಕ್ತಃ ಪ್ರತಿಹಾರೋಽಸ್ಯ ರಕ್ಷಿತಾ ।
ಶಿರೋರಕ್ಷಶ್ಚ ಭವತಿ ಗುಣೈರೇತೈಃ ಸಮನ್ವಿತಃ ॥೨೯॥

ರಾಜದ್ವಾರವನ್ನು ರಕ್ಷಿಸುವ ಪ್ರತೀಹಾರಿಯೂ (ದ್ವಾರಪಾಲಕನೂ) ಇದೇ ಕುಲ-ಸೌಶೀಲ್ಯಾದಿ ಸಪ್ತಗುಣಗಳಿಂದಲೇ ಕೂಡಿದವನಾಗಿರಬೇಕು. ರಾಜನ ಶಿರೋರಕ್ಷಕನೂ (ಅಂಗರಕ್ಷಕನೂ) ಈ ಏಳು ಗುಣಗಳಿಂದಲೇ ಕೂಡಿದವನಾಗಿರಬೇಕು.

ಧರ್ಮಶಾಸ್ತ್ರಾರ್ಥತತ್ತ್ವಜ್ಞಃ ಸಾನ್ಧಿವಿಗ್ರಹಿಕೋ ಭವೇತ್ ।
ಮತಿಮಾನ್ಧೃತಿಮಾನ್ಹ್ರೀಮಾನ್ರಹಸ್ಯವಿನಿಗೂಹಿತಾ ॥೩೦॥

ಕುಲೀನಃ ಸತ್ತ್ವಸಮ್ಪನ್ನಃ ಶುಕ್ಲೋಽಮಾತ್ಯಃ ಪ್ರಶಸ್ಯತೇ ।
ಏತೈರೇವ ಗುಣೈರ್ಯುಕ್ತಸ್ತಥಾ ಸೇನಾಪತಿರ್ಭವೇತ್ ॥೩೧॥

ಧರ್ಮಶಾಸ್ತ್ರಾರ್ಥತತ್ತ್ವಜ್ಞನಾದ, ಬುದ್ಧಿಮಂತನಾದ, ಧೀರನಾದ, ಲಜ್ಜಾಶೀಲನಾದ, ರಾಜರಹಸ್ಯವನ್ನು ಗೋಪ್ಯಮಾಡುವ ಸ್ವಭಾವವುಳ್ಳವನು ಸಂಧಿವಿಗ್ರಹಿಯಾಗಬೇಕು. (ವಿದೇಶಾಂಗಸಚಿವನಾಗಬೇಕು.) ಸತ್ಕುಲ ಪ್ರಸೂತನಾದ, ಸಾಹಸಿಯಾದ, ಶುದ್ಧಹೃದಯನಾದ ಮಂತ್ರಿಯು ಶ್ರೇಷ್ಠ ಮಂತ್ರಿಯೆಂದು ಪರಿಗಣಿಸಲ್ಪಡುತ್ತಾನೆ. ಸೇನಾಪತಿಯೂ ಇವೇ ಗುಣಗಳಿಂದ ಕೂಡಿರುವವನಾಗಿರಬೇಕು.

ವ್ಯೂಹಯನ್ತ್ರಾಯುಧಾನಾಂ ಚ ತತ್ತ್ವಜ್ಞೋ ವಿಕ್ರಮಾನ್ವಿತಃ ।
ವರ್ಷಶೀತೋಷ್ಣವಾತಾನಾಂ ಸಹಿಷ್ಣುಃ ಪರರನ್ಧ್ರವಿತ್ ॥೩೨॥

ಸೇನಾಪತಿಯಾದವನಿಗೆ ಮಂತ್ರಿಗಿರುವ ಗುಣಗಳೇ ಅಲ್ಲದೇ-ಅವನು ವ್ಯೂಹ, ಯಂತ್ರ, ಆಯುಧ–ಇವುಗಳ ತತ್ತ್ವಗಳನ್ನೂ ತಿಳಿದವನಾಗಿರಬೇಕು.

ಮಳೆ, ಗಾಳಿ, ಬಿಸಿಲು, ಶೀತಗಳನ್ನು ಸಹಿಸಿಕೊಳ್ಳುವ ಸಾಮರ್ಥ್ಯವಿರುವವ ನಾಗಬೇಕು. ಶತ್ರುಗಳಲ್ಲಿರುವ ನ್ಯೂನತೆಯನ್ನು ತಿಳಿದುಕೊಳ್ಳುವ ಸಾಮರ್ಥ್ಯ ವನ್ನೂ ಹೊಂದಿರಬೇಕು.

ವಿಶ್ವಾಸಯೇತ್ಪರಾಂಶ್ಚೈವ ವಿಶ್ವಸೇಚ್ಚ ನ ಕಸ್ಯಚಿತ್ ।
ಪುತ್ರೇಷ್ವಪಿ ಹಿ ರಾಜೇನ್ದ್ರ ವಿಶ್ವಾಸೋ ನ ಪ್ರಶಸ್ಯತೇ ॥೩೩॥

ಶತ್ರುಗಳಾದರೂ ನಂಬುವ ರೀತಿಯಲ್ಲಿ ರಾಜನು ವ್ಯವಹಾರವನ್ನಿಟ್ಟು ಕೊಳ್ಳಬೇಕು. ಆದರೆ ತಾನು ಮಾತ್ರ ಯಾರಲ್ಲಿಯೂ ವಿಶ್ವಾಸವನ್ನಿಟ್ಟು ಕೊಳ್ಳಬಾರದು. ಆತ್ಮಸಮರಾದ ಪುತ್ರರಲ್ಲಿಯೂ ಸಂಪೂರ್ಣವಾಗಿ ವಿಶ್ವಾಸ ವನ್ನಿಡುವುದು ಪ್ರಶಂಸನೀಯವಾಗುವುದಿಲ್ಲ.

ನಿಷ್ಪಾಪನೇ! ಯುಧಿಷ್ಠಿರ! ನೀತಿಶಾಸ್ತ್ರತತ್ತ್ವವನ್ನು ನಾನು ನಿನಗೆ ಹೇಳಿದ್ದೇನೆ.

ಅವಿಶ್ವಾಸೋ ನರೇನ್ದ್ರಾಣಾಂ ಗುಹ್ಯಂ ಪರಮಮುಚ್ಯತೇ ॥೩೪॥

ಯಾರ ಮೇಲೆಯೂ ಸಂಪೂರ್ಣವಾಗಿ ವಿಶ್ವಾಸವನ್ನಿಡದಿರುವುದೇ ರಾಜರ ಪರಮಶ್ರೇಷ್ಠವಾದ ರಹಸ್ಯವೆಂದು ಹೇಳುತ್ತಾರೆ.”

ಲ೫ನೆಯ ಅಧ್ಯಾಯವು ಮುಗಿಯಿತು.

ಲ೬ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನಿಗೆ ನಿವಾಸಯೋಗ್ಯವಾದ ನಗರ-ದುರ್ಗಗಳ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂವಿಧಂ ಪುರಂ ರಾಜಾ ಸ್ವಯಮಾವಸ್ತುಮರ್ಹತಿ ।
ಕೃತಂ ವಾ ಕಾರಯಿತ್ವಾ ವಾ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹ! ರಾಜನು ಸ್ವತಃ ಯಾವ ವಿಧವಾದ ನಗರದಲ್ಲಿ ವಾಸ ಮಾಡಬೇಕು? ಹಿಂದೆ ನಿರ್ಮಾಣವಾಗಿದ್ದ ನಗರದಲ್ಲಿ ವಾಸಮಾಡಬೇಕೇ ಅಥವಾ ನೂತನನಗರವನ್ನೇ ನಿರ್ಮಾಣಮಾಡಿಸಿಕೊಂಡು ಅದರಲ್ಲಿ ವಾಸಮಾಡಬೇಕೇ?–ಈ ವಿಷಯವನ್ನು ತಿಳಿಸು.”

ಭೀಷ್ಮನು ಹೇಳುತ್ತಾನೆ :

“ಭಾರತ! ಕೌಂತೇಯ! ಪುತ್ರ-ಕಳತ್ರ-ಬಂಧುಗಳೊಡನೆ ರಾಜನು ಎಂತಹ ನಗರದಲ್ಲಿ ವಾಸಮಾಡಬೇಕೆಂಬ ವಿಷಯದಲ್ಲಿಯೂ–ಅಲ್ಲಿಯ ರಕ್ಷಣೆ ಮತ್ತು ಜೀವನನಿರ್ವಹಣೆಗಳ ವ್ಯವಸ್ಥೆಗಳು ಹೇಗಿರಬೇಕೆಂಬ ವಿಷಯದಲ್ಲಿಯೂ–ನೀನು ಕೇಳಿರುವ ಪ್ರಶ್ನೆಯು ನ್ಯಾಯಸಮ್ಮತ್ರವಾಗಿಯೇ ಇದೆ. ಆದುದರಿಂದ ನಿನಗೆ ನಗರದ ನಿರ್ಮಾಣದ ವಿಷಯವನ್ನು ಅದರಲ್ಲಿಯೂ ವಿಶೇಷವಾಗಿ ದುರ್ಗನಿರ್ಮಾಣದ ವಿಷಯವನ್ನು ವಿಸ್ತಾರ ವಾಗಿಯೇ ಹೇಳುತ್ತೇನೆ. ಅದನ್ನು ನೀನು ಕೇಳಿ ಹಾಗೆಯೇ ಮಾಡಬೇಕು ಮತ್ತು ದುರ್ಗನಿರ್ಮಾಣವನ್ನು ನಾನು ಹೇಳಿದ ರೀತಿಯಲ್ಲಿಯೇ ಪ್ರಯತ್ನ ಪೂರ್ವಕವಾಗಿ ಮಾಡಿಸಬೇಕು.

ಷಡ್ವಿಧಂ ದುರ್ಗಮಾಸ್ಥಾಯ ಪುರಾಣ್ಯಥ ನಿವೇಶಯೇತ್ ।
ಸರ್ವಸಮ್ಪತ್ಪ್ರಧಾನಂ ಯದ್ಬಾಹುಲ್ಯಂ ಚಾಪಿ ಸಮ್ಭವೇತ್ ॥೪॥

ಎಲ್ಲಿ ಸಕಲವಿಧವಾದ ಸಂಪತ್ತುಗಳೂ ಪ್ರಧಾನಭೂತವಾಗಿ ಸಿಕ್ಕು ವುವೋ, ಯಾವ ಸ್ಥಳವು ಬಹುವಿಸ್ತಾರವಾಗಿರುವುದೋ–ಅಲ್ಲಿ ಆರು ವಿಧವಾದ ದುರ್ಗಗಳನ್ನಾಶ್ರಯಿಸಿ ಪುರಗಳನ್ನು ನಿರ್ಮಾಣಮಾಡಬೇಕು.

ಧನ್ವದುರ್ಗಂ ಮಹೀದುರ್ಗಂ ಗಿರಿದುರ್ಗಂ ತಥೈವ ಚ ।
ಮನುಷ್ಯದುರ್ಗಮಬ್ದುರ್ಗಂ ವನದುರ್ಗಂ ಚ ತಾನಿ ಷಟ್ ॥೫॥

* ಧನ್ವದುರ್ಗ, ಮಹೀದುರ್ಗ, ಗಿರಿದುರ್ಗ, ಮನುಷ್ಯದುರ್ಗ, ಜಲದುರ್ಗ ಮತ್ತ ವನದುರ್ಗ–ಇವುಗಳೇ ಆ ಆರು ದುರ್ಗಗಳು.

ಯತ್ಪುರಂ ದುರ್ಗಸಮ್ಪನ್ನಂ ಧಾನ್ಯಾಯುಧಸಮನ್ವಿತಮ್ ।
ದೃಢಪ್ರಾಕಾರಪರಿಖಂ ಹಸ್ತ್ಯಶ್ವರಥಸಂಕುಲಮ್ ॥೬॥

---

* **ಧನ್ವದುರ್ಗಂ :** ನಾಲ್ಕು ದಿಕ್ಕುಗಳಲ್ಲಿಯೂ ಐದು ಯೋಜನಗಳ ದೂರ ಮರುಭೂಮಿಯಿಂದ ಆವೃತವಾಗಿರುವ ಪ್ರದೇಶ. **ಮಹೀದುರ್ಗಂ :** ಸುತ್ತಲೂ ಮನುಷ್ಯ ನಿರ್ಮಿತವಾದ ಕೋಟೆಗಳಿಂದ ಆವೃತವಾಗಿರುವ ಪ್ರದೇಶ, **ಗಿರಿದುರ್ಗಂ :** ಪರ್ವತಗಳ ಆವರಣದಿಂದ ಕೂಡಿರುವ ಪ್ರದೇಶ. **ಮನುಷ್ಯದುರ್ಗಂ :** ಸುತ್ತಲೂ ಸೈನಿಕರನ್ನಿಟ್ಟು ರಕ್ಷಿಸಲ್ಪಡುತ್ತಿರುವ ಪ್ರದೇಶ. **ಅಬ್ದುರ್ಗಂ :** ಸುತ್ತಲೂ ನೀರಿನಿಂದ ಆವೃತವಾಗಿರುವ ಪ್ರದೇಶ. **ವನದುರ್ಗಂ :** ಸುತ್ತಲೂ ಅರಣ್ಯದಿಂದ ಆವೃತವಾಗಿರುವ ಪ್ರದೇಶ.

ವಿದ್ವಾಂಸಃ ಶಿಲ್ಪಿನೋ ಯತ್ರ ನಿಚಯಾಶ್ಚ ಸುಸಂಚಿತಾಃ ।
ಧಾರ್ಮಿಕಶ್ಚ ಜನೋ ಯತ್ರ ದಾಕ್ಷ್ಯಮುತ್ತಮಮಾಸ್ಥಿತಃ ॥೭॥

ಊರ್ಜಸ್ವಿನರನಾಗಾಶ್ವಂ ಚತ್ವರಾಪಣಶೋಭಿತಮ್ ।
ಪ್ರಸಿದ್ಧವ್ಯವಹಾರಂ ಚ ಪ್ರಶಾನ್ತಮಕುತೋಭಯಮ್ ॥೮॥

ಸುಪ್ರಭಂ ಸಾನುನಾದಂ ಚ ಸುಪ್ರಶಸ್ತನಿವೇಶನಮ್ ।
ಶೂರಾಢ್ಯಜನಸಮ್ಪನ್ನಂ ಬ್ರಹ್ಮಘೋಷಾನುನಾದಿತಮ್ ॥೯॥

ಸಮಾಜೋತ್ಸವಸಮ್ಪನ್ನಂ ಸದಾ ಪೂಜಿತದೈವತಮ್ ।
ವಶ್ಯಾಮಾತ್ಯಬಲೋ ರಾಜಾ ತತ್ಪುರಂ ಸ್ವಯಮಾವಿಶೇತ್ ॥೧೦॥

ಯಾವ ನಗರವು ಇಂತಹ ಆರು ದುರ್ಗಗಳಲ್ಲಿ ಒಂದರಿಂದ ಅಥವಾ ಅನೇಕದುರ್ಗಗಳಿಂದ ಸಮನ್ವಿತವಾಗಿರುವುದೋ, ಸಮೃದ್ಧವಾದ ಧಾನ್ಯಗಳಿಂದಲೂ–ಆಯುಧಗಳಿಂದಲೂ ಕೂಡಿರುವುದೋ, ದೃಢವಾದ ಪ್ರಾಕಾರಗಳಿಂದಲೂ ಮತ್ತು ಕಂದಕಗಳಿಂದಲೂ ಯುಕ್ತವಾಗಿರುವುದೋ, ಆನೆ-ಕುದುರೆ-ರಥಗಳಿಂದ ಸಮಾಕುಲವಾಗಿರುವುದೋ, ಯಾವ ನಗರದಲ್ಲಿ ವಿದ್ವಾಂಸರೂ–ಶಿಲ್ಪಿಗಳೂ ವಾಸಮಾಡುತ್ತಿರುವರೋ, ಯಾವ ನಗರವು ಅವಶ್ಯಕವಾದ ವಸ್ತುಗಳಿಂದ ತುಂಬಿ ಸಮೃದ್ಧವಾಗಿರುವುದೋ, ಯಾವ ನಗರದಲ್ಲಿ ಬೊಕ್ಕಸವು ಯಾವಾಗಲೂ ತುಂಬಿಯೇ ಇರುವುದೋ, ಸಾಮರ್ಥ್ಯದಿಂದ ಕೂಡಿದ ಧಾರ್ಮಿಕಜನರು ಯಾವ ನಗರದಲ್ಲಿರುವರೋ, ಬಲಿಷ್ಠರಾದ ಮನುಷ್ಯರಿಂದಲೂ ಆನೆ-ಕುದುರೆಗಳಿಂದಲೂ ಯಾವ ನಗರವು ತುಂಬಿರುವುದೋ, ಚೌಕಗಳಿಂದಲೂ–ಅಂಗಡಿಗಳ ಸಾಲುಗಳಿಂದಲೂ ಯಾವ ನಗರವು ಶೋಭಾಯಮಾನವಾಗಿ ಕಾಣುತ್ತಿರುವುದೋ, ಯಾವ ನಗರದಲ್ಲಿ ಧರ್ಮಮೂಲವಾದ–ಅದರಿಂದಲೇ ಪ್ರಸಿದ್ಧವಾದ–ನ್ಯಾಯಾಲಯವಿರುವುದೋ, ಯಾವ ನಗರವು ಪ್ರಶಾಂತವಾಗಿರುವುದೋ, ನಿರ್ಭಯವಾದ ವಾತಾವರಣದಿಂದ ಕೂಡಿರುವುದೋ, ಯಾವ ನಗರದಲ್ಲಿ ಬೆಳಕು ಚೆನ್ನಾಗಿ ಬೀಳುವುದೋ, ಸತತವಾಗಿ ಸಂಗೀತವಾದ್ಯಗಳ ಧ್ವನಿಯಿರುವುದೋ, ಪ್ರತಿಯೊಂದು ಮನೆಯೂ ಪ್ರಶಸ್ತವಾಗಿಯೂ–ಸುಂದರವಾಗಿಯೂ ಇರುವುದೋ,

ಶೂರರೂ-ಧನಾಢ್ಯರೂ ವಾಸವಾಗಿರುವರೋ, ಯಾವ ನಗರವು ಸರ್ವಕಾಲ ಗಳಲ್ಲಿಯೂ ವೇದಮಂತ್ರಗಳಿಂದ ನಿನಾದಿತವಾಗಿರುವುದೋ, ಯಾವ ನಗರ ದಲ್ಲಿ ಸಮಾಜೋತ್ಸವಗಳೂ ಮತ್ತು ದೇವತಾಪೂಜೆಗಳೂ ಸತತವಾಗಿ ನಡೆಯುತ್ತಿರುತ್ತವೆಯೋ–ಅಂತಹ ಸುಂದರವಾದ ನಗರವನ್ನು ತನ್ನ ವಶ ವರ್ತಿಗಳಾದ ಮಂತ್ರಿ-ಬಲಗಳಿಂದ ಸಮೇತನಾಗಿ ರಾಜನು ಪ್ರವೇಶಿಸಬೇಕು.

ತತ್ರ ಕೋಶಂ ಬಲಂ ಮಿತ್ರಂ ವ್ಯವಹಾರಂ ಚ ವರ್ಧಯೇತ್ ।
ಪುರೇ ಜನಪದೇ ಚೈವ ಸರ್ವದೋಷಾನ್ನಿವರ್ತಯೇತ್ ॥೧೧॥

ಆ ನಗರದಲ್ಲಿ ರಾಜನು ಬೊಕ್ಕಸವನ್ನೂ, ಸೈನ್ಯವನ್ನೂ, ಮಿತ್ರಬಲ ವನ್ನೂ, ನ್ಯಾಯಾಂಗವನ್ನೂ ವೃದ್ಧಿಪಡಿಸಬೇಕು. ಪಟ್ಟಣಗಳಲ್ಲಾಗಲೀ ಹಳ್ಳಿಗಳಲ್ಲಾಗಲೀ ಇರುವ ಸರ್ವದೋಷಗಳನ್ನೂ ಹೋಗಲಾಡಿಸಬೇಕು.

ಭಾಣ್ಡಾಗಾರಾಯುಧಾಗಾರಾನ್ಪ್ರಯತ್ನೇನಾಭಿವರ್ಧಯೇತ್ ।
ನಿಚಯಾನ್ವರ್ಧಯೇತ್ಸರ್ವಾಂಸ್ತಥಾ ಯನ್ತ್ರಾಯುಧಾಲಯಾನ್ ॥೧೨॥

ಆಹಾರಸಾಮಗ್ರಿಗಳ ಸಂಗ್ರಹಾಲಯಗಳನ್ನೂ, ಅಸ್ತ್ರ-ಶಸ್ತ್ರಗಳ ಸಂಗ್ರ ಹಾಲಯಗಳನ್ನೂ ಪ್ರಯತ್ನಪೂರ್ವಕವಾಗಿ ಹೆಚ್ಚಿಸಬೇಕು. ಎಲ್ಲ ವಸ್ತುಗಳ ಸಂಗ್ರಹಾಲಯಗಳನ್ನೂ ವೃದ್ಧಿಪಡಿಸಬೇಕು. ಯಂತ್ರಗಳನ್ನೂ–ಆಯುಧ ಗಳನ್ನೂ ತಯಾರಿಸುವ ಕರ್ಮಾಗಾರಗಳಿಗೂ ಪ್ರೋತ್ಸಾಹಕೊಡಬೇಕು.

ಕಾಷ್ಠಲೋಹತುಷಾಙ್ಗಾರದಾರುಶೃಙ್ಗಾಸ್ಥಿವೈಣವಾನ್ ।
ಮಜ್ಜಾ ಸ್ನೇಹವಸಾ ಕ್ಷೌದ್ರಮೌಷಧಗ್ರಾಮಮೇವ ಚ ॥೧೩॥

ಶಣಂ ಸರ್ಜರಸಂ ಧಾನ್ಯಮಾಯುಧಾನಿ ಶರಾಂಸ್ತಥಾ ।
ಚರ್ಮ ಸ್ನಾಯುಂ ತಥಾ ವೇತ್ರಂ ಮುಞ್ಜಬಲ್ವಜಬನ್ಧನಾನ್ ॥೧೪॥

ರಾಜನು ಸಂಗ್ರಹಿಸಿಡಬೇಕಾದ ವಸ್ತುಗಳು ಯಾವುವೆಂದರೆ : ಕಟ್ಟಿಗೆ, ನಾನಾವಿಧವಾದ ಚಿನ್ನ-ಬೆಳ್ಳಿಯೇ ಮೊದಲಾದ ಲೋಹಗಳು, ಧಾನ್ಯದ ಮೇಲಿನ ಹೊಟ್ಟು, ಇದ್ದಿಲು, ಮರದ ದಿಮ್ಮಿಗಳು, ಪ್ರಾಣಿಗಳ ಕೊಂಬು ಗಳು, ಮೂಳೆಗಳು, ಬಿದುರುಗಳು, ಮೇದಸ್ಸು, ಎಣ್ಣೆ, ಕೊಬ್ಬು, ಜೇನುತುಪ್ಪ, ಔಷಧಗಳ ದಾಸ್ತಾನು, ಸೆಣಬು, ರಾಳ, ಧಾನ್ಯಗಳು, ಅಸ್ತ್ರ-ಶಸ್ತ್ರ

ಗಳು, ಬಾಣಗಳು, ಪ್ರಾಣಿಗಳ ಚರ್ಮಗಳು, ನರಗಳು, ಬೆತ್ತಗಳು, ಹಗ್ಗಕ್ಕಾಗಿ ಉಪಯೋಗಿಸುವ ಮೌಂಜೀಹುಲ್ಲು ಮತ್ತು ಕರಡಿಹುಲ್ಲು–ಈ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳಬೇಕು.

ಆಶಯಾಶ್ಚೋದಪಾನಾಶ್ಚ ಪ್ರಭೂತಸಲಿಲಾಕರಾಃ ।
ನಿರೋದ್ಧವ್ಯಾಃ ಸದಾ ರಾಜ್ಞಾ ಕ್ಷೀರಿಣಶ್ಚ ಮಹೀರುಹಾಃ ॥೧೫॥

ಸರೋವರಗಳನ್ನೂ, ಬಾವಿಗಳನ್ನೂ, ದೊಡ್ಡ-ದೊಡ್ಡ ಜಲಾಶಯಗಳನ್ನೂ ಮತ್ತು ಹಾಲಿನಂತೆ ವಿವಿಧ ರಸಗಳನ್ನು ಹೊರಸೂಸುವ ವೃಕ್ಷಗಳನ್ನೂ ನಾಶಪಡಿಸದಂತೆ ರಾಜನು ತಡೆಯಬೇಕು.

ಸತ್ಕೃತಾಶ್ಚ ಪ್ರಯತ್ನೇನ ಆಚಾರ್ಯರ್ತ್ವಿಕ್ಪುರೋಹಿತಾಃ ।
ಮಹೇಷ್ವಾಸಾಃ ಸ್ಥಪತಯಃ ಸಾಂವತ್ಸರಚಿಕಿತ್ಸಕಾಃ ॥೧೬॥

ಆಚಾರ್ಯರು, ಋತ್ವಿಜರು, ಪುರೋಹಿತರು, ಮಹಾಧನುರ್ಧಾರಿಗಳು, ಮನೆಗಳನ್ನು ಕಟ್ಟುವ ಶಿಲ್ಪಿಗಳು, ವರ್ಷದ ಫಲಗಳನ್ನು ಸಿದ್ಧಗೊಳಿಸುವ ಜ್ಯೌತಿಷಿಕರು ಮತ್ತು ವೈದ್ಯರು–ಇವರುಗಳನ್ನೂ ರಾಜನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು.

ಪ್ರಾಜ್ಞಾ ಮೇಧಾವಿನೋ ದಾನ್ತಾ ದಕ್ಷಾಃ ಶೂರಾ ಬಹುಶ್ರುತಾಃ ।
ಕುಲೀನಾಃ ಸತ್ತ್ವಸಮ್ಪನ್ನಾ ಯುಕ್ತಾಃ ಸರ್ವೇಷು ಕರ್ಮಸು ॥೧೭॥

ಪ್ರಾಜ್ಞರನ್ನೂ, ಮೇಧಾವಿಗಳನ್ನೂ, ಜಿತೇಂದ್ರಿಯರನ್ನೂ, ಕಾರ್ಯದಕ್ಷರನ್ನೂ, ಶೂರರನ್ನೂ, ಬಹುಶ್ರುತರನ್ನೂ, ಸತ್ಕುಲಪ್ರಸೂತರನ್ನೂ, ಸತ್ಪುರುಷರನ್ನೂ, ಬಲಸಂಪನ್ನರನ್ನೂ ರಾಜನು ತನ್ನ ಸಕಲವಿಧವಾದ ರಾಜಕಾರ್ಯಗಳಲ್ಲಿಯೂ ನಿಯೋಜಿಸಬೇಕು.

ಪೂಜಯೇದ್ಧಾರ್ಮಿಕಾನ್ರಾಜಾ ನಿಗೃಹ್ಣೀಯಾದಧಾರ್ಮಿಕಾನ್ ।
ನಿಯುಞ್ಜ್ಯಾಚ್ಚ ಪ್ರಯತ್ನೇನ ಸರ್ವವರ್ಣಾನ್ಸ್ವಕರ್ಮಸು ॥೧೮॥

ರಾಜನು ಯಾವಾಗಲೂ ಧಾರ್ಮಿಕರಾದವರನ್ನು ಸತ್ಕರಿಸಬೇಕು. ಅಧಾರ್ಮಿಕರನ್ನು ದಮನಮಾಡಬೇಕು. ರಾಜನು ಪ್ರಯತ್ನಪೂರ್ವಕವಾಗಿ ಎಲ್ಲ ವರ್ಣದವರನ್ನೂ ಅವರವರ ವರ್ಣಾಶ್ರಮೋಕ್ತವಾದ ಕರ್ಮಗಳಲ್ಲಿಯೇ ನಿಯೋಜಿಸಬೇಕು.

ಬಾಹ್ಯಮಾಭ್ಯನ್ತರಂ ಚೈವ ಪೌರಜಾನಪದಂ ತಥಾ ।
ಚಾರೈಃ ಸುವಿದಿತಂ ಕೃತ್ವಾ ತತಃ ಕರ್ಮ ಪ್ರಯೋಜಯೇತ್ ॥೧೯॥

ರಾಜನು ಗುಪ್ತಚಾರರ ಮೂಲಕವಾಗಿ ನಗರಗಳ ಮತ್ತು ಹಳ್ಳಿಗಳ ಒಳಗಡೆ ಮತ್ತು ಹೊರಗಡೆ ನಡೆಯುವ ವಿದ್ಯಮಾನಗಳೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡು ಅವರು ತಂದ ವಾರ್ತೆಯ ಆಧಾರದ ಮೇಲೆ ಪಟ್ಟಣಿಗರಿಗೂ ಮತ್ತು ಹಳ್ಳಿಗರಿಗೂ ಪ್ರಯೋಜನವಾಗುವಂತಹ ಕಾರ್ಯಗಳನ್ನು ಪ್ರಾರಂಭಿಸಬೇಕು.

ಚಾರಾನ್ಮನ್ತ್ರಂ ಚ ಕೋಶಂ ಚ ದಣ್ಡಂ ಚೈವ ವಿಶೇಷತಃ ।
ಅನುತಿಷ್ಠೇತ್ಸ್ವಯಂ ರಾಜಾ ಸರ್ವಂ ಹ್ಯತ್ರ ಪ್ರತಿಷ್ಠಿತಮ್ ॥೨೦॥

ಗುಪ್ತಚಾರರನ್ನು ಸಂಧಿಸಿ ಮಾತನಾಡುವುದು, ರಾಜರಹಸ್ಯಗಳನ್ನು ಕುರಿತು ಮಂತ್ರಿಗಳೊಡನೆ ಗುಪ್ತಾಲೋಚನೆಯನ್ನು ನಡೆಸುವುದು, ಬೊಕ್ಕಸದ ಮೇಲ್ವಿಚಾರಣೆ, ಅಪರಾಧಿಗಳನ್ನು ಶಿಕ್ಷಿಸುವುದು–ಇವಿಷ್ಟು ಕಾರ್ಯಗಳನ್ನು ರಾಜನೇ ಸ್ವತಃ ನೋಡಿಕೊಳ್ಳಬೇಕು. ಈ ಖಾತೆಗಳನ್ನು ಬೇರೆಯವರಿಗೆ ಬಿಟ್ಟುಕೊಡಬಾರದು. ಏಕೆಂದರೆ : ಚಾರ-ಮಂತ್ರ-ಕೋಶ-ದಂಡಗಳಲ್ಲಿಯೇ ಎಲ್ಲ ಕಾರ್ಯಗಳೂ ಪ್ರತಿಷ್ಠಿತವಾಗಿವೆ. ಎಲ್ಲ ಕಾರ್ಯಗಳಿಗೂ ಇವೇ ಮೂಲವಾಗಿವೆ.

ಉದಾಸೀನಾರಿಮಿತ್ರಾಣಾಂ ಸರ್ವಮೇವ ಚಿಕೀರ್ಷಿತಮ್ ।
ಪುರೇ ಜನಪದೇ ಚೈವ ಜ್ಞಾತವ್ಯಂ ಚಾರಚಕ್ಷುಷಾ ॥೨೧॥

ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ–ತಟಸ್ಥರು, ಶತ್ರುಗಳು ಮತ್ತು ಮಿತ್ರರು ಏನು ಮಾಡುತ್ತಿರುವರೆಂಬುದನ್ನು ಚಾರರೆಂಬ ಕಣ್ಣುಗಳ ಮೂಲಕ ವಾಗಿ ರಾಜನು ತಿಳಿದುಕೊಳ್ಳುತ್ತಲೇ ಇರಬೇಕು.

ತತಸ್ತೇಷಾಂ ವಿಧಾತವ್ಯಂ ಸರ್ವಮೇವಾಪ್ರಮಾದತಃ ।
ಭಕ್ತಾನ್ಪೂಜಯತಾ ನಿತ್ಯಂ ದ್ವಿಷತಶ್ಚ ನಿಗೃಹ್ಣತಾ ॥೨೨॥

ಉದಾಸೀನ-ಶತ್ರು-ಮಿತ್ರಾದಿಗಳು ಏನು ಮಾಡುತ್ತಿರುವರೆಂಬುದನ್ನು ಚಾರರ ಮೂಲಕ ತಿಳಿದುಕೊಂಡನಂತರ ಅವರು ಮಾಡುತ್ತಿರುವ ಕಾರ್ಯಕ್ಕೆ ತಕ್ಕುದಾದ ಕಾರ್ಯವನ್ನು ಸಾವಧಾನತೆಯಿಂದಲೇ ಮಾಡಬೇಕು. ಮಿತ್ರರು

ತನ್ನ ಸಲುವಾಗಿ ಕೆಲಸಮಾಡುತ್ತಿದ್ದರೆ ಅವರಿಗೆ ಒತ್ತಾಸೆಯನ್ನು ಕೊಡಬೇಕು. ಶತ್ರುಗಳು ವಿರೋಧವಾಗಿ ವರ್ತಿಸುತ್ತಿದ್ದರೆ ಕೂಡಲೇ ಅವರನ್ನು ನಿಗ್ರಹಿಸಬೇಕು. ಉದಾಸೀನರು ಯಾವ ಪಕ್ಷಕ್ಕೂ ಸೇರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ರಾಜನು ಯಾವಾಗಲೂ ತನ್ನ ಸೇವಕರನ್ನು ಪುರಸ್ಕರಿಸ ಬೇಕು. ಶತ್ರುಗಳನ್ನು ನಿಗ್ರಹಿಸಬೇಕು.

ಯಷ್ಟವ್ಯಂ ಕ್ರತುಭಿರ್ನಿತ್ಯಂ ದಾತವ್ಯಂ ಚಾಪ್ಯಪೀಡಯಾ ।
ಪ್ರಜಾನಾಂ ರಕ್ಷಣಂ ಕಾರ್ಯಂ ನ ಕಾರ್ಯಂ ಧರ್ಮಬಾಧಕಮ್ ॥

ರಾಜನು ನಿತ್ಯವೂ ಯಜ್ಞಗಳಿಂದ ದೇವತೆಗಳನ್ನು ತೃಪ್ತಿಗೊಳಿಸಬೇಕು. ಇತರರಿಗೆ ತೊಂದರೆಯನ್ನು ಕೊಡದೇ ತನ್ನಲ್ಲಿರುವುದನ್ನೇ ದಾನಮಾಡಬೇಕು. ಪ್ರಜೆಗಳ ರಕ್ಷಣೆಯನ್ನು ಮಾಡುವುದು ರಾಜನ ಮುಖ್ಯಕರ್ತವ್ಯವಾಗಿರುತ್ತದೆ. ಯಾವುದೇ ಕಾರಣದಿಂದಲೂ ಧರ್ಮಕ್ಕೆ ಬಾಧೆಯುಂಟಾಗುವ ಕಾರ್ಯವನ್ನು ಮಾಡಬಾರದು.

ಕೃಪಣಾನಾಥವೃದ್ಧಾನಾಂ ವಿಧವಾನಾಂ ಚ ಯೋಷಿತಾಮ್ ।
ಯೋಗಕ್ಷೇಮಂ ಚ ವೃತ್ತಿಂ ಚ ನಿತ್ಯಮೇವ ಪ್ರಕಲ್ಪಯೇತ್ ॥೨೪॥

ದೀನರ, ಅನಾಥರ, ವೃದ್ಧರ ಮತ್ತು ವಿಧವಾಸ್ತ್ರೀಯರ ಯೋಗ-ಕ್ಷೇಮಗಳನ್ನು ರಾಜನು ಸರ್ವಕಾಲಗಳಲ್ಲಿಯೂ ನೋಡಿಕೊಳ್ಳಬೇಕು ಮತ್ತು ಅವರ ಜೀವಿಕೆಗಾಗಿ ತಕ್ಕುದಾದ ವ್ಯವಸ್ಥೆಯನ್ನು ಮಾಡಬೇಕು.

ಆಶ್ರಮೇಷು ಯಥಾಕಾಲಂ ಚೈಲಭಾಜನಭೋಜನಮ್ ।
ಸದೈವೋಪಹರೇದ್ರಾಜಾ ಸತ್ಕೃತ್ಯಾಭ್ಯರ್ಚ್ಯ ಮಾನ್ಯ ಚ ॥೨೫॥

ರಾಜನು ಋಷ್ಯಾಶ್ರಮಗಳಿಗೆ ಕಾಲಾನುಗುಣವಾಗಿ ವಸ್ತ್ರಗಳನ್ನೂ, ಪಾತ್ರೆಗಳನ್ನೂ, ಭೋಜನಕ್ಕೆ ಬೇಕಾದ ಆಹಾರಪದಾರ್ಥಗಳನ್ನೂ ಕಳುಹಿಸಿ ಕೊಡಬೇಕು. ಆಶ್ರಮವಾಸಿಗಳನ್ನು ಸತ್ಕರಿಸಿ, ಸಮ್ಮಾನಿಸಿ ಆ ಪದಾರ್ಥ ಗಳೆಲ್ಲವನ್ನೂ ಅವರಿಗೆ ಒಪ್ಪಿಸಬೇಕು.

ಆತ್ಮಾನಂ ಸರ್ವಕಾರ್ಯಾಣಿ ತಾಪಸೇ ರಾಷ್ಟ್ರಮೇವ ಚ ।
ನಿವೇದಯೇತ್ಪ್ರಯತ್ನೇನ ತಿಷ್ಠೇತ್ಪ್ರಹ್ವಶ್ಚ ಸರ್ವದಾ ॥೨೬॥

ಆಶ್ರಮದಲ್ಲಿರುವ ತಪಸ್ವಿಗಳಿಗೆ, ತನ್ನ ಆತ್ಮೀಯವಿಷಯಗಳನ್ನೂ

ರಾಷ್ಟ್ರೀಯವಿಷಯಗಳನ್ನೂ ತಾನು ಪ್ರಜೆಗಳ ಯೋಗ-ಕ್ಷೇಮಗಳಿಗಾಗಿ ಮಾಡಿರುವ ಎಲ್ಲ ಕಾರ್ಯಗಳನ್ನೂ ಪ್ರಯತ್ನಪೂರ್ವಕವಾಗಿ ನಿವೇದಿಸಿಕೊಳ್ಳ ಬೇಕು. ('ಈ ಎಲ್ಲವೂ ತಮ್ಮದೇ'–ಎಂದು ಹೇಳಬೇಕು.) ತಪಸ್ವಿಗಳ ವಿಷಯ ದಲ್ಲಿ ರಾಜನು ಯಾವಾಗಲೂ ವಿನಮ್ರಭಾವದಿಂದಲೇ ನಡೆದುಕೊಳ್ಳಬೇಕು.

ಸರ್ವಾರ್ಥತ್ಯಾಗಿನಂ ರಾಜಾ ಕುಲೇ ಜಾತಂ ಬಹುಶ್ರುತಮ್ ।
ಪೂಜಯೇತ್ತಾದೃಶಂ ದೃಷ್ಟ್ವಾ ಶಯನಾಸನಭೋಜನೈಃ ॥೨೭॥

ಯಾರು ಸ್ವಾರ್ಥವನ್ನು ಸಂಪೂರ್ಣವಾಗಿ ತ್ಯಾಗಮಾಡಿರುವರೋ, ಸತ್ಕುಲಪ್ರಸೂತರೋ, ಬಹುಶ್ರುತರೋ–ಅಂತಹವರನ್ನು ಕಂಡೊಡನೆಯೇ ರಾಜನು ಅರಮನೆಗೆ ಕರೆದೊಯ್ದು ಶಯನ, ಆಸನ ಮತ್ತು ಭೋಜನಾದಿ ಗಳಿಂದ ಯಥಾಯೋಗ್ಯವಾಗಿ ಸತ್ಕರಿಸಬೇಕು.

ತಸ್ಮಿನ್ಕುರ್ವೀತ ವಿಶ್ವಾಸಂ ರಾಜಾ ಕಸ್ಯಾಂಚಿದಾಪದಿ ।
ತಾಪಸೇಷು ಹಿ ವಿಶ್ವಾಸಮಪಿ ಕುರ್ವನ್ತಿ ದಸ್ಯವಃ ॥೨೮॥

ಯಾವುದಾದರೂ ಆಪತ್ತಿನ ಸಮಯದಲ್ಲಿ ರಾಜನು ತಪೋನಿಷ್ಠನಲ್ಲಿ ವಿಶ್ವಾಸವನ್ನಿಡಬಹುದು. ತನಗೊದಗಿರುವ ಆಪತ್ತಿನ ವಿಷಯವನ್ನು ಅವ ನೊಡನೆ ಹೇಳಿ ಆಪತ್ತಿನಿಂದ ಪಾರಾಗಲು ಯತ್ನಿಸಬಹುದು. ಏಕೆಂದರೆ : ಕಳ್ಳ-ಕಾಕರೂ, ದರೋಡೆಕೋರರೂ ತಪಸ್ವಿಗಳ ವಿಷಯದಲ್ಲಿ ವಿಶ್ವಾಸ ವನ್ನಿಟ್ಟಿರುತ್ತಾರೆ.

ತಸ್ಮಿನ್ನಿಧೀನಾದಧೀತ ಪ್ರಜ್ಞಾಂ ಪರ್ಯಾದದೀತ ಚ ।
ನ ಚಾಪ್ಯಭೀಕ್ಷ್ಣಂ ಸೇವೇತ ಭೃಶಂ ವಾ ಪ್ರತಿಪೂಜಯೇತ್ ॥೨೯॥

ಆಪತ್ಕಾಲದಲ್ಲಿ ತನ್ನಲ್ಲಿರುವ ಐಶ್ವರ್ಯವನ್ನು ತಪಸ್ವಿಯ ಬಳಿಯಲ್ಲಿ ಇಟ್ಟಿರಬಹುದು. ಅವನ ಸಲಹೆಗಳನ್ನು ಪಡೆದುಕೊಳ್ಳಬಹುದು. ಆದರೆ ಪದೇ ಪದೇ ಅವನ ಬಳಿಗೆ ಹೋಗಬಾರದು. ಆ ಸಮಯದಲ್ಲಿ ಅವನನ್ನು ಹೆಚ್ಚಾಗಿ ಸತ್ಕರಿಸಲೂ ಬಾರದು. (ಅವನ ಸಮ್ಮಾನ-ಸೇವೆಗಳನ್ನು ಗುಟ್ಟಿನಲ್ಲಿಯೇ ಮಾಡಬೇಕೇ ಹೊರತು ಲೋಕದ ಜನರಿಗೆ ಆ ವಿಷಯವು ತಿಳಿಯಬಾರದು.)

ಅನ್ಯಃ ಕಾರ್ಯಃ ಸ್ವರಾಷ್ಟ್ರೇಷು ಪರರಾಷ್ಟ್ರೇಷು ಚಾಪರಃ ।
ಅಟವೀಷು ಪರಃ ಕಾರ್ಯಃ ಸಾಮನ್ತನಗರೇಷ್ವಪಿ ॥೩೦॥

ರಾಜನು ತನ್ನ ದೇಶದಲ್ಲಿಯೂ, ಶತ್ರುದೇಶಗಳಲ್ಲಿಯೂ, ಅರಣ್ಯ ದಲ್ಲಿಯೂ, ಸಾಮಂತರಾಷ್ಟ್ರಗಳಲ್ಲಿಯೂ ಇರುವ ಬೇರೆ-ಬೇರೇ ತಪಸ್ವಿಗಳನ್ನು ಗುಟ್ಟಾಗಿ ಸಂಧಿಸಿ ಅವರೊಡನೆ ಸೌಹಾರ್ದವನ್ನು ಬೆಳೆಸಿಕೊಳ್ಳಬೇಕು.

ತೇಷು ಸತ್ಕಾರಮಾನಾಭ್ಯಾಂ ಸಂವಿಭಾಗಾಂಶ್ಚ ಕಾರಯೇತ್ ।
ಪರರಾಷ್ಟ್ರಾಟವೀಸ್ಥೇಷು ಯಥಾ ಸ್ವವಿಷಯೇ ತಥಾ ॥೩೧॥

ಅವರುಗಳನ್ನು ಸತ್ಕರಿಸಿ ಗೌರವಿಸುವುದರ ಜೊತೆಗೆ ಅವರಿಗೆ ಬೇಕಾ ಗುವ ಅವಶ್ಯವಸ್ತುಗಳನ್ನು ಕೊಡಬೇಕು. ತನ್ನ ರಾಜ್ಯದಲ್ಲಿರುವ ತಪಸ್ವಿಗಳನ್ನು ಸತ್ಕರಿಸುವಂತೆಯೇ ಪರರಾಷ್ಟ್ರದಲ್ಲಿರುವ ತಪಸ್ವಿಗಳನ್ನೂ ಆದರಿಸಿ-ಸತ್ಕರಿಸಬೇಕು.

ತೇ ಕಸ್ಯಾಂಚಿದವಸ್ಥಾಯಾಂ ಶರಣಂ ಶರಣಾರ್ಥಿನೇ ।
ರಾಜ್ಞೇ ದದ್ಯುರ್ಯಥಾಕಾಮಂ ತಾಪಸಾಃ ಸಂಶಿತವ್ರತಾಃ ॥೩೨॥

ಕಠೋರವ್ರತನಿಷ್ಠರಾದ ಆ ತಪಸ್ವಿಗಳು ಯಾವುದಾದರೂ ಆಪತ್ಕಾಲ ದಲ್ಲಿ ಶರಣಾರ್ಥಿಯಾಗಿ ಹೋಗುವ ರಾಜನಿಗೆ ಸ್ವೇಚ್ಛೆಯಿಂದಲೇ ಆಶ್ರಯ ವನ್ನು ನೀಡುತ್ತಾರೆ.

ಯುಧಿಷ್ಠಿರ! ನಿನ್ನ ಪ್ರಶ್ನೆಗೆ ಅನುಸಾರವಾಗಿ ರಾಜನು ಎಂತಹ ನಗರ ದಲ್ಲಿ ವಾಸಮಾಡಬೇಕೆಂಬುದನ್ನೂ ಆ ನಗರದ ಲಕ್ಷಣಗಳನ್ನೂ ಸಂಕ್ಷೇಪವಾಗಿ ಹೇಳಿದ್ದೇನೆ. ಮುಂದೇನು ಹೇಳಲಿ?"

ಅ೬ನೆಯ ಅಧ್ಯಾಯವು ಮುಗಿಯಿತು.

ಅ೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಷ್ಟ್ರದ ರಕ್ಷಣೆ ಮತ್ತು ಬೊಕ್ಕಸದ ವೃದ್ಧಿಗೆ ಉಪಾಯಗಳು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ರಾಷ್ಟ್ರಗುಪ್ತಿಂ ಚ ಮೇ ರಾಜನ್ರಾಷ್ಟ್ರಸ್ಯೈವ ತು ಸಂಗ್ರಹಮ್ ।
ಸಮ್ಯಗ್ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ ॥೧॥

"ಭರತಶ್ರೇಷ್ಠನೇ! ನಾನು ರಾಷ್ಟ್ರದ ರಕ್ಷಣೆ ಮತ್ತು ರಾಷ್ಟ್ರದ

ವೃದ್ಧಿಯ ಸಂಬಂಧದಲ್ಲಿ ಎಲ್ಲ ವಿಷಯಗಳನ್ನೂ ಚೆನ್ನಾಗಿ ತಿಳಿದುಕೊಳ್ಳ ಬೇಕೆಂಬ ಇಚ್ಛೆಯಿಂದಿರುತ್ತೇನೆ. ರಕ್ಷಣೆಗೂ ಮತ್ತು ಅಭಿವೃದ್ಧಿಗೂ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನೂ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ರಾಷ್ಟ್ರರಕ್ಷಣೆಗೂ ಮತ್ತು ರಾಷ್ಟ್ರದ ಅಭಿವೃದ್ಧಿಗೂ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನೂ ಬಹಳ ಸಂತೋಷದಿಂದಲೇ ಹೇಳು ತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಗ್ರಾಮಸ್ಯಾಧಿಪತಿಃ ಕಾರ್ಯೋ ದಶಗ್ರಾಮ್ಯಸ್ತಥಾ ಪರಃ ।
ದ್ವಿಗುಣಾಯಾಃ ಶತಸ್ಯೈವಂ ಸಹಸ್ರಸ್ಯ ಚ ಕಾರಯೇತ್ ॥೩॥

ಒಂದು ಗ್ರಾಮಕ್ಕೆ ಒಬ್ಬ ಅಧಿಪತಿಯಿರಬೇಕು. ಹತ್ತು ಗ್ರಾಮಗಳನ್ನು ಸೇರಿಸಿ ಆ ಹತ್ತು ಗ್ರಾಮಗಳಿಗೂ ಬೇರೊಬ್ಬ ಅಧಿಪತಿಯಿರಬೇಕು. ಎರಡು ಹತ್ತು ಗ್ರಾಮಗಳಿಗೆ ಎಂದರೆ ಇಪ್ಪತ್ತು ಗ್ರಾಮಗಳಿಗೆ ಮತ್ತೊಬ್ಬ ಅಧಿಪತಿಯಿರಬೇಕು. ನೂರು ಗ್ರಾಮಗಳಿಗೆ ಮತ್ತೊಬ್ಬ ಅಧಿಪತಿಯಿರಬೇಕು. ಸಾವಿರ ಗ್ರಾಮಗಳಿಗೆ ಮತ್ತೊಬ್ಬ ಅಧಿಪತಿಯಿರಬೇಕು. (ಹಳ್ಳಿಗೊಬ್ಬ ಪಟೇಲ. ಹತ್ತು ಹಳ್ಳಿಗಳು ಒಳಗೊಂಡಿರುವ ಹೋಬಳಿಗೆ ಒಬ್ಬ ಅಧಿಕಾರಿ. ಅಂತಹ ಎರಡು ಹೋಬಳಿಗಳನ್ನೊಳಗೊಂಡ ತಾಲ್ಲೂಕಿಗೆ ಮತ್ತೊಬ್ಬ ಅಧಿಕಾರಿ. ಐದು ತಾಲ್ಲೂಕುಗಳ ಜಿಲ್ಲೆಗೆ ಒಬ್ಬ ಅಧಿಕಾರಿ. ಹತ್ತು ಜಿಲ್ಲೆಗಳನ್ನೊಳಗೊಂಡ ಪ್ರಾಂತಕ್ಕೆ ಮತ್ತೊಬ್ಬ ಅಧಿಕಾರಿ–ಹೀಗೆ ಅಧಿಕಾರಿಗಳನ್ನು ನಿಯಮಿಸಬೇಕು.)

ಗ್ರಾಮೀಯಾನ್ಗ್ರಾಮದೋಷಾಂಶ್ಚ ಗ್ರಾಮಿಕಃ ಪ್ರತಿಭಾವಯೇತ್ ।
ತಾನ್ಬ್ರೂಯಾದ್ದಶಪಾಯಾಸೌ ಸ ತು ವಿಂಶತಿಪಾಯ ವೈ ॥೪॥

ಸೋಽಪಿ ವಿಂಶತ್ಯಧಿಪತಿರ್ವೃತ್ತಂ ಜಾನಪದೇ ಜನೇ ।
ಗ್ರಾಮಾಣಾಂ ಶತಪಾಲಾಯ ಸರ್ವಮೇವ ನಿವೇದಯೇತ್ ॥೫॥

ಗ್ರಾಮಕ್ಕೆ ಅಧಿಪತಿಯಾದವನು ತನ್ನ ಗ್ರಾಮಕ್ಕೆ ಸಂಬಂಧಿಸಿದ ಸಕಲ ವಿಷಯಗಳನ್ನೂ ಮತ್ತು ಅಪರಾಧಗಳನ್ನೂ ದಶಗ್ರಾಮಾಧಿಪತಿಗೆ

(ಹೋಬಳಿಯ ಅಧಿಪತಿಗೆ) ತಿಳಿಸಬೇಕು. ದಶಗ್ರಾಮಾಧಿಪತಿಯಾದವನು ಹತ್ತು ಗ್ರಾಮಗಳ ಸಮೀಕ್ಷೆಯನ್ನೂ ಕ್ರೋಡೀಕರಿಸಿ ವಿಂಶತಿಗ್ರಾಮಾಧಿಪತಿಗೆ (ತಹಸಿಲ್‌ದಾರನಿಗೆ) ತಿಳಿಸಬೇಕು. ವಿಂಶತಿಗ್ರಾಮಾಧಿಪತಿಯು ತನ್ನ ಇಪ್ಪತ್ತು ಗ್ರಾಮಗಳ ವಿಷಯಗಳನ್ನೂ ಕ್ರೋಡೀಕರಿಸಿ ಶತಗ್ರಾಮಾಧಿಪತಿಗೆ (ಜಿಲ್ಲಾಧಿ ಕಾರಿಗೆ) ತಿಳಿಸಬೇಕು. ಶತಗ್ರಾಮಾಧಿಪತಿಯು ನೂರು ಗ್ರಾಮಗಳಿಂದ ಬಂದ ವೃತ್ತಾಂತವೆಲ್ಲವನ್ನೂ ಸಹಸ್ರಗ್ರಾಮಾಧಿಪತಿಗೆ ತಿಳಿಸಬೇಕು. ಸಹಸ್ರಗ್ರಾಮಾಧಿ ಪತಿಯು ತನ್ನ ಕೈಕೆಳಗಿರುವ ಸಾವಿರ ಗ್ರಾಮಗಳ ಯೋಜನೆಗಳನ್ನೂ, ಆದಾಯ-ನಷ್ಟಗಳನ್ನೂ, ಸತ್ಕಾರ್ಯ-ದುಷ್ಕಾರ್ಯಗಳನ್ನೂ ಕ್ರೋಡೀಕರಿಸಿ ರಾಜನಿಗೆ ನಿವೇದಿಸಬೇಕು.

ಯಾನಿ ಗ್ರಾಮ್ಯಾಣಿ ಭೋಜ್ಯಾನಿ ಗ್ರಾಮಿಕಸ್ತಾನ್ಯುಪಾಶ್ರಿಯಾತ್ ।
ದಶಪಸ್ತೇನ ಭರ್ತವ್ಯಸ್ತೇನಾಪಿ ದ್ವಿಗುಣಾಧಿಪಃ ॥೬॥

ಗ್ರಾಮಿಕನು (ಪಟೇಲನು) ತನ್ನ ಗ್ರಾಮದಲ್ಲಾದ ಉತ್ಪತ್ತಿಯನ್ನು (ಕಂದಾಯರೂಪವಾಗಿ ಬರುವ ಹಣವನ್ನು ಅಥವಾ ಆಹಾರಪದಾರ್ಥ ಗಳನ್ನು) ತನ್ನಲ್ಲಿಟ್ಟುಕೊಳ್ಳಬೇಕು. ಅದರಲ್ಲಿ ಒಂದು ನಿರ್ದಿಷ್ಟಾಂಶವನ್ನು ತಾನು ತೆಗೆದುಕೊಂಡು ಉಳಿದುದರಲ್ಲಿ ದಶಗ್ರಾಮಾಧಿಪತಿಯ ಭರಣ-ಪೋಷಣಗಳನ್ನು ಮಾಡಬೇಕು. ಹತ್ತು ಗ್ರಾಮದವರೂ ಕಳುಹಿಸುವ ಆದಾಯದಲ್ಲಿ ದಶಗ್ರಾಮಾಧಿಪತಿಯು ತನಗಾಗಿ ನಿರ್ದಿಷ್ಟವಾದ ಅಂಶವನ್ನು ಇಟ್ಟುಕೊಂಡು ಉಳಿದುದರಲ್ಲಿ ವಿಂಶತಿಗ್ರಾಮಾಧಿಪತಿಯ ಭರಣ-ಪೋಷಣ ಗಳನ್ನು ಮಾಡಬೇಕು. ವಿಂಶತಿಗ್ರಾಮಾಧಿಪತಿಯು ಇಪ್ಪತ್ತು ಗ್ರಾಮಗಳಿಂದ ಬಂದ ಆದಾಯದಲ್ಲಿ ನಿರ್ದಿಷ್ಟಾಂಶವನ್ನಿಟ್ಟುಕೊಂಡು ಉಳಿದುದನ್ನು ಶತ ಗ್ರಾಮಾಧಿಪತಿಗೆ ಕಳುಹಿಸಬೇಕು. ಶತಗ್ರಾಮಾಧಿಪತಿಯು ನೂರು ಗ್ರಾಮ ಗಳಿಂದ ಬಂದ ಆದಾಯದಲ್ಲಿ ನಿರ್ದಿಷ್ಟಾಂಶವನ್ನಿಟ್ಟುಕೊಂಡು ಉಳಿದುದನ್ನು ಸಹಸ್ರಗ್ರಾಮಾಧಿಪತಿಗೆ ಕಳುಹಿಸಬೇಕು. ಸಹಸ್ರಗ್ರಾಮಾಧಿಪತಿಯು ಸಾವಿರ ಗ್ರಾಮಗಳಿಂದ ಬಂದ ಆದಾಯದಲ್ಲಿ ನಿರ್ದಿಷ್ಟಾಂಶವನ್ನಿಟ್ಟುಕೊಂಡು ಉಳಿದ ಧನವನ್ನು ರಾಜನಿಗೆ ಒಪ್ಪಿಸಬೇಕು.

ಗ್ರಾಮಂ ಗ್ರಾಮಶತಾಧ್ಯಕ್ಷೋ ಭೋಕ್ತುಮರ್ಹತಿ ಸತ್ಕೃತಃ ।

ಮಹಾನ್ತಂ ಭರತಶ್ರೇಷ್ಠ ಸುಸ್ಫೀತಂ ಜನಸಂಕುಲಮ್ ।
ತತ್ರ ಹ್ಯನೇಕಪಾಯತ್ತಂ ರಾಜ್ಞೋ ಭವತಿ ಭಾರತ ॥೭॥

ರಾಜಸತ್ಕೃತನಾದ ಶತಗ್ರಾಮಾಧ್ಯಕ್ಷನು ಧನ-ಧಾನ್ಯಸಮೃದ್ಧಿಯಿಂದಲೂ ಜನಬಾಹುಳ್ಯದಿಂದಲೂ ಕೂಡಿರುವ ವಿಶಾಲವಾದ ಒಂದು ಗ್ರಾಮದ ಆದಾಯವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ಅರ್ಹನಾಗು ತ್ತಾನೆ. ಹೀಗೆ ರಾಜನ ಸಮೃದ್ಧವಾದ ರಾಜ್ಯವು ಅನೇಕರ ಅಧಿಕಾರಕ್ಕೆ ಒಳಪಟ್ಟು ರಕ್ಷಿಸಲ್ಪಡಬೇಕು.

ಶಾಖಾನಗರಮರ್ಹಸ್ತು ಸಹಸ್ರಪತಿರುತ್ತಮಃ ।
ಧಾನ್ಯಹೈರಣ್ಯಭೋಗೇನ ಭೋಕ್ತುಂ ರಾಷ್ಟ್ರೀಯಸಙ್ಗತಃ ॥೮॥

ಶ್ರೇಷ್ಠನಾದ ಸಹಸ್ರಗ್ರಾಮಾಧಿಪತಿಯು ಶಾಖಾನಗರದ (ಉಪ ನಗರದ) ಆದಾಯವನ್ನು ಪಡೆಯಲು ಅರ್ಹನಾಗುತ್ತಾನೆ. ಉಪನಗರದಲ್ಲಿ ಯಾವ ಧಾನ್ಯ-ಸುವರ್ಣಗಳು ಲಭಿಸುತ್ತವೆಯೋ ಅವನ್ನು ಸಹಸ್ರ ಗ್ರಾಮಾಧಿಪತಿಯು ತನ್ನ ಇಚ್ಛೆಯಂತೆ ಉಪಭೋಗಿಸಬಹುದು. ಆದರೆ ಅವನು ರಾಷ್ಟ್ರೀಯನೊಡನೆ (ರಾಜನ ಭಾವಮೈದುನ ಅಥವಾ ರಾಜನ ಸಂಬಂಧಿಯೊಡನೆ) ಸೇರಿಕೊಂಡು (ಅವನ ಗಮನಕ್ಕೆ ತಂದು) ಧಾನ್ಯ, ಸುವರ್ಣಗಳನ್ನು ಉಪಭುಂಜಿಸಬೇಕು.

ತೇಷಾಂ ಸಂಗ್ರಾಮಕೃತ್ಯಂ ಸ್ಯಾದ್ಗ್ರಾಮಕೃತ್ಯಂ ಚ ತೇಷು ಯತ್ ।
ಧರ್ಮಜ್ಞಃ ಸಚಿವಃ ಕಶ್ಚಿತ್ತತ್ತತ್ಪಶ್ಯೇದತನ್ದ್ರಿತಃ ॥೯॥

ಆ ಗ್ರಾಮಾಧಿಪತಿಗಳು ಯುದ್ಧಕಾಲದಲ್ಲಿ ಮಾಡಬೇಕಾದ ಕಾರ್ಯ ಗಳನ್ನೂ ಆ ಗ್ರಾಮಗಳಲ್ಲಿ ಮಾಡಬೇಕಾದ ಅಭಿವೃದ್ಧಿಕಾರ್ಯಗಳನ್ನೂ ಧರ್ಮಜ್ಞನಾದ ಆಲಸ್ಯರಹಿತನಾದ ಮಂತ್ರಿಯೊಬ್ಬನು ನೋಡಿಕೊಳ್ಳಬೇಕು.

ನಗರೇ ನಗರೇ ವಾ ಸ್ಯಾದೇಕಃ ಸರ್ವಾರ್ಥಚಿನ್ತಕಃ ।
ಉಚ್ಚೈಃ ಸ್ಥಾನೇ ಘೋರರೂಪೋ ನಕ್ಷತ್ರಾಣಾಮಿವ ಗ್ರಹಃ ।
ಭವೇತ್ಸ ತಾನ್ಪರಿಕ್ರಾಮೇತ್ಸರ್ವಾನೇವ ಸಭಾಸದಃ ॥೧೧॥

ಪ್ರತಿಯೊಂದು ನಗರಕ್ಕೂ ಸರ್ವಾರ್ಥಚಿಂತಕನಾದ ಒಬ್ಬ ಅಧಿಕಾರಿ ಇರಬೇಕು. ನಕ್ಷತ್ರಗಳಿಗಿಂತಲೂ ಎತ್ತರವಾದ ಸ್ಥಾನದಲ್ಲಿ ಗ್ರಹವೊಂದು ಘೋರರೂಪದಿಂದ ವಿರಾಜಿಸುವಂತೆ–ಆ ಅಧಿಕಾರಿಯು ಎಲ್ಲರಿಗಿಂತಲೂ ಉಚ್ಚಸ್ಥಾನದಲ್ಲಿರಬೇಕು. ಎಲ್ಲ ಸಭಾಸದರಿಗೂ ಅಧಿಕಾರಿಯು ನಿಕಟವರ್ತಿಯಾಗಿದ್ದು ಅವರು ಮಾಡುವ ಕಾರ್ಯಗಳನ್ನು ಪರಿಶೀಲಿಸುತ್ತಿರಬೇಕು.

ತೇಷಾಂ ವೃತ್ತಿಂ ಪರಿಣಯೇತ್ಕಶ್ಚಿದ್ರಾಷ್ಟ್ರೇಷು ತಚ್ಚರಃ ।
ಜಿಘಾಂಸವಃ ಪಾಪಕಾಮಾಃ ಪರಸ್ವಾದಾಯಿನಃ ಶಠಾಃ ।
ರಕ್ಷಾಭ್ಯಧಿಕೃತಾ ನಾಮ ತೇಭ್ಯೋ ರಕ್ಷೇದಿಮಾಃ ಪ್ರಜಾಃ ॥೧೨॥

ಸಭಾಸದರು ಮಾಡುವ ಕಾರ್ಯಗಳನ್ನೂ ಅವರ ಮನೋಭಾವಗಳನ್ನೂ ರಾಷ್ಟ್ರಗಳಲ್ಲಿ ಪರ್ಯಟನಮಾಡುವ ಚಾರನು ತಿಳಿದು ಸರ್ವಾರ್ಥಚಿಂತಕನಾದ ಅಧಿಕಾರಿಗೆ ತಿಳಿಸಬೇಕು. ರಕ್ಷಣಾಕಾರ್ಯದಲ್ಲಿ ನಿಯುಕ್ತರಾದ ಅಧಿಕಾರಿಗಳಲ್ಲಿ ಕೆಲವರು ಸಾಮಾನ್ಯವಾಗಿ ಹಿಂಸೆಮಾಡುವ ಸ್ವಭಾವದಿಂದ ಕೂಡಿದವರು. ಇಂತಹವರು ಪಾಪಕಾರ್ಯಮಾಡುವುದರಲ್ಲಿಯೇ ಇಚ್ಛೆಯುಳ್ಳವರಾಗಿ, ಪರಸ್ವತ್ತನ್ನು ಅಪಹರಿಸುವುದರಲ್ಲಿಯೇ ಆಸಕ್ತರಾಗಿ, ಮೋಸಗಾರರೂ ಆಗಿರುತ್ತಾರೆ. ಸರ್ವಾರ್ಥಚಿಂತಕನು ಅಂತಹ ರಕ್ಷಣಾಧಿಕಾರಿಗಳಿಂದ ಜನರನ್ನು ರಕ್ಷಿಸಬೇಕು.

ವಿಕ್ರಯಂ ಕ್ರಯಮಧ್ವಾನಂ ಭಕ್ತಂ ಚ ಸಪರಿಚ್ಛದಮ್ ।
ಯೋಗಕ್ಷೇಮಂ ಚ ಸಮ್ಪ್ರೇಕ್ಷ್ಯ ವಣಿಜಾಂ ಕಾರಯೇತ್ಕರಾನ್ ॥೧೩॥

ಪದಾರ್ಥವನ್ನು ಕೊಳ್ಳುವ ಬೆಲೆ ಮತ್ತು ಮಾರುವ ಬೆಲೆ, ಪದಾರ್ಥಗಳನ್ನು ತರಿಸಿಕೊಳ್ಳಲು ಬೀಳುವ ಮಾರ್ಗದ ಖರ್ಚು, ನೌಕರರ ವೇತನ ಮುಂತಾದುವುಗಳು, ವ್ಯಾಪಾರಿಗಳ ಯೋಗ-ಕ್ಷೇಮಕ್ಕೆ ತಗಲುವ ಖರ್ಚುವೆಚ್ಚಗಳು ಇವುಗಳೆಲ್ಲವನ್ನೂ ಚೆನ್ನಾಗಿ ಪರಿಶೀಲಿಸಿ ವರ್ತಕರಿಗೆ ತೆರಿಗೆಯನ್ನು ಹಾಕಬೇಕು.

ಉತ್ಪತ್ತಿಂ ದಾನವೃತ್ತಿಂ ಚ ಶಿಲ್ಪಂ ಸಮ್ಪ್ರೇಕ್ಷ್ಯ ಚಾಸಕೃತ್ ।
ಶಿಲ್ಪಂ ಪ್ರತಿ ಕರಾನೇವಂ ಶಿಲ್ಪಿನಃ ಪ್ರತಿಕಾರಯೇತ್ ॥೧೪॥

ಪದಾರ್ಥಗಳ ತಯಾರಿಕೆಗೆ ಬೀಳುವ ಖರ್ಚು, ಅವುಗಳ ಮಾರಾಟ

ವಾದನಂತರ ಬರುವ ಲಾಭ, ಸಿದ್ಧವಾದ ಪದಾರ್ಥಗಳಲ್ಲಿರುವ ಉತ್ತಮ ಮಧ್ಯಮಾಧಮಗುಣಗಳು–ಇವುಗಳೆಲ್ಲವನ್ನೂ ಚೆನ್ನಾಗಿ ಪರಿಶೀಲಿಸಿ ಪದಾರ್ಥಗಳ ಮೇಲೂ ತೆರಿಗೆಯನ್ನು ಹಾಕಬೇಕು. ಪದಾರ್ಥಗಳನ್ನು ತಯಾರಿಸುವವನಿಗೂ ಆದಾಯ ತೆರಿಗೆಯನ್ನು ಹಾಕಬೇಕು.

ಉಚ್ಚಾವಚಕರಾ ದಾಪ್ಯಾ ಮಹಾರಾಜ್ಞಾ ಯುಧಿಷ್ಠಿರ ।
ಯಥಾ ಯಥಾ ನ ಸೀದೇರಂಸ್ತಥಾ ಕುರ್ಯಾನ್ಮಹೀಪತಿಃ ।
ಫಲಂ ಕರ್ಮ ಚ ಸಮ್ಪ್ರೇಕ್ಷ್ಯ ತತಃ ಸರ್ವಂ ಪ್ರಕಲ್ಪಯೇತ್ ॥೧೬॥

ಯುಧಿಷ್ಠಿರ! ಮಹಾರಾಜನು ಪದಾರ್ಥಗಳ ಉತ್ಪತ್ತಿ, ಅದಕ್ಕೆ ತಗಲುವ ವೆಚ್ಚ, ಅವುಗಳಿಂದ ಬರುವ ಆದಾಯ, ಕ್ರಯ-ವಿಕ್ರಯಗಳಿಂದ ಬರುವ ಆದಾಯ–ಇವುಗಳೆಲ್ಲವನ್ನೂ ಚೆನ್ನಾಗಿ ಪರಿಶೀಲಿಸಿ ನಿವ್ವಳ ಲಾಭಕ್ಕೆ ಅನುಗುಣವಾಗಿ ತೆರಿಗೆಯನ್ನು ಹಾಕಬೇಕು. ಎಲ್ಲ ಪದಾರ್ಥಗಳಿಗೂ ಎಲ್ಲರಿಗೂ ಒಂದೇ ವಿಧವಾದ ತೆರಿಗೆಗಳನ್ನೂ ಹೇರಬಾರದು. ಕಡಿಮೆ ಆದಾಯವಿರುವವನಿಗೆ ಕಡಿಮೆ ತೆರಿಗೆಯನ್ನು, ಹೆಚ್ಚು ಆದಾಯವಿರುವವನಿಗೆ ಹೆಚ್ಚು ತೆರಿಗೆಯನ್ನೂ ಹೆಚ್ಚು ಲಾಭ ಬರುವ ಪದಾರ್ಥಗಳಿಗೆ ಹೆಚ್ಚು ತೆರಿಗೆಯನ್ನೂ ಹಾಕಬೇಕು. ಕರಭಾರದಿಂದಾಗಿ ಪ್ರಜೆಗಳ ವಿನಾಶವಾಗದಂತೆ ರಾಜನು ನೋಡಿಕೊಳ್ಳಬೇಕು. ಪದಾರ್ಥಗಳಿಂದ ಬರುವ ಲಾಭ, ಅದಕ್ಕೆ ತಗಲುವ ವೆಚ್ಚ ಮೊದಲಾದುವನ್ನು ಚೆನ್ನಾಗಿ ಪರೀಕ್ಷಿಸಿದನಂತರವೇ ತೆರಿಗೆಯನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಬೇಕು.

ಫಲಂ ಕರ್ಮ ಚ ನಿರ್ಹೇತು ನ ಕಶ್ಚಿತ್ಸಮ್ಪ್ರವರ್ತತೇ ।
ಯಥಾ ರಾಜಾ ಚ ಕರ್ತಾ ಚ ಸ್ಯಾತಾಂ ಕರ್ಮಣಿ ಭಾಗಿನೌ ।
ಸಂವೇಕ್ಷ್ಯ ತು ತಥಾ ರಾಜ್ಞಾ ಪ್ರಣೇಯಾಃ ಸತತಂ ಕರಾಃ ॥೧೭॥

ಲಾಭ ಮತ್ತು ಕರ್ಮ ಇವೆರಡರ ಪ್ರಯೋಜನವೂ ಇಲ್ಲದಿದ್ದರೆ ಯಾವನೊಬ್ಬನೂ ಯಾವ ಕಾರ್ಯವನ್ನು ಮಾಡಲೂ ಹೋಗುವುದಿಲ್ಲ. ಲಾಭವನ್ನು ಗಳಿಸಲೂ ಇಚ್ಛಿಸುವುದಿಲ್ಲ. ರಾಜನು ಹೀಗೆ ರಾಜ್ಯಾಡಳಿತದ ಕರ್ಮಫಲಕ್ಕೆ ಭಾಗಿಯೋ–ಹಾಗೆಯೇ ಕೃಷಿ-ವಾಣಿಜ್ಯಾದಿಗಳಲ್ಲಿ ವ್ಯವಹರಿ

ಸುವವನು ಕರ್ಮಫಲಕ್ಕೆ ಭಾಗಿಯಾಗುತ್ತಾನೆ. ಆದುದರಿಂದ ಕೃಷಿ-ವಾಣಿಜ್ಯಾದಿಗಳಲ್ಲಿ ವ್ಯವಹರಿಸುವವನಿಗೂ ಕರ್ಮಫಲವು ಸಿಕ್ಕುವ ರೀತಿಯಲ್ಲಿ ಚೆನ್ನಾಗಿ ಪರಿಶೀಲಿಸಿ ರಾಜನು ತೆರಿಗೆಗಳನ್ನು ವಿಧಿಸಬೇಕು.

ನೋಚ್ಛಿನ್ದ್ಯಾದಾತ್ಮನೋ ಮೂಲಂ ಪರೇಷಾಂ ಚಾಪಿ ತೃಷ್ಣಯಾ ।
ಈಹಾದ್ವಾರಾಣಿ ಸಂರುಧ್ಯ ರಾಜಾ ಸಮ್ಪ್ರೀತದರ್ಶನಃ ।
ಪ್ರದ್ವಿಷನ್ತಿ ಪರಿಖ್ಯಾತಂ ರಾಜಾನಮತಿಖಾದಿನಮ್ ॥೧೯॥

ಕರವನ್ನೇ ತೆಗೆದುಕೊಳ್ಳದೇ ತನ್ನನ್ನು ತಾನು ಹಾಳುಮಾಡಿಕೊಳ್ಳಲೂ ಬಾರದು. ಧನದ ತೃಷ್ಣೆಯಿಂದ ಕೃಷಿ-ವಾಣಿಜ್ಯಾದಿಗಳಲ್ಲಿ ತೊಡಗಿರುವವರ ಮೂಲವನ್ನೂ ವಿನಾಶಗೊಳಿಸಬಾರದು. ಅತ್ಯಾಶೆಯ ದ್ವಾರವನ್ನು ಮುಚ್ಚಿ ಯಥೋಚಿತವಾದ ತೆರಿಗೆಗಳನ್ನು ಮಾತ್ರವೇ ಜನರ ಮೇಲೆ ಹಾಕುವುದರಿಂದ ರಾಜನು ಜನರಿಗೆ ಪ್ರಿಯದರ್ಶನನಾಗುತ್ತಾನೆ. ಪ್ರಜೆಗಳ ಆದಾಯವನ್ನು ಅತಿಯಾಗಿ ಕಬಳಿಸುವ ಖ್ಯಾತಿಯನ್ನು ಪಡೆದ ರಾಜನನ್ನು ಪ್ರಜೆಗಳು ದ್ವೇಷಿಸುತ್ತಾರೆ.

ಪ್ರದ್ವಿಷ್ಟಸ್ಯ ಕುತಃ ಶ್ರೇಯೋ ನಾಪ್ರಿಯೋ ಲಭತೇ ಫಲಮ್ ।
ವತ್ಸೌಪಮ್ಯೇನ ದೋಗ್ಧವ್ಯಂ ರಾಷ್ಟ್ರಮಕ್ಷೀಣಬುದ್ಧಿನಾ ॥೨೦॥

ಯಾವ ರಾಜನನ್ನು ಪ್ರಜೆಗಳು ದ್ವೇಷಿಸುವರೋ–ಆ ರಾಜನಿಗೆ ಶ್ರೇಯಸ್ಸೆಲ್ಲಿಯದು? ಪ್ರಜೆಗಳಿಗೆ ಅಪ್ರಿಯನಾದವನು ಯಾವ ವಿಧವಾದ ಫಲವನ್ನೂ ಹೊಂದುವುದಿಲ್ಲ. ಕರುವಿಗೂ ಹಾಲನ್ನು ಬಿಟ್ಟು ಹಸುವಿನಿಂದ ಹಾಲನ್ನು ಕರೆದುಕೊಳ್ಳುವಂತೆ–ಬುದ್ಧಿವಂತನಾದ ರಾಜನು ರಾಷ್ಟ್ರವನ್ನು ಕರೆದುಕೊಳ್ಳಬೇಕು. ಪ್ರಜೆಗಳಿಗೆ ಸ್ವಲ್ಪವೂ ತೊಂದರೆಯಾಗದ ರೀತಿಯಲ್ಲಿ, ಹಸುವಿನ ಕರುವಿನಂತೆ, ಪ್ರಜೆಗಳೂ ವೃದ್ಧಿಹೊಂದುವ ಹಾಗೆ ಪ್ರಜೆಗಳಿಂದ ತೆರಿಗೆಗಳನ್ನು ತೆಗೆದುಕೊಳ್ಳಬೇಕು.

ಭೃತೋ ವತ್ಸೋ ಜಾತಬಲಃ ಪೀಡಾಂ ಸಹತಿ ಭಾರತ ।
ನ ಕರ್ಮ ಕುರುತೇ ವತ್ಸೋ ಭೃಶಂ ದುಗ್ಧೋ ಯುಧಿಷ್ಠಿರ ॥೨೧॥

ಕರುವಿಗೆ ಸಾಕಷ್ಟು ಹಾಲುಬಿಡದೇ ಕರೆಯಬಾರದು. ಅದಕ್ಕೆ ಬೇಕಾಗುವಷ್ಟು ಹಾಲನ್ನು ಬಿಟ್ಟು ಅದು ಬಲಿಷ್ಠವಾಗುವಂತೆ ಮಾಡಬೇಕು. ಆಗ

ಅದು ಭಾರವಹನದ ಕಷ್ಟವನ್ನು ಸಹಿಸಿಕೊಳ್ಳಬಲ್ಲುದು. ಕರುವಿಗೆ ಹಾಲೇ ಸಿಕ್ಕದಂತೆ ಮಾಡಿದರೆ (ತಾನೇ ಎಲ್ಲವನ್ನೂ ಕರೆದುಕೊಂಡರೆ) ಕರುವು ಬದುಕುವುದೇ ಕಷ್ಟ. ಬದುಕಿದರೂ ಯಾವ ಕೆಲಸವನ್ನೂ ಮಾಡಲಾರದು. ಅಂತೆಯೇ ಮನುಷ್ಯನು ವ್ಯಾಪಾರದಲ್ಲಿ ತೊಡಗಿದ ಕ್ಷಣದಿಂದಲೇ ಲಾಭವನ್ನು ಸಂಪಾದಿಸುವುದಿಲ್ಲ. ಕೃಷಿ-ವಾಣಿಜ್ಯಗಳಲ್ಲಿ ತೊಡಗಿರುವವರು ಸ್ವಲ್ಪಕಾಲದವರೆಗೆ ವ್ಯವಹರಿಸಿ ವ್ಯಾಪಾರದಲ್ಲಿ ರೂಢವಾದನಂತರ ರಾಜನು ಹೇರುವ ತೆರಿಗೆಯನ್ನು ಕೊಡಲು ಸಮರ್ಥರಾಗುತ್ತಾರೆ.

(ನೂತನವಾಗಿ ಪ್ರಾರಂಭಿಸಿದ ವ್ಯಾಪಾರದ ಮೇಲೆ ಸ್ವಲ್ಪಸಮಯದ ವರೆಗೂ ಹೆಚ್ಚು ತೆರಿಗೆಗಳನ್ನು ಹಾಕಬಾರದು–ಎಂಬ ಅಭಿಪ್ರಾಯ.)

ರಾಷ್ಟ್ರಮಪ್ಯತಿದುಗ್ಧಂ ಹಿ ನ ಕರ್ಮ ಕುರುತೇ ಮಹತ್ ।
ಯೋ ರಾಷ್ಟ್ರಮನುಗೃಹ್ಣಾತಿ ಪರಿರಕ್ಷನ್ಸ್ವಯಂ ನೃಪಃ ।
ಸಂಜಾತಮುಪಜೀವನ್ಸ ಲಭತೇ ಸುಮಹತ್ಫಲಮ್ ॥೨೨॥

ರಾಷ್ಟ್ರವನ್ನು ಅತಿಯಾಗಿ ಕರೆದರೆ ಅಂತಹ ರಾಷ್ಟ್ರವು ಯಾವ ಮಹತ್ತ್ವವನ್ನೂ ಸಾಧಿಸಲಾರದು. ಹೆಚ್ಚಿನ ತೆರಿಗೆಗಳನ್ನು ಹಾಕುವುದರಿಂದ ರಾಷ್ಟ್ರವು ಮಹತ್ತ್ವವನ್ನು ಸಾಧಿಸುವುದಿಲ್ಲ. ತೆರಿಗೆಯ ಪ್ರಮಾಣವು ಕಡಿಮೆಯಿರಬೇಕು. ಪ್ರಜೆಗಳಿಗೆ ಕಷ್ಟವಾಗದ ರೀತಿಯಲ್ಲಿರಬೇಕು. ಯಾವ ರಾಜನು ತನ್ನ ರಕ್ಷಣೆಯಲ್ಲಿಯೇ ನಿರತನಾಗಿರುತ್ತಾ ಲಭಿಸಿದಷ್ಟು ಆದಾಯದಿಂದಲೇ ತನ್ನ ಜೀವನವನ್ನು ನಡೆಸುತ್ತಾನೆಯೋ–ಅಂತಹ ರಾಜನು ರಾಷ್ಟ್ರವನ್ನು ಅನುಗ್ರಹಿಸಿದಂತಾಗುತ್ತದೆ. ಹೀಗೆ ಮಾಡುವುದರಿಂದ ರಾಜನು ಮಹಾಫಲವನ್ನು ಪಡೆದುಕೊಳ್ಳುತ್ತಾನೆ.

ಆಪದರ್ಥಂ ಚ ನಿರ್ಯಾತಂ ಧನಂ ತ್ವಿಹ ವಿವರ್ಧಯೇತ್ ।
ರಾಷ್ಟ್ರಂ ಚ ಕೋಶಮೂಲಂ ಸ್ಯಾತ್ಕೋಶೋ ವೇಶ್ಮಗತಸ್ತಥಾ ॥೨೩॥

ಆಪತ್ಕಾಲಕ್ಕೋಸ್ಕರ ಪ್ರಜೆಗಳಿಂದ ತೆಗೆದುಕೊಂಡ ಧನವನ್ನು ರಾಜನು ಅಭಿವೃದ್ಧಿಗೊಳಿಸಬೇಕು. (ಮೀಸಲುನಿಧಿಯನ್ನು ಕಷ್ಟಕಾಲದಲ್ಲಿ ವ್ಯಯಿಸಲು ಅಧಿಕಗೊಳಿಸಬೇಕು.) ಪ್ರಜೆಗಳ ಹತ್ತಿರವಿರುವ ಹಣವೂ ಆಪತ್ಕಾಲ

ದಲ್ಲಿ ರಾಷ್ಟ್ರಕ್ಕೇ ಸೇರುತ್ತದೆ. ಆಪತ್ಕಾಲವು ಬಂದಾಗ ಪ್ರಜೆಗಳೇ ಸ್ವಪ್ರೇರಣೆಯಿಂದ ತಮ್ಮಲ್ಲಿರುವ ಧನವನ್ನು ರಾಷ್ಟ್ರದ ರಕ್ಷಣೆಗಾಗಿ ಅರ್ಪಿಸುತ್ತಾರೆ. ಆದುದರಿಂದ ಬುದ್ಧಿವಂತನಾದ ರಾಜನು ಪ್ರಜೆಗಳಲ್ಲಿರುವ ಧನವನ್ನು ಅಭಿವೃದ್ಧಿಗೊಳಿಸಬೇಕು. ರಾಷ್ಟ್ರದ ಅಭಿವೃದ್ಧಿಯು ಕೋಶಮೂಲವಾಗಿರುತ್ತದೆ. ಆ ಕೋಶವು ಅಥವಾ ಬೊಕ್ಕಸವು ರಾಷ್ಟ್ರದ ಎಲ್ಲರ ಮನೆಗಳಲ್ಲಿಯೂ ಇದೆ–ಎಂದೇ ರಾಜನು ಭಾವಿಸಿಕೊಳ್ಳಬೇಕು.

ಪೌರಜಾನಪದಾನ್ಸರ್ವಾನ್ಸಂಶ್ರಿತೋಪಾಶ್ರಿತಾಂಸ್ತಥಾ ।
ಯಥಾಶಕ್ತ್ಯನುಕಮ್ಪೇತ ಸರ್ವಾನ್ಸ್ವಲ್ಪಧನಾನಪಿ ॥೨೪॥

ನಗರ ಮತ್ತು ಗ್ರಾಮಗಳ ಜನರು ತಾವಾಗಿಯೇ ನೇರವಾಗಿ ರಾಜನ ಆಶ್ರಯವನ್ನು ಪಡೆಯಲು ಬಂದರೂ–ಯಾರಾದರೂ ಮಧ್ಯಸ್ಥರ ಮೂಲಕವಾಗಿ ಆಶ್ರಯ ಪಡೆಯಲು ಬಂದರೂ–ಎಲ್ಲರನ್ನೂ ಯಥಾಶಕ್ತಿ ಅನುಗ್ರಹಿಸಬೇಕು. ಅವರಲ್ಲಿ ಕೆಲವರು ಅಲ್ಪಧನರಾಗಿದ್ದರೂ ಅವರನ್ನು ರಾಜನು ಉದಾಸೀನಮಾಡದೇ ಅನುಗ್ರಹಬುದ್ಧಿಯಿಂದಲೇ ಕಾಣಬೇಕು.

ಬಾಹ್ಯಂ ಜನಂ ಭೇದಯಿತ್ವಾ ಭೋಕ್ತವ್ಯೋ ಮಧ್ಯಮಃ ಸುಖಮ್ ।
ಏವಂ ನಾಸ್ಯ ಪ್ರಕುಪ್ಯನ್ತಿ ಜನಾಃ ಸುಖಿತದುಃಖಿತಾಃ ॥೨೫॥

ರಾಜನು ಕಾಡಿನಲ್ಲಿಯೇ ಸಾಮಾನ್ಯವಾಗಿ ವಾಸಮಾಡುವ ಹೊರಗಿನ ಜನರನ್ನು ಭೇದೋಪಾಯದಿಂದ ರಾಷ್ಟ್ರದ ಗಡಿಯಲ್ಲಿ ನೆಲೆಸುವಂತೆ ಏರ್ಪಡಿಸಿ ಅವರಿಂದ ಮಧ್ಯಮವರ್ಗದ ಗ್ರಾಮೀಣಜನರಿಗೆ ರಕ್ಷಣೆಯನ್ನಿತ್ತು ಅವರಿಂದ ದೇಶದ ಅಭಿವೃದ್ಧಿಗಾಗಿ ಧನವನ್ನು ಪಡೆದುಕೊಳ್ಳಬೇಕು. ದರೋಡೆಕಾರರಿಂದ ದುಃಖವನ್ನೂ ರಾಜನಿಂದ ಸುಖವನ್ನೂ ಪಡೆಯುವ ಗ್ರಾಮೀಣ ಜನರು ರಾಜನಿಗೆ ಧನವನ್ನು ಕೊಡುವ ವಿಷಯದಲ್ಲಿ ಕೋಪಗೊಳ್ಳುವುದಿಲ್ಲ.

ಪ್ರಾಗೇವ ತು ಧನಾದಾನಮನುಭಾಷ್ಯ ತತಃ ಪುನಃ ।
ಸಂನಿಪತ್ಯ ಸ್ವವಿಷಯೇ ಭಯಂ ರಾಷ್ಟ್ರೇ ಪ್ರದರ್ಶಯೇತ್ ॥೨೬॥

ಪ್ರಜೆಗಳಿಂದ ಧನವನ್ನು ಸಂಗ್ರಹಮಾಡುವ ಮೊದಲು ರಾಜನು ಸಂಗ್ರಹಿಸಬೇಕಾದ ಅವಶ್ಯಕತೆಯನ್ನು ಕುರಿತು ಜನರಿಗೆ ತಿಳಿಯಹೇಳಬೇಕು.

ರಾಷ್ಟ್ರದ ಎಲ್ಲ ಕಡೆಗಳಲ್ಲಿಯೂ ಸಂಚರಿಸಿ ರಾಷ್ಟ್ರಕ್ಕೆ ಒದಗಿಬಂದಿರುವ ವಿಪತ್ತನ್ನು ಜನಗಳಿಗೆ ಮನಗಾಣಿಸಬೇಕು.

ಇಯಮಾಪತ್ಸಮುತ್ಪನ್ನಾ ಪರಚಕ್ರಭಯಂ ಮಹತ್ ।
ಅಪಿ ಚಾನ್ತಾಯ ಕಲ್ಪನ್ತೇ ವೇಣೋರಿವಫಲಾಗಮಾಃ ॥೨೮॥

ಅರಯೋ ಮೇ ಸಮುತ್ಥಾಯ ಬಹುಭಿರ್ದಸ್ಯುಭಿಃ ಸಹ ।
ಇದಮಾತ್ಮವಧಾಯೈವ ರಾಷ್ಟ್ರಮಿಚ್ಛನ್ತಿ ಬಾಧಿತುಮ್ ॥೨೯॥

ರಾಜನು ರಾಜ್ಯಾದ್ಯಂತವಾಗಿ ಹೀಗೆ ಘೋಷಣೆಯನ್ನು ಹೊರಡಿಸಬೇಕು : "ಸಜ್ಜನರೇ! ನಮ್ಮ ದೇಶಕ್ಕೆ ದೊಡ್ಡದಾದ ಆಪತ್ತು ಬಂದೊದಗಿದೆ. ಶತ್ರುಪಕ್ಷದವರು ನಮ್ಮ ದೇಶವನ್ನು ಆಕ್ರಮಿಸುವರೆಂಬ ಮಹಾಭೀತಿಯುಂಟಾಗಿದೆ. ಬಿದಿರುಮೆಳೆಯಲ್ಲಿ ಫಲಬಿಡುವುದರಿಂದ ಬಿದಿರುಮೆಳೆಯೇ ನಾಶವಾಗಿ ಹೋಗುವಂತೆ ಶತ್ರುಗಳ ಭಯವು ನಮ್ಮ ವಿನಾಶಕ್ಕೆ ಕಾರಣವಾಗಬಹುದಾಗಿದೆ. ಶತ್ರುಗಳು ಕಳ್ಳ-ಕಾಕರೊಡನೆ ಕೂಡಿಕೊಂಡು ನಮ್ಮನ್ನೇ ಧ್ವಂಸಮಾಡುವ ಉದ್ದೇಶದಿಂದ ನಮ್ಮ ಮೇಲೆ ಬೀಳಲು ಬರುತ್ತಿದ್ದಾರೆ. ನಮ್ಮ ರಾಷ್ಟ್ರವನ್ನು ಅವರು ಧ್ವಂಸಮಾಡಲು ಬದ್ಧಕಂಕಣರಾಗಿದ್ದಾರೆ.

ಅಸ್ಯಾಮಾಪದಿ ಘೋರಾಯಾಂ ಸಮ್ಪ್ರಾಪ್ತೇ ದಾರುಣೇ ಭಯೇ ।
ಪರಿತ್ರಾಣಾಯ ಭವತಃ ಪ್ರಾರ್ಥಯಿಷ್ಯೇ ಧನಾನಿ ವಃ ॥೨೯॥

ಇಂತಹ ಘೋರವಾದ ಆಪತ್ತಿನ ಸಮಯದಲ್ಲಿ–ದಾರುಣವಾದ ಭಯವು ಸನ್ನಿಹಿತವಾಗಿರುವಾಗ ದೇಶದ ರಕ್ಷಣೆಗೋಸ್ಕರ ನಿಮ್ಮಿಂದ ಧನವನ್ನು ಪ್ರಾರ್ಥಿಸುತ್ತಿದ್ದೇನೆ.

ಪ್ರತಿದಾಸ್ಯೇ ಚ ಭವತಾಂ ಸರ್ವಂ ಚಾಹಂ ಭಯಕ್ಷಯೇ ।
ನಾರಯಃ ಪ್ರತಿದಾಸ್ಯನ್ತಿ ಯದ್ಧರೇಯುರ್ಬಲಾದಿತಃ ॥೩೦॥

ಭಯವು ಶಾಂತವಾದೊಡನೆಯೇ (ಶತ್ರುಗಳು ಹಿಮ್ಮೆಟ್ಟಿದೊಡನೆಯೇ) ನಾನು ನಿಮ್ಮ ಹಣವನ್ನು ಹಿಂದಿರುಗಿಸುತ್ತೇನೆ. ಒಂದು ವೇಳೆ ಇಂತಹ ಆಪತ್ಕಾಲದಲ್ಲಿಯೂ ನೀವು ನಿಮ್ಮಲ್ಲಿರುವ ಹಣವನ್ನು ನನಗೆ

ಕೊಡದಿದ್ದರೆ ಶತ್ರುಗಳಂತೂ ಬಲಾತ್ಕಾರವಾಗಿ ನಿಮ್ಮಿಂದ ಹಣವನ್ನು ಹರಣಮಾಡುತ್ತಾರೆ. ಪುನಃ ಅವರು ನಿಮಗೆ ಹಣವನ್ನು ಹಿಂದಿರುಗಿಸುವುದು ಕನಸಿನ ಮಾತೇ ಸರಿ.

ಕಲತ್ರಮಾದಿತಃ ಕೃತ್ವಾ ಸರ್ವಂ ವೋ ವಿನಶೇದಿತಿ ।
ಅಪಿ ಚೇತ್ಪುತ್ರದಾರಾರ್ಥಮರ್ಥಸಂಚಯ ಇಷ್ಯತೇ ॥೩೧॥

ಶತ್ರುಗಳು ಆಕ್ರಮಣವನ್ನು ನಡೆಸಿದರೆಂದರೆ ನಿಮ್ಮ ಸ್ತ್ರೀಯರು ಮೊದಲ್ಗೊಂಡು ಎಲ್ಲವೂ ವಿನಾಶಹೊಂದುತ್ತವೆ. ನಿಮ್ಮ ಧನ-ಕನಕ-ವಸ್ತುಗಳೂ ಅವರೊಡನೆಯೇ ಹಾಳಾಗುತ್ತವೆ. ಪುತ್ರ-ಕಳತ್ರ-ಮಿತ್ರವರ್ಗದವರ ರಕ್ಷಣಾರ್ಥವಾಗಿಯೇ ನೀವು ಧನವನ್ನು ಸಂಗ್ರಹಿಸಿರುವಿರಾದರೆ ಆ ಧನವನ್ನು ಈ ಸಮಯದಲ್ಲಿ ನನಗೆ ಕೊಡಿರೆಂದು ಪ್ರಾರ್ಥಿಸುತ್ತೇನೆ.

ನನ್ದಾಮಿ ವಃ ಪ್ರಭಾವೇಣ ಪುತ್ರಾಣಾಮಿವ ಚೋದಯೇ ।
ಯಥಾಶಕ್ತ್ಯುಪಗೃಹ್ಣಾಮಿ ರಾಷ್ಟ್ರಸ್ಯಾಪೀಡಯಾ ಚ ವಃ ॥೩೨॥

ಮಗನ ಅಭ್ಯುದಯವನ್ನು ನೋಡಿ ತಂದೆಯು ಸಂತೋಷಪಡುವಂತೆಯೇ–ನಾನು ನಿಮ್ಮ ಐಶ್ವರ್ಯದ ಪ್ರಭಾವವನ್ನು ನೋಡಿ (ನಿಮ್ಮ ಏಳಿಗೆಯಿಂದ) ಬಹಳವಾಗಿ ಸಂತೋಷಪಡುತ್ತೇನೆ. ಆಪತ್ಕಾಲದಲ್ಲಿ ತಂದೆಯಾದವನು ಮಕ್ಕಳನ್ನು ಸಹಕಾರಕ್ಕಾಗಿ ಹುರಿದುಂಬಿಸುವಂತೆ–ನಿಮ್ಮನ್ನೂ ನಾನಿಂದು ಸಹಾಯಕ್ಕಾಗಿ ಪ್ರಚೋದಿಸುತ್ತಿದ್ದೇನೆ. ರಾಷ್ಟ್ರಕ್ಕೂ ಮತ್ತು ನಿಮಗೂ ಸ್ವಲ್ಪವೂ ಪೀಡೆಯಾಗದ ರೀತಿಯಲ್ಲಿ ನಿಮಗೆ ಕೊಡಲು ಶಕ್ತಿಯಿರುವಷ್ಟು ಧನವನ್ನು ಮಾತ್ರವೇ ತೆಗೆದುಕೊಳ್ಳುತ್ತೇನೆ.

ಆಪತ್ಸ್ವೇವ ಚ ವೋಢವ್ಯಂ ಭವದ್ಭಿಃ ಪುಙ್ಗವೈರಿವ ।
ನ ಚ ಪ್ರಿಯತರಂ ಕಾರ್ಯಂ ಧನಂ ಕಸ್ಯಾಞ್ಚಿದಾಪದಿ ॥೩೩॥

ಯಾವ ರೀತಿಯಲ್ಲಿ ಬಲಿಷ್ಠವಾದ ಹೋರಿಯು ದುರ್ಗಮವಾದ ಸ್ಥಳದಲ್ಲಿಯೂ ಭಾರವನ್ನು ಹೊತ್ತುಕೊಂಡು ಹೋಗುವುದೋ–ಹಾಗೆಯೇ ನೀವೆಲ್ಲರೂ ದೇಶಕ್ಕೊದಗಿರುವ ಈ ಆಪತ್ತಿನ ಸಮಯದಲ್ಲಿ ಭಾರವನ್ನು ಹೊರಲೇಬೇಕು. ನಮ್ಮ ದೇಶಕ್ಕೆ ವಿಪತ್ತು ಬಂದು ಒದಗಿರುವಾಗ ಧನ

ವನ್ನೇ ಅತ್ಯಂತ ಪ್ರಿಯವೆಂದು ಭಾವಿಸಬಾರದು. (ಧನದ ವ್ಯಾಮೋಹದಿಂದ ಅದನ್ನು ಮುಚ್ಚಿಡಲು ಯತ್ನಿಸಬಾರದು.)"

ಇತಿ ವಾಚಾ ಮಧುರಯಾ ಶ್ಲಕ್ಷ್ಣಯಾ ಸೋಪಚಾರಯಾ ।
ಸ್ವರಶ್ಮೀನಭ್ಯವಸೃಜೇದ್ಯೋಗಮಾಧಾಯ ಕಾಲವಿತ್ ॥೩೪॥

ಸಮಯದ ಗತಿ-ವಿಧಾನಗಳನ್ನು ತಿಳಿದಿರುವ ರಾಜನು ಈ ಉಪಾಯ ವನ್ನು ಆಶ್ರಯಿಸಿ ಸ್ನೇಹಯುಕ್ತವಾದ, ಅನುನಯಪೂರ್ಣವಾದ, ಸುಮ ಧುರವಾದ ಮಾತುಗಳಿಂದ ಪ್ರಜೆಗಳನ್ನು ಒಪ್ಪಿಸಿ ತನ್ನ ಪದಾತಿಸೈನಿಕರನ್ನು ಅಥವಾ ಸೇವಕರನ್ನು ಧನಸಂಗ್ರಹಕ್ಕಾಗಿ ಪ್ರಜೆಗಳ ಮನೆಗಳಿಗೆ ಕಳುಹಿಸಬೇಕು.

ಪ್ರಾಕಾರಂ ಭೃತ್ಯಭರಣಂ ವ್ಯಯಂ ಸಂಗ್ರಾಮತೋ ಭಯಮ್ ।
ಯೋಗಕ್ಷೇಮಂ ಚ ಸಮ್ಪ್ರೇಕ್ಷ್ಯ ಗೋಮಿನಃ ಕಾರಯೇತ್ಕರಮ್ ॥೩೫॥

ನಗರವನ್ನು ರಕ್ಷಿಸುವ ಸಲುವಾಗಿ ನಗರದ ಸುತ್ತಲೂ ಪ್ರಾಕಾರವನ್ನು ನಿರ್ಮಿಸುವುದು ; ಸೇವಕರ ಮತ್ತು ಸೈನಿಕರ ಭರಣ-ಪೋಷಣಾದಿಗಳನ್ನು ಮಾಡುವುದು ; ಸಂಗ್ರಾಮಮೂಲವಾದ ಭಯವನ್ನು ನಿವಾರಿಸಿಕೊಳ್ಳುವ ಸಲುವಾಗಿಯೂ ವ್ಯಯಮಾಡುವುದು ; ಎಲ್ಲರ ಯೋಗ-ಕ್ಷೇಮಗಳನ್ನೂ ನೋಡಿಕೊಳ್ಳಬೇಕಾಗಿರುವುದು–ಇವೆಲ್ಲವನ್ನೂ ತೋರಿಸಿಕೊಟ್ಟು ಧನಿಕರಾದ ಗೋಸ್ವಾಮಿಗಳಿಂದ (ವೈಶ್ಯರಿಂದ) ತೆರಿಗೆಯನ್ನು ತೆಗೆದುಕೊಳ್ಳಬೇಕು.

ಉಪೇಕ್ಷಿತಾ ಹಿ ನಶ್ಯೇಯುರ್ಗೋಮಿನೋಽರಣ್ಯವಾಸಿನಃ ।
ತಸ್ಮಾತ್ತೇಷು ವಿಶೇಷೇಣ ಮೃದುಪೂರ್ವಂ ಸಮಾಚರೇತ್ ॥೩೬॥

ಒಂದು ವೇಳೆ ರಾಜನು ವೈಶ್ಯರ ಹಾನಿ-ಲಾಭಗಳನ್ನು ಉಪೇಕ್ಷಿಸಿ ಅವರಿಂದ ಹೆಚ್ಚು ತೆರಿಗೆಯನ್ನು ತೆಗೆದುಕೊಂಡು ಅವರನ್ನು ಪೀಡಿಸಿದ್ದೇ ಆದರೆ–ವೈಶ್ಯರು ದೇಶವನ್ನೇ ಬಿಟ್ಟು ಅರಣ್ಯಕ್ಕೆ ಓಡಿಹೋಗಿ ವಿನಾಶಹೊಂದು ತ್ತಾರೆ. ರಾಜನು ಹಾಗಾಗಲು ಎಂದೂ ಅವಕಾಶವನ್ನೀಯಬಾರದು. ಧನಿಕರಲ್ಲಿ ಅದರಲ್ಲಿಯೂ ವಿಶೇಷವಾಗಿ ವೈಶ್ಯರ ವಿಷಯದಲ್ಲಿ ಮೃದುವಾಗಿಯೇ ವ್ಯವಹರಿಸಬೇಕು.

ಸಾನ್ತ್ವನಂ ರಕ್ಷಣಂ ದಾನಮವಸ್ಥಾ ಚಾಪ್ಯಭೀಕ್ಷ್ಣಶಃ ।
ಗೋಮಿನಾಂ ಪಾರ್ಥ ಕರ್ತವ್ಯಃ ಸಂವಿಭಾಗಃ ಪ್ರಿಯಾಣಿ ಚ ॥೩೭॥

ಕುರುನಂದನ! ವೈಶ್ಯರನ್ನು ಯಾವಾಗಲೂ ಸಂತೈಸುತ್ತಲೇ ಇರಬೇಕು. ಅವರಿಗೆ ಮತ್ತು ಅವರ ವ್ಯವಹಾರಗಳಿಗೆ ಸರಿಯಾದ ರಕ್ಷಣೆಯನ್ನು ಕೊಡಬೇಕು. ಧನವನ್ನು ವರ್ಧಿಸಲು ಅವರಿಗೆ ಸಹಾಯಮಾಡಬೇಕು. ಅವರು ವ್ಯವಹಾರಗಳನ್ನು ಸುದೃಢವಾಗಿ ನಡೆಸಲು ಪದೇ-ಪದೇ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ಅವರಿಗೆ ಆಗಾಗ ಪ್ರಿಯವಸ್ತುಗಳನ್ನು ಪಾರಿತೋಷಿಕವಾಗಿ ಕೊಡುತ್ತಾ, ಅವರಿಗೆ ಪ್ರಿಯವಾದ ಕಾರ್ಯಗಳನ್ನು ಮಾಡುತ್ತಾ ವಿಶ್ವಾಸದಿಂದಿರಬೇಕು.

ಅಜಸ್ರಮುಪಯೋಕ್ತವ್ಯಂ ಫಲಂ ಗೋಮಿಷು ಭಾರತ ।
ಪ್ರಭಾವಯನ್ತಿ ರಾಷ್ಟ್ರಂ ಚ ವ್ಯವಹಾರಂ ಕೃಷಿಂ ತಥಾ ॥೩೮॥

ವ್ಯಾಪಾರಿಗಳಿಗೆ ಅವರ ಶ್ರಮಕ್ಕೆ ತಕ್ಕುದಾದ ಫಲವನ್ನು ಯಾವಾಗಲೂ ಕೊಡುತ್ತಲೇ ಇರಬೇಕು. ಏಕೆಂದರೆ : ವೈಶ್ಯರು ರಾಷ್ಟ್ರದ ಕೃಷಿ-ಗೋರಕ್ಷ್ಯ-ವಾಣಿಜ್ಯಾದಿಗಳನ್ನು ಅಭಿವೃದ್ಧಿಪಡಿಸುತ್ತಾರೆ.

ತಸ್ಮಾದ್ಗೋಮಿಷು ಯತ್ನೇನ ಪ್ರೀತಿಂ ಕುರ್ಯಾದ್ವಿಚಕ್ಷಣಃ ।
ದಯಾವಾನಪ್ರಮತ್ತಶ್ಚ ಕರಾನ್ಸಮ್ಪ್ರಣಯನ್ಮೃದೂನ್ ॥೩೯॥

ಆದುದರಿಂದ ಬುದ್ಧಿವಂತನಾದ ವಿಚಕ್ಷಣನಾದ ರಾಜನು ವೈಶ್ಯರಲ್ಲಿ ಪ್ರಯತ್ನಪೂರ್ವಕವಾಗಿ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು. ಅಪ್ರಮತ್ತ ನಾಗಿದ್ದುಕೊಂಡು ಅವರೊಡನೆ ದಯಾಪರನಾಗಿ ವ್ಯವಹರಿಸುತ್ತಾ ಮೃದು ವಾದ (ಸ್ವಲ್ಪವಾದ) ತೆರಿಗೆಗಳನ್ನು ಅವರಿಂದ ತೆಗೆದುಕೊಳ್ಳಬೇಕು.

ಸರ್ವತ್ರ ಕ್ಷೇಮಚರಣಂ ಸುಲಭಂ ನಾಮ ಗೋಮಿಷು ।
ನ ಹ್ಯತಃ ಸದೃಶಂ ಕಿಂಚಿದ್ವರಮಸ್ತಿ ಯುಧಿಷ್ಠಿರ ॥೪೦॥

ಯುಧಿಷ್ಠಿರ! ರಾಜನು ವೈಶ್ಯರ ವಿಷಯದಲ್ಲಿ ಹೇಗೆ ವರ್ತಿಸ ಬೇಕೆಂದರೆ : ವೈಶ್ಯರು ದೇಶಾದ್ಯಂತವಾಗಿ ಯಾವ ಈತಿಬಾಧೆಗಳೂ ಇಲ್ಲದೆ ಸಕುಶಲರಾಗಿ ಸಂಚರಿಸಲು ಅವಕಾಶವಾಗುವಂತೆ ವ್ಯವಸ್ಥೆಯನ್ನು ಮಾಡ

ಬೇಕು. ರಾಜನಾದವನಿಗೆ ಇದಕ್ಕೆ ಸಮಾನವಾದ ಮತ್ತು ಇದಕ್ಕಿಂತಲೂ ಹೆಚ್ಚು ಹಿತಕರವಾದ ಕಾರ್ಯವೇ ಬೇರೆ ಯಾವುದೂ ಇಲ್ಲ."

೮೭ನೆಯ ಅಧ್ಯಾಯವು ಮುಗಿಯಿತು.

೮೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಪ್ರಜೆಗಳಿಂದ ಕರಗ್ರಹಣ ಮತ್ತು ಬೊಕ್ಕಸವನ್ನು ತುಂಬುವ ವಿಧಾನಗಳು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಾ ರಾಜಾ ಸಮರ್ಥೋಽಪಿ ಕೋಶಾರ್ಥೀ ಸ್ಯಾನ್ಮಹಾಮತೇ ।
ಕಥಂ ಪ್ರವರ್ತೇತ ತದಾ ತನ್ಮೇ ಬ್ರೂಹಿ ಪಿತಾಮಹ ॥೧॥

"ಮಹಾಮತೇ! ಪಿತಾಮಹ! ರಾಜನು ಸಂಪೂರ್ಣಸಮರ್ಥನಾಗಿದ್ದರೂ, ಯಾವ ವಿಧವಾದ ಸಂಕಟಪರಿಸ್ಥಿತಿಗಳು ಇಲ್ಲದಿದ್ದರೂ ಬೊಕ್ಕಸವನ್ನು ತುಂಬುವುದರಲ್ಲಿ ಹೆಚ್ಚು ಆಸಕ್ತಿಯಿದ್ದರೆ–ಆ ರಾಜನು ಹೇಗೆ ನಡೆದುಕೊಳ್ಳಬೇಕು? ಹೇಗೆ ಬೊಕ್ಕಸವನ್ನು ತುಂಬಬೇಕು? ಆ ವಿಷಯವನ್ನೂ ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

ಯಥಾದೇಶಂ ಯಥಾಕಾಲಂ ಯಥಾಬುದ್ಧಿ ಯಥಾಬಲಮ್ ।
ಅನುಶಿಷ್ಯಾತ್ಪ್ರಜಾ ರಾಜಾ ಧರ್ಮಾರ್ಥೀ ತದ್ಧಿತೇ ರತಃ ॥೨॥

"ಧರ್ಮಜ! ಧರ್ಮಮಾರ್ಗದಿಂದಲೇ ರಾಜ್ಯವನ್ನು ಪರಿಪಾಲಿಸಬೇಕೆಂದು ಇಚ್ಛಿಸುವ, ಪ್ರಜೆಗಳ ಹಿತದಲ್ಲಿಯೇ ನಿರತನಾದ ರಾಜನು ದೇಶ-ಕಾಲಗಳ ಪರಿಸ್ಥಿತಿಗೆ ಅನುಗುಣವಾಗಿ ತನ್ನ ಬುದ್ಧಿ-ಬಲಗಳಿಗೆ ಅನುಸಾರವಾಗಿ ಪ್ರಜೆಗಳನ್ನು ಅನುಶಾಸನಮಾಡಬೇಕು.

ಯಥಾ ತಾಸಾಂ ಚ ಮನ್ಯೇತ ಶ್ರೇಯ ಆತ್ಮನ ಏವ ಚ ।
ತಥಾ ಕರ್ಮಾಣಿ ಸರ್ವಾಣಿ ರಾಜಾ ರಾಷ್ಟ್ರೇಷು ವರ್ತಯೇತ್ ॥೩॥

ಪ್ರಜೆಗಳ ಯೋಗ-ಕ್ಷೇಮಗಳೇ ತನ್ನ ಯೋಗ-ಕ್ಷೇಮಗಳೆಂದು ರಾಜನು ಯಾವ ರೀತಿಯಲ್ಲಿ ಭಾವಿಸುತ್ತಾನೆಯೋ ಅದೇ ರೀತಿಯಲ್ಲಿ ರಾಷ್ಟ್ರ

ದಲ್ಲಿ ತಾನು ಮಾಡಲಿರುವ ಎಲ್ಲ ಕಾರ್ಯಗಳನ್ನೂ ಪ್ರಚುರಗೊಳಿಸಬೇಕು. (ನೆರವೇರಿಸಬೇಕು.)

ಮಧುದೋಹಂ ದುಹೇದ್ರಾಷ್ಟ್ರಂ ಭ್ರಮರಾ ಇವ ಪಾದಪಮ್ ।
ವತ್ಸಾಪೇಕ್ಷೀ ದುಹೇಚ್ಚೈವ ಸ್ತನಾಂಶ್ಚ ನ ವಿಕುಟ್ಟಯೇತ್ ॥೪॥

ದುಂಬಿಗಳು ಲತಾವೃಕ್ಷಗಳ ಹೂಗಳಲ್ಲಿರುವ ಮಧುವನ್ನು ಹೂವುಗಳಿಗಾಗಲೀ ವೃಕ್ಷಗಳಿಗಾಗಲೀ ಸ್ವಲ್ಪವೂ ತೊಂದರೆಯಾಗದಂತೆ ಹೀರಿಕೊಳ್ಳುವಂತೆ–ಧರ್ಮಾಸಕ್ತನಾದ ರಾಜನು ಪ್ರಜೆಗಳಿಗೆ ಸ್ವಲ್ಪವಾದರೂ ತೊಂದರೆಯಾಗದ ರೀತಿಯಲ್ಲಿ ಕರವನ್ನು ತೆಗೆದುಕೊಳ್ಳಬೇಕು. ಗೋಪಾಲನು ಕರುವಿನ ಯೋಗ-ಕ್ಷೇಮವನ್ನು ಅಪೇಕ್ಷಿಸುವವನಾಗಿ ಹಾಲನ್ನು ಕರೆದುಕೊಳ್ಳಬೇಕು. ಕರುವಿಗೇ ಪೂರ್ತಿಯಾಗಿ ಎಲ್ಲ ಹಾಲನ್ನೂ ಬಿಡಬಾರದು. ಆದರೆ ಹಾಗೆ ಕರೆದುಕೊಳ್ಳುವಾಗ ಕರುವಿಗೆ ಹೊಟ್ಟೆತುಂಬುವಂತೆಯೂ ಹಸುವಿನ ಕೆಚ್ಚಲಿಗೆ ಘಾಸಿಯಾಗದಂತೆಯೂ ಹಾಲನ್ನು ಕರೆದುಕೊಳ್ಳಬೇಕು. ಅಂತೆಯೇ ರಾಜನಾದರೂ ಪ್ರಜೆಗಳು ವೃದ್ಧಿಹೊಂದಲು ಸಾಕಷ್ಟು ಐಶ್ವರ್ಯವನ್ನು ಅವರಲ್ಲಿಯೇ ಬಿಟ್ಟು ಅಧಿಕವಾಗಿ ಉಳಿಯುವ ಧನವನ್ನು ಮಾತ್ರವೇ ಕರ ರೂಪದಲ್ಲಿ ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳುವುದರಿಂದ ಪ್ರಜೆಗಳಿಗಾಗಲೀ-ಪ್ರಜೆಗಳ ವ್ಯವಹಾರಗಳಿಗಾಗಲೀ ಯಾವ ಧಕ್ಕೆಯೂ ಉಂಟಾಗಬಾರದು.

ಜಲೌಕಾವತ್ಪಿಬೇದ್ರಾಷ್ಟ್ರಂ ಮೃದುನೈವ ನರಾಧಿಪಃ ।
ವ್ಯಾಘ್ರೀವ ಚ ಹರೇತ್ಪುತ್ರಾನ್ಸಂದಶೇನ್ನ ಚ ಪೀಡಯೇತ್ ॥೫॥

ಯಾವ ರೀತಿಯಲ್ಲಿ ನೀರಿನಲ್ಲಿರುವ ಜಿಗಣೆಯು ಮನುಷ್ಯನಿಗೆ ತಿಳಿಯದಂತೆಯೇ ಅವನ ರಕ್ತವನ್ನು ಹೀರುವುದೋ–ಅದೇ ರೀತಿಯಲ್ಲಿ ರಾಜನು ಮೃದುವಾಗಿ ರಾಷ್ಟ್ರದ ಐಶ್ವರ್ಯವನ್ನು ಸಂಗ್ರಹಿಸಬೇಕು. ಯಾವ ರೀತಿಯಲ್ಲಿ ತಾಯಿ ಹುಲಿಯು ಹುಟ್ಟಿದ ಮರಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಲ್ಲಿನಲ್ಲಿ ಕಚ್ಚಿಕೊಂಡೇ ಹೋಗುತ್ತದೆಯೋ, ಆದರೆ ಹಲ್ಲುಗಳಿಂದ ಮರಿಗೆ ಪೀಡೆಯಾಗುವುದಿಲ್ಲವೋ–ಅದೇ ರೀತಿಯಲ್ಲಿ ರಾಜನು ಪ್ರಜೆಗಳಿಂದ ಕರವನ್ನು ತೆಗೆದುಕೊಳ್ಳಬೇಕು ; ಆದರೆ ಅದರಿಂದ ಪ್ರಜೆಗಳಿಗೆ ಪೀಡೆಯಾಗಬಾರದು.

ಯಥಾ ಶಲ್ಯಕವಾನಾಖುಃ ಪದಂ ಧೂನಯತೇ ಸದಾ ।
ಅತೀಕ್ಷ್ಣೇನಾಭ್ಯುಪಾಯೇನ ತಥಾ ರಾಷ್ಟ್ರಂ ಸಮಾಪಿಬೇತ್ ॥೬॥

ಮುಳ್ಳಿನಂತೆ ಮೊನಚಾದ ಹಲ್ಲುಳ್ಳ ಇಲಿಯು ಮನುಷ್ಯರ ಕಾಲನ್ನು ಬಾರಿ-ಬಾರಿಗೂ ಕಚ್ಚುವುದು. ಆದರೆ ಹಾಗೆ ಕಚ್ಚುತ್ತಿರುವಾಗ ನಿದ್ದೆಯಲ್ಲಿರುವ ಮನುಷ್ಯನು ಒಮ್ಮೆ ಕಾಲನ್ನು ಝಾಡಿಸುವನೇ ಹೊರತು ಅವನಿಗೆ ಅದರಿಂದ ತೀಕ್ಷ್ಣವಾದ ಯಾತನೆಯೇನೂ ಆಗುವುದಿಲ್ಲ. ಅದೇ ರೀತಿಯಲ್ಲಿ ರಾಜನು ತೀಕ್ಷ್ಣವಲ್ಲದ ಉಪಾಯಗಳಿಂದ ರಾಷ್ಟ್ರದ ಐಶ್ವರ್ಯವನ್ನು ಪಾನ ಮಾಡಬೇಕು. (ಸ್ವಲ್ಪವಾದರೂ ಕಠಿನವಾದ ಮಾರ್ಗವನ್ನು ಅನುಸರಿಸದೇ ಸುಲಭವಾಗಿ ಸಾಂತ್ವನದ ಮಾರ್ಗದಲ್ಲಿ ಪ್ರಜೆಗಳಿಂದ ಕರವನ್ನು ಸಂಗ್ರಹಿಸ ಬೇಕು.)

ಅಲ್ಪೇನಾಲ್ಪೇನ ದೇಯೇನ ವರ್ಧಮಾನಂ ಪ್ರದಾಪಯೇತ್ ।
ತತೋ ಭೂಯಸ್ತತೋ ಭೂಯಃ ಕ್ರಮವೃದ್ಧಿಂ ಸಮಾಚರೇತ್ ॥೭॥

ರಾಜನು ಮೊದಲು-ಮೊದಲು ಅತ್ಯಲ್ಪವಾದ ತೆರಿಗೆಯಿಂದಲೇ ತೃಪ್ತಿ ಪಟ್ಟುಕೊಳ್ಳಬೇಕು. ಅನಂತರ ಕರವನ್ನು ಸ್ವಲ್ಪ-ಸ್ವಲ್ಪವಾಗಿ ಹೆಚ್ಚಿಸಿ ಪ್ರಜೆಗಳಿಂದ ತೆಗೆದುಕೊಳ್ಳಬೇಕು. ಹೀಗೆಯೇ ಆಗೊಮ್ಮೆ-ಈಗೊಮ್ಮೆ ತೆರಿಗೆಯನ್ನು ಹೆಚ್ಚಿಸುತ್ತಿದ್ದು ಅನುಕ್ರಮವಾಗಿ ಕೋಶವನ್ನು ವೃದ್ಧಿಗೊಳಿಸಬೇಕು. ಆದರೆ ಕರಭಾರವು ಹೆಚ್ಚಾಯಿತೆಂದು ಪ್ರಜೆಗಳು ಭಾವಿಸದಂತೆ ನೋಡಿಕೊಳ್ಳಬೇಕು.

ದಮಯನ್ನಿವ ದಮ್ಯಾನಿ ಶಶ್ವದ್ಭಾರಂ ವಿವರ್ಧಯೇತ್ ।
ಮೃದುಪೂರ್ವಂ ಪ್ರಯತ್ನೇನ ಪಾಶಾನಭ್ಯವಹಾರಯೇತ್ ॥೮॥

ಎಳೆಯ ಹೋರಿಗೆ ಮೊದಲು-ಮೊದಲು ಸ್ವಲ್ಪವೇ ಭಾರವನ್ನು ಹೇರಿ ಭಾರಹೊರುವುದನ್ನು ಅಭ್ಯಾಸಮಾಡಿಸುತ್ತಾರೆ. ಅನುಕ್ರಮವಾಗಿ ಅದರ ಮೇಲಿನ ಹೊರೆಯನ್ನು ಹೆಚ್ಚಿಸುತ್ತಾರೆ. ಅಭ್ಯಾಸಬಲದಿಂದಾಗಿ ಪ್ರಾಯಕ್ಕೆ ಬಂದ ಹೋರಿಯು ಹೆಚ್ಚು ಹೊರೆಯನ್ನು ಹೊರಲು ಸಮರ್ಥವಾಗುತ್ತದೆ. ಅದೇ ರೀತಿಯಲ್ಲಿ ಮೊದಲು-ಮೊದಲು ಪ್ರಜೆಗಳ ಮೇಲೆ ಕರಭಾರವನ್ನು ಅಲ್ಪವಾಗಿಯೇ ಹೇರಬೇಕು. ಅನುಕ್ರಮವಾಗಿ ಕರಭಾರವನ್ನು ಹೆಚ್ಚಿಸುತ್ತಾ

ಹೋಗಬೇಕು. ತೆರಿಗೆಯನ್ನು ಕೊಡಲು ಅಭ್ಯಾಸವಾದನಂತರ ಪ್ರಜೆಗಳು ಸ್ವಲ್ಪ-ಸ್ವಲ್ಪವಾಗಿ ಹೆಚ್ಚಿಸುವ ತೆರಿಗೆಯನ್ನು ಅಷ್ಟಾಗಿ ಲಕ್ಷಿಸುವುದಿಲ್ಲ. ತೆರಿಗೆಯ ಪಾಶವನ್ನು ಉಪಾಯವಾಗಿ ಪ್ರಜೆಗಳ ಕೊರಳಿಗೆ ಹಾಕಿ ಅನಂತರ ಕುಣಿಕೆಯನ್ನು ಸ್ವಲ್ಪ-ಸ್ವಲ್ಪವಾಗಿ ಬಿಗಿಯುತ್ತಾ ಹೋಗಬೇಕು. ಆದರೆ ಸಂಪೂರ್ಣವಾಗಿ ಬಿಗಿದು ಮನುಷ್ಯನ ಜೀವಿತಕ್ಕೇ ಘಾತವಾಗಬಾರದು. ಮಿತಿಯಿಟ್ಟು ಬಿಗಿಮಾಡಬೇಕು.

ಸಕೃತ್ಪಾಶಾವಕೀರ್ಣಾಸ್ತೇ ನ ಭವಿಷ್ಯನ್ತಿ ದುರ್ದಮಾಃ ।
ಉಚಿತೇನೈವ ಭೋಕ್ತವ್ಯಾಸ್ತೇ ಭವಿಷ್ಯನ್ತಿ ಯತ್ನತಃ ॥೯॥

ಒಂದೇ ಬಾರಿಗೆ ಅಧಿಕವಾದ ತೆರಿಗೆಯ ಪಾಶವನ್ನು ಕುತ್ತಿಗೆಗೆ ಬಿಗಿದು ಬಿಟ್ಟರೆ ಪ್ರಜೆಗಳು ಉಳಿಯುವುದೇ ಇಲ್ಲ. ಅವರನ್ನು ಒಂದೇ ಬಾರಿಗೆ ಬಗ್ಗಿಸುವುದಕ್ಕೂ ಆಗುವುದಿಲ್ಲ. ಆದುದರಿಂದ ಉಚಿತವಾದ ರೀತಿಯಲ್ಲಿ ಸ್ವಲ್ಪ-ಸ್ವಲ್ಪವಾಗಿ ತೆರಿಗೆಯನ್ನು ಹಾಕಿ ಪ್ರಯತ್ನಪೂರ್ವಕವಾಗಿ ಪ್ರಜೆಗಳನ್ನು ಉಪಭುಂಜಿಸಬೇಕು. (ಪ್ರಜೆಗಳಿಂದ ಕರವನ್ನು ಸಂಗ್ರಹಿಸಬೇಕು.)

ತಸ್ಮಾತ್ಸರ್ವಸಮಾರಮ್ಭೋ ದುರ್ಲಭಃ ಪುರುಷಂ ಪ್ರತಿ ।
ಯಥಾ ಮುಖ್ಯಾನ್ಸಾನ್ತ್ವಯಿತ್ವಾ ಭೋಕ್ತವ್ಯ ಇತರೋ ಜನಃ ॥೧೦॥

ರಾಜನು ಪ್ರತಿಪುರುಷನನ್ನೂ ಒಂದೇ ಬಾರಿಗೆ ತೆರಿಗೆಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಪ್ರಜೆಗಳಲ್ಲಿ ಮುಖ್ಯ-ಮುಖ್ಯರಾದವರನ್ನು ಕರೆಯಿಸಿ ಸಾಂತ್ವವಚನಗಳಿಂದ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳಬೇಕು. ಅವರಿಂದ ಸ್ವಲ್ಪ-ಸ್ವಲ್ಪವಾಗಿಯೇ ಕರವನ್ನು ತೆಗೆದುಕೊಳ್ಳಲು ಪ್ರಾರಂಭಿಸಬೇಕು. ಗ್ರಾಮದ ಮುಖ್ಯಸ್ಥರು ಕರಕೊಡಲು ಪ್ರಾರಂಭಿಸಿದರೆ ಗ್ರಾಮೀಣಜನರೂ ಕರಕೊಡಲು ಪ್ರಾರಂಭಿಸುತ್ತಾರೆ. ಹೀಗೆ ರಾಜನು ಇತರ ಜನರನ್ನೂ ಉಪಭುಂಜಿಸಬೇಕು. (ಇತರ ಜನರಿಂದಲೂ ಕರವನ್ನು ಸಂಗ್ರಹಿಸಬೇಕು.)

ತತಸ್ತಾನ್ಭೇದಯಿತ್ವಾ ತು ಪರಸ್ಪರವಿವಕ್ಷಿತಾನ್ ।
ಭುಞ್ಜೀತ ಸಾನ್ತ್ವಯಂಶ್ಚೈವ ಯಥಾಸುಖಮಯತ್ನತಃ ॥೧೧॥

ವಿಚಕ್ಷಣನಾದ ರಾಜನು ಪರಸ್ಪರವಿಚಾರಮಾಡುವ ಇಬ್ಬರು ಮುಖ್ಯಸ್ಥ

ರಲ್ಲಿ ಭೇದಭಾವವನ್ನು ತಂದೊಡ್ಡಬೇಕು. ಇಬ್ಬರೂ ತನ್ನನ್ನೇ ಆಶ್ರಯಿಸುವಂತೆ ಮಾಡಬೇಕು. ರಾಜನು ಇಬ್ಬರನ್ನೂ ಸಮಾಧಾನಗೊಳಿಸುತ್ತಾ ಯಾವ ವಿಧವಾದ ಪ್ರಯತ್ನವೂ ಇಲ್ಲದೇ ಆ ಎರಡು ಪಂಗಡಗಳಿಂದಲೂ ಬರುವ ಕರವನ್ನು ತೆಗೆದುಕೊಂಡು ಸುಖದಿಂದ ಉಪಭೋಗಿಸಬೇಕು. (ಬುದ್ಧಿವಂತರಾದ ಜನರು ಪರಸ್ಪರವಾಗಿ ವಿಚಾರವಿನಿಮಯಮಾಡುತ್ತಾ ರಾಜನ ಕರಭಾರವು ಹೆಚ್ಚಾಯಿತೆಂದು ತಿಳಿದರೆ ಬಂಡಾಯವೇಳಬಹುದು. ಹಾಗಾಗದಂತೆ ರಾಜನು ಅವರಲ್ಲಿ ಪರಸ್ಪರವಾಗಿ ವೈಮನಸ್ಯವುಂಟಾಗುವಂತೆ ಮಾಡಬೇಕು. ಆ ಸಮಯದಲ್ಲಿ ಎರಡು ಪಂಗಡಗಳವರಿಗೂ ರಾಜನನ್ನು ಆಶ್ರಯಿಸುವುದು ಅನಿವಾರ್ಯವಾಗುತ್ತದೆ. ಪರಸ್ಪರವಾಗಿ ದೂರನ್ನು ತಂದ ಎರಡು ಪಂಗಡಗಳ ಮುಖ್ಯಸ್ಥರನ್ನೂ ರಾಜನು ಒಳ್ಳೆಯ ಮಾತುಗಳಿಂದಲೇ ಸಮಾಧಾನಗೊಳಿಸಬೇಕು. ರಾಜನ ಆಶ್ರಯವು ಎರಡು ಪಂಗಡಗಳವರಿಗೂ ಅನಿವಾರ್ಯವಾದುದರಿಂದ ಮುಂದೆ ಅವರು ರಾಜನ ವಿಷಯದಲ್ಲಿ ವಿಶ್ವಾಸಿಗಳಾಗಿಯೇ ಇದ್ದು ತೆರಿಗೆಗಳನ್ನು ಕಾಲ-ಕಾಲಕ್ಕೆ ಕೊಡುತ್ತಿರುತ್ತಾರೆ. ರಾಜನೂ ಕೂಡ ಪ್ರಯತ್ನವೇ ಇಲ್ಲದೆ ತೆರಿಗೆಯನ್ನು ಪಡೆದುಕೊಂಡು ಸುಖವಾಗಿರಬಹುದು.)

ನ ಚಾಸ್ಥಾನೇ ನ ಚಾಕಾಲೇ ಕರಾಂಸ್ತೇಭ್ಯೋ ನಿಪಾತಯೇತ್ ।
ಆನುಪೂರ್ವ್ಯೇಣ ಸಾನ್ತ್ವೇನ ಯಥಾಕಾಲಂ ಯಥಾವಿಧಿ ॥೧೨॥

ಕಾರಣವಿಲ್ಲದೇ ಅಕಾಲದಲ್ಲಿ ಜನರ ಮೇಲೆ ತೆರಿಗೆಯನ್ನು ಹಾಕಬಾರದು. ಸಮಯಾನುಸಾರವಾಗಿ ಕರಹಾಕುವ ಕಾರಣವನ್ನು ಪ್ರಜೆಗಳಿಗೆ ತಿಳಿಸಿ ಅವರನ್ನು ಸಮಾಧಾನಗೊಳಿಸಿ ಯಥಾವಿಧಿಯಾಗಿ ತೆರಿಗೆಯನ್ನು ಹಾಕಬೇಕು.

ಉಪಾಯಾನ್ಪ್ರಬ್ರವೀಮ್ಯೇತಾನ್ನ ಮೇ ಮಾಯಾ ವಿವಕ್ಷಿತಾ ।
ಅನುಪಾಯೇನ ದಮಯನ್ಪ್ರಕೋಪಯತಿ ವಾಜಿನಃ ॥೧೩॥

ಕರಗ್ರಹಣಕ್ಕೆ ನಾನು ಈ ಉತ್ತಮವಾದ ಉಪಾಯಗಳನ್ನು ಹೇಳುತ್ತಿದ್ದೇನೆ. ಪ್ರಜೆಗಳನ್ನು ಮೋಸಗೊಳಿಸಬೇಕೆಂಬ ಅಭಿಪ್ರಾಯವು ನನ್ನದಲ್ಲ. ಕುದುರೆಗಳನ್ನು ಉಪಾಯದಿಂದ ಪಳಗಿಸಬೇಕು. ಉಪಾಯದಿಂದಲ್ಲದೇ ಅವುಗಳನ್ನು ಹತ್ತಲು ಹೋದರೆ ಅವು ಕೋಪಗೊಳ್ಳುತ್ತವೆ. ಸವಾರನನ್ನೇ

ಕೆಳಕ್ಕೆ ಕೆಡವಿಬಿಡುತ್ತವೆ. ಸಾಂತ್ವನದ ಮಾತಿಲ್ಲದೆ ಅಧಿಕಾರದರ್ಪದಿಂದ ಜನರನ್ನು ಸುಲಿಗೆಮಾಡಲು ಹೋದರೆ ಒಡನೆಯೇ ಅವರು ರೊಚ್ಚಿಗೆದ್ದು ಮೇಲೆ ಬೀಳುತ್ತಾರೆ. ನಾನು ಹೇಳಿರುವ ಉಪಾಯಗಳನ್ನನುಸರಿಸಿದರೆ ಸಮಾಧಾನದಿಂದಲೇ ಕರವನ್ನು ಕೊಡುತ್ತಾರೆ. ಆದುದರಿಂದ ನಾನು ಹೇಳಿದುದೆಲ್ಲವೂ ಕರಗ್ರಹಣದ ಉಪಾಯವೇ ಹೊರತು ಜನರನ್ನು ಮೋಸ ಗೊಳಿಸುವುದಲ್ಲ.

ಪಾನಾಗಾರನಿವೇಶಾಶ್ಚ ವೇಶ್ಯಾಃ ಪ್ರಾಪಣಿಕಾಸ್ತಥಾ ।
ಕುಶೀಲವಾಃ ಸಕಿತವಾ ಯೇ ಚಾನ್ಯೇ ಕೇಚಿದೀದೃಶಾಃ ॥೧೪॥

ನಿಯಮ್ಯಾಃ ಸರ್ವ ಏವೈತೇ ಯೇ ರಾಷ್ಟ್ರಸ್ಯೋಪಘಾತಕಾಃ ।
ಏತೇ ರಾಷ್ಟ್ರೇಽಭಿತಿಷ್ಠನ್ತೋ ಬಾಧನ್ತೇ ಭದ್ರಿಕಾಃ ಪ್ರಜಾಃ ॥೧೫॥

ಮದ್ಯದ ಅಂಗಡಿಗಳನ್ನಿಟ್ಟಿರುವವರು, ವೇಶ್ಯೆಯರು, ವೇಶ್ಯೆಯರ ವ್ಯಾಪಾರದಲ್ಲಿ ತೊಡಗಿರುವವರು (ಕುಟ್ಟನಿಯರು), ವಿಟರು, ಗಾಯಕರು, ಜೂಜುಕೋರರು–ಇಂತಹವರೇ ಆದ ಇನ್ನೂ ಅನೇಕರು ರಾಷ್ಟ್ರಕ್ಕೆ ಹಾನಿ ಯನ್ನು ಉಂಟುಮಾಡತಕ್ಕವರಾಗಿರುತ್ತಾರೆ. ಅವರೆಲ್ಲರನ್ನೂ ನಿಗ್ರಹಿಸಬೇಕು. ಅವರು ರಾಜ್ಯದಲ್ಲಿದ್ದುಕೊಂಡು ಸನ್ಮಾರ್ಗಪ್ರವೃತ್ತರಾದ ಜನರಿಗೆ ಬಾಧೆ ಯನ್ನುಂಟುಮಾಡುತ್ತಿರುತ್ತಾರೆ.

ನ ಕೇನಚಿದ್ಯಾಚಿತವ್ಯಃ ಕಶ್ಚಿತ್ಕಿಞ್ಚಿದನಾಪದಿ ।
ಇತಿ ವ್ಯವಸ್ಥಾ ಭೂತಾನಾಂ ಪುರಸ್ತಾನ್ಮನುನಾ ಕೃತಾ ॥೧೬॥

ಆಪತ್ಕಾಲವೊಂದನ್ನು ಬಿಟ್ಟು ಉಳಿದ ಸಂದರ್ಭಗಳಲ್ಲಿ ಯಾರೂ ಯಾರಿಂದಲೂ ಏನನ್ನೂ ಯಾಚಿಸಬಾರದೆಂದು ಬಹಳ ಹಿಂದೆಯೇ ಮನುವು ಪ್ರಾಣಿಗಳಿಗೆ ವ್ಯವಸ್ಥೆಮಾಡಿದ್ದಾನೆ.

ಸರ್ವೇ ತಥಾನುಜೀವೇಯುರ್ನ ಕುರ್ಯುಃ ಕರ್ಮ ಚೇದಿಹ ।
ಸರ್ವ ಏವ ಇಮೇ ಲೋಕಾ ನ ಭವೇಯುರಸಂಶಯಮ್ ॥೧೭॥

ಮನುವೇನಾದರೂ ಇಂತಹ ವ್ಯವಸ್ಥೆಯನ್ನು ಮಾಡದೇ ಇದ್ದಿದ್ದರೆ– ಎಲ್ಲ ಜನರೂ ಭಿಕ್ಷೆಯಿಂದಲೇ ಜೀವನವನ್ನು ನಡೆಸಲು ಪ್ರಾರಂಭಿಸುತ್ತಿದ್ದರು. ಈ ಲೋಕದಲ್ಲಿ ಯಾರೂ ಕರ್ಮವನ್ನೇ ಮಾಡುತ್ತಿರಲಿಲ್ಲ. ಇಂತಹ

ದೆಸೆಯಲ್ಲಿ ಎಲ್ಲ ಜಗತ್ತುಗಳೂ ವಿನಾಶಹೊಂದುತ್ತಿದ್ದುವೆಂಬುದರಲ್ಲಿ ಸಂಶಯವೇ ಇಲ್ಲ.

ಪ್ರಭುರ್ನಿಯಮನೇ ರಾಜಾ ಯ ಏತಾನ್ನ ನಿಯಚ್ಛತಿ ।
ಭುಙ್ಕ್ತೇ ಸ ತಸ್ಯ ಪಾಪಸ್ಯ ಚತುರ್ಭಾಗಮಿತಿ ಶ್ರುತಿಃ ॥೧೮॥

ಯಾವ ರಾಜನು ಇವರೆಲ್ಲರನ್ನೂ ಹತೋಟಿಯಲ್ಲಿಟ್ಟುಕೊಳ್ಳಲು ಸಮರ್ಥನಾಗಿದ್ದರೂ ಹತೋಟಿಯಲ್ಲಿಟ್ಟುಕೊಳ್ಳುವುದಿಲ್ಲವೋ, ಅವರ ಸ್ವೇಚ್ಛಾವರ್ತನೆಗೆ ಅವಕಾಶಕೊಡುವನೋ ಅಂತಹ ರಾಜನು–ಅವರು (ಮದ್ಯದಂಗಡಿ ಇಟ್ಟವರು, ವೇಶ್ಯೆಯರೇ ಮುಂತಾದವರು) ಮಾಡುವ ಪಾಪದಲ್ಲಿ ನಾಲ್ಕನೆಯ ಒಂದು ಭಾಗವನ್ನು ಪಡೆದುಕೊಳ್ಳುವನೆಂದು ಶ್ರುತಿಯು ಹೇಳುತ್ತದೆ.

ಭೋಕ್ತಾ ತಸ್ಯ ತು ಪಾಪಸ್ಯ ಸುಕೃತಸ್ಯ ಯಥಾ ತಥಾ ।
ನಿಯನ್ತವ್ಯಾಃ ಸದಾ ರಾಜ್ಞಾ ಪಾಪಾ ಯೇ ಸ್ಯುರ್ನರಾಧಿಪ ॥೧೯॥

ರಾಜನು ಪ್ರಜೆಗಳ ನಾಲ್ಕನೆಯ ಒಂದು ಭಾಗ ಪಾಪವನ್ನು ಪಡೆದು ಕೊಳ್ಳುವಂತೆಯೇ ನಾಲ್ಕನೆಯ ಒಂದು ಭಾಗ ಪುಣ್ಯವನ್ನೂ ಪಡೆದುಕೊಳ್ಳು ತ್ತಾನೆ. ಆದುದರಿಂದ ರಾಜನಾದವನು ಪಾಪಿಷ್ಠರನ್ನು ದಂಡಿಸಿ ಅವರು ಪುನಃ ಪುನಃ ಪಾಪಮಾಡದಂತೆ ಹತೋಟಿಯಲ್ಲಿಟ್ಟುಕೊಳ್ಳಬೇಕು.

ಕೃತಪಾಪಸ್ತ್ವಸೌ ರಾಜಾ ಯ ಏತಾನ್ನ ನಿಯಚ್ಛತಿ ।
ತಥಾ ಕೃತಸ್ಯ ಧರ್ಮಸ್ಯ ಚತುರ್ಭಾಗಮುಪಾಶ್ನುತೇ ॥೨೦॥

ಯಾವ ರಾಜನು ಇಂತಹ ಪಾಪಿಷ್ಠರನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವುದಿಲ್ಲವೋ–ಆ ರಾಜನೇ ಸ್ವಯಂ ಪಾಪಚಾರಿಯಾಗುತ್ತಾನೆ. ಯಾವ ರಾಜನು ಅಂತಹವರನ್ನು ನಿಗ್ರಹಿಸುವನೋ, ಧರ್ಮಾತ್ಮರಾದ ಪ್ರಜೆಗಳಿಗೆ ಅವರಿಂದ ತೊಂದರೆಯಾಗದಂತೆ ನೋಡಿಕೊಳ್ಳುವನೋ–ಅಂತಹ ರಾಜನು ಧರ್ಮಾತ್ಮರ ಪುಣ್ಯದಲ್ಲಿ ನಾಲ್ಕನೆಯ ಒಂದು ಭಾಗ ಪುಣ್ಯಕ್ಕೆ ಭಾಗಿ ಯಾಗುತ್ತಾನೆ.

ಸ್ಥಾನಾನ್ಯೇತಾನಿ ಸಂಯಮ್ಯ ಪ್ರಸಂಗೋ ಭೂತಿನಾಶನಃ ।
ಕಾಮೇ ಪ್ರಸಕ್ತಃ ಪುರುಷಃ ಕಿಮಕಾರ್ಯಂ ವಿವರ್ಜಯೇತ್ ॥೨೧॥

ಮದ್ಯದಂಗಡಿಗಳೂ-ವೇಶ್ಯಾವಾಟಿಕೆಗಳೂ-ಜೂಜುಕಟ್ಟೆಗಳೂ ಹೆಚ್ಚ ದಂತೆಯೂ, ದಿನ-ದಿನಕ್ಕೂ ಕಡಿಮೆಯಾಗುವಂತೆಯೂ ರಾಜನು ನೋಡಿ ಕೊಳ್ಳಬೇಕು. ಸ್ತ್ರೀ ಪ್ರಸಂಗಗಳು, ಜೂಜಾಟಗಳು ಇವೆಲ್ಲವೂ ಐಶ್ವರ್ಯವನ್ನೂ ಕೀರ್ತಿಯನ್ನೂ ಹಾಳುಮಾಡತಕ್ಕುವುಗಳು. ಕಾಮಾಸಕ್ತನಾದ ಪುರುಷನು ಯಾವ ಅಕಾರ್ಯವನ್ನು ತಾನೇ ಮಾಡುವುದಿಲ್ಲ? (ಎಂತಹ ಅಕಾರ್ಯವನ್ನು ಮಾಡುವುದಕ್ಕೂ ಹೇಸುವುದಿಲ್ಲ.)

ಮದ್ಯಮಾಂಸಪರಸ್ವಾನಿ ತಥಾ ದಾರಾ ಧನಾನಿ ಚ ।
ಆಹರೇದ್ರಾಗವಶಗಸ್ತಥಾ ಶಾಸ್ತ್ರಂ ಪ್ರದರ್ಶಯೇತ್ ॥೨೨॥

ಕಾಮಾಸಕ್ತನಾದ ಪುರುಷನು ಮಾಂಸವನ್ನು ತಿನ್ನುತ್ತಾನೆ ; ಮದ್ಯವನ್ನು ಕುಡಿಯುತ್ತಾನೆ ; ಪರಧನ-ಪರಸ್ತ್ರೀಯರನ್ನು ಅಪಹರಿಸುತ್ತಾನೆ. ಇಷ್ಟು ಮಾತ್ರವಲ್ಲದೇ ತನ್ನಂತೆಯೇ ಮಾಡಲು ಇತರರಿಗೂ ಉಪದೇಶಿಸುತ್ತಾನೆ. (ಅಥವಾ ಶಾಸ್ತ್ರದಲ್ಲಿ ಹೀಗೆ ಮಾಡಲು ಹೇಳಿದೆ ; ಇದಕ್ಕೆ ಅವಕಾಶಕೊಟ್ಟಿದೆ– ಎಂದು ಶಾಸ್ತ್ರವಾಕ್ಯಗಳನ್ನೇ ಕುಟಿಲವಾಗಿ ಉದ್ಧರಿಸಿ ಜನರನ್ನು ಕುಮಾರ್ಗಕ್ಕೆ ಎಳೆಯಲು ಪ್ರಯತ್ನಿಸುತ್ತಾನೆ.)

ಆಪದ್ಯೇವ ತು ಯಾಚನ್ತೇ ಯೇಷಾಂ ನಾಸ್ತಿ ಪರಿಗ್ರಹಃ ।
ದಾತವ್ಯಂ ಧರ್ಮತಸ್ತೇಭ್ಯಸ್ತ್ವನುಕ್ರೋಶಾದ್ಭಯಾನ್ನ ತು ॥೨೩॥

ಯಾರ ಬಳಿಯಲ್ಲಿ ಧನಸಂಗ್ರಹವಾಗಲೀ–ಧಾನ್ಯಸಂಗ್ರಹವಾಗಲೀ ಇರುವುದಿಲ್ಲವೋ ಅಥವಾ ಯಾರಿಗೆ ಪರಿಗ್ರಹಾಧಿಕಾರವಿರುವುದಿಲ್ಲವೋ ಅವರು ಆಪತ್ಕಾಲದಲ್ಲಿ ಅನನ್ಯಗತಿಕರಾಗಿ ಯಾಚನೆಮಾಡುತ್ತಾರೆ. ಅಂತಹ ವರಿಗೆ ಧರ್ಮದ ಕಾರಣದಿಂದ ಅನುಕಂಪೆಯಿಂದ ಧನಸಹಾಯಮಾಡ ಬೇಕು. ಭಯಪಟ್ಟುಕೊಂಡು ಕೊಡಬಾರದು.

ಮಾ ತೇ ರಾಷ್ಟ್ರೇ ಯಾಚನಕಾ ಭೂವನ್ಮಾ ಚಾಪಿ ದಸ್ಯವಃ ।
ಇಷ್ಟ್ವಾ ದಾತಾರ ಏವೈತೇ ನೈತೇ ಭೂತಸ್ಯ ಭಾವಕಾಃ ॥೨೪॥

ನಿನ್ನ ರಾಜ್ಯದಲ್ಲಿ ಯಾಚಕರಿಲ್ಲದಿರಲಿ ; ಕಳ್ಳಕಾಕರಿಲ್ಲದಿರಲಿ. ಏಕೆಂದರೆ : ಯಾಚಕರೂ ಮತ್ತು ಕಳ್ಳರೂ ಪ್ರಜೆಗಳ ಧನವನ್ನು ಅಪಹಾರ ಮಾಡುವವರೇ ಹೊರತು ರಾಷ್ಟ್ರದ ಐಶ್ವರ್ಯವನ್ನು ವೃದ್ಧಿಪಡಿಸುವವರಲ್ಲ.

ಯೇ ಭೂತಾನ್ಯನುಗೃಹ್ಣನ್ತಿ ವರ್ಧಯನ್ತಿ ಚ ಯೇ ಪ್ರಜಾಃ ।
ತೇ ತೇ ರಾಷ್ಟ್ರೇಷು ವರ್ತನ್ತಾಂ ಮಾ ಭೂತಾನಾಮಭಾವಕಾಃ ॥೨೫॥

ಯಾರು ಪ್ರಾಣಿಗಳ ವಿಷಯದಲ್ಲಿ ಮತ್ತು ಪ್ರಜೆಗಳ ವಿಷಯದಲ್ಲಿ ದಯಾಪರರಾಗಿರುವರೋ, ಪ್ರಜೆಗಳನ್ನು ಅಭಿವೃದ್ಧಿಗೊಳಿಸುವರೋ– ಅಂತಹವರು ನಿನ್ನ ರಾಷ್ಟ್ರದಲ್ಲಿರಲಿ. ಯಾರು ಪ್ರಾಣಿಗಳನ್ನು ವಿನಾಶಗೊಳಿಸುವರೋ ಅಂತಹವರು ನಿನ್ನ ರಾಷ್ಟ್ರದಲ್ಲಿ ಇರುವುದು ಬೇಡ.

ದಣ್ಡ್ಯಾಸ್ತೇ ಚ ಮಹಾರಾಜ ಧನಾದಾನಪ್ರಯೋಜಕಾಃ ।
ಪ್ರಯೋಗಂ ಕಾರಯೇಯುಸ್ತಾನ್ಯಥಾಬಲಿಕರಾಂಸ್ತಥಾ ॥೨೬॥

ರಾಜಕರ್ಮಚಾರಿಗಳು ಉಚಿತವಾದುದಕ್ಕಿಂತಲೂ ಅಧಿಕವಾದ ತೆರಿಗೆಯನ್ನೇನಾದರೂ ಪ್ರಜೆಗಳಿಂದ ತೆಗೆದುಕೊಂಡರೆ–ಅಂತಹವರನ್ನು ನೀನು ಶಿಕ್ಷಿಸಬೇಕು. ಹಾಗೆ ಅಂತಹವರನ್ನು ಶಿಕ್ಷಿಸದೇ ಹೋದಲ್ಲಿ ಇತರ ಅಧಿಕಾರಿಗಳೂ ಅಧಿಕವಾದ ತೆರಿಗೆಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಬಹುದು.

ಕೃಷಿಗೋರಕ್ಷ್ಯವಾಣಿಜ್ಯಂ ಯಚ್ಚಾನ್ಯತ್ಕಿಞ್ಚಿದೀದೃಶಮ್ ।
ಪುರುಷೈಃ ಕಾರಯೇತ್ಕರ್ಮ ಬಹುಭಿಃ ಕರ್ಮಭೇದತಃ ॥೨೭॥

ಕೃಷಿ, ಗೋರಕ್ಷಣೆ, ವಾಣಿಜ್ಯ ಮತ್ತು ಇದೇ ವಿಧವಾದ ಇನ್ನೂ ಹಲವು ಕೆಲಸಗಳನ್ನು ಕುಶಲರಾದ ಅನೇಕ ಪುರುಷರ ಮೂಲಕವಾಗಿ ಮಾಡಿಸಬೇಕು.

ನರಶ್ಚೇತ್ಕೃಷಿಗೋರಕ್ಷ್ಯವಾಣಿಜ್ಯಂ ಚಾಪ್ಯನುಷ್ಠಿತಃ ।
ಸಂಶಯಂ ಲಭತೇ ಕಿಂಚಿತ್ತೇನ ರಾಜಾ ವಿಗರ್ಹ್ಯತೇ ॥೨೮॥

ಕೃಷಿ-ಗೋರಕ್ಷ್ಯ-ವಾಣಿಜ್ಯಗಳಲ್ಲಿ ತೊಡಗಿರುವ ಮನುಷ್ಯರೇನಾದರೂ ಕಳ್ಳ-ಕಾಕರ ಉಪಟಳದಿಂದಾಗಿ ಸಂಕಟಕ್ಕೊಳಗಾದರೆ ಕೃಷಿಕನಿಗೆ ಸರಿಯಾದ ರಕ್ಷಣೆಯನ್ನು ಕೊಡದ ರಾಜನೇ ನಿಂದೆಗೆ ಪಾತ್ರನಾಗುತ್ತಾನೆ.

ಧನಿನಃ ಪೂಜಯೇನ್ನಿತ್ಯಂ ಪಾನಾಚ್ಛಾದನಭೋಜನೈಃ ।
ವಕ್ತವ್ಯಾಶ್ಚಾನುಗೃಹ್ಣೀಧ್ವಂ ಪ್ರಜಾಃ ಸಹ ಮಯೇತಿ ವೈ ॥೨೯॥

ರಾಜನಾದವನು ತನ್ನ ದೇಶದ ಧನಿಕರನ್ನು ನಿತ್ಯವೂ ಪಾನೀಯ-ವಸ್ತ್ರ-

ಭೋಜನಾದಿಗಳಿಂದ ಸತ್ಕರಿಸಬೇಕು. 'ನೀವು ದಯಮಾಡಿ ನನ್ನೊಡನೆ ಸೇರಿ ನನ್ನ ಪ್ರಜೆಗಳನ್ನು ಕೃಪಾದೃಷ್ಟಿಯಿಂದ ಕಾಣಿರಿ'–ಎಂದು ಅವರೊಡನೆ ಹೇಳಬೇಕು.

ಅಙ್ಗಮೇತನ್ಮಹದ್ರಾಜ್ಯೇ ಧನಿನೋ ನಾಮ ಭಾರತ ।
ಕಕುದಂ ಸರ್ವಭೂತಾನಾಂ ಧನಸ್ಥೋ ನಾತ್ರ ಸಂಶಯಃ ॥೩೦॥

ಭಾರತನೇ! ಧನಿಕರು ರಾಷ್ಟ್ರಕ್ಕೆ ಮುಖ್ಯವಾದ ಅಂಗವಾಗಿರುತ್ತಾರೆ. ಧನವಂತರು ಸಮಸ್ತಪ್ರಾಣಿಗಳಿಗೂ ಶಿಖರಪ್ರಾಯರಾಗಿರುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ.

ಪ್ರಾಜ್ಞಃ ಶೂರೋ ಧನಸ್ಥಶ್ಚ ಸ್ವಾಮೀ ಧಾರ್ಮಿಕ ಏವ ಚ ।
ತಪಸ್ವೀ ಸತ್ಯವಾದೀ ಚ ಬುದ್ಧಿಮಾಂಶ್ಚಾಪಿ ರಕ್ಷತಿ ॥೩೧॥

ಪ್ರಾಜ್ಞನು, ಶೂರನು, ಧನಿಕನು, ರಾಜನು, ಧಾರ್ಮಿಕನು, ತಪಸ್ವಿಯು, ಸತ್ಯವಾದಿಯು ಮತ್ತು ಬುದ್ಧಿವಂತನು–ಇವರೆಲ್ಲರೂ ಸೇರಿ ಪ್ರಜೆಗಳನ್ನು ರಕ್ಷಿಸುತ್ತಾರೆ.

ಯುಧಿಷ್ಠಿರ! ಆದುದರಿಂದ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಪ್ರೀತಿವಂತನಾಗಿರು. ಸತ್ಯ, ಸರಳತೆ, ಕ್ರೋಧರಾಹಿತ್ಯ, ದಯಾಪರತೆ–ಇವು ಗಳನ್ನು ಪರಿಪಾಲಿಸು. ಈ ಗುಣಗಳಿಗೆ ಆಶ್ರಯವನ್ನು ಕೊಡು. ನೀನು ಹೀಗಿದ್ದರೆ ದಂಡಧಾರಣಶಕ್ತಿಯನ್ನೂ, ತುಂಬಿದ ಬೊಕ್ಕಸವನ್ನೂ, ಮಿತ್ರ ರನ್ನೂ, ಭೂಮಂಡಲವನ್ನೂ ಪಡೆದುಕೊಳ್ಳುವೆ. ನೀನು ಸತ್ಯನಿಷ್ಠನಾಗಿ ಸರಳತೆಯಿಂದಿದ್ದರೆ ಮಿತ್ರ-ಕೋಶ-ಬಲಗಳಿಂದ ಸಂಪನ್ನನಾಗುವೆ."

ಅಲನೆಯ ಅಧ್ಯಾಯವು ಮುಗಿಯಿತು.

೮೯ನೆಯ ಅಧ್ಯಾಯ — ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ಕರ್ತವ್ಯಗಳ ವರ್ಣನೆ

ಜನಮೇಜಯಮಹಾರಾಜ! ಭೀಷ್ಮನು ಮುಂದುವರಿಸಿ ಹೇಳುತ್ತಾನೆ:

ವನಸ್ಪತೀನ್ಭಕ್ಷ್ಯಫಲಾನ್ನ ಚ್ಛಿನ್ದ್ಯುರ್ವಿಷಯೇ ತವ ।
ಬ್ರಾಹ್ಮಣಾನಾಂ ಮೂಲಫಲಂ ಧರ್ಮ್ಯಮಾಹುರ್ಮನೀಷಿಣಃ ॥೧॥

"ಯುಧಿಷ್ಠಿರ! ಯಾವ ವೃಕ್ಷದ ಫಲವು ತಿನ್ನಲು ಬರುವುದೋ ಅಂತಹ ಫಲವೃಕ್ಷಗಳನ್ನು ನಿನ್ನ ಸೇವಕರಾಗಲೀ ಪ್ರಜೆಗಳಾಗಲೀ ಕಡಿಯದಿರಲಿ. ಕಂದ-ಮೂಲ-ಫಲಗಳು ಧರ್ಮತಃ ಬ್ರಾಹ್ಮಣನಿಗೆ ಸೇರಿದ್ದೆಂದು ವಿದ್ವಾಂಸರು ಹೇಳುತ್ತಾರೆ. ಈ ಕಾರಣದಿಂದಲೂ ಫಲವೃಕ್ಷಗಳನ್ನು ಕಡಿಯಬಾರದು.

ಬ್ರಾಹ್ಮಣೇಭ್ಯೋಽತಿರಿಕ್ತಂ ಚ ಭುಞ್ಜೀರನ್ನಿತರೇ ಜನಾಃ ।
ನ ಬ್ರಾಹ್ಮಣಾಪರಾಧೇನ ಹರೇದನ್ಯಃ ಕಥಂಚನ ॥೨॥

ಬ್ರಾಹ್ಮಣರು ಉಪಭುಂಜಿಸಿದನಂತರ ಉಳಿದುದನ್ನು ಇತರ ಜನರು ಉಪಭುಂಜಿಸಬೇಕು. ಬ್ರಾಹ್ಮಣರಿಗೆ ಅಪರಾಧಮಾಡಿ (ಬ್ರಾಹ್ಮಣರಿಗೆ ಕೊಡದೆ) ಬೇರೆಯವನು ಯಾವುದೇ ಕಾರಣದಿಂದಲೂ ಭೋಜ್ಯವಸ್ತು ಗಳನ್ನು (ಫಲಾದಿಗಳನ್ನು) ಅಪಹರಿಸಬಾರದು.

ವಿಪ್ರಶ್ಚೇತ್ತ್ಯಾಗಮಾತಿಷ್ಠೇದಾತ್ಮಾರ್ಥೇ ವೃತ್ತಿಕರ್ಶಿತಃ ।
ಪರಿಕಲ್ಪ್ಯಾಸ್ಯ ವೃತ್ತಿಃ ಸ್ಯಾತ್ಸದಾರಸ್ಯ ನರಾಧಿಪ ॥೩॥

ಒಂದು ವೇಳೆ ಬ್ರಾಹ್ಮಣನು ಸ್ವವೃತ್ತಿಯಿಂದ ಜೀವನವನ್ನು ನಡೆಸ ಲಾಗದೇ ದುರ್ಬಲನಾಗಿ ನಿನ್ನ ದೇಶವನ್ನು ತ್ಯಾಗಮಾಡಿ ಬೇರೆಯ ದೇಶಕ್ಕೆ ಹೊರಡಲು ಸಿದ್ಧನಾದರೆ–ಪರಿವಾರಸಹಿತನಾದ ಆ ಬ್ರಾಹ್ಮಣನಿಗೆ ಜೀವನದ ವ್ಯವಸ್ಥೆಯನ್ನು ಕಲ್ಪಿಸುವುದು ರಾಜನ ಮುಖ್ಯಕರ್ತವ್ಯವಾಗಿರುತ್ತದೆ.

ಸ ಚೇನ್ನೋಪನಿವರ್ತೇತ ವಾಚ್ಯೋ ಬ್ರಾಹ್ಮಣಸಂಸದಿ ।
ಕಸ್ಮಿನ್ನಿದಾನೀಂ ಮರ್ಯಾದಾಮಯಂ ಲೋಕಃ ಕರಿಷ್ಯತಿ ॥೪॥

ಹಾಗೂ ಬ್ರಾಹ್ಮಣನು ಹಿಂದಿರುಗದಿದ್ದರೆ ಬ್ರಾಹ್ಮಣಸಮೂಹದಲ್ಲಿರುವ ಅವನ ಸಮೀಪಕ್ಕೆ ಹೋಗಿ "ಬ್ರಾಹ್ಮಣೋತ್ತಮ! ನೀನು ನನ್ನ ದೇಶದಿಂದ ಹೊರಟುಹೋದರೆ ನನ್ನ ಪ್ರಜೆಗಳು ಯಾರನ್ನಾಶ್ರಯಿಸಿ ಧರ್ಮದ ಮರ್ಯಾದೆಯನ್ನು ಪರಿಪಾಲಿಸುವರು?"–ಎಂದು ಹೇಳಬೇಕು.

ಅಸಂಶಯಂ ನಿವರ್ತೇತ ನ ಚೇದ್ವಕ್ಷ್ಯತ್ಯತಃ ಪರಮ್ ।
ಪೂರ್ವಂ ಪರೋಕ್ಷಂ ಕರ್ತವ್ಯಮೇತತ್ಕೌನ್ತೇಯ ಶಾಶ್ವತಮ್ ॥೫॥

ಹೀಗೆ ಹೇಳಿದೊಡನೆಯೇ ಬ್ರಾಹ್ಮಣನು ಹಿಂದಿರುಗುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ. ಹಾಗೂ ಅವನು ಯಾವ ಮಾತನ್ನೂ ಆಡದೆ ಸುಮ್ಮನಿದ್ದರೆ ಪುನಃ ಅವನೊಡನೆ ಹೀಗೆ ಹೇಳಬೇಕು. "ಬ್ರಾಹ್ಮಣೋತ್ತಮ! ನಾನು ಹಿಂದೆ ಪರೋಕ್ಷದಲ್ಲಿ ನಿನಗೇನಾದರೂ ಅಪರಾಧಮಾಡಿದ್ದರೆ ಕ್ಷಮಿಸಿಬಿಡು"–ಹೀಗೆ ವಿನಯಪೂರ್ವಕವಾಗಿ ಹೇಳಿ ಬ್ರಾಹ್ಮಣನನ್ನು ಸಮಾಧಾನಗೊಳಿಸುವುದು ಸನಾತನಧರ್ಮವಾಗಿದೆ ಮತ್ತು ಹೀಗೆ ಮಾಡುವುದು ರಾಜನ ಕರ್ತವ್ಯವೂ ಆಗಿದೆ.

ಆಹುರೇತಜ್ಜನಾ ನಿತ್ಯಂ ನ ಚೈತಚ್ಛ್ರದ್ದಧಾಮ್ಯಹಮ್ ।
ನಿಮನ್ತ್ರ್ಯಶ್ಚ ಭವೇದ್ಭೋಗೈರವೃತ್ತ್ಯಾ ಚ ತದಾಚರೇತ್ ॥೬॥

ಬ್ರಾಹ್ಮಣನಿಗೆ ಭೋಗಸಾಮಗ್ರಿಗಳ ಅಭಾವವಿರುವುದಾದರೆ ಆ ಭೋಗ ಸಾಮಗ್ರಿಗಳನ್ನು ಅವನಿಗೆ ಅರ್ಪಿಸಬೇಕೆಂದೂ, ವೃತ್ತಿಹೀನನಾಗಿರುವುದಾದರೆ ವೃತ್ತಿಯನ್ನು ಒದಗಿಸಿಕೊಡಬೇಕೆಂದೂ ಕೆಲವು ಜನರು ಹೇಳುತ್ತಾರೆ. ಆದರೆ ನನಗೆ ಇದರಲ್ಲಿ ನಂಬಿಕೆಯಿಲ್ಲ. (ಬ್ರಾಹ್ಮಣರು ಭೋಗಾಸಕ್ತರಲ್ಲ. ಅವರಿಗೆ ಭೋಗಸಾಮಗ್ರಿಗಳು ಬೇಕಾಗುವುದಿಲ್ಲ. ಜೀವನದ ವಿಷಯವಾಗಿಯೂ ಅವರು ಹೆಚ್ಚು ಯೋಚಿಸತಕ್ಕವರಲ್ಲ. ಅಹನ್ಯಹನಿಕಾಲಕ್ಷೇಪದಲ್ಲಿಯೇ ತೃಪ್ತರಾಗತಕ್ಕವರು.)

ಕೃಷಿಗೋರಕ್ಷ್ಯವಾಣಿಜ್ಯಂ ಲೋಕಾನಾಮಿಹ ಜೀವನಮ್ ।
ಊರ್ಧ್ವಂ ಚೈವ ತ್ರಯೀ ವಿದ್ಯಾ ಸಾ ಭೂತಾನ್ಭಾವಯತ್ಯುತ ॥೭॥

ಕೃಷಿ-ಗೋರಕ್ಷ್ಯ-ವಾಣಿಜ್ಯಗಳು ಈ ಲೋಕದಲ್ಲಿ ಜೀವನಕ್ಕೆ ಆಧಾರ ಭೂತಗಳಾಗಿವೆ. ಮೂರು ವೇದಗಳು ಊರ್ಧ್ವಲೋಕದಲ್ಲಿ ಮನುಷ್ಯನ ರಕ್ಷಣೆಗೆ ಸಾಧಕಗಳಾಗಿವೆ. ಆ ಮೂರು ವೇದಗಳೂ ಯಜ್ಞಗಳ ಮೂಲಕವಾಗಿ ಪ್ರಾಣಿಗಳ ಉತ್ಪತ್ತಿ ಮತ್ತು ವೃದ್ಧಿಗಳಿಗೆ ಕಾರಣಗಳಾಗಿವೆ.

ತಸ್ಯಾಂ ಪ್ರವರ್ತಮಾನಾಯಾಂ ಯೇ ಸ್ಯುಸ್ತತ್ಪರಿಪನ್ಥಿನಃ ।
ದಸ್ಯವಸ್ತದ್ವಧಾಯೇಹ ಬ್ರಹ್ಮಾಕ್ಷತ್ರಮಥಾಸೃಜತ್ ॥೮॥

ಯಾರು ಅಧ್ಯಯನ-ಅಧ್ಯಾಪನಗಳಿಗೆ ಮತ್ತು ವೇದೋಕ್ತವಾದ ಯಜ್ಞ-ಯಾಗಾದಿಗಳಿಗೆ ಬಾಧೆಯನ್ನುಂಟುಮಾಡುವರೋ–ಅವರೇ ದಸ್ಯುಗಳು. ವೇದಪ್ರತಿಬಂಧಕರಾದ ದಸ್ಯುಗಳನ್ನು ಸಂಹರಿಸಲೆಂದೇ ಬ್ರಹ್ಮನು ಕ್ಷತ್ರಿಯರನ್ನು ಸೃಷ್ಟಿಸಿರುವನು.

ಶತ್ರೂಞ್ಜಯ ಪ್ರಜಾ ರಕ್ಷ ಯಜಸ್ವ ಕ್ರತುಭಿರ್ನೃಪ ।
ಯುದ್ಧಸ್ವ ಸಮರೇ ವೀರೋ ಭೂತ್ವಾ ಕೌರವನನ್ದನ ॥೯॥

ನರೇಶ್ವರ! ಕೌರವನಂದನ! ವೀರನಾಗಿ ಸಮರಾಂಗಣದಲ್ಲಿ ಯುದ್ಧ ಮಾಡು. ಶತ್ರುಗಳನ್ನು ಜಯಿಸು. ಪ್ರಜೆಗಳನ್ನು ರಕ್ಷಿಸು. ನಾನಾವಿಧವಾದ ಕ್ರತುಗಳಿಂದ ದೇವತೆಗಳನ್ನು ಆರಾಧಿಸು.

ಸಂರಕ್ಷ್ಯಾನ್ಪಾಲಯೇದ್ರಾಜಾ ಸ ರಾಜಾ ರಾಜಸತ್ತಮಃ ।
ಯೇ ಕೇಚಿತ್ತಾನ್ನ ರಕ್ಷನ್ತಿ ತೈರರ್ಥೋ ನಾಸ್ತಿ ಕಶ್ಚನ ॥೧೦॥

ಯಾವ ರಾಜನು ರಕ್ಷಣೆಮಾಡಲು ಯೋಗ್ಯರಾದ ಮನುಷ್ಯರನ್ನು ರಕ್ಷಿಸುತ್ತಾನೆಯೋ–ಅಂತಹ ರಾಜನು ರಾಜರಲ್ಲಿಯೇ ಶಿರೋಮಣಿಯೆನಿಸಿಕೊಳ್ಳುತ್ತಾನೆ. ರಕ್ಷಾರ್ಹರಾದ ಮನುಷ್ಯರನ್ನು ಯಾವ ರಾಜರು ರಕ್ಷಿಸುವುದಿಲ್ಲವೋ–ಅಂತಹ ರಾಜರಿಂದ ಜಗತ್ತಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲ.

ಸದೈವ ರಾಜ್ಞಾ ಯೋದ್ಧವ್ಯಂ ಸರ್ವಲೋಕಾದ್ಯುಧಿಷ್ಠಿರ ।
ತಸ್ಮಾದ್ಧೇತೋರ್ಹಿ ಯುಞ್ಜೀತ ಮನುಷ್ಯಾನೇವ ಮಾನವಃ ॥೧೧॥

ಯುಧಿಷ್ಠಿರ! ಪ್ರಜೆಗಳಿಗೆ ಒಳ್ಳೆಯದನ್ನು ಮಾಡುವ ಸಲುವಾಗಿ ರಾಜನು ಸರ್ವದಾ ಯುದ್ಧಮಾಡಬೇಕಾಗುತ್ತದೆ ಅಥವಾ ಯುದ್ಧಕ್ಕೆ ಸಿದ್ಧನಾಗಿರಬೇಕಾಗುತ್ತದೆ. ಈ ಕಾರಣದಿಂದಲೇ ಮಾನವಶ್ರೇಷ್ಠನಾದ ರಾಜನು ಶತ್ರುಗಳ ಗತಿ-ವಿಧಾನಗಳನ್ನು ತಿಳಿಯಲು ಎಲ್ಲ ಕಡೆಗಳಲ್ಲಿಯೂ ಗುಪ್ತಚಾರರನ್ನು ನಿಯಮಿಸಿಕೊಂಡಿರುತ್ತಾನೆ.

ಆನ್ತರೇಭ್ಯಃ ಪರಾನ್ರಕ್ಷನ್ಪರೇಭ್ಯಃ ಪುನರಾನ್ತರಾನ್ ।
ಪರಾತ್ಪರೇಭ್ಯಃ ಸ್ವಾನ್ಸ್ವೇಭ್ಯಃ ಸರ್ವಾನ್ಪಾಲಯ ನಿತ್ಯದಾ ॥೧೨॥

ನಿನ್ನ ಅಂತರಂಗದ ಮನುಷ್ಯರಿಂದ ಬಹಿರಂಗದ ಮನುಷ್ಯರನ್ನು ರಕ್ಷಿಸು. ಅಂತರಂಗದ ಮನುಷ್ಯರು ನಿನ್ನ ಪ್ರಭಾವವನ್ನು ದುರುಪಯೋಗ ಪಡಿಸಿಕೊಂಡು ಜನರನ್ನು ಪೀಡಿಸುತ್ತಾರೆ. ಹಾಗೆ ಆಗದಂತೆ ನೋಡಿಕೊಳ್ಳ ಬೇಕು. ಹೊರಗಡೆಯವರಿಂದ ಅಂತರಂಗದ (ಒಳಗಿನ) ಜನರನ್ನು ರಕ್ಷಿಸು. ಅಂತರಂಗದ ಜನರಿಗೆ ಯಾವಾಗಲೂ ಬಹಿರಂಗದ ಜನರಿಂದ ಅಪಾಯ ವಿದ್ದೇ ಇರುತ್ತದೆ. ರಾಜನ ಬಂಧುವೆಂದು ತಿಳಿದೊಡನೆಯೇ ಅವನನ್ನು ಶತ್ರುಗಳು ಹಿಂಸಿಸುತ್ತಾರೆ. **ಪರಾನ್ :** ಎಂದರೆ ಬಹಿರಂಗದ ಪ್ರಜೆಗಳನ್ನು **ಪರೇಭ್ಯಃ:** ಶತ್ರುಗಳಿಂದ ರಕ್ಷಿಸು. ನಿನ್ನ ಆತ್ಮೀಯಜನರಲ್ಲಿಯೇ ಭೇದಭಾವವುಂಟಾಗಬಹುದು. ಆತ್ಮೀಯರನ್ನು ಆತ್ಮೀಯರಿಂದಲೇ ರಕ್ಷಣೆ ಮಾಡು. ಹೀಗೆ ನಿನಗೆ ಸಂಬಂಧಿಸಿದ ಎಲ್ಲರನ್ನೂ ಮತ್ತು ಪ್ರಜೆಗಳನ್ನೂ ರಕ್ಷಣೆಮಾಡು.

ಆತ್ಮಾನಂ ಸರ್ವತೋ ರಕ್ಷನ್ರಾಜನ್ರಕ್ಷಸ್ವ ಮೇದಿನೀಮ್ ।
ಆತ್ಮಮೂಲಮಿದಂ ಸರ್ವಮಾಹುರ್ವೈ ವಿದುಷೋ ಜನಾಃ ॥೧೩॥

ಮಹಾರಾಜ! ಮೊದಲು ಆತ್ಮರಕ್ಷಣೆಯನ್ನು ಸರ್ವಪ್ರಕಾರದಿಂದಲೂ ಮಾಡಿಕೊಳ್ಳಬೇಕು. ನಿನ್ನ ರಕ್ಷಣೆಯು ಬಹಳ ಮುಖ್ಯವಾದುದು. ಅನಂತರ ರಾಜ್ಯವನ್ನು ರಕ್ಷಿಸಬೇಕು. ಈ ಎಲ್ಲವೂ ಆತ್ಮಮೂಲವಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ.

ಕಿಂ ಛಿದ್ರಂ ಕೋ ನು ಸಙ್ಗೋ ಮೇ ಕಿಂ ವಾಸ್ತ್ಯವಿನಿಪಾತಿತಮ್ ।
ಕುತೋ ಮಾಮಾಶ್ರಯೇದ್ದೋಷ ಇತಿ ನಿತ್ಯಂ ವಿಚಿನ್ತಯೇತ್ ॥೧೪॥

ನನ್ನಲ್ಲಿ ಯಾವ ದೌರ್ಬಲ್ಯವಿದೆ? ನನಗೆ ಯಾವ ರೀತಿಯ ವ್ಯಸನ ಗಳಲ್ಲಿ ಆಸಕ್ತಿಯಿದೆ? ನಿಜವಾಗಿಯೂ ಪ್ರಜೆಗಳನ್ನು ರಕ್ಷಿಸುವ ಆಸಕ್ತಿಯು ನನಗಿರುವುದೇ? ಹಾಗೆ ಇರುವುದಾದರೆ ನನ್ನ ಕಾರ್ಯವಿಧಾನವು ಅದಕ್ಕೆ ಪೂರಕವಾಗಿರುವುದೇ? ನನ್ನಲ್ಲಿ ಇದುವರೆಗೂ ದೂರವಾಗದೇ ಉಳಿದಿರುವ ಯಾವ ದೋಷವಿದೆ? ಈ ದೋಷವು ನನ್ನನ್ನೇಕೆ ಆಶ್ರಯಿಸಿದೆ?–ಹೀಗೆ

ರಾಜನಾದವನು ರಾಜ್ಯಪಾಲನೆಯ ವಿಷಯದಲ್ಲಿ ನಿತ್ಯವೂ ಚಿಂತಿಸುತ್ತಲೇ ಇರಬೇಕು.

ಅತೀತದಿವಸೇ ವೃತ್ತಂ ಪ್ರಶಂಸನ್ತಿ ನ ವಾ ಪುನಃ ।
ಗುಪ್ತೈಶ್ಚಾರೈರನುಮತೈಃ ಪೃಥಿವೀಮನುಸಾರಯೇತ್ ॥೧೫॥

ನಿನ್ನೆಯವರೆಗೂ ನಾನು ನಡೆಸಿರುವ ವ್ಯವಹಾರಗಳನ್ನು ಪ್ರಜೆಗಳು ಪ್ರಶಂಸಿಸುತ್ತಿರುವರೇ ಅಥವಾ ಪ್ರಶಂಸಿಸುತ್ತಿಲ್ಲವೇ?–ಎಂಬುದನ್ನು ತಿಳಿದು ಕೊಳ್ಳುವ ಸಲುವಾಗಿ ರಾಜನು ವಿಶ್ವಾಸಪಾತ್ರರಾದ ಗುಪ್ತಚಾರರನ್ನು ಭೂಮಂಡಲದ ಎಲ್ಲೆಡೆಗಳಿಗೂ ಕಳುಹಿಸಬೇಕು.

ಜಾನೀಯುರ್ಯದಿ ತೇ ವೃತ್ತಂ ಪ್ರಶಂಸನ್ತಿ ನ ವಾ ಪುನಃ ।
ಕಚ್ಚಿದ್ರೋಚೇಜ್ಜನಪದೇ ಕಚ್ಚಿದ್ರಾಷ್ಟ್ರೇ ಚ ಮೇ ಯಶಃ ॥೧೬॥

ನಿನ್ನ ಆಚಾರ-ವ್ಯವಹಾರಗಳನ್ನು ಜನರು ಪ್ರಶಂಸೆಮಾಡುತ್ತಿರುವರೋ ಅಥವಾ ಇಲ್ಲವೋ–ಎಂಬುದನ್ನು ನಿನ್ನ ಗುಪ್ತಚಾರರು ತಿಳಿದುಕೊಳ್ಳಬೇಕು. 'ಕೆಲವು ಹಳ್ಳಿಗಳಿಗೆ ಮಾತ್ರವೇ ನನ್ನ ಯಶಸ್ಸು ಹರಡಿರುವುದೇ? ರಾಷ್ಟ್ರಾದ್ಯಂತವಾಗಿ ಹರಡಿರುವುದೇ?'–ಎಂಬುದನ್ನೂ ನೀನು ನಿನ್ನ ಗುಪ್ತಚಾರರ ಮೂಲಕವಾಗಿ ತಿಳಿದುಕೊಳ್ಳಬೇಕು.

ಧರ್ಮಜ್ಞಾನಾಂ ಧೃತಿಮತಾಂ ಸಂಗ್ರಾಮೇಷ್ವಪಲಾಯಿನಾಮ್ ।
ರಾಷ್ಟ್ರೇ ತು ಯೇಽನುಜೀವನ್ತಿ ಯೇ ತು ರಾಜ್ಞೋಽನುಜೀವಿನಃ ॥
ಅಮಾತ್ಯಾನಾಂ ಚ ಸರ್ವೇಷಾಂ ಮಧ್ಯಸ್ಥಾನಾಂ ಚ ಸರ್ವಶಃ ।
ಯೇ ಚ ತ್ವಾಭಿಪ್ರಶಂಸೇಯುರ್ನಿನ್ದೇಯುರಥ ವಾ ಪುನಃ ।
ಸರ್ವಾನ್ಸುಪರಿಣೀತಾಂಸ್ತಾನ್ಕಾರಯೇಥಾ ಯುಧಿಷ್ಠಿರ ॥೧೮॥

ಯುಧಿಷ್ಠಿರ! ಧರ್ಮಜ್ಞರಲ್ಲಿ, ಧೈರ್ಯಶಾಲಿಗಳಲ್ಲಿ, ಸಂಗ್ರಾಮ ಭೂಮಿಯಿಂದ ಬೆನ್ನು ತಿರುಗಿಸಿಕೊಂಡು ಪಲಾಯನಮಾಡದವರಲ್ಲಿ, ನಿನ್ನ ರಾಷ್ಟ್ರದಲ್ಲಿಯೇ ತಮ್ಮ ಜೀವಿಕೆಯನ್ನು ನಡೆಸುತ್ತಿರುವವರಲ್ಲಿ, ರಾಜನನ್ನೇ ಆಶ್ರಯಿಸಿ ಜೀವನವನ್ನು ನಡೆಸುತ್ತಿರುವವರಲ್ಲಿ, ಮಂತ್ರಿವರ್ಗದವರಲ್ಲಿ ಮತ್ತು ಮಧ್ಯಸ್ಥರಾಗಿರುವವರಲ್ಲಿ–ಯಾರು ನಿನ್ನ ಪ್ರಶಂಸೆಯನ್ನು ಮಾಡು ವರೋ ಅಥವಾ ನಿಂದೆಯನ್ನು ಮಾಡುವರೋ–ಅವರೆಲ್ಲರನ್ನೂ ನೀನು ಯಥಾಯೋಗ್ಯವಾಗಿ ಸತ್ಕರಿಸಬೇಕು.

ಏಕಾನ್ತೇನ ಹಿ ಸರ್ವೇಷಾಂ ನ ಶಕ್ಯಂ ತಾತ ರೋಚಿತುಮ್ ।
ಮಿತ್ರಾಮಿತ್ರಮಥೋ ಮಧ್ಯಂ ಸರ್ವಭೂತೇಷು ಭಾರತ ॥೧೯॥

ಯಾರ ಕಾರ್ಯವೇ ಆಗಲೀ, ಯಾವುದೇ ಕಾರ್ಯವಾಗಲೀ–ಎಲ್ಲರಿಗೂ ಆ ಕಾರ್ಯವು ಮುಖ್ಯವಾಗಿ ರುಚಿಸುವುದೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲ ಪ್ರಾಣಿಗಳಿಗೂ (ಮನುಷ್ಯರಿಗೂ) ಮಿತ್ರ, ಅಮಿತ್ರ ಮತ್ತು ಮಧ್ಯಸ್ಥ–ಎಂಬ ಮೂರು ವಿಧವಾದ ಸಂಬಂಧಿಗಳು ಇದ್ದೇ ಇರುತ್ತಾರೆ. ಮಿತ್ರರು–ಮಾಡಿದ ಕಾರ್ಯವನ್ನು ಹೊಗಳುತ್ತಾರೆ. ಮಧ್ಯಸ್ಥರು–ಅದೇ ಕಾರ್ಯವನ್ನು ಹೊಗಳುವುದೂ ಇಲ್ಲ; ನಿಂದಿಸುವುದೂ ಇಲ್ಲ. ಅಮಿತ್ರರಾದವರು–ಕಾರ್ಯವು ಒಳ್ಳೆಯದೇ ಆಗಿದ್ದರೂ ಅದರಲ್ಲಿಯೂ ದೋಷವನ್ನು ಕಂಡುಹಿಡಿಯುತ್ತಾರೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ತುಲ್ಯಬಾಹುಬಲಾನಾಂ ಚ ತುಲ್ಯಾನಾಂ ಚ ಗುಣೈರಪಿ ।
ಕಥಂ ಸ್ಯಾದಧಿಕಃ ಕಶ್ಚಿತ್ಸ ಚ ಭುಞ್ಜೀತ ಮಾನವಾನ್ ॥೨೦॥

“ಪಿತಾಮಹ! ಬಾಹುಬಲವೂ ಸಮಾನವಾಗಿರುತ್ತದೆ. ದಮ-ದಾಕ್ಷ್ಯಾದಿ ಗುಣಗಳೂ ಒಂದೇ ಸಮನಾಗಿರುತ್ತವೆ. ಹೀಗಿರುವಾಗ ಅವರಲ್ಲಿ ಒಬ್ಬನು ಮಾತ್ರ ಎಲ್ಲರಿಗಿಂತಲೂ ಅಧಿಕನು ಹೇಗಾಗುತ್ತಾನೆ? ಅವನೊಬ್ಬನೇ ಎಲ್ಲರನ್ನೂ ಹೇಗೆ ಶಾಸನಮಾಡುತ್ತಾನೆ?”

ಭೀಷ್ಮನು ಹೇಳುತ್ತಾನೆ :

ಯಚ್ಚರಾ ಬಾಹ್ಯಚರಾನದ್ಯುರದಂಷ್ಟ್ರಾನ್ದಂಷ್ಟ್ರಿಣಸ್ತಥಾ ।
ಆಶೀವಿಷಾ ಇವ ಕ್ರುದ್ಧಾ ಭುಜಙ್ಗಾನ್ಭುಜಗಾ ಇವ ॥೨೧॥

“ಯಾವ ರೀತಿಯಲ್ಲಿ ಕೋಪಗೊಂಡ ವಿಷಸರ್ಪಗಳು ಇತರ ಚಿಕ್ಕ ಹಾವುಗಳನ್ನು ನುಂಗಿಹಾಕುತ್ತವೆಯೋ, ಚಲಿಸುವ ಪ್ರಾಣಿಗಳು ಚಲಿಸದಿರುವ ವಸ್ತುಗಳನ್ನು ನುಂಗುತ್ತವೆಯೋ, ಕೋರೆದಾಡೆಗಳಿರುವ ಪ್ರಾಣಿಗಳು ಕೋರೆದಾಡೆಗಳಿಲ್ಲದ ಪ್ರಾಣಿಗಳನ್ನು ತಿನ್ನುತ್ತವೆಯೋ–ಅದೇ ರೀತಿಯಲ್ಲಿ ಪ್ರಬಲರಾದವರು ದುರ್ಬಲರ ಮೇಲೆ ಅಧಿಕಾರವನ್ನು ನಡೆಸುತ್ತಾರೆ.

ಏತೇಭ್ಯಶ್ಚಾಪ್ರಮತ್ತಃ ಸ್ಯಾತ್ಸದಾ ಶತ್ರೋರ್ಯುಧಿಷ್ಠಿರ ।
ಭಾರುಣ್ಡಸದೃಶಾ ಹ್ಯೇತೇ ನಿಪತನ್ತಿ ಪ್ರಮಾದತಃ ॥೨೨॥

ಯುಧಿಷ್ಠಿರ! ಪ್ರಯತ್ನಶೀಲನಾದ ರಾಜನು ಈ ಎಲ್ಲರಿಂದಲೂ ಮತ್ತು ಶತ್ರುಗಳ ದೆಸೆಯಿಂದಲೂ ಯಾವಾಗಲೂ ಅಪ್ರಮತ್ತನಾಗಿರಬೇಕು. ಗಂಡಭೇರುಂಡಗಳಿಗೆ ಸಮಾನರಾಗಿರುವ ಶತ್ರುಗಳು ರಾಜನ ಪ್ರಮಾದ ದಿಂದಾಗಿ ಮೇಲೆ ಬೀಳುತ್ತಾರೆ.

ಕಚ್ಚಿತ್ತೇ ವಣಿಜೋ ರಾಷ್ಟ್ರೇ ನೋದ್ವಿಜನ್ತಿ ಕರಾರ್ದಿತಾಃ ।
ಕ್ರೀಣನ್ತೋ ಬಹುನಾಲ್ಪೇನ ಕಾನ್ತಾರಕೃತವಿಭ್ರಮಾಃ ॥೨೩॥

ಹೆಚ್ಚು ಅಥವಾ ಕಡಿಮೆ ಬೆಲೆಯಿಂದ ಪದಾರ್ಥಗಳನ್ನು ಕೊಳ್ಳುವ, ಹಾಗೆ ಕೊಂಡ ಪದಾರ್ಥಗಳನ್ನು ಸಾಗಿಸುವ ಸಲುವಾಗಿ ಕಾಡು-ಮೇಡುಗಳಲ್ಲಿಯೂ ಅಲೆದಾಡುವ ವೈಶ್ಯರು ನಿನ್ನ ರಾಷ್ಟ್ರದಲ್ಲಿ ಕರಭಾರದಿಂದ ಪೀಡಿಸಲ್ಪಟ್ಟು ಉದ್ವಿಗ್ನರಾಗುತ್ತಿಲ್ಲ ತಾನೇ?

ಕಚ್ಚಿತ್ಕೃಷಿಕರಾ ರಾಷ್ಟ್ರಂ ನ ಜಹತ್ಯತಿಪೀಡಿತಾಃ ।
ಯೇ ವಹನ್ತಿ ಧುರಂ ರಾಜ್ಞಾಂ ತೇ ಭರನ್ತೀತರಾನಪಿ ॥೨೪॥

ಕೃಷೀವಲರು (ರೈತರು) ನಿನ್ನ ಅಧಿಕಾರಿಗಳಿಂದ ಬಹಳವಾಗಿ ಪೀಡಿಸಲ್ಪಟ್ಟವರಾಗಿ ನಿನ್ನ ರಾಜ್ಯವನ್ನು ಬಿಟ್ಟುಹೋದರೆ–ರಾಜನಿಗೆ ಆಪತ್ತು ತಪ್ಪಿದ್ದಲ್ಲ. ಏಕೆಂದರೆ : ರಾಜರ ಭಾರವನ್ನು ಭರಿಸುವವರು ರೈತರೇ ಆಗಿದ್ದಾರೆ. ರೈತರು ಧಾನ್ಯಾದಿಗಳನ್ನು ಒದಗಿಸಿ ಕೊಡುವುದರ ಮೂಲಕ ರಾಜನನ್ನೂ ಅವನ ಪರಿವಾರವನ್ನೂ ಭರಿಸುವುದಲ್ಲದೇ ಇತರ ಪ್ರಜೆಗಳನ್ನೂ ರೈತರೇ ಭರಿಸುತ್ತಾರೆ. (ರೈತರು ಧಾನ್ಯಾದಿಗಳನ್ನು ಬೆಳೆಯದಿದ್ದರೆ ಪ್ರಪಂಚವೇ ಉಳಿಯುವುದಿಲ್ಲ.)

ಇತೋ ದತ್ತೇನ ಜೀವನ್ತಿ ದೇವಾಃ ಪಿತೃಗಣಾಸ್ತಥಾ ।
ಮಾನುಷೋರಗರಕ್ಷಾಂಸಿ ವಯಾಂಸಿ ಪಶವಸ್ತಥಾ ॥೨೫॥

ರೈತರು ಕೊಡುವ ಧಾನ್ಯಾದಿಗಳಿಂದಲೇ ದೇವತೆಗಳು, ಪಿತೃಗಳು, ಮನುಷ್ಯರು, ಸರ್ಪಗಳು, ರಾಕ್ಷಸರು, ಪಶು-ಪಕ್ಷಿಗಳು–ಇವುಗಳೇ ಮೊದಲಾಗಿ ಸಮಸ್ತಪ್ರಾಣಿಗಳೂ ಜೀವನ ನಡೆಸುತ್ತವೆ.

ಯುಧಿಷ್ಠಿರ! ನಾನೀಗ ರಾಜರು ರಾಜ್ಯದಲ್ಲಿ ಹೇಗೆ ನಡೆದುಕೊಳ್ಳ ಬೇಕೆಂಬುದನ್ನೂ ಮತ್ತು ರಕ್ಷಣೆಯ ವಿಷಯವನ್ನೂ ಹೇಳಿರುವೆನು. ಇದೇ ವಿಷಯವಾಗಿಯೇ ಮುಂದೆಯೂ ಕೆಲವು ಮಾತುಗಳನ್ನು ಹೇಳುತ್ತೇನೆ.”

ೞ೯ನೆಯ ಅಧ್ಯಾಯವು ಮುಗಿಯಿತು.

೬೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಮಾಂಧಾತನಿಗೆ ಉತಥ್ಯನ ಉಪದೇಶ: ರಾಜನು ಧರ್ಮವನ್ನು ಪರಿಪಾಲಿಸಬೇಕಾದ ಆವಶ್ಯಕತೆ

ಜನಮೇಜಯಮಹಾರಾಜ! ಭೀಷ್ಮನು ಹೇಳುತ್ತಾನೆ :

ಯಾನಙ್ಗಿರಾಃ ಕ್ಷತ್ರಧರ್ಮಾನುತಥ್ಯೋ ಬ್ರಹ್ಮವಿತ್ತಮಃ ।
ಮಾನ್ಧಾತ್ರೇ ಯೌವನಾಶ್ವಾಯ ಪ್ರೀತಿಮಾನಭ್ಯಭಾಷತ ॥೧॥

“ಯುಧಿಷ್ಠಿರ! ಬ್ರಹ್ಮವಿದರಲ್ಲಿ ಶ್ರೇಷ್ಠನಾದ ಅಂಗಿರಸನ ಪುತ್ರನಾದ ಉತಥ್ಯನು ಯುವನಾಶ್ವನ ಮಗನಾದ ಮಾಂಧಾತನಿಗೆ ಪ್ರಸನ್ನತಾಪೂರ್ವಕ ವಾಗಿ ಹೇಳಿದ ಕ್ಷತ್ರಧರ್ಮಗಳನ್ನೇ ನಿನಗೂ ಹೇಳುವೆನು.

ಬ್ರಹ್ಮವಿದರಲ್ಲಿ ಶ್ರೇಷ್ಠನಾದ ಉತಥ್ಯನು ಯಾವ ರೀತಿಯಲ್ಲಿ ಮಾಂಧಾತನಿಗೆ ಕ್ಷಾತ್ರಧರ್ಮವನ್ನು ಉಪದೇಶಿಸಿದನೋ ಆ ಉಪದೇಶವನ್ನು ಪೂರ್ತಿಯಾಗಿ ನಿನಗೆ ಹೇಳುತ್ತೇನೆ.

ಮಾಂಧಾತನು ಬ್ರಹ್ಮಸತ್ತಮನಾದ ಉತಥ್ಯನನ್ನು ಒಮ್ಮೆ ಸಂಧಿಸಿದಾಗ ಉತಥ್ಯನು ಅವನೊಡನೆ ಹೇಳುತ್ತಾನೆ :

ಧರ್ಮಾಯ ರಾಜಾ ಭವತಿ ನ ಕಾಮಕರಣಾಯ ತು ।
ಮಾನ್ಧಾತರಿತಿ ಜಾನೀಹಿ ರಾಜಾ ಲೋಕಸ್ಯ ರಕ್ಷಿತಾ ॥೩॥

“ಮಾಂಧಾತನೇ! ಧರ್ಮವನ್ನು ಪರಿಪಾಲನೆಮಾಡುವುದಕ್ಕೂ ಮತ್ತು ಧರ್ಮವನ್ನು ಪ್ರಚಾರಮಾಡುವುದಕ್ಕೂ ಒಬ್ಬನು ರಾಜನಾಗುತ್ತಾನೆ. ವಿಷಯ ಸುಖಗಳ ಉಪಭೋಗಕ್ಕಾಗಿ ರಾಜನಾಗುವುದಿಲ್ಲ. ರಾಜನು ಸಂಪೂರ್ಣ ಜಗತ್ತಿನ ರಕ್ಷಕನಾಗಿರುತ್ತಾನೆ. ಈ ಮುಖ್ಯವಿಷಯಗಳನ್ನು ನೀನು ತಿಳಿದು ಕೊಳ್ಳಬೇಕು.

ರಾಜಾ ಚರತಿ ಚೇದ್ಧರ್ಮಂ ದೇವತ್ವಾಯೈವ ಕಲ್ಪತೇ ।
ಸ ಚೇದಧರ್ಮಂ ಚರತಿ ನರಕಾಯೈವ ಗಚ್ಛತಿ ॥೪॥

ರಾಜನು ಧರ್ಮಾಚರಣೆಯನ್ನು ಮಾಡುತ್ತಿದ್ದರೆ–ದೇವತ್ವವನ್ನೇ ಹೊಂದುತ್ತಾನೆ. ಹಾಗಲ್ಲದೇ ಅಧರ್ಮಕಾರ್ಯವನ್ನು ಮಾಡಿದರೆ ನಿಸ್ಸಂಶಯವಾಗಿ ನರಕಕ್ಕೆ ಹೋಗುತ್ತಾನೆ.

ಧರ್ಮೇ ತಿಷ್ಠನ್ತಿ ಭೂತಾನಿ ಧರ್ಮೋ ರಾಜನಿ ತಿಷ್ಠತಿ ।
ತಂ ರಾಜಾ ಸಾಧು ಯಃ ಶಾಸ್ತಿ ಸ ರಾಜಾ ಪೃಥಿವೀಪತಿಃ ॥೫॥

ಎಲ್ಲ ಪ್ರಾಣಿಗಳೂ ಧರ್ಮದ ಆಧಾರದ ಮೇಲೆಯೇ ನಿಂತಿವೆ. ಧರ್ಮವು ರಾಜನಲ್ಲಿ ಪ್ರತಿಷ್ಠಿತವಾಗಿದೆ. ಧರ್ಮವನ್ನು ಯಾವನು ಪರಿಪಾಲಿಸುತ್ತಾನೆಯೋ ಮತ್ತು ಧರ್ಮಾನುಸಾರವಾಗಿ ಯಾವನು ಶಾಸನ ಮಾಡುತ್ತಾನೆಯೋ–ಅಂತಹ ರಾಜನು ಪೃಥಿವೀಪತಿಯಾಗುತ್ತಾನೆ.

ರಾಜಾ ಪರಮಧರ್ಮಾತ್ಮಾ ಲಕ್ಷ್ಮೀವಾನ್ಧರ್ಮ ಉಚ್ಯತೇ ।
ದೇವಾಶ್ಚ ಗರ್ಹಾಂ ಗಚ್ಛನ್ತಿ ಧರ್ಮೋ ನಾಸ್ತೀತಿ ಚೋಚ್ಯತೇ ॥೬॥

ಪರಮಧರ್ಮಾತ್ಮನಾದ ಮತ್ತು ಶ್ರೀಸಂಪನ್ನನಾದ ರಾಜನನ್ನು ಧರ್ಮಸ್ವರೂಪನೆಂದೇ ಹೇಳುತ್ತಾರೆ. ರಾಜನೇನಾದರೂ ಧರ್ಮವನ್ನು ಪರಿಪಾಲನೆಮಾಡದಿದ್ದರೆ ಜನರು ದೇವತೆಗಳನ್ನೂ ನಿಂದನೆಮಾಡುತ್ತಾರೆ ಮತ್ತು ಧರ್ಮವೇ ಇಲ್ಲವೆಂದೂ ಹೇಳುತ್ತಾರೆ.

ಸ್ವಧರ್ಮೇ ವರ್ತಮಾನಾನಾಮರ್ಥಸಿದ್ಧಿಃ ಪ್ರದೃಶ್ಯತೇ ।
ತದೇವ ಮಙ್ಗಲಂ ಲೋಕಃ ಸರ್ವಃ ಸಮನುವರ್ತತೇ ॥೭॥

ಯಾರು ತಮ್ಮ ಧರ್ಮದಲ್ಲಿಯೇ ತತ್ಪರರಾಗಿರುವರೋ–ಅವರಿಗೆ ಮನೋಭೀಷ್ಟವಾದ ಇಷ್ಟಾರ್ಥಗಳು ಸಿದ್ಧಿಸುತ್ತಿರುವುದು ಕಂಡುಬರುತ್ತಿದೆ. ಆದುದರಿಂದಲೇ ಪ್ರಪಂಚವೆಲ್ಲವೂ ಮಂಗಳಮಯವಾದ ಧರ್ಮವನ್ನೇ ಅನುಸರಿಸುತ್ತಿದೆ.

ಉಚ್ಛಿದ್ಯತೇ ಧರ್ಮವೃತ್ತಮಧರ್ಮೋ ವರ್ತತೇ ಮಹಾನ್ ।
ಭಯಮಾಹುರ್ದಿವಾರಾತ್ರಂ ಯದಾ ಪಾಪೋ ನ ವಾರ್ಯತೇ ॥೮॥

ರಾಜನು ಯಾವಾಗ ಪಾಪಕಾರ್ಯಗಳನ್ನು ತಡೆಯುವುದಿಲ್ಲವೋ–ಆಗ ಮಹತ್ತರವಾದ ಅಧರ್ಮವು ಎಲ್ಲೆಲ್ಲಿಯೂ ತಾಂಡವವಾಡುತ್ತದೆ. ಧಾರ್ಮಿಕ ವ್ಯವಹಾರಗಳೆಲ್ಲವೂ ವಿನಾಶಹೊಂದುತ್ತವೆ. (ಧರ್ಮವನ್ನು ಆಚರಿಸುವವರೇ ಇಲ್ಲವಾಗುತ್ತಾರೆ.) ಇದರ ಪರಿಣಾಮವಾಗಿ ಜನರು ಹಗಲು-ರಾತ್ರಿಗಳೆನ್ನದೇ ಯಾವಾಗಲೂ ಭಯದಲ್ಲಿಯೇ ಮಗ್ನರಾಗುತ್ತಾರೆ.

ಮಮೇದಮಿತಿ ನೈವೈತತ್ಸಾಧೂನಾಂ ತಾತ ಧರ್ಮತಃ ।
ನ ವೈ ವ್ಯವಸ್ಥಾ ಭವತಿ ಯದಾ ಪಾಪೋ ನ ವಾರ್ಯತೇ ॥೯॥

ಜನಗಳ ಪಾಪಪ್ರವೃತ್ತಿಯನ್ನು ತಡೆಯದೇ ಹೋದರೆ ಸಾಧು-ಸತ್ಪುರುಷರು ಧರ್ಮತಃ "ಇದು ನನ್ನ ವಸ್ತು"–ಎಂದು ಹೇಳಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಯಾವ ವಿಧವಾದ ವ್ಯವಸ್ಥೆಯನ್ನು ಮಾಡಲೂ ಸಾಧ್ಯವಾಗುವುದಿಲ್ಲ.

ನೈವ ಭಾರ್ಯಾ ನ ಪಶವೋ ನ ಕ್ಷೇತ್ರಂ ನ ನಿವೇಶನಮ್ ।
ಸಂದೃಶ್ಯೇತ ಮನುಷ್ಯಾಣಾಂ ಯದಾ ಪಾಪಬಲಂ ಭವೇತ್ ॥೧೦॥

ಜಗತ್ತಿನಲ್ಲಿ ಪಾಪಾಚರಣೆಯೇ ಬಲಿಷ್ಠವಾದಾಗ ಮನುಷ್ಯನಿಗೆ 'ಇವಳು ನನ್ನ ಭಾರ್ಯೆ ; ಇವು ನನ್ನ ಗೋವುಗಳು ; ಇವು ನನ್ನ ಕ್ಷೇತ್ರಗಳು (ಹೊಲ-ಗದ್ದೆಗಳು) ; ಇದು ನನ್ನ ಮನೆ'–ಎಂದು ಹೇಳಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಪಾಪಿಷ್ಠರೇ ಅಧಿಕವಾಗಿರುವ ರಾಜ್ಯದಲ್ಲಿ ಯಾವ ವಿಧವಾದ ಕಟ್ಟುಪಾಡುಗಳೂ ಉಳಿಯುವುದಿಲ್ಲ.

ದೇವಾಃ ಪೂಜಾಂ ನ ಜಾನನ್ತಿ ನ ಸ್ವಧಾಂ ಪಿತರಸ್ತದಾ ।
ನ ಪೂಜ್ಯನ್ತೇ ಹ್ಯತಿಥಯೋ ಯದಾ ಪಾಪೋ ನ ವಾರ್ಯತೇ ॥೧೧॥

ಪಾಪಕರ್ಮಗಳನ್ನು ತಡೆಯದೇ ಇದ್ದರೆ–ದೇವತೆಗಳು 'ಪೂಜೆ' ಎಂದರೇನೆಂಬುದನ್ನೇ ಮರೆಯಬೇಕಾಗುತ್ತದೆ. ಪಿತೃಗಳು ಸ್ವಧಾಪೂರ್ವಕವಾದ ಶ್ರಾದ್ಧಾದಿಗಳನ್ನು ಮರೆಯಬೇಕಾಗುತ್ತದೆ. ಅತಿಥಿಗಳನ್ನು ಯಾರೂ ಸತ್ಕರಿಸುವುದಿಲ್ಲ. (ದೇವತಾಪೂಜಾದಿಗಳೂ, ಪಿತೃತರ್ಪಣ-ಶ್ರಾದ್ಧಾದಿಗಳೂ, ಅತಿಥಿಸತ್ಕಾರಗಳೂ ನಿಂತುಹೋಗುತ್ತವೆ.)

ನ ವೇದಾನಧಿಗಚ್ಛನ್ತಿ ವ್ರತವನ್ತೋ ದ್ವಿಜಾತಯಃ ।
ನ ಯಜ್ಞಾಂಸ್ತನ್ವತೇ ವಿಪ್ರಾ ಯದಾ ಪಾಪೋ ನ ವಾರ್ಯತೇ ॥೧೨॥

ಲೋಕದಲ್ಲಿ ಪಾಪಾಚರಣೆಯನ್ನು ತಡೆಯದಿದ್ದರೆ–ಬ್ರಹ್ಮಚರ್ಯ ವ್ರತಾನುಷ್ಠಾನಪರರಾದ ಬ್ರಾಹ್ಮಣರು ವೇದಾಧ್ಯಯನವನ್ನು ಮಾಡುವುದಿಲ್ಲ. ವಿಪ್ರರು ಯಜ್ಞಾನುಷ್ಠಾನಗಳನ್ನೂ ಆಚರಿಸುವುದಿಲ್ಲ.

ವೃದ್ಧಾನಾಮಿವ ಸತ್ತ್ವಾನಾಂ ಮನೋ ಭವತಿ ವಿಹ್ವಲಮ್ ।
ಮನುಷ್ಯಾಣಾಂ ಮಹಾರಾಜ ಯದಾ ಪಾಪೋ ನ ವಾರ್ಯತೇ ॥೧೩॥

ಜಗತ್ತಿನಲ್ಲಿ ಪಾಪಾಚರಣೆಯನ್ನು ತಡೆಗಟ್ಟದಿದ್ದರೆ–ಸತ್ತ್ವಹೀನವಾದ ಮುದಿಪ್ರಾಣಿಗಳಂತೆ ಮನುಷ್ಯರ ಮನಸ್ಸು ವಿಹ್ವಲಗೊಳ್ಳುತ್ತದೆ.

ಉಭೌ ಲೋಕಾವಭಿಪ್ರೇಕ್ಷ್ಯ ರಾಜಾನಮೃಷಯಃ ಸ್ವಯಮ್ ।
ಅಸೃಜನ್ಸುಮಹದ್ಭೂತಮಯಂ ಧರ್ಮೋ ಭವಿಷ್ಯತಿ ॥೧೪॥

ಇಹಲೋಕ-ಪರಲೋಕಗಳೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಹರ್ಷಿಗಳು ತಾವಾಗಿಯೇ ರಾಜನೆಂಬ ಹೆಸರಿನ ಶಕ್ತಿಶಾಲಿಯಾದ ಮಹಾ ಭೂತವನ್ನು ಸೃಷ್ಟಿಸಿದರು. 'ಇದು ಸಾಕ್ಷಾತ್ ಧರ್ಮಸ್ವರೂಪವೇ ಆಗಲಿ'– ಎಂದವರು ನಿರ್ಧರಿಸಿದರು.

ಯಸ್ಮಿನ್ಧರ್ಮೋ ವಿರಾಜೇತ ತಂ ರಾಜಾನಂ ಪ್ರಚಕ್ಷತೇ ।
ಯಸ್ಮಿನ್ವಿಲೀಯತೇ ಧರ್ಮಸ್ತಂ ದೇವಾ ವೃಷಲಂ ವಿದುಃ ॥೧೫॥

ಯಾವನಲ್ಲಿ ಧರ್ಮವು ವಿರಾಜಮಾನವಾಗಿರುವುದೋ–ಅವನನ್ನು ರಾಜನೆಂದು ಹೇಳುತ್ತಾರೆ. ಯಾವನಲ್ಲಿ ಧರ್ಮವು (ವೃಷವು) ವಿಲೀನ ವಾಗಿರುವುದೋ–ಅವನನ್ನು ದೇವತೆಗಳು 'ವೃಷಲ' ನೆಂದು ತಿಳಿಯುತ್ತಾರೆ.

ವೃಷೋ ಹಿ ಭಗವಾನ್ಧರ್ಮೋ ಯಸ್ತಸ್ಯ ಕುರುತೇ ಹ್ಯಲಮ್ ।
ವೃಷಲಂ ತಂ ವಿದುರ್ದೇವಾಸ್ತಸ್ಮಾದ್ಧರ್ಮಂ ವಿವರ್ಧಯೇತ್ ॥೧೬॥

'ವೃಷ' ಎಂಬುದು ಭಗವಾನ್ ಧರ್ಮನ ಹೆಸರು. ಯಾವನು ಧರ್ಮಕ್ಕೆ (ವೃಷಕ್ಕೆ) ಬೇಕಾದುದನ್ನು (ಅಲಂ) ಸಾಕುಮಾಡುತ್ತಾನೆಯೋ ಅವನನ್ನು

ವೃಷಲನೆಂದು ದೇವತೆಗಳು ಭಾವಿಸುತ್ತಾರೆ. ಆದುದರಿಂದ ಈ ಧರ್ಮವನ್ನೇ ಸಮೃದ್ಧಿಪಡಿಸಬೇಕು.

ಧರ್ಮೇ ವರ್ಧತಿ ವರ್ಧನ್ತಿ ಸರ್ವಭೂತಾನಿ ಸರ್ವದಾ ।
ತಸ್ಮಿನ್ಹ್ರಸತಿ ಹ್ರೀಯನ್ತೇ ತಸ್ಮಾದ್ಧರ್ಮಂ ನ ಲೋಪಯೇತ್ ॥೧೭॥

ಧರ್ಮವು ವರ್ಧಿಸಿದ್ದೇ ಆದರೆ ಸಕಲಪ್ರಾಣಿಗಳೂ ಎಲ್ಲ ಕಾಲಗಳಲ್ಲಿಯೂ ವರ್ಧಿಸುತ್ತಲೇ ಇರುತ್ತವೆ. ಅಂತೆಯೇ ಧರ್ಮವು ಹ್ರಾಸವಾಗುತ್ತಿದ್ದರೆ ಎಲ್ಲ ಪ್ರಾಣಿಗಳೂ ವಿನಾಶಹೊಂದುತ್ತವೆ. ಆದುದರಿಂದ ಧರ್ಮದ ಲೋಪವನ್ನೆಂದಿಗೂ ಮಾಡಬಾರದು.

ಧನಾತ್ಪ್ರವತಿ ಧರ್ಮೋ ಹಿ ಧಾರಣಾದ್ವೇತಿ ನಿಶ್ಚಯಃ ।
ಅಕಾರ್ಯಾಣಾಂ ಮನುಷ್ಯೇನ್ದ್ರ ಸ ಸೀಮಾನ್ತಕರಃ ಸ್ಮೃತಃ ॥೧೮॥

ಧನದಿಂದ ಧರ್ಮದ ಉತ್ಪತ್ತಿಯಾಗುತ್ತದೆ. ಎಲ್ಲರನ್ನೂ ಧಾರಣೆ ಮಾಡುವುದರಿಂದಲೇ ಧರ್ಮ ಎಂಬ ಅನ್ವರ್ಥನಾಮದಿಂದಲೇ ಅದು ಕರೆಯಲ್ಪಟ್ಟಿರುವುದು ನಿಶ್ಚಯ. ಮನುಷ್ಯೇಂದ್ರನೇ! ಅಕಾರ್ಯಗಳಿಗೆ ಧರ್ಮವು ಒಂದು ಎಲ್ಲೆಯನ್ನು ಕಲ್ಪಿಸುವುದೆಂದೂ–ಅಕಾರ್ಯಗಳು ಸರ್ವತ್ರ ಹರಡಲು ಬಿಡುವುದಿಲ್ಲವೆಂದೂ ವಿದ್ವಾಂಸರಿಂದ ಹೇಳಲ್ಪಟ್ಟಿದೆ.

ಪ್ರಭವಾರ್ಥಂ ಹಿ ಭೂತಾನಾಂ ಧರ್ಮಃ ಸೃಷ್ಟಃ ಸ್ವಯಮ್ಭುವಾ ।
ತಸ್ಮಾತ್ಪ್ರವರ್ತಯೇದ್ಧರ್ಮಂ ಪ್ರಜಾನುಗ್ರಹಕಾರಣಾತ್ ॥೧೯॥

ಬ್ರಹ್ಮನು ಪ್ರಜೆಗಳ ಕಲ್ಯಾಣಾರ್ಥವಾಗಿ ಧರ್ಮವನ್ನು ಸೃಷ್ಟಿಸಿದನು. ಆದುದರಿಂದ ರಾಜನಾದವನು ಪ್ರಜೆಗಳಿಗೆ ಅನುಗ್ರಹಮಾಡುವ ಕಾರಣದಿಂದ ಧರ್ಮದ ಪ್ರಚಾರವನ್ನು ಮಾಡಬೇಕು.

ಯಸ್ಮಾದ್ಧಿ ರಾಜಶಾರ್ದೂಲ ಧರ್ಮಃ ಸೃಷ್ಟಃ ಸ್ವಯಮ್ಭುವಾ ।
ಸ ರಾಜಾ ಯಃ ಪ್ರಜಾಃ ಶಾಸ್ತಿ ಸಾಧುಕೃತ್ಪುರುಷರ್ಷಭ ॥೨೦॥

ಪುರುಷರ್ಷಭನೇ! ಈ ಕಾರಣಗಳಿಂದ ಧರ್ಮವು ಎಲ್ಲಕ್ಕಿಂತಲೂ ಶ್ರೇಷ್ಠತರವೆಂದು ಹೇಳಲ್ಪಟ್ಟಿದೆ. ಯಾರು ಸದ್ಧರ್ಮದ ಮೂಲಕವಾಗಿ ಪ್ರಜೆಗಳನ್ನು ಪಾಲನೆಮಾಡುವನೋ–ಅವನೇ ರಾಜನು.

ಕಾಮಕ್ರೋಧಾವನಾದೃತ್ಯ ಧರ್ಮಮೇವಾನುಪಾಲಯ ।
ಧರ್ಮಃ ಶ್ರೇಯಸ್ಕರತಮೋ ರಾಜ್ಞಾಂ ಭರತಸತ್ತಮ ॥೨೧॥

ಭರತಶ್ರೇಷ್ಠನೇ! ನೀನಾದರೂ ಕಾಮ-ಕ್ರೋಧಗಳನ್ನು ಪರಿತ್ಯಜಿಸಿ ಧರ್ಮವನ್ನೇ ಪರಿಪಾಲನೆಮಾಡು. ರಾಜನಿಗೆ ಧರ್ಮವೇ ಅತ್ಯಂತ ಶ್ರೇಯಸ್ಕರವಾದುದು.

ಧರ್ಮಸ್ಯ ಬ್ರಾಹ್ಮಣೋ ಯೋನಿಸ್ತಸ್ಮಾತ್ತಾನ್ಪೂಜಯೇತ್ಸದಾ ।
ಬ್ರಾಹ್ಮಣಾನಾಂ ಚ ಮಾನ್ಧಾತಃ ಕುರ್ಯಾತ್ಕಾಮಾನಮತ್ಸರೀ ॥೨೨॥

ಮಾಂಧಾತನೇ! ಧರ್ಮಕ್ಕೆ ಬ್ರಾಹ್ಮಣನೇ ಮೂಲಪುರುಷನಾಗಿದ್ದಾನೆ. ಆದುದರಿಂದ ಬ್ರಾಹ್ಮಣರನ್ನು ಯಾವಾಗಲೂ ಪೂಜಿಸಬೇಕು. ಬ್ರಾಹ್ಮಣರ ಕಾಮನೆಗಳನ್ನು ಈರ್ಷ್ಯಾರಹಿತನಾಗಿ ಪೂರ್ಣಮಾಡಿಕೊಡಬೇಕು.

ತೇಷಾಂ ಹ್ಯಕಾಮಕರಣಾದ್ರಾಜ್ಞಃ ಸಂಜಾಯತೇ ಭಯಮ್ ।
ಮಿತ್ರಾಣಿ ನ ಚ ವರ್ಧನ್ತೇ ತಥಾಮಿತ್ರೀಭವನ್ತ್ಯಪಿ ॥೨೩॥

ಬ್ರಾಹ್ಮಣರ ಕಾಮನೆಗಳನ್ನು ಪೂರ್ಣಮಾಡಿಕೊಡದಿದ್ದರೆ–ರಾಜನಿಗೆ ಭಯವುಂಟಾಗುತ್ತದೆ. ಮಿತ್ರರ ವೃದ್ಧಿಯಾಗುವುದಿಲ್ಲ. ಮಿತ್ರರೇ ಶತ್ರುಗಳಾಗುತ್ತಾರೆ.

ಬ್ರಾಹ್ಮಣಾನಾಂ ಸದಾಸೂಯಾದ್ಬಾಲ್ಯಾದ್ವೈರೋಚನೋ ಬಲಿಃ ।
ಅಥಾಸ್ಮಾಚ್ಛ್ರೀರಪಾಕ್ರಾಮದ್ಯಸ್ಮಿನ್ನಾಸೀತ್ಪ್ರತಾಪಿನೀ ॥೨೪॥

ವಿರೋಚನನ ಮಗನಾದ ಬಲಿಯು ಬಾಲ್ಯದಿಂದಲೇ ಬ್ರಾಹ್ಮಣರ ವಿಷಯದಲ್ಲಿ ಅಸೂಯಾಪರನಾಗಿದ್ದನು. ಆದುದರಿಂದಲೇ ಶತ್ರುಗಳನ್ನು ಪರಿತಾಪಗೊಳಿಸುತ್ತಿದ್ದ ಅವನ ರಾಜ್ಯಲಕ್ಷ್ಮಿಯು ಅವನನ್ನು ಬಿಟ್ಟು ಹೊರಟುಹೋದಳು.

ತತಸ್ತಸ್ಮಾದಪಾಕ್ರಮ್ಯ ಸಾಗಚ್ಛತ್ಪಾಕಶಾಸನಮ್ ।
ಅಥ ಸೋಽನ್ವತಪತ್ಪಶ್ಚಾಚ್ಛ್ರಿಯಂ ದೃಷ್ಟ್ವಾ ಪುರನ್ದರೇ ॥೨೫॥

ಬಲಿಯನ್ನು ತ್ಯಜಿಸಿ ಹೊರಟ ರಾಜ್ಯಲಕ್ಷ್ಮಿಯು ಇಂದ್ರನನ್ನು ಸೇರಿದಳು. ರಾಜ್ಯಲಕ್ಷ್ಮಿಯು ಇಂದ್ರನ ಬಳಿಯಲ್ಲಿದ್ದುದನ್ನು ನೋಡಿ ಬಲಿಗೆ ಬಹಳವಾಗಿ ಪಶ್ಚಾತ್ತಾಪವಾಯಿತು.

ಏತತ್ಫಲಮಸೂಯಾಯಾ ಅಭಿಮಾನಸ್ಯ ವಾ ವಿಭೋ ।
ತಸ್ಮಾದ್ಬುಧ್ಯಸ್ವ ಮಾನ್ಧಾತರ್ಮಾ ತ್ವಾಂ ಜಹ್ಯಾತ್ಪ್ರತಾಪಿನೀ ॥೨೬॥

ಅಸೂಯಾಭಿಮಾನಗಳಿಗೆ ಇವೇ ಫಲಗಳಾಗಿವೆ. (ಬ್ರಾಹ್ಮಣರ ಮೇಲೆ ಅಸೂಯೆಪಟ್ಟು ಬಲಿಯು ರಾಜ್ಯಲಕ್ಷ್ಮಿಯನ್ನು ಕಳೆದುಕೊಂಡನು. ಇಂದ್ರನಿಗೆ ಬ್ರಾಹ್ಮಣರ ಮೇಲೆ ಅಭಿಮಾನವಿದ್ದುದರಿಂದ ರಾಜ್ಯಲಕ್ಷ್ಮಿಯು ಅವನನ್ನು ಸೇರಿದಳು.) ಮಾಂಧಾತನೇ! ಎಚ್ಚರಗೊಳ್ಳು. ಬ್ರಾಹ್ಮಣರ ಮೇಲೆ ಅಸೂಯೆಪಡದಿರು. ಶತ್ರುತಾಪಿನಿಯಾದ ರಾಜ್ಯಲಕ್ಷ್ಮಿಯು ನಿನ್ನನ್ನು ಬಿಟ್ಟು ಹೋಗದಿರಲಿ.

ದರ್ಪೋ ನಾಮ ಶ್ರಿಯಃ ಪುತ್ರೋ ಜಜ್ಞೇಽಧರ್ಮಾದಿತಿ ಶ್ರುತಿಃ ।
ತೇನ ದೇವಾಸುರಾ ರಾಜನ್ನೀತಾಃ ಸುಬಹವೋ ವ್ಯಯಮ್ ॥೨೭॥

ರಾಜರ್ಷಯಶ್ಚ ಬಹವಸ್ತಥಾ ಬುಧ್ಯಸ್ವ ಪಾರ್ಥಿವ ।
ರಾಜಾ ಭವತಿ ತಂ ಜಿತ್ವಾ ದಾಸಸ್ತೇನ ಪರಾಜಿತಃ ॥೨೮॥

ದರ್ಪ ಎಂಬುವನು ಅಧರ್ಮನಿಂದ ಶ್ರೀಯಲ್ಲಿ ಹುಟ್ಟಿದವನೆಂದು ಶ್ರುತಿವಚನವಿದೆ. (ಸಂಪತ್ತು, ಅಧರ್ಮ–ಎರಡೂ ಸೇರಿಕೊಂಡಲ್ಲಿ ದರ್ಪದ ಆವಿರ್ಭಾವವಾಗುತ್ತದೆ.) ದರ್ಪನು ತನ್ನ ಪ್ರಭಾವದಿಂದ ಅನೇಕ ದೇವತೆಗಳನ್ನೂ, ಅಸುರರನ್ನೂ, ರಾಜರ್ಷಿಗಳನ್ನೂ ವಿನಾಶಗೊಳಿಸಿದನು. ಮಾಂಧಾತನೇ! ಈ ವಿಷಯವನ್ನು ನೀನು ಮನದಟ್ಟುಮಾಡಿಕೊಳ್ಳಬೇಕು. ದುಷ್ಟನಾದ ದರ್ಪನನ್ನು ಯಾವನು ಜಯಿಸುತ್ತಾನೆಯೋ–ಅವನು ರಾಜನಾಗುತ್ತಾನೆ. ಅವನಿಗೆ ಯಾವನು ಸೋತುಹೋಗುವನೋ–ಅವನು ದಾಸನಾಗುತ್ತಾನೆ.

ಸ ಯಥಾ ದರ್ಪಸಹಿತಮಧರ್ಮಂ ನಾನುಸೇವತೇ ।
ತಥಾ ವರ್ತಸ್ವ ಮಾನ್ಧಾತಶ್ಚಿರಂ ಚೇತ್ಸ್ಥಾತುಮಿಚ್ಛಸಿ ॥೨೯॥

ಮಾಂಧಾತನೇ! ನೀನು ಚಿರಕಾಲದವರೆಗೆ ರಾಜ್ಯಸಿಂಹಾಸನದ ಮೇಲೆ ವಿರಾಜಮಾನನಾಗುವ ಆಶಯವುಳ್ಳವನಾಗಿದ್ದರೆ–ದರ್ಪಸಹಿತವಾದ ಅಧರ್ಮವು ನಿನ್ನನ್ನು ಸೇವಿಸದಂತೆ ವರ್ತಿಸು.

ಮತ್ತಾತ್ಪ್ರಮತ್ತಾತ್ಪೌಗಣ್ಡಾದುನ್ಮತ್ತಾಚ್ಚ ವಿಶೇಷತಃ ।
ತದಭ್ಯಾಸಾದುಪಾವರ್ತ ಸಂಹಿತಾನಾಂ ಚ ಸೇವನಾತ್ ॥೩೦॥

ಮದಿಸಿದವನಿಂದಲೂ, ವಿವೇಚನಾಶಕ್ತಿಯಿಲ್ಲದವನಿಂದಲೂ, *ಐದರಿಂದ ಹತ್ತು ವರ್ಷದೊಳಗಿರುವ ಬಾಲಕನಿಂದಲೂ, ಹುಚ್ಚನಿಂದಲೂ– ದೂರವಿರು. ಈ ನಾಲ್ವರೂ ಒಟ್ಟಾಗಿ ಸೇರಿ ನಿನ್ನ ಸೇವೆಮಾಡಲು ಬಂದರೂ ಅವರನ್ನು ಹತ್ತಿರಕ್ಕೂ ಸೇರಿಸಬೇಡ.

ನಿಗೃಹೀತಾದಮಾತ್ಯಾಚ್ಚ ಸ್ತ್ರೀಭ್ಯಶ್ಚೈವ ವಿಶೇಷತಃ ।
ಪರ್ವತಾದ್ವಿಷಮಾದ್ದುರ್ಗಾದ್ಧಸ್ತಿನೋಽಶ್ವಾತ್ಸರೀಸೃಪಾತ್ ॥೩೧॥

ಏತೇಭ್ಯೋ ನಿತ್ಯಯತ್ತಃ ಸ್ಯಾನ್ನಕ್ತಂಚರ್ಯಾಂ ಚ ವರ್ಜಯೇತ್ ।
ಅತ್ಯಾಗಂ ಚಾಭಿಮಾನಂ ಚ ದಮ್ಭಂ ಕ್ರೋಧಂ ಚ ವರ್ಜಯೇತ್ ॥೩೨॥

ಹೀಗೆಯೇ, ಒಮ್ಮೆ ಬಂಧನಕ್ಕೊಳಗಾದ ಮಂತ್ರಿಯಿಂದ, ವಿಶೇಷವಾಗಿ ಪರಸ್ತ್ರೀಯರಿಂದ, ಎತ್ತರವಾದ ಪರ್ವತಪ್ರದೇಶದಿಂದ, ಬಹಳ ತಗ್ಗಾಗಿರುವ ಪ್ರದೇಶದಿಂದ, ಹೋಗಲು ಅಸಾಧ್ಯವಾದ ದುರ್ಗಮವಾದ ಪ್ರದೇಶದಿಂದ, ಪಳಗದಿರುವ ಆನೆಯಿಂದ, ಕುದುರೆಯಿಂದ, ಸರ್ಪದಿಂದ ದೂರವಿರು. ಇವುಗಳ ವಿಷಯದಲ್ಲಿ ನಿತ್ಯವೂ ಎಚ್ಚರಿಕೆಯಿಂದಿರಬೇಕು. ರಾತ್ರಿಯಲ್ಲಿ ಅನವಶ್ಯವಾಗಿ ತಿರುಗಾಡುವುದನ್ನು ನಿಲ್ಲಿಸಬೇಕು. ಕೃಪಣತೆ, ಅಹಂಕಾರ, ದಂಭ ಮತ್ತು ಕ್ರೋಧಗಳನ್ನು ವರ್ಜಿಸಬೇಕು.

ಅವಿಜ್ಞಾತಾಸು ಚ ಸ್ತ್ರೀಷು ಕ್ಲೀಬಾಸು ಸ್ವೈರಿಣೀಷು ಚ ।
ಪರಭಾರ್ಯಾಸು ಕನ್ಯಾಸು ನಾಚರೇನ್ಮೈಥುನಂ ನೃಪಃ ॥೩೩॥

ಅಪರಿಚಿತರಾದ ಸ್ತ್ರೀಯರೊಡನೆ, ಬಂಜೆಯರೊಡನೆ, ವೇಶ್ಯೆಯ

---

* ಪೌಗಂಡಃ = ಐದರಿಂದ ಹತ್ತುವರ್ಷ ವಯಸ್ಸಿನೊಳಗಿರುವ ಬಾಲಕ. **ಕೌಮಾರಂ ಪಞ್ಚಮಾಬ್ದಂ ತು ಪೌಗಣ್ಡಂ ದಶಮಾವಧಿ । ಕೈಶೋರಮಾಪಞ್ಚದಶಾದ್ಯೌವನಂ ಚ ತತಃ ಪರಮ್ ॥** ಐದು ವರ್ಷದ ವಯಸ್ಸಿನೊಳಗಿರುವವನು ಕುಮಾರ. ಐದರಿಂದ ಹತ್ತು ವರ್ಷ ವಯಸ್ಸಿನೊಳಗಿರುವವನು ಪೌಗಂಡ. ಹತ್ತರಿಂದ ಹದಿನೈದು ವರ್ಷದೊಳಗಿರುವವನು ಕಿಶೋರ. ಹದಿನೈದು ವರ್ಷಗಳನಂತರ ಯುವಕ.

ರೊಡನೆ, ಪರಸ್ತ್ರೀಯರೊಡನೆ, ಕನ್ಯೆಯರೊಡನೆ ರಾಜನು ಸಮಾಗಮಮಾಡ ಬಾರದು.

ಕುಲೇಷು ಪಾಪರಕ್ಷಾಂಸಿ ಜಾಯನ್ತೇ ವರ್ಣಸಂಕರಾತ್ ।
ಅಪುಮಾಂಸೋಽಙ್ಗಹೀನಾಶ್ಚ ಸ್ಥೂಲಜಿಹ್ವಾ ವಿಚೇತಸಃ ॥೩೪॥

ಏತೇ ಚಾನ್ಯೇ ಚ ಜಾಯನ್ತೇ ಯದಾ ರಾಜಾ ಪ್ರಮಾದ್ಯತಿ ।
ತಸ್ಮಾದ್ರಾಜ್ಞಾ ವಿಶೇಷೇಣ ವರ್ತಿತವ್ಯಂ ಪ್ರಜಾಹಿತೇ ॥೩೫॥

ರಾಜನು ಅಧರ್ಮಿಷ್ಠನಾದರೆ ವರ್ಣಸಂಕರವಾಗುತ್ತದೆ. ವರ್ಣಸಂಕರ ದಿಂದ ಸದ್ವಂಶಗಳಲ್ಲಿ ಪಾಪಿಷ್ಠರೂ, ರಾಕ್ಷಸರೂ ಹುಟ್ಟುತ್ತಾರೆ. ನಪುಂಸಕರು, ಅಂಗಹೀನರು, ತೊದಲರು, ಬುದ್ಧಿಹೀನರು–ಇವರೇ ಮುಂತಾದ ಇನ್ನೂ ಅನೇಕ ವಿಚಿತ್ರಪುರುಷರು ಹುಟ್ಟುತ್ತಾರೆ. ಆದುದರಿಂದ ಪ್ರಜೆಗಳ ಹಿತ ಸಾಧನೆಯಲ್ಲಿ ರಾಜನು ವಿಶೇಷವಾಗಿ ಧರ್ಮಮಾರ್ಗದಲ್ಲಿರಬೇಕು.

ಕ್ಷತ್ರಿಯಸ್ಯ ಪ್ರಮತ್ತಸ್ಯ ದೋಷಃ ಸಂಜಾಯತೇ ಮಹಾನ್ ।
ಅಧರ್ಮಾಃ ಸಮ್ಪ್ರವರ್ಧನ್ತೇ ಪ್ರಜಾಸಂಕರಕಾರಕಾಃ ॥೩೬॥

ಪ್ರಮತ್ತನಾದ ಕ್ಷತ್ರಿಯನ ಅಜಾಗರೂಕತೆಯಿಂದ ಮಹಾದೋಷವು ಸಂಭವಿಸುತ್ತದೆ. ಪ್ರಜೆಗಳ ವರ್ಣಸಂಕರಕ್ಕೆ ಕಾರಣವಾದ ಅಧರ್ಮಕಾರ್ಯ ಗಳು ಎಲ್ಲೆಡೆಗಳಲ್ಲಿಯೂ ಪ್ರವರ್ಧಿಸುತ್ತವೆ.

ಅಶೀತೇ ವಿದ್ಯತೇ ಶೀತಂ ಶೀತೇ ಶೀತಂ ನ ವಿದ್ಯತೇ ।
ಅವೃಷ್ಟಿರತಿವೃಷ್ಟಿಶ್ಚ ವ್ಯಾಧಿಶ್ಚಾಪ್ಯಾವಿಶೇತ್ಪ್ರಜಾಃ ॥೩೭॥

ರಾಜನು ಅಧರ್ಮಿಷ್ಠನಾದರೆ ಶೀತಕಾಲವಲ್ಲದಿರುವಾಗ ಶೀತವುಂಟಾ ಗುತ್ತದೆ. ಶೀತಕಾಲದಲ್ಲಿ ಶೀತವೇ ಇರುವುದಿಲ್ಲ. ಕೆಲವು ಕಡೆಗಳಲ್ಲಿ ಮಳೆಯೇ ಇರುವುದಿಲ್ಲ. ಮತ್ತೆ ಕೆಲವು ಕಡೆಗಳಲ್ಲಿ ಅತಿವೃಷ್ಟಿಯಾಗುತ್ತದೆ. ಅನೇಕವಿಧವಾದ ವ್ಯಾಧಿಗಳು ಮನುಷ್ಯರನ್ನು ಪೀಡಿಸುತ್ತವೆ.

ನಕ್ಷತ್ರಾಣ್ಯುಪತಿಷ್ಠನ್ತಿ ಗ್ರಹಾ ಘೋರಾಸ್ತಥಾಗತೇ ।
ಉತ್ಪಾತಾಶ್ಚಾತ್ರ ದೃಶ್ಯನ್ತೇ ಬಹವೋ ರಾಜನಾಶನಾಃ ॥೩೮॥

ರಾಜನು ಅಧರ್ಮಿಷ್ಠನಾದರೆ ಆಕಾಶದಲ್ಲಿ ಭಯಾನಕವಾದ ಗ್ರಹಗಳು

ನಕ್ಷತ್ರಗಳನ್ನು ಸಮೀಪಿಸುತ್ತವೆ. (ಪೀಡಿಸುತ್ತವೆ.) ರಾಜನ ವಿನಾಶಸೂಚಕ ವಾದ ಅನೇಕೋತ್ಪಾತಗಳು ಕಾಣಿಸಿಕೊಳ್ಳುತ್ತವೆ.

ಅರಕ್ಷಿತಾತ್ಮಾ ಯೋ ರಾಜಾ ಪ್ರಜಾಶ್ಚಾಪಿ ನ ರಕ್ಷತಿ ।
ಪ್ರಜಾಶ್ಚ ತಸ್ಯ ಕ್ಷೀಯನ್ತೇ ತತಃ ಸೋಽನುವಿನಶ್ಯತಿ ॥೩೯॥

ಆತ್ಮರಕ್ಷಣೆಯನ್ನೇ ಮಾಡಿಕೊಳ್ಳಲು ಅಸಮರ್ಥನಾದ ರಾಜನು ಪ್ರಜೆಗಳನ್ನೆಂದಿಗೂ ರಕ್ಷಿಸಲಾರನು. ಆದುದರಿಂದ ಮೊದಲು ಪ್ರಜೆಗಳು ವಿನಾಶ ಹೊಂದುತ್ತಾರೆ. ಅನಂತರ ರಾಜನೂ ವಿನಾಶಹೊಂದುತ್ತಾನೆ.

ದ್ವಾವಾದದಾತೇ ಹ್ಯೇಕಸ್ಯ ದ್ವಯೋಃ ಸುಬಹವೋಽಪರೇ ।
ಕುಮಾರ್ಯಃ ಸಮ್ಪ್ರಲುಪ್ಯನ್ತೇ ತದಾಹುರ್ನೃಪದೂಷಣಮ್ ॥೪೦॥

ಒಬ್ಬನ ಐಶ್ವರ್ಯವನ್ನು ಇಬ್ಬರು ಸೇರಿ ಅಪಹರಿಸಿಕೊಂಡು ಹೋಗುವುದು ; ಇಬ್ಬರಲ್ಲಿರುವ ಐಶ್ವರ್ಯವನ್ನು ಬಹುಜನರು ಸೇರಿ ಕೊಳ್ಳೆಹೊಡೆಯುವುದು ; ಕುಮಾರಿಯರಾದ ಕನ್ಯೆಯರ ಮೇಲೆ ಬಲಾತ್ಕಾರಪೂರ್ವಕವಾಗಿ ಅತ್ಯಾಚಾರವನ್ನೆಸಗುವುದು–ಇವೆಲ್ಲವೂ ರಾಜನ ಅಪರಾಧದಿಂದಲೇ ಆಗುವ ಕಾರ್ಯಗಳು. ಇವುಗಳನ್ನು ರಾಜನಿಗೆ ಕಳಂಕತರುವ ಕಾರ್ಯಗಳೆಂದು ಹೇಳುತ್ತಾರೆ. ರಾಜನು ಧರ್ಮಾತ್ಮನಾಗಿ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರೆ ಇಂತಹ ಅಕಾರ್ಯಗಳು ನಡೆಯುವುದಿಲ್ಲ.

ಮಮೇದಮಿತಿ ನೈಕಸ್ಯ ಮನುಷ್ಯೇಷ್ವವತಿಷ್ಠತಿ ।
ತ್ಯಕ್ತ್ವಾ ಧರ್ಮಂ ಯದಾ ರಾಜಾ ಪ್ರಮಾದಮನುತಿಷ್ಠತಿ ॥೪೧॥

ಯಾವಾಗ ರಾಜನು ಧರ್ಮವನ್ನು ತ್ಯಜಿಸಿ ಪ್ರಮತ್ತನಾಗುವನೋ–ಆಗ ಮನುಷ್ಯರಲ್ಲಿ "ಇದು ನನ್ನ ವಸ್ತು"–ಎಂಬುದು ಯಾವ ಒಬ್ಬನಲ್ಲಿಯೂ ಉಳಿಯುವುದಿಲ್ಲ. ಪುತ್ರ-ಮಿತ್ರ-ಕಳತ್ರ-ಧನ-ಕನಕ-ವಸ್ತು-ವಾಹನಗಳಲ್ಲಿ ಯಾವುದನ್ನೂ ಮನುಷ್ಯನು ತನ್ನದೆಂದು ಹೇಳಿಕೊಳ್ಳಲಾಗುವುದಿಲ್ಲ.

೯೦ನೆಯ ಅಧ್ಯಾಯವು ಮುಗಿಯಿತು.

೯೧ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಧರ್ಮಾಚರಣೆಯ ಮಹತ್ತ್ವ ಮತ್ತು ರಾಜಧರ್ಮದ ವರ್ಣನೆ

"ಧರ್ಮಜ! ಉತಥ್ಯನು ಪ್ರವಚನವನ್ನು ಮುಂದುವರಿಸಿ ಹೇಳುತ್ತಾನೆ:

ಕಾಲವರ್ಷೀ ಚ ಪರ್ಜನ್ಯೋ ಧರ್ಮಚಾರೀ ಚ ಪಾರ್ಥಿವಃ ।
ಸಮ್ಪದ್ಯದೇಷಾ ಭವತಿ ಸಾ ಬಿಭರ್ತಿ ಸುಖಂ ಪ್ರಜಾಃ ॥೧॥

"ಮಾಂಧಾತನೇ! ರಾಜನು ಧರ್ಮಾಚರಣೆಯನ್ನು ಮಾಡಬೇಕು. ಪರ್ಜನ್ಯನು ಯಥಾಸಮಯದಲ್ಲಿ ಮಳೆಗರೆಯಬೇಕು. ಹೀಗೆ ಯಾವ ಧರ್ಮಸಂಪತ್ತು ವೃದ್ಧಿಯಾಗುತ್ತದೆಯೋ–ಅದು ಪ್ರಜೆಗಳನ್ನು ಸುಖವಾಗಿ ಪೋಷಿಸುತ್ತದೆ.

ಯೋ ನ ಜಾನಾತಿ ಹರ್ತುಂ ವಾ ವಸ್ತ್ರಾಣಾಂ ರಜಕೋ ಮಲಮ್ ।
ರಕ್ತಾನಾಂ ವಾ ಶೋಧಯಿತುಂ ಯಥಾ ನಾಸ್ತಿ ತಥೈವ ಸಃ ॥೨॥

ಯಾವ ಅಗಸನು ಬಟ್ಟೆಗಳ ಕೊಳೆಯನ್ನು ಹೋಗಲಾಡಿಸುವ ಕಲೆಯನ್ನು ತಿಳಿದುಕೊಂಡಿಲ್ಲವೋ–ರಕ್ತವಾಗಿರುವ (ಕೆಂಪಾಗಿರುವ) ವಸ್ತ್ರವನ್ನು ಶುದ್ಧಿಮಾಡಿ ಫಳ-ಫಳನೆ ಹೊಳೆಯುವಂತೆ ಮಾಡುವುದನ್ನು ತಿಳಿದುಕೊಂಡಿಲ್ಲವೋ–ಅಂತಹ ಅಗಸನು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ.

ಏವಮೇತದ್ದ್ವಿಜೇನ್ದ್ರಾಣಾಂ ಕ್ಷತ್ರಿಯಾಣಾಂ ವಿಶಾಂ ತಥಾ ।
ಶೂದ್ರಶ್ಚತುರ್ಥೋ ವರ್ಣಾನಾಂ ನಾನಾಕರ್ಮಸ್ವವಸ್ಥಿತಃ ॥೩॥

ಇದೇ ರೀತಿಯಲ್ಲಿ ಶ್ರೇಷ್ಠನಾದ ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ–ತನಗೆ ಸಂಬಂಧಿಸಿದ ಕರ್ಮಗಳನ್ನು ಮಾಡಲು ತಿಳಿವಳಿಕೆಯಿಲ್ಲದಿದ್ದರೆ ಅವನು ಸಮಾಜದಲ್ಲಿ ಇದ್ದರೂ ಒಂದೇ; ಇಲ್ಲದಿದ್ದರೂ ಒಂದೇ. ತಮ್ಮ ತಮ್ಮ ವರ್ಣೋಚಿತವಾದ ಕರ್ಮಗಳನ್ನು ಮಾಡದಿದ್ದಲ್ಲಿ ಇವರೆಲ್ಲರೂ ನಿಷ್ಪ್ರಯೋಜಕರಾಗುತ್ತಾರೆ.

ಕರ್ಮ ಶೂದ್ರೇ ಕೃಷಿರ್ವೈಶ್ಯೇ ದಣ್ಡನೀತಿಶ್ಚ ರಾಜನಿ ।
ಬ್ರಹ್ಮಚರ್ಯಂ ತಪೋ ಮನ್ತ್ರಾಃ ಸತ್ಯಂ ಚಾಪಿ ದ್ವಿಜಾತಿಷು ॥೪॥

ಶೂದ್ರನಲ್ಲಿ-ಸೇವೆ, ವೈಶ್ಯನಲ್ಲಿ-ಕೃಷಿ, ರಾಜನಲ್ಲಿ-ದಂಡನೀತಿ, ಬ್ರಾಹ್ಮಣ

ನಲ್ಲಿ–ಬ್ರಹ್ಮಚರ್ಯ, ತಪಸ್ಸು, ಸತ್ಯನಿಷ್ಠೆ ಮತ್ತು ವೇದಾಧ್ಯಯನಗಳು ಪ್ರಧಾನಭೂತಗಳಾಗಿವೆ.

ತೇಷಾಂ ಯಃ ಕ್ಷತ್ರಿಯೋ ವೇದ ವಸ್ತ್ರಾಣಾಮಿವ ಶೋಧನಮ್ ।
ಶೀಲದೋಷಾನ್ವಿನಿರ್ಹರ್ತುಂ ಸ ಪಿತಾ ಸ ಪ್ರಜಾಪತಿಃ ॥೫॥

ಯಾವ ಕ್ಷತ್ರಿಯನು–ಅಗಸನು ವಸ್ತ್ರಗಳ ಕೊಳೆಯನ್ನು ತೆಗೆದು ಶುದ್ಧಿಗೊಳಿಸುವಂತೆ–ಇತರರ ಶೀಲದಲ್ಲಿರುವ ದೋಷಗಳನ್ನು ಹೋಗಲಾಡಿಸಿ ಶುದ್ಧಚಾರಿತ್ರ್ಯವನ್ನು ಮೈಗೂಡಿಸಿಕೊಳ್ಳುವಂತೆ ಮಾಡಲು ಸಮರ್ಥನಾಗಿರುವನೋ–ಅವನೇ ಪ್ರಜೆಗಳಿಗೆ ಪಿತೃಸಮಾನನಾಗುತ್ತಾನೆ. ಅಧಿಪತಿಯೂ ಅವನೇ ಆಗುತ್ತಾನೆ.

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚ ಭರತರ್ಷಭ ।
ರಾಜವೃತ್ತಾನಿ ಸರ್ವಾಣಿ ರಾಜೈವ ಯುಗಮುಚ್ಯತೇ ॥೬॥

ಭರತಶ್ರೇಷ್ಠನೇ! ಕೃತ-ತ್ರೇತಾ-ದ್ವಾಪರ-ಕಲಿಯುಗಗಳು ರಾಜನ ಆಚರಣೆಯನ್ನೇ ಅನುಸರಿಸಿ ಪರಿವರ್ತನೆ ಹೊಂದುತ್ತವೆ. ರಾಜನು ಧರ್ಮಿಷ್ಠನಾಗಿದ್ದರೆ ಕಾಲವು ಕೃತಯುಗವಾಗಿ ಪರಿವರ್ತನೆಹೊಂದುತ್ತದೆ. ಅಧರ್ಮಿಷ್ಠನಾದರೆ ಕಲಿಯುಗವಾಗಿ ಪರಿವರ್ತನೆ ಹೊಂದುತ್ತದೆ. ಈ ಕಾರಣದಿಂದಲೇ ರಾಜನೇ ಯುಗಸ್ವರೂಪನೆಂದೂ ಹೇಳುತ್ತಾರೆ.

ಚಾತುರ್ವರ್ಣ್ಯಂ ತಥಾ ವೇದಾಶ್ಚಾತುರಾಶ್ರಮ್ಯಮೇವ ಚ ।
ಸರ್ವಂ ಪ್ರಮುಹ್ಯತೇ ಹ್ಯೇತದ್ಯದಾ ರಾಜಾ ಪ್ರಮಾದ್ಯತಿ ॥೭॥

ರಾಜನು ಪ್ರಮತ್ತನಾದರೆ–ನಾಲ್ಕು ವರ್ಣಾಶ್ರಮಧರ್ಮಗಳು, ವೇದಗಳು, ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಧರ್ಮಗಳು ಎಲ್ಲವೂ ಮೋಹಪರವಶವಾಗುತ್ತವೆ.

ಅಗ್ನಿತ್ರೇತಾ ತ್ರಯೀ ವಿದ್ಯಾ ಯಜ್ಞಾಶ್ಚ ಸಹದಕ್ಷಿಣಾಃ ।
ಸರ್ವ ಏವ ಪ್ರಮಾದ್ಯನ್ತಿ ಯದಾ ರಾಜಾ ಪ್ರಮಾದ್ಯತಿ ॥೮॥

ರಾಜನು ಪ್ರಮತ್ತನಾದರೆ ತ್ರೇತಾಗ್ನಿಗಳೂ (ಗಾರ್ಹಪತ್ಯ-ಆಹವನೀಯ-ದಕ್ಷಿಣಾಗ್ನಿಗಳೂ), ಋಗ್ಯಜುಃಸಾಮವೇದಗಳೂ, ದಕ್ಷಿಣಾಸಹಿತವಾದ ಯಜ್ಞಗಳೂ ವಿಕೃತಗೊಳ್ಳುತ್ತವೆ.

ರಾಜೈವ ಕರ್ತಾ ಭೂತಾನಾಂ ರಾಜೈವ ಚ ವಿನಾಶಕಃ ।
ಧರ್ಮಾತ್ಮಾ ಯಃ ಸ ಕರ್ತಾ ಸ್ಯಾದಧರ್ಮಾತ್ಮಾ ವಿನಾಶಕಃ ॥೯॥

ರಾಜನೇ ಪ್ರಾಣಿಗಳಿಗೆ ಜೀವದಾತನು. ರಾಜನೇ ಪ್ರಾಣಿಗಳ ವಿನಾಶಕನೂ ಆಗುತ್ತಾನೆ. ಯಾವ ರಾಜನು ಧರ್ಮಾತ್ಮನೋ–ಅವನೇ ಪ್ರಾಣಿಗಳ ಜೀವದಾತನು. ಯಾವ ರಾಜನು ಅಧಾರ್ಮಿಕನೋ–ಅವನೇ ಪ್ರಾಣಿಗಳ ವಿನಾಶಕನು.

ರಾಜ್ಞೋ ಭಾರ್ಯಾಶ್ಚ ಪುತ್ರಾಶ್ಚ ಬಾನ್ಧವಾಃ ಸುಹೃದಸ್ತಥಾ ।
ಸಮೇತ್ಯ ಸರ್ವೇ ಶೋಚನ್ತಿ ಯದಾ ರಾಜಾ ಪ್ರಮಾದ್ಯತಿ ॥೧೦॥

ರಾಜನು ಪ್ರಮತ್ತನಾದರೆ (ಎಚ್ಚರದಪ್ಪಿನಡೆದರೆ) ರಾಜನ ಭಾರ್ಯೆಯರೂ, ಮಕ್ಕಳೂ, ಬಂಧುಗಳೂ, ಸುಹೃದರೂ ಒಟ್ಟುಗೂಡಿಕೊಂಡು ಶೋಕಪಡುತ್ತಾರೆ.

ಹಸ್ತಿನೋಽಶ್ವಾಶ್ಚ ಗಾವಶ್ಚಾಪ್ಯುಷ್ಟ್ರಾಶ್ವತರಗರ್ದಭಾಃ ।
ಅಧರ್ಮಭೂತೇ ನೃಪತೌ ಸರ್ವೇ ಸೀದನ್ತಿ ಜನ್ತವಃ ॥೧೧॥

ರಾಜನು ಅಧರ್ಮಿಷ್ಠನಾದರೆ-ಆನೆಗಳು, ಕುದುರೆಗಳು, ಹಸುಗಳು, ಒಂಟೆಗಳು, ಹೇಸರಕತ್ತೆಗಳು, ಕತ್ತೆಗಳು–ಇವೇ ಮುಂತಾದ ಎಲ್ಲ ಪ್ರಾಣಿಗಳೂ ವಿನಾಶಹೊಂದುತ್ತವೆ.

ದುರ್ಬಲಾರ್ಥಂ ಬಲಂ ಸೃಷ್ಟಂ ಧಾತ್ರಾ ಮಾನ್ಧಾತರುಚ್ಯತೇ ।
ಅಬಲಂ ತು ಮಹದ್ಭೂತಂ ಯಸ್ಮಿನ್ಸರ್ವಂ ಪ್ರತಿಷ್ಠಿತಮ್ ॥೧೨॥

ಮಾಂಧಾತನೇ! ಬ್ರಹ್ಮನು ದುರ್ಬಲರನ್ನು ರಕ್ಷಿಸುವ ಸಲುವಾಗಿಯೇ ಬಲಸಂಪನ್ನನಾದ ರಾಜನನ್ನು ಸೃಷ್ಟಿಸಿದನೆಂದು ಹೇಳುತ್ತಾರೆ. ನಿರ್ಬಲವಾದ ಪ್ರಾಣಿಗಳ ಮಹಾಸಮೂಹವು ವಾಸ್ತವವಾಗಿ ಮಹತ್ತಾದುದೇ. ಈ ಪ್ರಾಣಿಸಮೂಹದಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿದೆ.

ಯಚ್ಚ ಭೂತಂ ಸಮ್ಭಜತೇ ಯೇ ಚ ಭೂತಾಸ್ತದನ್ವಯಾಃ ।
ಅಧರ್ಮಸ್ಥೇ ಹಿ ನೃಪತೌ ಸರ್ವೇ ಶೋಚನ್ತಿ ಪಾರ್ಥಿವ ॥೧೩॥

ಯಾವ ಪ್ರಾಣಿಗಳು ರಾಜನನ್ನು ಸೇವಿಸುತ್ತವೆಯೋ–ಯಾವ ಪ್ರಾಣಿಗಳು ಪರಂಪರೆಯಿಂದ ರಾಜನನ್ನೇ ಆಶ್ರಯಿಸಿ ಇರುವುವೋ–ಅಂತಹ ಪ್ರಾಣಿಗಳು (ರಾಜಾಶ್ರಿತರೂ-ರಾಜಸಂಬಂಧಿಗಳು)–ರಾಜನು ಅಧರ್ಮಸ್ಥ ನಾದನೆಂದರೆ ದುಃಖಪಡುತ್ತವೆ.

ದುರ್ಬಲಸ್ಯ ಚ ಯಚ್ಚಕ್ಷುರ್ಮುನೇರಾಶೀವಿಷಸ್ಯ ಚ ।
ಅವಿಷಹ್ಯತಮಂ ಮನ್ಯೇ ಮಾ ಸ್ಮ ದುರ್ಬಲಮಾಸದಃ ॥೧೪॥

ದುರ್ಬಲನಾದ ಮನುಷ್ಯನ, ಮುನಿಯ ಮತ್ತು ಸರ್ಪದ ದೃಷ್ಟಿಯನ್ನು ತಡೆದುಕೊಳ್ಳಲು ಅಸಾಧ್ಯವೆಂದು ನಾನು ಭಾವಿಸುತ್ತೇನೆ. (ದುರ್ಬಲರ, ಮುನಿಗಳ ಮತ್ತು ಸರ್ಪಗಳ ದೃಷ್ಟಿಗಳು ಕ್ರೂರವಾಗಿರುವುದೇ ಇದಕ್ಕೆ ಕಾರಣ.) ಆದುದರಿಂದ ದುರ್ಬಲರನ್ನು ಯಾವಾಗಲೂ ತೊಂದರೆಪಡಿಸಬಾರದು.

ದುರ್ಬಲಾಂಸ್ತಾತ ಬುಧ್ಯೇಥಾ ನಿತ್ಯಮೇವಾವಿಮಾನಿತಾನ್ ।
ಮಾ ತ್ವಾಂ ದುರ್ಬಲಚಕ್ಷೂಂಷಿ ಪ್ರದಹೇಯುಃ ಸಬಾನ್ಧವಮ್ ॥೧೫॥

ಮಾಂಧಾತನೇ! ದುರ್ಬಲರು ಅಪಮಾನಿತರಾಗದಂತೆ ಸರ್ವದಾ ನೋಡಿಕೊಂಡಿರಬೇಕು. ಅವಮಾನಿತರಾದ ದುರ್ಬಲರ ಕ್ರೂರದೃಷ್ಟಿಗಳು ಬಂಧುಗಳ ಸಮೇತವಾದ ನಿನ್ನನ್ನು ಸುಟ್ಟುಬಿಡದಿರಲಿ.

ನ ಹಿ ದುರ್ಬಲದಗ್ಧಸ್ಯ ಕುಲೇ ಕಿಂಚಿತ್ಪ್ರರೋಹತಿ ।
ಆಮೂಲಂ ನಿರ್ದಹನ್ತ್ಯೇವ ಮಾ ಸ್ಮ ದುರ್ಬಲಮಾಸದಃ ॥೧೬॥

ದುರ್ಬಲನಾದವನು ಯಾವನನ್ನು ತನ್ನ ಕ್ರೋಧಾಗ್ನಿಯಿಂದ ದಹಿಸಿ ಬಿಡುತ್ತಾನೆಯೋ ಅಂತಹವನ ಕುಲದಲ್ಲಿ ಮುಂದೆ ವಂಶಾಭಿವೃದ್ಧಿಗೆ ಸಂತತಿ ರೂಪವಾದ ಯಾವ ಅಂಕುರವೂ ಹುಟ್ಟುವುದಿಲ್ಲ. ಅಂತಹವರ ಕುಲವೇ ಸಂಪೂರ್ಣವಾಗಿ ವಿನಾಶಹೊಂದುತ್ತದೆ. ದುರ್ಬಲನ ಕ್ರೂರದೃಷ್ಟಿಯು ಒಬ್ಬನನ್ನೇ ಸುಡುವುದಿಲ್ಲ. ಆಮೂಲವಾಗಿ ಕುಲವನ್ನೇ ಸುಟ್ಟುಹಾಕುತ್ತದೆ. ಆದುದರಿಂದ ದುರ್ಬಲನನ್ನೆಂದಿಗೂ ಸಂಕಟಪಡಿಸಬೇಡ.

ಅಬಲಂ ವೈ ಬಲಾಚ್ಛ್ರೇಯೋ ಯಚ್ಚಾತಿಬಲವದ್ಬಲಮ್ ।
ಬಲಸ್ಯಾಬಲದಗ್ಧಸ್ಯ ನ ಕಿಂಚಿದವಶಿಷ್ಯತೇ ॥೧೭॥

ನಿರ್ಬಲನು ಬಲಿಷ್ಠನಿಗಿಂತಲೂ ಶ್ರೇಷ್ಠನೇ ಸರಿ. ಯಾವನು ಅತ್ಯಂತ ಬಲಿಷ್ಠನಾಗಿರುವನೋ ಅವನ ಬಲಕ್ಕಿಂತಲೂ ದುರ್ಬಲನ ಬಲವೇ ಅಧಿಕ ವಾದುದು. ಏಕೆಂದರೆ : ಅಬಲನ ಕ್ರೂರವಾದ ದೃಷ್ಟಿಪಾತಮಾತ್ರದಿಂದಲೇ ದಗ್ಧವಾದ ಬಲಿಷ್ಠನ ವಂಶವೇ ಉಳಿಯುವುದಿಲ್ಲ. ನಿಃಶೇಷವಾಗಿ ಭಸ್ಮವಾಗಿ ಹೋಗುತ್ತದೆ.

ವಿಮಾನಿತೋ ಹತಃ ಕ್ರುಷ್ಟಸ್ತ್ರಾತಾರಂ ಚೇನ್ನ ವಿನ್ದತಿ ।
ಅಮಾನುಷಕೃತಸ್ತತ್ರ ದಣ್ಡೋ ಹನ್ತಿ ನರಾಧಿಪಮ್ ॥೧೮॥

ಅಪಮಾನಿತನಾದ, ಹಿಂಸಿತನಾದ, ರಕ್ಷಣೆಗಾಗಿ ಕೂಗಿಕೊಳ್ಳುತ್ತಿರುವ ದುರ್ಬಲನು ರಾಜನನ್ನು ರಕ್ಷಕನನ್ನಾಗಿ ಹೊಂದದೇ ಇದ್ದರೆ ದೈವಿಕವಾದ (ಅದೃಷ್ಟ) ದಂಡವೇ ರಾಜನನ್ನು ಸಂಹರಿಸುತ್ತದೆ.

ಮಾ ಸ್ಮ ತಾತ ರಣೇ ಸ್ಥಿತ್ವಾ ಭುಞ್ಜೀಥಾ ದುರ್ಬಲಂ ಜನಮ್ ।
ಮಾ ತ್ವಾಂ ದುರ್ಬಲಚಕ್ಷೂಂಷಿ ದಹನ್ತ್ವಗ್ನಿರಿವಾಶ್ರಯಮ್ ॥೧೯॥

ಯುದ್ಧದಲ್ಲಿಯೇ ಆಸಕ್ತನಾಗಿ ತೆರಿಗೆಗಳ ಮೂಲಕವಾಗಿ ದುರ್ಬಲರನ್ನು ಕಬಳಿಸಲು ಯತ್ನಿಸಬೇಡ. ಅಗ್ನಿಯು ಆಶ್ರಯಭೂತವಾದ ಮರವನ್ನೇ ಸುಟ್ಟುಭಸ್ಮಮಾಡುವಂತೆ–ದುರ್ಬಲರ ಕ್ರೂರದೃಷ್ಟಿಗಳು ನಿನ್ನನ್ನು ಸುಟ್ಟು ಭಸ್ಮಮಾಡದಿರಲಿ.

ಯಾನಿ ಮಿಥ್ಯಾಭಿಶಸ್ತಾನಾಂ ಪತನ್ತ್ಯಶ್ರೂಣಿ ರೋದತಾಮ್ ।
ತಾನಿ ಪುತ್ರಾನ್ಪಶೂನ್ಘ್ನನ್ತಿ ತೇಷಾಂ ಮಿಥ್ಯಾಭಿಶಂಸನಾತ್ ॥೨೦॥

ರಾಜನಾದವನು ಸರಿಯಾಗಿ ವಿಚಾರಣೆಯನ್ನು ಮಾಡದೇ ಯಾರ ಮೇಲೂ ಮಿಥ್ಯಾಪವಾದವನ್ನು ಹೊರೆಸಬಾರದು. ಮಿಥ್ಯಾಪವಾದವನ್ನು ಅನುಭವಿಸುವವರು ಸಂಕಟದಿಂದ ಮಾಡುವ ರೋದನದಿಂದ ಅಶ್ರುಬಿಂದು ಗಳು ಕೆಳಗುರುಳುತ್ತವೆ. ನಿಷ್ಕಳಂಕರ ಮೇಲೆ ಮಿಥ್ಯಾಪವಾದವನ್ನು ಹೊರೆ ಸುವುದರಿಂದ ಅವರ ಆ ಅಶ್ರುಬಿಂದುಗಳು ಅಪವಾದವನ್ನು ಹೊರೆಸಿದವರ (ರಾಜನ) ಮಕ್ಕಳನ್ನೂ ಪಶುಗಳನ್ನೂ ನಾಶಮಾಡುತ್ತವೆ.

ಯದಿ ನಾತ್ಮನಿ ಪುತ್ರೇಷು ನ ಚೇತ್ಪೌತ್ರೇಷು ನಪ್ತೃಷು ।
ನ ಹಿ ಪಾಪಂ ಕೃತಂ ಕರ್ಮ ಸದ್ಯಃ ಫಲತಿ ಗೌರಿವ ॥೨೧॥

ಪಾಪಮಾಡಿದವನು ಆ ಪಾಪದ ಫಲವನ್ನು ಒಡನೆಯೇ ಅನುಭವಿಸದೇ ಇರಬಹುದು. ಭೂಮಿಯಲ್ಲಿ ಬಿತ್ತಿದ ಬೀಜವು ಒಡನೆಯೇ ಫಲವನ್ನು ನೀಡದೇ ಹಲವು ದಿವಸಗಳು ಕಳೆದನಂತರ ಮೊಳಕೆಯಾಗಿ, ಗಿಡವಾಗಿ, ಮರವಾಗಿ ಯಥಾಕಾಲದಲ್ಲಿ ಫಲವನ್ನು ನೀಡುವಂತೆ–ಮನುಷ್ಯನು ಮಾಡಿದ ಪಾಪದ ಫಲವು ಅವನ ಮಗನಲ್ಲಿಯೋ, ಮೊಮ್ಮಗನಲ್ಲಿಯೋ, ಮಗಳ ಮಗನಲ್ಲಿಯೋ ಫಲವನ್ನು ನೀಡುತ್ತದೆ. (ಕಾಲಿಲ್ಲದ ಮಕ್ಕಳೋ, ಕಣ್ಣಿಲ್ಲದ ಮಕ್ಕಳೋ ಹುಟ್ಟಿದರೆ 'ಪಾಪಶೇಷ' ಎನ್ನುತ್ತೇವೆ. ಒಬ್ಬನು ಮಾಡಿದ ಪಾಪವು ಅವನ ಮಕ್ಕಳಲ್ಲಿ ಫಲಿಸುವುದೇ ಇದಕ್ಕೆ ಕಾರಣವಾಗುತ್ತದೆ.)

ಯತ್ರಾಬಲೋ ವಧ್ಯಮಾನಸ್ತ್ರಾತಾರಂ ನಾಧಿಗಚ್ಛತಿ ।
ಮಹಾನ್ದೈವಕೃತಸ್ತತ್ರ ದಣ್ಡಃ ಪತತಿ ದಾರುಣಃ ॥೨೨॥

ಅಬಲನು ಬಲಿಷ್ಠನಿಂದ ಹಿಂಸಿಸಲ್ಪಡುವಾಗ ಅವನು ರಕ್ಷಣೆಯನ್ನು ಯಾರಿಂದಲೂ ಪಡೆಯದಿದ್ದರೆ–ದುರ್ಬಲನಿಗೆ ರಕ್ಷಣೆಯನ್ನು ಕೊಡಬೇಕಾದವನ ಮೇಲೆ ದೈವಕೃತವಾದ ಕ್ರೂರದಂಡವೇ ಬೀಳುತ್ತದೆ. (ರಕ್ಷಣೆಯನ್ನು ಕೊಡದ ರಾಜನ ಮೇಲೆ ದೈವವಿಹಿತವಾದ ದಂಡವು ಬೀಳುತ್ತದೆ.)

ಯುಕ್ತಾ ಯದಾ ಜಾನಪದಾ ಭಿಕ್ಷನ್ತೇ ಬ್ರಾಹ್ಮಣಾ ಇವ ।
ಅಭೀಕ್ಷ್ಣಂ ಭಿಕ್ಷುರೂಪೇಣ ರಾಜಾನಂ ಘ್ನನ್ತಿ ತಾದೃಶಾಃ ॥೨೩॥

ಗ್ರಾಮಗಳಲ್ಲಿರುವ ಜನರೆಲ್ಲರೂ ಬ್ರಾಹ್ಮಣರಂತೆ ಭಿಕ್ಷುರೂಪದಿಂದ ಭಿಕ್ಷೆಬೇಡಲು ಪ್ರಾರಂಭಿಸಿದರೆ–ಆಗ ಅಂತಹ ಸ್ಥಿತಿಗೆ ಕಾರಣನಾದ ರಾಜನು ವಿನಾಶಹೊಂದುತ್ತಾನೆ. (ಆಡಳಿತವು ಸರಿಯಿಲ್ಲದೇ ವರ್ಣಧರ್ಮಗಳೂ ಏರುಪೇರಾಗಿ, ಬೇರೆ ಜೀವಿಕೆಯ ಮಾರ್ಗವನ್ನು ತಿಳಿಯದೇ ಜನರು ಭಿಕ್ಷೆಬೇಡಿ ಹೊಟ್ಟೆಹೊರೆಯುವ ಸ್ಥಿತಿಗಿಳಿದಾಗ ರಾಜನಿಗೆ ಅಪಾಯವೇ ಉಂಟಾಗುತ್ತದೆ. ಭಿಕ್ಷೆಮಾಡಲು ಅಧಿಕಾರವುಳ್ಳವರು ಭಿಕ್ಷೆಮಾಡಬೇಕೇ ಹೊರತು ಬೇರೆಯವರೂ ಅದನ್ನೇ ಮಾಡಲು ಹೊರಟರೆ ಅನಾಹುತಕ್ಕೆ ಕಾರಣವಾಗುತ್ತದೆ.)

ರಾಜ್ಞೋ ಯದಾ ಜನಪದೇ ಬಹವೋ ರಾಜಪೂರುಷಾಃ ।
ಅನಯೇನೋಪವರ್ತನ್ತೇ ತದ್ರಾಜ್ಞಃ ಕಿಲ್ಬಿಷಂ ಮಹತ್ ॥೨೪॥

ರಾಜನ ಬಹು ಮಂದಿ ಅಧಿಕಾರಿಗಳೇ ರಾಜ್ಯದಲ್ಲಿ ಅನ್ಯಾಯಪೂರ್ಣವಾಗಿ ವ್ಯವಹರಿಸಲು ತೊಡಗಿದಾಗ ಅದನ್ನು 'ಮಹಾರಾಜಕಿಲ್ಬಿಷ'ವೆಂದು ಹೇಳುತ್ತಾರೆ. ಅಧಿಕಾರಿಗಳ ಅನ್ಯಾಯಪೂರ್ಣವಾದ ವ್ಯವಹಾರವು ರಾಜನ ಪಾಪವಾಗಿ ಪರಿಣಮಿಸುತ್ತದೆ. (ಅಧಿಕಾರಿಗಳು ಮಾಡಿದ ಪಾಪಕ್ಕೂ ರಾಜನೇ ಹೊಣೆಯಾಗುತ್ತಾನೆ.)

ಯದಾ ಯುಕ್ತ್ಯಾ ನಯೇದರ್ಥಾನ್ಕಾಮಾದರ್ಥವಶೇನ ವಾ ।
ಕೃಪಣಂ ಯಾಚಮಾನಾನಾಂ ತದ್ರಾಜ್ಞೋ ವೈಶಸಂ ಮಹತ್ ॥೨೫॥

'ಆಪದ್ಧನವನ್ನು ಒಯ್ಯಬೇಡಿರಿ'–ಎಂದು ದೈನ್ಯದಿಂದ ಅಂಗಲಾಚಿ ಬೇಡಿಕೊಳ್ಳುತ್ತಿರುವ ಜನರ ದೈನ್ಯಪೂರ್ಣವಾದ ಪ್ರಾರ್ಥನೆಯನ್ನು ತಿರಸ್ಕರಿಸಿ ರಾಜನೋ ಅಥವಾ ರಾಜನ ಅಧಿಕಾರಿಗಳೋ ಯುಕ್ತಿಯಿಂದಲೋ, ಸ್ವೇಚ್ಛೆಯಿಂದಲೋ, ಲೋಭದಿಂದಲೋ ಧನವನ್ನು ಒಯ್ದಿದ್ದೇ ಆದರೆ ಅದು ರಾಜನ ಮಹಾವಿನಾಶವನ್ನು ಸೂಚಿಸುತ್ತದೆ.

ಮಹಾನ್ವೃಕ್ಷೋ ಜಾಯತೇ ವರ್ಧತೇ ಚ
ತಂ ಚೈವ ಭೂತಾನಿ ಸಮಾಶ್ರಯನ್ತಿ ।
ಯದಾ ವೃಕ್ಷಶ್ಛಿದ್ಯತೇ ದಹ್ಯತೇ ಚ
ತದಾಶ್ರಯಾ ಅನಿಕೇತಾ ಭವನ್ತಿ ॥೨೬॥

ದೊಡ್ಡದಾದೊಂದು ವೃಕ್ಷವು ಹುಟ್ಟುತ್ತದೆ. ಬೆಳೆಯುತ್ತದೆ. ಮಹಾವೃಕ್ಷವಾಗುತ್ತದೆ. ಆ ಮಹಾವೃಕ್ಷವನ್ನು ಪಶು-ಪಕ್ಷಿಗಳು ಆಶ್ರಯಿಸುತ್ತವೆ. ಯಾವಾಗ ಆ ವೃಕ್ಷವು ಕತ್ತರಿಸಲ್ಪಟ್ಟು ದಹಿಸಲ್ಪಡುತ್ತದೆಯೋ–ಆಗ ಆ ವೃಕ್ಷದ ಆಶ್ರಯದಲ್ಲಿದ್ದ ಜೀವಿಗಳೆಲ್ಲವೂ ಆಶ್ರಯರಹಿತವಾಗುತ್ತವೆ.

ಯದಾ ರಾಷ್ಟ್ರೇ ಧರ್ಮಮಗ್ರ್ಯಂ ಚರನ್ತಿ
ಸಂಸ್ಕಾರಂ ವಾ ರಾಜಗುಣಂ ಬ್ರುವಾಣಾಃ ।
ತೈರೇವಾಧರ್ಮಶ್ಚರಿತೋ ಧರ್ಮಮೋಹಾ-
ತ್ತೂರ್ಣಂ ಜಹ್ಯಾತ್ಸುಕೃತಂ ದುಷ್ಕೃತಂ ಚ ॥೨೭॥

ಯಾವಾಗ ರಾಷ್ಟ್ರದಲ್ಲಿ ಧರ್ಮವೇ ಪ್ರಧಾನಭೂತವಾಗಿರುತ್ತದೆಯೋ ಆಗ ಜನರೂ ವೈದಿಕಸಂಸ್ಕಾರವನ್ನು ಹೊಂದಿ ರಾಜನ ಗುಣಗಳನ್ನು ಗಾನ

ಮಾಡುತ್ತಿರುತ್ತಾರೆ. ಆ ಸಮಯದಲ್ಲಿ ರಾಜನ ದುಷ್ಕೃತಗಳೂ ದೂರವಾಗುತ್ತವೆ. ಯಾವಾಗ ರಾಜನು ಅಧರ್ಮಾಚರಣೆಯನ್ನು ಮಾಡುವನೋ ಆಗ ರಾಜನ ಅಧರ್ಮಾಚರಣೆಯಿಂದ ಮೋಹಿತರಾದ ಪ್ರಜೆಗಳೂ ಅಧರ್ಮಾಚರಣೆಯನ್ನೇ ಮಾಡುತ್ತಾರೆ. ಇದರ ಪರಿಣಾಮವಾಗಿ ರಾಜನ ಸುಕೃತವು ಬಹಳ ಬೇಗ ವಿನಾಶಹೊಂದುತ್ತದೆ.

ಯತ್ರ ಪಾಪಾ ಜ್ಞಾಯಮಾನಾಶ್ಚರನ್ತಿ
ಸತಾಂ ಕಲಿರ್ವಿನ್ದತೇ ತತ್ರ ರಾಜ್ಞಃ ।
ಯದಾ ರಾಜಾ ಶಾಸ್ತಿ ನರಾನಶಿಷ್ಟಾಂ
ಸ್ತದಾ ರಾಜ್ಯಂ ವರ್ಧತೇ ಭೂಮಿಪಸ್ಯ ॥೨೮॥

ಯಾವ ರಾಜ್ಯದಲ್ಲಿ ಪಾಪಿಷ್ಠರು ಪಾಪಭೀತಿಯೇ ಇಲ್ಲದೇ ಎಲ್ಲರಿಗೂ ತಿಳಿಯುವಂತೆ ಬಹಿರಂಗವಾಗಿಯೇ ದೇಶದಲ್ಲಿ ಪರ್ಯಟನಮಾಡುತ್ತಿರುವರೋ–ಸತ್ಪುರುಷರಿಗೆ ಹಿಂಸೆ ಮಾಡುತ್ತಿರುವರೋ–ಆ ರಾಜ್ಯದ ರಾಜನಲ್ಲಿ ಕಲಿಯು ಆವಿರ್ಭವಿಸುವನೆಂದು ಸತ್ಪುರುಷರು ಭಾವಿಸುತ್ತಾರೆ. ಯಾವಾಗ ರಾಜನು ದುರ್ಜನರನ್ನು ಶಿಕ್ಷಿಸಿ ಸತ್ಪುರುಷರನ್ನು ರಕ್ಷಿಸುವನೋ–ಆಗ ಆ ರಾಜನ ರಾಜ್ಯವು ವಿಶೇಷವಾದ ಅಭಿವೃದ್ಧಿಯನ್ನು ಹೊಂದುತ್ತದೆ.

ಯಶ್ಚಾಮಾತ್ಯಾನ್ಮಾನಯಿತ್ವಾ ಯಥಾರ್ಥಂ
ಮನ್ತ್ರೇ ಚ ಯುದ್ಧೇ ಚ ನೃಪೋ ನಿಯುಞ್ಜ್ಯಾತ್ ।
ವಿವರ್ಧತೇ ತಸ್ಯ ರಾಷ್ಟ್ರಂ ನೃಪಸ್ಯ
ಭುಙ್ಕ್ತೇ ಮಹೀಂ ಚಾಪ್ಯಖಿಲಾಂ ಚಿರಾಯ ॥೨೯॥

ಯಾವ ರಾಜನು ಅಮಾತ್ಯರನ್ನೂ ಇತರ ಅಧಿಕಾರಿಗಳನ್ನೂ ಯಥಾರ್ಥರೂಪದಲ್ಲಿ (ಅವರವರ ಘನತೆಗೆ ತಕ್ಕಂತೆ) ಗೌರವಿಸಿ ಮಂತ್ರಾಲೋಚನೆಯಲ್ಲಿಯೂ ಯುದ್ಧದಲ್ಲಿಯೂ ನಿಯೋಜಿಸುತ್ತಾನೆಯೋ–ಅಂತಹ ರಾಜನ ರಾಷ್ಟ್ರವು ದಿನ-ದಿನಕ್ಕೂ ಅಭಿವೃದ್ಧಿಯನ್ನು ಹೊಂದುತ್ತದೆ ಮತ್ತು ಆ ರಾಜನು ಅಖಂಡಭೂಮಂಡಲವನ್ನೂ ಚಿರಕಾಲದವರೆಗೂ ಪಾಲಿಸುತ್ತಾನೆ.

ಯಚ್ಚಾಪಿ ಸುಕೃತಂ ಕರ್ಮ ವಾಚಂ ಚೈವ ಸುಭಾಷಿತಾಮ್ ।
ಸಮೀಕ್ಷ್ಯ ಪೂಜಯನ್ರಾಜಾ ಧರ್ಮಂ ಪ್ರಾಪ್ನೋತ್ಯನುತ್ತಮಮ್ ॥೩೦॥

ಯಾವ ರಾಜನು ತನ್ನ ಕರ್ಮಚಾರಿಗಳ ಅಥವಾ ಪ್ರಜೆಗಳ ಸತ್ಕರ್ಮಗಳನ್ನು ನೋಡಿ, ಅವರ ಸುಮಧುರವಾದ ವಾಣಿಯನ್ನು ಕೇಳಿ, ಅವರೆಲ್ಲರನ್ನೂ ಯಥಾಯೋಗ್ಯವಾಗಿ ಸಮ್ಮಾನಿಸುತ್ತಾನೆಯೋ–ಅಂತಹ ರಾಜನು ಶ್ರೇಷ್ಠವಾದ ಧರ್ಮವನ್ನು (ಪುಣ್ಯವನ್ನು) ಹೊಂದುತ್ತಾನೆ.

ಸಂವಿಭಜ್ಯ ಯದಾ ಭುಙ್ಕ್ತೇ ನಾಮಾತ್ಯಾನವಮನ್ಯತೇ ।
ನಿಹನ್ತಿ ಬಲಿನಂ ದೃಪ್ತಂ ಸ ರಾಜ್ಞೋ ಧರ್ಮ ಉಚ್ಯತೇ ॥೩೧॥

ಯಾವಾಗ ರಾಜನು ತನ್ನನ್ನು ಆಶ್ರಯಿಸಿರುವವರೆಲ್ಲರಿಗೂ ತನ್ನಲ್ಲಿರುವ ಸಂಪತ್ತನ್ನು ಯಥಾಯೋಗ್ಯವಾಗಿ ವಿಭಾಗಮಾಡಿಕೊಟ್ಟು ತಾನೂ ಉಪಭುಂಜಿಸುವನೋ, ಅಮಾತ್ಯರನ್ನು ಅನಾದರಣೆಮಾಡುವುದಿಲ್ಲವೋ, ಬಲಿಷ್ಠನೂ ಮದಾಂಧನೂ ಆದ ಶತ್ರುವನ್ನು ಸಂಹರಿಸುವನೋ–ಆಗ ರಾಜನ ಅಂತಹ ಧರ್ಮವನ್ನು ರಾಜಧರ್ಮವೆಂದು ಹೇಳುತ್ತಾರೆ. (ಸಂಪತ್ತನ್ನು ಎಲ್ಲರಿಗೂ ಹಂಚಿಕೊಟ್ಟು ತಾನೂ ಉಪಭೋಗಿಸುವುದು ; ಅಧಿಕಾರಿಗಳನ್ನು ಅನಾದರಣೆಮಾಡದಿರುವುದು ಮತ್ತು ಶತ್ರುಗಳ ನಿಗ್ರಹ– ಇವುಗಳು ರಾಜಧರ್ಮಗಳೆನಿಸಿಕೊಳ್ಳುತ್ತವೆ.)

ತ್ರಾಯತೇ ಹಿ ಯದಾ ಸರ್ವಂ ವಾಚಾ ಕಾಯೇನ ಕರ್ಮಣಾ ।
ಪುತ್ರಸ್ಯಾಪಿ ನ ಮೃಷ್ಯೇಚ್ಚ ಸ ರಾಜ್ಞೋ ಧರ್ಮ ಉಚ್ಯತೇ ॥೩೨॥

ಮಾತು, ಶರೀರ ಮತ್ತು ಕಾರ್ಯಗಳಿಂದ ಸರ್ವಪ್ರಾಣಿಗಳನ್ನೂ ರಕ್ಷಿಸುವುದು, ಮಗನ ಅಪರಾಧವನ್ನೇ ಆದರೂ ಕ್ಷಮಿಸದೇ ಇರುವುದು (ಅಪರಾಧಮಾಡಿದವನು ಮಗನೇ ಆದರೂ ಶಿಕ್ಷಿಸುವುದು) ರಾಜಧರ್ಮಗಳೆಂದು ಹೇಳಲ್ಪಟ್ಟಿವೆ.

ಸಂವಿಭಜ್ಯ ಯದಾ ಭುಙ್ಕ್ತೇ ನೃಪತಿರ್ದುರ್ಬಲಾನ್ನರಾನ್ ।
ತದಾ ಭವನ್ತಿ ಬಲಿನಃ ಸ ರಾಜ್ಞೋ ಧರ್ಮ ಉಚ್ಯತೇ ॥೩೩॥

ರಾಜನು ದುರ್ಬಲರಾದ ಮನುಷ್ಯರಿಗೆ ಅವಶ್ಯವಾದ ವಸ್ತುಗಳನ್ನು

ಒದಗಿಸಿಕೊಟ್ಟು ಅನಂತರ ತಾನೂ ಉಪಭುಂಜಿಸುತ್ತಿದ್ದರೆ ದುರ್ಬಲರಾದವರೂ ಬಲಿಷ್ಠರಾಗುತ್ತಾರೆ. ಹೀಗೆ ಮಾಡುವುದನ್ನು ರಾಜಧರ್ಮವೆಂದು ಹೇಳುತ್ತಾರೆ.

ಯದಾ ರಕ್ಷತಿ ರಾಷ್ಟ್ರಾಣಿ ಯದಾ ದಸ್ಯೂನಪೋಹತಿ ।
ಯದಾ ಜಯತಿ ಸಂಗ್ರಾಮೇ ಸ ರಾಜ್ಞೋ ಧರ್ಮ ಉಚ್ಯತೇ ॥೩೪॥

ಯಾವಾಗ ರಾಜನು ಕಳ್ಳ-ಕಾಕರನ್ನು ಧ್ವಂಸಮಾಡುವನೋ, ರಾಷ್ಟ್ರಗಳನ್ನು ರಕ್ಷಿಸುವನೋ ಮತ್ತು ಸಂಗ್ರಾಮದಲ್ಲಿ ಶತ್ರುಗಳನ್ನು ಜಯಿಸುವನೋ–ಆಗ ಧರ್ಮಿಷ್ಠನಾಗುತ್ತಾನೆ. ಹೀಗೆ ಮಾಡುವುದು ರಾಜಧರ್ಮವೆನಿಸಿಕೊಳ್ಳುತ್ತದೆ.

ಪಾಪಮಾಚರತೋ ಯತ್ರ ಕರ್ಮಣಾ ವ್ಯಾಹೃತೇನ ವಾ ।
ಪ್ರಿಯಸ್ಯಾಪಿ ನ ಮೃಷ್ಯೇತ ಸ ರಾಜ್ಞೋ ಧರ್ಮ ಉಚ್ಯತೇ ॥೩೫॥

ಅತ್ಯಂತಪ್ರಿಯನೇ ಆಗಿದ್ದರೂ ಅವನು ಪಾಪಕರ್ಮವನ್ನೇ ಮಾಡುತ್ತಿದ್ದರೆ–ಪಾಪಕರವಾದ ಮಾತುಗಳನ್ನೇ ಆಡುತ್ತಿದ್ದರೆ ಅವನಿಗೆ ಕ್ಷಮೆದೋರಬಾರದು. ಬೇರೆಯವರನ್ನು ದಂಡಿಸುವಂತೆಯೇ ಅವನನ್ನೂ ದಂಡಿಸಬೇಕು. ಹೀಗೆ ಮಾಡುವುದು ರಾಜಧರ್ಮವೆನಿಸಿಕೊಳ್ಳುತ್ತದೆ.

ಯದಾ ಶಾರಣಿಕಾನ್ರಾಜಾ ಪುತ್ರವತ್ಪರಿರಕ್ಷತಿ ।
ಭಿನತ್ತಿ ಚ ನ ಮರ್ಯಾದಾಂ ಸ ರಾಜ್ಞೋ ಧರ್ಮ ಉಚ್ಯತೇ ॥೩೬॥

ಯಾವಾಗ ರಾಜನು ಶರಣಾಗತರಾದವರನ್ನು ಪುತ್ರರಂತೆ ಪರಿಪಾಲಿಸುವನೋ–ಲೋಕಮರ್ಯಾದೆಯನ್ನು ಮೀರಿ ನಡೆಯುವುದಿಲ್ಲವೋ–ಆಗ ಅವನು ಧರ್ಮಾತ್ಮನಾದ ರಾಜನಾಗುತ್ತಾನೆ. ಶರಣಾಗತರಕ್ಷಣೆ–ಲೋಕಮರ್ಯಾದೆಗಳನ್ನು ಮೀರದಿರುವುದು ರಾಜಧರ್ಮಗಳೆನಿಸುತ್ತವೆ.

ಯದಾಪ್ತದಕ್ಷಿಣೈರ್ಯಜ್ಞೈರ್ಯಜತೇ ಶ್ರದ್ಧಯಾನ್ವಿತಃ ।
ಕಾಮದ್ವೇಷಾವನಾದೃತ್ಯ ಸ ರಾಜ್ಞೋ ಧರ್ಮ ಉಚ್ಯತೇ ॥೩೭॥

ಯಾವಾಗ ರಾಜನು ಕಾಮ-ದ್ವೇಷಗಳನ್ನು ಪರಿತ್ಯಜಿಸಿ ಶ್ರದ್ಧಾನ್ವಿತನಾಗಿ ಪರ್ಯಾಪ್ತದಕ್ಷಿಣೆಗಳಿಂದ ಕೂಡಿದ ಯಜ್ಞಗಳಿಂದ ದೇವತೆಗಳನ್ನು

ಆರಾಧಿಸುತ್ತಾನೆಯೋ–ಆಗ ಅವನು ಧರ್ಮಾತ್ಮನೆನಿಸಿಕೊಳ್ಳುತ್ತಾನೆ. ರಾಗ-ದ್ವೇಷಗಳನ್ನು ಬಿಟ್ಟು ಶ್ರದ್ಧಾಪೂರ್ವಕವಾಗಿ ಬಹುದಕ್ಷಿಣಾಕವಾದ ಯಜ್ಞಗಳನ್ನು ಮಾಡುವುದು ರಾಜಧರ್ಮವಾಗಿರುತ್ತದೆ.

ಕೃಪಣಾನಾಥವೃದ್ಧಾನಾಂ ಯದಾಶ್ರು ಪರಿಮಾರ್ಜತಿ ।
ಹರ್ಷಂ ಸಂಜನಯನ್ನೃಣಾಂ ಸ ರಾಜ್ಞೋ ಧರ್ಮ ಉಚ್ಯತೇ ॥೩೮॥

ರಾಜನು ಯಾವಾಗ ದೀನರ, ಅನಾಥರ ಮತ್ತು ವೃದ್ಧರ ಕಣ್ಣೀರನ್ನು ತೊಡೆದು ಅವರಿಗೆ ಹರ್ಷವನ್ನು ಉಂಟುಮಾಡುವನೋ–ಆಗ ಅವನು ಧರ್ಮಾತ್ಮನಾಗುತ್ತಾನೆ. ಜನರಿಗೆ ಸಂತೋಷವನ್ನುಂಟುಮಾಡುತ್ತಾ ದೀನಾನಾಥ-ವೃದ್ಧರ ಕಷ್ಟಗಳನ್ನು ಪರಿಹರಿಸಿ ಅವರನ್ನು ಸಂತೈಸಿ ಅವರಿಗೆ ಸಂತೋಷವನ್ನುಂಟುಮಾಡುವುದು ರಾಜಧರ್ಮವಾಗಿರುತ್ತದೆ.

ವಿವರ್ಧಯತಿ ಮಿತ್ರಾಣಿ ತಥಾರೀಂಶ್ಚಾಪಿ ಕರ್ಷತಿ ।
ಸಮ್ಪೂಜಯತಿ ಸಾಧೂಂಶ್ಚ ಸ ರಾಜ್ಞೋ ಧರ್ಮ ಉಚ್ಯತೇ ॥೩೯॥

ಮಿತ್ರರನ್ನು ವೃದ್ಧಿಗೊಳಿಸುವುದು, ಶತ್ರುಗಳನ್ನು ಧ್ವಂಸಮಾಡುವುದು ಮತ್ತು ಸಾಧುಗಳನ್ನು ಸತ್ಕರಿಸುವುದು–ರಾಜಧರ್ಮಗಳೆಂದು ಹೇಳಲ್ಪಟ್ಟಿವೆ.

ಸತ್ಯಂ ಪಾಲಯತಿ ಪ್ರೀತ್ಯಾ ನಿತ್ಯಂ ಭೂಮಿಂ ಪ್ರಯಚ್ಛತಿ ।
ಪೂಜಯೇದತಿಥೀನ್ಭೃತ್ಯಾನ್ಸ ರಾಜ್ಞೋ ಧರ್ಮ ಉಚ್ಯತೇ ॥೪೦॥

ಪ್ರೀತಿಯಿಂದ ಸತ್ಯವನ್ನು ಪರಿಪಾಲನೆಮಾಡುವುದು, ಪ್ರತಿನಿತ್ಯವೂ ಭೂದಾನಮಾಡುವುದು, ಅತಿಥಿಗಳನ್ನೂ ಭರಣ-ಪೋಷಣಗಳಿಗೆ ಯೋಗ್ಯರಾದ ವ್ಯಕ್ತಿಗಳನ್ನೂ ಸತ್ಕರಿಸುವುದೂ ರಾಜಧರ್ಮಗಳೆಂದು ಹೇಳಲ್ಪಟ್ಟಿವೆ.

ನಿಗ್ರಹಾನುಗ್ರಹೌ ಚೋಭೌ ಯತ್ರ ಸ್ಯಾತಾಂ ಪ್ರತಿಷ್ಠಿತೌ ।
ಅಸ್ಮಿಂಲ್ಲೋಕೇ ಪರೇ ಚೈವ ರಾಜಾ ಸ ಪ್ರಾಪ್ನುತೇ ಫಲಮ್ ॥೪೧॥

ದುಷ್ಟರನ್ನು ನಿಗ್ರಹಿಸುವುದು ಮತ್ತು ದೀನಾನಾಥ-ವೃದ್ಧರನ್ನು ಅನುಗ್ರಹಿಸುವುದು–ಈ ಗುಣಗಳು ಯಾವನಲ್ಲಿ ಪ್ರತಿಷ್ಠಿತವಾಗಿರುವುವೋ ಅಂತಹ ರಾಜನು ಇಹ-ಪರಗಳೆರಡರಲ್ಲಿಯೂ ಉತ್ತಮಫಲವನ್ನು ಪಡೆಯುತ್ತಾನೆ.

ಯಮೋ ರಾಜಾ ಧಾರ್ಮಿಕಾಣಾಂ ಮಾನ್ಧಾತಃ ಪರಮೇಶ್ವರಃ ।
ಸಂಯಚ್ಛನ್ಭವತಿಪ್ರಾಣಾನಸಂಯಚ್ಛಂಸ್ತು ಪಾತುಕಃ ॥೪೨॥

ಮಾಂಧಾತನೇ! ರಾಜನು ದುಷ್ಟರನ್ನು ಶಿಕ್ಷಿಸುವುದರಿಂದ ಅವರಿಗೆ ಯಮಪ್ರಾಯನಾಗುತ್ತಾನೆ. ಧಾರ್ಮಿಕರನ್ನು ಸಂರಕ್ಷಿಸುವುದರಿಂದ ಅವರಿಗೆ ಪರಮೇಶ್ವರಸ್ವರೂಪನಾಗುತ್ತಾನೆ. ರಾಜನು ಇಂದ್ರಿಯಗಳನ್ನು ಸಂಯಮ ದಲ್ಲಿಟ್ಟುಕೊಂಡಿರುವವರೆಗೂ ಶಾಸನಮಾಡಲು ಸಮರ್ಥನಾಗುತ್ತಾನೆ. ಇಂದ್ರಿಯಗಳಿಗೆ ದಾಸನಾದಾಗ ಪತಿತನಾಗುತ್ತಾನೆ.

ಋತ್ವಿಕ್ಪುರೋಹಿತಾಚಾರ್ಯಾನ್ಸತ್ಕೃತ್ಯಾನವಮನ್ಯ ಚ ।
ಯದಾ ಸಮ್ಯಕ್ಪ್ರಗೃಹ್ಣಾತಿ ಸ ರಾಜ್ಞೋ ಧರ್ಮ ಉಚ್ಯತೇ ॥೪೩॥

ಯಾವಾಗ ರಾಜನು ಋತ್ವಿಜರನ್ನೂ, ಪುರೋಹಿತರನ್ನೂ, ಆಚಾರ್ಯ ರನ್ನೂ ಅನಾದರಣೆಮಾಡದೇ ಸತ್ಕರಿಸಿ ಗೌರವದಿಂದ ಬರಮಾಡಿಕೊಳ್ಳು ತ್ತಾನೆಯೋ–ಆಗ ಅವನು ಧಾರ್ಮಿಕನಾದ ರಾಜನೆನಿಸಿಕೊಳ್ಳುತ್ತಾನೆ. ಋತ್ವಿಕ್ಪುರೋಹಿತಾಚಾರ್ಯರನ್ನೂ ಗೌರವದಿಂದ ಬರಮಾಡಿಕೊಳ್ಳುವುದು ರಾಜಧರ್ಮ.

ಯಮೋ ಯಚ್ಛತಿ ಭೂತಾನಿ ಸರ್ವಾಣ್ಯೇವಾವಿಶೇಷತಃ ।
ತಥಾ ರಾಜ್ಞಾನುಕರ್ತವ್ಯಂ ಯನ್ತವ್ಯಾ ವಿಧಿವತ್ಪ್ರಜಾಃ ॥೪೪॥

ಯಮರಾಜನು ಯಾವ ವಿಧವಾದ ತಾರತಮ್ಯವೂ ಇಲ್ಲದಂತೆ ಎಲ್ಲ ಪ್ರಾಣಿಗಳನ್ನೂ ಯಾವ ರೀತಿಯಲ್ಲಿ ನಿಯಂತ್ರಣಮಾಡುವನೋ–ಅದೇ ರೀತಿಯಲ್ಲಿ ಯಾವ ವಿಧವಾದ ಭೇದಭಾವವೂ ಇಲ್ಲದಂತೆ ಸಮಸ್ತ ಪ್ರಜೆಗಳನ್ನೂ ವಿಧಿಪೂರ್ವಕವಾಗಿ ನಿಯಂತ್ರಿಸುವುದು ರಾಜನ ಮುಖ್ಯ ಕರ್ತವ್ಯವಾಗಿರುತ್ತದೆ.

ಸಹಸ್ರಾಕ್ಷೇಣ ರಾಜಾ ಹಿ ಸರ್ವಥೈವೋಪಮೀಯತೇ ।
ಸ ಪಶ್ಯತಿ ಚ ಯಂ ಧರ್ಮಂ ಸ ಧರ್ಮಃ ಪುರುಷರ್ಷಭ ॥೪೫॥

ನರರ್ಷಭನೇ! ಪ್ರಭುತ್ವದಲ್ಲಿ ಸರ್ವಪ್ರಕಾರದಿಂದಲೂ ಸಾವಿರಕಣ್ಣು ಗಳುಳ್ಳ ಇಂದ್ರನಿಗೆ ಸಮಾನನೆಂದು ರಾಜನಿಗೆ ಉಪಮೆಯನ್ನು ಕೊಡುತ್ತಾರೆ.

ಆದುದರಿಂದ ರಾಜನು ಯಾವುದನ್ನು ಧರ್ಮವೆಂದು ನಿಶ್ಚಯಿಸುವನೋ– ಅದೇ ಶ್ರೇಷ್ಠವಾದ ಧರ್ಮವಾಗಿರುತ್ತದೆ.

ಅಪ್ರಮಾದೇನ ಶಿಕ್ಷೇಥಾಃ ಕ್ಷಮಾಂ ಬುದ್ಧಿಂ ಧೃತಿಂ ಮತಿಮ್ ।
ಭೂತಾನಾಂ ಚೈವ ಜಿಜ್ಞಾಸಾ ಸಾಧ್ವಸಾಧು ಚ ಸರ್ವದಾ ॥೪೬॥

ನೀನು ಅಪ್ರಮತ್ತನಾಗಿದ್ದುಕೊಂಡು ಕ್ಷಮೆಯನ್ನೂ, ಬುದ್ಧಿಯನ್ನೂ, ಧೃತಿಯನ್ನೂ ಮತ್ತು ಮತಿಯನ್ನೂ ಯಾವ ಕಾಲದಲ್ಲಿ ಹೇಗೆ ಉಪ ಯೋಗಿಸಬೇಕೆಂಬುದನ್ನು ಅರಿತುಕೊಳ್ಳಬೇಕು. ಪ್ರಾಣಿಗಳಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟುದು ಎಂಬುದನ್ನು ಸರ್ವದಾ ತಿಳಿದು ಕೊಳ್ಳುತ್ತಲೇ ಇರಬೇಕು.

ಸಂಗ್ರಹಃ ಸರ್ವಭೂತಾನಾಂ ದಾನಂ ಚ ಮಧುರಂ ವಚಃ ।
ಪೌರಜಾನಪದಾಶ್ಚೈವ ಗೋಪ್ತವ್ಯಾಸ್ತೇ ಯಥಾಸುಖಮ್ ॥೪೭॥

ಸಮಸ್ತಪ್ರಜೆಗಳ ವಿಶ್ವಾಸಸಂಪಾದನೆ, ಅವಶ್ಯವಸ್ತುಗಳ ಪ್ರದಾನ ಮತ್ತು ಮಧುರವಚನ–ಇವು ರಾಜನಿಗೆ ಅತಿಮುಖ್ಯವಾದುವುಗಳು. ನಗರದಲ್ಲಿ ವಾಸಮಾಡುವವರನ್ನೂ ಗ್ರಾಮೀಣ ಜನರನ್ನೂ ಸುಖವಾಗಿರುವಂತೆ ಸಂರಕ್ಷಿಸುವುದು ನಿನ್ನ ಕರ್ತವ್ಯವಾಗಿರುತ್ತದೆ.

ನ ಜಾತ್ವದಕ್ಷೋ ನೃಪತಿಃ ಪ್ರಜಾಃ ಶಕ್ನೋತಿ ರಕ್ಷಿತುಮ್ ।
ಭಾರೋ ಹಿ ಸುಮಹಾಂಸ್ತಾತ ರಾಜ್ಯಂ ನಾಮ ಸುದುಷ್ಕರಮ್ ॥೪೮॥

ಅದಕ್ಷನಾದ ರಾಜನು ಪ್ರಜೆಗಳನ್ನು ರಕ್ಷಣೆಮಾಡಲು ಸಮರ್ಥನಾಗು ವುದಿಲ್ಲ. ರಾಜ್ಯಪಾಲನೆಯು ಅತ್ಯಂತದುಷ್ಕರವೂ ಮತ್ತು ಮಹಾಭಾರವೂ ಆಗಿರುವುದು.

ತದ್ದಣ್ಡವಿನ್ನೃಪಃ ಪ್ರಾಜ್ಞಃ ಶೂರಃ ಶಕ್ನೋತಿ ರಕ್ಷಿತುಮ್ ।
ನ ಹಿ ಶಕ್ಯಮದಣ್ಡೇನ ಕ್ಲೀಬೇನಾಬುದ್ಧಿನಾಪಿ ವಾ ॥೪೯॥

ದಂಡನೀತಿಯನ್ನು ತಿಳಿದಿರುವ, ಪ್ರಾಜ್ಞನಾದ, ಶೂರನಾದ ರಾಜನು ಮಾತ್ರವೇ ಪ್ರಜೆಗಳನ್ನು ರಕ್ಷಿಸಲು ಸಮರ್ಥನಾಗುತ್ತಾನೆ. ದಂಡನೀತಿಯನ್ನು

ತಿಳಿಯದೇ ಇರುವವನಿಂದ, ನಪುಂಸಕನಿಂದ, ಬುದ್ಧಿಹೀನನಿಂದ ರಾಜ್ಯ ವಾಳಲು ಶಕ್ಯವಾಗುವುದಿಲ್ಲ.

ಅಭಿರೂಪೈಃ ಕುಲೇ ಜಾತೈರ್ದಕ್ಷೈರ್ಭಕ್ತೈರ್ಬಹುಶ್ರುತೈಃ ।
ಸರ್ವಾ ಬುದ್ಧೀಃ ಪರೀಕ್ಷೇಥಾಸ್ತಾಪಸಾಶ್ರಮಿಣಾಮಪಿ ॥೫೦॥

ನೀನು ರೂಪವಂತರಾದ, ಸತ್ಕುಲಪ್ರಸೂತರಾದ, ದಕ್ಷರಾದ, ರಾಜಭಕ್ತರಾದ, ಬಹುಶ್ರುತರಾದ ಮಂತ್ರಿಗಳೊಡನೆ ಸೇರಿಕೊಂಡು ಎಲ್ಲ ಜನರ ಬುದ್ಧಿಗಳನ್ನೂ, ಆಶ್ರಮಗಳಲ್ಲಿರುವ ತಪಸ್ವಿಗಳ ಬುದ್ಧಿಗಳನ್ನೂ ಪರೀಕ್ಷಿಸಬೇಕು. (ಎಲ್ಲರ ಬುದ್ಧಿಗಳನ್ನೂ ಪರೀಕ್ಷಿಸಿ ಯುಕ್ತವಾದುದನ್ನು ಗ್ರಹಿಸಬೇಕು.)

ಅತಸ್ತ್ವಂ ಸರ್ವಭೂತಾನಾಂ ಧರ್ಮಂ ವೇತ್ಸ್ಯಸಿ ವೈ ಪರಮ್ ।
ಸ್ವದೇಶೇ ಪರದೇಶೇ ವಾ ನ ತೇ ಧರ್ಮೋ ವಿನಂಕ್ಷ್ಯತಿ ॥೫೧॥

ಹೀಗೆ ಮಾಡುವುದರಿಂದ ನಿನಗೆ ಸರ್ವಪ್ರಾಣಿಗಳ ಶ್ರೇಷ್ಠವಾದ ಧರ್ಮವೂ ತಿಳಿಯುತ್ತದೆ. ನೀನು ಸ್ವದೇಶದಲ್ಲಿದ್ದರೂ ಪರದೇಶದಲ್ಲಿಯೇ ಇದ್ದರೂ ನಿನ್ನಲ್ಲಿರುವ ಧರ್ಮವು ನಷ್ಟವಾಗಿ ಹೋಗುವುದಿಲ್ಲ.

ತಸ್ಮಾದರ್ಥಾಚ್ಚ ಕಾಮಾಚ್ಚ ಧರ್ಮ ಏವೋತ್ತರೋ ಭವೇತ್ ।
ಅಸ್ಮಿಂಲ್ಲೋಕೇ ಪರೇ ಚೈವ ಧರ್ಮಾತ್ಮಾ ಸುಖಮೇಧತೇ ॥೫೨॥

ಹೀಗೆ ವಿಚಾರಮಾಡುವುದರಿಂದ ಅರ್ಥಾಪೇಕ್ಷೆಯಿಂದಲೂ ಮತ್ತು ಕಾಮಾಪೇಕ್ಷೆಯಿಂದಲೂ ಧರ್ಮವೇ ಶ್ರೇಷ್ಠವೆಂಬುದು ಸಿದ್ಧವಾಗುತ್ತದೆ. ಧರ್ಮಾತ್ಮನಾದವನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ.

ತ್ಯಜನ್ತಿ ದಾರಾನ್ಪುತ್ರಾಂಶ್ಚ ಮನುಷ್ಯಾಃ ಪರಿಪೂಜಿತಾಃ ।
ಸಂಗ್ರಹಶ್ಚೈವ ಭೂತಾನಾಂ ದಾನಂ ಚ ಮಧುರಾ ಚ ವಾಕ್ ॥೫೩॥

ಅಪ್ರಮಾದಶ್ಚ ಶೌಚಂ ಚ ರಾಜ್ಞೋ ಭೂತಿಕರಂ ಮಹತ್ ।
ಏತೇಭ್ಯಶ್ಚೈವ ಮಾನ್ಧಾತಃ ಸತತಂ ಮಾ ಪ್ರಮಾದಿಥಾಃ ॥೫೪॥

ಮನುಷ್ಯರನ್ನು ನೀನು ಸಮ್ಮಾನಿಸಿದ್ದೇ ಆದರೆ, ನಿನ್ನ ಮೇಲಿನ ಪ್ರೀತಿ

ಯಿಂದಾಗಿ ಅವರು ನಿನಗಾಗಿ ಪತ್ನೀ-ಪುತ್ರರನ್ನಾದರೂ ತೊರೆಯಲು ಸಿದ್ಧ ರಾಗುತ್ತಾರೆ. ಪ್ರಜಾಸಂಗ್ರಹ, ದಾನ, ಸುಮಧುರವಾದ ಮಾತು, ಅಪ್ರಮಾದ, ಶುಚಿತ್ವ–ಇವುಗಳು ರಾಜನಿಗೆ ಮಹತ್ತಾದ ಐಶ್ವರ್ಯವನ್ನು ಒದಗಿಸಿಕೊಡು ತ್ತವೆ. ಪ್ರಜಾಸಂಗ್ರಹ-ದಾನಾದಿ ಗುಣಗಳಿಂದ ನೀನು ಯಾವುದೇ ಕಾರಣ ದಿಂದಲೂ ಚ್ಯುತನಾಗಬಾರದು.

ಅಪ್ರಮತ್ತೋ ಭವೇದ್ರಾಜಾ ಛಿದ್ರದರ್ಶೀ ಪರಾತ್ಮನೋಃ ।
ನಾಸ್ಯ ಚ್ಛಿದ್ರಂ ಪರಃ ಪಶ್ಯೇಚ್ಛಿದ್ರೇಷು ಪರಮನ್ವಿಯಾತ್ ॥೫೫॥

ರಾಜನು ಯಾವಾಗಲೂ ಅಪ್ರಮತ್ತನಾಗಿರಬೇಕು. ತನ್ನಲ್ಲಿರುವ ಮತ್ತು ಶತ್ರುವಿನಲ್ಲಿರುವ ನ್ಯೂನತೆಗಳನ್ನು ತಿಳಿದುಕೊಳ್ಳಬೇಕು. ಆದರೆ ತನ್ನಲ್ಲಿರುವ ನ್ಯೂನತೆಯು ಶತ್ರುವಿಗೆ ತಿಳಿಯದಂತೆ ಜಾಗರೂಕನಾಗಿರಬೇಕು. ಶತ್ರುವಿನಲ್ಲಿರುವ ನ್ಯೂನತೆಯಲ್ಲಿಯೇ ಗಮನವಿಟ್ಟು ಸಮಯವು ಬಂದಾಗ ಅವನ ಮೇಲೆ ಯುದ್ಧಕ್ಕೆ ಹೋಗಬೇಕು.

ಈ ವಿಧವಾದ ವ್ಯವಹಾರಗಳು ಇಂದ್ರ-ಯಮ-ವರುಣರಲ್ಲಿಯೂ ರಾಜರ್ಷಿಗಳಲ್ಲಿಯೂ ಇವೆ. ಎಲ್ಲರೂ ಅನುಸರಿಸುತ್ತಿದ್ದ ಈ ರಾಜಧರ್ಮ ವ್ಯವಹಾರಗಳನ್ನೇ ನೀನೂ ಪರಿಪಾಲಿಸು. ರಾಜರ್ಷಿಗಳಿಂದ ಸಂಸೇವಿತವಾದ ಆಚಾರ-ವ್ಯವಹಾರಗಳನ್ನು ಪರಿಪಾಲಿಸು. ಶೀಘ್ರವಾಗಿಯೇ ದಿವ್ಯಮಾರ್ಗ ವನ್ನು ಆಶ್ರಯಿಸು. ಧರ್ಮವ್ರತನಾದ ರಾಜನ ಯಶಸ್ಸನ್ನು ದೇವರ್ಷಿ-ಪಿತೃ-ಗಂಧರ್ವರೂ ಇಹಲೋಕ-ಪರಲೋಕಗಳೆರಡರಲ್ಲಿಯೂ ಗಾನಮಾಡು ತ್ತಾರೆ."

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಉತಥ್ಯನು ಮಾಂಧಾತನಿಗೆ ಹೀಗೆ ಉಪದೇಶಿಸಿದ ಬಳಿಕ ಮಾಂಧಾತನು ಸಂದೇಹರಹಿತನಾಗಿ ಉತಥ್ಯನ ಆಜ್ಞೆಯನ್ನು ಪರಿಪಾಲಿಸುತ್ತಾ ಈ ಭೂಮಂಡಲಕ್ಕೆ ಏಕಚಕ್ರಾಧಿಪತಿಯಾದನು. ನೀನೂ ಸಹ ಮಾಂಧಾತನಂತೆಯೇ ಚೆನ್ನಾಗಿ ಧರ್ಮವನ್ನು ಪರಿಪಾಲಿಸುತ್ತಾ ಈ ಪೃಥ್ವಿ

ಯನ್ನು ರಕ್ಷಿಸು. ಹೀಗೆ ಮಾಡುವುದರಿಂದ ನಿನಗೂ ಸ್ವರ್ಗದಲ್ಲಿ ಸ್ಥಾನವು ಲಭಿಸುತ್ತದೆ."

೯೧ನೆಯ ಅಧ್ಯಾಯವು ಮುಗಿಯಿತು.

೯೨ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ಧರ್ಮಪೂರ್ವಕವಾದ ಆಚಾರದ ವಿಷಯದಲ್ಲಿ ವಸುಮನಸನಿಗೆ ವಾಮದೇವನ ಉಪದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಧರ್ಮೇ ಸ್ಥಾತುಮಿಚ್ಛನ್ರಾಜಾ ವರ್ತೇತ ಧಾರ್ಮಿಕಃ ।
ಪೃಚ್ಛಾಮಿ ತ್ವಾಂ ಕುರುಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹ! ಧರ್ಮಮಾರ್ಗದಲ್ಲಿಯೇ ಇರಬೇಕೆಂದು ಇಚ್ಛಿಸುವ ರಾಜನು ಅನೇಕವಿಧವಾದ ನ್ಯೂನತೆಗಳಿಂದ ಕೂಡಿರುವ ರಾಜ್ಯಭಾರವನ್ನು ವಹಿಸಿಕೊಂಡು ಧಾರ್ಮಿಕನಾಗಿರಲು ಹೇಗೆ ಸಾಧ್ಯವಾಗುತ್ತದೆ?–ಈ ವಿಷಯವಾದ ನನ್ನ ಪ್ರಶ್ನೆಗೆ ಸಮಾಧಾನವನ್ನು ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ತತ್ತ್ವಜ್ಞಾನಿಯಾದ, ಮಹಾತ್ಮನಾದ, ಧೀಮಂತನಾದ ವಾಮದೇವನು ಬಹಳ ಹಿಂದೆಯೇ ಹೇಳಿದ ಇತಿಹಾಸ ರೂಪವಾದ ಗೀತೆಯನ್ನು ಉದಾಹರಿಸುತ್ತಾರೆ. ಜ್ಞಾನಿಯಾದ, ಧೈರ್ಯಶಾಲಿ ಯಾದ, ಶುಚಿಯಾದ ವಸುಮನಸ ಎಂಬ ರಾಜನು ಒಮ್ಮೆ ತಪಸ್ವಿಯಾದ, ಮಹರ್ಷಿಯಾದ ವಾಮದೇವನನ್ನು ಪ್ರಶ್ನಿಸಿದನು :

"ಭಗವನ್! ಯಾವ ವಿಧವಾದ ಆಚರಣೆಯಲ್ಲಿ ಸ್ಥಿರವಾಗಿದ್ದರೆ ನಾನು ಸ್ವಧರ್ಮದಿಂದ ಚ್ಯುತನಾಗುವುದಿಲ್ಲ? ಧರ್ಮಾರ್ಥಸಹಿತವಾದ ಮಾತು ಗಳಿಂದ ನನ್ನನ್ನು ಅನುಶಾಸನಮಾಡು. (ನಾನು ಧರ್ಮದಿಂದ ಚ್ಯುತನಾಗ ದಿರುವುದಕ್ಕೆ ಏನು ಮಾಡಬೇಕೆಂಬುದನ್ನು ಆಜ್ಞಾಪಿಸು.)"

ತೇಜಸ್ವಿಯಾದ, ತಪಸ್ವಿಗಳಲ್ಲಿ ಶ್ರೇಷ್ಠನಾದ ವಾಮದೇವನು ನಹುಷನ ಮಗನಾದ ಯಯಾತಿಯಂತೆ ಸುಖಾಸನದಲ್ಲಿ ಕುಳಿತಿದ್ದ, ಸುವರ್ಣದ

ಕಾಂತಿಗೆ ಅನುರೂಪವಾದ ಕಾಂತಿಯಿಂದ ಕೂಡಿದ್ದ ವಸುಮನಸನೊಡನೆ ಹೇಳಿದನು :

ಧರ್ಮಮೇವಾನುವರ್ತಸ್ವ ನ ಧರ್ಮಾದ್ವಿದ್ಯತೇ ಪರಮ್ ।
ಧರ್ಮೇ ಸ್ಥಿತಾ ಹಿ ರಾಜಾನೋ ಜಯನ್ತಿ ಪೃಥಿವೀಮಿಮಾಮ್ ॥೬॥

"ಮಹಾರಾಜ! ಧರ್ಮವನ್ನೇ ಅನುಸರಣೆ ಮಾಡು. ಧರ್ಮಕ್ಕಿಂತಲೂ ಶ್ರೇಷ್ಠವಾದುದು ಮತ್ತೊಂದಿಲ್ಲ. ರಾಜರು ಧರ್ಮದ ಮಾರ್ಗದಲ್ಲಿಯೇ ಇದ್ದು ಈ ಪೃಥ್ವಿಯನ್ನು ಜಯಿಸುತ್ತಾರೆ.

ಅರ್ಥಸಿದ್ಧೇಃ ಪರಂ ಧರ್ಮಂ ಮನ್ಯತೇ ಯೋ ಮಹೀಪತಿಃ ।
ವೃದ್ಧ್ಯಾಂ ಚ ಕುರುತೇ ಬುದ್ಧಿಂ ಸ ಧರ್ಮೇಣ ವಿರಾಜತೇ ॥೭॥

ಯಾವ ರಾಜನು ಅರ್ಥಸಿದ್ಧಿಗಿಂತಲೂ ಧರ್ಮಸಿದ್ಧಿಯೇ ಹಿರಿದಾದುದೆಂದು ಭಾವಿಸುವನೋ ಮತ್ತು ಧರ್ಮವನ್ನು ವೃದ್ಧಿಗೊಳಿಸಲು ಮನಸ್ಸು ಮತ್ತು ಬುದ್ಧಿಗಳನ್ನು ಉಪಯೋಗಿಸುವನೋ–ಅಂತಹ ರಾಜನು ಧರ್ಮಾಚರಣೆಯಿಂದ ಹೆಚ್ಚು ಪ್ರಕಾಶಮಾನನಾಗುತ್ತಾನೆ.

ಅಧರ್ಮದರ್ಶೀ ಯೋ ರಾಜಾ ಬಲಾದೇವ ಪ್ರವರ್ತತೇ ।
ಕ್ಷಿಪ್ರಮೇವಾಪಯಾತೋಽಸ್ಮಾದುಭೌ ಪ್ರಥಮಮಧ್ಯಮೌ ॥೮॥

ಇದಕ್ಕೆ ವಿಪರೀತವಾಗಿ ಯಾವನು ಅಧರ್ಮಮಾರ್ಗವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬಲಾತ್ಕಾರಪೂರ್ವಕವಾಗಿ ಅದರಲ್ಲಿಯೇ ಪ್ರವೃತ್ತನಾಗುವನೋ–ಅಂತಹ ರಾಜನನ್ನು ಮೊದಲನೆಯ ಮತ್ತು ಎರಡನೆಯ ಪುರುಷಾರ್ಥಗಳಾದ ಧರ್ಮಾರ್ಥಗಳು ಬಿಟ್ಟುಹೋಗುತ್ತವೆ.

ಅಸತ್ಪಾಪಿಷ್ಠಸಚಿವೋ ವಧ್ಯೋ ಲೋಕಸ್ಯ ಧರ್ಮಹಾ ।
ಸಹೈವ ಪರಿವಾರೇಣ ಕ್ಷಿಪ್ರಮೇವಾವಸೀದತಿ ॥೯॥

ಯಾವ ರಾಜನು ಅಸತ್ಪುರುಷರೂ, ಪಾಪಿಷ್ಠರೂ ಆದ ಮಂತ್ರಿಗಳ ಸಹಾಯದಿಂದ ಧರ್ಮಕ್ಕೆ ಹಾನಿಯನ್ನುಂಟುಮಾಡುವನೋ–ಅಂತಹ ರಾಜನು ಲೋಕದಲ್ಲಿ ವಧ್ಯನಾಗುತ್ತಾನೆ. ಪರಿವಾರಸಮೇತವಾಗಿ ಬಹಳ ಬೇಗ ವಿನಾಶವನ್ನು ಹೊಂದುತ್ತಾನೆ.

ಅರ್ಥಾನಾಮನನುಷ್ಠಾತಾ ಕಾಮಚಾರೀ ವಿಕತ್ಥನಃ ।
ಅಪಿ ಸರ್ವಾಂ ಮಹೀಂ ಲಬ್ಧ್ವಾ ಕ್ಷಿಪ್ರಮೇವ ವಿನಶ್ಯತಿ ॥೧೦॥

ಯಾವ ರಾಜನು ಅರ್ಥಸಿದ್ಧಿಗೆ ಪ್ರಯತ್ನವನ್ನೇ ಮಾಡುವುದಿಲ್ಲವೋ, ಸ್ವೇಚ್ಛಾಚಾರನಾಗಿರುವನೋ, ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುವನೋ–ಅಂತಹ ರಾಜನು ವಿಶ್ವವನ್ನೇ ತನ್ನದನ್ನಾಗಿ ಮಾಡಿಕೊಂಡಿದ್ದರೂ ಬಹಳ ಬೇಗ ವಿನಾಶಹೊಂದುತ್ತಾನೆ.

ಅಥಾದದಾನಃ ಕಲ್ಯಾಣಮನಸೂಯುರ್ಜಿತೇನ್ದ್ರಿಯಃ ।
ವರ್ಧತೇ ಮತಿಮಾನ್ರಾಜಾ ಸ್ರೋತೋಭಿರಿವ ಸಾಗರಃ ॥೧೧॥

ಯಾವ ರಾಜನು ಕಲ್ಯಾಣಕರವಾದ ಗುಣಗಳನ್ನು ಗ್ರಹಿಸುವನೋ, ಕಲ್ಯಾಣಕರವಾದ ಕಾರ್ಯಗಳನ್ನು ಕೈಗೊಳ್ಳುವನೋ, ಅಸೂಯಾ ರಹಿತನೋ, ಜಿತೇಂದ್ರಿಯನೋ, ಬುದ್ಧಿವಂತನೋ–ಅಂತಹ ರಾಜನು ನದಿಗಳ ಪ್ರವಾಹಗಳಿಂದ ಸಮುದ್ರವು ವೃದ್ಧಿಹೊಂದುವಂತೆ ಅಭಿವೃದ್ಧಿ ಹೊಂದುತ್ತಾನೆ.

ನ ಪೂರ್ಣೋಽಸ್ಮೀತಿ ಮನ್ಯೇತ ಧರ್ಮತಃ ಕಾಮತೋಽರ್ಥತಃ ।
ಬುದ್ಧಿತೋ ಮಿತ್ರತಶ್ಚಾಪಿ ಸತತಂ ವಸುಧಾಧಿಪಃ ॥೧೨॥

ರಾಜನಾದವನು ಯಾವಾಗಲೂ ಧರ್ಮದ ವಿಷಯದಲ್ಲಾಗಲೀ, ಕಾಮದ ವಿಷಯದಲ್ಲಾಗಲೀ, ಅರ್ಥದ ವಿಷಯದಲ್ಲಾಗಲೀ, ಬುದ್ಧಿಯ ವಿಷಯದಲ್ಲಾಗಲೀ, ಮಿತ್ರರ ವಿಷಯದಲ್ಲಾಗಲೀ–ಸಂಪನ್ನನಾಗಿದ್ದರೂ ಪೂರ್ಣನಾಗಿರುವೆನೆಂದು ಭಾವಿಸಿಕೊಳ್ಳಬಾರದು. ಅಪೂರ್ಣನಾಗಿರುವೆನೆಂದೇ ಭಾವಿಸಿಕೊಂಡು ಇವುಗಳನ್ನು ಇನ್ನೂ ಹೆಚ್ಚು-ಹೆಚ್ಚಾಗಿ ಪಡೆದುಕೊಳ್ಳಲು ಪ್ರಯತ್ನಿಸುತ್ತಲೇ ಇರಬೇಕು.

ಏತೇಷ್ವೇವ ಹಿ ಸರ್ವೇಷು ಲೋಕಯಾತ್ರಾ ಪ್ರತಿಷ್ಠಿತಾ ।
ಏತಾನಿ ಶೃಣ್ವಲ್ಲಭತೇ ಯಶಃ ಕೀರ್ತಿಂ ಶ್ರಿಯಂ ಪ್ರಜಾಃ ॥೧೩॥

ರಾಜನ ಲೋಕಯಾತ್ರೆಯು ಮೇಲೆ ಹೇಳಿದ ಈ ಎಲ್ಲವನ್ನೂ ಅವಲಂಬಿಸಿದೆ. ಈ ಎಲ್ಲವನ್ನೂ ಕೇಳುವುದರಿಂದ ಮತ್ತು ಗ್ರಹಿಸುವುದರಿಂದ ರಾಜನಿಗೆ ಯಶಸ್ಸು, ಕೀರ್ತಿ, ಲಕ್ಷ್ಮೀ–ಇವುಗಳು ಲಭ್ಯವಾಗುತ್ತವೆ ; ಪ್ರಜಾಸಂಗ್ರಹವೂ ಆಗುತ್ತದೆ.

ಏವಂ ಯೋ ಧರ್ಮಸಂರಮ್ಭೀ ಧರ್ಮಾರ್ಥಪರಿಚಿನ್ತಕಃ ।
ಅರ್ಥಾನ್ಸಮೀಕ್ಷ್ಯ ಭಜತೇ ಸ ಧ್ರುವಂ ಮಹದಶ್ನುತೇ ॥೧೪॥

ಹೀಗೆ ಯಾವ ರಾಜನು ಧರ್ಮದ ವಿಷಯದಲ್ಲಿ ಅತ್ಯಂತಾಸಕ್ತಿಯುಳ್ಳವನಾಗಿರುವನೋ, ಧರ್ಮಾರ್ಥಗಳನ್ನು ಚಿಂತಿಸುವವನಾಗಿರು ವನೋ, ಅರ್ಥಗಳನ್ನು ಚೆನ್ನಾಗಿ ಪರಿಶೀಲಿಸಿ ಸೇವಿಸುವನೋ–ಅಂತಹ ರಾಜನು ನಿಶ್ಚಯವಾಗಿಯೂ ಮಹಾಫಲವನ್ನು ಪಡೆದುಕೊಳ್ಳುತ್ತಾನೆ.

ಅದಾತಾ ಹ್ಯನತಿಸ್ನೇಹೋ ದಣ್ಡೇನಾವರ್ತಯನ್ಪ್ರಜಾಃ ।
ಸಾಹಸಪ್ರಕೃತೀ ರಾಜಾ ಕ್ಷಿಪ್ರಮೇವ ವಿನಶ್ಯತಿ ॥೧೫॥

ದುಃಸಾಹಸಿಯಾದ, ದಾನಶೀಲನಲ್ಲದ, ಸ್ನೇಹಶೂನ್ಯನಾದ, ದಂಡದ ಮೂಲಕವಾಗಿಯೇ ಪ್ರಜೆಗಳನ್ನು ಬಾರಿ-ಬಾರಿಗೂ ಪೀಡಿಸುವ ರಾಜನು ಕ್ಷಿಪ್ರವಾಗಿಯೇ ವಿನಾಶಹೊಂದುತ್ತಾನೆ.

ಅಥ ಪಾಪಕೃತಂ ಬುದ್ಧ್ವಾ ನ ಚ ಪಶ್ಯತ್ಯಬುದ್ಧಿಮಾನ್ ।
ಅಕೀರ್ತ್ಯಾಭಿಸಮಾಯುಕ್ತೋ ಭೂಯೋ ನರಕಮಶ್ನುತೇ ॥೧೬॥

ಬುದ್ಧಿಹೀನನಾದ ಯಾವ ರಾಜನು–ಪಾಪಮಾಡಿಯೂ ವಿವೇಚನಾ ಬುದ್ಧಿಯಿಂದ ತನ್ನ ಪಾಪಕರ್ಮವನ್ನು ತಿಳಿದುಕೊಳ್ಳುವುದಿಲ್ಲವೋ ಅಥವಾ ಪಾಪಮಾಡಿದವನನ್ನು ತಿಳಿದು ಶಿಕ್ಷಿಸುವುದಿಲ್ಲವೋ–ಅಂತಹ ರಾಜನು ಲೋಕದಲ್ಲಿ ದುಷ್ಕೀರ್ತಿಯನ್ನು ಪಡೆಯುವುದಲ್ಲದೇ, ಅವಸಾನಾನಂತರದಲ್ಲಿ ನರಕದಲ್ಲಿಯೂ ಬೀಳುತ್ತಾನೆ.

ಅಥ ಮಾನಯಿತುರ್ದಾಮ್ನಃ ಶ್ಲಕ್ಷ್ಣಸ್ಯ ವಶವರ್ತಿನಃ ।
ವ್ಯಸನಂ ಸ್ವಮಿವೋತ್ಪನ್ನಂ ವಿಜಿಘಾಂಸನ್ತಿ ಮಾನವಾಃ ॥೧೭॥

ಯಾವ ರಾಜನು ಎಲ್ಲರನ್ನೂ ಗೌರವಿಸುವನೋ, ಎಲ್ಲರನ್ನೂ ಭಕ್ತಿಯಿಂದ ಬಂಧಿಸಿರುವನೋ, ಮೃದುವಾಗಿರುವನೋ, ಧರ್ಮವಶವರ್ತಿಯಾಗಿರುವನೋ–ಅಂತಹ ರಾಜನಿಗೆ ಯಾವುದಾದರೂ ಸಂಕಟವು ಪ್ರಾಪ್ತ

ವಾದಲ್ಲಿ ಅವನ ಪ್ರಜೆಗಳು, ಸಂಕಟವು ತಮಗೇ ಒದಗಿಬಂದಿರುವುದೆಂಬ ಭಾವನೆಯನ್ನಿಟ್ಟುಕೊಂಡು ಎಲ್ಲರೂ ಒಟ್ಟಾಗಿ ಸೇರಿ ನಿವಾರಣೆಮಾಡುತ್ತಾರೆ.

ಯಸ್ಯ ನಾಸ್ತಿ ಗುರುರ್ಧರ್ಮೇ ನ ಚಾನ್ಯಾನಪಿ ಪೃಚ್ಛತಿ ।
ಸುಖತನ್ತ್ರೋಽರ್ಥಲಾಭೇಷು ನ ಚಿರಂ ಸುಖಮಶ್ನುತೇ ॥೧೮॥

ಯಾವನಿಗೆ ಧರ್ಮದ ವಿಷಯದಲ್ಲಿ ತಿಳಿವಳಿಕೆಯನ್ನು ಹೇಳುವ ಗುರುವೇ ಇಲ್ಲವೋ, ಯಾವನು ಧರ್ಮದ ವಿಷಯದಲ್ಲಿ ಬೇರೆ ಯಾರನ್ನೂ ಕೇಳುವುದೂ ಇಲ್ಲವೋ, ಅರ್ಥಪ್ರಾಪ್ತಿಯನಂತರ ಸುಖೋಪಭೋಗ ಗಳಲ್ಲಿಯೇ ಲೋಲುಪನಾಗಿರುವನೋ–ಅಂತಹ ರಾಜನು ದೀರ್ಘಕಾಲದ ವರೆಗೆ ಸುಖಿಯಾಗಿರಲಾರನು.

ಗುರುಪ್ರಧಾನೋ ಧರ್ಮೇಷು ಸ್ವಯಮರ್ಥಾನವೇಕ್ಷಿತಾ ।
ಧರ್ಮಪ್ರಧಾನೋ ಲಾಭೇಷು ಸ ಚಿರಂ ಸುಖಮಶ್ನುತೇ ॥೧೯॥

ಯಾವ ರಾಜನು ಧರ್ಮದ ವಿಷಯದಲ್ಲಿ ಗುರುವನ್ನೇ ಪ್ರಧಾನನನ್ನಾ ಗಿಟ್ಟುಕೊಂಡು ಅವನ ಉಪದೇಶಾನುಸಾರವಾಗಿ ನಡೆದುಕೊಳ್ಳುವನೋ, ಅರ್ಥಸಂಬಂಧದ ಸಕಲಕಾರ್ಯಗಳನ್ನೂ ತಾನೇ ಮಾಡುವನೋ, ಸಮಸ್ತ ಲಾಭಗಳಲ್ಲಿಯೂ ಧರ್ಮವನ್ನೇ ಪ್ರಧಾನವನ್ನಾಗಿ ಭಾವಿಸುವನೋ–ಅಂತಹ ರಾಜನು ಚಿರಕಾಲದವರೆಗೆ ಸುಖವನ್ನು ಅನುಭವಿಸುತ್ತಾನೆ."

೯೨ನೆಯ ಅಧ್ಯಾಯವು ಮುಗಿಯಿತು.

೯೩ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ವಾಮದೇವನು ರಾಜೋಚಿತವಾದ ವ್ಯವಹಾರಗಳನ್ನು ವರ್ಣಿಸಿದುದು

ಯುಧಿಷ್ಠಿರ! ವಾಮದೇವನು ಮುಂದುವರಿದು ಹೇಳುತ್ತಾನೆ :

ಯತ್ರಾಧರ್ಮಂ ಪ್ರಣಯತೇ ದುರ್ಬಲೇ ಬಲವತ್ತರಃ ।
ತಾಂ ವೃತ್ತಿಮುಪಜೀವನ್ತಿ ಯೇ ಭವನ್ತಿ ತದನ್ವಯಾಃ ॥೧॥

"ಮಹಾರಾಜ! ಯಾವ ರಾಜ್ಯದಲ್ಲಿ ಅತ್ಯಂತಬಲಿಷ್ಠನಾದ ರಾಜನು

ದುರ್ಬಲರಾದ ಪ್ರಜೆಗಳ ಮೇಲೆ ಅಧರ್ಮಮಾರ್ಗದಿಂದ ವರ್ತಿಸುವನೋ (ಅತ್ಯಾಚಾರವೆಸಗುವನೋ)–ಅಂತಹವನ ರಾಜ್ಯದಲ್ಲಿರುವ ಅವನ ವಂಶದವರೂ ಅದೇ ವೃತ್ತಿಯನ್ನೇ ಅನುಸರಿಸಿ ತಮ್ಮ ಜೀವಿಕೆಯನ್ನು ನಡೆಸುತ್ತಾರೆ. (ಬಲಿಷ್ಠನಾದ ರಾಜನು ದುರ್ಬಲರ ವಿಷಯದಲ್ಲಿ ಅಧರ್ಮಯುಕ್ತವಾದ ವ್ಯವಹಾರವನ್ನು ನಡೆಸಿದರೆ–ರಾಜನ ಅನುಯಾಯಿಗಳೂ ರಾಜನನ್ನೇ ಅನುಸರಿಸಿ ಅಧರ್ಮಮಾರ್ಗದಿಂದಲೇ ಪ್ರಜೆಗಳಲ್ಲಿ ವ್ಯವಹರಿಸುತ್ತಾರೆ.)

ರಾಜಾನಮನುವರ್ತನ್ತೇ ತಂ ಪಾಪಾಭಿಪ್ರವರ್ತಕಮ್ ।
ಅವಿನೀತಮನುಷ್ಯಂ ತತ್ಕ್ಷಿಪ್ರಂ ರಾಷ್ಟ್ರಂ ವಿನಶ್ಯತಿ ॥೨॥

ರಾಜನ ಅನುಯಾಯಿಗಳು ಪಾಪಪ್ರವರ್ತಕನಾದ ತಮ್ಮ ರಾಜನನ್ನೇ ಅನುಸರಿಸಿ ನಡೆಯುತ್ತಾರೆ. ಹೀಗೆ ಉದ್ದಂಡರಾದ ಮನುಷ್ಯರಿಂದಲೇ ವ್ಯಾಪ್ತವಾಗುವ ಆ ರಾಷ್ಟ್ರವು ಬಹಳ ಬೇಗ ವಿನಾಶವನ್ನು ಹೊಂದುತ್ತದೆ.

ಯದ್ವೃತ್ತಮುಪಜೀವನ್ತಿ ಪ್ರಕೃತಿಸ್ಥಸ್ಯ ಮಾನವಾಃ ।
ತದೇವ ವಿಷಮಸ್ಥಸ್ಯ ಸ್ವಜನೋಽಪಿ ನ ಮೃಷ್ಯತೇ ॥೩॥

ರಾಜನು ಸುಖವಾಗಿರುವ ಸಮಯದಲ್ಲಿ ಅವನನ್ನೇ ಆಶ್ರಯಿಸಿ ಅಥವಾ ಅನುಸರಿಸಿ ರಾಜನ ಅಧರ್ಮಕಾರ್ಯಗಳನ್ನು ಪ್ರೋತ್ಸಾಹಿಸುತ್ತಿದ್ದ ಜನರೇ ರಾಜನು ವಿಷಮಾವಸ್ಥೆಯನ್ನು ಹೊಂದಿದಾಗ (ಕಷ್ಟಕ್ಕೆ ಸಿಕ್ಕಿದಾಗ) ಬಂಧುಗಳೇ ಆಗಿದ್ದರೂ ಸಹಿಸಿಕೊಳ್ಳುವುದಿಲ್ಲ. (ರಾಜನನ್ನು ದೂರಲು ಪ್ರಾರಂಭಿಸುತ್ತಾರೆ.)

ಸಾಹಸಪ್ರಕೃತಿರ್ಯತ್ರ ಕಿಂಚಿದುಲ್ಬಣಮಾಚರೇತ್ ।
ಅಶಾಸ್ತ್ರಲಕ್ಷಣೋ ರಾಜಾ ಕ್ಷಿಪ್ರಮೇವ ವಿನಶ್ಯತಿ ॥೪॥

ದುಃಸಾಹಸದ ಸ್ವಭಾವವನ್ನು ಹೊಂದಿರುವ, ಶಾಸ್ತ್ರಪ್ರಕಾರವಾಗಿ ನಡೆಯದ ರಾಜನು ಸ್ವಲ್ಪವೇ ಮಿತಿಮೀರಿದ ಸಾಹಸವನ್ನು ತೋರಿಸಿದರೂ ಬಹಳ ಬೇಗ ವಿನಾಶಹೊಂದುತ್ತಾನೆ.

ಯೋಽತ್ಯನ್ತಾಚರಿತಾಂ ವೃತ್ತಿಂ ಕ್ಷತ್ರಿಯೋ ನಾನುವರ್ತತೇ ।
ಜಿತಾನಾಮಜಿತಾನಾಂ ಚ ಕ್ಷತ್ರಧರ್ಮಾದಪೈತಿ ಸಃ ॥೫॥

ಪರಾಜಿತರಾಗಿರುವ ಶತ್ರುಗಳ ವಿಷಯದಲ್ಲಿಯೂ, ಜಿತರಾಗದೇ

ಮಧ್ಯಸ್ಥರಾಗಿರುವವರ ವಿಷಯದಲ್ಲಿಯೂ ಅತ್ಯಂತವಾಗಿ (ಅನೂಚಾನವಾಗಿ) ಆಚರಿಸಲ್ಪಡುತ್ತಿದ್ದ ವ್ಯವಹಾರವನ್ನು ಯಾವ ಕ್ಷತ್ರಿಯನು ಅನುಸರಣೆ ಮಾಡುವುದಿಲ್ಲವೋ–ಅವನು ಬಹಳ ಬೇಗ ವಿನಾಶಹೊಂದುತ್ತಾನೆ.

ದ್ವಿಷನ್ತಂ ಕೃತಕಲ್ಯಾಣಂ ಗೃಹೀತ್ವಾ ನೃಪತಿಂ ರಣೇ ।
ಯೋ ನ ಮಾನಯತೇ ದ್ವೇಷಾತ್ಕ್ಷತ್ರಧರ್ಮಾದಪೈತಿ ಸಃ ॥೬॥

ಒಬ್ಬ ರಾಜನು ಹಿಂದೆ ಉಪಕಾರಮಾಡಿರುತ್ತಾನೆ. ಯಾವುದೋ ಕಾರಣದಿಂದ ಶತ್ರುವಾಗುತ್ತಾನೆ. ಯುದ್ಧವು ಸಂಭವಿಸಿದಾಗ ಅವನು ಯುದ್ಧದಲ್ಲಿ ಬಂದಿಯಾಗುತ್ತಾನೆ. ಹಾಗೆ ಬಂದಿಯಾದ ರಾಜನನ್ನು ಹಿಂದಿನ ದ್ವೇಷದ ಕಾರಣದಿಂದ ಯಾವ ರಾಜನು ಗೌರವಿಸುವುದಿಲ್ಲವೋ–ಅಂತಹ ರಾಜನು ಕ್ಷತ್ರಧರ್ಮದಿಂದ ಚ್ಯುತನಾದನೆಂದೇ ತಿಳಿಯಬೇಕು. (ಪರಾಜಿತ ನಾದ ಶತ್ರುವನ್ನು ಅವಮಾನಿಸಬಾರದು.)

ಶಕ್ತಃ ಸ್ಯಾತ್ಸುಸುಖೋ ರಾಜಾ ಕುರ್ಯಾತ್ಕರಣಮಾಪದಿ ।
ಪ್ರಿಯೋ ಭವತಿ ಭೂತಾನಾಂ ನ ಚ ವಿಭ್ರಶ್ಯತೇ ಶ್ರಿಯಃ ॥೭॥

ರಾಜನು ಸಮರ್ಥನಾಗಿರಬೇಕು. ತಾನೂ ಸುಖವಾಗಿರಬೇಕು ; ಪ್ರಜೆಗಳನ್ನೂ ಸುಖವಾಗಿಟ್ಟಿರಬೇಕು. ಆಪತ್ತಿನಲ್ಲಿ ಸಿಕ್ಕಿಕೊಂಡಾಗ ನಿವಾರಣೆಗೆ ಪ್ರಯತ್ನಪಡಬೇಕು. ಹೀಗಿದ್ದರೆ ಅಂತಹ ರಾಜನು ಪ್ರಜೆಗಳಿಗೆ ಪ್ರಿಯನಾಗು ತ್ತಾನೆ. ರಾಜ್ಯಶ್ರೀಯಿಂದಲೂ ಭ್ರಷ್ಟನಾಗುವುದಿಲ್ಲ.

ಅಪ್ರಿಯಂ ಯಸ್ಯ ಕುರ್ವೀತ ಭೂಯಸ್ತಸ್ಯ ಪ್ರಿಯಂ ಚರೇತ್ ।
ನ ಚಿರೇಣ ಪ್ರಿಯಃ ಸ ಸ್ಯಾದ್ಯೋऽಪ್ರಿಯಃ ಪ್ರಿಯಮಾಚರೇತ್ ॥೮॥

ರಾಜನಾದವನು ಒಬ್ಬನಿಗೆ ಕಾರಣಾಂತರದಿಂದ ಅಪ್ರಿಯವಾದ ಕಾರ್ಯವನ್ನೇ ಮಾಡಿದ್ದರೂ ಮತ್ತೊಂದು ಸಮಯದಲ್ಲಿ ಪ್ರಿಯವಾದ ಕಾರ್ಯವನ್ನೇ ಮಾಡಬೇಕು. ಹಾಗೆ ಅಪ್ರಿಯನಾದವನಿಗೂ ಪ್ರಿಯವನ್ನು ಮಾಡುವುದರಿಂದ ಸ್ವಲ್ಪ ಸಮಯದಲ್ಲಿಯೇ ಅಪ್ರಿಯನೂ ಪ್ರಿಯನಾಗುತ್ತಾನೆ.

ಮೃಷಾವಾದಂ ಪರಿಹರೇತ್ಕುರ್ಯಾತ್ಪ್ರಿಯಮಯಾಚಿತಃ ।
ನ ಕಾಮಾನ್ನ ಚ ಸಂರಮ್ಭಾನ್ನ ದ್ವೇಷಾದ್ಧರ್ಮಮುತ್ಸೃಜೇತ್ ॥೯॥

ಸುಳ್ಳುಹೇಳುವುದನ್ನು ಸಂಪೂರ್ಣವಾಗಿ ಬಿಡಬೇಕು. ಪ್ರಾರ್ಥನೆ ಮಾಡದಿದ್ದರೂ ಇತರರಿಗೆ ಪ್ರಿಯವಾದ ಕಾರ್ಯವನ್ನೇ ಮಾಡಿಕೊಡಬೇಕು. ಕಾಮದಿಂದಾಗಲೀ, ಕ್ರೋಧದಿಂದಾಗಲೀ, ದ್ವೇಷದಿಂದಾಗಲೀ–ಧರ್ಮವನ್ನು ಪರಿತ್ಯಜಿಸಬಾರದು.

ನಾಪತ್ರಪೇತ ಪ್ರಶ್ನೇಷು ನಾವಿಭಾವ್ಯಾಂ ಗಿರಂ ಸೃಜೇತ್ ।
ನ ತ್ವರೇತ ನ ಚಾಸೂಯೇತ್ತಥಾ ಸಂಗೃಹ್ಯತೇ ಪರಃ ॥೧೦॥

ಯಾರಾದರೂ ಏನನ್ನಾದರೂ ಪ್ರಶ್ನಿಸಿದರೆ ಉತ್ತರಕೊಡಲು ಸಂಕೋಚಪಡಬಾರದು. (ನಾಚಿಕೆಪಡಬಾರದು.) ಅಸಂಭಾವ್ಯವಾದ ಯಾವ ಮಾತನ್ನೂ ಆಡಬಾರದು. ಯಾವ ಕಾರ್ಯವನ್ನೇ ಆಗಲೀ ಅವಸರದಿಂದ ಮಾಡಬಾರದು. ಯಾರ ವಿಷಯದಲ್ಲಿಯೂ ಅಸೂಯೆಪಡಬಾರದು. ಹೀಗೆ ವ್ಯವಹರಿಸಿದಲ್ಲಿ ಶತ್ರುವನ್ನಾದರೂ ವಶಪಡಿಸಿಕೊಳ್ಳಬಹುದು.

ಪ್ರಿಯೇ ನಾತಿಭೃಶಂ ಹೃಷ್ಯೇದಪ್ರಿಯೇ ನ ಚ ಸಂಜ್ವರೇತ್ ।
ನ ತಪ್ಯೇದರ್ಥಕೃಚ್ಛ್ರೇಷು ಪ್ರಜಾಹಿತಮನುಸ್ಮರನ್ ॥೧೧॥

ಪ್ರಿಯವುಂಟಾದಾಗ ಬಹಳ ಹೆಚ್ಚಾದ ಸಂತೋಷದಿಂದ ಹಿಗ್ಗಬಾರದು. ಅಪ್ರಿಯವುಂಟಾದಾಗ ಬಹಳ ಹೆಚ್ಚಾಗಿ ಚಿಂತಾಮಗ್ನನೂ ಆಗಬಾರದು. ಹಣದ ಮುಗ್ಗಟ್ಟು ಒದಗಿಬಂದಾಗ ಪ್ರಜೆಗಳ ಹಿತವನ್ನೇ ಗಮನದಲ್ಲಿಟ್ಟು ಕೊಂಡು ಆದ ನಷ್ಟಕ್ಕಾಗಿ ಪರಿತಾಪಪಡುತ್ತಲೇ ಇದ್ದುಬಿಡಬಾರದು.

ಯಃ ಪ್ರಿಯಂ ಕುರುತೇ ನಿತ್ಯಂ ಗುಣತೋ ವಸುಧಾಧಿಪಃ ।
ತಸ್ಯ ಕರ್ಮಾಣಿ ಸಿಧ್ಯನ್ತಿ ನ ಚ ಸಂತ್ಯಜ್ಯತೇ ಶ್ರಿಯಾ ॥೧೨॥

ಯಾವ ರಾಜನು ತನ್ನ ಸದ್ಗುಣಗಳಿಂದ ಎಲ್ಲ ಕಾಲಗಳಲ್ಲಿಯೂ ಸರ್ವರಿಗೂ ಪ್ರಿಯವನ್ನುಂಟುಮಾಡುವನೋ–ಅಂತಹ ರಾಜನ ಎಲ್ಲ ಕರ್ಮಗಳೂ ಸಿದ್ಧಿಸುತ್ತವೆ. ರಾಜ್ಯಲಕ್ಷ್ಮಿಯು ಅವನನ್ನು ಎಂದಿಗೂ ಬಿಟ್ಟುಹೋಗುವುದಿಲ್ಲ.

ನಿವೃತ್ತಂ ಪ್ರತಿಕೂಲೇಷು ವರ್ತಮಾನಮನುಪ್ರಿಯೇ ।
ಭಕ್ತಂ ಭಜೇತ ನೃಪತಿಃ ಸದೈವ ಸುಸಮಾಹಿತಃ ॥೧೩॥

ರಾಜನು ಸರ್ವದಾ ಸಾವಧಾನಚಿತ್ತನಾಗಿದ್ದುಕೊಂಡು ತನಗೆ ಪ್ರತಿ

ಕೂಲವಾದ ಕಾರ್ಯಗಳನ್ನು ಮಾಡದಿರುವ, ಯಾವಾಗಲೂ ಪ್ರಿಯವಾದ ಕಾರ್ಯವನ್ನೇ ಮಾಡುತ್ತಿರುವ ಸೇವಕನ ವಿಷಯದಲ್ಲಿ ಅನುರಕ್ತನಾಗಿರಬೇಕು.

ಅಪ್ರಕೀರ್ಣೇನ್ದ್ರಿಯಗ್ರಾಮಮತ್ಯನ್ತಾನುಗತಂ ಶುಚಿಮ್ ।
ಶಕ್ತಂ ಚೈವಾನುರಕ್ತಂ ಚ ಯುಞ್ಜ್ಯಾನ್ಮಹತಿ ಕರ್ಮಣಿ ॥೧೪॥

ಜಿತೇಂದ್ರಿಯನಾದವನನ್ನೂ, ತನ್ನನ್ನೇ ಬಹಳವಾಗಿ ಅನುಸರಿಸಿ ನಡೆಯುತ್ತಿರುವವನನ್ನೂ, ಪವಿತ್ರವಾದ ಆಚಾರ-ವ್ಯವಹಾರವುಳ್ಳವನನ್ನೂ, ಶಕ್ತನನ್ನೂ, ತನ್ನಲ್ಲಿಯೇ ಅನುರಕ್ತನಾಗಿರುವವನನ್ನೂ ದೊಡ್ಡ-ದೊಡ್ಡ ಕಾರ್ಯಗಳಲ್ಲಿ ನಿಯಮಿಸಬೇಕು.

ಏವಮೇತೈರ್ಗುಣೈರ್ಯುಕ್ತೋ ಯೋಽನುರಜ್ಯತಿ ಭೂಮಿಪಮ್ ।
ಭರ್ತುರರ್ಥೇಷ್ವಪ್ರಮತ್ತಂ ನಿಯುಞ್ಜ್ಯಾದರ್ಥಕರ್ಮಣಿ ॥೧೫॥

ಇದೇ ವಿಧವಾದ ಗುಣಗಳಿಂದ ಕೂಡಿರುವವನನ್ನೂ, ರಾಜನನ್ನು ಪ್ರಸನ್ನನನ್ನಾಗಿ ಮಾಡುವುದರಲ್ಲಿ ಸಮರ್ಥನಾಗಿರುವವನನ್ನೂ, ಒಡೆಯನ ಆರ್ಥಿಕವಿಷಯಗಳಲ್ಲಿ ಅಪ್ರಮತ್ತನಾಗಿರುವವನನ್ನೂ ಧನದ ವ್ಯವಸ್ಥೆಯಲ್ಲಿ ನಿಯೋಜಿಸಬೇಕು.

ಮೂಢಮೈನ್ದ್ರಿಯಕಂ ಲುಬ್ಧಮನಾರ್ಯಚರಿತಂ ಶಠಮ್ ।
ಅನತೀತೋಪಧಂ ಹಿಂಸ್ರಂ ದುರ್ಬುದ್ಧಿಮಬಹುಶ್ರುತಮ್ ॥೧೬॥

ತ್ಯಕ್ತೋದಾತ್ತಂ ಮದ್ಯರತಂ ದ್ಯೂತಸ್ತ್ರೀಮೃಗಯಾಪರಮ್ ।
ಕಾರ್ಯೇ ಮಹತಿ ಯುಞ್ಜಾನೋ ಹೀಯತೇ ನೃಪತಿಃ ಶ್ರಿಯಾ ॥

ಮೂಢನನ್ನೂ, ಇಂದ್ರಿಯಲೋಲುಪನನ್ನೂ, ಲೋಭಿಯನ್ನೂ, ದುರಾಚಾರಿಯನ್ನೂ, ಶಠನನ್ನೂ, ಕಪಟಿಯನ್ನೂ, ಹಿಂಸಕನನ್ನೂ, ದುರ್ಬುದ್ಧಿಯುಳ್ಳವನನ್ನೂ, ಶಾಸ್ತ್ರಜ್ಞಾನಶೂನ್ಯವನ್ನೂ, ಉದಾತ್ತವಾದ ಸ್ವಭಾವವಿಲ್ಲದವನನ್ನೂ, ಮದ್ಯಪಾನಾಸಕ್ತನನ್ನೂ, ಜೂಜಾಡುವವನನ್ನೂ, ಸ್ತ್ರೀಲಂಪಟನನ್ನೂ, ಬೇಟೆಯಾಡುವುದರಲ್ಲಿಯೇ ಆಸಕ್ತಿಯಿರುವವನನ್ನೂ– ಮಹತ್ವಪೂರ್ಣವಾದ ಕಾರ್ಯಗಳಲ್ಲಿ ನಿಯಮಿಸುವ ರಾಜನು ಬಹಳಬೇಗ ಲಕ್ಷ್ಮಿಯಿಂದ ವಿಹೀನನಾಗುತ್ತಾನೆ.

ರಕ್ಷಿತಾತ್ಮಾ ಚ ಯೋ ರಾಜಾ ರಕ್ಷ್ಯಾನ್ಯಶ್ಚಾನುರಕ್ಷತಿ ।
ಪ್ರಜಾಶ್ಚ ತಸ್ಯ ವರ್ಧನ್ತೇ ಧ್ರುವಂ ಚ ಮಹದಶ್ನುತೇ ॥೧೮॥

ಯಾವ ರಾಜನು ತನ್ನನ್ನೂ ರಕ್ಷಣೆಮಾಡಿಕೊಂಡು ರಕ್ಷಿಸಲ್ಪಡತಕ್ಕ ಪ್ರಜೆಗಳನ್ನೂ ರಕ್ಷಿಸುತ್ತಾನೆಯೋ–ಅಂತಹ ರಾಜನ ಪ್ರಜೆಗಳೂ ಅಭಿವೃದ್ಧಿಯನ್ನು ಹೊಂದುತ್ತಾರೆ ; ರಾಜನೂ ಮಹತ್ತಾದ ಫಲವನ್ನು ಹೊಂದುತ್ತಾನೆ.

ಯೇ ಕೇಚಿದ್ಭೂಮಿಪತಯಃ ಸರ್ವಾಸ್ತಾನನ್ವವೇಕ್ಷಯೇತ್ ।
ಸುಹೃದ್ಭಿರನಭಿಖ್ಯಾತೈಸ್ತೇನ ರಾಜಾತಿರಿಚ್ಯತೇ ॥೧೯॥

ಯಾವ ರಾಜನು ತನ್ನ ಅಪ್ರಸಿದ್ಧರಾದ (ಅಜ್ಞಾತರಾದ) ಸುಹೃದರ ಮೂಲಕ ರಹಸ್ಯದಲ್ಲಿ ಸಮಸ್ತಭೂಪತಿಗಳ ವಿಷಯಗಳನ್ನೂ ತಿಳಿದುಕೊಳ್ಳುವನೋ–ಅಂತಹ ರಾಜನು ಎಲ್ಲ ರಾಜರನ್ನೂ ಅತಿಶಯಿಸುತ್ತಾನೆ.

ಅಪಕೃತ್ಯ ಬಲಸ್ಥಸ್ಯ ದೂರಸ್ಥೋಽಸ್ಮೀತಿ ನಾಶ್ವಸೇತ್ ।
ಶ್ಯೇನಾಭಿಪತನೈರೇತೇ ನಿಪತನ್ತಿ ಪ್ರಮಾದ್ಯತಃ ॥೨೦॥

ಬಲಿಷ್ಠನಾದ ಶತ್ರುವೊಬ್ಬನಿಗೆ ತೊಂದರೆಯನ್ನು ಮಾಡಿ–'ನಾನು ಅವನಿಂದ ಬಹಳ ದೂರದಲ್ಲಿದ್ದೇನೆ'–ಎಂದು ಭಾವಿಸಿಕೊಂಡು ರಾಜನು ನಿಶ್ಚಿಂತನಾಗಿರಬಾರದು. ಅಂತಹ ಶತ್ರುಗಳು ಗಿಡಗಹಕ್ಕಿಯಂತೆ ನೀನು ಅಜಾಗರೂಕನಾಗಿರುವಾಗಲೇ ಎರಗಿ ಬೀಳುತ್ತಾರೆ.

ದೃಢಮೂಲಸ್ತ್ವದುಷ್ಟಾತ್ಮಾ ವಿದಿತ್ವಾ ಬಲಮಾತ್ಮನಃ ।
ಅಬಲಾನಭಿಯುಞ್ಜೀತ ನ ತು ಯೇ ಬಲವತ್ತರಾಃ ॥೨೧॥

ದುಷ್ಟಾತ್ಮನಲ್ಲದ ರಾಜನು ತಾನು ದೃಢಮೂಲನಾಗಿ (ತನ್ನ ರಾಷ್ಟ್ರವನ್ನು ಭದ್ರಪಡಿಸಿಕೊಂಡು) ತನ್ನ ಬಲವೆಷ್ಟಿದೆಯೆಂಬುದನ್ನು ಚೆನ್ನಾಗಿ ತಿಳಿದುಕೊಂಡು ತನಗಿಂತಲೂ ದುರ್ಬಲರಾದ ಶತ್ರುಗಳ ಮೇಲೆ ಯುದ್ಧಕ್ಕೆ ಹೋಗಬೇಕು. ತನಗಿಂತಲೂ ಬಲಿಷ್ಠರಾದವರ ಮೇಲೆ ಯುದ್ಧಕ್ಕೆ ಹೋಗಲೇಬಾರದು.

ವಿಕ್ರಮೇಣ ಮಹೀಂ ಲಬ್ಧ್ವಾ ಪ್ರಜಾ ಧರ್ಮೇಣ ಪಾಲಯೇತ್ ।
ಆಹವೇ ನಿಧನಂ ಕುರ್ಯಾದ್ರಾಜಾ ಧರ್ಮಪರಾಯಣಃ ॥೨೨॥

ಧರ್ಮಪರಾಯಣನಾದ ರಾಜನು ಪರಾಕ್ರಮದಿಂದ ಭೂಮಂಡಲವನ್ನು ಗೆದ್ದು ಧರ್ಮದಿಂದ ಪ್ರಜೆಗಳ ಪರಿಪಾಲನೆಯನ್ನು ಮಾಡಬೇಕು. ಯುದ್ಧದಲ್ಲಿ ಶತ್ರುಗಳನ್ನು ಸಂಹಾರಮಾಡಬೇಕು.

ಮರಣಾನ್ತಮಿದಂ ಸರ್ವಂ ನೇಹ ಕಿಞ್ಚಿದನಾಮಯಮ್ ।
ತಸ್ಮಾದ್ಧರ್ಮೇ ಸ್ಥಿತೋ ರಾಜಾ ಪ್ರಜಾ ಧರ್ಮೇಣ ಪಾಲಯೇತ್ ॥

ಈ ಪ್ರಪಂಚದಲ್ಲಿ ಎಲ್ಲ ವಸ್ತುಗಳೂ ಕಡೆಯಲ್ಲಿ ವಿನಾಶಹೊಂದತಕ್ಕುವುಗಳೇ ಆಗಿವೆ. ಯಾವ ವಸ್ತುವೇ ಆದರೂ ರೋಗರಹಿತವೂ ಆಗಿರುವುದಿಲ್ಲ ; ಅವಿನಾಶಿಯೂ ಆಗಿರುವುದಿಲ್ಲ. (ಧರ್ಮವೊಂದೇ ಅವಿನಾಶಿ). ಆದುದರಿಂದ ರಾಜನು ಧರ್ಮಮಾರ್ಗದಲ್ಲಿಯೇ ಇದ್ದುಕೊಂಡು ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡಬೇಕು.

ರಕ್ಷಾಧಿಕರಣಂ ಯುದ್ಧಂ ತಥಾ ಧರ್ಮಾನುಶಾಸನಮ್ ।
ಮನ್ತ್ರಚಿನ್ತಾ ಸುಖಂ ಕಾಲೇ ಪಞ್ಚಭಿರ್ವರ್ಧತೇ ಮಹೀ ॥೨೪॥

ರಕ್ಷಣಾಸ್ಥಾನಗಳಾದ ದುರ್ಗಾದಿಗಳ ರಚನೆ, ಯುದ್ಧ, ಧರ್ಮಾನುಸಾರವಾಗಿ ರಾಜ್ಯವಾಳುವುದು, ರಾಜರಹಸ್ಯಗಳ ಚಿಂತನೆ, ಯಥಾಸಮಯದಲ್ಲಿ ಎಲ್ಲರಿಗೂ ಸುಖವನ್ನು ಕಲ್ಪಿಸುವುದು–ಈ ಐದು ಕಾರ್ಯಗಳಿಂದ ರಾಜ್ಯವು ಅಭಿವೃದ್ಧಿಯನ್ನು ಹೊಂದುತ್ತದೆ.

ಏತಾನಿ ಯಸ್ಯ ಗುಪ್ತಾನಿ ಸ ರಾಜಾ ರಾಜಸತ್ತಮಃ ।
ಸತತಂ ವರ್ತಮಾನೋಽತ್ರ ರಾಜಾ ಧತ್ತೇ ಮಹೀಮಿಮಾಮ್ ॥೨೫॥

ಯಾವ ರಾಜನು ಮೇಲೆ ಹೇಳಿದ ಐದು ವಿಷಯಗಳನ್ನೂ ಗುಪ್ತವಾಗಿಯೂ, ಸುರಕ್ಷಿತವಾಗಿಯೂ ಇಟ್ಟುಕೊಂಡಿರುವನೋ–ಅಂತಹ ರಾಜನು ರಾಜರಲ್ಲಿಯೇ ಶ್ರೇಷ್ಠನಾಗುತ್ತಾನೆ. ಈ ಐದು ವಿಷಯಗಳ ಪಾಲನೆಯಲ್ಲಿಯೇ ಸರ್ವದಾ ನಿರತನಾಗಿರುವ ರಾಜನೇ ಈ ಭೂಮಂಡಲವನ್ನು ರಕ್ಷಣೆಮಾಡಲು ಸಮರ್ಥನಾಗುತ್ತಾನೆ.

ನೈತಾನ್ಯೇಕೇನ ಶಕ್ಯಾನಿ ಸಾತತ್ಯೇನಾನುವೀಕ್ಷಿತುಮ್ ।
ತೇಷು ಸರ್ವಂ ಪ್ರತಿಷ್ಠಾಪ್ಯ ರಾಜಾ ಭುಙ್ಕ್ತೇ ಚಿರಂ ಮಹೀಮ್ ॥

ರಾಜನೊಬ್ಬನೇ ಈ ಎಲ್ಲ ವ್ಯವಹಾರಗಳನ್ನೂ ನಿರಂತರವಾಗಿ ನಿರ್ವಹಿಸಲು ಸಾಧ್ಯವಾಗುವುದೇ ಇಲ್ಲ. ಆದುದರಿಂದ ಅವನು ಎಲ್ಲ ಅಧಿಕಾರಗಳನ್ನೂ ಯೋಗ್ಯರಾದ ಅಧಿಕಾರಿಗಳಲ್ಲಿ ಪ್ರತಿಷ್ಠಾಪಿಸಿದರೆ–ಅಂತಹ ರಾಜನು ಚಿರಕಾಲದವರೆಗೆ ರಾಜ್ಯವನ್ನು ಉಪಭುಂಜಿಸುತ್ತಾನೆ.

ದಾತಾರಂ ಸಂವಿಭಕ್ತಾರಂ ಮಾರ್ದವೋಪಗತಂ ಶುಚಿಮ್ ।
ಅಸಂತ್ಯಕ್ತಮನುಷ್ಯಂ ಚ ತಂ ಜನಾಃ ಕುರ್ವತೇ ನೃಪಮ್ ॥೨೭॥

ಯಾವ ಪುರುಷನು ದಾನಶೀಲನಾಗಿರುವನೋ, ಎಲ್ಲರಿಗೂ ಬೇಕಾಗುವ ಆವಶ್ಯಕವಸ್ತುಗಳನ್ನು ಸರಿಯಾಗಿ ವಿಭಾಗಮಾಡಿ ವಿತರಣೆ ಮಾಡುವನೋ, ಮೃದುಸ್ವಭಾವದವನೋ, ಶುದ್ಧವಾದ ಆಚಾರ-ವ್ಯವಹಾರಗಳುಳ್ಳವನೋ, ಯಾವುದೇ ಕಾರಣದಿಂದಲೂ ಪ್ರಜೆಗಳನ್ನು ತ್ಯಾಗಮಾಡುವುದಿಲ್ಲವೋ–ಅಂತಹವನನ್ನು ಜನರು ರಾಜನನ್ನಾಗಿ ಮಾಡಿಕೊಳ್ಳುತ್ತಾರೆ.

ಯಸ್ತು ನಿಃಶ್ರೇಯಸಂ ಶ್ರುತ್ವಾ ಜ್ಞಾನಂ ತತ್ಪ್ರತಿಪದ್ಯತೇ ।
ಆತ್ಮನೋ ಮತಮುತ್ಸೃಜ್ಯ ತಂ ಲೋಕೋಽನುವಿಧೀಯತೇ ॥೨೮॥

ಯಾವನು ಕಲ್ಯಾಣಕರವಾದ ಉಪದೇಶವನ್ನು ಕೇಳಿದನಂತರ-ತನ್ನ ಅಭಿಪ್ರಾಯವೇ ಸರಿ–ಎಂಬ ದುರಾಗ್ರಹವನ್ನು ಪರಿತ್ಯಜಿಸಿ ನಿಜವಾದ ಜ್ಞಾನವನ್ನು ಪಡೆದುಕೊಳ್ಳುವನೋ–ಅಂತಹವನನ್ನು ಲೋಕವೇ ಅನುಸರಿಸುತ್ತದೆ.

ಯೋಽರ್ಥಕಾಮಸ್ಯ ವಚನಂ ಪ್ರಾತಿಕೂಲ್ಯಾನ್ನ ಮೃಷ್ಯತೇ ।
ಶೃಣೋತಿ ಪ್ರತಿಕೂಲಾನಿ ಸರ್ವದಾ ವಿಮನಾ ಇವ ॥೨೯॥

ಅಗ್ರಾಮ್ಯಚರಿತಾಂ ವೃತ್ತಿಂ ಯೋ ನ ಸೇವೇತ ನಿತ್ಯದಾ ।
ಜಿತಾನಾಮಜಿತಾನಾಂ ಚ ಕ್ಷತ್ರಧರ್ಮಾದಪೈತಿ ಸಃ ॥೩೦॥

ಯಾವನು ತನ್ನ ಅಭಿಪ್ರಾಯಕ್ಕೆ ವಿರೋಧವಾಗಿದೆಯೆಂಬ ಕಾರಣದಿಂದ ತನಗೆ ಅರ್ಥಸಿದ್ಧಿಯನ್ನು ಅಪೇಕ್ಷಿಸುವ ಸುಹೃದನ ಮಾತುಗಳನ್ನು ಸಹಿಸುವುದಿಲ್ಲವೋ, ತನ್ನ ಅರ್ಥಸಿದ್ಧಿಗೆ ಪ್ರತಿಕೂಲವಾದ ಮಾತುಗಳನ್ನೇ

ಕೇಳುವನೋ, ಸರ್ವಕಾಲದಲ್ಲಿಯೂ ವಿಮನಸ್ಕನಂತಿರುವನೋ, ವಿದ್ವಾಂಸರಿಂದಲೂ–ಶಿಷ್ಯರಿಂದಲೂ ಆಚರಿಸಲ್ಪಟ್ಟ ಸದ್ವೃತ್ತಿಯನ್ನು ನಿತ್ಯವೂ ಸೇವಿಸುವುದಿಲ್ಲವೋ, ಪರಾಜಿತರಾದ ಮತ್ತು ಅಪರಾಜಿತರಾದ ರಾಜರ ವಿಷಯದಲ್ಲಿ ಪರಂಪರಾಗತವಾದ ಸಂಪ್ರದಾಯಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳುವುದಿಲ್ಲವೋ–ಅಂತಹ ಕ್ಷತ್ರಿಯನು ಕ್ಷತ್ರಿಯಧರ್ಮದಿಂದಲೇ ಚ್ಯುತನಾಗುತ್ತಾನೆ.

ನಿಗೃಹೀತಾದಮಾತ್ಯಾಚ್ಚ ಸ್ತ್ರೀಭ್ಯಶ್ಚೈವ ವಿಶೇಷತಃ ।
ಪರ್ವತಾದ್ವಿಷಮಾದ್ದುರ್ಗಾದ್ಧಸ್ತಿನೋಽಶ್ವಾತ್ಸರೀಸೃಪಾತ್ ।
ಏತೇಭ್ಯೋ ನಿತ್ಯಯುಕ್ತಃ ಸನ್ರಕ್ಷೇದಾತ್ಮಾನಮೇವ ತು ॥೩೧॥

ರಾಜನು ಸರ್ವಕಾಲದಲ್ಲಿಯೂ ಜಾಗರೂಕನಾಗಿರುತ್ತಾ–ಒಮ್ಮೆ ಬಂಧಿಸಲ್ಪಟ್ಟ ಮಂತ್ರಿಯ ದೆಸೆಯಿಂದಲೂ, ಅದರಲ್ಲಿಯೂ ವಿಶೇಷವಾಗಿ ಸ್ತ್ರೀಯರಿಂದಲೂ, ಕಡಿದಾದ ಪರ್ವತದಿಂದಲೂ, ದೊಡ್ಡದಾದ ಮತ್ತು ಆಳವಾದ ಹಳ್ಳದಿಂದಲೂ, ದುರ್ಗಮವಾದ ಪ್ರದೇಶದಿಂದಲೂ, ಪಳಗದ ಆನೆಯಿಂದಲೂ, ಕುದುರೆಯಿಂದಲೂ, ಸರ್ಪದಿಂದಲೂ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬೇಕು.

ಮುಖ್ಯಾನಮಾತ್ಯಾನ್ಯೋ ಹಿತ್ವಾ ನಿಹೀನಾನ್ಕುರುತೇ ಪ್ರಿಯಾನ್ ।
ಸ ವೈ ವ್ಯಸನಮಾಸಾದ್ಯ ಗಾಧಮಾರ್ತೋ ನ ವಿನ್ದತಿ ॥೩೨॥

ಯಾವ ರಾಜನು–ಮುಖ್ಯರಾದ ಮಂತ್ರಿಗಳನ್ನು ತ್ಯಜಿಸಿ ನೀಚರನ್ನು ಪ್ರಿಯರನ್ನಾಗಿ ಮಾಡಿಕೊಳ್ಳುತ್ತಾನೆಯೋ–ಅಂತಹ ರಾಜನು ಸಂಕಟವೆಂಬ ಸಮುದ್ರದಲ್ಲಿ ಬಿದ್ದು ಪೀಡಿತನಾಗಿ ಯಾವ ವಿಧವಾದ ಆಶ್ರಯವನ್ನೂ ಪಡೆಯುವುದಿಲ್ಲ.

ಯಃ ಕಲ್ಯಾಣಗುಣಾಞ್ಜ್ಞಾತೀನ್ಪ್ರದ್ವೇಷಾನ್ನೋ ಬುಭೂಷತಿ ।
ಅದೃಢಾತ್ಮಾ ದೃಢಕ್ರೋಧಃ ಸ ಮೃತ್ಯೋರ್ವಸತೇಽನ್ತಿಕೇ ॥೩೩॥

ಯಾವ ರಾಜನು ಕಲ್ಯಾಣಗುಣಸಂಪನ್ನರಾದ ಜ್ಞಾತಿ-ಬಾಂಧವರನ್ನು ದ್ವೇಷಿಸುತ್ತಾ ಅವರನ್ನು ಸಮ್ಮಾನಿಸುವುದಿಲ್ಲವೋ, ಚಂಚಲಚಿತ್ತನೋ, ದೃಢವಾದ ರೋಷವುಳ್ಳವನೋ (ದೀರ್ಘಕೋಪಿಯೋ)–ಅಂತಹ ರಾಜನು

ಮೃತ್ಯುವಿನ ಸಮೀಪದಲ್ಲಿಯೇ ಇರುತ್ತಾನೆ (ಬಹಳ ಬೇಗ ಮೃತ್ಯುವಶನಾಗುತ್ತಾನೆ.)

ಅಥ ಯೋ ಗುಣಸಮ್ಪನ್ನಾನ್ಹೃದಯಸ್ಯಾಪ್ರಿಯಾನಪಿ ।
ಪ್ರಿಯೇಣ ಕುರುತೇ ವಶ್ಯಾಂಶ್ಚಿರಂ ಯಶಸಿ ತಿಷ್ಠತಿ ॥೩೪॥

ಯಾವ ರಾಜನು ಮನಸ್ಸಿಗೆ ಅಪ್ರಿಯವನ್ನುಂಟುಮಾಡುವವರಾಗಿ ದ್ದರೂ ಗುಣಸಂಪನ್ನರಾಗಿರುವವರನ್ನು ಪ್ರೀತಿಜನಕವಾದ ಆಚರಣೆಯಿಂದ ತನ್ನವರನ್ನಾಗಿ ಮಾಡಿಕೊಳ್ಳುವನೋ–ಅಂತಹ ರಾಜನು ಬಹಳ ಕಾಲದವರೆಗೆ ಯಶೋವಂತನಾಗಿ ಬಾಳುತ್ತಾನೆ.

ನಾಕಾಲೇ ಪ್ರಣಯೇದರ್ಥಾನ್ನಾಪ್ರಿಯೇ ಜಾತು ಸಂಜ್ವರೇತ್ ।
ಪ್ರಿಯೇ ನಾತಿಭೃತಂ ತುಷ್ಯೇದ್ಯುಜ್ಯೇತಾರೋಗ್ಯಕರ್ಮಣಿ ॥೩೫॥

ರಾಜನಾದವನು ಅಕಾಲದಲ್ಲಿ ಧನಸಂಗ್ರಹಕ್ಕೆ ಪ್ರಯತ್ನವನ್ನು ಮಾಡಬಾರದು. ಯಾವುದಾದರೂ ಅಪ್ರಿಯವಾದ ಕಾರ್ಯವು ನಡೆದರೂ ಚಿಂತಾಮಗ್ನನಾಗಬಾರದು. (ಅದನ್ನೇ ಯೋಚಿಸುತ್ತಾ ಕೊರಗಬಾರದು.) ಪ್ರಿಯವಾದ ಕಾರ್ಯವು ನಡೆದರೆ ಹೆಚ್ಚು ಹಿಗ್ಗಬಾರದು. ನೀರೋಗದೃಢ ಕಾಯನಾಗಿರಲು ಪ್ರಯತ್ನಿಸಬೇಕು.

ಕೇ ಮಾನುರಕ್ತಾ ರಾಜಾನಃ ಕೇ ಭಯಾತ್ಸಮುಪಾಶ್ರಿತಾಃ ।
ಮಧ್ಯಸ್ಥದೋಷಾಃ ಕೇ ಚೈಷಾಮಿತಿ ನಿತ್ಯಂ ವಿಚಿನ್ತಯೇತ್ ॥೩೬॥

'ಯಾವ ರಾಜರು ನಮ್ಮಲ್ಲಿ ಅನುರಕ್ತರಾಗಿದ್ದಾರೆ? ಭಯದ ಕಾರಣದಿಂದಾಗಿ ಯಾವ ರಾಜರು ನಮ್ಮನ್ನಾಶ್ರಯಿಸಿದ್ದಾರೆ? ಇದರಲ್ಲಿ ಯಾರು ಮಧ್ಯಸ್ಥರಾಗಿದ್ದಾರೆ? ಯಾರು ನಮ್ಮ ಶತ್ರುಗಳಾಗಿದ್ದಾರೆ?'–ಹೀಗೆ ಅನುದಿನವೂ ರಾಜನು ಚಿಂತಿಸುತ್ತಿರಬೇಕು.

ನ ಜಾತು ಬಲವಾನ್ಭೂತ್ವಾ ದುರ್ಬಲೇ ವಿಶ್ವಸೇತ್ಕ್ವಚಿತ್ ।
ಭಾರುಣ್ಡಸದೃಶಾ ಹ್ಯೇತೇ ನಿಪತನ್ತಿ ಪ್ರಮಾದ್ಯತಃ ॥೩೭॥

ತಾನು ಬಲಿಷ್ಠನಾಗಿದ್ದರೂ ದುರ್ಬಲನಾದ ರಾಜನ ವಿಷಯದಲ್ಲಿ ವಿಶ್ವಾಸವನ್ನಿಡಬಾರದು. ಗಂಡಭೇರುಂಡ ಹಕ್ಕಿಗೆ ಸದೃಶರಾದ ಆ ದುರ್ಬಲರೇ ರಾಜನು ಪ್ರಮತ್ತನಾದ ಸಮಯದಲ್ಲಿ ಹಠಾತ್ತನೆ ಮೇಲೆರಗುತ್ತಾರೆ.

ಅಪಿ ಸರ್ವಗುಣೈರ್ಯುಕ್ತಂ ಭರ್ತಾರಂ ಪ್ರಿಯವಾದಿನಮ್ ।
ಅಭಿದ್ರುಹ್ಯತಿ ಪಾಪಾತ್ಮಾ ನ ತಸ್ಮಾದ್ವಿಶ್ವಸೇಜ್ಜನಾತ್ ॥೩೮॥

ಪಾಪಾತ್ಮನಾದ ಯಾವ ಮನುಷ್ಯನು ಸರ್ವಗುಣಸಂಪನ್ನನಾದ, ಪ್ರಿಯಭಾಷಿಯಾದ ತನ್ನ ಒಡೆಯನಿಗೆ ನಿಷ್ಕಾರಣವಾಗಿ ದ್ರೋಹವನ್ನೆಸಗುತ್ತಾನೆಯೋ–ಅಂತಹವನ ಮೇಲೆ ಯಾವುದೇ ಕಾರಣದಿಂದಲೂ ವಿಶ್ವಾಸವನ್ನಿಡಬಾರದು."

ಏವಂ ರಾಜೋಪನಿಷದಂ ಯಯಾತಿಃ ಸ್ಮಾಹ ನಾಹುಷಃ ।
ಮನುಷ್ಯವಿಜಯೇ ಯುಕ್ತೋ ಹನ್ತಿ ಶತ್ರೂನನುತ್ತಮಾನ್ ॥೩೯॥

ನಹುಷನ ಮಗನಾದ ಯಯಾತಿಯು ಮಾನವಕುಲಕ್ಕೇ ಹಿತವನ್ನುಂಟುಮಾಡುವ ಇಚ್ಛೆಯಿಂದ ರಾಜೋಪನಿಷತ್ತನ್ನು ಹೀಗೆ ಹೇಳಿರುವನು. ಯಾವನು ಈ ಉಪನಿಷತ್ತಿನಲ್ಲಿ ನಿಷ್ಠೆಯನ್ನಿಟ್ಟು ಇದರಲ್ಲಿ ಹೇಳಿರುವಂತೆಯೇ ಆಚರಿಸುವನೋ–ಅವನು ಮನುಷ್ಯವಿಜಯದಲ್ಲಿ ಯುಕ್ತನಾದರೆ ತನಗಿಂತಲೂ ಬಲಿಷ್ಠರಾದ ಶತ್ರುಗಳನ್ನೂ ಸಂಹರಿಸುವನು."

೯೩ನೆಯ ಅಧ್ಯಾಯವು ಮುಗಿಯಿತು.

೯೪ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ಮತ್ತು ರಾಜ್ಯದ ವ್ಯವಹಾರಗಳ ವಿಷಯವಾಗಿ ವಾಮದೇವನ ಉಪದೇಶ

ಧರ್ಮಜ! ವಾಮದೇವನು ಹೇಳುತ್ತಾನೆ :

ಅಯುದ್ಧೇನೈವ ವಿಜಯಂ ವರ್ಧಯೇದ್ವಸುಧಾಧಿಪಃ ।
ಜಘನ್ಯಮಾಹುರ್ವಿಜಯಂ ಯುದ್ಧೇನ ಚ ನರಾಧಿಪ ॥೧॥

"ನರೇಶ್ವರ! ರಾಜನಾದವನು ಯುದ್ಧಮಾಡದೆಯೇ ಸಾಮ-ದಾನ-ಭೇದೋಪಾಯಗಳಿಂದಲೇ ವಿಜಯವನ್ನು ಸಾಧಿಸಬೇಕು. ಯುದ್ಧದ ಮೂಲಕವಾಗಿ ವಿಜಯವನ್ನು ಸಾಧಿಸುವುದು ಕೀಳುಮಟ್ಟದ ರಾಜನೀತಿಯೆಂದು ತಿಳಿದವರು ಹೇಳುತ್ತಾರೆ.

ನ ಚಾಪ್ಯಲಬ್ಧಂ ಲಿಪ್ಸೇತ ಮೂಲೇ ನಾತಿದೃಢೇ ಸತಿ ।
ನ ಹಿ ದುರ್ಬಲಮೂಲಸ್ಯ ರಾಜ್ಞೋ ಲಾಭೋ ವಿಧೀಯತೇ ॥೨॥

ರಾಜ್ಯದ ಮೂಲವು ದೃಢವಾಗಿಲ್ಲದಿದ್ದರೆ ಅಲಬ್ಧವಾದುದನ್ನು (ಪರ ರಾಷ್ಟ್ರಗಳನ್ನು) ಪಡೆದುಕೊಳ್ಳಲು ಇಚ್ಛಿಪಡಬಾರದು. ದುರ್ಬಲವಾದ ಮೂಲವುಳ್ಳ ರಾಜನಿಗೆ ಅಂತಹ ರಾಜ್ಯಲಾಭವಾಗುವ ಸಾಧ್ಯತೆಯಿಲ್ಲ.

ಯಸ್ಯ ಸ್ಫೀತೋ ಜನಪದಃ ಸಮ್ಪನ್ನಃ ಪ್ರಿಯರಾಜಕಃ ।
ಸನ್ತುಷ್ಟಪುಷ್ಟಸಚಿವೋ ದೃಢಮೂಲಃ ಸ ಪಾರ್ಥಿವಃ ॥೩॥

ಯಾವ ರಾಜನ ದೇಶವು ಸಮೃದ್ಧಿಶಾಲಿಯಾಗಿರುವುದೋ, ಧನ-ಧಾನ್ಯಗಳಿಂದ ಸಂಪನ್ನವಾಗಿರುವುದೋ, ರಾಜನನ್ನು ಪ್ರೀತಿಸುವ ಹಿತಚಿಂತಕರಿಂದ ಕೂಡಿರುವುದೋ, ಯಾವ ರಾಜನಿಗೆ ಸಂತುಷ್ಟರಾಗಿಯೂ ಪುಷ್ಟರಾಗಿಯೂ ಇರುವ ಸಚಿವರಿರುವರೋ–ಅಂತಹ ರಾಜನು ದೃಢಮೂಲನೆನಿಸಿಕೊಳ್ಳುತ್ತಾನೆ.

ಯಸ್ಯ ಯೋಧಾಃ ಸುಸಂತುಷ್ಟಾಃ ಸಾನ್ತ್ವಿತಾಃ ಸೂಪಧಾಸ್ಥಿತಾಃ ।
ಅಲ್ಪೇನಾಪಿ ಸ ದಣ್ಡೇನ ಮಹೀಂ ಜಯತಿ ಪಾರ್ಥಿವಃ ॥೪॥

ಯಾವ ರಾಜನ ಯೋಧರು ಸಂತುಷ್ಟರಾಗಿರುವರೋ, ರಾಜನಿಂದ ಸಾಂತ್ವನವನ್ನು (ಸಮಾಧಾನವನ್ನು) ಪಡೆಯುವರೋ, ಶತ್ರುಗಳನ್ನು ವಂಚಿಸುವುದರಲ್ಲಿ ಚತುರರೋ–ಅಂತಹ ರಾಜನು ಅಲ್ಪಸೈನ್ಯದಿಂದಲೇ ಭೂಮಂಡಲವನ್ನು ಜಯಿಸಲು ಸಮರ್ಥನಾಗುತ್ತಾನೆ.

ಪೌರಜಾನಪದಾ ಯಸ್ಯ ಭೂತೇಷು ಚ ದಯಾಲವಃ ।
ಸಧನಾ ಧಾನ್ಯವನ್ತಶ್ಚ ದೃಢಮೂಲಃ ಸ ಪಾರ್ಥಿವಃ ॥೫॥

ಯಾವ ರಾಜನ ನಗರದಲ್ಲಿ ಮತ್ತು ಗ್ರಾಮಗಳಲ್ಲಿ ವಾಸಮಾಡುವ ಜನರು ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ದಯಾಪರರಾಗಿರುವರೋ, ಧನವಂತರಾಗಿಯೂ ಧಾನ್ಯವಂತರಾಗಿಯೂ ಇರುವರೋ–ಅಂತಹ ರಾಜನು ರೂಢಮೂಲನೆನಿಸಿಕೊಳ್ಳುತ್ತಾನೆ.

ಪ್ರತಾಪಕಾಲಮಧಿಕಂ ಯದಾ ಮನ್ಯೇತ ಚಾತ್ಮನಃ ।
ತದಾ ಲಿಪ್ಸೇತ ಮೇಧಾವೀ ಪರಭೂಮಿಧನಾನ್ಯುತ ॥೬॥

ಬುದ್ಧಿವಂತನಾದ ರಾಜನು ತನ್ನ ಅಧಿಕವಾದ ಪ್ರತಾಪವನ್ನು ಪ್ರದರ್ಶಿಸಲು ಸರಿಯಾದ ಸಮಯವು ಒದಗಿಬಂದಿದೆಯೆಂಬುದನ್ನು ಖಚಿತಪಡಿಸಿಕೊಂಡು ಶತ್ರುರಾಜರ ದೇಶವನ್ನೂ ಧನವನ್ನೂ ಪಡೆದುಕೊಳ್ಳಲು ಪ್ರಯತ್ನಿಸಬಹುದು.

ಭೋಗೇಷೂದಯಮಾನಸ್ಯ ಭೂತೇಷು ಚ ದಯಾವತಃ ।
ವರ್ಧತೇ ತ್ವರಮಾಣಸ್ಯ ವಿಷಯೋ ರಕ್ಷಿತಾತ್ಮನಃ ॥೭॥

ಯಾವನ ಭೋಗ-ವೈಭವಗಳು ದಿನ-ದಿನಕ್ಕೂ ಅಭಿವೃದ್ಧಿಹೊಂದುತ್ತಿವೆಯೋ, ಯಾವನು ಸಕಲಪ್ರಾಣಿಗಳ ವಿಷಯದಲ್ಲಿಯೂ ದಯಾಪರನಾಗಿರುವನೋ, ದೇಶದಲ್ಲಿ ಮಾಡಬೇಕಾದ ಅಭಿವೃದ್ಧಿಕಾರ್ಯಗಳನ್ನು ಅತ್ಯಂತತ್ವರೆಯಿಂದ ಮಾಡುವನೋ, ಆತ್ಮರಕ್ಷಣೆಯನ್ನೂ ಮಾಡಿಕೊಂಡಿರುವನೋ–ಅಂತಹ ರಾಜರ ದೇಶವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತದೆ.

ತಕ್ಷೇದಾತ್ಮಾನಮೇವಂ ಸ ವನಂ ಪರಶುನಾ ಯಥಾ ।
ಯಃ ಸಮ್ಯಗ್ವರ್ತಮಾನೇಷು ಸ್ವೇಷು ಮಿಥ್ಯಾ ಪ್ರವರ್ತತೇ ॥೮॥

ಸದ್ವ್ಯವಹಾರಗಳನ್ನಿಟ್ಟುಕೊಂಡಿರುವ ಸ್ವಜನರ ವಿಷಯದಲ್ಲಿಯೇ ಯಾವನು ಮಿಥ್ಯಾಚಾರಿಯಾಗುವನೋ ಅಂತಹ ರಾಜನು–ಮರದ ಕಾಂಡದಿಂದಲೇ ಕೂಡಿರುವ ಕೊಡಲಿಯು ಅರಣ್ಯದಲ್ಲಿರುವ ಮರಗಳನ್ನೇ ಕತ್ತರಿಸುವಂತೆ–ತನ್ನನ್ನೇ ತಾನು ವಿನಾಶಮಾಡಿಕೊಳ್ಳುತ್ತಾನೆ. (ಕುಲಕ್ಕೆ ಮೃತ್ಯು ಕೊಡಲಿಕಾವು–ಎಂಬಂತೆ ಆತ್ಮನಾಶಕ್ಕೇ ಕಾರಣನಾಗುತ್ತಾನೆ.)

ನೈವ ದ್ವಿಷನ್ತೋ ಹೀಯನ್ತೇ ರಾಜ್ಞೋ ನಿತ್ಯಮನಿಘ್ನತಃ ।
ಕ್ರೋಧಂ ನಿಹನ್ತುಂ ಯೋ ವೇದ ತಸ್ಯ ದ್ವೇಷ್ಟಾ ನ ವಿದ್ಯತೇ ॥೯॥

ದ್ವೇಷಿಗಳನ್ನು ಯಾವಾಗಲೂ ಶಿಕ್ಷಿಸದೇ ಇರುವ ರಾಜನ ದ್ವೇಷಿಗಳು ಯಾವಾಗಲೂ ವಿನಾಶವನ್ನು ಹೊಂದುವುದೇ ಇಲ್ಲ. ದ್ವೇಷಿಗಳನ್ನು ದಂಡಿಸದಿದ್ದರೆ ದ್ವೇಷಿಗಳು ಹೆಚ್ಚುತ್ತಾರೆಯೇ ಹೊರತು ಕಡಿಮೆಯಾಗುವುದಿಲ್ಲ. ಯಾವನು ಕ್ರೋಧವನ್ನು ನಿಯಂತ್ರಿಸಲು ತಿಳಿದಿರುವನೋ–ಅವನಿಗೆ ದ್ವೇಷಿಗಳೇ ಇರುವುದಿಲ್ಲ.

ಯದಾರ್ಯಜನವಿದ್ವಿಷ್ಟಂ ಕರ್ಮ ತನ್ನಾಚರೇದ್ಬುಧಃ ।
ಯತ್ಕಲ್ಯಾಣಮಭಿಧ್ಯಾಯೇತ್ತತ್ರಾತ್ಮಾನಂ ನಿಯೋಜಯೇತ್ ॥೧೦॥

ಶ್ರೇಷ್ಠರಾದ ಪುರುಷರು ಯಾವ ಕಾರ್ಯವನ್ನು ಮಾಡಕೂಡದೆಂದು ಹೇಳಿರುವರೋ–ಅಂತಹ ಕಾರ್ಯವನ್ನು ವಿದ್ವಾಂಸನಾದವನು ಮಾಡಲೇ ಬಾರದು. ಯಾವ ಕಾರ್ಯವು ಎಲ್ಲರಿಗೂ ಕಲ್ಯಾಣಕಾರಿಯಾಗುವುದೋ–ಆ ಕಾರ್ಯವನ್ನು ಮಾಡಲು ರಾಜನು ಪ್ರಯತ್ನಿಸಬೇಕು.

ನೈನಮನ್ಯೇಽವಜಾನನ್ತಿ ನಾತ್ಮನಾ ಪರಿತಪ್ಯತೇ ।
ಕೃತ್ಯಶೇಷೇಣ ಯೋ ರಾಜಾ ಸುಖಾನ್ಯನುಬುಭೂಷತಿ ॥೧೧॥

ಯಾವ ರಾಜನು ತನ್ನ ಕರ್ತವ್ಯಗಳನ್ನು ಪೂರ್ಣವಾಗಿ ಮಾಡಿದ ನಂತರ ಸುಖವನ್ನು ಅನುಭವಿಸಲು ಇಚ್ಛಿಸುವನೋ–ಅಂತಹ ರಾಜನನ್ನು ಯಾರೂ ಅನಾದರಣೆ ಮಾಡುವುದಿಲ್ಲ. ರಾಜನೂ ಪರಿತಪಿಸಬೇಕಾಗುವುದಿಲ್ಲ.

ಯಾವ ರಾಜನು ಪ್ರಜೆಗಳ ವಿಷಯದಲ್ಲಿ ಇಂತಹ ಸದ್ವ್ಯವಹಾರ ಗಳನ್ನಿಟ್ಟುಕೊಂಡಿರುವನೋ–ಅಂತಹ ರಾಜನು ಇಹಲೋಕ-ಪರಲೋಕ ಗಳೆರಡನ್ನೂ ಜಯಿಸಿ ವಿಜಯದಲ್ಲಿ ಪ್ರತಿಷ್ಠಿತನಾಗುತ್ತಾನೆ.”

ಯುಧಿಷ್ಠಿರ! ವಾಮದೇವನು ವಸುಮನಸನನ್ನು ಕುರಿತು ಹೀಗೆ ಹೇಳಿದನಂತರ ವಾಮದೇವನ ಉಪದೇಶದಂತೆಯೇ ವಸುಮನಸನು ನಡೆದುಕೊಂಡನು. ನೀನೂ ಕೂಡ ಹಾಗೆಯೇ ಆಚರಿಸಿದಲ್ಲಿ ಇಹಲೋಕ-ಪರಲೋಕಗಳೆರಡನ್ನೂ ಜಯಿಸುವೆ. ಇದರಲ್ಲಿ ಸಂಶಯವೇ ಇಲ್ಲ.”

೯೪ನೆಯ ಅಧ್ಯಾಯವು ಮುಗಿಯಿತು.

೯೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ವಿಜಯಾಭಿಲಾಷಿಯಾದ ರಾಜನ ಧರ್ಮಾನುಕೂಲವಾದ ವ್ಯವಹಾರಗಳು ಮತ್ತು ಯುದ್ಧನೀತಿ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಥ ಯೋ ವಿಜಿಗೀಷೇತ ಕ್ಷತ್ರಿಯಃ ಕ್ಷತ್ರಿಯಂ ಯುಧಿ ।
ಕಸ್ತಸ್ಯ ವಿಜಯೋ ಧರ್ಮೋ ಹ್ಯೇತಂ ಪೃಷ್ಟೋ ವದಸ್ವ ಮೇ ॥೧॥

"ಪಿತಾಮಹ! ಕ್ಷತ್ರಿಯರಾಜನೊಬ್ಬನು ಮತ್ತೊಬ್ಬ ಕ್ಷತ್ರಿಯನೊಡನೆ ಯುದ್ಧಮಾಡಿ ವಿಜಯಗಳಿಸಲು ಇಚ್ಛಿಸಿದಲ್ಲಿ ವಿಜಯಗಳಿಸಲು ಅವನು ಅನುಸರಿಸಬೇಕಾದ ಧರ್ಮವು ಯಾವುದು?–ನನ್ನ ಈ ಪ್ರಶ್ನೆಗೆ ನೀನು ಉತ್ತರಿಸು."

ಭೀಷ್ಮನು ಹೇಳುತ್ತಾನೆ :

ಸಸಹಾಯೋಽಸಹಾಯೋ ವಾ ರಾಷ್ಟ್ರಮಾಗಮ್ಯ ಭೂಮಿಪಃ ।
ಬ್ರೂಯಾದಹಂ ವೋ ರಾಜೇತಿ ರಕ್ಷಿಷ್ಯಾಮಿ ಚ ವಃ ಸದಾ ॥೨॥
ಮಮ ಧರ್ಮಬಲಿಂ ದತ್ತ ಕಿಂ ವಾ ಮಾಂ ಪ್ರತಿಪತ್ಸ್ಯಥ ।
ತೇ ಚೇತ್ತಮಾಗತಂ ತತ್ರ ವೃಣುಯುಃ ಕುಶಲಂ ಭವೇತ್ ॥೩॥

"ಧರ್ಮಜ! ವಿಜಯೇಚ್ಛುವಾದ ರಾಜನು ಸಹಾಯಕರೊಡನೆ ಕೂಡಿಕೊಂಡು ಅಥವಾ ಸಹಾಯಕರಿಲ್ಲದೇ ತಾನು ಜಯಿಸಲಿಚ್ಛಿಸಿರುವ ದೇಶಕ್ಕೆ ಹೋಗಿ ಅಲ್ಲಿರುವ ಪ್ರಜೆಗಳೊಡನೆ–"ನಾನು ನಿಮ್ಮ ರಾಜನಾಗುತ್ತೇನೆ. ನಿಮ್ಮನ್ನು ಸರ್ವಕಾಲದಲ್ಲಿಯೂ ರಕ್ಷಿಸುತ್ತೇನೆ. ಧರ್ಮಾನುಸಾರವಾಗಿ ನನಗೆ ತೆರಿಗೆಯನ್ನು ಕೊಡಿರಿ ಅಥವಾ ನನ್ನೊಡನೆ ಯುದ್ಧಮಾಡಿರಿ"–ಎಂದು ಹೇಳಬೇಕು.

ಹೀಗೆ ಹೇಳಿದನಂತರ ಅಲ್ಲಿಯ ಪ್ರಜೆಗಳು ಅವರಲ್ಲಿಗೆ ಹೋದ ರಾಜನನ್ನು ತಮ್ಮ ರಾಜನನ್ನಾಗಿ ಸ್ವೀಕರಿಸಿದರೆ ಸರ್ವರಿಗೂ ಕುಶಲವೇ ಆಗುತ್ತದೆ. ಹಾಗಲ್ಲದೇ :

ತೇ ಚೇದಕ್ಷತ್ರಿಯಾಃ ಸನ್ತೋ ವಿರುದ್ಧೇರನ್ಕಥಂಚನ ।
ಸರ್ವೋಪಾಯೈರ್ನಿಯನ್ತವ್ಯಾ ವಿಕರ್ಮಸ್ಥಾ ನರಾಧಿಪ ॥೪॥

ಅವರೇನಾದರೂ ಕ್ಷತ್ರಿಯರಾಗಿರದೆ ನಿನ್ನನ್ನು ವಿರೋಧಿಸಿ ಯುದ್ಧ ಮಾಡಲು ಬಂದ ಪಕ್ಷದಲ್ಲಿ, ವರ್ಣೋಚಿತವಾದ ಕರ್ಮದಲ್ಲಿ ತತ್ಪರರಾಗದೇ ಇರುವ ಅವರನ್ನು, ಸಾಮ-ದಾನಾದಿ ಚತುರುಪಾಯಗಳನ್ನೂ ಯೋಜಿಸಿ ದಮನಮಾಡಬೇಕು.

ಅಶಸ್ತ್ರಂ ಕ್ಷತ್ರಿಯಂ ಮತ್ವಾ ಶಸ್ತ್ರಂ ಗೃಹ್ಣಾತ್ಯಥಾಪರಃ ।
ತ್ರಾಣಾಯಾಪ್ಯಸಮರ್ಥಂ ತಂ ಮನ್ಯಮಾನಮತೀವ ಚ ॥೫॥

ಒಂದು ವೇಳೆ ಆ ದೇಶದಲ್ಲಿರುವ ಕ್ಷತ್ರಿಯನು ಶಸ್ತ್ರಹೀನನಾಗಿದ್ದರೆ–

ಆತ್ಮರಕ್ಷಣೆಯನ್ನು ಮಾಡಿಕೊಳ್ಳಲೂ ಅಸಮರ್ಥನೆಂದು ಅವನು ಭಾವಿಸಿ ಕೊಂಡಿದ್ದರೆ–ಈ ವಿಷಯವನ್ನು ತಿಳಿದ ಉಳಿದ ಕ್ಷತ್ರಿಯೇತರರಾದ ಜನರು ತಮ್ಮ ದೇಶವನ್ನು ರಕ್ಷಿಸುವ ಸಲುವಾಗಿ ಶಸ್ತ್ರಧಾರಣೆ ಮಾಡುತ್ತಾರೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಥ ಯಃ ಕ್ಷತ್ರಿಯೋ ರಾಜಾ ಕ್ಷತ್ರಿಯಂ ಪ್ರತ್ಯುಪಾವ್ರಜೇತ್ ।
ಕಥಂ ಸಮ್ಪ್ರತಿ ಯೋದ್ಧವ್ಯಸ್ತನ್ಮೇ ಬ್ರೂಹಿ ಪಿತಾಮಹ ॥೬॥

"ಒಬ್ಬ ಕ್ಷತ್ರಿಯರಾಜನು ಮತ್ತೊಬ್ಬ ಕ್ಷತ್ರಿಯರಾಜನ ಮೇಲೆ ಯುದ್ಧಕ್ಕೆ ಹೋಗಬೇಕಾದ ಸಂದರ್ಭದಲ್ಲಿ ಅವನೊಡನೆ ಹೇಗೆ ಯುದ್ಧಮಾಡಬೇಕು? ಈ ವಿಷಯವನ್ನು ತಿಳಿಸು."

ಭೀಷ್ಮನು ಹೇಳುತ್ತಾನೆ :

ನೈವಾಸನ್ನದ್ಧಕವಚೋ ಯೋದ್ಧವ್ಯಃ ಕ್ಷತ್ರಿಯೋ ರಣೇ ।
ಏಕ ಏಕೇನ ವಾಚ್ಯಶ್ಚ ವಿಸೃಜೇತಿ ಕ್ಷಿಪಾಮಿ ಚ ॥೭॥

"ಕ್ಷತ್ರಿಯನು ಕವಚವನ್ನು ತೊಡದೇ ಇರುವ ಕ್ಷತ್ರಿಯನೊಡನೆ ರಣ ರಂಗದಲ್ಲಿ ಯುದ್ಧಮಾಡಬಾರದು. ಯುದ್ಧಸಮಯದಲ್ಲಿ ಒಬ್ಬ ಯೋಧನು ಮತ್ತೊಬ್ಬ ಯೋಧನೊಡನೆ 'ನೀನು ನನ್ನ ಮೇಲೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸು. ನಾನೂ ನಿನ್ನ ಮೇಲೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತೇನೆ'– ಎಂದು ಹೇಳಿಯೇ ಶಸ್ತ್ರಗಳನ್ನು ಪ್ರಯೋಗಿಸಬೇಕು.

ಸ ಚೇತ್ಸನ್ನದ್ಧ ಆಗಚ್ಛೇತ್ಸನ್ನದ್ಧವ್ಯಂ ತತೋ ಭವೇತ್ ।
ಸ ಚೇತ್ಸಸೈನ್ಯ ಆಗಚ್ಛೇತ್ಸಸೈನ್ಯಸ್ತಮಥಾಹ್ವಯೇತ್ ॥೮॥

ಎದುರಾಳಿಯೇನಾದರೂ ಕವಚವನ್ನು ತೊಟ್ಟುಕೊಂಡು ಯುದ್ಧ ಸನ್ನದ್ಧನಾಗಿ ಬಂದಿದ್ದರೆ–ತಾನೂ ಕವಚವನ್ನು ತೊಟ್ಟುಕೊಂಡು ಯುದ್ಧ ಸನ್ನದ್ಧನಾಗಿ ನಿಲ್ಲಬೇಕು. ಎದುರಾಳಿಯೇನಾದರೂ ಸೈನ್ಯಸಮೇತನಾಗಿ ಯುದ್ಧಕ್ಕೆ ಬಂದರೆ–ತಾನೂ ಸೈನ್ಯಸಮೇತನಾಗಿಯೇ ಯುದ್ಧಮಾಡಬೇಕು.

ಸ ಚೇನ್ನಿಕೃತ್ಯಾ ಯುದ್ಧ್ಯೇತ ನಿಕೃತ್ಯಾ ಪ್ರತಿಯೋಧಯೇತ್ ।
ಅಥ ಚೇದ್ಧರ್ಮತೋ ಯುದ್ಧ್ಯೇದ್ಧರ್ಮೇಣೈವ ನಿವಾರಯೇತ್ ॥೯॥

ಎದುರಾಳಿಯು ಮೋಸದಿಂದ ಯುದ್ಧಮಾಡಲು ಪ್ರಾರಂಭಿಸಿದರೆ ತಾನೂ ಮೋಸದ ಯುದ್ಧವನ್ನೇ ಮಾಡಬೇಕು. ಅವನು ಧರ್ಮದ ಯುದ್ಧವನ್ನೇ ಮಾಡುತ್ತಿದ್ದರೆ ತಾನೂ ಧರ್ಮಯುದ್ಧದ ಮೂಲಕವಾಗಿಯೇ ಅವನನ್ನು ಎದುರಿಸಬೇಕು.

ನಾಶ್ವೇ ರಥಿನಂ ಯಾಯಾದುದಿಯಾದ್ರಥಿನಂ ರಥೀ ।
ವ್ಯಸನೇ ನ ಪ್ರಹರ್ತವ್ಯಂ ನ ಭೀತಾಯ ಜಿತಾಯ ಚ ॥೧೦॥

ಕುದುರೆಯ ಮೇಲೆ ಕುಳಿತು ರಥದಲ್ಲಿರುವವನನ್ನು ಆಕ್ರಮಣಮಾಡಬಾರದು. ರಥದಲ್ಲಿರುವ ಯೋಧನನ್ನು ರಥದಲ್ಲಿರುವ ಯೋಧನೇ ಎದುರಿಸಬೇಕು. ಶತ್ರುವು ಯಾರಾದರೂ ಸಂಕಟದಲ್ಲಿರುವಾಗ ಅವನ ಮೇಲೆ ಶಸ್ತ್ರಪ್ರಹಾರಮಾಡಬಾರದು. ಶತ್ರುವು ಭಯಪಟ್ಟಿರುವಾಗ ಮತ್ತು ಪರಾಜಿತನಾಗಿರುವಾಗ ಅಂತಹವನ ಮೇಲೂ ಶಸ್ತ್ರವನ್ನು ಪ್ರಯೋಗಿಸಬಾರದು.

ಇಷುರ್ಲಿಪ್ತೋ ನ ಕರ್ಣೀ ಸ್ಯಾದಸತಾಮೇತದಾಯುಧಮ್ ।
ಯಥಾರ್ಥಮೇವ ಯೋದ್ಧವ್ಯಂ ನ ಕ್ರುದ್ಧ್ಯೇತ ಜಿಘಾಂಸತಃ ॥೧೧॥

ಯುದ್ಧದಲ್ಲಿ ವಿಷಲಿಪ್ತವಾದ ಬಾಣವನ್ನೂ ಮತ್ತು * ಕರ್ಣೀ ಎಂಬ ಹೆಸರಿನ ಬಾಣವನ್ನೂ ಪ್ರಯೋಗಿಸಬಾರದು. ಇವು ಅಸತ್ಪುರುಷರ ಆಯುಧಗಳಾಗಿವೆ. ವಿಷಲಿಪ್ತವಾಗಿರದ ಬಾಣಗಳಿಂದಲೇ ಯಥಾರ್ಥರೀತಿಯಲ್ಲಿ ಯುದ್ಧಮಾಡಬೇಕು. ತನ್ನನ್ನು ಕೊಲ್ಲಲು ಇಚ್ಛಿಸಿದ ಪ್ರತಿಯೋಧಿಯ ಮೇಲೆ ಕೋಪಿಸಿಕೊಳ್ಳಬಾರದು. ಯುದ್ಧಧರ್ಮಾನುಸಾರವಾಗಿ ಅವನಿಗೆ ತಕ್ಕ ಪ್ರತೀಕಾರ ಮಾಡಬೇಕು.

ಸಾಧೂನಾಂ ತು ಮಿಥೋ ಭೇದಾತ್ಸಾಧುಶ್ಚೇದ್ವ್ಯಸನೀ ಭವೇತ್ ।
ನಿಷ್ಪ್ರಾಣೋ ನಾಭಿಹನ್ತವ್ಯೋ ನಾನಪತ್ಯಃ ಕಥಂಚನ ॥೧೨॥

ಇಬ್ಬರು ಸತ್ಪುರುಷರು ಯುದ್ಧಮಾಡುತ್ತಿರುವಾಗ ಇಬ್ಬರಲ್ಲಿ ಒಬ್ಬರು

---

* ಕರ್ಣೀ= ತುದಿಯಲ್ಲಿ ಕಿವಿಯ ಆಕಾರವಿರುವ ಬಾಣ. ಇದರಿಂದ ಬಹಳ ದೊಡ್ಡದಾಗಿ ಗಾಯವಾಗಬಹುದು. ಸಾಮಾನ್ಯವಾಗಿ ಒಂದೇ ಪ್ರಹಾರಕ್ಕೆ ಎದುರಾಳಿಯ ಪ್ರಾಣವೂ ಹೋಗಬಹುದು. ಆದುದರಿಂದ ಈ ಬಾಣವನ್ನೂ ಮತ್ತು ವಿಷಲಿಪ್ತವಾದ ಬಾಣವನ್ನೂ ಯುದ್ಧದಲ್ಲಿ ಸಾಮಾನ್ಯವಾಗಿ ಉಪಯೋಗಿಸುವುದನ್ನು ನಿಷೇಧಿಸಿದ್ದಾರೆ.

ಸಂಕಟಕ್ಕೊಳಗಾದರೆ–ಅವನನ್ನು (ಸಂಕಟಕ್ಕೊಳಗಾದವನನ್ನು) ಮತ್ತೊಬ್ಬನು ಪ್ರಹರಿಸಬಾರದು. ಬಲಹೀನನಾಗಿರುವವನನ್ನೂ (ಮೂರ್ಛಿತನಾಗಿರುವವನನ್ನೂ), ಮಕ್ಕಳಿಲ್ಲದವನನ್ನೂ ಯಾವುದೇ ಕಾರಣದಿಂದಲೂ ಸಂಹಾರಮಾಡಬಾರದು.

ಭಗ್ನಶಸ್ತ್ರೋ ವಿಪನ್ನಶ್ಚ ಕೃತ್ತಜ್ಯೋ ಹತವಾಹನಃ ।
ಚಿಕಿತ್ಸ್ಯಃ ಸ್ಯಾತ್ಸ್ವವಿಷಯೇ ಪ್ರಾಪ್ಯೋ ವಾ ಸ್ವಗೃಹೇ ಭವೇತ್ ॥೧೩॥

ಯಾವನ ಶಸ್ತ್ರವು (ಕತ್ತಿ–ಮುಂತಾದುವು) ಭಗ್ನವಾಗಿರುವುದೋ, ಯಾವನು ಆಪತ್ತಿನಲ್ಲಿರುವನೋ, ಯಾವನ ಧನುಸ್ಸಿನ ಶಿಂಜಿನಿಯು ಕತ್ತರಿಸಲ್ಪಟ್ಟಿರುವುದೋ, ಯಾವನ ವಾಹನಗಳು (ಕುದುರೆ-ಆನೆಗಳು) ಹತವಾಗಿರುವುವೋ–ಅಂತಹವನ ಮೇಲೆ ಶಸ್ತ್ರಪ್ರಯೋಗಮಾಡಬಾರದು. ತನ್ನ ರಾಜ್ಯದಲ್ಲಿಯೇ ಅವನಿಗೆ ಚಿಕಿತ್ಸೆಯನ್ನು ಮಾಡಿಸಬೇಕು ಅಥವಾ ಅವನನ್ನು ಅವನ ಮನೆಗೆ ಕಳುಹಿಸಿಕೊಡಬೇಕು.

ನಿರ್ವ್ರಣಶ್ಚ ಸ ಮೋಕ್ತವ್ಯ ಏಷ ಧರ್ಮಃ ಸನಾತನಃ ।
ತಸ್ಮಾದ್ಧರ್ಮೇಣ ಯೋದ್ಧವ್ಯಮಿತಿ ಸ್ವಾಯಮ್ಭುವೋಽಬ್ರವೀತ್ ॥೧೪॥

ಗಾಯಗಳು ವಾಸಿಯಾದ ಮೇಲೆ ಅವನನ್ನು ಬಿಟ್ಟುಬಿಡಬೇಕು. ಹೀಗೆ ಮಾಡುವುದು ಸನಾತನಧರ್ಮವಾಗಿದೆ. ಆದುದರಿಂದ ಧರ್ಮಾನುಸಾರವಾಗಿಯೇ ಯುದ್ಧಮಾಡಬೇಕೆಂದು ಸ್ವಾಯಂಭುವಮನುವು ಹೇಳಿದ್ದಾನೆ.

ಸತ್ಸು ನಿತ್ಯಃ ಸತಾಂ ಧರ್ಮಸ್ತಮಾಸ್ಥಾಯ ನ ನಾಶಯೇತ್ ।
ಯೋ ವೈ ಜಯತ್ಯಧರ್ಮೇಣ ಕ್ಷತ್ರಿಯೋ ಧರ್ಮಸಂಗರಃ ।
ಆತ್ಮಾನಮಾತ್ಮನಾ ಹನ್ತಿ ಪಾಪೋ ನಿಕೃತಿಜೀವನಃ ॥೧೫॥

ಸದ್ಧರ್ಮವು ಸತ್ಪುರುಷರಲ್ಲಿ ನಿತ್ಯವಾಗಿದೆ. (ಶಾಶ್ವತವಾಗಿರುತ್ತದೆ.) ಆ ಸದ್ಧರ್ಮವನ್ನು ಆಶ್ರಯಿಸಬೇಕು. ಧರ್ಮವನ್ನು ವಿನಾಶಗೊಳಿಸಬಾರದು. ಧರ್ಮಯುದ್ಧದಲ್ಲಿ ತತ್ಪರನಾಗಿರುವ ಯಾವ ಕ್ಷತ್ರಿಯನು ಅಧರ್ಮದ ಮೂಲಕವಾಗಿ ವಿಜಯವನ್ನು ಗಳಿಸುವನೋ–ವಂಚನೆಯೇ ಜೀವನವಾಗಿ ಉಳ್ಳ ಅಂತಹ ಪಾಪಿಷ್ಠನಾದ ಕ್ಷತ್ರಿಯನು ತನ್ನನ್ನು ತಾನೇ

ಕೊಂದುಕೊಳ್ಳುತ್ತಾನೆ. (ಧರ್ಮಯುದ್ಧವನ್ನು ಪ್ರಾರಂಭಿಸಿ ಅಧರ್ಮಯುದ್ಧದ ಮೂಲಕವಾಗಿ ಶತ್ರುವನ್ನು ಪರಾಜಯಗೊಳಿಸುವುದು ಆತ್ಮಹತ್ಯೆ ಮಾಡಿಕೊಂಡಂತಾಗುತ್ತದೆ.)

ಕರ್ಮ ಚೈತದಸಾಧೂನಾಮಸಾಧೂನ್ಸಾಧುನಾ ಜಯೇತ್ ।
ಧರ್ಮೇಣ ನಿಧನಂ ಶ್ರೇಯೋ ನ ಜಯಃ ಪಾಪಕರ್ಮಣಾ ॥೧೬॥

ಧರ್ಮಯುದ್ಧವನ್ನು ಆರಂಭಿಸಿ ಅಧರ್ಮದ ಮೂಲಕವಾಗಿ ವಿಜಯ ಗಳಿಸುವುದು ಪಾಪಾತ್ಮರ ಕಾರ್ಯವಾಗಿದೆ. ಶ್ರೇಷ್ಠಪುರುಷರು ದುಷ್ಟರನ್ನೂ ಧರ್ಮಮಾರ್ಗದಿಂದಲೇ ಜಯಿಸಲು ಇಚ್ಛಿಪಡುತ್ತಾರೆ. ಅಧರ್ಮಯುದ್ಧದ ಮೂಲಕವಾಗಿ ಜಯಗಳಿಸುವುದಕ್ಕಿಂತಲೂ ಧರ್ಮಯುದ್ಧದ ಮೂಲಕವಾಗಿ ನಿಧನಹೊಂದುವುದೇ ಶ್ರೇಯಸ್ಕರ.

ನಾಧರ್ಮಶ್ಚರಿತೋ ರಾಜನ್ಸದ್ಯಃ ಫಲತಿ ಗೌರಿವ ।
ಮೂಲಾನಿ ಚ ಪ್ರಶಾಖಾಶ್ಚ ದಹನ್ಸಮಧಿಗಚ್ಛತಿ ॥೧೭॥

ಯಾವ ರೀತಿಯಲ್ಲಿ ಭೂಮಿಯಲ್ಲಿ ಬಿತ್ತಿದ ಬೀಜವು ಸದ್ಯಃಫಲವನ್ನು ಕೊಡುವುದಿಲ್ಲವೋ–ಅದೇ ರೀತಿಯಲ್ಲಿ ಮಾಡಿದ ಪಾಪಕರ್ಮವು ಒಡನೆಯೇ ಫಲವನ್ನು ಕೊಡುವುದಿಲ್ಲ. ಫಲಕೊಡಲು ಪ್ರಾರಂಭವಾಯಿತೆಂದರೆ–ಮೂಲವನ್ನೂ, ಶಾಖೋಪಶಾಖೆಗಳನ್ನೂ ದಹಿಸಿ ಭಸ್ಮಮಾಡಿ ಬಿಡುತ್ತದೆ. (ಪಾಪಕರ್ಮಿಯ ವಂಶವೇ ನಾಶವಾಗಿಹೋಗುತ್ತದೆ.)

ಪಾಪೇನ ಕರ್ಮಣಾ ವಿತ್ತಂ ಲಬ್ಧ್ವಾ ಪಾಪಃ ಪ್ರಹೃಷ್ಯತಿ ।
ಸ ವರ್ಧಮಾನಃ ಸ್ತೇಯೇನ ಪಾಪಃ ಪಾಪೇ ಪ್ರಸಜ್ಜತಿ ॥೧೮॥

ನ ಧರ್ಮೋಽಸ್ತೀತಿ ಮನ್ವಾನಃ ಶುಚೀನವಹಸನ್ನಿವ ॥೧೯॥
ಅಶ್ರದ್ದಧಾನಶ್ಚ ಭವೇದ್ವಿನಾಶಮುಪಗಚ್ಛತಿ ।
ಸಮ್ಬದ್ಧೋ ವಾರುಣೈಃ ಪಾಶೈರಮರ್ತ್ಯ ಇವ ಮನ್ಯತೇ ॥೨೦॥

ಪಾಪಿಷ್ಠನು ಪಾಪಕರ್ಮಗಳಿಂದ ಧನವನ್ನು ಸಂಪಾದಿಸುತ್ತಾ ಸಂತೋಷಪಡುತ್ತಾನೆ. ಪಾಪಭೂಯಿಷ್ಠವಾದ ಕಳ್ಳತನದಿಂದಲೇ ಅಭಿವೃದ್ಧಿಗೆ ಬರುವ ಅವನು ಇನ್ನೂ ಹೆಚ್ಚಿನ ಪಾಪಕರ್ಮಗಳಲ್ಲಿ ಮುಳುಗಿ

ಹೋಗುತ್ತಾನೆ. ತನ್ನ ಸಂಪತ್ಸಮೃದ್ಧಿಯನ್ನು ನೋಡಿ ತಾನೇ ಸಂತೋಷ ಪಟ್ಟುಕೊಳ್ಳುತ್ತಾ–'ಧರ್ಮವೆಂದರೇನು? ಅದೆಲ್ಲಿದೆ? ಧರ್ಮವೂ ಇಲ್ಲ; ಕರ್ಮವೂ ಇಲ್ಲ'–ಎಂದು ಹೇಳುತ್ತಾ ಧರ್ಮಿಷ್ಠರನ್ನು ಅಪಹಾಸ್ಯಮಾಡುತ್ತಾನೆ. ಧರ್ಮಕಾರ್ಯಗಳಲ್ಲಿ ಅವನಿಗೆ ಸ್ವಲ್ಪವಾದರೂ ಶ್ರದ್ಧೆಯೇ ಇರುವುದಿಲ್ಲ. ಅವನು ತನ್ನನ್ನು ಅಮರನೆಂದೇ ಭಾವಿಸಿಕೊಳ್ಳುತ್ತಾನೆ. ವರುಣಪಾಶಗಳಿಂದ ಬಂಧಿತನಾಗುವ ಅವನು ಕಡೆಯಲ್ಲಿ ಎಲ್ಲವನ್ನೂ ಕಳೆದುಕೊಂಡು ವಿನಾಶವನ್ನು ಹೊಂದುತ್ತಾನೆ.

ಮಹಾದೃತಿರಿವಾಧ್ಮಾತಃ ಸುಕೃತೇ ನೈವ ವರ್ತತೇ ।
ತತಃ ಸಮೂಲೋ ಹ್ರಿಯತೇ ನದೀಂ ಕೂಲಾದಿವ ದ್ರುಮಃ ॥೨೧॥

ಯಾವ ರೀತಿಯಲ್ಲಿ ದೊಡ್ಡದಾದ ಚರ್ಮದ ಕೋಶವು (ಚರ್ಮದ ಚೀಲವು) ವಾಯುಪೂರಿತವಾದಾಗ ಉಬ್ಬಿಕೊಳ್ಳುತ್ತದೆಯೋ–ಅದೇ ರೀತಿಯಲ್ಲಿ ಪಾಪಿಷ್ಠನು ಪಾಪದ ಪೂರಣದಿಂದಾಗಿ ಉಬ್ಬಿಹೋಗಿರುತ್ತಾನೆ. ಆ ಪಾಪಿಷ್ಠನು ಪುಣ್ಯಕರ್ಮಗಳಲ್ಲಿ ಪ್ರವೃತ್ತನಾಗುವುದೇ ಇಲ್ಲ. ನದಿಯ ತೀರದಲ್ಲಿರುವ ವೃಕ್ಷವು ಪ್ರವಾಹದ ರಭಸಕ್ಕೆ ಬುಡಸಹಿತವಾಗಿ ಉರುಳಿ ನದಿಯಲ್ಲಿ ತೇಲಿಹೋಗುವಂತೆ–ಪಾಪದ ಕೊಡವು ತುಂಬಿ ತುಳುಕಿದಾಗ ಪಾಪಿಷ್ಠನು ಸಮೂಲವಾಗಿ ಹಾಳಾಗುತ್ತಾನೆ.

ಅಥೈನಮಭಿನಿನ್ದನ್ತಿ ಭಿನ್ನಂ ಕುಮ್ಭಮಿವಾಶ್ಮನಿ ।
ತಸ್ಮಾದ್ಧರ್ಮೇಣ ವಿಜಯಂ ಕೋಶಂ ಲಿಪ್ಸೇತ ಭೂಮಿಪಃ ॥೨೨॥

ಕಲ್ಲಿನ ಮೇಲೆ ಕುಕ್ಕಿದ ಗಡಿಗೆಯಂತೆ–ಆ ಪಾಪಿಷ್ಠನು ಹಾಳಾಗಿ ಹೋಗುತ್ತಾನೆ. ಅವನು ಹಾಳಾಗಿಹೋದನಂತರ ಎಲ್ಲರೂ ಅವನನ್ನು ನಿಂದಿಸುತ್ತಾರೆ. ಆದುದರಿಂದ ರಾಜನಾದವನು ವಿಜಯವನ್ನೂ ಮತ್ತು ಐಶ್ವರ್ಯವನ್ನೂ ಧರ್ಮದ ಮೂಲಕವಾಗಿಯೇ ಪಡೆದುಕೊಳ್ಳಲು ನಿರ್ಧರಿಸಬೇಕು."

ಅಧ್ಯಾಯದ ಅಂತ್ಯ:
೯೫ನೆಯ ಅಧ್ಯಾಯವು ಮುಗಿಯಿತು.

ರಾಜನ ಕಪಟರಹಿತವಾದ, ಧರ್ಮಯುಕ್ತವಾದ ವ್ಯವಹಾರದ ಪ್ರಶಂಸೆ

ಜನಮೇಜಯಮಹಾರಾಜ! ಭೀಷ್ಮನು ಹೇಳುತ್ತಾನೆ :

ನಾಧರ್ಮೇಣ ಮಹೀಂ ಜೇತುಂ ಲಿಪ್ಸೇತ ಜಗತೀಪತಿಃ ।
ಅಧರ್ಮವಿಜಯಂ ಲಬ್ಧ್ವಾ ಕೋ ನು ಮನ್ಯೇತ ಭೂಮಿಪಃ ॥೧॥

“ಯುಧಿಷ್ಠಿರ! ಭೂಪಾಲನು ಯಾವಾಗಲೂ ಯಾವುದೇ ಕಾರಣದಿಂದಲೂ ಅಧರ್ಮಮಾರ್ಗದಿಂದ ಭೂಮಿಯನ್ನು ಜಯಿಸಲು ಇಚ್ಛಿಪಡಬಾರದು. ಅಧರ್ಮಮಾರ್ಗದಿಂದ ವಿಜಯವನ್ನು ಗಳಿಸಿದವನಿಗೆ ತಾನು ಭೂಪಾಲನೆಂದು ಭಾವಿಸಿಕೊಳ್ಳಲು ಹೇಗೆ ತಾನೇ ಸಾಧ್ಯವಾಗುತ್ತದೆ?

ಅಧರ್ಮಯುಕ್ತೋ ವಿಜಯೋ ಹ್ಯಧ್ರುವೋಽಸ್ವರ್ಗ್ಯ ಏವ ಚ ।
ಸಾದಯತ್ಯೇಷ ರಾಜಾನಂ ಮಹೀಂ ಚ ಭರತರ್ಷಭ ॥೨॥

ಅಧರ್ಮಮಾರ್ಗದಿಂದ ಪಡೆಯುವ ವಿಜಯವು ಶಾಶ್ವತವಾಗಿಯೂ ಉಳಿಯುವುದಿಲ್ಲ. ಅದು ಸ್ವರ್ಗಪ್ರಾಪಕವೂ ಆಗುವುದಿಲ್ಲ. ಅಂತಹ ಅಧರ್ಮವಿಜಯವು ರಾಜನನ್ನೂ–ರಾಷ್ಟ್ರವನ್ನೂ ವಿನಾಶಗೊಳಿಸುತ್ತದೆ.

ವಿಶೀರ್ಣಕವಚಂ ಚೈವ ತವಾಸ್ಮೀತಿ ಚ ವಾದಿನಮ್ ।
ಕೃತಾಞ್ಜಲಿಂ ನ್ಯಸ್ತಶಸ್ತ್ರಂ ಗೃಹೀತ್ವಾ ನ ಹಿ ಹಿಂಸಯೇತ್ ॥೩॥

ಕವಚವು ಹರಿದುಹೋಗಿರುವವರನ್ನೂ, ‘ನಿನಗೆ ಶರಣಾಗಿದ್ದೇನೆ. ನಾನು ನಿನ್ನವನಾಗಿದ್ದೇನೆ. ನನ್ನನ್ನು ಕೊಲ್ಲಬೇಡ’ ಎಂಬುದಾಗಿ ಯಾಚಿಸುವವನನ್ನೂ, ಕೈಜೋಡಿಸಿ ಪ್ರಾರ್ಥಿಸುವವನನ್ನೂ, ಶಸ್ತ್ರವನ್ನು ಕೆಳಗೆ ಹಾಕಿದವನನ್ನೂ ಬಂಧಿಸಿ ಹಿಂಸಿಸಬಾರದು.

ಬಲೇನ ವಿಜಿತೋ ಯಶ್ಚ ನ ತಂ ಯುಧ್ಯೇತ ಭೂಮಿಪಃ ।
ಸಂವತ್ಸರಂ ವಿಪ್ರಣಯೇತ್ತಸ್ಮಾಜ್ಜಾತಃ ಪುನರ್ಭವೇತ್ ॥೪॥

ಚತುರಂಗಬಲಗಳ ಮೂಲಕವಾಗಿ ಯಾವ ರಾಜನು ಪರಾಜಿತನಾಗುವನೋ–ಅವನೊಡನೆ ಪುನಃ ಯುದ್ಧವನ್ನು ಮಾಡಬಾರದು. ಪರಾಜಿತನಾದ

ರಾಜನನ್ನು ಒಂದು ವರ್ಷ ಪರ್ಯಂತವಾಗಿ ವಿಶೇಷವಾದ ಪುರಸ್ಕಾರವನ್ನೇ ಕೊಟ್ಟು ಬಂಧನದಲ್ಲಿಟ್ಟಿರಬೇಕು. ಇದರಿಂದ ಅವನಿಗೆ ಪುನರ್ಜನ್ಮ ವಾದಂತಾಗುತ್ತದೆ. ವಿಜಯವನ್ನು ಗಳಿಸಿದ ರಾಜನಿಗೆ ಅವನು ಪುತ್ರಸಮಾನ ನಾಗುತ್ತಾನೆ. ಒಂದುವರ್ಷ ಕಳೆದನಂತರ ಅವನನ್ನು ಬಂಧನದಿಂದ ವಿಮೋಚನೆ ಮಾಡಬಹುದು.

ನಾರ್ವಾಕ್ಸಂವತ್ಸರಾತ್ಕನ್ಯಾ ಪ್ರಷ್ಟವ್ಯಾ ವಿಕ್ರಮಾಹೃತಾ ।
ಏವಮೇವ ಧನಂ ಸರ್ವಂ ಯಚ್ಚಾನ್ಯತ್ಸಹಸಾಹೃತಮ್ ॥೫॥

ರಾಜನು ತನ್ನ ಪರಾಕ್ರಮದಿಂದ ಕನ್ಯೆಯೊಬ್ಬಳನ್ನು ಸೆಳೆದುತಂದಿದ್ದರೆ ಅವಳನ್ನು ಅರಮನೆಯಲ್ಲಿ ಪ್ರತ್ಯೇಕವಾಗಿಟ್ಟಿರಬೇಕು. ಒಂದು ವರ್ಷದವರೆಗೆ ಅವಳನ್ನು ಯಾವ ವಿಷಯವಾಗಿಯೂ ಪ್ರಶ್ನಿಸಬಾರದು. (ಒಂದು ವರ್ಷಕಳೆದನಂತರ ಅವಳೇನಾದರೂ ತನ್ನ ಬಳಿಯಲ್ಲಿ ಇರಲು ಇಚ್ಛಿಸದಿದ್ದಲ್ಲಿ ಅವಳ ಇಚ್ಛೆಯಿದ್ದೆಡೆಗೆ ಅವಳನ್ನು ಕಳುಹಿಸಿಕೊಟ್ಟುಬಿಡಬೇಕು.) ಅದೇ ರೀತಿಯಲ್ಲಿ ಶತ್ರುವಿನಿಂದ ಬಲಾತ್ಕಾರವಾಗಿ ಅಪಹರಿಸಿಕೊಂಡು ಬಂದ ಐಶ್ವರ್ಯಾದಿಗಳ ವಿಷಯದಲ್ಲಿಯೂ ನಡೆದುಕೊಳ್ಳಬೇಕು. (ಒಂದು ವರ್ಷವು ಕಳೆದನಂತರ ಅಪಹರಿಸಿಕೊಂಡು ಬಂದಿದ್ದ ಐಶ್ವರ್ಯವನ್ನು ಹಿಂದಿರುಗಿಸಬೇಕು.)

ನ ತು ವಧ್ಯಧನಂ ತಿಷ್ಠೇತ್ಪಿಬೇಯುರ್ಬ್ರಾಹ್ಮಣಾಃ ಪಯಃ ।
ಯುಞ್ಜೀರನ್ನಪ್ಯನಡುಹಃ ಕ್ಷನ್ತವ್ಯಂ ವಾ ತದಾ ಭವೇತ್ ॥೬॥

ಅಪರಾಧಮಾಡಿದವನಿಂದ ಧನವನ್ನು ತಂದುದೇ ಆದರೆ ರಾಜನು ಆ ಧನವನ್ನು ತಾನೇ ಉಪಯೋಗಿಸಿಕೊಳ್ಳಬಾರದು. (ಸಾರ್ವಜನಿಕವಾದ ಕಾರ್ಯಗಳಿಗೆ ಉಪಯೋಗಿಸಬೇಕು.) ಅಪರಾಧಮಾಡಿದವನಿಂದ ಮುಟ್ಟುಗೋಲು ಹಾಕಿದ ಹಸುವಿನ ಹಾಲನ್ನು ತಾನು ಕುಡಿಯಬಾರದು. ಬ್ರಾಹ್ಮಣರಿಗೆ ಕುಡಿಯಲು ಕೊಡಬೇಕು. ಅಪರಾಧಮಾಡಿದವನಿಂದ ಎತ್ತನ್ನೇನಾದರೂ ದಂಡರೂಪದಲ್ಲಿ ತಂದರೆ ಬ್ರಾಹ್ಮಣರು ಕುಳಿತ ಗಾಡಿಗಳನ್ನೆಳೆಯಲು ಉಪಯೋಗಿಸಬೇಕು. ತನಗಾಗಿ ಉಪಯೋಗಿಸಿಕೊಳ್ಳಬಾರದು. ಅಪರಾಧಿಯನ್ನು ಕ್ಷಮಿಸಿ ಅವನಿಗಾದರೂ ಎಲ್ಲ ವಸ್ತುಗಳನ್ನೂ ಹಿಂದಿರುಗಿಸಬಹುದು.

ರಾಜ್ಞಾ ರಾಜ್ಞೈವ ಯೋದ್ಧವ್ಯಸ್ತಥಾ ಧರ್ಮೋ ವಿಧೀಯತೇ ।
ನಾನ್ಯೋ ರಾಜಾನಮಭ್ಯಸ್ಯೇದರಾಜನ್ಯಃ ಕಥಞ್ಚನ ॥೭॥

ರಾಜನು ರಾಜನೊಡನೆಯೇ ಯುದ್ಧಮಾಡಬೇಕೆಂದು ಧರ್ಮವು ನಿರ್ಣಯಿಸಿದೆ. ರಾಜನೋ ಅಥವಾ ರಾಜಕುಮಾರನೋ ಅಲ್ಲದವನು ರಾಜನ ಮೇಲೆ ಯಾವುದೇ ಕಾರಣದಿಂದಲೂ ಶಸ್ತ್ರಪ್ರಹಾರವನ್ನು ಮಾಡಬಾರದು.

ಅನೀಕಯೋಃ ಸಂಹತಯೋರ್ಯದೀಯಾದ್ಬ್ರಾಹ್ಮಣೋಽನ್ತರಾ ।
ಶಾನ್ತಿಮಿಚ್ಛನ್ನುಭಯತೋ ನ ಯೋದ್ಧವ್ಯಂ ತದಾ ಭವೇತ್ ॥೮॥

ಉಭಯಪಕ್ಷಗಳ ಸೈನ್ಯಗಳೂ ಯುದ್ಧಕ್ಕೆ ಸನ್ನದ್ಧವಾಗಿರುವ ಸಮಯ ದಲ್ಲಿ ಬ್ರಾಹ್ಮಣನೇನಾದರೂ ಸಂಧಾನಮಾಡಿಸುವ ಕಾರಣದಿಂದ ಮಧ್ಯದಲ್ಲಿ ಪ್ರವೇಶಿಸಿದರೆ–ಎರಡು ಪಕ್ಷಗಳೂ ಒಡನೆಯೇ ಯುದ್ಧವನ್ನು ನಿಲ್ಲಿಸಬೇಕು. ಮುಂದೆ ಯುದ್ಧಮಾಡಕೂಡದು.

ಮರ್ಯಾದಾಂ ಶಾಶ್ವತೀಂ ಭಿನ್ದ್ಯಾದ್ಬ್ರಾಹ್ಮಣಂ ಯೋಽಭಿ-
ಲಜ್ಜಯೇತ್ ।
ಅಥ ಚೇಲ್ಲಜ್ಜಯೇದೇವ ಮರ್ಯಾದಾಂ ಕ್ಷತ್ರಿಯಬ್ರುವಃ ।
ಅಸಂಖ್ಯೇಯಸ್ತದೂರ್ಧ್ವಂ ಸ್ಯಾದನಾದೇಯಶ್ಚ ಸಂಸದಿ ॥೯॥

ಎದುರು-ಬದುರಾಗಿ ನಿಂತು ಯುದ್ಧಮಾಡಲು ಸಿದ್ಧರಾಗಿರುವ ಇಬ್ಬರು ಕ್ಷತ್ರಿಯರಲ್ಲಿ–ಶಾಂತಿಗಾಗಿ ಮಧ್ಯೆ ಪ್ರವೇಶಿಸಿದ ಬ್ರಾಹ್ಮಣನನ್ನು–ಇಬ್ಬರಲ್ಲೊಬ್ಬರು ತಿರಸ್ಕರಿಸಿದ್ದೇ ಆದರೆ, ಸನಾತನಕಾಲದಿಂದಲೂ ಬಂದಿರುವ ಯುದ್ಧಮರ್ಯಾದೆಯನ್ನು ಉಲ್ಲಂಘಿಸಿದ್ದೇ ಆದರೆ, ತಾನು ಕ್ಷತ್ರಿಯನೆಂದು ಹೇಳಿಕೊಳ್ಳುವ ಆ ಕ್ಷತ್ರಿಯಾಧಮನು ಕ್ಷತ್ರಿಯಜಾತಿಯಲ್ಲಿ ಪರಿಗಣಿತನಾಗಲು ಅರ್ಹನಾಗುವುದಿಲ್ಲ. ಕ್ಷತ್ರಿಯರ ಸಭೆಗಳಲ್ಲಿಯೂ ಅವನಿಗೆ ಯಾವ ಸ್ಥಾನವನ್ನೂ ಕೊಡಬಾರದು.

ಯಸ್ತು ಧರ್ಮವಿಲೋಪೇನ ಮರ್ಯಾದಾಭೇದನೇನ ಚ ॥೧೦॥

ತಾಂ ವೃತ್ತಿಂ ನಾನುವರ್ತೇತ ವಿಜಿಗೀಷುರ್ಮಹೀಪತಿಃ ।
ಧರ್ಮಲಬ್ಧಾದ್ಧಿ ವಿಜಯಾಲ್ಲಾಭಃ ಕೋಽಭ್ಯಧಿಕೋ ಭವೇತ್ ॥೧೧॥

ಯಾವ ರಾಜನು ಧರ್ಮಲೋಪವನ್ನು ಮಾಡಿ ಯುದ್ಧಮರ್ಯಾದೆಯನ್ನು ಉಲ್ಲಂಘಿಸಿ ವಿಜಯವನ್ನು ಪಡೆಯುವನೋ–ಅಂತಹವನ ದುರಾಚರಣೆಯನ್ನು ವಿಜಯಾಭಿಲಾಷಿಯಾದವನು ಅನುಸರಣೆಮಾಡಬಾರದು. ಧರ್ಮದ ಮೂಲಕವಾಗಿ ಗಳಿಸುವ ವಿಜಯಲಾಭಕ್ಕಿಂತಲೂ ಅಧಿಕವಾದ ಲಾಭವು ಬೇರೆ ಯಾವುದಿದೆ?

ಸಹಸಾನಾರ್ಯಭೂತಾನಿ ಕ್ಷಿಪ್ರಮೇವ ಪ್ರಸಾದಯೇತ್ ।
ಸಾನ್ತ್ವೇನ ಭೋಗದಾನೇನ ನ ಸ ರಾಜ್ಞಾಂ ಪರಮೋ ನಯಃ ॥೧೨॥

ವಿಜಯಿಯಾದ ರಾಜನು ಸುಮಧುರವಾದ ಮಾತುಗಳನ್ನಾಡುತ್ತಾ, ಭೋಗವಸ್ತುಗಳನ್ನು ಹಂಚಿಕೊಡುತ್ತಾ, ಅನಾರ್ಯರಾದ ಜನರನ್ನು ಸಾಂತ್ವನಪೂರ್ವಕವಾಗಿಯೇ ಬಹಳ ಬೇಗ ಪ್ರಸನ್ನಗೊಳಿಸಬೇಕು. ಇದು ವಿಜಯಿಯಾದ ರಾಜನ ಪರಮಶ್ರೇಷ್ಠವಾದ ನೀತಿಯಾಗಿರುತ್ತದೆ.

ಭುಜ್ಯಮಾನಾ ಹ್ಯಯೋಗೇನ ಸ್ವರಾಷ್ಟ್ರಾದಭಿತಾಪಿತಾಃ ।
ಅಮಿತ್ರಾಸ್ತಮುಪಾಸೀರನ್ವ್ಯಸನೌಘಪ್ರತೀಕ್ಷಿಣಃ ॥೧೩॥

ಹಾಗೆ ಅನಾರ್ಯರನ್ನು ಪ್ರಸನ್ನಗೊಳಿಸದೇ, ಅನುಚಿತವಾದ ರೀತಿಯಲ್ಲಿ ಅವರನ್ನು ಧ್ವಂಸಮಾಡಲು ಪ್ರಯತ್ನಿಸಿ ತನ್ನ ರಾಷ್ಟ್ರದಿಂದ ಹೊರಕ್ಕೆ ಕಳುಹಿಸಿದ್ದೇ ಆದರೆ–ಅವರೇ ಶತ್ರುಗಳಾಗಿ, ವಿಜಯಿಯಾದ ರಾಜನು ನಾನಾವಿಧವಾದ ವ್ಯಸನಗಳಲ್ಲಿ ಬೀಳುವುದನ್ನೇ ಪ್ರತೀಕ್ಷಿಸುತ್ತಿರುತ್ತಾರೆ.

ಅಮಿತ್ರೋಪಗ್ರಹಂ ಚಾಸ್ಯ ತೇ ಕುರ್ಯುಃ ಕ್ಷಿಪ್ರಮಾಪದಿ ।
ಸಂತುಷ್ಟಾಃ ಸರ್ವತೋ ರಾಜನ್ರಾಜವ್ಯಸನಕಾಂಕ್ಷಿಣಃ ॥೧೪॥

ವಿಜಯಿಯಾದ ರಾಜನು ಯಾವುದಾದರೂ ಆಪತ್ತಿನಲ್ಲಿ ಸಿಕ್ಕಿಹಾಕಿಕೊಂಡರೆ–ರಾಜನ ವ್ಯಸನವನ್ನೇ ಅತ್ಯಾಸಕ್ತಿಯಿಂದ ಪ್ರತೀಕ್ಷಿಸುತ್ತಿರುವ ಆ ಅನಾರ್ಯರು ಪರಮಸಂತುಷ್ಟರಾಗಿ ಒಡನೆಯೇ ವಿಜಯಿಯಾದ ರಾಜನ ಶತ್ರುಗಳ ಕಡೆ ಸೇರಿಕೊಳ್ಳುತ್ತಾರೆ.

ನಾಮಿತ್ರೋ ವಿನಿಕರ್ತವ್ಯೋ ನಾತಿಚ್ಛೇದ್ಯಃ ಕಥಞ್ಚನ ।
ಜೀವಿತಂ ಹ್ಯಪ್ಯತಿಚ್ಛಿನ್ನಃ ಸಂತ್ಯಜೇಚ್ಚ ಕದಾಚನ ॥೧೫॥

ಶತ್ರುವಿನೊಡನೆ ವಂಚನೆಯಿಂದ ವರ್ತಿಸಬಾರದು. ಶತ್ರುವನ್ನು ಯಾವುದೇ ಕಾರಣದಿಂದಲೂ ಬಹಳವಾಗಿ ಹಿಂಸೆಪಡಿಸಬಾರದು. ಶತ್ರುವು ಬಹಳವಾಗಿ ಕ್ಷತ-ವಿಕ್ಷತನಾದಲ್ಲಿ ಯಾತನೆಯನ್ನು ಸಹಿಸಲಾರದೇ ಪ್ರಾಣ ಗಳನ್ನೇ ಪರಿತ್ಯಜಿಸಬಹುದು.

ಅಲ್ಪೇನಾಪಿ ಚ ಸಂಯುಕ್ತಸ್ತುಷ್ಯತ್ಯೇವ ನರಾಧಿಪಃ ।
ಶುದ್ಧಂ ಜೀವಿತಮೇವಾಪಿ ತಾದೃಶೋ ಬಹು ಮನ್ಯತೇ ॥೧೬॥

ಧಾರ್ಮಿಕನಾದ ರಾಜನು ಅತ್ಯಲ್ಪಲಾಭದಿಂದಲೇ ಸಂತುಷ್ಟನಾಗು ತ್ತಾನೆ. ಅಂತಹ ರಾಜನು ಪರಿಶುದ್ಧವಾದ ಜೀವನವನ್ನೇ ಅತ್ಯಂತ ಮಹತ್ತ್ವದ್ದೆಂದು ಭಾವಿಸುತ್ತಾನೆ.

ಯಸ್ಯ ಸ್ಫೀತೋ ಜನಪದಃ ಸಮ್ಪನ್ನಃ ಪ್ರಿಯರಾಜಕಃ ।
ಸಂತುಷ್ಟಭೃತ್ಯಸಚಿವೋ ದೃಢಮೂಲಃ ಸ ಪಾರ್ಥಿವಃ ॥೧೭॥

ಯಾವ ರಾಜನ ದೇಶವು ಧನ-ಧಾನ್ಯಗಳಿಂದ ಸಮೃದ್ಧವಾಗಿರು ವುದೋ, ರಾಜನನ್ನು ಪ್ರೀತಿಸುವ ಪ್ರಜೆಗಳಿಂದ ಕೂಡಿರುವುದೋ, ಯಾವ ರಾಜನ ಭೃತ್ಯರೂ ಮತ್ತು ಸಚಿವರೂ ಸಂತುಷ್ಟರಾಗಿರುವರೋ–ಅಂತಹ ರಾಜನು ದೃಢಮೂಲನಾಗಿರುತ್ತಾನೆ. (ಅಂತಹವನನ್ನು ಪದಚ್ಯುತಿಗೊಳಿಸಲು ಶತ್ರುಗಳಿಂದಲೂ ಸಾಧ್ಯವಾಗುವುದಿಲ್ಲ.)

ಋತ್ವಿಕ್ಪುರೋಹಿತಾಚಾರ್ಯಾ ಯೇ ಚಾನ್ಯೇ ಶ್ರುತಸತ್ತಮಾಃ ।
ಪೂಜಾರ್ಹಾಃ ಪೂಜಿತಾ ಯಸ್ಯ ಸ ವೈ ಲೋಕವಿದುಚ್ಯತೇ ॥೧೮॥

ಯಾವ ರಾಜನು ಋತ್ವಿಜರನ್ನೂ, ಪುರೋಹಿತರನ್ನೂ, ಆಚಾರ್ಯ ರನ್ನೂ ಮತ್ತು ಪೂಜಾರ್ಹರಾದ ಶಾಸ್ತ್ರಜ್ಞರಾದ ಇನ್ನೂ ಅನೇಕ ವಿದ್ವಾಂಸರನ್ನೂ ಸತ್ಕರಿಸುವನೋ–ಅಂತಹ ರಾಜನು ಲೋಕವ್ಯವಹಾರವನ್ನು ತಿಳಿದಿರುವನೆಂದು ವಿದ್ವಾಂಸರು ಹೇಳುತ್ತಾರೆ.

ಏತೇನೈವ ಚ ವೃತ್ತೇನ ಮಹೀಂ ಪ್ರಾಪ ಸುರೋತ್ತಮಃ ।
ಅನೇನ ಚೇನ್ದ್ರವಿಷಯಂ ವಿಜಿಗೀಷನ್ತಿ ಪಾರ್ಥಿವಾಃ ॥೧೯॥

ಇದೇ ವಿಧವಾದ ವ್ಯವಹಾರದಿಂದಲೇ ದೇವರಾಜನಾದ ಇಂದ್ರನೂ

ಭೂಮಂಡಲವನ್ನು ಸ್ವಾಧೀನಪಡಿಸಿಕೊಂಡನು. ಈ ವಿಧವಾದ ವ್ಯವಹಾರದಿಂದಲೇ ಭೂಮಂಡಲದ ರಾಜರು ಇಂದ್ರನ ರಾಜ್ಯವನ್ನೂ (ಸ್ವರ್ಗವನ್ನು) ಗೆದ್ದುಕೊಳ್ಳಲು ಇಚ್ಛಿಪಡುತ್ತಾರೆ.

ಭೂಮಿವರ್ಜಂ ಧನಂ ರಾಜಾ ಜಿತ್ವಾ ರಾಜನ್ಮಹಾಹವೇ ।
ಅಪಿ ಚಾನ್ನೌಷಧೀಃ ಶಶ್ವದಾಜಹಾರ ಪ್ರತರ್ದನಃ ॥೨೦॥

ಪೂರ್ವಕಾಲದಲ್ಲಿ ಪ್ರತರ್ದನನೆಂಬ ರಾಜನು ಮಹಾಸಮರದಲ್ಲಿ ಶತ್ರುಗಳನ್ನು ಗೆದ್ದು ಪರಾಜಿತನಾದ ರಾಜನ ಭೂಮಿಯೊಂದನ್ನು ಬಿಟ್ಟು ಉಳಿದೆಲ್ಲ ಧನವನ್ನೂ–ಧಾನ್ಯಗಳನ್ನೂ ತನ್ನ ರಾಜಧಾನಿಗೆ ತೆಗೆದುಕೊಂಡು ಬಂದನು.

ಅಗ್ನಿಹೋತ್ರಾಗ್ನಿಶೇಷಂ ಚ ಹವಿರ್ಭೋಜನಮೇವ ಚ ।
ಆಜಹಾರ ದಿವೋದಾಸಸ್ತತೋ ವಿಪ್ರಕೃತೋಽಭವತ್ ॥೨೧॥

ದಿವೋದಾಸನೆಂಬ ರಾಜನು ತಾನು ಗೆದ್ದ ರಾಜ್ಯದಲ್ಲಿದ್ದ ಅಗ್ನಿಹೋತ್ರಾಗ್ನಿಯೊಂದನ್ನುಳಿಸಿ ಯಜ್ಞಾಂಗಭೂತವಾದ ಹವಿಸ್ಸನ್ನೂ, ಭೋಜನ ಸಾಮಗ್ರಿಗಳನ್ನೂ ತನ್ನ ದೇಶಕ್ಕೆ ತಂದನು. ಅದರಿಂದವನು ತಿರಸ್ಕೃತನಾದನು.

ಸರಾಜಕಾನಿ ರಾಷ್ಟ್ರಾಣಿ ನಾಭಾಗೋ ದಕ್ಷಿಣಾಂ ದದೌ ।
ಅನ್ಯತ್ರ ಶ್ರೋತ್ರಿಯಸ್ವಾಚ್ಚ ತಾಪಸಾರ್ಥಾಚ್ಚ ಭಾರತ ॥೨೨॥

ಭರತನಂದನನೇ! ಯುಧಿಷ್ಠಿರ! ನಾಭಾಗನೆಂಬ ರಾಜನು ತಾನು ಗೆದ್ದ ರಾಜ್ಯದಲ್ಲಿದ್ದ ಶ್ರೋತ್ರಿಯರ ಸಂಪತ್ತನ್ನೂ, ತಪಸ್ವಿಗಳ (ಬ್ರಾಹ್ಮಣರ) ಸಂಪತ್ತನ್ನೂ ಬಿಟ್ಟು, ರಾಜರಿಂದ ಸಹಿತವಾದ ರಾಷ್ಟ್ರಗಳೆಲ್ಲವನ್ನೂ ದಕ್ಷಿಣಾ ರೂಪದಲ್ಲಿ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟುಬಿಟ್ಟನು.

ಉಚ್ಚಾವಚಾನಿ ವಿತ್ತಾನಿ ಧರ್ಮಜ್ಞಾನಾಂ ಯುಧಿಷ್ಠಿರ ।
ಆಸನ್ರಾಜ್ಞಾಂ ಪುರಾಣಾನಾಂ ಸರ್ವಂ ತನ್ಮಮ ರೋಚತೇ ॥೨೩॥

ಯುಧಿಷ್ಠಿರ! ಹಿಂದಿನ ಧರ್ಮಜ್ಞರಾದ ರಾಜರ ಬಳಿಯಲ್ಲಿ ನಾನಾ ವಿಧವಾದ ಯಾವ ಐಶ್ವರ್ಯಗಳಿದ್ದುವೋ–ಆ ಎಲ್ಲವನ್ನೂ ಯುದ್ಧದ ಮೂಲಕವಾಗಿ ಸ್ವಾಧೀನಪಡಿಸಿಕೊಳ್ಳುವ ಅಭಿಲಾಷೆಯು ನನಗೂ ಇದ್ದಿತು.

ಸರ್ವವಿದ್ಯಾತಿರೇಕೇಣ ಜಯಮಿಚ್ಛೇನ್ಮಹೀಪತಿಃ ।
ನ ಮಾಯಯಾ ನ ದಮ್ಭೇನ ಯ ಇಚ್ಛೇದ್ಭೂತಿಮಾತ್ಮನಃ ॥೨೪॥

ಯಾವ ರಾಜನಿಗೆ ತನ್ನ ವೈಭವವನ್ನು ಹೆಚ್ಚಿಸಿಕೊಳ್ಳಲು ಇಚ್ಛೆಯಿರುವುದೋ–ಅಂತಹ ರಾಜನು ಸಂಪೂರ್ಣವಿದ್ಯೆಯ ಉತ್ಕರ್ಷದ ಮೂಲಕವಾಗಿ ವಿಜಯವನ್ನು ಪಡೆದು ವೈಭವವನ್ನು ಹೆಚ್ಚಿಸಿಕೊಳ್ಳಬೇಕು. ಮೋಸದಿಂದಾಗಲೀ–ದಂಭದಿಂದಾಗಲೀ ಉತ್ಕರ್ಷವನ್ನು ಪಡೆಯಲು ಇಚ್ಛಿಸಬಾರದು."

೯೬ನೆಯ ಅಧ್ಯಾಯವು ಮುಗಿಯಿತು.

೯೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಶೂರನಾದ ಕ್ಷತ್ರಿಯನ ಕರ್ತವ್ಯ: ಆತ್ಮಶುದ್ಧಿ ಮತ್ತು ಸದ್ಗತಿಗಳ ವರ್ಣನೆ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಕ್ಷತ್ರಧರ್ಮಾದ್ಧಿ ಪಾಪೀಯಾನ್ನ ಧರ್ಮೋಽಸ್ತಿ ನರಾಧಿಪ ।
ಅಪಯಾನೇನ ಯುದ್ಧೇನ ರಾಜಾ ಹನ್ತಿ ಮಹಾಜನಮ್ ॥೧॥

"ನರೇಶ್ವರನೇ! ಪಿತಾಮಹ! ಕ್ಷತ್ರಿಯಧರ್ಮಕ್ಕಿಂತಲೂ ಪಾಪಪೂರ್ಣವಾದ ಮತ್ತೊಂದು ಧರ್ಮವಿರುವುದಿಲ್ಲ. ಏಕೆಂದರೆ : ರಾಜನಾದವನು ಯಾವುದಾದರೂ ದೇಶದ ಮೇಲೆ ಯುದ್ಧಮಾಡಲು ಹೋಗಿ ಅಲ್ಲಿರುವ ಮಹಾಜನವನ್ನು (ಪ್ರಜೆಗಳನ್ನು) ಸಂಹಾರಮಾಡುತ್ತಾನೆ.

ಅಥ ಸ್ಮ ಕರ್ಮಣಾ ಕೇನ ಲೋಕಾಞ್ಜಯತಿ ಪಾರ್ಥಿವಃ ।
ವಿದ್ವಞ್ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ ॥೨॥

ಯುದ್ಧದ ವ್ಯಾಜದಲ್ಲಿ ಜನಸಂಹಾರವನ್ನು ಮಾಡಿ ರಾಜನು ಪಾಪಿಷ್ಠನಾಗುತ್ತಾನೆ. ಹೀಗಿರುವಾಗ ರಾಜನು ಯಾವ ಪುಣ್ಯಕರ್ಮವನ್ನು ಮಾಡಿ ಪುಣ್ಯಲೋಕಗಳನ್ನು ಜಯಿಸುತ್ತಾನೆ? ವಿದ್ವಾಂಸನೇ! ಈ ವಿಷಯ ವನ್ನು ನಾನು ತಿಳಿದುಕೊಳ್ಳಬೇಕೆಂದಿರುತ್ತೇನೆ. ದಯಮಾಡಿ ತಿಳಿಸು."

ಭೀಷ್ಮನು ಹೇಳುತ್ತಾನೆ :

ನಿಗ್ರಹೇಣ ಚ ಪಾಪಾನಾಂ ಸಾಧೂನಾಂ ಸಂಗ್ರಹೇಣ ಚ ।
ಯಜ್ಞೈರ್ದಾನೈಶ್ಚ ರಾಜಾನೋ ಭವನ್ತಿ ಶುಚಯೋಽಮಲಾಃ ॥೩॥

"ಧರ್ಮಜ! ಪಾಪಿಷ್ಠರನ್ನು ನಿಗ್ರಹಿಸುವುದರಿಂದಲೂ, ಸತ್ಪುರುಷರನ್ನು ಆದರಪೂರ್ವಕವಾಗಿ ಸಂಗ್ರಹಿಸುವುದರಿಂದಲೂ, ಯಜ್ಞಗಳನ್ನು ಮಾಡುವುದರಿಂದಲೂ, ದಾನಗಳನ್ನು ಕೊಡುವುದರಿಂದಲೂ–ರಾಜರು ದೋಷಗಳಿಂದ ರಹಿತರಾಗಿ ನಿರ್ಮಲರೂ, ಶುದ್ಧರೂ ಆಗುತ್ತಾರೆ.

ಉಪರುನ್ಧನ್ತಿ ರಾಜಾನೋ ಭೂತಾನಿ ವಿಜಯಾರ್ಥಿನಃ ।
ತ ಏವ ವಿಜಯಂ ಪ್ರಾಪ್ಯ ವರ್ಧಯನ್ತಿ ಪುನಃ ಪ್ರಜಾಃ ॥೪॥

ವಿಜಯೇಚ್ಛುಗಳಾಗಿ ಯುದ್ಧದ ಸಮಯದಲ್ಲಿ ಪ್ರಾಣಿಗಳಿಗೆ ತೊಂದರೆಯನ್ನುಂಟುಮಾಡುವ ರಾಜರೇ ವಿಜಯಗಳಿಸಿದನಂತರ ಪುನಃ ಪ್ರಜೆಗಳನ್ನು ಉನ್ನತಸ್ಥಿತಿಗೂ ತರುತ್ತಾರೆ.

ಅಪವಿಧ್ಯನ್ತಿ ಪಾಪಾನಿ ದಾನಯಜ್ಞತಪೋಬಲೈಃ ।
ಅನುಗ್ರಹಾಯ ಭೂತಾನಾಂ ಪುಣ್ಯಮೇಷಾಂ ವಿವರ್ಧತೇ ॥೫॥

ಅಂತಹ ರಾಜರು ದಾನ, ಯಜ್ಞ ಮತ್ತು ತಪಃಪ್ರಭಾವಗಳಿಂದ ತಮ್ಮ ಸರ್ವಪಾಪಗಳನ್ನೂ ಕಳೆದುಕೊಳ್ಳುತ್ತಾರೆ. ಪ್ರಾಣಿಗಳ ಅನುಗ್ರಹಾರ್ಥವಾಗಿ ಅವರ ಪುಣ್ಯವು ಮತ್ತೂ ವರ್ಧಿಸುತ್ತದೆ.

ಯಥೈವ ಕ್ಷೇತ್ರನಿರ್ಯಾತಾ ನಿರ್ಯಾತಂ ಕ್ಷೇತ್ರಮೇವ ಚ ।
ಹಿನಸ್ತಿ ಧಾನ್ಯಂ ಕಕ್ಷಂ ಚ ನ ಚ ಧಾನ್ಯಂ ವಿನಶ್ಯತಿ ॥೬॥

ಏವಂ ಶಸ್ತ್ರಾಣಿ ಮುಞ್ಚನ್ತೋ ಘ್ನನ್ತಿ ವಧ್ಯಾನನೇಕಧಾ ।
ತಸ್ಯೈಷಾಂ ನಿಷ್ಕೃತಿಃ ಕೃತ್ಸ್ನಾ ಭೂತಾನಾಂ ಭಾವನಂ ಪುನಃ ॥೭॥

ಗದ್ದೆಯಲ್ಲಿ ಕಳೆಗಳನ್ನು ಕೀಳುವವನು ಹೊರಹೊರಟಿರುವ ಕಳೆಗಳುಳ್ಳ ಗದ್ದೆಯನ್ನು ಶುದ್ಧಿಮಾಡುವಾಗ ಕಳೆಗಳ ಜೊತೆಯಲ್ಲಿಯೇ ಒಂದೆರಡು ಧಾನ್ಯಗಳ ಸಸಿಗಳನ್ನೂ ಕೈತಪ್ಪಿ ಕೀಳುತ್ತಾನೆ. ಆದರೆ ಪೈರಿನ ಸಸಿಗಳನ್ನು ಅವನು ಸಂಪೂರ್ಣವಾಗಿ ನಾಶಮಾಡುವುದಿಲ್ಲ. ಕಳೆಗಳನ್ನು ಕೀಳುವುದು

ಭತ್ತದ ಸಸಿಗಳು ಚೆನ್ನಾಗಿ ಬೆಳೆಯಲೆಂದೇ. ಅದೇ ರೀತಿಯಲ್ಲಿ ರಾಜನೂ ಯುದ್ಧಮಾಡುವಾಗ ಶಸ್ತ್ರಗಳನ್ನು ಪ್ರಯೋಗಿಸುತ್ತಾ ವಧಾರ್ಹರಾದ ಅನೇಕರನ್ನು ಸಂಹಾರಮಾಡುತ್ತಾನೆ. ಜೊತೆಯಲ್ಲಿ ವಧಾರ್ಹರಲ್ಲದವರೂ ವಿನಾಶವಾಗಬಹುದು. ಆದರೆ ಅವನ ಆ ಸಂಪೂರ್ಣವಾದ ಪಾಪವು ಯುದ್ಧಾನಂತರ ಪ್ರಾಣಿಗಳನ್ನು (ಪ್ರಜೆಗಳನ್ನು) ಪುನಃ ಪರಿಪಾಲಿಸುವುದರಿಂದ ಪರಿಹಾರವಾಗುತ್ತದೆ.

ಯೋ ಭೂತಾನಿ ಧನಾಕ್ರಾನ್ತ್ಯಾ ವಧಾತ್ಕ್ಲೇಶಾಚ್ಚ ರಕ್ಷತಿ ।
ದಸ್ಯುಭ್ಯಃ ಪ್ರಾಣದಾನಾತ್ಸ ಧನದಃ ಸುಖದೋ ವಿರಾಟ್ ॥೮॥

ಯಾವ ರಾಜನು ಸಮಸ್ತಪ್ರಜೆಗಳನ್ನೂ ಧನಕ್ಷಯದಿಂದಲೂ, ಪ್ರಾಣಕ್ಷಯದಿಂದಲೂ, ಕ್ಲೇಶಗಳಿಂದಲೂ ರಕ್ಷಿಸುವನೋ, ಕಳ್ಳ-ಕಾಕರಿಂದ ರಕ್ಷಿಸಿ ಪ್ರಜೆಗಳಿಗೆ ಪ್ರಾಣದಾನಮಾಡುವನೋ–ಅಂತಹ ರಾಜನು ಪ್ರಜೆಗಳಿಗೆ ಧನವನ್ನೂ ಮತ್ತು ಸುಖವನ್ನೂ ಅನುಗ್ರಹಿಸುವ ಪರಮೇಶ್ವರನೇ ಸರಿ.

ಸ ಸರ್ವಯಜ್ಞೈರೀಜಾನೋ ರಾಜಾಥಾಭಯದಕ್ಷಿಣೈಃ ।
ಅನುಭೂಯೇಹ ಭದ್ರಾಣಿ ಪ್ರಾಪ್ನೋತೀನ್ದ್ರಸಲೋಕತಾಮ್ ॥೯॥

ಯಾವ ರಾಜನು ಪರ್ಯಾಪ್ತದಕ್ಷಿಣೆಗಳಿಂದ ಕೂಡಿದ ಸಕಲವಿಧವಾದ ಯಜ್ಞಗಳ ಮೂಲಕವಾಗಿ ದೇವತೆಗಳನ್ನು ತೃಪ್ತಿಪಡಿಸುವನೋ ಮತ್ತು ಪ್ರಜೆಗಳಿಗೂ ಅಭಯದಾಯಕವಾಗಿರುವನೋ ಅಂತಹ ರಾಜನು ಈ ಲೋಕದಲ್ಲಿ ಸಕಲವಿಧವಾದ ಸುಖೋಪಭೋಗಗಳನ್ನೂ ಅನುಭವಿಸಿ, ಸತ್ಕೀರ್ತಿಯನ್ನೂ ಪಡೆದು, ಅವಸಾನಾನಂತರದಲ್ಲಿ ಪರಲೋಕದಲ್ಲಿ ಇಂದ್ರನಿಗೆ ಸಮಾನನಾಗಿ ಸ್ವರ್ಗಕ್ಕೆ ಅಧಿಕಾರಿಯಾಗುತ್ತಾನೆ.

ಬ್ರಾಹ್ಮಣಾರ್ಥೇ ಸಮುತ್ಪನ್ನೇ ಯೋಽರಿಭಿಃ ಸೃತ್ಯ ಯುಧ್ಯತಿ ।
ಆತ್ಮಾನಂ ಯೂಪಮುತ್ಸೃಜ್ಯ ಸ ಯಜ್ಞೋಽನನ್ತದಕ್ಷಿಣಃ ॥೧೦॥

ಬ್ರಾಹ್ಮಣರ ರಕ್ಷಣಾರ್ಥವಾಗಿ ಮಾಡಬೇಕಾಗುವ ಯುದ್ಧದಲ್ಲಿ ಯಾವ ರಾಜನು ಮುನ್ನುಗ್ಗಿ ಶತ್ರುಗಳೊಡನೆ ಯುದ್ಧಮಾಡುವನೋ ಮತ್ತು ಯೂಪಸದೃಶವಾದ ಆತ್ಮವನ್ನೇ ಅರ್ಪಣೆಮಾಡುವನೋ–ಆ ರಾಜನು ಮಾಡುವ ಅಂತಹ ಯಜ್ಞವು ಅನಂತದಕ್ಷಿಣಾಕವಾದ ಯಜ್ಞವಾಗಿ

ಪರಿಣಮಿಸುತ್ತದೆ. (ಬ್ರಾಹ್ಮಣರ ರಕ್ಷಣಾರ್ಥವಾಗಿ ಶತ್ರುವಿನೊಡನೆ ಯುದ್ಧ ಮಾಡುತ್ತಾ ಯುದ್ಧದಲ್ಲಿ ಪ್ರಾಣತೊರೆದರೆ ಅನಂತದಕ್ಷಿಣಾಯುಕ್ತವಾದ ಯಜ್ಞವನ್ನು ಮಾಡಿದ ಫಲಕ್ಕೆ ಭಾಗಿಯಾಗುತ್ತಾನೆ.)

ಅಭೀತೋ ವಿಕಿರಞ್ಶತ್ರೂನ್ಪ್ರತಿಗೃಹ್ಯ ಶರಾಂಸ್ತಥಾ ।
ನ ತಸ್ಮಾತ್ತ್ರಿದಶಾಃ ಶ್ರೇಯೋ ಭುವಿ ಪಶ್ಯನ್ತಿ ಕಿಞ್ಚನ ॥೧೧॥

ಯಾವ ರಾಜನು (ಧರ್ಮಯುದ್ಧದಲ್ಲಿ) ಭಯರಹಿತನಾಗಿ ಬಾಣಗಳನ್ನೆತ್ತಿಕೊಂಡು ಶತ್ರುಗಳ ಮೇಲೆ ಸುರಿಸುತ್ತಿರುವನೋ ಮತ್ತು ತಾನೂ ಬಾಣಗಳ ಆಘಾತವನ್ನು ಸಹಿಸಿಕೊಳ್ಳುವನೋ–ಅಂತಹ ರಾಜನ ಶ್ರೇಯಸ್ಕರವಾದ ಆ ಕರ್ಮಕ್ಕಿಂತಲೂ ಅತಿಶಯವಾದ ಬೇರೊಂದು ಕರ್ಮವನ್ನು ಈ ಭೂಮಂಡಲದಲ್ಲಿ ದೇವತೆಗಳೂ ನೋಡಲಾರರು.

ತಸ್ಯ ಶಸ್ತ್ರಾಣಿ ಯಾವನ್ತಿ ತ್ವಚಂ ಭಿನ್ದನ್ತಿ ಸಂಯುಗೇ ।
ತಾವತಃ ಸೋಽಶ್ನುತೇ ಲೋಕಾನ್ಸರ್ವಕಾಮದುಹೋಽಕ್ಷಯಾನ್ ॥೧೨॥

ಯುದ್ಧಸ್ಥಳದಲ್ಲಿ ಆ ವೀರನ ಚರ್ಮಕ್ಕೆ ಎಷ್ಟು ಶಸ್ತ್ರಗಳು ನಾಟುತ್ತವೆಯೋ–ಅಷ್ಟು ಸಂಖ್ಯೆಯಲ್ಲಿ ಸರ್ವಕಾಮನೆಗಳನ್ನೂ ಪೂರೈಸುವ ಅಕ್ಷಯವಾದ ಲೋಕಗಳನ್ನು ಅವನು ಪಡೆದುಕೊಳ್ಳುತ್ತಾನೆ.

ಯದಸ್ಯ ರುಧಿರಂ ಗಾತ್ರಾದಾಹವೇ ಸಮ್ಪ್ರವರ್ತತೇ ।
ಸಹ ತೇನೈವ ರಕ್ತೇನ ಸರ್ವಪಾಪೈಃ ಪ್ರಮುಚ್ಯತೇ ॥೧೩॥

ಸಮರಭೂಮಿಯಲ್ಲಿ ಆ ವೀರನ ಶರೀರದಿಂದ ಎಷ್ಟು ರಕ್ತವು ಪ್ರವಹಿಸುತ್ತದೆಯೋ–ಆ ರಕ್ತದೊಡನೆಯೇ ಅವನು ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಯಾನಿ ದುಃಖಾನಿ ಸಹತೇ ಕ್ಷತ್ರಿಯೋ ಯುಧಿ ತಾಪಿತಃ ।
ತೇನ ತೇನ ತಪೋ ಭೂಯ ಇತಿ ಧರ್ಮವಿದೋ ವಿದುಃ ॥೧೪॥

ಯುದ್ಧದಲ್ಲಿ ಬಾಣಗಳಿಂದ ಪೀಡಿತನಾದ ಕ್ಷತ್ರಿಯನು ಎಂತೆಂತಹ

ದುಃಖಗಳನ್ನು ಸಹಿಸಿಕೊಳ್ಳುವನೋ–ಅಂತಂತಹ ಕಷ್ಟದ ಮೂಲಕವಾಗಿ ಅವನ ತಪಸ್ಸು ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದುತ್ತದೆ– ಎಂಬುದಾಗಿ ಧರ್ಮವಿದರು ಹೇಳುತ್ತಾರೆ. (ತಪಸ್ಸು ಎಂದರೆ ಸಂತಾಪ ಪಡುವುದು. (ತಪ = ಸನ್ತಾಪೇ) ಯುದ್ಧದಲ್ಲಿ ಶತ್ರುಗಳ ಬಾಣಪ್ರಹಾರಗಳಿಂದ ಪರಿತಪಿಸುವುದೂ ಒಂದು ತಪಸ್ಸೇ ಆಗುತ್ತದೆ.)

ಪೃಷ್ಠತೋ ಭೀರವಃ ಸಂಖ್ಯೇ ವರ್ತನ್ತೇಽಧರ್ಮಪೂರುಷಾಃ ।
ಶೂರಾಚ್ಛರಣಮಿಚ್ಛನ್ತಃ ಪರ್ಜನ್ಯಾದಿವ ಜೀವನಮ್ ॥೧೫॥

ಯಾವ ರೀತಿಯಲ್ಲಿ ಪ್ರಾಣಿಗಳು ತಮ್ಮ ಜೀವನನಿರ್ವಹಣೆಗಾಗಿ ಪರ್ಜನ್ಯನಿಂದ ನೀರನ್ನು ಅಪೇಕ್ಷಿಸುವುವೋ–ಅದೇ ರೀತಿಯಲ್ಲಿ ಭೀರುಗಳೂ ಮತ್ತು ಅಧರ್ಮಪುರುಷರೂ ಯುದ್ಧದಲ್ಲಿ ಶೂರಪುರುಷನಿಂದ ರಕ್ಷಣೆಯನ್ನು ಅಪೇಕ್ಷಿಸಿ ಅವನ ಹಿಂಭಾಗದಲ್ಲಿರುತ್ತಾರೆ.

ಯದಿ ಶೂರಸ್ತಥಾ ಕ್ಷೇಮಂ ಪ್ರತಿರಕ್ಷೇದ್ಯಥಾಭಯೇ ।
ಪ್ರತಿರೂಪಂ ಜನಂ ಕುರ್ಯಾನ್ನ ಚೇತ್ತದ್ವರ್ತತೇ ತಥಾ ॥೧೬॥

ಅಂತಹ ಭಯದ ಸನ್ನಿವೇಶದಲ್ಲಿಯೂ ಶೂರನಾದ ಕ್ಷತ್ರಿಯನೇನಾದರೂ ಹಿಂಬಾಲಿಗರ ಕ್ಷೇಮವನ್ನು ವಹಿಸಲು ಇಚ್ಛಿಸಿದ್ದೇ ಆದರೆ-ಆ ಜನರನ್ನು ಯುದ್ಧಾಭಿಮುಖರನ್ನಾಗಿ ಮಾಡಬಾರದು. (ಹಾಗೆ ಯುದ್ಧಕ್ಕೆ ಕಳುಹಿಸದಿದ್ದರೂ ಹಿಂದಿನಂತೆಯೇ ಅವನಿಗೆ ಆಶ್ರಿತರನ್ನು ರಕ್ಷಣೆಮಾಡಿದ ಪುಣ್ಯವು ಲಭಿಸುತ್ತದೆ.

ಯದಿ ತೇ ಕೃತಮಾಜ್ಞಾಯ ನಮಸ್ಕುರ್ಯುಃ ಸದೈವತಮ್ ।
ಯುಕ್ತಂ ನ್ಯಾಯ್ಯಂ ಚ ಕುರ್ಯುಸ್ತೇ ನ ಚ ತದ್ವರ್ತತೇ ತಥಾ ॥೧೭॥

ಒಂದು ವೇಳೆ ಭೀರುಗಳೇನಾದರೂ ವೀರನು ರಕ್ಷಣೆಕೊಟ್ಟುದನ್ನು ತಿಳಿದುಕೊಂಡು ಕೃತಜ್ಞರಾಗಿ ಒಡನೆಯೇ ಅವನಿಗೆ ನಮಸ್ಕಾರಮಾಡಿದ್ದೇ ಆದರೆ, ಯುಕ್ತವೂ ನ್ಯಾಯವೂ ಆದ ಕಾರ್ಯವನ್ನೇ ಅವರು ಮಾಡಿದಂತಾಗುತ್ತದೆ. ಹಾಗೆ ಮಾಡದಿದ್ದರೆ ಅವರು ತಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ.

ಪುರುಷಾಣಾಂ ಸಮಾನಾನಾಂ ದೃಶ್ಯತೇ ಮಹದನ್ತರಮ್ ।
ಸಂಗ್ರಾಮೇಽನೀಕವೇಲಾಯಾಮುತ್ಕೃಷ್ಟೇಽಭಿಪತತ್ಸು ಚ ॥೧೮॥

ಎಲ್ಲ ವೀರಪುರುಷರೂ ನೋಡಲು ಒಂದೇ ರೀತಿಯಲ್ಲಿ ಕಾಣುತ್ತಾರೆ. ಆದರೆ ಯುದ್ಧಸ್ಥಳದಲ್ಲಿ ಪರಸ್ಪರಘರ್ಷಣೆಯುಂಟಾಗುವ ಸಮಯವು ಒದಗಿಬಂದಾಗ–ನಾಲ್ಕು ಕಡೆಗಳಿಂದಲೂ ವೀರಗರ್ಜನೆಗಳು ಕೇಳಿಬರುತ್ತಿರುವಾಗ–ಅವರಲ್ಲಿ ಪರಸ್ಪರವಾಗಿ ವಿಶೇಷವಾದ ವ್ಯತ್ಯಾಸವಿರುವುದು ಕಂಡುಬರುತ್ತದೆ.

ಪತತ್ಯಭಿಮುಖಃ ಶೂರಃ ಪರಾನ್ಭೀರುಃ ಪಲಾಯತೇ ।
ಆಸ್ಥಾಯ ಸ್ವರ್ಗ್ಯಮಧ್ವಾನಂ ಸಹಾಯಾನ್ವಿಷಮೇ ತ್ಯಜೇತ್ ॥೧೯॥

ಶೂರವೀರನಾದವನು ಶತ್ರುಗಳಿಗೆ ಅಭಿಮುಖವಾಗಿ ರಭಸದಿಂದ ಮುನ್ನುಗ್ಗುತ್ತಾನೆ. ಭೀರುವಾದವನು ಶತ್ರುಗಳಿಗೆ ಬೆನ್ನುತೋರಿಸಿಕೊಂಡು ಪಲಾಯನಮಾಡುತ್ತಾನೆ. ಭೀರುವು ಸ್ವರ್ಗಪ್ರಾಪಕವಾದ ಮಾರ್ಗದಲ್ಲಿದ್ದರೂ ಕಷ್ಟದಲ್ಲಿರುವ ಸಹಾಯಕರನ್ನೂ ಪರಿತ್ಯಾಗಮಾಡಿ ಓಡಿಹೋಗುತ್ತಾನೆ.

ಮಾ ಸ್ಮ ತಾಂಸ್ತಾದೃಶಾಂಸ್ತಾತ ಜನಿಷ್ಠಾಃ ಪುರುಷಾಧಮಾನ್ ।
ಯೇ ಸಹಾಯಾನ್ರಣೇ ಹಿತ್ವಾ ಸ್ವಸ್ತಿಮನ್ತೋ ಗೃಹಾನ್ಯಯುಃ ॥೨೦॥

ಅಸ್ವಸ್ತಿ ತೇಭ್ಯಃ ಕುರ್ವನ್ತಿ ದೇವಾ ಇನ್ದ್ರಪುರೋಗಮಾಃ ।

ಯಾರು ರಣರಂಗದಲ್ಲಿಯೇ ತಮ್ಮ ಸಹಾಯಕರನ್ನು ಬಿಟ್ಟು ಕುಶಲಿಗಳಾಗಿ ಮನೆಗೆ ಹೋಗುವರೋ–ಅಂತಹ ಪುರುಷಾಧಮರನ್ನು ನೀನು ಪಡೆದುಕೊಳ್ಳಬೇಡ. (ಅಂತಹ ಪುರುಷಾಧಮರು ನಿನಗೆ ಹುಟ್ಟದಿರಲಿ.) ಯಾರು ಸಹಾಯಕರನ್ನು ತ್ಯಾಗಮಾಡಿ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಇಚ್ಛಿಸುವರೋ–ಅವರಿಗೆ ಇಂದ್ರಪ್ರಮುಖರಾದ ದೇವತೆಗಳೂ ಅಮಂಗಳವನ್ನು ಹಾರೈಸುತ್ತಾರೆ.

ತ್ಯಾಗೇನ ಯಃ ಸಹಾಯಾನಾಂ ಸ್ವಾನ್ಪ್ರಾಣಾಂಸ್ತ್ರಾತುಮಿಚ್ಛತಿ ॥೨೧॥

ತಂ ಹನ್ಯುಃ ಕಾಷ್ಠಲೋಷ್ಟೈರ್ವಾ ದಹೇಯುರ್ವಾ ಕಟಾಗ್ನಿನಾ ।
ಪಶುವನ್ಮಾರಯೇಯುರ್ವಾ ಕ್ಷತ್ರಿಯಾ ಯೇ ಸ್ಯುರೀದೃಶಾಃ ॥೨೨॥

ವೀರರಾದ ಕ್ಷತ್ರಿಯರು, ಸಹಾಯಕರನ್ನು ತ್ಯಾಗಮಾಡಿ ತನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳಲು ಅಪೇಕ್ಷಿಸುವ ಭೀರುವನ್ನು ದೊಣ್ಣೆಗಳಿಂದ ಬಡಿದು ಕೊಲ್ಲುತ್ತಾರೆ. ಮಣ್ಣುಹೆಂಟೆಗಳಿಂದಲೇ ಸಾಯಿಸುತ್ತಾರೆ. ಕೈಕಾಲು ಕಟ್ಟಿ ಹುಲ್ಲಿನ ಹಾಸಿಗೆಯಲ್ಲಿ ಸುತ್ತಿ ಬೆಂಕಿಯಿಟ್ಟು ಸಾಯಿಸುತ್ತಾರೆ ಅಥವಾ ಕಟುಕರ ಮನೆಗಳಲ್ಲಿ ಪಶುಗಳ ಕತ್ತನ್ನು ಕತ್ತರಿಸುವಂತೆ ಕತ್ತರಿಸಿ ಸಾಯಿಸುತ್ತಾರೆ.

ಅಧರ್ಮಃ ಕ್ಷತ್ರಿಯಸ್ಯೈಷ ಯಚ್ಛಯ್ಯಾಮರಣಂ ಭವೇತ್ ।
ವಿಸೃಜಞ್ಶ್ಲೇಷ್ಮಮೂತ್ರಾಣಿ ಕೃಪಣಂ ಪರಿದೇವಯನ್ ॥೨೩॥

ಅವಿಕ್ಷತೇನ ದೇಹೇನ ಪ್ರಲಯಂ ಯೋಽಧಿಗಚ್ಛತಿ ।
ಕ್ಷತ್ರಿಯೋ ನಾಸ್ಯ ತತ್ಕರ್ಮ ಪ್ರಶಂಸನ್ತಿ ಪುರಾವಿದಃ ॥೨೪॥

ಹಾಸಿಗೆಯ ಮೇಲೆ ಮಲಗಿದ್ದಾಗ ಮರಣಹೊಂದುವುದು ಕ್ಷತ್ರಿಯರಿಗೆ ಅಧರ್ಮವಾಗುತ್ತದೆ. ಯಾವ ಕ್ಷತ್ರಿಯನು ಕಫವನ್ನು ಬಾರಿ-ಬಾರಿಗೂ ಉಗುಳುತ್ತಾ, ಮಲಗಿದ್ದಲ್ಲಿಯೇ ಮಲ-ಮೂತ್ರಗಳನ್ನು ವಿಸರ್ಜನೆ ಮಾಡುತ್ತಾ, ದೈನ್ಯದಿಂದ ನರಳುತ್ತಾ, ಗಾಯವಾಗದೇ ಇರುವ ದೇಹದಿಂದ ಯುಕ್ತನಾಗಿ ಮೃತ್ಯುವಶನಾಗುವನೋ–ಅಂತಹ ಕ್ಷತ್ರಿಯನ ಈ ಕಾರ್ಯವನ್ನು ಪ್ರಾಚೀನಧರ್ಮವನ್ನು ತಿಳಿದವರು ಪ್ರಶಂಸೆಮಾಡುವುದಿಲ್ಲ. ಕ್ಷತ್ರಿಯನಿಗೆ ಆ ವಿಧವಾದ ಮರಣವು ತಕ್ಕುದಲ್ಲ.

ನ ಗೃಹೇ ಮರಣಂ ತಾತ ಕ್ಷತ್ರಿಯಾಣಾಂ ಪ್ರಶಸ್ಯತೇ ।
ಶೌಟೀರಾಣಾಮಶೌಟೀರ್ಯಮಧರ್ಮಂ ಕೃಪಣಂ ಹಿ ತತ್ ॥೨೫॥

ಮನೆಯಲ್ಲಿ ಮರಣಹೊಂದುವುದು ಕ್ಷತ್ರಿಯರಿಗೆ ಪ್ರಶಂಸನೀಯವಲ್ಲ. ವೀರಪುರುಷರಿಗೆ ಇಂತಹ ಭೀರುತ್ವವೂ ಮತ್ತು ದೈನ್ಯವೂ ಅಧರ್ಮವೇ ಆಗುತ್ತದೆ.

ಇದಂ ದುಃಖಂ ಮಹತ್ಕಷ್ಟಂ ಪಾಪೀಯ ಇತಿ ನಿಷ್ಟನನ್ ।
ಪ್ರತಿಧ್ವಸ್ತಮುಖಃ ಪೂತಿರಮಾತ್ಯಾನನುಶೋಚಯನ್ ॥೨೬॥

ಅರೋಗಾಣಾಂ ಸ್ಪೃಹಯತೇ ಮುಹುರ್ಮೃತ್ಯುಮಪೀಚ್ಛತಿ ।
ವೀರೋ ದೃಪ್ತೋಽಭಿಮಾನೀ ಚ ನೇದೃಶಂ ಮೃತ್ಯುಮರ್ಹತಿ ॥೨೭॥

"ಅಯ್ಯೋ! ಇದು ಬಹಳ ದುಃಖಕರವಾದ ರೋಗವಾಗಿದೆ. ಇದು ನನಗೆ ಬಹಳ ಪೀಡೆಯನ್ನುಂಟುಮಾಡುತ್ತಿದೆ. ಇದು ನಾನು ಮಾಡಿರ ಬಹುದಾದ ಮಹಾಪಾಪದ ಫಲವಾಗಿದೆ"–ಹೀಗೆ ಆರ್ತನಾದಗಳನ್ನು ಮಾಡಿಕೊಂಡು ಅಳುವುದು, ವಿಕಾರವಾದ ಮುಖವನ್ನು ಹೊಂದಿರುವುದು, ದುರ್ಗಂಧಿತವಾದ ಶರೀರದಿಂದ ಕೂಡಿದ್ದು ಮಂತ್ರಿಗಳೊಡನೆ ನಿರಂತರವಾಗಿ ಶೋಕಪಡುವುದು, 'ರೋಗವಿಲ್ಲದವರು ಪುಣ್ಯವಂತರು'–ಎಂದು ಆರೋಗ್ಯವಂತನಾಗಲು ಅಪೇಕ್ಷಿಸುವುದು, ಸಂಕಟವನ್ನು ತಡೆಯಲಾಗದೇ 'ಮರಣವು ಬೇಗ ಬರಲಿ'–ಎಂದು ಹಂಬಲಿಸುವುದು–ಇಂತಹ ದಾರುಣ ಮಯವಾದ ಮರಣಕ್ಕೆ–ವೀರನಾದ, ಆತ್ಮಾಭಿಮಾನಿಯಾದ ಕ್ಷತ್ರಿಯ ನೆಂದಿಗೂ ಯೋಗ್ಯನಲ್ಲ.

ರಣೇಷು ಕದನಂ ಕೃತ್ವಾ ಜ್ಞಾತಿಭಿಃ ಪರಿವಾರಿತಃ ।
ತೀಕ್ಷ್ಣೈಃ ಶಸ್ತ್ರೈರಭಿಕ್ಲಿಷ್ಟಃ ಕ್ಷತ್ರಿಯೋ ಮೃತ್ಯುಮರ್ಹತಿ ॥೨೮॥

ಜ್ಞಾತಿಗಳಿಂದ ಪರಿವೃತನಾಗಿ, ಯುದ್ಧದಲ್ಲಿ ಅಪಾರವಾದ ಸಂಹಾರ ಕಾರ್ಯವನ್ನು ಮಾಡಿ, ತೀಕ್ಷ್ಣವಾದ ಶಸ್ತ್ರಗಳಿಂದ ಅತ್ಯಂತಪೀಡಿತನಾಗಿ ಮೃತ್ಯುವನ್ನಪ್ಪುವುದು ಕ್ಷತ್ರಿಯನಿಗೆ ಶ್ಲಾಘ್ಯವಾಗಿದೆ.

ಶೂರೋ ಹಿ ಕಾಮಮನ್ಯುಭ್ಯಾಮಾವಿಷ್ಟೋ ಯುಧ್ಯತೇ ಭೃಶಮ್ ।
ಹನ್ಯಮಾನಾನಿ ಗಾತ್ರಾಣಿ ಪರೈರ್ನೈವಾವಬುಧ್ಯತೇ ॥೨೯॥

ಶೂರನಾದವನು ವಿಜಯಗಳಿಸುವ ಕಾಮನೆಯಿಂದಲೂ–ರೋಷ ದಿಂದಲೂ ಕೂಡಿದವನಾಗಿ ಶತ್ರುವಿನೊಡನೆ ಬಹಳ ರಭಸದಿಂದ ಯುದ್ಧ ಮಾಡುತ್ತಿರುತ್ತಾನೆ. ಶತ್ರುಗಳ ಶಸ್ತ್ರಾಘಾತಗಳಿಂದ ಕ್ಷತವಿಕ್ಷತವಾದ ಶರೀರ ವುಳ್ಳವನಾಗಿರುವನೆಂಬ ಅರಿವೇ ಇರದವನಂತೆ ವೀರನಾದವನು ಯುದ್ಧ ಮಾಡುತ್ತಿರುತ್ತಾನೆ.

ಸ ಸಂಖ್ಯೇ ನಿಧನಂ ಪ್ರಾಪ್ಯ ಪ್ರಶಸ್ತಂ ಲೋಕಪೂಜಿತಮ್ ।
ಸ್ವಧರ್ಮಂ ವಿಪುಲಂ ಪ್ರಾಪ್ಯ ಶಕ್ರಸ್ಯೈತಿ ಸಲೋಕತಾಮ್ ॥೩೦॥

ಆ ಮಹಾವೀರನು ಯುದ್ಧದಲ್ಲಿ ಲೋಕಪೂಜಿತವಾದ, ಸರ್ವಶ್ರೇಷ್ಠವಾದ ಸಾವನ್ನಪ್ಪಿ–ವಿಪುಲವಾದ ಪುಣ್ಯವನ್ನು ಪಡೆದು, ಇಂದ್ರನೊಡನೆ ಸಾಲೋಕ್ಯವನ್ನು (ಸ್ವರ್ಗವನ್ನು) ಪಡೆಯುತ್ತಾನೆ.

ಸರ್ವೋಪಾಯೈ ರಣಮುಖಮಾತಿಷ್ಠಂಸ್ತ್ಯಕ್ತಜೀವಿತಃ ।
ಪ್ರಾಪ್ನೋತೀನ್ದ್ರಸ್ಯ ಸಾಲೋಕ್ಯಂ ಶೂರಂ ಪೃಷ್ಠಮದರ್ಶಯನ್ ॥೩೧॥

ಶೂರನಾದವನು ಪ್ರಾಣದ ಮೇಲಿನ ಹಂಗನ್ನೇ ತೊರೆದು ಯುದ್ಧಭೂಮಿಯಲ್ಲಿ ನಿಂತು ಶತ್ರುವಿನೊಡನೆ ಯುದ್ಧಮಾಡುತ್ತಾನೆ. ಯಾವುದೇ ಕಾರಣದಿಂದಲೂ ಮತ್ತು ಯಾವಾಗಲೂ ಶತ್ರುವಿಗೆ ಬೆನ್ನುತೋರಿಸುವುದಿಲ್ಲ. ಹೀಗೆಯೇ ಯುದ್ಧಮಾಡುತ್ತಿದ್ದು ಅಸುನೀಗಿದ ಆ ಶೂರನು ಇಂದ್ರನ ಲೋಕವನ್ನು ಹೊಂದುತ್ತಾನೆ.

ಯತ್ರ ಯತ್ರ ಹತಃ ಶೂರಃ ಶತ್ರುಭಿಃ ಪರಿವಾರಿತಃ ।
ಅಕ್ಷಯಾಂಲ್ಲಭತೇ ಲೋಕಾನ್ಯದಿ ದೈನ್ಯಂ ನ ಸೇವತೇ ॥೩೨॥

ಶತ್ರುಗಳಿಂದ ಆಕ್ರಮಿಸಲ್ಪಟ್ಟ ಶೂರನು ದೈನ್ಯವನ್ನಾಶ್ರಯಿಸದೇ ಪರಾಕ್ರಮವನ್ನೇ ಆಶ್ರಯಿಸಿ ಯುದ್ಧಮಾಡುತ್ತಾ ಎಲ್ಲಿಯೇ ಸಾವನ್ನಪ್ಪಿದರೂ ಅಕ್ಷಯವಾದ ಪುಣ್ಯಲೋಕಗಳನ್ನು ಹೊಂದುತ್ತಾನೆ.”

೯೭ನೆಯ ಅಧ್ಯಾಯವು ಮುಗಿಯಿತು.

೯೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಇಂದ್ರಾಂಬರೀಷರ ಸಂವಾದ : ಸಮರಭೂಮಿಯಲ್ಲಿ ಮೃತರಾದ ಶೂರರಿಗೆ ಲಭ್ಯವಾಗುವ ಉತ್ತಮಲೋಕಗಳ ವಿವರಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇ ಲೋಕಾ ಯುಧ್ಯಮಾನಾನಾಂ ಶೂರಾಣಾಮನಿವರ್ತಿನಾಮ್ ।
ಭವನ್ತಿ ನಿಧನಂ ಪ್ರಾಪ್ಯ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹ! ಯಾವ ಶೂರರು ಶತ್ರುವಿನೊಡನೆ ಯುದ್ಧಮಾಡುತ್ತಿರುವರೋ, ಶತ್ರುವಿಗೆ ಬೆನ್ನುತೋರಿಸಿಕೊಂಡು ಯುದ್ಧಗಳಿಂದ ಹಿಂದಿರುಗುವುದಿಲ್ಲವೋ, ಯುದ್ಧಮಾಡುತ್ತಿರುವಾಗಲೇ ಶಸ್ತ್ರಾಘಾತಗಳಿಂದ ನಿಧನಹೊಂದುವರೋ–ಅಂತಹವರಿಗೆ ಯಾವ ಲೋಕಗಳು ಲಭಿಸುತ್ತವೆ ಯೆಂಬುದನ್ನು ಹೇಳು.”

“ಯುಧಿಷ್ಠಿರ! ಈ ವಿಷಯದಲ್ಲಿ ಅಂಬರೀಷ ಮತ್ತು ಇಂದ್ರರ ಸಂವಾದರೂಪವಾದ ಬಹಳ ಹಿಂದಿನ ಇತಿಹಾಸವನ್ನು ಉದಾಹರಿಸುತ್ತಾರೆ.

ನಾಭಾಗನ ಮಗನಾದ ಅಂಬರೀಷನು ಸುದುರ್ಲಭವಾದ ಸ್ವರ್ಗ ಲೋಕಕ್ಕೆ ಹೋಗಿ, ಅಲ್ಲಿ ಆ ಮೊದಲೇ ಸ್ವರ್ಗಸ್ಥನಾಗಿದ್ದು ಇಂದ್ರನೊಡನಿದ್ದ ತನ್ನ ಸಚಿವನನ್ನು (ಸೇನಾಪತಿಯನ್ನು) ನೋಡಿದನು.

ಸರ್ವತೇಜೋಮಯಂ ದಿವ್ಯಂ ವಿಮಾನವರಮಾಸ್ಥಿತಮ್ ।
ಉಪರ್ಯುಪರಿ ಗಚ್ಛನ್ತಂ ಸ್ವಂ ವೈ ಸೇನಾಪತಿಂ ಪ್ರಭುಮ್ ॥೪॥

ಸ ದೃಷ್ಟ್ವೋಪರಿ ಗಚ್ಛನ್ತಂ ಸೇನಾಪತಿಮುದಾರಧೀಃ ।
ಋದ್ಧಿಂ ದೃಷ್ಟ್ವಾ ಸುದೇವಸ್ಯ ವಿಸ್ಮಿತಃ ಪ್ರಾಹ ವಾಸವಮ್ ॥೫॥

ಅಂಬರೀಷನ ಸೇನಾಪತಿಯಾಗಿದ್ದ ಸುದೇವನು ಸರ್ವತೇಜೋಮಯವಾಗಿದ್ದ ದಿವ್ಯವಾಗಿದ್ದ ಮತ್ತು ಶ್ರೇಷ್ಠವಾಗಿದ್ದ ವಿಮಾನದಲ್ಲಿ ಕುಳಿತಿದ್ದನು. ಮೇಲು-ಮೇಲಕ್ಕೆ ಹೋಗುತ್ತಲೇ ಇದ್ದನು. ತನಗಿಂತಲೂ ಮೇಲೆ ಹೋಗುತ್ತಿದ್ದ ತನ್ನ ಸೇನಾಪತಿಯಾದ ಸುದೇವನ ಸಮೃದ್ಧಿಯನ್ನು ನೋಡಿ ವಿಸ್ಮಿತನಾದ ಉದಾರಬುದ್ಧಿಯ ಅಂಬರೀಷನು ಇಂದ್ರನೊಡನೆ ಹೇಳಿದನು :

ಸಾಗರಾನ್ತಾಂ ಮಹೀಂ ಕೃತ್ಸ್ನಾಮನುಶಾಸ್ಯ ಯಥಾವಿಧಿ ।
ಚಾತುರ್ವರ್ಣ್ಯೇ ಯಥಾಶಾಸ್ತ್ರಂ ಪ್ರವೃತ್ತೋ ಧರ್ಮಕಾಮ್ಯಯಾ ॥೬॥

“ದೇವರಾಜ! ನಾನು ಸಮುದ್ರಪರ್ಯಂತವಾದ ಅಖಂಡ ಭೂಮಂಡಲವನ್ನೂ ವಿಧಿಪೂರ್ವಕವಾಗಿ ಶಾಸನಮಾಡುತ್ತಾ ಸಂರಕ್ಷಣೆ

ಮಾಡುತ್ತಿದ್ದೆನು. ಶಾಸ್ತ್ರಗಳ ಆಜ್ಞಾನುಸಾರವಾಗಿ ಧರ್ಮದ ಕಾಮನೆಯಿಂದ ನಾಲ್ಕು ವರ್ಣಗಳವರನ್ನೂ ಪರಿಪಾಲಿಸುವುದರಲ್ಲಿ ತತ್ಪರನಾಗಿದ್ದೆನು.

ಬ್ರಹ್ಮಚರ್ಯೇಣ ಘೋರೇಣ ಗುರ್ವಾಚಾರೇಣ ಸೇವಯಾ ।
ವೇದಾನಧೀತ್ಯ ಧರ್ಮೇಣ ರಾಜಶಾಸ್ತ್ರಂ ಚ ಕೇವಲಮ್ ॥೭॥

ಕಠಿನವಾದ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಾ ಗುರುಗಳು ಉಪದೇಶಿಸಿದ ಆಚಾರ-ವ್ಯವಹಾರಗಳನ್ನೂ ಅನುಷ್ಠಾನದಲ್ಲಿಟ್ಟುಕೊಂಡಿದ್ದೆನು. ಗುರುಗಳನ್ನೂ ಸೇವೆಮಾಡುತ್ತಾ ಧರ್ಮಪೂರ್ವಕವಾಗಿ ವೇದಾಧ್ಯಯನವನ್ನು ಮಾಡಿ ಸಮಗ್ರವಾದ ರಾಜಶಾಸ್ತ್ರವನ್ನೂ ತಿಳಿದುಕೊಂಡೆನು.

ಅತಿಥೀನನ್ನಪಾನೇನ ಪಿತೄಂಶ್ಚ ಸ್ವಧಯಾ ತಥಾ ।
ಋಷೀನ್ಸ್ವಾಧ್ಯಾಯದೀಕ್ಷಾಭಿರ್ದೇವಾನ್ಯಜ್ಞೈರನುತ್ತಮೈಃ ॥೮॥

ಅತಿಥಿಗಳನ್ನು ಅನ್ನ-ಪಾನಗಳಿಂದಲೂ, ಪಿತೃಗಳನ್ನು ಸ್ವಧಾಮೂಲಕವಾದ ಶ್ರಾದ್ಧಾದಿಗಳಿಂದಲೂ, ಋಷಿಗಳನ್ನು ಬ್ರಹ್ಮಚರ್ಯದೀಕ್ಷಾಯುಕ್ತವಾದ ವೇದಾಧ್ಯಯನದಿಂದಲೂ, ದೇವತೆಗಳನ್ನು ಉತ್ತಮೋತ್ತಮವಾದ ಯಜ್ಞಗಳಿಂದಲೂ ಸಂತೃಪ್ತಿಗೊಳಿಸಿದ್ದೇನೆ.

ಕ್ಷತ್ರಧರ್ಮೇ ಸ್ಥಿತೋ ಭೂತ್ವಾ ಯಥಾಶಾಸ್ತ್ರಂ ಯಥಾವಿಧಿ ।
ಉದೀಕ್ಷಮಾಣಃ ಪೃತನಾಂ ಜಯಾಮಿ ಯುಧಿ ವಾಸವ ॥೯॥

ವಾಸವನೇ! ಯಥಾಶಾಸ್ತ್ರವಾಗಿ ಮತ್ತು ಯಥಾವಿಧಿಯಾಗಿ ಕ್ಷತ್ರಧರ್ಮದಲ್ಲಿದ್ದುಕೊಂಡು ಚತುರಂಗಸೇನೆಗಳನ್ನೂ ನಿಲ್ಲಿಸಿ ಯುದ್ಧದಲ್ಲಿ ಶತ್ರುಗಳನ್ನು ಗೆದ್ದಿದ್ದೇನೆ.

ದೇವರಾಜ ಸುದೇವೋಽಯಂ ಮಮ ಸೇನಾಪತಿಃ ಪುರಾ ।
ಆಸೀದ್ಯೋಧಃ ಪ್ರಶಾನ್ತಾತ್ಮಾ ಸೋಽಯಂ ಕಸ್ಮಾದತೀವ ಮಾಮ್ ॥೧೦॥

ದೇವರಾಜ! ಈ ಸುದೇವನು ಹಿಂದೆ ನನ್ನ ಸೇನಾಪತಿಯಾಗಿದ್ದನು. ಪ್ರಶಾಂತಾತ್ಮನಾದ ಯೋಧನಾಗಿದ್ದನು. ನನ್ನ ಸೇನಾಪತಿಯಾಗಿದ್ದ ಇವನು ಈಗ ನನ್ನನ್ನೂ ಅತಿಕ್ರಮಿಸಿ ಮುಂದೆ-ಮುಂದೆ ಹೋಗುತ್ತಿರುವುದಕ್ಕೆ ಕಾರಣವೇನು?

ಅನೇನ ಕ್ರತುಭಿರ್ಮುಖ್ಯೈರ್ನೇಷ್ಟಂ ನಾಪಿ ದ್ವಿಜಾತಯಃ ।
ತರ್ಪಿತಾ ವಿಧಿವಚ್ಛಕ್ರ ಸೋಽಯಂ ಕಸ್ಮಾದತೀವ ಮಾಮ್ ॥೧೧॥

ಈ ಸುದೇವನು ಮುಖ್ಯ-ಮುಖ್ಯವಾದ ಯಜ್ಞಗಳಿಂದ ದೇವತೆಗಳನ್ನೂ ಆರಾಧಿಸಿರುವುದಿಲ್ಲ. ಬಹುದಕ್ಷಿಣೆಗಳಿಂದ ಬ್ರಾಹ್ಮಣರನ್ನೂ ವಿಧಿವತ್ತಾಗಿ ತೃಪ್ತಿಪಡಿಸಿರುವುದಿಲ್ಲ. ಇಂತಹವನು ನನಗಿಂತಲೂ ಮುಂದೆ-ಮುಂದೆ ಪುಣ್ಯಲೋಕಗಳಿಗೆ ಹೋಗುತ್ತಿದ್ದಾನೆ. ಇದಕ್ಕೆ ಕಾರಣವೇನು?"

ಇಂದ್ರನು ಹೇಳುತ್ತಾನೆ :

ಏತಸ್ಯ ವಿತತಸ್ತಾತ ಸುದೇವಸ್ಯ ಬಭೂವ ಹ ।
ಸಂಗ್ರಾಮಯಜ್ಞಃ ಸುಮಹಾನ್ಯಶ್ಚಾನ್ಯೋ ಯುಧ್ಯತೇ ನರಃ ॥೧೨॥

"ಮಹಾರಾಜ! ಈ ಸುದೇವನು ಅತ್ಯಂತವಿಸ್ತಾರವಾದ ಮಹಾ ರಣಯಜ್ಞವನ್ನು ಮಾಡಿ ಮುಗಿಸಿದ್ದಾನೆ. ಬೇರೆ ಯಾವ ಮನುಷ್ಯನು ಯುದ್ಧ ಮಾಡಿದರೂ–ಅದೂ ಮಹಾಸಂಗ್ರಾಮಯುದ್ಧವೇ ಆಗುತ್ತದೆ. (ರಾಜನಿಗೆ ಮಾತ್ರವೇ ಸಂಗ್ರಾಮಯಜ್ಞಮಾಡಲು ಅಧಿಕಾರವಿದೆ ಎಂಬುದೇನೂ ಇಲ್ಲ. ರಾಜನ ಸೈನ್ಯದಲ್ಲಿರುವ ಒಬ್ಬ ಪದಾತಿಯೂ ಸಂಗ್ರಾಮಯಜ್ಞವನ್ನು ಮಾಡಬಹುದು. ಧರ್ಮಾನುಸಾರವಾಗಿ ಯುದ್ಧಮಾಡುತ್ತಾ ಶತ್ರುವಿಗೆ ಬೆನ್ನುತೋರಿಸದೇ ಕಡೆಯವರೆಗೂ ಯುದ್ಧಮಾಡುತ್ತಿದ್ದು ಅಸುನೀಗುವುದೇ ಸಂಗ್ರಾಮಯಜ್ಞ. ಇದನ್ನು ವೀರರಾದವರೆಲ್ಲರೂ ಆಚರಿಸಬಹುದು.)

ಸಂನದ್ಧೋ ದೀಕ್ಷಿತಃ ಸರ್ವೋ ಯೋಧಃ ಪ್ರಾಪ್ಯ ಚಮೂಮುಖಮ್ ।
ಯುದ್ಧಯಜ್ಞಾಧಿಕಾರಸ್ಥೋ ಭವತೀತಿ ವಿನಿಶ್ಚಯಃ ॥೧೩॥

ಕವಚವನ್ನು ಧರಿಸಿ, ಯುದ್ಧದ ದೀಕ್ಷೆಯನ್ನು ಕೈಗೊಂಡು ಶತ್ರುಸೇನೆಯ ಅಗ್ರಭಾಗದಲ್ಲಿ ನಿಲ್ಲುವ ಯೋಧನೂ ಸಂಗ್ರಾಮಯಜ್ಞಕ್ಕೆ ಅಧಿಕಾರಿ ಯಾಗುವನೆಂಬುದು ನನ್ನ ಅಭಿಪ್ರಾಯವಾಗಿದೆ."

ಅಂಬರೀಷನು ಪ್ರಶ್ನಿಸುತ್ತಾನೆ :

ಕಾನಿ ಯಜ್ಞೇ ಹವೀಂಷ್ಯಸ್ಮಿನ್ಕಿಮಾಜ್ಯಂ ಕಾ ಚ ದಕ್ಷಿಣಾ ।
ಋತ್ವಿಜಶ್ಚಾತ್ರ ಕೇ ಪ್ರೋಕ್ತಾಸ್ತನ್ಮೇ ಬ್ರೂಹಿ ಶತಕ್ರತೋ ॥೧೪॥

"ಶತಕ್ರತುವೇ! ಯಜ್ಞವೆಂದರೆ ಋತ್ವಿಜರು, ಹವಿಸ್ಸು–ಇವೇ ಮೊದಲಾದುವುಗಳು ಇರಲೇಬೇಕಲ್ಲವೇ? ನೀನು ಹೇಳಿದ ಸಂಗ್ರಾಮಯಜ್ಞದಲ್ಲಿ ಹವಿಸ್ಸುಗಳು ಯಾವುವು? ಆಜ್ಯವು ಯಾವುದು? ದಕ್ಷಿಣೆಯು ಯಾವುದು? ಯಾರನ್ನು ಋತ್ವಿಜರೆಂದು ಪರಿಗಣಿಸುತ್ತಾರೆ?–ಈ ವಿಷಯವನ್ನು ನನಗೆ ಹೇಳು."

ಋತ್ವಿಜಃ ಕುಞ್ಜರಾಸ್ತತ್ರ ವಾಜಿನೋಽಧ್ವರ್ಯವಸ್ತಥಾ ।
ಹವೀಂಷಿ ಪರಮಾಂಸಾನಿ ರುಧಿರಂ ತ್ವಾಜ್ಯಮುಚ್ಯತೇ ॥೧೫॥

"ಅಂಬರೀಷ! ಆ ಸಂಗ್ರಾಮಯಜ್ಞದಲ್ಲಿ ಆನೆಗಳೇ ಋತ್ವಿಜರ ಸ್ಥಾನದಲ್ಲಿರುತ್ತವೆ. ಕುದುರೆಗಳು ಅಧ್ವರ್ಯುಗಳ ಸ್ಥಾನದಲ್ಲಿರುತ್ತವೆ. ಶತ್ರುಗಳ ಮಾಂಸಗಳೇ ಹವಿಸ್ಸುಗಳು. ರಕ್ತವೇ ಆಜ್ಯವೆಂದು ಹೇಳಲ್ಪಟ್ಟಿದೆ.

ಶೃಗಾಲಗೃಧ್ರಕಾಕೋಲಾಃ ಸದಸ್ಯಾಸ್ತತ್ರ ಪತ್ರಿಣಃ ।
ಆಜ್ಯಶೇಷಂ ಪಿಬನ್ತ್ಯೇತೇ ಹವಿಃ ಪ್ರಾಶ್ನನ್ತಿ ಚಾಧ್ವರೇ ॥೧೬॥

ಗುಳ್ಳೇನರಿ, ರಣಹದ್ದು, ಕಾಗೆ ಮತ್ತು ಇತರ ಮಾಂಸಾಶಿಗಳಾದ ಪಕ್ಷಿಗಳೇ ಸಂಗ್ರಾಮಮಹಾಯಜ್ಞದ ಸದಸ್ಯರು. ರಕ್ತರೂಪವಾದ ಆಜ್ಯಶೇಷವನ್ನು ಅವು ಕುಡಿಯುತ್ತವೆ. ಮಾಂಸರೂಪವಾದ ಹವಿಸ್ಸುಗಳನ್ನು ತಿನ್ನುತ್ತವೆ.

ಪ್ರಾಸತೋಮರಸಂಘಾತಾಃ ಖಡ್ಗಶಕ್ತಿಪರಶ್ವಧಾಃ ।
ಜ್ವಲನ್ತೋ ನಿಶಿತಾಃ ಪೀತಾಃ ಸ್ರುಚಸ್ತಸ್ಯಾಥ ಸತ್ರಿಣಃ ॥೧೭॥

ಪ್ರಜ್ವಲಿಸುವ, ನಿಶಿತವಾದ ಮತ್ತು ಪೀತವರ್ಣದ ಪ್ರಾಸ-ತೋಮರ ಸಮೂಹಗಳೂ, ಖಡ್ಗ, ಶಕ್ತ್ಯಾಯುಧ, ಗಂಡುಗೊಡಲಿ–ಇವೇ ಮುಂತಾದ ಆಯುಧಗಳೂ ಯಜ್ಞದೀಕ್ಷಿತನ ಸ್ರುಕ್ಕುಗಳ ಕಾರ್ಯವನ್ನು ಮಾಡುತ್ತವೆ.

ಚಾಪವೇಗಾಯತಸ್ತೀಕ್ಷ್ಣಃ ಪರಕಾಯಾವಭೇದನಃ ।
ಋಜುಃ ಸುನಿಶಿತಃ ಪೀತಃ ಸಾಯಕಶ್ಚ ಸ್ರುವೋ ಮಹಾನ್ ॥೧೮॥

ಧನುಸ್ಸಿನ ವೇಗದ ಕಾರಣದಿಂದಾಗಿ ವಿಶಾಲವಾಗಿಯೂ ತೀಕ್ಷ್ಣವಾಗಿಯೂ ಇರುವ, ಶತ್ರುಗಳ ಶರೀರವನ್ನು ಭೇದಿಸುವ, ನಿಶಿತವೂ–

ಹೊಂಬಣ್ಣದ್ದೂ ಆಗಿರುವ ಬಾಣವೇ ಸಂಗ್ರಾಮಯಜ್ಞದ ಯಜಮಾನನಿಗೆ ಸ್ರುವವಾಗಿ ಪರಿಣಮಿಸುತ್ತದೆ.

ದ್ವೀಪಿಚರ್ಮಾವನದ್ಧಶ್ಚ ನಾಗದನ್ತಕೃತತ್ಸರುಃ ।
ಹಸ್ತಿಹಸ್ತಹರಃ ಖಡ್ಗಃ ಸ್ಫ್ಯೋ ಭವೇತ್ತಸ್ಯ ಸಂಯುಗೇ ॥೧೯॥

ವ್ಯಾಘ್ರಚರ್ಮದ ಕೋಶದಿಂದ ಬಂಧಿಸಲ್ಪಟ್ಟಿರುವ, ಆನೆಯ ದಂತ ದಿಂದ ಮಾಡಲ್ಪಟ್ಟ ಹಿಡಿಯನ್ನು ಹೊಂದಿರುವ, ಆನೆಯ ಸೊಂಡಿಲನ್ನು ಕತ್ತರಿಸುವ ಸಾಮರ್ಥ್ಯವಿರುವ ಖಡ್ಗವೇ ಸಂಗ್ರಾಮಯಜ್ಞದಲ್ಲಿ 'ಸ್ಫ್ಯ'ದ (ಯಜ್ಞದಲ್ಲಿ ಉಪಯೋಗಿಸುವ ಕತ್ತಿಯ ರೂಪವಾದ ಆಯುಧ) ಕಾರ್ಯ ವನ್ನು ಮಾಡುತ್ತದೆ.

ಜ್ವಲಿತೈರ್ನಿಶಿತೈಃ ಪ್ರಾಸಶಕ್ತ್ಯೃಷ್ಟಿಸಪರಶ್ವಧೈಃ ।
ಶೈಕ್ಯಾಯಸಮಯೈಸ್ತೀಕ್ಷ್ಣೈರಭಿಘಾತೋ ಭವೇದ್ವಸು ।
ಸಂಖ್ಯಾಸಮಯವಿಸ್ತೀರ್ಣಮಭಿಜಾತೋದ್ಭವಂ ಬಹು ॥೨೦॥

ಉಜ್ಜ್ವಲವಾದ, ನಿಶಿತವಾದ, ತೀಕ್ಷ್ಣವಾದ, ಲೋಹಮಯವಾದ ಪ್ರಾಸಾಯುಧ-ಶಕ್ತ್ಯಾಯುಧ-ಋಷ್ಟಿ-ಪರಶ್ವಧಗಳೇ ಮುಂತಾದ ಆಯುಧ ಗಳಿಂದ ಯಾವ ಆಘಾತಗಳುಂಟಾಗುವುವೋ–ಅವೇ ಯುದ್ಧಯಜ್ಞದಲ್ಲಿ ಬಹುಸಂಖ್ಯಾತವಾದ, ಅಧಿಕಸಮಯದಿಂದ ಸಂಗ್ರಹಿಸಲು ಸಾಧ್ಯವಾಗುವ ಮತ್ತು ಕುಲೀನಪುರುಷರಿಂದ ಸಂಗೃಹೀತವಾದ ಬಹುಪ್ರಕಾರವಾದ ದ್ರವ್ಯ ಗಳಾಗಿವೆ.

ಆವೇಗಾದ್ಯಚ್ಚ ರುಧಿರಂ ಸಂಗ್ರಾಮೇ ಸ್ರವತೇ ಭುವಿ ।
ಸಾಸ್ಯ ಪೂರ್ಣಾಹುತಿರ್ಹೋಮೇ ಸಮೃದ್ಧಾ ಸರ್ವಕಾಮಧುಕ್ ॥೨೧॥

ವೀರನ ಶರೀರದಿಂದ ಸಂಗ್ರಾಮಭೂಮಿಯಲ್ಲಿ ಅಧಿಕವಾದ ವೇಗ ದಿಂದ ಹೊರಚಿಮ್ಮುವ ರಕ್ತಧಾರೆಯೇ ಯುದ್ಧಯಜ್ಞದ ಹೋಮದಲ್ಲಿ ಸಮಸ್ತಕಾಮನೆಗಳನ್ನೂ ಪೂರ್ಣಗೊಳಿಸುವ ಸಮೃದ್ಧವಾದ ಪೂರ್ಣಾಹುತಿ ಯಾಗಿದೆ.

ಛಿನ್ಧಿ ಭಿನ್ಧೀತಿ ಯಃ ಶಬ್ದಃ ಶ್ರೂಯತೇ ವಾಹಿನೀಮುಖೇ ॥೨೨॥

ಸಾಮಾನಿ ಸಾಮಗಾಸ್ತಸ್ಯ ಗಾಯನ್ತಿ ಯಮಸಾದನೇ ।
ಹವಿರ್ಧಾನಂ ತು ತಸ್ಯಾಹುಃ ಪರೇಷಾಂ ವಾಹಿನೀಮುಖಮ್ ॥೨೩॥

ಸೈನ್ಯದ ಮುಂಭಾಗದಲ್ಲಿ ಯಾವ 'ಛಿನ್ಧಿ-ಭಿನ್ಧಿ' 'ತಲೆಯನ್ನು ಕತ್ತರಿಸು! ತಲೆಯನ್ನು ಒಡೆ!'–ಎಂಬ ವೀರಘೋಷಣೆಗಳು ಆಗುವುವೋ ಆ ಶಬ್ದಗಳೇ ಸಂಗ್ರಾಮಯಜ್ಞದಲ್ಲಿ ಸೈನಿಕರು ಯಮನ ಮನೆಗೆ ಹೋಗುವಾಗ ಸಾಮಗರು ಹೇಳುವ ಸಾಮಗಳು. ಶತ್ರುಗಳ ಸೇನೆಯ ಮುಖಭಾಗವೇ ಸಂಗ್ರಾಮ ಯಜ್ಞದಲ್ಲಿ ಹವಿರ್ಧಾನ (ಹವಿಸ್ಸನ್ನಿಡುವ ಸ್ಥಳ) ವಾಗಿರುತ್ತದೆ.

ಕುಞ್ಜರಾಣಾಂ ಹಯಾನಾಂ ಚ ವರ್ಮಿಣಾಂ ಚ ಸಮುಚ್ಚಯಃ ।
ಅಗ್ನಿಃ ಶ್ಯೇನಚಿತೋ ನಾಮ ಸ ಚ ಯಜ್ಞೇ ವಿಧೀಯತೇ ॥೨೪॥

ಆನೆಗಳು, ಕುದುರೆಗಳು, ಕವಚಧಾರಿಗಳಾದ ವೀರರ ಸಮೂಹಗಳು– ಇವುಗಳೆಲ್ಲವೂ ಸಂಗ್ರಾಮಯಜ್ಞದ 'ಶ್ಯೇನಚಿತ' ಎಂಬ ಹೆಸರಿನ ಅಗ್ನಿಚಯನ ವಾಗಿರುತ್ತದೆ.

ಉತ್ತಿಷ್ಠತೇ ಕಬನ್ಧೋಽತ್ರ ಸಹಸ್ರೇ ನಿಹತೇ ತು ಯಃ ।
ಸ ಯೂಪಸ್ತಸ್ಯ ಶೂರಸ್ಯ ಖಾದಿರೋಽಷ್ಟಾಸ್ರಿರುಚ್ಯತೇ ॥೨೫॥

ಸಾವಿರಾರು ಸೈನಿಕರ ಸಂಹಾರವಾಗುತ್ತಿರುವ ಸಮಯದಲ್ಲಿ ಯಾವ ಕಬಂಧವು (ತಲೆಯಿಲ್ಲದ ಮುಂಡವು) ಎದ್ದುನಿಲ್ಲುವುದೋ–ಆ ಕಬಂಧವೇ ಸೈನಿಕರೂಪನಾದ ಯಜಮಾನನ ಎಂಟು ಕೋಣಗಳುಳ್ಳ ಖಾದಿರವೃಕ್ಷದ (ಕಗ್ಗಲಿಮರದ) ಯೂಪವಾಗಿರುತ್ತದೆ.

ಇಡೋಪಹೂತಾಃ ಕ್ರೋಶನ್ತಿ ಕುಞ್ಜರಾಸ್ತ್ವಂಕುಶೇರಿತಾಃ ।
ವ್ಯಾಘುಷ್ಟತಲನಾದೇನ ವಷಟ್ಕಾರೇಣ ಪಾರ್ಥಿವ ।
ಉದ್ಗಾತಾ ತತ್ರ ಸಂಗ್ರಾಮೇ ತ್ರಿಸಾಮಾ ದುನ್ದುಭಿರ್ನೃಪ ॥೨೬॥

ಅಂಕುಶಗಳಿಂದ ಚುಚ್ಚಲ್ಪಟ್ಟ ಆನೆಗಳ ಆಕ್ರೋಶಧ್ವನಿಯೇ ಇಡೋ ಪಾಹ್ವಾನ. ಚಪ್ಪಾಳೆಗಳ ಶಬ್ದವೇ ವಷಟ್ಕಾರ. ಯುದ್ಧದಲ್ಲಿ ನಿನಾದ ಮಾಡುವ ದುಂದುಭಿಯೇ ಸಂಗ್ರಾಮಯಜ್ಞದಲ್ಲಿ ಸಾಮವೇದದ ಮೂರು ಋಕ್ಕುಗಳನ್ನು ಗಾನಮಾಡುವ ಉದ್ಗಾತೃವಾಗಿರುತ್ತದೆ.

ಬ್ರಹ್ಮಸ್ವೇ ಹ್ರಿಯಮಾಣೇ ತು ತ್ಯಕ್ತ್ವಾ ಯುದ್ಧೇ ಪ್ರಿಯಾಂತನುಮ್ ।
ಆತ್ಮಾನಂ ಯೂಪಮುತ್ಸೃಜ್ಯ ಸ ಯಜ್ಞೋಽನನ್ತದಕ್ಷಿಣಃ ॥೨೭॥

ದರೋಡೆಕೋರರು ಬ್ರಾಹ್ಮಣನ ಸ್ವತ್ತನ್ನು ಅಪಹರಣಮಾಡುತ್ತಿರುವಾಗ–ಯಾವ ವೀರನು ಆ ದರೋಡೆಕಾರರನ್ನು ಎದುರಿಸಿ ಯುದ್ಧಮಾಡುತ್ತಾ ತನ್ನ ಪ್ರಿಯವಾದ ಶರೀರವನ್ನು ತ್ಯಾಗಮಾಡುವನೋ ಅಥವಾ ದೇಹರೂಪವಾದ ಯೂಪವನ್ನು ಉತ್ಸರ್ಜನೆಮಾಡುವನೋ–ಅವನು ಅನಂತದಕ್ಷಿಣಾಕವಾದ ಯಜ್ಞವನ್ನು ಮಾಡಿದ ಫಲಕ್ಕೆ ಭಾಗಿಯಾಗುತ್ತಾನೆ. (ಬ್ರಾಹ್ಮಣನ ಸಲುವಾಗಿ ಪ್ರಾಣತ್ಯಾಗಮಾಡುವುದೇ ಅನಂತದಕ್ಷಿಣಾಕವಾದ ಮಹಾಯಜ್ಞವೆನಿಸಿಕೊಳ್ಳುತ್ತದೆ.)

ಭರ್ತುರರ್ಥೇ ಚ ಯಃ ಶೂರೋ ವಿಕ್ರಮೇದ್ವಾಹಿನೀಮುಖೇ ।
ನ ಭಯಾದ್ವಿನಿವರ್ತೇತ ತಸ್ಯ ಲೋಕಾ ಯಥಾ ಮಮ ॥೨೮॥

ಸ್ವಾಮಿಯ ಸಲುವಾಗಿ ಯಾವ ಶೂರನು ಶತ್ರುಸೇನೆಯ ಮುಖಭಾಗದಲ್ಲಿ ಪರಾಕ್ರಮದಿಂದ ಕಾದಾಡುತ್ತಾನೆಯೋ ಮತ್ತು ಭಯದಿಂದ ಹಿಂದಿರುಗುವುದಿಲ್ಲವೋ–ಅಂತಹ ವೀರನಿಗೆ ನನಗೆ ಪುಣ್ಯಲೋಕಗಳು ಪ್ರಾಪ್ತವಾಗಿರುವಂತೆಯೇ ಪಾಪ್ತವಾಗುತ್ತವೆ.

ನೀಲಚರ್ಮಾವೃತೈಃ ಖಡ್ಗೈರ್ಬಾಹುಭಿಃ ಪರಿಘೋಪಮೈಃ ।
ಯಸ್ಯ ವೇದಿರುಪಸ್ತೀರ್ಣಾ ತಸ್ಯ ಲೋಕಾ ಯಥಾ ಮಮ ॥೨೯॥

ಯಾವನ ಯಜ್ಞವೇದಿಯು ನೀಲಚರ್ಮದಿಂದ ಆವೃತವಾದ ಖಡ್ಗಗಳಿಂದಲೂ, ಪರಿಘೋಪಮವಾದ ತೋಳುಗಳಿಂದಲೂ ಆಸ್ತೃತವಾಗಿದೆಯೋ ಅಂತಹ ಶೂರನ ಲೋಕಗಳೂ ನನ್ನ ಲೋಕಗಳೇ ಆಗಿವೆ.

ಯಸ್ತು ನಾಪೇಕ್ಷತೇ ಕಂಚಿತ್ಸಹಾಯಂ ವಿಜಯೇ ಸ್ಥಿತಃ ।
ವಿಗಾಹ್ಯ ವಾಹಿನೀಮಧ್ಯಂ ತಸ್ಯ ಲೋಕಾ ಯಥಾ ಮಮ ॥೩೦॥

ಯಾವನು ವಿಜಯದ ಸಲುವಾಗಿ ಯುದ್ಧಮಾಡುತ್ತಾ ಯಾರಿಂದಲೂ ಯಾವ ಸಹಾಯವನ್ನೂ ಅಪೇಕ್ಷಿಸದೇ ಶತ್ರುಸೈನ್ಯದ ಮಧ್ಯದಲ್ಲಿ ನುಗ್ಗಿ

ಯುದ್ಧಮಾಡುವನೋ ಅಂತಹವನ ಲೋಕಗಳೂ ನನ್ನ ಲೋಕಗಳೂ ಸಮಾನವಾದುವುಗಳು.

ಯಸ್ಯ ಶೋಣಿತಸಂಘಾತಾ ಭೇರೀಮಣ್ಡೂಕಕಚ್ಛಪಾ ।
ವೀರಾಸ್ಥಿಶರ್ಕರಾ ದುರ್ಗಾ ಮಾಂಸಶೋಣಿತಕರ್ದಮಾ ॥೩೧॥
ಅಸಿಚರ್ಮಪ್ಲವಾ ಘೋರಾ ಕೇಶಶೈವಲಶಾದ್ವಲಾ ।
ಅಶ್ವನಾಗರಥೈಶ್ಚೈವ ಸಂಛಿನ್ನೈಃ ಕೃತಸಂಕ್ರಮಾ ॥೩೨॥
ಪತಾಕಾಧ್ವಜವಾನೀರಾ ಹತವಾರಣವಾಹಿನೀ ।
ಶೋಣಿತೋದಾ ಸುಸಮ್ಪೂರ್ಣಾ ದುಸ್ತರಾ ಪಾರ್ಗೈರ್ನರೈಃ ॥೩೩॥
ಹತನಾಗಮಹಾನಕ್ರಾ ಪರಲೋಕವಹಾ ಶಿವಾ ।
ಋಷ್ಟಿಖಡ್ಗಮಹಾನೌಕಾ ಗೃಧ್ರಕಙ್ಕಬಲಪ್ಲವಾ ॥೩೪॥
ಪುರುಷಾದಾನುಚರಿತಾ ಭೀರೂಣಾಂ ಕಶ್ಮಲಾವಹಾ ।
ನದೀ ಯೋಧಸ್ಯ ಸಂಗ್ರಾಮೇ ತದಸ್ಯಾವಭೃಥಂ ಸ್ಮೃತಮ್ ॥೩೫॥

ಯಾವ ಯೋಧನ ಯುದ್ಧರೂಪವಾದ ಯಜ್ಞದಲ್ಲಿ ರಕ್ತದ ನದಿಯೇ ಪ್ರವಹಿಸುತ್ತದೆಯೋ–ಅದು ಅವಭೃಥಸ್ನಾನಕ್ಕೆ ಸಮಾನವಾಗಿ ಪುಣ್ಯದಾಯಕ ವಾಗಿರುತ್ತದೆ. ರಕ್ತವೇ ಅವಭೃಥಸ್ನಾನಮಾಡುವ ನದಿಯ ಪುಣ್ಯಜಲವಾಗಿರು ತ್ತದೆ. ರಣವಾದ್ಯಗಳಾದ ಭೇರೀ-ನಗಾರಿಗಳು ಕಪ್ಪೆ ಮತ್ತು ಆಮೆಗಳಾಗಿರು ತ್ತವೆ. ವೀರರ ಅಸ್ಥಿಪಂಜರಗಳು ಬಂಡೆಗಳ ರೂಪದಲ್ಲಿರುತ್ತವೆ. ಮಾಂಸ-ರಕ್ತಗಳ ಕೆಸರಿನಿಂದಾಗಿ ಆ ನದಿಯು ಅತ್ಯಂತದುರ್ಗಮವಾಗಿರುತ್ತದೆ. ಕತ್ತಿ-ಗುರಾಣಿಗಳು ಆ ನದಿಯಲ್ಲಿ ನೌಕೆಗಳಂತಿರುತ್ತವೆ. ಆ ರಕ್ತನದಿಯು ಅತ್ಯಂತಘೋರತರವಾಗಿರುತ್ತದೆ. ಆ ನದಿಯು ವೀರರ ಕೇಶರೂಪವಾದ ಪಾಚಿಯಿಂದ ಕೂಡಿ ಹಸಿರಾಗಿದೆ. ಕತ್ತರಿಸಿಹಾಕಲ್ಪಟ್ಟು, ಸರ್ವತ್ರ ವ್ಯಾಪ್ತವಾಗಿ ರುವ ಆನೆ-ಕುದುರೆ-ರಥಗಳು ಆ ಘೋರನದಿಯನ್ನು ದಾಟುವ ಸೇತುವೆ ಯಾಗಿದೆ. ಪತಾಕಾ-ಧ್ವಜಗಳು ನದಿಗಳಲ್ಲಿ ಬೆಳೆಯುವ ಜೊಂಡುಗಿಡಗಳಾ ಗಿವೆ. ಸತ್ತುಹೋದ ಆನೆಗಳನ್ನೇ ಆ ಘೋರನದಿಯು ತೇಲಿಸಿಕೊಂಡು ಹೋಗುತ್ತದೆ. ರಕ್ತವೇ ನೀರಾಗಿ ಉಳ್ಳ ಆ ನದಿಯು ತುಂಬಿಹರಿಯುತ್ತದೆ. ದಾಟಹೋಗಲು ಇಚ್ಛಿಸುವ ಭೀರುಗಳಾದ ಮನುಷ್ಯರಿಗೆ ಆ ನದಿಯು

ದಾಟಲು ದುಸ್ತರವಾಗಿದೆ. ರಣರಂಗದಲ್ಲಿ ಸತ್ತುಬಿದ್ದಿರುವ ಆನೆಗಳೇ ಆ ನದಿಯ ದೊಡ್ಡ ಮೊಸಳೆಗಳ ರೂಪದಲ್ಲಿವೆ. ಮಂಗಳಕರವಾದ ಆ ನದಿಯು ಧೀರಯೋಧರನ್ನು ಪರಲೋಕಕ್ಕೆ ಒಯ್ಯುವುದಾಗಿದೆ. ಋಷ್ಟಿ ಮತ್ತು ಖಡ್ಗಗಳು ಆ ನದಿಯ ಮಹಾನೌಕೆಗಳಾಗಿವೆ. ರಣಹದ್ದುಗಳು, ಹದ್ದುಗಳು, ಕಾಗೆಗಳು ದೋಣಿಗಳ ರೂಪದಲ್ಲಿವೆ. ಆ ಘೋರನದಿಯು ನರಭಕ್ಷಕರಾದ ರಾಕ್ಷಸರಿಂದ ಅನುಸೃತವಾಗಿರುತ್ತದೆ. ರಾಕ್ಷಸರು ಆ ನದಿಯ ದಂಡೆಗಳ ಮೇಲೆ ಸಂಚರಿಸುತ್ತಾರೆ. ಅದು ಹೇಡಿಗಳಿಗೆ ಬುದ್ಧಿಭ್ರಂಶವನ್ನುಂಟು ಮಾಡುವುದಾಗಿದೆ. ಇಂತಹ ನದಿಯೇ ಯುದ್ಧದಲ್ಲಿ ಯೋಧನ ಅವಭೃಥ ವೆಂದು ಹೇಳಲ್ಪಟ್ಟಿದೆ.

ವೇದಿರ್ಯಸ್ಯ ತ್ವಮಿತ್ರಾಣಾಂ ಶಿರೋಭ್ಯಶ್ಚ ಪ್ರಕೀರ್ಯತೇ ।
ಅಶ್ವಸ್ಕನ್ಧೈರ್ಗಜಸ್ಕನ್ಧೈಸ್ತಸ್ಯ ಲೋಕಾ ಯಥಾ ಮಮ ॥೩೬॥

ಯಾವನ ಯಜ್ಞವೇದಿಯು ಶತ್ರುಗಳ ತಲೆಗಳಿಂದಲೂ, ಕುದುರೆಗಳ ಸ್ಕಂಧಪ್ರದೇಶಗಳಿಂದಲೂ ಮತ್ತು ಆನೆಗಳ ಕುಂಭಸ್ಥಳಗಳಿಂದಲೂ ಹರಡ ಲ್ಪಡುವುದೋ–ಅಂತಹವನಿಗೆ ನನ್ನಂತಹವೇ ಲೋಕಗಳು ಪ್ರಾಪ್ತವಾಗುತ್ತವೆ.

ಪತ್ನೀಶಾಲಾ ಕೃತಾ ಯಸ್ಯ ಪರೇಷಾಂ ವಾಹಿನೀಮುಖಮ್ ।
ಹವಿರ್ಧಾನಂ ಸ್ವವಾಹಿನ್ಯಾಸ್ತದಸ್ಯಾಹುರ್ಮನೀಷಿಣಃ ॥೩೭॥

ಯಾವ ವೀರನು ಶತ್ರುಸೇನಾಮುಖವನ್ನೇ ಪತ್ನೀಶಾಲೆಯನ್ನಾಗಿ ಮಾಡಿಕೊಳ್ಳುವನೋ, ತನ್ನ ಸೈನ್ಯದ ಮುಖ್ಯಭಾಗವನ್ನು ಹವಿರ್ಧಾನವನ್ನಾಗಿ (ಯಜ್ಞದ ಸಾಮಗ್ರಿಗಳನ್ನಿಡುವ ಸ್ಥಳವನ್ನಾಗಿ) ಮಾಡಿಕೊಳ್ಳುವನೋ–ಅವನಿಗೆ ನನ್ನ ಲೋಕಗಳೇ ಪ್ರಾಪ್ತವಾಗುವುವೆಂದು ವಿದ್ವಾಂಸರು ಹೇಳುತ್ತಾರೆ.

ಸದಸ್ಯಾ ದಕ್ಷಿಣಾ ಯೋಧಾ ಆಗ್ನೀಧ್ರಶ್ಚೋತ್ತರಾಂ ದಿಶಮ್ ।
ಶತ್ರುಸೇನಾಕಲತ್ರಸ್ಯ ಸರ್ವಲೋಕಾ ನ ದೂರತಃ ॥೩೮॥

ವೀರನಾದ ಯಾವ ಯಜಮಾನನಿಗೆ ದಕ್ಷಿಣದಿಕ್ಕಿನಲ್ಲಿರುವ ಯೋಧರೇ ಯಜ್ಞದ ಸದಸ್ಯರಾಗುವರೋ, ಉತ್ತರದಿಕ್ಕಿನಲ್ಲಿರುವ ಯೋಧರೇ ಆಗ್ನೀಧ್ರರೋ (ಋತ್ವಿಜರಾಗಿರುವರೋ), ಶತ್ರುಸೇನೆಯೇ ಪತ್ನಿಯ

ಸ್ಥಾನದಲ್ಲಿರುವುದೋ–ಅಂತಹ ವೀರಯೋಧನಿಗೆ ಸಮಸ್ತಲೋಕಗಳೂ ಬಹಳ ಹತ್ತಿರದಲ್ಲಿಯೇ ಇರುತ್ತವೆ.

ಯದಾ ತೂಭಯತೋ ವ್ಯೂಹೋ ಭವತ್ಯಾಕಾಶಮಗ್ರತಃ ।
ಸಾಸ್ಯ ವೇದಿಸ್ತದಾ ಯಜ್ಞೈರ್ನಿತ್ಯಂ ವೇದಾಸ್ತ್ರಯೋಽಗ್ನಯಃ ॥೬೯॥

ತನ್ನ ಕಡೆಯ ಸೈನ್ಯವೂ ಶತ್ರುಪಕ್ಷದ ಸೈನ್ಯವೂ ವ್ಯೂಹಗಳನ್ನು ರಚಿಸಿಕೊಂಡು ಎದುರು-ಬದುರಾಗಿ ನಿಂತಾಗ ಮಧ್ಯಭಾಗದಲ್ಲಿ ಆಕಾಶವಿರುತ್ತದೆ. ಆ ನಿರ್ಜನಾಕಾಶವೇ ಆ ವೀರನಿಗೆ ಯುದ್ಧಯಜ್ಞದ ವೇದಿಕೆಯಾಗಿರುತ್ತದೆ. ಆ ಸ್ಥಳದಲ್ಲಿ ಸರ್ವದಾ ಯಜ್ಞಗಳು ನಡೆಯುತ್ತಲೇ ಇರುತ್ತವೆ. ಮೂರು ವೇದಗಳೂ ಮತ್ತು ಮೂರು ಅಗ್ನಿಗಳೂ ಸರ್ವದಾ ಆ ಆಕಾಶವೇದಿಯಲ್ಲಿ ಪ್ರತಿಷ್ಠಿತವಾಗಿರುತ್ತವೆ.

ಯಸ್ತು ಯೋಧಃ ಪರಾವೃತ್ತಃ ಸಂತ್ರಸ್ತೋ ಹನ್ಯತೇ ಪರೈಃ ।
ಅಪ್ರತಿಷ್ಠಃ ಸ ನರಕಂ ಯಾತಿ ನಾಸ್ತ್ಯತ್ರ ಸಂಶಯಃ ॥೭೦॥

ಯಾವ ಯೋಧನು ಭಯಭೀತನಾಗಿ ಶತ್ರುವಿಗೆ ಬೆನ್ನನ್ನು ತೋರಿಸಿಕೊಂಡು ಪಲಾಯನಮಾಡುತ್ತಾನೆಯೋ ಮತ್ತು ಅದೇ ಅವಸ್ಥೆಯಲ್ಲಿಯೇ ಶತ್ರುಗಳಿಂದ ಕೊಲ್ಲಲ್ಪಡುವನೋ–ಅಂತಹವನು ಮತ್ತೆಲ್ಲಿಯೂ ನಿಲ್ಲದೇ ನರಕದಲ್ಲಿಯೇ ಬೀಳುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಯಸ್ಯ ಶೋಣಿತವೇಗೇನ ವೇದಿಃ ಸ್ಯಾತ್ಸಮ್ಪರಿಪ್ಲುತಾ ।
ಕೇಶಮಾಂಸಾಸ್ಥಿಸಮ್ಪೂರ್ಣಾ ಸ ಗಚ್ಛೇತ್ಪರಮಾಂ ಗತಿಮ್ ॥೭೧॥

ಯಾವ ವೀರಯೋಧನ ರಕ್ತದ ಪ್ರವಾಹವೇಗದಿಂದ ಯಜ್ಞವೇದಿಯು ಮುಳುಗಿಹೋಗಿರುವುದೋ ಮತ್ತು ಯಾವನ ಕೇಶ, ಮಾಂಸ, ಅಸ್ಥಿಗಳಿಂದ ಆ ಯಜ್ಞವೇದಿಯು ಪರಿಪೂರ್ಣವಾಗಿರುವುದೋ–ಅಂತಹವನು ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ಯಸ್ತು ಸೇನಾಪತಿಂ ಹತ್ವಾ ತದ್ಯಾನಮಧಿರೋಹತಿ ।
ಸ ವಿಷ್ಣುವಿಕ್ರಮಕ್ರಾಮೀ ಬೃಹಸ್ಪತಿಸಮಃ ಪ್ರಭುಃ ॥೭೨॥

ಯಾವ ವೀರಯೋಧನು ಶತ್ರುಪಕ್ಷದ ಸೇನಾಪತಿಯನ್ನು ಸಂಹರಿಸಿ

ಅವನ ರಥವನ್ನು ಆರೋಹಣಮಾಡುವನೋ–ಅಂತಹವನು ವಿಷ್ಣುಕ್ರಮಗಳನ್ನು (ವಿಷ್ಣುವಿನ ಮಂತ್ರಗಳನ್ನು ಹೇಳಿಕೊಂಡು ಹೆಜ್ಜೆಯಿಡುವುದು) ಕ್ರಮಿಸುತ್ತಾನೆ. (ವಿಷ್ಣುವಿನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮೀ ಎನಿಸಿಕೊಳ್ಳುತ್ತಾನೆ.) ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನೆನಿಸಿಕೊಳ್ಳುತ್ತಾನೆ.

ನಾಯಕಂ ತತ್ಕುಮಾರಂ ವಾ ಯೋ ವಾ ಸ್ಯಾದ್ಯತ್ರ ಪೂಜಿತಃ ।
ಜೀವಗ್ರಾಹಂ ಪ್ರಗೃಹ್ಣಾತಿ ತಸ್ಯ ಲೋಕಾ ಯಥಾ ಮಮ ॥೪೩॥

ಯಾವನು ಶತ್ರುಪಕ್ಷದ ನಾಯಕನನ್ನೋ, ಅವನ ಮಗನನ್ನೋ, ಅಥವಾ ಆ ಪಕ್ಷದಲ್ಲಿ ಸಮ್ಮಾನಿತನಾದೊಬ್ಬ ವೀರನನ್ನೋ ಬಂಧಿಸುತ್ತಾ ನೆಯೋ ಅಂತಹವನಿಗೆ ನನ್ನ ಲೋಕಗಳಿಗೆ ಸಮಾನವಾದ ಲೋಕಗಳು ಲಭಿಸುತ್ತವೆ.

ಆಹವೇ ತು ಹತಂ ಶೂರಂ ನ ಶೋಚೇತ ಕಥಂಚನ ।
ಅಶೋಚ್ಯೋ ಹಿ ಹತಃ ಶೂರಃ ಸ್ವರ್ಗಲೋಕೇ ಮಹೀಯತೇ ॥೪೪॥

ಯುದ್ಧದಲ್ಲಿ ಹತನಾದ ಶೂರನಿಗಾಗಿ ಯಾವುದೇ ಕಾರಣದಿಂದಲೂ ಶೋಕಪಡಬಾರದು. ಹೀಗೆ ಹತನಾದ ಶೂರನು ಸ್ವರ್ಗದಲ್ಲಿ ವಿರಾಜಮಾನನಾಗುತ್ತಾನೆ. ಆದುದರಿಂದ ಅವನೆಂದಿಗೂ ಶೋಚ್ಯನಲ್ಲ.

ನ ಹ್ಯನ್ನಂ ನೋದಕಂ ತಸ್ಯ ನ ಸ್ನಾನಂ ನಾಪ್ಯಶೌಚಕಮ್ ।
ಹತಸ್ಯ ಕರ್ತುಮಿಚ್ಛನ್ತಿ ತಸ್ಯ ಲೋಕಾಞ್ಶೃಣುಷ್ವ ಮೇ ॥೪೫॥

ಯುದ್ಧದಲ್ಲಿ ಮರಣಹೊಂದಿದವನಿಗಾಗಿ ಆತ್ಮೀಯಜನರು ಸ್ನಾನವನ್ನು ಮಾಡಬೇಕಾಗಿಲ್ಲ. ಅವರಿಗೆ ಆಶೌಚವೂ ಇಲ್ಲ. ವೀರನಿಗಾಗಿ ಶ್ರಾದ್ಧಾದಿಗಳನ್ನಾಗಲೀ, ಜಲತರ್ಪಣವನ್ನಾಗಲೀ ಸ್ವಜನರು ಮಾಡಲು ಇಚ್ಛಿಪಡುವುದಿಲ್ಲ. (ಮಾಡಬೇಕಾದ ಅವಶ್ಯಕತೆಯಿಲ್ಲ.) ಯುದ್ಧದಲ್ಲಿ ಮರಣಹೊಂದಿದ ವೀರರಿಗೆ ಎಂತಹ ಲೋಕಗಳು ಲಭಿಸುತ್ತವೆಯೆಂಬುದನ್ನು ಹೇಳುವೆನು ; ಕೇಳು.

ವರಾಪ್ಸರಃಸಹಸ್ರಾಣಿ ಶೂರಮಾಯೋಧನೇ ಹತಮ್ ।
ತ್ವರಮಾಣಾಭಿಧಾವನ್ತಿ ಮಮ ಭರ್ತಾ ಭವೇದಿತಿ ॥೪೬॥

ಸುಂದರಿಯರಾದ ಸಾವಿರಾರು ಅಪ್ಸರೆಯರು–'ಇವನು ನನಗೆ ಗಂಡ

ನಾಗಬೇಕು ; ತನಗೆ ಗಂಡನಾಗಬೇಕು'–ಎಂಬ ಉತ್ಕಟೇಚ್ಛೆಯಿಂದ ಯುದ್ಧದಲ್ಲಿ ಹತನಾದ ಶೂರನನ್ನು ವರಿಸಲು ಆತುರಾತುರವಾಗಿ ಬರುತ್ತಾರೆ.

ಏತತ್ತಪಶ್ಚ ಪುಣ್ಯಂ ಚ ಧರ್ಮಶ್ಚೈವ ಸನಾತನಃ ।
ಚತ್ವಾರಶ್ಚಾಶ್ರಮಾಸ್ತಸ್ಯ ಯೋ ಯುದ್ಧಮನುಪಾಲಯೇತ್ ॥೪೭॥

ಯುದ್ಧದಲ್ಲಿ ಪ್ರಾಣಬಿಡುವುದೇ ಒಂದು ದೊಡ್ಡ ತಪಸ್ಸು. ಇದೇ ಅತ್ಯಂತಪುಣ್ಯಕರವಾದ ಕಾರ್ಯ. ಸನಾತನಧರ್ಮವೂ ಇದೇ ಆಗಿದೆ. ನಾಲ್ಕು ವಿಧವಾದ ಆಶ್ರಮಧರ್ಮಗಳನ್ನೂ ಪರಿಪಾಲನೆಮಾಡಿದ ಪುಣ್ಯವೂ ಯುದ್ಧಧರ್ಮದ ಪರಿಪಾಲನೆಯಿಂದಲೇ ಲಭ್ಯವಾಗುತ್ತದೆ.

ವೃದ್ಧಬಾಲೌ ನ ಹನ್ತವ್ಯೌ ನ ಚ ಸ್ತ್ರೀ ನೈವ ಪೃಷ್ಠತಃ ।
ತೃಣಪೂರ್ಣಮುಖಶ್ಚೈವ ತವಾಸ್ಮೀತಿ ಚ ಯೋ ವದೇತ್ ॥೪೮॥

ಯುದ್ಧದಲ್ಲಿ ವೃದ್ಧರನ್ನೂ, ಬಾಲಕರನ್ನೂ, ಸ್ತ್ರೀಯರನ್ನೂ ಸಂಹರಿಸಬಾರದು. ಬಾಯಲ್ಲಿ ಹುಲ್ಲುಕಡ್ಡಿಯನ್ನು ಕಚ್ಚಿಕೊಂಡಿರುವವನನ್ನೂ (ಶರಣಾಗತನಾದವನನ್ನೂ)–'ನಾನು ನಿನ್ನವನಾಗಿದ್ದೇನೆ'–ಎಂದು ಹೇಳುವವನನ್ನೂ ಸಂಹಾರಮಾಡಬಾರದು.

ಜಮ್ಭಂ ವೃತ್ರಂ ಬಲಂ ಪಾಕಂ ಶತಮಾಯಂ ವಿರೋಚನಮ್ ।
ದುರ್ವಾರ್ಯಂ ಚೈವ ನಮುಚಿಂ ನೈಕಮಾಯಂ ಚ ಶಮ್ಬರಮ್ ॥

ವಿಪ್ರಚಿತ್ತಿಂ ಚ ದೈತೇಯಂ ದನೋಃ ಪುತ್ರಾಂಶ್ಚ ಸರ್ವಶಃ ।
ಪ್ರಹ್ರಾದಂ ಚ ನಿಹತ್ಯಾಜೌ ತತೋ ದೇವಾಧಿಪೋಽಭವಮ್ ॥೫೦॥

ಜಂಭಾಸುರನನ್ನೂ, ವೃತ್ರಾಸುರನನ್ನೂ, ಬಲಾಸುರನನ್ನೂ, ಪಾಕಾಸುರನನ್ನೂ, ನೂರಾರು ಮಾಯೆಗಳನ್ನು ಯುದ್ಧದ ಸಮಯದಲ್ಲಿ ತೋರಿಸುತ್ತಿದ್ದ ವಿರೋಚನನನ್ನೂ, ದುರ್ಜಯನಾದ ನಮುಚಿಯನ್ನೂ, ವಿವಿಧ ಮಾಯಾವಿಶಾರದನಾದ ಶಂಬರಾಸುರನನ್ನೂ, ದೈತ್ಯನಾದ ವಿಪ್ರಚಿತ್ತಿ ಯನ್ನೂ, ದನುವಿನ ಮಕ್ಕಳಾದ ಎಲ್ಲ ದಾನವರನ್ನೂ, ಪ್ರಹ್ರಾದನನ್ನೂ ಯುದ್ಧದಲ್ಲಿ ಸಂಹರಿಸಿಯೇ ನಾನು ದೇವತೆಗಳಿಗೆ ಅಧಿಪತಿಯಾದೆನು."

ಯುಧಿಷ್ಠಿರ! ಅಂಬರೀಷನು ಇಂದ್ರನು ಹೇಳಿದ ಮಾತುಗಳನ್ನು

ಕೇಳಿ ಮನಃಪೂರ್ವಕವಾಗಿ ಸ್ವೀಕರಿಸಿ ವೀರಯೋಧರಿಗೆ ಸ್ವತಃಸಿದ್ಧಿಯು ಪ್ರಾಪ್ತವಾಗುವುದೆಂಬುದನ್ನು ಮನಗಂಡನು."

೯೮ನೆಯ ಅಧ್ಯಾಯವು ಮುಗಿಯಿತು.

೯೯ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಶೂರರಿಗೆ ಸ್ವರ್ಗವೂ ಹೇಡಿಗಳಿಗೆ ನರಕವೂ ಪ್ರಾಪ್ತವಾಗುವುದೆಂಬುದಕ್ಕೆ ಮಿಥಿಲೇಶ್ವರನಾಗದ ಜನಕನ ಇತಿಹಾಸ

ಜನಮೇಜಯ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಪ್ರತರ್ದನನೂ ಮಿಥಿಲೇಶ್ವರನೂ ಯುದ್ಧಮಾಡುತ್ತಿದ್ದಾಗ ನಡೆದ ಒಂದು ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಯಜ್ಞೋಪವೀತಿಯಾದ, ಮಿಥಿಲಾಧಿಪತಿಯಾದ ಜನಕನು ರಣಭೂಮಿಯಲ್ಲಿ ತನ್ನ ಯೋಧರನ್ನು ಹೇಗೆ ಪ್ರೋತ್ಸಾಹಿಸುತ್ತಿದ್ದನೆಂಬುದನ್ನು ಕೇಳು. ಮಹಾತ್ಮನಾದ, ಸರ್ವತತ್ತ್ವವಿದನಾದ, ಮಿಥಿಲಾಧಿಪತಿಯಾದ ಜನಕನು ತನ್ನ ಯೋಧರಿಗೆ ಸ್ವರ್ಗ-ನರಕಗಳೆರಡನ್ನೂ ತೋರಿಸುತ್ತಾ (ವಿವರಿಸುತ್ತಾ) ಹೇಳಿದನು :

ಅಭೀರೂಣಾಮಿಮೇ ಲೋಕಾ ಭಾಸ್ವನ್ತೋ ಹನ್ತ ಪಶ್ಯತ ।
ಪೂರ್ಣಾ ಗನ್ಧರ್ವಕನ್ಯಾಭಿಃ ಸರ್ವಕಾಮದುಹೋಽಕ್ಷಯಾಃ ॥೪॥

"ಯೋಧರೇ! ಅದೋ ಅಲ್ಲಿ ನೋಡಿರಿ. ನಿರ್ಭಯವಾಗಿ ಯುದ್ಧಮಾಡುವ ಯೋಧರಿಗೆ ಈ ಲೋಕಗಳು ಲಭಿಸುತ್ತವೆ. ನೀವೇ ನೋಡುತ್ತಿರುವಂತೆ ಅವಿನಾಶಿಗಳಾದ ಈ ಲೋಕಗಳು ಗಂಧರ್ವಕನ್ಯೆಯರಿಂದಲೂ ಅಪ್ಸರಸ್ತ್ರೀಯರಿಂದಲೂ ತುಂಬಿಹೋಗಿವೆ. ಈ ಲೋಕಗಳು ಅಲ್ಲಿಗೆ ಹೋದವರ ಸರ್ವಕಾಮನೆಗಳನ್ನೂ ಪೂರ್ಣಮಾಡಿಕೊಡುತ್ತವೆ.

ಇಮೇ ಪಲಾಯಮಾನಾನಾಂ ನರಕಾಃ ಪ್ರತ್ಯುಪಸ್ಥಿತಾಃ ।
ಅಕೀರ್ತಿಃ ಶಾಶ್ವತೀ ಚೈವ ಯತಿತವ್ಯಮನನ್ತರಮ್ ॥೫॥

ಇದೋ ಇತ್ತ ನೋಡಿರಿ! ನಿಮ್ಮ ಮುಂದಿರುವ ಈ ನರಕಲೋಕಗಳು ಯುದ್ಧದಲ್ಲಿ ಪಲಾಯನಮಾಡುವವರಿಗೆ ಲಭ್ಯವಾಗುತ್ತವೆ. ಪಲಾಯನ ಮಾಡಿದವರಿಗೆ ಈ ಲೋಕದಲ್ಲಿಯೂ ಶಾಶ್ವತವಾದ ದುಷ್ಕೀರ್ತಿಯುಂಟಾಗುತ್ತದೆ. ಆದುದರಿಂದ ನೀವು ಯುದ್ಧದಿಂದ ಓಡಿಹೋಗಲು ಪ್ರಯತ್ನಿಸದೇ ವಿಜಯಗಳಿಸಲು ಸತತವಾಗಿ ಪ್ರಯತ್ನಿಸಬೇಕು.

ತಾನ್ದೃಷ್ಟ್ವಾರೀನ್ವಿಜಯತ ಭೂತ್ವಾ ಸಂತ್ಯಾಗಬುದ್ಧಯಃ ।
ನರಕಸ್ಯಾಪ್ರತಿಷ್ಠಸ್ಯ ಮಾ ಭೂತ ವಶವರ್ತಿನಃ ॥೬॥

ಸ್ವರ್ಗಲೋಕ-ನರಕಲೋಕಗಳೆರಡನ್ನೂ ನೋಡುತ್ತಿರುವ ನೀವು ಸ್ವರ್ಗದ ಸುಖವನ್ನು ಮನಗಂಡವರಾಗಿ, ಯುದ್ಧದಲ್ಲಿ ಪ್ರಾಣತ್ಯಾಗಮಾಡಲು ದೃಢವಾಗಿ ನಿಶ್ಚಯಿಸಿ, ಶತ್ರುಗಳೊಡನೆ ಕಾದಾಡಿ ವಿಜಯವನ್ನು ಸಂಪಾದಿಸಿರಿ. ಪ್ರತಿಷ್ಠಾರಹಿತವಾದ, ಕಲಂಕಯುಕ್ತವಾದ ನರಕಕ್ಕೆ ವಶವರ್ತಿಗಳಾಗಬೇಡಿರಿ.

ತ್ಯಾಗಮೂಲಂ ಹಿ ಶೂರಾಣಾಂ ಸ್ವರ್ಗದ್ವಾರಮನುತ್ತಮಮ್ ॥೭॥

ಶೂರ-ವೀರರಿಗೆ ಸರ್ವೋತ್ತಮವಾದ ಸ್ವರ್ಗದ ದ್ವಾರವು ಪ್ರಾಪ್ತವಾಗುವುದಕ್ಕೆ ಅವರ ತ್ಯಾಗವೇ ಮೂಲಕಾರಣವಾಗಿದೆ.”

ಪರಪುರಂಜಯನೇ! ಜನಕನು ಹೀಗೆ ಹೇಳಿದನಂತರ ಜನಕನ ಸೈನಿಕರು ನರೇಶ್ವರನನ್ನು ಹರ್ಷಗೊಳಿಸುತ್ತಾ ಶತ್ರುಗಳನ್ನು ಗೆದ್ದರು. ಆದುದರಿಂದ ಮನೋನಿಗ್ರಹವುಳ್ಳ ಮನುಷ್ಯನೇ ಯುದ್ಧಭೂಮಿಯ ಅಗ್ರಭಾಗದಲ್ಲಿರಬೇಕು. (ಜಿತೇಂದ್ರಿಯನಾದವನು ಸೈನ್ಯಕ್ಕೆ ನಾಯಕನಾಗಿರಬೇಕು.)

ಗಜಾನಾಂ ರಥಿನೋ ಮಧ್ಯೇ ರಥಾನಾಮನು ಸಾದಿನಃ ।
ಸಾದಿನಾಮನ್ತರೇ ಸ್ಥಾಪ್ಯಂ ಪಾದಾತಮಪಿ ದಂಶಿತಮ್ ॥೮॥

ಗಜಾರೋಹಿಗಳ ಮಧ್ಯಭಾಗದಲ್ಲಿ ರಥಸೈನ್ಯವನ್ನು ಸ್ಥಾಪಿಸಬೇಕು.

ರಥಸೈನ್ಯದ ಸಮೀಪದಲ್ಲಿ ಕುದುರೆಸವಾರರಿರಬೇಕು. ಕುದುರೆಸವಾರರ ಮಧ್ಯ ದಲ್ಲಿ ಕವಚಗಳನ್ನು ಧರಿಸಿರುವ ಅಸ್ತ್ರ-ಶಸ್ತ್ರಗಳಿಂದ ಸಜ್ಜಿತರಾಗಿರುವ ಪದಾತಿ ಸೈನಿಕರನ್ನು ನಿಲ್ಲಿಸಬೇಕು.

ಯುಧಿಷ್ಠಿರ! ಯಾವ ರಾಜನು ತನ್ನ ಸೈನ್ಯವನ್ನು ಈ ವ್ಯೂಹಕ್ರಮದಲ್ಲಿ ನಿಲ್ಲಿಸುವನೋ–ಆ ರಾಜನು ಸರ್ವದಾ ಶತ್ರುಗಳೆಲ್ಲರನ್ನೂ ಜಯಿಸುತ್ತಾನೆ. ಆದುದರಿಂದ ನೀನಾದರೂ ಯುದ್ಧಸಮಯಗಳಲ್ಲಿ ಹೀಗೆಯೇ ವ್ಯೂಹವನ್ನು ರಚಿಸಬೇಕು.

ಸರ್ವೇ ಸ್ವರ್ಗತಿಮಿಚ್ಛನ್ತಿ ಸುಯುದ್ಧೇನಾತಿಮನ್ಯವಃ ।
ಕ್ಷೋಭಯೇಯುರನೀಕಾನಿ ಸಾಗರಂ ಮಕರಾ ಯಥಾ ॥೧೧॥

ಎಲ್ಲ ಕ್ಷತ್ರಿಯರೂ ಧರ್ಮಯುದ್ಧದ ಮೂಲಕವಾಗಿ ಸ್ವರ್ಗಲೋಕವನ್ನು ಪಡೆಯಲು ಇಚ್ಛಿಸುತ್ತಾರೆ. ಆದುದರಿಂದಲೇ ಮೊಸಳೆ-ತಿಮಿ- ತಿಮಿಂಗಿಲಗಳು ಸಮುದ್ರವನ್ನು ಅಲ್ಲೋಲ-ಕಲ್ಲೋಲಗೊಳಿಸುವಂತೆ–ಅತಿಕ್ರುದ್ಧರಾದ ಸೈನಿಕರು ಶತ್ರುಗಳ ಸೈನ್ಯಗಳನ್ನು ಕ್ಷೋಭೆಗೊಳಿಸುತ್ತಾರೆ.

ಹರ್ಷಯೇಯುರ್ವಿಷಣ್ಣಾಂಶ್ಚ ವ್ಯವಸ್ಥಾಪ್ಯ ಪರಸ್ಪರಮ್ ।
ಜಿತಾಂ ಚ ಭೂಮಿಂ ರಕ್ಷೇತ ಭಗ್ನಾನ್ನಾತ್ಯನುಸಾರಯೇತ್ ॥೧೨॥

ತಮ್ಮ ಕಡೆಯ ಸೈನಿಕರು ಯಾವುದಾದರೂ ಕಾರಣದಿಂದ ವಿಷಣ್ಣ ರಾಗಿದ್ದಲ್ಲಿ ಹಿಂದೆ ಹೇಳಿದಂತೆ ವ್ಯೂಹವನ್ನು ರಚಿಸಿ ಪರಸ್ಪರವಾಗಿ ರಕ್ಷಣೆಯನ್ನು ಕೊಟ್ಟು, ಅವರನ್ನು ಹರ್ಷಿತರನ್ನಾಗಿ ಮಾಡುವರು. ಜಯಿಸಿದ ರಾಜ್ಯವನ್ನು ಧರ್ಮದಿಂದ ಪರಿಪಾಲನೆಮಾಡಬೇಕು. ಭಗ್ನರಾಗಿ ಪಲಾಯನ ಮಾಡುತ್ತಿರುವ ಸೈನಿಕರನ್ನು ಬಹಳ ದೂರದವರೆಗೆ ಹಿಂಬಾಲಿಸಿಕೊಂಡು ಹೋಗಬಾರದು.

ಪುನರಾವರ್ತಮಾನಾನಾಂ ನಿರಾಶಾನಾಂ ಚ ಜೀವಿತೇ ।
ವೇಗಃ ಸುದುಃಸಹೋ ರಾಜಂಸ್ತಸ್ಮಾನ್ನಾತ್ಯನುಸಾರಯೇತ್ ॥೧೩॥

(ಹೀಗೆ ಹಿಂಬಾಲಿಸುವುದರಲ್ಲಿ ಸ್ವಲ್ಪ ಅಪಾಯವೂ ಇದೆ.) ಪಲಾಯನ ಮಾಡುತ್ತಿರುವ ಯೋಧರು ಜೀವನದಲ್ಲಿಯೇ ನಿರಾಶೆಯನ್ನು ಹೊಂದಿ

ರಣರಂಗಕ್ಕೆ ಹಿಂದಿರುಗಿದರೆ–ಅವರ ಪ್ರಹಾರವೇಗವು ಅತಿದುಸ್ತರವಾಗಿರುತ್ತದೆ. ಈ ಕಾರಣದಿಂದಲೂ ಪಲಾಯನಮಾಡುತ್ತಿರುವ ಯೋಧರನ್ನು ಬಹಳ ದೂರದವರೆಗೆ ಅಟ್ಟಿಸಿಕೊಂಡು ಹೋಗಬಾರದು.

ನ ಹಿ ಪ್ರಹರ್ತುಮಿಚ್ಛನ್ತಿ ಶೂರಾಃ ಪ್ರದ್ರವತೋ ಭೃಶಮ್ ।
ತಸ್ಮಾತ್ಪಲಾಯಮಾನಾನಾಂ ಕುರ್ಯಾನ್ನಾತ್ಯನುಸಾರಣಮ್ ॥೧೪॥

ಪರಾಕ್ರಮಿಗಳಾದವರು ಬಹಳ ವೇಗವಾಗಿ ಪಲಾಯನಮಾಡುತ್ತಿರುವ ಯೋಧರ ಮೇಲೆ ಶಸ್ತ್ರಪ್ರಹಾರಮಾಡುವುದನ್ನು ಇಚ್ಛಿಸುವುದಿಲ್ಲ. ಆದುದರಿಂದಲೂ ಪಲಾಯನಮಾಡುತ್ತಿರುವ ಯೋಧರನ್ನು ಬಹಳ ದೂರದವರೆಗೆ ಹಿಂಬಾಲಿಸಬಾರದು.

ಚರಾಣಾಮಚರಾ ಹ್ಯನ್ನಮದಂಷ್ಟ್ರಾ ದಂಷ್ಟ್ರಿಣಾಮಪಿ ।
ಆಪಃ ಪಿಪಾಸತಾಮನ್ನಮನ್ನಂ ಶೂರಸ್ಯ ಕಾತರಾಃ ॥೧೫॥

ತಿರುಗಾಡುವ ಪ್ರಾಣಿಗಳಿಗೆ ಸ್ಥಿರವಾಗಿರುವ ಪದಾರ್ಥಗಳು ಆಹಾರವಾಗುತ್ತವೆ. (ಚೇತನವಸ್ತುಗಳಿಗೆ ಅಚೇತನವಸ್ತುಗಳು ಆಹಾರವಾಗಿ ಪರಿಣಮಿಸುತ್ತವೆ.) ಕೋರೆದಾಡೆಗಳಿರುವ ಪ್ರಾಣಿಗಳಿಗೆ ಕೋರೆದಾಡೆಗಳಿಲ್ಲದ ಪ್ರಾಣಿಗಳು ಆಹಾರವಾಗುತ್ತವೆ. ಬಾಯಾರಿದವನಿಗೆ ನೀರು ಅನ್ನವಾಗುತ್ತದೆ. ಶೂರರಿಗೆ ಹೇಡಿಗಳೇ ಅನ್ನಪ್ರಾಯರಾಗುತ್ತಾರೆ.

ಸಮಾನಪೃಷ್ಠೋದರಪಾಣಿಪಾದಾಃ
ಪರಾಭವಂ ಭೀರವೋ ವೈ ವ್ರಜನ್ತಿ ।
ಅತೋ ಭಯಾರ್ತಾಃ ಪ್ರಣಿಪತ್ಯ ಭೂಯಃ
ಕೃತ್ವಾಞ್ಜಲೀನುಪತಿಷ್ಠನ್ತಿ ಶೂರಾನ್ ॥೧೬॥

ವೀರರಿಗೂ ಮತ್ತು ಹೇಡಿಗಳಿಗೂ–ಹೊಟ್ಟೆ, ಪೃಷ್ಠ, ಕೈಗಳು, ಕಾಲುಗಳು–ಇವೆಲ್ಲವೂ ಸಮಾನವಾಗಿಯೇ ಇರುತ್ತವೆ. ಆದರೆ ಹೇಡಿಗಳು ಪ್ರಪಂಚದಲ್ಲಿ ತಿರಸ್ಕಾರಕ್ಕೆ ಪಾತ್ರರಾಗುತ್ತಾರೆ. ಭಯಾರ್ತರಾದ ಮನುಷ್ಯರು ಎರಡು ಕೈಗಳನ್ನೂ ಜೋಡಿಸಿಕೊಂಡು ಪುನಃ-ಪುನಃ ಪ್ರಣಾಮಮಾಡುತ್ತಾ ಶೂರರನ್ನು ಆಶ್ರಯಿಸುತ್ತಾರೆ.

ಶೂರಬಾಹುಷು ಲೋಕೋಽಯಂ ಲಮ್ಬತೇ ಪುತ್ರವತ್ಸದಾ ।
ತಸ್ಮಾತ್ಸರ್ವಾಸ್ವವಸ್ಥಾಸು ಶೂರಃ ಸಮ್ಮಾನಮರ್ಹತಿ ॥೧೭॥

ಪುತ್ರನು ತಂದೆಯನ್ನೇ ಅವಲಂಬಿಸಿಕೊಂಡಿರುವಂತೆ–ಈ ಲೋಕವು ಶೂರರ ಬಾಹುಗಳನ್ನೇ ಅವಲಂಬಿಸಿಕೊಂಡಿದೆ. ಆದುದರಿಂದ ಎಲ್ಲ ಅವಸ್ಥೆಗಳಲ್ಲಿಯೂ ವೀರಪುರುಷನು ಸಮ್ಮಾನಕ್ಕೆ ಯೋಗ್ಯನಾಗಿರುತ್ತಾನೆ.

ನ ಹಿ ಶೌರ್ಯಾತ್ಪರಂ ಕಿಂಚಿತ್ತ್ರಿಷು ಲೋಕೇಷು ವಿದ್ಯತೇ ।
ಶೂರಃ ಸರ್ವಂ ಪಾಲಯತಿ ಸರ್ವಂ ಶೂರೇ ಪ್ರತಿಷ್ಠಿತಮ್ ॥೧೮॥

ಮೂರು ಲೋಕಗಳಲ್ಲಿಯೂ ಶೌರ್ಯಕ್ಕಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇರುವುದಿಲ್ಲ. ಶೂರನೇ ಎಲ್ಲವನ್ನೂ ಪರಿಪಾಲನೆ ಮಾಡುತ್ತಾನೆ. ಎಲ್ಲ ಜಗತ್ತೂ ಶೂರನಲ್ಲಿಯೇ ಪ್ರತಿಷ್ಠಿತವಾಗಿದೆ.”

೯೯ನೆಯ ಅಧ್ಯಾಯವು ಮುಗಿಯಿತು.

೧೦೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸೈನ್ಯಸಂಚಲನೆಯ ರೀತಿ-ನೀತಿಗಳ ವರ್ಣನೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯಥಾ ಜಯಾರ್ಥಿನಃ ಸೇನಾಂ ನಯನ್ತಿ ಭರತರ್ಷಭ ।
ಈಷದ್ಧರ್ಮಂ ಪ್ರಪೀಡ್ಯಾಪಿ ತನ್ಮೇ ಬ್ರೂಹಿ ಪಿತಾಮಹ ॥೧॥

“ಭರತಶ್ರೇಷ್ಠನೇ! ಪಿತಾಮಹ! ವಿಜಯಾರ್ಥಿಗಳಾದ ರಾಜರು ಸ್ವಲ್ಪಮಾತ್ರವೇ ಯುದ್ಧಧರ್ಮವನ್ನು ಉಲ್ಲಂಘಿಸಿಯೂ ಅವರು ತಮ್ಮ ಸೈನ್ಯವನ್ನು ಹೇಗೆ ಮುಂದೊಯ್ಯುತ್ತಾರೆ? ಈ ವಿಷಯವನ್ನು ನನಗೆ ತಿಳಿಸು.”

ಭೀಷ್ಮನು ಉತ್ತರಿಸುತ್ತಾನೆ :

ಸತ್ಯೇನ ಹಿ ಸ್ಥಿತೋ ಧರ್ಮ ಉಪಪತ್ತ್ಯಾ ತಥಾ ಪರೇ ।
ಸಾಧ್ವಾಚಾರತಯಾ ಕೇಚಿತ್ತಥೈವೌಪಯಿಕಾದಪಿ ॥೨॥

“ಯುಧಿಷ್ಠಿರ! ಸತ್ಯದಿಂದಲೇ ಕ್ಷತ್ರಧರ್ಮವು ಪ್ರತಿಷ್ಠಿತವಾಗಿರುವುದೆಂದು ಕೆಲವರ ಅಭಿಪ್ರಾಯವಾಗಿದೆ. ಯುಕ್ತಿವಾದದಿಂದ ಧರ್ಮವು ಪ್ರತಿಷ್ಠಿತವಾಗಿರುವುದೆಂದು ಕೆಲವರು ಹೇಳುತ್ತಾರೆ. ಶ್ರೇಷ್ಠವಾದ ಸದಾಚಾರ

ಗಳಿಂದ ಧರ್ಮವು ಪ್ರತಿಷ್ಠಿತವಾಗಿರುವುದೆಂದು ಕೆಲವರು ಹೇಳುತ್ತಾರೆ. ಸಾಮ-ದಾನಾದಿ ಚತುರುಪಾಯಗಳನ್ನೇ ಅವಲಂಬಿಸಿ ಸಮಯಕ್ಕೆ ತಕ್ಕುದಾದ ಕಾರ್ಯಗಳನ್ನು ಮಾಡಿದರೆ ಧರ್ಮವು ಪ್ರತಿಷ್ಠಿತವಾಗುವುದೆಂಬುದು ಕೆಲವರ ಅಭಿಮತವಾಗಿದೆ.

ಉಪಾಯಧರ್ಮಾನ್ವಕ್ಷ್ಯಾಮಿ ಸಿದ್ಧಾರ್ಥಾನರ್ಥಧರ್ಮಯೋಃ ।
ನಿರ್ಮರ್ಯಾದಾ ದಸ್ಯವಸ್ತು ಭವನ್ತಿ ಪರಿಪನ್ಥಿನಃ ॥೩॥

ತೇಷಾಂ ಪ್ರತಿವಿಘಾತಾರ್ಥಂ ಪ್ರವಕ್ಷ್ಯಾಮ್ಯಥ ನೈಗಮಮ್ ।
ಕಾರ್ಯಾಣಾಂ ಸರ್ವಸಿದ್ಧ್ಯರ್ಥಂ ತಾನುಪಾಯಾನ್ನಿಬೋಧ ಮೇ ॥೪॥

ಯುಧಿಷ್ಠಿರ! ನಾನೀಗ ಅರ್ಥ-ಧರ್ಮಗಳ ಸಿದ್ಧಿಗೆ ಸಾಧನಭೂತಗಳಾದ ಉಪಾಯಧರ್ಮಗಳನ್ನು ಹೇಳುತ್ತೇನೆ. ಯಾವಾಗ ಧರ್ಮ ಮರ್ಯಾದೆಯನ್ನು ಮೀರಿದ ದಸ್ಯುಗಳು ಶತ್ರುಗಳಾಗುತ್ತಾರೆಯೋ–ಆಗ ಅವರ ಪ್ರತಿಘಾತಾರ್ಥವಾಗಿ ಶಾಸ್ತ್ರೋಕ್ತವಾದ ಸಾಧನಗಳನ್ನು ಹೇಳುತ್ತೇನೆ. ಕಾರ್ಯಗಳ ಸರ್ವಸಿದ್ಧಿಗಾಗಿ ಆ ಉಪಾಯಗಳು ಯಾವುವೆಂಬುದನ್ನು ಕೇಳು.

ಉಭೇ ಪ್ರಜ್ಞೇ ವೇದಿತವ್ಯೇ ಋಜ್ವೀ ವಕ್ರಾ ಚ ಭಾರತ ।
ಜಾನನ್ವಕ್ರಾಂ ನ ಸೇವೇತ ಪ್ರತಿಬಾಧೇತ ಚಾಗತಾಮ್ ॥೫॥

ಭರತನಂದನ! ಬುದ್ಧಿಯು ಎರಡು ಪ್ರಕಾರವಾಗಿರುತ್ತದೆ. ಒಂದು ಸರಳಬುದ್ಧಿ ; ಮತ್ತೊಂದು ವಕ್ರಬುದ್ಧಿ. ರಾಜನು ಈ ಎರಡು ಬುದ್ಧಿಗಳನ್ನೂ (ಜ್ಞಾನಗಳನ್ನೂ) ತಿಳಿದವನಾಗಿರಬೇಕು. ವಕ್ರಬುದ್ಧಿಯನ್ನು ತಾನಾಗಿ ಆಶ್ರಯಿಸಬಾರದು. ಆದರೆ ಬೇರೆಯವರು ತನ್ನ ಮೇಲೆ ವಕ್ರಮಾರ್ಗದಿಂದ ನಡೆದುಕೊಂಡಾಗ ಅವರನ್ನು ಎದುರಿಸಲು ತಾನೂ ವಕ್ರನೀತಿಯನ್ನೇ ಅನುಸರಿಸಬೇಕು.

ಅಮಿತ್ರಾ ಏವ ರಾಜಾನಂ ಭೇದೇನೋಪಚರನ್ತ್ಯುತ ।
ತಾಂ ರಾಜಾ ನಿಕೃತಿಂ ಜಾನನ್ಯಥಾಮಿತ್ರಾನ್ಪ್ರಬಾಧತೇ ॥೬॥

ಸಾಮಾನ್ಯವಾಗಿ ಮಿತ್ರರಲ್ಲದವರು (ಹೊರಗಿನ ಮತ್ತು ಒಳಗಿನ ಶತ್ರುಗಳು) ಮಾತ್ರವೇ ಭೇದೋಪಾಯದಿಂದ ವರ್ತಿಸುತ್ತಾ ರಾಜನನ್ನು

ವಂಚಿಸುತ್ತಿರುತ್ತಾರೆ. ಅವರು ಮಾಡುವ ವಂಚನೆಯನ್ನರಿತು ರಾಜನು ಶತ್ರುಗಳನ್ನು ವಿನಾಶಗೊಳಿಸುವಂತೆಯೇ ಅವರ ಕುಟಿಲನೀತಿಯನ್ನೂ ವಿನಾಶಗೊಳಿಸಬೇಕು.

ಗಜಾನಾಂ ಪಾರ್ಥ ವರ್ಮಾಣಿ ಗೋವೃಷಾಜಗರಾಣಿ ಚ ।
ಶಲ್ಯಕಣ್ಟಕಲೋಹಾನಿ ತನುತ್ರಚಮರಾಣಿ ಚ ॥೭॥
ಸಿತಪೀತಾನಿ ಶಸ್ತ್ರಾಣಿ ಸಂನಾಹಾಃ ಪೀತಲೋಹಿತಾಃ ।
ನಾನಾರಞ್ಜನರಕ್ತಾಃ ಸ್ಯುಃ ಪತಾಕಾಃ ಕೇತವಶ್ಚ ಹ ॥೮॥
ಋಷ್ಟಯಸ್ತೋಮರಾಃ ಖಡ್ಗಾ ನಿಶಿತಾಶ್ಚ ಪರಶ್ವಧಾಃ ।
ಫಲಕಾನ್ಯಥ ಚರ್ಮಾಣಿ ಪ್ರತಿಕಲ್ಪ್ಯಾನ್ಯನೇಕಶಃ ॥೯॥

ರಾಜನು ಆನೆಗಳ ರಕ್ಷಣೆಯ ಸಲುವಾಗಿ ಎತ್ತು ಮತ್ತು ಹೆಬ್ಬಾವು–ಇವುಗಳ ಚರ್ಮಗಳಿಂದ ಆನೆಗಳಿಗೆ ಕವಚವನ್ನು ಮಾಡಿಸಬೇಕು. ಶಲ್ಯ, ಕಂಟಕ, ಲೋಹ, ಕವಚ, ಚಾಮರ, ಬಿಳುಪಾದ ಮತ್ತು ಹೊಂಬಣ್ಣದ ಶಸ್ತ್ರಗಳು, ಕೆಂಪುಬಣ್ಣದ ಮತ್ತು ಹಳದೀ ಬಣ್ಣದ ಕವಚಗಳು, ನಾನಾ ವರ್ಣಗಳ ಪತಾಕೆಗಳು ಮತ್ತು ಧ್ವಜಗಳು, ಋಷ್ಟಿಗಳು, ತೋಮರಗಳು, ನಿಶಿತವಾದ ಖಡ್ಗಗಳು, ಗಂಡುಗೊಡಲಿಗಳು, ಫಲಕಗಳು ಮತ್ತು ಗುರಾಣಿಗಳು–ಈ ಎಲ್ಲವನ್ನೂ ರಾಜನು ಅಪಾರಸಂಖ್ಯೆಯಲ್ಲಿ ಸಂಗ್ರಹಿಸಬೇಕು.

ಅಭಿನೀತಾನಿ ಶಸ್ತ್ರಾಣಿ ಯೋಧಾಶ್ಚ ಕೃತನಿಶ್ಚಯಾಃ ।
ಚೈತ್ರ್ಯಾಂ ವಾ ಮಾರ್ಗಶೀರ್ಷ್ಯಾಂ ವಾ ಸೇನಾಯೋಗಃ ಪ್ರಶಸ್ಯತೇ ॥೧೦॥

ಶಸ್ತ್ರಗಳ ಸಿದ್ಧತೆಯು ಮುಗಿದಿದ್ದರೆ, ಯೋಧರೆಲ್ಲರೂ ಶತ್ರುಗಳ ಮೇಲೆ ಬೀಳಲು ದೃಢನಿಶ್ಚಯಮಾಡಿದ್ದರೆ, ಚೈತ್ರಮಾಸದ ಅಥವಾ ಮಾರ್ಗಶೀರ್ಷ ಮಾಸದ ಪೌರ್ಣಿಮೆಗಳಲ್ಲಿ ಯುದ್ಧಕ್ಕಾಗಿ ಸೇನಾಪ್ರಸ್ಥಾನವು ಪ್ರಶಸ್ತವಾಗುತ್ತದೆ.

ಪಕ್ವಸಸ್ಯಾ ಹಿ ಪೃಥಿವೀ ಭವತ್ಯಮ್ಬುಮತೀ ತದಾ ।
ನೈವಾತಿಶೀತೋ ನಾತ್ಯುಷ್ಣಃ ಕಾಲೋ ಭವತಿ ಭಾರತ ॥೧೧॥

ಆ ಸಮಯದಲ್ಲಿ ಭೂಮಿಯು ಪಕ್ವವಾದ ಸಸ್ಯಗಳಿಂದ ತುಂಬಿರುತ್ತದೆ. ಬೆಳೆಯು ಕಟಾವಿಗೆ ಬಂದಿರುತ್ತದೆ. ಜಲಸಮೃದ್ಧಿಯಿರುತ್ತದೆ. ಆ

ಕಾಲವು ಹೆಚ್ಚು ಶೀತವಾಗಿಯೂ ಇರುವುದಿಲ್ಲ ; ಹೆಚ್ಚು ಉಷ್ಣವಾಗಿಯೂ ಇರುವುದಿಲ್ಲ. ಆದುದರಿಂದ ಆ ಕಾಲವೇ ಶತ್ರುವಿನೊಡನೆ ಯುದ್ಧಕ್ಕೆ ಹೊರಡಲು ಪ್ರಶಸ್ತವಾಗಿದೆ.

ತಸ್ಮಾತ್ತದಾ ಯೋಜಯೇತ ಪರೇಷಾಂ ವ್ಯಸನೇಽಥವಾ ।
ಏತೇ ಹಿ ಯೋಗಾಃ ಸೇನಾಯಾಃ ಪ್ರಶಸ್ತಾಃ ಪರಬಾಧನೇ ॥೧೨॥

ಆದುದರಿಂದ ಚೈತ್ರ ಅಥವಾ ಮಾರ್ಗಶೀರ್ಷಮಾಸಗಳಲ್ಲಿ ಶತ್ರುವಿನೊಡನೆ ಯುದ್ಧವನ್ನು ಆರಂಭಿಸಬೇಕು ಅಥವಾ ಶತ್ರುಗಳು ತೊಂದರೆಯಲ್ಲಿದ್ದಾಗಲಾದರೂ ಅವರ ಮೇಲೆ ಯುದ್ಧಕ್ಕೆ ಹೋಗಬೇಕು. ಸೇನೆಯೊಡನೆ ಹೊರಟು ಶತ್ರುಗಳನ್ನು ಬಾಧೆಪಡಿಸಲು ಈ ವಿಧವಾದ ಯೋಗಗಳೇ ಪ್ರಶಸ್ತವೆಂದು ತಿಳಿದವರು ಹೇಳುತ್ತಾರೆ. (ಶತ್ರುಗಳನ್ನು ಸೋಲಿಸಲು ಸೇನೆಯ ವಿಜಯಯಾತ್ರೆಗೆ ಈ ಕಾಲಗಳು ಪ್ರಶಸ್ತವಾದುವುಗಳು.)

ಜಲವಾಂಸ್ತೃಣವಾನ್ಮಾರ್ಗಃ ಸಮೋ ಗಮ್ಯಃ ಪ್ರಶಸ್ಯತೇ ।
ಚಾರೈಃ ಸುವಿದಿತಾಭ್ಯಾಸಃ ಕುಶಲೈರ್ವನಗೋಚರೈಃ ॥೧೩॥

ಯುದ್ಧಕ್ಕಾಗಿ ಪ್ರಯಾಣಮಾಡುವಾಗ ಸಮತಲವಾದ ಮತ್ತು ಸುಗಮವಾದ ಮಾರ್ಗವು ಪ್ರಶಸ್ತವಾಗಿರುತ್ತದೆ. ಮೇಲಾಗಿ ಮಾರ್ಗವು ನೀರಿನಿಂದ ಕೂಡಿದುದಾಗಿಯೂ ಹುಲ್ಲಿನಿಂದ ಕೂಡಿದುದಾಗಿಯೂ ಇರಬೇಕು. ಕುಶಲರಾದ ಮತ್ತು ವನಚಾರಿಗಳಾದ ಗುಪ್ತಚಾರರು ಆ ಮಾರ್ಗದಲ್ಲಿರುವ ಕುಂದು-ಕೊರತೆಗಳನ್ನು ಚೆನ್ನಾಗಿ ಪರಿಚಯಮಾಡಿಕೊಂಡಿರಬೇಕು.

ನ ಹ್ಯರಣ್ಯೇನ ಶಕ್ಯೇತ ಗನ್ತುಂ ಮೃಗಗಣೈರಿವ ।
ತಸ್ಮಾತ್ಸೇನಾಸು ತಾನೇವ ಯೋಜಯನ್ತಿ ಜಯಾರ್ಥಿನಃ ॥೧೪॥

ವನ್ಯಮೃಗಗಳಂತೆ ಚತುರಂಗಬಲಯುಕ್ತವಾದ ಸೇನೆಗಳು ಅರಣ್ಯ ಗಳಲ್ಲಿ ಪ್ರಯಾಣಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಜಯಾರ್ಥಿ ಗಳಾದ ರಾಜರು ಮಾರ್ಗದರ್ಶನ ಮಾಡಲೆಂದೇ ಸೇನೆಗಳಲ್ಲಿ ಗುಪ್ತಚಾರರನ್ನು ನಿಯಮಿಸಿಕೊಂಡಿರುತ್ತಾರೆ.

ಅಗ್ರತಃ ಪುರುಷಾನೀಕಂ ಶಕ್ತಂ ಚಾಪಿ ಕುಲೋದ್ಭವಮ್ ।
ಆವಾಸಸ್ತೋಯವಾನ್ದುರ್ಗಃ ಪರ್ಯಾಕಾಶಃ ಪ್ರಶಸ್ಯತೇ ॥೧೫॥

ಸೈನ್ಯದ ಅಗ್ರಭಾಗದಲ್ಲಿ ಕುಲೀನರಾದ ಮತ್ತು ಶಕ್ತಿಶಾಲಿಗಳಾದ ಪದಾತಿಗಳ ಸೈನ್ಯವನ್ನು ಹೊಂದಿರಬೇಕು. ಶತ್ರುಗಳಿಂದ ಸಂಭವಿಸಬಹುದಾದ ಅಪಾಯಗಳನ್ನು ತಪ್ಪಿಸಿಕೊಳ್ಳಬೇಕಾದ ಕಾರಣದಿಂದ ಸೈನಿಕರು ಉಳಿದು ಕೊಳ್ಳುವ ಸ್ಥಳವು ಸುತ್ತಲೂ ನೀರಿನಿಂದ ಆವೃತವಾಗಿರಬೇಕು. ಸುಲಭವಾಗಿ ಹತ್ತಲು ಸಾಧ್ಯವಾಗದಂತಹ ಎತ್ತರವಾದ ಮತ್ತು ದುರ್ಗಮವಾದ ಕೋಟೆಯಿರಬೇಕು. ಆ ಸ್ಥಳದ ಸುತ್ತಲೂ ಆಕಾಶವೇ (ಬಯಲು) ಇರಬೇಕು. (ಹೀಗಿದ್ದರೆ ಶತ್ರುವು ಬರುವುದನ್ನು ಸುಲಭವಾಗಿ ತಿಳಿಯಬಹುದು.) ಅಂತಹ ಸ್ಥಳದಲ್ಲಿ ಯೋಧರನ್ನು ತಂಗಲು ಬಿಡಬೇಕು.

ಪರೇಷಾಮುಪಸರ್ಪಾಣಾಂ ಪ್ರತಿಷೇಧಸ್ತಥಾ ಭವೇತ್ ।
ಆಕಾಶಾತ್ತು ವನಾಭ್ಯಾಶಂ ಮನ್ಯನ್ತೇ ಗುಣವತ್ತರಮ್ ॥೧೬॥

ಬಹುಭಿರ್ಗುಣಜಾತೈಶ್ಚ ಯೇ ಯುದ್ಧಕುಶಲಾ ಜನಾಃ ।
ಉಪನ್ಯಾಸೋ ಭವೇತ್ತತ್ರ ಬಲಾನಾಂ ನಾತಿದೂರತಃ ॥೧೭॥

ಸೇನಾಸ್ಥಾನದ ಮೇಲೆ ಶತ್ರುಗಳ ಆಕ್ರಮಣವನ್ನು ತಡೆಯಲು ವ್ಯವಸ್ಥೆಮಾಡಬೇಕು. ಆಕಾಶವೇ ಚಾವಣಿಯ ರೂಪದಲ್ಲಿರುವ ಮೈದಾನ ಕ್ಕಿಂತಲೂ ಅರಣ್ಯದ ಸಮೀಪದಲ್ಲಿಯೇ ತಂಗುವುದು ಹೆಚ್ಚು ಗುಣಯುಕ್ತ ವೆಂದು ಯುದ್ಧಕುಶಲರಾದ ಜನರು ಹೇಳುತ್ತಾರೆ. ಯುದ್ಧದಲ್ಲಿ ನಿಪುಣರಾದ ಗುಣವಂತರಾದ ಅನೇಕಯೋಧರನ್ನು ಮುಖ್ಯಸೈನ್ಯಗಳಿಗೆ ದೂರವಾಗಿರದಂತೆ ಅರಣ್ಯದಲ್ಲಿ ಇಟ್ಟಿರಬೇಕು.

ಉಪನ್ಯಾಸಾವತರಣಂ ಪದಾತೀನಾಂ ಚ ಗೂಹನಮ್ ।
ಅಥ ಶತ್ರುಪ್ರತೀಘಾತಮಾಪದರ್ಥಂ ಪರಾಯಣಮ್ ॥೧೮॥

ಅರಣ್ಯದ ಸಮೀಪದಲ್ಲಿ ಬಿಡಾರಮಾಡುವುದು ; ಪದಾತಿಸೈನಿಕರನ್ನು ನಿಗೂಢವಾಗಿಟ್ಟಿರುವುದು ; ನಿಗೂಢವಾಗಿದ್ದುಕೊಂಡೇ ಶತ್ರುಗಳ ಮೇಲೆ ಸಮಯವನ್ನು ನೋಡಿ ಹಲ್ಲೆಮಾಡುವುದು–ಇವು ಆಪತ್ಕಾಲದಲ್ಲಿ ಆಶ್ರಯಿಸಬೇಕಾದ ವಿಧಾನಗಳಾಗಿವೆ.

ಸಪ್ತರ್ಷೀನ್ಪೃಷ್ಠತಃ ಕೃತ್ವಾ ಯುಧ್ಯೇಯುರಚಲಾ ಇವ ।
ಅನೇನ ವಿಧಿನಾ ಶತ್ರೂಞ್ಜಿಗೀಷೇತಾಪಿ ದುರ್ಜಯಾನ್ ॥೧೯॥

ಸಪ್ತರ್ಷಿಮಂಡಲವನ್ನು ಹಿಂದಕ್ಕೆ ಬಿಟ್ಟುಕೊಂಡು ಸೈನಿಕರು ಪರ್ವತಗಳಂತೆ ಸ್ಥಿರವಾಗಿ ನಿಂತು ಯುದ್ಧಮಾಡಬೇಕು. ಈ ವಿಧಾನದಿಂದ ರಾಜನು ದುರ್ಜಯರಾದ ಶತ್ರುಗಳನ್ನೂ ಜಯಿಸಬಹುದಾಗಿದೆ.

ಯತೋ ವಾಯುರ್ಯತಃ ಸೂರ್ಯೋ ಯತಃ ಶುಕ್ರಸ್ತತೋ ಜಯಃ ।
ಪೂರ್ವಂ ಪೂರ್ವಂ ಜ್ಯಾಯ ಏಷಾಂ ಸಂನಿಪಾತೇ ಯುಧಿಷ್ಠಿರ ॥೨೦॥

ವಾಯುವು ಯಾವ ಸೈನ್ಯದ ಹಿಂದಿನಿಂದ ಬೀಸುತ್ತಿರುವುದೋ–ಸೂರ್ಯ-ಶುಕ್ರರು ಯಾವ ಸೈನ್ಯದ ಹಿಂಭಾಗದಲ್ಲಿ ಪ್ರಕಾಶಮಾನರಾಗಿರುವರೋ–ಆ ಪಕ್ಷಕ್ಕೇ ವಿಜಯವುಂಟಾಗುತ್ತದೆ. (ಎದುರುಗಾಳಿಯು ಇರಬಾರದೆಂಬ ಅಭಿಪ್ರಾಯ. ವಾಯು-ಸೂರ್ಯ-ಶುಕ್ರರು ಮೂವರು ಹಿಂಬದಿಯಲ್ಲಿರುವುದೇ ಶ್ರೇಯಸ್ಕರ. ಈ ಮೂರರಲ್ಲಿ ಪೂರ್ವ-ಪೂರ್ವಕ್ಕೇ ಪ್ರಾಶಸ್ತ್ಯ. ಮೂರೂ ಇಲ್ಲವಾದಲ್ಲಿ ವಾಯುವಾದರೂ ಹಿಂದಿನಿಂದ ಬೀಸಬೇಕು. ಸೂರ್ಯನಾದರೂ ಹಿಂಬದಿಯಲ್ಲಿ ಪ್ರಕಾಶಿಸುತ್ತಿರಬೇಕು.)

ಅಕರ್ದಮಾಮನುದಕಾಮಮರ್ಯಾದಾಮಲೋಷ್ಟಕಾಮ್ ।
ಅಶ್ವಭೂಮಿಂ ಪ್ರಶಂಸನ್ತಿ ಯೇ ಯುದ್ಧಕುಶಲಾ ಜನಾಃ ॥೨೧॥

ಕೆಸರಿಲ್ಲದೇ ಇರುವ, ನೀರಿಲ್ಲದೇ ಇರುವ, ವಿಶಾಲವಾಗಿರುವ, ಮಣ್ಣಿನ ಹೆಂಟೆಗಳಿಲ್ಲದೇ ಇರುವ ಸ್ಥಳವನ್ನು–ಕುದುರೆಗಳ ತಂಗುದಾಣವನ್ನಾಗಿ ಮಾಡಿಕೊಳ್ಳಬೇಕೆಂದು ಯುದ್ಧಕುಶಲರಾದ ಜನರು ಹೇಳುತ್ತಾರೆ.

ಅಪಜ್ಕಾ ಗರ್ತರಹಿತಾ ರಥಭೂಮಿಃ ಪ್ರಶಸ್ಯತೇ ।
ನಿಚದ್ರುಮಾ ಮಹಾಕಕ್ಷಾ ಸೋದಕಾ ಹಸ್ತಿಯೋಧಿನಾಮ್ ॥೨೨॥

ಕೆಸರಿಲ್ಲದಿರುವ ಮತ್ತು ಹಳ್ಳವಿಲ್ಲದಿರುವ ಸಮತಲಪ್ರದೇಶವು ರಥ ಗಳು ನಿಲ್ಲಲು ಪ್ರಶಸ್ತವಾದ ಸ್ಥಳವಾಗಿರುತ್ತದೆ. ಕುರುಚಲು ಗಿಡಗಳಿರುವ, ವಿಶೇಷವಾಗಿ ಹುಲ್ಲುಬೆಳೆದಿರುವ, ನೀರಿನಿಂದ ಕೂಡಿರುವ ಸ್ಥಳವು ಗಜಯೋಧರು ಇಳಿದುಕೊಳ್ಳಲು ಅನುಕೂಲವಾದ ಸ್ಥಳವಾಗಿದೆ.

ಬಹುದುರ್ಗಾ ಮಹಾಕಕ್ಷಾ ವೇಣುವೇತ್ರಸಮಾಕುಲಾ ।
ಪದಾತೀನಾಂ ಕ್ಷಮಾ ಭೂಮಿಃ ಪರ್ವತೋಪವನಾನಿ ಚ ॥೨೩॥

ಭೂಮಿಯು ಅತ್ಯಂತ ದುರ್ಗಮವಾಗಿರಬೇಕು. (ಅನೇಕ ದುರ್ಗಗಳಿಂದ ಕೂಡಿರಬೇಕು.) ಅಧಿಕವಾಗಿ ಹುಲ್ಲು ಬೆಳೆದಿರಬೇಕು. ಬಿದಿರುಮೆಳೆಗಳಿಂದಲೂ, ಬೆತ್ತದ ಪೊದೆಗಳಿಂದಲೂ ಕೂಡಿರಬೇಕು. ಇಂತಹ ಸ್ಥಳಗಳು ಪದಾತಿಗಳು ತಂಗಲು ಅನುಕೂಲವಾದ ಸ್ಥಳಗಳಾಗಿರುತ್ತವೆ. ಪರ್ವತಗಳೂ ಮತ್ತು ಉಪವನಗಳೂ ಪದಾತಿಗಳು ತಂಗಲು ಅನುಕೂಲವಾದ ಸ್ಥಳಗಳಾಗಿವೆ.

ಪದಾತಿಬಹುಲಾ ಸೇನಾ ದೃಢಾ ಭವತಿ ಭಾರತ ।
ರಥಾಶ್ವಬಹುಲಾ ಸೇನಾ ಸುದಿನೇಷು ಪ್ರಶಸ್ಯತೇ ॥೨೪॥

ಪದಾತಿಗಳೇ ಹೆಚ್ಚಾಗಿರುವ ಸೈನ್ಯವು ದೃಢವಾಗಿರುತ್ತದೆ. ರಥಾಶ್ವಗಳಿಂದ ಸಮೃದ್ಧವಾಗಿರುವ ಸೈನ್ಯವು ಒಳ್ಳೆಯ ದಿವಸಗಳಲ್ಲಿ (ಮಳೆಗಾಲವಲ್ಲದಿರುವಾಗ) ಪ್ರಶಸ್ತವಾಗಿರುತ್ತದೆ.

ಪದಾತಿನಾಗಬಹುಲಾ ಪ್ರಾವೃಟ್ಕಾಲೇ ಪ್ರಶಸ್ಯತೇ ।
ಗುಣಾನೇತಾನ್ಪ್ರಸಂಖ್ಯಾಯ ದೇಶಕಾಲೌ ಪ್ರಯೋಜಯೇತ್ ॥೨೫॥

ವರ್ಷಾಕಾಲದಲ್ಲಿ ಪದಾತಿಗಳ ಮತ್ತು ಗಜಸೈನ್ಯಗಳ ಆಧಿಕ್ಯವು ಪ್ರಶಸ್ತವಾಗಿದೆ. ಈ ಗುಣಗಳನ್ನು ದೇಶ-ಕಾಲಗಳ ದೃಷ್ಟಿಯಿಂದ ವಿಚಾರ ಮಾಡಿ ಆಯಾ ಸೈನ್ಯಗಳನ್ನು ಆಯಾ ಕಾಲಗಳಲ್ಲಿ ಸಂಚಲಿಸಬೇಕು.

ಏವಂ ಸಂಚಿನ್ತ್ಯ ಯೋ ಯಾತಿ ತಿಥಿನಕ್ಷತ್ರಪೂಜಿತಃ ।

ವಿಜಯಂ ಲಭತೇ ನಿತ್ಯಂ ಸೇನಾಂ ಸಮ್ಯಕ್ಪ್ರಯೋಜಯನ್ ।
ಪ್ರಸುಪ್ತಾಂಸ್ತೃಷಿತಾಞ್ಶ್ರಾನ್ತಾನ್ಪ್ರಕೀರ್ಣಾನ್ನಾಭಿಘಾತಯೇತ್ ॥೨೬॥

ಈ ವಿಷಯಗಳೆಲ್ಲವನ್ನೂ ಸಮಾಲೋಚಿಸಿ, ಶ್ರೇಷ್ಠವಾದ ನಕ್ಷತ್ರದಿಂದ ಕೂಡಿರುವ ಶ್ರೇಷ್ಠತಿಥಿಯಲ್ಲಿ ಸೈನ್ಯವನ್ನು ಸರಿಯಾದ ರೀತಿಯಲ್ಲಿ ಸಂಚಲಿಸಿದರೆ–ರಾಜನು ಯುದ್ಧದಲ್ಲಿ ಸದಾ ವಿಜಯಗಳಿಸುತ್ತಾನೆ. ಮಲಗಿರುವವರನ್ನೂ, ಬಾಯಾರಿಕೆಯಿಂದ ಸಂಕಟಪಡುತ್ತಿರುವವರನ್ನೂ, ಬಳಲಿರುವವರನ್ನೂ, ಚದುರಿಹೋಗಿರುವವರನ್ನೂ–ಸಂಹರಿಸಬಾರದು.

ಮೋಕ್ಷೇ ಪ್ರಯಾಣೇ ಚಲನೇ ಪಾನಭೋಜನಕಾಲಯೋಃ ।
ಅತಿಕ್ಷಿಪ್ತಾನ್ವ್ಯತಿಕ್ಷಿಪ್ತಾನ್ನಿಹತಾನ್ಪ್ರತನೂಕೃತಾನ್ ॥೨೭॥

ಸುವಿಶ್ವಬ್ಧಾನ್ಸೃತಾರಮ್ಭಾನುಪನ್ಯಾಸಾನ್ಪ್ರತಾಪಿತಾನ್ ।
ಬಹಿಶ್ಚರಾನುಪನ್ಯಾಸಾನ್ಸೃತವೇಶ್ಮಾನುಸಾರಿಣಃ ॥೨೮॥

ಶಸ್ತ್ರಗಳನ್ನು ತೆಗೆದಿಟ್ಟು–ಕವಚಗಳನ್ನು ಬಿಚ್ಚಿಟ್ಟು ಯುದ್ಧಸ್ಥಳದಲ್ಲಿ ಪ್ರಯಾಣಮಾಡುತ್ತಿರುವಾಗ, ಅತ್ತಲಿತ್ತ ತಿರುಗಾಡುತ್ತಿರುವಾಗ, ಜಲಪಾನ ಮಾಡುತ್ತಿರುವಾಗ, ಭೋಜನಮಾಡುತ್ತಿರುವಾಗ–ಯಾರನ್ನೂ ಕೊಲ್ಲ ಬಾರದು. ಹೀಗೆಯೇ ಬಹಳವಾಗಿ ಗಾಬರಿಗೊಂಡಿರುವವರನ್ನೂ, ಹುಚ್ಚ ರಾಗಿರುವವರನ್ನೂ, ಗಾಯಗೊಂಡಿರುವವರನ್ನೂ, ದುರ್ಬಲರನ್ನೂ, ನಿಶ್ಚಿಂತರಾಗಿ ಕುಳಿತಿರುವವರನ್ನೂ, ಮತ್ತಾವುದೋ ಕೆಲಸದಲ್ಲಿ ತೊಡಗಿರು ವವರನ್ನೂ, ಸುರಂಗವೇ ಮೊದಲಾದ ಗುಪ್ತಸ್ಥಳಗಳಿಂದ ತೃಣಾದಿಗಳನ್ನು ಸಂಗ್ರಹಿಸುವ ಸಲುವಾಗಿ ಹೊರಬಂದವರನ್ನೂ, ಗಾಯಗಳಿಂದ ಸಂತಪ್ತ ರಾಗಿರುವವರನ್ನೂ, ಶಿಬಿರದಿಂದ ಹೊರಗಡೆ ತಿರುಗಾಡುತ್ತಿರುವವರನ್ನೂ, ಶಿಬಿರದ ಸಮೀಪದಲ್ಲಿಯೇ ತೃಣಾದಿಗಳನ್ನು ಸಂಗ್ರಹಿಸುತ್ತಿರುವವರನ್ನೂ, ಶಿಬಿರದ ಕಡೆಗೆ ಓಡುತ್ತಿರುವವರನ್ನೂ ಪ್ರಹರಿಸಬಾರದು.

ಪಾರಮ್ಪರ್ಯಾಗತೇ ದ್ವಾರೇ ಯೇ ಕೇಚಿದನುವರ್ತಿನಃ ।
ಪರಿಚರ್ಯಾವತೋ ದ್ವಾರೇ ಯೇ ಚ ಕೇಚನ ವರ್ಗಿಣಃ ॥೨೯॥

ಪರಂಪರೆಯಿಂದ ಬಂದಿರುವ ರಾಜದ್ವಾರದಲ್ಲಿಯೂ, ರಾಜಸೇವಕ ರಾದ ಮಂತ್ರಿಗಳೇ ಮೊದಲಾದವರ ಗೃಹದ್ವಾರಗಳಲ್ಲಿಯೂ ಇರುವ ಪಹರೆ ಯವರನ್ನೂ ಮತ್ತು ಸಮುದಾಯಾಧಿಪತಿಗಳಾಗಿರುವವರನ್ನೂ ಸಂಹಾರ ಮಾಡಬಾರದು.

ಅನೀಕಂ ಯೇ ವಿಭಿನ್ದನ್ತಿ ಭಿನ್ನಂ ಸಂಸ್ಥಾಪಯನ್ತಿ ಚ ।
ಸಮಾನಾಶನಪಾನಾಸ್ತೇ ಕಾರ್ಯಾ ದ್ವಿಗುಣವೇತನಾಃ ॥೩೦॥

ಯಾರು ಶತ್ರುಗಳ ಕಡೆಯ ಸೈನ್ಯವನ್ನು ಛಿನ್ನ-ಭಿನ್ನಗೊಳಿಸುವರೋ ಮತ್ತು ತಮ್ಮ ಕಡೆಯ ಛಿನ್ನ-ಭಿನ್ನವಾದ ಸೈನ್ಯವನ್ನು ಪುನಃ ಸಂಘಟಿಸು ವರೋ–ಅಂತಹವರು ರಾಜೋಪಭೋಗ್ಯವಾದ ಪಾನ-ಭೋಜನಾದಿಗಳಿಗೆ ಯೋಗ್ಯರಾಗಿರುತ್ತಾರೆ. ಅಂತಹವರಿಗೆ ರಾಜನು ದ್ವಿಗುಣಿತವಾದ ವೇತನ ಗಳನ್ನು ಕೊಡಬೇಕು.

ದಶಾಧಿಪತಯಃ ಕಾರ್ಯಾಃ ಶತಾಧಿಪತಯಸ್ತಥಾ ।
ತತಃ ಸಹಸ್ರಾಧಿಪತಿಂ ಕುರ್ಯಾಚ್ಛೂರಮತನ್ದ್ರಿತಮ್ ॥೩೧॥

ಸೈನ್ಯದಲ್ಲಿ ಕೆಲವರನ್ನು ಹತ್ತು ಸೈನಿಕರಿಗೆ ನಾಯಕರನ್ನಾಗಿ ಮಾಡಬೇಕು. ಕೆಲವರನ್ನು ನೂರು ಸೈನಿಕರಿಗೆ ನಾಯಕರನ್ನಾಗಿ ಮಾಡಬೇಕು. ಶೂರನಾದವನನ್ನೂ ಮತ್ತು ಆಲಸನಲ್ಲದವನನ್ನೂ ಸಾವಿರ ಸೈನಿಕರಿಗೆ ಅಧಿಪತಿಯನ್ನಾಗಿ ಮಾಡಬೇಕು.

ಯಥಾಮುಖ್ಯಾನ್ಸನ್ನಿಪಾತ್ಯ ವಕ್ತವ್ಯಾಃ ಸಂಶಪಾಮಹೇ ।
ವಿಜಯಾರ್ಥಂ ಹಿ ಸಂಗ್ರಾಮೇ ನ ತ್ಯಕ್ಷ್ಯಾಮಃ ಪರಸ್ಪರಮ್ ॥೩೨॥

ಅನಂತರ ಸೇನಾಮುಖ್ಯರನ್ನು ಒಂದೆಡೆಯಲ್ಲಿ ಸಭೆಸೇರಿಸಿ ಅವರಿಂದ 'ವಿಜಯವನ್ನು ಗಳಿಸುವ ಸಲುವಾಗಿ ನಾವು ಪ್ರಾಣವಿರುವವರೆಗೂ ಒಬ್ಬರು ಮತ್ತೊಬ್ಬರನ್ನು ಬಿಟ್ಟು ಹೋಗುವುದಿಲ್ಲ'–ಎಂದು ಪ್ರತಿಜ್ಞೆಯನ್ನು ಮಾಡಿಸಬೇಕು.

ಇಹೈವ ತೇ ನಿವರ್ತನ್ತಾಂ ಯೇ ಚ ಕೇಚನ ಭೀರವಃ ।
ಯೇ ಘಾತಯೇಯುಃ ಪ್ರವರಂ ಕುರ್ವಾಣಾಸ್ತುಮುಲಂ ಪ್ರತಿ ॥೩೩॥

ನಾಯಕರ ಸಭೆಯಲ್ಲಿ ಹೀಗೂ ಘೋಷಿಸಬೇಕು. "ಈ ಸಮೂಹದಲ್ಲಿ ಹೇಡಿಗಳು ಯಾರಾದರೂ ಇದ್ದರೆ ಇಲ್ಲಿಂದಲೇ ಅವರು ಹಿಂದಿರುಗಲಿ. ಯುದ್ಧಮಾಡುವಾಗ ಶತ್ರುಪಕ್ಷದ ಪ್ರಧಾನಯೋಧರನ್ನು ಸಂಹರಿಸಲು ಯಾರು ಸಮರ್ಥರೋ–ಅವರು ಮಾತ್ರ ಇಲ್ಲಿ ಇರಲಿ."

ನ ಸಂನಿಪಾತೇ ಪ್ರದರಂ ವಧಂ ವಾ ಕುರ್ಯುರೀದೃಶಾಃ ।
ಆತ್ಮಾನಂ ಚ ಸ್ವಪಕ್ಷಂ ಚ ಪಾಲಯನ್ಹನ್ತಿ ಸಂಯುಗೇ ॥೩೪॥

ಇಂತಹ ಹೇಡಿಗಳಾದ ಸೈನಿಕರು ಭಯಂಕರವಾದ ಮಹಾಯುದ್ಧದಲ್ಲಿ ಶತ್ರುಪಕ್ಷದ ಸೈನಿಕರನ್ನು ಚದುರಿಸುವುದಕ್ಕಾಗಲೀ–ಸಂಹರಿಸುವುದಕ್ಕಾಗಲೀ ಸಮರ್ಥರಾಗುವುದಿಲ್ಲ. ವೀರಯೋಧರು ಮಹಾಯುದ್ಧದಲ್ಲಿ ತಮ್ಮನ್ನೂ ರಕ್ಷಿಸಿಕೊಳ್ಳುತ್ತಾ ತಮ್ಮ ಪಕ್ಷವನ್ನೂ ಪರಿಪಾಲನೆಮಾಡುತ್ತಾ ಶತ್ರುಗಳನ್ನು ಸಂಹರಿಸುತ್ತಾರೆ.

ಅರ್ಥನಾಶೋ ವಧೋಽಕೀರ್ತಿರಯಶಶ್ಚ ಪಲಾಯನೇ ।
ಅಮನೋಜ್ಞಾ ಸುಖಾ ವಾಚಃ ಪುರುಷಸ್ಯ ಪಲಾಯನೇ ॥೩೫॥

ಸೈನಿಕರಿಗೆ ಈ ವಿಷಯವನ್ನು ಮನದಟ್ಟುಮಾಡಿಕೊಡಬೇಕು. 'ಯುದ್ಧ ಭೂಮಿಯಿಂದ ಪಲಾಯನಮಾಡಿದರೆ ಅನೇಕವಿಧವಾದ ದೋಷಗಳಿಗೆ ಭಾಗಿಗಳಾಗಬೇಕಾಗುತ್ತದೆ. ವಿಜಯದ ಪ್ರಯೋಜನವು ನಾಶವಾಗುತ್ತದೆ. ಜೀವಗಳ್ಳನಾಗಿ ಓಡಿಹೋಗುತ್ತಿರುವವನು ಜೀವದಿಂದ ಉಳಿಯುವ ಸಂಭವವೇನೂ ಇಲ್ಲ. ಶತ್ರುಗಳು ಓಡುತ್ತಿರುವವರನ್ನೂ ಸಂಹರಿಸಬಹುದು. ಒಂದು ವೇಳೆ ಜೀವದಿಂದ ಉಳಿದರೂ ಮರಣಪರ್ಯಂತವಾಗಿ ಅಕೀರ್ತಿಯೂ ಅಪಯಶಸ್ಸೂ ತಪ್ಪಿದ್ದಲ್ಲ. ಜನರು ಬಾಯಿಗೆ ಬಂದಂತೆ ಮಾತನಾಡಿಕೊಳ್ಳುತ್ತಾರೆ. ಅದನ್ನು ಕೇಳುತ್ತಿದ್ದರೆ ಮನಸ್ಸಿಗೆ ಸ್ವಲ್ಪವಾದರೂ ಸುಖವಿರುವುದಿಲ್ಲ. ಪುರುಷನ ಪಲಾಯನದಲ್ಲಿ ಇಷ್ಟೊಂದು ದೋಷ ಗಳಿವೆ'–ಈ ವಿಷಯವನ್ನು ಸೈನಿಕರಿಗೆ ಸ್ಪಷ್ಟಪಡಿಸಬೇಕು.

ಪ್ರತಿಧ್ವಸ್ತೋಷ್ಠದನ್ತಸ್ಯ ನ್ಯಸ್ತಸರ್ವಾಯುಧಸ್ಯ ಚ ।
ಅಮಿತ್ರೈರವರುದ್ಧಸ್ಯ ದ್ವಿಷತಾಮಸ್ತು ನಃ ಸದಾ ॥೩೬॥

ಯಾವನ ಹಲ್ಲುಗಳು ಮುರಿದು ದವಡೆಯು ಜಜ್ಜಿಹೋಗಿದೆಯೋ, ಯಾವನು ಶತ್ರುಗಳಿಂದ ಯಾವಾಗಲೂ ತಡೆಯಲ್ಪಟ್ಟಿರುವನೋ–ಅಂತಹ ಯೋಧನು ಯಾವಾಗಲೂ ನಮ್ಮ ಶತ್ರುಗಳ ಪಕ್ಷದಲ್ಲಿರಲಿ. (ಅಂತಹ ಯೋಧರು ನಮ್ಮ ಪಕ್ಷದಲ್ಲಿರುವುದು ಬೇಡ.)

ಮನುಷ್ಯಾಪಸದಾ ಹ್ಯೇತೇ ಯೇ ಭವನ್ತಿ ಪರಾಙ್ಮುಖಾಃ ।
ರಾಶಿವರ್ಧನಮಾತ್ರಾಸ್ತೇ ನೈವ ತೇ ಪ್ರೇತ್ಯ ನೋ ಇಹ ॥೩೭॥

ಯಾರು ಯುದ್ಧದಿಂದ ಪರಾಙ್ಮುಖರಾಗುವರೋ–ಅವರು ಮನುಷ್ಯಾ ಧಮರೇ ಸರಿ. ಅಂತಹವರು ಸೈನ್ಯಸಂಖ್ಯೆಯನ್ನು ಹೆಚ್ಚಿಸಲು ಮಾತ್ರವೇ ಸಮರ್ಥರಾಗುತ್ತಾರೆ. ಅಂತಹವರಿಗೆ ಇಹವೂ ಇಲ್ಲ ; ಪರವೂ ಇಲ್ಲ.

ಅಮಿತ್ರಾ ಹೃಷ್ಟಮನಸಃ ಪ್ರತ್ಯುದ್ಯಾನ್ತಿ ಪಲಾಯಿನಮ್ ।
ಜಯಿನಸ್ತು ನರಾಸ್ತಾತ ಚನ್ದನೈರ್ಮಣ್ಡನೇನ ಚ ॥೩೮॥

ಶತ್ರುಗಳು ಹೃಷ್ಟವಾದ ಮನಸ್ಸಿನಿಂದ ಕೂಡಿದವರಾಗಿ ಪಲಾಯನ ಮಾಡುತ್ತಿರುವವನನ್ನು ಹಿಂಬಾಲಿಸುತ್ತಾರೆ. ವಿಜಯಿಗಳಾದವರು ಚಂದನ ದಿಂದಲೂ ಆಭರಣಗಳಿಂದಲೂ ಬಂಧು-ಮಿತ್ರರಿಂದ ಪೂಜಿಸಲ್ಪಡುತ್ತಾರೆ.

ಯಸ್ಯ ಸ್ಮ ಸಂಗ್ರಾಮಗತಾ ಯಶೋ ವೈ ಘ್ನನ್ತಿ ಶತ್ರವಃ ।
ತದಸಹ್ಯತರಂ ದುಃಖಮಹಂ ಮನ್ಯೇ ವಧಾದಪಿ ॥೩೯॥

ಸಂಗ್ರಾಮಕ್ಕೆ ಆಗಮಿಸಿರುವ ಶತ್ರುಗಳು ಯಾವನ ಯಶಸ್ಸನ್ನು ಹಾಳು ಮಾಡುತ್ತಾರೆಯೋ ಅವನಿಗೆ ಅದು–ಸಹಿಸಿಕೊಳ್ಳಲು ಸಾಧ್ಯವಾಗದೇ ಇರತಕ್ಕ, ಮರಣಕ್ಕಿಂತಲೂ ಹೆಚ್ಚಾದ ದುಃಖವೆಂದು–ನಾನು ಭಾವಿಸುತ್ತೇನೆ.

ಜಯಂ ಜಾನೀತ ಧರ್ಮಸ್ಯ ಮೂಲಂ ಸರ್ವಸುಖಸ್ಯ ಚ ।
ಯಾ ಭೀರೂಣಾಂ ಪರಾ ಗ್ಲಾನಿಃ ಶೂರಸ್ತಾಮಧಿಗಚ್ಛತಿ ॥೪೦॥

ವೀರರೇ! ವಿಜಯವನ್ನು ನೀವು ಧರ್ಮದ ಮೂಲವೆಂಬು ದಾಗಿಯೂ–ಸರ್ವಸುಖಕ್ಕೂ ಮೂಲವೆಂಬುದಾಗಿಯೂ ತಿಳಿಯಿರಿ. ಯಾವ ಗ್ಲಾನಿಯು ಹೇಡಿಗಳಿಗೆ ಮನೋದೌರ್ಬಲ್ಯವನ್ನುಂಟುಮಾಡುವುದೋ– ಅದೇ ಗ್ಲಾನಿಯು ವೀರರಾದವರಿಗೆ ಸಂತೋಷವನ್ನುಂಟುಮಾಡುತ್ತದೆ. ಹೇಡಿಗಳು ಮೃತ್ಯುವಿಗೆ ಭಯಪಡುತ್ತಾರೆ. ವೀರರು ಮೃತ್ಯುವನ್ನು ಧೈರ್ಯದಿಂದ ಎದುರಿಸುತ್ತಾರೆ. (ಹೊಂದುತ್ತಾರೆ.)

ತೇ ವಯಂ ಸ್ವರ್ಗಮಿಚ್ಛನ್ತಃ ಸಂಗ್ರಾಮೇ ತ್ಯಕ್ತಜೀವಿತಾಃ ।
ಜಯನ್ತೋ ವಧ್ಯಮಾನಾ ವಾ ಪ್ರಾಪ್ನುಯಾಮ ಚ ಸದ್ಗತಿಮ್ ॥೪೧॥

"ನಾವು ಸ್ವರ್ಗವನ್ನು ಪಡೆದುಕೊಳ್ಳಬೇಕೆಂಬ ಆಶಯದಿಂದ ನಮ್ಮ ಪ್ರಾಣಗಳ ಮೇಲಿನ ಹಂಗನ್ನೂ ತೊರೆದು ಯುದ್ಧಮಾಡುತ್ತೇವೆ. ನಾವು ಯುದ್ಧದಲ್ಲಿ ವಿಜಯವನ್ನು ಪಡೆದರೆ ಶಾಶ್ವತವಾದ ಕೀರ್ತಿಯನ್ನು ಗಳಿಸು ತ್ತೇವೆ. ಒಂದು ವೇಳೆ ಹತರಾದರೆ ಸದ್ಗತಿಯನ್ನಾದರೂ ಪಡೆಯುತ್ತೇವೆ."

ಏವಂ ಸಂಶಪ್ತಶಪಥಾಃ ಸಮಭಿತ್ಯಕ್ತಜೀವಿತಾಃ ।
ಅಮಿತ್ರವಾಹಿನೀಂ ವೀರಾಃ ಪ್ರತಿಗಾಹನ್ತ್ಯಭೀರವಃ ॥೪೨॥

ಈ ಪ್ರಕಾರವಾಗಿ ಶಪಥವನ್ನು ಮಾಡಿ ಜೀವದ ಹಂಗನ್ನೂ ತೊರೆದು

ಧೈರ್ಯಶಾಲಿಗಳಾದ ವೀರರು ಶತ್ರುಸೈನ್ಯದ ಮಧ್ಯಭಾಗಕ್ಕೆ ನುಗ್ಗಿಹೋಗು ತ್ತಾರೆ.

ಅಗ್ರತಃ ಪುರುಷಾನೀಕಮಸಿಚರ್ಮವತಾಂ ಭವೇತ್ ।
ಪೃಷ್ಠತಃ ಶಕಟಾನೀಕಂ ಕಲತ್ರಂ ಮಧ್ಯತಸ್ತಥಾ ॥೪೩॥

ಸೈನ್ಯವು ಪ್ರಯಾಣಮಾಡುವ ಸಮಯದಲ್ಲಿ ಮುಂಭಾಗದಲ್ಲಿ ಕತ್ತಿ-ಗುರಾಣಿಗಳನ್ನು ಧರಿಸಿರುವ ಪುರುಷಸೈನ್ಯ (ಪದಾತಿಸೈನ್ಯ) ವಿರಬೇಕು. ಕಡೆಯಲ್ಲಿ ರಥಸೈನ್ಯವಿರಬೇಕು. ಮಧ್ಯಭಾಗದಲ್ಲಿ ರಾಜಸ್ತ್ರೀಯರಿರಬೇಕು.

ಪರೇಷಾಂ ಪ್ರತಿಘಾತಾರ್ಥಂ ಪದಾತೀನಾಂ ಚ ಬೃಂಹಣಮ್ ।
ಅಪಿ ತಸ್ಮಿನ್ಪುರೇ ವೃದ್ಧಾ ಭವೇಯುರ್ಯೇ ಪುರೋಗಮಾಃ ॥೪೪॥

ಪಟ್ಟಣದಲ್ಲಿರುವ ವೃದ್ಧರು ಸೇನೆಯ ಮುಂಭಾಗದಲ್ಲಿದ್ದು ಶತ್ರುಗಳ ಪ್ರತಿಘಾತಕ್ಕಾಗಿ ಪದಾತಿಸೈನಿಕರಿಗೆ ಪ್ರೋತ್ಸಾಹ ನೀಡುತ್ತಿರಬೇಕು.

ಯೇ ಪುರಸ್ತಾದಭಿಮತಾಃ ಸತ್ತ್ವವನ್ತೋ ಮನಸ್ವಿನಃ ।
ತೇ ಪೂರ್ವಮಭಿವರ್ತೇರಂಶ್ಚೈತಾನೇವೇತರೇ ಜನಾಃ ॥೪೫॥

ಹಿಂದೆಯೇ ಯಾರು ಸತ್ತ್ವವಂತರೆಂದೂ, ಜಿತೇಂದ್ರಿಯರೆಂದೂ ಪ್ರಸಿದ್ಧಿಯನ್ನು ಪಡೆದಿರುವರೋ–ಅವರೇ ಸೈನ್ಯದ ಮುಂಭಾಗದಲ್ಲಿರಬೇಕು. ಉಳಿದವರು ಅವರನ್ನು ಅನುಸರಿಸಿ ಹೋಗಬೇಕು.

ಅಪಿ ಚೋದ್ಧರ್ಷಣಂ ಕಾರ್ಯಂ ಭೀರೂಣಾಮಪಿ ಯತ್ನತಃ ।
ಸ್ಕನ್ಧದರ್ಶನಮಾತ್ರಾತ್ತು ತಿಷ್ಠೇಯುರ್ವಾ ಸಮೀಪತಃ ॥೪೬॥

ಭೀರುಗಳಾದವರನ್ನು ಪ್ರಯತ್ನಪೂರ್ವಕವಾಗಿ ಯುದ್ಧಮಾಡಲು ಪ್ರೋತ್ಸಾಹಿಸಬೇಕು ಅಥವಾ ಅವರು ಸೈನ್ಯದ ಬಾಹುಳ್ಯವನ್ನು ಶತ್ರುವಿಗೆ ತೋರಿಸುವ ಸಲುವಾಗಿ ಸಮೀಪದಲ್ಲಾದರೂ ಇರಬೇಕು.

ಸಂಹತಾನ್ಯೋಧಯೇದಲ್ಪಾನ್ಕಾಮಂ ವಿಸ್ತಾರಯೇದ್ಬಹೂನ್ ।
ಸೂಚೀಮುಖಮನೀಕಂ ಸ್ಯಾದಲ್ಪಾನಾಂ ಬಹುಭಿಃ ಸಹ ॥೪೭॥

ಒಂದು ವೇಳೆ ತನ್ನ ಕಡೆಯ ಸೈನಿಕರು ಅಲ್ಪಸಂಖ್ಯೆಯಲ್ಲಿದ್ದರೆ–ಅವ

ರೆಲ್ಲರೂ ಒಗ್ಗಟ್ಟಿನಿಂದಲೇ ಯುದ್ಧಮಾಡುವಂತೆ ವ್ಯವಸ್ಥೆಮಾಡಬೇಕು. ಬಹುಸಂಖ್ಯಾತರಾದ ಸೈನಿಕರಿದ್ದರೆ ವಿಸ್ತಾರವಾದ ಸ್ಥಳದಲ್ಲಿ ಇಚ್ಛಾನುಸಾರ ವಾಗಿ ಯುದ್ಧಮಾಡಲು ಅವರನ್ನು ಬಿಟ್ಟುಬಿಡಬೇಕು. ಅಲ್ಪಸಂಖ್ಯಾತರಾದ ಸೈನಿಕರು ಬಹುಸಂಖ್ಯಾತರಾದ ಸೈನಿಕರೊಡನೆ ಯುದ್ಧವನ್ನು ಮಾಡ ಬೇಕಾಗಿಬಂದಾಗ 'ಸೂಚೀಮುಖ'–ಎಂಬ ವ್ಯೂಹವನ್ನು ರಚಿಸಬೇಕು.

ಸಮ್ಪ್ರಯುಕ್ತೇ ನಿಕೃಷ್ಟೇ ವಾ ಸತ್ಯಂ ವಾ ಯದಿ ವಾನೃತಮ್ ।
ಪ್ರಗೃಹ್ಯ ಬಾಹೂನ್ಕ್ರೋಶೇತ ಭಗ್ನಾ ಭಗ್ನಾಃ ಪರೇ ಇತಿ ।
ಆಗತಂ ಮೇ ಮಿತ್ರಬಲಂ ಪ್ರಹರಧ್ವಮಭೀತವತ್ ॥೪೮॥

ಯುದ್ಧಮಾಡುತ್ತಿರುವಾಗ ತನ್ನ ಸೈನ್ಯವು ಉತ್ಕೃಷ್ಟಾವಸ್ಥೆಯಲ್ಲಿಯೇ ಇರಲಿ ; ನಿಕೃಷ್ಟಾವಸ್ಥೆಯಲ್ಲಿಯೇ ಇರಲಿ–ಹೇಳುವ ಮಾತು ಸತ್ಯವೇ ಆಗಿರಲಿ; ಸುಳ್ಳೇ ಆಗಿರಲಿ–ಎರಡು ತೋಳುಗಳನ್ನೂ ಮೇಲಕ್ಕೆತ್ತಿ ತನ್ನ ಸೈನಿಕರನ್ನು ಉದ್ದೇಶಿಸಿ "ಶತ್ರುಗಳು ಭಗ್ನರಾಗಿ ಹೋದರು. ಶತ್ರುಸೈನಿಕರು ಭಯದಿಂದ ಕಾಲ್ದೆಗೆಯುತ್ತಿದ್ದಾರೆ. ನಾವು ನಿರೀಕ್ಷಿಸಿದ್ದಂತೆಯೇ ನಮ್ಮ ಮಿತ್ರಪಕ್ಷದ ಸೈನಿಕರೂ ನಮ್ಮ ಸಹಾಯಕ್ಕೆ ಬಂದುಬಿಟ್ಟರು. ನಾವೀಗ ವಿಜಯದ ಹಾದಿಯಲ್ಲಿದ್ದೇವೆ. ನಿರ್ಭಯವಾಗಿ ಶತ್ರುಗಳನ್ನು ಪ್ರಹರಿಸಿರಿ"– ಎಂದು ಪದೇ-ಪದೇ ಹೇಳುತ್ತಲೇ ಇರಬೇಕು.

ಇಂತಹ ವೀರಗರ್ಜನೆಯನ್ನು ಕೇಳಿದೊಡನೆಯೇ ಪರಾಕ್ರಮಶಾಲಿ ಗಳಾದ ವೀರಯೋಧರು ವೀರಗರ್ಜನೆಗಳನ್ನು ಮಾಡುತ್ತಾ ಶತ್ರುಗಳ ಮೇಲೆ ಬೀಳುತ್ತಾರೆ.

ಕ್ಷ್ವೇಡಾಃ ಕಿಲಕಿಲಾಶಬ್ದಾಃ ಕ್ರಕಚಾ ಗೋವಿಷಾಣಿಕಾಃ ।
ಭೇರೀಮೃದೃಙ್ಗಪಣವಾನ್ನಾದಯೇಯುಃ ಪುರಶ್ಚರಾನ್ ॥೫೦॥

ಸೈನ್ಯದ ಮುಂಭಾಗದಲ್ಲಿರುವವರಿಂದ ಗರ್ಜನ-ತರ್ಜನಗಳನ್ನು ಮಾಡಿ ಸುತ್ತಲೇ ಇರಬೇಕು. ಅವರ ವೀರಗರ್ಜನೆಗಳೊಡನೆ ಕ್ರಕಚ, ಕೊಂಬು,

ಭೇರೀ, ಮೃದಂಗ, ನಗಾರಿ–ಮುಂತಾದ ವಾದ್ಯಗಳನ್ನು ಬಾರಿಸುವಂತೆ ವ್ಯವಸ್ಥೆಮಾಡಬೇಕು."

೧೦೦ನೆಯ ಅಧ್ಯಾಯವು ಮುಗಿಯಿತು.

೧೦೧ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಭಿನ್ನ-ಭಿನ್ನ ದೇಶಗಳ ಯೋಧರ ಸ್ವಭಾವ-ರೂಪ-ಬಲ-ಆಚರಣೆ ಮತ್ತು ಲಕ್ಷಣಗಳ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂಶೀಲಾಃ ಕಿಂಸಮಾಚಾರಾಃ ಕಥಂರೂಪಾಶ್ಚ ಭಾರತ ।
ಕಿಂಸನ್ನಾಹಾಃ ಕಥಂಶಸ್ತ್ರಾ ಜನಾಃ ಸ್ಯುಃ ಸಂಗರೇ ಕ್ಷಮಾಃ ॥೧॥

"ಪಿತಾಮಹ! ಯಾವ ವಿಧವಾದ ಆಚರಣೆಯಿರತಕ್ಕವರು, ಯಾವ ವಿಧವಾದ ಸ್ವಭಾವವಿರತಕ್ಕವರು, ಯಾವ ವಿಧವಾದ ರೂಪವಿರತಕ್ಕವರು, ಎಂತಹ ಕವಚವನ್ನು ಧರಿಸಿರತಕ್ಕವರು, ಎಂತಹ ಶಸ್ತ್ರಗಳನ್ನು ಹಿಡಿದಿರ ತಕ್ಕವರು–ಯುದ್ಧಸಮರ್ಥರಾಗಿರುತ್ತಾರೆ?"

ಭೀಷ್ಮನು ಹೇಳುತ್ತಾನೆ :

ಯಥಾಚರಿತಮೇವಾತ್ರ ಶಸ್ತ್ರಂ ಪತ್ರಂ ವಿಧೀಯತೇ ।
ಆಚಾರಾದ್ವೀರಪುರುಷಸ್ತಥಾ ಕರ್ಮಸು ವರ್ತತೇ ॥೨॥

"ಅಸ್ತ್ರ-ಶಸ್ತ್ರಗಳೂ ಮತ್ತು ವಾಹನಗಳೂ ಯೋಧರ ದೇಶ ಮತ್ತು ಕುಲಾಚಾರಗಳಿಗೆ ಅನುರೂಪವಾಗಿರುತ್ತವೆ. ವೀರಪುರುಷರು ಯಾವಾಗಲೂ ತಮ್ಮ ಪರಂಪರಾಗತವಾದ ಆಚಾರಗಳಿಗೆ ಅನುಸಾರವಾಗಿಯೇ ಕಾರ್ಯ ಗಳಲ್ಲಿ ತೊಡಗುತ್ತಾರೆ.

ಗಾನ್ಧಾರಾಃ ಸಿನ್ಧುಸೌವೀರಾ ನಖರಪ್ರಾಸಯೋಧಿನಃ ।
ಅಭೀರವಃ ಸುಬಲಿನಸ್ತದ್ಬಲಂ ಸರ್ವಪಾರಗಮ್ ॥೩॥

ಗಾಂಧಾರ-ಸಿಂಧು-ಸೌವೀರದೇಶಗಳ ಯೋಧರು ನಖರ ಮತ್ತು ಪ್ರಾಸಾಯುಧಗಳಿಂದ ಯುದ್ಧಮಾಡುತ್ತಾರೆ. ಅವರು ಮಹಾಬಲಿಷ್ಠರು

ಮತ್ತು ಧೈರ್ಯಶಾಲಿಗಳು. ಗಾಂಧಾರ-ಸಿಂಧು-ಸೌವೀರರಾಷ್ಟ್ರಗಳ ಸೈನಿಕರು ಸರ್ವವಿಧವಾದ ಆಯುಧಗಳಲ್ಲಿಯೂ (ಯುದ್ಧಗಳಲ್ಲಿಯೂ) ನಿಪುಣರು.

ಸರ್ವಶಸ್ತ್ರೇಷು ಕುಶಲಾಃ ತತ್ತ್ವವನ್ತೋ ಹ್ಯುಶೀನರಾಃ ।
ಪ್ರಾಚ್ಯಾ ಮಾತಙ್ಗಯುದ್ಧೇಷು ಕುಶಲಾಃ ಕೂಟಯೋಧಿನಃ ॥೪॥

ಉಶೀನರದೇಶದ ವೀರರು ಸರ್ವವಿಧವಾದ ಅಸ್ತ್ರ-ಶಸ್ತ್ರಗಳಲ್ಲಿಯೂ ಕುಶಲರು. ಮಹಾಬಲಿಷ್ಠರು. ಪೂರ್ವದೇಶದ ಯೋಧರು ಆನೆಗಳ ಮೇಲೆ ಕುಳಿತು ಯುದ್ಧಮಾಡುವುದರಲ್ಲಿ ಕುಶಲರು. ಅವರಿಗೆ ಕೂಟಯುದ್ಧವೂ (ವಂಚನೆಯ ಯುದ್ಧವೂ) ತಿಳಿದಿರುವುದು.

ತಥಾ ಯವನಕಾಮ್ಬೋಜಾ ಮಥುರಾಮಭಿತಶ್ಚ ಯೇ ।
ಏತೇ ನಿಯುದ್ಧಕುಶಲಾ ದಾಕ್ಷಿಣಾತ್ಯಾಸಿಪಾಣಯಃ ॥೫॥

ಯವನರೂ, ಕಾಂಬೋಜರೂ ಮತ್ತು ಮಥುರೆಯ ಅಕ್ಕ-ಪಕ್ಕಗಳಲ್ಲಿರುವ ಯೋಧರೂ ಮಲ್ಲಯುದ್ಧದಲ್ಲಿ ನಿಪುಣರು. ಹಾಗೆಯೇ ದಕ್ಷಿಣದೇಶಗಳ ಯೋಧರು ಖಡ್ಗಯುದ್ಧದಲ್ಲಿ ಕುಶಲರಾಗಿರುತ್ತಾರೆ.

ಸರ್ವತ್ರ ಶೂರಾ ಜಾಯನ್ತೇ ಮಹಾಸತ್ತ್ವಾ ಮಹಾಬಲಾಃ ।
ಪ್ರಾಯ ಏವ ಸಮುದ್ದಿಷ್ಟಾ ಲಕ್ಷಣಾನಿ ತು ಮೇ ಶೃಣು ॥೬॥

ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ ಮಹಾಸತ್ತ್ವರಾದ, ಮಹಾಬಲಿಷ್ಠರಾದ ಯೋಧರು ಹುಟ್ಟುತ್ತಲೇ ಇರುತ್ತಾರೆ. ಆ ವೀರರೆಲ್ಲರ ಉಲ್ಲೇಖನವನ್ನು ಈಗಾಗಲೇ ಮಾಡಿಯಾಗಿದೆ. ಅವರ ಲಕ್ಷಣಗಳನ್ನು ಹೇಳುವೆನು ; ಕೇಳು.

ಸಿಂಹಶಾರ್ದೂಲವಾಙ್ನೇತ್ರಾ ಸಿಂಹಶಾರ್ದೂಲಗಾಮಿನಃ ।
ಪಾರಾವತಕುಲಿಙ್ಗಾಕ್ಷಾಃ ಸರ್ವೇ ಶೂರಾ ಪ್ರಮಾಥಿನಃ ॥೭॥

ಯಾರ ಮಾತು (ಧ್ವನಿ), ಕಣ್ಣುಗಳು ಮತ್ತು ಚಲನ-ವಲನಗಳು ಸಿಂಹ-ಶಾರ್ದೂಲಗಳಿಗೆ ಸಮಾನವಾಗಿರುವುವೋ ಮತ್ತು ಕಣ್ಣುಗಳು ಪಾರಿವಾಳದ ಅಥವಾ ನೀರೊಳಗಾಡುವ ಮಕ್ಕುಟಪಕ್ಷಿಯ ಕಣ್ಣುಗಳ ಬಣ್ಣದಿಂದ ಕೂಡಿರುವುದೋ–ಅಂತಹ ಶೂರರು ಶತ್ರುಸೈನ್ಯವನ್ನು ಮಥಿಸಲು ಸಮರ್ಥರಾಗುತ್ತಾರೆ.

ಮೃಗಸ್ವರಾ ದ್ವೀಪಿನೇತ್ರಾ ಋಷಭಾಕ್ಷಾಸ್ತರಸ್ವಿನಃ ।
ಪ್ರಮಾದಿನಶ್ಚ ಮನ್ದಾಶ್ಚ ಕ್ರೋಧನಾಃ ಕಿಙ್ಕಿಣೀಸ್ವನಾಃ ॥೮॥

ಯಾರ ಕಂಠಸ್ವರವು ಮೃಗಗಳ ಕಂಠಸ್ವರಕ್ಕೆ ಸಮಾನವಾಗಿರುವುದೋ, ಕಣ್ಣುಗಳು ಆನೆಯ ಅಥವಾ ವೃಷಭಗಳ ಕಣ್ಣುಗಳಂತಿರುವುವೋ–ಅಂತಹವರು ವೇಗಶಾಲಿಗಳಾಗಿರುತ್ತಾರೆ. ಯಾರು ಮಂದಗತಿಯುಳ್ಳವರೋ, ಪ್ರಮಾದಶೀಲರೋ, ಯಾರ ಕಂಠನಾದವು ಚಿಕ್ಕಗಂಟೆಗಳ ಶಬ್ದದಂತೆ ಸುಮಧುರವಾಗಿರುವುದೋ–ಅವರು ಮಹಾಕೋಪಿಷ್ಠರಾಗಿರುತ್ತಾರೆ.

ಮೇಘಸ್ವನಾಃ ಕ್ರೋಧಮುಖಾಃ ಕೇಚಿತ್ಕರಭಸಂನಿಭಾಃ ।
ಜಿಹ್ಮನಾಸಾಗ್ರಜಿಹ್ವಾಶ್ಚ ದೂರಗಾ ದೂರಪಾತಿನಃ ॥೯॥

ಯಾರ ಗರ್ಜನೆಯು ಮೇಘದ ಗರ್ಜನೆಗೆ ಸಮಾನವಾಗಿರುವುದೋ, ಮುಖವು ಕ್ರೋಧಯುಕ್ತವಾಗಿರುವುದೋ, ಯಾರಿಗೆ ಒಂಟೆಯಂತೆ ನೀಳವಾದ ಕತ್ತಿರುವುದೋ, ವಕ್ರವಾದ ಮೂಗು ಮತ್ತು ನಾಲಿಗೆಗಳಿರುವುವೋ–ಅವರು ಬಹಳ ದೂರದವರೆಗೆ ಹೋಗಬಲ್ಲರು ಮತ್ತು ಬಾಣವನ್ನು ಬಹಳ ದೂರದವರೆಗೂ ಬಿಡಬಲ್ಲರು.

ಬಿಡಾಲಕುಬ್ಜತನವಸ್ತನುಕೇಶಾಸ್ತನುತ್ವಚಃ ।
ಶೀಘ್ರಾಶ್ಚಪಲವೃತ್ತಾಶ್ಚ ತೇ ಭವನ್ತಿ ದುರಾಸದಾಃ ॥೧೦॥

ಯಾರು ಬೆಕ್ಕಿನಂತೆ ಬಹಳ ಕುಳ್ಳಾದ ಶರೀರವನ್ನು ಹೊಂದಿರುವರೋ, ಯಾರ ತಲೆಯಲ್ಲಿರುವ ಕೇಶಗಳೂ ಮತ್ತು ಚರ್ಮವೂ ತೆಳುವಾಗಿರುವುದೋ–ಅಂತಹವರು ಬಹಳ ಶೀಘ್ರವಾಗಿ ಶಸ್ತ್ರಗಳನ್ನು ಬಿಡಬಲ್ಲರು. ಅವರು ವೇಗಶಾಲಿಗಳೂ, ಚಪಲವೃತ್ತರೂ ಮತ್ತು ದುರ್ಜಯರೂ ಆಗಿರುತ್ತಾರೆ.

ಗೋಧಾನಿಮೀಲಿತಾಃ ಕೇಚಿನ್ಮೃದುಪ್ರಕೃತಯಸ್ತಥಾ ।
ತುರಙ್ಗಗತಿನಿರ್ಘೋಷಾಸ್ತೇ ನರಾಃ ಪಾರಯಿಷ್ಣವಃ ॥೧೧॥

ಯಾರ ಮುಚ್ಚಿದ ಕಣ್ಣುಗಳು ನೀರುಡದ ಮುಚ್ಚಿದ ಕಣ್ಣುಗಳಂತಿರುವುವೋ, ಸ್ವಭಾವವು ಮೃದುವಾಗಿರುವುದೋ, ನಡಿಗೆಯೂ ಮತ್ತು ಗರ್ಜನೆಯೂ ಕುದುರೆಯ ನಡಿಗೆಯಂತೆ ಮತ್ತು ಧ್ವನಿಯಂತಿರುವುದೋ–ಅಂತಹ ಯೋಧರು ಯುದ್ಧಸಮುದ್ರವನ್ನು ಅನಾಯಾಸವಾಗಿ ದಾಟುತ್ತಾರೆ.

ಸುಸಂಹತಾಃ ಸುತನವೋ ವ್ಯೂಢೋರಸ್ಕಾಃ ಸುಸಂಸ್ಥಿತಾಃ ।
ಪ್ರವಾದಿತೇಷು ಕುಪ್ಯನ್ತಿ ಹೃಷ್ಯನ್ತಿ ಕಲಹೇಷು ಚ ॥೧೨॥

ಯಾರ ಶರೀರವು ಗಟ್ಟಿಮುಟ್ಟಾಗಿರುವುದೋ, ಸುಂದರವಾದ ಶರೀರವನ್ನು ಯಾರ ಹೊಂದಿರುವರೋ, ವಿಶಾಲವಾದ ಎದೆಯು ಯಾರಿಗಿರುವುದೋ, ಯಾರಿಗೆ ಅಂಗಾಂಗಗಳ ಸೌಷ್ಠವವಿರುವುದೋ–ಅಂತಹವರು ಯುದ್ಧದ ಮಾತನ್ನು (ರಣವಾದ್ಯಗಳ ಧ್ವನಿಯನ್ನು) ಕೇಳಿದೊಡನೆಯೇ ಕೋಪಿಷ್ಠರಾಗುತ್ತಾರೆ. ಯುದ್ಧಮಾಡುವಾಗ ಆನಂದದಿಂದ ಯುದ್ಧಮಾಡುತ್ತಾರೆ.

ಗಮ್ಭೀರಾಕ್ಷಾ ನಿಃಸೃತಾಕ್ಷಾಃ ಪಿಙ್ಗಾಕ್ಷಾ ಭ್ರುಕುಟೀಮುಖಾಃ ।
ನಕುಲಾಕ್ಷಾಸ್ತಥಾ ಚೈವ ಸರ್ವೇ ಶೂರಾಸ್ತನುತ್ಯಜಃ ॥೧೩॥

ಯಾರ ಕಣ್ಣುಗಳು ಆಳವಾಗಿರುವುವೋ, ಕಣ್ಣುಗುಡ್ಡೆಗಳು ಹೊರಚಾಚಿರುವುವೋ, ಪಿಂಗಲವರ್ಣದ ಕಣ್ಣುಗಳು ಯಾರಿಗಿರುವುವೋ, ಯಾರ ಮುಖವು ಗಂಟಿಕ್ಕಿದ ಹುಬ್ಬುಗಳಿಂದ ಕೂಡಿರುವುದೋ, ಮುಂಗುಸಿಯ ಕಣ್ಣುಗಳಂತೆ ಕಣ್ಣುಗಳು ಯಾರಿಗಿವೆಯೋ, ಇಂತಹ ಲಕ್ಷಣಗಳುಳ್ಳವರೆಲ್ಲರೂ ಶೂರರೂ, ಪ್ರಾಣಗಳನ್ನೇ ಒತ್ತೆಯಾಗಿಟ್ಟು ಯುದ್ಧಮಾಡುವವರೂ ಆಗಿರುತ್ತಾರೆ.

ಜಿಹ್ಮಾಕ್ಷಾಃ ಪ್ರಲಲಾಟಾಶ್ಚ ನಿರ್ಮಾಂಸಹನವೋಽಪಿ ಚ ।
ವಜ್ರಬಾಹ್ವಙ್ಗುಲೀಚಕ್ರಾಃ ಕೃಶಾ ಧಮನಿಸಂತತಾಃ ॥೧೪॥

ಪ್ರವಿಶನ್ತಿ ಚ ವೇಗೇನ ಸಾಮ್ಪರಾಯೇ ಹ್ಯುಪಸ್ಥಿತೇ ।
ವಾರಣಾ ಇವ ಸಮ್ಮತ್ತಾಸ್ತೇ ಭವನ್ತಿ ದುರಾಸದಾಃ ॥೧೫॥

ಯಾರ ಕಣ್ಣುಗಳು ವಕ್ರವಾಗಿರುವುವೋ, ಹಣೆಯು ಉಬ್ಬಿರುವುದೋ, ಗಲ್ಲಗಳು ಮಾಂಸಲವಾಗಿರದೆ ಚಪ್ಪಟೆಯಾಗಿರುವುದೋ, ಯಾರ ಭುಜಗಳ ಮೇಲೆ ವಜ್ರದ ಚಿಹ್ನೆಯೂ, ಬೆರಳುಗಳಲ್ಲಿ ಚಕ್ರದ ಚಿಹ್ನೆಯೂ ಇರುವುದೋ, ಯಾರು ಕೃಶರಾಗಿರುವರೋ, ಯಾರ ನರನಾಡಿಗಳೆಲ್ಲವೂ ಹೊರಗೆ ಕಾಣುತ್ತಿರುವುವೋ, ಅಂತಹವರು ಯುದ್ಧವು ಪ್ರಾರಂಭವಾದೊಡನೆಯೇ, ಅತ್ಯಂತವೇಗದಿಂದ ರಣರಂಗವನ್ನು ಪ್ರವೇಶಿಸುತ್ತಾರೆ. ಮದಗಜ

ಗಳಂತೆ ಮತ್ತರಾಗಿ ಯುದ್ಧಮಾಡುವ ಅವರು ಶತ್ರುಗಳಿಗೆ ದುರಾಸದರೂ ಆಗಿರುತ್ತಾರೆ.

ದೀಪ್ತಸ್ಫುಟಿತಕೇಶಾನ್ತಾಃ ಸ್ಥೂಲಪಾರ್ಶ್ವಹನೂಮುಖಾಃ ।
ಉನ್ನತಾಂಸಾಃ ಪೃಥುಗ್ರೀವಾ ವಿಕಟಾಃ ಸ್ಥೂಲಪಿಣ್ಡಿಕಾಃ ॥೧೬॥

ಉದ್ಧತಾ ಇವ ಸುಗ್ರೀವಾ ವಿನತಾವಿಹಗಾ ಇವ ।
ಪಿಣ್ಡಶೀರ್ಷಾತಿವಕ್ತ್ರಾಶ್ಚ ಪೃಷದಂಶಮುಖಾಸ್ತಥಾ ॥೧೭॥

ಉಗ್ರಸ್ವರಾ ಮನ್ಯುಮನ್ತೋ ಯುದ್ಧೇಷ್ವಾರಾವಸಾರಿಣಃ ।
ಅಧರ್ಮಜ್ಞಾವಲಿಪ್ತಾಶ್ಚ ಘೋರಾ ರೌದ್ರಪ್ರದರ್ಶನಾಃ ॥೧೮॥

ಯಾರ ಕೂದಲುಗಳ ತುದಿಗಳು ಹಳದೀಬಣ್ಣದಿಂದ ಕೂಡಿದ್ದು ಹರಡಿಕೊಂಡಿರುವುವೋ, ಯಾರಿಗೆ ಉದ್ದವಾದ ಪಕ್ಕೆಗಳೂ–ದವಡೆಗಳೂ ಇರುವುವೋ, ಉನ್ನತವಾದ ಭುಜಗಳಿರುವುವೋ, ದಪ್ಪವಾದ ಕುತ್ತಿಗೆಯಿರುವುದೋ, ಯಾರು ನೋಡಲು ವಿಕಾರವಾಗಿ ಕಾಣುವರೋ, ಯಾರಿಗೆ ಮೊಣಕಾಲಿನ ಹಿಂಭಾಗವು ಸ್ಥೂಲವಾಗಿರುವುದೋ, ಸುಗ್ರೀವಜಾತಿಯ ಕುದುರೆಗಳಂತೆ ಅಥವಾ ಗರುಡಪಕ್ಷಿಗಳಂತೆ ಯಾರು ಉದ್ಧತರಾಗಿರುವರೋ, ಯಾರ ತಲೆಯು ದುಂಡಾಗಿಯೂ ಮುಖವು ವಿಶಾಲವಾಗಿಯೂ ಇರುವುದೋ, ಬೆಕ್ಕಿನ ಮುಖದಂತಹ ಅಗಲವಾದ ಮುಖವು ಯಾರಿಗಿರುವುದೋ, ಯಾರ ಧ್ವನಿಯು ಅತ್ಯಂತ ಕಠೋರವಾಗಿರುವುದೋ, ಯಾರು ಯಾವಾಗಲೂ ಕೋಪಿಷ್ಠರಾಗಿರುವರೋ–ಅವರು ಯುದ್ಧದಲ್ಲಿ ಗರ್ಜನೆ ಮಾಡಿಕೊಂಡು ಸಂಚರಿಸುತ್ತಾರೆ. ಅಂತಹವರಿಗೆ ಧರ್ಮವೆಂದರೇನೆಂಬುದೇ ತಿಳಿದಿರುವುದಿಲ್ಲ. ಅಹಂಕಾರದಿಂದ ಕೊಬ್ಬಿರುತ್ತಾರೆ. ಘೋರವಾದ ಆಕೃತಿಯುಳ್ಳವರಾಗಿರುತ್ತಾರೆ. ಅಂತಹವರ ದರ್ಶನವೂ ಬಹಳ ಭಯಂಕರವಾಗಿರುತ್ತದೆ.

ತ್ಯಕ್ತಾತ್ಮಾನಃ ಸರ್ವ ಏತೇ ಅನ್ತ್ಯಜಾ ಹ್ಯನಿವರ್ತಿನಃ ।
ಪುರಸ್ಕಾರ್ಯಾಃ ಸದಾ ಸೈನ್ಯೇ ಹನ್ಯನ್ತೇ ಘ್ನನ್ತಿ ಚಾಪಿ ಯೇ ॥೧೯॥

ಈ ಲಕ್ಷಣಗಳುಳ್ಳವರೆಲ್ಲರೂ ಅಂತ್ಯಜರು (ಗಡಿಯ ಪ್ರಾಂತದಲ್ಲಿ ಹುಟ್ಟಿದವರು, ಕೈವರ್ತ-ದಾಶ-ಧೀವರಾದಿಗಳು), ಪ್ರಾಣಗಳನ್ನೇ ಪಣವ

ನ್ನಾಗಿಟ್ಟು ಯುದ್ಧಮಾಡುವರು. ಇವರಲ್ಲಿ ಯಾರೂ ಯುದ್ಧಭೂಮಿಯಿಂದ ಹಿಂದಿರುಗತಕ್ಕವರಲ್ಲ. ಇಂತಹವರನ್ನು ಸರ್ವದಾ ಪುರಸ್ಕರಿಸಬೇಕು. ಇವರು ಶತ್ರುಗಳಿಂದ ಕೊಲ್ಲಲ್ಪಡುತ್ತಾರೆ ಮತ್ತು ಶತ್ರುಗಳನ್ನೂ ಅಪಾರಸಂಖ್ಯೆಯಲ್ಲಿ ಕೊಲ್ಲುತ್ತಾರೆ.

ಅಧಾರ್ಮಿಕಾ ಭಿನ್ನವೃತ್ತಾಃ ಸಾನ್ತ್ವೇನೈಷಾಂ ಪರಾಭವಃ ।
ಏವಮೇವ ಪ್ರಕುಪ್ಯನ್ತಿ ರಾಜ್ಞೋಽಪ್ಯೇತೇ ಹ್ಯಭೀಕ್ಷ್ಣಶಃ ॥೨೦॥

ಇವರೆಲ್ಲರೂ ಅಧಾರ್ಮಿಕರು. ಭಿನ್ನ-ಭಿನ್ನವಾದ ನಡತೆಯುಳ್ಳವರು. ರಾಜನ ಮೇಲೆಯೂ ಇವರು ಪದೇ-ಪದೇ ಕೋಪಿಸಿಕೊಳ್ಳುತ್ತಲೇ ಇರುತ್ತಾರೆ. ಇವರೊಡನೆ ಸಾಂತ್ವನದಿಂದಲೇ ವ್ಯವಹರಿಸುತ್ತಾ ಇವರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಇವರು ಒಳ್ಳೆಯ ಮಾತಿಗೆ ಬಗ್ಗುವರೇ ಹೊರತು ಗಡುಸಿನ ಆಜ್ಞೆಗೆ ಎಂದೂ ಮಣಿಯುವವರಲ್ಲ."

೧೦೧ನೆಯ ಅಧ್ಯಾಯವು ಮುಗಿಯಿತು.

೧೦೨ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ವಿಜಯಾಪಜಯಸೂಚಕಗಳಾದ ಶುಭಾಶುಭಲಕ್ಷಣಗಳ ವರ್ಣನೆ : ಉತ್ಸಾಹಿಗಳಾದ ಮತ್ತು ಬಲಿಷ್ಠರಾದ ಸೈನಿಕರ ವರ್ಣನೆ : ರಾಜನಿಗೆ ಯುದ್ಧಸಂಬಂಧವಾದ ನೀತಿಯ ನಿರ್ದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಜಯಿತ್ರ್ಯಾಃ ಕಾನಿ ರೂಪಾಣಿ ಭವನ್ತಿ ಭರತರ್ಷಭ ।
ಪೃತನಾಯಾಃ ಪ್ರಶಸ್ತಾನಿ ತಾನಿ ಚೇಚ್ಛಾಮಿ ವೇದಿತುಮ್ ॥೧॥

"ಭರತಶ್ರೇಷ್ಠನೇ! ವಿಜಯವನ್ನು ಗಳಿಸುವ ಸೈನ್ಯಕ್ಕೆ ಯಾವ ಯಾವ ಶುಭಲಕ್ಷಣಗಳಿರುತ್ತವೆ? ಈ ವಿಷಯವನ್ನು ನಾನು ತಿಳಿದುಕೊಳ್ಳಲು ಕುತೂಹಲಿಯಾಗಿದ್ದೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ವಿಜಯಗಳಿಸುವ ಸೈನ್ಯಕ್ಕೆ ಪ್ರಶಸ್ತವಾದ ಶುಭಲಕ್ಷಣಗಳಾವುವೆಂಬುದನ್ನು ಸಂಪೂರ್ಣವಾಗಿ ಹೇಳುವೆನು ; ಕೇಳು :

ದೈವೇ ಪೂರ್ವಂ ಪ್ರಕುಪಿತೇ ಮಾನುಷೇ ಕಾಲಚೋದಿತೇ ।
ತದ್ವಿದ್ವಾಂಸೋಽನುಪಶ್ಯನ್ತಿ ಜ್ಞಾನದಿವ್ಯೇನ ಚಕ್ಷುಷಾ ॥೩॥

ಪ್ರಾಯಶ್ಚಿತ್ತವಿಧಿಂ ಚಾತ್ರ ಜಪಹೋಮಾಂಶ್ಚ ತದ್ವಿದಃ ।
ಮಙ್ಗಲಾನಿ ಚ ಕುರ್ವನ್ತಿ ಶಮಯನ್ತ್ಯಹಿತಾನಿ ಚ ॥೪॥

ಮನುಷ್ಯನು ಕಾಲಚೋದಿತನಾಗಲಾಗಿ (ಕಾಲಚೋದಿತನಾಗಿ ಯುದ್ಧಕ್ಕೆ ಹೊರಟಾಗ) ಮೊದಲು ದೈವವು ಅನುಕೂಲವಾಗಿದೆಯೋ ಇಲ್ಲವೇ ಪ್ರಕೋಪಗೊಂಡಿದೆಯೋ–ಎಂಬುದನ್ನು ಜ್ಞಾನರೂಪವಾದ ದಿವ್ಯದೃಷ್ಟಿಯಿಂದ ವಿದ್ವಾಂಸರು ತಿಳಿದುಕೊಳ್ಳುತ್ತಾರೆ. ಹಾಗೇನಾದರೂ ದೈವವು ಪ್ರತಿಕೂಲವಾಗಿದ್ದರೆ ಅದರ ಉಪಶಮನಾರ್ಥವಾಗಿ ಪ್ರಾಯಶ್ಚಿತ್ತ ವಿಧಿಗಳನ್ನು ಮತ್ತು ಜಪ-ಹೋಮಗಳನ್ನೂ ಆ ಪ್ರಕ್ರಿಯೆಯನ್ನು ತಿಳಿದ ವಿದ್ವಾಂಸರು ಮಾಡುತ್ತಾರೆ. ಮಂಗಳಕಾರ್ಯಗಳನ್ನು ಮಾಡಿ ಅಹಿತಕರವಾದ ಉಪದ್ರವಗಳನ್ನು ಉಪಶಮನಗೊಳಿಸುತ್ತಾರೆ.

ಉದೀರ್ಣಮನಸೋ ಯೋಧಾ ವಾಹನಾನಿ ಚ ಭಾರತ ।
ಯಸ್ಯಾಂ ಭವನ್ತಿ ಸೇನಾಯಾಂ ಧ್ರುವಂ ತಸ್ಯಾಂ ಪರೋ ಜಯಃ ॥೫॥

ಯಾವ ಸೈನ್ಯದಲ್ಲಿ ಯೋಧರೂ ಮತ್ತು ಆನೆ-ಕುದುರೆ ಮುಂತಾದ ವಾಹನಗಳೂ ಉತ್ಸಾಹಯುಕ್ತವಾದ ಮನಸ್ಸಿನಿಂದ ಕೂಡಿರುವುವೋ–ಆ ಸೈನ್ಯಕ್ಕೆ ಶ್ರೇಷ್ಠವಾದ ವಿಜಯವು ಲಭಿಸುತ್ತದೆ. ಇದು ನಿಶ್ಚಯ.

ಅನ್ವೇತಾನ್ವಾಯವೋ ಯಾನ್ತಿ ತಥೈವೇನ್ದ್ರಧನೂಂಷಿ ಚ ।
ಅನುಪ್ಲವನ್ತೇ ಮೇಘಾಶ್ಚ ತಥಾದಿತ್ಯಸ್ಯ ರಶ್ಮಯಃ ॥೬॥

ಗೋಮಾಯವಶ್ಚಾನುಕೂಲಾ ಬಲಗೃಧ್ರಾಶ್ಚ ಸರ್ವಶಃ ।
ಅರ್ಹಯೇಯುರ್ಯದಾ ಸೇನಾಂ ತದಾ ಸಿದ್ಧಿರನುತ್ತಮಾ ॥೭॥

ಸೈನ್ಯವು ಪ್ರಯಾಣಮಾಡುವ ಸಮಯದಲ್ಲಿ ವಾಯುವು ಅವರು ಪ್ರಯಾಣಮಾಡುವ ದಿಕ್ಕನ್ನು ಅನುಸರಿಸಿ ಬೀಸುತ್ತಿದ್ದರೆ, ಹಿಂಭಾಗದಲ್ಲಿ ಕಾಮನಬಿಲ್ಲು ಉದಯಿಸಿದರೆ, ಮೋಡಗಳು ನೆತ್ತಿಯ ಮೇಲೆ ಹಾಯ್ದು ಹೋಗುತ್ತಿದ್ದರೆ, ಸೂರ್ಯನ ರಶ್ಮಿಗಳು ಪ್ರಕಾಶಮಾನವಾಗಿ ಸೈನಿಕರ ಮೇಲೆ

ಬೀಳುತ್ತಿದ್ದರೆ, ಗುಳ್ಳೇನರಿ, ರಣಹದ್ದು ಮತ್ತು ಕಾಗೆಗಳು ಅನುಕೂಲವಾದ ದಿಕ್ಕನ್ನು ಕುರಿತು ಹೋಗುತ್ತಿದ್ದರೆ–ನಿಶ್ಚಯವಾಗಿಯೂ ಆ ಸೈನ್ಯಕ್ಕೆ ಶ್ರೇಷ್ಠವಾದ ಫಲವು (ಜಯವು) ಸಿದ್ಧಿಸುತ್ತದೆ.

ಪ್ರಸನ್ನಭಾ ಪಾವಕಶ್ಚೋರ್ಧ್ವರಶ್ಮಿಃ
ಪ್ರದಕ್ಷಿಣಾವರ್ತಶಿಖೋ ವಿಧೂಮಃ ।
ಪುಣ್ಯಾ ಗನ್ಧಾಶ್ಚಾಹುತೀನಾಂ ಭವನ್ತಿ
ಜಯಸ್ಯೈತದ್ಭಾವಿತೋ ರೂಪಮಾಹುಃ ॥೮॥

ಅಗ್ನ್ಯಗಾರದಲ್ಲಿರುವ ಯಜ್ಞೇಶ್ವರನು ಪ್ರಸನ್ನವಾದ ಕಾಂತಿಯಿಂದ ಕೂಡಿರಬೇಕು. ಜ್ವಾಲೆಗಳು ಊರ್ಧ್ವಮುಖವಾಗಿರಬೇಕು. ಪ್ರದಕ್ಷಿಣಾ ಕಾರವಾಗಿ ಸುತ್ತುತ್ತಿರಬೇಕು. ಯಜ್ಞೇಶ್ವರನು ಧೂಮರಹಿತನಾಗಿರಬೇಕು. ಹಾಕಿದ ಆಹುತಿಗಳಿಂದ ಪುಣ್ಯತಮವಾದ ಸುಗಂಧವು ಹೊರಸೂಸಬೇಕು. ಅಗ್ನ್ಯಗಾರದಲ್ಲಿರುವ ಯಜ್ಞೇಶ್ವರನು ಹೀಗಿದ್ದರೆ ಅದು ಮುಂದಾಗುವ ವಿಜಯವನ್ನು ಸೂಚಿಸುವುದಾಗಿರುತ್ತದೆ.

ಗಮ್ಭೀರಶಬ್ದಾಶ್ಚ ಮಹಾಸ್ವನಾಶ್ಚ
ಶಙ್ಖಾಶ್ಚ ಭೇರ್ಯಶ್ಚ ನದನ್ತಿ ಯತ್ರ ।
ಯುಯುತ್ಸವಶ್ಚಾಪ್ರತೀಪಾ ಭವನ್ತಿ
ಜಯಸ್ಯೈತದ್ಭಾವಿನೋ ರೂಪಮಾಹುಃ ॥೯॥

ಶಂಖಗಳ ಗಂಭೀರಧ್ವನಿ, ಭೇರೀ-ಮೃದಂಗಗಳ ಮಹಾನಿನಾದ, ಯುದ್ಧಮಾಡಲು ಸನ್ನದ್ಧರಾಗಿರುವ ಸೈನಿಕರು ಅನುಕೂಲರಾಗಿರುವುದು– ಇವುಗಳು, ಮುಂದೆ ಲಭಿಸುವ ವಿಜಯದ ಸೂಚಕಗಳಾಗಿವೆ.

ಇಷ್ಟಾ ಮೃಗಾಃ ಪೃಷ್ಠತೋ ವಾಮತಶ್ಚ
ಸಮ್ಪ್ರಸ್ಥಿತಾನಾಂ ಚ ಗಮಿಷ್ಯತಾಂ ಚ ।
ಜಿಘಾಂಸತಾಂ ದಕ್ಷಿಣಾಃ ಸಿದ್ಧಿಮಾಹು-
ರ್ಯೇ ತ್ವಗ್ರತಸ್ತೇ ಪ್ರತಿಷೇಧಯನ್ತಿ ॥೧೦॥

ಸೈನ್ಯಪ್ರಸ್ಥಾನದ ಸಮಯದಲ್ಲಿ ಅಥವಾ ಹೊರಡಲು ಸಿದ್ಧಮಾಡಿ ಕೊಳ್ಳುತ್ತಿರುವ ಸಮಯದಲ್ಲಿ–ಇಷ್ಟವಾದ ಮೃಗಗಳು ಹಿಂಭಾಗದಲ್ಲಿ ಅಥವಾ ಎಡಭಾಗದಲ್ಲಿ ಹೋದರೆ ಇಚ್ಛಿಸಿದ ಕಾರ್ಯವು ಸಿದ್ಧಿಸುತ್ತದೆ. ಯುದ್ಧ

ಮಾಡುವ ಸಮಯದಲ್ಲಿ ಇದೇ ಇಷ್ಟವಾದ ಮೃಗಗಳು ಬಲಭಾಗದಲ್ಲಿದ್ದರೆ ಅದು ವಿಜಯಸಿದ್ಧಿಯ ಸೂಚಕವಾಗಿರುತ್ತದೆ. ಇಷ್ಟವಾದ ಮೃಗಗಳು ಯುದ್ಧಕ್ಕೆ ಹೊರಡುವಾಗ ಎದುರಾಗಿ ಬಂದುದೇ ಆದರೆ ಯುದ್ಧಕ್ಕೆ ಹೋಗುವುದನ್ನು ನಿಷೇಧಿಸುತ್ತಿವೆಯೆಂದು ತಿಳಿದುಕೊಳ್ಳಬೇಕು.

ಮಾಙ್ಗಲ್ಯಶಬ್ದಾಞ್ಛಕುನಾ ವದನ್ತಿ
ಹಂಸಾಃ ಕ್ರೌಞ್ಚಾಃ ಶತಪತ್ರಾಶ್ಚ ಚಾಷಾಃ ।
ಹೃಷ್ಟಾ ಯೋಧಾಃ ಸತ್ತ್ವವನ್ತೋ ಭವನ್ತಿ
ಜಯಸ್ಯೈತದ್ಭಾವಿನೋ ರೂಪಮಾಹುಃ ॥೧೧॥

ಹಂಸ, ಕ್ರೌಂಚ, ಶತಪತ್ರ, ನವಿಲು, ಕಾಡಿನಕಾಗೆ–ಮುಂತಾದ ಪಕ್ಷಿಗಳು ಮಂಗಲಸೂಚಕವಾಗಿ ಶಬ್ದಮಾಡುತ್ತಿರುವುದೂ, ಸೈನಿಕರು ಹರ್ಷಯುಕ್ತರಾಗಿಯೂ ಉತ್ಸಾಹಯುಕ್ತರಾಗಿಯೂ, ಶಕ್ತಿವಂತರಾಗಿಯೂ ಇರುವಂತೆ ಕಾಣುವುದೂ–ಮುಂದೆ ಲಭಿಸುವ ಜಯದ ಸೂಚಕವೆಂದು ಹೇಳುತ್ತಾರೆ.

ಶಸ್ತ್ರೈರ್ಯನ್ತ್ರೈಃ ಕವಚೈಃ ಕೇತುಭಿಶ್ಚ
ಸಭಾನುಭಿರ್ಮುಖವರ್ಣೈಶ್ಚ ಯೂನಾಮ್ ।
ಭ್ರಾಜಿಷ್ಮತೀ ದುಷ್ಪ್ರತಿವೀಕ್ಷಣೀಯಾ
ಯೇಷಾಂ ಚಮೂಸ್ತೇಽಭಿಭವನ್ತಿ ಶತ್ರೂನ್ ॥೧೨॥

ಯಾರ ಸೈನ್ಯವು ಪ್ರಕಾಶಯುಕ್ತವಾದ ನಾನಾವಿಧವಾದ ಶಸ್ತ್ರ-ಕವಚ-ಯಂತ್ರ-ಧ್ವಜಗಳಿಂದ ಸುಶೋಭಿತವಾಗಿರುವುದೋ, ಯಾವ ಸೈನ್ಯದಲ್ಲಿ ನವಯುವಕರಾದ ಸೈನಿಕರು ಕಾಂತಿಯುಕ್ತವಾದ ಮುಖವರ್ಣದಿಂದ ಪ್ರಕಾಶಿಸುತ್ತಿರುವರೋ, ದೇದೀಪ್ಯಮಾನವಾದ ಯಾವ ಸೈನ್ಯವನ್ನು ಶತ್ರುಗಳಿಂದ ನೋಡಲೂ ಸಾಧ್ಯವಾಗುವುದಿಲ್ಲವೋ–ಅಂತಹ ಸೈನ್ಯವನ್ನು ಹೊಂದಿರುವ ರಾಜರು ಶತ್ರುಗಳನ್ನು ಪರಾಜಯಗೊಳಿಸುತ್ತಾರೆ.

ಶುಶ್ರೂಷವಶ್ಚಾನಭಿಮಾನಿನಶ್ಚ
ಪರಸ್ಪರಂ ಸೌಹೃದಮಾಸ್ಥಿತಾಶ್ಚ ।
ಯೇಷಾಂ ಯೋಧಾಃ ಶೌಚಮನುಷ್ಠಿತಾಶ್ಚ
ಜಯಸ್ಯೈತದ್ಭಾವಿನೋ ರೂಪಮಾಹುಃ ॥೧೩॥

ಒಡೆಯನಿಗೆ ಸೇವೆ ಮಾಡುವುದರಲ್ಲಿ ಉತ್ಸಾಹಶೀಲರಾಗಿರುವ, ಅಹಂಕಾರರಹಿತರಾಗಿರುವ, ಪರಸ್ಪರವಾಗಿ ಸೌಹಾರ್ದಭಾವವನ್ನಿಟ್ಟುಕೊಂಡಿರುವ, ಶೌಚಾಚಾರಗಳನ್ನಿಟ್ಟುಕೊಂಡಿರುವ ಯೋಧರಿರುವುದು ರಾಜರಿಗೆ ಮುಂದೆ ಲಭಿಸುವ ವಿಜಯಕ್ಕೆ ಪೂರ್ವಸೂಚಕವಾದ ಶುಭಲಕ್ಷಣವೆನ್ನುತ್ತಾರೆ.

ಶಬ್ದಾಃ ಸ್ಪರ್ಶಾಸ್ತಥಾ ಗನ್ಧಾ ವಿಚರನ್ತಿ ಮನಃಪ್ರಿಯಾಃ ।
ಧೈರ್ಯಂ ಚಾವಿಶತೇ ಯೋಧಾನ್ವಿಜಯಸ್ಯ ಮುಖಂ ಚ ತತ್ ॥೧೪॥

ಯೋಧರ ಮನಸ್ಸನ್ನು ಆಹ್ಲಾದಗೊಳಿಸುವ ಶಬ್ದ-ಸ್ಪರ್ಶ-ಗಂಧಗಳೊಡನೆ ವಿಜಯಗಳಿಸುವ ಧೈರ್ಯವೂ ಯೋಧರ ಮನಸ್ಸನ್ನು ಆವರಿಸಿದರೆ–ಅದು ವಿಜಯಕ್ಕೆ ಮುಖ್ಯದ್ವಾರವಾಗುತ್ತದೆ.

ಇಷ್ಟೋ ವಾಮಃ ಪ್ರವಿಷ್ಟಸ್ಯ ದಕ್ಷಿಣಃ ಪ್ರವಿವಿಕ್ಷತಃ ।
ಪಶ್ಚಾತ್ಸಂಸಾಧಯತ್ಯರ್ಥಂ ಪುರಸ್ತಾಚ್ಚ ನಿಷೇಧತಿ ॥೧೫॥

ಯುದ್ಧರಂಗಕ್ಕೆ ಪ್ರವೇಶಮಾಡಿದವನಿಗೆ ಕಾಗೆಯು ಎಡಗಡೆಯಲ್ಲಿದ್ದರೆ–ಯುದ್ಧರಂಗಕ್ಕೆ ಪ್ರವೇಶಿಸಲು ಇಚ್ಛಿಸಿದವನಿಗೆ ಬಲದಲ್ಲಿದ್ದರೆ–ಶುಭವುಂಟಾಗುತ್ತದೆ. (ವಿಜಯವು ಲಭಿಸುತ್ತದೆ.) ಮುಂಭಾಗದಿಂದ ಹಾರಿಬಂದರೆ ವಿಜಯವನ್ನು ತಡೆಯುತ್ತದೆ. (ಇಲ್ಲಿ **ಕಾಕಃ** ಎಂಬ ವಿಶೇಷ್ಯವಿಲ್ಲದಿದ್ದರೂ–ಶಕುನಶಾಸ್ತ್ರದ ಪ್ರಕಾರ **ಕಾಕಃ** ಎಂಬ ಶಬ್ದವನ್ನು ಅಧ್ಯಾಹಾರಮಾಡಿಕೊಳ್ಳಬೇಕಾಗಿದೆ–ಎಂದು ವ್ಯಾಖ್ಯಾನಕಾರರು ಹೇಳಿರುತ್ತಾರೆ.)

ಸಮ್ಭೃತ್ಯ ಮಹತೀಂ ಸೇನಾಂ ಚತುರಙ್ಗಾಂ ಯುಧಿಷ್ಠಿರ ।
ಸಾಮ್ನೈವ ವರ್ತಯೇಃ ಪೂರ್ವಂ ಪ್ರಯತೇಥಾಸ್ತತೋ ಯುಧಿ ॥೧೬॥

ವಿಶಾಲವಾದ ಚತುರಂಗಬಲವನ್ನು ಒಂದು ಕಡೆಯಲ್ಲಿ ಸೇರಿಸಿದ ನಂತರವೂ ನೀನು ಶತ್ರುಗಳೊಡನೆ ಸಾಮನೀತಿಗೆ ಅನುಸಾರವಾಗಿ ಸಂಧಿ ಮಾಡಿಕೊಳ್ಳಲು ಯತ್ನಿಸಬೇಕು. ಸಂಧಿಯ ಮಾತುಕತೆಗಳು ಮುರಿದುಬಿದ್ದ ನಂತರವೇ ಯುದ್ಧದಲ್ಲಿ ತೊಡಗಬೇಕು.

**ಜಘನ್ಯ ಏವ ವಿಜಯೋ ಯದ್ಯುದ್ಧಂ ನಾಮ ಭಾರತ ।
ಯಾದೃಚ್ಛಿಕೋ ಯುಧಿ ಜಯೋ ದೈವೋ ವೇತಿ ವಿಚಾರಣಮ್ ॥**

ಯುದ್ಧದ ಮೂಲಕವಾಗಿ ವಿಜಯಗಳಿಸುವುದು ನಿಕೃಷ್ಟವಾಗಿರುತ್ತದೆ. ಯುದ್ಧದ ಸಂಬಂಧವಾದ ವಿಜಯವು ಆಕಸ್ಮಿಕವೋ ದೈವೇಚ್ಛೆಯೋ ಎಂಬುದು ವಿಚಾರಣೀಯ. ವಿಜಯವು ಇಂತಹವರಿಗೇ ಲಭಿಸುವುದೆಂದು ಮೊದಲೇ ನಿಶ್ಚಯಮಾಡಿ ಹೇಳುವ ಸಾಧ್ಯತೆಯಿಲ್ಲ.

**ಅಪಾಮಿವ ಮಹಾವೇಗಸ್ತ್ರಸ್ತಾ ಇವ ಮಹಾಮೃಗಾಃ ।
ದುರ್ನಿವಾರ್ಯತಮಾ ಚೈವ ಪ್ರಭಗ್ನಾ ಮಹತೀ ಚಮೂಃ ॥೧೮॥**

ನೀರಿನ ಮಹಾವೇಗವನ್ನು ತಡೆಯಲು ಸಾಧ್ಯವಾಗದಂತೆ–ಭಯಗೊಂಡ ಮೃಗಗಳನ್ನು ತಡೆಯಲು ಸಾಧ್ಯವಾಗದಂತೆ–ಭಗ್ನವಾದ ಮಹಾ ಸೈನ್ಯದ ಸೈನಿಕರನ್ನು ತಡೆಯಲು ಸಾಧ್ಯವಾಗುವುದೇ ಇಲ್ಲ. ಆದುದರಿಂದ ದೊಡ್ಡ ಸೈನ್ಯವಿದ್ದ ಮಾತ್ರಕ್ಕೆ ಜಯವು ನಿಃಸಂಶಯವಾಗಿ ಸಿಕ್ಕುವುದೆಂದು ಹೇಳಲಾಗುವುದಿಲ್ಲ.

**ಭಗ್ನಾ ಇತ್ಯೇವ ಭಜ್ಯನ್ತೇ ವಿದ್ವಾಂಸೋಽಪಿ ನ ಕಾರಣಮ್ ।
ಉದಾರಸಾರಾ ಮಹತೀ ರುರುಸಂಘೋಪಮಾ ಚಮೂಃ ॥೧೯॥**

ವಿಶಾಲವಾದ ಸೈನ್ಯವು ಜಿಂಕೆಗಳ ಸಂಘದಂತೆಯೇ ಇರುತ್ತದೆ. ಮೃಗಗಳ ಸಮೂಹದಲ್ಲಿ ಮುಂದಿರುವ ಒಂದ ಮೃಗವು ಓಡಲು ಪ್ರಾರಂಭಿಸಿದರೆ ಉಳಿದ ಮೃಗಗಳೂ ಯುಕ್ತಾಯುಕ್ತವಿವೇಚನೆಯೇ ಇಲ್ಲದೇ ನಾಗಾಲೋಟದಿಂದ ಓಡಿಹೋಗುವಂತೆ–ಸೈನ್ಯವು ಎಷ್ಟೇ ಬಲವತ್ತರವಾಗಿದ್ದರೂ–ಚಮೂಮಧ್ಯದಲ್ಲಿರುವ ಒಬ್ಬ ಪದಾತಿಯು ಯಾವುದೋ ಕಾರಣದಿಂದ ಓಡಿಹೋಗುತ್ತಿದ್ದರೆ ಉಳಿದ ಪದಾತಿಸೈನಿಕರು ಅವನು ಓಡಿಹೋಗುತ್ತಿರುವುದಕ್ಕೆ ಕಾರಣವನ್ನು ತಿಳಿಯುವ ಗೋಜಿಗೆ ಹೋಗದೇ ಅವನನ್ನೇ ಹಿಂಬಾಲಿಸಿ ಓಡಿಹೋಗುತ್ತಾರೆ. 'ಸೇನೆಯು ಭಗ್ನವಾಯಿತು'– ಎಂಬ ಒಂದು ಕಿಂವದಂತಿಯಿಂದಲೇ ಸಂಪೂರ್ಣಸೈನ್ಯವೂ ಭಗ್ನವಾಗಿ ಹೋಗುತ್ತದೆ. ಇಂತಹ ಸೈನ್ಯವನ್ನು ಓಡಿಹೋಗದಂತೆ ತಡೆಯಲು ವಿದ್ವಾಂಸರೂ ಕಾರಣರಾಗುವುದಿಲ್ಲ. (ಶಕ್ತರಾಗುವುದಿಲ್ಲ.)

ಪರಸ್ಪರಜ್ಞಾಃ ಸಂಹೃಷ್ಟಾಸ್ತ್ಯಕ್ತಪ್ರಾಣಾಃ ಸುನಿಶ್ಚಿತಾಃ ।
ಅಪಿ ಪಞ್ಚಾಶತಂ ಶೂರಾ ನಿಘ್ನನ್ತಿ ಪರವಾಹಿನೀಮ್ ॥೨೦॥

ಪರಸ್ಪರವಾಗಿ ಗುಣಾವಗುಣಗಳನ್ನು ಚೆನ್ನಾಗಿ ಅರಿತಿರುವ, ಪ್ರಹೃಷ್ಟರಾದ, ಪ್ರಾಣವನ್ನೇ ಒತ್ತೆಯಾಗಿಟ್ಟು ಯುದ್ಧಮಾಡಲು ಸಿದ್ಧವಾಗಿರುವ, ಜಯಗಳಿಸಬೇಕೆಂಬ ದೃಢನಿಶ್ಚಯದಿಂದಿರುವ ಯೋಧರು ಐವತ್ತು ಮಂದಿ ಇದ್ದರೂ ಸಾಕು. ಆ ಮಹಾಶೂರರರು ಅಪಾರಸಂಖ್ಯೆಯ ಶತ್ರುಸೈನ್ಯವನ್ನೂ ಧ್ವಂಸಮಾಡಲು ಸಮರ್ಥರಾಗುತ್ತಾರೆ.

ಅಪಿ ವಾ ಪಞ್ಚ ಷಟ್ ಸಪ್ತ ಸಂಹತಾಃ ಕೃತನಿಶ್ಚಯಾಃ ।
ಕುಲೀನಾಃ ಪೂಜಿತಾಃ ಸಮ್ಯಗ್ವಿಜಯನ್ತೀಹ ಶಾತ್ರವಾನ್ ॥೨೧॥

ಸತ್ಕುಲಪ್ರಸೂತರಾದ, ರಾಜಪೂಜಿತರಾದ ಐದು-ಆರು ಅಥವಾ ಏಳು ಮಂದಿ ಯೋಧರು ದೃಢನಿಶ್ಚಯವುಳ್ಳವರಾಗಿ ಸುಸಂಘಟಿತರಾಗಿ ಯುದ್ಧ ಮಾಡಿದರೂ ಶತ್ರುಗಳನ್ನು ಗೆದ್ದು ವಿಜಯವನ್ನು ಗಳಿಸಬಹುದು.

ಸಂನಿಪಾತೋ ನ ಮನ್ತವ್ಯಃ ಶಕ್ಯೇ ಸತಿ ಕಥಂಚನ ।
ಸಾನ್ತ್ವಭೇದಪ್ರದಾನಾನಾಂ ಯುದ್ಧಮುತ್ತರಮುಚ್ಯತೇ ॥೨೨॥

ಸಂಧಿಯ ಮೂಲಕವಾಗಿ ಕಾರ್ಯಸಿದ್ಧಿಯಾಗುವುದಾಗಿದ್ದರೆ– ಯುದ್ಧದ ವಿಷಯವನ್ನೇ ಯೋಚಿಸಬಾರದು. ಮೊದಲು ಸಾಮೋಪಾಯದ ಮೂಲಕವಾಗಿ ಶತ್ರುವಿನೊಡನೆ ಸಂಧಾನವನ್ನೇರ್ಪಡಿಸಬೇಕು. ಅನಂತರ ಭೇದೋಪಾಯವನ್ನು ಆಶ್ರಯಿಸಬೇಕು. ಬಳಿಕ ದಾನೋಪಾಯವನ್ನಾ ಶ್ರಯಿಸಿ ಯುದ್ಧವನ್ನಾಶ್ರಯಿಸದೇ ಇರಲು ಯಥೇಚ್ಛವಾದ ಧನವನ್ನು ಕೊಡಲಾದರೂ ಸಿದ್ಧನಾಗಬೇಕು. ದಾನೋಪಾಯದಿಂದಲೂ ಶತ್ರುವು ಸಂಧಾನಕ್ಕೆ ಒಪ್ಪದಿದ್ದರೆ ಕಟ್ಟಕಡೆಯದಾಗಿ ಯುದ್ಧವನ್ನು ಆಶ್ರಯಿಸಬೇಕೆಂದು ರಾಜನೀತಿಯು ಹೇಳುತ್ತದೆ.

ಸಂದರ್ಶನೇನೈವ ಸೇನಾಯಾ ಭಯಂ ಭೀರೂನ್ಪ್ರಬಾಧತೇ ।
ವಜ್ರಾದಿವ ಪ್ರಜ್ವಲಿತಾದಿಯಂ ಕ್ವನು ಪತಿಷ್ಯತಿ ॥೨೩॥

ಮಹಾಸೈನ್ಯದ ಸಂದರ್ಶನಮಾತ್ರದಿಂದಲೇ ಪ್ರಜ್ವಲಿಸುವ ವಜ್ರಾ

ಯುಧದರ್ಶನವಾದಂತೆ ಹೇಡಿಗಳನ್ನು ಭಯವು ಬಾಧಿಸುತ್ತದೆ. 'ಈ ಸೈನ್ಯವು ಯಾರ ಮೇಲೆ ಬೀಳುವುದೋ?'–ಎಂದು ಯೋಚಿಸುತ್ತಾ ಹೇಡಿಗಳು ಭ್ರಾಂತರಾಗುತ್ತಾರೆ.

ಅಭಿಪ್ರಯಾತಾಂ ಸಮಿತಿಂ ಜ್ಞಾತ್ವಾ ಯೇ ಪ್ರತಿಯಾನ್ತ್ಯಥ ।
ತೇಷಾಂ ಸ್ಪನ್ದನ್ತಿ ಗಾತ್ರಾಣಿ ಯೋಧಾನಾಂ ವಿಜಯಸ್ಯ ಚ ॥೨೪॥

ಯುದ್ಧಮಾಡಲು ಶತ್ರುಸೈನ್ಯವು ಸಿದ್ಧವಾಗಿರುವುದೆಂಬುದನ್ನು ತಿಳಿದ ನಂತರ ಯಾರು ಯುದ್ಧಮಾಡುವ ಉತ್ಸಾಹದಿಂದ ಅದನ್ನು ಎದುರಿಸಲು ಹೋಗುತ್ತಾರೆಯೋ–ಆ ಯೋಧರ ಶರೀರಗಳು ವಿಜಯಸೂಚಕವಾಗಿ ಸ್ಪಂದಿಸುತ್ತವೆ. (ಅದುರುತ್ತವೆ.)

ವಿಷಯೋ ವ್ಯಥತೇ ರಾಜನ್ಸರ್ವಃ ಸಸ್ಥಾಣುಜಙ್ಗಮಃ ।
ಅಸ್ಯ ಪ್ರತಾಪತಪ್ತಾನಾಂ ಮಜ್ಜಾ ಸೀದತಿ ದೇಹಿನಾಮ್ ॥೨೫॥

ಯುದ್ಧವು ಉಪಸ್ಥಿತವಾಯಿತೆಂದರೆ ದೇಶದಲ್ಲಿರುವ ಸ್ಥಾವರ-ಜಂಗಮ ಗಳ ಸಮೇತವಾಗಿ ಎಲ್ಲ ಪ್ರಾಣಿಗಳೂ ದುಃಖಪಡುತ್ತವೆ. ಈ ರಾಜನ ಪ್ರತಾಪದಿಂದ ಸಂತಪ್ತರಾದ ಮನುಷ್ಯರ ಮಜ್ಜೆಯೂ (ಕೆಚ್ಚೂ) ಕರಗಿ ಹೋಗುತ್ತದೆ.

ತೇಷಾಂ ಸಾನ್ತ್ವಂ ಕ್ರೂರಮಿಶ್ರಂ ಪ್ರಣೇತವ್ಯಂ ಪುನಃ ಪುನಃ ।
ಸಮ್ಪೀಡ್ಯಮಾನಾ ಹಿ ಪರೈರ್ಯೋಗಮಾಯಾನ್ತಿ ಸರ್ವತಃ ॥೨೬॥

ಆ ದೇಶವಾಸಿಗಳೊಡನೆ ಕಠೋರಮಿಶ್ರವಾದ ಸಾಂತ್ವನದ ಮಾತು ಗಳನ್ನೇ ಆಡುತ್ತಿರಬೇಕು. ಹಾಗಲ್ಲದೇ ಅವರ ವಿಷಯದಲ್ಲಿ ಕಠಿಣವಾಗಿ ಮಾತನಾಡುತ್ತಾ ಕ್ರೌರ್ಯದಿಂದ ವರ್ತಿಸುತ್ತಿದ್ದರೆ ಯುದ್ಧದ ಪೀಡೆಯನ್ನು ಅನುಭವಿಸುತ್ತಿರುವ ಆ ಜನರೆಲ್ಲರೂ ಸಂಪೂರ್ಣವಾಗಿ ಶತ್ರುಗಳೊಡನೆ ಸೇರಿಕೊಳ್ಳುತ್ತಾರೆ.

ಆನ್ತರಾಣಾಂ ಚ ಭೇದಾರ್ಥಂ ಚರಾನಭ್ಯವಚಾರಯೇತ್ ।
ಯಶ್ಚ ತಸ್ಮಾತ್ಪರೋ ರಾಜಾ ತೇನ ಸನ್ಧಿಃ ಪ್ರಶಸ್ಯತೇ ॥೨೭॥

ಶತ್ರುಗಳಿಗೂ ಮತ್ತು ಅವರ ಮಿತ್ರರಿಗೂ ಭೇದವನ್ನುಂಟುಮಾಡುವ

ಸಲುವಾಗಿ ಗುಪ್ತಚಾರರನ್ನು ಕಳುಹಿಸಬೇಕು. ಶತ್ರುವಿನ ಪಕ್ಕದ ರಾಜ್ಯದಲ್ಲಿರುವ ರಾಜನು ಶತ್ರುವಿಗಿಂತಲೂ ಬಲಿಷ್ಠನಾದ ರಾಜನಾಗಿದ್ದರೆ, ಅವನೊಡನೆ ಸಂಧಿಯನ್ನು ಮಾಡಿಕೊಳ್ಳುವುದೇ ಪ್ರಶಸ್ತವಾಗಿರುತ್ತದೆ.

ನ ಹಿ ತಸ್ಯಾನ್ಯಥಾ ಪೀಡಾ ಶಕ್ಯಾ ಕರ್ತುಂ ತಥಾವಿಧಾ ।
ಯಥಾ ಸಾರ್ಧಮಮಿತ್ರೇಣ ಸರ್ವತಃ ಪ್ರತಿಬಾಧನಮ್ ॥೨೮॥

ಶತ್ರುವಿಗಿಂತಲೂ ಬಲಿಷ್ಠನಾದ ಶತ್ರುವಿನ ಶತ್ರುವಿನೊಡನೆ ಸಂಧಿ ಮಾಡಿಕೊಂಡರೆ–ಶತ್ರುವಿಗೆ ಹೆಚ್ಚು ಪೀಡೆಯುಂಟಾಗುತ್ತದೆ. ಅದಕ್ಕಿಂತಲೂ ಅಧಿಕವಾದ ಪೀಡೆಯು ಮತ್ತೊಂದಿರುವುದಿಲ್ಲ. ಶತ್ರುಪಕ್ಷವು ಎಲ್ಲ ಕಡೆಗಳಲ್ಲಿಯೂ ಸಂಕಟದಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿ ಅನಂತರ ಶತ್ರು ವಿನೊಡನೆ ಯುದ್ಧಮಾಡಬೇಕು.

ಕ್ಷಮಾ ವೈ ಸಾಧುಮಾಯಾತಿ ನ ಹ್ಯಸಾಧೂನ್ಕ್ಷಮಾ ಸದಾ ।
ಕ್ಷಮಾಯಾಶ್ಚಾಕ್ಷಮಾಯಾಶ್ಚ ಪಾರ್ಥ ವಿದ್ಧಿ ಪ್ರಯೋಜನಮ್ ॥

ಕ್ಷಮಾಗುಣವು ಸಾಧುಪುರುಷರನ್ನೇ ಅರಸಿಕೊಂಡುಬರುತ್ತದೆ. ದುಷ್ಟಪುರುಷರ ಬಳಿಗೂ ಹೋಗುವುದಿಲ್ಲ. ಕ್ಷಮೆಯಿಂದಿರುವುದು ; ಕ್ಷಮೆಯಿಲ್ಲದಿರುವುದು–ಈ ಎರಡಕ್ಕೂ ಪ್ರಯೋಜನಗಳನ್ನು ಹೇಳುವೆನು ; ಕೇಳು.

ವಿಜಿತ್ಯಕ್ಷಮಮಾಣಸ್ಯ ಯಶೋ ರಾಜ್ಞೋ ವಿವರ್ಧತೇ ।
ಮಹಾಪರಾಧೇ ಹ್ಯಪ್ಯಸ್ಮಿನ್ವಿಶ್ವಸನ್ತ್ಯಪಿ ಶತ್ರವಃ ॥೩೦॥

ಯಾವ ರಾಜನು ಶತ್ರುಗಳನ್ನು ಜಯಿಸಿದನಂತರ ಅಳಿದುಳಿದ ಶತ್ರುಗಳ ವಿಷಯದಲ್ಲಿ ಕ್ಷಮೆಯನ್ನು ತೋರುವನೋ ಆ ರಾಜನ ಯಶಸ್ಸು ಹೆಚ್ಚುತ್ತದೆ. ಯುದ್ಧಸಮಯದಲ್ಲಿ ಆ ರಾಜನು ಶತ್ರುಗಳ ವಿಷಯದಲ್ಲಿ ಮಹಾಪರಾಧವನ್ನೇ ಮಾಡಿದ್ದರೂ ಕ್ಷಮಾವಂತನಾದ ರಾಜನ ವಿಷಯದಲ್ಲಿ ಶತ್ರುಗಳೂ ವಿಶ್ವಾಸವಿಡುತ್ತಾರೆ.

ಮನ್ಯತೇ ಕರ್ಷಯಿತ್ವಾ ತು ಕ್ಷಮಾ ಸಾಧ್ವೀತಿ ಶಮ್ಬರಃ ।
ಅಸಂತಪ್ತಂ ತು ಯದ್ದಾರು ಪ್ರತ್ಯೇತಿ ಪ್ರಕೃತಿಂ ಪುನಃ ॥೩೧॥

ಕ್ಷಮೆಯ ವಿಷಯದಲ್ಲಿ ಶಂಬರಾಸುರನ ಅಭಿಪ್ರಾಯವು ಹೀಗಿದೆ :

ಮೊದಲು ಶತ್ರುವನ್ನು ಚೆನ್ನಾಗಿ ಪೀಡಿಸಿ ದುರ್ಬಲಗೊಳಿಸಿದನಂತರ ಅವನ ವಿಷಯದಲ್ಲಿ ಕ್ಷಮೆತೋರಬೇಕು. ಆಗಲೇ ಅವನು ವಿನೀತನಾಗುವನು. ಬೆತ್ತವನ್ನು ಕಾಯಿಸದೇ ಬಗ್ಗಿಸಲು ಹೋದರೆ ಅದು ಪುನಃ ಹಿಂದಿನಂತೆಯೇ ಋಜುವಾಗಿ ನಿಲ್ಲುತ್ತದೆ.

ನೈತತ್ಪ್ರಶಂಸನ್ತ್ಯಾಚಾರ್ಯಾ ನ ಚ ಸಾಧುನಿದರ್ಶನಮ್ ।
ಅಕ್ರೋಧೇನಾವಿನಾಶೇನ ನಿಯನ್ತವ್ಯಾಃ ಸ್ವಪುತ್ರವತ್ ॥೩೨॥

ಆದರೆ ಆಚಾರ್ಯಪುರುಷರು ಈ ಶಂಬರನ ಅಭಿಪ್ರಾಯವನ್ನು ಮಾನ್ಯಮಾಡುವುದಿಲ್ಲ. ಏಕೆಂದರೆ : ಇದು ಸಾಧುಪುರುಷರ ದೃಷ್ಟಾಂತ ವಾಗಿಲ್ಲ. ರಾಜನು ಪರಾಜಿತನಾದ ತನ್ನ ಶತ್ರುವನ್ನು ತನ್ನ ಮಗನಂತೆಯೇ ನೋಡಿಕೊಳ್ಳಬೇಕು. ಅವನ ಮೇಲೆ ಕೋಪಿಸಿಕೊಳ್ಳಬಾರದು. ಅವನನ್ನು ಸಂಹರಿಸದೇ ಅಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸಬೇಕು.

ದ್ವೇಷ್ಯೋ ಭವತಿ ಭೂತಾನಾಮುಗ್ರೋ ರಾಜಾ ಯುಧಿಷ್ಠಿರ ।
ಮೃದುಮಪ್ಯವಮನ್ಯನ್ತೇ ತಸ್ಮಾದುಭಯಮಾಚರೇತ್ ॥೩೩॥

ಯುಧಿಷ್ಠಿರ! ರಾಜನು ಉಗ್ರನಾಗಿದ್ದರೆ ಎಲ್ಲ ಪ್ರಾಣಿಗಳಿಗೂ ದ್ವೇಷ್ಯನಾಗುತ್ತಾನೆ. ಉಗ್ರನಾದವನನ್ನು ಎಲ್ಲರೂ ದ್ವೇಷಿಸುತ್ತಾರೆ. ಅತ್ಯಂತ ಕೋಮಲಹೃದಯನಾಗಿದ್ದರೆ–ಅಂತಹವನನ್ನು ಅನಾದರಣೆಮಾಡುತ್ತಾರೆ. ಆದುದರಿಂದ ರಾಜನು ಉಗ್ರನೂ ಆಗಿರಬೇಕು ; ಮೃದುವೂ ಆಗಿರಬೇಕು.

ಪ್ರಹರಿಷ್ಯನ್ಪ್ರಿಯಂ ಬ್ರೂಯಾತ್ಪ್ರಹರನ್ನಪಿ ಭಾರತ ।
ಪ್ರಹೃತ್ಯ ಚ ಕೃಪಾಯೀತ ಶೋಚನ್ನಿವ ರುದನ್ನಿವ ॥೩೪॥

ರಾಜನು ಶತ್ರುವನ್ನು ಪ್ರಹರಿಸುವ ಮೊದಲು ಅವನೊಡನೆ ಪ್ರಿಯ ವಾದ ಮಾತುಗಳನ್ನು ಆಡುತ್ತಿರಬೇಕು. ಶತ್ರುವನ್ನು ಪ್ರಹರಿಸುವಾಗಲೂ ಪ್ರಿಯವಾದ ಮಾತನ್ನಾಡುತ್ತಿರಬೇಕು. ಪ್ರಹರಿಸಿದನಂತರ ಶೋಕವನ್ನೂ ರೋದನವನ್ನೂ ಪ್ರಕಟಿಸುತ್ತಾ ಅವನ ಮೇಲೆ ಕೃಪೆದೋರಬೇಕು.

ನ ಮೇ ಪ್ರಿಯಂ ಯನ್ನಿಹತಾಃ ಸಂಗ್ರಾಮೇ ಮಾಮಕೈರ್ನರೈಃ ।
ನ ಚ ಕುರ್ವನ್ತಿ ಮೇ ವಾಕ್ಯಮುಚ್ಯಮಾನಾಃ ಪುನಃ ಪುನಃ ॥೩೫॥

ಶತ್ರುವನ್ನು ಪ್ರಹರಿಸಿಯಾದನಂತರ ಶತ್ರುವಿಗೆ ಕೇಳಿಸುವಂತೆ ರಾಜನು ಈ ಮಾತುಗಳನ್ನಾಡಬೇಕು : "ಈ ಯುದ್ಧದಲ್ಲಿ ನನ್ನ ಕಡೆಯ ಸೈನಿಕರಿಂದ ಇಷ್ಟು ಮಂದಿ ಹತರಾದುದಕ್ಕೆ ನನಗೆ ಬಹಳ ದುಃಖವಾಗಿದೆ. ಇದು ನನಗೆ ಸ್ವಲ್ಪವೂ ಸಮ್ಮತವಲ್ಲ. ಸಂಹಾರಕಾರ್ಯವನ್ನು ಅಷ್ಟು ರಭಸದಿಂದ ಮಾಡಬೇಡಿರೆಂದು ನಾನು ಅವರಿಗೆ ಪುನಃ ಪುನಃ ಹೇಳುತ್ತಿದ್ದರೂ ಅವರು ನನ್ನ ಮಾತನ್ನು ಕೇಳುತ್ತಲೇ ಇಲ್ಲ.

ಅಹೋ ಜೀವಿತಮಾಕಾಂಕ್ಷೇನ್ನೇದೃಶೋ ವಧಮರ್ಹತಿ ।
ಸುದುರ್ಲಭಾಃ ಸುಪುರುಷಾಃ ಸಂಗ್ರಾಮೇಷ್ವಪಲಾಯಿನಃ ।
ಕೃತಂ ಮಮಾಪ್ರಿಯಂ ತೇನ ಯೇನಾಯಂ ನಿಹತೋ ಮೃಧೇ ॥೩೭॥

ಎಲ್ಲ ಜನರೂ ತಮ್ಮ ಜೀವನವನ್ನು ರಕ್ಷಿಸಿಕೊಳ್ಳಲು ಅಪೇಕ್ಷಿಸುತ್ತಾರೆ. ಆದುದರಿಂದ ಇಂತಹ ಪುರುಷರ ವಧೆಯು ಖಂಡಿತವಾಗಿಯೂ ಉಚಿತವಲ್ಲ. ಯುದ್ಧದಿಂದ ಪಲಾಯನಮಾಡದಿರುವ ಸತ್ಪುರುಷರು ಸುದುರ್ಲಭರೇ ಸರಿ. ಅಂತಹ ನೀತಿವಂತರು ಹುಡುಕಿದರೂ ಸಿಕ್ಕುವುದಿಲ್ಲ. ನನ್ನ ಕಡೆಯ ಯಾವ ಯೋಧನು ಇಂತಹ ವೀರನನ್ನು ವಧಿಸಿರುವನೋ ಅವನು ನನಗೆ ಅಪ್ರಿಯವಾದ ಕಾರ್ಯವನ್ನೇ ಮಾಡಿರುತ್ತಾನೆ."

ಮಾತಿನಲ್ಲಿ ಬಹಿರಂಗವಾಗಿ ಶತ್ರುಗಳ ಮುಂದೆ ಅವರಿಗೆ ಕೇಳಿಸುವಂತೆ ಹೀಗೆ ಹೇಳುತ್ತಾ ರಹಸ್ಯದಲ್ಲಿ ಶತ್ರುಗಳನ್ನು ಸಂಹರಿಸಿದವರನ್ನು ಪ್ರಶಂಸೆ ಮಾಡುತ್ತಿರಬೇಕು. ಅವರಿಗೆ ಪಾರಿತೋಷಿಕಗಳನ್ನೂ ಕೊಡುತ್ತಿರಬೇಕು.

ಹನ್ತೄಣಾಮಾಹತಾನಾಂ ಚ ಯತ್ಕುರ್ಯುರಪರಾಧಿನಃ ।
ಕ್ರೋಶೇದ್ಬಾಹುಂ ಪ್ರಗೃಹ್ಯಾಪಿ ಚಿಕೀರ್ಷಞ್ಜನಸಂಗ್ರಹಮ್ ॥೩೮॥

ಹಾಗೆಯೇ ತನ್ನ ಪಕ್ಷದಲ್ಲಿ ಅಳಿದುಳಿದಿರುವ ಯೋಧರ ಮುಂದೆ–ಅಳಿದು ಹೋಗಿರುವ ಯೋಧರ ವಿಷಯವಾಗಿ, ಅಪರಾಧಿಯಾದವನು ಯಾವ ರೀತಿಯಲ್ಲಿ ಪಶ್ಚಾತ್ತಾಪವನ್ನು ಪ್ರಕಟಿಸುವನೋ–ಹಾಗೆಯೇ ಪಶ್ಚಾತ್ತಾಪವನ್ನು ಪ್ರಕಟಿಸುತ್ತಿರಬೇಕು. ಮನುಷ್ಯರ ಒಲುಮೆಯನ್ನು ಸಂಪಾದಿಸುವುದ

ಕ್ಕೋಸ್ಕರ ಎರಡು ಕೈಗಳನ್ನೂ ಮೇಲಕ್ಕೆತ್ತಿಕೊಂಡು ಯುದ್ಧದಲ್ಲಿ ಸತ್ತವರ ಸಲುವಾಗಿ ಗಟ್ಟಿಯಾಗಿ ರೋದನಮಾಡಬೇಕು.

ಏವಂ ಸರ್ವಾಸ್ವವಸ್ಥಾಸು ಸಾನ್ತ್ವಪೂರ್ವಂ ಸಮಾಚರೇತ್ ।
ಪ್ರಿಯೋ ಭವತಿ ಭೂತಾನಾಂ ಧರ್ಮಜ್ಞೋ ವೀತಿಭೀರ್ನೃಪಃ ॥೩೯॥

ಹೀಗೆ ರಾಜನು ಎಲ್ಲ ಅವಸ್ಥೆಗಳಲ್ಲಿಯೂ ಸಾಂತ್ವನಪೂರ್ವವಾದ ವ್ಯವಹಾರವನ್ನೇ ಇಟ್ಟುಕೊಳ್ಳಬೇಕು. ಧರ್ಮಜ್ಞನಾದ, ಭಯರಹಿತನಾದ ರಾಜನು ಸಾಂತ್ವನಪೂರ್ವವಾದ ಇಂತಹ ವ್ಯವಹಾರವನ್ನಿಟ್ಟುಕೊಳ್ಳುವುದ ರಿಂದ ಪ್ರಜೆಗಳ ಪ್ರೀತಿಗೆ ಪಾತ್ರನಾಗುತ್ತಾನೆ.

ವಿಶ್ವಾಸಂ ಚಾತ್ರ ಗಚ್ಛನ್ತಿ ಸರ್ವಭೂತಾನಿ ಭಾರತ ।
ವಿಶ್ವಸ್ತಃ ಶಕ್ಯತೇ ಭೋಕ್ತುಂ ಯಥಾಕಾಮಮುಪಸ್ಥಿತಃ ॥೪೦॥

ಎಲ್ಲ ಜನರೂ ಅಂತಹ ರಾಜನ ವಿಷಯದಲ್ಲಿ ವಿಶ್ವಾಸವನ್ನಿಟ್ಟುಕೊಳ್ಳು ತ್ತಾರೆ. ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾದನಂತರ ಆ ರಾಜನು ಅವರೆಲ್ಲರ ನಿಕಟವರ್ತಿಯಾಗಿದ್ದುಕೊಂಡು ರಾಷ್ಟ್ರವನ್ನು ತನ್ನ ಇಚ್ಛಾನುಸಾರವಾಗಿ ಉಪಭೋಗಿಸಲು ಸಮರ್ಥನಾಗುತ್ತಾನೆ.

ತಸ್ಮಾದ್ವಿಶ್ವಾಸಯೇದ್ರಾಜಾ ಸರ್ವಭೂತಾನ್ಯಮಾಯಯಾ ।
ಸರ್ವತಃ ಪರಿರಕ್ಷೇಚ್ಚ ಯೋ ಮಹೀಂ ಭೋಕ್ತುಮಿಚ್ಛತಿ ॥೪೧॥

ಈ ಭೂಮಂಡಲವನ್ನು ಉಪಭೋಗಿಸಲು ಇಚ್ಛಿಪಡುವ ರಾಜನು ಮೋಸ-ಕಪಟಗಳಿಲ್ಲದೇ ಎಲ್ಲ ಜನರಿಗೂ ತನ್ನ ಮೇಲೆ ವಿಶ್ವಾಸವು ಹುಟ್ಟು ವಂತೆ ನಡೆದುಕೊಳ್ಳಬೇಕು. ಪ್ರಜೆಗಳನ್ನು ಸರ್ವಪ್ರಕಾರದಿಂದಲೂ ಸಂರಕ್ಷಿಸ ಬೇಕು."

ರಿ೧೦೨ನೆಯ ಅಧ್ಯಾಯವು ಮುಗಿಯಿತು.

೧೦೩ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಶತ್ರುಗಳನ್ನು ವಶಪಡಿಸಿಕೊಳ್ಳಬೇಕಾದರೆ ರಾಜನು ಯಾವ ನೀತಿಯನ್ನು ಅನುಸರಿಸಬೇಕು? ದುಷ್ಟರನ್ನು ಗುರುತಿಸುವುದು ಹೇಗೆ?–ಎಂಬ ವಿಷಯದಲ್ಲಿ ಇಂದ್ರ-ಬೃಹಸ್ಪತಿಗಳ ಸಂವಾದಕಥನ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಮೃದೌ ಕಥಂ ತೀಕ್ಷ್ಣೇ ಮಹಾಪಕ್ಷೇ ಚ ಪಾರ್ಥಿವ ।
ಆದೌ ವರ್ತೇತ ನೃಪತಿಸ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಯಾವನ ಪಕ್ಷವು ಮಹತ್ತಾಗಿಯೂ, ಪ್ರಬಲವಾಗಿಯೂ ಇರುವುದೋ–ಅವನೊಡನೆ ಪ್ರಾರಂಭದಲ್ಲಿ ಹೇಗೆ ವರ್ತಿಸಬೇಕು? ತನ್ನ ಶತ್ರುವು ಮೃದುವಾಗಿದ್ದಲ್ಲಿ ಅವನೊಡನೆ ಹೇಗೆ ನಡೆದುಕೊಳ್ಳಬೇಕು? ಶತ್ರುವು ತೀಕ್ಷ್ಣನಾಗಿದ್ದಲ್ಲಿ ಅವನೊಡನೆ ಹೇಗೆ ನಡೆದುಕೊಳ್ಳಬೇಕು?–ಈ ವಿಷಯವನ್ನು ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ನಡೆದ ಇಂದ್ರ-ಬೃಹಸ್ಪತಿಗಳ ಸಂವಾದರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಶತ್ರುವೀರಹಂತಕನಾದ ದೇವಪತಿಯಾದ ಇಂದ್ರನು ದೇವಗುರುವಾದ ಬೃಹಸ್ಪತ್ಯಾಚಾರ್ಯರ ಬಳಿಗೆ ಬಂದು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಬದ್ಧಾಂಜಲಿಯಾಗಿ ಪ್ರಶ್ನಿಸಿದನು :

ಅಹಿತೇಷು ಕಥಂ ಬ್ರಹ್ಮನ್ಪ್ರವರ್ತೇಯಮತನ್ದ್ರಿತಃ ।
ಅಸಮುಚ್ಛಿದ್ಯ ಚೈವೈತಾನ್ನಿಯಚ್ಛೇಯಮುಪಾಯತಃ ॥೨॥

"ಆಚಾರ್ಯರೇ! ಆಲಸ್ಯರಹಿತನಾಗಿದ್ದುಕೊಂಡು ನನ್ನ ಶತ್ರುಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳಲಿ? ಅವರೆಲ್ಲರ ಮೂಲೋತ್ಪಾಟನೆಯನ್ನು ಮಾಡದೇ ಉಪಾಯದಿಂದ ನನ್ನ ಶತ್ರುಗಳನ್ನು ವಶಪಡಿಸಿಕೊಳ್ಳುವುದು ಹೇಗೆ?

ಸೇನಯೋರ್ವ್ಯತಿಷಙ್ಗೇಣ ಜಯಃ ಸಾಧಾರಣೋ ಭವೇತ್ ।
ಕಿಂಕುರ್ವಾಣಂ ನ ಮಾಂ ಜಹ್ಯಾಜ್ಜ್ವಲಿತಾ ಶ್ರೀಃ ಪ್ರತಾಪಿನೀ ॥೫॥

ಸೈನ್ಯಗಳ ಪರಸ್ಪರ ಸಂಘರ್ಷಣೆಯಿಂದ ಲಭಿಸುವ ವಿಜಯವು ಸಾಧಾರಣರೀತಿಯದು. (ವಿಜಯವು ಅನಿಶ್ಚಿತ ; ಯಾರಿಗಾದರೂ ಲಭಿಸಬಹುದು. ಅದರ ಫಲವೂ ಸಾಧಾರಣವೇ.) ಶತ್ರುಗಳಿಗೆ ಸಂತಾಪವನ್ನುಂಟುಮಾಡುತ್ತಿರುವ ನನ್ನ ರಾಜ್ಯಲಕ್ಷ್ಮಿಯು ನನ್ನನ್ನು ಯಾವುದೇ ಕಾರಣದಿಂದಲೂ ಬಿಟ್ಟುಹೋಗಬಾರದು. ಅದಕ್ಕೆ ನಾನೇನು ಮಾಡಬೇಕು? ನಾನೇನು ಮಾಡಿದರೆ ರಾಜ್ಯಲಕ್ಷ್ಮಿಯು ನನ್ನನ್ನು ಬಿಟ್ಟುಹೋಗುವುದಿಲ್ಲ?”

ಪುರಂದರನು ಹೀಗೆ ಪ್ರಶ್ನಿಸಿದನಂತರ ಧರ್ಮಾರ್ಥ-ಕಾಮಗಳ ವಿಷಯದಲ್ಲಿ ಕುಶಲರಾದ, ಸಮಯೋಚಿತವಾಗಿ ಉತ್ತರಹೇಳುವ ಸಾಮರ್ಥ್ಯವುಳ್ಳ, ರಾಜಧರ್ಮವಿಧಾನಗಳನ್ನು ಚೆನ್ನಾಗಿ ತಿಳಿದಿರುವ ಬೃಹಸ್ಪತ್ಯಾಚಾರ್ಯರು ಇಂದ್ರನೊಡನೆ ಹೇಳಿದರು :

ನ ಜಾತು ಕಲಹೇನೇಚ್ಛೇನ್ನಿಯನ್ತುಮಪಕಾರಿಣಃ ।
ಬಾಲೈರಾಸೇವಿತಂ ಹ್ಯೇತದ್ಯದಮರ್ಷೋ ಯದಕ್ಷಮಾ ॥೬॥

“ಇಂದ್ರನೇ! ರಾಜನು ಯಾವಾಗಲೂ ಯುದ್ಧದ ಮೂಲಕವಾಗಿ ಶತ್ರುಗಳನ್ನು ವಶವರ್ತಿಗಳನ್ನಾಗಿ ಮಾಡಿಕೊಳ್ಳಲು ಇಚ್ಛಿಸಬಾರದು. ಕೋಪ ಮತ್ತು ಅಕ್ಷಮೆ–ಈ ಎರಡನ್ನೂ ಮೂರ್ಖರಾದವರು ಮಾತ್ರವೇ ಆಶ್ರಯಿಸುತ್ತಾರೆ.

ನ ಶತ್ರುರ್ವಿವೃತಃ ಕಾರ್ಯೋ ವಧಮಸ್ಯಾಭಿಕಾಂಕ್ಷತಾ ।
ಕ್ರೋಧಂ ಭಯಂ ಚ ಹರ್ಷಂ ಚ ನಿಯಮ್ಯ ಸ್ವಯಮಾತ್ಮನಿ ॥೭॥

ಶತ್ರುವಿನ ವಧೆಯನ್ನು ಇಚ್ಛಿಸುವ ರಾಜನು ಶತ್ರುವಿಗೆ ಅದರ ಸುಳಿವೂ ತಿಳಿಯದಂತೆ ವರ್ತಿಸಬೇಕು. ಕ್ರೋಧ-ಭಯ-ಹರ್ಷಗಳನ್ನು ಮನಸ್ಸಿನಲ್ಲಿಯೇ ಹುದುಗಿಸಿಕೊಂಡು ಕಾರ್ಯಮಾಡಬೇಕು.

ಅಮಿತ್ರಮುಪಸೇವೇತ ವಿಶ್ವಸ್ತವದವಿಶ್ವಸನ್ ।
ಪ್ರಿಯಮೇವ ವದೇನ್ನಿತ್ಯಂ ನಾಪ್ರಿಯಂ ಕಿಂಚಿದಾಚರೇತ್ ॥೮॥

ಶತ್ರುವಿನಲ್ಲಿ ನಂಬಿಕೆಯಿಲ್ಲದಿದ್ದರೂ ನಂಬಿಕೆಯಿರುವವನಂತೆ ಶತ್ರುವಿನೊಡನೆ ವ್ಯವಹರಿಸುತ್ತಿರಬೇಕು. ಯಾವಾಗಲೂ ಅವನೊಡನೆ ಪ್ರಿಯವಾದ ಮಾತುಗಳನ್ನೇ ಆಡುತ್ತಿರಬೇಕು. ಅವನಿಗೆ ಸ್ವಲ್ಪವಾದರೂ ಅಪ್ರಿಯವಾದ ಯಾವ ಕಾರ್ಯವನ್ನೂ ಮಾಡಬಾರದು.

ವಿರಮೇಚ್ಛುಷ್ಕವೈರೇಭ್ಯಃ ಕಣ್ಠಾಯಾಸಾಂಶ್ಚ ವರ್ಜಯೇತ್ ।
ಯಥಾ ವೈತಂಸಿಕೋ ಯುಕ್ತೋ ದ್ವಿಜಾನಾಂ ಸದೃಶಸ್ವನಃ ॥೧೦॥

ತಾನ್ದ್ವಿಜಾನ್ಕುರುತೇ ವಶ್ಯಾಂಸ್ತಥಾ ಯುಕ್ತೋ ಮಹೀಪತಿಃ ।
ವಶಂ ಚೋಪನಯೇಚ್ಛತ್ರೂನ್ನಿಹನ್ಯಾಚ್ಚ ಪುರಂದರ ॥೧೧॥

ಶುಷ್ಕವಾದ ಅಪ್ರಯೋಜಕವಾದ ವೈರದಿಂದ ದೂರವಿರಬೇಕು. (ಬಹಿರಂಗದಲ್ಲಿ ಯಾರೊಡನೆಯೂ ವೈರವನ್ನು ಕಟ್ಟಿಕೊಳ್ಳಲೇಬಾರದು.) ಇತರರೊಡನೆ ಜಗಳವಾಡುತ್ತಾ ಕಂಠಕ್ಕೆ ಆಯಾಸವನ್ನು ಮಾಡಿಕೊಳ್ಳಬಾರದು. ಯಾವ ರೀತಿಯಲ್ಲಿ ವ್ಯಾಧನು ತನ್ನ ಕಾರ್ಯದಲ್ಲಿಯೇ ನಿರತನಾಗಿರುತ್ತಾ ಪಕ್ಷಿಗಳಂತೆಯೇ ಕೂಗುತ್ತಾ ಪಕ್ಷಿಗಳನ್ನು ಉಪಾಯದಿಂದ ತನ್ನ ಬಲೆಯಲ್ಲಿ ಬೀಳಿಸಿಕೊಳ್ಳುತ್ತಾನೆಯೋ–ಅದೇ ರೀತಿಯಲ್ಲಿ ರಾಜನು ಉಪಾಯಾಂತರಗಳಿಂದ ಶತ್ರುಗಳನ್ನು ವಶಪಡಿಸಿಕೊಳ್ಳಬೇಕು. ಬಳಿಕ ಅವರನ್ನು ಸಂಹರಿಸಬೇಕು.

ನ ನಿತ್ಯಂ ಪರಿಭೂಯಾರೀನ್ಸುಖಂ ಸ್ವಪಿತಿ ವಾಸವ ।
ಜಾಗರ್ತ್ಯೇವ ಹಿ ದುಷ್ಟಾತ್ಮಾ ಸಂಕರೇಽಗ್ನಿರಿವೋತ್ಥಿತಃ ॥೧೨॥

ಶತ್ರುಗಳನ್ನು ನಿತ್ಯವೂ ತಿರಸ್ಕಾರಮಾಡುತ್ತಿರುವವನು ಸುಖವಾಗಿ ನಿದ್ರಿಸಲು ಸಾಧ್ಯವೇ ಆಗುವುದಿಲ್ಲ. ಬಿದಿರು ಮತ್ತು ಹುಲ್ಲಿನ ಸಂಪರ್ಕದಿಂದ ಚಟ-ಚಟಾಶಬ್ದದೊಡನೆ ಪ್ರಜ್ವಲಿಸುವ ಅಗ್ನಿಯಂತೆ–ದುಷ್ಟಾತ್ಮನಾದ ಆ ಶತ್ರುವು ಸರ್ವದಾ ಜಾಗ್ರತನಾಗಿಯೇ ಇರುತ್ತಾನೆ.

ನ ಸಂನಿಪಾತಃ ಕರ್ತವ್ಯಃ ಸಾಮಾನ್ಯೇ ವಿಜಯೇ ಸತಿ ।
ವಿಶ್ವಾಸ್ಯೈವೋಪಸನ್ನಾರ್ಥೋ ವಶೇ ಕೃತ್ವಾ ರಿಪುಃ ಪ್ರಭೋ ॥೧೩॥

ವಿಜಯವು ಉಭಯಸಾಧಾರಣವಾಗಿರುವಾಗ (ಇಬ್ಬರಿಗೂ ಲಭಿಸಬಹುದಾಗಿರುವಾಗ) ಯುದ್ಧಮಾಡುವ ಆವಶ್ಯಕತೆಯಿಲ್ಲ. ಶತ್ರುವಿನಲ್ಲಿ

ವಿಶ್ವಾಸವನ್ನು ಹುಟ್ಟಿಸಿ ಅವನನ್ನು ವಶಪಡಿಸಿಕೊಂಡು ಉಪಾಯಾಂತರ ಗಳಿಂದ ಹತ್ತಿರಕ್ಕೆ ಕರೆಸಿಕೊಂಡುದಕ್ಕೆ ತಕ್ಕ ಪ್ರಯೋಜನವನ್ನು ಪಡೆಯಬೇಕು. (ವಶಪಡಿಸಿಕೊಂಡನಂತರ ಅವನನ್ನು ಸಂಹರಿಸಬೇಕು.)

ಸಮ್ಪ್ರಧಾರ್ಯ ಸಹಾಮಾತ್ಯೈರ್ಮನ್ತ್ರವಿದ್ಭಿರ್ಮಹಾತ್ಮಭಿಃ ।
ಉಪೇಕ್ಷ್ಯಮಾಣೋಽವಜ್ಞಾತೋ ಹೃದಯೇನಾಪರಾಜಿತಃ ॥೧೪॥

ಅಥಾಸ್ಯ ಪ್ರಹರೇತ್ಕಾಲೇ ಕಿಂಚಿದ್ವಿಚಲಿತೇ ಪದೇ ।
ದಣ್ಡಂ ಚ ದೂಷಯೇದಸ್ಯ ಪುರುಷೈರಾಪ್ತಕಾರಿಭಿಃ ॥೧೫॥

ಶತ್ರುವು ಉಪೇಕ್ಷಿಸಿದರೂ–ಅನಾದರಣೆಮಾಡಿದರೂ ಬುದ್ಧಿವಂತ ನಾದ ರಾಜನು ಮನಸ್ಸಿನಿಂದ ಪರಾಜಯವನ್ನು ಹೊಂದಬಾರದು (ಮನಸ್ಸನ್ನು ಕೆಡಿಸಿಕೊಳ್ಳಬಾರದು.) ಮಹಾತ್ಮರಾದ, ಮಂತ್ರಜ್ಞರಾದ ಅಮಾತ್ಯರೊಡನೆ ಮಾಡಬೇಕಾದ ಕರ್ತವ್ಯವನ್ನು ನಿಶ್ಚಯಿಸಿ ಶತ್ರುವು ತನ್ನ ಸ್ಥಾನದಿಂದ ಸ್ವಲ್ಪವೇ ವಿಚಲಿತನಾದಾಗ ಸಮಯ ನೋಡಿ ಪ್ರಹರಿಸಬೇಕು. ಆಪ್ತರಾದ ಪುರುಷರನ್ನು ಕಳುಹಿಸಿ ಅವನ ಸೈನ್ಯವನ್ನು ಭೇದಿಸಬೇಕು.

೧೩-೧೪-೧೫ ಈ ಮೂರು ಶ್ಲೋಕಗಳನ್ನು ಕ್ರೋಡೀಕರಿಸಿ ಹೀಗೆ ಅರ್ಥಮಾಡಬಹುದಾಗಿದೆ :

1) ಗೆಲುವು ಸಾಮಾನ್ಯವಾಗಿರುವಾಗ (ಎರಡು ಪಕ್ಷಗಳೂ ಸಮಬಲ ವಾಗಿ ಯಾರಿಗಾದರೂ ಗೆಲುವು ಸಂಭವಿಸಬಹುದಾಗಿರುವಾಗ) ಯುದ್ಧ ಮಾಡಬಾರದು.

2) ಶತ್ರುವು ತನ್ನನ್ನು ನಂಬುವಂತೆ ಮಾಡಿ ಅವನನ್ನು ವಶಪಡಿಸಿ ಕೊಳ್ಳಬೇಕು. ತನ್ನ ಪ್ರಯೋಜನಸಿದ್ಧಿಯು ಸಮೀಪಿಸಿದೆಯೆಂದು (ಕಾರ್ಯ ಸಾಧನೆಗೆ ತಕ್ಕ ಸಮಯವು ಒದಗಿದೆಯೆಂದು) ಭಾವಿಸಿದಾಗ ಮಹಾತ್ಮರಾದ, ಮಂತ್ರಜ್ಞರಾದ, ಮಂತ್ರಿಗಳೊಡನೆ ಸಮಾಲೋಚಿಸಿ ಕಾರ್ಯವನ್ನು ನಿಶ್ಚಯಿಸಬೇಕು ; ಶತ್ರುವನ್ನು ಸದೆಬಡಿಯಬೇಕು.

3) (ಶತ್ರುವಿಗೆ ನಂಬಿಕೆಯನ್ನು ಹುಟ್ಟಿಸಲು) ಉಪೇಕ್ಷೆಗೆ ಒಳಗಾದರೂ ಅವಮಾನಕ್ಕೆ ಗುರಿಯಾದರೂ–ಅದನ್ನು ಗಮನಿಸದೆಯೇ

ಇರಬೇಕು. ಆದರೆ ಮನಸ್ಸಿಂದ ಅಪರಾಜಿತನಾಗಿ [ಸೋಲದವನಾಗಿ] ಇರಬೇಕು. ಶತ್ರುವು ಎಚ್ಚರತಪ್ಪಿ ತಪ್ಪು ಹೆಜ್ಜೆಯಿಟ್ಟಾಗ ಆ ಸಮಯವನ್ನು ಉಪಯೋಗಿಸಿಕೊಂಡು ಶತ್ರುವನ್ನು ಪ್ರಹರಿಸಬೇಕು. ತನಗೆ ಆಪ್ತರಾಗಿ ಕೆಲಸಮಾಡುವ ಪುರುಷರಿಂದ ಶತ್ರುವಿನ ಸೈನ್ಯವು ಒಡೆದು ಹೋಗುವಂತೆ ಮಾಡಬೇಕು. (ಸೈನ್ಯದಲ್ಲಿ ಒಡಕನ್ನು ಹುಟ್ಟಿಸಬೇಕು.)

ಆದಿಮಧ್ಯಾವಸಾನಜ್ಞಃ ಪ್ರಚ್ಛನ್ನಂ ಚ ವಿಧಾರಯೇತ್ ।
ಬಲಾನಿ ದೂಷಯೇದಸ್ಯ ಜಾನನ್ನೇವ ಪ್ರಮಾಣತಃ ॥೧೬॥

ಮೊದಲು ಕಾರ್ಯವನ್ನು ಹೇಗೆ ಆರಂಭಿಸಬೇಕು? ಹೇಗೆ ನಿರ್ವಹಿಸ ಬೇಕು? ಹೇಗೆ ಮುಗಿಸಬೇಕು?–ಎಂಬುದನ್ನು ತಿಳಿದುಕೊಂಡಿರಬೇಕು. ರಹಸ್ಯದಲ್ಲಿ ಮಂತ್ರಿಗಳೊಡನೆ ಸಮಾಲೋಚಿಸಿ ತನ್ನ ಕರ್ತವ್ಯವೇನೆಂಬುದನ್ನು ನಿರ್ಧರಿಸಬೇಕು. ಶತ್ರುವಿನ ಸೇನಾಸಂಖ್ಯೆಯನ್ನು ತಿಳಿದುಕೊಂಡು ಭೇದಿಸಬೇಕು.

ಭೇದೇನೋಪಪ್ರದಾನೇನ ಸಂಸೃಜೇದೌಷಧೈಸ್ತಥಾ ।
ನ ತ್ವೇವಂ ಖಲು ಸಂಸರ್ಗಂ ರೋಚಯೇದರಿಭಿಃ ಸಹ ॥೧೭॥

ರಾಜನು ದೂರದಲ್ಲಿಯೇ ಇದ್ದುಕೊಂಡು ಗುಪ್ತಚಾರರ ಮೂಲಕವಾಗಿ ಶತ್ರುಪಕ್ಷದ ಸೈನಿಕರಲ್ಲಿ ಭೇದೋಪಾಯವನ್ನುಂಟುಮಾಡಬೇಕು. ಶತ್ರುಪಕ್ಷದ ಸೈನ್ಯಾಧಿಕಾರಿಗಳಿಗೆ ಲಂಚವನ್ನು ಕೊಟ್ಟು ತನ್ನ ಪಕ್ಷಕ್ಕೆ ಸೇರುವಂತೆ ಮಾಡಬೇಕು. ಅಥವಾ ಔಷಧಗಳ ಪ್ರಯೋಗದಿಂದ ಶತ್ರುಪಕ್ಷದ ಅಧಿಕಾರಿಗಳ ಮನಸ್ಸನ್ನು ಕೆಡಿಸಬೇಕು. ಆದರೆ ತಾನು ಮಾತ್ರ ಶತ್ರುಗಳೊಡನೆ ಬಹಿರಂಗವಾಗಿ ಸಂಬಂಧವನ್ನು ಇಟ್ಟುಕೊಳ್ಳಬಾರದು.

ದೀರ್ಘಕಾಲಮಪೀಕ್ಷೇತ ನಿಹನ್ಯಾದೇವ ಶಾತ್ರವಾನ್ ।
ಕಾಲಾಕಾಂಕ್ಷೀ ಹಿ ಕ್ಷಪಯೇದ್ಯಥಾ ವಿಶ್ರಮ್ಭಮಾಪ್ನುಯುಃ ॥೧೮॥

ಶತ್ರುವಿನ ವಧೆಗೆ ಅನುಕೂಲವಾದ ವಾತಾವರಣವನ್ನು ನಿರೀಕ್ಷಿಸುತ್ತಾ ಕಾಲವನ್ನು ಕಳೆಯಬೇಕು. ಅನುಕೂಲವಾದ ವಾತಾವರಣವಿರುವ ಕಾಲವು ಪ್ರಾಪ್ತವಾಗಬೇಕಾದರೆ ಬಹಳ ದಿವಸಗಳೇ ಕಾಯಬೇಕಾಗಬಹುದು. ಅಂತಹ ಕಾಲಯಾಪನೆಯೇ ಶತ್ರುಗಳ ಮನಸ್ಸಿನಲ್ಲಿ ಸಂಪೂರ್ಣವಾದ

ವಿಶ್ವಾಸವುಂಟಾಗಲು ಕಾರಣವಾಗುತ್ತದೆ. ತನಗೆ ಅನುಕೂಲವಾದ ಮತ್ತು ಶತ್ರುಗಳಿಗೆ ಪ್ರತಿಕೂಲವಾದ ವಾತಾವರಣವು ಸಿದ್ಧವಾದೊಡನೆಯೇ ಹಿಂದೆ-ಮುಂದೆ ನೋಡದೇ ಶತ್ರುಗಳನ್ನು ಸಂಹರಿಸಬೇಕು.

ನ ಸದ್ಯೋಽರೀನ್ವಿಹನ್ಯಾಚ್ಚ ದೃಷ್ಟವ್ಯೋ ವಿಜಯೋ ಧ್ರುವಃ ।
ನ ಶಲ್ಯಂ ವಾ ಘಟಯತಿ ನ ವಾಚಾ ಕುರುತೇ ವ್ರಣಮ್ ॥೧೯॥

ಶತ್ರುಗಳ ಮೇಲೆ ಒಡನೆಯೇ ಆಕ್ರಮಣವನ್ನು ನಡೆಸಬಾರದು. ವಿಜಯವು ನಿಶ್ಚಯವೆಂದು ದೃಢಪಟ್ಟಾಗಲೇ ಆಕ್ರಮಣವನ್ನು ನಡೆಸಬೇಕು. ಅದುವರೆಗೂ ಶತ್ರುಗಳಿಗೆ ಯಾವ ವಿಧವಾದ ಶಸ್ತ್ರ-ವಿಷಾದಿ ಪ್ರಯೋಗ ಗಳನ್ನೂ ಮಾಡಬಾರದು. ಕಠೋರವಾದ ಮಾತುಗಳ ಮೂಲಕವೂ ಶತ್ರು ವಿನ ಹೃದಯದಲ್ಲಿ ಘಾಸಿಯನ್ನುಂಟುಮಾಡಬಾರದು.

ಪ್ರಾಪ್ತೇ ಚ ಪ್ರಹರೇತ್ಕಾಲೇ ನ ಚ ಸಂವರ್ತತೇ ಪುನಃ ।
ಹನ್ತುಕಾಮಸ್ಯ ದೇವೇನ್ದ್ರ ಪುರುಷಸ್ಯ ರಿಪೂನ್ಪ್ರತಿ ॥೨೦॥

ಕಾಲವು ಪ್ರಾಪ್ತವಾದೊಡನೆಯೇ ಶತ್ರುಗಳನ್ನು ಸಂಹರಿಸಿಬಿಡಬೇಕು. ಏಕೆಂದರೆ: ರಿಪುಗಳನ್ನು ಕೊಲ್ಲಲಿಚ್ಛಿಸುವ ಮನುಷ್ಯನಿಗೆ ಅಂತಹ ಕಾಲವು ಪುನಃ-ಪುನಃ ಪ್ರಾಪ್ತವಾಗುವುದಿಲ್ಲ.

ಯೋ ಹಿ ಕಾಲೋ ವ್ಯತಿಕ್ರಾಮೇತ್ಪುರುಷಂ ಕಾಲಕಾಂಕ್ಷಿಣಮ್ ।
ದುರ್ಲಭಃ ಸ ಪುನಸ್ತೇನ ಕಾಲಃ ಕರ್ಮಚಿಕೀರ್ಷುಣಾ ॥೨೧॥

ಕಾಲವನ್ನು ಪ್ರತೀಕ್ಷಿಸುತ್ತಿರುವ ಪುರುಷನಿಗೆ ಸರಿಯಾದ ಕಾಲವು ವ್ಯತಿಕ್ರಮಿಸಿ ಹೋದುದೇ ಆದರೆ (ಪುರುಷನು ಸರಿಯಾದ ಕಾಲವು ಒದಗಿಬಂದಾಗ ಪ್ರಮಾದದಿಂದ ಶತ್ರುವನ್ನು ಸಂಹಾರಮಾಡದಿದ್ದರೆ)– ಶತ್ರುಸಂಹಾರಕಾರ್ಯವನ್ನು ಮಾಡಲು ಇಚ್ಛಿಸುವ ಆ ಪುರುಷನಿಗೆ ಕಳೆದುಹೋದ ಕಾಲವು ಪುನಃ ಲಭಿಸುವುದಿಲ್ಲ. (ಮತ್ತೊಮ್ಮೆ ಅನುಕೂಲವಾದ ಕಾಲವು ಸಿಕ್ಕುವುದಿಲ್ಲ.)

ಓಜಶ್ಚ ಜನಯೇದೇವ ಸಂಗೃಹ್ಣನ್ಸಾಧುಸಮ್ಮತಮ್ ।
ಅಕಾಲೇ ಸಾಧಯೇನ್ಮಿತ್ರಂ ನ ಚ ಪ್ರಾಪ್ತೇ ಪ್ರಪೀಡಯೇತ್ ॥೨೨॥

ರಾಜನು ಶ್ರೇಷ್ಠಪುರುಷರ ಸಮ್ಮತಿಯನ್ನು ಪಡೆದು ತನ್ನ ಬಲವನ್ನು

ಸರ್ವದಾ ಹೆಚ್ಚಿಸುತ್ತಲೇ ಇರಬೇಕು. ಅನುಕೂಲವಾದ ವಾತಾವರಣವು ಬರುವವರೆಗೂ ಮಿತ್ರರನ್ನೂ ಹೆಚ್ಚಿಸಿಕೊಳ್ಳುತ್ತಿರಬೇಕು. ಶತ್ರುವನ್ನು ಪೀಡಿಸಬಾರದು. ಆದರೆ ಸಮಯವು ಒದಗಿಬಂದಾಗ ಶತ್ರುವನ್ನು ಸಂಹರಿಸಲು ಹಿಂದೆಗೆಯಬಾರದು.

ವಿಹಾಯ ಕಾಮಂ ಕ್ರೋಧಂ ಚ ತಥಾಹಂಕಾರಮೇವ ಚ ।
ಯುಕ್ತೋ ವಿವರಮನ್ವಿಚ್ಛೇದಹಿತಾನಾಂ ಪುನಃ ಪುನಃ ॥೨೩॥

ಕಾಮ, ಕ್ರೋಧ ಮತ್ತು ಅಹಂಕಾರಗಳನ್ನು ತ್ಯಜಿಸಿ, ಜಾಗರೂಕನಾಗಿರುತ್ತಾ, ಶತ್ರುವಿನಲ್ಲಿ ಉಂಟಾಗಬಹುದಾದ ಛಿದ್ರಗಳನ್ನು ಮತ್ತೆ ಮತ್ತೆ ವೀಕ್ಷಿಸುತ್ತಿರಬೇಕು.

ಮಾರ್ದವಂ ದಣ್ಡ ಆಲಸ್ಯಂ ಪ್ರಮಾದಶ್ಚ ಸುರೋತ್ತಮ ।
ಮಾಯಾಃ ಸುವಿಹಿತಾಃ ಶಕ್ರ ಸಾದಯನ್ತ್ಯವಿಚಕ್ಷಣಮ್ ॥೨೪॥

ಸುರಶ್ರೇಷ್ಠನೇ! ಮೃದುತ್ವ, ದಂಡ (ಗರ್ವ ಅಥವಾ ಅಭಿಮಾನ), ಆಲಸ್ಯ, ಪ್ರಮಾದ, ಶತ್ರುವು ಪ್ರಯೋಗಿಸುವ ವಂಚನೆಯ ತಂತ್ರ–ಇವುಗಳು ಅನಭಿಜ್ಞನಾದ ರಾಜನನ್ನು ವಿನಾಶಗೊಳಿಸುತ್ತವೆ.

ನಿಹತ್ಯೈತಾನಿ ಚತ್ವಾರಿ ಮಾಯಾಂ ಪ್ರತಿ ವಿಧಾಯ ಚ ।
ತತಃ ಶಕ್ನೋತಿ ಶತ್ರೂಣಾಂ ಪ್ರಹರ್ತುಮವಿಚಾರಯನ್ ॥೨೫॥

ದೇವೇಂದ್ರ! ತನ್ನಲ್ಲಿರುವ ಮಾರ್ದವ, ಗರ್ವ, ಆಲಸ್ಯ ಮತ್ತು ಪ್ರಮಾದಗಳನ್ನು ಧ್ವಂಸಮಾಡಿ ಶತ್ರುವು ಪ್ರಯೋಗಿಸುವ ವಂಚನೆಗೆ ತಾನು ಪ್ರತಿವಂಚನೆಯನ್ನು ಮಾಡಬೇಕು. ಅನಂತರ ಅವನು ವಿಚಾರಮಾಡದೆಯೇ ಶತ್ರುಗಳನ್ನು ಪ್ರಹರಿಸಲು ಸಮರ್ಥನಾಗುತ್ತಾನೆ.

ಯದ್ವೈವೈಕೇನ ಶಕ್ಯೇತ ಗುಹ್ಯಂ ಕರ್ತುಂ ತದಾಚರೇತ್ ।
ಯಚ್ಛನ್ತಿ ಸಚಿವಾ ಗುಹ್ಯಂ ಮಿಥೋ ವಿಶ್ರಾವಯನ್ತ್ಯಪಿ ॥೨೬॥

ಯಾವ ರಹಸ್ಯವಾದ ಕಾರ್ಯವನ್ನು ಒಬ್ಬನಿಂದಲೇ ಮಾಡಲು ಸಾಧ್ಯವೋ–ಆ ಕಾರ್ಯವನ್ನು ತಾನೊಬ್ಬನೇ (ರಾಜನೊಬ್ಬನೇ) ಮಾಡಿ ಮುಗಿಸಬೇಕು. ಮಂತ್ರಿಗಳೂ ಕೆಲವು ಸಮಯಗಳಲ್ಲಿ ಗುಪ್ತವಿಷಯವನ್ನು

ಪ್ರಕಾಶಗೊಳಿಸುತ್ತಾರೆ. ತಮ್ಮಲ್ಲಿಯೇ ಪರಸ್ಪರವಾಗಿ ಆ ಗುಪ್ತವಿಷಯಗಳ ಸಂಬಂಧವಾಗಿ ಮಾತನಾಡಿಕೊಳ್ಳುತ್ತಾರೆ.

ಅಶಕ್ಯಮಿತಿ ಕೃತ್ವಾ ವಾ ತತೋಽನ್ಯೈಃ ಸಂವಿದಂ ಚರೇತ್ ।
ಬ್ರಹ್ಮದಣ್ಡಮದೃಷ್ಟೇಷು ದೃಷ್ಟೇಷು ಚತುರಙ್ಗಿಣೀಮ್ ॥೨೭॥

ಯಾವ ಕಾರ್ಯವನ್ನು ಏಕಾಕಿಯಾಗಿ ಮಾಡಲು ಸಾಧ್ಯವಿಲ್ಲವೋ ಅಂತಹ ಕಾರ್ಯದ ವಿಷಯವಾಗಿ ಅನ್ಯರೊಡನೆ ಸಮಾಲೋಚನೆಯನ್ನು ನಡೆಸಬೇಕು. ಶತ್ರುಗಳು ದೂರದಲ್ಲಿದ್ದು ದೃಷ್ಟಿಗೆ ಗೋಚರರಾಗಿರದಿದ್ದರೆ ಅವರ ಮೇಲೆ ಬ್ರಹ್ಮದಂಡವನ್ನೇ ಪ್ರಯೋಗಿಸಬೇಕು. (ಪುರೋಹಿತರ ಮೂಲಕ ಆಭಿಚಾರಿಕಕ್ರಿಯೆಯನ್ನು ಮಾಡಿಸಬೇಕು.) ಶತ್ರುಗಳು ಪ್ರತ್ಯಕ್ಷ ಗೋಚರರಾಗಿದ್ದರೆ ಚತುರಂಗಬಲಸಮೇತರಾಗಿ ಅವರನ್ನು ಆಕ್ರಮಿಸಬೇಕು.

ಭೇದಂ ಚ ಪ್ರಥಮಂ ಯುಞ್ಜ್ಯಾತ್ತೂಷ್ಣೀಂ ದಣ್ಡಂ ತಥೈವ ಚ ।
ಕಾಲೇ ಪ್ರಯೋಜಯೇದ್ರಾಜಾ ತಸ್ಮಿಂಸ್ತಸ್ಮಿಂಸ್ತದಾ ತದಾ ॥೨೮॥

ರಾಜನು ಮೊದಲು ಶತ್ರುವಿನ ವಿಷಯದಲ್ಲಿ ಭೇದೋಪಾಯವನ್ನು ಪ್ರಯೋಗಿಸಬೇಕು. ಶತ್ರುವಿಗೂ ಅವನ ಅನುಯಾಯಿಗಳಿಗೂ ವೈಮನಸ್ಯ ವುಂಟಾಗುವಂತೆ ಮಾಡಬೇಕು. ಕಾಲವು ಒದಗಿ ಬಂದಾಗ ಭಿನ್ನ-ಭಿನ್ನ ಶತ್ರುಗಳ ಮೇಲೆ ಬೇರೆ ಬೇರೆ ಸಮಯಗಳಲ್ಲಿ ಮೌನವಾಗಿ ದಂಡನೀತಿಯನ್ನೇ ಪ್ರಯೋಗಿಸಬೇಕು.

ಪ್ರಣಿಪಾತಂ ಚ ಗಚ್ಛೇತ ಕಾಲೇ ಶತ್ರೋರ್ಬಲೀಯಸಃ ।
ಯುಕ್ತೋಽಸ್ಯ ವಧಮನ್ವಿಚ್ಛೇದಪ್ರಮತ್ತಃ ಪ್ರಮಾದ್ಯತಃ ॥೨೯॥

ಶತ್ರುವು ಅತಿಬಲಿಷ್ಠನಾಗಿದ್ದು, ಆ ಸಮಯವು ಅವನಿಗೆ ಅನುಕೂಲ ವಾಗಿದ್ದು ತನಗೆ ಪರಾಜಯವು ಅನಿವಾರ್ಯವೆಂದು ಕಂಡುಬಂದಾಗ– ಶತ್ರುವಿಗೆ ಶರಣಾಗತನೂ ಆಗಬೇಕಾಗುತ್ತದೆ. ಶತ್ರುವು ಅಜಾಗರೂಕನಾಗಿ ದ್ದಾಗ ತಾನು ಅತ್ಯಂತಜಾಗರೂಕನಾಗಿದ್ದು ಉದ್ಯೋಗಶೀಲನಾಗಿ ಶತ್ರುವಿನ ವಧೋಪಾಯವನ್ನು ಹುಡುಕಬೇಕು.

ಪ್ರಣಿಪಾತೇನ ದಾನೇನ ವಾಚಾ ಮಧುರಯಾ ಬ್ರುವನ್ ।
ಅಮಿತ್ರಮಪಿ ಸೇವೇತ ನ ಚ ಜಾತು ವಿಶಙ್ಕಯೇತ್ ॥೩೦॥

ರಾಜನಾದವನು ತನ್ನ ಶತ್ರುವು ಅತ್ಯಂತಬಲಿಷ್ಠನಾಗಿರುವನೆಂದು ಕಂಡುಬಂದಾಗ–ದೀರ್ಘದಂಡನಮಸ್ಕಾರದಿಂದ, ಯಥೇಚ್ಛವಾದ ಧನವನ್ನು ಕೊಡುವುದರಿಂದ ಮತ್ತು ಸುಮಧುರವಾದ ಮಾತುಗಳನ್ನು ಆಡುವುದರಿಂದ ಶತ್ರುವನ್ನೂ ಸೇವಿಸಬೇಕಾಗುತ್ತದೆ. ಅಂತಹ ವ್ಯವಹಾರಗಳಿಂದ ಶತ್ರುವಿನ ಮನಸ್ಸಿನಲ್ಲಿ ಯಾವಾಗಲೂ ಸಂದೇಹವು ಉಂಟಾಗದಂತೆ ನೋಡಿಕೊಳ್ಳ ಬೇಕು.

ಸ್ಥಾನಾನಿ ಶಙ್ಕಿತಾನಾಂ ಚ ನಿತ್ಯಮೇವ ವಿವರ್ಜಯೇತ್ ।
ನ ಚ ತೇಷ್ವಾಶ್ವಸೇದ್ರಾಜಾ ಜಾಗ್ರತೀಹ ನಿರಾಕೃತಾಃ ॥೩೧॥

ಶತ್ರುವಿನ ಮನಸ್ಸಿನಲ್ಲಿ ಸಂದೇಹವುಂಟಾದಾಗ ಅಂತಹ ಶತ್ರುವು ಇರುವ ಜಾಗದಲ್ಲಿಯೇ ಇರಬಾರದು. ಅವನ ಸಹವಾಸವನ್ನೇ ಸಂಪೂರ್ಣವಾಗಿ ವರ್ಜಿಸಬೇಕು. ಅಂತಹವರ ವಿಷಯದಲ್ಲಿ ಸ್ವಲ್ಪವೂ ವಿಶ್ವಾಸವನ್ನಿಡಬಾರದು. ತಿರಸ್ಕೃತರಾದ ಶತ್ರುಗಳು ಪ್ರತೀಕಾರಮಾಡಲು ಬಹಳ ಜಾಗರೂಕ ರಾಗಿರುತ್ತಾರೆ.

ನ ಹ್ಯತೋ ದುಷ್ಕರಂ ಕರ್ಮ ಕಿಂಚಿದಸ್ತಿ ಸುರೋತ್ತಮ ।
ಯಥಾ ವಿವಿಧವೃತ್ತಾನಾಮೈಶ್ವರ್ಯಮಮರಾಧಿಪ ॥೩೨॥

ದೇವೇಶ್ವರನೇ! ಅನೇಕವಿಧವಾದ ವ್ಯವಹಾರಚತುರರಾದ ಜನರ ಮೇಲೆ ಹತೋಟಿಯನ್ನಿಟ್ಟುಕೊಳ್ಳುವುದಕ್ಕಿಂತಲೂ ದುಷ್ಕರವಾದ ಕಾರ್ಯವು ಬೇರೊಂದಿಲ್ಲ.

ತಥಾ ವಿವಿಧವೃತ್ತಾನಾಮಪಿ ಸಮ್ಭವ ಉಚ್ಯತೇ ।
ಯತತೇ ಯೋಗಮಾಸ್ಥಾಯ ಮಿತ್ರಾಮಿತ್ರಂ ವಿಚಾರಯೇತ್ ॥೩೩॥

ಅನೇಕವಿಧವಾದ ಆಚಾರ-ವ್ಯವಹಾರಗಳುಳ್ಳ ಜನರನ್ನು ಹತೋಟಿ ಯಲ್ಲಿಟ್ಟುಕೊಳ್ಳಬೇಕಾದ ಸಂದರ್ಭದಲ್ಲಿ–ಆ ಜನರಲ್ಲಿ ಮಿತ್ರರು ಯಾರು? ಶತ್ರುಗಳು ಯಾರು?–ಎಂಬುದನ್ನು ಬುದ್ಧಿಯೋಗದಿಂದ ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಮೃದುಮಪ್ಯವಮನ್ಯನ್ತೇ ತೀಕ್ಷ್ಣಾದುದ್ವಿಜತೇ ಜನಃ ।
ಮಾ ತೀಕ್ಷ್ಣೋ ಮಾ ಮೃದುರ್ಭೂಸ್ತ್ವಂ ತೀಕ್ಷ್ಣೋ ಭವ ಮೃದುರ್ಭವ ॥೩೪॥

ರಾಜನು ಮೃದುಸ್ವಭಾವದವನಾಗಿದ್ದರೆ ಜನರು ಅನಾದರಣೆ ಮಾಡುತ್ತಾರೆ. ತೀಕ್ಷ್ಣನಾಗಿದ್ದರೂ ಉದ್ವಿಗ್ನರಾಗುತ್ತಾರೆ. ಆದುದರಿಂದ ದೇವೇಂದ್ರ! ನೀನು ಅತ್ಯಂತ ಮೃದುವೂ ಆಗಿರಬೇಡ. ಹೆಚ್ಚು ತೀಕ್ಷ್ಣನೂ ಆಗಿರಬೇಡ. ತೀಕ್ಷ್ಣನಾಗಿಯೂ ಇರು ; ಮೃದುವಾಗಿಯೂ ಇರು. ಸಮಯಕ್ಕೆ ತಕ್ಕಂತೆ ಎರಡು ಗುಣಗಳೂ ನಿನ್ನಲ್ಲಿರಲಿ.

ಯಥಾ ವಪ್ರೇ ವೇಗವತಿ ಸರ್ವತಃ ಸಮ್ಪ್ಲುತೋದಕೇ ।
ನಿತ್ಯಂ ವಿವರಣಾದ್ಬಾಧಸ್ತಥಾ ರಾಜ್ಯಂ ಪ್ರಮಾದ್ಯತಃ ॥೩೫॥

ಸರ್ವತ್ರ ವ್ಯಾಪ್ತವಾದ ನೀರಿನ ಪ್ರವಾಹದಿಂದ ಕೂಡಿರುವ ವೇಗವಾದ ನದಿಯ ದಡಗಳು ಯಾವ ರೀತಿಯಲ್ಲಿ ನಿತ್ಯವೂ ಕೊರೆಯಲ್ಪಡುತ್ತಿರುತ್ತವೆಯೋ–ಅದೇ ರೀತಿಯಲ್ಲಿ ಪ್ರಮಾದವಶನಾದ ರಾಜನ ರಾಜ್ಯವು ಸರ್ವತ್ರ ವ್ಯಾಪ್ತರಾದ ಪ್ರಭಾವಶಾಲಿಗಳಾದ ಶತ್ರುಗಳಿಂದ ಬಾಧಿಸಲ್ಪಡುತ್ತಿರುತ್ತದೆ.

ನ ಬಹೂನಭಿಯುಞ್ಜೀತ ಯೌಗಪದ್ಯೇನ ಶಾತ್ರವಾನ್ ।
ಏಕೈಕಮೇಷಾಂ ನಿಷ್ಪಿಷ್ಯ ಶಿಷ್ಟೇಷು ನಿಪುಣಂ ಚರೇತ್ ।
ನ ತು ಶಕ್ತೋಽಪಿ ಮೇಧಾವೀ ಸರ್ವಾನೇವಾರಭೇನ್ನೃಪಃ ॥೩೭॥

ಅನೇಕ ಶತ್ರುಗಳ ಮೇಲೆ ಒಬ್ಬ ರಾಜನು ಒಂದೇ ಕಾಲದಲ್ಲಿ ಆಕ್ರಮಣವನ್ನು ಮಾಡಬಾರದು. ಒಬ್ಬನನ್ನು ಸಾಮೋಪಾಯದಿಂದಲೂ, ಮತ್ತೊಬ್ಬನನ್ನು ದಾನೋಪಾಯದಿಂದಲೂ, ಒಬ್ಬನನ್ನು ಭೇದೋಪಾಯದಿಂದಲೂ, ಇನ್ನೊಬ್ಬನನ್ನು ದಂಡೋಪಾಯದಿಂದಲೂ–ಒಬ್ಬೊಬ್ಬರನ್ನಾಗಿ ಸ್ವಾಧೀನಪಡಿಸಿಕೊಂಡು ಉಳಿದವರ ವಿಷಯದಲ್ಲಿ ನೈಪುಣ್ಯದಿಂದ ವರ್ತಿಸಬೇಕು. ಅತ್ಯಂತಶಕ್ತನೇ ಆಗಿದ್ದರೂ ಮೇಧಾವಿಯಾದವನು ಎಲ್ಲರೊಡನೆಯೂ ಒಂದೇ ಸಮಯದಲ್ಲಿ ಯುದ್ಧಕ್ಕೆ ಹೋಗಬಾರದು.

ಯದಾ ಸ್ಯಾನ್ಮಹತೀ ಸೇನಾ ಹಯನಾಗರಥಾಕುಲಾ ।
ಪದಾತಿಯನ್ತ್ರಬಹುಲಾ ಅನುರಕ್ತಾ ಷಡಙ್ಗಿನೀ ॥೩೮॥

ಯದಾ ಬಹುವಿಧಾಂ ವೃದ್ಧಿಂ ಮನ್ಯೇತ ಪ್ರತಿಲೋಮತಃ ।
ತದಾ ವಿವೃತ್ಯ ಪ್ರಹರೇದ್ದಸ್ಯೂನಾಮವಿಚಾರಯನ್ ॥೩೯॥

ಯಾವಾಗ ರಾಜನ ಬಳಿಯಲ್ಲಿ ಆನೆ-ಕುದುರೆ-ರಥಗಳಿಂದ ಸಮಾಕುಲ

ವಾದ ಅಪಾರವಾದ ಸೈನ್ಯವಿರುವುದೋ, ಆ ಸೈನ್ಯವು ಅಸಂಖ್ಯಾತರಾದ ಪದಾತಿಗಳಿಂದಲೂ ಪೂರ್ಣವಾಗಿರುವುದೋ, ಸೈನ್ಯದ* ಆರು ವಿಭಾಗಗಳೂ ರಾಜನ ವಿಷಯದಲ್ಲಿ ಅನುರಕ್ತವಾಗಿರುವುವೋ, ಯಾವಾಗ ರಾಜನು ಶತ್ರುವಿನ ಕಡೆಯಿಂದ ಬಹುವಿಧವಾದ ವೃದ್ಧಿಯನ್ನು ಪಡೆಯಲು (ಶತ್ರುವಿನ ಮೇಲೆ ದಾಳಿಮಾಡಿ ಅವನನ್ನು ಜಯಿಸಲು) ಸಮಯವು ಯೋಗ್ಯವಾಗಿರುವುದೆಂದು ಭಾವಿಸುವನೋ (ಯಾವಾಗ ಶತ್ರುವಿಗಿಂತ ತಾನು ಎಲ್ಲ ವಿಷಯಗಳಲ್ಲಿಯೂ ವೃದ್ಧಿಹೊಂದಿರುವೆನೆಂದು ಭಾವಿಸುವನೋ) ಆ ಸಮಯದಲ್ಲಿ ಹೆಚ್ಚು ವಿಚಾರವನ್ನೇ ಮಾಡದೆ ಕಳ್ಳ-ಕಾಕರನ್ನೂ ದರೋಡೆಕಾರರನ್ನೂ ಪ್ರತ್ಯಕ್ಷವಾಗಿಯೇ ಧ್ವಂಸಮಾಡಬೇಕು.

ನ ಸಾಮ ದಣ್ಡೋಪನಿಷತ್ಪ್ರಶಸ್ಯತೇ
ನ ಮಾರ್ದವಂ ಶತ್ರುಷು ಯಾತ್ರಿಕಂ ಸದಾ ।
ನ ಸಸ್ಯಘಾತೋ ನ ಚ ಸಂಕರಕ್ರಿಯಾ
ನ ಚಾಪಿ ಭೂಯಃ ಪ್ರಕೃತೇರ್ವಿಚಾರಣಾ ॥೪೦॥

ಶತ್ರುವಿನ ವಿಷಯದಲ್ಲಿ ಸಾಮೋಪಾಯವೂ ಪ್ರಶಸ್ತವಲ್ಲ. ಗುಪ್ತರೂಪವಾದ ದಂಡನೀತಿಪ್ರಯೋಗವೇ ಶ್ರೇಷ್ಠವಾದುದು ಮತ್ತು ಪ್ರಶಸ್ತವಾದುದು. (ರಹಸ್ಯವಾಗಿಯೇ–ಪರೋಕ್ಷವಾಗಿಯೇ ಶತ್ರುಗಳನ್ನು ಸಂಹರಿಸಬೇಕು.) ಶತ್ರುಗಳ ವಿಷಯದಲ್ಲಿ ಮೃದುತ್ವವು ಪ್ರಯೋಜನಕ್ಕೆ ಬರುವುದಿಲ್ಲ. ಅವರ ಮೇಲೆ ಪ್ರತ್ಯಕ್ಷವಾಗಿ ಆಕ್ರಮಣನಡೆಸುವುದೂ ಪ್ರಯೋಜನಕರವಾಗುವುದಿಲ್ಲ. ಶತ್ರುವಿನ ರಾಜ್ಯದಲ್ಲಿರುವ ಪೈರು-ಪಚ್ಚೆಗಳನ್ನು ಹಾಳುಮಾಡುವುದೂ ಉಚಿತವಲ್ಲ. ಅವನ ದೇಶದ ಬಾವಿಗಳಲ್ಲಿ ಮತ್ತು ಸರೋವರಗಳಲ್ಲಿ ವಿಷಬೆರೆಸುವುದೂ ಸರಿಯಲ್ಲ. ಅಮಾತ್ಯಾದಿ ಸಪ್ತಪ್ರಕೃತಿಗಳನ್ನು ಆ ಬಗೆಗೆ ಮತ್ತೆ ಮತ್ತೆ ವಿಚಾರಿಸುವುದೂ ಸರಿಯಲ್ಲ. ರಹಸ್ಯದಲ್ಲಿ ಶತ್ರುವನ್ನು ನಿರ್ನಾಮಮಾಡುವುದೇ ಶ್ರೇಷ್ಠವಾದ ಮಾರ್ಗ.

ಮಾಯಾವಿಭೇದಾನುಪಸರ್ಜನಾನಿ
ತಥೈವ ಪಾಪಂ ನ ಯಶಃಪ್ರಯೋಗಾತ್ ।

* ಸೈನ್ಯದ ಷಡಂಗಗಳು–ಆನೆ, ಕುದುರೆ, ರಥ, ಪದಾತಿ, ಬೊಕ್ಕಸ, ಧನಿಕರಾದ ವೈಶ್ಯರು.

ಆಪ್ತೈರ್ಮನುಷ್ಯೈರುಪಚಾರಯೇತ
ಪುರೇಷು ರಾಷ್ಟ್ರೇಷು ಚ ಸಮ್ಪ್ರಯುಕ್ತಾನ್ ||೪೧||

ರಾಜನು ನಂಬಿಕೆಗೆ ಪಾತ್ರರಾದ ಸೇವಕರ ಮೂಲಕವಾಗಿ ಶತ್ರುರಾಷ್ಟ್ರದಲ್ಲಿ ಪರಸ್ಪರವಾಗಿ ವಿರೋಧವುಂಟಾಗುವಂತೆ ಕೃತ್ರಿಮಗಳನ್ನು ನಡೆಸಬೇಕು. ಪ್ರತಿಯೊಂದು ಪಟ್ಟಣಗಳಲ್ಲಿಯೂ–ರಾಜಧಾನಿಯಲ್ಲಿಯೂ ರಾಜನು ತನ್ನ ಆಪ್ತರಾದವರನ್ನಿಟ್ಟು ರಾಜನಿಗೂ-ಪ್ರಜೆಗಳಿಗೂ, ರಾಜನಿಗೂ-ಮಂತ್ರಿ-ಸೇನಾಪತಿಗಳಿಗೂ ಮನಸ್ತಾಪವುಂಟಾಗುವಂತೆ ಮಾಡಬೇಕು. ಹಾಗೆಯೇ ಗುಟ್ಟಿನಲ್ಲಿ ರಾಜನನ್ನು ಕೊಲ್ಲಿಸುವ ಪಾಪಕಾರ್ಯವನ್ನು ಮಾಡಬೇಕಾಗುವುದು. ಆದರೆ ತನ್ನ ಯಶಸ್ಸನ್ನು ಕಳೆದುಕೊಂಡು ಈ ಕಾರ್ಯವನ್ನು ಮಾಡಲು ಹೋಗಬಾರದು. ಯಶಸ್ಸನ್ನು ಉಳಿಸಿಕೊಂಡು ವ್ಯಾಜಾಂತರದಿಂದ ಶತ್ರುಗಳನ್ನು ಕೊಲ್ಲಿಸಬೇಕು.

ಪುರಾಪಿ ಚೈಷಾಮನುಸೃತ್ಯ ಭೂಮಿಪಾಃ
ಪುರೇಷು ಭೋಗಾನಖಿಲಾಞ್ಜಯನ್ತಿ ।
ಪುರೇಷು ನೀತಿಂ ವಿಹಿತಾಂ ಯಥಾವಿಧಿ
ಪ್ರಯೋಜಯನ್ತೋ ಬಲವೃತ್ರಸೂದನ ||೪೨||

ಬಲ-ವೃತ್ರಸೂದನನೇ! ಬುದ್ಧಿವಂತರಾದ ರಾಜರು ಶತ್ರುಗಳ ಪಟ್ಟಣಗಳನ್ನು ಅನುಸರಿಸಿ ಹೋಗುತ್ತಾರೆ. (ಶತ್ರುಗಳ ಪಟ್ಟಣಗಳಿಗೆ ಗುಪ್ತಚಾರರನ್ನು ಕಳುಹಿಸುತ್ತಾರೆ.) ಆ ಪಟ್ಟಣಗಳಲ್ಲಿ ಯಥಾವಿಧಿಯಾಗಿ ರಾಜನೀತಿಯನ್ನು ಪ್ರಯೋಗಿಸುತ್ತಾ, ಅಲ್ಲಿರುವ ಭೋಗಸಾಮಗ್ರಿಗಳೆಲ್ಲವನ್ನೂ ವಶಪಡಿಸಿಕೊಳ್ಳುತ್ತಾರೆ.

ಪ್ರದಾಯ ಗೂಢಾನಿ ವಸೂನಿ ರಾಜ-
ನ್ಪ್ರಚ್ಛಿದ್ಯ ಭೋಗಾನವಧಾಯ ಚ ಸ್ವಾನ್ ।
ದುಷ್ಟಾನ್ಸ್ವದೋಷೈರಿತಿ ಕೀರ್ತಯಿತ್ವಾ
ಪರೇಷು ರಾಷ್ಟ್ರೇಷು ಚ ಯೋಜಯನ್ತಿ ||೪೩||

ಬುದ್ಧಿವಂತರಾದ ರಾಜರು ತಮ್ಮ ಆಪ್ತವಿಶ್ವಾಸಿಗಳಿಗೆ ರಹಸ್ಯದಲ್ಲಿ ಯಥೇಚ್ಛವಾಗಿ ಹಣವನ್ನೂ ಕೊಟ್ಟು, ಬಹಿರಂಗವಾಗಿ ತಮ್ಮ ಇಂತಿಂತಹ

ಮಂತ್ರಿಗಳು ಮಹಾದುಷ್ಟರೆಂದೂ–ಅವರು ಬೇರೆಯ ರಾಜನ ಕಡೆಗೆ ಹೋಗುತ್ತಿರುವರೆಂದೂ ಅವರು ಮಾಡಿದ ಅಪರಾಧಕ್ಕಾಗಿ, ಅವರಲ್ಲಿದ್ದ ಭೋಗವಸ್ತುಗಳನ್ನೆಲ್ಲಾ ಕಸಿದುಕೊಂಡು ಪರರಾಷ್ಟ್ರಗಳಿಗೆ ದೂಡಲ್ಪಟ್ಟಿದ್ದಾರೆಂದೂ–ಉದ್ದೇಶಪೂರ್ವಕವಾಗಿಯೇ ಉದ್ಘೋಷಿಸಬೇಕು. ಹೀಗೆ ಹೊರಹಾಕಲ್ಪಟ್ಟ ಆ ಮಂತ್ರಿಗಳು ಪೂರ್ವರಾಜರಿಗೂ ತಮಗೂ ದ್ವೇಷವುಂಟಾಗಿರುವಂತೆಯೇ ಶತ್ರುರಾಜನ ಬಳಿಯಲ್ಲಿ ನಟಿಸುತ್ತಿದ್ದು ಆ ರಾಜನ ಬಳಿಯಲ್ಲಿರುವ ಗುಪ್ತವಿಷಯಗಳನ್ನು ಸಂಗ್ರಹಿಸಿ ತಮ್ಮ ರಾಜನಿಗೆ ತಿಳಿಸುತ್ತಿರಬೇಕು. (ಯುದ್ಧಮಾಡದೆಯೇ ಶತ್ರುವನ್ನು ನಿಗ್ರಹಿಸಲು ರಾಜನು ಇಂತಹ ಉಪಾಯಗಳನ್ನು ಕೈಗೊಳ್ಳಬೇಕು.)

ತಥೈವ ಚಾನ್ಯೈರಪಿ ಶಾಸ್ತ್ರವೇದಿಭಿಃ
ಸ್ವಲಂಕೃತೈಃ ಶಾಸ್ತ್ರವಿಧಾನದೃಷ್ಟಿಭಿಃ ।
ಸುಶಿಕ್ಷಿತೈರ್ಭಾಷ್ಯಕಥಾವಿಶಾರದೈಃ
ಪರೇಷು ಕೃತ್ಯಾಮುಪಧಾರಯೇಚ್ಚ ॥೪೪॥

ಅದೇ ರೀತಿಯಲ್ಲಿ ಅನೇಕ ಆಭಿಚಾರಿಕಶಾಸ್ತ್ರಗಳನ್ನು ತಿಳಿದಿರುವ ಮತ್ತು ಶಾಸ್ತ್ರಗಳಲ್ಲಿನ ಪ್ರಯೋಗ-ಕ್ರಿಯಾವಿಧಾನಗಳನ್ನೂ ತಿಳಿದಿರುವ, ಸುಶಿಕ್ಷಿತರಾದ, ಮಹಾಗ್ರಂಥಗಳು ಹೇಳುವ ಕಥೆಗಳನ್ನೂ ವಿವರಿಸಿ ಹೇಳು ವುದರಲ್ಲಿ ವಿಶಾರದರಾದ, ಚೆನ್ನಾಗಿ ಅಲಂಕರಿಸಿಕೊಂಡಿರುವ ವಿದ್ವಾಂಸರನ್ನು ಶತ್ರುದೇಶಗಳಿಗೆ ಕಳುಹಿಸಿ ಅವರ ಮೂಲಕವಾಗಿ ಶತ್ರುಗಳಿಗೆ ಆಭಿಚಾರಿಕ ಕೃತ್ಯೆಯನ್ನು (ಮಾರಣವನ್ನು) ಮಾಡಿಸಬೇಕು.”

ಇಂದ್ರನು ಪ್ರಶ್ನಿಸುತ್ತಾನೆ :

“ಬ್ರಾಹ್ಮಣಶ್ರೇಷ್ಠರೇ! ದುಷ್ಟನಿಗೆ ಯಾವ ಯಾವ ಲಕ್ಷಣಗಳಿರುತ್ತವೆ? ಒಬ್ಬನು ದುಷ್ಟನೆಂಬುದನ್ನು ತಿಳಿದುಕೊಳ್ಳುವುದು ಹೇಗೆ?–ಈ ನನ್ನ ಶಂಕೆಯನ್ನು ಪರಿಹರಿಸಿರಿ.”

ಪರೋಕ್ಷಮಗುಣಾನಾಹ ಸದ್ಗುಣಾನಭ್ಯಸೂಯತೇ ।
ಪರೈರ್ವಾ ಕೀರ್ತ್ಯಮಾನೇಷು ತೂಷ್ಣೀಮಾಸ್ತೇ ಪರಾಙ್ಮುಖಃ ॥೪೬॥

“ದೇವೇಂದ್ರ! ಯಾರು ಪರೋಕ್ಷದಲ್ಲಿ ಒಬ್ಬರ ದುರ್ಗುಣಗಳನ್ನೇ

ಎತ್ತಿ ಹೇಳುತ್ತಿರುವನೋ ಮತ್ತು ಅವರಲ್ಲಿರಬಹುದಾದ ಸದ್ಗುಣಗಳಲ್ಲಿಯೂ ದೋಷಗಳನ್ನೇ ಎಣಿಸುವನೋ–ಅವನು ದುಷ್ಟಾತ್ಮನು. ಬೇರೆಯವರು ತನ್ನ ಗುಣಗಳನ್ನು ಸಮಕ್ಷದಲ್ಲಿಯೇ ಹೊಗಳುವಾಗ ಯಾವನು ಮುಖವನ್ನು ಪಕ್ಕಕ್ಕೆ ತಿರುಗಿಸಿ ಬಾಯಿಮುಚ್ಚಿಕೊಂಡು ಸುಮ್ಮನೆ ಕುಳಿತಿರುವನೋ–ಅವನು ದುಷ್ಟಾತ್ಮನು.

ತೂಷ್ಣೀಮ್ಭಾವೇऽಪಿ ವಿಜ್ಞೇಯಂ ನ ಚೇದ್ಭವತಿ ಕಾರಣಮ್ ।
ನಿಃಶ್ವಾಸಂ ಚೋಷ್ಠಸಂದಂಶಂ ಶಿರಸಶ್ಚ ಪ್ರಕಮ್ಪನಮ್ ॥೪೭॥

ಸುಮ್ಮನೇ ಕುಳಿತಿದ್ದರೂ ಆ ಮನುಷ್ಯನು ದುಷ್ಟಾತ್ಮನೆಂಬುದನ್ನು ಈ ಲಕ್ಷಣಗಳಿಂದ ತಿಳಿದುಕೊಳ್ಳಬಹುದಾಗಿದೆ : ಮತ್ತೊಬ್ಬರು ಸತ್ಪುರುಷರ ಗುಣಗಾನಮಾಡುತ್ತಿರುವಾಗ ಯಾವ ಕಾರಣವೂ ಇಲ್ಲದೇ ನಿಟ್ಟುಸಿರು ಬಿಡುವುದೂ, ತುಟಿ ಕಚ್ಚುವುದೂ ಮತ್ತು (ಪ್ರತಿಷೇಧಸೂಚಕವಾಗಿ) ತಲೆಯನ್ನು ಅಳ್ಳಾಡಿಸುವುದೂ–ದುಷ್ಟಲಕ್ಷಣಗಳಾಗಿರುತ್ತವೆ.

ಕರೋತ್ಯಭೀಕ್ಷ್ಣಂ ಸಂಸೃಷ್ಟಮಸಂಸೃಷ್ಟಶ್ಚ ಭಾಷತೇ ।
ಅದೃಷ್ಟಿತೋ ನ ಕುರುತೇ ದೃಷ್ಟ್ವೋ ನೈವಾಭಿಭಾಷತೇ ॥೪೮॥

ಯಾರು ಕರೆಯದಿದ್ದರೂ ಪದೇ-ಪದೇ ಬಂದು-ಹೋಗುತ್ತಾ ನಿಕಟ ಸಂಪರ್ಕವನ್ನು ಸ್ಥಾಪಿಸಿಕೊಳ್ಳುವನೋ, ದೂರ ಹೋದೊಡನೆಯೇ ಅವನನ್ನು ಬೇರೆಯವರೊಡನೆ ನಿಂದಿಸುವನೋ, ಕಣ್ಣೆದುರಿನಲ್ಲಿ ಮಾತ್ರ ಕಾರ್ಯವನ್ನು ಮಾಡಿ ವ್ಯಕ್ತಿಯು ಅಗೋಚರನಾದೊಡನೆಯೇ ಆ ಕಾರ್ಯವನ್ನು ನಿಲ್ಲಿಸಿಬಿಡುವನೋ, ಕೆಲವು ವೇಳೆ ನೋಡಿದರೂ ಮಾತನ್ನೇ ಆಡುವುದಿಲ್ಲವೋ–ಅಂತಹವನು ದುಷ್ಟಾತ್ಮನೆಂದು ಹೇಳಬಹುದಾಗಿದೆ.

ಪೃಥಗೇತ್ಯ ಸಮಶ್ನಾತಿ ನೇದಮದ್ಯ ಯಥಾವಿಧಿ ।
ಆಸನೇ ಶಯನೇ ಯಾನೇ ಭಾವಾ ಲಕ್ಷ್ಯಾ ವಿಶೇಷತಃ ॥೪೯॥

ಎಲ್ಲಿಂದಲೋ ಬಂದು ಯಾರ ಜೊತೆಯಲ್ಲಿಯೂ ಊಟಕ್ಕೆ ಕುಳಿತುಕೊಳ್ಳದೆ ತಾನೊಬ್ಬನೇ ಊಟಕ್ಕೆ ಕುಳಿತುಕೊಳ್ಳುತ್ತಾನೆ. 'ಇಂದಿನ ಭೋಜನವು ಹಿಂದೆ ಇದ್ದಂತೆ ಪರಿಷ್ಕೃತವಾಗಿ ಇಲ್ಲ'–ಎಂದು ಅನ್ನವನ್ನು ಹಳಿಯು

ತ್ತಾನೆ. ಇಂತಹವನನ್ನು ದುಷ್ಟನೆಂದೇ ಭಾವಿಸಬೇಕು. ಹೀಗೆ ಕುಳಿತು ಕೊಳ್ಳುವುದರಲ್ಲಿ, ಮಲಗುವುದರಲ್ಲಿ, ಪ್ರಯಾಣಮಾಡುವುದರಲ್ಲಿ ಎಲ್ಲದರಲ್ಲಿಯೂ ದುಷ್ಟಜನರ ದುಷ್ಟಭಾವವು ವಿಶೇಷವಾಗಿ ಕಾಣುತ್ತದೆ.

ಆರ್ತಿರಾರ್ತೇ ಪ್ರಿಯೇ ಪ್ರೀತಿರೇತಾವನ್ಮಿತ್ರಲಕ್ಷಣಮ್ ।
ವಿಪರೀತಂ ತು ಬೋದ್ಧವ್ಯಮರಿಲಕ್ಷಣಮೇವ ತತ್ ॥೫೦॥

ಮಿತ್ರನು ಕಷ್ಟದಲ್ಲಿದ್ದರೆ ತಾನೂ ಕಷ್ಟದಲ್ಲಿರುವಂತೆಯೇ ಭಾವಿಸಿ ಕೊಳ್ಳುವುದು ಮತ್ತು ಮಿತ್ರನು ಸಂತೋಷಭರಿತನಾಗಿದ್ದರೆ ತಾನೂ ಸಂತೋಷಪಡುವುದೂ–ಸನ್ಮಿತ್ರನ ಲಕ್ಷಣವಾಗಿದೆ. ಇದಕ್ಕೆ ವಿಪರೀತ ವಾದುದು ಎಂದರೆ ಒಬ್ಬನು ಕಷ್ಟದಲ್ಲಿದ್ದರೆ ತಾನು ಸಂತೋಷಪಡುವುದೂ ಮತ್ತು ಒಬ್ಬನು ಸುಖವಾಗಿದ್ದರೆ ತಾನು ಅಸೂಯೆಯಿಂದ ಸಂಕಟಪಡು ವುದೂ ಶತ್ರುವಿನ ಲಕ್ಷಣ.

ದೇವೇಶ್ವರ! ನಾನು ತಿಳಿಸಿರುವಂತೆಯೇ ದುಷ್ಟರ-ಶತ್ರುಗಳ-ಮಿತ್ರರ ಲಕ್ಷಣಗಳನ್ನು ತಿಳಿಯಬೇಕು. ಅತ್ಯಂತದುಷ್ಟಾತ್ಮರಾದವರ ಸ್ವಭಾವವು ಬಲವತ್ತರವಾಗಿರುತ್ತದೆ. ಆ ಸ್ವಭಾವವನ್ನು ಅವರಿಂದ ಬದಲಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಸುರಶ್ರೇಷ್ಠನೇ! ದೇವೇಶ್ವರ! ಶಾಸ್ತ್ರತತ್ತ್ವಾರ್ಥಗಳನ್ನು ಯಥಾವತ್ತಾಗಿ ವಿಚಾರಮಾಡಿ ನಾನು ನಿನಗೆ ದುಷ್ಟಪುರುಷರನ್ನು ಹೇಗೆ ಗುರುತಿಸಬೇಕೆಂಬ ವಿಷಯವನ್ನು ಹೇಳಿದ್ದೇನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಶತ್ರುಗಳ ಸಂಹಾರದಲ್ಲಿಯೇ ತತ್ಪರನಾದ, ಶತ್ರು ನಾಶಕನಾದ ಇಂದ್ರನು ಬೃಹಸ್ಪತ್ಯಾಚಾರ್ಯರ ಯಥಾರ್ಥವಾದ ಮಾತು ಗಳನ್ನು ಕೇಳಿ ಅದರಂತೆಯೇ ಆಚರಿಸಿದನು. ಅವನು ಯಥೋಚಿತವಾದ ಸಮಯದಲ್ಲಿ ವಿಜಯವನ್ನು ಸಾಧಿಸುವ ಸಲುವಾಗಿ ಪ್ರಸ್ಥಾನಮಾಡಿ ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿ ತನ್ನ ಅಧೀನರನ್ನಾಗಿ ಮಾಡಿಕೊಂಡನು.”

೧೦೩ನೆಯ ಅಧ್ಯಾಯವು ಮುಗಿಯಿತು.

ರಾಜ್ಯದಿಂದಲೂ, ಸೈನಿಕರಿಂದಲೂ, ಸ್ವಜನರಿಂದಲೂ ವಂಚಿತನಾದ ಕ್ಷೇಮದರ್ಶಿಗೆ ಕಾಲಕವೃಕ್ಷೀಯನ ವೈರಾಗ್ಯೋಪದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಧಾರ್ಮಿಕೋಽರ್ಥಾನಸಮ್ಪ್ರಾಪ್ಯ ರಾಜಾಮಾತ್ಯೈಃ ಪ್ರಬಾಧಿತಃ ।
ಚ್ಯುತಃ ಕೋಶಾಚ್ಚ ದಣ್ಡಾಚ್ಚ ಸುಖಮಿಚ್ಛನ್ಕಥಂ ಚರೇತ್ ॥೧॥

"ಪಿತಾಮಹ! ರಾಜನು ಧಾರ್ಮಿಕನಾಗಿದ್ದರೂ, ಪ್ರಯತ್ನಶೀಲನಾಗಿದ್ದರೂ ಅರ್ಥವು ಅವನ ಸ್ವಾಧೀನವಾಗುವುದಿಲ್ಲ. ಆ ಸಮಯದಲ್ಲಿ ಮಂತ್ರಿಗಳೂ ಅವನನ್ನು ಪೀಡಿಸುತ್ತಾರೆ. ಸುಖಾಪೇಕ್ಷಿಯಾದ ರಾಜನು ಹೀಗೆ ಕೋಶದಿಂದಲೂ, ದಂಡದಿಂದಲೂ ಚ್ಯುತನಾದಾಗ ಏನು ಮಾಡಬೇಕು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಕ್ಷೇಮದರ್ಶೀಯವೆಂಬ ಇತಿಹಾಸವು ಹೇಳಲ್ಪಟ್ಟಿದೆ. ಅದನ್ನೇ ನಾನು ನಿನಗೂ ಹೇಳುತ್ತೇನೆ ; ಕೇಳು. ಹಿಂದೆ ಕೋಸಲದ ರಾಜಕುಮಾರನಾದ ಕ್ಷೇಮದರ್ಶೀ ಎಂಬುವನು ಕ್ಷೀಣಬಲನಾಗಿದ್ದನು. ಆ ಸಮಯದಲ್ಲಿ ಅವನು ಕಾಲಕವೃಕ್ಷೀಯನೆಂಬ ಋಷಿಯ ಬಳಿಗೆ ಹೋದನೆಂದು ನಾವು ಕೇಳಿದ್ದೇವೆ. ಮಹಾವಿಪತ್ತಿನಲ್ಲಿ ಸಿಕ್ಕಿಕೊಂಡಿದ್ದ ಕ್ಷೇಮದರ್ಶಿಯು ಕಾಲಕವೃಕ್ಷೀಯಮುನಿಗೆ ಸಾಷ್ಟಾಂಗ ಪ್ರಣಾಮಮಾಡಿ ಮುನಿಯನ್ನು ಪ್ರಶ್ನಿಸಿದನು :

ಅರ್ಥೇಷು ಭಾಗೀ ಪುರುಷ ಈಹಮಾನಃ ಪುನಃ ಪುನಃ ।
ಅಲಬ್ಧ್ವಾ ಮದ್ವಿಧೋ ರಾಜ್ಯಂ ಬ್ರಹ್ಮನ್ಕಿಂ ಕರ್ತುಮರ್ಹತಿ ॥೪॥

"ಬ್ರಾಹ್ಮಣೋತ್ತಮರೇ! ಪುರುಷನು ಅರ್ಥಕ್ಕೆ ಭಾಗಿಯಾಗಿದ್ದಾನೆ– ಎಂಬುದನ್ನು ನಾನು ಕೇಳಿದ್ದೇನೆ. ಆದರೆ ಪುನಃ-ಪುನಃ ಅರ್ಥಕ್ಕಾಗಿ ಅಪೇಕ್ಷೆ ಪಡುತ್ತಿದ್ದರೂ ಅರ್ಥವನ್ನಾಗಲೀ ರಾಜ್ಯವನ್ನಾಗಲೀ ಪಡೆದುಕೊಳ್ಳಲು ಸಾಧ್ಯವಾಗದೇ ಇದ್ದರೆ ನನ್ನಂತಹವನು ಏನುಮಾಡಬೇಕು?

ಅನ್ಯತ್ರ ಮರಣಾದ್ದೈನ್ಯಾದನ್ಯತ್ರ ಪರಸಂಶ್ರಯಾತ್ ।
ಕ್ಷುದ್ರಾದನ್ಯತ್ರ ಚಾಚಾರಾತ್ತನ್ಮಮಾಚಕ್ಷ್ವ ಸತ್ತಮ ॥೫॥

ಆತ್ಮಘಾತಮಾಡಿಕೊಳ್ಳುವುದನ್ನೂ, ದೈನ್ಯವನ್ನೂ, ಪರಾಶ್ರಯವನ್ನೂ ಮತ್ತು ಕ್ಷುದ್ರವಾದ ವ್ಯವಹಾರವನ್ನೂ ಬಿಟ್ಟು ರಾಜ್ಯ-ಧನಸಂಪಾದನೆಗಳಿಗೆ ಬೇರೆ ಯಾವುದಾದರೂ ಉಪಾಯವಿದ್ದರೆ ಅದನ್ನು ನನಗೆ ತಿಳಿಸಿರಿ.

ವ್ಯಾಧಿನಾ ಚಾಭಿಪನ್ನಸ್ಯ ಮಾನಸೇನೇತರೇಣ ವಾ ।
ಧರ್ಮಜ್ಞಶ್ಚ ಕೃತಜ್ಞಶ್ಚ ತ್ವದ್ವಿಧಃ ಶರಣಂ ಭವೇತ್ ॥೬॥

ಮಾನಸಿಕವಾದ ಅಥವಾ ಶಾರೀರಕವಾದ ವ್ಯಾಧಿಯಿಂದ ಪೀಡಿತನಾಗಿರುವ ನನ್ನಂತಹವನಿಗೆ ಧರ್ಮಜ್ಞರಾಗಿಯೂ ಕೃತಜ್ಞರಾಗಿಯೂ ಇರುವ ತಮ್ಮಂತಹವರೇ ಶರಣ್ಯರಾಗಬೇಕು.

ನಿರ್ವಿದ್ಯತಿ ನರಃ ಕಾಮಾನ್ನಿರ್ವಿದ್ಯ ಸುಖಮೇಧತೇ ।
ತ್ಯಕ್ತ್ವಾ ಪ್ರೀತಿಂ ಚ ಶೋಕಂ ಚ ಲಬ್ಧ್ವಾ ಬುದ್ಧಿಮಯಂ ವಸು ॥೭॥

ಯಾವಾಗ ಮನುಷ್ಯನು ಕಾಮ-ಭೋಗಗಳಿಂದ ವೈರಾಗ್ಯವನ್ನು ಹೊಂದಿ ವಿರಕ್ತನಾಗುತ್ತಾನೆಯೋ–ಆಗ ಆ ಮನುಷ್ಯನು ಪ್ರೀತಿ-ಶೋಕಗಳೆರಡನ್ನೂ ತ್ಯಾಗಮಾಡಿ ಜ್ಞಾನಮಯವಾದ ಐಶ್ವರ್ಯವನ್ನು ಪಡೆದು ಸುಖವನ್ನು ಹೊಂದುತ್ತಾನೆ.

ಸುಖಮರ್ಥಾಶ್ರಯಂ ಯೇಷಾಮನುಶೋಚಾಮಿ ತಾನಹಮ್ ।
ಮಮ ಹ್ಯರ್ಥಾಃ ಸುಬಹವೋ ನಷ್ಟಾಃ ಸ್ವಪ್ನ ಇವಾಗತಾಃ ॥೮॥

ಸುಖವು ಧನವನ್ನೇ ಆಶ್ರಯಿಸಿದೆಯೆಂದು ಯಾರು ಭಾವಿಸಿರುವರೋ–ಅವರ ವಿಷಯವಾಗಿ ನಾನು ಅನುತಾಪಪಡುತ್ತೇನೆ. ನನ್ನಲ್ಲಿಯೂ ಅಪಾರವಾದ ಐಶ್ವರ್ಯಸಂಪತ್ತಿಯಿದ್ದಿತು. ಆದರೆ ಸ್ವಪ್ನದಲ್ಲಿ ಲಭಿಸಿದ ಸಂಪತ್ತಿನಂತೆ ಎಲ್ಲವೂ ನಷ್ಟವಾಗಿ ಹೋದುವು.

ದುಷ್ಕರಂ ಬತ ಕುರ್ವನ್ತಿ ಮಹತೋರ್ಥಾಂಸ್ತ್ಯಜನ್ತಿ ಯೇ ।
ವಯಂ ತ್ವೇತಾನ್ಪರಿತ್ಯಕ್ತುಮಸತೋಽಪಿ ನ ಶಕ್ನುಮಃ ॥೯॥

ಯಾರು ತಮ್ಮಲ್ಲಿರುವ ಮಹಾಸಂಪತ್ತನ್ನೂ ತ್ಯಾಗಮಾಡುವರೋ–

ಅವರು ನಿಶ್ಚಯವಾಗಿಯೂ ಅತ್ಯಂತದುಷ್ಕರವಾದ ಕಾರ್ಯವನ್ನೇ ಮಾಡುವವರಾಗಿದ್ದಾರೆ. ನನ್ನಲ್ಲಿ ಈಗ ಧನದ ಲೇಶವೂ ಉಳಿದಿಲ್ಲ. ಆದರೂ ಧನದ ಮೇಲಿನ ಮೋಹವು ಮಾತ್ರ ನನ್ನನ್ನು ಬಿಟ್ಟುಹೋಗಿಲ್ಲ. ಇಲ್ಲದಿರುವ ಧನಸಂಪತ್ತಿಯನ್ನು ತ್ಯಾಗಮಾಡಲೂ ನಾವು ಅಶಕ್ತರಾಗಿದ್ದೇವೆ.

ಇಮಾಮವಸ್ಥಾಂ ಸಮ್ಪ್ರಾಪ್ತಂ ದೀನಮಾರ್ತಂ ಶ್ರಿಯಾ ಚ್ಯುತಮ್ ।
ಯದನ್ಯತ್ಸುಖಮಸ್ತೀಹ ತದ್ಬ್ರಹ್ಮನ್ನನುಶಾಧಿ ಮಾಮ್ ॥೧೦॥

ಬ್ರಹ್ಮನ್! ಈಗ ನಾನು ರಾಜ್ಯದಿಂದಲೂ, ಐಶ್ವರ್ಯದಿಂದಲೂ ಭ್ರಷ್ಟನಾಗಿದ್ದೇನೆ. ದೀನನೂ–ಆರ್ತನೂ ಆಗಿದ್ದೇನೆ. ಶೋಚನೀಯವಾದ ಅವಸ್ಥೆಯಲ್ಲಿದ್ದೇನೆ. ಈ ಪ್ರಪಂಚದಲ್ಲಿ ಧನಾಗಮನದಿಂದ ಒದಗುವ ಸುಖಕ್ಕಿಂತಲೂ ಅತಿರಿಕ್ತವಾದ ಬೇರೆ ಯಾವುದಾದರೂ ಸುಖವಿದ್ದರೆ ಅದನ್ನು ನನಗೆ ಉಪದೇಶಿಸಿರಿ."

ಧೀಮಂತನಾದ, ಕೋಸಲರಾಜಕುಮಾರನಾದ ಕ್ಷೇಮದರ್ಶಿಯು ಹೀಗೆ ಹೇಳಿದನಂತರ ಮಹಾದ್ಯುತಿಮಂತನಾಗಿದ್ದ ಕಾಲಕವೃಕ್ಷೀಯ ಮುನಿಯು ಪ್ರತ್ಯುತ್ತರಿಸಿದನು :

ಪುರಸ್ತಾದೇವ ತೇ ಬುದ್ಧಿರಿಯಂ ಕಾರ್ಯಾ ವಿಜಾನತಾ ।
ಅನಿತ್ಯಂ ಸರ್ವಮೇವೈತದಹಂ ಚ ಮಮ ಚಾಸ್ತಿ ಯತ್ ॥೧೨॥

"ರಾಜಕುಮಾರ! ನೀನು ತಿಳಿದವನಾಗಿರುವೆ. ಆದುದರಿಂದ ನೀನು ನಿನ್ನ ಬುದ್ಧಿಯಲ್ಲಿ 'ನಾನು-ನನ್ನದು'–ಎಂಬುದು ಯಾವುದಿರುವುದೋ ಅದು ಅನಿತ್ಯವಾದುದು–ಎಂಬುದನ್ನು ಮೊದಲೇ ನಿಶ್ಚಯಿಸಬೇಕಾಗಿದ್ದಿತು.

ಯತ್ಕಿಞ್ಚಿನ್ಮನ್ಯಸೇಽಸ್ತೀತಿ ಸರ್ವಂ ನಾಸ್ತೀತಿ ವಿದ್ಧಿ ತತ್ ।
ಏವಂ ನ ವ್ಯಥತೇ ಪ್ರಾಜ್ಞಃ ಕೃಚ್ಛ್ರಾಮಪ್ಯಾಪದಂ ಗತಃ ॥೧೩॥

ಯಾವುದು 'ಇದೆ' ಎಂದು ತಿಳಿದುಕೊಂಡಿರುವೆಯೋ–ಅದು ಯಾವುದೂ 'ಇಲ್ಲ'–ಎಂದೇ ತಿಳಿ. ಹೀಗೆ ತಿಳಿದುಕೊಂಡ ಪ್ರಾಜ್ಞನು ಯಾವುದೇ ಕಷ್ಟತಮವಾದ ಆಪತ್ತಿನಲ್ಲಿ ಸಿಕ್ಕಿಕೊಂಡರೂ ವ್ಯಥಿತನಾಗುವುದಿಲ್ಲ.

ಯದಿ ಭೂತಂ ಭವಿಷ್ಯಂ ಚ ಸರ್ವಂ ತನ್ನ ಭವಿಷ್ಯತಿ ।
ಏವಂ ವಿದಿತವೇದ್ಯಸ್ತ್ವಮಧರ್ಮೇಭ್ಯಃ ಪ್ರಮೋಕ್ಷ್ಯಸೇ ॥೧೪॥

ಹಿಂದೆ ಇದ್ದುದು ಈಗ ಇಲ್ಲ ; ಮುಂದೆ ಉಂಟಾಗುವುದೂ ಯಾವುದೂ ಇರುವುದಿಲ್ಲ–ಎಂದು ತಿಳಿಯಬೇಕಾದುದನ್ನು ತಿಳಿದುಕೊಂಡು ಮನದಟ್ಟುಮಾಡಿಕೊಂಡರೆ–ನೀನು ಎಲ್ಲ ವಿಧವಾದ ಅಧರ್ಮಗಳಿಂದಲೂ ಸಂಪೂರ್ಣವಾಗಿ ವಿಮುಕ್ತನಾಗುವೆ.

ಯಚ್ಚ ಪೂರ್ವಂ ಸಮಾಹಾರೇ ಯಚ್ಚ ಪೂರ್ವಂ ಪದೇ ಪರೇ ।
ಸರ್ವಂ ತನ್ನಾಸ್ತಿ ತೇ ಚೈವ ತಜ್ಜ್ಞಾತ್ವಾ ಕೋಽನುಸಂಜ್ವರೇತ್ ॥೧೫॥

ಹಿಂದೆ ರಾಜಸಮುದಾಯದಲ್ಲಿ (ಗಣತಂತ್ರದಲ್ಲಿ) ಪ್ರಾಚೀನವಾದುದು ಯಾವುದಿದ್ದಿತೋ–ಅಂತೆಯೇ ಒಬ್ಬರಿಂದ ಮತ್ತೊಬ್ಬರಿಗೆ ಪರಂಪರೆಯಿಂದ ಬಂದ ಯಾವ ವಸ್ತುಗಳಿದ್ದುವೋ–ಆ ವಸ್ತುಗಳೂ ಇಲ್ಲ ; ಆ ರಾಜರೂ ಇಲ್ಲ–ಹೀಗೆಂದು ಭಾವಿಸಿಕೊಂಡರೆ, ಇಂದು ಇಲ್ಲದಿರುವುದಕ್ಕೆ ಯಾವನು ತಾನೇ ಚಿಂತಿಸುತ್ತಾನೆ? (ಹಿಂದೆ ರಾಜರೂ ಇರಲಿಲ್ಲ ; ವಸ್ತುಗಳೂ ಇರಲಿಲ್ಲ. ಮುಂದೆಯೂ ವಸ್ತುಗಳೂ ಇರುವುದಿಲ್ಲ ; ರಾಜರೂ ಇರುವುದಿಲ್ಲ–ಹೀಗೆ ಭಾವಿಸಿಕೊಂಡರೆ ಈಗ ಇಲ್ಲದೇ ಇರುವುದಕ್ಕಾಗಿ ದುಃಖವುಂಟಾಗುವುದಿಲ್ಲ.)

ಭೂತ್ವಾ ಚ ನ ಭವತ್ಯೇತದಭೂತ್ವಾ ಚ ಭವಿಷ್ಯತಿ ।
ಶೋಕೇ ನ ಹ್ಯಸ್ತಿ ಸಾಮರ್ಥ್ಯಂ ಶೋಕಂ ಕುರ್ಯಾತ್ಕಥಂಚನ ॥೧೬॥

ಈ ರಾಜ್ಯಲಕ್ಷ್ಮಿಯು ಹಿಂದೆ ಇದ್ದರೆ ಈಗ ಇರುವುದಿಲ್ಲ. ಯಾವನಲ್ಲಿ ಇರುವುದಿಲ್ಲವೋ ಅವನನ್ನು ಹೋಗಿ ಸೇರುತ್ತದೆ. ಇದ್ದುದೂ ಹೋಗುತ್ತದೆ. ಇಲ್ಲದಿದ್ದರೂ ಪ್ರಾಪ್ತವಾಗುತ್ತದೆ. ಆದರೆ ಶೋಕಕ್ಕೆ ಕಳೆದುಹೋಗಿರುವ ರಾಜ್ಯಲಕ್ಷ್ಮಿಯನ್ನು ತಂದುಕೊಡುವ ಸಾಮರ್ಥ್ಯವಿಲ್ಲ. ಆದುದರಿಂದ ರಾಜ್ಯವು ಇಲ್ಲದೇ ಇರುವುದಕ್ಕಾಗಿ ಯಾವುದೇ ಕಾರಣದಿಂದಲೂ ಶೋಕಪಡಬಾರದು.

ಕ್ವ ನು ತೇಽದ್ಯ ಪಿತಾ ರಾಜನ್ಕ್ವ ನು ತೇಽದ್ಯ ಪಿತಾಮಹಃ ।
ನ ತ್ವಂ ಪಶ್ಯಸಿ ತಾನದ್ಯ ನ ತ್ವಾಂ ಪಶ್ಯನ್ತಿ ತೇಽಪಿ ಚ ॥೧೭॥

ರಾಜನೇ! ಈಗ ನಿನ್ನ ತಂದೆಯೆಲ್ಲಿ? ಈಗ ನಿನ್ನ ಪಿತಾಮಹನೆಲ್ಲಿ? ನೀನು ಅವರನ್ನು ಈಗ ನೋಡುತ್ತಿಲ್ಲ. ಅವರೂ ನಿನ್ನನ್ನು ನೋಡುತ್ತಿಲ್ಲ. ಅಲ್ಲವೇ?

ಆತ್ಮನೋಽಧ್ರುವತಾಂ ಪಶ್ಯಂಸ್ತಾಂಸ್ತ್ವಂ ಕಿಮನುಶೋಚಸಿ ।
ಬುದ್ಧ್ಯಾ ಚೈವಾನುಬುದ್ಧ್ಯಸ್ವ ಧ್ರುವಂ ಹಿ ನ ಭವಿಷ್ಯಸಿ ॥೧೮॥

ಈ ಶರೀರವು ಅನಿತ್ಯವಾಗಿದೆ. ಇದನ್ನು ನೀನು ನೋಡುತ್ತಲೇ ಇರುವೆ ಮತ್ತು ಅನಿತ್ಯವೆಂಬುದನ್ನು ತಿಳಿದುಕೊಂಡೂ ಇರುವೆ. ಆದುದರಿಂದ ಅವರಿಗಾಗಿ ಏಕೆ ಶೋಕಿಸುವೆ? ಈ ವಿಷಯವನ್ನು ಬುದ್ಧಿಯಿಂದ ಚೆನ್ನಾಗಿ ಮಥಿಸಿನೋಡು. ಮುಂದೊಂದು ದಿನ ನೀನೂ ಇರುವುದಿಲ್ಲ.

ಅಹಂ ಚ ತ್ವಂ ಚ ನೃಪತೇ ಸುಹೃದಃ ಶತ್ರವಶ್ಚ ತೇ ।
ಅವಶ್ಯಂ ನ ಭವಿಷ್ಯಾಮಃ ಸರ್ವಂ ಚ ನ ಭವಿಷ್ಯತಿ ॥೧೯॥

ನರೇಶ್ವರ! ನಾನು, ನೀನು, ನಿನ್ನ ಸುಹೃದರು, ಶತ್ರುಗಳು ಯಾರೂ ಇರುವುದಿಲ್ಲ. ಎಲ್ಲರೂ ವಿನಾಶಹೊಂದುತ್ತೇವೆ. ನಾವು ಮಾತ್ರವೇ ಅಲ್ಲ. ನಾವು ಕಾಣುತ್ತಿರುವ ಯಾವುದೊಂದೂ ಉಳಿಯುವುದಿಲ್ಲ.

ಯೇ ತು ವಿಂಶತಿವರ್ಷಾ ವೈ ತ್ರಿಂಶದ್ವರ್ಷಾಶ್ಚ ಮಾನವಾಃ ।
ಅರ್ವಾಗೇವ ಹಿ ತೇ ಸರ್ವೇ ಮರಿಷ್ಯನ್ತಿ ಶರಚ್ಛತಾತ್ ॥೨೦॥

ಈ ಸಮಯದಲ್ಲಿ ಇಪ್ಪತ್ತು ವರ್ಷಗಳ ಅಥವಾ ಮೂವತ್ತು ವರ್ಷಗಳ ಮಾನವರು ಯಾರಿರುವರೋ–ಅವರೆಲ್ಲರೂ ನೂರು ವರ್ಷಗಳು ತುಂಬುವುದರೊಳಗಾಗಿಯೇ ಅವಸಾನಹೊಂದುತ್ತಾರೆ.

ಅಪಿ ಚೇನ್ಮಹತೋ ವಿತ್ತಾನ್ನ ಪ್ರಮುಚ್ಯೇತ ಪೂರುಷಃ ।
ನೈತನ್ಮಮೇತಿ ತನ್ಮತ್ವಾ ಕುರ್ವೀತ ಪ್ರಿಯಮಾತ್ಮನಃ ॥೨೧॥

ಇಂತಹ ಅವಸ್ಥೆಯಲ್ಲಿರುವ ಮನುಷ್ಯನು ಅಪಾರವಾದ ಸಂಪತ್ತಿನಿಂದ ಯುಕ್ತನಾಗದಿದ್ದರೂ 'ಈ ಮಹೈಶ್ವರ್ಯವು ನನ್ನದಲ್ಲ' ಎಂಬುದನ್ನು ಮನದಟ್ಟುಮಾಡಿಕೊಂಡು ಆತ್ಮಕಲ್ಯಾಣವನ್ನು ಮಾಡಿಕೊಳ್ಳಬೇಕು.

ಅನಾಗತಂ ಯನ್ನ ಮಮೇತಿ ವಿದ್ಯಾ-
ದತಿಕ್ರಾನ್ತಂ ಯನ್ನ ಮಮೇತಿ ವಿದ್ಯಾತ್ ।

ದಿಷ್ಟಂ ಬಲೀಯ ಇತಿ ಮನ್ಯಮಾನಾ-
ಸ್ತೇ ಪಣ್ಡಿತಾಸ್ತತ್ಸತಾಂ ಸ್ಥಾನಮಾಹುಃ ॥೨೨॥

ಯಾವ ವಸ್ತುವು ಮುಂದೆ ಲಭ್ಯವಾಗುವುದಿದೆಯೋ–ಆ ವಸ್ತುವನ್ನು 'ನನ್ನದಲ್ಲ' ಎಂದು ಭಾವಿಸಬೇಕು. ಯಾವುದು ಇದ್ದು ಕಳೆದುಹೋಗಿ ದೆಯೋ–ಅದನ್ನೂ 'ನನ್ನದಲ್ಲ' ಎಂದು ಭಾವಿಸಬೇಕು. 'ಅದೃಷ್ಟವೇ ಎಲ್ಲ ಕ್ಕಿಂತಲೂ ಬಲಿಷ್ಠವಾದುದು'–ಎಂದು ಭಾವಿಸುವವರು ವಿದ್ವಾಂಸರೇ ಸರಿ. ಅದೇ ಸತ್ಪುರುಷರ ಸ್ಥಿತಿಯೆಂದು ಹೇಳುತ್ತಾರೆ.

ಅನಾಢ್ಯಾಶ್ಚಾಪಿ ಜೀವನ್ತಿ ರಾಜ್ಯಂ ಚಾಪ್ಯನುಶಾಸತಿ ।
ಬುದ್ಧಿಪೌರುಷಸಮ್ಪನ್ನಾಸ್ತ್ವಯಾ ತುಲ್ಯಾಧಿಕಾ ಜನಾಃ ॥೨೩॥

ನ ಚ ತ್ವಮಿವ ಶೋಚನ್ತಿ ತಸ್ಮಾತ್ತ್ವಮಪಿ ಮಾ ಶುಚಃ ।
ಕಿಂ ನ ತ್ವಂ ತೈರ್ನರೈಃ ಶ್ರೇಯಾಂಸ್ತುಲ್ಯೋ ವಾ ಬುದ್ಧಿ-
ಪೌರುಷೈಃ ॥೨೪॥

ಧನಾಢ್ಯರಲ್ಲದವರೂ ಜೀವಿಸುತ್ತಾರೆ. ರಾಜ್ಯವನ್ನೂ ಅನುಶಾಸನ ಮಾಡುತ್ತಾರೆ. ಅವರಲ್ಲಿ ಕೆಲವರು ಬುದ್ಧಿ ಮತ್ತು ಪೌರುಷಗಳಲ್ಲಿ ನಿನಗೆ ಸಮಾನರಾದವರಿದ್ದಾರೆ. ನಿನಗಿಂತಲೂ ಮಿಗಿಲಾದವರೂ ಕೆಲವರು ಇದ್ದಾರೆ. ಆದರೆ ಅವರಾರೂ ನಿನ್ನ ಹಾಗೆ ಶೋಕಪಡುವುದಿಲ್ಲ. ಆದುದರಿಂದ ನೀನೂ ಶೋಕಪಡಬೇಡ. ನೀನು ಬುದ್ಧಿ ಮತ್ತು ಪೌರುಷಗಳಲ್ಲಿ ಅವರಿಗಿಂತಲೂ ಶ್ರೇಷ್ಠನೂ ಅಥವಾ ಅವರಿಗೆ ಸಮಾನನೂ ಆಗಿಲ್ಲವೇ?"

ಯಾದೃಚ್ಛಿಕಂ ಸರ್ವಮಾಸೀತ್ತದ್ರಾಜ್ಯಮಿತಿ ಚಿನ್ತಯೇ ।
ಹ್ರಿಯತೇ ಸರ್ವಮೇವೇದಂ ಕಾಲೇನ ಮಹತಾ ದ್ವಿಜ ॥೨೫॥

"ಬ್ರಾಹ್ಮಣೋತ್ತಮರೇ! ಆ ಅಖಂಡಸಾಮ್ರಾಜ್ಯವೂ ಅನಾಯಾಸವಾಗಿ (ಆಕಸ್ಮಿಕವಾಗಿ) ನನ್ನ ವಶವಾಗಿದ್ದಿತು. ಮಹಾಶಕ್ತಿಶಾಲಿಯಾದ ಕಾಲನು ಆ ನನ್ನ ಸರ್ವಸ್ವವನ್ನೂ ಅಪಹರಿಸಿದನೆಂದು ನಾನು ಭಾವಿಸುತ್ತೇನೆ.

ತಸ್ಯೈವ ಹ್ರಿಯಮಾಣಸ್ಯ ಸ್ರೋತಸೇವ ತಪೋಧನ ।
ಫಲಮೇತತ್ಪ್ರಪಶ್ಯಾಮಿ ಯಥಾ ಲಬ್ಧೇನ ವರ್ತಯನ್ ॥೨೬॥

ತಪೋಧನರೇ! ಮಹಾಜಲಪ್ರವಾಹವು ಯಾವುದಾದರೂ ವಸ್ತುವನ್ನು ತೇಲಿಸಿಕೊಂಡು ಹೋಗುವಂತೆ-ಕಾಲದ ವೇಗವಾದ ಪ್ರವಾಹದಿಂದ ನನ್ನ ರಾಜ್ಯವು ಅಪಹೃತವಾಗಿದೆ. ಅದರ ಫಲರೂಪವಾಗಿಯೇ ನಾನೀಗ ಶೋಕಪಡುತ್ತಿದ್ದೇನೆ. ಯಾವ ಹೊತ್ತಿಗೆ ಏನು ಸಿಕ್ಕುವುದೋ ಅದರಿಂದಲೇ ಜೀವನನಿರ್ವಹಣೆಯನ್ನು ಮಾಡುತ್ತಿದ್ದೇನೆ."

ಅನಾಗತಮತೀತಂ ಚ ಯಾಥಾತಥ್ಯವಿನಿಶ್ಚಯಾತ್ ।
ನಾನುಶೋಚೇತ ಕೌಸಲ್ಯ ಸರ್ವಾರ್ಥೇಷು ತಥಾ ಭವ ॥೨೭॥

"ಕೋಸಲರಾಜಕುಮಾರ! ತತ್ತ್ವವನ್ನು ಯಥಾವತ್ತಾಗಿ ತಿಳಿದುಕೊಂಡನಂತರ ಮನುಷ್ಯನು ಹಿಂದೆ ಕಳೆದುಹೋದುದಕ್ಕಾಗಲೀ-ಮುಂದೆ ಸಂಭವಿಸುವುದಕ್ಕಾಗಲೀ-ಶೋಕಪಡಬಾರದು. ಆದುದರಿಂದ ನೀನೂ ಕೂಡ ಸರ್ವಾರ್ಥಗಳ ವಿಷಯದಲ್ಲಿಯೂ ಹೀಗೆ ಶೋಕಪಡಬಾರದು.

ಅವಾಪ್ಯಾನ್ಕಾಮಯನ್ನರ್ಥಾನ್ನಾನವಾಪ್ಯಾನ್ಕದಾಚನ ।
ಪ್ರತ್ಯುತ್ಪನ್ನಾನನುಭವನ್ಮಾ ಶುಚಸ್ತ್ವಮನಾಗತಾನ್ ॥೨೮॥

ಬುದ್ಧಿವಂತನಾದ ಮನುಷ್ಯನು ತಾನು ಪಡೆದುಕೊಳ್ಳಬಹುದಾದ ವಸ್ತುಗಳನ್ನು ಆಶಿಸುತ್ತಾನೆ. ಪಡೆದುಕೊಳ್ಳಲು ಅಸಾಧ್ಯವಾದ ವಸ್ತುಗಳಿಗಾಗಿ ಯಾವುದೇ ಕಾರಣದಿಂದಲೂ ಆಸೆಪಡುವುದಿಲ್ಲ. ಅದರಂತೆ ನೀನೂ ಕೂಡ ಉಪಲಬ್ಧವಾಗಿರುವ ಪದಾರ್ಥಗಳನ್ನು ಉಪಭೋಗಿಸುತ್ತಾ ಅಲಭ್ಯವಾದ (ಒದಗಬಹುದಾದ) ವಸ್ತುಗಳಿಗಾಗಿ ಚಿಂತೆಪಡಬೇಡ.

ಯಥಾಲಬ್ಧೋಪಪನ್ನಾರ್ಥೈಸ್ತಥಾ ಕೌಸಲ್ಯ ರಂಸ್ಯಸೇ ।
ಕಚ್ಚಿಚ್ಛುದ್ಧಸ್ವಭಾವೇನ ಶ್ರಿಯಾ ಹೀನೋ ನ ಶೋಚಸಿ ॥೨೯॥

ಕೌಸಲ್ಯನೇ! ಯಾವ ರೀತಿಯಲ್ಲಿ ನೀನು ಹಿಂದೆ ಯದೃಚ್ಛಾಲಾಭದಿಂದ ಸಂತುಷ್ಟನಾಗಿರುತ್ತಿದ್ದೆಯೋ-ಅದೇ ರೀತಿಯಲ್ಲಿ ನೀನೀಗಲೂ ಯದೃಚ್ಛಾಲಾಭದಿಂದಲೇ ಸಂತುಷ್ಟನಾಗಿರುವೆಯಾ? ರಾಜಭ್ರಷ್ಟನಾಗಿದ್ದರೂ

ನೀನು ಶುದ್ಧವಾದ ಸ್ವಭಾವವುಳ್ಳವನಾಗಿರುವುದರಿಂದ ರಾಜ್ಯನಾಶಕ್ಕಾಗಿ ಶೋಕಿಸುತ್ತಿಲ್ಲವಲ್ಲವೇ?

ಪುರಸ್ತಾದ್ಭೂತಪೂರ್ವತ್ವಾದ್ದೀನಭಾಗ್ಯೋ ಹಿ ದುರ್ಮತಿಃ ।
ಧಾತಾರಂ ಗರ್ಹತೇ ನಿತ್ಯಂ ಲಬ್ಧಾರ್ಥಶ್ಚ ನ ಮೃಷ್ಯತೇ ॥೩೦॥

ಹಿಂದೆ ಸಂಪತ್ತು ಪ್ರಾಪ್ತವಾಗಿದ್ದು ಅದು ನಷ್ಟವಾಗಿ ಹೋದರೆ ತಾನು ಭಾಗ್ಯಹೀನನೆಂದು ಭಾವಿಸಿಕೊಳ್ಳುವ ದುರ್ಮತಿಯಾದ ಮನುಷ್ಯನು ನಿತ್ಯವೂ ವಿಧಿಯನ್ನು ನಿಂದಿಸುತ್ತಿರುತ್ತಾನೆ. ಐಶ್ವರ್ಯವು ಬಂದರೆ ದೈವಲಬ್ಧವೆಂದು ಭಾವಿಸುವುದಿಲ್ಲ ; ಸ್ವಪ್ರಯತ್ನದಿಂದಲೇ ಬಂದಿತೆಂದು ಭಾವಿಸುತ್ತಾನೆ.

ಅನರ್ಹಾನಪಿ ಚೈವಾನ್ಯಾನ್ಮನ್ಯತೇ ಶ್ರೀಮತೋ ಜನಾನ್ ।
ಏತಸ್ಮಾತ್ಕಾರಣಾದೇತದ್ದುಃಖಂ ಭೂಯೋಽನುವರ್ತತೇ ॥೩೧॥

ಶ್ರೀಮಂತರಾದ ಜನರನ್ನು ಕಂಡು ಅವರು ಆ ಐಶ್ವರ್ಯಕ್ಕೆ ಅನರ್ಹರೆಂದು ಭಾವಿಸುತ್ತಾನೆ. ಈರ್ಷ್ಯೆಯಿಂದ ಹುಟ್ಟಿದ ಆ ದುಃಖವು ಸರ್ವದಾ ಅವನನ್ನು ಹಿಂಬಾಲಿಸುತ್ತಲೇ ಇರುತ್ತದೆ.

ಈರ್ಷ್ಯಾಭಿಮಾನಸಮ್ಪನ್ನಾ ರಾಜನ್ಪುರುಷ ಮಾನಿನಃ ।
ಕಚ್ಚಿತ್ತ್ವಂ ನ ತಥಾ ರಾಜನ್ಮತ್ಸರೀ ಕೋಸಲಾಧಿಪ ॥೩೨॥

ವೀರಪುರುಷರೆಂದು ಭಾವಿಸಿಕೊಂಡಿರುವ ಅನೇಕ ಮನುಷ್ಯರು ಅಸೂಯೆ ಮತ್ತು ಅಹಂಕಾರಗಳಿಂದ ಕೂಡಿದವರಾಗಿರುತ್ತಾರೆ. ಕೋಸಲೇಶ್ವರನೇ! ನೀನು ಹಾಗೆ ಈರ್ಷ್ಯೆಯಿಂದ ಕೂಡಿದವನಾಗಿಲ್ಲ ತಾನೇ?

ಸಹಸ್ವ ಶ್ರಿಯಮನ್ಯೇಷಾಂ ಯದ್ಯಪಿ ತ್ವಯಿ ನಾಸ್ತಿ ಸಾ ।
ಅನ್ಯತ್ರಾಪಿ ಸತೀಂ ಲಕ್ಷ್ಮೀಂ ಕುಶಲಾ ಭುಞ್ಜತೇ ಸದಾ ।
ಅಭಿನಿಷ್ಯನ್ದತೇ ಶ್ರೀರ್ಹಿ ಸತ್ಯಪಿ ದ್ವಿಷತೋ ಜನಮ್ ॥೩೩॥

ನಿನ್ನಲ್ಲಿ ಸಂಪತ್ತಿಲ್ಲದಿದ್ದರೂ ಅದು ಬೇರೆಯವರ ಬಳಿಯಲ್ಲಿರುವುದನ್ನು ಸಹನೆಯಿಂದ ಕಾಣು. ಅವರಲ್ಲಿರುವುದನ್ನು ನೋಡಿ ಅಸೂಯೆಪಡಬೇಡ. ಚತುರರಾದ ಮನುಷ್ಯರು ಬೇರೆಯವರಲ್ಲಿರುವ ಸಂಪತ್ತನ್ನು ಸರ್ವಕಾಲದಲ್ಲಿಯೂ ಅನುಭವಿಸುತ್ತಾರೆ. ಯಾರು ಅಸೂಯಾವಶರಾಗಿ ಜನರನ್ನು

ದ್ವೇಷಿಸುವರೋ–ಅವರಲ್ಲಿ ಸಂಪತ್ತಿದ್ದರೂ ಬಹಳ ಬೇಗ ನಷ್ಟವಾಗಿ ಹೋಗುತ್ತದೆ.

ಶ್ರಿಯಂ ಚ ಪುತ್ರಪೌತ್ರಂ ಚ ಮನುಷ್ಯಾ ಧರ್ಮಚಾರಿಣಃ ।
ಯೋಗಧರ್ಮವಿದೋ ಧೀರಾಃ ಸ್ವಯಮೇವ ತ್ಯಜನ್ತ್ಯುತ ॥೩೪॥

ಯೋಗಧರ್ಮವನ್ನು ತಿಳಿದಿರುವ ಧರ್ಮಾತ್ಮರಾದ ಧೀರಪುರುಷರು–ತಮ್ಮಲ್ಲಿರುವ ಅಪಾರವಾದ ಸಂಪತ್ತನ್ನೂ ಪುತ್ರ-ಪೌತ್ರರನ್ನೂ ತಾವಾಗಿಯೇ ತ್ಯಾಗಮಾಡುತ್ತಾರೆ. (ತಮ್ಮದಲ್ಲವೆಂದೇ ತಿಳಿಯುತ್ತಾರೆ.)

ಬಹುಸಂಕುಸುಕಂ ದೃಷ್ಟ್ವಾ ವಿಧಿತ್ಸಾಸಾಧನೇನ ಚ ।
ತಥಾನ್ಯೇ ಸಂತ್ಯಜನ್ತ್ಯೇವ ಮತ್ವಾ ಪರಮದುರ್ಲಭಮ್ ॥೩೫॥

ಧನಪ್ರಾಪ್ತಿಯು ನಿರಂತರವಾದ ಪ್ರಯತ್ನದಿಂದ ಸಾಧ್ಯವಾಗುತ್ತದೆ. ಆದರೂ ಅದು ಅಸ್ಥಿರವಾಗಿಯೇ ಇರುತ್ತದೆ. ಅದನ್ನು ತಿಳಿದುಕೊಂಡು ಧನವು ಪರಮದುರ್ಲಭವಾದ ವಸ್ತುವೆಂದು ಭಾವಿಸಿ ಅನೇಕರು ಧನದ ಪರಿತ್ಯಾಗವನ್ನೇ ಮಾಡುತ್ತಾರೆ. (ಧನಸಂಪಾದನೆಯ ಪ್ರಯತ್ನವನ್ನೇ ಮಾಡುವುದಿಲ್ಲ.)

ತ್ವಂ ಪುನಃ ಪ್ರಾಜ್ಞರೂಪಃ ಸನ್ಕೃಪಣಂ ಪರಿತಪ್ಯಸೇ ।
ಅಕಾಮ್ಯಾನ್ಕಾಮಯಾನೋಽರ್ಥಾನ್ಪರಾಧೀನಾನುಪದ್ರವಾನ್ ॥೩೬॥

ನೀನಾದರೋ ಪ್ರಾಜ್ಞರೂಪನಾಗಿರುವೆ. ಸುಖೋಪಭೋಗಗಳು ದೈವಾಧೀನವೆಂಬುದೂ ನಿನಗೆ ತಿಳಿದಿದೆ. ಐಶ್ವರ್ಯವು ಅಸ್ಥಿರವೆಂಬುದೂ ನಿನಗೆ ತಿಳಿದಿದೆ. ಆದರೂ ಅಪೇಕ್ಷಿಸಲು ಅಯೋಗ್ಯವಾದುವುಗಳನ್ನು ನೀನು ಅಪೇಕ್ಷಿಸುತ್ತಿರುವೆ. ಪರಾಧೀನವಾದ ಉಪದ್ರವಕಾರಿಯಾದ ಆ ರಾಜ್ಯಕ್ಕಾಗಿ ನೀನು ದೈನ್ಯದಿಂದ ಪರಿತಪಿಸುತ್ತಲೂ ಇರುವೆ.

ತಾಂ ಬುದ್ಧಿಮುಪಜಿಜ್ಞಾಸುಸ್ತ್ವಮೇವೈತಾನ್ಪರಿತ್ಯಜ ।
ಅನರ್ಥಾಶ್ಚಾರ್ಥರೂಪೇಣ ಹ್ಯರ್ಥಾಶ್ಚಾನರ್ಥರೂಪಿಣಃ ॥೩೭॥

ಪೂರ್ವೋಕ್ತವಾದ ಬುದ್ಧಿವಾದವನ್ನು ಗ್ರಹಿಸಿ ಮನನಮಾಡಲು ಪ್ರಯತ್ನಿಸು. ಭೋಗೇಚ್ಛೆಯನ್ನು ಬಿಟ್ಟುಬಿಡು. ನಿನಗೆ ಅರ್ಥರೂಪದಲ್ಲಿ

ಕಾಣುತ್ತಿರುವುದೆಲ್ಲವೂ ಅನರ್ಥಗಳೇ ಆಗಿವೆ. ಏಕೆಂದರೆ : ವಾಸ್ತವವಾಗಿ ಸಮಸ್ತಭೋಗಗಳೂ ಅನರ್ಥರೂಪಗಳೇ ಆಗಿವೆ.

ಅರ್ಥಾಯೈವ ಹಿ ಕೇಷಾಂಚಿದ್ಧನನಾಶೋ ಭವತ್ಯುತ ।
ಆನನ್ತ್ಯಂ ತತ್ಸುಖಂ ಮತ್ವಾ ಶ್ರಿಯಮನ್ಯಃ ಪರೀಪ್ಸತಿ ॥೩೮॥

ಅರ್ಥಸಂಪಾದನೆಯ ಸಲುವಾಗಿಯೇ (ಭೋಗಕ್ಕಾಗಿಯೇ) ಕೆಲವರ ಧನವು ನಾಶವಾಗುತ್ತದೆ. (ಕೆಲವರಿಗೆ ಉಂಟಾಗುವ ಧನನಾಶವು ವಿರಕ್ತಿಗೆ ಕಾರಣವಾಗಿ ಪರಮಪುರುಷಾರ್ಥವಾದ ಮೋಕ್ಷಕ್ಕೆ ಕಾರಣವಾಗುತ್ತದೆ.) ಕೆಲವರು ಸಂಪತ್ತಿನಿಂದಲೇ ಅಕ್ಷಯವಾದ ಸುಖವು ಲಭಿಸುವುದೆಂದು ಭಾವಿಸಿ ಐಶ್ವರ್ಯವನ್ನು ಪಡೆದುಕೊಳ್ಳಲು ಧಾವಂತಪಡುತ್ತಿರುತ್ತಾರೆ.

ರಮಮಾಣಃ ಶ್ರಿಯಾ ಕಶ್ಚಿನ್ನಾನ್ಯಚ್ಛ್ರೇಯೋಽಭಿಮನ್ಯತೇ ।
ತಥಾ ತಸ್ಯೇಹಮಾನಸ್ಯ ಸಮಾರಮ್ಭೋ ವಿನಶ್ಯತಿ ॥೩೯॥

ಸಂಪತ್ತನ್ನು ಇಟ್ಟುಕೊಂಡೇ ಆನಂದಪಡುತ್ತಿರುವವನೊಬ್ಬನು ಸಂಪತ್ತಿಗಿಂತಲೂ ಸುಖಸಾಧನವು ಬೇರೆ ಯಾವುದೂ ಇಲ್ಲವೆಂದೇ ಭಾವಿಸುತ್ತಾನೆ. ಹಾಗೆ ಯಾವಾಗಲೂ ಧನಕ್ಕಾಗಿಯೇ ಧಾವಂತಪಡುತ್ತಿರುವವನ ಪ್ರಯತ್ನಗಳೆಲ್ಲವೂ ದೈವವಶಾತ್ ವಿನಾಶವಾಗುತ್ತವೆ. (ನಷ್ಟದಲ್ಲಿ ಪರ್ಯವಸಾನಹೊಂದುತ್ತವೆ.)

ಕೃಚ್ಛ್ರಾಲ್ಲಬ್ಧಮಭಿಪ್ರೇತಂ ಯದಿ ಕೌಸಲ್ಯ ನಶ್ಯತಿ ।
ತದಾ ನಿರ್ವಿದ್ಯತೇ ಸೋಽರ್ಥಾತ್ಪರಿಭಗ್ನಕ್ರಮೋ ನರಃ ॥೪೦॥

ಅತ್ಯಂತಕಷ್ಟದಿಂದ ಸಂಗ್ರಹವಾಗಿದ್ದ ಅಭೀಷ್ಟವಾದ ಧನವು ಒಂದು ವೇಳೆ ವಿನಾಶಹೊಂದಿದರೆ–ಭಗ್ನವಾಗಿಹೋದ ಉದ್ಯೋಗವುಳ್ಳ ಆ ಮನುಷ್ಯನು ಅರ್ಥದಿಂದ ವಿರಕ್ತನಾಗುತ್ತಾನೆ. (ಅವನಿಗೆ ಅರ್ಥವೈರಾಗ್ಯ ವುಂಟಾಗುತ್ತದೆ.)

ಧರ್ಮಮೇಕೇಽಭಿಪದ್ಯನ್ತೇ ಕಲ್ಯಾಣಾಭಿಜನಾ ನರಾಃ ।
ಪರತ್ರ ಸುಖಮಿಚ್ಛನ್ತೋ ನಿರ್ವಿದ್ಯೇಯುಶ್ಚ ಲೌಕಿಕಾತ್ ॥೪೧॥

ಉತ್ತಮಕುಲದಲ್ಲಿ ಹುಟ್ಟಿದ ಕೆಲವೇ ಜನರು ಆಮುಷ್ಮಿಕವಾದ ಸುಖ

ವನ್ನು ಅಪೇಕ್ಷಿಸುತ್ತಾ ಧರ್ಮವನ್ನು ಆಶ್ರಯವನ್ನಾಗಿ ಪಡೆದುಕೊಳ್ಳುತ್ತಾರೆ. ಲೌಕಿಕವಾದ ಸಮಸ್ತವ್ಯವಹಾರಗಳಿಂದಲೂ ವಿರಕ್ತರಾಗುತ್ತಾರೆ.

ಜೀವಿತಂ ಸಂತ್ಯಜನ್ತ್ಯೇಕೇ ಧನಲೋಭಪರಾ ಜನಾಃ ।
ನ ಜೀವಿತಾರ್ಥಂ ಮನ್ಯನ್ತೇ ಪುರುಷಾ ಹಿ ಧನಾದೃತೇ ॥೪೨॥

ಧನಲೋಭಿಗಳಾದ ಕೆಲವು ಜನರು ಧನಸಂಗ್ರಹಕ್ಕಾಗಿ ತಮ್ಮ ಜೀವಿತ ವನ್ನಾದರೂ ಅರ್ಪಿಸುತ್ತಾರೆ. ಹಣವೊಂದನ್ನು ಬಿಟ್ಟರೆ ಜೀವನದಲ್ಲಿ ಬೇರಾವ ಪ್ರಯೋಜನವೂ ಇಲ್ಲವೆಂಬುದೇ ಅವರ ಅಭಿಪ್ರಾಯವಾಗಿರುತ್ತದೆ.

ಪಶ್ಯ ತೇಷಾಂ ಕೃಪಣತಾಂ ಪಶ್ಯ ತೇಷಾಮಬುದ್ಧಿತಾಮ್ ।
ಅಧ್ರುವೇ ಜೀವಿತೇ ಮೋಹಾದರ್ಥದೃಷ್ಟಿಮುಪಾಶ್ರಿತಾಃ ॥೪೩॥

ಕೋಸಲೇಶ್ವರ! ಅಂತಹ ಜನರ ಕೃಪಣತೆಯನ್ನಾದರೂ ನೋಡು. ಮೂರ್ಖತನವನ್ನಾದರೂ ನೋಡು. ಜೀವನವೇ ಶಾಶ್ವತವಲ್ಲದಿರುವಾಗ ಲೋಭಿಗಳು ಅರ್ಥಸಂಗ್ರಹಣದಲ್ಲಿಯೇ ತಮ್ಮ ದೃಷ್ಟಿಯನ್ನು ಕೇಂದ್ರೀ ಕರಿಸುತ್ತಾರೆ.

ಸಂಚಯೇ ಚ ವಿನಾಶಾನ್ತೇ ಮರಣಾನ್ತೇ ಚ ಜೀವಿತೇ ।
ಸಂಯೋಗೇ ಚ ವಿಯೋಗಾನ್ತೇ ಕೋ ನು ವಿಪ್ರಣಯೇನ್ಮನಃ ॥೪೪॥

ಸಂಗ್ರಹವು ವಿನಾಶದಲ್ಲಿ ಕೊನೆಗೊಳ್ಳುತ್ತದೆ. ಜೀವನವು ಮರಣದಲ್ಲಿ ಪರ್ಯವಸಾನಹೊಂದುತ್ತದೆ. ಸೇರುವಿಕೆಯು ವಿಯೋಗದಲ್ಲಿ ಕೊನೆಗೊಳ್ಳು ತ್ತದೆ. ಹೀಗೆ ಸ್ವಭಾವಸಿದ್ಧವಾಗಿರುವಾಗ ಇವುಗಳ ವಿಷಯದಲ್ಲಿ ಮನಸ್ಸನ್ನು ಲೀನಗೊಳಿಸುವುದೇಕೆ?

ಧನಂ ವಾ ಪುರುಷೋ ರಾಜನ್ಪುರುಷಂ ವಾ ಪುನರ್ಧನಮ್ ।
ಅವಶ್ಯಂ ಪ್ರಜಹಾತ್ಯೇವ ತದ್ವಿದ್ವಾನ್ಕೋಽನುಸಂಜ್ವರೇತ್ ॥೪೫॥

ಮನುಷ್ಯನಾದರೂ ಧನವನ್ನು ಬಿಟ್ಟುಹೋಗುತ್ತಾನೆ. ಧನವಾದರೂ ಮನುಷ್ಯನನ್ನು ಅವಶ್ಯವಾಗಿ ಬಿಟ್ಟೇಹೋಗುತ್ತದೆ. ಹೀಗಿರುವಾಗ ಅಂತಹ ಧನವು ವಿನಾಶವಾದುದಕ್ಕಾಗಿ ಯಾವ ವಿದ್ವಾಂಸನು ತಾನೇ ಚಿಂತಿಸುತ್ತಾನೆ?

ಅನ್ಯೇಷಾಮಪಿ ನಶ್ಯನ್ತಿ ಸುಹೃದಶ್ಚ ಧನಾನಿ ಚ ।
ಪಶ್ಯ ಬುದ್ಧ್ಯಾ ಮನುಷ್ಯಾಣಾಂ ರಾಜನ್ನಾಪದಮಾತ್ಮನಃ ॥೪೬॥

ರಾಜನೇ! ನಿನ್ನದು ಮಾತ್ರವೇ ಅಲ್ಲ. ಬೇರೆಯವರ ಧನವೂ ನಷ್ಟವಾಗುತ್ತದೆ. ಸಹೃದರೂ ವಿನಾಶಹೊಂದುತ್ತಾರೆ. ಆದುದರಿಂದ ನೀನು ಬುದ್ಧಿಪೂರ್ವಕವಾಗಿ ವಿಚಾರಮಾಡಿ ನೋಡು. ಎಲ್ಲ ಮನುಷ್ಯರಿಗೂ ಒದಗಿ ಬರುವಂತೆಯೇ ನಿನಗೂ ಆಪತ್ತು ಒದಗಿಬಂದಿದೆ.

ನಿಯಚ್ಛ ಯಚ್ಛ ಸಂಯಚ್ಛ ಇನ್ದ್ರಿಯಾಣಿ ಮನೋ ಗಿರಮ್ ।
ಪ್ರತಿಷೇದ್ಧಾ ನ ಚಾಪ್ಯೇಷು ದುರ್ಬಲೇಷ್ವಹಿತೇಷ್ವಪಿ ॥೪೭॥

ಇಂದ್ರಿಯಗಳನ್ನು ಸಂಯಮದಲ್ಲಿಡು. ಮನಸ್ಸನ್ನು ವಶಪಡಿಸು. ಮಾತನ್ನು ಕಡಿಮೆಮಾಡಿ ಮೌನಿಯಾಗು. ದುರ್ಬಲವಾದ, ಅಹಿತ ವನ್ನುಂಟುಮಾಡುವ ಮಾತು, ಮನಸ್ಸು ಮತ್ತು ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗದಂತೆ ತಡೆಯತಕ್ಕವರು ನಿನ್ನನ್ನು ಬಿಟ್ಟರೆ ಮತ್ತಾರೂ ಇರುವುದಿಲ್ಲ.

ಪ್ರಾಪ್ತಿಸೃಷ್ಟೇಷು ಭಾವೇಷು ವ್ಯಪಕೃಷ್ಟೇಷ್ವಸಮ್ಭವೇ ।
ಪ್ರಜ್ಞಾನತೃಪ್ತೋ ವಿಕ್ರಾನ್ತಸ್ತ್ವದ್ವಿಧೋ ನಾನುಶೋಚತಿ ॥೪೮॥

ಎಲ್ಲ ಪದಾರ್ಥಗಳೂ ನಿಕಟವಾದ ಸಂಸರ್ಗದಿಂದಾಗಿ ದೃಷ್ಟಿಗೋಚರ ಗಳಾಗುತ್ತವೆ. ದೂರಕ್ಕೆ ಹೋದನಂತರ ಅವುಗಳ ದರ್ಶನವು ಸಾಧ್ಯವಾಗು ವುದಿಲ್ಲ. ನಾಶವಾದ ಮೇಲೂ ನೋಡಲಾಗುವುದಿಲ್ಲ. ಅರ್ಥವು ಹತ್ತಿರ ದಲ್ಲಿದ್ದಾಗ ನೀನದನ್ನು ನೋಡುತ್ತಿದ್ದೆ. ಅದು ನಿನ್ನನ್ನು ಬಿಟ್ಟುಹೋಗಿರು ವುದರಿಂದ ಅದನ್ನು ನೀನೀಗ ಕಾಣಲಾರೆ. ಜ್ಞಾನ-ವಿಜ್ಞಾನತೃಪ್ತನಾದ, ಮಹಾಪರಾಕ್ರಮಿಯಾದ ನಿನ್ನಂತಹವನು ದೃಷ್ಟಿಗೆ ಗೋಚರವಾಗದೇ ಇರುವ ಅರ್ಥಕ್ಕಾಗಿ ಶೋಕಪಡುವುದಿಲ್ಲ.

ಅಲ್ಪಮಿಚ್ಛನ್ನಚಪಲೋ ಮೃದುರ್ದಾನ್ತಃ ಸುನಿಶ್ಚಿತಃ ।
ಬ್ರಹ್ಮಚರ್ಯೋಪಪನ್ನಶ್ಚ ತ್ವದ್ವಿಧೋ ನೈವ ಶೋಚತಿ ॥೪೯॥

ನೀನು ಅಲ್ಪತೃಪ್ತನು. ಯಾವುದರಲ್ಲಿಯೂ ಚಾಪಲ್ಯವಿಲ್ಲದವನು.

ಮೃದುಸ್ವಭಾವದವನು. ಜಿತೇಂದ್ರಿಯನು. ದೃಢವಾದ ನಿಶ್ಚಯವುಳ್ಳವನು. ಬ್ರಹ್ಮಚರ್ಯವ್ರತದಿಂದ ಸಂಪನ್ನನಾಗಿರತಕ್ಕವನು. ಆದುದರಿಂದ ನಿನ್ನಂತಹ ವನು ಶೋಕಪಡುವುದೇ ಇಲ್ಲ. (ಶೋಕಪಡಬಾರದು.)

ನ ತ್ವೇವ ಜಾಲ್ಮೀಂ ಕಾಪಾಲೀಂ ವೃತ್ತಿಮೇಷಿತುಮರ್ಹಸಿ ।
ನೃಶಂಸವೃತ್ತಿಂ ಪಾಪಿಷ್ಠಾಂ ದುಷ್ಟಾಂ ಕಾಪುರುಷೋಚಿತಾಮ್ ॥೫೦॥

ಅಂತಹ ಸರ್ವಗುಣಸಂಪನ್ನನಾದ ನೀನು ತುಚ್ಛವಾದ, ಕ್ರೂರವಾದ, ಪಾಪಿಷ್ಠವಾದ, ದುಷ್ಟವಾದ, ಹೇಡಿಗಳು (ಹೀನರು) ಸೇವಿಸಲು ತಕ್ಕುದಾದ ಕಪಾಲವನ್ನು ಕೈಯಲ್ಲಿ ಹಿಡಿದು ಭಿಕ್ಷೆ ಬೇಡುವ ವೃತ್ತಿಯನ್ನು ಖಂಡಿತ ವಾಗಿಯೂ ಆಶ್ರಯಿಸಬಾರದು. ಆ ವೃತ್ತಿಯು ನಿನಗೆ ಯೋಗ್ಯವಲ್ಲ.

ಅಪಿ ಮೂಲಫಲಾಜೀವೋ ರಮಸ್ವೈಕೋ ಮಹಾವನೇ ।
ವಾಗ್ಯತಃ ಸಂಗೃಹೀತಾತ್ಮಾ ಸರ್ವಭೂತದಯಾನ್ವಿತಃ ॥೫೧॥

ನೀನು ಕಂದ-ಮೂಲ-ಫಲಗಳನ್ನೇ ತಿಂದು ಜೀವಿಸುತ್ತಾ ವಿಶಾಲವಾದ ಅರಣ್ಯದಲ್ಲಿ ಏಕಾಕಿಯಾಗಿ ಸಂಚರಿಸುತ್ತಿರು. ಮಾತನ್ನು ಸಂಯಮದಲ್ಲಿಟ್ಟು ಕೊಂಡು ಮನಸ್ಸನ್ನೂ, ಇಂದ್ರಿಯಗಳನ್ನೂ ವಶಪಡಿಸಿಕೊಂಡು ಸರ್ವ ಪ್ರಾಣಿಗಳ ವಿಷಯದಲ್ಲಿಯೂ ದಯಾಭಾವದಿಂದಿರು.

ಸದೃಶಂ ಪಣ್ಡಿತಸ್ಯೈತದೀಷಾದನ್ತೇನ ದನ್ತಿನಾ ।
ಯದೇಕೋ ರಮತೇಽರಣ್ಯೇಷ್ವಾರಣ್ಯೇನೈವ ತುಷ್ಯತಿ ॥೫೨॥

ಮಹಾಜ್ಞಾನಿಯು ನಡೆದುಕೊಳ್ಳುವಂತೆ ನೀನೂ ನಡೆದುಕೊಳ್ಳ ಬೇಕಾಗಿದೆ. ಪಂಡಿತನಾದವನು (ಮಹಾಜ್ಞಾನಿಯಾದವನು) ಗಾಡಿಯ ಮೂಕಿಯ ಮರದ ದಂಡಕ್ಕೆ ಸಮಾನವಾದ ದಂತವನ್ನು ಹೊಂದಿರುವ ಮಹಾಗಜದಂತೆ–ಏಕಾಕಿಯಾಗಿ ಸಂಚರಿಸುತ್ತಾ, ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳಿಂದಲೇ ತೃಪ್ತಿಪಟ್ಟುಕೊಂಡಿರುತ್ತಾನೆ. ಹಾಗೆಯೇ ನೀನೂ ಅರಣ್ಯವಾಸದಿಂದ ತೃಪ್ತನಾಗು.

ಮಹಾಹ್ರದಃ ಸಂಕ್ಷುಭಿತ ಆತ್ಮನೈವ ಪ್ರಸೀದತಿ ।
ಏತದೇವಂಗತಸ್ಯಾಹಂ ಸುಖಂ ಪಶ್ಯಾಮಿ ಜೀವಿತುಮ್ ॥೫೩॥

ಕೆಲವು ಸಮಯಗಳಲ್ಲಿ ಕ್ಷುಭಿತವಾಗುವ ಸರೋವರವು ತಾನಾಗಿಯೇ ನಿರ್ಮಲವಾಗುತ್ತದೆ. ಹಾಗೆಯೇ ಕ್ಷೋಭೆಗೊಂಡಿರುವವನ ಮನಸ್ಸೂ ಶಾಂತವಾಗುತ್ತದೆ. ಈ ಪ್ರಕಾರವಾದ ಜೀವನವೇ ಸುಖಮಯವೆಂದು ನಾನು ಭಾವಿಸುತ್ತೇನೆ.

ಅಸಮ್ಭವೇ ಶ್ರಿಯೋ ರಾಜನ್ಹೀನಸ್ಯ ಸಚಿವಾದಿಭಿಃ ।
ದೈವೇ ಪ್ರತಿನಿವಿಷ್ಟೇ ಚ ಕಿಂ ಶ್ರೇಯೋ ಮನ್ಯತೇ ಭವಾನ್ ॥೫೪॥

ಈಗ ನಿನಗೆ ಸಂಪತ್ತು ಇಲ್ಲವಾಗಿದೆ. ಅಮಾತ್ಯರೇ ಮೊದಲಾದ ರಾಜಪರಿವಾರದವರಿಂದಲೂ ನೀನು ಹೀನನಾಗಿರುವೆ. ಇದರ ಜೊತೆಗೆ ದೈವವೂ ನಿನಗೆ ಪ್ರತಿಕೂಲವಾಗಿದೆ. ಇಂತಹ ಅವಸ್ಥೆಯಲ್ಲಿರುವ ನೀನು ನಾನು ಹೇಳಿದುದಕ್ಕಿಂತಲೂ ಬೇರೆ ಯಾವುದನ್ನು ಶ್ರೇಯಸ್ಕರವೆಂದು ಭಾವಿಸುವೆ?"

ಇ೦೪ನೆಯ ಅಧ್ಯಾಯವು ಮುಗಿಯಿತು.

೧೦೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಕಾಲಕವೃಕ್ಷೀಯನಿಂದ ಕಳೆದುಹೋದ ರಾಜ್ಯದ ಪ್ರಾಪ್ತಿಗಾಗಿ ನಾನಾವಿಧವಾದ ಉಪಾಯಗಳ ವಿವರಣೆ

ಯುಧಿಷ್ಠಿರ! ಕಾಲಕವೃಕ್ಷೀಯಮುನಿಯು ಹೇಳುತ್ತಾನೆ :

ಅಥ ಚೇತ್ಪೌರುಷಂ ಕಿಂಚಿತ್ಕ್ಷತ್ರಿಯಾತ್ಮನಿ ಪಶ್ಯಸಿ ।
ಬ್ರವೀಮಿ ತಾಂ ತು ತೇ ನೀತಿಂ ರಾಜ್ಯಸ್ಯ ಪ್ರತಿಪತ್ತಯೇ ॥೧॥

"ಕ್ಷತ್ರಿಯನೇ! ನಿನ್ನ ಆತ್ಮದಲ್ಲಿ ಕ್ಷತ್ರಿಯಸಹಜವಾದ ಪೌರುಷವೇನಾದರೂ ಇರುವುದಾದರೆ–ರಾಜ್ಯಪ್ರಾಪ್ತಿಗಾಗಿ ನಿನಗೆ ರಾಜನೀತಿಯನ್ನು ಹೇಳುತ್ತೇನೆ.

ನಾನು ಹೇಳಿದಂತೆ ಮಾಡುವುದಾದರೆ–ನಾನು ಹೇಳಿದುದನ್ನು ಕಾರ್ಯರೂಪಕ್ಕೆ ತರುವುದಾದರೆ–ತತ್ತ್ವತಃ ಎಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ನಿನಗೆ ಹೇಳುತ್ತೇನೆ ; ಕೇಳು. ನೀನು ನಾನು ಹೇಳಿರುವ ನೀತಿಗೆ ಅನುಸಾರವಾಗಿ ನಡೆದುಕೊಂಡರೆ ಪುನಃ ಮಹಾರ್ಥಗಳನ್ನು

ಸಾಧಿಸುವೆ. ರಾಜ್ಯ, ರಾಜ್ಯದ ಮಂತ್ರವರ್ಗ, ಮಹೈಶ್ವರ್ಯ–ಎಲ್ಲವನ್ನೂ ಪಡೆದುಕೊಳ್ಳುವೆ. ಈ ವಿಷಯವಾದರೂ ನಿನಗೆ ರುಚಿಸುವುದಾದರೆ ಹೇಳು. ನಿನಗೆ ಆ ಎಲ್ಲ ವಿಷಯಗಳನ್ನೂ ಹೇಳುತ್ತೇನೆ."

ರಾಜನು ಹೇಳುತ್ತಾನೆ :

"ಪ್ರಭುವೇ! ನಿಮ್ಮೊಡನೆ ಆಗಿರುವ ಸಮಾಗಮವು ಅಮೋಘ ವಾದುದು. ವ್ಯರ್ಥವಾಗತಕ್ಕುದಲ್ಲ. ನಾನು ನಿಮಗೆ ಶರಣಾಗತನಾಗಿದ್ದೇನೆ. ಅವಶ್ಯವಾಗಿ ನೀವು ರಾಜನೀತಿಯನ್ನು ತಿಳಿಸಿರಿ."

ಹಿತ್ವಾಂ ದಮ್ಭಂ ಚ ಕಾಮಂ ಚ ಕ್ರೋಧಂ ಹರ್ಷಂ ಭಯಂ ತಥಾ ।
ಅಪ್ಯಮಿತ್ರಾಣಿ ಸೇವಸ್ವ ಪ್ರಣಿಪತ್ಯ ಕೃತಾಞ್ಜಲಿಃ ॥೫॥

"ರಾಜಕುಮಾರ! ದಂಭ, ಕಾಮ, ಕ್ರೋಧ, ಹರ್ಷ, ಭಯ– ಇವುಗಳೆಲ್ಲವನ್ನೂ ಬಿಟ್ಟು ಬದ್ಧಾಂಜಲಿಯಾಗಿ ತಲೆಬಗ್ಗಿಸಿ ಶತ್ರುಗಳನ್ನಾದರೂ ಸೇವಿಸು.

ತಮುತ್ತಮೇನ ಶೌಚೇನ ಕರ್ಮಣಾ ಚಾಭಿಧಾರಯ ।
ದಾತುಮರ್ಹತಿ ತೇ ವಿತ್ತಂ ವೈದೇಹಃ ಸತ್ಯಸಂಗರಃ ।
ಪ್ರಮಾಣಂ ಸರ್ವಭೂತೇಷು ಪ್ರಗ್ರಹಂ ಚ ಭವಿಷ್ಯಸಿ ॥೭॥

ಪವಿತ್ರವಾದ ವ್ಯವಹಾರದಿಂದಲೂ–ಉತ್ತಮವಾದ ಕರ್ಮದಿಂದಲೂ ವಿದೇಹರಾಜನಿಗೆ ನಿನ್ನಲ್ಲಿ ವಿಶ್ವಾಸವು ಹುಟ್ಟುವಂತೆ ಮಾಡು. ಸತ್ಯಪ್ರತಿಜ್ಞನಾದ ವಿದೇಹರಾಜನು ನಿನಗೆ ಅವಶ್ಯವಾದ ಧನವನ್ನು ಪ್ರದಾನಮಾಡುತ್ತಾನೆ. ಹಾಗೇನಾದರೂ ಆದರೆ ನೀನು ಸಮಸ್ತಪ್ರಾಣಿಗಳಿಗೂ ಪ್ರಮಾಣ ಭೂತನಾಗುವೆ. (ವಿಶ್ವಾಸಪಾತ್ರನಾಗುವೆ.) ಎಲ್ಲರಿಗೂ ಆಶ್ರಯನಾಗುವೆ.

ತತಃ ಸಹಾಯಾನ್ಸೋತ್ಸಾಹಾಲ್ಲಪ್ಸ್ಯಸೇಽವ್ಯಸನಾಞ್ಶುಚೀನ್ ।
ವರ್ತಮಾನಃ ಸ್ವಶಾಸ್ತ್ರೇಣ ಸಂಯತಾತ್ಮಾ ಜಿತೇನ್ದ್ರಿಯಃ ।
ಅಭ್ಯುದ್ಧರತಿ ಚಾತ್ಮಾನಂ ಪ್ರಸಾದಯತಿ ಚ ಪ್ರಜಾಃ ॥೮॥

ಬಳಿಕ ನಿನಗೆ ಶುದ್ಧಹೃದಯರಾದ, ದುರ್ವ್ಯಸನಗಳಿಂದ ರಹಿತರಾದ, ಉತ್ಸಾಹಶಾಲಿಗಳಾದ ಸಹಾಯಕರು ಲಭಿಸುತ್ತಾರೆ. ಯಾವನು ಶಾಸ್ತ್ರ ವಿಧ್ಯನುಸಾರವಾಗಿ ನಡೆದುಕೊಳ್ಳುವನೋ–ಮನಸ್ಸನ್ನೂ, ಇಂದ್ರಿಯಗಳನ್ನೂ

ಸ್ವಾಧೀನದಲ್ಲಿಟ್ಟುಕೊಂಡಿರುವನೋ–ಅವನು ತನ್ನನ್ನೂ ಉದ್ಧಾರ ಮಾಡಿಕೊಳ್ಳುತ್ತಾನೆ. ಪ್ರಜೆಗಳನ್ನೂ ಸಂತೋಷಗೊಳಿಸುತ್ತಾನೆ.

ತೇನೈವ ತ್ವಂ ಧೃತಿಮತಾ ಶ್ರೀಮತಾ ಚಾಭಿಸತ್ಕೃತಃ ।
ಪ್ರಮಾಣಂ ಸರ್ವಭೂತೇಷು ಗತ್ವಾ ಚ ಗ್ರಹಣಂ ಮಹತ್ ॥೯॥

ತತಃ ಸುಹೃದ್ಬಲಂ ಲಬ್ಧ್ವಾ ಮನ್ತ್ರಯಿತ್ವಾ ಸುಮನ್ತ್ರಿಭಿಃ ।
ಆನ್ತರೈರ್ಭೇದಯಿತ್ವಾರೀನ್ಬಿಲ್ವಂ ಬಿಲ್ವೇನ ಭೇದಯ ॥೧೦॥

ಧೃತಿಮಂತನಾದ, ಶ್ರೀಮಂತನಾದ ಆ ಜನಕನಿಂದಲೇ ಸತ್ಕೃತನಾಗುವ ನೀನು ಸರ್ವಪ್ರಾಣಿಗಳ ವಿಶ್ವಾಸಕ್ಕೂ ಪಾತ್ರನಾಗುವೆ. ಅತ್ಯಂತಗೌರವದಿಂದ ನಿನ್ನನ್ನವರು ಪರಿಗ್ರಹಿಸುತ್ತಾರೆ. ಬಳಿಕ ನೀನು ಸುಹೃದರ ಬಲವನ್ನು ಹೆಚ್ಚಿಸಿಕೊಳ್ಳಬೇಕು. ಆಪ್ತರಾದ ಮಂತ್ರಿಗಳೊಡನೆ ಸಮಾಲೋಚಿಸಿ ಅಂತ ರಂಗವ್ಯಕ್ತಿಗಳ ಮೂಲಕವಾಗಿಯೇ ಶತ್ರುಗಳನ್ನು ಭೇದಿಸಬೇಕು. ಬಿಲ್ವದ ಕಾಯನ್ನು ಬಿಲ್ವದ ಕಾಯಿಂದಲೇ ಒಡೆಯುವ ನೀತಿಯನ್ನು ಅನುಸರಿಸಬೇಕು. ಶತ್ರುಗಳ ಸಹಯೋಗದಿಂದಲೇ ಶತ್ರುಗಳನ್ನು ಧ್ವಂಸಮಾಡು.

ಪರೈರ್ವಾ ಸಂವಿದಂ ಕೃತ್ವಾ ಬಲಮಪ್ಯಸ್ಯ ಘಾತಯ ॥೧೧॥
ಅಲಭ್ಯಾ ಯೇ ಶುಭಾ ಭಾವಾಃ ಸ್ತ್ರಿಯಶ್ಚಾಚ್ಛಾದನಾನಿ ಚ ।
ಶಯ್ಯಾಸನಾನಿ ಯಾನಾನಿ ಮಹಾರ್ಹಾಣಿ ಗೃಹಾಣಿ ಚ ॥೧೨॥
ಪಕ್ಷಿಣೋ ಮೃಗಜಾತಾನಿ ರಸಗನ್ಧಾಃ ಫಲಾನಿ ಚ ।
ತೇಷ್ವೇವ ಸಜ್ಜಯೇಥಾಸ್ತ್ವಂ ಯಥಾ ನಶ್ಯೇತ್ಸ್ವಯಂ ಪರಃ ॥೧೩॥

ಶತ್ರುವಿನ ಶತ್ರುವಿನೊಡನೆ ಒಪ್ಪಂದಮಾಡಿಕೊಂಡಾದರೂ ನಿನ್ನ ಶತ್ರುವಿನ ಬಲವನ್ನು ಧ್ವಂಸಮಾಡು. ಅದೂ ಆಗದಿದ್ದರೆ ಇನ್ನೂ ಒಂದು ಉಪಾಯವಿದೆ. ಅಲಭ್ಯವಾದ ವಸ್ತುಗಳು ಹಲವಾರಿವೆ. ಸ್ತ್ರೀಯರು, ಸುಂದರವಾದ ಹೊದೆಯುವ ದುಪ್ಪಟ್ಟಗಳು, ಹಂಸತೂಲಿಕಾತಲ್ಪಗಳು, ಒಳ್ಳೆಯ ಸಿಂಹಾಸನಗಳು, ಒಳ್ಳೊಳ್ಳೆಯ ಪಲ್ಲಕ್ಕಿಗಳು, ಬಹುಮೂಲ್ಯವಾದ ಸೌಧಗಳು, ಪಕ್ಷಿಗಳು, ಕಸ್ತೂರೀ-ಗೋರೋಜನಾದಿಗಳು, ರಸಗಳು, ನಾನಾವಿಧವಾದ ಗಂಧಗಳು–ಇವೇ ಮುಂತಾದ ಸಾಮಾನ್ಯರಿಗೆ ಅಲಭ್ಯ

ವಾದ–ಅಮೂಲ್ಯವಾದ ವಸ್ತುಗಳಲ್ಲಿ ಶತ್ರುವಿನ ಮನಸ್ಸು ಆಕರ್ಷಿತವಾಗುವಂತೆ ಮಾಡು. ಅವುಗಳಲ್ಲಿಯೇ ಆಸಕ್ತನಾದ ಶತ್ರುವು ಬಹಳ ಬೇಗ ವಿನಾಶಹೊಂದಲಿ.

ಯದ್ಯೇವಂ ಪ್ರತಿಷೇದ್ಧವ್ಯೋ ಯದ್ಯುಪೇಕ್ಷಣಮರ್ಹತಿ ।
ನ ಜಾತು ವಿವೃತಃ ಕಾರ್ಯಃ ಶತ್ರುಃ ಸುನಯಮಿಚ್ಛತಾ ॥೧೪॥

ಮೇಲೆ ಹೇಳಿದ ಎಲ್ಲ ವಸ್ತುಗಳೂ ಶತ್ರುರಾಜನಿಗೆ ಲಭಿಸುವಂತೆ ಮಾಡಿ ಅವನು ಅವುಗಳಲ್ಲಿ ಅತ್ಯಾಸಕ್ತನಾಗುವಂತೆ ಮಾಡಬೇಕು. ಮಿತ್ರನ ಸೋಗನ್ನು ಹಾಕಿಕೊಂಡು, ವ್ಯಸನಕ್ಕೆ ಸಿಕ್ಕಿಹಾಕಿಕೊಳ್ಳಕೂಡದೆಂದು ಅವನನ್ನು ತಡೆಯಲೂ ಪ್ರಯತ್ನಿಸಬೇಕು. ಇದನ್ನು ಸಂದರ್ಭಾನುಸಾರವಾಗಿ ಶತ್ರುರಾಜನಿಗೆ ಯಾವ ರೀತಿಯಲ್ಲಿಯೂ ಸಂಶಯವು ಬರದ ರೀತಿಯಲ್ಲಿ ಮಾಡಬೇಕು. ವ್ಯಸನಗಳಿಂದ ತಪ್ಪಿಸಲು ಪ್ರಯತ್ನಿಸುವುದು ಸರಿಯಲ್ಲವೆಂದು ಕಂಡುಬಂದರೆ ಉದಾಸೀನದಿಂದ ಇದ್ದುಬಿಡಬೇಕು. ಉಪೇಕ್ಷೆಮಾಡಬೇಕು. ಒಳ್ಳೆಯ ನೀತಿಯನ್ನು ಪರಿಪಾಲಿಸಲು ಇಚ್ಛೆಯುಳ್ಳ ರಾಜನು ತನ್ನ ಗುಪ್ತಾಲೋಚನೆಯು ಶತ್ರುವಿಗೆ ಯಾವುದೇ ಸಂದರ್ಭದಲ್ಲಿಯೂ ತಿಳಿಯದಿರುವಂತೆ ಬಹಳ ಜಾಗರೂಕನಾಗಿರಬೇಕು.

ರಮಸ್ವ ಪರಮಾಮಿತ್ರೇ ವಿಷಯೇ ಪ್ರಾಜ್ಞಸಮ್ಮತಃ ।
ಭಜಸ್ವ ಶ್ವೇತಕಾಕೀಯೈರ್ಮಿತ್ರಧರ್ಮಮನರ್ಥಕೈಃ ॥೧೫॥

ನೀನು ಬುದ್ಧಿವಂತರ ವಿಶ್ವಾಸಕ್ಕೆ ಪಾತ್ರನಾಗಿ ಮಹಾಶತ್ರುವಾದ ವಿದೇಹರಾಜನ ರಾಜ್ಯದಲ್ಲಿ–ಕಾಗೆಯು ಬೆಳ್ಳಗಿದೆ ಎಂದು ಹೇಳುವಂತೆ–ಒಳ್ಳೆಯದನ್ನು ಕೆಟ್ಟುದೆಂದೂ–ಕೆಟ್ಟುದನ್ನು ಒಳ್ಳೆಯದೆಂದೂ ಹೇಳುತ್ತಾ ಶತ್ರುರಾಜನಿಗೆ ಅನರ್ಥಕಾರಿಗಳಾದ ಕಾರ್ಯಗಳನ್ನೇ ಪ್ರಯೋಜನಕಾರಿಗಳೆಂದು ಹೇಳುತ್ತಾ ಮಿತ್ರನಂತೆಯೇ ವರ್ತಿಸಬೇಕು. (ವ್ಯಾಖ್ಯಾನಕಾರರು ಶ್ವಾಚ **ಏತಶ್ಚ ಕಾಕಶ್ಚ ತೇಷಾಮಿಮೇ ಧರ್ಮಾಃ = ಶ್ವೇತಕಾಕೀಯಾಃ**– ಎಂದು ನಿರ್ವಚನಮಾಡಿ ಹೀಗೆ ಅರ್ಥಮಾಡಿರುತ್ತಾರೆ : ನಾಯಿಯು ಪರಕೀ ಯರ ವಿಷಯದಲ್ಲಿ ಜಾಗರೂಕವಾಗಿರುವಂತೆ–ಶತ್ರುಗಳ ವಿಷಯದಲ್ಲಿ ಜಾಗರೂಕನಾಗಿರುತ್ತಾ, ಜಿಂಕೆಯು ಸ್ವಲ್ಪವೇ ಶಬ್ದವಾದರೂ ಭಯಗೊಳ್ಳುವಂತೆ–ಶತ್ರುವಿನ ವಿಷಯದಲ್ಲಿ ಭಯದಿಂದಿರುತ್ತಾ, ಕಾಗೆಯು ಒಂದೆಡೆ

ಯಲ್ಲಿ ಕುಳಿತು ಎಲ್ಲವನ್ನೂ ವೀಕ್ಷಿಸುತ್ತಿರುವಂತೆ–ರಾಜ್ಯದ ಪರಿಸ್ಥಿತಿಯನ್ನು ಸೂಕ್ಷ್ಮದೃಷ್ಟಿಯಿಂದ ಅಡಿಗಡಿಗೂ ಅವಲೋಕಿಸುತ್ತಾ, ಅರ್ಥಶೂನ್ಯವಾದ ಮಾತುಗಳಿಂದ ಶತ್ರುರಾಜನೊಡನೆ ಮಿತ್ರಧರ್ಮವನ್ನು ಪರಿಪಾಲಿಸುತ್ತಾ ಆನಂದದಿಂದ ಕಾಲಕಳೆಯುತ್ತಿರು.)

ಆರಮ್ಭಾಂಶ್ಚಾಸ್ಯ ಮಹತೋ ದುಶ್ಚರಾಂಶ್ಚ ಪ್ರಯೋಜಯ ।
ನದೀವಚ್ಚ ವಿರೋಧಾಂಶ್ಚ ಬಲವದ್ಭಿರ್ವಿರುಧ್ಯತಾಮ್ ॥೧೬॥

ಹೀಗೆ ಶತ್ರುರಾಜನೊಡನೆ ಮಿತ್ರಧರ್ಮದಿಂದಿರುತ್ತಾ–ಅವರಿಗೆ ಸಲಹೆ ಗಳನ್ನು ನೀಡುತ್ತಿರಬೇಕು. ಮುಗಿಸಲಾಗದ ಮಹಾಕಾರ್ಯಗಳನ್ನು ಪ್ರಾರಂಭಿಸುವಂತೆ ಒತ್ತಾಯಿಸಬೇಕು. ಪ್ರಾರಂಭಿಸಿರುವ ಕಾರ್ಯವನ್ನು ಮುಗಿಸಲು ಸಾಧ್ಯವಾಗದಿದ್ದರೆ ರಾಜನು ಪ್ರಜೆಗಳ ದೃಷ್ಟಿಯಲ್ಲಿ ಅಮಾನ್ಯ ನಾಗುತ್ತಾನೆ. ಬಲಿಷ್ಠರಾದ ಶತ್ರುಗಳೊಡನೆ–ದುಸ್ತರವಾದ ವಿಶಾಲವಾದ ನದಿಯಂತೆ–ವಿರೋಧವನ್ನು ಕಟ್ಟಿಕೊಳ್ಳುವಂತೆಯೂ ಯುದ್ಧಕ್ಕೆ ಹೋಗು ವಂತೆಯೂ ಸಂದರ್ಭಗಳನ್ನು ಅನುಸರಿಸಿ ಸಲಹೆ ನೀಡಬೇಕು.

ಉದ್ಯಾನಾನಿ ಮಹಾರ್ಹಾಣಿ ಶಯನಾನ್ಯಾಸನಾನಿ ಚ ।
ಪ್ರತಿಭೋಗಸುಖೇನೈವ ಕೋಶಮಸ್ಯ ವಿರೇಚಯ ॥೧೭॥

ರಾಜಭೋಗಕ್ಕೆ ಯೋಗ್ಯವಾದ ಅತಿಸುಂದರವಾದ ಹಲವಾರು ದೊಡ್ಡ-ದೊಡ್ಡ ಉದ್ಯಾನವನಗಳನ್ನು ನಿರ್ಮಿಸುವಂತೆ ಸಲಹೆ ನೀಡಬೇಕು. ಬಹುಮೂಲ್ಯವಾದ ಹಂಸತೂಲಿಕಾತಲ್ಪಗಳು, ರತ್ನಖಚಿತವಾದ ಸಿಂಹಾಸನ ಗಳು ಇವೇ ಮುಂತಾದ ಅನರ್ಘವಸ್ತುಗಳನ್ನು ಅರಮನೆಯಲ್ಲಿ ಸಜ್ಜು ಗೊಳಿಸುವಂತೆ ಸಲಹೆ ನೀಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ಶತ್ರುವಿನ ಬೊಕ್ಕಸದ ಹಣವೆಲ್ಲವೂ ಭೋಗವಿಲಾಸಗಳಿಗಾಗಿಯೇ ವ್ಯಯವಾಗುವಂತೆ ಮಾಡಬೇಕು.

ಯಜ್ಞದಾನೇ ಪ್ರಶಾಧ್ಯಸ್ಮೈ ಬ್ರಾಹ್ಮಣಾನನುವರ್ಣ್ಯ ತಾನ್ ।
ತೇ ತ್ವಾಂ ಪ್ರತಿಕರಿಷ್ಯನ್ತಿ ತಂ ಭೋಕ್ಷ್ಯನ್ತಿ ವೃಕಾ ಇವ ॥೧೮॥

ಮಿಥಿಲಾದೇಶದ ಸುಪ್ರಸಿದ್ಧರಾದ ಬ್ರಾಹ್ಮಣರನ್ನು ಬಹಳವಾಗಿ ಪ್ರಶಂಸೆಮಾಡಿ ಅವರ ಮೂಲಕವಾಗಿ ವಿದೇಹರಾಜನು ದೊಡ್ಡ-ದೊಡ್ಡ

ಯಜ್ಞ-ದಾನಾದಿಗಳಲ್ಲಿ ತೊಡಗುವಂತೆ ಮಾಡಬೇಕು. ಯಜ್ಞ-ದಾನಗಳ ವ್ಯಾಜದಲ್ಲಿ ಬ್ರಾಹ್ಮಣರು ವಿದೇಹರಾಜನ ಐಶ್ವರ್ಯವನ್ನು ತೋಳಗಳಂತೆ ಕಬಳಿಸುತ್ತಾರೆ. ಅಂತಹ ಸದವಕಾಶವನ್ನು ಒದಗಿಸಿಕೊಟ್ಟುದಕ್ಕಾಗಿ ಆ ಬ್ರಾಹ್ಮಣರು ನಿನಗೆ ನಾನಾರೀತಿಯಲ್ಲಿ ಸಹಾಯಕರಾಗುತ್ತಾರೆ.

ಅಸಂಶಯಂ ಪುಣ್ಯಶೀಲಃ ಪ್ರಾಪ್ನೋತಿ ಪರಮಾಂ ಗತಿಮ್ ।
ತ್ರಿವಿಷ್ಟಪೇ ಪುಣ್ಯತಮಂ ಸ್ಥಾನಂ ಪ್ರಾಪ್ನೋತಿ ಮಾನವಃ ॥೧೯॥

ಪುಣ್ಯಶೀಲನಾದ ಮನುಷ್ಯನು ಶ್ರೇಷ್ಠವಾದ ಸದ್ಗತಿಯನ್ನು ಹೊಂದುವನೆಂಬುದರಲ್ಲಿ ಸಂಶಯವೇ ಇಲ್ಲ. ಪುಣ್ಯವಂತನಾದ ಮನುಷ್ಯನು ಸ್ವರ್ಗದಲ್ಲಿ ಪುಣ್ಯತಮವಾದ ಸ್ಥಾನವನ್ನೂ ಪಡೆದುಕೊಳ್ಳುತ್ತಾನೆ.

ಕೋಶಕ್ಷಯೇ ತ್ವಮಿತ್ರಾಣಾಂ ವಶಂ ಕೌಸಲ್ಯ ಗಚ್ಛತಿ ।
ಉಭಯತ್ರ ಪ್ರಯುಕ್ತಸ್ಯ ಧರ್ಮೇ ಚಾಧರ್ಮ ಏವ ಚ ॥೨೦॥

ಕೌಸಲ್ಯನೇ! ರಾಜನು ಧರ್ಮದಲ್ಲಿಯೇ ಪ್ರವೃತ್ತನಾಗಿರಲಿ ; ಅಧರ್ಮದಲ್ಲಿಯೇ ಪ್ರವೃತ್ತನಾಗಿರಲಿ (ಭೋಗವಿಲಾಸಗಳಿಗಾದರೂ ವೆಚ್ಚ ಮಾಡಲಿ ; ಯಜ್ಞ-ದಾನಗಳಿಗಾದರೂ ವೆಚ್ಚಮಾಡಲಿ)–ಅವನ ಬೊಕ್ಕಸ ವಂತೂ ಖಾಲಿಯಾಗುತ್ತದೆ. ಬೊಕ್ಕಸವು ಬರಿದಾಯಿತೆಂದರೆ ರಾಜನು ಶತ್ರುಗಳ ವಶನಾಗುತ್ತಾನೆ.

ಫಲಾರ್ಥಮೂಲಂ ವ್ಯುಚ್ಛಿದ್ಯೇತ್ತೇನ ನನ್ದನ್ತಿ ಶತ್ರವಃ ।
ನ ಚಾಸ್ಯೈ ಮಾನುಷಂ ಕರ್ಮ ದೈವಮಸ್ಯೋಪವರ್ಣಯ ॥೨೧॥

ಸ್ವರ್ಗಾದಿ ಫಲಗಳು, ಜಯಾದಿ ಪ್ರಯೋಜನಗಳು–ಇವುಗಳಿಗೆ ಮೂಲಭೂತವಾದ ಕೋಶವನ್ನು ಮುಗಿದುಹೋಗುವಂತೆ ಮಾಡಬೇಕು. ಅದರಿಂದ ಶತ್ರುವಿನ ಶತ್ರುಗಳು ಆನಂದಪಡುತ್ತಾರೆ. ಜಯಸಿದ್ಧಿಗೆ ದೇವ ತಾನುಗ್ರಹಾರ್ಥವಾದ ಯಾಗಾದಿ ಕರ್ಮಗಳನ್ನೇ ಮಾಡುವಂತೆ ರಾಜನಿಗೆ ಸಲಹೆನೀಡಬೇಕು. ಸೈನ್ಯಸಂಗ್ರಹವೇ ಮೊದಲಾದ ಮಾನುಷವಾದ ಕಾರ್ಯ ಗಳನ್ನು ಮಾಡುವಂತೆ ಸಲಹೆ ನೀಡಬಾರದು.

ಅಸಂಶಯಂ ದೈವಪರಃ ಕ್ಷಿಪ್ರಮೇವ ವಿನಶ್ಯತಿ ।
ಯಾಜಯೈನಂ ವಿಶ್ವಜಿತಾ ಸರ್ವಸ್ವೇನ ವಿಯುಜ್ಯ ತಮ್ ॥೨೨॥

ದೇವತಾನುಗ್ರಹಕ್ಕಾಗಿ ಯಜ್ಞಾದಿಗಳಲ್ಲಿಯೇ ತೊಡಗಿದ ರಾಜನು ಯಜ್ಞದಕ್ಷಿಣೆಗಾಗಿ ಬೊಕ್ಕಸವು ಬರಿದಾಗುವುದರಿಂದ ಬೇಗನೆ ವಿನಾಶ ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ. ಆದುದರಿಂದ ರಾಜನನ್ನು ಸರ್ವಸ್ವ ಪ್ರದಾನರೂಪವಾದ ವಿಶ್ವಜಿದ್ಯಾಗದಲ್ಲಿ ತೊಡಗಿಸಬೇಕು. ಹೀಗೆ ಅವನಲ್ಲಿ ರುವ ಬೊಕ್ಕಸವನ್ನೆಲ್ಲಾ ಬರಿದುಮಾಡಿಸಬೇಕು.

ತತೋ ಗಚ್ಛಸಿ ಸಿದ್ಧಾರ್ಥಃ ಪೀಡ್ಯಮಾನಂ ಮಹಾಜನಮ್ ।
ಯೋಗಧರ್ಮಮಿದಂ ಪುಣ್ಯಂ ಕಂಚಿದಸ್ಯೋಪವರ್ಣಯೇತ್ ॥೨೩॥

ಅಪಿ ತ್ಯಾಗಂ ಬುಭೂಷೇತ ಕಚ್ಚಿದ್ಗಚ್ಛೇದನಾಮಯಮ್ ।
ಸಿದ್ಧೇನೌಷಧಿಯೋಗೇನ ಸರ್ವಶತ್ರುವಿನಾಶಿನಾ ।
ನಾಗಾನಶ್ವಾನ್ಮನುಷ್ಯಾಂಶ್ಚ ಕೃತಕೈರುಪಘಾತಯೇತ್ ॥೨೪॥

ಇಷ್ಟರಿಂದಲೇ ನಿನ್ನ ಇಷ್ಟಾರ್ಥವು ಸಿದ್ಧಿಸುತ್ತದೆ. ರಾಜನು ತನ್ನ ಸರ್ವಸ್ವವನ್ನೂ ವಿಶ್ವಜಿದ್ಯಾಗದ ಮೂಲಕವಾಗಿ ಕಳೆದುಕೊಂಡನಂತರ ನೀನು ಯಥಾಪೂರ್ವಕವಾಗಿ ಹಿತಮಿತ್ರನಂತೆಯೇ ನಟಿಸುತ್ತಾ ದೇಶದಲ್ಲಿ ಕಷ್ಟಕ್ಕೊಳ ಗಾಗಿರುವ ಮಹಾತ್ಮನೊಬ್ಬನ ವಿಷಯವನ್ನು ರಾಜನ ಮುಂದೆ ವರ್ಣಿಸಿ ಹೇಳಬೇಕು. ಅದರ ಜೊತೆಯಲ್ಲಿಯೇ ಯೋಗಧರ್ಮವನ್ನು ತಿಳಿದಿರುವ, ಪುಣ್ಯಾತ್ಮನಾದ, ಅಧ್ಯಾತ್ಮಚಿಂತಕನಾದ ಯೋಗಿಯೊಬ್ಬನಿರುವನೆಂಬ ವಿಷಯ ವನ್ನೂ ರಾಜನಿಗೆ ಪ್ರಾಸಂಗಿಕವಾಗಿ ಹೇಳಬೇಕು. ಯೋಗಿರಾಜನ ಉಪದೇಶ ವನ್ನು ಪಡೆದು ರಾಜನು ರಾಜ್ಯವನ್ನೇ ತ್ಯಾಗಮಾಡಲೂಬಹುದು. ಒಂದು ವೇಳೆ ರಾಜನು ಪ್ರಕೃತಿಸ್ಥನಾಗಿಯೇ ಇದ್ದು ಅವನ ಮೇಲೆ ಯೋಗಿಯ ಪ್ರಭಾವವು ಪರಿಣಾಮವಾಗದಿದ್ದರೆ–ಆಗಲೂ ನೀನು ಹತಾಶನಾಗುವ ಕಾರಣವಿಲ್ಲ. ನಿನ್ನ ಆಪ್ತರ ಮೂಲಕವಾಗಿ ಸರ್ವಶತ್ರು ವಿನಾಶಕವೆಂಬ ಸಿದ್ಧೌಷಧವನ್ನು ಪ್ರಯೋಗಿಸಿ ಶತ್ರುವಿನ ಬಳಿ ಇರುವ ಆನೆ, ಕುದುರೆ, ಪದಾತಿಗಳೆಲ್ಲರನ್ನೂ ಕೊಲ್ಲಿಸಬೇಕು.

ಏತೇ ಚಾನ್ಯೇ ಚ ಬಹವೋ ದಮ್ಭಯೋಗಾಃ ಸುಚಿನ್ತಿತಾಃ ।
ಶಕ್ಯಾ ವಿಷಹತಾ ಕರ್ತುಂ ಪುರುಷೇಣ ಕೃತಾತ್ಮನಾ ॥೨೫॥

ತನ್ನ ಮನೋರಥವನ್ನು ಸಾಧಿಸಿಕೊಳ್ಳಲು ದೃಢಚಿತ್ತನಾದ ಮನು

ಷ್ಯನು–ಧರ್ಮಕ್ಕೆ ವಿರುದ್ಧವಾಗಿ ನಡೆಯುವ ಸಹನೆಯನ್ನು ಹೊಂದಿದ್ದರೆ ರಾಜ್ಯಪ್ರಾಪ್ತಿಗಾಗಿ ಇವೇ ಅಲ್ಲದೇ ವಂಚನಾಯುಕ್ತವಾದ ಇನ್ನೂ ಅನೇಕ ಮಾರ್ಗಗಳು ವಿದ್ವಾಂಸರಿಂದ ನಿಶ್ಚಯಿಸಲ್ಪಟ್ಟಿವೆ. ನಿನಗೆ ಇಚ್ಛೆಯಿರುವುದಾದರೆ ಅಂತಹ ಮಾರ್ಗವನ್ನೇ ನೀನೂ ಅನುಸರಿಸಬಹುದು."

೧೦೫ನೆಯ ಅಧ್ಯಾಯವು ಮುಗಿಯಿತು.

೧೦೬ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಕಾಲಕವೃಕ್ಷೀಯನು ಕೋಸಲರಾಜನಿಗೆ ವಿದೇಹರಾಜನನ್ನು ಭೇಟಿಮಾಡಿಸಿದುದು : ವಿದೇಹರಾಜನು ಕೋಸಲರಾಜನನ್ನು ತನ್ನ ಅಳಿಯನನ್ನಾಗಿ ಮಾಡಿಕೊಂಡುದು

ಯುಧಿಷ್ಠಿರ! ಕೋಸಲರಾಜನು ಹೇಳುತ್ತಾನೆ :

ನ ನಿಕೃತ್ಯಾ ನ ದಮ್ಭೇನ ಬ್ರಹ್ಮನ್ನಿಚ್ಛಾಮಿ ಜೀವಿತುಮ್ ।
ನಾಧರ್ಮಯುಕ್ತಾನಿಚ್ಛೇಯಮರ್ಥಾನ್ಸುಮಹತೋಽಪ್ಯಹಮ್ ॥೧॥

"ಬ್ರಾಹ್ಮಣೋತ್ತಮರೇ! ನಾನು ವಂಚನೆಯನ್ನೂ ಮತ್ತು ದಂಭವನ್ನೂ ಆಶ್ರಯಿಸಿ ಜೀವಿಸಲು ಇಚ್ಛಿಸುವುದಿಲ್ಲ. ಅಧರ್ಮದ ಸಹಯೋಗದಿಂದ ನನಗೆ ಮಹಾಸಂಪತ್ತೇ ಪ್ರಾಪ್ತವಾಗುವುದಾಗಿದ್ದರೂ ಅದನ್ನು ನಾನು ಅಪೇಕ್ಷಿಸುವುದಿಲ್ಲ.

ಪುರಸ್ತಾದೇವ ಭಗವನ್ಮಯ್ಯೈತದಪವರ್ಜಿತಮ್ ।
ಯೇನ ಮಾಂ ನಾಭಿಶಙ್ಕೇತ ಯೇನ ಕೃತ್ಸ್ನಂ ಹಿತಂ ಭವೇತ್ ॥೨॥

ಪೂಜ್ಯರೇ! ನಾನು ಬಹಳ ಹಿಂದೆಯೇ ಈ ವಿಧವಾದ ಎಲ್ಲ ದುರ್ಗುಣಗಳನ್ನೂ ಪರಿತ್ಯಜಿಸಿದ್ದೇನೆ. ಯಾವ ರೀತಿಯಲ್ಲಿ ಇರುವುದರಿಂದ ನನ್ನ ಗುಣಗಳ ವಿಷಯದಲ್ಲಿ ಯಾರೂ ಸಂದೇಹಪಡುವುದಿಲ್ಲವೋ ಮತ್ತು ಯಾವುದರಿಂದ ಎಲ್ಲರಿಗೂ ಸಂಪೂರ್ಣವಾಗಿ ಹಿತವೇ ಉಂಟಾಗುವುದೋ–ಅದನ್ನು ಹೇಳಿರಿ.

ಆನೃಶಂಸ್ಯೇನ ಧರ್ಮೇಣ ಲೋಕೇ ಹ್ಯಸ್ಮಿಞ್ಜಿಜೀವಿಷುಃ ।
ನಾಹಮೇತದಲಂ ಕರ್ತುಂ ನೈತತ್ತ್ವಯ್ಯುಪಪದ್ಯತೇ ॥೩॥

ದಯಾ-ಧರ್ಮಗಳನ್ನೇ ಆಶ್ರಯಿಸಿ ಈ ಲೋಕದಲ್ಲಿ ಜೀವಿಸಿರಲು ಅಪೇಕ್ಷಿಸುತ್ತಿರುವ ನಾನು ನೀವು ಉಪದೇಶಿಸುತ್ತಿರುವ ವಂಚನೆಯ ಮಾರ್ಗ ವನ್ನು ಅನುಸರಿಸಲು ತಕ್ಕವನಾಗಿಲ್ಲ. ಇಂತಹ ಅಧರ್ಮಮಾರ್ಗವನ್ನು ಉಪದೇಶಿಸುವುದೂ ನಿಮ್ಮಂತಹ ಜ್ಞಾನಿಗಳಿಗೆ ತಕ್ಕುದಲ್ಲ."

ಕಾಲಕವೃಕ್ಷೀಯಮುನಿಯು ಹೇಳುತ್ತಾನೆ :

"ರಾಜಕುಮಾರ! ನೀನು ನಿನ್ನ ಗುಣಸಂಪನ್ನತೆಗೆ ಅನುರೂಪವಾಗಿಯೇ ಮಾತನಾಡುತ್ತಿರುವೆ. ಧಾರ್ಮಿಕಸ್ವಭಾವವನ್ನು ಹೊಂದಿರುವೆ. ಬುದ್ಧಿಯಿಂದಲೂ ಅನೇಕವಿಷಯಗಳನ್ನು ತಿಳಿದುಕೊಂಡಿರುವೆ.

ನೀನು ಮತ್ತು ವಿದೇಹರಾಜ ಈ ಇಬ್ಬರ ಹಿತಾರ್ಥವಾಗಿ ನಾನೀಗಲೇ ಪ್ರಯತ್ನಮಾಡುತ್ತೇನೆ. ನಿಮ್ಮಿಬ್ಬರ ನಡುವೆ ಶಾಶ್ವತವಾದ ಮತ್ತು ಅಪಾಯರಹಿತವಾದ (ಬಿಟ್ಟುಹೋಗದ) ಸಂಬಂಧವನ್ನು ಕಲ್ಪಿಸುತ್ತೇನೆ. ನೀನು ಶ್ರೇಷ್ಠವಾದ ಕುಲದಲ್ಲಿ ಹುಟ್ಟಿರುವೆ ; ದಯಾಳುವಾಗಿರುವೆ ; ಅನೇಕ ಶಾಸ್ತ್ರಗಳನ್ನು ತಿಳಿದುಕೊಂಡಿರುವೆ ; ರಾಜ್ಯವ್ಯವಹಾರಗಳಲ್ಲಿ ಮಹಾಕುಶಲ ನಾಗಿರುವೆ. ನಿನ್ನಂತಹ ಸಕಲಸದ್ಗುಣಸಂಪನ್ನನನ್ನು ಯಾರು ತಾನೇ ಅಮಾತ್ಯನನ್ನಾಗಿ ಮಾಡಿಕೊಳ್ಳುವುದಿಲ್ಲ? ನೀನು ಈಗ ರಾಜ್ಯಭ್ರಷ್ಟನಾಗಿರುವೆ. ದೊಡ್ಡದಾದ ಆಪತ್ತಿನಲ್ಲಿ ಸಿಕ್ಕಿಕೊಂಡಿರುವೆ. ಆದರೂ ನೀನು ದಯಾಪೂರ್ಣವಾದ (ಹೀನವಲ್ಲದ) ವೃತ್ತಿಯಿಂದಲೇ ಜೀವನವನ್ನು ನಿರ್ವಹಿ ಸಲು ಇಚ್ಛಿಸುತ್ತಿರುವೆ. ಇಷ್ಟು ಕಷ್ಟಗಳು ಒದಗಿಬಂದಿದ್ದರೂ ನಿನ್ನ ಮನಸ್ಸಿನಲ್ಲಿ ಕೋಪಾಸೂಯೆಗಳ ಲೇಶವೂ ಅವಿರ್ಭಾವವಾಗಿರುವುದಿಲ್ಲ. ಸತ್ಯನಿಷ್ಠನಾದ ವಿದೇಹರಾಜನು ನನ್ನ ಆಶ್ರಮಕ್ಕೆ ಬರುವವನಿದ್ದಾನೆ. ಅವನು ನನ್ನ ಆಶ್ರಮಕ್ಕೆ ಬಂದಾಗ ಅವನಿಗೆ ನಾನು ಯಾವ ಆಜ್ಞೆಯನ್ನು ಮಾಡುವೆನೋ–ಆ ನನ್ನ ಆಜ್ಞೆಯಂತೆಯೇ ನಿಸ್ಸಂದೇಹವಾಗಿ ಅವನು ನಡೆದು ಕೊಳ್ಳುತ್ತಾನೆ"–ಹೀಗೆಂಬುದಾಗಿ ಕಾಲಕವೃಕ್ಷೀಯನು ಕ್ಷೇಮದರ್ಶಿ ರಾಜನಿಗೆ ಹೇಳಿ ವಿದೇಹರಾಜನನ್ನು ಆಶ್ರಮಕ್ಕೆ ಕರೆಯಿಸಿ ಅವನೊಡನೆ ಹೇಳಿದನು :

"ವಿದೇಹರಾಜ! ಈ ಕ್ಷೇಮದರ್ಶಿಯು ರಾಜಕುಲದಲ್ಲಿ ಹುಟ್ಟಿದವನು. ಇವನ ಆಂತರಿಕವ್ಯವಹಾರಗಳೆಲ್ಲವೂ ನನಗೆ ತಿಳಿದಿವೆ. ಇವನ ಹೃದಯವು ಕನ್ನಡಿಯಂತೆ ಶುದ್ಧವಾಗಿಯೂ–ಶರಚ್ಚಂದ್ರನಂತೆ ಉಜ್ಜ್ವಲವಾಗಿಯೂ ಇದೆ. ಇವನನ್ನು ನಾನು ಅನೇಕಪ್ರಕಾರವಾಗಿ ಪರೀಕ್ಷಿಸಿದ್ದೇನೆ. ಇವನಲ್ಲಿ ಯಾವ ವಿಧವಾದ ಪಾಪವಾಗಲೀ–ದೋಷವಾಗಲೀ ಇರುವುದಿಲ್ಲ. ಆದುದರಿಂದ ಅವಶ್ಯವಾಗಿ ಅವನೊಡನೆ ನಿನಗೆ ಸಂಧಿಯಾಗಬೇಕು. ನನ್ನಲ್ಲಿ ವಿಶ್ವಾಸ ವನ್ನಿಟ್ಟಿರುವಂತೆಯೇ ನೀನು ಇವನಲ್ಲಿಯೂ ವಿಶ್ವಾಸವನ್ನಿಡಬೇಕು. ಮಂತ್ರಿಯಿಂದ ವಿಹೀನನಾದ ರಾಜನು ಮೂರು ದಿವಸಗಳ ಮಟ್ಟಿಗಾದರೂ ರಾಜ್ಯಭಾರಮಾಡಲಾರನು. ಅಮಾತ್ಯನು ಶೂರನೂ ಆಗಿರಬೇಕು ; ಬುದ್ಧಿ ಸಂಪನ್ನನೂ ಆಗಿರಬೇಕು. ಶಕ್ತಿ ಮತ್ತು ಬುದ್ಧಿಗಳಿಂದಲೇ ಇಹಲೋಕ-ಪರಲೋಕಗಳೆರಡೂ ಜಯಿಸಲ್ಪಡುತ್ತವೆ. ಐಹಿಕಾಮುಷ್ಮಿಕಲೋಕಗಳ ಸಿದ್ಧಿಯೇ ರಾಜ್ಯದ ಮುಖ್ಯಪ್ರಯೋಜನವಾಗಿದೆ. ಧರ್ಮಾತ್ಮರಾದ ರಾಜರಿಗೆ ಶಕ್ತಿಯಿಂದಲೂ–ಬುದ್ಧಿಯಿಂದಲೂ ಸಂಪನ್ನರಾದ ಅಮಾತ್ಯರ ಆಶ್ರಯವನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲ. ಈ ಕ್ಷೇಮದರ್ಶಿಯು ಮಹಾತ್ಮನು ; ರಾಜಪುತ್ರನು ; ಸತ್ಪುರುಷರ ಮಾರ್ಗವನ್ನೇ ಆಶ್ರಯಿಸಿರತಕ್ಕವನು. ನೀನು ಧರ್ಮವನ್ನೇ ಪ್ರಧಾನವನ್ನಾಗಿಟ್ಟುಕೊಂಡು ಇವನನ್ನು ಸಮ್ಮಾನಪೂರ್ವಕವಾಗಿ ನಿಯಮಿಸಿಕೊಂಡುದೇ ಆದರೆ–ನಿನ್ನಿಂದ ಸಮ್ಮಾನಿತನಾದ ಈ ರಾಜನು ನಿನ್ನ ಶತ್ರುಗಳ ಮಹಾಸಮುದಾಯಗಳನ್ನೂ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾನೆ. ಒಂದು ವೇಳೆ ಇವನು ಪಿತೃ-ಪಿತಾಮಹರ ರಾಜ್ಯದ ಸಲುವಾಗಿ ಯುದ್ಧದಲ್ಲಿ ನಿನ್ನನ್ನು ಗೆಲ್ಲುವ ಇಚ್ಛೆಯಿಂದ ನಿನ್ನೊಡನೆ ಯುದ್ಧವನ್ನೇ ಮಾಡಿದರೂ–ಅದನ್ನವನು ಸ್ವಧರ್ಮವಾದ ಕ್ಷತ್ರಿಯಧರ್ಮಾನುಸಾರ ವಾಗಿಯೇ ಮಾಡಿದಂತಾಗುತ್ತದೆ. ಯುದ್ಧಕ್ಕೆ ಬಂದವರನ್ನು ಗೆದ್ದೇ ಗೆಲ್ಲುವೆ ನೆಂಬ ವ್ರತವನ್ನು ತೊಟ್ಟಿರುವ ನೀನಾದರೂ ಇವನನ್ನು ಎದುರಿಸಿ ಯುದ್ಧ ಮಾಡುವುದರಲ್ಲಿ ಸಂದೇಹವಿಲ್ಲ. ಆದುದರಿಂದ ನನ್ನ ಆಜ್ಞಾನುಸಾರವಾಗಿ ಇವನ ಹಿತಸಾಧನೆಯಲ್ಲಿ ತತ್ಪರನಾಗು. ಯುದ್ಧವನ್ನು ಮಾಡದೆಯೇ ನೀನು ಇವನನ್ನು ನಿನ್ನ ವಶವರ್ತಿಯನ್ನಾಗಿ ಅಂಗೀಕರಿಸು. ಅನುಚಿತವಾದ ಲೋಭ ವನ್ನು ಪರಿತ್ಯಾಗಮಾಡಿ ಧರ್ಮದ ಮೇಲೆ ದೃಷ್ಟಿಯಿಡು. ಕಾಮದಿಂದಾಗಲೀ–

ದ್ರೋಹದಿಂದಾಗಲೀ ನೀನು ಸ್ವಧರ್ಮವನ್ನು ತ್ಯಜಿಸುವುದು ಸರ್ವಥಾ ಯೋಗ್ಯವಲ್ಲ.

ನೈವ ನಿತ್ಯಂ ಜಯಸ್ತಾತ ನೈವ ನಿತ್ಯಂ ಪರಾಜಯಃ ।
ತಸ್ಮಾದ್ಭೋಜಯಿತವ್ಯಶ್ಚ ಭೋಕ್ತವ್ಯಶ್ಚ ಪರೋ ಜನಃ ॥೧೮॥

ಯಾರಿಗೇ ಆಗಲಿ, ನಿರಂತರವಾಗಿ ಜಯವೂ ಲಭಿಸುವುದಿಲ್ಲ. ನಿರಂತರವಾಗಿ ಪರಾಜಯವೂ ಆಗುವುದಿಲ್ಲ. ಯಾವ ರೀತಿಯಲ್ಲಿ ರಾಜನು ಇತರರನ್ನು ಜಯಿಸಿ ಅವರ ಸಂಪತ್ತನ್ನು ಉಪಭೋಗಿಸುವನೋ–ಅದೇ ರೀತಿಯಲ್ಲಿ ರಾಜನು ಇತರರಿಗೂ ತನ್ನ ಸಂಪತ್ತನ್ನು ಹಂಚಿಕೊಡಬೇಕು.

ಆತ್ಮನ್ಯಪಿ ಚ ಸಂದೃಶ್ಯಾವುಭೌ ಜಯಪರಾಜಯೌ ।
ನಿಃಶೇಷಕಾರಿಣಾಂ ತಾತ ನಿಃಶೇಷಕರಣಾದ್ಭಯಮ್ ॥೧೯॥

ನಿನ್ನಲ್ಲಿಯೇ ನೀನು ಜಯಾಪಜಯಗಳೆರಡನ್ನೂ ಕಂಡುಕೊಳ್ಳಬೇಕು. (ಜಯಾಪಜಯಗಳ ಪರಿಣಾಮವನ್ನು ಕಂಡುಕೊಳ್ಳಬೇಕು.) ಯಾರು ಇತರರ ಸಂಪತ್ತನ್ನು ನಿಃಶೇಷವಾಗಿ ಕೊಳ್ಳೆಹೊಡೆಯುತ್ತಾರೆಯೋ ಅವರಿಗೆ ಅಂತಹ ಸರ್ವಸ್ವಾಪಹರಣದಿಂದಲೇ ಭಯವಿರುತ್ತದೆ. (ಸರ್ವಸ್ವವನ್ನೂ ಕಳೆದು ಕೊಂಡಿರುವ ಮನುಷ್ಯನಿಂದಲೇ ಭಯವಿರುತ್ತದೆ.)"

ಕಾಲಕವೃಕ್ಷೀಯನು ಹೀಗೆ ಹೇಳಿದನಂತರ ವಿದೇಹರಾಜನು ಪೂಜ ನೀಯನಾದ, ಬ್ರಾಹ್ಮಣಶಿರೋಮಣಿಯಾದ ಕಾಲಕವೃಕ್ಷೀಯನನ್ನು ಸಂಪೂಜಿಸಿ, ಯಥೋಕ್ತವಾಗಿ ಸತ್ಕಾರಗಳನ್ನು ಮಾಡಿ, ಆತನ ಮಾತನ್ನು ಅನುಮೋದಿಸುತ್ತಾ ಹೇಳಿದನು :

"ಬ್ರಾಹ್ಮಣೋತ್ತಮರೇ! ಮಹಾಪ್ರಾಜ್ಞರಾದವರು ಯಾವ ಮಾತನ್ನು ಹೇಳುವರೋ, ಬಹುಶ್ರುತರಾದವರು ಯಾವ ಮಾತನ್ನು ಹೇಳುವರೋ, ಇತರರಿಗೂ ಶ್ರೇಯಸ್ಸನ್ನು ಬಯಸುವವರು ಯಾವ ಮಾತನ್ನು ಹೇಳು ವರೋ–ಅದೇ ಮಾತುಗಳನ್ನೇ ನೀವೂ ಹೇಳಿರುವಿರಿ. ಈ ನಿಮ್ಮ ಮಾತುಗಳು ನಾವಿಬ್ಬರೂ ಪರಿಪಾಲಿಸಲು ಯೋಗ್ಯವಾಗಿವೆ. ನೀವು ಯಾವ-ಯಾವ ಮಾತನ್ನು ಹೇಳಿರುವಿರೋ ಆ ನಿಮ್ಮ ಮಾತಿನಂತೆಯೇ ನಡೆದು

ಕೊಳ್ಳುತ್ತೇನೆ. ಈ ನಿಮ್ಮ ಮಾತುಗಳು ನನಗೆ ಪರಮಶ್ರೇಯಃಸಾಧಕಗಳಾದ ಮಾತುಗಳಾಗಿವೆ. ಈ ವಿಷಯದಲ್ಲಿ ನಾನು ಪುನಃ ವಿಚಾರಮಾಡುವ ಅಗತ್ಯವೇ ಇಲ್ಲ."–ವೈದೇಹನು ಹೀಗೆ ಕಾಲಕವೃಕ್ಷೀಯಮುನಿಯೊಡನೆ ಹೇಳಿ ಕ್ಷೇಮದರ್ಶಿಯನ್ನು ಹತ್ತಿರಕ್ಕೆ ಕರೆದು ಹೇಳಿದನು :



ಧರ್ಮತೋ ನೀತಿತಶ್ಚೈವ ಲೋಕಶ್ಚ ವಿಜಿತೋ ಮಯಾ ।
ಅಹಂ ತ್ವಯಾ ಚಾತ್ಮಗುಣೈರ್ಜಿತಃ ಪಾರ್ಥಿವಸತ್ತಮ ।
ಆತ್ಮಾನಮನವಜ್ಞಾಯ ಜಿತವದ್ವರ್ತತಾಂ ಭವಾನ್ ॥೨೪॥

"ಪಾರ್ಥಿವಶ್ರೇಷ್ಠನೇ! ನಾನು ಧರ್ಮವನ್ನೂ–ನೀತಿಯನ್ನೂ ಆಶ್ರಯಿಸಿ ಈ ಲೋಕವನ್ನು ಜಯಿಸಿರುವೆನು. ಆದರೆ ಈಗ ನೀನು ನಿನ್ನ

ಸದ್ಗುಣಗಳಿಂದಲೇ ನನ್ನನ್ನು ಜಯಿಸಿರುವೆ. ಆದುದರಿಂದ ಯುದ್ಧದಲ್ಲಿ ಪರಾಜಿತನಾದುದಕ್ಕಾಗಿ ಇನ್ನು ಮುಂದೆ ನಿನ್ನನ್ನೇ ನೀನು ಅವಹೇಳನಮಾಡಿ ಕೊಳ್ಳದೇ ವಿಜಯಗಳಿಸಿರುವ ವೀರನಂತೆಯೇ ವ್ಯವಹರಿಸು.

ನಾವಮನ್ಯಾಮಿ ತೇ ಬುದ್ಧಿಂ ನಾವಮನ್ಯೇ ಚ ಪೌರುಷಮ್ ।
ನಾವಮನ್ಯೇ ಜಯಾಮೀತಿ ಜಿತವದ್ವರ್ತತಾಂ ಭವಾನ್ ॥೨೫॥
ಯಥಾವತ್ಪೂಜಿತೋ ರಾಜನ್ಗೃಹಂ ಗನ್ತಾಸಿ ಮೇ ಭೃಶಮ್ ॥೨೬॥

ನಾನು ನಿನ್ನ ಬುದ್ಧಿಯನ್ನು ತಿರಸ್ಕಾರಮಾಡುವುದಿಲ್ಲ. ನಿನ್ನ ಪೌರುಷ ವನ್ನೂ ಅವಹೇಳನಮಾಡುವುದಿಲ್ಲ. ನಾನು ಜಯಶಾಲಿಯಾಗಿರುವೆನೆಂದು ಭಾವಿಸಿಕೊಂಡು ನಿನ್ನನ್ನು ಅವಮಾನಮಾಡುವುದಿಲ್ಲ. ಆದುದರಿಂದ ನೀನು ಇನ್ನು ಮುಂದೆ ಜಯಶಾಲಿಯಾದವನಂತೆಯೇ ವ್ಯವಹರಿಸು. ನನ್ನಿಂದ ಯಥಾವತ್ತಾಗಿ ಗೌರವಿಸಲ್ಪಡುವ ನೀನು ಈಗಲೇ ನಮ್ಮ ಮನೆಗೆ ಆಗಮಿಸು." ಹೀಗೆ ವೈದೇಹನು ಕೌಸಲ್ಯನಿಗೆ ಹೇಳಿದನಂತರ ಇಬ್ಬರೂ ಪರಸ್ಪರವಾಗಿ ವಿಶ್ವಾಸವನ್ನು ಹೊಂದಿ ವಿಪ್ರಶ್ರೇಷ್ಠನಾದ ಕಾಲಕವೃಕ್ಷೀಯನನ್ನು ಅಭಿವಂದಿಸಿ ಅರಮನೆಗೆ ಹೊರಟುಹೋದರು.

ಬಳಿಕ ವೈದೇಹನು ಕೋಸಲರಾಜನನ್ನು ಆದರಪೂರ್ವಕವಾಗಿ ಅರಮನೆಗೆ ಕರೆದುಕೊಂಡು ಹೋಗಿ ಪೂಜಾರ್ಹನಾದ ಕ್ಷೇಮದರ್ಶಿಯನ್ನು ಪಾದ್ಯಾರ್ಘ್ಯ-ಮಧುಪರ್ಕಗಳಿಂದ ಗೌರವಿಸಿದನು. ವೈದೇಹನು ಶುಭ ಮುಹೂರ್ತದಲ್ಲಿ ತನ್ನ ಮಗಳನ್ನು ಕೌಸಲ್ಯನಿಗೆ ಮದುವೆಮಾಡಿಕೊಟ್ಟು ವಿಧ-ವಿಧವಾದ ರತ್ನಗಳನ್ನು ಬಳುವಳಿಯಾಗಿ ಕೊಟ್ಟನು.

ಯುಧಿಷ್ಠಿರ! ಇವೇ ರಾಜರ ಶ್ರೇಷ್ಠವಾದ ಧರ್ಮಗಳಾಗಿವೆ. ಜಯಾ ಪಜಯಗಳು ಶಾಶ್ವತವಲ್ಲ."

೧೦೬ನೆಯ ಅಧ್ಯಾಯವು ಮುಗಿಯಿತು.

೧೦೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಗಣತಂತ್ರರಾಜ್ಯದ ವರ್ಣನೆ ಮತ್ತು ಅದರ ರೀತಿ ನೀತಿಗಳು

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

"ಭರತನಂದನನೇ! ನೀನು ಇದುವರೆಗೆ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-

ಶೂದ್ರರ ಧರ್ಮಾಚಾರಗಳು, ಅವರ ಧನ ಮತ್ತು ಜೀವಿಕೆಯ ಉಪಾಯಗಳು, ವರ್ಣಾಶ್ರಮಧರ್ಮಾನುಷ್ಠಾನಗಳ ಫಲಗಳು, ರಾಜರ ಧನ-ಕೋಶ ಸಂಗ್ರಹಗಳು, ಮಂತ್ರಿಗಳ ಗುಣ ಮತ್ತು ವ್ಯವಹಾರಗಳು, ಪ್ರಜಾವರ್ಗದ ಔನ್ನತ್ಯ, ಸಂಧಿ-ವಿಗ್ರಹಗಳೇ ಮೊದಲಾದ ಆರು ಗುಣಗಳ ಪ್ರಯೋಗ, ಸೈನ್ಯದ ವ್ಯವಹಾರ, ದುಷ್ಟರನ್ನು ಕಂಡುಹಿಡಿಯುವ ಬಗೆ, ಸತ್ಪುರುಷರ ಲಕ್ಷಣ, ಸಮಾನರು, ಹೀನರು ಮತ್ತು ಅಧಿಕರು–ಇವರೆಲ್ಲರ ಲಕ್ಷಣ, ಮಧ್ಯಮವರ್ಗದ ಜನರನ್ನು ಸಂತುಷ್ಟಿಗೊಳಿಸಲು ಸ್ನೇಹಪರನಾದ ರಾಜನ ಕರ್ತವ್ಯಗಳು, ದುರ್ಬಲರನ್ನು ರಕ್ಷಸುವ ಬಗೆ, ಅವರ ಜೀವನವ್ಯವಸ್ಥೆಯನ್ನು ಕಲ್ಪಿಸುವುದರ ಆವಶ್ಯಕತೆ–ಈ ಎಲ್ಲ ವಿಷಯಗಳನ್ನೂ ದೇಶಾಚಾರಗಳಿಗೂ ಮತ್ತು ಶಾಸ್ತ್ರಗಳಿಗೂ ಅನುಸಾರವಾಗಿ ಸಂಕ್ಷೇಪವಾಗಿ ಹೇಳಿರುವೆ. ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಪಿತಾಮಹ! ವಿಜಯಾಭಿಲಾಷಿಯಾದ ರಾಜನ ವ್ಯವಹಾರಗಳನ್ನು ಕುರಿತೂ ನೀನು ಹೇಳಿರುವೆ. ನಾನೀಗ ಗಣಗಳ (ಗಣತಂತ್ರರಾಜ್ಯಗಳ) ಆಚರಣೆಯನ್ನು ಕೇಳಲು ಇಚ್ಛಿಸಿದ್ದೇನೆ.

ಯಥಾ ಗಣಾಃ ಪ್ರವರ್ಧನ್ತೇ ನ ಭಿದ್ಯನ್ತೇ ಚ ಭಾರತ ।
ಅರೀಂಶ್ಚ ವಿಜಿಗೀಷನ್ತೇ ಸುಹೃದಃ ಪ್ರಾಪ್ನುವನ್ತಿ ಚ ॥೭॥

ಗಣತಂತ್ರರಾಜ್ಯಗಳ ಜನರು ಹೇಗೆ ಔನ್ನತ್ಯವನ್ನು ಹೊಂದುತ್ತಾರೆ? ಅವರಲ್ಲಿಯೇ ಪರಸ್ಪರವಾಗಿ ಮತಭೇದಗಳು ಹೇಗೆ ಉಂಟಾಗುವುದಿಲ್ಲ? ಅವರು ಶತ್ರುಗಳನ್ನು ಹೇಗೆ ಜಯಿಸುತ್ತಾರೆ? ಸುಹೃದರನ್ನು ಹೇಗೆ ಪಡೆದುಕೊಳ್ಳುತ್ತಾರೆ?

ಭೇದಮೂಲೋ ವಿನಾಶೋ ಹಿ ಗಣಾನಾಮುಪಲಕ್ಷಯೇ ।
ಮನ್ತ್ರಸಂವರಣಂ ದುಃಖಂ ಬಹೂನಾಮಿತಿ ಮೇ ಮತಿಃ ॥೮॥

ಸಂಘಬದ್ಧರಾಜ್ಯಗಳ ವಿನಾಶಕ್ಕೆ ಮೂಲಕಾರಣವು ಪರಸ್ಪರವಾದ ಅನೈಕ್ಯತೆಯೇ ಆಗಿದೆ. ಅನೇಕಜನರಿರುವ ಗಣತಂತ್ರಸಂಘಗಳಲ್ಲಿ ಮಂತ್ರಾಲೋಚನೆಗಳನ್ನು ಗುಪ್ತವಾಗಿಡುವುದು ಕಷ್ಟಸಾಧ್ಯವೆಂದೇ ನನ್ನ ಅಭಿಮತವಾಗಿದೆ. ಯಾವ ರೀತಿಯಲ್ಲಿದ್ದರೆ ರಾಜ್ಯಸಂಘಗಳು ಒಡೆದು

ಹೋಗುವುದಿಲ್ಲವೆಂಬ ವಿಷಯವನ್ನು ನಿನ್ನಿಂದ ಆಮೂಲಾಗ್ರವಾಗಿ ತಿಳಿದು ಕೊಳ್ಳಬೇಕೆಂಬ ಇಚ್ಛೆಯಿಂದಿರುತ್ತೇನೆ. ಈ ವಿಷಯವನ್ನು ವಿವರವಾಗಿ ತಿಳಿಸು."

ಭೀಷ್ಮನು ಉತ್ತರಿಸುತ್ತಾನೆ :

ಗಣಾನಾಂ ಚ ಕುಲಾನಾಂ ಚ ರಾಜ್ಞಾಂ ಭರತಸತ್ತಮ ।
ವೈರಸಂದೀಪನಾವೇತೌ ಲೋಭಾಮರ್ಷೌ ನರಾಧಿಪ ॥೧೦॥

"ಭರತಶ್ರೇಷ್ಠನೇ! ನರೇಶ್ವರನೇ! ಗಣಗಣಗಳಲ್ಲಿ, ಕುಲಗಳಲ್ಲಿ ಮತ್ತು ರಾಜರಲ್ಲಿ ವೈರಾಗ್ನಿಯನ್ನು ಪ್ರಜ್ವಲಗೊಳಿಸುವ ಸಾಧನಗಳೆಂದರೆ–ಲೋಭ ಮತ್ತು ಅಮರ್ಷಗಳೇ ಆಗಿವೆ.

*** ಲೋಭಮೇಕೋ ಹಿ ವೃಣುತೇ ತತೋಽಮರ್ಷಮನನ್ತರಮ್ ।**
ತೌ ಕ್ಷಯವ್ಯಯಸಂಯುಕ್ತಾವನ್ಯೋನ್ಯಂ ಚ ವಿನಾಶಿನೌ ॥೧೧॥

ಮೊದಲೊಬ್ಬನು ಲೋಭವನ್ನು ವರಣಮಾಡುತ್ತಾನೆ. (ಲೋಭ ವಶನಾಗಿ ಮತ್ತೊಬ್ಬರ ಧನವನ್ನು ಅಪಹರಿಸಲು ಯತ್ನಿಸುತ್ತಾನೆ.) ಆ ಲೋಭಿಯನ್ನು ಕಂಡೊಡನೆಯೇ ಮತ್ತೊಬ್ಬನ ಮನಸ್ಸಿನಲ್ಲಿ ಅಸಹನೆಯು ಹುಟ್ಟುತ್ತದೆ. ಲೋಭ ಮತ್ತು ಅಸಹನೆಗಳಿಂದ ಪ್ರಭಾವಿತರಾದ ವ್ಯಕ್ತಿ ಸಮುದಾಯಗಳು ಅನ್ಯೋನ್ಯವಾದ ಸಂಘರ್ಷಣೆಯಿಂದ ಜನಕ್ಷಯ ಮತ್ತು ಧನವ್ಯಯಗಳಿಂದ ಕೂಡಿದುವುಗಳಾಗಿ ಕಟ್ಟಕಡೆಗೆ ಎರಡೂ ವಿನಾಶಹೊಂದು ತ್ತವೆ. (ರಾಜನು ಲೋಭಿಯಾಗುತ್ತಾನೆ. ಪ್ರಜೆಗಳಿಗೆ ತನ್ನ ಐಶ್ವರ್ಯವನ್ನು ಕೊಡುವುದಿಲ್ಲ. ಜನಗಳ ಸಮೂಹವು ಅದನ್ನು ಸಹಿಸುವುದಿಲ್ಲ. ಪರಸ್ಪರ ಘರ್ಷಣೆಯಾಗುತ್ತದೆ. ಜನ-ಧನಗಳೆರಡೂ ವಿನಾಶಹೊಂದುತ್ತವೆ. ಕಡೆಗೆ ರಾಜನೂ ವಿನಾಶಹೊಂದುತ್ತಾನೆ. ಪ್ರಜೆಗಳೂ ವಿನಾಶಹೊಂದುತ್ತಾರೆ.)

ಚಾರಮನ್ತ್ರಬಲಾದಾನೈಃ ಸಾಮದಾನವಿಭೇದನೈಃ ।
ಕ್ಷಯವ್ಯಯಭಯೋಪಾಯೈಃ ಪ್ರಕರ್ಷನ್ತೀತರೇತರಮ್ ॥೧೨॥

ರಾಜನೂ ಮತ್ತು ಶೂರಜನರ ಗುಂಪುಗಳೂ ಚಾರರ ಮೂಲಕವಾಗಿ

---

* ವ್ಯಾಖ್ಯಾನಕಾರರು ಏಕೋ ರಾಜಾ ಲೋಭಂ ವೃಣುತೇ । ಗಣಸ್ತದಾ ಅಸ್ಮಭ್ಯಂ ನ ದದಾತೀತಿ ಅಮರ್ಷಂ ವೃಣುತೇ ॥–ಎಂದು ವ್ಯಾಖ್ಯಾನಿಸಿದ್ದಾರೆ.

ಒಬ್ಬರು ಮತ್ತೊಬ್ಬರನ್ನು ಭೇದಿಸಲು ಪ್ರಯತ್ನಿಸುತ್ತಾರೆ. ಪರಸ್ಪರ ವಿನಾಶಕ್ಕಾಗಿ ಮಂತ್ರಾಲೋಚನೆಮಾಡುತ್ತಾರೆ. ಒಬ್ಬರು ಮತ್ತೊಬ್ಬರನ್ನು ಸದೆಬಡಿಯಲು ಸೈನ್ಯಸಂಗ್ರಹಮಾಡುತ್ತಾರೆ. ಸಾಮ-ದಾನ-ಭೇದೋಪಾಯಗಳನ್ನು ಬಳಸುತ್ತಾರೆ. ಪ್ರಜಾಕ್ಷಯ-ಧನಕ್ಷಯಾದಿ ಅನೇಕೋಪಾಯಗಳಿಂದ ಒಬ್ಬರು ಮತ್ತೊಬ್ಬರನ್ನು ದುರ್ಬಲಗೊಳಿಸುತ್ತಾರೆ.

ತತ್ರಾದಾನೇನ ಭಿದ್ಯನ್ತೇ ಗಣಾಃ ಸಂಘಾತವೃತ್ತಯಃ ।
ಭಿನ್ನಾ ವಿಮನಸಃ ಸರ್ವೇ ಗಚ್ಛನ್ತ್ಯರಿವಶಂ ಭಯಾತ್ ॥೧೩॥

ಸಾಂಘಿಕವಾಗಿ ಜೀವನವನ್ನು ನಿರ್ವಹಿಸುವ ಗಣರಾಜ್ಯದಲ್ಲಿಯೂ ಸೈನಿಕರಿಗೆ ಕಾಲಕ್ಕೆ ಸರಿಯಾಗಿ ಭೋಜನವನ್ನೂ–ಕಾಲಕ್ಕೆ ಸರಿಯಾಗಿ ವೇತನ ವನ್ನೂ ನೀಡದಿದ್ದರೆ ಸಂಘವು ಒಡೆದುಹೋಗುತ್ತದೆ. ಹೀಗೆ ಒಡೆದು ಹೋದ ನಂತರ ಸಂಘಜೀವನದಲ್ಲಿಯೇ ವಿಮನಸ್ಕರಾಗುವ ಅವರೆಲ್ಲರೂ ಭಯ ದಿಂದಾಗಿ ಶತ್ರುಗಳ ಅಧೀನರಾಗುತ್ತಾರೆ.

ಭೇದೇ ಗಣಾ ವಿನೇಶುರ್ಹಿ ಭಿನ್ನಾಸ್ತು ಸುಜಯಾಃ ಪರೈಃ ।
ತಸ್ಮಾತ್ಸಂಘಾತಯೋಗೇನ ಪ್ರಯತೇರನ್ಗಣಾಃ ಸದಾ ॥೧೪॥

ಪರಸ್ಪರವಾಗಿ ಕಲಹವುಂಟಾಗುವುದರಿಂದಲೇ ಗಣರಾಜ್ಯಗಳು ಒಡೆದು ಹೋಗುತ್ತವೆ. ಹಾಗೆ ಪರಸ್ಪರಕಲಹದಿಂದ ಒಡೆದುಹೋದ ಸಂಘರಾಜ್ಯ ಗಳನ್ನು ಶತ್ರುಗಳು ಬಹಳ ಬೇಗ ಆಕ್ರಮಿಸುತ್ತಾರೆ. ಆದುದರಿಂದ ಗಣಸಂಘ ಗಳು ಯಾವಾಗಲೂ ಸಂಘಟನೆಯಿಂದಲೇ (ಐಕಮತ್ಯದಿಂದಲೇ) ಕಾರ್ಯ ಮಾಡಬೇಕು.

ಅರ್ಥಾಶ್ಚೈವಾಧಿಗಮ್ಯನ್ತೇ ಸಂಘಾತಬಲಪೌರುಷೈಃ ।
ಬಾಹ್ಯಾಶ್ಚ ಮೈತ್ರೀಂ ಕುರ್ವನ್ತಿ ತೇಷು ಸಂಘಾತವೃತ್ತಿಷು ॥೧೫॥

ಯಾರು ಸಂಘದ ಬಲದಿಂದಲೂ ಮತ್ತು ಪೌರುಷದಿಂದಲೂ ಸಂಪನ್ನರಾಗಿರುವರೋ–ಅಂತಹವರು ಅನಾಯಾಸವಾಗಿ ಸಕಲಾಭೀಷ್ಟ ಗಳನ್ನೂ ಸಾಧಿಸಿಕೊಳ್ಳುತ್ತಾರೆ. ಸಾಂಘಿಕವಾಗಿ ಜೀವನವನ್ನು ನಿರ್ವಹಿಸುವವ ರೊಡನೆ ಸಂಘದಿಂದ ಹೊರಗಿರುವ ಜನರೂ ಮೈತ್ರಿಯನ್ನು ಬೆಳೆಸಿಕೊಳ್ಳು ತ್ತಾರೆ.

ಜ್ಞಾನವೃದ್ಧಾಃ ಪ್ರಶಂಸನ್ತಿ ಶುಶ್ರೂಷನ್ತಃ ಪರಸ್ಪರಮ್ ।
ವಿನಿವೃತ್ತಾಭಿಸಂಧಾನಾಃ ಸುಖಮೇಧನ್ತಿ ಸರ್ವಶಃ ॥೧೬॥

ಜ್ಞಾನವೃದ್ಧರಾದವರು ಗಣತಂತ್ರದ ವ್ಯವಸ್ಥೆಯನ್ನು ಪ್ರಶಂಸೆಮಾಡುತ್ತಾರೆ. ಸಂಘಬದ್ಧಜೀವಿಗಳು ಆಂತರಿಕವಾಗಿ ಯಾವ ವಿಧವಾದ ದುರ್ಭಾವನೆಗಳನ್ನೂ ಇಟ್ಟುಕೊಂಡಿರುವುದಿಲ್ಲ. ಸಂಘಜೀವಿಗಳು ಯಾವಾಗಲೂ ಉಪಕಾರ-ಪ್ರತ್ಯುಪಕಾರವನ್ನು ಮಾಡುತ್ತಾ ಒಬ್ಬರು ಮತ್ತೊಬ್ಬರ ಮಾತನ್ನು ಕೇಳುತ್ತಾ ಸರ್ವಪ್ರಕಾರದಿಂದಲೂ ಸುಖವಾಗಿರುತ್ತಾರೆ.

ಧರ್ಮಿಷ್ಠಾನ್ವ್ಯವಹಾರಾಂಶ್ಚ ಸ್ಥಾಪಯನ್ತಶ್ಚ ಶಾಸ್ತ್ರತಃ ।
ಯಥಾವತ್ಪ್ರತಿಪಶ್ಯನ್ತೋ ವಿವರ್ಧನ್ತೇ ಗಣೋತ್ತಮಾಃ ॥೧೭॥

ಗಣರಾಜ್ಯದಲ್ಲಿರುವ ಶ್ರೇಷ್ಠನಾಗರಿಕರು ಶಾಸ್ತ್ರಾನುಸಾರವಾದ ಮತ್ತು ಧರ್ಮಾನುಕೂಲವಾದ ವ್ಯವಹಾರಗಳನ್ನು ದೇಶದಲ್ಲಿ ಸ್ಥಾಪನೆಮಾಡುತ್ತಾರೆ. ಯಥೋಚಿತವಾದ ದೃಷ್ಟಿಯಿಂದ ಎಲ್ಲರನ್ನೂ ಕಾಣುವುದರಿಂದ ಉತ್ತಮವಾದ ಗಣಗಳು ಅಭಿವೃದ್ಧಿಹೊಂದುತ್ತವೆ.

ಪುತ್ರಾನ್ಭ್ರಾತೄನ್ನಿಗೃಹ್ಣನ್ತೋ ವಿನಯನ್ತಶ್ಚ ತಾನ್ಸದಾ ।
ವಿನೀತಾಂಶ್ಚ ಪ್ರಗೃಹ್ಣನ್ತೋ ವಿವರ್ಧನ್ತೇ ಗಣೋತ್ತಮಾಃ ॥೧೮॥

ಗಣರಾಜ್ಯದಲ್ಲಿನ ಶ್ರೇಷ್ಠಪುರುಷರು ತಮ್ಮ ಮಕ್ಕಳು-ತಮ್ಮಂದಿರು ತಪ್ಪುಮಾಡಿದರೂ ಯಾವ ವಿಧವಾದ ಪಕ್ಷಪಾತವೂ ಇಲ್ಲದಂತೆ ಶಿಕ್ಷಿಸುತ್ತಾ ಅವರನ್ನು ಒಳ್ಳೆಯ ಮಾರ್ಗಕ್ಕೆ ತರುತ್ತಾರೆ. ಅವರು ಒಳ್ಳೆಯ ಮಾರ್ಗವನ್ನು ಹಿಡಿದು ವಿನೀತರಾದನಂತರ ಅವರನ್ನು ಆದರದಿಂದ ಪ್ರತಿಗ್ರಹಿಸುತ್ತಾರೆ. ಆದುದರಿಂದ ಉತ್ತಮವಾದ ಗಣರಾಜ್ಯದಲ್ಲಿರುವ ಪ್ರಜೆಗಳೆಲ್ಲರೂ ಅಭಿವೃದ್ಧಿಹೊಂದುತ್ತಾರೆ.

ಚಾರಮನ್ತ್ರವಿಧಾನೇಷು ಕೋಶಸಂನಿಚಯೇಷು ಚ ।
ನಿತ್ಯಯುಕ್ತಾ ಮಹಾಬಾಹೋ ವರ್ಧನ್ತೇ ಸರ್ವತೋ ಗಣಾಃ ॥೧೯॥

ಮಹಾಬಾಹುವೇ! ಯುಧಿಷ್ಠಿರ! ಗಣರಾಜ್ಯದ ನಾಗರಿಕರು ಗುಪ್ತ ಚಾರರ ಅಥವಾ ದೂತರ ಕಾರ್ಯಮಾಡುವುದರಲ್ಲಿ, ರಾಜ್ಯದ ಹಿತಕ್ಕಾಗಿ

ಗುಪ್ತಮಂತ್ರಾಲೋಚನೆಗಳನ್ನು ಮಾಡುವುದರಲ್ಲಿ, ರಾಜ್ಯಾಡಳಿತದ ವಿಧಾನವನ್ನು ರೂಪಿಸುವುದರಲ್ಲಿ, ರಾಜ್ಯನಿರ್ವಹಣೆಗಾಗಿ ಧನವನ್ನು ಸಂಗ್ರಹಿಸುವುದರಲ್ಲಿ–ಸರ್ವದಾ ಉದ್ಯತರಾಗುತ್ತಾರೆ. ಆದುದರಿಂದಲೇ ಗಣತಂತ್ರದವರು ಸರ್ವಪ್ರಕಾರದಿಂದಲೂ ಔನ್ನತ್ಯವನ್ನು ಹೊಂದುತ್ತಾರೆ.

ಪ್ರಾಜ್ಞಾಞ್ಶೂರಾನ್ಮಹೋತ್ಸಾಹಾನ್ಕರ್ಮಸು ಸ್ಥಿರಪೌರುಷಾನ್ ।
ಮಾನಯನ್ತಃ ಸದಾ ಯುಕ್ತಾ ವಿವರ್ಧನ್ತೇ ಗಣಾ ನೃಪ ॥೨೦॥

ನರೇಶ್ವರ! ಸಂಘರಾಜ್ಯದ ಸದಸ್ಯರು ಬುದ್ಧಿವಂತರಾದವರನ್ನೂ, ಶೂರರನ್ನೂ, ಕಾರ್ಯಮಾಡುವುದರಲ್ಲಿ ಉತ್ಸಾಹವಿರುವವರನ್ನೂ, ಸ್ಥಿರ ವಾದ ಪರಾಕ್ರಮವಿರುವವರನ್ನೂ–ಸರ್ವಕಾಲದಲ್ಲಿಯೂ ಸಮ್ಮಾನಿಸುತ್ತಾ ರಾಜ್ಯದ ಉನ್ನತಿಗಾಗಿ ನಿರಂತರವಾಗಿ ಪ್ರಯತ್ನಶೀಲರಾಗಿರುತ್ತಾರೆ. ಈ ಕಾರಣದಿಂದ ಗಣತಂತ್ರರಾಜ್ಯದವರು ಬಹಳ ಬೇಗ ಅಭಿವೃದ್ಧಿಯನ್ನು ಹೊಂದುತ್ತಾರೆ.

ದ್ರವ್ಯವನ್ತಶ್ಚ ಶೂರಾಶ್ಚ ಶಸ್ತ್ರಜ್ಞಾಃ ಶಾಸ್ತ್ರಪಾರಗಾಃ ।
ಕೃಚ್ಛ್ರಾಸ್ವಾಪತ್ಸು ಸಮ್ಮೂಢಾನ್ಗಣಾಃ ಸನ್ತಾರಯನ್ತಿ ತೇ ॥೨೧॥

ಸಂಘರಾಜ್ಯದ ಎಲ್ಲ ನಾಗರಿಕರೂ ಧನವಂತರಾಗಿಯೂ, ಶೂರರಾಗಿಯೂ, ಶಸ್ತ್ರವಿದ್ಯೆಯನ್ನು ತಿಳಿದವರಾಗಿಯೂ, ಶಾಸ್ತ್ರಪಾರಂಗತರಾಗಿಯೂ ಇರುತ್ತಾರೆ. ಕಠಿಣವಾದ ವಿಪತ್ತಿನಿಂದ ಸಿಕ್ಕಿಹಾಕಿಕೊಂಡು ಮೋಹವಶರಾಗುವ ಜನರನ್ನು ಉದ್ಧರಿಸುತ್ತಾರೆ.

ಕ್ರೋಧೋ ಭೇದೋ ಭಯಂ ದಣ್ಡಃ ಕರ್ಷಣಂ ನಿಗ್ರಹೋ ವಧಃ ।
ನಯತ್ಯರಿವಶಂ ಸದ್ಯೋ ಗಣಾನ್ಭರತಸತ್ತಮ ॥೨೨॥

ಭರತಶ್ರೇಷ್ಠನೇ! ಸಂಘರಾಜ್ಯದ ಜನರು ಕ್ರೋಧವಶರಾದರೆ, ಪರಸ್ಪರವಾಗಿ ವೈಮನಸ್ಯವನ್ನು ಹೊಂದಿದರೆ, ಭಯಗ್ರಸ್ತರಾದರೆ, ದುರ್ಬಲರನ್ನು ಪೀಡಿಸಿದರೆ, ಅಪರಾಧವಿಲ್ಲದೆಯೇ ಒಬ್ಬರನ್ನು ಬಂಧಿಸಿದರೆ ಅಥವಾ ವಧಿಸಿದರೆ–ಬಹಳ ಬೇಗ ಶತ್ರುಗಳ ವಶರಾಗಿಬಿಡುತ್ತಾರೆ.

ತಸ್ಮಾನ್ಮಾನಯಿತವ್ಯಾಸ್ತೇ ಗಣಮುಖ್ಯಾಃ ಪ್ರಧಾನತಃ ।
ಲೋಕಯಾತ್ರಾ ಸಮಾಯತ್ತಾ ಭೂಯಸೀ ತೇಷು ಪಾರ್ಥಿವ ॥೨೩॥

ಮಹಾರಾಜ! ಆದುದರಿಂದ ಗಣರಾಜ್ಯಗಳಲ್ಲಿನ ಪ್ರಧಾನರಾದ ನಾಯಕರನ್ನು ಸಮ್ಮಾನಿಸುತ್ತಿರಬೇಕು. ಏಕೆಂದರೆ : ಲೋಕವ್ಯವಹಾರಗಳ ಸಂಪೂರ್ಣವಾದ ಹೊಣೆಯು ಗಣಮುಖ್ಯರನ್ನೇ ಆಶ್ರಯಿಸಿ ನಿಂತಿದೆ.

ಮನ್ತ್ರಗುಪ್ತಿಃ ಪ್ರಧಾನೇಷು ಚಾರಾಶ್ಚಾಮಿತ್ರಕರ್ಷಣ ।
ನ ಗಣಾಃ ಕೃತ್ಸ್ನಶೋ ಮನ್ತ್ರಂ ಶ್ರೋತುಮರ್ಹನ್ತಿ ಭಾರತ ॥೨೪॥

ಶತ್ರುನಿಷೂದನನೇ! ಜನಸಂಘದ ಸದಸ್ಯರೆಲ್ಲರೂ ಗುಪ್ತವಿಷಯಗಳನ್ನು ತಿಳಿಯಲು ಅಧಿಕಾರಿಗಳಾಗುವುದಿಲ್ಲ. ಮಂತ್ರಾಲೋಚನೆಗಳನ್ನು ಗುಪ್ತವಾಗಿಡುವುದೂ ಮತ್ತು ಗುಪ್ತಚಾರರನ್ನು ನಿಯಮಿಸುವುದೂ–ಪ್ರಧಾನಭೂತರಾದ ವ್ಯಕ್ತಿಗಳ ಅಧೀನದಲ್ಲಿಯೇ ಇರುತ್ತದೆ.

ಗಣಮುಖ್ಯೈಸ್ತು ಸಮ್ಭೂಯ ಕಾರ್ಯಂ ಗಣಹಿತಂ ಮಿಥಃ ।
ಪೃಥಗ್ಗಣಸ್ಯ ಭಿನ್ನಸ್ಯ ವಿತತಸ್ಯ ತತೋಽನ್ಯಥಾ ।
ಅರ್ಥಾಃ ಪ್ರತ್ಯವಸೀದನ್ತಿ ತಥಾನರ್ಥಾ ಭವನ್ತಿ ಚ ॥೨೫॥

ಗಣಗಳ ಮುಖ್ಯ-ಮುಖ್ಯರಾದ ಸದಸ್ಯವ್ಯಕ್ತಿಗಳು ರಹಸ್ಯದಲ್ಲಿ ಕಲೆತು ಸಮಸ್ತ ಗಣರಾಜ್ಯಗಳ ಹಿತಸಾಧನೆಗೆ ಪ್ರಯತ್ನಿಸಬೇಕು. ಹಾಗೆ ಮಾಡದೇ ಗಣಗಳು ಪ್ರತ್ಯೇಕ-ಪ್ರತ್ಯೇಕವಾಗಿದ್ದರೆ, ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೆ, ಚೆಲ್ಲಾ-ಪಿಲ್ಲಿಯಾಗಿಬಿಟ್ಟರೆ–ಪ್ರಜಾಹಿತಕ್ಕಾಗಿ ಮಾಡಬೇಕಾದ ಕಾರ್ಯಗಳು ಕೆಟ್ಟುಹೋಗುತ್ತವೆ. ಇಷ್ಟುಮಾತ್ರವಲ್ಲ ; ಅನೇಕವಿಧವಾದ ಅನರ್ಥಗಳೂ ಉಂಟಾಗುತ್ತವೆ.

ತೇಷಾಮನ್ಯೋನ್ಯಭಿನ್ನಾನಾಂ ಸ್ವಶಕ್ತಿಮನುತಿಷ್ಠತಾಮ್ ।
ನಿಗ್ರಹಃ ಪಣ್ಡಿತೈಃ ಕಾರ್ಯಃ ಕ್ಷಿಪ್ರಮೇವ ಪ್ರಧಾನತಃ ॥೨೬॥

ಪರಸ್ಪರವಾಗಿ ಭಿನ್ನಾಭಿಪ್ರಾಯಗಳನ್ನು ಹೊಂದಿ ಸಂಘಜೀವನದಿಂದ ಸಿಡಿದು ಹೊರಬಂದು ತಮ್ಮ ತಮ್ಮ ಶಕ್ತಿಯನ್ನೇ ಅವಲಂಬಿಸಿ ಸ್ಪರ್ಧಿ-ಪ್ರತಿಸ್ಪರ್ಧಿಗಳಾಗಿ ನಿಲ್ಲುವ ಜನರನ್ನು ಗಣರಾಜ್ಯಗಳಲ್ಲಿರುವ ವಿದ್ವಾಂಸರಾದ ಅಧಿಕಾರಿಗಳು ಬಹಳ ಬೇಗ ನಿಗ್ರಹಿಸಬೇಕು. ಹಾಗೆ ಮಾಡದಿದ್ದರೆ ಗಣರಾಜ್ಯವೇ ವಿನಾಶಹೊಂದುತ್ತದೆ.

ಕುಲೇಷು ಕಲಹಾ ಜಾತಾಃ ಕುಲವೃದ್ಧೈರುಪೇಕ್ಷಿತಾಃ ।
ಗೋತ್ರಸ್ಯ ನಾಶಂ ಕುರ್ವನ್ತಿ ಗಣಭೇದಸ್ಯ ಕಾರಕಮ್ ॥೨೭॥

ಒಂದು ಕುಲದಲ್ಲಿ ಆಗುವ ಕಲಹವನ್ನು ಆ ಕುಲದ ವೃದ್ಧರು ಪರಿಹರಿಸದೇ ಉಪೇಕ್ಷಿಸಿದ್ದೇ ಆದರೆ–ಕುಲದ ಜ್ಞಾತಿಗಳಲ್ಲಿಯೇ ಪರಸ್ಪರಭೇದಭಾವದ ಕಾರಣದಿಂದಾಗಿ ಕುಲವೇ ವಿನಾಶಹೊಂದುತ್ತದೆ. ಗಣಭೇದಕ್ಕೂ ಕಾರಣವಾಗುತ್ತದೆ.

ಆಭ್ಯನ್ತರಂ ಭಯಂ ರಕ್ಷ್ಯಮಸಾರಂ ಬಾಹ್ಯತೋ ಭಯಮ್ ।
ಆಭ್ಯನ್ತರಂ ಭಯಂ ರಾಜನ್ಸದ್ಯೋ ಮೂಲಾನಿ ಕೃನ್ತತಿ ॥೨೮॥

ಸಂಘಜೀವನವನ್ನು ಮುಖ್ಯವಾಗಿ ಆಂತರಿಕವಾದ ಭಯದಿಂದ (ಆಂತರಿಕವಾದ ಪರಸ್ಪರವೈಮನಸ್ಯದಿಂದ ಉಂಟಾಗುವ ಭಯದಿಂದ) ರಕ್ಷಿಸಬೇಕು. ಜನಸಂಘವು ಐಕಮತ್ಯದಿಂದಿದ್ದರೆ ಹೊರಗಿನವರಿಂದ ಉಂಟಾಗುವ ಭಯವು ನಿಸ್ಸಾರವಾಗಿರುತ್ತದೆ. (ಹೊರಗಿನವರಿಂದ ಹೆಚ್ಚಿನ ಭಯವಿರುವುದಿಲ್ಲ.) ಮಧ್ಯದಲ್ಲಿ ಪ್ರವೇಶಿಸಲು ಹೊರಗಿನವರೇ ಭಯಪಡುತ್ತಾರೆ. ಆಂತರಿಕವಾದ ಭಯವು (ಸಂಘಜೀವನದಲ್ಲಿ ಪರಸ್ಪರವಾಗಿ ಉಂಟಾಗುವ ಭಿನ್ನಾಭಿಪ್ರಾಯಗಳು) ಸಂಘರಾಜ್ಯದ ಮೂಲವನ್ನೇ ಕತ್ತರಿಸಿಹಾಕುತ್ತದೆ.

ಅಕಸ್ಮಾತ್ಕ್ರೋಧಮೋಹಾಭ್ಯಾಂ ಲೋಭಾದ್ವಾಪಿ ಸ್ವಭಾವಜಾತ್ ।
ಅನ್ಯೋನ್ಯಂ ನಾಭಿಭಾಷನ್ತೇ ತತ್ಪರಾಭವಲಕ್ಷಣಮ್ ॥೨೯॥

ಆಕಸ್ಮಿಕವಾಗಿ ಉಂಟಾಗುವ ಕ್ರೋಧ-ಮೋಹಗಳಿಂದಾಗಲೀ, ಸ್ವಭಾವಜನ್ಯವಾದ ಲೋಭದಿಂದಾಗಲೀ–ಸಂಘಜೀವಿಗಳಲ್ಲಿ ಒಬ್ಬರು ಮತ್ತೊಬ್ಬರೊಡನೆ ಸಂಭಾಷಣೆಯನ್ನೇ ನಿಲ್ಲಿಸಿದರೆ–ಅದು ಸಂಘಜೀವನದ ಪರಾಭವಲಕ್ಷಣವಾಗಿರುತ್ತದೆ. (ಭಿನ್ನಾಭಿಪ್ರಾಯಗಳು ಬಂದರೂ ಕೋಪ-ತಾಪಗಳಿಗೆ ಎಡೆಗೊಡದೇ ಪರಸ್ಪರ ಸಂಭಾಷಣೆಗಳಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು.)

ಜಾತ್ಯಾ ಚ ಸದೃಶಾಃ ಸರ್ವೇ ಕುಲೇನ ಸದೃಶಾಸ್ತಥಾ ।
ನ ಚೋದ್ಯೋಗೇನ ಬುದ್ಧ್ಯಾ ವಾ ರೂಪದ್ರವ್ಯೇಣ ವಾ ಪುನಃ ॥೩೦॥

ಭೇದಾಚ್ಚೈವ ಪ್ರದಾನಾಚ್ಚ ಭಿದ್ಯನ್ತೇ ರಿಪುಭಿರ್ಗಣಾಃ ।
ತಸ್ಮಾತ್ಸಂಘಾತಮೇವಾಹುರ್ಗಣಾನಾಂ ಶರಣಂ ಮಹತ್ ॥೩೨॥

ಜಾತಿಯಲ್ಲಿ ಸಮಾನರಾಗಿರುವವರೂ, ಕುಲದಲ್ಲಿ ಸಮಾನರಾಗಿರುವವರೂ–ಸಂಘಟಿತರಾಗಲು ಸಾಧ್ಯವಿದೆ. ಆದರೆ ಉದ್ಯೋಗದಿಂದಲೂ, ಬುದ್ಧಿಯಿಂದಲೂ, ರೂಪದಿಂದಲೂ, ಧನದಿಂದಲೂ–ಸಮಾನರಾಗುವ ಸಾಧ್ಯತೆಯಿಲ್ಲ. ಈ ಭೇದವಿರುವುದರಿಂದಲೂ, ಗಣತಂತ್ರದಲ್ಲಿ ಭೇದಭಾವವನ್ನು ಹುಟ್ಟಿಸುವುದರಿಂದಲೂ, ಕೆಲವರಿಗೆ ದ್ರವ್ಯಾದಿಗಳನ್ನು ಕೊಟ್ಟು ವಶಪಡಿಸಿಕೊಳ್ಳುವುದರಿಂದಲೂ–ಶತ್ರುಗಳು ಸಂಘಜೀವನವನ್ನು ಒಡೆದು ಹಾಕುತ್ತಾರೆ. ಆದುದರಿಂದ ಗಣರಾಜ್ಯಗಳವರು ಬಹುಮುಖ್ಯವಾಗಿ ಸಂಘಜೀವನವನ್ನೇ ಆಶ್ರಯಿಸಬೇಕು. (ಇಲ್ಲಿ ಒಂದು ಬಗೆಯ ಸಾಮೂಹಿಕವಾದ ರಾಜ್ಯಾಡಳಿತದ ವಿಷಯವಾಗಿ ಹೇಳಿದೆ. ನಿರಂಕುಶಾಧಿಪತ್ಯಕ್ಕಿಂತಲೂ ಭಿನ್ನವಾದುದು. ಇದು ಪ್ರಜೆಗಳೇ ಸಂಘಟಿತರಾಗಿ ರಾಜ್ಯವಾಳುವುದು. ಮತದಾನದ ವಿಷಯವಿಲ್ಲದಿದ್ದರೂ ಗಣನಾಯಕರ ಪ್ರಸ್ತಾಪವಿದೆ. ಯುಧಿಷ್ಠಿರನ ಸಾಮ್ರಾಜ್ಯದಲ್ಲಿಯೇ ಇಂತಹ ಆಡಳಿತದ ಪದ್ಧತಿಯು ಕೆಲವು ರಾಜ್ಯಗಳಲ್ಲಿದ್ದಿತೆಂಬುದಕ್ಕೆ ೨೩ನೆಯ ಶ್ಲೋಕವು ಆಧಾರಭೂತವಾಗಿದೆ. ಗಣರಾಜ್ಯಪದ್ಧತಿಯು ನಮಗೆ ಆಂಗ್ಲರ ಕೊಡುಗೆಯಲ್ಲವೆಂಬುದು ಈ ಅಧ್ಯಾಯದಿಂದ ಸ್ಪಷ್ಟವಾಗಿದೆ.)”

೧೦೭ನೆಯ ಅಧ್ಯಾಯವು ಮುಗಿಯಿತು.

೧೦೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ತಾಯಿ-ತಂದೆ ಮತ್ತು ಗುರುಗಳ ಸೇವೆಯ ಮಹತ್ತ್ವ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಮಹಾನಯಂ ಧರ್ಮಪಥೋ ಬಹುಶಾಖಶ್ಚ ಭಾರತ ।
ಕಿಂಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್ ॥೧॥

“ಪಿತಾಮಹ! ಧರ್ಮದ ಈ ಮಾರ್ಗವು ಅಗಾಧವಾದುದು. ಧರ್ಮಕ್ಕೆ ಅನೇಕಶಾಖೆಗಳೂ ಇವೆ. ಈ ಧರ್ಮಗಳಲ್ಲಿ ವಿಶೇಷವಾಗಿ ಅನುಷ್ಠಿಸಲೇಬೇಕಾದ ಮಹಾಧರ್ಮವು ಯಾವುದು?

ಕಿಂ ಕಾರ್ಯಂ ಸರ್ವಧರ್ಮಾಣಾಂ ಗರೀಯೋ ಭವತೋ ಮತಮ್ ।
ಯಥಾಹಂ ಪರಮಂ ಧರ್ಮಮಿಹ ಚ ಪ್ರೇತ್ಯ ಚಾಪ್ನುಯಾಮ್ ॥೨॥

ಸರ್ವಧರ್ಮಗಳಲ್ಲಿಯೂ ಅತಿಮುಖ್ಯವಾದ ಯಾವ ಕಾರ್ಯವು ನಿನಗೆ ಶ್ರೇಷ್ಠವೆನಿಸಿದೆ? ನಾನಾದರೂ ಅಂತಹ ಧರ್ಮಾಚರಣೆಯ ಫಲದಿಂದ ಐಹಿಕಾಮುಷ್ಮಿಕಲೋಕಗಳೆರಡರಲ್ಲಿಯೂ ಸುಖವನ್ನು ಪಡೆಯುತ್ತೇನೆ."

ಭೀಷ್ಮನು ಹೇಳುತ್ತಾನೆ :

ಮಾತಾಪಿತ್ರೋರ್ಗುರೂಣಾಂ ಚ ಪೂಜಾ ಬಹುಮತಾ ಮಮ ।
ಇಹ ಯುಕ್ತೋ ನರೋ ಲೋಕಾನ್ಯಶಶ್ಚ ಮಹದಶ್ನುತೇ ॥೩॥

"ಧರ್ಮಜ! ತಾಯಿ-ತಂದೆ ಮತ್ತು ಗುರುಗಳ ಶುಶ್ರೂಷೆಯು ಬಹಳ ಮುಖ್ಯವಾದ ಧರ್ಮಾಚರಣೆಯೆಂಬುದು ನನ್ನ ಭಾವನೆಯಾಗಿದೆ. ಮಾತಾ-ಪಿತೃ-ಗುರುಶುಶ್ರೂಷೆಯಲ್ಲಿ ಯುಕ್ತನಾದ ಮನುಷ್ಯನು ಉತ್ತಮಲೋಕ ಗಳನ್ನೂ–ಮಹಾಯಶಸ್ಸನ್ನೂ ಪಡೆದುಕೊಳ್ಳುತ್ತಾನೆ.

ಯಚ್ಚ ತೇಽಭ್ಯನುಜಾನೀಯುಃ ಕರ್ಮ ತಾತ ಸುಪೂಜಿತಾಃ ।
ಧರ್ಮಾಧರ್ಮವಿರುದ್ಧಂ ವಾ ತತ್ಕರ್ತವ್ಯಂ ಯುಧಿಷ್ಠಿರ ॥೪॥

ಯುಧಿಷ್ಠಿರ! ನಿನ್ನಿಂದ ಸುಪೂಜಿತರಾದ ತಂದೆ-ತಾಯಿ ಮತ್ತು ಗುರು ಗಳು ಯಾವುದಾದರೂ ಕಾರ್ಯಮಾಡಲು ಆಜ್ಞೆಮಾಡಿದರೆ–ಆ ಕಾರ್ಯವು ಧರ್ಮಾನುಕೂಲವಾಗಿರಲಿ ; ಧರ್ಮಕ್ಕೆ ವಿರುದ್ಧವಾಗಿಯೇ ಇರಲಿ–ಆ ಕಾರ್ಯವನ್ನು ನೀನು ಮಾಡಲೇಬೇಕು.

ನ ಚ ತೈರಭ್ಯನುಜ್ಞಾತೋ ಧರ್ಮಮನ್ಯಂ ಸಮಾಚರೇತ್ ।
ಯಂ ಚ ತೇಽಭ್ಯನುಜಾನೀಯುಃ ಸ ಧರ್ಮ ಇತಿ ನಿಶ್ಚಯಃ ॥೫॥

ನಿರಂತರವೂ ಮಾತಾ-ಪಿತೃ-ಗುರುಗಳ ಆಜ್ಞೆಯನ್ನು ಪರಿಪಾಲಿಸುತ್ತಿರು ವವನು ಬೇರೆ ಯಾವ ಧರ್ಮವನ್ನೂ ಆಚರಿಸಬೇಕಾದ ಆವಶ್ಯಕತೆಯಿಲ್ಲ. ಅವರು ಯಾವ ಕಾರ್ಯವನ್ನು ಮಾಡಲು ಆಜ್ಞಾಪಿಸುವರೋ–ಅದೇ ಧರ್ಮವೆಂದು ನಿಶ್ಚಯಿಸಲ್ಪಟ್ಟಿದೆ.

ಏತ ಏವ ತ್ರಯೋ ಲೋಕಾ ಏತ ಏವಾಶ್ರಮಾಸ್ತ್ರಯಃ ।
ಏತ ಏವ ತ್ರಯೋ ವೇದಾ ಏತ ಏವ ತ್ರಯೋಽಗ್ನಯಃ ॥೬॥

ಮಾತಾ-ಪಿತೃ-ಗುರುಗಳೇ ಮೂರು ಲೋಕಗಳು. ಮೂರು ಆಶ್ರಮಗಳೂ ಇವರೇ ಆಗಿದ್ದಾರೆ. ಮಾತಾ-ಪಿತೃ-ಗುರುಗಳೇ ಮೂರು ವೇದಗಳು ಮತ್ತು ಮೂರು ಅಗ್ನಿಗಳು. ಹೀಗೆ ಅವರನ್ನು ಭಾವಿಸಿಕೊಳ್ಳಬೇಕು.

ಪಿತಾ ವೈ ಗಾರ್ಹಪತ್ಯೋಽಗ್ನಿರ್ಮಾತಾಗ್ನಿರ್ದಕ್ಷಿಣಃ ಸ್ಮೃತಃ ।
ಗುರುರಾಹವನೀಯಸ್ತು ಸಾಗ್ನಿತ್ರೇತಾ ಗರೀಯಸೀ ॥೭॥

ತಂದೆಯು ಗಾರ್ಹಪತ್ಯಾಗ್ನಿಸ್ವರೂಪನೆಂದು ಭಾವಿಸಿಕೊಳ್ಳಬೇಕು. ತಾಯಿಯು ದಕ್ಷಿಣಾಗ್ನಿಸ್ವರೂಪಳು. ಗುರುವು ಆಹವನೀಯಾಗ್ನಿಸ್ವರೂಪನಾಗಿದ್ದಾನೆ. ವೈದಿಕವಾದ ದಕ್ಷಿಣಾಗ್ನಿ-ಗಾರ್ಹಪತ್ಯ-ಆಹವನೀಯಾಗ್ನಿಗಳಿಗಿಂತಲೂ ಮಾತಾ-ಪಿತೃ-ಗುರುಗಳೆಂಬ ಅಗ್ನಿತ್ರಯರೇ ಶ್ರೇಷ್ಠರಾಗಿರುತ್ತಾರೆ.

ತ್ರಿಷ್ವಪ್ರಮಾದ್ಯನ್ನೇತೇಷು ತ್ರೀಂಲ್ಲೋಕಾಂಶ್ಚ ವಿಜೇಷ್ಯಸಿ ।
ಪಿತೃವೃತ್ತ್ಯಾ ತ್ವಿಮಂ ಲೋಕಂ ಮಾತೃವೃತ್ತ್ಯಾ ತಥಾ ಪರಮ್ ।
ಬ್ರಹ್ಮಲೋಕಂ ಗುರೋರ್ವೃತ್ತ್ಯಾ ನಿಯಮೇನ ತರಿಷ್ಯಸಿ ॥೮॥

ನೀನು ಅಪ್ರಮತ್ತನಾಗಿ ಈ ಮೂವರನ್ನೂ ಶುಶ್ರೂಷೆಮಾಡುತ್ತಿದ್ದರೆ ಮೂರು ಲೋಕಗಳನ್ನೂ ಜಯಿಸುವೆ. ಪಿತೃಶುಶ್ರೂಷೆಯಿಂದ ಈ ಲೋಕವನ್ನೂ, ಮಾತೃಶುಶ್ರೂಷೆಯಿಂದ ಪರಲೋಕವನ್ನೂ, ಗುರುಶುಶ್ರೂಷೆಯಿಂದ ಬ್ರಹ್ಮಲೋಕವನ್ನೂ ಜಯಿಸುವೆ.

ಸಮ್ಯಗೇತೇಷು ವರ್ತಸ್ವ ತ್ರಿಷು ಲೋಕೇಷು ಭಾರತ ।
ಯಶಃ ಪ್ರಾಪ್ಸ್ಯಸಿ ಭದ್ರಂ ತೇ ಧರ್ಮಂ ಚ ಸುಮಹತ್ಫಲಮ್ ॥೯॥

ಯುಧಿಷ್ಠಿರ! ನಿನಗೆ ಮಂಗಳವಾಗಲಿ! ತಂದೆ-ತಾಯಿ-ಗುರುಗಳಲ್ಲಿ ಸದ್ವ್ಯವಹಾರದಿಂದ ವರ್ತಿಸುತ್ತಿರು. ಅವರೊಡನೆ ಸೌಜನ್ಯದಿಂದ ವರ್ತಿಸುತ್ತಿದ್ದು ಅವರ ಶುಶ್ರೂಷೆಮಾಡುವುದರಿಂದ ಮೂರು ಲೋಕಗಳಲ್ಲಿಯೂ ಯಶಸ್ಸನ್ನೂ ಪಡೆಯುವೆ. ಮಹಾಫಲದಾಯಕವಾದ ಧರ್ಮವನ್ನೂ ಸಾಧಿಸುವೆ.

ನೈತಾನತಿಶಯೇಜ್ಜಾತು ನಾತ್ಯಶ್ನೀಯಾನ್ನ ದೂಷಯೇತ್ ।
ನಿತ್ಯಂ ಪರಿಚರೇಚ್ಚೈವ ತದ್ವೈ ಸುಕೃತಮುತ್ತಮಮ್ ।
ಕೀರ್ತಿಂ ಪುಣ್ಯಂ ಯಶೋ ಲೋಕಾನ್ಪ್ರಾಪ್ಸ್ಯಸೇ ರಾಜಸತ್ತಮ ॥೧೦॥

ರಾಜಶ್ರೇಷ್ಠನೇ! ತಂದೆ-ತಾಯಿ-ಗುರುಗಳನ್ನು ಅತಿಶಯಿಸಿ ಅವರಿಗಿಂತಲೂ ಮೇಲಾದ ರೀತಿಯಲ್ಲಿ ನಡೆದುಕೊಳ್ಳಬಾರದು. ಅವರ ಭೋಜನಕ್ಕಿಂತಲೂ ಉತ್ತಮವಾದ ಭೋಜನವನ್ನು ಮಾಡಬಾರದು. ಅವರ ವಿಷಯದಲ್ಲಿ ದೋಷಗಳನ್ನೆಣಿಸಬಾರದು. ಸರ್ವಕಾಲದಲ್ಲಿಯೂ ತಂದೆ-ತಾಯಿ-ಗುರುಗಳ ಶುಶ್ರೂಷೆಯಲ್ಲಿಯೇ ನಿರತನಾಗಿರಬೇಕು. ತಂದೆ-ತಾಯಿ-ಗುರುಗಳ ಶುಶ್ರೂಷೆಯು ಮಹಾಪುಣ್ಯಪ್ರಾಪಕವಾದುದು. ಈ ಮೂವರ ಶುಶ್ರೂಷೆಯಿಂದ ಕೀರ್ತಿಯನ್ನೂ, ಪುಣ್ಯವನ್ನೂ, ಯಶಸ್ಸನ್ನೂ, ಉತ್ತಮ ಲೋಕಗಳನ್ನೂ ಪಡೆದುಕೊಳ್ಳುವೆ.

ಸರ್ವೇ ತಸ್ಯಾದೃತಾ ಲೋಕಾ ಯಸ್ಯೈತೇ ತ್ರಯ ಆದೃತಾಃ ।
ಅನಾದೃತಾಸ್ತು ಯಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾಃ ॥೧೨॥

ಯಾರು ತಂದೆ-ತಾಯಿ-ಗುರುಗಳನ್ನು ಪ್ರೀತಿಯಿಂದ ಆದರಿಸುತ್ತಾರೆಯೋ–ಅವರು ಮೂರು ಲೋಕಗಳನ್ನೂ ಆದರಿಸುವವರಾಗುತ್ತಾರೆ. ತಂದೆ-ತಾಯಿ-ಗುರುಗಳನ್ನು ಆದರಿಸುವುದರಿಂದ ಮೂರು ಲೋಕಗಳನ್ನೂ ಆದರಿಸಿದಂತಾಗುತ್ತದೆ. ಯಾರು ಈ ಮೂವರನ್ನೂ ಆದರಿಸುವುದಿಲ್ಲವೋ ಅವರು ಮಾಡುವ ಎಲ್ಲ ಕಾರ್ಯಗಳೂ ನಿಷ್ಫಲಗಳೇ ಆಗುತ್ತವೆ.

ನ ಚಾಯಂ ನ ಪರೋ ಲೋಕಸ್ತಸ್ಯ ಚೈವ ಪರಂತಪ ।
ಅಮಾನಿತಾ ನಿತ್ಯಮೇವ ಯಸ್ಯೈತೇ ಗುರವಸ್ತ್ರಯಃ ॥೧೩॥

ಪರಂತಪನೇ! ಯಾವಾತನು ಗುರುಸ್ವರೂಪರಾದ ಈ ಮೂವರನ್ನೂ ಗೌರವಿಸುವುದಿಲ್ಲವೋ–ಅವನಿಗೆ ಈ ಲೋಕದಲ್ಲಿಯೂ ಸುಖವಿಲ್ಲ; ಉತ್ತಮಲೋಕಗಳೂ ಲಭಿಸುವುದಿಲ್ಲ.

ನ ಚಾಸ್ಮಿನ್ನಪರೇ ಲೋಕೇ ಯಶಸ್ತಸ್ಯ ಪ್ರಕಾಶತೇ ।
ನ ಚಾನ್ಯದಪಿ ಕಲ್ಯಾಣಂ ಪರತ್ರ ಸಮುದಾಹೃತಮ್ ॥೧೪॥

ತಂದೆ-ತಾಯಿ-ಗುರುಗಳನ್ನು ಅನಾದರಣೆಮಾಡುವವನ ಯಶಸ್ಸು ಇಹದಲ್ಲಾಗಲೀ ಪರದಲ್ಲಾಗಲೀ ಪ್ರಕಾಶಮಾನಕ್ಕೆ ಬರುವುದಿಲ್ಲ. (ತಂದೆ-ತಾಯಿ-ಗುರುಗಳ ಶುಶ್ರೂಷೆಯನ್ನು ಬಿಟ್ಟು) ಉಳಿದ ಯಜ್ಞ-ದಾನಾದಿ ಪುಣ್ಯಕರ್ಮಗಳಿಂದ ಪರಲೋಕದಲ್ಲಿ ಯಾವ ಕಲ್ಯಾಣಸುಖವು ಪ್ರಾಪ್ತ

ವಾಗುವುದಿರುವುದೋ–ಅದೂ ಕೂಡ ಗುರುತ್ರಯರನ್ನು ಅನಾದರಣೆಮಾಡಿ ದವನಿಗೆ ಸುದುರ್ಲಭವೇ ಸರಿ.

ತೇಭ್ಯ ಏವ ಹಿ ಯತ್ಸರ್ವಂ ಕೃತ್ವಾ ಚ ವಿಸೃಜಾಮ್ಯಹಮ್ ।
ತದಾಸೀನ್ಮೇ ಶತಗುಣಂ ಸಹಸ್ರಗುಣಮೇವ ಚ ।
ತಸ್ಮಾನ್ಮೇ ಸಮ್ಪ್ರಕಾಶನ್ತೇ ತ್ರಯೋ ಲೋಕಾ ಯುಧಿಷ್ಠಿರ ॥೧೫॥

ಯುಧಿಷ್ಠಿರ! ನಾನಾದರೋ ಸಕಲವಿಧವಾದ ಶುಭಕರ್ಮಗಳನ್ನೂ ಮಾಡಿ ಆ ಎಲ್ಲ ಶುಭಕರ್ಮಗಳ ಫಲವನ್ನೂ ಗುರುತ್ರಯರಿಗೇ ಸಮರ್ಪಿಸಿ ಬಿಡುತ್ತಿದ್ದೆನು. ಅಂತಹ ಅರ್ಪಣೆಯಿಂದ ನನಗೆ ಪುಣ್ಯವು ನೂರುಪಟ್ಟು ಸಾವಿರಪಟ್ಟು ಹೆಚ್ಚಾಗಿ ಲಭಿಸುತ್ತಿದ್ದಿತು. ಆ ಕಾರಣದಿಂದಲೇ ಮೂರು ಲೋಕಗಳೂ ನನ್ನ ಕಣ್ಣಮುಂದೆ ಚೆನ್ನಾಗಿ ಪ್ರಕಾಶಿಸುತ್ತಿವೆ.

ದಶೈವ ತು ಸದಾಚಾರ್ಯಃ ಶ್ರೋತ್ರಿಯಾನತಿರಿಚ್ಯತೇ ।
ದಶಾಚಾರ್ಯಾನುಪಾಧ್ಯಾಯ ಉಪಾಧ್ಯಾಯಾನ್ಪಿತಾ ದಶ ॥೧೭॥

ಪಿತೄನ್ದಶ ತು ಮಾತೈಕಾ ಸರ್ವಾಂ ವಾ ಪೃಥಿವೀಮಪಿ ।
ಗುರುತ್ವೇನಾಭಿಭವತಿ ನಾಸ್ತಿ ಮಾತೃಸಮೋ ಗುರುಃ ॥೧೮॥

ಆಚಾರ್ಯನು ಹತ್ತು ಮಂದಿ ಶ್ರೋತ್ರಿಯರಿಗಿಂತಲೂ ಅತಿರಿಕ್ತ ನಾದವನು. ವಿದ್ಯಾಗುರುವು ಹತ್ತು ಮಂದಿ ಆಚಾರ್ಯರಿಗಿಂತಲೂ ಹೆಚ್ಚಿನ ವನು. ತಂದೆಯು ಹತ್ತು ಮಂದಿ ವಿದ್ಯಾಗುರುಗಳಿಗಿಂತಲೂ ಅಧಿಕನಾದವನು. ತಾಯಿಯು ಹತ್ತು ಮಂದಿ ಪಿತೃಗಳ ಮಹತ್ವಕ್ಕಿಂತಲೂ ಹೆಚ್ಚು ಮಹತ್ವವುಳ್ಳವಳು. ಅಖಂಡಭೂಮಂಡಲವೂ ತಾಯಿಗಿಂತಲೂ ಗೌರವದಲ್ಲಿ ಅಧಿಕವಾಗಲಾರದು. ತಾಯಿಯು ಗುರುತ್ವದಲ್ಲಿ ಭೂಮಂಡಲವನ್ನೂ ತಿರಸ್ಕರಿಸುವವಳಾಗುತ್ತಾಳೆ. ಆದುದರಿಂದ ತಾಯಿಗೆ ಸಮಾನನಾದ ಗುರುವೇ ಬೇರೊಬ್ಬನಿಲ್ಲ.

ಗುರುರ್ಗರೀಯಾನ್ಪಿತೃತೋ ಮಾತೃತಶ್ಚೇತಿ ಮೇ ಮತಿಃ ।
ಉಭೌ ಹಿ ಮಾತಾಪಿತರೌ ಜನ್ಮನ್ಯೇವೋಪಯುಜ್ಯತಃ ॥೧೯॥

ಆದರೆ ನನ್ನ ಅಭಿಪ್ರಾಯದಲ್ಲಿ ಮಾತಾ-ಪಿತೃಗಳಿಗಿಂತಲೂ ಮಹತ್ವ

ದಲ್ಲಿ ಆಧ್ಯಾತ್ಮಿಕ ವಿದ್ಯಾಗುರುವೇ ಅಧಿಕನಾದವನು. ಏಕೆಂದರೆ : ತಾಯಿ-ತಂದೆಗಳು ಈ ಶರೀರಕ್ಕೆ ಜನ್ಮಕೊಡುವುದರಲ್ಲಿ ಮಾತ್ರ ಉಪಯೋಗಕ್ಕೆ ಬರುತ್ತಾರೆ.

ಶರೀರಮೇವ ಸೃಜತಃ ಪಿತಾ ಮಾತಾ ಚ ಭಾರತ ।
ಆಚಾರ್ಯಶಿಷ್ಟಾ ಯಾ ಜಾತಿಃ ಸಾ ದಿವ್ಯಾ ಸಾಜರಾಮರಾ ॥೨೦॥

ಮಾತಾ-ಪಿತೃಗಳು ಈ ಶರೀರಕ್ಕೆ ಜನ್ಮವನ್ನು ಕೊಡುವವರಾಗಿದ್ದಾರೆ. ಆಚಾರ್ಯೋಪದೇಶದಿಂದ ಯಾವ ಪುನರ್ಜನ್ಮವು (ದ್ವಿಜತ್ವವು) ಪ್ರಾಪ್ತವಾಗುವುದೋ ಆ ಜನ್ಮವು ಮುಪ್ಪಿಲ್ಲದುದು ಮತ್ತು ಶಾಶ್ವತವಾದುದು.

ಅವಧ್ಯಾ ಹಿ ಸದಾ ಮಾತಾ ಪಿತಾ ಚಾಪ್ಯಪಕಾರಿಣೌ ।
ನ ಸಂದುಷ್ಯತಿ ತತ್ಕೃತ್ವಾ ನ ಚ ತೇ ದೂಷಯನ್ತಿ ತಮ್ ।
ಧರ್ಮಾಯ ಯತಮಾನಾನಾಂ ವಿದುರ್ದೇವಾ ಮಹರ್ಷಿಭಿಃ ॥೨೧॥

ತಂದೆ-ತಾಯಿಗಳು ಅಪಕಾರವನ್ನೆಸಗಿದರೂ ಅವರು ವಧಾರ್ಹರಲ್ಲ. (ಶಿಕ್ಷಾರ್ಹರಲ್ಲ.) ಏಕೆಂದರೆ : ಮಗನಾಗಲೀ–ಶಿಷ್ಯನಾಗಲೀ ಅಪರಾಧ ಮಾಡಿದರೂ ಮಾತಾ-ಪಿತೃ-ಗುರುಗಳು ಮಗನನ್ನಾಗಲೀ–ಶಿಷ್ಯನನ್ನಾಗಲೀ ಅಪರಾಧಿಯೆಂದು ಪರಿಗಣಿಸುವುದಿಲ್ಲ. (ವ್ಯಾಖ್ಯಾನಕಾರರ ವ್ಯಾಖ್ಯೆಯು ಹೀಗಿದೆ : **ಧರ್ಮಾಯ ದುಷ್ಟಾನಾಮಪಿ ಪಿತ್ರಾದೀನಾಂ ಪಾಲನಾಯ ಯತಮಾನಾನಾಂ ಯತಮಾನಾನ್ದೇವಾ ಅಪಿ ಅನುಗ್ರಾಹ್ಯತ್ವೇನ ವಿದುಃ**– ತಂದೆ-ತಾಯಿಗಳು ದುಷ್ಟರಾಗಿದ್ದರೂ ಧರ್ಮದ ಕಾರಣದಿಂದ ಅವರನ್ನು ಶುಶ್ರೂಷೆಮಾಡಲು ಪ್ರಯತ್ನಿಸುವವರನ್ನು ದೇವತೆಗಳು ಮಹರ್ಷಿಗಳೊಡನೆ ಅನುಗ್ರಾಹ್ಯರೆಂದು ಭಾವಿಸುತ್ತಾರೆ.)

ಯಶ್ಚಾವೃಣೋತ್ಯವಿತಥೇನ ಕರ್ಮಣಾ
ಋತಂ ಬ್ರುವನ್ನನೃತಂ ಸಮ್ಪ್ರಯಚ್ಛನ್ ।
ತಂ ವೈ ಮನ್ಯೇತ ಪಿತರಂ ಮಾತರಂ ಚ
ತಸ್ಮೈ ನ ದ್ರುಹ್ಯೇತ್ಕೃತಮಸ್ಯ ಜಾನನ್ ॥೨೨॥

ಸತ್ಯಧರ್ಮದ ಮೂಲಕವಾಗಿ ಯಾರು ಶಿಷ್ಯನನ್ನು ಅನುಗ್ರಹಿಸುವನೋ, ಸತ್ಯಸ್ವರೂಪವಾದ ವೇದೋಪದೇಶಮಾಡುವನೋ–ಅಸತ್ಯವನ್ನು ತಡೆಯುವನೋ–ಅಂತಹ ಪರಮಗುರುವನ್ನೇ ತಂದೆ ಮತ್ತು ತಾಯಿ ಎಂದು

ತಿಳಿಯಬೇಕು. ಗುರುವು ಮಾಡಿದ ಉಪಕಾರವನ್ನು ಸ್ಮರಿಸುತ್ತಾ ಅವನ ವಿಷಯದಲ್ಲಿ ಯಾವಾಗಲೂ ದ್ರೋಹವನ್ನೆಸಗಬಾರದು.

ವಿದ್ಯಾಂ ಶ್ರುತ್ವಾ ಯೇ ಗುರುಂ ನಾದ್ರಿಯನ್ತೇ
ಪ್ರತ್ಯಾಸನ್ನಾ ಮನಸಾ ಕರ್ಮಣಾ ವಾ ।
ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ
ನಾನ್ಯಸ್ತೇಭ್ಯಃ ಪಾಪಕೃದಸ್ತಿ ಲೋಕೇ ।
ಯಥೈವ ತೇ ಗುರುಭಿರ್ಭಾವನೀಯಾ-
ಸ್ತಥಾ ತೇಷಾಂ ಗುರವೋಽಭ್ಯರ್ಚನೀಯಾಃ ॥೨೩॥

ಗುರುವಿನಿಂದ ವಿದ್ಯೆಯನ್ನು ಕಲಿತು ಆ ಗುರುವನ್ನು ಯಾರು ಆದರಿಸುವುದಿಲ್ಲವೋ, ಹತ್ತಿರದಲ್ಲಿಯೇ ಇದ್ದೂ ಕೂಡ ಮನಸ್ಸು, ಮಾತು ಮತ್ತು ಕೃತಿಗಳ ಮೂಲಕವಾಗಿ ಯಾರು ಗುರುವಿನ ಶುಶ್ರೂಷೆಯನ್ನು ಮಾಡುವುದಿಲ್ಲವೋ–ಅವರ ಪಾಪವು ಭ್ರೂಣಹತ್ಯೆಯನ್ನು ಮಾಡಿದವರ ಪಾಪಕ್ಕಿಂತಲೂ ಅಧಿಕವಾಗಿರುತ್ತದೆ. ಅವರಿಗಿಂತಲೂ ಪಾಪಿಷ್ಠರಾದವರು ಈ ಲೋಕದಲ್ಲಿ ಬೇರೆ ಯಾರೂ ಇರುವುದಿಲ್ಲ. ಆತ್ಮೋನ್ನತಿಯ ಮಾರ್ಗದಲ್ಲಿ ಶಿಷ್ಯನನ್ನು ಯೋಜಿಸುವುದು ಹೇಗೆ ಗುರುವಿನ ಕರ್ತವ್ಯವಾಗಿರುವುದೋ–ಹಾಗೆಯೇ ಗುರುವನ್ನು ಆದರದಿಂದ ಸತ್ಕರಿಸಿ ಶುಶ್ರೂಷೆಮಾಡುವುದೂ ಶಿಷ್ಯನ ಕರ್ತವ್ಯವಾಗಿರುತ್ತದೆ.

ತಸ್ಮಾತ್ಪೂಜಯಿತವ್ಯಾಶ್ಚ ಸಂವಿಭಜ್ಯಾಶ್ಚ ಯತ್ನತಃ ।
ಗುರವೋಽರ್ಚಯಿತವ್ಯಾಶ್ಚ ಪುರಾಣಂ ಧರ್ಮಮಿಚ್ಛತಾ ॥೨೪॥

ಆದುದರಿಂದ ಸನಾತನಧರ್ಮದ ಫಲವನ್ನು ಅನುಭವಿಸಲು ಇಚ್ಛಿಸುವವರು ಗುರುತ್ರಯರ (ಮಾತಾ-ಪಿತೃ-ಗುರುಗಳ) ಅರ್ಚನೆಯನ್ನು ಮಾಡಬೇಕು. ಪೂಜೆಯನ್ನು ಮಾಡಬೇಕು. ಪ್ರಯತ್ನಪೂರ್ವಕವಾಗಿ ಅವರಿಗೆ ಬೇಕಾಗುವ ವಸ್ತುಗಳನ್ನು ಒದಗಿಸಿಕೊಡಬೇಕು.

ಯೇನ ಪ್ರೀಣಾತಿ ಪಿತರಂ ತೇನ ಪ್ರೀತಃ ಪ್ರಜಾಪತಿಃ ।
ಪ್ರೀಣಾತಿ ಮಾತರಂ ಯೇನ ಪೃಥಿವೀ ತೇನ ಪೂಜಿತಾ ॥೨೫॥

ಪುತ್ರನು ಯಾವ ಶುಶ್ರೂಷೆಯಿಂದ ತಂದೆಯನ್ನು ಪ್ರೀತಿಗೊಳಿಸು

ವನೋ ಅಂತಹ (ತಂದೆಗೆ ಮಾಡುವ) ಶುಶ್ರೂಷೆಯಿಂದ ಪ್ರಜಾಪತಿ ಬ್ರಹ್ಮನು ಸುಪ್ರೀತನಾಗುತ್ತಾನೆ. ಯಾವ ಶುಶ್ರೂಷೆಯಿಂದ ತಾಯಿಯನ್ನು ಪ್ರೀತಿಗೊಳಿಸುವನೋ ಅಂತಹ (ತಾಯಿಗೆ ಮಾಡುವ) ಶುಶ್ರೂಷೆಯಿಂದ ಭೂದೇವಿಯು ಸುಪ್ರೀತಳಾಗುತ್ತಾಳೆ.

ಯೇನ ಪ್ರೀಣಾತ್ಯುಪಾಧ್ಯಾಯಂ ತೇನ ಸ್ಯಾದ್ಬ್ರಹ್ಮ ಪೂಜಿತಮ್ ।
ಮಾತೃತಃ ಪಿತೃತಶ್ಚೈವ ತಸ್ಮಾತ್ಪೂಜ್ಯತಮೋ ಗುರುಃ ॥೨೬॥

ಶಿಷ್ಯನು ಯಾವ ಶುಶ್ರೂಷೆಯಿಂದ ಉಪಾಧ್ಯಾಯನನ್ನು ಪ್ರೀತಿ ಗೊಳಿಸುವನೋ ಅಂತಹ (ಗುರುವಿಗೆ ಮಾಡುವ) ಶುಶ್ರೂಷೆಯಿಂದ ಬ್ರಹ್ಮ ವಸ್ತುವನ್ನೇ ಆರಾಧಿಸಿದಂತಾಗುತ್ತದೆ. ಈ ಕಾರಣಗಳಿಂದ ತಾಯಿಗಿಂತಲೂ, ತಂದೆಗಿಂತಲೂ–ಗುರುವೇ ಪೂಜ್ಯತಮನಾಗುವನು.

ಋಷಯಶ್ಚ ಹಿ ದೇವಾಶ್ಚ ಪ್ರೀಯನ್ತೇ ಪಿತೃಭಿಃ ಸಹ ।
ಪೂಜ್ಯಮಾನೇಷು ಗುರುಷು ತಸ್ಮಾತ್ಪೂಜ್ಯತಮೋ ಗುರುಃ ॥೨೭॥

ಗುರುಗಳು ಸಂಪೂಜಿತರಾದರೆಂದರೆ ಋಷಿಗಳೂ ಮತ್ತು ದೇವತೆ ಗಳೂ ಪಿತೃದೇವತೆಗಳೊಡನೆ ಸುಪ್ರೀತರಾಗುತ್ತಾರೆ. ಆದುದರಿಂದ ಮಾತಾ-ಪಿತೃಗಳಿಗಿಂತಲೂ ಗುರುವೇ ಪೂಜ್ಯತಮನು.

ಕೇನಚಿನ್ನ ಚ ವೃತ್ತೇನ ಹ್ಯವಜ್ಞೇಯೋ ಗುರುರ್ಭವೇತ್ ।
ನ ಚ ಮಾತಾ ನ ಚ ಪಿತಾ ಮನ್ಯತೇ ಯಾದೃಶೋ ಗುರುಃ ॥೨೮॥

ಯಾವುದಾದರೂ ಕರ್ತವ್ಯದ ವ್ಯವಹಾರದಲ್ಲಿ ತೊಡಗಿ ಗುರುವನ್ನು ಅನಾದರಣೆ ಮಾಡಬಾರದು. ಮಾತಾ-ಪಿತೃಗಳೂ ಸರ್ವಥಾ ಅನಾದರಣೆಗೆ ಯೋಗ್ಯರಲ್ಲ. ಗುರುವು ಹೇಗೆ ಮಾನನೀಯನೋ ತಂದೆ-ತಾಯಿಗಳೂ ಹಾಗೆಯೇ ಮಾನನೀಯರು.

ನ ತೇಽವಮಾನಮರ್ಹನ್ತಿ ನ ತೇಷಾಂ ದೂಷಯೇತ್ಕೃತಮ್ ।
ಗುರೂಣಾಮೇವ ಸತ್ಕಾರಂ ವಿದುರ್ದೇವಾ ಮಹರ್ಷಿಭಿಃ ॥೨೯॥

ತಂದೆ-ತಾಯಿ ಮತ್ತು ಗುರುಗಳು ಯಾವುದೇ ಕಾರಣದಿಂದಲೂ ಅವ ಮಾನಕ್ಕೆ ಯೋಗ್ಯರಲ್ಲ. ಅವರು ಮಾಡಿದುದನ್ನು ಯಾವುದೇ ಕಾರಣ ದಿಂದಲೂ ದೂಷಿಸಬಾರದು. ಮಹರ್ಷಿಗಳಿಂದ ಕೂಡಿದ ದೇವತೆಗಳು

ಗುರುತ್ರಯರಿಗೆ ಮಾಡುವ ಸತ್ಕಾರವನ್ನು ತಮಗೆ ಮಾಡುವ ಸತ್ಕಾರವೆಂದೇ ಭಾವಿಸುತ್ತಾರೆ.

ಉಪಾಧ್ಯಾಯಂ ಪಿತರಂ ಮಾತರಂ ಚ
ಯೇಽಭಿದ್ರುಹ್ಯನ್ತೇ ಮನಸಾ ಕರ್ಮಣಾ ವಾ ।
ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ
ತಸ್ಮಾನ್ನಾನ್ಯಃ ಪಾಪಕೃದಸ್ತಿ ಲೋಕೇ ॥೩೦॥

ಯಾರು ಉಪಾಧ್ಯಾಯನಿಗೂ, ತಂದೆಗೂ, ತಾಯಿಗೂ ಕಾರ್ಯದಿಂದಾಗಲೀ ಮನಸ್ಸಿನಿಂದಾಗಲೀ ದ್ರೋಹವನ್ನೆಸಗುತ್ತಾರೆಯೋ–ಅಂತಹವರಿಗೆ ಭ್ರೂಣಹತ್ಯೆಗಿಂತಲೂ ಮಿಗಿಲಾದ ಪಾಪವು ಸಂಘಟಿಸುತ್ತದೆ. ತಂದೆ-ತಾಯಿ-ಗುರುಗಳಿಗೆ ದ್ರೋಹವನ್ನೆಸಗುವವನಿಗಿಂತಲೂ ಹೆಚ್ಚಿನ ಪಾಪ ಕರ್ಮಿಯು ಈ ಲೋಕದಲ್ಲಿಯೇ ಮತ್ತೊಬ್ಬನಿರುವುದಿಲ್ಲ.

ಭೃತೋ ವೃದ್ಧೋ ಯೋ ನ ಬಿಭರ್ತಿ ಪುತ್ರಃ
ಸ್ವಯೋನಿಜಃ ಪಿತರಂ ಮಾತರಂ ಚ ।
ತದ್ವೈ ಪಾಪಂ ಭ್ರೂಣಹತ್ಯಾವಿಶಿಷ್ಟಂ
ತಸ್ಮಾನ್ನಾನ್ಯಃ ಪಾಪಕೃದಸ್ತಿ ಲೋಕೇ ॥೩೧॥

ಯಾವನು ತಂದೆ-ತಾಯಿಗಳ ಔರಸಪುತ್ರನಾಗಿರುವನೋ, ತಂದೆ-ತಾಯಿಗಳ ಭರಣ-ಪೋಷಣೆಗಳಿಂದಲೇ ವೃದ್ಧಿಯನ್ನು ಹೊಂದಿರುವನೋ, ಅಂತಹ ಔರಸಪುತ್ರನು ತಂದೆ-ತಾಯಿಗಳು ವೃದ್ಧರಾದಾಗ ಅವರ ಭರಣ-ಪೋಷಣೆಗಳನ್ನು ಮಾಡದಿದ್ದರೆ–ಅವನಿಗೆ ಭ್ರೂಣಹತ್ಯಾಪಾಪಕ್ಕಿಂತಲೂ ಹೆಚ್ಚಾದ ಪಾಪವು ಸಂಘಟಿಸುತ್ತದೆ. ತಂದೆ-ತಾಯಿಗಳ ಭರಣ-ಪೋಷಣೆಗಳನ್ನು ಮಾಡದೇ ಇರುವವನಿಗಿಂತಲೂ ಹೆಚ್ಚಿನ ಪಾಪಿಷ್ಠನು ಈ ಲೋಕದಲ್ಲಿಯೇ ಬೇರೊಬ್ಬನಿಲ್ಲ.

ಮಿತ್ರದ್ರುಹಃ ಕೃತಘ್ನಸ್ಯ ಸ್ತ್ರೀಘ್ನಸ್ಯ ಗುರುಘಾತಿನಃ ।
ಚತುರ್ಣಾಂ ವಯಮೇತೇಷಾಂ ನಿಷ್ಕೃತಿಂ ನಾನುಶುಶ್ರುಮ ॥೩೨॥

ಮಿತ್ರದ್ರೋಹೀ, ಕೃತಘ್ನ, ಸ್ತ್ರೀಹಂತಕ ಮತ್ತು ಗುರುಘಾತಕ–ಈ ನಾಲ್ವರಿಗೆ ಪ್ರಾಯಶ್ಚಿತ್ತವಿರುವುದೆಂಬುದನ್ನು ನಾವು ಕೇಳಿಯೇ ಇಲ್ಲ. ಇವರ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ.

ಏತತ್ಸರ್ವಮನಿರ್ದೇಶೇನೈವಮುಕ್ತಂ
ಯತ್ಕರ್ತವ್ಯಂ ಪುರುಷೇಣೇಹ ಲೋಕೇ ।
ಏತಚ್ಛ್ರೇಯೋ ನಾನ್ಯದಸ್ಮಾದ್ವಿಶಿಷ್ಟಂ
ಸರ್ವಾನ್ಧರ್ಮಾನನುಸೃತ್ಯೈತದುಕ್ತಮ್ ॥೩೩॥

ಈ ಜಗತ್ತಿನಲ್ಲಿ ಪುರುಷನು ಯಾವ ಕರ್ತವ್ಯವನ್ನು ಮಾಡಲೇಬೇಕಾಗಿದೆಯೋ–ಆ ಕರ್ತವ್ಯದ ವಿಷಯವಾಗಿ ಎಲ್ಲವನ್ನೂ ವಿಸ್ತಾರವಾಗಿಯೇ ಹೇಳಲಾಗಿದೆ. ಗುರುತ್ರಯರ ಶುಶ್ರೂಷೆಯು ಎಲ್ಲ ಕರ್ತವ್ಯಗಳಿಗಿಂತಲೂ ಶ್ರೇಷ್ಠವಾದ ಕರ್ತವ್ಯವಾಗಿರುತ್ತದೆ. ಇದಕ್ಕಿಂತಲೂ ಮಿಗಿಲಾದುದು ಬೇರೆ ಯಾವುದೂ ಇರುವುದಿಲ್ಲ. ಎಲ್ಲ ಧರ್ಮಗಳನ್ನೂ ಅನುಸರಿಸಿ ಎಲ್ಲ ಧರ್ಮಗಳಿಗೂ ಸಾರಭೂತವಾದ ಈ ಧರ್ಮವನ್ನು ಹೇಳಲಾಗಿದೆ.”

೧೦೮ನೆಯ ಅಧ್ಯಾಯವು ಮುಗಿಯಿತು.

೧೦೯ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸತ್ಯಾಸತ್ಯಗಳ ವಿವೇಚನೆ : ಧರ್ಮದ ಲಕ್ಷಣ : ವ್ಯವಹಾರನೀತಿಯ ವರ್ಣನೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಧರ್ಮೇ ಸ್ಥಾತುಮಿಚ್ಛನ್ನರೋ ವರ್ತೇತ ಭಾರತ ।
ವಿದ್ವಞ್ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ ॥೧॥

“ಭರತರ್ಷಭನೇ! ಧರ್ಮಮಾರ್ಗದಲ್ಲಿಯೇ ಇರಲು ಅಪೇಕ್ಷಿಸುವ ಮನುಷ್ಯನು ಯಾವ ರೀತಿಯಲ್ಲಿ ವ್ಯವಹಾರವನ್ನಿಟ್ಟುಕೊಳ್ಳಬೇಕು? ವಿದ್ವಾಂಸನೇ! ಈ ವಿಷಯವನ್ನು ನಾನು ತಿಳಿದುಕೊಳ್ಳಬೇಕೆಂದಿರುತ್ತೇನೆ. ದಯಮಾಡಿ ಹೇಳು.

ಸತ್ಯಂ ಚೈವಾನೃತಂ ಚೋಭೇ ಲೋಕಾನಾವೃತ್ಯ ತಿಷ್ಠತಃ ।
ತಯೋಃ ಕಿಮಾಚರೇದ್ರಾಜನ್ಪುರುಷೋ ಧರ್ಮನಿಶ್ಚಿತಃ ॥೨॥

ಸತ್ಯ ಮತ್ತು ಅಸತ್ಯ–ಈ ಎರಡೂ ವಿಶ್ವವನ್ನೇ ಆವರಿಸಿಕೊಂಡು ಸ್ಥಿರವಾಗಿ ನಿಂತಿವೆ. ಧರ್ಮದಲ್ಲಿಯೇ ನಿಶ್ಚಯಬುದ್ಧಿಯಿರುವ ಪುರುಷನು ಈ ಎರಡರಲ್ಲಿ ಯಾವುದನ್ನು ಆಚರಿಸಬೇಕು?

ಕಿಂಸ್ವಿತ್ಸತ್ಯಂ ಕಿಮನೃತಂ ಕಿಂಸ್ವಿದ್ಧರ್ಮ್ಯಂ ಸನಾತನಮ್ ।
ಕಸ್ಮಿನ್ಕಾಲೇ ವದೇತ್ಸತ್ಯಂ ಕಸ್ಮಿನ್ಕಾಲೇಽನೃತಂ ವದೇತ್ ॥೩॥

'ಸತ್ಯ' ಎಂದರೇನು? 'ಅನೃತ' ಎಂದರೇನು? ಯಾವ ಕಾರ್ಯವು ಸನಾತನಧರ್ಮಕ್ಕೆ ಅನುಕೂಲವಾದುದು? ಯಾವ ಕಾಲದಲ್ಲಿ ಸತ್ಯವನ್ನು ಹೇಳಬೇಕು? ಯಾವ ಕಾಲದಲ್ಲಿ ಸುಳ್ಳನ್ನು ಹೇಳಬೇಕು?"

ಭೀಷ್ಮನು ಹೇಳುತ್ತಾನೆ :

ಸತ್ಯಸ್ಯ ವಚನಂ ಸಾಧು ನ ಸತ್ಯಾದ್ವಿದ್ಯತೇ ಪರಮ್ ।
ಯತ್ತು ಲೋಕೇಷು ದುರ್ಜ್ಞಾನಂ ತತ್ಪ್ರವಕ್ಷ್ಯಾಮಿ ಭಾರತ ॥೪॥

"ಯುಧಿಷ್ಠಿರ! ಸತ್ಯವನ್ನು ಹೇಳುವುದು ಒಳ್ಳೆಯದೇ ಸರಿ. ಸತ್ಯಕ್ಕಿಂತಲೂ ಶ್ರೇಷ್ಠವಾದುದು ಮತ್ತೊಂದಿಲ್ಲ. ಆದರೆ ಲೋಕದಲ್ಲಿ ಸತ್ಯವು ಯಾವುದೆಂಬುದನ್ನು ತಿಳಿಯುವುದು ಬಹಳ ದುಸ್ತರವೇ ಆಗುತ್ತದೆ. ಅದನ್ನೇ ನಿನಗೆ ಹೇಳುತ್ತೇನೆ.

ಭವೇತ್ಸತ್ಯಂ ನ ವಕ್ತವ್ಯಂ ವಕ್ತವ್ಯಮನೃತಂ ಭವೇತ್ ।
ಯತ್ರಾನೃತಂ ಭವೇತ್ಸತ್ಯಂ ಸತ್ಯಂ ವಾಪ್ಯನೃತಂ ಭವೇತ್ ॥೫॥

ಎಲ್ಲಿ ಅನೃತವು ಸತ್ಯದ ಕಾರ್ಯವನ್ನು ಮಾಡುವುದೋ–ಅಲ್ಲಿ ಸುಳ್ಳನ್ನೇ ಹೇಳಬೇಕಾಗುತ್ತದೆ. ಎಲ್ಲಿ ಸತ್ಯವು ಅನೃತದ ಕಾರ್ಯವನ್ನು ಮಾಡುತ್ತದೆಯೋ–ಅಲ್ಲಿ ಸತ್ಯವು ಹೇಳಬಾರದುದೇ ಆಗುತ್ತದೆ. ಸತ್ಯಾನೃತಗಳನ್ನು ವಿವೇಚಿಸಿ ಹೇಳಬೇಕು. ಪ್ರಾಣಾಪಾಯದ ಸಮಯದಲ್ಲಿ ಸುಳ್ಳು ಹೇಳುವುದರಿಂದ ಪ್ರಾಣಾಪಾಯವು ತಪ್ಪುವಂತಿದ್ದರೆ ಸುಳ್ಳನ್ನೇ ಹೇಳಬೇಕು. ಸತ್ಯವನ್ನು ಹೇಳುವುದರಿಂದ ಒಬ್ಬನಿಗೆ ಮಾನಹಾನಿ-ಪ್ರಾಣಹಾನಿಗಳಾಗುವುದಿದ್ದರೆ ಸತ್ಯವನ್ನು ಹೇಳಬಾರದು. (ಸತ್ಯವನ್ನು ಹೇಳದಿದ್ದರೆ ಸುಳ್ಳನ್ನು ಹೇಳಬೇಕೆಂದೇನೂ ಇಲ್ಲ. ಸುಮ್ಮನಿರಬಹುದು.)

ತಾದೃಶೋ ಬಧ್ಯತೇ ಬಾಲೋ ಯತ್ರ ಸತ್ಯಮನಿಷ್ಠಿತಮ್ ।
ಸತ್ಯಾನೃತೇ ವಿನಿಶ್ಚಿತ್ಯ ತತೋ ಭವತಿ ಧರ್ಮವಿತ್ ॥೬॥

ವಾಚಿಕಸತ್ಯವು ಸ್ಥಿರವಲ್ಲದಿರುವಾಗ–ಸತ್ಯಾನೃತಗಳ ತತ್ತ್ವವನ್ನು ತಿಳಿಯದಿರುವ ಮೂರ್ಖನು ಪಾಪಿಯಾಗಿ ಸಂಸಾರಬಂಧನದಲ್ಲಿ ಸಿಕ್ಕಿಹಾಕಿ

ಕೊಳ್ಳುತ್ತಾನೆ. ಆದುದರಿಂದ ಸತ್ಯಾಸತ್ಯಗಳನ್ನು ಸಮಯಾನುಸಾರವಾಗಿ ನಿರ್ಣಯಿಸಿ ಕಾರ್ಯವನ್ನು ಮಾಡುವವನೇ ಧರ್ಮವಿದನು.

ಅಪ್ಯನಾರ್ಯೋऽಕೃತಪ್ರಜ್ಞಃ ಪುರುಷೋऽಪ್ಯತಿದಾರುಣಃ ।
ಸುಮಹತ್ಪ್ರಾಪ್ನುಯಾತ್ಪುಣ್ಯಂ ಬಲಾಕೋऽನ್ಧವಧಾದಿವ ॥೭॥

ಅನಾರ್ಯನಾಗಿದ್ದರೂ, ಬುದ್ಧಿಶೂನ್ಯನಾಗಿದ್ದರೂ, ಮಹಾಕ್ರೂರಿ ಯಾಗಿದ್ದರೂ–ಅಂತಹ ಪುರುಷನೂ ಕೆಲವು ಸಂದರ್ಭಗಳಲ್ಲಿ ಕುರುಡಾದ ಪಶುವನ್ನು ಸಂಹರಿಸಿದ 'ಬಲಾಕ' ಎಂಬ ಹೆಸರಿನ ವ್ಯಾಧನಂತೆ ಮಹಾ ಪುಣ್ಯವನ್ನು ಪಡೆದುಕೊಳ್ಳುತ್ತಾನೆ.*

ಕಿಮಾಶ್ಚರ್ಯಂ ಚ ಯನ್ಮೂಢೋ ಧರ್ಮಕಾಮೋऽಪ್ಯಧರ್ಮವಿತ್ ।
ಸುಮಹತ್ಪ್ರಾಪ್ನುಯಾತ್ಪುಣ್ಯಂ ಗಙ್ಗಾಯಾಮಿವ ಕೌಶಿಕಃ ॥೮॥

ಎಂತಹ ಆಶ್ಚರ್ಯದ ವಿಷಯವಿದು! ಧರ್ಮಮಾರ್ಗದಲ್ಲಿಯೇ ಇರಬೇಕೆಂಬ ಇಚ್ಛೆಯನ್ನು ಹೊಂದಿದ್ದ ಮೂರ್ಖನಾದ ತಪಸ್ವಿಯೊಬ್ಬನು ನಿಜವನ್ನು ಹೇಳಿಯೂ ಅಧರ್ಮಕಾರ್ಯವನ್ನು ಮಾಡಿದವನಂತೆ ಪಾಪದ ಫಲವನ್ನೇ ಪಡೆಯಬೇಕಾಯಿತು.[1] ಅಂತೆಯೇ ಗಂಗಾತೀರದಲ್ಲಿದ್ದ ಗೂಬೆಯಂತೆ ಹಿಂಸೆಯ ಕಾರ್ಯವನ್ನು ಮಾಡಿದರೂ ಮಹಾಪುಣ್ಯವನ್ನೇ ಪಡೆದುಕೊಳ್ಳುತ್ತಾನೆ."[2]

---

* ಕರ್ಣಪರ್ವದ ೬೯ನೆಯ ಅಧ್ಯಾಯದಲ್ಲಿ ಈ ಕಥೆಯು ಬಂದಿದೆ. ಸಂಪುಟ ೧೯ ಪುಟ ೪೨೨೬-೨೭.

1 ಈ ಕಥೆಯೂ ಕರ್ಣಪರ್ವದ ೬೯ನೆಯ ಅಧ್ಯಾಯದಲ್ಲಿಯೇ ಬರುತ್ತದೆ.

2 ಗಂಗಾನದಿಯ ತೀರದಲ್ಲಿ ಒಂದು ಸರ್ಪಿಣಿಯು ಸಾವಿರಾರು ಮೊಟ್ಟೆಗಳನ್ನಿಟ್ಟಿದ್ದಿತು. ಗೂಬೆಯು ಹಾವಿನ ಮೊಟ್ಟೆಗಳನ್ನು ಒಂದೊಂದನ್ನಾಗಿಯೇ ತಿಂದುಹಾಕಿತು. ಅದರಿಂದ ಗೂಬೆಗೆ ಮಹಾಪುಣ್ಯವೇ ಪ್ರಾಪ್ತವಾಯಿತು. ಹೇಗೆಂದರೆ : ಗೂಬೆಯು ಆ ಹಾವಿನ ಮೊಟ್ಟೆಗಳನ್ನು ತಿಂದುಹಾಕದಿದ್ದರೆ ಮೊಟ್ಟೆಗಳೆಲ್ಲ ಒಡೆದು ಹಾವುಗಳಾಗಿ ನೂರಾರು ಪ್ರಾಣಿಗಳಿಗೆ ಉಪದ್ರವವನ್ನು ಕೊಡುತ್ತಿದ್ದುವು. ಗೂಬೆಯು ಹಾವಿನ ಮೊಟ್ಟೆಗಳನ್ನು ಭಕ್ಷಿಸಿದ್ದರಿಂದ ಜನರಿಗೆ ಉಪದ್ರವವು ತಪ್ಪಿತು. ಗೂಬೆಯು ಹಿಂಸಾಕರ್ಮವನ್ನೇ ಮಾಡಿದರೂ ಲೋಕಹಿತದೃಷ್ಟಿಯಿಂದ ಅದು ಮಾಡಿದ ಕಾರ್ಯವು ಮಹೋಪಕಾರವೇ ಆಯಿತು.

ತಾದೃಶೋಽಯಮನುಪ್ರಶ್ನೋ ಯತ್ರ ಧರ್ಮಃ ಸುದುರ್ಲಭಃ ।
ದುಷ್ಕರಃ ಪ್ರತಿಸಂಖ್ಯಾತುಂ ತತ್ಕೇನಾತ್ರ ವ್ಯವಸ್ಯತಿ ॥೯॥

ಯುಧಿಷ್ಠಿರ! ನೀನು ಕೇಳಿರುವ ಪ್ರಶ್ನೆಯು ಹೀಗೆಯೇ ಇದೆ. ಧರ್ಮದ ಸ್ವರೂಪವನ್ನು ವಿವೇಚಿಸುವುದೂ ಮತ್ತು ತಿಳಿಯುವುದೂ ಬಹಳ ಕಠಿನವಾದ ಕಾರ್ಯವೇ ಆಗಿದೆ. ಇದನ್ನು ಪ್ರತಿಪಾದಿಸುವುದೂ ದುಷ್ಕರವಾಗಿಯೇ ಇದೆ. ಧರ್ಮದ ವಿಷಯವನ್ನು ಯಾರು ತಾನೇ ನಿಶ್ಚಯಮಾಡಿ ಹೇಳಬಲ್ಲರು? ಎಲ್ಲ ಸಮಯಗಳಲ್ಲಿಯೂ ಇದೇ ಧರ್ಮವೆಂದು ಎಣಿಸಿ ಹೇಳಲು ಸಾಧ್ಯವಿಲ್ಲ.

ಪ್ರಭವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಮ್ ।
ಯಃ ಸ್ಯಾತ್ಪ್ರಭವಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥೧೦॥

ಪ್ರಾಣಿಗಳ ಅಭ್ಯುದಯಕ್ಕಾಗಿಯೂ ಮತ್ತು ಕಲ್ಯಾಣಕ್ಕಾಗಿಯೂ ಧರ್ಮಪ್ರವಚನವು ಮಾಡಲ್ಪಟ್ಟಿದೆ. ಆದುದರಿಂದ ಯಾವುದು ಈ ಉಪದೇಶಗಳಿಂದ ಯುಕ್ತವಾಗಿದೆಯೋ ಮತ್ತು ಯಾವುದರಿಂದ ಮನುಷ್ಯ ಕೋಟಿಗೆ ಅಭ್ಯುದಯ-ನಿಃಶ್ರೇಯಸಗಳು ಸಿದ್ಧಿಸುವುವೋ–ಅದೇ ಧರ್ಮ ವೆಂದು ಶಾಸ್ತ್ರವಿದರ ನಿಶ್ಚಯವಾಗಿದೆ.

ಧಾರಣಾದ್ಧರ್ಮಮಿತ್ಯಾಹುರ್ಧರ್ಮೇಣ ವಿಧೃತಾಃ ಪ್ರಜಾಃ ।
ಯಃ ಸ್ಯಾದ್ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ॥೧೧॥

ಜಗತ್ತನ್ನೇ ಧಾರಣಮಾಡಿರುವುದರಿಂದ (ಅಧೋಗತಿಯಿಂದ ಮೇಲ ಕ್ಕೆತ್ತಿ ರಕ್ಷಣೆಮಾಡುವುದರಿಂದ) 'ಧರ್ಮ' ಎನ್ನುತ್ತಾರೆ. ಧರ್ಮದಿಂದ ಪ್ರಜೆಗಳು ಧರಿಸಲ್ಪಟ್ಟಿರುತ್ತಾರೆ. ಪ್ರಜೆಗಳನ್ನೂ ಅಲ್ಲದೇ ಜಗತ್ತನ್ನೇ ಧರ್ಮವು ಧರಿಸಿದೆ. ಧಾರಣ-ಪೋಷಣಯುಕ್ತವಾದುದು ಯಾವುದಿರುವುದೋ–ಅದೇ ಧರ್ಮವೆಂಬುದು ಧರ್ಮವಿದರ ನಿಶ್ಚಯವಾಗಿದೆ.

ಅಹಿಂಸಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಮ್ ।
ಯಃ ಸ್ಯಾದಹಿಂಸಾಸಂಪೃಕ್ತಃ ಸ ಧರ್ಮ ಇತಿ ನಿಶ್ಚಯಃ ॥೧೨॥

ಪ್ರಾಣಿಗಳಿಗೆ ಹಿಂಸೆಯಾಗಬಾರದೆಂಬ ಆಶಯದಿಂದ ಧರ್ಮ ಪ್ರವಚನವು ಮಾಡಲ್ಪಟ್ಟಿದೆ. ಯಾವುದು ಅಹಿಂಸೆಯಿಂದ ಯುಕ್ತವಾಗಿರು ವುದೋ–ಅದೇ ಧರ್ಮವೆಂದು ಧರ್ಮವಿದರ ನಿಶ್ಚಯವಾಗಿದೆ.

ಶ್ರುತಿಧರ್ಮ ಇತಿ ಹ್ಯೇಕೇ ನೇತ್ಯಾಹುರಪರೇ ಜನಾಃ ।
ನ ಚ ತತ್ಪ್ರತ್ಯಸೂಯಾಮೋ ನ ಹಿ ಸರ್ವಂ ವಿಧೀಯತೇ ॥೧೬॥

ವೇದದಲ್ಲಿ ಪ್ರತಿಪಾದಿಸಿರುವುದೇ ಧರ್ಮವೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಕೆಲವರು ಈ ಸಿದ್ಧಾಂತವನ್ನು ಒಪ್ಪುವುದಿಲ್ಲ. ಈ ಎರಡು ಅಭಿಪ್ರಾಯಗಳಲ್ಲಿ ನಾವು ಯಾವುದನ್ನೂ ದೂಷಿಸುವುದಿಲ್ಲ. ಆದರೆ ವೇದದಲ್ಲಿ ಧರ್ಮಕ್ಕೆ ಸಂಬಂಧಿಸಿದಂತೆ ಎಲ್ಲ ವಿಷಯಗಳೂ ಬಂದಿರುವುದಿಲ್ಲ. ವೇದವೇ ಎಲ್ಲ ಧರ್ಮಗಳನ್ನೂ ವಿಧಿಸಿರುವುದಿಲ್ಲ.

ಯೇಽನ್ಯಾಯೇನ ಜಿಹೀರ್ಷನ್ತೋ ಧನಮಿಚ್ಛನ್ತಿ ಕಸ್ಯಚಿತ್ ।
ತೇಭ್ಯಸ್ತು ನ ತದಾಖ್ಯೇಯಂ ಸ ಧರ್ಮ ಇತಿ ನಿಶ್ಚಯಃ ॥೧೪॥

ಕಳ್ಳರು ಧನಿಕನೊಬ್ಬನ ಧನವನ್ನು ಅನ್ಯಾಯದಿಂದ ಕಿತ್ತುಕೊಳ್ಳಲು ಇಚ್ಛಿಸುತ್ತಾರೆ. ಆದರೆ ಅವರಿಗೆ ಧನವು ಎಲ್ಲಿರುವುದೆಂಬ ವಿಷಯವಾಗಲೀ ಧನಿಕನೆಲ್ಲಿರುವನೆಂಬ ವಿಷಯವಾಗಲೀ–ತಿಳಿದಿರುವುದಿಲ್ಲ. ಆ ಸಮಯದಲ್ಲಿ ಕಳ್ಳರು ಧನಿಕನಿಗೆ ಸಮೀಪವರ್ತಿಗಳಾಗಿರುವವರನ್ನು ಆ ವಿಷಯವಾಗಿ ಕೇಳುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಸುಳ್ಳೆನಿಸಿದರೂ ಧನಿಕನ ಅಥವಾ ಧನದ ಸುಳಿವನ್ನು ಕಳ್ಳರಿಗೆ ಕೊಡದಿರುವುದೇ ಧರ್ಮವೆಂಬುದು ವಿದ್ವಾಂಸರ ನಿಶ್ಚಯವಾಗಿದೆ.

ಅಕೂಜನೇನ ಚೇನ್ಮೋಕ್ಷೋ ನಾವಕೂಜೇತ್ಕಥಂಚನ ।
ಅವಶ್ಯಂ ಕೂಜಿತವ್ಯೇ ವಾ ಶಙ್ಕೇರನ್ವಾಪ್ಯಕೂಜನಾತ್ ।
ಶ್ರೇಯಸ್ತತ್ರಾನೃತಂ ವಕ್ತುಂ ಸತ್ಯಾದಿತಿ ವಿಚಾರಿತಮ್ ॥೧೫॥

ಕಳ್ಳರು ಬಂದು 'ಧನಿಕರೆಲ್ಲಿ'–ಎಂದು ಕೇಳಿದಾಗ ಮಾತನಾಡದೇ ಇರುವುದರಿಂದಲೇ ಕಳ್ಳರು ಸುಮ್ಮನಾಗುವುದಾದರೆ ಮಾತನಾಡದಿರುವುದೇ ಶ್ರೇಯಸ್ಕರ. ಮೌನವನ್ನು ಧರಿಸಬೇಕು. ಯಾವುದೇ ಕಾರಣದಿಂದಲೂ ಮಾತನಾಡಲೇಬಾರದು. ಮಾತನಾಡದಿದ್ದರೆ ತನ್ನನ್ನು ಸಂದೇಹಿಸಬಹುದೆಂದು ಕಂಡುಬಂದಾಗ–ಅವಶ್ಯವಾಗಿ ಮಾತನಾಡಲೇಬೇಕಾಗಿದ್ದರೆ–ಆ ಸಂದರ್ಭದಲ್ಲಿ ಸತ್ಯಕ್ಕಿಂತಲೂ ಸುಳ್ಳುಹೇಳುವುದೇ ಶ್ರೇಯಸ್ಕರ. ಧನಿಕನು ಎಲ್ಲಿಯೋ ಹೋಗಿರುವನೆಂದೋ, ಧನವನ್ನೆಲ್ಲಾ ಬೇರೆಯ ಕಡೆಗೆ ಒಯ್ದಿ

ರುವನೆಂದೋ ಹೇಳಿಬಿಡಬೇಕು. ಇಂತಹ ಸಂದರ್ಭಗಳಲ್ಲಿ ಹೀಗೆ ಹೇಳುವುದೇ ಸರಿಯೆಂದು ಹಿರಿಯರು ವಿಚಾರಮಾಡಿ ನಿಶ್ಚಯಿಸಿರುತ್ತಾರೆ.

ಯಃ ಪಾಪೈಃ ಸಹ ಸಮ್ಬನ್ಧಾನ್ಮುಚ್ಯತೇ ಶಪಥಾದಪಿ ।
ನ ತೇಭ್ಯೋಽಪಿ ಧನಂ ದೇಯಂ ಶಕ್ಯೇ ಸತಿ ಕಥಂಚನ ।
ಪಾಪೇಭ್ಯೋ ಹಿ ಧನಂ ದತ್ತಂ ದಾತಾರಮಪಿ ಪೀಡಯೇತ್ ॥೧೭॥

ಅಸತ್ಯವಾದ ಶಪಥಗಳನ್ನಾದರೂ ಮಾಡಿ ಕಳ್ಳರಿಂದ (ಪಾಪಿಷ್ಠರಿಂದ) ಬಿಡಿಸಿಕೊಳ್ಳಲು ಯತ್ನಿಸಬೇಕು. ಸಾಧ್ಯವಾದಮಟ್ಟಿಗೂ ಅವರಿಗೆ ಧನವು ಸಿಕ್ಕದಂತೆ ಮಾಡಬೇಕು. ಪಾಪಿಷ್ಠರಾದವರಿಗೆ (ಕಳ್ಳರಿಗೆ) ಕೊಡುವ ಧನವು ದಾತನನ್ನೇ ಪೀಡಿಸುತ್ತದೆ.

ಸ್ವಶರೀರೋಪರೋಧೇನ ಧನಮಾದಾತುಮಿಚ್ಛತಃ ।
ಸತ್ಯಸಮ್ಪ್ರತಿಪತ್ತ್ಯರ್ಥಂ ಯದ್ಬ್ರೂಯುಃ ಸಾಕ್ಷಿಣಃ ಕ್ವಚಿತ್ ।
ಅನುಕ್ತ್ವಾ ತತ್ರ ತದ್ವಾಚ್ಯಂ ಸರ್ವೇ ತೇಽನೃತವಾದಿನಃ ॥೧೮॥

ಒಬ್ಬನು ಹಣಗಾರನೊಬ್ಬನಲ್ಲಿ ಸಾಲವನ್ನು ಪಡೆದಿರುತ್ತಾನೆ. ಆ ಸಾಲವನ್ನವನು ಜೀತಮಾಡಿ ತೀರಿಸಬೇಕೆಂದು ಇಚ್ಛಿಪಟ್ಟಿರುತ್ತಾನೆ. ಹಾಗೆಯೇ ಜೀತವನ್ನು ಮಾಡುತ್ತಿರುತ್ತಾನೆ. ಲೋಭಿಯಾದ ಹಣಗಾರನು ಎಷ್ಟು ವರ್ಷ ಜೀತಮಾಡಿದರೂ ಹಣವು ತೀರಿತೆಂದು ಹೇಳುವುದೇ ಇಲ್ಲ. ಆ ಸಮಯದಲ್ಲಿ ಸಾಲಗಾರನು ಸಂವಾದಾರ್ಥವಾಗಿ ಸಾಕ್ಷಿಗಳನ್ನು ಕರೆಸುತ್ತಾನೆ. ಆ ಸಮಯದಲ್ಲಿ ಸಾಕ್ಷಿಗಳು ಏನನ್ನೋ ಹೇಳುತ್ತಾರೆ. ಹೇಳಬೇಕಾದುದನ್ನು ಹೇಳುವುದಿಲ್ಲ. ಆಗ ಅವರೆಲ್ಲರೂ ಸುಳ್ಳುಗಾರರಾಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಹೇಳಬೇಕಾದುದನ್ನು ಹೇಳದೇ ಇದ್ದರೂ ದೋಷಕ್ಕೆ ಭಾಗಿಗಳಾಗಬೇಕಾಗುತ್ತದೆ.

ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ।
ಅರ್ಥಸ್ಯ ರಕ್ಷಣಾರ್ಥಾಯ ಪರೇಷಾಂ ಧರ್ಮಕಾರಣಾತ್ ॥೧೯॥

ಪ್ರಾಣಾಪಾಯದ ಸಮಯದಲ್ಲಿ, ವಿವಾಹಸಮಯದಲ್ಲಿ, ಇತರರ ಧನವನ್ನು ರಕ್ಷಿಸಬೇಕಾಗಿರುವ ಸಮಯದಲ್ಲಿ, ಧರ್ಮವನ್ನು ರಕ್ಷಿಸಬೇಕಾಗಿರುವ

ಸಮಯದಲ್ಲಿ–ಸುಳ್ಳನ್ನು ಹೇಳಬೇಕಾಗಬಹುದು. ಅಂತಹ ಸಮಯಗಳಲ್ಲಿ ಸುಳ್ಳುಹೇಳಿದರೂ ದೋಷವಿಲ್ಲ.

ಪರೇಷಾಂ ಸಿದ್ಧಿಮಾಕಾಂಕ್ಷನ್ನೀಚಃ ಸ್ಯಾದ್ಧರ್ಮಭಿಕ್ಷುಕಃ ।
ಪ್ರತಿಶ್ರುತ್ಯ ಪ್ರದಾತವ್ಯಃ ಸ್ವಕಾರ್ಯಸ್ತು ಬಲಾತ್ಕೃತಃ ॥೨೦॥

ನೀಚನೊಬ್ಬನು ಇತರರ ಕಾರ್ಯಸಿದ್ಧಿಯನ್ನು ಅಪೇಕ್ಷಿಸಿ ಧರ್ಮದ ಸಲುವಾಗಿ ಭಿಕ್ಷೆಬೇಡಲು ಬಂದರೆ ಭಿಕ್ಷೆಯನ್ನು ನೀಡುವೆನೆಂದು ಹೇಳಿದ ನಂತರ ಅವನು ನೀಚಪುರುಷನೆಂದು ತಿಳಿದರೂ ಪ್ರತಿಜ್ಞೆಮಾಡಿದ ಭಿಕ್ಷೆಯನ್ನು (ಧನವನ್ನು) ಕೊಡಲೇಬೇಕು. ಹಾಗೆ ಭಿಕ್ಷೆಯನ್ನು ಪಡೆದ ನೀಚನು ಸ್ವಾರ್ಥಕ್ಕಾಗಿ ಆ ಧನವನ್ನು ಉಪಯೋಗಿಸಿಕೊಂಡರೆ ಆಗ ಅವನು ದಂಡ್ಯನೇ ಆಗುತ್ತಾನೆ.

ಯಃ ಕಶ್ಚಿದ್ಧರ್ಮಸಮಯಾತ್ಪ್ರಚ್ಯುತೋ ಧರ್ಮಸಾಧನಃ ।
ದಣ್ಡೇನೈವ ಸ ಹನ್ತವ್ಯಸ್ತಂ ಪನ್ಥಾನಂ ಸಮಾಶ್ರಿತಃ ॥೨೧॥

ಯಾವನಾದರೊಬ್ಬ ಧರ್ಮಸಾಧಕನು ಧಾರ್ಮಿಕವಾದ ಆಚಾರಗಳಿಂದ ಭ್ರಷ್ಟನಾಗಿ ಪಾಪಮಾರ್ಗವನ್ನು ಆಶ್ರಯಿಸಿದುದೇ ಆದರೆ ಅಂತಹವನನ್ನು ದಂಡದಿಂದಲೇ ಸಂಹಾರಮಾಡಬೇಕು.

ಚ್ಯುತಃ ಸದೈವ ಧರ್ಮೇಭ್ಯೋಽಮಾನವಂ ಧರ್ಮಮಾಸ್ಥಿತಃ ।
ಶಠಃ ಸ್ವಧರ್ಮಮುತ್ಸೃಜ್ಯ ತಮಿಚ್ಛೇದುಪಜೀವಿತುಮ್ ॥೨೨॥

ಸರ್ವೋಪಾಯೈರ್ನಿಹನ್ತವ್ಯಃ ಪಾಪೋ ನಿಕೃತಿಜೀವನಃ ।
ಧನಮಿತ್ಯೇವ ಪಾಪಾನಾಂ ಸರ್ವೇಷಾಮಿಹ ನಿಶ್ಚಯಃ ॥೨೩॥

ಯಾವ ದುಷ್ಟನು ಧರ್ಮಮಾರ್ಗದಿಂದ ಚ್ಯುತನಾಗಿರುವನೋ, ಆಸುರೀವೃತ್ತಿಯನ್ನು ಅನುಸರಿಸುತ್ತಿರುವನೋ, ಸ್ವಧರ್ಮವನ್ನು ಪರಿತ್ಯಜಿಸಿ ಪಾಪಕಾರ್ಯದಿಂದ ಜೀವನವನ್ನು ನಡೆಸುತ್ತಿರುವನೋ–ಅಂತಹ ವಂಚಕನನ್ನು ಸರ್ವೋಪಾಯಗಳಿಂದಲೂ ಸಂಹಾರಮಾಡಬೇಕು. ಪುಣ್ಯಾತ್ಮರು ಧರ್ಮವನ್ನೇ ಶ್ರೇಷ್ಠವೆಂದು ನಿಶ್ಚಯಿಸಿದರೆ–ಪಾಪಿಷ್ಠರಾದವರು ಧನವೇ ಶ್ರೇಷ್ಠವೆಂಬ ನಿಶ್ಚಯಕ್ಕೆ ಬಂದಿರುತ್ತಾರೆ. ಅಂತಹ ಧನವನ್ನು

ಸಂಪಾದಿಸಲು ಅವರು ಯಾವ ಪಾಪಕಾರ್ಯಗಳನ್ನು ಮಾಡಲೂ ಹಿಂಜರಿಯುವುದಿಲ್ಲ.

ಅವಿಷಹ್ಯಾ ಹ್ಯಸಮ್ಭೋಜ್ಯಾ ನಿಕೃತ್ಯಾ ಪತನಂ ಗತಾಃ ॥೨೪॥
ಚ್ಯುತಾ ದೇವಮನುಷ್ಯೇಭ್ಯೋ ಯಥಾ ಪ್ರೇತಾಸ್ತಥೈವ ತೇ ।
ನಿರ್ಯಜ್ಞಾಸ್ತಪಸಾ ಹೀನಾ ಮಾ ಸ್ಮ ತೈಃ ಸಹ ಸಙ್ಗಮಃ ॥೨೫॥

ಇಂತಹ ನೀಚಪುರುಷರು ಸತ್ಪುರುಷರಿಗೆ ಸಹಿಸಲಸಾಧ್ಯರಾಗುತ್ತಾರೆ. ಭೋಜನಮಾಡಿಸಲು ಕೂಡ ಯೋಗ್ಯರಲ್ಲದವರಾಗುತ್ತಾರೆ. ವಂಚನೆಯಿಂದಲೇ ಅವರು ಪತಿತರಾಗಿಹೋಗುತ್ತಾರೆ. ಯಜ್ಞ-ತಪಸ್ಸುಗಳಿಂದ ಹೀನರಾದ ದೇವ-ಮನುಷ್ಯಲೋಕಗಳೆರಡರಿಂದಲೂ ಚ್ಯುತರಾಗುವ ಅವರು ಗತಿಗಾಣದ ಪ್ರೇತಗಳಂತಿರುತ್ತಾರೆ. ಅಂತಹವರೊಡನೆ ನಿನ್ನ ಸಂಬಂಧವಿಲ್ಲದಿರಲಿ.

ಧನನಾಶಾದ್ದುಃಖತರಂ ಜೀವಿತಾದ್ವಿಪ್ರಯೋಜನಮ್ ।
ಅಯಂ ತೇ ರೋಚತಾಂ ಧರ್ಮ ಇತಿ ವಾಚ್ಯಃ ಪ್ರಯತ್ನತಃ ॥೨೬॥

ಯುಧಿಷ್ಠಿರ! ದುಷ್ಟರಿಗೆ ನೀನು ಈ ಮಾತನ್ನು ಪ್ರಯತ್ನಪೂರ್ವಕವಾಗಿ ಹೇಳಬೇಕು. "ಧನನಾಶಕ್ಕಿಂತಲೂ ಅಧಿಕವಾದ ದುಃಖವನ್ನುಂಟುಮಾಡುವುದು ಜೀವನದ ವಿನಾಶ. ಆದುದರಿಂದ ಧನದ ಮೇಲಿನ ಹಂಬಲವನ್ನು ತೊರೆಯಿರಿ. ಈ ಸನಾತನಧರ್ಮವು ನಿಮಗೆ ರುಚಿಸುವಂತಾಗಲಿ."

ನ ಕಶ್ಚಿದಸ್ತಿ ಪಾಪಾನಾಂ ಧರ್ಮ ಇತ್ಯೇಷ ನಿಶ್ಚಯಃ ।
ತಥಾಗತಂ ಚ ಯೋ ಹನ್ಯಾನ್ನಾಸೌ ಪಾಪೇನ ಲಿಪ್ಯತೇ ॥೨೭॥

ಧರ್ಮವೆಂಬುದೇ ಇಲ್ಲ–ಎಂಬುದು ಪಾಪಿಷ್ಠರ ನಿಶ್ಚಯವಾಗಿರುತ್ತದೆ. ಹಾಗಿರುವ ಪಾಪಿಯನ್ನು ಕೊಲ್ಲುವವನಿಗೆ ಪಾಪದ ಸಂಬಂಧವಿರುವುದಿಲ್ಲ.

ಸ್ವಕರ್ಮಣಾ ಹತಂ ಹನ್ತಿ ಹತ ಏವ ಸ ಹನ್ಯತೇ ।
ತೇಷು ಯಃ ಸಮಯಂ ಕಶ್ಚಿತ್ಕುರ್ವೀತ ಹತಬುದ್ಧಿಷು ॥೨೮॥

ಪಾಪಿಷ್ಠರಾದವರು ತಮ್ಮ ಕರ್ಮಗಳಿಂದಲೇ ಹತರಾಗುತ್ತಾರೆ. ಹಾಗೆ ಹತರಾದವರನ್ನು ನೆಪಮಾತ್ರಕ್ಕೆ ಮತ್ತೊಬ್ಬರು ಸಂಹರಿಸುತ್ತಾರೆ. ಆದುದರಿಂದ ಪಾಪಿಗಳನ್ನು ಸಂಹರಿಸುವುದರಿಂದ ಯಾವ ವಿಧವಾದ ಪಾಪವೂ ಅಂಟುವುದಿಲ್ಲ. ಅಂತಹ ಹತಬುದ್ಧಿಯವರಾದ ಪಾಪಿಷ್ಠರನ್ನು ಸಂಹರಿಸುವ ಪ್ರತಿಜ್ಞೆಯನ್ನು ಮಾಡುವವನೇ ಧರ್ಮಾತ್ಮನು.

ಯಥಾ ಕಾಕಾಶ್ಚ ಗೃಧ್ರಾಶ್ಚ ತಥೈವೋಪಧಿಜೀವಿನಃ ।
ಊರ್ಧ್ವಂ ದೇಹವಿಮೋಕ್ಷಾತ್ತೇ ಭವನ್ತ್ಯೇತಾಸು ಯೋನಿಷು ॥೨೯॥

ಕಾಗೆಗಳಂತೆ ಮತ್ತು ರಣಹದ್ದುಗಳಂತೆ ವಂಚನೆಯಿಂದ ಜೀವಿಸುವ ಅಂತಹ ಜನರೂ ಜೀವನವನ್ನು ನಡೆಸುತ್ತಾರೆ. ಮರಣಾನಂತರದಲ್ಲಿ ವಂಚಕರೆಲ್ಲರೂ ಕಾಗೆ-ಹದ್ದುಗಳ ಯೋನಿಗಳಲ್ಲಿಯೇ ಜನ್ಮತಾಳುತ್ತಾರೆ.

ಯಸ್ಮಿನ್ಯಥಾ ವರ್ತತೇ ಯೋ ಮನುಷ್ಯ-
ಸ್ತಸ್ಮಿಂಸ್ತಥಾ ವರ್ತಿತವ್ಯಂ ಸ ಧರ್ಮಃ ।
ಮಾಯಾಚಾರೋ ಮಾಯಯಾ ಬಾಧಿತವ್ಯಃ
ಸಾಧ್ವಾಚಾರಃ ಸಾಧುನಾ ಪ್ರತ್ಯುಪೇಯಃ ॥೩೦॥

ಯಾವ ಮನುಷ್ಯನು, ಯಾವನಲ್ಲಿ ಹೇಗೆ ವ್ಯವಹರಿಸುವನೋ–ಅದಕ್ಕೆ ಅನುಸಾರವಾಗಿಯೇ ಆ ಮನುಷ್ಯನೂ ಅವನ ವಿಷಯದಲ್ಲಿ ಹಾಗೆಯೇ ವ್ಯವಹರಿಸಬೇಕು. ಅದೇ ಧರ್ಮ. ಕಪಟಪೂರ್ವಕವಾದ ಆಚಾರ-ವ್ಯವಹಾರ ಗಳಿರುವವನನ್ನು ಕಪಟಪೂರ್ವಕವಾದ ಆಚಾರ-ವ್ಯವಹಾರಗಳಿಂದಲೇ ಬಾಧಿಸಬೇಕು. ಸದಾಚಾರ-ಸದ್ವ್ಯವಹಾರಗಳುಳ್ಳವನನ್ನು ಸದಾಚಾರ-ಸದ್ವ್ಯವಹಾರಗಳ ಮೂಲಕವಾಗಿಯೇ ಪರಿಗ್ರಹಿಸಬೇಕು.”

೧೦೯ನೆಯ ಅಧ್ಯಾಯವು ಮುಗಿಯಿತು.

೧೧೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸದಾಚಾರ–ಈಶ್ವರಭಕ್ತಿ ಮೊದಲಾದ ಮನುಷ್ಯನನ್ನು ದುಃಖದಿಂದ ಪಾರುಮಾಡುವ ವಿಧಾನಗಳ ಕಥನ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕ್ಲಿಶ್ಯಮಾನೇಷು ಭೂತೇಷು ತೈಸ್ತೈರ್ಭಾವೈಸ್ತತಸ್ತತಃ ।
ದುರ್ಗಾಣ್ಯತಿತರೇದ್ಯೇನ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹ! ಜಗತ್ತಿನಲ್ಲಿರುವ ಪ್ರಾಣಿಗಳು ಭಿನ್ನ-ಭಿನ್ನ ಪ್ರಕಾರ ಗಳಿಂದ ಅಲ್ಲಲ್ಲಿ ಕ್ಲೇಶಪಡುತ್ತಿವೆ. ಯಾವ ಉಪಾಯದಿಂದ ಪ್ರಾಣಿಗಳು

(ಮನುಷ್ಯರು) ಅಂತಹ ಕಷ್ಟಗಳನ್ನು ದಾಟಲು ಸಮರ್ಥರಾಗುತ್ತಾರೆ? ಈ ವಿಷಯವನ್ನು ಹೇಳು.”

ಭೀಷ್ಮನು ಉತ್ತರಿಸುತ್ತಾನೆ :

ಆಶ್ರಮೇಷು ಯಥೋಕ್ತೇಷು ಯಥೋಕ್ತಂ ಯೇ ದ್ವಿಜಾತಯಃ ।
ವರ್ತನ್ತೇ ಸಂಯತಾತ್ಮಾನೋ ದುರ್ಗಾಣ್ಯತಿತರನ್ತಿ ತೇ ॥೨॥

“ಧರ್ಮಜ! ಯಾವ ಬ್ರಾಹ್ಮಣರು ಮನಸ್ಸನ್ನು ವಶಪಡಿಸಿಕೊಂಡು ಶಾಸ್ತ್ರೋಕ್ತವಾದ ನಾಲ್ಕು ವಿಧವಾದ ಆಶ್ರಮಗಳನ್ನೂ ಆಶ್ರಯಿಸಿರುವರೋ ಮತ್ತು ಆಯಾ ಆಶ್ರಮಧರ್ಮಾನುಸಾರವಾಗಿ ನಡೆದುಕೊಳ್ಳುವರೋ– ಅಂತಹ ಬ್ರಾಹ್ಮಣರು ದುಃಖಗಳನ್ನು ದಾಟುತ್ತಾರೆ.

ಯೇ ದಮ್ಭಾನ್ನಾಚರನ್ತಿ ಸ್ಮ ಯೇಷಾಂ ವೃತ್ತಿಶ್ಚ ಸಂಯತಾ ।
ವಿಷಯಾಂಶ್ಚ ನಿಗೃಹ್ಣನ್ತಿ ದುರ್ಗಾಣ್ಯತಿತರನ್ತಿ ತೇ ॥೩॥

ಯಾರು ದಂಭಯುಕ್ತವಾದ ಆಚಾರವನ್ನು ಮಾಡುವುದಿಲ್ಲವೋ, ಯಾರ ಜೀವಿಕೆಯು ನಿಯಮಾನುಸಾರವಾಗಿರುವುದೋ ಮತ್ತು ಯಾರು ವಿಷಯಗಳ ಸಂಬಂಧವಾದ ಅತ್ಯಾಸಕ್ತಿಯನ್ನು ನಿಗ್ರಹಿಸುತ್ತಾರೆಯೋ– ಅಂತಹವರು ದುಃಖಗಳನ್ನುದಾಟುತ್ತಾರೆ.

ಪ್ರತ್ಯಾಹುರ್ನೋಚ್ಯಮಾನಾ ಯೇ ನ ಹಿಂಸನ್ತಿ ಚ ಹಿಂಸಿತಾಃ ।
ಪ್ರಯಚ್ಛನ್ತಿ ನ ಯಾಚನ್ತೇ ದುರ್ಗಾಣ್ಯತಿತರನ್ತಿ ತೇ ॥೪॥

ಯಾರು ಇತರರಿಂದ ಕಟುವಾದ ಮಾತುಗಳನ್ನೂ, ನಿಂದಾವಚನ ಗಳನ್ನೂ ಕೇಳಿದರೂ ಪ್ರತಿಯಾಗಿ ಯಾವ ಮಾತನ್ನೂ ಆಡುವುದಿಲ್ಲವೋ– ಇತರರಿಂದ ಹಿಂಸಿಸಲ್ಪಟ್ಟರೂ ಪ್ರತಿಯಾಗಿ ಹಿಂಸಿಸಲು ಹೋಗುವು ದಿಲ್ಲವೋ–ಇತರರಿಗೆ ದಾನುಕೊಡುವರೋ–ಆದರೆ ಇತರರನ್ನು ಯಾಚಿಸು ವುದಿಲ್ಲವೋ–ಅವರು ದುಃಖಗಳನ್ನು ದಾಟುತ್ತಾರೆ.

ವಾಸಯನ್ತ್ಯತಿಥೀನ್ನಿತ್ಯಂ ನಿತ್ಯಂ ಯೇ ಚಾನಸೂಯಕಾಃ ।
ನಿತ್ಯಂ ಸ್ವಾಧ್ಯಾಯಶೀಲಾಶ್ಚ ದುರ್ಗಾಣ್ಯತಿತರನ್ತಿ ತೇ ॥೫॥

ಯಾರು ಪ್ರತಿನಿತ್ಯವೂ ಅತಿಥಿಗಳನ್ನು ಸತ್ಕರಿಸಿ ಅವರಿಗೆ ತಂಗಲು ಅನುಕೂಲಗಳನ್ನು ಮಾಡಿಕೊಡುವರೋ, ಅಸೂಯಾರಹಿತರೋ, ನಿತ್ಯವೂ

ನಿಯಮಪೂರ್ವಕವಾಗಿ ವೇದ-ಶಾಸ್ತ್ರ-ಪುರಾಣಗಳನ್ನು ಅಧ್ಯಯನಮಾಡು ವರೋ–ಅಂತಹವರು ದುಃಖಗಳನ್ನು ದಾಟುತ್ತಾರೆ.

ಮಾತಾಪಿತ್ರೋಶ್ಚ ಯೇ ವೃತ್ತಿಂ ವರ್ತನ್ತೇ ಧರ್ಮಕೋವಿದಾಃ ।
ವರ್ಜಯನ್ತಿ ದಿವಾ ಸ್ವಪ್ನಂ ದುರ್ಗಾಣ್ಯತಿತರನ್ತಿ ತೇ ॥೬॥

ಧರ್ಮಕೋವಿದರಾದ ಯಾವ ಪುರುಷರು ಮಾತಾ-ಪಿತೃಗಳ ಸೇವೆ ಯಲ್ಲಿಯೇ ನಿರತರಾಗಿರುವರೋ, ಹಗಲಿನಲ್ಲಿ ಮಲಗುವುದಿಲ್ಲವೋ– ಅವರು ದುಃಖಗಳನ್ನು ದಾಟುತ್ತಾರೆ.

ಯೇ ವಾ ಪಾಪಂ ನ ಕುರ್ವನ್ತಿ ಕರ್ಮಣಾ ಮನಸಾ ಗಿರಾ ।
ನಿಕ್ಷಿಪ್ತದಣ್ಡಾ ಭೂತೇಷು ದುರ್ಗಾಣ್ಯತಿತರನ್ತಿ ತೇ ॥೭॥

ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕ್ರಿಯೆಯಿಂದಾಗಲೀ– ಯಾರು ಪಾಪವನ್ನು ಮಾಡುವುದಿಲ್ಲವೋ, ಯಾವ ಪ್ರಾಣಿಗಳಿಗೂ ಯಾವ ವಿಧವಾದ ಕಷ್ಟವನ್ನೂ ಕೊಡುವುದಿಲ್ಲವೋ–ಅವರು ದುಃಖಗಳನ್ನು ದಾಟು ತ್ತಾರೆ.

ಯೇ ನ ಲೋಭಾನ್ನಯನ್ತ್ಯರ್ಥಾನ್ರಾಜಾನೋ ರಜಸಾನ್ವಿತಾಃ ।
ವಿಷಯಾನ್ಪರಿರಕ್ಷನ್ತಿ ದುರ್ಗಾಣ್ಯತಿತರನ್ತಿ ತೇ ॥೮॥

ಯಾವ ರಾಜರು ರಜೋಗುಣಸಂಪನ್ನರಾಗಿ, ಲೋಭವಶರಾಗಿ ಪ್ರಜೆ ಗಳ ಧನವನ್ನು ಅಪಹರಿಸುವುದಿಲ್ಲವೋ, ರಾಜ್ಯವನ್ನು ಎಲ್ಲ ಕಡೆಗಳಿಂದಲೂ ಸಂರಕ್ಷಿಸುವರೋ–ಅಂತಹ ರಾಜರು ಕಷ್ಟಗಳನ್ನು ದಾಟುತ್ತಾರೆ.

ಸ್ವೇಷು ದಾರೇಷು ವರ್ತನ್ತೇ ನ್ಯಾಯವೃತ್ತಿಮೃತಾವೃತೌ ।
ಅಗ್ನಿಹೋತ್ರಪರಾಃ ಸನ್ತೋ ದುರ್ಗಾಣ್ಯತಿತರನ್ತಿ ತೇ ॥೯॥

ಯಾವ ಗೃಹಸ್ಥರು ಪ್ರತಿನಿತ್ಯವೂ ಅಗ್ನಿಹೋತ್ರವನ್ನು ಮಾಡುತ್ತಾ, ಋತುಸಮಯಗಳಲ್ಲಿ ಮಾತ್ರವೇ ಧರ್ಮಪತ್ನಿಯೊಡನೆ ಧರ್ಮಾನುಕೂಲ ವಾದ ಸಮಾಗಮಮಾಡುವರೋ–ಅಂತಹ ಗೃಹಸ್ಥರು ದುಃಖಗಳನ್ನು ದಾಟುತ್ತಾರೆ.

ಆಹವೇಷು ಚ ಯೇ ಶೂರಾಸ್ತ್ಯಕ್ತ್ವಾ ಮರಣಜಂ ಭಯಮ್ ।
ಧರ್ಮೇಣ ಜಯಮಿಚ್ಛನ್ತಿ ದುರ್ಗಾಣ್ಯತಿತರನ್ತಿ ತೇ ॥೧೦॥

ಯಾವ ಶೂರರು ಯುದ್ಧಗಳಲ್ಲಿ ಮರಣದಿಂದ ಸಂಭವಿಸಬಹುದಾದ ಭಯವನ್ನು ದೂರಮಾಡಿ ಪರಾಕ್ರಮದಿಂದ ಯುದ್ಧಮಾಡುತ್ತಾ ಧರ್ಮದಿಂದ ವಿಜಯವನ್ನು ಇಚ್ಛಿಸುವರೋ–ಅವರು ದುಃಖಗಳನ್ನು ದಾಟುತ್ತಾರೆ.

ಯೇ ವದನ್ತೀಹ ಸತ್ಯಾನಿ ಪ್ರಾಣತ್ಯಾಗೇಽಪ್ಯುಪಸ್ಥಿತೇ ।
ಪ್ರಮಾಣಭೂತಾ ಭೂತಾನಾಂ ದುರ್ಗಾಣ್ಯತಿತರನ್ತಿ ತೇ ॥೧೧॥

ಪ್ರಾಣವನ್ನು ತ್ಯಾಗಮಾಡಬೇಕಾದ ಸಮಯವು ಸನ್ನಿಹಿತವಾದಾಗಲೂ (ಸತ್ಯವನ್ನು ಹೇಳುವುದರಿಂದ ಪ್ರಾಣವೇ ಹೋಗುವಂತಿದ್ದರೂ) ಯಾರು ಸತ್ಯವನ್ನೇ ಹೇಳುವರೋ, ಯಾರು ಎಲ್ಲ ಪ್ರಾಣಿಗಳಿಗೂ ಪ್ರಮಾಣ ಭೂತರಾಗಿರುವರೋ–ಅವರು ದುಃಖಗಳನ್ನು ದಾಟುತ್ತಾರೆ.

ಕರ್ಮಾಣ್ಯಕುಹಕಾರ್ಥಾನಿ ಯೇಷಾಂ ವಾಚಶ್ಚ ಸೂನೃತಾ ।
ಯೇಷಾಮರ್ಥಾಶ್ಚ ಸಮ್ಬದ್ಧಾ ದುರ್ಗಾಣ್ಯತಿತರನ್ತಿ ತೇ ॥೧೨॥

ಯಾರು ಶುಭಕರ್ಮಗಳನ್ನು ಪ್ರದರ್ಶನಕ್ಕಾಗಿಯೇ (ಆಡಂಬರಕ್ಕಾಗಿ) ಮಾಡುವುದಿಲ್ಲವೋ, ಯಾರ ಮಾತುಗಳು ಸುಮಧುರವಾಗಿರುವುವೋ, ಯಾರ ಐಶ್ವರ್ಯಗಳು ಸತ್ಕಾರ್ಯಗಳಿಗಾಗಿಯೇ ಮೀಸಲಾಗಿರುವುವೋ–ಅವರು ದುಃಖಗಳನ್ನು ದಾಟುತ್ತಾರೆ.

ಅನಧ್ಯಾಯೇಷು ಯೇ ವಿಪ್ರಾಃ ಸ್ವಾಧ್ಯಾಯಂ ನೇಹ ಕುರ್ವತೇ ।
ತಪೋನಿಷ್ಠಾಃ ಸುತಪಸೋ ದುರ್ಗಾಣ್ಯತಿತರನ್ತಿ ತೇ ॥೧೩॥

ಯಾವ ಬ್ರಾಹ್ಮಣರು ಅನಧ್ಯಾಯದ ದಿವಸಗಳಲ್ಲಿ ಅಧ್ಯಯನವನ್ನು ಮಾಡುವುದಿಲ್ಲವೋ, ತಪೋನಿಷ್ಠರಾಗಿರುವರೋ–ಉತ್ತಮತಪಸ್ವಿಗಳಾದ ಅಂತಹ ಬ್ರಾಹ್ಮಣರು ದುಃಖಗಳನ್ನು ದಾಟುತ್ತಾರೆ.

ಯೇ ತಪಶ್ಚ ತಪಸ್ಯನ್ತಿ ಕೌಮಾರಬ್ರಹ್ಮಚಾರಿಣಃ ।
ವಿದ್ಯಾವೇದವ್ರತಸ್ನಾತಾ ದುರ್ಗಾಣ್ಯತಿತರನ್ತಿ ತೇ ॥೧೪॥

ಯಾರು ತಪಸ್ಸನ್ನು ಮಾಡುವರೋ, ವಿದ್ಯೆ ಮತ್ತು ವೇದಗಳ ಸಂಬಂಧವಾದ ವ್ರತಗಳನ್ನು ಪೂರ್ಣಗೊಳಿಸಿ ಸ್ನಾತಕರಾಗಿರುವರೋ– ಅವರು ದುಃಖಗಳನ್ನುದಾಟುತ್ತಾರೆ.

ಯೇ ಚ ಸಂಶಾನ್ತರಜಸಃ ಸಂಶಾನ್ತತಮಸಶ್ಚ ಯೇ ।
ಸತ್ತ್ವೇ ಸ್ಥಿತಾ ಮಹಾತ್ಮಾನೋ ದುರ್ಗಾಣ್ಯತಿತರನ್ತಿ ತೇ ॥೧೫॥

ಯಾರಲ್ಲಿ ರಜಸ್ತಮೋಗುಣಗಳು ಸಂಶಾಂತವಾಗಿರುವುವೋ, ಯಾರು ವಿಶುದ್ಧವಾದ ಸತ್ತ್ವಗುಣದಲ್ಲಿಯೇ ಸ್ಥಿರವಾಗಿರುವರೋ–ಅಂತಹ ಮಹಾತ್ಮರು ದುಃಖಗಳನ್ನು ದಾಟುತ್ತಾರೆ.

ಯೇಷಾಂ ನ ಕಶ್ಚಿತ್ತ್ರಸತಿ ನ ತ್ರಸನ್ತಿ ಹಿ ಕಸ್ಯಚಿತ್ ।
ಯೇಷಾಮಾತ್ಮಸಮೋ ಲೋಕೋ ದುರ್ಗಾಣ್ಯತಿತರನ್ತಿ ತೇ ॥೧೬॥

ಯಾರಿಂದ–ಯಾರಿಗೂ ಯಾವ ವಿಧವಾದ ಭಯವೂ ಆಗುವುದಿಲ್ಲವೋ, ಯಾರು-ಯಾರಿಗೂ ಭಯಪಡುವುದಿಲ್ಲವೋ, ಯಾರ ದೃಷ್ಟಿಯಲ್ಲಿ ಈ ಸಕಲಜಗತ್ತೂ ತನ್ನ ಆತ್ಮಕ್ಕೇ ಸಮಾನವಾಗಿರುವುದೋ, ಜಗತ್ತಿನ ಸಮಸ್ತಪ್ರಾಣಿಗಳ ಸುಖ-ದುಃಖಗಳನ್ನೂ ತಮ್ಮವೆಂದೇ ಭಾವಿಸುವರೋ–ಅಂತಹವರು ದುಃಖಗಳನ್ನು ದಾಟುತ್ತಾರೆ.

ಪರಶ್ರಿಯಾ ನ ತಪ್ಯನ್ತಿ ಯೇ ಸನ್ತಃ ಪುರುಷರ್ಷಭಾಃ ।
ಗ್ರಾಮ್ಯಾದರ್ಥಾನ್ನಿವೃತ್ತಾಶ್ಚ ದುರ್ಗಾಣ್ಯತಿತರನ್ತಿ ತೇ ॥೧೭॥

ಇತರರಲ್ಲಿರುವ ಐಶ್ವರ್ಯವನ್ನು ನೋಡಿ ಯಾವ ಸತ್ಪುರುಷರು ಅಸೂಯೆಯಿಂದ ಪರಿತಪಿಸುವುದಿಲ್ಲವೋ, ಗ್ರಾಮ್ಯವಾದ (ತುಚ್ಛವಾದ) ವಿಷಯಭೋಗಗಳಿಂದ ನಿವೃತ್ತಿಹೊಂದಿರುವರೋ–ಅಂತಹ ಪುರುಷಶ್ರೇಷ್ಠರು ದುಃಖಗಳನ್ನು ದಾಟುತ್ತಾರೆ.

ಸರ್ವಾನ್ದೇವಾನ್ನಮಸ್ಯನ್ತಿ ಸರ್ವಧರ್ಮಾಂಶ್ಚ ಶೃಣ್ವತೇ ।
ಯೇ ಶ್ರದ್ದಧಾನಾಃ ಶಾನ್ತಾಶ್ಚ ದುರ್ಗಾಣ್ಯತಿತರನ್ತಿ ತೇ ॥೧೮॥

ಯಾರು ಸಕಲದೇವತೆಗಳನ್ನೂ ನಮಸ್ಕರಿಸುವರೋ, ಸರ್ವಧರ್ಮಗಳನ್ನೂ ಕೇಳುವರೋ (ಸತ್ಕಥಾಕಾಲಕ್ಷೇಪವನ್ನು ಮಾಡುವರೋ), ಯಾರು ಶ್ರದ್ಧಾಸಂಪನ್ನರೋ, ಶಾಂತಚಿತ್ತರೋ–ಅಂತಹವರು ದುಃಖಗಳನ್ನು ದಾಟುತ್ತಾರೆ.

ಯೇ ನ ಮಾನಿತ್ವಮಿಚ್ಛನ್ತಿ ಮಾನಯನ್ತಿ ಚ ಯೇ ಪರಾನ್ ।
ಮಾನ್ಯಮಾನಾನ್ನಮಸ್ಯನ್ತಿ ದುರ್ಗಾಣ್ಯತಿತರನ್ತಿ ತೇ ॥೧೯॥

ಯಾರು ಇತರರಿಂದ ಸಮ್ಮಾನವನ್ನು ಅಪೇಕ್ಷಿಸುವುದಿಲ್ಲವೋ, ಇತರರನ್ನು ಮರ್ಯಾದೆಯಿಂದಲೇ ಕಾಣುವರೋ, ಸಮ್ಮಾನನೀಯರಾದ ಪುರುಷರನ್ನು ನಮಸ್ಕರಿಸುವರೋ–ಅವರು ದುಃಖಗಳನ್ನು ದಾಟುತ್ತಾರೆ.

ಯೇ ಚ ಶ್ರಾದ್ಧಾನಿ ಕುರ್ವನ್ತಿ ತಿಥ್ಯಾಂ ತಿಥ್ಯಾಂ ಪ್ರಜಾರ್ಥಿನಃ ।
ಸುವಿಶುದ್ಧೇನ ಮನಸಾ ದುರ್ಗಾಣ್ಯತಿತರನ್ತಿ ತೇ ॥೨೦॥

ಸಂತಾನೇಚ್ಛುಗಳಾದ ಯಾವ ಮಾನವರು ವಾರ್ಷಿಕವಾಗಿ ಬರುವ ತಿಥಿಗಳಲ್ಲಿ ಶುದ್ಧವಾದ ಮನಸ್ಸಿನಿಂದ ಶ್ರಾದ್ಧಗಳನ್ನು ಮಾಡುವರೋ–ಅವರು ದುಃಖಗಳನ್ನುದಾಟುತ್ತಾರೆ.

ಯೇ ಕ್ರೋಧಂ ಸಂನಿಯಚ್ಛನ್ತಿ ಕ್ರುದ್ಧಾನ್ಸಂಶಮಯನ್ತಿ ಚ ।
ನ ಚ ಕುಪ್ಯನ್ತಿ ಭೂತಾನಾಂ ದುರ್ಗಾಣ್ಯತಿತರನ್ತಿ ತೇ ॥೨೧॥

ಯಾರು ತಮ್ಮ ಕೋಪವನ್ನು ನಿಯಂತ್ರಿಸುವರೋ, ಕೋಪಿಷ್ಠರಾದವರನ್ನು ಸಮಾಧಾನಗೊಳಿಸುವರೋ, ಪ್ರಾಣಿಗಳ ವಿಷಯದಲ್ಲಿ ಕೋಪಗೊಳ್ಳುವುದಿಲ್ಲವೋ–ಅವರು ದುಃಖಗಳನ್ನು ದಾಟುತ್ತಾರೆ.

ಮಧು ಮಾಂಸಂ ಚ ಯೇ ನಿತ್ಯಂ ವರ್ಜಯನ್ತೀಹ ಮಾನವಾಃ ।
ಜನ್ಮಪ್ರಭೃತಿ ಮದ್ಯಂ ಚ ದುರ್ಗಾಣ್ಯತಿತರನ್ತಿ ತೇ ॥೨೨॥

ಯಾವ ಮಾನವರು ಹುಟ್ಟಿದಾಗಿನಿಂದಲೂ ಮಧು-ಮಾಂಸ-ಮದ್ಯಗಳನ್ನು ವರ್ಜಿಸಿರುವರೋ–ಅವರೂ ಸಹ ದುಃಖಗಳನ್ನು ದಾಟುತ್ತಾರೆ.

ಯಾತ್ರಾರ್ಥಂ ಭೋಜನಂ ಯೇಷಾಂ ಸಂತಾನಾರ್ಥಂ ಚ ಮೈಥುನಮ್ ।
ವಾಕ್ಸತ್ಯವಚನಾರ್ಥಾಯ ದುರ್ಗಾಣ್ಯತಿತರನ್ತಿ ತೇ ॥೨೩॥

ಯಾರಿಗೆ ಭೋಜನವು ಜೀವನಯಾತ್ರೆಯನ್ನು ಸಾಗಿಸಲು ಮಾತ್ರವೇ ಆಧಾರಭೂತವಾಗಿರುವುದೋ (ಜಿಹ್ವಾಚಾಪಲ್ಯವನ್ನು ತೀರಿಸಿಕೊಳ್ಳುವುದಕ್ಕಾಗಿ ಆಗಿರುವುದಿಲ್ಲವೋ), ಸ್ತ್ರೀಸಮಾಗಮವು ಕಾಮಪಿಪಾಸೆಯನ್ನು ಪೂರೈಸಿಕೊಳ್ಳುವುದಕ್ಕಾಗಿರದೇ ಸಂತಾನಾರ್ಥವಾಗಿಯೇ ಇರುವುದೋ,

ಮಾತು ಅಥವಾ ನಾಲಿಗೆಯು ಸತ್ಯವನ್ನು ಹೇಳುವುದಕ್ಕೆ ಮಾತ್ರವೇ ಇರುವುದೋ–ಅಂತಹವರು ದುಃಖಗಳನ್ನು ದಾಟುತ್ತಾರೆ.

ಈಶ್ವರಂ ಸರ್ವಭೂತಾನಾಂ ಜಗತಃ ಪ್ರಭವಾಪ್ಯಯಮ್ ।
ಭಕ್ತಾ ನಾರಾಯಣಂ ದೇವಂ ದುರ್ಗಾಣ್ಯತಿತರನ್ತಿ ತೇ ॥೨೪॥

ಸಮಸ್ತಪ್ರಾಣಿಗಳಿಗೂ ಈಶ್ವರನಾದ, ಜಗತ್ತಿನ ಉತ್ಪತ್ತಿಗೂ ಮತ್ತು ಪ್ರಲಯಕ್ಕೂ ಕಾರಣನಾದ, ದೇವದೇವನಾದ, ಶ್ರೀಮನ್ನಾರಾಯಣನನ್ನು ಯಾರು ಭಜಿಸುವರೋ–ಅಂತಹ ಭಕ್ತರು ದುಃಖಗಳನ್ನು ದಾಟುತ್ತಾರೆ.

ಯ ಏಷ ಪದ್ಮರಕ್ತಾಕ್ಷಃ ಪೀತವಾಸಾ ಮಹಾಭುಜಃ ।
ಸುಹೃದ್ಭ್ರಾತಾ ಚ ಮಿತ್ರಂ ಚ ಸಮ್ಬನ್ಧೀ ಚ ತಥಾಚ್ಯುತಃ ॥೨೫॥

ಯುಧಿಷ್ಠಿರ! ಕಮಲದಂತೆ ನಸುಗೆಂಪಾದ ಕಣ್ಣುಗಳಿಂದ ಕೂಡಿರುವ, ಪೀತಾಂಬರವನ್ನು ಧರಿಸಿರುವ, ಮಹಾಭುಜನಾಗಿರುವ, ನಿನಗೆ ಸುಹೃದನೂ–ಸೋದರನೂ–ಮಿತ್ರನೂ–ಸಂಬಂಧಿಯೂ ಆಗಿರುವ ಈ ಅಚ್ಯುತನೇ ಆ ದೇವದೇವನಾದ ನಾರಾಯಣನು.

ಯ ಇಮಾನ್ಸಕಲಾಲ್ಲೋಕಾಂಶ್ಚರ್ಮವತ್ಪರಿವೇಷ್ಟಯೇತ್ ।
ಇಚ್ಛನ್ಪ್ರಭುರಚಿನ್ತ್ಯಾತ್ಮಾ ಗೋವಿನ್ದಃ ಪುರುಷೋತ್ತಮಃ ॥೨೬॥

ಇವನ ಸ್ವರೂಪವು ಅಚಿಂತ್ಯವಾದುದು. ಪುರುಷೋತ್ತಮನಾದ, ಭಗವಂತನಾದ ಗೋವಿಂದನು ಇಚ್ಛಿಸಿದ್ದೇ ಆದರೆ ಸಕಲಭುವನಗಳನ್ನೂ ಚರ್ಮದಂತೆ ಆಚ್ಛಾದಿಸಿಕೊಂಡುಬಿಡುತ್ತಾನೆ. (ಶರೀರದ ಸಮಸ್ತಭಾಗವನ್ನೂ ಚರ್ಮವು ಆವರಿಸಿಕೊಂಡಿರುವಂತೆ–ಶ್ರೀಕೃಷ್ಣನು ಸಕಲಜಗತ್ತನ್ನೂ ಆವರಿಸಿ ಕೊಂಡಿದ್ದಾನೆ.)

ಸ್ಥಿತಃ ಪ್ರಿಯಹಿತೇ ಜಿಷ್ಣೋಃ ಸ ಏಷ ಪುರುಷೋತ್ತಮಃ ।
ರಾಜಂಸ್ತವ ಚ ದುರ್ಧರ್ಷೋ ವೈಕುಣ್ಠಃ ಪುರುಷರ್ಷಭ ॥೨೭॥

ಪುರುಷರ್ಷಭನೇ! ದುರ್ಧರ್ಷನಾದ, ಪುರುಷೋತ್ತಮನಾದ ಈ ಶ್ರೀಕೃಷ್ಣನೇ ವೈಕುಂಠವಾಸಿಯಾದ ಶ್ರೀಮನ್ನಾರಾಯಣನಾಗಿರುತ್ತಾನೆ. ಇವನು ಈ ಸಮಯದಲ್ಲಿ ಅರ್ಜುನನಿಗೂ ಮತ್ತು ನಿನಗೂ ಹಿತವನ್ನುಂಟು ಮಾಡುವುದರಲ್ಲಿ ನಿರತನಾಗಿರುತ್ತಾನೆ.

ಯ ಏನಂ ಸಂಶ್ರಯನ್ತೀಹ ಭಕ್ತ್ಯಾ ನಾರಾಯಣಂ ಹರಿಮ್ ।
ತೇ ತರನ್ತೀಹ ದುರ್ಗಾಣಿ ನ ಚಾತ್ರಾಸ್ತಿ ವಿಚಾರಣಾ ॥೨೮॥

ಯಾವ ಭಕ್ತರು ನಾರಾಯಣನನ್ನು–ಶ್ರೀಹರಿಯನ್ನು ಆಶ್ರಯಿಸು ವರೋ–ಅವರು ಖಂಡಿತವಾಗಿಯೂ ದುಃಖಗಳನ್ನು ದಾಟುತ್ತಾರೆ. ಈ ವಿಷಯದಲ್ಲಿ ಪುನಃ ವಿಚಾರಮಾಡಬೇಕಾದ ಆವಶ್ಯಕತೆಯೇ ಇಲ್ಲ.

ದುರ್ಗಾತಿತರಣಂ ಯೇ ಚ ಪಠನ್ತಿ ಶ್ರಾವಯನ್ತಿ ಚ ।
ಕಥಯನ್ತಿ ಚ ವಿಪ್ರೇಭ್ಯೋ ದುರ್ಗಾಣ್ಯತಿತರನ್ತಿ ತೇ ॥೨೯॥

ಯಾರು ದುರ್ಗಾತಿತರಣವೆಂಬ ಹೆಸರಿನ ಈ ಅಧ್ಯಾಯವನ್ನು ಓದುತ್ತಾರೆಯೋ, ಕೇಳುತ್ತಾರೆಯೋ, ಬ್ರಾಹ್ಮಣರಿಗೆ ಹೇಳುತ್ತಾರೆಯೋ–ಅವರೆಲ್ಲರೂ ದುಃಖಗಳನ್ನು ದಾಟುತ್ತಾರೆ.

ಇತಿ ಕೃತ್ಯಸಮುದ್ದೇಶಃ ಕೀರ್ತಿತಸ್ತೇ ಮಯಾನಘ ।
ತರನ್ತೇ ಯೇನ ದುರ್ಗಾಣಿ ಪರತ್ರೇಹ ಚ ಮಾನವಾಃ ॥೩೦॥

ನಿಷ್ಪಾಪನೇ! ಹೀಗೆ ನಾನು ನಿನಗೆ ದುಃಖವನ್ನು ದಾಟಲು ಮಾನವರು ಮಾಡಬೇಕಾದ ಕರ್ತವ್ಯಗಳ ಬಗೆಗೆ ಸಂಕ್ಷೇಪವಾಗಿ ಹೇಳಿರುತ್ತೇನೆ. ಇಲ್ಲಿ ಹೇಳಿರುವಂತೆ ಮಾನವರು ನಡೆದುಕೊಂಡರೆ ಇಹ-ಪರಗಳೆರಡರಲ್ಲಿಯೂ ಒದಗಬಹುದಾದ ಕಷ್ಟಗಳಿಂದ ಪಾರಾಗುತ್ತಾರೆ.”

೧೧೦ನೆಯ ಅಧ್ಯಾಯವು ಮುಗಿಯಿತು.

೧೧೧ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಮನುಷ್ಯರ ಸ್ವಭಾವವನ್ನು ತಿಳಿಯುವ ಬಗೆಗೆ
ವ್ಯಾಘ್ರ-ಗೋಮಾಯುಗಳ ಸಂವಾದಕಥನ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಸೌಮ್ಯಾಃ ಸೌಮ್ಯರೂಪೇಣ ಸೌಮ್ಯಾಶ್ಚಾಸೌಮ್ಯದರ್ಶನಾಃ ।
ಈದೃಶಾನ್ಪುರುಷಾಂಸ್ತಾತ ಕಥಂ ವಿದ್ಯಾಮಹೇ ವಯಮ್ ॥೧॥

“ಪಿತಾಮಹ! ಕಠೋರಸ್ವಭಾವದವರಾದ ಅನೇಕಮನುಷ್ಯರು

ಹೊರಗೆ ನೋಡಲು ಶಾಂತರಾಗಿಯೂ–ಕೋಮಲಹೃದಯರಾಗಿಯೂ ಕಾಣುತ್ತಾರೆ. ಕೋಮಲಸ್ವಭಾವವುಳ್ಳವರು ಹೊರಗೆ ನೋಡಲು ಕಠೋರ ಹೃದಯರಾಗಿ ಕಾಣುತ್ತಾರೆ. ಹೀಗಿರುವಾಗ ಇಂತಹವರೇ ಕೋಮಲ ಹೃದಯರು (ಒಳ್ಳೆಯವರು), ಇಂತಹವರೇ ಕಠಿಣಹೃದಯರು (ಕೆಟ್ಟವರು)– ಎಂಬುದನ್ನು ನಾವು ಹೇಗೆ ತಿಳಿದುಕೊಳ್ಳಬೇಕು?–ಈ ವಿಷಯವನ್ನು ನನಗೆ ತಿಳಿಸು.”

ಭೀಷ್ಮನು ಉತ್ತರಿಸುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಹುಲಿಗೂ-ನರಿಗೂ ನಡೆದ ಇತಿಹಾಸರೂಪವಾದ ಸಂಭಾಷಣೆಯನ್ನು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು ; ಕೇಳು :

ಹಿಂದಿನ ಕಾಲದಲ್ಲಿ ಧನ-ಧಾನ್ಯಗಳಿಂದ ಸಮೃದ್ಧವಾಗಿದ್ದ ಪುರಿಕಾ ಎಂಬ ಹೆಸರಿನ ನಗರದಲ್ಲಿ ಪೌರಿಕ ಎಂಬ ಹೆಸರಿನ ರಾಜನು ರಾಜ್ಯಭಾರ ಮಾಡುತ್ತಿದ್ದನು. ಪುರುಷಾಧಮನಾಗಿದ್ದ ಆ ರಾಜನು ಮಹಾಕ್ರೂರಿಯಾಗಿ ದ್ದನು. ಇತರರನ್ನು ಹಿಂಸಿಸುವುದರಲ್ಲಿಯೇ ಅವನಿಗೆ ಆನಂದವಿದ್ದಿತು. ಕಾಲವು ಕಳೆದಂತೆ ಅವನ ಆಯುಷ್ಯವು ಸಮಾಪ್ತವಾಯಿತು. ಯಾರೂ ಅಪೇಕ್ಷಿಸದಿರುವ ಮರಣಗತಿಯನ್ನು ಅವನು ಹೊಂದಿದನು. ಹಿಂದಿನ ಜನ್ಮದಲ್ಲಿ ರಾಜನಾಗಿದ್ದಾಗ ಮಾಡಿದ್ದ ಪಾಪಕರ್ಮಗಳ ಫಲವಾಗಿ ಗುಳ್ಳೇ ನರಿಯಾಗಿ ಹುಟ್ಟಿದನು.

ಗುಳ್ಳೇನರಿಯಾಗಿ ಹುಟ್ಟಿದ್ದ ಆ ರಾಜನಿಗೆ ಹಿಂದಿನ ಜನ್ಮದಲ್ಲಿ ತಾನು ಮಾಡಿದ ಪಾಪಕರ್ಮಗಳನ್ನು ನೆನೆದು ವೈರಾಗ್ಯವುಂಟಾಯಿತು. ‘ಇತರರು ತಂದುಕೊಟ್ಟರೂ ನಾನು ಮಾಂಸವನ್ನು ತಿನ್ನುವುದಿಲ್ಲ’–ಎಂದು ನರಿಯು ಪ್ರತಿಜ್ಞೆಮಾಡಿತು. ಪ್ರಾಣಿಗಳಿಗೆ ಹಿಂಸೆಕೊಡುವುದನ್ನು ಅದು ನಿಲ್ಲಿಸಿಬಿಟ್ಟಿತು. ಸತ್ಯವನ್ನೇ ಹೇಳುವುದಾಗಿ ದೃಢವಾದ ವ್ರತವನ್ನು ಕೈಗೊಂಡಿತು. ನಿಯತವಾದ ಸಮಯಗಳಲ್ಲಿ ವೃಕ್ಷಗಳಿಂದ ಕೆಳಕ್ಕೆ ಬಿದ್ದ ಫಲಗಳನ್ನು ಮಾತ್ರವೇ ಆ ನರಿಯು ತಿನ್ನುತ್ತಾ ಶ್ಮಶಾನದಲ್ಲಿಯೇ ವಾಸಮಾಡುತ್ತಿದ್ದಿತು.

ಅದು ಹುಟ್ಟಿದ್ದೂ ಅಲ್ಲಿಯೇ. ಆ ಶ್ಮಶಾನವೇ ಅದಕ್ಕೆ ಉಚಿತವಾದ ವಾಸ ಸ್ಥಾನವಾಗಿ ಕಂಡಿತು. ಅದು ಬೇರೆಲ್ಲಿಗೂ ಹೋಗಲು ಇಚ್ಛಿಪಡುತ್ತಿರಲಿಲ್ಲ. ಆದರೆ ಸಜಾತೀಯವಾದ ನರಿಗಳಿಗೆ ಅದು ಸದಾಚಾರದಿಂದಿರುವುದು ಸರಿ ಎನಿಸಲಿಲ್ಲ. ತಾಪಸವೃತ್ತಿಯನ್ನು ಅನುಸರಿಸುತ್ತಿರುವುದು ಇತರ ನರಿಗಳಿಗೆ ಸಹ್ಯವಾಗಲಿಲ್ಲ. ಅವುಗಳೆಲ್ಲವೂ ಸೇರಿ ವಿನಯಪೂರ್ವಕವಾದ ಮತ್ತು ಪ್ರೇಮಪೂರ್ವಕವಾದ ಮಾತಿನಿಂದ ಆ ನರಿಯ ಮನಸ್ಸನ್ನು ಬದಲಾಯಿಸಲು ಪ್ರಯತ್ನಿಸಿದುವು.

ವಸನ್ಪಿತೃವನೇ ರೌದ್ರೇ ಶೌಚೇ ವರ್ತಿತುಮಿಚ್ಛಸಿ ।
ಇಯಂ ವಿಪ್ರತಿಪತ್ತಿಸ್ತೇ ಯದಾ ತ್ವಂ ಪಿಶಿತಾಶನಃ ॥೯॥

"ಸಹೋದರ! ನೀನು ಮಾಂಸಾಹಾರಿಯಾದ ಪ್ರಾಣಿಯಾಗಿರುವೆ. ಭಯಂಕರವಾದ ಶ್ಮಶಾನದಲ್ಲಿ ವಾಸಮಾಡುತ್ತಿರುವೆ. ಆದರೂ ಪವಿತ್ರವಾದ ಆಚಾರ-ವ್ಯವಹಾರಗಳನ್ನಿಟ್ಟುಕೊಂಡಿರಬೇಕೆಂದು ಇಚ್ಛಿಸುತ್ತಿರುವೆ. ಈ ನಿನ್ನ ಅಪೇಕ್ಷೆಯು ನಿನ್ನ ಗುಣಕ್ಕೂ-ಧರ್ಮಕ್ಕೂ ಅತ್ಯಂತವಿರುದ್ಧವಾಗಿದೆ.

ತತ್ಸಮಾನೋ ಭವಾಸ್ಮಾಭಿರ್ಭೋಜ್ಯಂ ದಾಸ್ಯಾಮಹೇ ವಯಮ್ ।
ಭುಂಕ್ಷ್ವ ಶೌಚಂ ಪರಿತ್ಯಜ್ಯ ಯದ್ಧಿ ಭುಕ್ತಂ ಸದಾಸ್ತು ತೇ ॥೧೦॥

ಆದುದರಿಂದ ನೀನೂ ನಮ್ಮಂತೆಯೇ ಇರು. ನಿನಗೆ ಬೇಕಾದ ಭೋಜ್ಯ ವಸ್ತುಗಳನ್ನು ನಾವೇ ತಂದುಕೊಡುತ್ತೇವೆ. ನಿನ್ನ ಈ ಶೌಚಾಚಾರಗಳ ನಿಯಮಗಳನ್ನು ದೂರಮಾಡಿ ನಾವು ತಂದುಕೊಟ್ಟುದನ್ನು ಭಕ್ಷಿಸು. ನಮ್ಮ ಜಾತೀಯರಿಗೆ ಯಾವುದು ಭೋಜನವಸ್ತುವಾಗಿದೆಯೋ–ಅದೇ ನಿನಗೂ ಸರ್ವದಾ ಭೋಜನವಸ್ತುವಾಗಲಿ."

ನರಿಗಳು ಹೇಳಿದ ಮಾತುಗಳನ್ನು ಕೇಳಿ ಏಕಾಗ್ರತೆಯಿಂದಿದ್ದ ರಾಜ ನಾಗಿದ್ದ ನರಿಯು ಮಧುರವಾದ, ವಿನಯದಿಂದ ಕೂಡಿದ್ದ, ಯುಕ್ತಿಯುಕ್ತ ವಾಗಿದ್ದ, ನಿಷ್ಠುರವಲ್ಲದ ಮಾತುಗಳಿಂದ ಪ್ರತ್ಯುತ್ತರಿಸಿತು :

ಅಪ್ರಮಾಣಾ ಪ್ರಸೂತಿರ್ಮೇ ಶೀಲತಃ ಕ್ರಿಯತೇ ಕುಲಮ್ ।
ಪ್ರಾರ್ಥಯಾಮಿ ಚ ತತ್ಕರ್ಮ ಯೇನ ವಿಸ್ತೀರ್ಯತೇ ಯಶಃ ॥೧೨॥

"ಬಾಂಧವರೇ! ನರಿಯಾಗಿ ಹುಟ್ಟಿದ ಮಾತ್ರದಿಂದಲೇ ನಾನು ಕೆಟ್ಟ

ಕೆಲಸಗಳನ್ನು ಮಾಡಬೇಕೆಂಬುದಕ್ಕೆ ಪ್ರಮಾಣವೇನೂ ಇರುವುದಿಲ್ಲ. ಒಳ್ಳೆಯ ಸ್ವಭಾವದಿಂದಲೂ ಮತ್ತು ಆಚರಣೆಯಿಂದಲೂ ಕುಲದ ಪ್ರತಿಷ್ಠೆಯು ಹೆಚ್ಚುತ್ತದೆ. ನಾನೂ ಕೂಡ ನಮ್ಮ ವಂಶದ ಯಶಸ್ಸನ್ನು ವರ್ಧಿಸುವಂತಹ ಕರ್ಮಗಳನ್ನು ಮಾಡಲು ಇಚ್ಛಿಸಿರುತ್ತೇನೆ.

ಶ್ಮಶಾನೇ ಯದಿ ಮೇ ವಾಸಃ ಸಮಾಧಿರ್ಮೇ ನಿಶಮ್ಯತಾಮ್ ।
ಆತ್ಮಾ ಫಲತಿ ಕರ್ಮಾಣಿ ನಾಶ್ರಮೋ ಧರ್ಮಕಾರಣಮ್ ॥೧೩॥

ನನ್ನ ವಾಸವು ಶ್ಮಶಾನದಲ್ಲೇ ಏಕೆಂದು ನೀವು ಭಾವಿಸುವಿರಾದರೆ– ಅದಕ್ಕೆ ನಾನು ಕೊಡಲಿರುವ ಸಮಾಧಾನವನ್ನಾದರೂ ಕೇಳಿರಿ. ಆತ್ಮವು ಶುಭಕರ್ಮಗಳನ್ನು ಮಾಡಲು ಪ್ರೇರೇಪಿಸುತ್ತದೆ. ಆಶ್ರಮವಾಸವೇ ಧರ್ಮಕ್ಕೆ ಕಾರಣವಾಗುವುದಿಲ್ಲ. (ಶುಭಕರ್ಮಗಳನ್ನು ಮಾಡಲು ಸ್ಥಳವು ಮುಖ್ಯವಲ್ಲ. ಎಲ್ಲಿ ಬೇಕಾದರೂ ಶುಭಕರ್ಮಗಳನ್ನು ಮಾಡಬಹುದು. ಶುಭಕರ್ಮಗಳಿಗೆ ಪ್ರೇರಕವು ಆತ್ಮವೇ ಹೊರತು ವಾಸಭೂಮಿಯಲ್ಲ.)

ಆಶ್ರಮೇ ಯೋ ದ್ವಿಜಂ ಹನ್ಯಾದ್ಗಾಂ ವಾ ದದ್ಯಾದನಾಶ್ರಮೇ ।
ಕಿಂ ತು ತತ್ಪಾತಕಂ ನ ಸ್ಯಾತ್ತದ್ವಾ ದತ್ತಂ ವೃಥಾ ಭವೇತ್ ॥೧೪॥

ಆಶ್ರಮದಲ್ಲಿದ್ದುಕೊಂಡು ಬ್ರಾಹ್ಮಣನನ್ನು ಹತ್ಯೆಮಾಡಿದರೆ ಪಾಪ ವುಂಟಾಗುವುದಿಲ್ಲವೇ? ಆಶ್ರಮವಲ್ಲದ ಸ್ಥಳದಲ್ಲಿ ಹಸುವನ್ನು ದಾನಕೊಟ್ಟರೆ ಆ ದಾನವು ವ್ಯರ್ಥವಾಗುವುದೇ?

ಭವನ್ತಃ ಸ್ವಾರ್ಥಲೋಭೇನ ಕೇವಲಂ ಭಕ್ಷಣೇ ರತಾಃ ।
ಅನುಬನ್ಧೇ ತ್ರಯೋ ದೋಷಾಸ್ತಾನ್ನ ಪಶ್ಯನ್ತಿ ಮೋಹಿತಾಃ ॥೧೫॥

ನೀವೆಲ್ಲರೂ ಸ್ವಾರ್ಥದ ಲೋಭದಿಂದಾಗಿ ಮಾಂಸಭಕ್ಷಣೆಯಲ್ಲಿಯೇ ಆಸಕ್ತರಾಗಿರುವಿರಿ. ಅದರ ಪರಿಣಾಮವಾಗಿ ಉಂಟಾಗುವ ಮೂರು ವಿಧ ವಾದ ದೋಷಗಳನ್ನೂ ನೀವು ಮೋಹವಶರಾಗಿರುವುದರಿಂದ ಕಂಡುಕೊಳ್ಳು ತ್ತಿಲ್ಲ.

ಅಪ್ರತ್ಯಯಕೃತಾಂ ಗರ್ಹ್ಯಾಮರ್ಥಾಪನಯದೂಷಿತಾಮ್ ।
ಇಹ ಚಾಮುತ್ರ ಚಾನಿಷ್ಟಾಂ ತಸ್ಮಾದ್ವೃತ್ತಿಂ ನ ರೋಚಯೇ ॥೧೬॥

ನಿಮ್ಮೆಲ್ಲರ ಜೀವನವೂ ದುಃಖಮಯವಾಗಿದೆ. ಅಜ್ಞಾನಕೃತವಾಗಿದೆ.

ನಿಂದನೀಯವಾಗಿದೆ. ಧರ್ಮದ ಹಾನಿಗೆ ಕಾರಣವಾಗಿರುವುದರಿಂದ ದೂಷಿತವಾಗಿದೆ. ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಅನಿಷ್ಟವಾದ ಫಲವನ್ನು ಕೊಡತಕ್ಕುದಾಗಿದೆ. ಆದುದರಿಂದ ನಿಮ್ಮ ಈ ದುರ್ವೃತ್ತಿಯು ನನಗೆ ರುಚಿಸುತ್ತಿಲ್ಲ."–ಹೀಗೆ ಹೇಳಿ ಸಜಾತೀಯನರಿಗಳನ್ನು ಕಳುಹಿಸಿಬಿಟ್ಟಿತು.

ರಾಜನರಿಯ ಆ ವಿನೂತನವಾದ ಆಚಾರ-ವಿಚಾರಗಳು ಸರ್ವತ್ರ ಪ್ರಚಾರವಾದುವು. ಪ್ರಖ್ಯಾತವಾದ ಪರಾಕ್ರಮದಿಂದ ಕೂಡಿದ್ದ ಒಂದು ವ್ಯಾಘ್ರವು ರಾಜನರಿಯನ್ನು ಪಂಡಿತನೆಂದೂ ಶುದ್ಧಸ್ವಭಾವದ್ದೆಂದೂ ಭಾವಿಸಿ ನರಿಯ ಹತ್ತಿರಕ್ಕೆ ಹೋಗಿ ತನಗೆ ಅನುರೂಪವಾದ ರೀತಿಯಲ್ಲಿ ಗೌರವಿಸಿ ಆ ನರಿಯನ್ನು ತನ್ನ ಮಂತ್ರಿಯನ್ನಾಗಿ ನಿಯಮಿಸಿಕೊಂಡಿತು.

ಅನಂತರ ವ್ಯಾಘ್ರವು ನರಿಯೊಡನೆ ಹೇಳಿತು :

ಸೌಮ್ಯ ವಿಜ್ಞಾತರೂಪಸ್ತ್ವಂ ಗಚ್ಛ ಯಾತ್ರಾಂ ಮಯಾ ಸಹ ।
ವ್ರಿಯನ್ತಾಮೀಪ್ಸಿತಾಭೋಗಾಃ ಪರಿಹಾರ್ಯಾಶ್ಚ ಪುಷ್ಕಲಾಃ ॥೧೮॥

"ಸೌಮ್ಯನೇ! ನಾನು ನಿನ್ನ ಸ್ವಭಾವ-ಸ್ವರೂಪಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಂತಾಯಿತು. ನೀನು ನನ್ನೊಡನೆ ಬಾ. ನಿನ್ನ ಅಭಿಲಾಷೆಗೆ ಅನುಸಾರವಾಗಿ ಯಥೇಚ್ಛವಾದ ಭೋಗಗಳನ್ನು ಅನುಭವಿಸು. ನಿನಗೆ ಯಾವುದಾದರೂ ವಸ್ತುವು ಪ್ರಿಯವಾಗಿರದಿದ್ದರೆ ಅದನ್ನು ಪರಿತ್ಯಜಿಸು.

ತೀಕ್ಷ್ಣಾ ಇತಿ ವಯಂ ಖ್ಯಾತಾ ಭವನ್ತಂ ಜ್ಞಾಪಯಾಮಹೇ ।
ಮೃದುಪೂರ್ವಂ ಹಿತಂ ಚೈವ ಶ್ರೇಯಶ್ಚಾಧಿಗಮಿಷ್ಯಸಿ ॥೧೯॥

ಆದರೆ ಒಂದು ಮಾತನ್ನು ನಿನ್ನ ಜ್ಞಾಪಕಕ್ಕೆ ತರಬೇಕಾಗಿದೆ. ಈ ಪ್ರಪಂಚದಲ್ಲಿ ನಾವು ಮಹಾಕ್ರೂರಿಗಳೆಂದು ಖ್ಯಾತಿಯನ್ನು ಪಡೆದಿರುತ್ತೇವೆ. ನೀನು ಮೃದುಪೂರ್ವವಾದ ವ್ಯವಹಾರವನ್ನಿಟ್ಟುಕೊಂಡು ನನ್ನ ಹಿತದ ಸಾಧನೆಯಲ್ಲಿ ನಿರತನಾಗಿರುವುದಾದರೆ ಶ್ರೇಯಸ್ಸನ್ನು ಪಡೆಯುವೆ."

ಮಹಾಮನಸ್ವಿಯಾದ ಮೃಗರಾಜನು ಹೇಳಿದ ಮಾತನ್ನು ಬಹಳವಾಗಿ ಪ್ರಶಂಸೆಮಾಡುತ್ತಾ ರಾಜನರಿಯು ತಲೆಯನ್ನು ತಗ್ಗಿಸಿಕೊಂಡು ವಿನಯ ಯುಕ್ತವಾದ ಈ ಮಾತನ್ನು ಹೇಳಿತು :

"ಮೃಗರಾಜ! ನನ್ನ ವಿಷಯದಲ್ಲಿ ನೀನು ಹೇಳಿರುವ ಮಾತುಗಳು ನಿನ್ನಂತಹವನಿಗೆ ಅನುರೂಪವಾಗಿಯೇ ಇವೆ. ಧರ್ಮಾರ್ಥಸಾಧನಕುಶಲರಾದ ಮತ್ತು ಶುದ್ಧಸ್ವಭಾವದವರಾದ ಮಂತ್ರಿಗಳನ್ನು ಹುಡುಕುವುದು ಉಚಿತವಾಗಿಯೇ ಇದೆ.

ನ ಶಕ್ಯಂ ಹ್ಯನಮಾತ್ಯೇನ ಮಹತ್ತ್ವಮನುಶಾಸಿತುಮ್ ।
ದುಷ್ಟಾಮಾತ್ಯೇನ ವಾ ವೀರ ಶರೀರಪರಿಪನ್ಥಿನಾ ॥೨೨॥

ಏಕಾಕಿಯಾದ ರಾಜನು ಮಂತ್ರಿಯ ಸಹಾಯವಿಲ್ಲದೇ ವಿಶಾಲವಾದ ರಾಜ್ಯವನ್ನು ಶಾಸನಮಾಡಲು ಸಮರ್ಥನಾಗುವುದಿಲ್ಲ. ಶರೀರಕ್ಕೆ (ನಿನಗೆ) ಶತ್ರುಪ್ರಾಯನಾಗಿರುವ (ಸ್ವಾರ್ಥಿಯಾದ) ದುಷ್ಟಮಂತ್ರಿಯು ಸಿಕ್ಕಿದರೂ ಅಂತಹವನ ಮೂಲಕವಾಗಿ ರಾಜ್ಯಶಾಸನಮಾಡಲೂ ರಾಜನಿಗೆ ಸಾಧ್ಯವಾಗುವುದಿಲ್ಲ.

ಸಹಾಯಾನನುರಕ್ತಾಂಶ್ಚ ನಯಜ್ಞಾನುಪಸಂಹಿತಾನ್ ।
ಪರಸ್ಪರಮಸಂಸೃಷ್ಟಾನ್ವಿಜಿಗೀಷೂನಲೋಲುಪಾನ್ ॥೨೩॥

ತಾನತೀತೋಪಧಾನ್ಪ್ರಾಜ್ಞಾನ್ಹಿತೇ ಯುಕ್ತಾನ್ಮನಸ್ವಿನಃ ।
ಪೂಜಯೇಥಾ ಮಹಾಭಾಗ ಯಥಾಚಾರ್ಯಾನ್ಯಥಾ ಪಿತೄನ್ ॥೨೪॥

ಮಹಾಭಾಗನೇ! ನಿನ್ನ ವಿಷಯದಲ್ಲಿ ಯಾರು ಅನುರಕ್ತರಾಗಿರು ವರೋ, ರಾಜನೀತಿಯನ್ನು ಚೆನ್ನಾಗಿ ತಿಳಿದಿರುವರೋ, ಸದ್ಭಾವಸಂಪನ್ನರಾಗಿರುವರೋ, ಪಕ್ಷ-ಪ್ರತಿಪಕ್ಷಗಳ ಪರಸ್ಪರಸಂಪರ್ಕವಿಲ್ಲದೇ ಇರುವರೋ, ನಿನ್ನ ವಿಜಯಾಭಿಲಾಷಿಗಳಾಗಿರುವರೋ, ಲೋಭರಹಿತರಾಗಿರುವರೋ, ವಂಚನೆಗಳಿಂದ ರಹಿತರಾಗಿರುವರೋ, ಪ್ರಾಜ್ಞರಾಗಿರುವರೋ, ರಾಜನ ಹಿತದಲ್ಲಿಯೇ ಯಾವಾಗಲೂ ಆಸಕ್ತರಾಗಿರುವರೋ, ಜಿತೇಂದ್ರಿಯರೋ– ಅಂತಹ ಸಚಿವರನ್ನು ನೀನು ಆಚಾರ್ಯರನ್ನು ಅಥವಾ ಪಿತೃಗಳನ್ನು ಪೂಜಿಸುವಂತೆಯೇ ಪೂಜಿಸಬೇಕು.

ನ ತ್ವೇವ ಮಮ ಸಂತೋಷಾದ್ರೋಚತೇಽನ್ಯನ್ಮೃಗಾಧಿಪ ।
ನ ಕಾಮಯೇ ಸುಖಾನ್ಭೋಗಾನೈಶ್ವರ್ಯಂ ಚ ತದಾಶ್ರಯಮ್ ॥೨೫॥

ಮೃಗಾಧಿಪನೇ! ಸಂತೋಷವೊಂದು ಹೊರತಾಗಿ ನನಗೆ ಮತ್ತಾವ

ವುದೂ ರುಚಿಸುತ್ತಿಲ್ಲ. (ಸಂತೋಷವೆಂಬುದು ವಸ್ತುಗತವಲ್ಲ. ಈ ಶೌಚಾಚಾರವೇ ನನಗೆ ಸಂತೋಷವನ್ನುಂಟುಮಾಡಿದೆ.) ನಾನು ಸುಖವನ್ನಾಗಲೀ, ಭೋಗವನ್ನಾಗಲೀ, ಅವುಗಳಿಗೆ ಆಶ್ರಯಭೂತವಾದ ಐಶ್ವರ್ಯವನ್ನಾಗಲೀ ಆಶಿಸುವುದಿಲ್ಲ.

ನ ಯೋಕ್ಷ್ಯತಿ ಹಿ ಮೇ ಶೀಲಂ ತವ ಭೃತ್ಯೈಃ ಪುರಾತನೈಃ ।
ತೇ ತ್ವಾಂ ವಿಭೇದಯಿಷ್ಯನ್ತಿ ದುಃಶೀಲಾಶ್ಚ ಮದನ್ತರೇ ॥೨೬॥

ನಿನ್ನ ಹಿಂದಿನ ಸೇವಕರೊಡನೆ ನನ್ನ ಶೀಲ-ಸ್ವಭಾವಗಳು ಹೊಂದಿಕೊಳ್ಳುವುದಿಲ್ಲ. ಅವರು ದುಷ್ಟವಾದ ಸ್ವಭಾವವುಳ್ಳವರು. ಆದುದರಿಂದ ಅವರು ನನ್ನ ನಿಮಿತ್ತವಾಗಿ ನಿನ್ನ ಮನಸ್ಸನ್ನು ಭೇದಿಸುತ್ತಿರುತ್ತಾರೆ. (ನನ್ನ ವಿಷಯದಲ್ಲಿ ಇಲ್ಲ-ಸಲ್ಲದ ವಿಷಯಗಳನ್ನು ನಿನ್ನೊಡನೆ ಹೇಳುತ್ತಿರುತ್ತಾರೆ.)

ಸಂಶ್ರಯಃ ಶ್ಲಾಘನೀಯಸ್ತ್ವಮನ್ಯೇಷಾಮಪಿ ಭಾಸ್ವತಾಮ್ ।
ಕೃತಾತ್ಮಾ ಸುಮಹಾಭಾಗಃ ಪಾಪಕೇಷ್ವಪ್ಯದಾರುಣಃ ॥೨೭॥

ನೀನು ಇತರ ಬಲಿಷ್ಠಪ್ರಾಣಿಗಳಿಂದಲೂ ಶ್ಲಾಘಿಸಲ್ಪಡುತ್ತಿರುವೆ ಮತ್ತು ಆ ಪ್ರಾಣಿಗಳಿಗೆ ನೀನು ಆಶ್ರಯನೂ ಆಗಿರುವೆ. ನೀನು ಸುಶಿಕ್ಷಿತನಾಗಿರುವೆ. ಮಹಾಭಾಗ್ಯಶಾಲಿಯೂ ಆಗಿರುವೆ. ಅಪರಾಧಿಗಳ ವಿಷಯದಲ್ಲಿಯೂ ನೀನು ದಯಾಪರನಾಗಿರುವೆ.

ದೀರ್ಘದರ್ಶೀ ಮಹೋತ್ಸಾಹಃ ಸ್ಥೂಲಲಕ್ಷ್ಯೋ ಮಹಾಬಲಃ ।
ಕೃತೀ ಚಾಮೋಘಕರ್ತಾಸಿ ಭಾಗ್ಯೈಶ್ಚ ಸಮಲಂಕೃತಃ ॥೨೮॥

ನೀನು ದೂರದರ್ಶಿಯಾಗಿರುವೆ. ಉತ್ಸಾಹಶಾಲಿಯಾಗಿರುವೆ. ನನ್ನನ್ನು ಮಂತ್ರಿಯಾಗಿರುವಂತೆ ಆಹ್ವಾನಿಸಿರುವ ನಿನ್ನ ಉದ್ದೇಶವು ಸ್ಪಷ್ಟವಾಗಿದೆ. ನೀನು ಮಹಾಬಲಿಷ್ಠನಾಗಿರುವೆ. ಪಂಡಿತನಾಗಿರುವೆ. ದೊಡ್ಡ ಗುರಿಯನ್ನು ಇಟ್ಟುಕೊಂಡಿರುವೆ. ಒಳ್ಳೆಯ ಫಲಗಳನ್ನು ಕೊಡುವ ಕಾರ್ಯಗಳನ್ನೇ ಮಾಡುವೆ. ಸೌಭಾಗ್ಯಗಳಿಂದಲೂ ಸಮಲಂಕೃತನಾಗಿರುವೆ.

ಕಿಂ ತು ಸ್ವೇನಾಸ್ಮಿ ಸಂತುಷ್ಟೋ ದುಃಖವೃತ್ತಿರನುಷ್ಠಿತಾ ।
ಸೇವಾಯಾಂ ಚಾಪಿ ನಾಭಿಜ್ಞಃ ಸ್ವಚ್ಛನ್ದೇನ ವನೇಚರಃ ॥೨೯॥

ನನ್ನ ವಿಷಯವಾಗಿ ಹೇಳುವುದಾದರೆ–ನನ್ನಷ್ಟಕ್ಕೆ ನಾನು ಸಂತುಷ್ಟನಾಗಿದ್ದೇನೆ. ಬಹಳ ಕಷ್ಟಕರವಾದ ಮಾರ್ಗವನ್ನು ಆಶ್ರಯಿಸಿದ್ದೇನೆ. ಸೇವಾವೃತ್ತಿಯ ವಿಷಯದಲ್ಲಿ ನಾನು ಅನಭಿಜ್ಞನು. ಸ್ವಚ್ಛಂದವಾಗಿ ಅರಣ್ಯದಲ್ಲಿ ಸಂಚರಿಸುತ್ತಾ ಇರುವವನು.

ರಾಜೋಪಕ್ರೋಶದೋಷಾಶ್ಚ ಸರ್ವೇ ಸಂಶ್ರಯವಾಸಿನಾಮ್ ।
ವ್ರತಚರ್ಯಾ ತು ನಿಃಸಂಗಾ ನಿರ್ಭಯಾ ವನವಾಸಿನಾಮ್ ॥೩೦॥

ರಾಜಾಶ್ರಯದಲ್ಲಿಯೇ ಇರುವವರಲ್ಲಿ–ರಾಜನ ನಿಂದೆಗೆ ಸಂಬಂಧಿಸಿದ ರಾಜನ ಕೋಪಕ್ಕೆ ಗುರಿಮಾಡುವ ಸಕಲದೋಷಗಳೂ ಇರುತ್ತವೆ. ಇಲ್ಲಿ ನಾನು ಕೈಗೊಂಡಿರುವ ವನವಾಸಿಗಳ ವ್ರತಾನುಷ್ಠಾನವು ಸಂಗರಹಿತವೂ–ಭಯರಹಿತವೂ ಆಗಿರುತ್ತದೆ.

ನೃಪೇಣಾಹೂಯಮಾನಸ್ಯ ಯತ್ತಿಷ್ಠತಿ ಭಯಂ ಹೃದಿ ।
ನ ತತ್ತಿಷ್ಠತಿ ತುಷ್ಟಾನಾಂ ವನೇ ಮೂಲಫಲಾಶಿನಾಮ್ ॥೩೧॥

ರಾಜನು ಆಹ್ವಾನಿಸುತ್ತಿರುವಾಗ ಮನಸ್ಸಿನಲ್ಲಿ ಯಾವ ಭಯವಿರುತ್ತದೆಯೋ–ಅಂತಹ ಭಯವು ಅರಣ್ಯದ ಫಲ-ಮೂಲಗಳನ್ನು ತಿಂದುಕೊಂಡು ಸಂತುಷ್ಟರಾಗಿರುವವರಿಗೆ ಇರುವುದಿಲ್ಲ.

ಪಾನೀಯಂ ವಾ ನಿರಾಯಾಸಂ ಸ್ವಾದ್ವನ್ನಂ ವಾ ಭಯೋತ್ತರಮ್ ।
ವಿಚಾರ್ಯ ಖಲು ಪಶ್ಯಾಮಿ ತತ್ಸುಖಂ ಯತ್ರ ನಿರ್ವೃತಿಃ ॥೩೨॥

ಒಂದೆಡೆಯಲ್ಲಿ ಯಾರ ಭಯವೂ ಇಲ್ಲದೇ ಕುಡಿಯಲು ಬೇಕಾಗುವಷ್ಟು ನೀರು ಸಿಕ್ಕುತ್ತದೆ. ಮತ್ತೊಂದೆಡೆಯಲ್ಲಿ ಭಯಕ್ಕೆ ಕಾರಣವಾಗಬಹುದಾದ ಮೃಷ್ಟಾನ್ನವು ಸಿಕ್ಕುತ್ತದೆ. ಈ ಎರಡರಲ್ಲಿ ಯಾವುದು ಶ್ರೇಷ್ಠವೆಂಬುದನ್ನು ವಿಚಾರಮಾಡಿದರೆ ಯಾವುದರಲ್ಲಿ ಯಾವುದೇ ವಿಧವಾದ ಭಯವೂ ಇರುವುದಿಲ್ಲವೋ–ಅದೇ ಪಡೆದುಕೊಳ್ಳಲು ಯೋಗ್ಯವಾದ ಸುಖವೆಂದು ನಾನು ಅಭಿಪ್ರಾಯಪಡುತ್ತೇನೆ. ಭಯಯುಕ್ತವಾದ ಮೃಷ್ಟಾನ್ನಕ್ಕಿಂತಲೂ ಭಯರಹಿತವಾದ ಒಂದು ಬೊಗಸೆ ನೀರೇ ಲೇಸು.

ಅಪರಾಧೈರ್ನ ತಾವನ್ತೋ ಭೃತ್ಯಾಃ ಶಿಷ್ಟಾ ನರಾಧಿಪೈಃ ।
ಉಪಘಾತೈರ್ಯಥಾ ಭೃತ್ಯಾ ದೂಷಿತಾ ನಿಧನಂ ಗತಾಃ ॥೩೩॥

ರಾಜರು ಯಾವುದಾದರೂ ಅಪರಾಧದ ಕಾರಣದಿಂದಾಗಿ ತಮ್ಮ ಸೇವಕರನ್ನು ದಂಡಿಸಹೋಗುವುದಿಲ್ಲ. ಆದರೆ ಕಾರ್ಯದಲ್ಲಿ ಅಸಮರ್ಥನೆಂಬ ನಿಂದೆಗೆ ಗುರಿಯಾಗಿ (ಯಾವುದಾದರೂ ಮಿಥ್ಯಾವಾದಕ್ಕೆ ಗುರಿಯಾಗಿ) ಸೇವಕರು ನಿಧನಹೊಂದುತ್ತಾರೆ.

ಯದಿ ತ್ವೇತನ್ಮಯಾ ಕಾರ್ಯಂ ಮೃಗೇನ್ದ್ರ ಯದಿ ಮನ್ಯಸೇ ।
ಸಮಯಂ ಕೃತಮಿಚ್ಛಾಮಿ ವರ್ತಿತವ್ಯಂ ಯಥಾ ಮಯಿ ॥೩೪॥

ಮೃಗರಾಜ! ಆದರೂ ನಿನ್ನ ಮಂತ್ರಿತ್ವವನ್ನು ನಾನೇ ವಹಿಸಬೇಕೆಂದು ನೀನು ಭಾವಿಸುವೆಯಾದರೆ–ಒಂದು ನಿಯಮವನ್ನು ನಿನ್ನ ಮುಂದಿಡಲು ಇಚ್ಛಿಸುತ್ತೇನೆ. ಆ ನಿಯಮದಂತೆ ನೀನು ನನ್ನ ವಿಷಯದಲ್ಲಿ ವರ್ತಿಸಬೇಕು.

ಮದೀಯಾ ಮಾನನೀಯಾಸ್ತೇ ಶ್ರೋತವ್ಯಂ ಚ ಹಿತಂ ವಚಃ ।
ಕಲ್ಪಿತಾ ಯಾ ಚ ಮೇ ವೃತ್ತಿಃ ಸಾ ಭವೇತ್ತ್ವಯಿ ಸುಸ್ಥಿರಾ ॥೩೫॥

ನೀನು ನನ್ನ ಆತ್ಮೀಯರನ್ನು ಸಮ್ಮಾನಿಸಬೇಕು. ನಾನು ಹೇಳುವ ಹಿತಕರವಾದ ಮಾತುಗಳನ್ನು ಕೇಳಬೇಕು. ನನಗೆ ಯಾವ ವೃತ್ತಿಯನ್ನು (ಮಂತ್ರಿಪದವಿಯನ್ನು) ಕಲ್ಪಿಸಿಕೊಟ್ಟಿರುವೆಯೋ–ಅದು ನಿನ್ನಲ್ಲಿ ಸುಸ್ಥಿರ ವಾಗಿರಬೇಕು ; ಸುರಕ್ಷಿತವಾಗಿರಬೇಕು.

ನ ಮನ್ತ್ರಯೇಯಮನ್ಯೈಸ್ತೇ ಸಚಿವೈಃ ಸಹ ಕರ್ಹಿಚಿತ್ ।
ನೀತಿಮನ್ತಃ ಪರೀಪ್ಸನ್ತೋ ವೃಥಾ ಬ್ರೂಯುಃ ಪರೇ ಮಯಿ ॥೩೬॥

ನಾನು ನಿನ್ನ ಇತರ ಮಂತ್ರಿಗಳೊಡನೆ ಯಾವುದೇ ವಿಷಯವನ್ನೂ ಯಾವಾಗಲೂ ಪರಾಮರ್ಶೆಮಾಡುವುದಿಲ್ಲ. ನೀತಿಜ್ಞರಾದ ಇತರ ಮಂತ್ರಿ ಗಳು ನನ್ನ ಮೇಲಿನ ಅಸೂಯೆಯಿಂದಾಗಿ ವ್ಯರ್ಥವಾದ ಆಪಾದನೆಗಳನ್ನು ಹೊರೆಸುತ್ತಾರೆ.

ಏಕ ಏಕೇನ ಸಂಗಮ್ಯ ರಹೋ ಬ್ರೂಯಾಂ ಹಿತಂ ವಚಃ ।
ನ ಚ ತೇ ಜ್ಞಾತಿಕಾರ್ಯೇಷು ಪ್ರಷ್ಟವ್ಯೋಽಹಂ ಹಿತಾಹಿತೇ ॥೩೭॥

ನಾನು ಏಕಾಕಿಯಾಗಿ ನೀನು ಒಬ್ಬನೇ ಇರುವಾಗ ನಿನ್ನ ಬಳಿಗೆ ಬಂದು ರಹಸ್ಯದಲ್ಲಿ ನಿನಗೆ ಹಿತವಾದ ಮಾತುಗಳನ್ನು ಹೇಳುತ್ತೇನೆ. ಅದರಂತೆ

ನೀನಾದರೂ ನಿನ್ನ ಜ್ಞಾತಿ-ಬಾಂಧವರ ಕಾರ್ಯಗಳ ಹಿತಾಹಿತಗಳ ಬಗೆಗೆ ನನ್ನನ್ನೂ ಕೇಳಬಾರದು.

ಮಯಾ ಸಮ್ಮಂತ್ರ್ಯ ಪಶ್ಚಾಚ್ಚ ನ ಹಿಂಸ್ಯಾಃ ಸಚಿವಾಸ್ತ್ವಯಾ ।
ಮದೀಯಾನಾಂ ಚ ಕುಪಿತೋ ಮಾ ತ್ವಂ ದಣ್ಡಂ ನಿಪಾತಯೇ ॥೩೮॥

ನನ್ನಿಂದ ಸಲಹೆಗಳನ್ನು ಪಡೆದುಕೊಂಡನಂತರ ನಿನ್ನ ಹಿಂದಿನ ಮಂತ್ರಿಗಳು ಅಪರಾಧಿಗಳೆಂದು ಕಂಡುಬಂದರೂ ಅವರಿಗೆ ನೀನು ಪ್ರಾಣ ದಂಡವನ್ನು ವಿಧಿಸಬಾರದು. ಅದೇ ರೀತಿಯಲ್ಲಿ ಯಾವುದೇ ಕಾರಣ ದಿಂದಲೂ ನೀನು ಕುಪಿತನಾಗಿ ವಿಚಾರಣೆಮಾಡದೆ ನನ್ನ ಆತ್ಮೀಯರ ಮೇಲೂ ದಂಡಪ್ರಯೋಗವನ್ನು ಮಾಡಬಾರದು.”

ಗೋಮಾಯುವಿನ ಮಾತುಗಳನ್ನು ಕೇಳಿ ಹುಲಿಯು ಹಾಗೆಯೇ ಆಗಲಿ ಎಂದು ಹೇಳಿ ನರಿಗೆ ಮಂತ್ರಿಪದವಿಯನ್ನಿತ್ತು ಗೌರವಿಸಿತು. ಹೀಗೆ ನರಿಯು ವ್ಯಾಘ್ರರಾಜನ ಆಸ್ಥಾನದಲ್ಲಿ ಬುದ್ಧಿಸಚಿವನ ಸ್ಥಾನವನ್ನು ಅಲಂಕರಿಸಿತು. ನರಿಯು ವ್ಯಾಘ್ರಕ್ಕೆ ಒಳ್ಳೆಯ ಸಲಹೆಗಳನ್ನೇ ನೀಡುತ್ತಾ ಅದರಿಂದ ಒಳ್ಳೆಯ ಕಾರ್ಯಗಳನ್ನೇ ಮಾಡಿಸತೊಡಗಿತು. ವ್ಯಾಘ್ರದ ಪ್ರಶಂಸೆಗೂ ಪಾತ್ರವಾಯಿತು. ವ್ಯಾಘ್ರವು ನರಿಯನ್ನು ಪ್ರಶಂಸೆಮಾಡುತ್ತಿರು ವುದನ್ನು ಕಂಡು ಹಿಂದಿನ ರಾಜಸೇವಕರಿಗೆ ಸಹಿಸದಾಯಿತು. ಅವುಗಳೆಲ್ಲವೂ ಸಂಘಟಿತವಾಗಿ ನರಿಯನ್ನು ದ್ವೇಷಿಸತೊಡಗಿದುವು. ದುಷ್ಟವಾದ ಬುದ್ಧಿ ಯಿಂದ ಕೂಡಿದ್ದ ಅವುಗಳು ಗೋಮಾಯುವಿನ ವಿಷಯದಲ್ಲಿ ಮಿತ್ರ ರಂತೆಯೇ ನಟಿಸುತ್ತಾ ಅದನ್ನು ಸಮಾಧಾನಪಡಿಸುತ್ತಾ ಮತ್ತು ಪ್ರಸನ್ನಗೊಳಿ ಸುತ್ತಾ ತಮ್ಮಂತೆಯೇ ಅದನ್ನೂ ದೋಷಿಯನ್ನಾಗಿ ಮಾಡಬೇಕೆಂದು ಪ್ರಯತ್ನಿ ಸುತ್ತಿದ್ದುವು. ನರಿಯು ಮಂತ್ರಿಯಾಗುವ ಮೊದಲು ಅವುಗಳು ಬೇರೆಯ ರೀತಿಯಲ್ಲಿಯೇ ಜೀವನನಡೆಸುತ್ತಿದ್ದುವು. ಇತರರ ದ್ರವ್ಯಗಳೆಲ್ಲವನ್ನೂ ಅಪಹರಿಸುತ್ತಿದ್ದುವು. ಗೋಮಾಯುವು ಬುದ್ಧಿಮಂತ್ರಿಯಾದ ಮೇಲೆ ಅದ ರಿಂದ ನಿಯಂತ್ರಿತರಾದ ವ್ಯಾಘ್ರರಾಜನ ಪೂರ್ವಮಂತ್ರಿಗಳು ಸ್ವಲ್ಪವಾದರೂ ದ್ರವ್ಯವನ್ನು ಅಪಹರಿಸಲು ಸಾಧ್ಯವಾಗುತ್ತಲೇ ಇರಲಿಲ್ಲ. ನರಿಯೂ ನ್ಯಾಯಮಾರ್ಗದಿಂದ ವಿಚಲಿತವಾಗಬೇಕೆಂಬುದು ಅವುಗಳ ಆಕಾಂಕ್ಷೆಯಾಗಿ

ದ್ದಿತು. ಅನೇಕವಿಧವಾದ ಮಾತುಗಳಿಂದ ವ್ಯಾಘ್ರರಾಜನ ಪೂರ್ವಮಂತ್ರಿಗಳು ನರಿಯನ್ನು ಪ್ರಲೋಭನೆಗೊಳಿಸುತ್ತಿದ್ದುವು. ಅಪಾರವಾದ ಧನದ ಆಸೆಯನ್ನು ತೋರಿಸಿ ನರಿಯ ಬುದ್ಧಿಯನ್ನು ಪ್ರಲೋಭನಗೊಳಿಸಲು ಯತ್ನಿಸುತ್ತಿದ್ದುವು.

ಆದರೆ ಬುದ್ಧಿಶಾಲಿಯಾದ ನರಿಯು ಅವುಗಳ ಪ್ರಲೋಭನೆಗೆ ವಶವಾಗದೇ ಧೈರ್ಯದಿಂದ ಮನಸ್ಸನ್ನು ಸ್ಥಿರಗೊಳಿಸಿತು. ವ್ಯಾಘ್ರದ ಪೂರ್ವಮಂತ್ರಿಗಳೂ ಹೇಗಾದರೂ ಮಾಡಿ ನರಿಯನ್ನು ವಿನಾಶಗೊಳಿಸ ಬೇಕೆಂದೇ ಶಪಥಮಾಡಿದುವು. ಒಂದು ದಿನ ಪೂರ್ವಮಂತ್ರಿಗಳು ವ್ಯಾಘ್ರವು ಇಷ್ಟಪಟ್ಟಿದ್ದ ಸಂಸ್ಕೃತವಾದ ಮಾಂಸವನ್ನು ವ್ಯಾಘ್ರದ ಮನೆಯಿಂದ ಅಪಹರಿಸಿಕೊಂಡು ಹೋಗಿ ನರಿಯ ಮನೆಯಲ್ಲಿಟ್ಟುವು. ಯಾವ ಉದ್ದೇಶ ದಿಂದ ವ್ಯಾಘ್ರಸೇವಕರು ಮಾಂಸವನ್ನು ವ್ಯಾಘ್ರದ ಮನೆಯಿಂದ ಅಪಹರಿಸಿ ದುವು? ಹೀಗೆ ಮಾಡಲು ಸಲಹೆಯನ್ನು ಕೊಟ್ಟವರಾರು?–ಎಂಬುದೆಲ್ಲವೂ ನರಿಗೆ ತಿಳಿದಿತ್ತು. ಆದರೂ ವಿಶೇಷಕಾರಣಕ್ಕಾಗಿ ಅದು ಸುಮ್ಮನಿದ್ದು ಬಿಟ್ಟಿತು. ವ್ಯಾಘ್ರವು ನರಿಯ ಸಾಚಿವ್ಯವನ್ನು ಬಯಸಿದಾಗ ನರಿಯು ವ್ಯಾಘ್ರನಲ್ಲಿ ಒಂದು ನಿಯಮವನ್ನು ಹಾಕಿದ್ದಿತು. "ನನ್ನೊಡನೆ ಮೈತ್ರಿಯನ್ನು ಅಪೇಕ್ಷಿಸುವುದಾದರೆ ಬೇರೆಯವರ ಮಾತನ್ನು ಕೇಳಿಕೊಂಡು ನನ್ನನ್ನು ವಿನಾಶಪಡಿಸಕೂಡದು"–ಎಂಬುದೇ ನರಿಯ ನಿಯಮವಾಗಿದ್ದಿತು. ಆ ನಿಯಮಕ್ಕೆ ವ್ಯಾಘ್ರವೂ ಒಪ್ಪಿದ್ದಿತು. ಈ ಸಮಯದಲ್ಲಿ ವ್ಯಾಘ್ರವು ಹಸಿದಿದ್ದಿತು. ಊಟಮಾಡಲು ಮೇಲೆದ್ದಿತು. ಆದರೆ ಭೋಜನಾರ್ಥವಾಗಿ ಸಿದ್ಧವಾಗಿರಬೇಕಾಗಿದ್ದ ಮಾಂಸವು ಮಾತ್ರ ಅಲ್ಲಿರಲಿಲ್ಲ. ಒಡನೆಯೇ ವ್ಯಾಘ್ರವು ಮಾಂಸದ ಚೋರರನ್ನು ಪತ್ತೆಮಾಡುವಂತೆ ಸೇವಕರಿಗೆ ಆಜ್ಞಾಪಿಸಿತು. ಯಾವ ಪ್ರಾಣಿಗಳು ಆ ಕೃತ್ಯವನ್ನು ಮಾಡಿದ್ದವೋ ಅವು ವ್ಯಾಘ್ರನಿಗೆ ಮಾಂಸದ ವಿಷಯವಾಗಿ ಹೇಳಿದುವು.

ಸಚಿವೇನಾಪನೀತಂ ತೇ ವಿದುಷಾ ಪ್ರಾಜ್ಞಮಾನಿನಾ ॥೪೯॥

"ತಾನೇ ಮಹಾಪ್ರಾಜ್ಞನೆಂದು ತಿಳಿದುಕೊಂಡಿರುವ ವಿದ್ವಾಂಸನಾದ

ನಿನ್ನ ಮಂತ್ರಿಯೇ ನಿನಗಾಗಿ ಸಿದ್ಧಪಡಿಸಿದ್ದ ಮಾಂಸವನ್ನು ತೆಗೆದುಕೊಂಡು ಹೋದನು."

ಗೋಮಾಯುವಿನ ಚಾಪಲ್ಯವನ್ನು ಕೇಳಿದೊಡನೆಯೇ ಶಾರ್ದೂಲವು ಕೋಪಗೊಂಡಿತು. ನರಿಯು ತನ್ನ ಮಾಂಸವನ್ನು ಅಪಹರಿಸಿಕೊಂಡು ಹೋಯಿತೆಂಬ ವಾರ್ತೆಯು ವ್ಯಾಘ್ರಕ್ಕೆ ಸಹ್ಯವಾಗಲಿಲ್ಲ. ನರಿಯನ್ನು ಕೊಂದೇಬಿಡಬೇಕೆಂದು ತೀರ್ಮಾನಿಸಿತು. ವ್ಯಾಘ್ರದ ಮನಸಿನಲ್ಲಿ ಉಂಟಾದ ಆ ಭೇದಬುದ್ಧಿಯನ್ನು ಕಂಡು ಪೂರ್ವಮಂತ್ರಿಗಳು ಪುನಃ ವ್ಯಾಘ್ರದೊಡನೆ ಹೇಳತೊಡಗಿದುವು. ಅಂತಹ ಸಮಯವನ್ನು ಬಿಟ್ಟರೆ ತಮಗೆ ಮಂತ್ರಿ ಪದವಿಯೇ ಹೋಗಿಬಿಡಬಹುದೆಂದು ಬಗೆದು ಪುನಃ ನರಿಯ ಕಾರ್ಯಗಳನ್ನು ಬಣ್ಣ-ಬಣ್ಣವಾಗಿ ವರ್ಣಿಸತೊಡಗಿದುವು :

"ಪ್ರಭುವೇ! ಆ ನರಿಯು ಇಂತಹ ಸ್ವಾಮಿದ್ರೋಹದ ಕಾರ್ಯವನ್ನು ಮಾಡಿರುವಾಗ ಇನ್ನು ಯಾವ ವಂಚನೆಯ ಕಾರ್ಯವನ್ನು ತಾನೇ ಮಾಡಲಾರದು? ಇದಕ್ಕೂ ಹೀನವಾದ ಕಾರ್ಯವನ್ನೂ ಅದು ಮಾಡಿಯೇ ಮಾಡುತ್ತದೆ. ಪ್ರಭುಗಳು ಕೇಳಿರುವಂತೆ ಆ ನರಿಯಲ್ಲಿ ಅಂತಹ ಸದ್ಗುಣಗಳು ಯಾವುದೂ ಇರುವುದಿಲ್ಲ. ಮಾತಿನಲ್ಲಿ ಮಾತ್ರ ಅದು ಮಹಾಧರ್ಮಿಷ್ಠನಂತೆ ತೋರಿಸಿಕೊಳ್ಳುತ್ತದೆ. ಆದರೆ ಸ್ವಭಾವದಲ್ಲಿ ಅದು ಅತಿಕ್ರೂರಿಯಾದ ಪ್ರಾಣಿಯಾಗಿರುತ್ತದೆ. ಆ ಪಾಪಿಷ್ಠನರಿಯು ಧಾರ್ಮಿಕವೇಷವನ್ನು ಹಾಕಿಕೊಂಡಿದೆ. ಆದರೆ ವ್ಯರ್ಥವಾದ ಆಚಾರ-ವಿಚಾರವುಳ್ಳದ್ದಾಗಿದೆ. ತನ್ನ ಕೆಲಸವನ್ನು ಮಾಡಿಕೊಳ್ಳುವ ಸಲುವಾಗಿ, ಹೊಟ್ಟೆಯನ್ನು ತುಂಬಿಸಿಕೊಳ್ಳುವ ಸಲುವಾಗಿ–ಆ ನರಿಯು ವ್ರತಾದಿಗಳಲ್ಲಿ ತೊಡಗಿದೆ. (ಅದರ ನಿಯಮ-ವ್ರತಗಳೆಲ್ಲವೂ ಸ್ವಾರ್ಥಸಾಧನೆಗಾಗಿ ಮತ್ತು ಉದರಂಭರಣಕ್ಕಾಗಿ) ನಮ್ಮ ಮಾತಿನಲ್ಲಿ ನಿನಗೆ ವಿಶ್ವಾಸವಿಲ್ಲದಿದ್ದರೆ ಈಗಲೇ ನಾವು ನರಿಯ ಮನೆಯಿಂದ ಮಾಂಸವನ್ನು ತಂದು ನಿನಗೆ ತೋರಿಸುತ್ತೇವೆ."

ವ್ಯಾಘ್ರದ ಪೂರ್ವಮಂತ್ರಿಗಳು ಹೀಗೆ ಹೇಳಿ ಕ್ಷಣಮಾತ್ರದಲ್ಲಿ ನರಿಯ ಮನೆಯಲ್ಲಿ ಅವುಗಳೇ ಇಟ್ಟಿದ್ದ ಮಾಂಸವನ್ನು ತಂದು ವ್ಯಾಘ್ರಕ್ಕೆ ತೋರಿಸಿದುವು. ತನಗಾಗಿ ಸಿದ್ಧಪಡಿಸಿದ್ದ ಮಾಂಸವನ್ನು ನರಿಯೇ ಅಪಹರಣ

ಮಾಡಿತ್ತೆಂಬುದನ್ನು ತಿಳಿದುಕೊಂಡು ಸೇವಕರು ಹೇಳಿದ ಮಾತುಗಳನ್ನು ಕೇಳಿ ವ್ಯಾಘ್ರವು ಸೇವಕರಿಗೆ ನರಿಯನ್ನು ವಧಿಸುವಂತೆ ಆಜ್ಞೆಮಾಡಿತು.

ಆ ಸಮಯದಲ್ಲಿ ಶಾರ್ದೂಲವು ಹೇಳಿದ ಮಾತನ್ನು ಅದರ ತಾಯಿಯು ಕೇಳಿ ಮೃಗರಾಜನನ್ನು ಕುರಿತು ಕೆಲವು ಹಿತವಾದ ಮಾತುಗಳನ್ನು ಹೇಳಲು ಆಗಮಿಸಿತು :

ಪುತ್ರ ನೈತತ್ತ್ವಯಾ ಗ್ರಾಹ್ಯಂ ಕಪಟಾರಮ್ಭಸಂಯುತಮ್ ॥೫೮॥

“ಮಗು! ನೀನು ನಿನ್ನ ಪೂರ್ವಮಂತ್ರಿಗಳು ಹೇಳಿರುವ ಕಪಟ ಪೂರ್ವವಾದ ಮಾತುಗಳನ್ನು ಅಂಗೀಕರಿಸುವುದು ಯುಕ್ತವಾಗಿಲ್ಲ.

ಕರ್ಮಸಂಘರ್ಷಜೈರ್ದೋಷೈರ್ದುಷ್ಯೇತಾಶುಚಿಭಿಃ ಶುಚಿಃ ।
ನೋಚ್ಛ್ರಿತಂ ಸಹತೇ ಕಶ್ಚಿತ್ಪ್ರಕ್ರಿಯಾ ವೈರಕಾರಿಕಾ ॥೫೯॥

ಕಾರ್ಯದಲ್ಲಿ ಸಂಘರ್ಷವುಂಟಾದ ಕಾರಣ (ಸ್ವಾರ್ಥಕ್ಕೆ ಅಡ್ಡಿ ಯುಂಟಾದ ಕಾರಣದಿಂದ) ಕಲುಷಿತವಾದ ಯಾರ ಮನಸ್ಸು ಶುದ್ಧವಾಗಿರು ವುದಿಲ್ಲವೋ–ಅವರು ನಿರ್ದೋಷಿಗಳ ಮೇಲೆ ದೋಷಾರೋಪಣೆಯನ್ನು ಮಾಡುವುದು ಸ್ವಾಭಾವಿಕ. ಇತರರು ಉಚ್ಛ್ರಾಯಸ್ಥಿತಿಗೆ ಬರುವುದನ್ನು ಸಾಮಾನ್ಯವಾಗಿ ಯಾರೂ ಸಹಿಸಿಕೊಳ್ಳುವುದಿಲ್ಲ. ಇದು ವೈರಭಾವವನ್ನು ಉಂಟುಮಾಡುವ ಪ್ರಕ್ರಿಯೆಯಾಗಿದೆ.

ಶುಚೇರಪಿ ಹಿ ಯುಕ್ತಸ್ಯ ದೋಷ ಏವ ನಿಪಾತ್ಯತೇ ।
ಮುನೇರಪಿ ವನಸ್ಥಸ್ಯ ಸ್ವಾನಿ ಕರ್ಮಾಣಿ ಕುರ್ವತಃ ।
ಉತ್ಪಾದ್ಯನ್ತೇ ತ್ರಯಃ ಪಕ್ಷಾ ಮಿತ್ರೋದಾಸೀನಶತ್ರವಃ ॥೬೦॥

ಯಾವನು ಎಷ್ಟೇ ಶುದ್ಧನಾಗಿರಲಿ, ಉದ್ಯೋಗಶೀಲನಾಗಿರಲಿ ಪ್ರಪಂಚದ ಜನರು ಅಂತಹವನ ಮೇಲೂ ದೋಷಾರೋಪಣೆಯನ್ನು ಮಾಡುತ್ತಾರೆ. ಧಾರ್ಮಿಕಕಾರ್ಯಗಳನ್ನು ತನ್ನ ಪಾಡಿಗೆ ತಾನು ಮಾಡಿಕೊಂಡು ಹೋಗುತ್ತಿರುವ ವನವಾಸಿಯಾದ ಮುನಿಗೂ–ಮಿತ್ರ, ಉದಾಸೀನ ಮತ್ತು ಶತ್ರು–ಎಂಬ ಮೂರು ಬಗೆಯ ಜನರು ಹುಟ್ಟಿಕೊಳ್ಳುತ್ತಾರೆ.

ಲುಬ್ಧಾನಾಂ ಶುಚಯೋ ದ್ವೇಷ್ಯಾಃ ಕಾತರಾಣಾಂ ತರಸ್ವಿನಃ ।
ಮೂರ್ಖಾಣಾಂ ಪಣ್ಡಿತಾ ದ್ವೇಷ್ಯಾ ದರಿದ್ರಾಣಾಂ ಮಹಾಧನಾಃ ।
ಅಧಾರ್ಮಿಕಾಣಾಂ ಧರ್ಮಿಷ್ಠಾ ವಿರೂಪಾಣಾಂ ಸುರೂಪಿಣಃ ॥೬೨॥

ಲುಬ್ಧರಿಗೆ (ಜಿಪುಣರಿಗೆ)–ಅಲುಬ್ಧರು (ಉದಾರಿಗಳು) ದ್ವೇಷ್ಯರು. ಹೇಡಿಗಳಿಗೆ–ವೀರರು ಶತ್ರುಗಳು. ಮೂರ್ಖರಿಗೆ–ಪಂಡಿತರು ಶತ್ರುಗಳು, ದರಿದ್ರರಿಗೆ–ಧನಿಕರು ಶತ್ರುಗಳು, ಅಧರ್ಮಿಗಳಿಗೆ–ಧರ್ಮಿಷ್ಠರು ಶತ್ರುಗಳು. ಕುರೂಪಿಗಳಿಗೆ–ಸ್ಫುರದ್ರೂಪಿಗಳು ಶತ್ರುಗಳು.

ಬಹವಃ ಪಣ್ಡಿತಾ ಮೂರ್ಖಾ ಲುಬ್ಧಾ ಮಾಯೋಪಜೀವಿನಃ ।
ಕುರ್ಯುರ್ದೋಷಮದೋಷಸ್ಯ ಬೃಹಸ್ಪತಿಮತೇರಪಿ ॥೬೩॥

ವಿದ್ವಾಂಸರಾಗಿದ್ದರೂ ಹಲವರು–ಕೆಲವು ಸಮಯಗಳಲ್ಲಿ ಅವಿವೇಕಿಗಳೂ, ಲೋಭಿಗಳೂ, ಕಪಟಿಗಳೂ ಆಗಿರುತ್ತಾರೆ. ಬೃಹಸ್ಪತಿಯ ಬುದ್ಧಿಗೆ ಸಮಾನವಾದ ಬುದ್ಧಿಯಿಂದ ಕೂಡಿರುವ ದೋಷರಹಿತನಾದ ವ್ಯಕ್ತಿಯನ್ನೂ ದೋಷಯುಕ್ತನೆಂದೇ ಹೇಳುತ್ತಾರೆ.

ಶೂನ್ಯಾತ್ತಚ್ಚ ಗೃಹಾನ್ಮಾಂಸಂ ಯದ್ಯಪ್ಯಪಹೃತಂ ತವ ।
ನೇಚ್ಛತೇ ದೀಯಮಾನಂ ಚ ಸಾಧು ತಾವದ್ವಿಮೃಶ್ಯತಾಮ್ ॥೬೪॥

ಒಂದು ಕಡೆ ನಿನ್ನ ಶೂನ್ಯಗೃಹದಿಂದ (ನಿರ್ಜನವಾದ ಮನೆಯಿಂದ) ಮಾಂಸದ ಅಪಹರಣವಾಗಿದೆ. ಮತ್ತೊಂದು ಕಡೆ ಇರುವ ವ್ಯಕ್ತಿಯು ನೀನು ಮಾಂಸವನ್ನು ಕೊಟ್ಟರೂ ತೆಗೆದುಕೊಳ್ಳಲು ಇಚ್ಛಿಪಡತಕ್ಕವನಲ್ಲ. ಈ ಎರಡು ವಿಷಯಗಳನ್ನೂ ಮನಸ್ಸಿಗೆ ತೆಗೆದುಕೊಂಡು ಚೆನ್ನಾಗಿ ಪರಿಶೀಲಿಸು.

ಅಸಭ್ಯಾಃ ಸಭ್ಯಸಂಕಾಶಾಃ ಸಭ್ಯಾಶ್ಚಾಸಭ್ಯದರ್ಶನಾಃ ।
ದೃಶ್ಯನ್ತೇ ವಿವಿಧಾ ಭಾವಾಸ್ತೇಷು ಯುಕ್ತಂ ಪರೀಕ್ಷಣಮ್ ॥೬೫॥

ಪ್ರಪಂಚದಲ್ಲಿ ಅಸಭ್ಯಪ್ರಾಣಿಗಳು ಸಭ್ಯವಾದ ಪ್ರಾಣಿಗಳಂತೆ ಕಾಣುತ್ತವೆ. ಸಭ್ಯಪ್ರಾಣಿಗಳು ಅಸಭ್ಯಪ್ರಾಣಿಗಳಂತೆ ಕಾಣುತ್ತವೆ. ಹೀಗೆ ಅನೇಕವಿಧವಾದ ಸ್ವಭಾವಗಳು ಪ್ರಾಣಿಮಾತ್ರದಲ್ಲಿ ಗೋಚರಿಸುತ್ತವೆ.

ಇದರಲ್ಲಿ ನಿಜವಾಗಿಯೂ ಸಭ್ಯಪ್ರಾಣಿಯು ಯಾವುದು? ಅಸಭ್ಯಪ್ರಾಣಿಯು ಯಾವುದು?–ಎಂಬುದನ್ನು ಪರೀಕ್ಷೆಮಾಡುವುದು ಉಚಿತವಲ್ಲವೇ?

ತಲವದ್ದೃಶ್ಯತೇ ವ್ಯೋಮ ಖದ್ಯೋತೋ ಹವ್ಯವಾಡಿವ ।
ನ ಚೈವಾಸ್ತಿ ತಲಂ ವ್ಯೋಮ್ನಿ ಖದ್ಯೋತೇ ನ ಹುತಾಶನಃ ॥೬೬॥

ಆಕಾಶವು ಬೋರಲು ಹಾಕಿದ ಕಡಾಯಿಯ ತಳಭಾಗದಂತೆ ಕಾಣುತ್ತದೆ. ಮಿಂಚುಹುಳುವು ಬೆಂಕಿಯ ಕಿಡಿಯಂತೆ ಕಾಣುತ್ತದೆ. ಆದರೆ ಆಕಾಶದಲ್ಲಿ ಕಡಾಯಿಯ ತಳಭಾಗವೂ ಇಲ್ಲ. ಮಿಂಚುಹುಳುವಿನಲ್ಲಿ ಅಗ್ನಿಯೂ ಇಲ್ಲ.

ತಸ್ಮಾತ್ಪ್ರತ್ಯಕ್ಷದೃಷ್ಟೋಽಪಿ ಯುಕ್ತೋ ಹ್ಯರ್ಥಃ ಪರೀಕ್ಷಿತುಮ್ ।
ಪರೀಕ್ಷ್ಯ ಜ್ಞಾಪಯನ್ನರ್ಥಾನ್ನ ಪಶ್ಚಾತ್ಪರಿತಪ್ಯತೇ ॥೬೭॥

ಆದುದರಿಂದ ವಸ್ತುವು ಪ್ರತ್ಯಕ್ಷವಾಗಿಯೇ ಕಾಣುವುದಾಗಿದ್ದರೂ ಪರೀಕ್ಷಿಸಿ ನೋಡಬೇಕು. ವಿಷಯವನ್ನು ಚೆನ್ನಾಗಿ ಪರೀಕ್ಷಿಸಿ ತಿಳಿದುಕೊಂಡ ನಂತರ ಕಾರ್ಯಮಾಡುವವನು ಪಶ್ಚಾತ್ತಾಪಪಡುವುದಿಲ್ಲ.

ನ ದುಷ್ಕರಮಿದಂ ಪುತ್ರ ಯತ್ಪ್ರಭುರ್ಘಾತಯೇತ್ಪರಮ್ ।
ಶ್ಲಾಘನೀಯಾ ಯಶಸ್ಯಾ ಚ ಲೋಕೇ ಪ್ರಭವತಾಂ ಕ್ಷಮಾ ॥೬೮॥

ಮಗು! ಶಕ್ತಿಶಾಲಿಯಾದ ರಾಜನು ಇತರರನ್ನು ಸಂಹಾರಮಾಡುವುದು ಅಂತಹ ದುಷ್ಕರವಾದ ಕಾರ್ಯವೇನೂ ಅಲ್ಲ. ಅದರಲ್ಲಿಯೂ ದುರ್ಬಲರಾದವರನ್ನು ಕ್ಷಣಮಾತ್ರದಲ್ಲಿ ಸಂಹರಿಸಿಬಿಡಬಹುದು. ಆದುದರಿಂದ ಪ್ರಭಾವಶಾಲಿಗಳ ಕ್ಷಮೆಯು ಶ್ಲಾಘನೀಯವೂ ಯಶಸ್ಕರವೂ ಆಗುತ್ತದೆ.

ಸ್ಥಾಪಿತೋಽಯಂ ತ್ವಯಾ ಪುತ್ರ ಸಾಮನ್ತೇಷ್ವಪಿ ವಿಶ್ರುತಃ ।
ದುಃಖೇನಾಸಾದ್ಯತೇ ಪಾತ್ರಂ ಧಾರ್ಯತಾಮೇಷ ತೇ ಸುಹೃತ್ ॥೬೯॥

ನೀನು ಈ ನರಿಯನ್ನು ಬುದ್ಧಿಮಂತ್ರಿಯನ್ನಾಗಿ ಮಾಡಿಕೊಂಡಿರುವೆ. ನಿನ್ನ ಸಾಮಂತರಲ್ಲಿಯೂ ಈ ನರಿಯು ಬಹಳ ಖ್ಯಾತಿಯನ್ನು ಗಳಿಸಿದೆ. ಸತ್ಪಾತ್ರನು ಯಾವಾಗಲೂ ಬಹಳ ಕಷ್ಟದಿಂದ ಲಭ್ಯನಾಗತಕ್ಕವನು.

ಸತ್ಪುರುಷರು ಸುಲಭವಾಗಿ ಸಿಕ್ಕುವುದಿಲ್ಲ. ಈ ನರಿಯು ನಿನ್ನ ಹಿತೈಷಿಯಾಗಿದೆ. ಆದುದರಿಂದ ನೀನಿದನ್ನು ರಕ್ಷಿಸು.

ದೂಷಿತಂ ಪರದೋಷೈರ್ಹಿ ಗೃಹ್ಣೀತೇ ಯೋಽನ್ಯಥಾ ಶುಚಿಮ್ ।
ಸ್ವಯಂ ಸಂದೂಷಿತಾಮಾತ್ಯಃ ಕ್ಷಿಪ್ರಮೇವ ವಿನಶ್ಯತಿ ॥೬೦॥

ಇತರರ ಅಸೂಯಾದಿ ಮಿಥ್ಯಾದೋಷಗಳಿಂದ ಆಪಾದಿತನಾಗಿರುವ ಶುದ್ಧಚರಿತನಾದವನೊಬ್ಬನನ್ನು ರಾಜನು ದಂಡಿಸಿದ್ದೇ ಆದರೆ–ದುಷ್ಟಮಂತ್ರಿಗಳಿಂದ ಕೂಡಿದ ಆ ರಾಜನು ಬಹಳ ಬೇಗ ವಿನಾಶವನ್ನು ಹೊಂದುತ್ತಾನೆ.”

ಆ ಸಮಯಕ್ಕೆ ಸರಿಯಾಗಿ ಧಾರ್ಮಿಕವಾದ ಬುದ್ಧಿಯಿಂದ ಕೂಡಿದ್ದ ಪ್ರಾಣಿಯೊಂದು ಗೋಮಾಯುವಿನ ಶತ್ರುಗಳ ಗುಂಪಿನಿಂದ (ವ್ಯಾಘ್ರದ ಪೂರ್ವಮಂತ್ರಿಗಳ ಸಮೂಹದಿಂದ) ಹೊರಬಂದು ಮೋಸವು ಹೇಗೆ ನಡೆಯಿತೆಂಬುದೆಲ್ಲವನ್ನೂ ವಿಶದವಾಗಿ ಹೇಳಿತು. ವ್ಯಾಘ್ರಕ್ಕೆ ನರಿಯ ಸಚ್ಚಾರಿತ್ರ್ಯವು ತಿಳಿಯಿತು. ಒಡನೆಯೇ ವ್ಯಾಘ್ರವು ನರಿಯನ್ನು ಯಥೋಕ್ತವಾಗಿ ಸತ್ಕರಿಸಿ ಅದನ್ನು ಅಪವಾದದಿಂದ ಮುಕ್ತಗೊಳಿಸಿತು. ಮೃಗೇಂದ್ರನು ನರಿಯನ್ನು ಸ್ನೇಹಪೂರ್ವಕವಾಗಿ ಪುನಃ ಪುನಃ ಆಲಿಂಗಿಸಿತು.

ಬಳಿಕ ನೀತಿಶಾಸ್ತ್ರವನ್ನು ತಿಳಿದಿದ್ದ ಗೋಮಾಯುವು ವ್ಯಾಘ್ರರಾಜನ ಅಪ್ಪಣೆಯನ್ನು ಪಡೆದು–ವ್ಯಾಘ್ರವು ತನ್ನ ಮೇಲೆ ಸಂಶಯಪಟ್ಟುದಕ್ಕಾಗಿ ಅಸಹನೆಯಿಂದ ಪರಿತಪಿಸುತ್ತಾ–ಪ್ರಾಯೋಪವೇಶದ ಮೂಲಕ ಪ್ರಾಣ ತೊರೆಯಲು ನಿಶ್ಚಯಿಸಿತು. ವ್ಯಾಘ್ರವು ಧರ್ಮಿಷ್ಠನಾದ ಗೋಮಾಯುವನ್ನು ಆದರ-ಸತ್ಕಾರಗಳಿಂದ ಸಮಾಧಾನಗೊಳಿಸಿ ಅದು ಪ್ರಾಯೋಪವೇಶ ಮಾಡುವುದನ್ನು ತಡೆಹಿಡಿಯಿತು. ಆ ಸಮಯದಲ್ಲಿ ವ್ಯಾಘ್ರದ ಕಣ್ಣುಗಳು ಸ್ನೇಹದಿಂದ ಪ್ರಫುಲ್ಲವಾಗಿದ್ದುವು. ಮೃಗರಾಜನ ಹೃದಯವು ಸ್ನೇಹದಿಂದ ಸಮಾಕುಲವಾಗಿದ್ದುದನ್ನು ಕಂಡು ಗೋಮಾಯುವು ನಮಸ್ಕಾರಮಾಡುತ್ತಾ ಕಂಬನಿಯಿಂದ ಕೂಡಿದ ಗದ್ಗದಧ್ವನಿಯುಕ್ತವಾದ ಮಾತಿನಿಂದ ಹೇಳಿತು :

ಪೂಜಿತೋಽಹಂ ತ್ವಯಾ ಪೂರ್ವಂ ಪಶ್ಚಾಚ್ಚೈವ ವಿಮಾನಿತಃ ।
ಪರೇಷಾಮಾಸ್ಪದಂ ನೀತೋ ವಸ್ತುಂ ನಾರ್ಹಾಮ್ಯಹಂ ತ್ವಯಿ ॥೬೬॥

“ಮಹಾರಾಜ! ನೀನು ಮೊದಲು ನನ್ನನ್ನು ಸಮ್ಮಾನಿಸಿದೆ. ಅನಂತರ ನನ್ನನ್ನು ಅವಮಾನಿಸಿದೆ. ಬೇರೆಯವರ ಮೋಸಕ್ಕೆ ಗುರಿಯಾಗುವ ಅವಕಾಶ ವನ್ನು ಕಲ್ಪಿಸಿದೆ. ಆದುದರಿಂದ ಇನ್ನು ಮುಂದೆ ನಾನು ನಿನ್ನ ಬಳಿಯಲ್ಲಿರಲು ಯೋಗ್ಯನಲ್ಲ.

ಅಸನ್ತುಷ್ಟಾಶ್ಚ್ಯುತಾಃ ಸ್ಥಾನಾನ್ಮಾನಾತ್ಪ್ರತ್ಯವರೋಪಿತಾಃ ।
ಸ್ವಯಂ ಚೋಪಹೃತಾ ಭೃತ್ಯಾ ಯೇ ಚಾಪ್ಯುಪಹಿತಾಃ ಪರೈಃ ॥೭೭॥
ಪರಿಕ್ಷೀಣಾಶ್ಚ ಲುಬ್ಧಾಶ್ಚ ಕ್ರುದ್ಧಾ ಭೀತಾಃ ಪ್ರತಾರಿತಾಃ ।
ಹೃತಸ್ವಾ ಮಾನಿನೋ ಯೇ ಚ ತ್ಯಕ್ತಾದಾನಾ ಮಹೇಪ್ಸವಃ ॥೭೮॥
ಸಂತಾಪಿತಾಶ್ಚ ಯೇ ಕೇಚಿದ್ವ್ಯಸನೌಘಪ್ರತೀಕ್ಷಿಣಃ ।
ಅನ್ತರ್ಹಿತಾಃ ಸೋಪಹಿತಾಸ್ತೇ ಸರ್ವೇ ಪರಸಾಧನಾಃ ॥೭೯॥

ಯಾರು ತಾವಿದ್ದ ಸ್ಥಾನದಿಂದ ಚ್ಯುತರಾಗಿರುವರೋ, ಅಸಂತುಷ್ಟ ರಾಗಿರುವರೋ, ಅಪಮಾನಿತರಾಗಿರುವರೋ, ಮೊದಲು ರಾಜನಿಂದ ಪುರಸ್ಕೃತರಾಗಿದ್ದು ಬೇರೆಯವರು ಮಧ್ಯದಲ್ಲಿ ಪ್ರವೇಶಿಸಿದ ಕಾರಣದಿಂದ ಅಂತಹ ಪುರಸ್ಕಾರದಿಂದ ವಂಚಿತರಾಗಿರುವರೋ, ಯಾರು ತಮ್ಮ ಸ್ಥಾನವನ್ನು ಕಳೆದುಕೊಂಡು ಕ್ಷೀಣರಾಗಿರುವರೋ, ಲೋಭಿಗಳಾಗಿರುವರೋ, ಕ್ರೋಧಾಭಿಭೂತರಾಗಿರುವರೋ, ಭಯಭೀತರಾಗಿರುವರೋ, ವಂಚಿಸಲ್ಪಟ್ಟಿರುವರೋ, ಸರ್ವಸ್ವವನ್ನೂ ಯಾರು ಕಳೆದುಕೊಂಡಿರುವರೋ, ಮಾನಿಷ್ಠರೋ, ಯಾರ ಆದಾಯವು ತಡೆಹಿಡಿಯಲ್ಪಟ್ಟಿದೆಯೋ, ಯಾರು ಮಹತ್ತ್ವಪೂರ್ಣವಾದ ಸ್ಥಾನವನ್ನು ಅಪೇಕ್ಷಿಸುವರೋ, ಸಂತಾಪಗೊಳಿಸಲ್ಪ ಟ್ಟಿರುವರೋ, ರಾಜನಿಗೆ ಕಷ್ಟಗಳು ಬರುವುದನ್ನೇ ಪ್ರತೀಕ್ಷಿಸುತ್ತಿರುವರೋ, ನಿಗೂಢರಾಗಿರುವರೋ, ಕಪಟಭಾವದಿಂದಿರುವರೋ–ಅಂತಹ ಸೇವಕ ರೆಲ್ಲರೂ ಶತ್ರುವಿನ ಕಾರ್ಯವನ್ನು ಮಾಡತಕ್ಕವರೇ ಆಗಿರುತ್ತಾರೆ.

ಅವಮಾನೇನ ಯುಕ್ತಸ್ಯ ಸ್ಥಾನಭ್ರಷ್ಟಸ್ಯ ವಾ ಪುನಃ ।
ಕಥಂ ಯಾಸ್ಯಸಿ ವಿಶ್ವಾಸಮಹಂ ತಿಷ್ಠಾಮಿ ವಾ ಕಥಮ್ ॥೮೦॥

ನಾನು ಒಂದು ಬಾರಿ ಸ್ಥಾನಭ್ರಷ್ಟನಾಗಿದ್ದೇನೆ. ಅವಮಾನಿತನಾಗಿದ್ದೇನೆ. ಅಂತಹ ನನ್ನಲ್ಲಿ ನಿನಗೆ ವಿಶ್ವಾಸವನ್ನು ಇಡಲು ಹೇಗೆ ಸಾಧ್ಯ? ನಾನಾದರೂ ನಿನ್ನ ಬಳಿಯಲ್ಲಿ ಹೇಗೆ ತಾನೇ ಇದ್ದೇನು?

ಸಮರ್ಥ ಇತಿ ಸಂಗೃಹ್ಯ ಸ್ಥಾಪಯಿತ್ವಾ ಪರೀಕ್ಷಿತಃ ।
ಕೃತಂ ಚ ಸಮಯಂ ಭಿತ್ತ್ವಾ ತ್ವಯಾಹಮವಮಾನಿತಃ ॥೮೧॥

ಮಂತ್ರಿಯಾಗಲು ಸಮರ್ಥನೆಂದು ತಿಳಿದುಕೊಂಡು ನನ್ನನ್ನು ಆಹ್ವಾನಿಸಿದೆ. ಮಂತ್ರಿಯ ಸ್ಥಾನವನ್ನು ಕೊಟ್ಟು ಪರೀಕ್ಷಿಸಿದೆ. ಅನಂತರ ನೀನು ನನಗೆ ಮಾಡಿಕೊಟ್ಟಿದ್ದ ಪ್ರತಿಜ್ಞೆಯನ್ನೂ ಮುರಿದು ನನ್ನನ್ನು ಅವಮಾನಿಸಿದೆ.

ಪ್ರಥಮಂ ಯಃ ಸಮಾಖ್ಯಾತಃ ಶೀಲವಾನಿತಿ ಸಂಸದಿ ।
ನ ವಾಚ್ಯಂ ತಸ್ಯ ವೈಗುಣ್ಯಂ ಪ್ರತಿಜ್ಞಾಂ ಪರಿರಕ್ಷತಾ ॥೮೨॥

ಮೊದಲು ತುಂಬಿದ ಮಹಾಸಭೆಯಲ್ಲಿ ಶೀಲವಂತನೆಂದು ನೀನು ಯಾರನ್ನು ಸಭಾಸದರಿಗೆ ಪರಿಚಯಮಾಡಿಕೊಟ್ಟೆಯೋ–ಅಂತಹವನ ವಿಷಯದಲ್ಲಿ ಪ್ರತಿಜ್ಞಾರಕ್ಷಕನಾದ ನೀನು ಇಂತಹ ದೋಷಾರೋಪಣೆಯನ್ನು ಮಾಡಬಾರದಾಗಿತ್ತು.

ಏವಂ ಚಾವಮತಸ್ಯೇಹ ವಿಶ್ವಾಸಂ ಮೇ ನ ಯಾಸ್ಯಸಿ ।
ತ್ವಯಿ ಚಾಪೇತವಿಶ್ವಾಸೇ ಮಮೋದ್ವೇಗೋ ಭವಿಷ್ಯತಿ ॥೮೩॥

ಹೀಗೆ ಇಲ್ಲಿ ಅಪಮಾನಿತನಾಗಿರುವ ನನಗೆ ನಿನ್ನ ವಿಷಯದಲ್ಲಿ ವಿಶ್ವಾಸವು ಹುಟ್ಟುವುದಿಲ್ಲ. ನೀನೂ ನನ್ನಲ್ಲಿ ವಿಶ್ವಾಸವಿಡಲು ಸಾಧ್ಯವಾಗು ವುದಿಲ್ಲ. ಇಂತಹ ಸ್ಥಿತಿಯಲ್ಲಿ ನಾನು ನಿನ್ನ ಬಳಿ ಇದ್ದರೆ ಸರ್ವಕಾಲದಲ್ಲಿಯೂ ನನ್ನ ಮನಸ್ಸು ಉದ್ವೇಜಿತವಾಗಿಯೇ ಇರುತ್ತದೆ.

ಶಙ್ಕಿತಸ್ತ್ವಮಹಂ ಭೀತಃ ಪರಚ್ಛಿದ್ರಾನುದರ್ಶಿನಃ ।
ಅಸ್ನಿಗ್ಧಾಶ್ಚೈವ ದುಸ್ತೋಷಾಃ ಕರ್ಮ ಚೈತದ್ಬಹುಚ್ಛಲಮ್ ॥೮೪॥

ನೀನು ನನ್ನ ವಿಷಯದಲ್ಲಿ ಸಂದೇಹಗೊಂಡಿರುವೆ. ನಾನೂ ನಿನ್ನ ವಿಷಯದಲ್ಲಿ ಭೀತನಾಗಿದ್ದೇನೆ. ಇತರರಲ್ಲಿ ದೋಷವನ್ನೇ ಹುಡುಕುವ ನಿನ್ನ ಸೇವಕರು ಸರ್ವದಾ ಜಾಗರೂಕರಾಗಿಯೇ ಇರುತ್ತಾರೆ. ಅವರಿಗೆ ನನ್ನಲ್ಲಿ ಸ್ನೇಹವಿಲ್ಲ. ಅವರನ್ನು ಸಂತುಷ್ಟಿಗೊಳಿಸುವುದು ನನಗೂ ಕಷ್ಟವೇ ಆಗಿದೆ. ಮಂತ್ರಿಯ ಈ ಕಾರ್ಯವೇ ಅನೇಕಪ್ರಕಾರವಾದ ಕಪಟಗಳಿಂದ ತುಂಬಿದೆ.

ದುಃಖೇನ ಶ್ಲಿಷ್ಯತೇ ಭಿನ್ನಂ ಶ್ಲಿಷ್ಟಂ ದುಃಖೇನ ಭಿದ್ಯತೇ ।
ಭಿನ್ನಾ ಶ್ಲಿಷ್ಟಾ ತು ಯಾ ಪ್ರೀತಿರ್ನ ಸಾ ಸ್ನೇಹೇನ ವರ್ತತೇ ॥೮೫॥

ಒಡೆದುಹೋದ ಸ್ನೇಹವು ಪುನಃ ಸೇರಬೇಕಾದರೂ ಬಹಳ ಕಷ್ಟವೇ ಆಗುತ್ತದೆ. ಸ್ನೇಹಬಂಧನವೂ ಬಹಳ ಕಷ್ಟದಿಂದಲೇ ಒಡೆದುಹೋಗುತ್ತದೆ. ಪರಸ್ಪರಪ್ರೀತಿಯು ಪುನಃ ಪುನಃ ಒಡೆಯುತ್ತಿರುತ್ತಿದ್ದರೆ ಮತ್ತು ಸೇರುತ್ತಿದ್ದರೆ ಅಲ್ಲಿ ಸ್ನೇಹಸಂಬಂಧವಿರುವುದಿಲ್ಲ.

ಕಶ್ಚಿದೇವ ಹಿತೇ ಭರ್ತುರ್ದೃಶ್ಯತೇ ನ ಪರಾತ್ಮನೋಃ ।
ಕಾರ್ಯಾಪೇಕ್ಷಾ ಹಿ ವರ್ತನ್ತೇ ಭಾವಸ್ನಿಗ್ಧಾಃ ಸುದುರ್ಲಭಾಃ ॥೮೬॥

ತನ್ನ ಹಿತವನ್ನಾಗಲೀ–ಪರಹಿತವನ್ನಾಗಲೀ ಪರಿಗಣಿಸದೇ ಸ್ವಾಮಿಯ ಹಿತದಲ್ಲಿಯೇ ನಿಷ್ಠನಾದ ಸೇವಕನು ಎಲ್ಲೋ ಒಬ್ಬಿಬ್ಬನಿರಬಹುದು. ತಮ್ಮ ಕಾರ್ಯವನ್ನು ಪೂರೈಸಿಕೊಳ್ಳುವ ಅಪೇಕ್ಷೆಯುಳ್ಳ ಸೇವಕರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಸ್ವಾಮಿಯ ಕಾರ್ಯಕ್ಕಿಂತಲೂ–ಇತರರ ಕಾರ್ಯಕ್ಕಿಂತಲೂ ಸ್ವಾರ್ಥಸಾಧನೆಯೇ ಅವರಿಗೆ ಮುಖ್ಯವಾದ ಗುರಿಯಾಗಿರುತ್ತದೆ. ಆದರೆ ಶುದ್ಧಭಾವದಿಂದ ಸ್ವಾಮಿಯ ವಿಷಯದಲ್ಲಿ ಸ್ನೇಹವುಳ್ಳವರು ಅತ್ಯಂತ ದುರ್ಲಭರೇ ಸರಿ.

ಸುದುಃಖಂ ಪುರುಷಜ್ಞಾನಂ ಚಿತ್ತಂ ಹ್ಯೇಷಾಂ ಚಲಾಚಲಮ್ ।
ಸಮರ್ಥೋ ವಾಪ್ಯಶಜ್ಕ್ಯೋ ವಾ ಶತೇಷ್ವೇಕೋಽಧಿಗಮ್ಯತೇ ॥೮೭॥

ಯೋಗ್ಯಪುರುಷರನ್ನು ಹುಡುಕುವುದು ರಾಜರಿಗೆ ದುಷ್ಕರವೇ ಸರಿ. ಏಕೆಂದರೆ : ಮನುಷ್ಯರ ಮನಸ್ಸು ಚಂಚಲವೂ ಆಗಿರುತ್ತದೆ. ನಿಶ್ಚಲವೂ ಆಗಿರುತ್ತದೆ. ಸಮರ್ಥನಾಗಿರತಕ್ಕವನೂ ಮತ್ತು ರಾಜನಿಂದ ಸಂದೇಹಿಸಲ್ಪಡದೇ ಇರತಕ್ಕವನೂ ನೂರು ಮಂದಿಯಲ್ಲಿ ಒಬ್ಬನಿರುತ್ತಾನೆ.

ಅಕಸ್ಮಾತ್ಪ್ರಕ್ರಿಯಾ ನೃಣಾಮಕಸ್ಮಾಚ್ಚಾಪಕರ್ಷಣಮ್ ।
ಶುಭಾಶುಭೇ ಮಹತ್ತ್ವಂ ಚ ಪ್ರಕರ್ತುಂ ಬುದ್ಧಿಲಾಘವಮ್ ॥೮೮॥

ಮನುಷ್ಯನಿಗೆ ಉನ್ನತಿ ಮತ್ತು ಅವನತಿಗಳು ಅಕಸ್ಮಾತ್ (ದೈವಿಕ ವಾಗಿ) ಸಂಭವಿಸುತ್ತವೆ. ಯಾರಿಗಾದರೂ ಕೆಡುಕನ್ನು ಮಾಡುವೆನೆಂದು

ಭಾವಿಸುವುದು, ಒಳ್ಳೆಯದನ್ನು ಮಾಡುವೆನೆಂದು ಭಾವಿಸುವುದು, ಮಹತ್ತ್ವದ ಸ್ಥಾನವನ್ನು ಕೊಟ್ಟನಂತರ ಕೆಳಕ್ಕೆ ಇಳಿಸುವೆನೆಂದು ಭಾವಿಸುವುದು–ಈ ಎಲ್ಲವೂ ಅಲ್ಪಬುದ್ಧಿಯ ಲಕ್ಷಣಗಳಾಗಿವೆ."

ಯುಧಿಷ್ಠಿರ! ಹೀಗೆ ಧರ್ಮಾರ್ಥಕಾಮಗಳಿಂದ ಕೂಡಿದ, ಯುಕ್ತಿಯುಕ್ತವಾದ ಮತ್ತು ಸಮಾಧಾನಕರವಾದ ಮಾತನ್ನು ಹೇಳಿ ನರಿಯು ಮೃಗರಾಯನನ್ನು ಸಮಾಧಾನಗೊಳಿಸಿ ಅದರ ಅನುಮತಿಯನ್ನು ಪಡೆದು ಕಾಡಿಗೆ ಹೊರಟುಹೋಯಿತು. ಬುದ್ಧಿಶಾಲಿಯಾದ ಆ ನರಿಯು ಮೃಗೇಂದ್ರನ ಸಮಾಧಾನಕರವಾದ ಮಾತನ್ನು ಅಂಗೀಕರಿಸದೆ ಪ್ರಾಯೋಪವೇಶವ್ರತವನ್ನು ಕೈಗೊಂಡು ದೇಹವನ್ನು ತ್ಯಾಗಮಾಡಿ ಸ್ವರ್ಗಕ್ಕೆ ಹೋಯಿತು."

೧೧೧ನೆಯ ಅಧ್ಯಾಯವು ಮುಗಿಯಿತು.

೧೧೨ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಒಂಟೆಯ ಆಲಸ್ಯದ ಕುಪರಿಣಾಮ : ರಾಜನ ಕರ್ತವ್ಯ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ಪಾರ್ಥಿವೇನ ಕರ್ತವ್ಯಂ ಕಿಂ ಚ ಕೃತ್ವಾಸುಖೀ ಭವೇತ್ ।
ಏತದಾಚಕ್ಷ್ವ ತತ್ತ್ವೇನ ಸರ್ವಧರ್ಮಭೃತಾಂ ವರ ॥೧॥

"ಸಮಸ್ತಧರ್ಮಾತ್ಮರಲ್ಲಿಯೂ ಶ್ರೇಷ್ಠನಾದವನೇ! ರಾಜನ ಕರ್ತವ್ಯವೇನು? ಏನು ಮಾಡುವುದರಿಂದ ರಾಜನು ಸುಖಿಯಾಗಿರುತ್ತಾನೆ?–ಯಥಾವತ್ತಾಗಿ ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ರಾಜನ ಕರ್ತವ್ಯವು ಯಾವುದು? ಯಾವ ಕಾರ್ಯವನ್ನು ಮಾಡುವುದರಿಂದ ರಾಜನು ಸುಖಿಯಾಗಿರುತ್ತಾನೆ? ಅಂತಹ ಕಾರ್ಯವು ಯಾವುದು?–ಎಂಬುದನ್ನು ನಿಶ್ಚಯಮಾಡಿ ನಿನಗೆ ಹೇಳುತ್ತೇನೆ, ಕೇಳು. ನಾವು ಒಂದು ಒಂಟೆಯ ಮಹಾವೃತ್ತಾಂತವನ್ನು ಕೇಳಿದ್ದೇವೆ. ಆ ವೃತ್ತಾಂತವನ್ನೇ ನಿನಗೂ ಹೇಳುತ್ತೇನೆ. ಒಂಟೆಯು ವ್ಯವಹರಿಸಿದಂತೆ ರಾಜನು ವ್ಯವಹರಿಸಬಾರದು.

ಪ್ರಾಜಾಪತ್ಯಯುಗದಲ್ಲಿ (ಕೃತಯುಗದಲ್ಲಿ) ಒಂದು ದೊಡ್ಡ ಒಂಟೆಯಿದ್ದಿತು. ಅದಕ್ಕೆ ಪೂರ್ವಜನ್ಮಸ್ಮರಣೆಯಿದ್ದಿತು. ಆ ಒಂಟೆಯು ಕಠೋರ ವ್ರತದ ನಿಯಮವನ್ನು ಪರಿಪಾಲಿಸುತ್ತಾ ಅರಣ್ಯದಲ್ಲಿ ಮಹಾತಪಸ್ಸನ್ನು ಆರಂಭಿಸಿತು. ತಪಸ್ಸು ಮುಗಿಯುತ್ತಿದ್ದಂತೆಯೇ ಪಿತಾಮಹನಾದ ಭಗವಾನ್ ಬ್ರಹ್ಮನು ಪ್ರಸನ್ನನಾಗಿ ಪ್ರತ್ಯಕ್ಷನಾದನು. ಬ್ರಹ್ಮನು ಒಂಟೆಯನ್ನು ಕುರಿತು ಬೇಕಾದ ವರವನ್ನು ಕೇಳುವಂತೆ ಹೇಳಿದನು. ಒಂಟೆಯು ಈ ವರವನ್ನು ಪ್ರಾರ್ಥಿಸಿತು :

ಭಗವಂಸ್ತ್ವತ್ಪ್ರಸಾದಾನ್ಮೇ ದೀರ್ಘಾ ಗ್ರೀವಾ ಭವೇದಿಯಮ್ ।
ಯೋಜನಾನಾಂ ಶತಂ ಸಾಗ್ರಂ ಗಚ್ಛಾಮಿ ಚರಿತುಂ ವಿಭೋ ॥೬॥

"ಭಗವನ್! ನಿನ್ನ ವರಪ್ರದಾನದಿಂದಾಗಿ ನನ್ನ ಕುತ್ತಿಗೆಯು ಬಹಳ ಉದ್ದವಾಗಲಿ. ಈ ನನ್ನ ಕುತ್ತಿಗೆಯು ಎಷ್ಟು ಉದ್ದವಾಗಿರಬೇಕೆಂದರೆ : ನಾನು ಆಹಾರಾರ್ಥವಾಗಿ ಸಂಚಾರ ಹೊರಟಾಗ ನೂರು ಯೋಜನಗಳಿಗಿಂತಲೂ ಹೆಚ್ಚು ದೂರದಲ್ಲಿರುವ ಆಹಾರವಸ್ತುಗಳನ್ನೂ ಈ ನನ್ನ ಕುತ್ತಿಗೆಯ ಸಹಾಯದಿಂದಲೇ ಗ್ರಹಿಸಲು ನನಗೆ ಸಾಧ್ಯವಾಗಬೇಕು."

ವರದನಾದ, ಮಹಾತ್ಮನಾದ ಬ್ರಹ್ಮನು ಹಾಗೆಯೇ ಆಗಲೆಂದು ಹೇಳಿ ಉಷ್ಟ್ರದ ಕೋರಿಕೆಯನ್ನು ಪೂರ್ಣಗೊಳಿಸಿದನು. ಒಂಟೆಯು ಶ್ರೇಷ್ಠವಾದ ವರವನ್ನು ಪಡೆದುಕೊಂಡು ತಾನು ವಾಸಿಸುತ್ತಿದ್ದ ಅರಣ್ಯಕ್ಕೆ ಹೊರಟು ಹೋಯಿತು. ವರದಾನದ ಪ್ರಭಾವದಿಂದಾಗಿ ನೂರು ಯೋಜನಗಳಿಗಿಂತಲೂ ಉದ್ದವಾದ ಕುತ್ತಿಗೆಯನ್ನು ಹೊಂದಿದ್ದ ವಿವೇಕವಿಲ್ಲದ ಆ ಒಂಟೆಯು ಆಲಸ್ಯವನ್ನು ಹೊಂದಿ ಕಾಲಮೋಹಿತವಾಗಿ ತಿರುಗಾಡಲು ಎಲ್ಲಿಗಾದರೂ ಹೋಗಲೂ ಇಚ್ಛೆಪಡಲಿಲ್ಲ. ಒಮ್ಮೆ ಆ ಒಂಟೆಯು ನೂರು ಯೋಜನದಷ್ಟು ಉದ್ದವಾಗಿದ್ದ ತನ್ನ ಕುತ್ತಿಗೆಯನ್ನು ಚಾಚಿಕೊಂಡು ಸ್ವಲ್ಪವೂ ಆಯಾಸವೇ ಇಲ್ಲದೆ ಸಂಚರಿಸುತ್ತಿದ್ದಿತು. ಆ ಸಮಯಕ್ಕೆ ಸರಿಯಾಗಿ ದೊಡ್ಡ ಬಿರುಗಾಳಿಯು ಬೀಸತೊಡಗಿತು. ಒಡನೆಯೇ ಒಂಟೆಯು ತನ್ನ ಶಿರಸ್ಸನ್ನೂ ಮತ್ತು ಕುತ್ತಿಗೆಯನ್ನೂ ಗುಹೆಯೊಂದರಲ್ಲಿಟ್ಟು ನಿಂತುಕೊಂಡಿತು. ಬಿರುಗಾಳಿಯ ಜೊತೆಯಲ್ಲಿಯೇ ಜಗತ್ತನ್ನೇ ಮುಳುಗಿಸುವಂತಹ ದೊಡ್ಡ

ಮಳೆಯೂ ಬಂದಿತು. ಆ ಸಮಯಕ್ಕೆ ಸರಿಯಾಗಿ ಹಸಿವಿನಿಂದಲೂ–ಆಯಾಸದಿಂದಲೂ ಬಳಲಿದ್ದ ಮಳೆಯಲ್ಲಿ ಸಂಪೂರ್ಣವಾಗಿ ನೆನೆದಿದ್ದ, ಚಳಿಯಿಂದ ನಡುಗುತ್ತಿದ್ದ ಒಂದು ಗಂಡು ನರಿಯು ಹೆಣ್ಣು ನರಿಯೊಡನೆ ಆ ಗುಹೆಯನ್ನು ವೇಗವಾಗಿ ಪ್ರವೇಶಿಸಿತು. ಹಸಿವಿನಿಂದಲೂ, ಆಯಾಸ ದಿಂದಲೂ ಬಳಲಿದ್ದ ಮಾಂಸಜೀವಿಯಾದ ಜಂಬುಕವು ಗುಹೆಯಲ್ಲಿದ್ದ ಒಂಟೆಯ ಕುತ್ತಿಗೆಯನ್ನು ನೋಡಿ ಒಡನೆಯೇ ಅದನ್ನು ಕಚ್ಚಿ ತಿನ್ನಲು ಪ್ರಾರಂಭಿಸಿತು. ತನ್ನ ಕುತ್ತಿಗೆಯನ್ನು ಯಾರೋ ಭಕ್ಷಿಸುತ್ತಿದ್ದಾರೆಂಬ ವಿಷಯವು ಒಂಟೆಗೆ ತಿಳಿದೊಡನೆಯೇ ಬಹಳ ದುಃಖಗೊಂಡು ಕುತ್ತಿಗೆಯನ್ನು ಸಂಕೋಚಿಸಿಕೊಳ್ಳಲು ಪ್ರಯತ್ನಿಸಿತು. ಒಂಟೆಯು ಕುತ್ತಿಗೆಯನ್ನು ಮೇಲಕ್ಕೂ ಕೆಳಕ್ಕೂ ಮಾಡುತ್ತಾ ಸೆಳೆದುಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಿತು. ಅಷ್ಟರೊಳಗಾಗಿ ಜಂಬುಕವು ತನ್ನ ಪತ್ನಿಯೊಡನೆ ಒಂಟೆಯ ಕುತ್ತಿಗೆಯನ್ನು ಸಂಪೂರ್ಣವಾಗಿ ತಿಂದೇ ಹಾಕಿತು. ಹೀಗೆ ನರಿಯು ಒಂಟೆಯನ್ನು ಸಂಹರಿಸಿ–ಭಕ್ಷಿಸಿ, ಗಾಳಿ-ಮಳೆಗಳು ನಿಂತ ನಂತರ ಗುಹೆಯ ದ್ವಾರದಿಂದ ಹೊರಹೊರಟಿತು.

ಯುಧಿಷ್ಠಿರ! ದುರ್ಬುದ್ಧಿಯಿಂದ ಕೂಡಿದ್ದ ಒಂಟೆಯು ಹೀಗೆ ಸತ್ತುಹೋಯಿತು. ಆಲಸ್ಯಪಟ್ಟುದರಿಂದ ಮಹಾದೋಷವುಂಟಾಯಿತೆಂಬು ದನ್ನು ನೀನು ಈ ಒಂಟೆಯ ದೃಷ್ಟಾಂತದಿಂದ ಕಾಣಬಹುದಾಗಿದೆ. ನೀನೂ ಕೂಡ ಆಲಸ್ಯವನ್ನು ತ್ಯಜಿಸಿ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ವ್ಯವಹರಿಸುವುದು ಯುಕ್ತವಾಗಿದೆ. ವಿಜಯಕ್ಕೆ ಮೂಲವು ಬುದ್ಧಿಯೆಂದೇ ಮನುವು ಹೇಳಿದ್ದಾನೆ.

ಬುದ್ಧಿಶ್ರೇಷ್ಠಾನಿ ಕರ್ಮಾಣಿ ಬಾಹುಮಧ್ಯಾನಿ ಭಾರತ ।
ತಾನಿ ಜಙ್ಘಾಜಘನ್ಯಾನಿ ಭಾರಪ್ರತ್ಯವರಾಣಿ ಚ ॥೧೮॥

ಬುದ್ಧಿಯಿಂದ ಕಾರ್ಯವನ್ನು ಸಾಧಿಸುವುದು ಶ್ರೇಷ್ಠವಾದುದು. ಬಾಹುಬಲದಿಂದ ಕಾರ್ಯವನ್ನು ಸಾಧಿಸುವುದು ಮಧ್ಯಮಶ್ರೇಣಿಯದು. ಜಂಘಾಬಲದಿಂದ ಸಾಧಿಸುವ ಕಾರ್ಯವು ಅಧಮಶ್ರೇಣಿಯದು. ತಲೆಯ

ಮೇಲೆ ಹೊರೆಯನ್ನು ಹೊತ್ತುಕೊಂಡು ಕಾರ್ಯವನ್ನು ಸಾಧಿಸುವುದು ಅಧಮಾಧಮಶ್ರೇಣಿಯದು.

ರಾಜ್ಯಂ ತಿಷ್ಠತಿ ದಕ್ಷಸ್ಯ ಸಂಗೃಹೀತೇನ್ದ್ರಿಯಸ್ಯ ಚ ।
ಆರ್ತಸ್ಯ ಬುದ್ಧಿಮೂಲಂ ಹಿ ವಿಜಯಂ ಮನುರಬ್ರವೀತ್ ॥೧೯॥

ಯಾವನು ಜಿತೇಂದ್ರಿಯನಾಗಿರುವನೋ ಮತ್ತು ಕಾರ್ಯದಕ್ಷನಾಗಿರುವನೋ–ಅವನ ರಾಜ್ಯವೇ ಸ್ಥಿರವಾಗಿ ಉಳಿಯುತ್ತದೆ. ಸಂಕಟದಲ್ಲಿರುವ ರಾಜನ ವಿಜಯವು ಬುದ್ಧಿಮೂಲವಾಗಿರುವುದೆಂದು ಮನುವು ಹೇಳಿದ್ದಾನೆ.

ಗುಹ್ಯಂ ಮನ್ತ್ರಂ ಶ್ರುತವತಃ ಸುಸಹಾಯಸ್ಯ ಚಾನಘ ।
ಪರೀಕ್ಷ್ಯಕಾರಿಣೋ ಹ್ಯರ್ಥಾಸ್ತಿಷ್ಠನ್ತೀಹ ಯುಧಿಷ್ಠಿರ ।
ಸಹಾಯಯುಕ್ತೇನ ಮಹೀ ಕೃತ್ಸ್ನಾ ಶಕ್ಯಾ ಪ್ರಶಾಸಿತುಮ್ ॥೨೦॥

ಅನಘನೇ! ಯಾವನು ಗುಪ್ತವಾದ ಸಲಹೆಗಳನ್ನು ಕೇಳುವನೋ, ಯಾವನಿಗೆ ಒಳ್ಳೆಯ ಸಹಾಯಕರಿರುವರೋ, ಯಾವನು ಕಾರ್ಯಗಳನ್ನು ಚೆನ್ನಾಗಿ ಪರೀಕ್ಷೆಮಾಡಿ ಮಾಡುವನೋ–ಅವನ ಬಳಿಯಲ್ಲಿ ಅರ್ಥಗಳು ಸ್ಥಿರವಾಗಿ ಉಳಿಯುತ್ತವೆ. ಸಹಾಯಕರಿಂದ ಸಂಪನ್ನನಾಗಿರುವ ರಾಜನು ಅಖಂಡಭೂಮಂಡಲವನ್ನೂ ಶಾಸನಮಾಡಲು ಸಮರ್ಥನಾಗುತ್ತಾನೆ.

ಮಹೇಂದ್ರನ ಪ್ರಭಾವಕ್ಕೆ ಸಮಾನವಾದ ಪ್ರಭಾವವಿರುವವನೇ! ಧರ್ಮರಾಜ! ಪೂರ್ವಕಾಲದಲ್ಲಿ ರಾಜ್ಯಭಾರದ ವಿಧಿಯನ್ನು ತಿಳಿದಿದ್ದ ಸತ್ಪುರುಷರು ಈ ವಿಷಯವನ್ನು ಹೇಳಿದ್ದರು. ನಾನೂ ಕೂಡ ಶಾಸ್ತ್ರಾನುಸಾರವಾಗಿ ನಿನಗೆ ಈ ವಿಷಯಗಳನ್ನು ಹೇಳಿರುತ್ತೇನೆ. ನಾನು ಹೇಳಿರುವುದನ್ನು ನೀನು ಚೆನ್ನಾಗಿ ಮನನಮಾಡಿ ಅದರಂತೆ ವ್ಯವಹರಿಸು.”

೧೧೨ನೆಯ ಅಧ್ಯಾಯವು ಮುಗಿಯಿತು.

ಪ್ರಬಲಶತ್ರುವಿನ ಮುಂದೆ ಬೆತ್ತದಂತೆ ಸಮಯಗಳಲ್ಲಿ ವಿನೀತನಾಗಿರಲು ಗಂಗಾ-ಸಮುದ್ರಗಳ ಸಂವಾದಕಥನ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ರಾಜಾ ರಾಜ್ಯಮನುಪ್ರಾಪ್ಯ ದುರ್ಲಭಂ ಭರತರ್ಷಭ ।
ಅಮಿತ್ರಸ್ಯಾತಿವೃದ್ಧಸ್ಯ ಕಥಂ ತಿಷ್ಠೇದಸಾಧನಃ ॥೧॥

"ಭರತಶ್ರೇಷ್ಠನೇ! ರಾಜನು ದುರ್ಬಲವಾದ ಒಂದು ರಾಜ್ಯವನ್ನು ಪಡೆದುಕೊಂಡಿದ್ದರೂ ಸೈನ್ಯ, ಕೋಶ–ಇವೇ ಮುಂತಾದ ಸಾಧನಸಂಪತ್ತಿಗಳಿಂದ ವಿಹೀನನಾಗಿದ್ದರೆ–ಎಲ್ಲ ದೃಷ್ಟಿಗಳಿಂದಲೂ ಅತ್ಯಂತಬಲಿಷ್ಠನಾದ ಶತ್ರುವಿನ ಮುಂದೆ ಹೇಗೆ ನಿಲ್ಲಬೇಕು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಸಮುದ್ರಕ್ಕೂ–ನದಿಗಳಿಗೂ ನಡೆದ ಇತಿಹಾಸರೂಪವಾದ ಪುರಾತನವಾದ ಸಂಭಾಷಣೆಯನ್ನು ಉದಾಹರಿಸುತ್ತಾರೆ.


ಒಮ್ಮೆ ದೈತ್ಯರಿಗೆ ಆಶ್ರಯಸ್ಥಾನನಾದ, ನದಿಗಳಿಗೆ ಒಡೆಯನಾದ ಸಮುದ್ರನು ತನ್ನ ಮನಸ್ಸಿನಲ್ಲಿ ಹುಟ್ಟಿದ ಒಂದು ಸಂದೇಹವನ್ನು ಪರಿಹರಿಸಿಕೊಳ್ಳಲು ನದಿಗಳನ್ನು ಪ್ರಶ್ನಿಸಿದನು :

ಸಮೂಲಶಾಖಾನ್ಪಶ್ಯಾಮಿ ನಿಹತಾನ್ಕಾಯಿನೋ ದ್ರುಮಾನ್ ।
ಯುಷ್ಮಾಭಿರಿಹ ಪೂರ್ಣಾಭಿರ್ನದ್ಯಸ್ತತ್ರ ನ ವೇತಸಮ್ ॥೪॥

"ನದಿಗಳೇ! ನೀವು ತುಂಬಿ ಹರಿಯುವಾಗ ದೊಡ್ಡ-ದೊಡ್ಡ ಗಾತ್ರಗಳುಳ್ಳ ವೃಕ್ಷಗಳನ್ನೇ ಬೇರು-ಕೊಂಬೆಗಳ ಸಮೇತವಾಗಿ ಕಿತ್ತು ಪ್ರವಾಹದಲ್ಲಿ ಕೊಚ್ಚಿಸಿಕೊಂಡು ಬರುವುದನ್ನು ನಾನು ನೋಡುತ್ತಿದ್ದೇನೆ. ಆದರೆ ನಿಮ್ಮ ದಡಗಳಲ್ಲಿ ಬೆತ್ತದ ಗಿಡಗಳು ಹೇರಳವಾಗಿದ್ದರೂ ಅವುಗಳನ್ನು ನೀವು ನಿಮ್ಮ ಪ್ರವಾಹದಲ್ಲಿ ಕೊಚ್ಚಿಕೊಂಡು ಬರುತ್ತಿಲ್ಲ.

ಅಕಾಯಶ್ಚಾಲ್ಪಸಾರಶ್ಚ ವೇತಸಃ ಕೂಲಜಶ್ಚ ವಃ ।
ಅವಜ್ಞಯಾ ವಾ ನಾನೀತಃ ಕಿಂ ಚ ವಾ ತೇನ ವಃ ಕೃತಮ್ ॥೫॥

ಬೆತ್ತದ ಗಿಡಗಳಿಗೆ ಗಾತ್ರವೆಂಬುದೇ ಇಲ್ಲ. ಅವುಗಳಿಗೆ ಪ್ರವಾಹದ ರಭಸವನ್ನು ತಡೆದುಕೊಳ್ಳುವಷ್ಟು ಶಕ್ತಿಯೂ ಇರುವುದಿಲ್ಲ. ನಿಮ್ಮ ದಡ ದಲ್ಲಿಯೇ ಅವು ಬೆಳೆದು ವೃದ್ಧಿಹೊಂದುತ್ತವೆ. ಅಂತಹ ಬೆತ್ತದ ಗಿಡಗಳನ್ನು ತಿರಸ್ಕಾರದಿಂದ ಕೊಚ್ಚಿಸಿಕೊಂಡು ಬರುತ್ತಿಲ್ಲವೋ ಅಥವಾ ಅವು ನಿಮಗೇ



ನಾದರೂ ಉಪಕಾರವನ್ನೆಸಗಿರುವುವೋ? ಬೆತ್ತದ ಗಿಡಗಳು ನಿಮ್ಮ ದಡಗಳನ್ನು ಬಿಟ್ಟು ಪ್ರವಾಹದಲ್ಲಿ ಏಕೆ ಬರುವುದಿಲ್ಲ? ನಿಮ್ಮೆಲ್ಲರಿಂದಲೂ ನಾನು ಈ ವಿಷಯವನ್ನು ಕೇಳಿ ತಿಳಿಯಬೇಕೆಂದಿರುತ್ತೇನೆ."

ಸಮುದ್ರನು ಹೀಗೆ ಪ್ರಶ್ನಿಸಿದನಂತರ ಗಂಗಾನದಿಯು ಉತ್ತಮವಾದ,

ಅರ್ಥವತ್ತಾದ, ಯುಕ್ತಿಯುಕ್ತವಾದ ಮತ್ತು ಗ್ರಾಹ್ಯವಾದ ಈ ಮಾತನ್ನು ಸಮುದ್ರನಿಗೆ ಹೇಳಿತು :

ತಿಷ್ಠನ್ತ್ಯೇತೇ ಯಥಾಸ್ಥಾನಂ ನಗಾ ಹ್ಯೇಕನಿಕೇತನಾಃ ।
ತೇ ತ್ಯಜನ್ತಿ ತತಃ ಸ್ಥಾನಂ ಪ್ರಾತಿಲೋಮ್ಯಾನ್ನ ವೇತಸಃ ॥೮॥

"ನದೀಶ್ವರನೇ! ವೃಕ್ಷಗಳು ತಮ್ಮ-ತಮ್ಮ ಸ್ಥಾನಗಳಲ್ಲಿಯೇ ಬಲವಾಗಿ ನಿಂತಿರುತ್ತವೆ. ನಮ್ಮ ಪ್ರವಾಹಕ್ಕೆ ಅವು ತಲೆತಗ್ಗಿಸುವುದಿಲ್ಲ. ಪ್ರವಾಹ ಸಮಯದಲ್ಲಿಯೂ ದಿಟ್ಟನೆ ನಿಂತಿರುತ್ತವೆ. ನಮಗೆ ಪ್ರತಿಕೂಲವಾಗಿ ವೃಕ್ಷಗಳು ವ್ಯವಹರಿಸುವುದರಿಂದ ಅವುಗಳು ತಮ್ಮ ಸ್ಥಾನದಿಂದ ಚ್ಯುತವಾಗಿ ಪ್ರವಾಹದೊಡನೆ ಬರಲೇಬೇಕಾಗುತ್ತದೆ. ಆದರೆ ಬೆತ್ತದ ಗಿಡಗಳು ಹಾಗಲ್ಲ.

ವೇತಸೋ ವೇಗಮಾಯಾತಂ ದೃಷ್ಟ್ವಾ ನಮತಿ ನಾಪರೇ ।
ಸರಿದ್ವೇಗೇವ್ಯತಿಕ್ರಾನ್ತೇ ಸ್ಥಾನಮಾಸಾದ್ಯ ತಿಷ್ಠತಿ ॥೯॥

ಬೆತ್ತದ ಗಿಡಗಳಾದರೋ ನದಿಯ ಪ್ರವಾಹವು ಬರುತ್ತಿರುವುದನ್ನು ಕಂಡೊಡನೆಯೇ ಬಾಗಿಕೊಂಡುಬಿಡುತ್ತವೆ. ನಮ್ಮ ಪ್ರವಾಹಕ್ಕೆ ಎದುರಾಗಿ ನಿಲ್ಲುವ ಸಾಹಸವನ್ನು ಮಾಡುವುದಿಲ್ಲ. ಆದರೆ ವೃಕ್ಷಗಳು ಹಾಗೆ ಮಾಡುವುದಿಲ್ಲ. ದಿಟ್ಟನೆ ನಿಂತೇ ಇರುತ್ತವೆ. ಬೆತ್ತದ ಗಿಡಗಳು ನದಿಯ ಪ್ರವಾಹವು ಇಳಿದು ಹೋಗಲಾಗಿ ಪುನಃ ತಮ್ಮ ಸ್ಥಾನವನ್ನು ಆಕ್ರಮಿಸಿ ನಿಲ್ಲುತ್ತವೆ.

ಕಾಲಜ್ಞಃ ಸಮಯಜ್ಞಶ್ಚ ಸದಾ ವಶ್ಯಶ್ಚ ನೋದ್ಧತಃ ।
ಅನುಲೋಮಸ್ತಥಾಸ್ತಬ್ಧಸ್ತೇನ ನಾಭ್ಯೇತಿ ವೇತಸಃ ॥೧೦॥

ಬೆತ್ತದ ಗಿಡವು ಕಾಲವನ್ನೂ ಸಮಯವನ್ನೂ ತಿಳಿದಿರುತ್ತದೆ. ಸಮಯಾನುಸಾರವಾಗಿ ಕಾರ್ಯಮಾಡುವುದನ್ನು ತಿಳಿದುಕೊಂಡಿದೆ. ಮೇಲಾಗಿ ಅದು ನಮ್ಮ ವಶವರ್ತಿಯಾಗಿದೆ. ಅದಕ್ಕೆ ಔದ್ಧತ್ಯವಿಲ್ಲ. ನಾವು ಪ್ರವಹಿಸುವ ಕಡೆಗೇ ಅದೂ ಬಗ್ಗಿಕೊಂಡಿರುತ್ತದೆ. ನಮ್ಮ ಪ್ರವಾಹಕ್ಕೆ ಎದುರಾಗಿ ಅದು ನಿಲ್ಲುವುದಿಲ್ಲ. ಈ ಕಾರಣಗಳಿಂದ ಅಹಂಕಾರವಿಲ್ಲದ ಅದು ನಮ್ಮೊಡನೆ ಬರುವುದಿಲ್ಲ.

ಮಾರುತೋದಕವೇಗೇನ ಯೇ ನಮನ್ತ್ಯುನ್ನಮನ್ತಿ ಚ ।
ಓಷಧ್ಯಃ ಪಾದಪಾ ಗುಲ್ಮಾ ನ ತೇ ಯಾನ್ತಿ ಪರಾಭವಮ್ ॥೧೧॥

ಯಾವ ಪೈರು-ಪಚ್ಚೆಗಳೂ, ಚಿಕ್ಕ-ಚಿಕ್ಕ ಮರಗಳೂ, ಪೊದರುಗಳೂ ಗಾಳಿಯ ಮತ್ತು ನೀರಿನ ವೇಗವು ಬಂದಾಗ ಬಾಗುತ್ತವೆಯೋ–ವೇಗವು ಕಡಿಮೆಯಾದೊಡನೆಯೇ ಎದ್ದು ನಿಲ್ಲುತ್ತವೆಯೋ–ಅಂತಹ ಓಷಧಿವೃಕ್ಷ ಗುಲ್ಮಗಳು ಯಾವಾಗಲೂ ಪರಾಭವವನ್ನು (ವಿನಾಶವನ್ನು) ಹೊಂದುವುದಿಲ್ಲ.”

ಭೀಷ್ಮನು ಹೇಳುತ್ತಾನೆ :

ಯೋ ಹಿ ಶತ್ರೋರ್ವಿವೃದ್ಧಸ್ಯ ಪ್ರಭೋರ್ಬನ್ಧವಿನಾಶನೇ ।
ಪೂರ್ವಂ ನ ಸಹತೇ ವೇಗಂ ಕ್ಷಿಪ್ರಮೇವ ವಿನಶ್ಯತಿ ॥೧೨॥

“ಯುಧಿಷ್ಠಿರ! ಇದೇ ಪ್ರಕಾರವಾಗಿ ಯಾವ ರಾಜನು–ಬಲದಲ್ಲಿ ಅಧಿಕನಾದ, ಬಂಧಿಸುವುದರಲ್ಲಿಯೂ–ವಿನಾಶಗೊಳಿಸುವುದರಲ್ಲಿಯೂ ಸಮರ್ಥನಾದ ಶತ್ರುವಿನ ವೇಗವನ್ನು ಮೊದಲು ನತಶಿರನಾಗಿ ಸಹಿಸಿಕೊಳ್ಳುವುದಿಲ್ಲವೋ–ಅಂತಹ ರಾಜನು ಬಹಳ ಬೇಗ ವಿನಾಶಹೊಂದುತ್ತಾನೆ.

ಸಾರಾಸಾರಂ ಬಲಂ ವೀರ್ಯಮಾತ್ಮನೋ ದ್ವಿಷತಶ್ಚ ಯಃ ।
ಜಾನನ್ವಿಚರತಿ ಪ್ರಾಜ್ಞೋ ನ ಸ ಯಾತಿ ಪರಾಭವಮ್ ॥೧೩॥

ಬುದ್ಧಿವಂತನಾದ ಯಾವ ರಾಜನು ತನ್ನ ಮತ್ತು ಶತ್ರುವಿನ ಸಾರಾಸಾರಗಳನ್ನೂ, ಬಲ-ಪರಾಕ್ರಮಗಳನ್ನೂ ತಿಳಿದುಕೊಂಡು ಅದಕ್ಕೆ ಅನುಸಾರವಾಗಿ ವ್ಯವಹಾರಗಳನ್ನು ನಡೆಸುತ್ತಾನೆಯೋ–ಅಂತಹ ರಾಜನು ಎಂದಿಗೂ ಪರಾಭವವನ್ನು ಹೊಂದುವುದಿಲ್ಲ.

ಏವಮೇವ ಯದಾ ವಿದ್ವಾನ್ಮನ್ಯತೇಽತಿಬಲಂ ರಿಪುಮ್ ।
ಸಂಶ್ರಯೇದ್ವೈತಸೀಂ ವೃತ್ತಿಮೇತತ್ಪ್ರಜ್ಞಾನಲಕ್ಷಣಮ್ ॥೧೪॥

ಇದೇ ರೀತಿಯಲ್ಲಿ ವಿದ್ವಾಂಸನಾದ ರಾಜನು ಯಾವಾಗ ಶತ್ರುವು ತನಗಿಂತಲೂ ಅಧಿಕಬಲನೆಂದು ಭಾವಿಸುವನೋ–ಆಗ ವೈತಸೀವೃತ್ತಿಯನ್ನು ಆಶ್ರಯಿಸಬೇಕು. (ಶತ್ರುವಿನ ಮುಂದೆ ತಲೆತಗ್ಗಿಸಿಯೇ ಇರಬೇಕು.) ಇದು ಬುದ್ಧಿಶಾಲಿಯ ಲಕ್ಷಣವಾಗಿದೆ.”

೧೧೩ನೆಯ ಅಧ್ಯಾಯವು ಮುಗಿಯಿತು.

ದುಷ್ಟಜನರ ನಿಂದೆಯನ್ನು ಸಹಿಸಿಕೊಳ್ಳುವುದರಿಂದ ಆಗುವ ಲಾಭ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ವಿದ್ವಾನ್ಮೂರ್ಖಪ್ರಗಲ್ಭೇನ ಮೃದುತೀಕ್ಷ್ಣೇನ ಭಾರತ ।
ಆಕ್ರುಶ್ಯಮಾನಃ ಸದಸಿ ಕಥಂ ಕುರ್ಯಾದರಿಂದಮ ॥೧॥

"ಅರಿಂದಮನೇ! ಉದ್ಧಟನಾದ ಮೂರ್ಖನು–ತುಂಬಿದ ಸಭೆಯಲ್ಲಿ ವಿದ್ವಾಂಸನೊಬ್ಬನನ್ನು ಮೃದುವಾಗಿಯೋ ತೀಕ್ಷ್ಣವಾಗಿಯೋ ನಿಂದಿಸ ತೊಡಗಿದರೆ–ಅಂತಹ ಮೂರ್ಖನೊಡನೆ ವಿದ್ವಾಂಸನು ಹೇಗೆ ವ್ಯವಹರಿಸಬೇಕು?"

ಭೀಷ್ಮನು ಹೇಳುತ್ತಾನೆ :

"ಭೂಪಾಲನೇ! ಈ ವಿಷಯದಲ್ಲಿ ಹಿರಿಯರು ಹೇಳಿರುವ ಮಾತುಗಳನ್ನು ಹೇಳುವೆನು ; ಕೇಳು.

ಸದಾ ಸುಚೇತಾಃ ಸಹತೇ ನರಸ್ಯೇಹಾಲ್ಪಮೇಧಸಃ ॥೨॥

ವಿಶುದ್ಧಚಿತ್ತನಾದವನು ಈ ಜಗತ್ತಿನಲ್ಲಿ ಯಾವಾಗಲೂ ಮೂರ್ಖ ಮನುಷ್ಯನು ಮಾಡುವ ನಿಂದೆಯನ್ನು ಸಹಿಸಿಕೊಳ್ಳುತ್ತಾನೆ.

ಅರುಷ್ಯನ್ಕ್ರುಶ್ಯಮಾನಸ್ಯ ಸುಕೃತಂ ನಾಮ ವಿನ್ದತಿ ।
ದುಷ್ಕೃತಂ ಚಾತ್ಮನೋ ಮರ್ಷೀ ರುಷ್ಯತ್ಯೇವಾಪಮಾರ್ಷ್ಟಿ ವೈ ॥೩॥

ನಿಂದೆಮಾಡುವ ಮನುಷ್ಯನ ಮೇಲೆ ಯಾವನು ಕೋಪಿಸಿಕೊಳ್ಳುವುದಿಲ್ಲವೋ–ಅವನು ನಿಂದೆಮಾಡುವವನಲ್ಲಿರುವ ಸುಕೃತವನ್ನು ಹೊಂದುತ್ತಾನೆ. ಸಹನಶೀಲನಾದ ಮನುಷ್ಯನು ತನ್ನಲ್ಲಿರುವ ಪಾಪಗಳೆಲ್ಲವನ್ನೂ ಕೋಪಗೊಂಡು ನಿಂದಿಸುವ ಮೂರ್ಖನ ಮೇಲೆ ಹಾಕುತ್ತಾನೆ.

ಟಿಟ್ಟಿಭಂ ತಮುಪೇಕ್ಷೇತ ವಾಶಮಾನಮಿವಾತುರಮ್ ।
ಲೋಕವಿದ್ವೇಷಮಾಪನ್ನೋ ನಿಷ್ಫಲಂ ಪ್ರತಿಪದ್ಯತೇ ॥೪॥

ಅರ್ಥಹೀನವಾಗಿ ಕಿರುಚಾಡುವ ಟಿಟ್ಟಿಭಪಕ್ಷಿಯಂತೆ–ಅಥವಾ ರೋಗಿಯಂತೆ ಮನಬಂದಂತೆ ಯದ್ವಾ-ತದ್ವಾ ಮಾತನಾಡುವ ಮೂರ್ಖನನ್ನು

ಉಪೇಕ್ಷೆಮಾಡಬೇಕು. ಹೀಗೆ ಮಾಡುವುದರಿಂದ ಮೂರ್ಖನು ಎಲ್ಲ ಜನರ ದ್ವೇಷಕ್ಕೂ ಪಾತ್ರನಾಗುತ್ತಾನೆ. ಅವನ ಎಲ್ಲ ಸತ್ಕರ್ಮಗಳೂ ನಿಷ್ಫಲವಾಗುತ್ತವೆ.

ಇತಿ ಸಂಶ್ಲಾಘತೇ ನಿತ್ಯಂ ತೇನ ಪಾಪೇನ ಕರ್ಮಣಾ ।
ಇದಮುಕ್ತೋ ಮಯಾ ಕಶ್ಚಿತ್ಸಮ್ಮತೋ ಜನಸಂಸದಿ ॥೫॥

ಸ ತತ್ರ ವ್ರೀಡಿತಃ ಶುಷ್ಕೋ ಮೃತಕಲ್ಪೋಽವತಿಷ್ಠತೇ ।
ಶ್ಲಾಘನ್ನಶ್ಲಾಘನೀಯೇನ ಕರ್ಮಣಾ ನಿರಪತ್ರಪಃ ॥೬॥

ಮೂರ್ಖನಾದವನು ಪರನಿಂದಾರೂಪವಾದ ಪಾಪವನ್ನು ಮಾಡಿಯೂ ತನ್ನನ್ನು ತಾನೇ ಹೊಗಳಿಕೊಳ್ಳುತ್ತಿರುತ್ತಾನೆ : "ತುಂಬಿದ ಸಭೆಯಲ್ಲಿ ಸರ್ವಸಮ್ಮಾನ್ಯನಾಗಿದ್ದ ಆ ಮನುಷ್ಯನನ್ನು ಕುರಿತು ಹೀಗೆ ಹೇಳಿಬಿಟ್ಟೆನು. ನನ್ನ ಮಾತನ್ನು ಕೇಳಿದೊಡನೆಯೇ ಆ ಮನುಷ್ಯನು ನಾಚಿಕೆಗೊಂಡನು. ಮುಖವು ವಿವರ್ಣವಾಯಿತು. ಸತ್ತುಹೋದವನಂತೆ ನಿಶ್ಚೇಷ್ಟನಾಗಿ ಸುಮ್ಮನೇ ಕುಳಿತಿದ್ದನು."–ಹೀಗವನು ನಿಂದನೀಯವಾದ ಕಾರ್ಯವನ್ನು ಮಾಡಿಯೂ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುತ್ತಾನೆ. ಅವನಿಗೆ ಇಂತಹ ಅಶ್ಲಾಘ್ಯವಾದ ಕಾರ್ಯಗಳನ್ನು ಮಾಡುವುದರಿಂದ ಸ್ವಲ್ಪವಾದರೂ ನಾಚಿಕೆಯಾಗುವುದಿಲ್ಲ.

ಉಪೇಕ್ಷಿತವ್ಯೋ ಯತ್ನೇನ ತಾದೃಶಃ ಪುರುಷಾಧಮಃ ।
ಯದ್ಯದ್ಬ್ರೂಯಾದಲ್ಪಮತಿಸ್ತತ್ತದಸ್ಯ ಸಹೇದ್ಬುಧಃ ॥೭॥

ವಿದ್ವಾಂಸನಾದವನು ಅಂತಹ ಪುರುಷಾಧಮನು ಹೇಳುವುದನ್ನು ಪ್ರಯತ್ನಪೂರ್ವಕವಾಗಿ ಉಪೇಕ್ಷಿಸಬೇಕು. ಮೂರ್ಖನಾದವನು ಏನು-ಏನು ಹೇಳುತ್ತಾನೆಯೋ ಅದೆಲ್ಲವನ್ನೂ ವಿದ್ವಾಂಸನು ಸಹಿಸಿಕೊಳ್ಳಬೇಕು.

ಪ್ರಾಕೃತೋ ಹಿ ಪ್ರಶಂಸನ್ವಾ ನಿನ್ದನ್ವಾ ಕಿಂ ಕರಿಷ್ಯತಿ ।
ವನೇ ಕಾಕ ಇವಾಬುದ್ಧಿರ್ವಾಶಮಾನೋ ನಿರರ್ಥಕಮ್ ॥೮॥

ಅರಣ್ಯದಲ್ಲಿರುವ ಕಾಗೆಯು ನಿರರ್ಥಕವಾಗಿ 'ಕಾ-ಕಾ' ಎಂದು ಕೂಗುವಂತೆ ಮೂರ್ಖಮನುಷ್ಯನು ನಿಷ್ಕಾರಣವಾಗಿ ಇತರರನ್ನು ನಿಂದೆ ಮಾಡುತ್ತಾನೆ. ಮೂರ್ಖನು ನಿಂದೆಮಾಡುವುದರಿಂದಾಗಲೀ ಪ್ರಶಂಸೆ

ಮಾಡುವುದರಿಂದಾಗಲೀ ಯಾರಿಗೆ ಯಾವ ಕೆಡುಕನ್ನು ಅಥವಾ ಒಳ್ಳೆಯದನ್ನು ತಾನೇ ಮಾಡಬಲ್ಲನು? ಅಂತಹ ಮೂರ್ಖನು ಮಾಡುವ ಪ್ರಶಂಸೆಗಾಗಲೀ–ನಿಂದೆಗಾಗಲೀ ಅರ್ಥವಿಲ್ಲ.

ಯದಿ ವಾಗ್ಭಿಃ ಪ್ರಯೋಗಃ ಸ್ಯಾತ್ಪ್ರಯೋಗೇ ಪಾಪಕರ್ಮಣಃ ।
ವಾಗೇವಾರ್ಥೋ ಭವೇತ್ತಸ್ಯ ನ ಹ್ಯೇವಾರ್ಥೋ ಜಿಘಾಂಸತಃ ॥೯॥

ಪಾಪಚಾರಿಯಾದ ಮನುಷ್ಯನು ಕಟುವಾದ ಮಾತುಗಳಿಂದ ನಿಂದಿಸಿದಾಗ ಅವನು ಹೇಳಿದುದಕ್ಕೆ ಪ್ರತಿಯಾಗಿ ಮಾತನಾಡದೆ ಹೋದರೆ (ಅವನ ಮಾತನ್ನು ಉಪೇಕ್ಷಿಸಿದರೆ) ಆ ದುಷ್ಟನಿಗೆ ಬರಿಯ ಮಾತನಾಡಿದುದೇ ಪ್ರಯೋಜನವಾಗುತ್ತದೆ. ದುಷ್ಟನು ದೂಷಿಸಿದರೆ ಸತ್ಪುರುಷನು ದೂಷ್ಯನಾಗುವುದಿಲ್ಲ. ಸತ್ಪುರುಷರನ್ನು ಹಿಂಸೆಪಡಿಸಬೇಕೆಂಬ ಇಚ್ಛೆಯಿರುವ ಅವನಿಗೆ ಕಂಠಶೋಷಣೆಯ ಹೊರತಾಗಿ ಮತ್ತಾವ ಪ್ರಯೋಜನವೂ ಆಗುವುದಿಲ್ಲ.

ನಿಷೇಕಂ ವಿಪರೀತಂ ಸ ಆಚಷ್ಟೇ ವೃತ್ತಚೇಷ್ಟಯಾ ।
ಮಯೂರ ಇವ ಕೌಪೀನಂ ನೃತ್ಯಂ ಸನ್ದರ್ಶಯನ್ನಿವ ॥೧೦॥

ನವಿಲು ನರ್ತನಮಾಡುತ್ತಾ ತನ್ನ ಗುಹ್ಯಪ್ರದೇಶವನ್ನು ತೋರಿಸುತ್ತದೆ. ಆದರೆ ಅದಕ್ಕೆ ತಾನು ಚೆನ್ನಾಗಿ ನೃತ್ಯಮಾಡುತ್ತಿರುವೆನೆಂಬ ಭಾವನೆಯೇ ಹೊರತು ನನ್ನ ಗುಹ್ಯಪ್ರದೇಶವನ್ನು ಜನರು ನೋಡುತ್ತಿದ್ದಾರೆಂದು ನಾಚಿಕೆಪಡುವುದಿಲ್ಲ. ಅದೇ ರೀತಿಯಲ್ಲಿ ಮೂರ್ಖನು ತನ್ನ ಸ್ವಭಾವಸಿದ್ಧವಾದ ಚೇಷ್ಟೆಗಳಿಂದ ಕಾಮೋತ್ತೇಜಕವಾದ ಅಶ್ಲೀಲವಾದ ಮಾತುಗಳನ್ನೂ–ವಿಪರೀತಾರ್ಥ ಕೊಡುವ ಮಾತುಗಳನ್ನೂ ಆಡುತ್ತಾನೆ. ಅದರಿಂದ ಅವನು ತನ್ನಲ್ಲಿರುವ ಹೇಯವರ್ತನೆಗಳನ್ನು ಪ್ರಕಟಿಸಿಕೊಂಡಂತಾಗುತ್ತದೆ. ಅಂತಹ ಮಾತುಗಳನ್ನಾಡಿ ನಾಚಿಕೆಪಟ್ಟುಕೊಳ್ಳಬೇಕಾದರೂ ಮೂರ್ಖನಾದವನು ನಾಚಿಕೆಪಟ್ಟುಕೊಳ್ಳದಿರುವುದು ಮಾತ್ರವಲ್ಲದೇ ಅಂತಹ ದುರುಕ್ತಿಗಳನ್ನು ಆಡಿದುದಕ್ಕಾಗಿ ಆತ್ಮಪ್ರಶಂಸೆಯನ್ನೂ ಮಾಡಿಕೊಳ್ಳುತ್ತಾನೆ.

ಯಸ್ಯಾವಾಚ್ಯಂ ನ ಲೋಕೇಽಸ್ತಿ ನಾಕಾರ್ಯಂ ಚಾಪಿ ಕಿಂಚನ ।
ವಾಚಂ ತೇನ ನ ಸಂದಧ್ಯಾಚ್ಛುಚಿಃ ಸಂಶ್ಲಿಷ್ಟಕರ್ಮಣಾ ॥೧೧॥

ಮೂರ್ಖನು ಆಡಬಾರದ ಅವಾಚ್ಯಶಬ್ದಗಳೇ ಲೋಕದಲ್ಲಿರುವುದಿಲ್ಲ.

ಸಕಲವಿಧವಾದ ಅವಾಚ್ಯಶಬ್ದಗಳನ್ನೂ ಅವನು ಆಡುತ್ತಾನೆ. ಅವನಿಗೆ ಮಾಡಬಾರದ ಕೆಟ್ಟಕೆಲಸಗಳೇ ಸ್ವಲ್ಪವಾದರೂ ಲೋಕದಲ್ಲಿರುವುದಿಲ್ಲ. ಅಂತಹ ದುರ್ವಾಕ್ಯ-ದುಷ್ಕಾರ್ಯಗಳಲ್ಲಿಯೇ ಆಸಕ್ತನಾಗಿರುವ ಮೂರ್ಖ ನೊಡನೆ ಸತ್ಪುರುಷನು ಯಾವ ಮಾತನ್ನೂ ಆಡಬಾರದು.

ಪ್ರತ್ಯಕ್ಷಂ ಗುಣವಾದೀ ಯಃ ಪರೋಕ್ಷೇ ಚಾಪಿ ನಿನ್ದಕಃ ।
ಸ ಮಾನವಃ ಶ್ವವಲ್ಲೋಕೇ ನಷ್ಟಲೋಕಪರಾವರಃ ॥೧೨॥

ಯಾವನು ಪ್ರತ್ಯಕ್ಷದಲ್ಲಿದ್ದಾಗ ಗುಣಗಾನಮಾಡುವನೋ, ಪರೋಕ್ಷ ದಲ್ಲಿದ್ದಾಗ ನಿಂದಿಸುವನೋ–ಅವನು ಈ ಲೋಕದಲ್ಲಿ ನಾಯಿಯಂತೆ ಇರತಕ್ಕವನು. ಅಂತಹವನಿಗೆ ಈ ಲೋಕವೂ ಇಲ್ಲ ; ಪರಲೋಕವೂ ಇಲ್ಲ. (ಜ್ಞಾನವೂ ಇಲ್ಲ ; ಧರ್ಮವೂ ಇಲ್ಲ.)

ತಾದೃಗ್ಜನಶತಸ್ಯಾಪಿ ಯದ್ದದಾತಿ ಜುಹೋತಿ ಚ ।
ಪರೋಕ್ಷೇಣಾಪವಾದೀ ಯಸ್ತಂ ನಾಶಯತಿ ತತ್ಕ್ಷಣಾತ್ ॥೧೩॥

ಪರೋಕ್ಷದಲ್ಲಿ ನಿಂದೆಮಾಡುವ ಮನುಷ್ಯನು ನೂರು ಜನರಿಗೆ ದಾನ ಕೊಟ್ಟರೂ ಅನೇಕವಿಧವಾದ ಹೋಮ-ಹವನಾದಿಗಳನ್ನು ಮಾಡಿದರೂ ಆ ಕರ್ಮಗಳ ಫಲಗಳೆಲ್ಲವೂ ಒಡನೆಯೇ ವಿನಾಶಹೊಂದುತ್ತವೆ.

ತಸ್ಮಾತ್ಪ್ರಾಜ್ಞೋ ನರಃ ಸದ್ಯಸ್ತಾದೃಶಂ ಪಾಪಚೇತಸಮ್ ।
ವರ್ಜಯೇತ್ಸಾಧುಭಿರ್ವರ್ಜ್ಯಂ ಸಾರಮೇಯಾಮಿಷಂ ಯಥಾ ॥೧೪॥

ಆದುದರಿಂದ ಪ್ರಾಜ್ಞನಾದವನು ಅಂತಹ ಪಾಪಿಷ್ಠನಾದ ಪರೋಕ್ಷ ಪರನಿಂದಕನನ್ನು ಒಡನೆಯೇ ತ್ಯಾಗಮಾಡಬೇಕು. ನಾಯಿಯ ಮಾಂಸದಂತೆ ಸಾಧುಗಳಿಂದ ಅವನು ಪರಿತ್ಯಾಗಕ್ಕೆ ಯೋಗ್ಯನಾಗಿರುತ್ತಾನೆ.

ಪರಿವಾದಂ ಬ್ರುವಾಣೋ ಹಿ ದುರಾತ್ಮಾ ವೈ ಮಹಾಜನೇ ।
ಪ್ರಕಾಶಯತಿ ದೋಷಾಂಸ್ತು ಸರ್ಪಃ ಫಣಮಿವೋಚ್ಛ್ರಿತಮ್ ॥೧೫॥

ಯಾವ ರೀತಿಯಲ್ಲಿ ಸರ್ಪವು ತನ್ನ ಹೆಡೆಯನ್ನು ಎತ್ತಿ ತೋರಿಸು ತ್ತದೆಯೋ–ಅದೇ ರೀತಿಯಲ್ಲಿ ಮಹಾಜನಸಮುದಾಯದಲ್ಲಿ ಮಹಾ ಪುರುಷರ ನಿಂದೆಯನ್ನು ಮಾಡುವ ದುರಾತ್ಮನು ತನ್ನ ದೋಷಗಳನ್ನೇ ಪ್ರಕಟ ಪಡಿಸುತ್ತಾನೆ.

ತಂ ಸ್ವಕರ್ಮಾಣಿ ಕುರ್ವಾಣಂ ಪ್ರತಿಕರ್ತುಂ ಯ ಇಚ್ಛತಿ ।
ಭಸ್ಮಕೂಟ ಇವಾಬುದ್ಧಿಃ ಖರೋ ರಜಸಿ ಸಜ್ಜತಿ ॥೧೬॥

ಯಾವನು–ಪರನಿಂದಾರೂಪವಾದ ಸ್ವಕಾರ್ಯದಲ್ಲಿ ನಿರತನಾಗಿರುವ ದುಷ್ಟಪುರುಷನಿಗೆ ಪ್ರತಿಮಾಡಲು ಇಚ್ಛಿಸುವನೋ–ಅವನು ಬೂದಿಯ ಗುಡ್ಡೆಯ ಮೇಲೆ ಹೊರಳಾಡುವ ಮೂರ್ಖಕತ್ತೆಯಂತೆ ದುಃಖದಲ್ಲಿ ಬೀಳುತ್ತಾನೆ.

ಮನುಷ್ಯಶಾಲಾವೃಕಮಪ್ರಶಾನ್ತಂ
ಜನಾಪವಾದೇ ಸತತಂ ನಿವಿಷ್ಟಮ್ ।
ಮಾತಙ್ಗಮುನ್ಮತ್ತಮಿವೋನ್ನದನ್ತಂ
ತ್ಯಜೇತ ತಂ ಶ್ವಾನಮಿವಾತಿರೌದ್ರಮ್ ॥೧೭॥

ಯಾವನು ನಿರಂತರವಾಗಿ ಮನುಷ್ಯರನ್ನು ನಿಂದಿಸುತ್ತಿರುವನೋ–ಅವನು ಮನುಷ್ಯಶರೀರದಲ್ಲಿ ವಾಸಮಾಡುತ್ತಿರುವ ತೋಳವೇ ಆಗಿರುತ್ತಾನೆ. ಅವನು ಸರ್ವದಾ ಅಶಾಂತಿಯಿಂದಲೇ ಇರುತ್ತಾನೆ. ಮದಿಸಿದ ಆನೆಯಂತೆ ಯಾವಾಗಲೂ ಕಿರುಚುತ್ತಿರುತ್ತಾನೆ. ಬಹಳ ಭಯಂಕರವಾದ ನಾಯಿಯಂತೆ ಯಾವಾಗಲೂ ಯಾರನ್ನಾದರೂ ಕಚ್ಚಲು ಓಡುತ್ತಲೇ ಇರುತ್ತಾನೆ. ಶ್ರೇಷ್ಠ ಪುರುಷರು ಅಂತಹವರನ್ನು ಸರ್ವದಾ ತ್ಯಜಿಸಬೇಕು.

ಅಧೀರಜುಷ್ಟೇ ಪಥಿ ವರ್ತಮಾನಂ
ದಮಾದಪೇತಂ ವಿನಯಾಚ್ಚ ಪಾಪಮ್ ।
ಅರಿವ್ರತಂ ನಿತ್ಯಮಭೂತಿಕಾಮಂ
ಧಿಗಸ್ತು ತಂ ಪಾಪಮತಿಂ ಮನುಷ್ಯಮ್ ॥೧೮॥

ಹೇಡಿಗಳು ಅವಲಂಬಿಸುವ ಮಾರ್ಗದಲ್ಲಿ ನಡೆಯುವ, ಜಿತೇಂದ್ರಿಯನಲ್ಲದ, ಅವಿನೀತನಾದ, ಮಹಾಪಾಪಿಷ್ಠನಾದ, ಅರಿವ್ರತನಾದ (ಇತರರನ್ನು ದ್ವೇಷಿಸುವ ಸ್ವಭಾವವುಳ್ಳ), ಸದಾಕಾಲದಲ್ಲಿಯೂ ಇತರರ ಅವನತಿಯನ್ನೇ ಬಯಸುವ ಪಾಪಬುದ್ಧಿಯುಳ್ಳ ಮನುಷ್ಯನಿಗೆ ಧಿಕ್ಕಾರವಿರಲಿ!

ಪ್ರತ್ಯುಚ್ಯಮಾನಸ್ತ್ವಭಿಭೂಯ ಏಭಿ-
ರ್ನಿಶಾಮ್ಯ ಮಾ ಭೂಸ್ತ್ವಮಥಾರ್ತರೂಪಃ ।

ಉಚ್ಚಸ್ಯ ನೀಚೇನ ಹಿ ಸಮ್ಪ್ರಯೋಗಂ
ವಿಗರ್ಹಯನ್ತಿ ಸ್ಥಿರಬುದ್ಧಯೋ ಯೇ ॥೧೯॥

ಇಂತಹ ದುಷ್ಟಮನುಷ್ಯನು ಸತ್ಪುರುಷನನ್ನು ಆಕ್ರಮಿಸಿ ನಿಂದಿಸುತ್ತಿರುವಾಗ ಸತ್ಪುರುಷನೇನಾದರೂ ಅದಕ್ಕೆ ಬದಲು ಮಾತನಾಡಲು ಹೊರಟರೆ, ಆ ಸಮಯದಲ್ಲಿ ಸತ್ಪುರುಷನನ್ನು ನೋಡಿ ಹೇಳಬೇಕು– "ನೀನು ಅವನೊಡನೆ ಮಾತನಾಡಲು ಹೋಗಿ ಇನ್ನೂ ದುಃಖಿಯಾಗಬೇಡ. ಸ್ಥಿರವಾದ ಬುದ್ಧಿಯುಳ್ಳ ಮನುಷ್ಯನು ನೀಚಪುರುಷನೊಡನೆ ವಾಗ್ವಿವಾದದಲ್ಲಿ ತೊಡಗುವುದನ್ನು ಶ್ರೇಷ್ಠಪುರುಷರು ನಿಂದಿಸುತ್ತಾರೆ."

ಕ್ರುದ್ಧೋ ದಶಾರ್ಧೇನ ಹಿ ತಾಡಯೇದ್ವಾ
ಸ ಪಾಂಸುಭಿರ್ವಾ ವಿಕಿರೇತ್ತುಷೈರ್ವಾ ।
ವಿವೃತ್ಯ ದನ್ತಾಂಶ್ಚ ವಿಭೀಷಯೇದ್ವಾ
ಸಿದ್ಧಂ ಹಿ ಮೂಢೇ ಕುಪಿತೇ ನೃಶಂಸೇ ॥೨೦॥

ಕ್ರೂರಸ್ವಭಾವದ ಮೂರ್ಖಮನುಷ್ಯನು ಕುಪಿತನಾದರೆ ಐದು ಬೆರಳುಗಳಿಂದಲೂ ಮುಷ್ಟಿಯನ್ನು ಬಿಗಿದು ಪ್ರಹರಿಸಬಹುದು. ಭೂಮಿಯ ಧೂಳನ್ನೋ (ಮಣ್ಣನ್ನೋ), ಹೊಟ್ಟನ್ನೋ ಮೇಲೆರಚಬಹುದು. ಬಾಯನ್ನಗಲಿಸಿ ಹಲ್ಲುಗಳನ್ನು ತೋರಿಸುತ್ತಾ ಹೆದರಿಸಬಹುದು. ಮೂಢ ಮನುಷ್ಯನು ಕುಪಿತನಾದರೆ ಇವಿಷ್ಟು ಕಾರ್ಯಗಳೂ ಸಾಧ್ಯವಾಗಬಹುದು. ಆದುರಿಂದಲೇ ಸತ್ಪುರುಷರನ್ನು ಅಂತಹ ಅಸತ್ಪುರುಷನೊಡನೆ ವಾಗ್ವಿವಾದಕ್ಕೆ ಹೋಗದಂತೆ ತಡೆಯಬೇಕು.

ವಿಗರ್ಹಣಾಂ ಪರಮದುರಾತ್ಮನಾ ಕೃತಾಂ
ಸಹೇತ ಯಃ ಸಂಸದಿ ದುರ್ಜನಾನ್ನರಃ ।
ಪಠೇದಿದಂ ಚಾಪಿ ನಿದರ್ಶನಂ ಸದಾ
ನ ವಾಙ್ಮಯಂ ಸ ಲಭತಿ ಕಿಂಚಿದಪ್ರಿಯಮ್ ॥೨೧॥

ಯಾವನು ತುಂಬಿದ ಸಭೆಯಲ್ಲಿ ದುರಾತ್ಮನು ಮಾಡಿದ ನಿಂದೆಯನ್ನು ಸಹಿಸಿಕೊಳ್ಳುವನೋ, ಈ ದೃಷ್ಟಾಂತವನ್ನು ಯಾವನು ಸದಾಕಾಲದಲ್ಲಿಯೂ ಹೇಳುವನೋ–ಅಂತಹ ಸತ್ಪುರುಷನು ದುಷ್ಟರ ನಿಂದಾವಾಕ್ಯ

ಗಳಿಂದ ಉಂಟಾಗಬಹುದಾದ ದುಃಖವನ್ನು ಹೊಂದುವುದಿಲ್ಲ. ದುಷ್ಟರ ನಿಂದಾವಾಕ್ಯಗಳನ್ನು ಗಣನೆಗೆ ತೆಗೆದುಕೊಳ್ಳದೇ ಶಾಂತನಾಗಿರುತ್ತಾನೆ.”

೧೧೪ನೆಯ ಅಧ್ಯಾಯವು ಮುಗಿಯಿತು.

೧೧೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನಲ್ಲಿಯೂ ರಾಜಸೇವಕರಲ್ಲಿಯೂ ಅವಶ್ಯವಾಗಿ ಇರಲೇಬೇಕಾದ ಗುಣಗಳು

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

“ಮಹಾಪ್ರಾಜ್ಞನಾದ ಪಿತಾಮಹನೇ! ನನ್ನ ಮನಸ್ಸಿನಲ್ಲಿ ದೊಡ್ಡದಾದೊಂದು ಸಂಶಯವು ಮೂಡಿದೆ. ನೀನು ಈ ಸಂದೇಹವನ್ನು ನಿವಾರಣೆ ಮಾಡು. ಏಕೆಂದರೆ : ನೀನು ನಮ್ಮ ವಂಶಕ್ಕೆ ಪ್ರವರ್ತಕನಾಗಿರುವೆ. ನೀನೀಗ ದುರಾತ್ಮರಾದ ದುರಾಚಾರಿಗಳ ಮಾತುಗಳ ರೀತಿಯನ್ನು ತಿಳಿಸಿರುವೆ. ಆದುದರಿಂದ ಈ ವಿಷಯವನ್ನು ವಿಜ್ಞಾಪಿಸಿಕೊಳ್ಳಲು ಇಚ್ಛಿಸುತ್ತೇನೆ.

ಯದ್ಧಿತಂ ರಾಜತನ್ತ್ರಸ್ಯ ಕುಲಸ್ಯ ಚ ಸುಖೋದಯಮ್ ।
ಆಯತ್ಯಾಂ ಚ ತದಾತ್ವೇ ಚ ಕ್ಷೇಮವೃದ್ಧಿಕರಂ ಚ ಯತ್ ॥೩॥

ಪುತ್ರಪೌತ್ರಾಭಿರಾಮಂ ಚ ರಾಷ್ಟ್ರವೃದ್ಧಿಕರಂ ಚ ಯತ್ ।
ಅನ್ನಪಾನೇ ಶರೀರೇ ಚ ಹಿತಂ ಯತ್ತದ್ಬ್ರವೀಹಿ ಮೇ ॥೪॥

ರಾಜತಂತ್ರಕ್ಕೆ ಯಾವುದು ಹಿತವಾದುದು? ಕುಲದ ಸುಖೋದಯಕ್ಕೆ ಯಾವುದು ಕಾರಣವಾಗುತ್ತದೆ? ಮುಂದೆ ಮತ್ತು ಈಗ ಕ್ಷೇಮಾಭಿವೃದ್ಧಿಯನ್ನು ಉಂಟುಮಾಡತಕ್ಕುದು ಯಾವುದು? ಮಕ್ಕಳಿಗೂ ಮೊಮ್ಮಕ್ಕಳಿಗೂ ಸುಖಕರವಾದುದು ಯಾವುದು? ರಾಷ್ಟ್ರದ ವೃದ್ಧಿಯನ್ನು ಉಂಟುಮಾಡ ತಕ್ಕುದು ಯಾವುದು? ಅನ್ನ-ಪಾನಗಳಲ್ಲಿ ಯಾವುದು ಹಿತಕರವಾಗಿರುತ್ತದೆ? ಶರೀರಕ್ಕೆ ಹಿತವಾದುದು ಯಾವುದು?–ಈ ಎಲ್ಲ ವಿಷಯಗಳಲ್ಲಿಯೂ ನನಗೆ ಸರಿಯಾದ ತಿಳಿವಳಿಕೆಯನ್ನು ನೀಡು.

ಅಭಿಷಿಕ್ತೋ ಹಿ ಯೋ ರಾಜಾ ರಾಷ್ಟ್ರಸ್ಥೋ ಮಿತ್ರಸಂವೃತಃ ।
ಸಸುಹೃತ್ಸಮುಪೇತೋ ವಾ ಸ ಕಥಂ ರಞ್ಜಯೇತ್ಪ್ರಜಾಃ ॥೫॥

ರಾಜನು ರಾಜ್ಯಾಭಿಷಿಕ್ತನಾಗಿ–ಮಿತ್ರರಿಂದಲೂ, ಹಿತೈಷಿಗಳಾದ ಸುಹೃದರಿಂದಲೂ ಕೂಡಿಕೊಂಡಿರುತ್ತಾನೆ. ಅಂತಹ ರಾಜನು ಹೇಗೆ ಪ್ರಜೆಗಳನ್ನು ಪ್ರಸನ್ನಗೊಳಿಸುತ್ತಾನೆ?

ಯೋ ಹ್ಯಸತ್ಪ್ರಗ್ರಹರತಿಃ ಸ್ನೇಹರಾಗಬಲಾತ್ಕೃತಃ ।
ಇನ್ದ್ರಿಯಾಣಾಮನೀಶತ್ವಾದಸಜ್ಜನಬುಭೂಷಕಃ ॥೬॥

ತಸ್ಯ ಭೃತ್ಯಾ ವಿಗುಣತಾಂ ಯಾನ್ತಿ ಸರ್ವೇ ಕುಲೋದ್ಗತಾಃ ।
ನ ಚ ಭೃತ್ಯಫಲೈರರ್ಥೈಃ ಸ ರಾಜಾ ಸಮ್ಪ್ರಯುಜ್ಯತೇ ॥೭॥

ಯಾವ ರಾಜನು ಅಸದ್ವಸ್ತುಗಳ ಸಂಗ್ರಹದಲ್ಲಿಯೇ ಆಸಕ್ತಿಯನ್ನು ಹೊಂದಿರುವನೋ, ಸ್ನೇಹ ಮತ್ತು ರಾಗಗಳಿಗೆ ಅಧೀನನಾಗಿ ಕೆಟ್ಟವರಿಗೆ ಆಶ್ರಯವನ್ನು ಕೊಡುತ್ತಾನೆಯೋ, ಇಂದ್ರಿಯಗಳನ್ನು ವಶಪಡಿಸಿಕೊಳ್ಳದೇ ಇರುವುದರಿಂದ ಸಜ್ಜನರನ್ನು ಸಂಗ್ರಹಿಸಲು ಪ್ರಯತ್ನಿಸುವುದಿಲ್ಲವೋ– ಅಂತಹ ರಾಜನಿಗೆ ಉತ್ತಮಕುಲದಲ್ಲಿ ಹುಟ್ಟಿದ ಎಲ್ಲ ಸೇವಕರೂ ವಿಪರೀತವಾದ ಗುಣಗಳುಳ್ಳವರೇ ಆಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಸೇವಕರ ಬಲದಿಂದ ಪ್ರಾಪ್ತವಾಗುವ ಫಲಗಳಿಂದ ರಾಜನು ವಂಚಿತನಾಗುತ್ತಾನೆ.

ಪಿತಾಮಹ! ನನ್ನ ಈ ಸಂಶಯದ ನಿವಾರಣಾರ್ಥವಾಗಿ ತಿಳಿಯಲು ದುಃಸಾಧ್ಯವಾದ ರಾಜಧರ್ಮವನ್ನು ಹೇಳು. ನೀನು ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾಗಿರುವೆ. ಪುರುಷವ್ಯಾಘ್ರನೇ! ನಮ್ಮ ಕುಲದ ಹಿತದಲ್ಲಿಯೇ ತತ್ಪರನಾಗಿರುವ ನೀನು ಇಂತಹ ಉಪದೇಶಗಳನ್ನು ಮಾಡಲು ಸಮರ್ಥನಾಗಿರುವೆ. ವಿದುರನು ನಮ್ಮ ಮತ್ತೊಬ್ಬ ಹಿತೈಷಿಯಾಗಿರುತ್ತಾನೆ. ಅವನೂ ಕೂಡ ಸರ್ವದಾ ನಮಗೆ ಹಿತಕರವಾದ ಸದುಪದೇಶಗಳನ್ನು ಮಾಡುತ್ತಲೇ ಇರುತ್ತಾನೆ. ನಿನ್ನಿಂದ ಕುಲಕ್ಕೆ ಹಿತವಾದ ಮತ್ತು ರಾಜ್ಯಕ್ಕೆ ಕಲ್ಯಾಣಕಾರಿಯಾದ ಮಾತನ್ನು ಕೇಳಿ, ನಾನು ನಾಶರಹಿತವಾದ ಅಮೃತವನ್ನು ಹೊಂದಿ ತೃಪ್ತನಾದವನಂತೆ–ಸುಖವಾಗಿ ನಿದ್ರಿಸುತ್ತೇನೆ.

ಕೀದೃಶಾಃ ಸಂನಿಕರ್ಷಸ್ಥಾ ಭೃತ್ಯಾಃ ಸರ್ವಗುಣಾನ್ವಿತಾಃ ।
ಕೀದೃಶೈಃ ಕಿಂಕುಲೀನೈರ್ವಾ ಸಹ ಯಾತ್ರಾ ವಿಧೀಯತೇ ॥೧೧॥

ಸರ್ವಗುಣಸಂಪನ್ನರಾದ ಎಂತಹ ಸೇವಕರು ರಾಜನ ಸಮೀಪದಲ್ಲಿ ಇರಲು ಇಚ್ಛಿಸುತ್ತಾರೆ? ಯಾವ ಕುಲದಲ್ಲಿ ಹುಟ್ಟಿದ ಎಂತಹ ಸೈನಿಕರಿಂದ ಕೂಡಿ ರಾಜನು ಯುದ್ಧಯಾತ್ರೆಯನ್ನು ಕೈಗೊಳ್ಳಬೇಕು?

ಸೇವಕರಿಲ್ಲದೆ ರಾಜನೊಬ್ಬನೇ ರಾಜ್ಯವನ್ನು ರಕ್ಷಿಸಲಾರನು. ಉತ್ತಮಕುಲದಲ್ಲಿ ಹುಟ್ಟಿದ ಎಲ್ಲ ಜನರೂ ರಾಜ್ಯವನ್ನು ಅಭಿಲಾಷಿಸುತ್ತಾರೆ. (ರಾಜ್ಯವು ಸುರಕ್ಷಿತವಾಗಿರುವುದನ್ನು ಅಭಿಲಾಷಿಸುತ್ತಾರೆ.")

ಭೀಷ್ಮನು ಹೇಳುತ್ತಾನೆ :

ನ ಚ ಪ್ರಶಾಸ್ತುಂ ರಾಜ್ಯಂ ಹಿ ಶಕ್ಯಮೇಕೇನ ಭಾರತ ।
ಅಸಹಾಯವತಾ ತಾತ ನೈವಾರ್ಥಾಃ ಕೇಚಿದಪ್ಯುತ ॥೧೩॥

ಲಬ್ಧುಂ ಲಬ್ಧಾ ಹ್ಯಪಿ ಸದಾ ರಕ್ಷಿತುಂ ಭರತರ್ಷಭ ।
ಯಸ್ಯ ಭೃತ್ಯಜನಃ ಸರ್ವೋ ಜ್ಞಾನವಿಜ್ಞಾನಕೋವಿದಃ ॥೧೪॥

ಹಿತೈಷೀ ಕುಲಜಃ ಸ್ನಿಗ್ಧಃ ಸ ರಾಜ್ಯಫಲಮಶ್ನುತೇ ॥೧೫॥

"ಭರತನಂದನ! ಯಾರೇ ಆದರೂ ಸಹಾಯಕರಿಲ್ಲದೇ ರಾಜ್ಯಭಾರ ಮಾಡಲು ಸಾಧ್ಯವಾಗುವುದಿಲ್ಲ. ರಾಜ್ಯಭಾರವು ಮಾತ್ರವೇ ಅಲ್ಲ; ಯಾವ ವಿಧವಾದ ಅರ್ಥಸಿದ್ಧಿಯೂ ಸಹಾಯಕರಿಲ್ಲದೇ ಸಾಧ್ಯವಾಗುವುದಿಲ್ಲ. ಅರ್ಥ ಸಿದ್ಧಿಯನ್ನು ಪಡೆದ ಮೇಲೂ ಒಬ್ಬನಿಂದಲೇ ಸೇವಕರ ಸಹಾಯವಿಲ್ಲದೇ ಅದನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲ. ಯಾವ ರಾಜನ ಭೃತ್ಯಜನರೆಲ್ಲರೂ ಜ್ಞಾನ-ವಿಜ್ಞಾನಕೋವಿದರಾಗಿರುವರೋ, ಹಿತೈಷಿಗಳಾಗಿರುವರೋ, ಸತ್ಕುಲ ಪ್ರಸೂತರಾಗಿರುವರೋ, ಸ್ನೇಹಪರರಾಗಿರುವರೋ–ಅಂತಹ ರಾಜನು ರಾಜ್ಯದ ಫಲವನ್ನು ಉಪಭೋಗಿಸುತ್ತಾನೆ.

ಮನ್ತ್ರಿಣೋ ಯಸ್ಯ ಕುಲಜಾ ಅಸಂಹಾರ್ಯಾಃ ಸಹೋಷಿತಾಃ ।
ನೃಪತೇರ್ಮತಿದಾಃ ಸನ್ತಃ ಸಮ್ಬನ್ಧಜ್ಞಾನಕೋವಿದಾಃ ॥೧೬॥

ಅನಾಗತವಿಧಾತಾರಃ ಕಾಲಜ್ಞಾನವಿಶಾರದಾಃ ।
ಅತಿಕ್ರಾನ್ತಮಶೋಚನ್ತಃ ಸ ರಾಜ್ಯಫಲಮಶ್ನುತೇ ॥೧೭॥

ಯಾವ ರಾಜನ ಮಂತ್ರಿಗಳು ಸತ್ಕುಲಪ್ರಸೂತರಾಗಿರುವರೋ, ಧನಲೋಭಕ್ಕೆ ಒಳಗಾಗಿ ರಾಜನಿಂದ ಪ್ರತ್ಯೇಕವಾಗುವುದಿಲ್ಲವೋ, ರಾಜನೊಡನೆಯೇ ವಾಸಮಾಡುತ್ತಿರುವರೋ, ರಾಜನಿಗೆ ಸಮಯೋಚಿತವಾದ ಬುದ್ಧಿಯನ್ನು ಹೇಳುತ್ತಿರುವರೋ, ಸತ್ಪುರುಷರೋ, ಯಾರೊಡನೆ ಸಂಬಂಧವನ್ನು ಇಟ್ಟುಕೊಳ್ಳಬೇಕು–ಯಾರೊಡನೆ ಇಟ್ಟುಕೊಳ್ಳಬಾರದು? ಎಂಬ ಜ್ಞಾನದಲ್ಲಿ ಕುಶಲರೋ, ಮುಂದಾಗುವುದನ್ನು ತಿಳಿದು ಕಾರ್ಯ ಮಾಡಬಲ್ಲರೋ, ಸಮಯಜ್ಞಾನದಲ್ಲಿ ನಿಪುಣರೋ, ಹಿಂದೆ ನಡೆದು ಹೋದುದಕ್ಕಾಗಿ ಶೋಕಪಡುವುದಿಲ್ಲವೋ–ಅಂತಹ ರಾಜನು ರಾಜ್ಯದ ಫಲವನ್ನು ಅನುಭವಿಸುತ್ತಾನೆ.

ಸಮದುಃಖಸುಖಾ ಯಸ್ಯ ಸಹಾಯಾಃ ಪ್ರಿಯಕಾರಿಣಃ ।
ಅರ್ಥಚಿನ್ತಾಪರಾಃ ಸತ್ಯಾಃ ಸ ರಾಜ್ಯಫಲಮಶ್ನುತೇ ॥೧೮॥

ಯಾವನ ಸಹಾಯಕರು ರಾಜನ ಸುಖ-ದುಃಖಗಳನ್ನೇ ತಮ್ಮ ಸುಖ-ದುಃಖಗಳೆಂದು ತಿಳಿಯುವರೋ, ರಾಜನಿಗೆ ಪ್ರಿಯವನ್ನುಂಟುಮಾಡುವರೋ, ರಾಜನ ಬೊಕ್ಕಸವನ್ನು ಹೆಚ್ಚಿಸುವುದರಲ್ಲಿಯೇ ಮಗ್ನರಾಗಿರುವರೋ, ಸತ್ಯನಿಷ್ಠರೋ ಅಂತಹ ರಾಜನು ರಾಜ್ಯದ ಫಲವನ್ನು ಉಪಭೋಗಿಸುತ್ತಾನೆ.

ಯಸ್ಯ ನಾರ್ತೋ ಜನಪದಃ ಸಂನಿಕರ್ಷಗತಃ ಸದಾ ।
ಅಕ್ಷುದ್ರಃ ಸತ್ಪಥಾಲಮ್ಬೀ ಸ ರಾಜಾ ರಾಜ್ಯಭಾಗ್ಭವೇತ್ ॥೧೯॥

ಯಾವ ರಾಜನ ದೇಶವು ದುಃಖಭೂಯಿಷ್ಠವಾಗಿಲ್ಲವೋ, ಸಮೀಪದಲ್ಲಿಯೇ ಇರುವುದೋ (ವಶವರ್ತಿಯಾಗಿದೆಯೋ), ಕ್ಷುದ್ರವಾಗಿಲ್ಲವೋ, ಸನ್ಮಾರ್ಗವನ್ನು ಅವಲಂಬಿಸಿರುವುದೋ–ಅಂತಹ ದೇಶದ ರಾಜನು ರಾಜ್ಯದ ಫಲವನ್ನು ಉಪಭೋಗಿಸುತ್ತಾನೆ.

ಕೋಶಾಖ್ಯಪಟಲಂ ಯಸ್ಯ ಕೋಶವೃದ್ಧಿಕರೈರ್ನರೈಃ ।
ಆಪ್ತೈಸ್ತುಷ್ಟೈಶ್ಚ ಸತತಂ ಚೀಯತೇ ಸ ನೃಪೋತ್ತಮಃ ॥೨೦॥

ವಿಶ್ವಾಸಪಾತ್ರರಾದ, ತುಷ್ಟರಾದ, ಬೊಕ್ಕಸವನ್ನು ವೃದ್ಧಿಗೊಳಿಸಲು ಸತತವಾಗಿ ಪ್ರಯತ್ನಿಸುವ ಕೋಶಾಧಿಕಾರಿಗಳ ಮೂಲಕವಾಗಿ ಸದಾ ಅಭಿವೃದ್ಧಿಯನ್ನು ಹೊಂದುತ್ತಿರುವ ಕೋಶವನ್ನು ಯಾವನು ಹೊಂದಿರುವನೋ ಅಂತಹವನು ಸರ್ವಶ್ರೇಷ್ಠನಾದ ರಾಜನಾಗುತ್ತಾನೆ.

ಕೋಷ್ಠಾಗಾರಮಸಂಹಾರ್ಯೈರಾಪ್ತೈಃ ಸಂಚಯತತ್ಪರೈಃ ।
ಪಾತ್ರಭೂತೈರಲುಬ್ಧೈಶ್ಚ ಪಾಲ್ಯಮಾನಂ ಗುಣೀ ಭವೇತ್ ॥೨೧॥

ಧನಲೋಭದಿಂದ ಆಕರ್ಷಿತರಾಗದ, ವಿಶ್ವಾಸಪಾತ್ರರಾದ, ಕೋಶ ಸಂಗ್ರಹಶೀಲರಾದ, ಸತ್ಪಾತ್ರರಾದ, ಲೋಭರಹಿತರಾದ ಜನರು ಧಾನ್ಯಾದಿಗಳಿಂದ ಕೂಡಿರುವ ಉಗ್ರಾಣಗಳನ್ನೂ ಬೊಕ್ಕಸವನ್ನೂ ರಕ್ಷಿಸುತ್ತಿದ್ದರೆ– ಕೋಷ್ಠಾಗಾರಗಳು ಇಮ್ಮಡಿಯಾಗುತ್ತವೆ. (ವೃದ್ಧಿಹೊಂದುತ್ತವೆ.)

ವ್ಯವಹಾರಶ್ಚ ನಗರೇ ಯಸ್ಯ ಕರ್ಮಫಲೋದಯಃ ।
ದೃಶ್ಯತೇ ಶಂಖಲಿಖಿತಃ ಸ ಧರ್ಮಫಲಭಾಙ್ನೃಪಃ ॥೨೨॥

ಯಾವನ ನಗರದಲ್ಲಿ ಕರ್ಮಾನುಸಾರವಾದ ಫಲಪ್ರಾಪ್ತಿಗೆ ಶಂಖ-ಲಿಖಿತಮುನಿಗಳು ತೋರಿಸಿಕೊಟ್ಟಿರುವ ನ್ಯಾಯವ್ಯವಹಾರದ ಪಾಲನೆಯಾಗುತ್ತಿರುವುದು ಕಂಡುಬರುವುದೋ–ಅಂತಹ ರಾಜನು ರಾಜಧರ್ಮದ ಫಲವನ್ನು ಉಪಭೋಗಿಸುತ್ತಾನೆ.

ಸಂಗೃಹೀತಮನುಷ್ಯಶ್ಚ ಯೋ ರಾಜಾ ರಾಜಧರ್ಮವಿತ್ ।
ಷಡ್ವರ್ಗಂ ಪ್ರತಿಗೃಹ್ಣಾತಿ ಸಧರ್ಮಫಲಮಶ್ನುತೇ ॥೨೩॥

ಯಾವ ರಾಜನು ರಾಜಧರ್ಮಗಳನ್ನು ಚೆನ್ನಾಗಿ ತಿಳಿದುಕೊಂಡಿರುವನೋ, ಸತ್ಪುರುಷರನ್ನು ಸಂಗ್ರಹಿಸಿರುವನೋ, ಸಮಯಾನುಸಾರವಾಗಿ ಸಂಧಿ-ವಿಗ್ರಹಗಳೇ ಮೊದಲಾದ ಆರು ಗುಣಗಳನ್ನು ಪ್ರಯೋಗಿಸುವನೋ– ಅಂತಹ ರಾಜನು ರಾಜಧರ್ಮದ ಫಲವನ್ನು ಪಡೆಯುತ್ತಾನೆ.”

ಒಂದು ನೂರ ಹದಿನೆಂಟನೆಯ ಅಧ್ಯಾಯವು ಮುಗಿಯಿತು.

೧೧೬ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸಜ್ಜನರ ಚರಿತ್ರೆಯ ವಿಷಯದ ದೃಷ್ಟಾಂತರೂಪದಲ್ಲಿ ಮಹರ್ಷಿಯೊಬ್ಬನ ಮತ್ತು ನಾಯಿಯ ಕಥೆ

ಜನಮೇಜಯ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಸತ್ಪುರುಷರ ಆಚರಣೆಗೆ ಉತ್ತಮನಿದರ್ಶನವಾದ ಹಿಂದಿನ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಈ ವಿಷಯಕ್ಕೆ ಅನುರೂಪವಾದ ಮಾತನ್ನು ಋಷಿಶ್ರೇಷ್ಠರು ಜಮದಗ್ನಿಯ ಮಗನಾದ ಪರಶುರಾಮನಿಗೆ ಹೇಳುತ್ತಿದ್ದುದನ್ನು ನಾನು ತಪೋವನದಲ್ಲಿ ಕೇಳಿದ್ದೆನು.

ಒಂದು ದೊಡ್ಡದಾದ ಮತ್ತು ಜನರಹಿತವಾದ ಅರಣ್ಯದಲ್ಲಿ ಫಲ-ಮೂಲಗಳನ್ನೇ ತಿಂದು ಜೀವಿಸುತ್ತಿದ್ದ, ನಿಯಮಪರಾಯಣನಾದ, ಜಿತೇಂದ್ರಿಯನಾದ ಋಷಿಯೊಬ್ಬನು ವಾಸಮಾಡಿಕೊಂಡಿದ್ದನು. ಅವನು ಶ್ರೇಷ್ಠವಾದ ವ್ರತದ ದೀಕ್ಷೆಯನ್ನು ಕೈಗೊಂಡಿದ್ದನು. ಜಿತೇಂದ್ರಿಯನಾಗಿ ಶಾಂತನಾಗಿದ್ದನು. ವೇದ-ಶಾಸ್ತ್ರಗಳ ಅಧ್ಯಯನದಲ್ಲಿ ನಿರತನಾಗಿದ್ದನು. ಉಪವಾಸವ್ರತದಿಂದ ಅವನ ಅಂತಃಕರಣವು ಶುದ್ಧವಾಗಿದ್ದಿತು. ಅವನು ಸರ್ವದಾ ಸತ್ತ್ವಗುಣವನ್ನೇ ಆಶ್ರಯಿಸಿ ಇರುತ್ತಿದ್ದನು. ಒಂದೇ ಕಡೆಯಲ್ಲಿ ಶಾಂತಭಾವದಿಂದ ಕುಳಿತಿರುತ್ತಿದ್ದ ಬುದ್ಧಿವಂತನಾದ ಮಹರ್ಷಿಯ ಸದ್ಭಾವ ವನ್ನು ನೋಡಿ, ಎಲ್ಲ ವನಚರಪ್ರಾಣಿಗಳೂ ಅವನ ಸಮೀಪಕ್ಕೆ ಬರತೊಡಗಿ ದುವು. ಕ್ರೂರಸ್ವಭಾವದಿಂದ ಕೂಡಿದ್ದ ಸಿಂಹ, ವ್ಯಾಘ್ರ, ಮದಿಸಿದ ಆನೆ ಗಳು, ಚಿರತೆಗಳು, ಖಡ್ಗಮೃಗಗಳು, ಭಲ್ಲೂಕಗಳು ಇವುಗಳೇ ಅಲ್ಲದೇ ಭಯಂಕರವಾಗಿ ಕಾಣುತ್ತಿದ್ದ ಇನ್ನೂ ಅನೇಕ ಪ್ರಾಣಿಗಳೂ ಋಷಿಯ ಸಮೀಪಕ್ಕೆ ಬರತೊಡಗಿದುವು. ಅವುಗಳೆಲ್ಲವೂ ಮಾಂಸಾಹಾರಿಗಳಾದ ಹಿಂಸ್ರಪ್ರಾಣಿಗಳೇ ಆಗಿದ್ದರೂ–ಆ ಋಷಿಯ ಶಿಷ್ಯರಂತೆ ತಲೆಯನ್ನು ತಗ್ಗಿಸಿಕೊಂಡು ಋಷಿಯ ಬಳಿಯಲ್ಲಿ ಕುಳಿತುಕೊಳ್ಳುತ್ತಿದ್ದುವು. 'ನೀವು ಸುಖವಾಗಿರುವಿರಾ?'–ಎಂಬ ಋಷಿಯ ಪ್ರಶ್ನೆಗೆ 'ಸುಖವಾಗಿದ್ದೇವೆ'–ಎಂದು ಉತ್ತರಿಸುತ್ತಿದ್ದುವು. ಋಷಿಗೆ ಪ್ರಿಯವಾದ ಕಾರ್ಯಗಳನ್ನೇ

ಮಾಡುತ್ತಿದ್ದುವು. ಸಿಂಹ-ವ್ಯಾಘ್ರಾದಿ ಪ್ರಾಣಿಗಳೆಲ್ಲವೂ ಋಷಿಯ ಕುಶಲ ಸಮಾಚಾರವನ್ನು ಪ್ರಶ್ನಿಸಿ ಅವುಗಳು ಎಲ್ಲಿಂದ ಬಂದಿದ್ದುವೋ ಅಲ್ಲಿಗೇ ಹೊರಟುಹೋಗುತ್ತಿದ್ದುವು. ಗ್ರಾಮೀಣಪ್ರಾಣಿಯೊಂದು ಮಾತ್ರ (ನಾಯಿ) ಆ ಮುನಿಯನ್ನು ಬಿಟ್ಟು ಹೋಗಲೇ ಇಲ್ಲ. ಅದು ಆ ಋಷಿಯ ಭಕ್ತನಾಗಿದ್ದಿತು. ಅವನಲ್ಲಿಯೇ ಅನುರಕ್ತವಾಗಿದ್ದಿತು. ಉಪವಾಸವನ್ನು ಮಾಡುತ್ತಿದ್ದುದರಿಂದ ಕೃಶವೂ ದುರ್ಬಲವೂ ಆಗಿದ್ದಿತು. ಅದೂ ಕೂಡ ಋಷಿಯಂತೆಯೇ ಫಲ-ಮೂಲ-ಜಲಗಳನ್ನೇ ಆಹಾರವನ್ನಾಗಿ ತೆಗೆದುಕೊಳ್ಳುತ್ತಿದ್ದಿತು. ಸರ್ವದಾ ಶಾಂತವಾಗಿರುತ್ತಿದ್ದು ಶಿಷ್ಟಪುರುಷರಂತೆ ಜೀವನವನ್ನು ನಿರ್ವಹಿಸುತ್ತಿದ್ದಿತು.

ಮಹಾಮತಿಯೇ! ಆ ಮಹರ್ಷಿಯ ಚರಣಕಮಲಗಳ ಸಮೀಪದಲ್ಲಿ ಸರ್ವದಾ ಕುಳಿತಿರುತ್ತಿದ್ದ ಆ ನಾಯಿಗೆ ತಾನೂ ಋಷಿಯಂತೆ ಮನುಷ್ಯನೇ ಎಂಬ ಭಾವನೆಯುಂಟಾಯಿತು. ಅಂತೆಯೇ ಅದು ಋಷಿಯ ಸ್ನೇಹಪಾಶ ದಿಂದ ಬಂಧಿಸಲ್ಪಟ್ಟಿತು.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಮಹಾಬಲಿಷ್ಠವಾಗಿದ್ದ, ರಕ್ತ ಭೋಜಿಯಾದ ಚಿರತೆಯೊಂದು ಅತ್ಯಂತಸಂತೋಷದಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳಲು–ಕ್ರೂರಕಾಲದಲ್ಲಿ ಬರುವ ಯಮರಾಜನಂತೆ–ಅಲ್ಲಿಗೆ ಬಂದಿತು. ಆ ಚಿರತೆಯು ಬಾರಿ-ಬಾರಿಗೂ ತನ್ನ ಕಟವಾಯಿಗಳನ್ನು ನೆಕ್ಕಿ ಕೊಳ್ಳುತ್ತಿದ್ದಿತು. ಬಾಯಾರಿಕೆಯಿಂದಲೂ ಹಸಿವಿನಿಂದಲೂ ಬಳಲಿದ್ದಿತು. ಕ್ಷಣ-ಕ್ಷಣಕ್ಕೂ ತನ್ನ ಬಾಲವನ್ನು ಅಪ್ಪಳಿಸುತ್ತಿದ್ದಿತು. ಬಾಯನ್ನು ತೆರೆದುಕೊಂಡಿದ್ದಿತು. ಋಷಿಯ ಬಳಿಯಲ್ಲಿದ್ದ ನಾಯಿಯ ಮಾಂಸವನ್ನು ಅದು ಆಶಿಸಿದ್ದಿತು. ಪ್ರಜಾನಾಥನೇ! ನರೇಶ್ವರನೇ! ಕ್ರೂರಿಯಾದ ಆ ಚಿರತೆಯು ಬರುತ್ತಿರುವುದನ್ನು ನೋಡಿ ತನ್ನ ಪ್ರಾಣಗಳನ್ನುಳಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಆ ನಾಯಿಯು ಮುನಿಯೊಡನೆ ಮಾತನಾಡಿತು. ಅದು ಏನು ಹೇಳಿತೆಂಬುದನ್ನು ಕೇಳು :

"ಭಗವನ್! ಈ ಚಿರತೆಯು ನಾಯಿಗಳಿಗೆ ಶತ್ರುವಾಗಿದೆ. ನನ್ನನ್ನು ಕೊಂದುಹಾಕಲು ಇಚ್ಛಿಸಿದೆ. ಮಹಾಮುನಿಯೇ! ನಿನ್ನ ವರಪ್ರಸಾದ ದಿಂದಾಗಿ ಈ ಚಿರತೆಯಿಂದ ನನಗೆ ಭಯವಾಗದಂತೆ ಮಾಡು. ನೀನು

ಸರ್ವಜ್ಞನಾಗಿರುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ"–ಎಂಬುದಾಗಿ ನಾಯಿಯು ಹೇಳಿತು.

ಸಕಲಪ್ರಾಣಿಗಳ ಮನೋಭಾವವನ್ನೂ–ಶಬ್ದಗಳ ಅರ್ಥವನ್ನೂ ತಿಳಿದಿದ್ದ, ಐಶ್ವರ್ಯಸಿದ್ಧಿಯಿಂದ ಸಂಪನ್ನನಾಗಿದ್ದ, ಭಾವಜ್ಞನಾದ ಆ ಋಷಿಯು ನಾಯಿಯ ಭಯದ ಕಾರಣವನ್ನು ತಿಳಿದುಕೊಂಡು ಅದನ್ನು ಆಶ್ವಾಸಿಸುತ್ತಾ ಹೇಳಿದನು :

"ಮಗು! ಮೃತ್ಯುರೂಪವಾಗಿರುವ ಈ ಚಿರತೆಗೆ ನೀನು ಯಾವುದೇ ಕಾರಣದಿಂದಲೂ ಭಯಪಡಬೇಕಾಗಿಲ್ಲ. ನೀನೀಗಲೇ ಈ ನಾಯಿಯ ರೂಪ ವನ್ನು ಬಿಟ್ಟು ಚಿರತೆಯೇ ಆಗುವೆ."

ಹೀಗೆ ಹೇಳಿದ ಋಷಿಯು ನಾಯಿಯನ್ನು ಚಿರತೆಯನ್ನಾಗಿ ಪರಿವರ್ತಿ ಸಿದನು. ಅದರ ಆಕೃತಿಯು ಸುವರ್ಣದಂತೆ ಥಳಥಳಿಸುತ್ತಿದ್ದಿತು. ಆ ಚಿರತೆಯು ಚಿತ್ರಿತವಾದ ಶರೀರವನ್ನು ಹೊಂದಿದ್ದಿತು. ಅದರ ಕೋರೆದಾಡೆ ಗಳು ಪ್ರಕಾಶಿಸುತ್ತಿದ್ದುವು. ಅಂತಹ ಘೋರಾಕೃತಿಯನ್ನು ಋಷಿಯ ವರಪ್ರಸಾದದಿಂದ ಹೊಂದಿದ ನಾಯಿಯು ನಿರ್ಭಯವಾಗಿ ಅರಣ್ಯದಲ್ಲಿ ಸಂಚರಿಸತೊಡಗಿತು. ತನ್ನಂತೆಯೇ ಇದ್ದ ಪ್ರಾಣಿಯನ್ನು ಕಂಡು ಚಿರತೆಯು ವಿರೋಧಭಾವವನ್ನು ಕ್ಷಣಮಾತ್ರದಲ್ಲಿ ತ್ಯಜಿಸಿ ಹೊರಟುಹೋಯಿತು. ಋಷಿಯ ಅನುಗ್ರಹದಿಂದ ಚಿರತೆಯಾಗಿ ಪರಿವರ್ತನೆಹೊಂದಿದ ನಾಯಿಯು ನಿರ್ಭಯವಾಗಿ ಅರಣ್ಯದಲ್ಲಿ ಸಂಚರಿಸುತ್ತಿರಲಾಗಿ ಒಮ್ಮೆ ಮಹಾಭಯಂಕರ ವಾಗಿದ್ದ, ಹಸಿವಿನಿಂದ ತೊಳಲುತ್ತಿದ್ದ, ಬಾಯ್ದೆರೆದಿದ್ದ, ಕಟವಾಯಿಗಳನ್ನು ನೆಕ್ಕುತ್ತಿದ್ದ ಹುಲಿಯೊಂದು ರಕ್ತಪಾನಮಾಡುವ ಆಕಾಂಕ್ಷೆಯಿಂದ ಚಿರತೆಯ ರೂಪದಲ್ಲಿದ್ದ ನಾಯಿಯ ಕಡೆಗೆ ಬಂದಿತು. ದೊಡ್ಡ-ದೊಡ್ಡ ಕೋರೆದಾಡೆ ಗಳನ್ನು ಹೊಂದಿದ್ದ, ಹಸಿವಿನಿಂದ ಬಾಡಿ ಹೋಗಿದ್ದ, ಅರಣ್ಯಚಾರಿ ಯಾದ ವ್ಯಾಘ್ರವು ತನ್ನ ಕಡೆಗೆ ಬರುತ್ತಿದ್ದುದನ್ನು ಕಂಡು ಚಿರತೆಯು ತನ್ನ ಜೀವಿತದ ರಕ್ಷಣಾರ್ಥವಾಗಿ ಪುನಃ ಋಷಿಯನ್ನೇ ಮರೆಹೊಕ್ಕಿತು. ಸಹ ವಾಸಜನಿತವಾದ ಉತ್ತಮಸ್ನೇಹವನ್ನು ಉಳಿಸಿಕೊಳ್ಳಬೇಕೆಂಬ ಕಾರಣದಿಂದ ಋಷಿಯು ಚಿರತೆಯನ್ನು ವ್ಯಾಘ್ರವನ್ನಾಗಿ ಪರಿವರ್ತಿಸಿದನು. ಚಿರತೆಯು

ವ್ಯಾಘ್ರದ ರೂಪವನ್ನು ಹೊಂದಿದನಂತರ ಶತ್ರುವಿಗಿಂತಲೂ ಅದು ಬಲಿಷ್ಠವಾಯಿತು. ಚಿರತೆಯಾಗಿದ್ದುದು ತನ್ನಂತೆಯೇ ವ್ಯಾಘ್ರವಾದುದನ್ನು ನೋಡಿ ಹುಲಿಯು ಅದನ್ನು ಸಂಹರಿಸಲು ಹೋಗಲಿಲ್ಲ. ನಾಯಿಯು ವ್ಯಾಘ್ರತ್ವವನ್ನು ಹೊಂದಿ ಬಲಿಷ್ಠವೂ, ಮಾಂಸಾಶಿಯೂ ಆಯಿತು. ಅನಂತರ ಅದಕ್ಕೆ ಫಲ-ಮೂಲಗಳನ್ನು ತಿನ್ನುವ ಇಚ್ಛೆಯೇ ಉಂಟಾಗಲಿಲ್ಲ. ಯಾವ ರೀತಿಯಲ್ಲಿ ಮೃಗಪತಿಯಾದ ಸಿಂಹವು ವನಚರಪ್ರಾಣಿಗಳ ಮಾಂಸವನ್ನು ತಿನ್ನಲು ಇಚ್ಛಿಸುತ್ತಿರುತ್ತದೆಯೋ–ಅದೇ ರೀತಿಯಲ್ಲಿ ವ್ಯಾಘ್ರವಾಗಿ ಪರಿವರ್ತಿತವಾಗಿದ್ದ ನಾಯಿಯೂ ಅನುದಿನವೂ ವನಚಾರಿಗಳಾದ ಪ್ರಾಣಿಗಳ ಮಾಂಸಕ್ಕಾಗಿ ಹಾತೊರೆಯುತ್ತಿದ್ದಿತು."

ದ೦ದ೬ನೆಯ ಅಧ್ಯಾಯವು ಮುಗಿಯಿತು.

೧೧೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ನಾಯಿಯು ಶರಭವಾಗಿ ಪರಿವರ್ತಿತವಾದನಂತರ ಋಷಿಯ ಶಾಪದಿಂದ ಪುನಃ ನಾಯಿಯ ರೂಪವನ್ನು ತಾಳಿದುದು

ಜನಮೇಜಯ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಆ ವ್ಯಾಘ್ರವು ತಾನು ಕೊಂದ ಪ್ರಾಣಿಗಳ ಮಾಂಸವನ್ನು ತಿಂದು ತೃಪ್ತಿಯನ್ನು ಹೊಂದಿ ಮಹರ್ಷಿಯ ಆಶ್ರಮದ ಸಮೀಪದಲ್ಲಿಯೇ ಒಂದು ದಿನ ಮಲಗಿದ್ದಿತು. ಅಷ್ಟರಲ್ಲಿಯೇ ಮೇಲೆದ್ದು ಬಂದ ಮೇಘದೋಪಾದಿಯಲ್ಲಿದ್ದ ಮದಿಸಿದ ಆನೆಯೊಂದು ಆ ಸ್ಥಳಕ್ಕೆ ಬಂದಿತು. ಅದರ ಗಂಡಸ್ಥಳದಿಂದ ಮದೋದಕವು ಹರಿಯುತ್ತಿದ್ದಿತು. ಕುಂಭಸ್ಥಳವು ವಿಶಾಲವಾಗಿದ್ದಿತು. ಕುಂಭದ ಮೇಲೆ ಕಮಲದ ಚಿಹ್ನೆಯಿದ್ದಿತು. ಸುಂದರವಾದ ಎರಡು ದಂತಗಳಿಂದಲೂ ದೊಡ್ಡದಾದ ಶರೀರದಿಂದಲೂ ಕೂಡಿದ್ದ ಆ ಆನೆಯು ಮೇಘದಂತೆ ಗಂಭೀರವಾಗಿ ಘೀಂಕರಿಸುತ್ತಿದ್ದಿತು. ಬಲದಿಂದ ಗರ್ವಿತವಾಗಿದ್ದ, ಮದಿಸಿದ್ದ ಆನೆಯು ಬರುತ್ತಿರುವುದನ್ನು ಕಂಡು ವ್ಯಾಘ್ರವು ಆನೆಯ ಭಯದಿಂದ ನಡುಗುತ್ತಾ ಪುನಃ ಋಷಿಯನ್ನೇ ಮರೆಹೊಕ್ಕಿತು. ನಾಯಿಯ ವಿಷಯದಲ್ಲಿ ಸ್ನೇಹಯುಕ್ತನಾಗಿದ್ದ ಋಷಿಯು ವ್ಯಾಘ್ರರೂಪದಲ್ಲಿದ್ದ ಅದನ್ನು ಆನೆಯನ್ನಾಗಿ ಪರಿವರ್ತಿಸಿದನು. ಮಹಾ

ಮೇಘಸದೃಶವಾಗಿದ್ದ ಆನೆಯು ತನ್ನ ಎದುರಿನಲ್ಲಿರುವುದನ್ನು ಕಂಡು ಅಲ್ಲಿಗೆ ಆಗಮಿಸಿದ್ದ ಆನೆಯು ಭಯಗೊಂಡು ಓಡಿಹೋಯಿತು. ಅನಂತರ ಮದಗಜದ ರೂಪದಲ್ಲಿದ್ದ ನಾಯಿಯು ಕಮಲಗಳ ಸಮೂಹಗಳಲ್ಲಿಯೂ, ಗಹನವಾದ ಸಲ್ಲಕೀಲತೆಗಳಿರುವ ಪ್ರದೇಶಗಳಲ್ಲಿಯೂ ನುಗ್ಗುತ್ತಾ ಕಮಲದ ಪರಾಗದಿಂದ ವಿಭೂಷಿತವಾಗಿ ಅತ್ಯಾನಂದದಿಂದ ಸಂಚರಿಸುತ್ತಿದ್ದಿತು. ಕೆಲವು ವೇಳೆ ಆ ಆನೆಯು ಆಶ್ರಮವಾಸಿಯಾಗಿದ್ದ ಋಷಿಯ ಮುಂಭಾಗದಲ್ಲಿಯೂ ಅಡ್ಡಾಡುತ್ತಿದ್ದಿತು. ಹೀಗೆಯೇ ಅನೇಕದಿನಗಳು ಕಳೆದುಹೋದುವು.

ಮತ್ತೊಮ್ಮೆ ಅದೇ ಸ್ಥಳಕ್ಕೆ ಸಿಂಹವೊಂದು ಆಗಮಿಸಿತು. ಅದರ ಕೂದಲುಗಳ ಬಣ್ಣವು ಎಣೆಗೆಂಪಾಗಿದ್ದಿತು. ಗಿರಿಯ ಕಂದರದಲ್ಲಿ ಹುಟ್ಟಿದ್ದ ಆ ಸಿಂಹವು ಬಹಳ ಭಯಂಕರವಾಗಿದ್ದಿತು. ಆನೆಗಳ ವಂಶವನ್ನೇ ನಿರ್ಮೂಲ ಮಾಡುವ ಸ್ವಭಾವವನ್ನು ಆ ಸಿಂಹವು ಹೊಂದಿದ್ದಿತು. ಅಂತಹ ಭಯಂಕರ ವಾದ ಸಿಂಹವು ತನ್ನ ಸಮೀಪಕ್ಕೆ ಬರುತ್ತಿರುವುದನ್ನು ನೋಡಿ ಸಿಂಹದ ಭಯದಿಂದ ಪೀಡಿತವಾದ ಆನೆಯು ಗಡ-ಗಡನೆ ನಡುಗುತ್ತಾ ಬಹಳ ಸಂಕಟ ದಿಂದ ಋಷಿಯನ್ನು ಶರಣುಹೊಂದಿತು. ನಾಯಿಯ ಮೇಲಿನ ವಾತ್ಸಲ್ಯ ದಿಂದಾಗಿ ಋಷಿಯು ಆನೆಯ ರೂಪದಲ್ಲಿದ್ದ ನಾಯಿಯನ್ನು ಸಿಂಹವನ್ನಾಗಿ ಪರಿವರ್ತಿಸಿದನು. ಸಿಂಹದ ರೂಪವನ್ನು ಹೊಂದಿದೊಡನೆಯೇ ಸಮಾನ ಜಾತಿಯ ಸಂಬಂಧದಿಂದಾಗಿ ತನ್ನ ಎದುರಿನಲ್ಲಿದ್ದ ಅರಣ್ಯದ ಸಿಂಹವನ್ನು ಅದು ಗಣನೆಗೇ ತೆಗೆದುಕೊಳ್ಳಲಿಲ್ಲ. ಅರಣ್ಯದ ಸಿಂಹವು ತನ್ನೆದುರಾಗಿದ್ದ ಸಿಂಹವನ್ನು ನೋಡಿ ಭಯಗೊಂಡು ಓಡಿಹೋಯಿತು. ಸಿಂಹದ ರೂಪವನ್ನು ಧರಿಸಿದ್ದ ನಾಯಿಯು ಮಹಾರಣ್ಯದಲ್ಲಿದ್ದ ಆ ಆಶ್ರಮದಲ್ಲಿಯೇ ವಾಸಮಾಡುತ್ತಿದ್ದಿತು. ಜೀವವನ್ನು ಉಳಿಸಿಕೊಳ್ಳುವ ಇಚ್ಛೆಯಿಂದಿದ್ದ, ಬಹಳ ಭಯಗೊಂಡಿದ್ದ ಎಲ್ಲ ಪ್ರಾಣಿಗಳೂ ಆ ಸಿಂಹದ ಕಾರಣದಿಂದಾಗಿ ತಪೋವನದ ಸಮೀಪದಲ್ಲಿ ಎಲ್ಲಿಯೂ ಕಾಣಿಸಿಕೊಳ್ಳುತ್ತಿರಲಿಲ್ಲ.

ಸ್ವಲ್ಪ ಕಾಲಾನಂತರ ಕಾಲಯೋಗದಿಂದ ಸಕಲಪ್ರಾಣಿಗಳನ್ನೂ ಹಿಂಸಿಸುವ ಸ್ವಭಾವದಿಂದ ಕೂಡಿದ್ದ, ಬಲಿಷ್ಠವಾದ, ರಕ್ತಾಹಾರಿಯಾದ, ಸರ್ವಪ್ರಾಣಿಗಳ ಮನಸ್ಸಿನಲ್ಲಿಯೂ ಭಯವನ್ನುಂಟುಮಾಡುವುದಾಗಿದ್ದ ವನಚಾರಿಯಾದ ಒಂದು ಶರಭವು ಅಲ್ಲಿಗೆ ಆಗಮಿಸಿತು. ಆ ಶರಭಕ್ಕೆ ಎಂಟು

ಕಾಲುಗಳಿದ್ದುವು. ಕಣ್ಣುಗಳು ಮೇಲ್ಮುಖವಾಗಿದ್ದುವು. ಶರಭವು ಅಲ್ಲಿದ್ದ ಸಿಂಹವನ್ನು ಸಂಹರಿಸುವ ಸಲುವಾಗಿ ಮುನಿಯ ಆಶ್ರಮಪ್ರದೇಶಕ್ಕೆ ಆಗಮಿಸಿತು. ಯಥಾಪೂರ್ವವಾಗಿ ಸಿಂಹದ ರೂಪದಲ್ಲಿದ್ದ ನಾಯಿಯು ಭಯಗೊಂಡು ಋಷಿಯನ್ನು ಮರೆಹೊಕ್ಕಿತು. ಕೃಪಾಳುವಾದ ಋಷಿಯು ಸಿಂಹದ ರೂಪದಲ್ಲಿದ್ದ ನಾಯಿಯನ್ನು ಉತ್ಕಟವಾದ ಬಲದಿಂದ ಕೂಡಿದ ಶರಭವನ್ನಾಗಿ ಪರಿವರ್ತಿಸಿದನು. ಅರಣ್ಯದ ಶರಭವು ತನ್ನ ಮುಂದೆ ನಿಂತಿದ್ದ, ಅತ್ಯುಗ್ರವಾಗಿಯೂ ಬಲಿಷ್ಠವಾಗಿಯೂ ಇದ್ದ, ಋಷಿಯ ಆಶ್ರಮದಲ್ಲಿದ್ದ ಶರಭವನ್ನು ನೋಡಿ ಬಹಳ ಬೇಗ ಆ ಅರಣ್ಯವನ್ನೇ ಬಿಟ್ಟು ಓಡಿ ಹೋಯಿತು. ಮುನಿಯಿಂದ ಶರಭದ ಸ್ಥಾನದಲ್ಲಿ ಪರಿವರ್ತಿತವಾದ ನಾಯಿಯು ನಿತ್ಯವೂ ಮುನಿಯ ಪಾರ್ಶ್ವದಲ್ಲಿಯೇ ಇರುತ್ತಾ ಸುಖವಾಗಿ ಕಾಲಕಳೆಯುತ್ತಿದ್ದಿತು. ಜೀವವನ್ನು ಉಳಿಸಿಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಆ ಅರಣ್ಯದ ಎಲ್ಲ ಪ್ರಾಣಿಗಳ ಸಮೂಹಗಳೂ ಮುನಿಯ ಬಳಿಯಲ್ಲಿದ್ದ ಶರಭದಿಂದ ಭಯಗೊಂಡುವುಗಳಾಗಿ ದಿಕ್ಕಾಪಾಲಾಗಿ ಓಡಿಹೋದುವು. ಋಷಿಯ ಶರಭವೂ ಪರಮಹೃಷ್ಟವಾಗಿ ಸರ್ವದಾ ಪ್ರಾಣಿಗಳ ವಧೆಯಲ್ಲಿಯೇ ನಿರತವಾಗಿರುತ್ತಿದ್ದಿತು. ಮಾಂಸಾಶಿಯಾಗಿದ್ದ ಆ ಶರಭವು ಫಲ-ಮೂಲಗಳನ್ನು ತಿನ್ನಲು ಇಚ್ಛಿಸುತ್ತಿರಲಿಲ್ಲ.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ರಕ್ತದಾಹದಿಂದ ಕೂಡಿದ್ದ, ಹುಟ್ಟಿನಿಂದ ನಾಯಿಯಾಗಿದ್ದ ಆ ಶರಭವು ಮುನಿಯ ವಿಷಯದಲ್ಲಿಯೇ ಕೃತಘ್ನತೆಯನ್ನು ಹೊಂದಿ ಆ ಮುನಿಯನ್ನೇ ಕೊಂದು ರಕ್ತಪಾನಮಾಡಲು ಇಚ್ಛಿಸಿತು. ಜ್ಞಾನನೇತ್ರದಿಂದ ಯುಕ್ತನಾಗಿದ್ದ ಆ ಮುನಿಯು ತನ್ನ ತಪಸ್ಸಿನ ಶಕ್ತಿಯಿಂದ ಶರಭದ ಮನೋಭಾವವನ್ನು ತಿಳಿದುಕೊಂಡನು. ಬಳಿಕ ಮಹಾಜ್ಞಾನಿಯಾದ ಆ ಮುನಿಯು ಶರಭರೂಪದಲ್ಲಿದ್ದ ನಾಯಿಯನ್ನು ಕುರಿತು ಹೇಳಿದನು :

"ನೀನು ಹಿಂದೆ ನಾಯಿಯಾಗಿದ್ದೆ. ನನ್ನ ಅನುಗ್ರಹದಿಂದ ಚಿರತೆಯಾದೆ. ಮುಂದೆ ವ್ಯಾಘ್ರರೂಪವನ್ನು ಹೊಂದಿದೆ. ವ್ಯಾಘ್ರರೂಪದಿಂದ ಆನೆಯಾದೆ. ಮದೋನ್ಮತ್ತವಾದ ಆನೆಯ ರೂಪದಲ್ಲಿದ್ದ ನೀನು ಸಿಂಹದ ರೂಪವನ್ನು ಹೊಂದಿದೆ. ಬಲಿಷ್ಠವಾದ ಸಿಂಹವಾಗಿದ್ದು ಅನಂತರ ಶರಭತ್ವವನ್ನು

ಹೊಂದಿದೆ. ನೀನು ನೀಚಕುಲದಲ್ಲಿ ಹುಟ್ಟಿದ್ದರೂ ನಿನ್ನೊಡನೆ ನಾನು ಅತಿಯಾದ ಸ್ನೇಹವನ್ನು ಬೆಳೆಸಿದ್ದರಿಂದ ನಿನ್ನನ್ನು ಪರಿತ್ಯಜಿಸಲಿಲ್ಲ. ನಿನ್ನ ವಿಷಯದಲ್ಲಿ ನನಗೆ ಪಾಪದ ಭಾವನೆಯೇ ಉಂಟಾಗಿರಲಿಲ್ಲ. ಹೀಗಿದ್ದರೂ ನೀನು ನನ್ನನ್ನೇ ಕಬಳಿಸಲು ಇಚ್ಛಿಸಿರುವೆ. ಆದುದರಿಂದ ಶ್ವಯೋನಿಯಲ್ಲಿಯೇ ಹುಟ್ಟಿರುವ ನೀನು ಪುನಃ ನಾಯಿಯಾಗಿಯೇ ಪರಿವರ್ತನೆ ಹೊಂದುವೆ."

ಯುಧಿಷ್ಠಿರ! ಮುನಿಯು ಹೀಗೆ ಶಪಿಸಿದೊಡನೆಯೇ ಮುನಿಜನದ್ರೋಹಿಯಾಗಿದ್ದ, ದುಷ್ಟವಾದ ಮನಸ್ಸನ್ನು ಹೊಂದಿದ್ದ, ನೀಚಸ್ವಭಾವದಿಂದ ಕೂಡಿದ್ದ, ಮೂರ್ಖತೆಯಿಂದ ಕೂಡಿದ್ದ ಶರಭವು ನಾಯಿಯಾಗಿ ಪರಿವರ್ತಿತವಾಯಿತು."

೧೧೭ನೆಯ ಅಧ್ಯಾಯವು ಮುಗಿಯಿತು.

೧೧೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜನ ಸೇವಕ-ಸಚಿವ-ಸೇನಾಪತಿಗಳ ವರ್ಣನೆ : ರಾಜನ ಉತ್ತಮಗುಣಗಳ ವರ್ಣನೆ ಮತ್ತು ಅದರಿಂದ ಆಗುವ ಲಾಭ

ಜನಮೇಜಯ! ಭೀಷ್ಮನು ಕಥೆಯನ್ನು ಮುಂದುವರಿಸಿ ಹೇಳುತ್ತಾನೆ :

"ಯುಧಿಷ್ಠಿರ ಪೂರ್ವಸ್ವರೂಪವನ್ನು ಪಡೆದ ಆ ನಾಯಿಯು ಅತ್ಯಂತ ದೀನಭಾವವನ್ನು ಹೊಂದಿತು. ಋಷಿಯು ಹೂಂಕರಿಸಿ ಆ ಪಾಪಿಷ್ಠವಾದ ನಾಯಿಯನ್ನು ತಪೋವನದಿಂದ ಹೊರಗಟ್ಟಿಬಿಟ್ಟನು.

ಏವಂ ರಾಜ್ಞಾ ಮತಿಮತಾ ವಿದಿತ್ವಾ ಸತ್ಯಶೌಚತಾಮ್ ।
ಆರ್ಜವಂ ಪ್ರಕೃತಿಂ ಸತ್ಯಂ ಶ್ರುತಂ ವೃತ್ತಂ ಕುಲಂ ದಮಮ್ ॥೨॥

ಅನುಕ್ರೋಶಂ ಬಲಂ ವೀರ್ಯಂ ಪ್ರಭಾವಂ ಪ್ರಶ್ರಯಂ ಕ್ಷಮಾಮ್ ।
ಭೃತ್ಯಾ ಯೇ ಯತ್ರ ಯೋಗ್ಯಾಃ ಸ್ಯುಸ್ತತ್ರ ಸ್ಥಾಪ್ಯಾಃ ಸುರಕ್ಷಿತಾಃ ॥೩॥

ಹೀಗೆ ಬುದ್ಧಿವಂತನಾದ ರಾಜನು ಮೊದಲು ತನ್ನ ಸೇವಕರಲ್ಲಿರುವ ಸತ್ಯನಿಷ್ಠೆ, ಶುಚಿತ್ವ, ಸರಳತೆ, ಸ್ವಭಾವ, ಶಾಸ್ತ್ರಜ್ಞಾನ, ಸದಾಚಾರ, ಕುಲೀನತೆ, ಜಿತೇಂದ್ರಿಯತೆ, ದಯೆ, ಬಲ, ಪರಾಕ್ರಮ, ಪ್ರಭಾವ, ವಿನಯ, ಕ್ಷಮೆ–

ಇವುಗಳನ್ನು ಚೆನ್ನಾಗಿ ಪರೀಕ್ಷಿಸಿ ತಿಳಿದುಕೊಂಡು ಅವರು ಯಾವ ಯಾವ ಸ್ಥಾನಗಳಿಗೆ ಯೋಗ್ಯರೋ–ಆಯಾಯ ಸ್ಥಾನಗಳಲ್ಲಿಯೇ ಅವರನ್ನು ನಿಯಮಿಸಿಕೊಳ್ಳಬೇಕು. ಅವರು ಸುರಕ್ಷಿತರಾಗಿರುವಂತೆ ವ್ಯವಸ್ಥೆಯನ್ನು ಮಾಡಬೇಕು.

ನಾಪರೀಕ್ಷ್ಯ ಮಹೀಪಾಲಃ ಸಚಿವಂ ಕರ್ತುಮರ್ಹತಿ ।
ಅಕುಲೀನನರಾಕೀರ್ಣೋ ನ ರಾಜಾ ಸುಖಮೇಧತೇ ॥೪॥

ರಾಜನು ಪರೀಕ್ಷೆಮಾಡದೇ ಯಾರನ್ನೂ ಮಂತ್ರಿಯನ್ನಾಗಿ ಮಾಡಿಕೊಳ್ಳಬಾರದು. ಸತ್ಕುಲಪ್ರಸೂತರಲ್ಲದ ಮನುಷ್ಯರಿಂದ ಸಮಾಕೀರ್ಣನಾದ ರಾಜನು ಸುಖವನ್ನು ಹೊಂದುವುದಿಲ್ಲ.

ಕುಲಜಃ ಪ್ರಾಕೃತೋ ರಾಜ್ಞಾ ಸ್ವಕುಲೀನತಯಾ ಸದಾ ।
ನ ಪಾಪೇ ಕುರುತೇ ಬುದ್ಧಿಂ ಭಿದ್ಯಮಾನೋಽಪ್ಯನಾಗಸಿ ॥೫॥

ಸತ್ಕುಲಪ್ರಸೂತನಾದ ಮನುಷ್ಯನು–ಯಾವ ಅಪರಾಧವೂ ಇಲ್ಲದೇ ರಾಜನಿಂದ ತಿರಸ್ಕೃತನಾದರೂ–ತನ್ನ ಸತ್ಕುಲೀನತೆಯಿಂದ ರಾಜನಿಗೆ ಮನಸ್ಸಿನಿಂದಲೂ ಅನಿಷ್ಟವನ್ನು ಆಶಿಸುವುದಿಲ್ಲ.

ಅಕುಲೀನಸ್ತು ಪುರುಷಃ ಪ್ರಾಕೃತಃ ಸಾಧುಸಂಶ್ರಯಾತ್ ।
ದುರ್ಲಭೈಶ್ವರ್ಯತಾಂ ಪ್ರಾಪ್ತೋ ನಿನ್ದಿತಃ ಶತ್ರುತಾಂ ವ್ರಜೇತ್ ॥೬॥

ಆದರೆ ನೀಚಕುಲದಲ್ಲಿ ಹುಟ್ಟಿದ ಸಾಧಾರಣಮನುಷ್ಯನು ಸಾಧುಸ್ವಭಾವದ ರಾಜನನ್ನು ಆಶ್ರಯಿಸಿ ದುರ್ಲಭವಾದ ಐಶ್ವರ್ಯವನ್ನು ಪಡೆದರೂ ರಾಜನೇನಾದರೂ ಯಾವುದಾದರೂ ಕಾರಣದಿಂದ ನಿಂದಿಸಿದರೆ ಶತ್ರುತ್ವವನ್ನೇ ಹೊಂದುತ್ತಾನೆ.

ಕುಲೀನಂ ಶಿಕ್ಷಿತಂ ಪ್ರಾಜ್ಞಂ ಜ್ಞಾನವಿಜ್ಞಾನಪಾರಗಮ್ ।
ಸರ್ವಶಾಸ್ತ್ರಾರ್ಥತತ್ತ್ವಜ್ಞಂ ಸಹಿಷ್ಣುಂ ದೇಶಜಂ ತಥಾ ॥೭॥
ಕೃತಜ್ಞಂ ಬಲವನ್ತಂ ಚ ಕ್ಷಾನ್ತಂ ದಾನ್ತಂ ಜಿತೇನ್ದ್ರಿಯಮ್ ।
ಅಲುಬ್ಧಂ ಲಬ್ಧಸಂತುಷ್ಟಂ ಸ್ವಾಮಿಮಿತ್ರಬುಭೂಷಕಮ್ ॥೮॥
ಸಚಿವಂ ದೇಶಕಾಲಜ್ಞಂ ಸತ್ತ್ವಸಂಗ್ರಹಣೇ ರತಮ್ ।
ಸತತಂ ಯುಕ್ತಮನಸಂ ಹಿತೈಷಿಣಮತನ್ದ್ರಿತಮ್ ॥೯॥

ಯುಕ್ತಚಾರಂ ಸ್ವವಿಷಯೇ ಸಂಧಿವಿಗ್ರಹಕೋವಿದಮ್ ।
ರಾಜ್ಞಸ್ತ್ರಿವರ್ಗವೇತ್ತಾರಂ ಪೌರಜಾನಪದಪ್ರಿಯಮ್ ॥೧೦॥

ಖಾತಕವ್ಯೂಹತತ್ತ್ವಜ್ಞಂ ಬಲಹರ್ಷಣಕೋವಿದಮ್ ।
ಇಙ್ಗಿತಾಕಾರತತ್ತ್ವಜ್ಞಂ ಯಾತ್ರಾಜ್ಞಾನವಿಶಾರದಮ್ ॥೧೧॥

ಹಸ್ತಿಶಿಕ್ಷಾಸು ತತ್ತ್ವಜ್ಞಮಹಂಕಾರವಿವರ್ಜಿತಮ್ ।
ಪ್ರಗಲ್ಭಂ ದಕ್ಷಿಣಂ ದಾನ್ತಂ ಬಲಿನಂ ಯುಕ್ತಕಾರಿಣಮ್ ॥೧೨॥

ಚೌಕ್ಷಂ ಚೌಕ್ಷಜನಾಕೀರ್ಣಂ ಸುಮುಖಂ ಸುಖದರ್ಶನಮ್ ।
ನಾಯಕಂ ನೀತಿಕುಶಲಂ ಗುಣಚೇಷ್ಟಾಸಮನ್ವಿತಮ್ ॥೧೩॥

ಅಸ್ತಬ್ಧಂ ಪ್ರಶ್ರಿತಂ ಶ್ಲಕ್ಷ್ಣಂ ಮೃದುವಾದಿನಮೇವ ಚ ।
ಧೀರಂ ಶೂರಂ ಮಹರ್ಧಿಂ ಚ ದೇಶಕಾಲೋಪಪಾದಕಮ್ ॥೧೪॥

ಸಚಿವಂ ಯಃ ಪ್ರಕುರುತೇ ನ ಚೈನಮವಮನ್ಯತೇ ।
ತಸ್ಯ ವಿಸ್ತೀರ್ಯತೇ ರಾಜ್ಯಂ ಜ್ಯೋತ್ಸ್ನಾ ಗ್ರಹಪತೇರಿವ ॥೧೫॥

ಸತ್ಕುಲಪ್ರಸೂತನನ್ನೂ, ಸುಶಿಕ್ಷಿತನನ್ನೂ, ವಿದ್ವಾಂಸನನ್ನೂ, ಜ್ಞಾನ-ವಿಜ್ಞಾನಪಾರಂಗತನನ್ನೂ, ಸರ್ವಶಾಸ್ತ್ರಗಳ ತತ್ತ್ವಾರ್ಥಗಳನ್ನು ತಿಳಿದಿರ ತಕ್ಕವನನ್ನೂ, ಸಹನಶೀಲನನ್ನೂ, ದೇಶೀಯನನ್ನೂ, ಮಾಡಿದ ಉಪಕಾರ ವನ್ನು ಸ್ಮರಿಸುವವನನ್ನೂ, ಬಲಿಷ್ಠನಾದವನನ್ನೂ, ಕ್ಷಮಾಶೀಲನನ್ನೂ, ಅಂತರಿಂದ್ರಿಯಗಳನ್ನೂ ಮತ್ತು ಬಹಿರಿಂದ್ರಿಯಗಳನ್ನೂ ನಿಗ್ರಹಿಸಿರುವ ವನನ್ನೂ, ಲೋಭಿಯಲ್ಲದವನನ್ನೂ, ಯದೃಚ್ಛಾಲಾಭಸಂತುಷ್ಟನನ್ನೂ, ಸ್ವಾಮಿಗೂ ಸ್ವಾಮಿಯ ಮಿತ್ರರಿಗೂ ಔನ್ನತ್ಯವನ್ನು ಬಯಸುವವನನ್ನೂ, ದೇಶ-ಕಾಲಜ್ಞನನ್ನೂ, ಸತ್ಪುರುಷರ ಸಂಗ್ರಹದಲ್ಲಿ ನಿರತನಾದವನನ್ನೂ, ಸರ್ವಕಾಲದಲ್ಲಿಯೂ ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವನನ್ನೂ, ಸ್ವಾಮಿಗೆ ಹಿತೈಷಿಯಾದವನನ್ನೂ, ಆಲಸ್ಯರಹಿತನಾದವನನ್ನೂ, ತನ್ನ ದೇಶದಲ್ಲಿ ಗುಪ್ತಚಾರರನ್ನು ಎಲ್ಲಿ?–ಹೇಗೆ?–ನಿಯಮಿಸಬೇಕೆಂಬುದನ್ನು ತಿಳಿದುಕೊಂಡಿರುವವನನ್ನೂ, ಸಂಧಿ-ವಿಗ್ರಹಾದಿ ಷಡ್ವರ್ಗಗಳ ಪ್ರಯೋಗ ದಲ್ಲಿ ಕುಶಲನಾಗಿರುವವನನ್ನೂ, ರಾಜನ ಕ್ಷಯ-ಸ್ಥಾನ ಮತ್ತು ವೃದ್ಧಿಗಳೆಂಬ ತ್ರಿವರ್ಗಗಳನ್ನು ತಿಳಿದಿರುವವನನ್ನೂ, ನಗರಗಳಲ್ಲಿ ವಾಸಮಾಡುವ ಜನರಿಗೆ

ಪ್ರಿಯನಾದವನನ್ನೂ, ಕಂದಕಗಳನ್ನೂ–ಸುರಂಗಗಳನ್ನೂ ತೋಡಿಸುವುದರಲ್ಲಿ ಮತ್ತು ಶತ್ರುಗಳನ್ನು ನಾಶಪಡಿಸುವ ಸೈನ್ಯವ್ಯೂಹರಚನೆಯಲ್ಲಿ ಕುಶಲನಾದವನನ್ನೂ, ತನ್ನ ಸೈನ್ಯವನ್ನು ಪ್ರೋತ್ಸಾಹಿಸುವುದರಲ್ಲಿ ಕುಶಲ ನಾದವನನ್ನೂ, ಅಂಗಚೇಷ್ಟೆಗಳನ್ನೂ–ಮುಖಭಾವವನ್ನೂ ನೋಡು ವುದರಿಂದಲೇ ಮನಸ್ಸಿನ ಭಾವನೆಯೇನೆಂಬುದನ್ನು ತಿಳಿಯುವ ಸಾಮರ್ಥ್ಯ ವಿರುವವನನ್ನೂ, ಶತ್ರುಗಳ ಮೇಲೆ ಯಾವಾಗ ದಂಡೆತ್ತಿ ಹೋಗಬೇಕೆಂಬು ದನ್ನು ತಿಳಿದಿರುವ ಕುಶಲಮತಿಯನ್ನೂ, ಗಜಶಿಕ್ಷಣದ ಯಥಾರ್ಥತತ್ತ್ವವನ್ನು ತಿಳಿದಿರುವವನನ್ನೂ, ನಿರಹಂಕಾರಿಯನ್ನೂ, ಭಯರಹಿತನನ್ನೂ, ಉದಾರಿಯನ್ನೂ, ಸಂಯಮಿಯನ್ನೂ, ಬಲಿಷ್ಠನನ್ನೂ, ಉಚಿತವಾದ ಕಾರ್ಯಗಳನ್ನೇ ಮಾಡುವವನನ್ನೂ, ಪರಿಶುದ್ಧನನ್ನೂ, ಶುದ್ಧಜನರಿಂದಲೇ ಪರಿವೃತನಾದವನನ್ನೂ, ಪ್ರಸನ್ನವಾದ ಮುಖಭಾವದಿಂದ ಕೂಡಿರುವ ವನನ್ನೂ, ಪ್ರಿಯದರ್ಶನನನ್ನೂ, ನಾಯಕನಾಗಲು ಸಮರ್ಥನಾದವನನ್ನೂ, ನೀತಿಕುಶಲನನ್ನೂ, ಶ್ರೇಷ್ಠಗುಣಗಳಿಂದಲೂ–ಉತ್ತಮವಾದ ಚೇಷ್ಟೆ ಗಳಿಂದಲೂ (ವ್ಯವಹಾರಗಳಿಂದಲೂ) ದಕ್ಷನಾಗಿರುವವನನ್ನೂ, ಉದ್ಧತ ನಲ್ಲದವನನ್ನೂ, ವಿನಯಶೀಲನನ್ನೂ, ಸ್ನೇಹಪರನನ್ನೂ, ಮೃದುಭಾಷಿ ಯನ್ನೂ, ಧೀರನನ್ನೂ, ಶೂರನನ್ನೂ, ಮಹೈಶ್ವರ್ಯಸಂಪನ್ನನನ್ನೂ, ದೇಶ-ಕಾಲಗಳನ್ನು ಅನುಸರಿಸಿ ಕಾರ್ಯಮಾಡುವವನನ್ನೂ–ಯಾವ ರಾಜನು ಮಂತ್ರಿಯನ್ನಾಗಿ ಮಾಡಿಕೊಳ್ಳುವನೋ ಮತ್ತು ಯಾವುದೇ ಕಾರಣದಿಂದಲೂ ಅಂತಹ ಮಂತ್ರಿಯನ್ನು ಅನಾದರಣೆ ಮಾಡುವುದಿಲ್ಲವೋ ಅಂತಹವನ ರಾಜ್ಯವು–ಗ್ರಹಪತಿಯಾದ ಚಂದ್ರನ ಬೆಳದಿಂಗಳಿನಂತೆ–ನಾಲ್ಕು ದಿಕ್ಕುಗಳಲ್ಲಿಯೂ ವಿಸ್ತೃತವಾಗುತ್ತದೆ.

ರಾಜನೂ ಕೂಡ ಇದೇ ವಿಧವಾದ ಗುಣಗಳಿಂದ ಯುಕ್ತನಾಗಿರಬೇಕು. ಶಾಸ್ತ್ರವಿಶಾರದನಾಗಿರಬೇಕು. ಧರ್ಮಪರಾಯಣನಾಗಿರಬೇಕು. ಪ್ರಜಾ ಪಾಲನ ತತ್ಪರನಾಗಿರಬೇಕು. ಇಂತಹ ರಾಜನು ಪ್ರಜೆಗಳಿಗೆ ಬೇಕಾದವ ನಾಗುತ್ತಾನೆ.

ಧೀರೋ ಮರ್ಷೀ ಶುಚಿಸ್ತೀಕ್ಷ್ಣಃ ಕಾಲೇ ಪುರುಷಕಾರವಿತ್ ।
ಶುಶ್ರೂಷುಃ ಶ್ರುತವಾಞ್ಶ್ರೋತಾ ಊಹಾಪೋಹವಿಶಾರದಃ ॥೧೭॥

ಮೇಧಾವೀ ಧಾರಣಾಯುಕ್ತೋ ಯಥಾ ನ್ಯಾಯೋಪಪಾದಕಃ ।
ದಾನ್ತಃ ಸದಾ ಪ್ರಿಯಾಭಾಷೀ ಕ್ಷಮಾವಾಂಶ್ಚ ವಿಪರ್ಯಯೇ ॥೧೮॥

ದಾನಾಚ್ಛೇದೇ ಸ್ವಯಂಕಾರೀ ಶ್ರದ್ಧಾಲುಃ ಸುಖದರ್ಶನಃ ।
ಆರ್ತಹಸ್ತಪ್ರದೋ ನಿತ್ಯಮಾಪ್ತಾಮಾತ್ಯೋ ನಯೇ ರತಃ ॥೧೯॥

ನಾಹಂವಾದೀ ನ ನಿರ್ದ್ವನ್ದ್ವೋ ನ ಯತ್ಕಿಂಚನಕಾರಕಃ ।
ಕೃತೇ ಕರ್ಮಣ್ಯಮಾತ್ಯಾನಾಂ ಕರ್ತಾ ಭೃತ್ಯಜನಪ್ರಿಯಃ ॥೨೦॥

ಸಂಗೃಹೀತಜನೋಽಸ್ತಬ್ಧಃ ಪ್ರಸನ್ನವದನಃ ಸದಾ ।
ಸದಾ ಭೃತ್ಯಜನಾಪೇಕ್ಷೀ ನ ಕ್ರೋಧೀ ಸುಮಹಾಮನಾಃ ॥೨೧॥

ಯುಕ್ತದಣ್ಡೋ ನ ನಿರ್ದಣ್ಡೋ ಧರ್ಮಕಾರ್ಯಾನುಶಾಸನಃ ।
ಚಾರನೇತ್ರಃ ಪ್ರಜಾಪೇಕ್ಷೀ ಧರ್ಮಾರ್ಥಕುಶಲಃ ಸದಾ ।
ರಾಜಾ ಗುಣಶತಾಕೀರ್ಣ ಏಷ್ಟವ್ಯಸ್ತಾದೃಶೋ ಭವೇತ್ ॥೨೨॥

ರಾಜನು ಧೀರನಾಗಿರಬೇಕು. ಕ್ಷಮಾಶೀಲನಾಗಿರಬೇಕು. ಪರಿಶುದ್ಧನಾಗಿರಬೇಕು. ಸಮಯಗಳಲ್ಲಿ ತೀಕ್ಷ್ಣನಾಗಿರಬೇಕು. ಯೋಗ್ಯಸಮಯದಲ್ಲಿ ಪುರುಷಪ್ರಯತ್ನವನ್ನು ಮಾಡುವುದನ್ನು ತಿಳಿದವನಾಗಿರಬೇಕು. ಹಿರಿಯರು ಹೇಳುವುದನ್ನು ಕೇಳುವ ಸ್ವಭಾವದವನಾಗಿರಬೇಕು. ವೇದಜ್ಞನಾಗಿರಬೇಕು. ಹಿತವಚನಗಳನ್ನು ಕೇಳುವವನಾಗಿರಬೇಕು. ತರ್ಕ-ವಿತರ್ಕಗಳಲ್ಲಿ ಕುಶಲನಾಗಿರಬೇಕು. ಮೇಧಾವಿಯಾಗಿರಬೇಕು. ಧಾರಣಾಶಕ್ತಿಯಿಂದ ಸಂಪನ್ನನಾಗಿರಬೇಕು. ನ್ಯಾಯಾನುಸಾರಿಯಾದ ಕಾರ್ಯಗಳನ್ನು ಮಾಡುವವನಾಗಿರಬೇಕು. ಇಂದ್ರಿಯಗಳನ್ನು ನಿಗ್ರಹಿಸಿದವನಾಗಿರಬೇಕು. ಸರ್ವದಾ ಪ್ರಿಯವಾದ ಮಾತುಗಳನ್ನೇ ಆಡುತ್ತಿರಬೇಕು. ಶತ್ರುಗಳ ವಿಷಯದಲ್ಲಿಯೂ ಕ್ಷಮಾವಂತನಾಗಿರಬೇಕು. ಯೋಗ್ಯನಿಗೆ ದಾನಕೊಡುವ ವಿಷಯದಲ್ಲಿ ಅಡ್ಡಿಯುಂಟಾದರೆ ತಾನೇ ದಾನವನ್ನು ಕೊಡಿಸುವವನಾಗಿರಬೇಕು. ಶ್ರದ್ಧಾಳುವಾಗಿರಬೇಕು. ದರ್ಶನಮಾತ್ರದಿಂದಲೇ ಸುಖವನ್ನುಂಟುಮಾಡುವವನಾಗಬೇಕು. ದೀನರಿಗೂ–ದುಃಖಿಗಳಿಗೂ ಸರ್ವದಾ ಹಸ್ತಾವಲಂಬನವನ್ನು ಕೊಡುವವನಾಗಿರಬೇಕು. ವಿಶ್ವಸನೀಯರಾದ ಮಂತ್ರಿಗಳಿಂದ ಯುಕ್ತನಾಗಿರಬೇಕು. ನೀತಿಪರಾಯಣನಾಗಿರಬೇಕು. ಅಹಂಕಾರವನ್ನು ವರ್ಜಿಸಿದವ

ನಾಗಿರಬೇಕು, ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ಪ್ರಭಾವಿತನಾಗದೇ ಇರುವವನಾಗಿರಬೇಕು. ಮಂತ್ರಿಗಳು ಮಾಡಿದ ಕಾರ್ಯಕ್ಕೆ ಅನುಮತಿಯನ್ನು ನೀಡುವವನಾಗಿರಬೇಕು. ಸೇವಕಜನರಿಗೆ ಪ್ರಿಯನಾಗಿರಬೇಕು. ಸತ್ಪುರುಷರ ಸಂಗ್ರಹಶೀಲನಾಗಿರಬೇಕು. ಜಡಸ್ವಭಾವವನ್ನು ತ್ಯಾಗಮಾಡಿದವನಾಗಿರಬೇಕು. ಸರ್ವಕಾಲದಲ್ಲಿಯೂ ಪ್ರಸನ್ನವದನನಾಗಿರಬೇಕು. ಭೃತ್ಯಜನರನ್ನು ಅಪೇಕ್ಷಿಸುವವನಾಗಿರಬೇಕು. ಕ್ರೋಧರಹಿತನಾಗಿರಬೇಕು. ವಿಶಾಲಹೃದಯನಾಗಿರಬೇಕು. ನ್ಯಾಯೋಚಿತವಾದ ರೀತಿಯಲ್ಲಿ ಶಿಕ್ಷಿಸುವವನಾಗಿರಬೇಕು. ದಂಡನೀತಿಯನ್ನು ಯಾವಾಗಲೂ ತ್ಯಾಗಮಾಡದೇ ಇರುವವನಾಗಿರಬೇಕು. ಧರ್ಮಕಾರ್ಯಗಳನ್ನು ಮಾಡಲು ಅನುಶಾಸನಮಾಡುವವನಾಗಿರಬೇಕು. ಚಾರರ ಮೂಲಕವಾಗಿ ರಾಜ್ಯದ ಪರಿಸ್ಥಿತಿಯನ್ನು ತಿಳಿದುಕೊಳ್ಳುವವನಾಗಿರಬೇಕು. ಪ್ರಜೆಗಳ ಮೇಲೆ ಕೃಪಾದೃಷ್ಟಿಯುಳ್ಳವನಾಗಿರಬೇಕು. ಧರ್ಮಾರ್ಥಗಳ ಉಪಾರ್ಜನೆಯಲ್ಲಿ ಕುಶಲನಾಗಿರಬೇಕು. ಹೀಗೆ ನೂರಾರು ಸದ್ಗುಣಗಳಿಂದ ಸಂಪನ್ನನಾದ ರಾಜನು ಪ್ರಜೆಗಳಿಗೆ ಬೇಕಾದವನಾಗುತ್ತಾನೆ.

ಯೋಧಾಶ್ಚೈವ ಮನುಷ್ಯೇನ್ದ್ರ ಸರ್ವೇ ಗುಣಗಣೈರ್ವೃತಾಃ ।
ಅನ್ವೇಷ್ಟವ್ಯಾಃ ಸುಪುರುಷಾಃ ಸಹಾಯಾ ರಾಜ್ಯಧಾರಣೇ ।
ನ ವಿಮಾನಯಿತವ್ಯಾಸ್ತೇ ರಾಜ್ಞಾ ವೃದ್ಧಿಮಭೀಪ್ಸತಾ ॥೨೪॥

ಯುಧಿಷ್ಠಿರ! ರಾಜ್ಯದ ರಕ್ಷಣೆಯಲ್ಲಿ ಸಹಾಯಮಾಡುವ ಸಮಸ್ತ ಸೈನಿಕರೂ ಹೀಗೆಯೇ ಸಕಲಸದ್ಗುಣಸಂಪನ್ನರಾಗಿರಬೇಕು. ರಾಜ್ಯದ ಧಾರಣೆಗಾಗಿ (ಪರಿಪಾಲನೆಗಾಗಿ) ಒಳ್ಳೆಯ ಪುರುಷರನ್ನೇ ಹುಡುಕಿ ತಂದು ನಿಯಮಿಸಿಕೊಳ್ಳಬೇಕು. ಅಭಿವೃದ್ಧಿಯನ್ನು ಅಪೇಕ್ಷಿಸುವ ರಾಜನು ಸೈನಿಕರನ್ನೆಂದಿಗೂ ಅವಮಾನಗೊಳಿಸಬಾರದು.

ಯೋಧಾಃ ಸಮರಶೌಟೀರಾಃ ಕೃತಜ್ಞಾಃ ಶಸ್ತ್ರಕೋವಿದಾಃ ।
ಧರ್ಮಶಾಸ್ತ್ರಸಮಾಯುಕ್ತಾಃ ಪದಾತಿಜನಸಂವೃತಾಃ ॥೨೫॥

ಅಭಯಾ ಗಜಪೃಷ್ಠಸ್ಥಾ ರಥಚರ್ಯಾವಿಶಾರದಾಃ ।
ಇಷ್ವಸ್ತ್ರಕುಶಲಾ ಯಸ್ಯ ತಸ್ಯೇಯಂ ನೃಪತೇರ್ಮಹೀ ॥೨೬॥

ಯೋಧರು ಯುದ್ಧದಲ್ಲಿ ಶೌರ್ಯವನ್ನು ತೋರಿಸುವವರಾಗಿರಬೇಕು. ಕೃತಜ್ಞರಾಗಿರಬೇಕು. ಶಸ್ತ್ರಪ್ರಹಾರದಲ್ಲಿ ಕುಶಲರಾಗಿರಬೇಕು. ಧರ್ಮಶಾಸ್ತ್ರ ಜ್ಞಾನದಿಂದ ಸಂಪನ್ನರಾಗಿರಬೇಕು. ಪದಾತಿಸೈನಿಕರಿಂದ ಪರಿವೃತರಾಗಿರ ಬೇಕು. ನಿರ್ಭಯರಾಗಿರಬೇಕು. ಆನೆಯ ಮೇಲೆ ಕುಳಿತು ಯುದ್ಧಮಾಡು ವುದರಲ್ಲಿ ಸಮರ್ಥರಾಗಿರಬೇಕು. ರಥಸಂಚಾಲನೆಯಲ್ಲಿ ನಿಪುಣರಾಗಿರ ಬೇಕು. ಬಾಣಗಳನ್ನು ಬಿಡುವುದರಲ್ಲಿಯೂ ಅಸ್ತ್ರಗಳನ್ನು ಅಭಿಮಂತ್ರಿಸಿ ಬಿಡುವುದರಲ್ಲಿಯೂ ಕುಶಲರಾಗಿರಬೇಕು. ಇಂತಹ ಶುದ್ಧಚಾರಿತ್ರ್ಯವನ್ನು ಹೊಂದಿರುವ ಸೈನಿಕರು ಯಾವ ರಾಜನ ಅಧೀನರಾಗಿರುವರೋ–ಅಂತಹ ರಾಜನ ಅಧೀನದಲ್ಲಿಯೇ ಈ ಭೂಮಂಡಲವಿರುತ್ತದೆ.

ಸರ್ವಸಂಗ್ರಹಣೇ ಯುಕ್ತೋ ನೃಪೋ ಭವತಿ ಯಃ ಸದಾ ।
ಉತ್ಥಾನಶೀಲೋ ಮಿತ್ರಾಢ್ಯಃ ಸ ರಾಜಾ ರಾಜಸತ್ತಮಃ ॥೨೭॥

ಯಾವ ರಾಜನು ಸರ್ವದಾ ಪ್ರಜಾಸಂಗ್ರಹದಲ್ಲಿಯೇ ತತ್ಪರನಾಗಿರು ವನೋ, ಉದ್ಯೋಗಶೀಲನಾಗಿರುವನೋ, ಮಿತ್ರಸಂಪತ್ತಿಯನ್ನು ಹೊಂದಿರು ವನೋ–ಅಂತಹ ರಾಜನು ರಾಜರಲ್ಲಿಯೇ ಶ್ರೇಷ್ಠನಾದವನು.

ಶಕ್ಯಾ ಚಾಶ್ವಸಹಸ್ರೇಣ ವೀರಾರೋಹೇಣ ಭಾರತ ।
ಸಂಗೃಹೀತಮನುಷ್ಯೇಣ ಕೃತ್ಸ್ನಾ ಜೇತುಂ ವಸುನ್ಧರಾ ॥೨೮॥

ಯಾವ ರಾಜನು ಮೇಲೆ ಹೇಳಿದಂತೆ ಗುಣಸಂಪನ್ನರಾದ ಮಂತ್ರಿ ಗಳನ್ನೂ ಸೈನಿಕರನ್ನೂ ಸಂಗ್ರಹಿಸಿಕೊಂಡಿರುವನೋ–ಅಂತಹ ರಾಜನು ಒಂದೇ ಒಂದು ಸಾವಿರ ಅಶ್ವಸೈನಿಕರ ಬೆಂಬಲದಿಂದ ಅಖಂಡಭೂಮಂಡಲವನ್ನೇ ಜಯಿಸಬಲ್ಲನು.”

ಒಂದುನೂರಹದಿನೆಂಟನೆಯ ಅಧ್ಯಾಯವು ಮುಗಿಯಿತು.

ಸೇವಕರನ್ನು ಯಥಾಯೋಗ್ಯವಾದ ಸ್ಥಾನಗಳಲ್ಲಿ ನಿಯಮಿಸಲು, ಕುಲೀನರನ್ನೂ-ಸತ್ಪುರುಷರನ್ನೂ ಸಂಗ್ರಹಿಸಲು, ಬೊಕ್ಕಸವನ್ನು ವೃದ್ಧಿಪಡಿಸಲು, ಎಲ್ಲರ ಯೋಗ-ಕ್ಷೇಮಗಳನ್ನೂ ನೋಡಿಕೊಳ್ಳಲು ರಾಜನಿಗೆ ಸಲಹೆಗಳು

ಪಾರಿಕ್ಷಿತ! ಭೀಷ್ಮನು ಮುಂದುವರಿದು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಯಾವ ರಾಜನು ಗುಣಸಂಪನ್ನರಾದ ಸೇವಕರನ್ನು ಅವರಿಗೆ ಯೋಗ್ಯವಾದ ಸ್ಥಾನಗಳಲ್ಲಿ ನಿಯಮಿಸಿ ಅವರನ್ನು ಆಯಾ ಕಾರ್ಯಗಳಲ್ಲಿ ನಿಯೋಜಿಸುತ್ತಾನೆಯೋ-ಅಂತಹ ರಾಜನು ರಾಜ್ಯದ ಫಲವನ್ನು ಉಪಭುಂಜಿಸುತ್ತಾನೆ.

ನ ಶ್ವಾ ಸ್ವಂ ಸ್ಥಾನಮುತ್ಕ್ರಮ್ಯ ಪ್ರಮಾಣಮಭಿಸತ್ಕೃತಃ ।
ಆರೋಪ್ಯಃ ಶ್ವಾ ಸ್ವಕಾತ್ಸ್ಥಾನಾದುತ್ಕ್ರಮ್ಯಾನ್ಯತ್ರಪ್ರಮಾದ್ಯತಿ ॥೨॥

ಹಿಂದೆ ಹೇಳಿದ ಋಷಿಯ ಮತ್ತು ನಾಯಿಯ ಇತಿಹಾಸದಿಂದ ಈ ವಿಷಯವು ಸಿದ್ಧವಾಗುತ್ತದೆ. ನಾಯಿಯನ್ನು ಅಧಿಕವಾಗಿ ಸತ್ಕರಿಸಿ ಅದರ ಸ್ಥಾನವನ್ನು ಅದರ ಯೋಗ್ಯತೆಯನ್ನು ಮೀರಿದ ಉತ್ತಮಸ್ಥಾನಕ್ಕೆ ಏರಿಸಬಾರದು. ಹಾಗೆ ಮೇಲಕ್ಕೇರಿಸಿದರೆ ಅದು ಪ್ರಮಾದವನ್ನೇ ಉಂಟುಮಾಡುತ್ತದೆ. (ಎಂದರೆ : ನೀಚಜನರಿಗೆ ಉನ್ನತಸ್ಥಾನವನ್ನು ಕೊಡಬಾರದು. ಹಾಗೇನಾದರೂ ಉನ್ನತಸ್ಥಾನವನ್ನು ಕೊಟ್ಟರೆ ಅವರು ಪ್ರಮಾದವನ್ನೇ ಉಂಟುಮಾಡುತ್ತಾರೆ.)

ಸ್ವಜಾತಿಗುಣಸಮ್ಪನ್ನಾಃ ಸ್ವೇಷು ಕರ್ಮಸು ಸಂಸ್ಥಿತಾಃ ।
ಪ್ರಕರ್ತವ್ಯಾ ಹ್ಯಮಾತ್ಯಾಸ್ತು ನಾಸ್ಥಾನೇ ಪ್ರಕ್ರಿಯಾ ಕ್ಷಮಾ ॥೩॥

ಸ್ವಜಾತಿಯವರಾದ, ಗುಣಸಂಪನ್ನರಾದ, ವರ್ಣೋಚಿತವಾದ ಕರ್ಮಗಳಲ್ಲಿ ನಿಷ್ಠರಾದ ಪುರುಷರನ್ನು ಅಮಾತ್ಯರ ಸ್ಥಾನದಲ್ಲಿ ನಿಯಮಿಸಿಕೊಳ್ಳಬೇಕು. ಯಾರನ್ನೇ ಆಗಲೀ ಅವರ ಯೋಗ್ಯತೆಗೆ ತಕ್ಕುದಲ್ಲದ ಕಾರ್ಯಗಳಲ್ಲಿ ನಿಯೋಜಿಸಬಾರದು.

ಅನುರೂಪಾಣಿ ಕರ್ಮಾಣಿ ಭೃತ್ಯೇಭ್ಯೋ ಯಃ ಪ್ರಯಚ್ಛತಿ ।
ಸ ಭೃತ್ಯಗುಣಸಮ್ಪನ್ನೋ ರಾಜಾ ಫಲಮುಪಾಶ್ನುತೇ ॥೪॥

ಯಾವ ರಾಜನು ಸೇವಕರಿಗೆ ಅವರವರ ಯೋಗ್ಯತೆಗೆ ಅನುರೂಪವಾದ ಕಾರ್ಯಗಳನ್ನೇ ಕೊಡುತ್ತಾನೆಯೋ–ಅಂತಹ ರಾಜನು ಭೃತ್ಯಗುಣ ಸಂಪನ್ನನಾಗಿ (ಭೃತ್ಯರಿಂದ ಸಕಲವಿಧವಾದ ಕಾರ್ಯಗಳನ್ನೂ ಮಾಡಿಸಿಕೊಂಡು) ಉತ್ತಮವಾದ ಫಲವನ್ನು ಪಡೆಯುತ್ತಾನೆ.

ಶರಭಃ ಶರಭಸ್ಥಾನೇ ಸಿಂಹಃ ಸಿಂಹ ಇವೋರ್ಜಿತಃ ।
ವ್ಯಾಘ್ರೋ ವ್ಯಾಘ್ರ ಇವ ಸ್ಥಾಪ್ಯೋ ದ್ವೀಪೀ ದ್ವೀಪೀ ಯಥಾ ತಥಾ ॥೫॥

ಶರಭವು ಶರಭದ ಸ್ಥಾನದಲ್ಲಿಯೇ ಇರಬೇಕು. ಬಲಿಷ್ಠವಾದ ಸಿಂಹವು ಸಿಂಹದ ಸ್ಥಾನದಲ್ಲಿಯೇ ಇರಬೇಕು. ಹುಲಿಯು ಹುಲಿಯ ಸ್ಥಾನದಲ್ಲಿಯೇ ಇರಬೇಕು. ಚಿರತೆಯು ಚಿರತೆಯ ಸ್ಥಾನದಲ್ಲಿಯೇ ಇರಬೇಕು.

ಕರ್ಮಸ್ವಿಹಾನುರೂಪೇಷು ನ್ಯಸ್ಯಾ ಭೃತ್ಯಾ ಯಥಾವಿಧಿ ।
ಪ್ರತಿಲೋಮಂ ನ ಭೃತ್ಯಾಸ್ತೇ ಸ್ಥಾಪ್ಯಾಃ ಕರ್ಮಫಲೈಷಿಣಾ ॥೬॥

ಎಲ್ಲ ಸೇವಕರನ್ನೂ ಅವರವರ ಯೋಗ್ಯತೆಗೆ ತಕ್ಕಂತೆ ಕಾರ್ಯಗಳಲ್ಲಿ ಯಥಾವಿಧಿಯಾಗಿ ನಿಯಮಿಸಬೇಕು. ಕರ್ಮಫಲವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯುಳ್ಳ ರಾಜನು ಯೋಗ್ಯತೆಗೆ ವಿರುದ್ಧವಾದ ರೀತಿಯಲ್ಲಿ ಸೇವಕರನ್ನು ನಿಯಮಿಸಿಕೊಳ್ಳಬಾರದು.

ಯಃ ಪ್ರಮಾಣಮತಿಕ್ರಮ್ಯ ಪ್ರತಿಲೋಮಂ ನರಾಧಿಪಃ ।
ಭೃತ್ಯಾನ್ಸ್ಥಾಪಯತೇಽಬುದ್ಧಿರ್ನ ಸ ರಞ್ಜಯತೇ ಪ್ರಜಾಃ ॥೭॥

ಬುದ್ಧಿಹೀನನಾದ ಯಾವ ರಾಜನು ಮರ್ಯಾದೆಯನ್ನು ಉಲ್ಲಂಘಿಸಿ (ಯೋಗ್ಯತೆಯನ್ನು ಗಮನಿಸದೇ) ಭೃತ್ಯರನ್ನು ನೀತಿಗೆ ವಿರುದ್ಧವಾದ ರೀತಿಯಲ್ಲಿ ನಿಯಮಿಸಿಕೊಳ್ಳುವನೋ–ಅಂತಹ ರಾಜನಿಗೆ ಪ್ರಜೆಗಳನ್ನು ಪ್ರಸನ್ನಗೊಳಿಸಲು ಸಾಧ್ಯವಾಗುವುದಿಲ್ಲ.

ನ ಬಾಲಿಶಾ ನ ಚ ಕ್ಷುದ್ರಾ ನಾಪ್ರಾಜ್ಞಾ ನಾಜಿತೇನ್ದ್ರಿಯಾಃ ।
ನಾಕುಲೀನಾ ನರಾಃ ಸರ್ವೇ ಸ್ಥಾಪ್ಯಾ ಗುಣಗಣೈಷಿಣಾ ॥೮॥

ಗುಣಗಣಗಳನ್ನು ಇಚ್ಛಿಸುವ ರಾಜನು ಮೂರ್ಖರನ್ನೂ, ನೀಚರನ್ನೂ, ಬುದ್ಧಿಹೀನರನ್ನೂ, ಜಿತೇಂದ್ರಿಯರಲ್ಲದವರನ್ನೂ, ದುಷ್ಕುಲಪ್ರಸೂತರನ್ನೂ ಕೆಲಸಕ್ಕೆ ಇಟ್ಟುಕೊಳ್ಳಬಾರದು.

ಸಾಧವಃ ಕುಲಜಾಃ ಶೂರಾ ಜ್ಞಾನವನ್ತೋಽನಸೂಯಕಾಃ ।
ಅಕ್ಷುದ್ರಾಃ ಶುಚಯೋ ದಕ್ಷಾಃ ಸ್ಯುರ್ನರಾಃ ಪಾರಿಪಾರ್ಶ್ವಕಾಃ ॥೯॥

ಸಾಧುಗಳನ್ನೂ, ಸತ್ಕುಲಪ್ರಸೂತರನ್ನೂ, ಶೂರರನ್ನೂ, ಜ್ಞಾನಿ ಗಳನ್ನೂ, ಅಸೂಯಾರಹಿತರನ್ನೂ, ನೀಚರಲ್ಲದವರನ್ನೂ, ಪವಿತ್ರರಾಗಿರು ವವರನ್ನೂ, ದಕ್ಷರನ್ನೂ–ರಾಜನು ತನ್ನ ಪಾರ್ಶ್ವವರ್ತಿಗಳಾದ ಸೇವಕರನ್ನಾಗಿ ನಿಯಮಿಸಿಕೊಳ್ಳಬೇಕು.

ನ್ಯಗ್ಭೂತಾಸ್ತತ್ಪರಾಃ ಶಾನ್ತಾಶ್ಚೌಕ್ಷಾಃ ಪ್ರಕೃತಿಜೈಃ ಶುಭಾಃ ।
ಸ್ವೇಸ್ಥಾನಾದಪಕೃಷ್ಟಾ ಯೇ ತೇ ಸ್ಯೂ ರಾಜ್ಞಾಂ ಬಹಿಶ್ಚರಾಃ ॥೧೦॥

ವಿನೀತರೂ, ಕಾರ್ಯದಲ್ಲಿ ತತ್ಪರರಾಗಿರುವವರೂ, ಶಾಂತಸ್ವಭಾವ ದವರೂ, ಚತುರರೂ, ಸ್ವಾಭಾವಿಕವಾಗಿಯೇ ಶುಭಗುಣಗಳಿಂದ ಸಂಪನ್ನ ರಾಗಿರುವವರೂ ತಮ್ಮ-ತಮ್ಮ ಸ್ಥಾನಗಳಲ್ಲಿ ಅನಿಂದಿತರಾಗಿ ರಾಜನ ಬಾಹ್ಯಸೇವಕರಾಗಿರಲು ಯೋಗ್ಯರಾಗಿರುತ್ತಾರೆ.

ಸಿಂಹಸ್ಯ ಸತತಂ ಪಾರ್ಶ್ವೇ ಸಿಂಹ ಏವಾನುಗೋ ಭವೇತ್ ।
ಅಸಿಂಹಃ ಸಿಂಹಸಹಿತಃ ಸಿಂಹವಲ್ಲಭತೇ ಫಲಮ್ ॥೧೧॥

ಸಿಂಹದ ಪಾರ್ಶ್ವದಲ್ಲಿ ಮತ್ತೊಂದು ಸಿಂಹವೇ ಅದರ ಅನುಯಾಯಿ ಯಾಗಿರಬೇಕು. ಒಂದು ವೇಳೆ ಸಿಂಹವಲ್ಲದ ಯಾವುದಾದರೂ ಪ್ರಾಣಿಯು ಸಿಂಹದ ಜೊತೆಯಲ್ಲಿದ್ದರೆ ಆ ಪ್ರಾಣಿಗೂ ಸಿಂಹಕ್ಕೆ ಸಿಕ್ಕುವ ಗೌರವವೇ ಲಭಿಸುತ್ತದೆ.

ಯಸ್ತು ಸಿಂಹಃ ಶ್ವಭಿಃ ಕೀರ್ಣಃ ಸಿಂಹಕರ್ಮಫಲೇ ರತಃ ।
ನ ಸ ಸಿಂಹಫಲಂ ಭೋಕ್ತುಂ ಶಕ್ತಃ ಶ್ವಭಿರುಪಾಸಿತಃ ॥೧೨॥

ಆದರೆ ಯಾವ ಸಿಂಹವು ನಾಯಿಗಳಿಂದ ಪರಿವೃತವಾಗಿದ್ದೂ ಕೂಡ ಸಿಂಹೋಚಿತವಾದ ಕರ್ಮದಲ್ಲಿಯೂ ಮತ್ತು ಫಲದಲ್ಲಿಯೂ ಅನುರಕ್ತ ವಾಗಿರುತ್ತದೆಯೋ–ಆ ಸಿಂಹವು ನಾಯಿಗಳಿಂದ ಸಂಸೇವಿಸಲ್ಪಡುವುದರಿಂದ

ಸಿಂಹೋಚಿತವಾದ ಕರ್ಮಫಲವನ್ನು ಉಪಭೋಗಿಸಲು ಸಮರ್ಥವಾಗುವುದಿಲ್ಲ. ಹಾಗೆಯೇ ನೀಚಪುರುಷರಿಂದ ಪರಿವೃತನಾದ ರಾಜನು ತಾನು ಶ್ರೇಷ್ಠನಾಗಿದ್ದರೂ ಶ್ರೇಷ್ಠತೆಯ ಫಲವನ್ನು ಪಡೆಯುವುದಿಲ್ಲ.

ಏವಮೇತನ್ಮನುಷ್ಯೇನ್ದ್ರ ಶೂರೈಃ ಪ್ರಾಜ್ಞೈರ್ಬಹುಶ್ರುತೈಃ ।
ಕುಲೀನೈಃ ಸಹ ಶಕ್ಯೇತ ಕೃತ್ಸ್ನಾ ಜೇತುಂ ವಸುನ್ಧರಾ ॥೧೩॥

ಮನುಷ್ಯೇಂದ್ರನೇ! ಶೂರರಿಂದಲೂ, ಪ್ರಾಜ್ಞರಿಂದಲೂ, ಬಹುಶ್ರುತರಿಂದಲೂ, ಸತ್ಕುಲಪ್ರಸೂತರಿಂದಲೂ ಸಂವೃತನಾದ ರಾಜನು ಅಖಂಡ ಭೂಮಂಡಲವನ್ನೂ ಜಯಿಸಲು ಸಮರ್ಥನಾಗುತ್ತಾನೆ.

ನಾವಿದ್ಯೋ ನಾನೃಜುಃ ಪಾರ್ಶ್ವೇ ನಾಪ್ರಾಜ್ಞೋ ನಾಮಹಾಧನಃ ।
ಸಂಗ್ರಾಹ್ಯೋ ವಸುಧಾಪಾಲೈರ್ಭೃತ್ಯೋ ಭೃತ್ಯವತಾಂ ವರ ॥೧೪॥

ಭೃತ್ಯವಂತರಲ್ಲಿ ಶ್ರೇಷ್ಠನಾದವನೇ! ಯುಧಿಷ್ಠಿರ! ವಿದ್ಯಾವಂತರಲ್ಲದವರನ್ನೂ, ಸರಳತೆಯಿಲ್ಲದವರನ್ನೂ (ಕುಟಿಲರನ್ನೂ), ಮೂರ್ಖರನ್ನೂ, ದರಿದ್ರರನ್ನೂ ರಾಜರು ಸಮೀಪದಲ್ಲಿ ಇಟ್ಟುಕೊಳ್ಳಕೂಡದು. ಅಂತಹವರನ್ನು ಭೃತ್ಯರನ್ನಾಗಿ ಸಂಗ್ರಹಿಸಬಾರದು.

ಬಾಣವದ್ವಿಸೃತಾ ಯಾನ್ತಿ ಸ್ವಾಮಿಕಾರ್ಯಪರಾ ನರಾಃ ।
ಯೇ ಭೃತ್ಯಾಃ ಪಾರ್ಥಿವಹಿತಾಸ್ತೇಷಾಂ ಸಾನ್ತ್ವಂ ಪ್ರಯೋಜಯೇತ್ ॥೧೫॥

ಸ್ವಾಮಿಯ ಕಾರ್ಯದಲ್ಲಿ ತತ್ಪರರಾಗಿರುವ ಭೃತ್ಯರು ಧನುಸ್ಸಿನಿಂದ ಬಿಟ್ಟ ಬಾಣದಂತೆ ರಾಜನ ಕಾರ್ಯಾರ್ಥಸಿದ್ಧಿಗೆ ನೇರವಾಗಿ ಪ್ರಯತ್ನಿಸುತ್ತಾರೆ. ಯಾವ ಸೇವಕರು ರಾಜನ ಹಿತಸಾಧನೆಯಲ್ಲಿಯೇ ನಿರತರಾಗಿರುವರೋ–ಅಂತಹ ಸೇವಕರ ವಿಷಯದಲ್ಲಿ ರಾಜನು ಸಮಾಧಾನಕರವಾದ ಮಾತುಗಳನ್ನಾಡುತ್ತಾ ಅವರನ್ನು ಪ್ರೋತ್ಸಾಹಿಸುತ್ತಿರಬೇಕು.

ಕೋಶಶ್ಚ ಸತತಂ ರಕ್ಷ್ಯೋ ಯತ್ನಮಾಸ್ಥಾಯ ರಾಜಭಿಃ ।
ಕೋಶಮೂಲಾ ಹಿ ರಾಜಾನಃ ಕೋಶೋ ವೃದ್ಧಿಕರೋ ಭವೇತ್ ॥

ರಾಜರು ಪ್ರಯತ್ನಪೂರ್ವಕವಾಗಿ ತಮ್ಮ ಬೊಕ್ಕಸವನ್ನು ರಕ್ಷಣೆ ಮಾಡಬೇಕು. ರಾಜರಿಗೆ ಕೋಶವೇ ಮೂಲವಾಗಿದೆ. ಕೋಶವೇ ರಾಜರ ಅಭಿವೃದ್ಧಿಗೆ ಮೂಲಸಾಧನವಾಗಿರುತ್ತದೆ.

ಕೋಷ್ಠಾಗಾರಂ ಚ ತೇ ನಿತ್ಯಂ ಸ್ಫೀತೈರ್ಧಾನ್ಯೈಃ ಸುಸಂವೃತಮ್ ।
ಸದಾಸ್ತು ಸತ್ಸು ಸಂನ್ಯಸ್ತಂ ಧನಧಾನ್ಯಪರೋ ಭವ ॥೧೭॥

ನಿನ್ನ ಧಾನ್ಯಸಂಗ್ರಹದ ಕೋಠಿಗಳು ನಿತ್ಯವೂ ಪುಷ್ಟಿಕಾರಕಗಳಾದ ಧಾನ್ಯಗಳಿಂದ ತುಂಬಿರಲಿ. ಸಮೃದ್ಧವಾದ ಅಂತಹ ಕಣಜಗಳು ಸತ್ಪುರುಷರ ರಕ್ಷಣೆಯಲ್ಲಿರಲಿ. ನೀನು ಯಾವಾಗಲೂ ಧನ-ಧಾನ್ಯಗಳನ್ನು ವೃದ್ಧಿಪಡಿಸುವುದರಲ್ಲಿ ಆಸಕ್ತನಾಗಿರು.

ನಿತ್ಯಯುಕ್ತಾಶ್ಚ ತೇ ಭೃತ್ಯಾ ಭವನ್ತು ರಣಕೋವಿದಾಃ ।
ವಾಜಿನಾಂ ಚ ಪ್ರಯೋಗೇಷು ವೈಶಾರದ್ಯಮಿಹೇಷ್ಯತೇ ॥೧೮॥

ನಿನ್ನ ಸೇವಕರು ಯಾವಾಗಲೂ ಉದ್ಯೋಗಶೀಲರಾಗಿರಲಿ. ಯುದ್ಧದ ಕಲೆಯಲ್ಲಿ ಕುಶಲರಾಗಿರಲಿ. ಕುದುರೆಗಳ ಸವಾರಿಯಲ್ಲಿಯೂ ಮತ್ತು ಕುದುರೆಗಳನ್ನು ಪಳಗಿಸುವುದರಲ್ಲಿಯೂ ಅವರು ವಿಶೇಷರೀತಿಯಲ್ಲಿ ಚತುರರಾಗಿರಲಿ.

ಜ್ಞಾತಿಬನ್ಧುಜನಾವೇಕ್ಷೀ ಮಿತ್ರಸಮ್ಬನ್ಧಿಸಂವೃತಃ ।
ಪೌರಕಾರ್ಯಹಿತಾನ್ವೇಷೀ ಭವ ಕೌರವನನ್ದನ ॥೧೯॥

ಕೌರವನಂದನನೇ! ಜ್ಞಾತಿಗಳ ಮತ್ತು ಬಂಧುಜನರ ಯೋಗ-ಕ್ಷೇಮಗಳ ವಿಷಯದಲ್ಲಿ ವಿಶೇಷವಾದ ಗಮನವನ್ನಿಡು. ಮಿತ್ರರಿಂದಲೂ ಸಂಬಂಧಿಜನರಿಂದಲೂ ಕೂಡಿಕೊಂಡಿರು. ಪಟ್ಟಣಿಗರ ಕಾರ್ಯಗಳನ್ನು ಮಾಡಿಕೊಡುವ ಮೂಲಕವಾಗಿ ಅವರಿಗೆ ಹಿತವನ್ನುಂಟುಮಾಡುವ ಉಪಾಯಗಳನ್ನು ಹುಡುಕುತ್ತಿರು.

ಪ್ರಜಾಪಾಲನದಲ್ಲಿ ನಿನ್ನ ಬುದ್ಧಿಯು ಇಷ್ಟು ನಿಷ್ಠೆಯಿಂದಿರಬೇಕು. ನಾಯಿಯ ನಿದರ್ಶನವನ್ನು ಕೊಟ್ಟು ನಾನು ಈ ವಿಷಯವನ್ನು ನಿನಗೆ

ಮನದಟ್ಟಾಗುವಂತೆ ಹೇಳಿರುತ್ತೇನೆ. ಪುನಃ ನನ್ನಿಂದ ಯಾವ ವಿಷಯವನ್ನು ಕೇಳಲು ಇಚ್ಛಿಸಿರುವೆ?"

೧೧೯ನೆಯ ಅಧ್ಯಾಯವು ಮುಗಿಯಿತು.

೧೨೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜಧರ್ಮದ ಸಾರಭೂತವಾದ ವರ್ಣನೆ

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

"ಪಿತಾಮಹ! ರಾಜಧರ್ಮಗಳ ತತ್ತ್ವಗಳನ್ನು ತಿಳಿದಿರುತ್ತಿದ್ದ ಹಿಂದಿನ ರಾಜರು ಪೂರ್ವಕಾಲದಲ್ಲಿ ಅನುಷ್ಠಾನಮಾಡುತ್ತಿದ್ದ ಅನೇಕಪ್ರಕಾರವಾದ ರಾಜವ್ಯವಹಾರಗಳನ್ನು ನೀನು ನನಗೆ ಹೇಳಿರುವೆ. ನೀನು ಪೂರ್ವಜರಿಂದ ಆಚರಿಸಲ್ಪಡುತ್ತಿದ್ದ, ಸಜ್ಜನಸಮ್ಮತವಾದ, ಶ್ರೇಷ್ಠವಾದ ರಾಜಧರ್ಮಗಳನ್ನು ವಿಸ್ತಾರವಾಗಿಯೇ ಹೇಳಿರುವೆ. ವಿಶೇಷರೀತಿಯಲ್ಲಿ ಆಚರಿಸಲು ಸಾಧ್ಯವಾಗುವಂತೆ ಆ ರಾಜಧರ್ಮಗಳನ್ನು ಸಂಕ್ಷೇಪಿಸಿ ಹೇಳು."

ಭೀಷ್ಮನು ಹೇಳುತ್ತಾನೆ :

ರಕ್ಷಣಂ ಸರ್ವಭೂತಾನಾಮಿತಿ ಕ್ಷಾತ್ರಂ ಪರಂ ಮತಮ್ ।
ತದ್ಯಥಾ ರಕ್ಷಣಂ ಕುರ್ಯಾತ್ತಥಾ ಶೃಣು ಮಹೀಪತೇ ॥೩॥

"ಭೂಪಾಲನೇ! ಸಮಸ್ತಪ್ರಾಣಿಗಳನ್ನೂ ಸಂರಕ್ಷಿಸುವುದೇ ರಾಜನ ಪರಮಶ್ರೇಷ್ಠವಾದ ಧರ್ಮವೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಪ್ರಜೆಗಳ ರಕ್ಷಣಾಕಾರ್ಯವನ್ನು ಹೇಗೆ ಮಾಡಬೇಕೆಂಬುದರ ಬಗೆಗೆ ಹೇಳುವೆನು; ಕೇಳು.

ಯಥಾ ಬರ್ಹಾಣಿ ಚಿತ್ರಾಣಿ ಬಿಭರ್ತಿ ಭುಜಗಾಶನಃ ।
ತಥಾ ಬಹುವಿಧಂ ರಾಜಾ ರೂಪಂ ಕುರ್ವೀತ ಧರ್ಮವಿತ್ ॥೪॥

ಸರ್ಪವನ್ನು ಭಕ್ಷಿಸುವ ನವಿಲು ಯಾವ ರೀತಿಯಲ್ಲಿ ವಿಚಿತ್ರವಾದ ರೆಕ್ಕೆಗಳನ್ನು ಹೊಂದಿರುವುದೋ–ಅದೇ ರೀತಿಯಲ್ಲಿ ಧರ್ಮವಿದನಾದ ರಾಜನೂ ಅನೇಕವಿಧವಾದ ರೂಪಗಳನ್ನು ಪ್ರದರ್ಶಿಸಬೇಕು.

ತೈಕ್ಷ್ಣ್ಯಂ ಜಿಹ್ಮತ್ವಮಾದಾಲ್ಭ್ಯಂ ಸತ್ಯಮಾರ್ಜವಮೇವ ಚ ।
ಮಧ್ಯಸ್ಥಃ ಸತ್ತ್ವಮಾತಿಷ್ಠಂಸ್ತಥಾ ವೈ ಸುಖಮೃಚ್ಛತಿ ॥೫॥

ರಾಜನು ಮಧ್ಯಸ್ವಭಾವದಲ್ಲಿದ್ದುಕೊಂಡು ಸಂದರ್ಭಕ್ಕೆ ತಕ್ಕಂತೆ ತೀಕ್ಷ್ಣತೆ, ಕುಟಿಲನೀತಿ, ಅಭಯಪ್ರದಾನ, ಸತ್ಯನಿಷ್ಠೆ, ಸರಳತೆ ಮತ್ತು ಉತ್ತಮಸ್ವಭಾವಗಳನ್ನು ಆಶ್ರಯಿಸಿರಬೇಕು. ಹೀಗೆ ಇರುವುದರಿಂದ ರಾಜನು ಸುಖವನ್ನು ಹೊಂದುತ್ತಾನೆ.

ಯಸ್ಮಿನ್ನರ್ಥೇ ಹಿತಂ ಯತ್ಸ್ಯಾತ್ತದ್ವರ್ಣಂ ರೂಪಮಾದಿಶೇತ್ ।
ಬಹುರೂಪಸ್ಯ ರಾಜ್ಞೋ ಹಿ ಸೂಕ್ಷ್ಮೋಽಪ್ಯರ್ಥೋ ನ ಸೀದತಿ ॥೬॥

ಯಾವ ಕಾರ್ಯದ ಸಮಯದಲ್ಲಿ ಯಾವುದು ಹಿತಕರವಾಗುವುದೋ ಅಂತಹ ರೂಪವನ್ನೇ ಧರಿಸಬೇಕು. (ಅಪರಾಧಿಗಳನ್ನು ಶಿಕ್ಷಿಸಬೇಕಾದಾಗ ಉಗ್ರವಾದ ರೂಪವನ್ನು ತಾಳಬೇಕು. ದೀನರ ವಿಷಯದಲ್ಲಿ ಅನುಗ್ರಹವನ್ನು ತೋರುವಾಗ ಶಾಂತರೂಪವನ್ನು ತಾಳಬೇಕು.) ಹೀಗೆ ರಾಜ್ಯವ್ಯವಹಾರ ಗಳಲ್ಲಿ ಅನೇಕರೂಪಗಳನ್ನು ಧರಿಸಲು ಸಮರ್ಥನಾದ ರಾಜನ ಸಣ್ಣ ಸಣ್ಣ ಕೆಲಸಗಳೂ ಹಾಳಾಗುವುದಿಲ್ಲ.

ನಿತ್ಯಂ ರಕ್ಷಿತಮನ್ತ್ರಃ ಸ್ಯಾದ್ಯಥಾ ಮೂಕಃ ಶರಚ್ಛಿಖೀ ।
ಶ್ಲಕ್ಷ್ಣಾಕ್ಷರತನುಃ ಶ್ರೀಮಾನ್ಭವೇಚ್ಛಾಸ್ತ್ರವಿಶಾರದಃ ॥೭॥

ಶರದೃತುವಿನಲ್ಲಿ ನವಿಲು ಮೌನವಾಗಿರುವಂತೆ–ರಾಜನೂ ಮೌನಿ ಯಾಗಿದ್ದುಕೊಂಡು ರಾಜಕೀಯಕ್ಕೆ ಸಂಬಂಧಿಸಿದ ಗುಪ್ತವಿಷಯಗಳನ್ನು ಬಹಿರಂಗವಾಗದಂತೆ ರಕ್ಷಿಸಬೇಕು. ರಾಜನು ಸುಮಧುರವಾದ ಮಾತು ಗಳನ್ನಾಡುತ್ತಿರಬೇಕು. ಸೌಮ್ಯವಾದ ಮುಖಭಾವವನ್ನು ಹೊಂದಿರಬೇಕು. ಶೋಭಾಸಂಪನ್ನನಾಗಿರಬೇಕು. ಶಾಸ್ತ್ರವಿಶಾರದನಾಗಿರಬೇಕು.

ಆಪದ್ದ್ವಾರೇಷು ಯುಕ್ತಃ ಸ್ಯಾಜ್ಜಲಪ್ರಸ್ರವಣೇಷ್ವಿವ ।
ಶೈಲವರ್ಷೋದಕಾನೀವ ದ್ವಿಜಾನ್ಸಿದ್ಧಾನ್ಸಮಾಶ್ರಯೇತ್ ।
ಅರ್ಥಕಾಮಃ ಶಿಖಾಂ ರಾಜಾ ಕುರ್ಯಾದ್ಧರ್ಮಧ್ವಜೋಪಮಾಮ್ ॥೮॥

ಮಹಾಪೂರದ ಸಮಯದಲ್ಲಿ ಗ್ರಾಮವು ಮುಳುಗಡೆಗೆ ಬಂದು, ಸಂಕಟವು ಒದಗಿದಾಗ ಗ್ರಾಮಸ್ಥರು ಯಾವ ರೀತಿಯಲ್ಲಿ ಕಟ್ಟೆಯನ್ನು ಕಟ್ಟಿ ಸಂಕಟವನ್ನು ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುವರೋ–ಅದೇ ರೀತಿಯಲ್ಲಿ ರಾಜನು ಆಪತ್ತು ಒದಗಬಹುದಾದ ದ್ವಾರಗಳಲ್ಲಿ ಸರ್ವದಾ ಜಾಗರೂಕನಾಗಿದ್ದು ಆಪತ್ತು ಒದಗಿಬರುವುದೆಂದು ತಿಳಿದೊಡನೆಯೇ ಅದಕ್ಕೆ ಸಂಬಂಧಿಸಿದ ಬಾಗಿಲನ್ನು ಮುಚ್ಚಬೇಕು. (ಆಪತ್ತಿಗೆ ಕಾರಣವಾಗುವ ಮಂತ್ರಭೇದಾದಿ ವಿಷಯಗಳಲ್ಲಿ ಜಾಗರೂಕನಾಗಿರಬೇಕು.) ಪರ್ವತದ ಮೇಲಿನಿಂದ ಹರಿದು ಬಂದು ನದೀ-ತಟಾಕಗಳಾಗಿ ರೂಪಗೊಳ್ಳುವ ನೀರನ್ನು ಜನರು ಆಶ್ರಯಿಸುವಂತೆ–ವಿದ್ವಾಂಸರನ್ನೂ ಸಿದ್ಧರನ್ನೂ ರಾಜನು ಕಾರ್ಯಸಿದ್ಧಿಗಾಗಿ ಆಶ್ರಯಿಸಬೇಕು. ಧರ್ಮಧ್ವಜನಾದವನು ಶಿಖೆಯನ್ನು ಧರಿಸಿರುವಂತೆ–ರಾಜನು ಸ್ವಾರ್ಥಸಿದ್ಧಿಗಾಗಿ ಶ್ರೇಷ್ಠವಾದ ಲಕ್ಷಣಗಳನ್ನು ಹೊಂದಿರಬೇಕು. (ಆಯಾ ಸಮಯದಲ್ಲಿ ಪ್ರಕೃತಧರ್ಮಕ್ಕೆ ಸಂಬಂಧಿಸಿದಂತೆ ಉಗ್ರ ವಾದ ಅಥವಾ ಸೌಮ್ಯವಾದ ರೂಪವನ್ನು ಧರಿಸಬೇಕು.)

ನಿತ್ಯಮುದ್ಯತದಣ್ಡಃ ಸ್ಯಾದಾಚರೇದಪ್ರಮಾದತಃ ।
ಲೋಕೇ ಚಾಯವ್ಯಯೌ ದೃಷ್ಟ್ವಾ ಬೃಹದ್ವೃಕ್ಷಮಿವಾಸವತ್ ॥

ಅಪರಾಧಿಗಳನ್ನು ದಂಡಿಸುವುದರಲ್ಲಿ ರಾಜನು ಯಾವಾಗಲೂ ಉದ್ಯತನಾಗಿರಬೇಕು. ಯಾವ ಕಾರ್ಯವನ್ನೇ ಆದರೂ ಅಪ್ರಮತ್ತನಾಗಿ ಮಾಡಬೇಕು. ಪ್ರಜೆಗಳ ಆಯ-ವ್ಯಯಗಳನ್ನು ನೋಡಿ ತಾಳೇಮರದಲ್ಲಿ ರಸವನ್ನು ತೆಗೆಯುವಂತೆ–ಜನರಿಂದ ಧನವೆಂಬ ರಸವನ್ನು ತೆಗೆದುಕೊಳ್ಳಬೇಕು. (ತಾಳೆಯ ಮರದಲ್ಲಿರುವ ರಸವನ್ನು ತೆಗೆಯುವಾಗ ಅದನ್ನು ಕತ್ತರಿಸಬೇಕಾಗಿಲ್ಲ. ಮರದ ಅಗ್ರಭಾಗದಲ್ಲಿ ಸಣ್ಣದೊಂದು ರಂಧ್ರಮಾಡಿ ಆ ರಂಧ್ರಕ್ಕೆ ಮಡಕೆಯನ್ನು ಕಟ್ಟಿದರೆ ಆ ಪಾತ್ರೆಯೊಳಕ್ಕೆ ತಾಳೇರಸವು ಸ್ರವಿಸುತ್ತದೆ. ಅದೇ ರೀತಿಯಲ್ಲಿ ಪ್ರಜೆಗಳಿಗೆ ತೊಂದರೆಯಾಗದಂತೆ ಅವರಿಂದ ತೆರಿಗೆಯನ್ನು ತೆಗೆದುಕೊಳ್ಳಬೇಕು.)

ಮೃಜಾವಾನ್ಸ್ಯಾತ್ಸ್ವಯೂಥ್ಯೇಷು ಭೌಮಾನಿ ಚರಣೈಃ ಕ್ಷಿಪೇತ್ ।
ಜಾತಪಕ್ಷಃ ಪರಿಸ್ಪನ್ದೇತ್ಪ್ರೇಕ್ಷೇದ್ವೈಕಲ್ಯಮಾತ್ಮನಃ ॥೧೦॥

ರಾಜನು ತನ್ನ ಸೈನ್ಯಕ್ಕೆ ಸಂಬಂಧಿಸಿದ ಜನರೊಡನೆ ವಿಶುದ್ಧವಾದ ವ್ಯವಹಾರವನ್ನಿಟ್ಟುಕೊಳ್ಳಬೇಕು. ಶತ್ರುರಾಜ್ಯದ ಹೊಲ-ಗದ್ದೆಗಳಲ್ಲಿರುವ ಪೈರನ್ನು ಕುದುರೆಗಳಿಂದಲೂ ಎತ್ತುಗಳಿಂದಲೂ ತುಳಿಸಿ ವಿನಾಶಗೊಳಿಸಬೇಕು. ತನ್ನ ಪಕ್ಷವು ಬಲಿಷ್ಠವಾಗಿರುವುದೆಂದು ತಿಳಿದನಂತರವೇ ಶತ್ರುವಿನೊಡನೆ ಯುದ್ಧಕ್ಕೆ ಹೋಗಬೇಕು. ತನ್ನ ಕಡೆ ಇರುವ ದೌರ್ಬಲ್ಯವನ್ನು ಚೆನ್ನಾಗಿ ಪರೀಕ್ಷಿಸಿ ತಿಳಿದುಕೊಳ್ಳಬೇಕು ಮತ್ತು ಆ ನ್ಯೂನತೆಯನ್ನು ಹೋಗಲಾಡಿಸಿಕೊಳ್ಳಲೂ ಪ್ರಯತ್ನಿಸಬೇಕು.

ದೋಷಾನ್ವಿವೃಣುಯಾಚ್ಛತ್ರೋಃ ಪರಪಕ್ಷಾನ್ವಿಧೂನಯೇತ್ ।
ಕಾನನೇಷ್ವಿವ ಪುಷ್ಪಾಣಿ ಬಹಿರರ್ಥಾನ್ಸಮಾಚರನ್ ॥೧೧॥

ಶತ್ರುವಿನಲ್ಲಿರುವ ದೋಷವನ್ನು ಪ್ರಕಾಶಗೊಳಿಸಬೇಕು. ಶತ್ರುಪಕ್ಷದ ಅಧಿಕಾರಿಗಳನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಅವರ ಮುಂದೆ ಧನದ ಆಮಿಷವನ್ನೊಡ್ಡಿ ಅವರ ಮನಸ್ಸನ್ನು ವಿಚಲಗೊಳಿಸಬೇಕು. ಅರಣ್ಯದಲ್ಲಿರುವ ಪುಷ್ಪಗಳನ್ನು ಜನರು ಸಂಗ್ರಹಿಸುವಂತೆ–ರಾಜನು ಹೊರಗಡೆ ಇರುವ (ಹೊರರಾಜ್ಯದಲ್ಲಿರುವ) ಧನವನ್ನು ಸಂಗ್ರಹಿಸುತ್ತಾ ರಾಜ್ಯಭಾರಮಾಡಬೇಕು.

ಉಚ್ಛ್ರಿತಾನ್ನಾಶಯೇತ್ಸ್ಫೀತಾನ್ನರೇನ್ದ್ರಾನಚಲೋಪಮಾನ್ ।
ಶ್ರಯೇಚ್ಛಾಯಾಮವಿಜ್ಞಾತಾಂ ಗುಪ್ತಂ ರಣಮುಪಾಶ್ರಯೇತ್ ॥೧೨॥

ಪರ್ವತಕ್ಕೆ ಸಮಾನರಾಗಿ ತಲೆಯೆತ್ತಿಕೊಂಡು ಸ್ಥಿರವಾಗಿ ನಿಂತಿರುವ, ಸಂಪತ್ಸಮೃದ್ಧಿಯಿಂದ ಕೂಡಿರುವ ರಾಜರನ್ನು ವಿನಾಶಗೊಳಿಸಬೇಕು. ಶತ್ರುವಿಗೆ ತಿಳಿಯದಂತೆಯೇ ಅವನ ಛಾಯೆಯೊಳಗೆ (ಸೇನಾಪ್ರಮುಖರಲ್ಲಿ) ಆಶ್ರಯವನ್ನು ಪಡೆಯಬೇಕು. ಬಹಿರಂಗಪಡಿಸದೇ ಗುಟ್ಟಿನಲ್ಲಿಯೇ ಯುದ್ಧದ ಸಿದ್ಧತೆಯನ್ನು ಮಾಡಿ ಸೈನ್ಯದಿಂದ ರಕ್ಷಿತನಾಗಿ ಸಮಯವನ್ನು ನೋಡಿ ಶತ್ರುವಿನ ಮೇಲೆ ಬೀಳಬೇಕು.

ಪ್ರಾವೃಷೀವಾಸಿತಗ್ರೀವೋ ಮಜ್ಜೇತ ನಿಶಿ ನಿರ್ಜನೇ ।
ಮಾಯೂರೇಣ ಗುಣೇನೈವ ಸ್ತ್ರೀಭಿಶ್ಚಾಲಕ್ಷಿತಶ್ಚರೇತ್ ॥೧೩॥

ನವಿಲು ಅರ್ಧರಾತ್ರಿಯಲ್ಲಿ ಯಾರಿಗೂ ಕಾಣದಂತೆ ನಿರ್ಜನಪ್ರದೇಶದಲ್ಲಿ

ಅಡಗಿಕೊಂಡಿರುವಂತೆ–ರಾಜನು ವರ್ಷಾಕಾಲದಲ್ಲಿ ಶತ್ರುಗಳ ಮೇಲೆ ಬೀಳಲು ಹೋಗದೇ ಅದೃಶ್ಯನಾಗಿಯೇ ತನ್ನ ಅರಮನೆಯಲ್ಲಿರಬೇಕು. ಗಂಡುನವಿಲಿನ ಗುಣಕ್ಕೆ ಅನುಸಾರವಾಗಿಯೇ ರಾಜನು ಆ ಸಮಯದಲ್ಲಿ ಸ್ತ್ರೀಯರ ಕಡೆಗೂ ದೃಷ್ಟಿಯಿಡಬಾರದು.

ನ ಜಹ್ಯಾಚ್ಚ ತನುತ್ರಾಣಂ ರಕ್ಷೇದಾತ್ಮಾನಮಾತ್ಮನಾ ।
ಚಾರಭೂಮಿಷ್ವಭಿಗತಾನ್ಪಾಶಾಂಶ್ಚ ಪರಿವರ್ಜಯೇತ್ ॥೧೪॥

ಆ ಸಮಯದಲ್ಲಿ ರಾಜನು ತನ್ನ ಕವಚವನ್ನು ತೆಗೆದಿಡಬಾರದು. ಶರೀರವನ್ನು ತಾನೇ ರಕ್ಷಿಸಿಕೊಳ್ಳಬೇಕು. ಶತ್ರುಗಳು ತಮ್ಮ ಗುಪ್ತಚಾರರ ಮೂಲಕವಾಗಿ ಚತ್ವರಗಳಲ್ಲಿ, ಸಭೆಗಳಲ್ಲಿ, ಯಾತ್ರಾಸ್ಥಳಗಳಲ್ಲಿ ಹರಡಿಸಿರುವ ಪಾಶರೂಪವಾದ ಕೃತ್ರಿಮಜಾಲಗಳನ್ನು ಪರಿತ್ಯಜಿಸಬೇಕು. (ರಾಜನು ಶತ್ರು ಗಳ ಗುಪ್ತಚಾರರಿಂದ ವ್ಯಾಪ್ತವಾಗಿರಬಹುದಾದ ಸ್ಥಳಗಳಿಗೆ ಹೋಗಬಾರದು.)

ಪ್ರಣಯೇದ್ವಾಪಿ ತಾಂ ಭೂಮಿಂ ಪ್ರಣಶ್ಯೇದ್ಗಹನೇ ಪುನಃ ।
ಹನ್ಯಾತ್ಕ್ರುದ್ಧಾನತಿವಿಷಾಂಸ್ತಾಞ್ಜಿಹ್ಮಗತಯೋಽಹಿತಾನ್ ॥೧೫॥

ಶತ್ರುಪಕ್ಷದ ಗುಪ್ತಚಾರರಿರುವ ಭೂಮಿಯನ್ನು (ಸ್ಥಳವನ್ನು) ತಿಳಿದು ಕೊಂಡು ಅದನ್ನು ರಾಜನು ತನ್ನ ಸ್ವಾಧೀನಕ್ಕಾದರೂ ತೆಗೆದುಕೊಳ್ಳಬೇಕು ಅಥವಾ ಶತ್ರುಪಕ್ಷದ ಗುಪ್ತಚಾರರೊಡನೆ ಮೈತ್ರಿಯನ್ನಾದರೂ ಬೆಳೆಸಬೇಕು. ಸ್ವಾಧೀನಪಡಿಸಿಕೊಂಡನಂತರ ರಹಸ್ಯದಲ್ಲಿ ಗುಪ್ತಚಾರರ ಜಾಲವನ್ನೇ ವಿನಾಶಗೊಳಿಸಬೇಕು. ಕ್ರುದ್ಧರಾದ, ಅತಿಯಾದ ವಿಷದಿಂದ ಕೂಡಿರುವ ಸರ್ಪಗಳಿಗೆ ಸಮಾನರಾದ, ಕುಟಿಲಮಾರ್ಗಾನುಸಾರಿಗಳಾದ ಶತ್ರುಗಳನ್ನು ಧ್ವಂಸಮಾಡಬೇಕು.

ನಾಶಯೇದ್ಬಲಬರ್ಹಾಣಿ ಸಂನಿವಾಸಾನ್ನಿವಾಸಯೇತ್ ।
ಸದಾ ಬರ್ಹಿನಿಭಃ ಕಾಮಂ ಪ್ರಶಸ್ತಂ ಕೃತಮಾಚರೇತ್ ।
ಸರ್ವತಶ್ಚಾದದೇತ್ಪ್ರಜ್ಞಾಂ ಪತಙ್ಗಂ ಗಹನೇಷ್ವಿವ ॥೧೬॥

ಶತ್ರುಗಳ ಬಲವೆಂಬ ರೆಕ್ಕೆಗಳನ್ನು ವಿನಾಶಗೊಳಿಸಬೇಕು. ಹತ್ತಿರದಲ್ಲಿ ರಲು ಯೋಗ್ಯರಾದ ಸತ್ಪುರುಷರನ್ನು ತನ್ನ ಸಮೀಪದಲ್ಲಿಯೇ ಇಟ್ಟು ಕೊಳ್ಳಬೇಕು. ಸರ್ವದಾ ನವಿಲಿನಂತೆ ಸ್ವೇಚ್ಛೆಯಿಂದ ಪ್ರಶಸ್ತವಾದ ಕಾರ್ಯ

ಗಳನ್ನೇ ಮಾಡುತ್ತಿರಬೇಕು. ನವಿಲು ತನ್ನ ರೆಕ್ಕೆಗಳನ್ನು ಹರಡಿಕೊಳ್ಳುವಂತೆ ರಾಜನು ತನ್ನ ಸೈನಿಕರ ಮತ್ತು ಸಹಾಯಕರ ಸಂಪತ್ತಿಯನ್ನು ಹೆಚ್ಚಿಸಿ ಕೊಳ್ಳಬೇಕು. ಎಲ್ಲದರಿಂದಲೂ ಜ್ಞಾನವನ್ನು ಪಡೆದುಕೊಳ್ಳಬೇಕು. ಶತ್ರುಗಳ ವಿಷಯದಲ್ಲಿ ಕಾಡುಗಳಲ್ಲಿರುವ ಪತಂಗದ ಹುಳುಗಳಂತೆ ನಡೆದುಕೊಳ್ಳ ಬೇಕು. (ಲಕ್ಷೋಪಲಕ್ಷ ಪತಂಗದ ಹುಳುಗಳು ಸಾಮೂಹಿಕವಾಗಿ ಹಾರಿ ಕೊಂಡು ಹೋಗಿ ಅರಣ್ಯದಲ್ಲಿರುವ ವೃಕ್ಷಗಳ ಮೇಲೆ ಕುಳಿತುವೆಂದರೆ ಕ್ಷಣ ಮಾತ್ರದಲ್ಲಿ ವೃಕ್ಷಗಳಲ್ಲಿರುವ ಎಲೆಗಳನ್ನೆಲ್ಲಾ ತಿಂದು ಮುಗಿಸಿಬಿಡುತ್ತವೆ. ಭತ್ತದ ಗದ್ದೆಗಳ ಮೇಲೆ ಕುಳಿತರೂ ಒಂದು ಕಾಳನ್ನೂ ಬಿಡದೇ ತಿಂದುಹಾಕಿ ಬಿಡುತ್ತವೆ. ಅದೇ ರೀತಿಯಲ್ಲಿ ರಾಜನು ಶತ್ರುಗಳನ್ನು ಸಂಪೂರ್ಣವಾಗಿ ಧ್ವಂಸಮಾಡಬೇಕು.)

ಏವಂ ಮಯೂರವದ್ರಾಜಾ ಸ್ವರಾಜ್ಯಂ ಪರಿಪಾಲಯೇತ್ ।
ಆತ್ಮವೃದ್ಧಿಕರೀಂ ನೀತಿಂ ವಿದಧೀತ ವಿಚಕ್ಷಣಃ ॥೧೭॥

ಅದೇ ರೀತಿಯಲ್ಲಿ ತನ್ನ ಸ್ಥಾನದ ರಕ್ಷಣೆಯನ್ನು ಮಾಡಿಕೊಳ್ಳುವ ನವಿಲಿನಂತೆ–ಬುದ್ಧಿವಂತನಾದ ರಾಜನು ತನ್ನ ರಾಜ್ಯವನ್ನು ಪರಿಪಾಲಿಸ ಬೇಕು. ವಿಚಕ್ಷಣನಾಗಿ ತನ್ನ ಔನ್ನತ್ಯಕ್ಕೆ ಸಾಧನವಾಗುವಂತಹ ನೀತಿಯನ್ನು ಆಶ್ರಯಿಸಬೇಕು.

ಆತ್ಮಸಂಯಮನಂ ಬುದ್ಧ್ಯಾ ಪರಬುದ್ಧ್ಯಾವಧಾರಣಮ್ ।
ಬುದ್ಧ್ಯಾ ಚಾತ್ಮಗುಣಪ್ರಾಪ್ತಿರೇತಚ್ಛಾಸ್ತ್ರನಿದರ್ಶನಮ್ ॥೧೮॥

ತನ್ನ ಬುದ್ಧಿಯಿಂದಲೇ ಮನಸ್ಸನ್ನು ವಶಪಡಿಸಿಕೊಳ್ಳಲು ಸಾಧ್ಯವಾಗು ತ್ತದೆ. ಮಂತ್ರಿ-ಸುಹೃದರೇ ಮೊದಲಾದವರ ಬುದ್ಧಿಯ ಸಹಯೋಗದಿಂದ ಮಾಡಬೇಕಾದ ಕರ್ತವ್ಯವನ್ನು ನಿಶ್ಚಯಿಸಬಹುದಾಗಿದೆ. ಶಾಸ್ತ್ರೀಯಬುದ್ಧಿ ಯಿಂದ ಸದ್ಗುಣಗಳನ್ನು ಹೊಂದಬಹುದಾಗಿದೆ. ಇದೇ ಶಾಸ್ತ್ರದ ಪ್ರಯೋಜನ ವಾಗಿದೆ.

ಪರಂ ವಿಶ್ವಾಸಯೇತ್ಸಾಮ್ನಾ ಸ್ವಶಕ್ತಿಂ ಚೋಪಲಕ್ಷಯೇತ್ ।
ಆತ್ಮನಃ ಪರಿಮರ್ಶೇನ ಬುದ್ಧಿಂ ಬುದ್ಧ್ಯಾ ವಿಚಾರಯೇತ್ ॥೧೯॥

ರಾಜನು ಸುಮಧುರವಾದ ಮಾತುಗಳಿಂದ ಇತರರನ್ನು ಸಮಾಧಾನ

ಗೊಳಿಸುತ್ತಾ ತನ್ನ ವಿಷಯದಲ್ಲಿ ಇತರರಿಗೆ ವಿಶ್ವಾಸವು ಹುಟ್ಟುವಂತೆ ಮಾಡಬೇಕು. ತನ್ನ ಶಕ್ತಿಯು ಎಷ್ಟಿರುವುದೆಂಬುದನ್ನು ಇತರರಿಗೆ ತೋರಿಸಬೇಕು. ತನ್ನ ಪರಾಮರ್ಶೆಯಿಂದಲೂ ಮತ್ತು ಬುದ್ಧಿಯಿಂದಲೂ ಮಾಡಬೇಕಾದ ಕರ್ತವ್ಯವನ್ನು ನಿಶ್ಚಯಮಾಡಬೇಕು.

ಸಾನ್ತ್ವಯೋಗಮತಿಃ ಪ್ರಾಜ್ಞಃ ಕಾರ್ಯಾಕಾರ್ಯಪ್ರಯೋಜಕಃ ।
ನಿಗೂಢಬುದ್ಧಿರ್ಧೀರಃ ಸ್ಯಾದ್ವಕ್ತವ್ಯೇ ವಕ್ಷ್ಯತೇ ತಥಾ ॥೨೦॥

ಸಾಂತ್ವನದ ಯುಕ್ತಿಯನ್ನೇ ಬುದ್ಧಿಯಲ್ಲಿ ಹೊಂದಿರುವ, ಪ್ರಾಜ್ಞನಾದ, ಮಾಡಬೇಕಾದ ಕಾರ್ಯಗಳಿಗೆ ಪ್ರೇರಕನಾದ, ಮಾಡಬಾರದ ಕಾರ್ಯಗಳಿಗೆ ಪ್ರತಿರೋಧಕನಾದ, ನಿಗೂಢವಾದ (ಯಾರಿಗೂ ತಿಳಿಯದಂತಹ) ಬುದ್ಧಿಯನ್ನು ಹೊಂದಿರುವ, ಧೀರನಾದ ರಾಜನಾಗಿದ್ದರೆ ಅಂತಹವನಿಗೆ ಹೇಳಬೇಕಾದ ವಿಶೇಷ ವಿಷಯಗಳನ್ನು ಮಾತ್ರವೇ ಹೇಳಬೇಕು.

ಸ ನಿಕೃಷ್ಟಾಂ ಕಥಾಂ ಪ್ರಾಜ್ಞೋ ಯದಿ ಬುದ್ಧ್ಯಾ ಬೃಹಸ್ಪತಿಃ ।
ಸ್ವಭಾವಮೇಷ್ಯತೇ ತಪ್ತಂ ಕೃಷ್ಣಾಯಸಮಿವೋದಕೇ ॥೨೧॥

ಕಾಯಿಸಿದ ಕಬ್ಬಿಣವನ್ನು ನೀರಿಗೆ ಹಾಕಿದೊಡನೆಯೇ ಅದು ತನ್ನ ಪೂರ್ವಸ್ವಭಾವವನ್ನೇ (ಕಠಿಣತೆಯನ್ನೇ) ಪಡೆದುಕೊಳ್ಳುತ್ತದೆ. ಹಾಗೆಯೇ ಪ್ರಾಜ್ಞನಾದವನು ಬುದ್ಧಿಯಲ್ಲಿ ಬೃಹಸ್ಪತಿಯೇ ಆಗಿದ್ದರೂ ಪ್ರಾಕೃತರು ಹೇಳುವಂತಹ ಕೆಳಮಟ್ಟದ ಮಾತುಗಳನ್ನಾಡುತ್ತಿದ್ದರೆ ಅದು ಅವನ ಸ್ವಭಾವವೆಂದೇ ಭಾವಿಸಬೇಕು.

ಅನುಯುಞ್ಜೀತ ಕೃತ್ಯಾನಿ ಸರ್ವಾಣ್ಯೇವ ಮಹೀಪತಿಃ ।
ಆಗಮೈರುಪದಿಷ್ಟಾನಿ ಸ್ವಸ್ಯ ಚೈವ ಪರಸ್ಯ ಚ ॥೨೨॥

ರಾಜನಾದವನು ಶಾಸ್ತ್ರದಲ್ಲಿ ಹೇಳಿರುವ ಸಮಸ್ತಕರ್ಮಗಳನ್ನೂ ತಾನೂ ಮಾಡಬೇಕು ; ಇತರರಿಂದಲೂ ಮಾಡಿಸಬೇಕು.

ಮೃದುಶೀಲಂ ತಥಾ ಪ್ರಾಜ್ಞಂ ಶೂರಂ ಚಾರ್ಥವಿಧಾನವಿತ್ ।
ಸ್ವಕರ್ಮಣಿ ನಿಯುಞ್ಜೀತ ಯೇ ಚಾನ್ಯೇ ಚ ಬಲಾಧಿಕಾಃ ॥೨೩॥

ಕಾರ್ಯಸಾಧನೆಯ ಉಪಾಯಗಳನ್ನು ತಿಳಿದಿರುವ ರಾಜನು ಕೋಮಲ

ಸ್ವಭಾವದವನನ್ನೂ, ವಿದ್ವಾಂಸನನ್ನೂ, ಶೂರನನ್ನೂ–ತನ್ನ ಕಾರ್ಯಗಳ ಸಿದ್ಧಿಗಾಗಿ ನಿಯೋಜಿಸಿಕೊಳ್ಳಬೇಕು. ಹೆಚ್ಚು ಬಲಿಷ್ಠರಾದ ಇತರ ಜನರನ್ನೂ ಇಟ್ಟುಕೊಳ್ಳಬೇಕು.

ಅಥ ದೃಷ್ಟ್ವಾ ನಿಯುಕ್ತಾನಿ ಸ್ವಾನುರೂಪೇಷು ಕರ್ಮಸು ।
ಸರ್ವಾಂಸ್ತಾನನುವರ್ತೇತ ಸ್ವರಾಂಸ್ತನ್ತ್ರೀರಿವಾಯತಾ ॥೨೪॥

ಸೇವಕರನ್ನು ಅವರವರಿಗೆ ಯೋಗ್ಯವಾದ ಸ್ಥಾನಗಳಲ್ಲಿ ನಿಯಮಿಸಿ–ಶ್ರುತಿಬದ್ಧವಾದ ವೀಣೆಯ ತಂತಿಗಳು ಸಪ್ತಸ್ವರಗಳನ್ನೂ ಅನುಸರಿಸಿರುವಂತೆ–ಎಲ್ಲರೂ ಆ ಅಧಿಕಾರಿಗಳನ್ನೇ ಅನುಸರಿಸಿ ನಡೆಯುವಂತೆ ಮಾಡಬೇಕು.

ಧರ್ಮಾಣಾಮವಿರೋಧೇನ ಸರ್ವೇಷಾಂ ಪ್ರಿಯಮಾಚರೇತ್ ।
ಮಮಾಯಮಿತಿ ರಾಜಾ ಯಃ ಸ ಪರ್ವತ ಇವಾಚಲಃ ॥೨೫॥

ರಾಜನಾದವನು ಧರ್ಮಕ್ಕೆ ವಿರೋಧವಾಗದ ರೀತಿಯಲ್ಲಿ ಎಲ್ಲರಿಗೂ ಪ್ರಿಯವನ್ನೇ ಮಾಡಬೇಕು. 'ಇವರು ನನ್ನ ಪ್ರಿಯಪ್ರಜೆಗಳು'–ಎಂದು ಯಾವ ರಾಜನು ಭಾವಿಸುವನೋ–ಅಂತಹ ರಾಜನು ಪರ್ವತದಂತೆ ಅವಿಚಲನಾಗಿರುತ್ತಾನೆ.

ವ್ಯವಸಾಯಂ ಸಮಾಧಾಯ ಸೂರ್ಯೋ ರಶ್ಮೀನಿವಾಯತಾನ್ ।
ಧರ್ಮಮೇವಾಭಿರಕ್ಷೇತ ಕೃತ್ವಾ ತುಲ್ಯೇ ಪ್ರಿಯಾಪ್ರಿಯೇ ॥೨೬॥

ಯಾವ ರೀತಿಯಲ್ಲಿ ಸೂರ್ಯನು ತನ್ನ ವಿಸ್ತೃತವಾದ ಕಿರಣಗಳಿಂದ ಸಕಲರನ್ನೂ ರಕ್ಷಿಸುವನೋ–ಅದೇ ರೀತಿಯಲ್ಲಿ ರಾಜನು ಪ್ರಿಯರನ್ನೂ ಅಪ್ರಿಯರನ್ನೂ ಸಮಾನವಾಗಿ ಕಾಣುತ್ತಾ ಸುದೃಢವಾದ ಪ್ರಯತ್ನಗಳನ್ನು ಅವಲಂಬಿಸಿ ಧರ್ಮದ ರಕ್ಷಣೆಯನ್ನು ಮಾಡಬೇಕು.

ಕುಲಪ್ರಕೃತಿದೇಶಾನಾಂ ಧರ್ಮಜ್ಞಾನ್ಮೃದುಭಾಷಿಣಃ ।
ಮಧ್ಯೇ ವಯಸಿ ನಿರ್ದೋಷಾನ್ಹಿತೇ ಯುಕ್ತಾನವಿಕ್ಲವಾನ್ ॥೨೭॥
ಅಲುಬ್ಧಾಞ್ಶಿಕ್ಷಿತಾನ್ದಾನ್ತಾನ್ಧರ್ಮೇಷು ಪರಿನಿಷ್ಠಿತಾನ್ ।
ಸ್ಥಾಪಯೇತ್ಸರ್ವಕಾರ್ಯೇಷು ರಾಜಾ ಧರ್ಮಾರ್ಥರಕ್ಷಿಣಃ ॥೨೮॥

ಯಾರು ಕುಲ-ಸ್ವಭಾವ ಮತ್ತು ದೇಶಗಳ ಧರ್ಮವನ್ನು ತಿಳಿದಿರು

ವರೋ, ಧರ್ಮಜ್ಞರೋ, ಮೃದುಭಾಷಿಗಳೋ, ಯೌವನಾವಸ್ಥೆಯಲ್ಲಿರುವರೋ, ನಿಷ್ಕಳಂಕರಾಗಿರುವರೋ, ರಾಜನ ಮತ್ತು ಪ್ರಜೆಗಳ ಹಿತಸಾಧನೆಯಲ್ಲಿಯೇ ನಿರತರಾಗಿರುವರೋ, ಕಳವಳದಿಂದ ರಹಿತರಾಗಿರುವರೋ ಅಲುಬ್ಧರೋ, ಸುಶಿಕ್ಷಿತರೋ, ಜಿತೇಂದ್ರಿಯರೋ, ಧರ್ಮನಿಷ್ಠರೋ, ಧರ್ಮಾರ್ಥಗಳ ರಕ್ಷಣೆಯಲ್ಲಿಯೇ ತತ್ಪರರಾಗಿರುವರೋ–ಅಂತಹವರನ್ನೇ ರಾಜನು ತನ್ನ ಎಲ್ಲ ಕಾರ್ಯಗಳಲ್ಲಿಯೂ ನಿಯಮಿಸಿಕೊಳ್ಳಬೇಕು.

ಏತೇನ ಚ ಪ್ರಕಾರೇಣ ಕೃತ್ಯಾನಾಮಾಗತಿಂ ಗತಿಮ್ ।
ಯುಕ್ತಃ ಸಮನುತಿಷ್ಠೇತ ತುಷ್ಟಶ್ಚಾರೈರುಪಸ್ಕೃತಃ ॥೨೯॥

ಈ ರೀತಿಯಲ್ಲಿ ರಾಜನು ಯಾವಾಗಲೂ ಜಾಗರೂಕನಾಗಿದ್ದುಕೊಂಡು ರಾಜ್ಯದ ನಾನಾಕಾರ್ಯಗಳನ್ನು ಆರಂಭಿಸಬೇಕು ಮತ್ತು ಸಮಾಪ್ತಿಗೊಳಿಸಬೇಕು. ತಾನು ಕೂಡ ಸಂತುಷ್ಟನಾಗಿರುತ್ತಾ ಗುಪ್ತಚಾರರ ಮೂಲಕವಾಗಿ ರಾಷ್ಟ್ರದಲ್ಲಿ ನಡೆಯುವ ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳುತ್ತಿರಬೇಕು.

ಅಮೋಘಕ್ರೋಧಹರ್ಷಸ್ಯ ಸ್ವಯಂ ಕೃತ್ಯಾನ್ಯವೇಕ್ಷಿತುಃ ।
ಆತ್ಮಪ್ರತ್ಯಯಕೋಶಸ್ಯ ವಸುದೈವ ವಸುನ್ಧರಾ ॥೩೦॥

ಯಾವ ರಾಜನ ಕ್ರೋಧ-ಹರ್ಷಗಳು ವ್ಯರ್ಥವಾಗುವುದಿಲ್ಲವೋ, ಯಾವ ರಾಜನು ಸ್ವತಃ ಎಲ್ಲ ಕಾರ್ಯಗಳ ಸಾಧಕ-ಬಾಧಕಗಳನ್ನೂ ನೋಡಿಕೊಳ್ಳುವನೋ, ಆತ್ಮವಿಶ್ವಾಸವೇ ಯಾವನಿಗೆ ಕೋಶರೂಪವಾಗಿರುವುದೋ–ಅಂತಹ ರಾಜನಿಗೆ ಈ ವಸುಂಧರೆಯೇ ಐಶ್ವರ್ಯವನ್ನು ಕೊಡುವುದಾಗುತ್ತದೆ.

ವ್ಯಕ್ತಶ್ಚಾನುಗ್ರಹೋ ಯಸ್ಯ ಯಥಾರ್ಥಶ್ಚಾಪಿ ನಿಗ್ರಹಃ ।
ಗುಪ್ತಾತ್ಮಾ ಗುಪ್ತರಾಷ್ಟ್ರಶ್ಚ ಸ ರಾಜಾ ರಾಜಧರ್ಮವಿತ್ ॥೩೧॥

ಯಾವ ರಾಜನು ಮಾಡುವ ಪ್ರಜಾನುಗ್ರಹಕಾರ್ಯವು ಎಲ್ಲರ ಗಮನಕ್ಕೂ ಬರುತ್ತದೆಯೋ, ಯಾವನ ನಿಗ್ರಹವೂ (ಶಿಕ್ಷೆಯೂ) ಯಥಾರ್ಥವಾದ ಕಾರಣಗಳಿಂದ ಕೂಡಿರುವುದೋ (ಯಾವನು ಅಪರಾಧವು ಸ್ಥಿರಪಟ್ಟನಂತರವೇ ಶಿಕ್ಷಿಸುವನೋ), ಯಾವನು ತನ್ನನ್ನೂ

ತನ್ನ ರಾಜ್ಯವನ್ನೂ ರಕ್ಷಿಸಿಕೊಂಡಿರುವನೋ–ಅಂತಹ ರಾಜನು ರಾಜಧರ್ಮ ವನ್ನು ತಿಳಿದವನಾಗಿರುತ್ತಾನೆ.

ನಿತ್ಯಂ ರಾಷ್ಟ್ರಮವೇಕ್ಷೇತ ಗೋಭಿಃ ಸೂರ್ಯ ಇವೋದಿತಃ ।
ಚಾರಾನ್ಸ್ವನುಚರಾನ್ವಿದ್ಯಾತ್ತಥಾ ಬುದ್ಧ್ಯಾ ಸ್ವಯಂ ಚರೇತ್ ॥೩೨॥

ಉದಯಿಸಿದ ಸೂರ್ಯನು ಹೇಗೆ ತನ್ನ ಕಿರಣಗಳ ಮೂಲಕವಾಗಿ ಪ್ರಪಂಚವನ್ನು ನೋಡುವನೋ–ಅದೇ ರೀತಿಯಲ್ಲಿ ರಾಜನೂ ಗುಪ್ತಚಾರರ ಮೂಲಕವಾಗಿ ತನ್ನ ರಾಷ್ಟ್ರವನ್ನು ಅನುದಿನವೂ ನಿರೀಕ್ಷಿಸುತ್ತಿರಬೇಕು. ಗುಪ್ತಚಾರರನ್ನು ರಾಜ್ಯದ ಎಲ್ಲ ಕಡೆಗಳಿಗೂ ಕಳುಹಿಸುತ್ತಾ ರಾಜ್ಯದ ಸಮಾಚಾರವನ್ನು ತಿಳಿದುಕೊಳ್ಳುತ್ತಿರಬೇಕು. ಅಂತೆಯೇ ತನ್ನ ಬುದ್ಧಿ ಯಿಂದಲೂ ಎಲ್ಲ ವಿಷಯಗಳನ್ನೂ ಸಮಾಲೋಚಿಸಿ ರಾಷ್ಟ್ರದ ಪರಿಸ್ಥಿತಿಯು ಹೇಗಿರುವುದೆಂಬುದನ್ನು ನಿಶ್ಚಯಿಸಬೇಕು.

ಕಾಲಂ ಪ್ರಾಪ್ತಮುಪಾದದ್ಯಾನ್ನಾರ್ಥಂ ರಾಜಾ ಪ್ರಸೂಚಯೇತ್ ।
ಅಹನ್ಯಹನಿ ಸಂದುಹ್ಯಾನ್ಮಹೀಂ ಗಾಮಿವ ಬುದ್ಧಿಮಾನ್ ॥೩೩॥

ಬುದ್ಧಿವಂತನಾದ ರಾಜನು ಕಾಲವು ಪ್ರಾಪ್ತವಾದಾಗಲೇ ಪ್ರಜೆಗಳಿಂದ ಧನವನ್ನು ಸಂಗ್ರಹಿಸಬೇಕು. ತನ್ನ ಅರ್ಥಸಂಗ್ರಹದ ನೀತಿಯನ್ನು ಯಾರ ಮುಂದೆಯೂ ಪ್ರಕಟಿಸಬಾರದು. ಬುದ್ಧಿವಂತನಾದ ಮನುಷ್ಯನು ಗೋರಕ್ಷಣೆಯನ್ನು ಮಾಡುತ್ತಾ ಹಸುವಿನ ಹಾಲನ್ನು ಕರೆದುಕೊಳ್ಳುವಂತೆ– ಬುದ್ಧಿವಂತನಾದ ರಾಜನು ಪ್ರಜೆಗಳ ರಕ್ಷಣೆಯನ್ನು ಮಾಡುತ್ತಾ ಅವರಲ್ಲಿರುವ ಧನವನ್ನು ಸಂಗ್ರಹಿಸಬೇಕು.

ಯಥಾ ಕ್ರಮೇಣ ಪುಷ್ಪೇಭ್ಯಶ್ಚಿನೋತಿ ಮಧು ಷಟ್ಪದಃ ।
ತಥಾ ದ್ರವ್ಯಮುಪಾದಾಯ ರಾಜಾ ಕುರ್ವೀತ ಸಂಚಯಮ್ ॥೩೪॥

ಯಾವ ರೀತಿಯಲ್ಲಿ ಜೇನುಹುಳುವು ಅನುಕ್ರಮವಾಗಿ ಅನೇಕ ಪುಷ್ಪ ಗಳಿಂದ ರಸವನ್ನು ಸಂಗ್ರಹಿಸಿ ಜೇನುತುಪ್ಪವನ್ನು ಸಿದ್ಧಗೊಳಿಸುವುದೋ– ಅದೇ ರೀತಿಯಲ್ಲಿ ರಾಜನೂ ಸಮಸ್ತಪ್ರಜೆಗಳಿಂದಲೂ ಸ್ವಲ್ಪ-ಸ್ವಲ್ಪವಾಗಿಯೇ ಧನವನ್ನು ಸಂಗ್ರಹಿಸಿ ಕೂಡಿಡಬೇಕು.

ಯದಿ ಗುಪ್ತಾವಶಿಷ್ಟಂ ಸ್ಯಾತ್ತದ್ವಿತ್ತಂ ಧರ್ಮಕಾಮಯೋಃ ।
ಸಂಚಯಾನ್ನ ವಿಸರ್ಗೀ ಸ್ಯಾದ್ರಾಜಾ ಶಾಸ್ತ್ರವಿದಾತ್ಮವಾನ್ ॥೩೫॥

ಸಂಗ್ರಹಿಸಿದ ಧನವನ್ನು ಮೊದಲು ಪ್ರಜೆಗಳ ರಕ್ಷಣೆಗಾಗಿ ವಿನಿಯೋಗಿಸಬೇಕು. ರಕ್ಷಣೆಗಾಗಿ ವ್ಯಯಿಸಿದನಂತರ ಉಳಿದ ಹಣವನ್ನು ಧರ್ಮಕಾರ್ಯಕ್ಕಾಗಿಯೂ–ಸುಖೋಪಭೋಗಗಳಿಗಾಗಿಯೂ ವಿನಿಯೋಗಿಸಬೇಕು. ಜಿತೇಂದ್ರಿಯನಾದ, ಶಾಸ್ತ್ರವನ್ನು ತಿಳಿದಿರುವ ರಾಜನು ಸಂಗ್ರಹಿಸಿದ ಧನವನ್ನು ಮತ್ತಾವುದಕ್ಕೂ ವ್ಯಯಿಸಬಾರದು.

ನಾರ್ಥಮಲ್ಪಂ ಪರಿಭವೇನ್ನಾವಮನ್ಯೇತ ಶಾತ್ರವಾನ್ ।
ಬುದ್ಧ್ಯಾ ತು ಬುದ್ಧ್ಯೇದಾತ್ಮಾನಂ ನ ಚಾಬುದ್ಧಿಷು ವಿಶ್ವಸೇತ್ ॥೩೬॥

ಸ್ವಲ್ಪವೇ ಧನವು ಬಂದರೂ ಅದನ್ನು ತಿರಸ್ಕರಿಸಬಾರದು. ಶತ್ರುವು ಶಕ್ತಿಹೀನನಾಗಿದ್ದರೂ ಅವನನ್ನು ಅವಹೇಳನಮಾಡಬಾರದು. ಬುದ್ಧಿಯಿಂದ ತನ್ನ ಸ್ವರೂಪವನ್ನು ತಿಳಿದುಕೊಳ್ಳಬೇಕು. ಬುದ್ಧಿಹೀನರಲ್ಲಿ ವಿಶ್ವಾಸವನ್ನಿಡಬಾರದು.

ಧೃತಿರ್ದಾಕ್ಷ್ಯಂ ಸಂಯಮೋ ಬುದ್ಧಿರಾತ್ಮಾ
ಧೈರ್ಯಂ ಶೌರ್ಯಂ ದೇಶಕಾಲಾಪ್ರಮಾದಃ ।
ಅಲ್ಪಸ್ಯ ವಾ ಬಹುನೋ ವಾ ವಿವೃದ್ಧೌ
ಧನಸ್ಯೈತಾನ್ಯಷ್ಟ ಸಮಿನ್ಧನಾನಿ ॥೩೭॥

ಧಾರಣಾಶಕ್ತಿ, ಚತುರತೆ, ಸಂಯಮ, ಬುದ್ಧಿ, ಶರೀರ, ಧೈರ್ಯ, ಶೌರ್ಯ, ದೇಶ-ಕಾಲಗಳಲ್ಲಿ ಅಪ್ರಮತ್ತತೆಯಿಂದಿರುವುದು–ಈ ಎಂಟು ಗುಣಗಳು ಸ್ವಲ್ಪವಾದ ಅಥವಾ ಹೆಚ್ಚಿನ ಧನದ ವೃದ್ಧಿಗೆ ಮುಖ್ಯಸಾಧನಗಳು. ಧನರೂಪಿಯಾದ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಲು ಈ ಎಂಟು ಗುಣಗಳು ಇಂಧನರೂಪಗಳಾಗಿವೆ.

ಅಗ್ನಿಃ ಸ್ತೋಕೋ ವರ್ಧತೇಽಪ್ಯಾಜ್ಯಸಿಕ್ತೋ
ಬೀಜಂ ಚೈಕಂ ರೋಹಸಹಸ್ರಮೇತಿ ।
ಆಯವ್ಯಯೌ ವಿಪುಲೌ ಸಂನಿಶಾಮ್ಯ
ತಸ್ಮಾದಲ್ಪಂ ನಾವಮನ್ಯೇತ ವಿತ್ತಮ್ ॥೩೮॥

ಬೆಂಕಿಯು ಸ್ವಲ್ಪವೇ ಇದ್ದರೂ ತುಪ್ಪದಿಂದ ಸಿಕ್ತವಾದೊಡನೆಯೇ ವರ್ಧಿಸುತ್ತದೆ. ಒಂದು ಸಣ್ಣ ಬೀಜವನ್ನು ಬಿತ್ತಿದರೂ ಅದರಿಂದ ಸಾವಿರಾರು

ಬೀಜಗಳು ಹುಟ್ಟಿಕೊಳ್ಳುತ್ತವೆ. ಆದುದರಿಂದ ಬೃಹತ್ತಾದ ಆಯ-ವ್ಯಯಗಳನ್ನು ವಿಚಾರಮಾಡುತ್ತಾ ಅಲ್ಪವಾಗಿ ಲಭಿಸುವ ವಿತ್ತವನ್ನು ಅನಾದರಣೆ ಮಾಡಬಾರದು.

ಬಾಲೋಽಪ್ಯಬಾಲಃ ಸ್ಥವಿರೋ ರಿಪುರ್ಯಃ
ಸದಾ ಪ್ರಮತ್ತಂ ಪುರುಷಂ ನಿಹನ್ಯಾತ್ ।
ಕಾಲೇನಾನ್ಯಸ್ತಸ್ಯ ಮೂಲಂ ಹರೇತ
ಕಾಲಜ್ಞಾತಾ ಪಾರ್ಥಿವಾನಾಂ ವರಿಷ್ಠಃ ॥೩೯॥

ಶತ್ರುವು ಬಾಲಕನೇ ಆಗಿರಲಿ ; ಯುವಕನೇ ಆಗಿರಲಿ ; ವೃದ್ಧನೇ ಆಗಿರಲಿ–ಸರ್ವಕಾಲದಲ್ಲಿಯೂ ಜಾಗರೂಕನಾಗಿರದೇ ಇರುವ ಮನುಷ್ಯನನ್ನು ನಾಶಮಾಡಿಬಿಡಬಹುದು. ಧನಸಂಪನ್ನನಾದ ಮತ್ತೊಬ್ಬ ಶತ್ರುವು ಅನುಕೂಲವಾದ ಸಮಯದ ಸಹಯೋಗದಿಂದ ರಾಜನನ್ನೇ ಸಮೂಲವಾಗಿ ನಿರ್ನಾಮಮಾಡಬಹುದು. ಆದುದರಿಂದ ಯಾವ ಸಮಯದಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂಬ ಕಾಲಜ್ಞಾನವನ್ನು ಯಾವನು ತಿಳಿದಿರುವನೋ–ಅಂತಹವನು ರಾಜರಲ್ಲಿಯೇ ಶ್ರೇಷ್ಠನಾದವನಾಗುತ್ತಾನೆ.

ಹರೇತ್ಕೀರ್ತಿಂ ಧರ್ಮಮಸ್ಯೋಪರುನ್ಧ್ಯಾ-
ದರ್ಥೇ ದೀರ್ಘಂ ವೀರ್ಯಮಸ್ಯೋಪಹನ್ಯಾತ್ ।
ರಿಪುರ್ದ್ವೇಷ್ಟಾ ದುರ್ಬಲೋ ವಾ ಬಲೀ ವಾ
ತಸ್ಮಾಚ್ಛತ್ರೋರ್ನೈವ ಹೇಯೇದ್ಯತಾತ್ಮಾ ॥೪೦॥

ದ್ವೇಷವನ್ನು ಸಾಧಿಸುತ್ತಿರುವ ಶತ್ರುವು ದುರ್ಬಲನೇ ಆಗಿರಲಿ ಬಲಿಷ್ಠನೇ ಆಗಿರಲಿ–ರಾಜನ ಕೀರ್ತಿಯನ್ನು ನಷ್ಟಗೊಳಿಸುತ್ತಾನೆ. ರಾಜನು ಮಾಡುವ ಧರ್ಮಕಾರ್ಯಗಳನ್ನು ತಡೆಯುತ್ತಾನೆ. ಅರ್ಥೋಪಾರ್ಜನೆಯಲ್ಲಿರುವ ರಾಜನ ಶಕ್ತಿಯನ್ನು ಕುಂಠಿತಗೊಳಿಸುತ್ತಾನೆ. ಆದುದರಿಂದ ಪ್ರಯತ್ನಶೀಲನಾದ ರಾಜನು ಶತ್ರುವಿನ ವಿಷಯದಲ್ಲಿ ಎಂದಿಗೂ ನಿಶ್ಚಿಂತನಾಗಿರಬಾರದು.

ಕ್ಷಯಂ ವೃದ್ಧಿಂ ಪಾಲನಂ ಸಂಚಯಂ ವಾ
ಬುದ್ಧ್ವಾಪ್ಯುಭೌ ಸಂಹತೌ ಸರ್ವಕಾಮೌ ।

ತತಶ್ಚಾನ್ಯನ್ಮತಿಮಾನ್ಸಂದಧೀತ
ತಸ್ಮಾದ್ರಾಜಾ ಬುದ್ಧಿಮತ್ತಾಂ ಶ್ರಯೇತ ॥೪೧॥

ಹಾನಿ, ವೃದ್ಧಿ, ರಕ್ಷಣೆ, ಧನಸಂಗ್ರಹ–ಇವುಗಳ ವಿಷಯವನ್ನು ತಿಳಿದುಕೊಂಡು, ಪರಸ್ಪರಸಂಬಂಧಿಯಾದ ಐಶ್ವರ್ಯವನ್ನೂ–ಭೋಗವನ್ನೂ ಚೆನ್ನಾಗಿ ತಿಳಿದುಕೊಂಡು ಬುದ್ಧಿವಂತನಾದ ರಾಜನು ಶತ್ರುರಾಜನೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು ಅಥವಾ ಯುದ್ಧಮಾಡಬೇಕು. ಈ ಎಲ್ಲದರ ವಿಷಯದಲ್ಲಿಯೂ ವಿಚಾರಮಾಡಿ ನಿರ್ಣಯಿಸಲು ಬುದ್ಧಿವಂತಿಕೆಯನ್ನು ಆಶ್ರಯಿಸಬೇಕು.

ಬುದ್ಧಿರ್ದೀಪ್ತಾ ಬಲವನ್ತಂ ಹಿನಸ್ತಿ
ಬಲಂ ಬುದ್ಧ್ಯಾ ಪಾಲ್ಯತೇ ವರ್ಧಮಾನಮ್ ।
ಶತ್ರುರ್ಬುದ್ಧ್ಯಾ ಸೀದತೇ ವರ್ಧಮಾನೋ
ಬುದ್ಧೇಃ ಪಶ್ಚಾತ್ಕರ್ಮ ಯತ್ತತ್ಪ್ರಶಸ್ತಮ್ ॥೪೨॥

ಪ್ರತಿಭಾಯುಕ್ತವಾದ ಬುದ್ಧಿಯು ಬಲಿಷ್ಠನನ್ನೂ ವಿನಾಶಗೊಳಿಸುತ್ತದೆ. ನಷ್ಟವಾಗಿ ಹೋಗುತ್ತಿರುವ ಬಲದ ರಕ್ಷಣೆಯೂ ಬುದ್ಧಿಯ ಮೂಲಕವಾಗಿಯೇ ಆಗುತ್ತದೆ. ಪ್ರವೃದ್ಧನಾಗುತ್ತಿರುವ ಶತ್ರುವೂ ಬುದ್ಧಿಯ ಮೂಲಕವಾಗಿ ವಿನಾಶಹೊಂದುತ್ತಾನೆ. ಆದುದರಿಂದ ಮೊದಲು ಬುದ್ಧಿಯಿಂದ ಆಲೋಚಿಸಿ ಅನಂತರ ಕಾರ್ಯವನ್ನು ಮಾಡುವುದು ಬಹಳ ಪ್ರಶಸ್ತವಾಗಿರುತ್ತದೆ.

ಸರ್ವಾನ್ಕಾಮಾನ್ಕಾಮಯಾನೋ ಹಿ ಧೀರಃ
ಸತ್ತ್ವೇನಾಲ್ಪೇನಾಪ್ನುತೇ ಹೀನದೋಷಃ ।
ಯಶ್ಚಾತ್ಮಾನಂ ಪ್ರಾರ್ಥಯತೇಽರ್ಥ್ಯಮಾನೈಃ
ಶ್ರೇಯಃಪಾತ್ರಂ ಪೂರಯತೇ ಚ ನಾಲ್ಪಮ್ ॥೪೩॥

ಸಕಲದೋಷಗಳಿಂದಲೂ ರಹಿತನಾಗಿರುವ ಧೀರನಾದ ರಾಜನು ತಾನು ಅಪೇಕ್ಷಿಸುವ ಸಕಲವಿಧವಾದ ಕಾಮನೆಗಳನ್ನೂ ಅತ್ಯಲ್ಪವಾದ ಬಲಪ್ರಯೋಗದಿಂದಲೇ ಪಡೆದುಕೊಳ್ಳುತ್ತಾನೆ. ಯಾವ ರಾಜನು ಆವಶ್ಯಕ ವಸ್ತುಗಳಿಂದ ಸಂಪನ್ನನಾಗಿದ್ದರೂ ಮತ್ತೂ ಆಸೆಪಡುವನೋ ಮತ್ತು ಇತರರು ತನ್ನ ಆಸೆಯನ್ನು ಪೂರೈಸಿಕೊಡಬೇಕೆಂದು ಅಪೇಕ್ಷಿಸುವನೋ–

ಅಂತಹ ಲೋಭಿಯು ಶ್ರೇಯಸ್ಸಿನ ತನ್ನ ಸಣ್ಣ ಪಾತ್ರೆಯನ್ನೂ ತುಂಬಿ ಕೊಳ್ಳುವುದಿಲ್ಲ. ಅಂತಹವನಿಗೆ ಶ್ರೇಯಸ್ಸು ಸರ್ವಥಾ ಲಭಿಸುವುದಿಲ್ಲ.

ತಸ್ಮಾದ್ರಾಜಾ ಪ್ರಗೃಹೀತಃ ಪ್ರಜಾಸು
ಮೂಲಂ ಲಕ್ಷ್ಮ್ಯಾಃ ಸರ್ವಶೋ ಹ್ಯಾದದೀತ ।
ದೀರ್ಘಂ ಕಾಲಂ ಹ್ಯಪಿ ಸಮ್ಪೀಡ್ಯಮಾನೋ
ವಿದ್ಯುತ್ಸಮ್ಪಾತಮಪಿ ವಾ ನೋರ್ಜಿತಃ ಸ್ಯಾತ್ ॥೪೪॥

ಆದುದರಿಂದ ರಾಜನು ಎಲ್ಲ ಪ್ರಜೆಗಳನ್ನೂ ಅನುಗ್ರಹಬುದ್ಧಿಯಿಂದಲೇ ಕಾಣುತ್ತಾ ಸಂಪತ್ತಿಗೆ ಮೂಲಭೂತವಾದ ಕರವನ್ನು ಪ್ರಜೆಗಳಿಂದ ತೆಗೆದುಕೊಳ್ಳಬೇಕು. ದೀರ್ಘಕಾಲದವರೆಗೆ ಪ್ರಜೆಗಳನ್ನು ಪೀಡಿಸುತ್ತಾ ಮಿಂಚಿನಂತೆ ಅವರ ಮೇಲೆ ತನ್ನ ಪ್ರಭಾವವನ್ನು ಬೀರಲು ಹೋಗಬಾರದು.

ವಿದ್ಯಾ ತಪೋ ವಾ ವಿಪುಲಂ ಧನಂ ವಾ
ಸರ್ವಂ ಹ್ಯೇತದ್ವ್ಯವಸಾಯೇನ ಶಕ್ಯಮ್ ।
ಬುದ್ಧ್ಯಾ ಯತ್ತಂ ತನ್ನಿವಸೇದ್ದೇಹವತ್ಸು
ತಸ್ಮಾದ್ವಿದ್ಯಾದ್ವ್ಯವಸಾಯಂ ಪ್ರಭೂತಮ್ ॥೪೫॥

ವಿದ್ಯೆಯಾಗಲೀ, ತಪಸ್ಸಾಗಲೀ, ವಿಪುಲಧನವಾಗಲೀ–ಈ ಎಲ್ಲವೂ ಉದ್ಯೋಗದಿಂದ (ಕಾರ್ಯತತ್ಪರತೆಯಿಂದ) ಪ್ರಾಪ್ತವಾಗುತ್ತವೆ. ಮನುಷ್ಯರಲ್ಲಿ ಕಾರ್ಯತತ್ಪರತೆಯು ಬುದ್ಧಿಗೆ ಅಧೀನವಾಗಿರುತ್ತದೆ. ಆದುದರಿಂದ ಕಾರ್ಯತತ್ಪರತೆಯೇ ಕಾರ್ಯಸಿದ್ಧಿಗೆ ಪರ್ಯಾಪ್ತವಾದ ಸಾಧನವಾಗಿದೆ.

ಯತ್ರಾಸತೇ ಮತಿಮನ್ತೋ ಮನಸ್ವಿನಃ
ಶಕ್ರೋ ವಿಷ್ಣುರ್ಯತ್ರ ಸರಸ್ವತೀ ಚ ।
ವಸನ್ತಿ ಭೂತಾನಿ ಚ ಯತ್ರ ನಿತ್ಯಂ
ತಸ್ಮಾದ್ವಿದ್ವಾನ್ನಾವಮನ್ಯೇತ ದೇಹಮ್ ॥೪೬॥

ಯಾವ ಜ್ಞಾನೇಂದ್ರಿಯಗಳಲ್ಲಿ ಬುದ್ಧಿವಂತರಾದ, ಜಿತೇಂದ್ರಿಯರಾದ ಗೌತಮ-ಭರದ್ವಾಜ-ವಸಿಷ್ಠ-ವಿಶ್ವಾಮಿತ್ರರೇ ಮೊದಲಾದ ಮಹರ್ಷಿಗಳು ನಿವಾಸಮಾಡಿಕೊಂಡಿರುವರೋ, ಇಂದ್ರ-ವಿಷ್ಣು-ಸರಸ್ವತೀದೇವತೆಗಳು ಅಧಿಷ್ಠಾತೃದೇವತಾರೂಪದಲ್ಲಿ ನಿವಾಸಮಾಡಿಕೊಂಡಿರುವರೋ, ಯಾವುದರ

ಒಳಭಾಗದಲ್ಲಿ ಸಮಸ್ತವಾದ ಪ್ರಾಣಿಗಳೂ ನಿವಾಸಮಾಡಿಕೊಂಡಿವೆಯೋ–ಯಾವುದು ಸಮಸ್ತಪ್ರಾಣಿಗಳ ಜೀವನನಿರ್ವಹಣೆಗೆ ಆಧಾರಭೂತವಾಗಿರುವುದೋ–ಅಂತಹ ಮಾನವದೇಹವನ್ನು ವಿದ್ವಾಂಸನಾದವನು ಅವಹೇಳನ ಮಾಡಬಾರದು.

ಲುಬ್ಧಂ ಹನ್ಯಾತ್ಸಮ್ಪ್ರದಾನೇನ ನಿತ್ಯಂ
ಲುಬ್ಧಸ್ತೃಪ್ತಿಂ ಪರವಿತ್ತಸ್ಯ ನೈತಿ ।
ಸರ್ವೋ ಲುಬ್ಧಃ ಕರ್ಮಗುಣೋಪಭೋಗೇ
ಯೋಽರ್ಥೈರ್ಹೀನೋ ಧರ್ಮಕಾಮೌ ಜಹಾತಿ ॥೪೭॥

ಲೋಭಿಯಾದವನನ್ನು ನಿತ್ಯಕೊಡುಗೆಯಿಂದಲೇ ಗೆಲ್ಲಬೇಕು. ಲೋಭಿಯಾದವನಿಗೆ ಇತರರ ಐಶ್ವರ್ಯವು ಎಷ್ಟೇ ಲಭಿಸಿದರೂ ತೃಪ್ತಿಯೆಂಬುದೇ ಇರುವುದಿಲ್ಲ. ಸತ್ಕರ್ಮಗಳ ಫಲರೂಪವಾದ ಸುಖವನ್ನು ಪಡೆದುಕೊಳ್ಳಲು ಎಲ್ಲರೂ ಲುಬ್ಧರೇ ಆಗುತ್ತಾರೆ. ಧನಹೀನನಾದವನು ಧರ್ಮ-ಕಾಮಗಳೆರಡನ್ನೂ ಪರಿತ್ಯಜಿಸುತ್ತಾನೆ.

ಧನಂ ಭೋಗಂ ಪುತ್ರದಾರಂ ಸಮೃದ್ಧಿಂ
ಸರ್ವಂ ಲುಬ್ಧಃ ಪ್ರಾರ್ಥಯತೇ ಪರೇಷಾಮ್ ।
ಲುಬ್ಧೇ ದೋಷಾಃ ಸಮ್ಭವನ್ತೀಹ ಸರ್ವೇ
ತಸ್ಮಾದ್ರಾಜಾ ನ ಪ್ರಗೃಹ್ಣೀತ ಲುಬ್ಧಮ್ ॥೪೮॥

ಲೋಭಿಯಾದ ಮನುಷ್ಯನು ಇತರರಲ್ಲಿರುವ ಧನ, ಭೋಗಸಾಮಗ್ರಿಗಳು, ಸ್ತ್ರೀ-ಪುತ್ರರು ಮತ್ತು ಸಮೃದ್ಧಿ–ಇವೆಲ್ಲವನ್ನೂ ಪಡೆದುಕೊಳ್ಳಲು ಇಚ್ಛಿಸುತ್ತಾನೆ. ಲೋಭಿಗೆ ಬೇಡವಾದುದು ಯಾವುದೂ ಇರುವುದಿಲ್ಲ. ಲೋಭಿಯಲ್ಲಿ ಸರ್ವಪ್ರಕಾರವಾದ ದೋಷಗಳೂ ಇರುತ್ತವೆ. ಆದುದರಿಂದ ರಾಜನಾದವನು ಲೋಭಿಯನ್ನು ಯಾವ ಕಾರ್ಯದಲ್ಲಿಯೂ ನಿಯಮಿಸಿಕೊಳ್ಳಕೂಡದು.

ಸಂದರ್ಶನೇ ಸತ್ಪುರುಷಂ ಜಘನ್ಯಮಪಿ ಚೋದಯೇತ್ ।
ಆರಮ್ಭಾನ್ದ್ವಿಷತಾಂ ಪ್ರಾಜ್ಞಃ ಸರ್ವಾರ್ಥಾಂಶ್ಚ ಪ್ರಸೂದಯೇತ್ ॥೪೯॥

ಶತ್ರುಪಕ್ಷದ ಪರಿಸ್ಥಿತಿಯನ್ನು ನೋಡಿಬರಲು ಸತ್ಪುರುಷನನ್ನೂ ನೀಚಪುರುಷನನ್ನೂ ಕಳುಹಿಸಿಕೊಡಬೇಕು. ಪ್ರಾಜ್ಞನಾದ ರಾಜನು ಶತ್ರುಗಳು ಆರಂಭಿಸಿರುವ ಸರ್ವಾರ್ಥಯುಕ್ತವಾದ ಕಾರ್ಯಗಳನ್ನೂ ಧ್ವಂಸ ಮಾಡಿಸಬೇಕು.

ಧರ್ಮಾನ್ವಿತೇಷು ವಿಜ್ಞಾತಾ ಮನ್ತ್ರೀ ಗುಪ್ತಶ್ಚ ಪಾಣ್ಡವ ।
ಆಪ್ತೋ ರಾಜಾ ಕುಲೀನಶ್ಚ ಪರ್ಯಾಪ್ತೋ ರಾಜಸಂಗ್ರಹೇ ॥೫೦॥

ಯುಧಿಷ್ಠಿರ! ಧರ್ಮಾತ್ಮರಾದ ಮನುಷ್ಯರಲ್ಲಿ ಯಾವನು ರಾಜ್ಯಕ್ಕೆ ಸಂಬಂಧಿಸಿದ ಸಂಪೂರ್ಣವಿಷಯಗಳನ್ನೂ ವಿಶೇಷರೀತಿಯಲ್ಲಿ ತಿಳಿದು ಕೊಂಡಿರುವನೋ–ಅಂತಹವನನ್ನು ಮಂತ್ರಿಯನ್ನಾಗಿ ಮಾಡಿಕೊಳ್ಳಬೇಕು. ಅವನ ರಕ್ಷಣೆಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾದ ಮತ್ತು ಸತ್ಕುಲಪ್ರಸೂತನಾದ ರಾಜನು ಇತರ ಎಲ್ಲ ರಾಜರನ್ನೂ ತನ್ನ ಅಧೀನದಲ್ಲಿಟ್ಟುಕೊಳ್ಳಲು ಸಮರ್ಥನಾಗುತ್ತಾನೆ.

ವಿಧಿಪ್ರಯುಕ್ತಾನ್ನರದೇವಧರ್ಮಾ-
ನುಕ್ತಾನ್ಸಮಾಸೇನ ನಿಬೋಧ ಬುದ್ಧ್ಯಾ ।
ಇಮಾನ್ವಿದಧ್ಯಾದ್ವ್ಯತಿಸೃತ್ಯ ಯೋ ವೈ
ರಾಜಾ ಮಹೀಂ ಪಾಲಯಿತುಂ ಸ ಶಕ್ತಃ ॥೫೧॥

ಯುಧಿಷ್ಠಿರ! ಶಾಸ್ತ್ರೋಕ್ತವಾದ ರಾಜಧರ್ಮಗಳನ್ನು ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ. ನಾನು ಹೇಳಿರುವುದನ್ನು ಬುದ್ಧಿಯಿಂದ ವಿಚಾರ ಮಾಡಿ ಮನನಮಾಡು. ಯಾವ ರಾಜನು ಈ ರಾಜಧರ್ಮಗಳನ್ನು ಗುರುವಿ ನಿಂದ ಉಪದೇಶಪಡೆದು ಮನನಮಾಡಿ ಅದರಂತೆ ನಡೆದುಕೊಳ್ಳುವನೋ– ಅಂತಹವನು ಭೂಮಂಡಲವನ್ನೇ ಆಳಲು ಸಮರ್ಥನಾಗುತ್ತಾನೆ.

ಅನೀತಿಜಂ ಯಸ್ಯ ವಿಧಾನಜಂ ಸುಖಂ
ಹಠಪ್ರಣೀತಂ ವಿಧಿವತ್ಪ್ರದೃಶ್ಯತೇ ।
ನ ವಿದ್ಯತೇ ತಸ್ಯ ಗತಿರ್ಮಹೀಪತೇ-
ರ್ನ ವಿದ್ಯತೇ ರಾಜ್ಯಸುಖಂ ಹ್ಯನುತ್ತಮಮ್ ॥೫೨॥

ಅನ್ಯಾಯದಿಂದ ಆರ್ಜಿಸಿರುವುದು ; ಆಕಸ್ಮಾತ್ತಾಗಿ ಪ್ರಾಪ್ತವಾಗಿರು

ವುದು ಮತ್ತು ದೈವವಿಧಾನದ ಅನುಸಾರವಾಗಿ ಪ್ರಾಪ್ತವಾಗಿರುವುದು–ಇವು ಗಳೆಲ್ಲವೂ ವಿಧಿಯ ಅನುಸಾರವಾಗಿಯೇ ಪ್ರಾಪ್ತವಾದುವುಗಳೆಂಬಂತೆ ತೋರುತ್ತದೆ. ಆದರೆ ರಾಜಧರ್ಮಗಳನ್ನು ಚೆನ್ನಾಗಿ ತಿಳಿಯದವನಿಗೆ ಆಕಸ್ಮಿಕ ವಾಗಿ, ದೈವಗತಿಯಿಂದ ಅಥವಾ ಅನ್ಯಾಯದಿಂದ ರಾಜ್ಯಲಾಭವಾದರೂ ಅವನಿಗೆ ರಾಜ್ಯಭಾರಮಾಡಲು ಸರಿಯಾದ ಮಾರ್ಗವಿರುವುದಿಲ್ಲ. ಅಂತಹವ ನಿಗೆ ಶ್ರೇಷ್ಠವಾದ ರಾಜ್ಯಸುಖವೂ ಇರುವುದಿಲ್ಲ.

ಧನೈರ್ವಿಶಿಷ್ಟಾನ್ಮತಿಶೀಲಪೂಜಿತಾ-
ನ್ಗುಣೋಪಪನ್ನಾನ್ಯುಧಿ ದೃಷ್ಟವಿಕ್ರಮಾನ್ ।
ಗುಣೇಷು ದೃಷ್ಟ್ವಾ ನ ಚಿರಾದಿವಾತ್ಮವಾ-
ನ್ಯತೋಽಭಿಸಂಧಾಯ ನಿಹನ್ತಿ ಶಾಸ್ತವಾನ್ ॥೫೩॥

ಇಲ್ಲಿ ಹೇಳಿರುವ ರಾಜಧರ್ಮಗಳಿಗೆ ಅನುಸಾರವಾಗಿ ಸಂಧಿ-ವಿಗ್ರಹಾದಿ ಗುಣಗಳ ಪ್ರಯೋಗಗಳಲ್ಲಿ ಜಾಗರೂಕತೆಯಿಂದಿರುವ ಜಿತೇಂದ್ರಿಯನಾದ ರಾಜನು–ಧನಸಂಪನ್ನರಾದ, ಬುದ್ಧಿಯಿಂದಲೂ–ಸದ್ವೃತ್ತಿಯಿಂದಲೂ ಸಮ್ಮಾನಿತರಾದ, ಗುಣವಂತರಾದ, ಯುದ್ಧದಲ್ಲಿ ಮಹಾಪರಾಕ್ರಮವನ್ನೇ ತೋರಿಸಿರುವ ಮಹಾಶತ್ರುಗಳನ್ನು ಧ್ವಂಸಮಾಡುತ್ತಾನೆ.

ಪಶ್ಯೇದುಪಾಯಾನ್ವಿವಿಧೈಃ ಕ್ರಿಯಾಪಥೈ-
ರ್ನ ಚಾನುಪಾಯೇನ ಮತಿಂ ನಿವೇಶಯೇತ್ ।
ಶ್ರಿಯಂ ವಿಶಿಷ್ಟಾಂ ವಿಪುಲಂ ಯಶೋ ಧನಂ
ನ ದೋಷದರ್ಶೀ ಪುರುಷಃ ಸಮಶ್ನುತೇ ॥೫೪॥

ರಾಜನಾದವನು ನಾನಾಪ್ರಕಾರವಾದ ಕಾರ್ಯಗಳ ಮೂಲಕವಾಗಿ ಶತ್ರುವನ್ನು ಜಯಿಸಲು ಯೋಗ್ಯವಾದ ಉಪಾಯಗಳನ್ನು ಹುಡುಕಬೇಕು. ಉಪಾಯವಿಲ್ಲದೆ ಶತ್ರುವಿನ ರಾಜ್ಯವನ್ನು ಅಪಹರಿಸಲು ಇಚ್ಛಿಸಬಾರದು. ನಿರ್ದೋಷಿಗಳಲ್ಲಿಯೂ ದೋಷಗಳನ್ನು ಕಾಣುವ ಪುರುಷನು ವಿಶಿಷ್ಟವಾದ ಸಂಪತ್ತನ್ನೂ, ಮಹಾಯಶಸ್ಸನ್ನೂ, ಅಪಾರವಾದ ಧನವನ್ನೂ ಹೊಂದ ಲಾರನು.

ಪ್ರೀತಿಪ್ರವೃತ್ತೌ ವಿನಿವರ್ತಿತೌ ಯಥಾ
ಸುಹೃತ್ಸುವಿಜ್ಞಾಯ ನಿವೃತ್ಯ ಚೋಭಯೋಃ ।

ಯದೇವ ಮಿತ್ರಂ ಗುರುಭಾರಮಾವಹೇ-
ತ್ತದೇವ ಸುಸ್ನಿಗ್ಧಮುದಾಹರೇದ್ಬುಧಃ ॥೫೫॥

ಸುಹೃದರಲ್ಲಿ ಇಬ್ಬರು ಮಿತ್ರರು ಪರಸ್ಪರ ಪ್ರೀತಿಯಿಂದ ಕೂಡಿದವರಾಗಿ ಒಂದು ಕಾರ್ಯದಲ್ಲಿ ಪ್ರವೃತ್ತರಾಗುತ್ತಾರೆ. ಆ ಕಾರ್ಯವನ್ನು ಮುಗಿಸಿ ಹಿಂದಿರುಗುತ್ತಾರೆ. ಆ ಇಬ್ಬರು ಮಿತ್ರರಲ್ಲಿ ಯಾವನು ಕಾರ್ಯವನ್ನು ಚೆನ್ನಾಗಿ ತಿಳಿದುಕೊಂಡು ಕಾರ್ಯದ ಸಿದ್ಧಿಗಾಗಿ ಹೆಚ್ಚಿನ ಭಾರವನ್ನು ವಹಿಸುತ್ತಾನೆಯೋ-ಅಂತಹ ಜ್ಞಾನಿಯೇ ಪರಮಸ್ನೇಹಿತನೆಂಬುದಾಗಿ ಉದಾಹರಿಸುತ್ತಾರೆ.

ಏತಾನ್ಮಯೋಕ್ತಾಂಶ್ಚರ ರಾಜಧರ್ಮಾ-
ನ್ನೃಣಾಂ ಚ ಗುಪ್ತೌ ಮತಿಮಾದಧತ್ಸ್ವ ।
ಅವಾಪ್ಸ್ಯಸೇ ಪುಣ್ಯಫಲಂ ಸುಖೇನ
ಸರ್ವೋ ಹಿ ಲೋಕೋ ನೃಪ ಧರ್ಮಮೂಲಃ ॥೫೬॥

ಯುಧಿಷ್ಠಿರ! ನಾನು ಹೇಳಿರುವ ಈ ರಾಜಧರ್ಮಗಳನ್ನು ಆಚರಿಸು. ಪ್ರಜೆಗಳ ರಕ್ಷಣೆಯಲ್ಲಿ ಬುದ್ಧಿಯನ್ನಿಡು. ಇದರಿಂದ ಪುಣ್ಯಫಲವನ್ನು ಸುಖವಾಗಿ ಪಡೆದುಕೊಳ್ಳುವೆ. ಏಕೆಂದರೆ: ಸಂಪೂರ್ಣಜಗತ್ತಿಗೂ ರಾಜಧರ್ಮವೇ ಮೂಲವಾಗಿದೆ."

೧೨೦ನೆಯ ಅಧ್ಯಾಯವು ಮುಗಿಯಿತು.

೧೨೧ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ರಾಜದಂಡದ ಸ್ವರೂಪ-ನಾಮ-ಲಕ್ಷಣ-ಸ್ವಭಾವ ಮತ್ತು ಪ್ರಯೋಗಗಳ ವಿವರಣೆ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

"ಪಿತಾಮಹ! ನೀನು ಸನಾತನವಾದ ರಾಜಧರ್ಮವನ್ನು ಹೇಳಿರುವೆ. ತದನುಸಾರವಾಗಿ ರಾಜರ ಮಹಾದಂಡವೇ ಈಶ್ವರಸ್ವರೂಪವಾಗಿದೆ. ದಂಡದಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿವೆ. ದೇವತೆಗಳಿಗೂ, ಋಷಿಗಳಿಗೂ, ಪಿತೃಗಳಿಗೂ, ಮಹಾತ್ಮರಿಗೂ, ಯಕ್ಷ-ರಾಕ್ಷಸರಿಗೂ, ಪಿಶಾಚರಿಗೂ, ಸಾಧ್ಯ

ರಿಗೂ, ತಿರ್ಯಗ್ಯೋನಿಗಳಲ್ಲಿ ಹುಟ್ಟಿರುವ ಸಮಸ್ತ ಪಶು-ಪಕ್ಷಿಗಳಿಗೂ– ಸರ್ವವ್ಯಾಪಿಯಾದ, ಮಹಾತೇಜಸ್ಸಿನಿಂದ ಕೂಡಿರುವ ದಂಡವೇ ಶ್ರೇಯಸ್ಸಿಗೆ ಸಾಧನಭೂತವಾಗಿರುವುದೆಂದೂ ನೀನು ಹೇಳಿರುವೆ. ದೇವತೆಗಳಿಂದಲೂ, ಅಸುರರಿಂದಲೂ, ಮನುಷ್ಯರಿಂದಲೂ ಯುಕ್ತವಾದ ಸಂಪೂರ್ಣವಿಶ್ವವನ್ನೂ ಅವಲೋಕಿಸುತ್ತಾ–"ಸಚರಾಚರಂ ದಣ್ಡೇ ಆಸಕ್ತಂ–ದಂಡದಲ್ಲಿಯೇ ಚರಾಚರಜಗತ್ತೂ ಪ್ರತಿಷ್ಠಿತವಾಗಿದೆ" ಎಂದೂ ತಿಳಿಸಿರುವೆ. ಭರತಶ್ರೇಷ್ಠನೇ! ಅಂತಹ ದಂಡದ ವಿಷಯವನ್ನು ನಾನು ಯಥಾವತ್ತಾಗಿ ತಿಳಿದುಕೊಳ್ಳಲು ಇಚ್ಛಿಸಿದ್ದೇನೆ.

ಕೋ ದಣ್ಡಃ ಕೀದೃಶೋ ದಣ್ಡಃ ಕಿಂರೂಪಃ ಕಿಂಪರಾಯಣಃ ।
ಕಿಮಾತ್ಮಕಃ ಕಥಂಭೂತಃ ಕಥಂ ಮೂರ್ತಿಃ ಕಥಂ ಪ್ರಭೋ ॥೫॥

ದಂಡ ಎಂದರೆ ಯಾವುದು? ಅದು ಎಂತಹ ದಂಡ? ಅದರ ರೂಪವು ಹೇಗಿದೆ? ಅದು ಯಾರನ್ನು ಆಶ್ರಯಿಸಿದೆ? ಅದರ ಮೂಲವು ಯಾವುದು? ದಂಡವು ಹುಟ್ಟಿದುದು ಹೇಗೆ? ಅದರ ಆಕಾರವು ಹೇಗಿರುತ್ತದೆ?

ಜಾಗರ್ತಿ ಚ ಕಥಂ ದಣ್ಡಃ ಪ್ರಜಾಸ್ವವಹಿತಾತ್ಮಕಃ ।
ಕಶ್ಚಿತ್ ಪೂರ್ವಾಪರಮಿದಂ ಜಾಗರ್ತಿ ಪ್ರತಿಪಾಲಯನ್ ॥೬॥

ಯಾವ ರೀತಿಯಲ್ಲಿ ದಂಡವು ಜಾಗರೂಕತೆಯಿಂದಿದ್ದು ಎಲ್ಲ ಪ್ರಾಣಿಗಳನ್ನೂ ಶಾಸನಮಾಡಲು ಎಚ್ಚರಗೊಂಡಿರುತ್ತದೆ? ಪೂರ್ವಾಪರ ಜಗತ್ತನ್ನೂ ಯಾವುದು ಪರಿಪಾಲಿಸುತ್ತಾ ಸರ್ವಕಾಲದಲ್ಲಿಯೂ ಎಚ್ಚರ ಗೊಂಡಿರುತ್ತದೆ?

ಕಶ್ಚ ವಿಜ್ಞಾಯತೇ ಪೂರ್ವಂ ಕೋ ವರೋ ದಣ್ಡಸಂಜ್ಞಿತಃ ।
ಕಿಂಸಂಸ್ಥಶ್ಚ ಭವೇದ್ದಣ್ಡಃ ಕಾ ವಾಸ್ಯ ಗತಿರುಚ್ಯತೇ ॥೭॥

ಹಿಂದೆ ದಂಡವು ಯಾವ ಹೆಸರಿನಿಂದ ಪ್ರಸಿದ್ಧವಾಗಿತ್ತು? ದಂಡವೆಂಬ ಸಂಜ್ಞೆಯಿರುವ ವಸ್ತುಗಳಲ್ಲಿ ಶ್ರೇಷ್ಠವಾದುದು ಯಾವುದು? ದಂಡದ ಆಧಾರವು ಯಾವುದು? ಯಾವುದನ್ನು ಅದರ ಗತಿಯೆಂದು ಹೇಳುತ್ತಾರೆ?"

ಭೀಷ್ಮನು ಹೇಳುತ್ತಾನೆ :

ಶೃಣು ಕೌರವ್ಯ ಯೋ ದಣ್ಡೋ ವ್ಯವಹಾರೋ ಯಥಾ ಚ ಸಃ ।
ಯಸ್ಮಿನ್ಹಿ ಸರ್ವಮಾಯತ್ತಂ ಸ ದಣ್ಡ ಇಹ ಕೇವಲಃ ॥೮॥

"ಯುಧಿಷ್ಠಿರ! ದಂಡದ ಸ್ವರೂಪವು ಯಾವುದು? ಆ ದಂಡದ ವ್ಯವಹಾರವು ಹೇಗೆ ನಡೆಯುತ್ತದೆ?–ಈ ಎಲ್ಲ ವಿಷಯಗಳನ್ನೂ ಹೇಳುವೆನು; ಕೇಳು. ಈ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳೂ ಯಾವುದರಲ್ಲಿ ಆಶ್ರಯವನ್ನು ಪಡೆದಿವೆಯೋ–ಆ ವಸ್ತುವನ್ನೇ ಶ್ರೇಷ್ಠವಾದ ದಂಡವೆನ್ನುತ್ತಾರೆ.

ಧರ್ಮಸ್ಯಾಖ್ಯಾ ಮಹಾರಾಜ ವ್ಯವಹಾರ ಇತೀಷ್ಯತೇ ।
ತಸ್ಯ ಲೋಪಃ ಕಥಂ ನ ಸ್ಯಾಲ್ಲೋಕೇಷ್ವವಹಿತಾತ್ಮನಃ ।
ಇತ್ಯೇವಂ ವ್ಯವಹಾರಸ್ಯ ವ್ಯವಹಾರತ್ವಮಿಷ್ಯತೇ ॥೯॥

'ವ್ಯವಹಾರ' ಎಂಬುದು ಧರ್ಮದ ಮತ್ತೊಂದು ಹೆಸರು. ಲೋಕದಲ್ಲಿ ಜಾಗರೂಕತೆಯಿಂದ ಇರುವ ಮನುಷ್ಯನ ಧರ್ಮಕ್ಕೆ ಸ್ವಲ್ಪವೂ ಲೋಪ ವುಂಟಾಗದಿರುವುದಕ್ಕೆ ದಂಡದ ಆವಶ್ಯಕತೆಯಿದೆ. ಆದುದರಿಂದ ಈ ದಂಡವು ವ್ಯವಹಾರದ (ಧರ್ಮದ) ವ್ಯವಹಾರತ್ವವಾಗಿದೆ. (ವ್ಯವಹಾರದ ರೂಪವಾಗಿದೆ.)

ಹಿಂದೆ ಮನುವೂ ಇದನ್ನೇ ಸ್ಪಷ್ಟವಾಗಿ ಹೇಳಿದ್ದಾನೆ :

ಸುಪ್ರಣೀತೇನ ದಣ್ಡೇನ ಪ್ರಿಯಾಪ್ರಿಯಸಮಾತ್ಮನಾ ।
ಪ್ರಜಾ ರಕ್ಷತಿ ಯಃ ಸಮ್ಯಗ್ಧರ್ಮ ಏವ ಸ ಕೇವಲಃ ॥೧೦॥

"ಯಾವ ರಾಜನು ಪ್ರಿಯರಾದವರನ್ನೂ ಅಪ್ರಿಯರಾದವರನ್ನೂ ಸಮಾನಭಾವದಿಂದ ನೋಡುತ್ತಾ, ಯಾರಲ್ಲಿಯೂ ಪಕ್ಷಪಾತವಿಲ್ಲದೇ ದಂಡನೀತಿಯನ್ನು ಚೆನ್ನಾಗಿ ಪ್ರಯೋಗಿಸುತ್ತಾ, ಪ್ರಜೆಗಳನ್ನು ಚೆನ್ನಾಗಿ ರಕ್ಷಣೆ ಮಾಡುವನೋ–ಅವನು ಆಚರಿಸುವ ಆ ಕಾರ್ಯವೇ ಶ್ರೇಷ್ಠವಾದ ಧರ್ಮ ವಾಗಿರುತ್ತದೆ."

ಈ ಮಾತನ್ನು ಮನುವು ಬಹಳ ಹಿಂದೆಯೇ ಹೇಳಿದ್ದನು. ನಾನು ಹೇಳಿರುವುದು ಬ್ರಹ್ಮನು ಹೇಳಿದ ಉಕ್ತಿಯಾಗಿದೆ. ಮನುವು ಈ ಮಾತನ್ನು

ಬಹಳ ಹಿಂದೆಯೇ ಹೇಳಿದ್ದುದರಿಂದ ಇದನ್ನು ಪ್ರಾಗ್ವಚನವೆಂದೂ ಕರೆಯುತ್ತಾರೆ. ಆದರಿಂದ ವ್ಯವಹಾರದ ಪ್ರತಿಪಾದನೆಯಾಗುವುದರಿಂದ ಆ ಧರ್ಮವೇ 'ವ್ಯವಹಾರ' ಎಂಬ ಹೆಸರಿನಿಂದ ಇಲ್ಲಿ ಉಲ್ಲಿಖಿತವಾಗಿದೆ.

ದಣ್ಡೇ ತ್ರಿವರ್ಗಃ ಸತತಂ ಸುಪ್ರಣೀತೇ ಪ್ರವರ್ತತೇ ।
ದೈವಂ ಹಿ ಪರಮೋ ದಣ್ಡೋ ರೂಪತೋಽಗ್ನಿರಿವೋತ್ಥಿತಃ ॥೧೪॥

ರಾಜನು ದಂಡನೀತಿಯನ್ನು ಚೆನ್ನಾಗಿ ಪ್ರಯೋಗಿಸಿದ್ದೇ ಆದರೆ ಧರ್ಮಾರ್ಥ-ಕಾಮಗಳೆಂಬ ತ್ರಿವರ್ಗಗಳೂ ಸಿದ್ಧಿಸುತ್ತವೆ. ಆದುದರಿಂದ ದಂಡವು ಮಹಾದೇವತೆಯೇ ಆಗಿರುತ್ತದೆ. ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜೋರೂಪದಿಂದ ದಂಡವು ಪ್ರಕಟವಾಗುತ್ತದೆ.

ನೀಲೋತ್ಪಲದಲಶ್ಯಾಮಶ್ಚತುರ್ದಂಷ್ಟ್ರಶ್ಚತುರ್ಭುಜಃ ।
ಅಷ್ಟಪಾನ್ನೈಕನಯನಃ ಶಂಕುಕರ್ಣೋರ್ಧ್ವರೋಮವಾನ್ ॥೧೫॥

ದಂಡಪುರುಷನ ಶರೀರಕಾಂತಿಯು ನೀಲಕಮಲಕ್ಕೆ ಸಮಾನವಾಗಿ ಶ್ಯಾಮಲವರ್ಣವಾಗಿರುತ್ತದೆ. ದಂಡರೂಪಿಯಾದ ಪುರುಷನಿಗೆ ನಾಲ್ಕು ಕೋರೆದಾಡೆಗಳೂ–ನಾಲ್ಕು ಭುಜಗಳೂ ಇರುತ್ತವೆ. ಎಂಟು ಕಾಲುಗಳೂ, ಅನೇಕ ಕಣ್ಣುಗಳೂ ಇವೆ. ತೀಕ್ಷ್ಣವಾದ ಕಿವಿಗಳಿವೆ. ಶರೀರದ ರೋಮಗಳು ಊರ್ಧ್ವಮುಖವಾಗಿವೆ.

ಜಟೀ ದ್ವಿಜಿಹ್ವಸ್ತಾಮ್ರಾಸ್ಯೋ ಮೃಗರಾಜತನುಚ್ಛದಃ ।
ಏತದ್ರೂಪಂ ಬಿಭರ್ತ್ಯುಗ್ರಂ ದಣ್ಡೋ ನಿತ್ಯಂ ದುರಾಧರಃ ॥೧೬॥

ದಂಡಪುರುಷನು ಜಟೆಯನ್ನು ಧರಿಸುತ್ತಾನೆ. ಅವನಿಗೆ ಎರಡು ನಾಲಿಗೆಗಳಿವೆ. ಮುಖವು ಕೆಂಪಾಗಿದೆ. ಮೃಗರಾಜನಾದ ಸಿಂಹದ ಚರ್ಮ ವನ್ನು ಹೊದೆದುಕೊಂಡಿದ್ದಾನೆ. ಹೀಗೆ ದುರ್ಧರ್ಷನಾದ ದಂಡಪುರುಷನು ಸರ್ವಕಾಲದಲ್ಲಿಯೂ ಭಯಂಕರವಾದ ರೂಪವನ್ನು ಹೊಂದಿರುತ್ತಾನೆ.

ಅಸಿರ್ಧನುರ್ಗದಾ ಶಕ್ತಿಸ್ತ್ರಿಶೂಲಂ ಮುದ್ಗರಃ ಶರಃ ।
ಮುಸಲಂ ಪರಶುಶ್ಚಕ್ರಂ ಪಾಶೋ ದಣ್ಡರ್ಷ್ಟಿತೋಮರಾಃ ॥೧೭॥

ಸರ್ವಪ್ರಹರಣೀಯಾನಿ ಸನ್ತಿ ಯಾನೀಹ ಕಾನಿಚಿತ್ ।
ದಣ್ಡ ಏವ ಸ ಸರ್ವಾತ್ಮಾ ಲೋಕೇ ಚರತಿ ಮೂರ್ತಿಮಾನ್ ॥೧೮॥

ಖಡ್ಗ, ಧನುಸ್ಸು, ಗದೆ, ಶಕ್ತ್ಯಾಯುಧ, ತ್ರಿಶೂಲ, ಮುದ್ಗರ, ಬಾಣ, ಮುಸಲ, ಗಂಡುಗೊಡಲಿ, ಚಕ್ರ, ಪಾಶ, ದಂಡ, ಋಷ್ಟಿ, ತೋಮರಗಳು ಮತ್ತು ಇನ್ನೂ ಅನೇಕ ಪ್ರಕಾರವಾದ ಪ್ರಹಾರಯೋಗ್ಯಗಳಾದ ಅಸ್ತ್ರ-ಶಸ್ತ್ರ ಗಳು–ಈ ಎಲ್ಲ ರೂಪಗಳಿಂದಲೂ ಸರ್ವಾತ್ಮಕವಾದ ದಂಡವು ಮೂರ್ತ ಸ್ವರೂಪವನ್ನು ತಾಳಿ ಲೋಕದಲ್ಲಿ ಸಂಚರಿಸುತ್ತದೆ. (ಸಕಲವಿಧವಾದ ಆಯುಧಗಳೂ ದಂಡರೂಪದಲ್ಲಿಯೇ ಇವೆ.)

ಭಿನ್ದಂಶ್ಛಿನ್ದನ್ರುಜನ್ಕೃನ್ತನ್ದಾರಯನ್ಪಾಟಯಂಸ್ತಥಾ ।
ಘಾತಯನ್ನಭಿಧಾವಂಶ್ಚ ದಣ್ಡ ಏವ ಚರತ್ಯುತ ॥೧೯॥

ಅಪರಾಧಿಗಳನ್ನು ಭೇದಿಸುತ್ತಾ, ತುಂಡರಿಸುತ್ತಾ, ಪೀಡಿಸುತ್ತಾ, ಕತ್ತರಿಸುತ್ತಾ, ಸೀಳುತ್ತಾ, ಅಪ್ಪಳಿಸುತ್ತಾ, ಸಂಹರಿಸುತ್ತಾ, ಓಡುತ್ತಾ ದಂಡವು ಸರ್ವತ್ರ ಸಂಚರಿಸುತ್ತಿರುತ್ತದೆ.

ಅಸಿರ್ವಿಶಸನೋ ಧರ್ಮಸ್ತೀಕ್ಷ್ಣವರ್ಮಾ ದುರಾಧರಃ ।
ಶ್ರೀಗರ್ಭೋ ವಿಜಯಃ ಶಾಸ್ತಾ ವ್ಯವಹಾರಃ ಸನಾತನಃ ॥೨೦॥

ಶಾಸ್ತ್ರಂ ಬ್ರಾಹ್ಮಣಮನ್ತ್ರಾಶ್ಚ ಶಾಸ್ತಾ ಪ್ರಾಗ್ವದತಾಂ ವರಃ ।
ಧರ್ಮಪಾಲೋಽಕ್ಷರೋ ದೇವಃ ಸತ್ಯಗೋ ನಿತ್ಯಗೋಽಗ್ರಜಃ ॥೨೧॥

ಅಸಂಗೋ ರುದ್ರತನಯೋ ಮನುರ್ಜ್ಯೇಷ್ಠಃ ಶಿವಂಕರಃ ।
ನಾಮಾನ್ಯೇತಾನಿ ದಣ್ಡಸ್ಯ ಕೀರ್ತಿತಾನಿ ಯುಧಿಷ್ಠಿರ ॥೨೨॥

ಯುಧಿಷ್ಠಿರ! ಅಸಿ, ವಿಶಸನ, ಧರ್ಮ, ತೀಕ್ಷ್ಣವರ್ಮಾ, ದುರಾಧರ, ಶ್ರೀಗರ್ಭ, ವಿಜಯ, ಶಾಸ್ತಾ, ವ್ಯವಹಾರ, ಸನಾತನ, ಶಾಸ್ತ್ರ, ಬ್ರಾಹ್ಮಣ, ಮಂತ್ರ, ಶಾಸ್ತಾ, ಪ್ರಾಗ್ವದತಾಂವರ, ಧರ್ಮಪಾಲ, ಅಕ್ಷರ, ದೇವ, ಸತ್ಯಗ, ನಿತ್ಯಗ, ಅಗ್ರಜ, ಅಸಂಗ, ರುದ್ರತನಯ, ಮನು, ಜ್ಯೇಷ್ಠ ಮತ್ತು ಶಿವಂಕರ–ಇವುಗಳು ದಂಡದ ನಾಮಧೇಯಗಳೆಂದು ಕೀರ್ತಿತವಾಗಿವೆ.

ದಣ್ಡೋ ಹಿ ಭಗವಾನ್ವಿಷ್ಣುರ್ದಣ್ಡೋ ನಾರಾಯಣಃ ಪ್ರಭುಃ ।
ಶಶ್ವದ್ರೂಪಂ ಮಹದ್ಬಿಭ್ರನ್ಮಹಾನ್ಪುರುಷ ಉಚ್ಯತೇ ॥೨೩॥

ದಂಡವು ಸರ್ವತ್ರ ವ್ಯಾಪ್ತವಾಗಿರುವುದರಿಂದ ಅದು ಭಗವಂತನಾದ ವಿಷ್ಣುವೆಂದೇ ಕರೆಯಲ್ಪಡುತ್ತದೆ. ಮನುಷ್ಯರಿಗೆ ಆಶ್ರಯಭೂತವಾಗಿರು

ವುದರಿಂದ ದಂಡವನ್ನು ನಾರಾಯಣಸ್ವರೂಪವೆಂದೂ ಕರೆಯುತ್ತಾರೆ. ದಂಡವು ಪ್ರಭಾವಶಾಲಿಯಾದುದರಿಂದ ಅದನ್ನು ಪ್ರಭುವೆಂದೂ ಹೇಳುತ್ತಾರೆ. ಸರ್ವಕಾಲದಲ್ಲಿಯೂ ಮಹಾರೂಪವನ್ನು ಧಾರಣೆಮಾಡುವುದರಿಂದ ದಂಡವನ್ನು ಮಹಾಪುರುಷನೆಂದೂ ಕರೆಯುತ್ತಾರೆ.

ತಥೋಕ್ತಾ ಬ್ರಹ್ಮಕನ್ಯೇತಿ ಲಕ್ಷ್ಮೀರ್ವೃತ್ತಿಃ ಸರಸ್ವತೀ ।
ದಣ್ಡನೀತಿರ್ಜಗದ್ಧಾತ್ರೀ ದಣ್ಡೋ ಹಿ ಬಹುವಿಗ್ರಹಃ ॥೨೪॥

ಇದೇ ರೀತಿಯಲ್ಲಿ ದಂಡನೀತಿಯು ಬ್ರಹ್ಮನ ಮಗಳೆಂದೂ ಹೇಳಲ್ಪಟ್ಟಿದೆ. ಲಕ್ಷ್ಮೀ, ವೃತ್ತಿ, ಸರಸ್ವತೀ, ಜಗದ್ಧಾತ್ರೀ–ಇವುಗಳೂ ದಂಡನೀತಿಯ ನಾಮಧೇಯಗಳಾಗಿವೆ. ಹೀಗೆ ದಂಡಕ್ಕೆ ಅನೇಕರೂಪಗಳಿವೆ.

ಅರ್ಥಾನರ್ಥೌ ಸುಖಂ ದುಃಖಂ ಧರ್ಮಾಧರ್ಮೌ ಬಲಾಬಲೇ ।
ದೌರ್ಭಾಗ್ಯಂ ಭಾಗಧೇಯಂ ಚ ಪುಣ್ಯಾಪುಣ್ಯೇ ಗುಣಾಗುಣೌ ॥೨೫॥

ಕಾಮಾಕಾಮಾವೃತುರ್ಮಾಸಃ ಶರ್ವರೀ ದಿವಸಃ ಕ್ಷಣಃ ।
ಅಪ್ರಮಾದಃ ಪ್ರಮಾದಶ್ಚ ಹರ್ಷಕ್ರೋಧೌ ಶಮೋ ದಮಃ ॥೨೬॥

ದೈವಂ ಪುರುಷಕಾರಶ್ಚ ಮೋಕ್ಷಾಮೋಕ್ಷೌ ಭಯಾಭಯೇ ।
ಹಿಂಸಾಹಿಂಸೇ ತಪೋ ಯಜ್ಞಃ ಸಂಯಮೋಽಥ ವಿಷಾವಿಷಮ್ ॥೨೭॥

ಅನ್ತಶ್ಚಾದಿಶ್ಚ ಮಧ್ಯಂ ಚ ಕೃತ್ಯಾನಾಂ ಚ ಪ್ರಪಞ್ಚನಮ್ ।
ಮದಃ ಪ್ರಮಾದೋ ದರ್ಪಶ್ಚ ದಮ್ಭೋ ಧೈರ್ಯಂ ನಯಾನಯೌ ॥

ಅಶಕ್ತಿಃ ಶಕ್ತಿರಿತ್ಯೇವಂ ಮಾನಸ್ತಮ್ಭೌ ವ್ಯಯಾವ್ಯಯೌ ।
ವಿನಯಶ್ಚ ವಿಸರ್ಗಶ್ಚ ಕಾಲಾಕಾಲೌ ಚ ಭಾರತ ॥೨೯॥

ಅನೃತಂ ಜ್ಞಾನಿತಾ ಸತ್ಯಂ ಶ್ರದ್ಧಾಶ್ರದ್ಧೇ ತಥೈವ ಚ ।
ಕ್ಲೀಬತಾ ವ್ಯವಸಾಯಶ್ಚ ಲಾಭಾಲಾಭೌ ಜಯಾಜಯೌ ॥೩೦॥

ತೀಕ್ಷ್ಣತಾ ಮೃದುತಾ ಮೃತ್ಯುರಾಗಮಾನಾಗಮೌ ತಥಾ ।
ವಿರೋಧಶ್ಚಾವಿರೋಧಶ್ಚ ಕಾರ್ಯಾಕಾರ್ಯೇ ಬಲಾಬಲೇ ॥೩೧॥
ಅಸೂಯಾ ಚಾನಸೂಯಾ ಚ ಧರ್ಮಾಧರ್ಮೌ ತಥೈವ ಚ ।
ಅಪತ್ರಪಾನಪತ್ರಪೇ ಹ್ರೀಶ್ಚ ಸಮ್ಪದ್ವಿಪತ್ಪದಮ್ ॥೩೨॥

ತೇಜಃ ಕರ್ಮಾಣಿ ಪಾಣ್ಡಿತ್ಯಂ ವಾಕ್ಶಕ್ತಿಸ್ತತ್ತ್ವಬುದ್ಧಿತಾ ।
ಏವಂ ದಣ್ಡಸ್ಯ ಕೌರವ್ಯ ಲೋಕೇಽಸ್ಮಿನ್ಬಹುರೂಪತಾ ॥೩೩॥

ಅರ್ಥ-ಅನರ್ಥ, ಸುಖ-ದುಃಖ, ಧರ್ಮ-ಅಧರ್ಮ, ಬಲ-ಅಬಲ, ದೌರ್ಭಾಗ್ಯ-ಸೌಭಾಗ್ಯ, ಪುಣ್ಯ-ಪಾಪ, ಗುಣ-ಅವಗುಣ, ಕಾಮ-ಅಕಾಮ, ಋತು-ಮಾಸ, ದಿನ-ರಾತ್ರಿ, ಕ್ಷಣ, ಪ್ರಮಾದ-ಅಪ್ರಮಾದ, ಹರ್ಷ-ಕ್ರೋಧ, ಶಮ-ದಮ, ದೈವ-ಪುರುಷಕಾರ, ಬಂಧ-ಮೋಕ್ಷ, ಭಯ-ಅಭಯ, ಹಿಂಸೆ-ಅಹಿಂಸೆ, ತಪಸ್ಸು-ಯಜ್ಞ, ಸಂಯಮ, ವಿಷ-ಅವಿಷ, ಆದಿ-ಅಂತ-ಮಧ್ಯ, ಕಾರ್ಯವಿಸ್ತಾರ, ಮದ, ಅಸಾವಧಾನತೆ, ದರ್ಪ, ದಂಭ, ಧೈರ್ಯ, ನೀತಿ-ಅನೀತಿ, ಶಕ್ತಿ-ಅಶಕ್ತಿ, ಮಾನ, ಸ್ತಬ್ಧತೆ, ವ್ಯಯ-ಅವ್ಯಯ, ವಿನಯ, ದಾನ, ಕಾಲ-ಅಕಾಲ, ಸತ್ಯ-ಅಸತ್ಯ, ಜ್ಞಾನ, ಶ್ರದ್ಧೆ-ಅಶ್ರದ್ಧೆ, ಅಕರ್ಮಣ್ಯತೆ, ಉದ್ಯೋಗ, ಲಾಭ-ಹಾನಿ, ಜಯ-ಪರಾಜಯ, ತೀಕ್ಷ್ಣತೆ-ಮೃದುತ್ವ, ಮೃತ್ಯು, ಆಗಮ-ಅನಾಗಮ, ವಿರೋಧ-ಅವಿರೋಧ, ಕರ್ತವ್ಯ-ಅಕರ್ತವ್ಯ, ಸಬಲತೆ-ನಿರ್ಬಲತೆ, ಅಸೂಯೆ-ಅನಸೂಯತೆ, ಧರ್ಮ-ಅಧರ್ಮ, ಲಜ್ಜೆ-ನಿರ್ಲಜ್ಜೆ, ಸಂಪತ್ತಿ-ವಿಪತ್ತಿ, ಸ್ಥಾನ, ತೇಜಸ್ಸು, ಕರ್ಮ, ಪಾಂಡಿತ್ಯ, ವಾಕ್ಶಕ್ತಿ ಮತ್ತು ತತ್ತ್ವಬೋಧೆ–ಈ ಎಲ್ಲವೂ ದಂಡದ ಅನೇಕವಾದ ನಾಮಧೇಯಗಳೂ ಮತ್ತು ರೂಪಗಳೂ ಆಗಿವೆ. ಹೀಗೆ ದಂಡಕ್ಕೆ ವಿಶ್ವದಲ್ಲಿ ಬಹುರೂಪಗಳಿವೆ.

ನ ಸ್ಯಾದ್ಯದೀಹ ದಣ್ಡೋ ವೈ ಪ್ರಮಥೇಯುಃ ಪರಸ್ಪರಮ್ ।
ಭಯಾದ್ದಣ್ಡಸ್ಯ ನಾನ್ಯೋನ್ಯಂ ಘ್ನನ್ತಿ ಚೈವ ಯುಧಿಷ್ಠಿರ ॥೩೪॥

ಯುಧಿಷ್ಠಿರ! ಪ್ರಪಂಚದಲ್ಲಿ ದಂಡದ ವ್ಯವಸ್ಥೆಯೇ ಇಲ್ಲದಿದ್ದರೆ–ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಧ್ವಂಸಮಾಡಿಬಿಡುತ್ತಿದ್ದರು. ದಂಡದ ಭಯದಿಂದಾಗಿ ಮನುಷ್ಯನು ಒಬ್ಬನು ಮತ್ತೊಬ್ಬನನ್ನು ಸಂಹರಿಸುತ್ತಿಲ್ಲ.

ದಣ್ಡೇನ ರಕ್ಷ್ಯಮಾಣಾ ಹಿ ರಾಜನ್ನಹರಹಃ ಪ್ರಜಾಃ ।
ರಾಜಾನಂ ವರ್ಧಯನ್ತೀಹ ತಸ್ಮಾದ್ದಣ್ಡಃ ಪರಾಯಣಮ್ ॥೩೫॥

ಪ್ರಪಂಚದಲ್ಲಿ ದಂಡದಿಂದ ಸಂರಕ್ಷಿತರಾಗುವ ಪ್ರಜೆಗಳು ಪ್ರತಿದಿನವೂ

ರಾಜನನ್ನು ಧನ-ಧಾನ್ಯಗಳಿಂದ ಸಮೃದ್ಧನನ್ನಾಗಿ ಮಾಡುತ್ತಾರೆ. ಆದುದರಿಂದ ದಂಡವೇ ಎಲ್ಲರಿಗೂ ಆಶ್ರಯಭೂತವಾಗಿದೆ.

ವ್ಯವಸ್ಥಾಪಯತಿ ಕ್ಷಿಪ್ರಮಿಮಂ ಲೋಕಂ ನರೇಶ್ವರ ।
ಸತ್ಯೇ ವ್ಯವಸ್ಥಿತೋ ಧರ್ಮೋ ಬ್ರಾಹ್ಮಣೇಷ್ವವತಿಷ್ಠತೇ ॥೩೬॥

ನರೇಶ್ವರ! ದಂಡವೇ ಈ ಲೋಕವನ್ನು ಬಹಳ ಶೀಘ್ರವಾಗಿ ಸತ್ಯದಲ್ಲಿ ಪ್ರತಿಷ್ಠಾಪಿಸುತ್ತದೆ. ಸತ್ಯದಲ್ಲಿ ಧರ್ಮವು ಸುವ್ಯವಸ್ಥಿತವಾಗಿದೆ. ಅಂತಹ ಧರ್ಮವು ಬ್ರಾಹ್ಮಣರಲ್ಲಿ ಪ್ರತಿಷ್ಠಿತವಾಗಿದೆ.

ಧರ್ಮಯುಕ್ತಾ ದ್ವಿಜಶ್ರೇಷ್ಠಾ ವೇದಯುಕ್ತಾ ಭವನ್ತಿ ಚ ।
ಬಭೂವ ಯಜ್ಞೋ ವೇದೇಭ್ಯೋ ಯಜ್ಞಃ ಪ್ರೀಣಾತಿ ದೇವತಾಃ ॥೩೭॥
ಪ್ರೀತಾಶ್ಚ ದೇವತಾ ನಿತ್ಯಮಿನ್ದ್ರೇ ಪರಿವದನ್ತ್ಯಪಿ ।
ಅನ್ನಂ ದದಾತಿ ಶಕ್ರಶ್ಚಾಪ್ಯನುಗೃಹ್ಣನ್ನಿಮಾಃ ಪ್ರಜಾಃ ॥೩೮॥
ಪ್ರಾಣಾಶ್ಚ ಸರ್ವಭೂತಾನಾಂ ನಿತ್ಯಮನ್ನೇ ಪ್ರತಿಷ್ಠಿತಾಃ ।
ತಸ್ಮಾತ್ಪ್ರಜಾಃ ಪ್ರತಿಷ್ಠನ್ತೇ ದಣ್ಡೋ ಜಾಗರ್ತಿ ತಾಸು ಚ ॥೩೯॥

ಧರ್ಮಾತ್ಮರಾದ ಶ್ರೇಷ್ಠರಾದ ಬ್ರಾಹ್ಮಣರು ದಂಡದ ಪ್ರಭಾವದಿಂದಲೇ ವೇದಗಳ ಅಧ್ಯಯನವನ್ನು ಮಾಡುತ್ತಾರೆ. ವೇದಗಳಿಂದ ಯಜ್ಞವು ಪ್ರಾದುರ್ಭೂತವಾಗುತ್ತದೆ. ಯಜ್ಞವು ದೇವತೆಗಳನ್ನು ತೃಪ್ತಿಗೊಳಿಸುತ್ತದೆ. ಸುಪ್ರೀತರಾದ ದೇವತೆಗಳು ಪ್ರಜೆಗಳ ಯೋಗ-ಕ್ಷೇಮಗಳಿಗಾಗಿ ಪ್ರತಿದಿನವೂ ಇಂದ್ರನನ್ನು ಪ್ರಾರ್ಥಿಸುತ್ತಾರೆ. ತೃಪ್ತನಾದ ಇಂದ್ರನು ಪ್ರಜೆಗಳನ್ನು ಅನುಗ್ರಹಿಸುತ್ತಾ ಪ್ರಜೆಗಳಿಗೆ ಅನ್ನವನ್ನು ದಯಪಾಲಿಸುತ್ತಾನೆ. ಎಲ್ಲ ಪ್ರಾಣಿಗಳ ಪ್ರಾಣಗಳೂ ಸರ್ವದಾ ಅನ್ನದಲ್ಲಿಯೇ ಪ್ರತಿಷ್ಠಿತವಾಗಿವೆ. ಆದುದರಿಂದ ದಂಡದಲ್ಲಿಯೇ ಸಕಲಪ್ರಜೆಗಳೂ ಪ್ರತಿಷ್ಠಿತರಾಗಿರುತ್ತಾರೆ. ಪ್ರಜೆಗಳ ರಕ್ಷಣೆಗಾಗಿ ದಂಡವು ಸದಾ ಜಾಗ್ರತವಾಗಿರುತ್ತದೆ.

ಏವಂಪ್ರಯೋಜನಶ್ಚೈವ ದಣ್ಡಃ ಕ್ಷತ್ರಿಯತಾಂ ಗತಃ ।
ರಕ್ಷನ್ಪ್ರಜಾಃ ಸ ಜಾಗರ್ತಿ ನಿತ್ಯಂ ಸ್ವವಹಿತೋಽಕ್ಷರಃ ॥೪೦॥

ಈ ಪ್ರಕಾರವಾಗಿ ಪ್ರಜೆಗಳ ರಕ್ಷಾರೂಪವಾದ ಪ್ರಯೋಜನವುಳ್ಳ

ದಂಡವು ಕ್ಷತ್ರಿಯಭಾವವನ್ನು ಹೊಂದಿದೆ. ಅವಿನಾಶಿಯಾದ ಕಾರಣದಿಂದಲೇ ಸರ್ವಕಾಲದಲ್ಲಿಯೂ ಸಾವಧಾನದಿಂದಿರುವ ದಂಡವು ಪ್ರಜೆಗಳ ರಕ್ಷಣೆಗಾಗಿ ಜಾಗ್ರತವಾಗಿರುತ್ತದೆ.

ಈಶ್ವರಃ ಪುರುಷಃ ಪ್ರಾಣಃ ಸತ್ತ್ವಂ ಚಿತ್ತಂ ಪ್ರಜಾಪತಿಃ ।
ಭೂತಾತ್ಮಾ ಜೀವ ಇತ್ಯೇವಂ ನಾಮಭಿಃ ಪ್ರೋಚ್ಯತೇಽಷ್ಟಭಿಃ ॥೪೧॥

ಈಶ್ವರ, ಪುರುಷ, ಪ್ರಾಣ, ಸತ್ತ್ವ, ಚಿತ್ತ, ಪ್ರಜಾಪತಿ, ಭೂತಾತ್ಮಾ ಮತ್ತು ಜೀವ–ಎಂಬ ಎಂಟು ಹೆಸರುಗಳಿಂದಲೂ ದಂಡವು ಕರೆಯಲ್ಪಡುತ್ತದೆ.

ಅದದದ್ದಣ್ಡಮೇವಾಸ್ಮೈ ಧೃತಮೈಶ್ವರ್ಯಮೇವ ಚ ।
ಬಲೇನ ಯಶ್ಚ ಸಂಯುಕ್ತಃ ಸದಾ ಪಞ್ಚವಿಧಾತ್ಮಕಃ ॥೪೨॥

ಯಾವನು ಯಾವಾಗಲೂ ಸೈನ್ಯಬಲದಿಂದ ಸಂಪನ್ನನಾಗಿರುವನೋ, ಧರ್ಮ, ವ್ಯವಹಾರ, ದಂಡ, ಈಶ್ವರ ಮತ್ತು ಜೀವ–ಈ ಐದು ವಿಧವಾದ ಸ್ವರೂಪಗಳನ್ನೂ ಧರಿಸಿರುವನೋ–ಅಂತಹ ರಾಜನಿಗೆ ಈಶ್ವರನೇ ದಂಡ ನೀತಿಯನ್ನೂ ತನ್ನ ಐಶ್ವರ್ಯವನ್ನೂ ಕೊಟ್ಟಿರುತ್ತಾನೆ.

ಕುಲಂ ಬಹುಧನಾಮಾತ್ಯಾಃ ಪ್ರಜ್ಞಾ ಪ್ರೋಕ್ತಾ ಬಲಾನಿ ತು ।
ಆಹಾರ್ಯಮಷ್ಟಕೈರ್ದ್ರವ್ಯೈರ್ಬಲಮನ್ಯದ್ಯುಧಿಷ್ಠಿರ ॥೪೩॥

ಯುಧಿಷ್ಠಿರ! ರಾಜನ ಬಲವು ಎರಡು ಪ್ರಕಾರವಾಗಿರುತ್ತದೆ. ಒಂದು–ಪ್ರಾಕೃತ. ಮತ್ತೊಂದು–ಆಹಾರ್ಯ. ಕುಲ, ಹೇರಳವಾದ ಧನ, ಮಂತ್ರಿಗಳು ಮತ್ತು ಬುದ್ಧಿ–ಇವು ನಾಲ್ಕು ಪ್ರಾಕೃತಬಲಗಳು. ಆಹಾರ್ಯಬಲವು ಇದಕ್ಕೆ ಭಿನ್ನವಾಗಿದ್ದು ಎಂಟು ವಿಧವಾದ ದ್ರವ್ಯಗಳಿಂದ ಕೂಡಿದೆ.

ಹಸ್ತಿನೋಽಶ್ವಾ ರಥಾಃ ಪತ್ತಿರ್ನಾವೋ ವಿಷ್ಟಿಸ್ತಥೈವ ಚ ।
ದೈಶಿಕಾಶ್ಚಾವಿಕಾಶ್ಚೈವ ತದಷ್ಟಾಙ್ಗಂ ಬಲಂ ಸ್ಮೃತಮ್ ॥೪೪॥

ಆನೆ, ಕುದುರೆ, ರಥ, ಕಾಲಾಳು, ನೌಕೆ, ಶಿಕ್ಷೆಗೆ ಕೆಲಸಮಾಡುವವರು (ಸಶ್ರಮಶಿಕ್ಷೆಗೆ ಗುರಿಯಾಗಿ ಕೆಲಸಮಾಡುವವರು), ದೇಶದ ಪ್ರಜೆಗಳು ಮತ್ತು ಕುರಿಯೇ ಮೊದಲಾದ ಪ್ರಾಣಿಗಳು–ಎಂಬ ಅಷ್ಟಾಂಗ ಬಲಗಳು ಆಹಾರ್ಯವೆಂಬ ಹೆಸರಿನಿಂದ ಕರೆಯಲ್ಪಟ್ಟಿವೆ.

ಅಥವಾಙ್ಗಸ್ಯ ಯುಕ್ತಸ್ಯ ರಥಿನೋ ಹಸ್ತಿಯಾಯಿನಃ ।
ಅಶ್ವಾರೋಹಾಃ ಪದಾತಾಶ್ಚ ಮನ್ತ್ರಿಣೋ ರಸದಾಶ್ಚ ಯೇ ॥೪೫॥

ಭಿಕ್ಷುಕಾಃ ಪ್ರಾಡ್ವಿವಾಕಾಶ್ಚ ಮೌಹೂರ್ತಾ ದೈವಚಿನ್ತಕಾಃ ।
ಕೋಶೋ ಮಿತ್ರಾಣಿ ಧಾನ್ಯಂ ಚ ಸರ್ವೋಪಕರಣಾನಿ ಚ ॥೪೬॥

ಸಪ್ತಪ್ರಕೃತಿ ಚಾಷ್ಟಾಙ್ಗಂ ಶರೀರಮಿಹ ಯದ್ವಿದುಃ ।
ರಾಜ್ಯಸ್ಯ ದಣ್ಡಮೇವಾಙ್ಗಂ ದಣ್ಡಃ ಪ್ರಭವ ಏವ ಚ ॥೪೭॥

ಸುಸಜ್ಜಿತವಾದ ಸೈನ್ಯದಿಂದ ಯುಕ್ತರಾದ ರಥಿಕರು, ಗಜಾರೋಹಿಗಳು, ಅಶ್ವಾರೋಹಿಗಳು, ಪದಾತಿಗಳು, ಮಂತ್ರಿಗಳು, ವೈದ್ಯರು, ಭಿಕ್ಷುಕರು, ನ್ಯಾಯವಾದಿಗಳು, ಜ್ಯೌತಿಷಿಕರು, ದೈವಜ್ಞರು, ಕೋಶ, ಮಿತ್ರರು, ಧಾನ್ಯ, ಸಕಲವಿಧವಾದ ಉಪಕರಣಗಳು, ಸ್ವಾಮೀ-ಅಮಾತ್ಯ-ಸುಹೃತ್-ಕೋಶ-ರಾಷ್ಟ್ರ-ದುರ್ಗ-ಸೈನ್ಯ ಎಂಬ ಸಪ್ತಪ್ರಕೃತಿಗಳು, ಮೇಲೆ ಹೇಳಿದ ಅಷ್ಟಾಂಗ ಯುಕ್ತವಾದ ಬಲ–ಇವುಗಳೆಲ್ಲವನ್ನೂ ರಾಜ್ಯದ ಶರೀರವೆನ್ನುತ್ತಾರೆ. ಇವುಗಳೆಲ್ಲಕ್ಕೂ ದಂಡವೇ ಪ್ರಧಾನವಾದ ಅಂಗವಾಗಿದೆ. ಏಕೆಂದರೆ : ದಂಡವೇ ಇವುಗಳೆಲ್ಲದರ ಕಾರಣಭೂತವಾಗಿದೆ.

ಈಶ್ವರೇಣ ಪ್ರಯತ್ನೇನ ಕಾರಣಾತ್ಕ್ಷತ್ರಿಯಸ್ಯ ಚ ।
ದಣ್ಡೋ ದತ್ತಃ ಸಮಾನಾತ್ಮಾ ದಣ್ಡೋ ಹೀದಂ ಸನಾತನಮ್ ॥೪೮॥

ಈಶ್ವರನು ಪ್ರಯತ್ನಪೂರ್ವಕವಾಗಿ ಧರ್ಮರಕ್ಷಣಾರ್ಥವಾಗಿ ಕ್ಷತ್ರಿಯನ ಕೈಯಲ್ಲಿ–ಕ್ಷತ್ರಿಯನಿಗೆ ಸಮಾನಜಾತಿಯದಾದ ದಂಡವನ್ನು ಕೊಟ್ಟಿರುತ್ತಾನೆ. ಆದುದರಿಂದ ದಂಡವು ಸನಾತನವಾಗಿದೆ.

ರಾಜ್ಞಾಂ ಪೂಜ್ಯತಮೋ ನಾನ್ಯೋ ಯಥಾ ಧರ್ಮಃ ಪ್ರದರ್ಶಿತಃ ।
ಬ್ರಹ್ಮಣಾ ಲೋಕರಕ್ಷಾರ್ಥಂ ಸ್ವಧರ್ಮಸ್ಥಾಪನಾಯ ಚ ॥೪೯॥

ಬ್ರಹ್ಮನು ಲೋಕದ ರಕ್ಷಣಾರ್ಥವಾಗಿಯೂ, ಸ್ವಧರ್ಮವನ್ನು ಸ್ಥಾಪಿಸುವ ಸಲುವಾಗಿಯೂ ಯಾವ ಧರ್ಮವನ್ನು ಉಪದೇಶಿಸಿರುವನೋ–ಅದು ದಂಡನೀತಿಯೇ ಆಗಿದೆ. ರಾಜರಿಗೆ ದಂಡನೀತಿಗಿಂತಲೂ ಪೂಜ್ಯತಮವಾದ ಧರ್ಮವು ಮತ್ತೊಂದಿರುವುದಿಲ್ಲ.

ಭರ್ತೃಪ್ರತ್ಯಯ ಉತ್ಪನ್ನೋ ವ್ಯವಹಾರಸ್ತಥಾಪರಃ ।
ತಸ್ಮಾದ್ಯಃ ಸ ಹಿತೋ ದೃಷ್ಟೋ ಭರ್ತೃಪ್ರತ್ಯಯಲಕ್ಷಣಃ ॥೫೦॥

ಸ್ವಾಮಿಯ ಮೇಲಿನ ವಿಶ್ವಾಸದಿಂದ ಯಾವ ಧರ್ಮವು ಉತ್ಪನ್ನವಾಗುವುದೋ ಆ ಧರ್ಮವು ವಾದಿ-ಪ್ರತಿವಾದಿಗಳ ವ್ಯವಹಾರಕ್ಕಿಂತಲೂ ಭಿನ್ನವಾದುದು. ಸ್ವಾಮಿಯ ಮೇಲಿನ ವಿಶ್ವಾಸವೇ ಲಕ್ಷಣವಾಗಿ ಇರುವ ಭರ್ತೃಪ್ರತ್ಯಯಲಕ್ಷಣವೆಂಬ ಈ ವ್ಯವಹಾರವು ಸಂಪೂರ್ಣವಾದ ಜಗತ್ತಿಗೂ ಹಿತವನ್ನುಂಟುಮಾಡುವುದೆಂದು ಕಂಡುಬಂದಿದೆ. (ವಾದಿಗೂ-ಪ್ರತಿವಾದಿಗೂ ಉತ್ಪನ್ನವಾಗುವ ವ್ಯವಹಾರವು ಭರ್ತೃಪ್ರತ್ಯಯವ್ಯವಹಾರ ; ಮತ್ತೊಂದು ಭರ್ತೃಪ್ರತ್ಯಯಲಕ್ಷಣ : ವಾದಿ-ಪ್ರತಿವಾದಿಗಳಲ್ಲಿ ಒಬ್ಬನಲ್ಲಿ ನಂಬಿಕೆಯಿಂದ ನಿರ್ಣೀತವಾಗುವ ವ್ಯವಹಾರ. ಇದು ಹಿತಕರವಾದುದು–ಎಂದು ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ.)

ವ್ಯವಹಾರಸ್ತು ವೇದಾತ್ಮಾ ವೇದಪ್ರತ್ಯಯ ಉಚ್ಯತೇ ।
ಮೌಲಶ್ಚ ನರಶಾರ್ದೂಲ ಶಾಸ್ತ್ರೋಕ್ತಶ್ಚ ತಥಾ ಪರಃ ॥೫೧॥

ನರಶ್ರೇಷ್ಠನೇ! ವೇದವೇ ಆತ್ಮವಾಗಿ ಉಳ್ಳ ವ್ಯವಹಾರವು ವೇದಪ್ರತ್ಯಯವ್ಯವಹಾರವೆಂದು ಹೇಳಲ್ಪಟ್ಟಿದೆ. ಕುಲಾಚಾರದ ಸಂಬಂಧವಾಗಿರುವ 'ಮೌಲ' ಎಂಬ ಶಾಸ್ತ್ರೋಕ್ತವಾದ ವ್ಯವಹಾರವೂ ಮತ್ತೊಂದಿರುವುದು.

ಉಕ್ತೋ ಯಶ್ಚಾಪಿ ದಣ್ಡೋಽಸೌ ಭರ್ತೃಪ್ರತ್ಯಯಲಕ್ಷಣಃ ।
ಜ್ಞೇಯೋ ನಃ ಸ ನರೇನ್ದ್ರಸ್ಥೋ ದಣ್ಡಃ ಪ್ರತ್ಯಯ ಏವ ಚ ॥೫೨॥

ಹಿಂದೆ ಹೇಳಿದ ಭರ್ತೃಪ್ರತ್ಯಯಲಕ್ಷಣವೆಂಬ (ಭರ್ತೃವಿಶ್ವಾಸವೇ ಲಕ್ಷಣವಾಗಿ ಉಳ್ಳ) ದಂಡವು ನಮ್ಮ ರಾಜರಲ್ಲಿಯೇ ಇರತಕ್ಕದ್ದೆಂದು ತಿಳಿಯಬೇಕು. ಏಕೆಂದರೆ : ದಂಡ ಮತ್ತು ವಿಶ್ವಾಸಗಳು ರಾಜರನ್ನೇ ಅವಲಂಬಿಸಿವೆ.

ದಣ್ಡಃ ಪ್ರತ್ಯಯದೃಷ್ಟೋಽಪಿ ವ್ಯವಹಾರಾತ್ಮಕಃ ಸ್ಮೃತಃ ।
ವ್ಯವಹಾರಃ ಸ್ಮೃತೋ ಯಶ್ಚ ಸ ವೇದವಿಷಯಾತ್ಮಕಃ ॥೫೩॥

ಯದ್ಯಪಿ ದಂಡವು ಸ್ವಾಮಿಯ ವಿಶ್ವಾಸದ ಆಧಾರದ ಮೇಲೆಯೇ ಇದೆ

ಯಾದರೂ ತಥಾಪಿ ಅಂತಹ ದಂಡವನ್ನು ವ್ಯವಹಾರಾತ್ಮಕವೆಂದು (ಧರ್ಮಾತ್ಮಕವೆಂದು) ಹೇಳುತ್ತಾರೆ. ವ್ಯವಹಾರಾತ್ಮಕವೆಂದು ಕರೆಯಲ್ಪಡುವ ಈ ದಂಡವು ವೇದಪ್ರತಿಪಾದ್ಯವಾದ ವಿಷಯಗಳನ್ನೇ ಹೊಂದಿದೆ.

ಯಶ್ಚ ವೇದಪ್ರಸೂತಾತ್ಮಾ ಸ ಧರ್ಮೋ ಗುಣದರ್ಶನಃ ।
ಧರ್ಮಪ್ರತ್ಯಯ ಉದ್ದಿಷ್ಟೋ ಯಥಾಧರ್ಮಂ ಕೃತಾತ್ಮಭಿಃ ॥೫೪॥

ಯಾವುದು ವೇದದಿಂದ ಹುಟ್ಟಿದ ಆತ್ಮವುಳ್ಳದ್ದಾಗಿರುವುದೋ–ಅದೇ ಧರ್ಮ. ಧರ್ಮವು ಗುಣವನ್ನು (ಲಾಭವನ್ನು) ತೋರಿಸುವುದಾಗಿರುತ್ತದೆ. ಪುಣ್ಯಾತ್ಮರಾದ ಪುರುಷರು ಧರ್ಮಾನುಸಾರವಾಗಿಯೇ ಧರ್ಮವಿಶ್ವಾಸ ಮೂಲಕವಾದ ದಂಡವನ್ನು ಪ್ರತಿಪಾದಿಸಿದ್ದಾರೆ.

ವ್ಯವಹಾರಃ ಪ್ರಜಾ ಗೋಪ್ತಾ ಬ್ರಹ್ಮದಿಷ್ಟೋ ಯುಧಿಷ್ಠಿರ ।
ತ್ರೀನ್ಧಾರಯತಿ ಲೋಕಾನ್ವೈ ಸತ್ಯಾತ್ಮಾ ಭೂತಿವರ್ಧನಃ ॥೫೫॥

ಯುಧಿಷ್ಠಿರ! ಬ್ರಹ್ಮನು ಹೇಳಿರುವ ಯಾವ ಪ್ರಜಾರಕ್ಷಣವೆಂಬ ವ್ಯವಹಾರವಿರುವುದೋ–ಅದು ಸತ್ಯಸ್ವರೂಪವಾದುದು. ಐಶ್ವರ್ಯವನ್ನು ವರ್ಧಿಸತಕ್ಕುದು. ಮೂರು ಲೋಕಗಳನ್ನೂ ಅದು ಧರಿಸಿರುತ್ತದೆ.

ಯಶ್ಚ ದಣ್ಡಃ ಸ ದೃಷ್ಟೋ ನೋ ವ್ಯವಹಾರಃ ಸನಾತನಃ ।
ವ್ಯವಹಾರಶ್ಚ ದೃಷ್ಟೋ ಯಃ ಸ ವೇದ ಇತಿ ನಿಶ್ಚಿತಮ್ ॥೫೬॥

ಯಾವುದು ದಂಡವೋ ಅದು ನಮ್ಮ ದೃಷ್ಟಿಯಲ್ಲಿ ಸನಾತನವಾದ ವ್ಯವಹಾರವಾಗಿದೆ. ಯಾವುದು ವ್ಯವಹಾರದಂತೆ ಕಾಣುತ್ತದೆಯೋ–ಅದೇ ವೇದವಾಗಿದೆ. ಇದು ನಿಶ್ಚಯ. (ಈ ಪ್ರಕರಣದಲ್ಲಿ ಹೇಳಿರುವ ವೇದವಿಹಿತವಾದ ವ್ಯವಹಾರ, ಕುಲಾಚಾರಮೂಲವಾದ ವ್ಯವಹಾರ ಮತ್ತು ರಾಜಮೂಲವಾದ ವ್ಯವಹಾರ–ಈ ಮೂರು ವಿಧವಾದ ವ್ಯವಹಾರಗಳೂ ವೇದೋಕ್ತವಾದ ವ್ಯವಹಾರಗಳೇ–ಎಂದು ವ್ಯಾಖ್ಯಾನಕಾರರು ಪ್ರತಿಪಾದಿಸಿದ್ದಾರೆ.)

ಯಶ್ಚ ವೇದಃ ಸ ವೈ ಧರ್ಮೋ ಯಶ್ಚ ಧರ್ಮ ಸ ಸತ್ಪಥಃ ।
ಬ್ರಹ್ಮಾ ಪಿತಾಮಹಃ ಪೂರ್ವಂ ಬಭೂವಾಥ ಪ್ರಜಾಪತಿಃ ॥೫೭॥

ಯಾವುದು ವೇದವೋ–ಅದೇ ಧರ್ಮ. ಯಾವುದು ಧರ್ಮವೋ–

ಅದು ಸತ್ಪುರುಷರ ಸನ್ಮಾರ್ಗವಾಗಿದೆ. ಸತ್ಪುರುಷನಾದ, ಲೋಕಪಿತಾಮಹನಾದ ಪ್ರಜಾಪತಿಬ್ರಹ್ಮನು ಮೊದಲು ಪ್ರಕಟವಾದನು.

ಲೋಕಾನಾಂ ಸ ಹಿ ಸರ್ವೇಷಾಂ ಸಸುರಾಸುರರಕ್ಷಸಾಮ್ ।
ಸಮನುಷ್ಯೋರಗವತಾಂ ಕರ್ತಾ ಚೈವ ಸ ಭೂತಕೃತ್ ॥೫೮॥

ಆ ಪ್ರಜಾಪತಿಬ್ರಹ್ಮನೇ ದೇವ-ಮನುಷ್ಯ-ನಾಗಾಸುರ-ರಾಕ್ಷಸರಿಂದ ಯುಕ್ತವಾದ ಸಂಪೂರ್ಣಜಗತ್ತಿಗೂ ಕರ್ತನಾಗಿದ್ದಾನೆ. ಅವನೇ ಸಮಸ್ತ ಪ್ರಾಣಿಗಳನ್ನೂ ಸೃಷ್ಟಿಸಿದ್ದಾನೆ.

ತತೋಽನ್ಯೋ ವ್ಯವಹಾರೋಽಯಂ ಭರ್ತೃಪ್ರತ್ಯಯಲಕ್ಷಣಃ ।
ತಸ್ಮಾದಿದಮಥೋವಾಚ ವ್ಯವಹಾರನಿದರ್ಶನಮ್ ॥೫೯॥

ಇದಲ್ಲದೇ ಸ್ವಾಮಿಯ ವಿಶ್ವಾಸವನ್ನೇ ಲಕ್ಷಣವನ್ನಾಗಿ ಹೊಂದಿರುವ ಮತ್ತೊಂದು ವ್ಯವಹಾರವೂ ಇದೆ. ಆ ವ್ಯವಹಾರಕ್ಕೆ ನಿದರ್ಶನಪೂರ್ವಕವಾಗಿ ಬ್ರಹ್ಮನು ಈ ಮಾತನ್ನು ಹೇಳಿದ್ದಾನೆ.

ಮಾತಾ ಪಿತಾ ಚ ಭ್ರಾತಾ ಚ ಭಾರ್ಯಾ ಚೈವ ಪುರೋಹಿತಃ ।
ನಾದಣ್ಡ್ಯೋ ವಿದ್ಯತೇ ರಾಜ್ಞೋ ಯಃ ಸ್ವಧರ್ಮೇ ನ ತಿಷ್ಠತಿ ॥೬೦॥

ತಂದೆ, ತಾಯಿ, ಸೋದರ, ಭಾರ್ಯೆ, ಪುರೋಹಿತ–ಇವರಲ್ಲಿ ಯಾರೇ ಆದರೂ ಸ್ವಧರ್ಮನಿರತರಾಗಿ ಇರದಿದ್ದರೆ–ರಾಜನು ಅಂತಹವರನ್ನೂ ಶಿಕ್ಷಿಸಬೇಕು. ರಾಜನಿಗೆ ಅದಂಡ್ಯರೆಂಬುವವರೇ ಇರುವುದಿಲ್ಲ."

೧೨೧ನೆಯ ಅಧ್ಯಾಯವು ಮುಗಿಯಿತು.

೧೨೨ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ದಂಡದ ಉತ್ಪತ್ತಿ ಮತ್ತು ಅದರ ಪರಂಪರೆ

ಭೀಷ್ಮನು ದಂಡದ ಇತಿಹಾಸವನ್ನು ಮುಂದುವರಿಸಿ ಹೇಳುತ್ತಾನೆ :

"ಯುಧಿಷ್ಠಿರ! ಈ ದಂಡದ ವಿಷಯದಲ್ಲಿ ಸನಾತನವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು ; ಕೇಳು.

ಅಂಗದೇಶದಲ್ಲಿ ವಸುಹೋಮನೆಂಬ ಹೆಸರಿನ ಮಹಾತೇಜಸ್ವಿಯಾದ

ಸುಪ್ರಸಿದ್ಧನಾದ ರಾಜನಿದ್ದನು. ಮಹಾತಪಸ್ವಿಯೂ ಧರ್ಮಜ್ಞನೂ ಆಗಿದ್ದ ವಸುಹೋಮರಾಜನು ತನ್ನ ಧರ್ಮಪತ್ನಿಯೊಡನೆ ಪಿತೃ-ದೇವರ್ಷಿಗಳಿಂದ ಸಂಪೂಜಿತವಾಗಿದ್ದ ಮುಂಜಪೃಷ್ಠವೆಂಬ ತೀರ್ಥಕ್ಷೇತ್ರಕ್ಕೆ ಹೋದನು. ಆ ಯಾತ್ರಾಸ್ಥಳವು ಸುವರ್ಣಮಯಪರ್ವತವಾದ ಸುಮೇರುವಿನ ಸಮೀಪ ದಲ್ಲಿರುವ ಹಿಮಾಲಯದ ಶಿಖರದ ಮೇಲಿದೆ. ಆ ಮುಂಜಾವಟದಲ್ಲಿಯೇ ಹಿಂದೆ ಪರಶುರಾಮನು ತನ್ನ ಜಟೆಯನ್ನು ತೆಗೆಯಲು ಆದೇಶವನ್ನಿತ್ತಿದ್ದನು. ಅದು ಮೊದಲ್ಗೊಂಡು ಕಠೋರವ್ರತನಿಷ್ಠರಾದ ಋಷಿಗಳು ರುದ್ರನಿಂದ ಸೇವಿಸಲ್ಪಡುತ್ತಿದ್ದ ಆ ಪ್ರದೇಶವನ್ನು ಮುಂಜಪೃಷ್ಠವೆಂದೇ ಕರೆಯ ತೊಡಗಿದರು.

ವಸುಹೋಮನು ಅನೇಕವಾದ ವೇದೋಕ್ತಗುಣಗಳಿಂದ ಸಂಪನ್ನನಾಗಿ ತಪಸ್ಸುಮಾಡಲು ಉಪಕ್ರಮಿಸಿದನು. ತಪಸ್ಸಿನ ಪ್ರಭಾವದಿಂದಾಗಿ ಆ ರಾಜನು ದೇವರ್ಷಿಗಳಿಗೆ ಸಮಾನನಾದನು. ಬ್ರಾಹ್ಮಣರಲ್ಲಿಯೂ ಅವನು ಮಾನನೀಯನಾಗಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಇಂದ್ರನಿಂದ ಸಮ್ಮಾನಿತನಾಗಿದ್ದ, ಇಂದ್ರಸಖನಾದ, ಉದಾರಚಿತ್ತನಾದ, ಶತ್ರುಸೂದನ ನಾದ ಮಾಂಧಾತಭೂಪಾಲನು ವಸುಹೋಮನನ್ನು ಸಂದರ್ಶಿಸುವ ಸಲುವಾಗಿ ಆಗಮಿಸಿದನು. ಮಾಂಧಾತನು ಮಹಾತಪಸ್ವಿಯಾಗಿದ್ದ ವಸುಹೋಮನ ಸಮೀಪಕ್ಕೆ ಹೋಗಿ ಅವನನ್ನು ನೋಡಿ ವಿನೀತನಾಗಿ ಅವನ ಮುಂದೆ ನಿಂತುಕೊಂಡನು. ವಸುಹೋಮನೂ ಮಾಂಧಾತನಿಗೆ ಅರ್ಘ್ಯ-ಪಾದ್ಯಾದಿಗಳನ್ನಿತ್ತು ಯಥೋಚಿತವಾಗಿ ಸತ್ಕರಿಸಿದನಂತರ ಸಪ್ತಾಂಗಯುಕ್ತ ವಾದ ರಾಜ್ಯದ ಕುಶಲಸಮಾಚಾರವನ್ನು ಕೇಳಿದನು. ಹಿಂದೆ ಸಾಧು-ಸತ್ಪುರುಷರು ಯಾವ ಧರ್ಮಮಾರ್ಗವನ್ನು ಅನುಸರಿಸಿ ನಡೆಯು ತ್ತಿದ್ದರೋ–ಅದೇ ಮಾರ್ಗದಲ್ಲಿಯೇ ಯಥಾವತ್ತಾಗಿ ನಡೆದುಕೊಳ್ಳುತ್ತಿದ್ದ ಮಾಂಧಾತನನ್ನು ವಸುಹೋಮನು ಪ್ರಶ್ನಿಸಿದನು : **'ರಾಜನ್ಕಿಂ ಕರವಾಣಿ ತೇ'**–'ಮಹಾರಾಜ! ನಿನಗೆ ಯಾವ ಕಾರ್ಯವನ್ನು ನಾನು ಮಾಡಿಕೊಡಲಿ?"

ವಸುಹೋಮನ ಮಾತನ್ನು ಕೇಳಿ ಪರಮಪ್ರೀತನಾದ ಮಾಂಧಾತನು

ರಾಜಶ್ರೇಷ್ಠನಾದ, ಮಹಾಪ್ರಾಜ್ಞನಾದ, ಸುಖಾಸನದಲ್ಲಿ ಕುಳಿತಿದ್ದ ವಸುಹೋಮನನ್ನು ಕುರಿತು ಹೇಳಿದನು :

"ನರಶ್ರೇಷ್ಠನೇ! ನೀನು ಬೃಹಸ್ಪತಿಯ ಅಭಿಮತವನ್ನು ಸಂಪೂರ್ಣವಾಗಿ ಅಧ್ಯಯನಮಾಡಿರುವೆ. ಹಾಗೆಯೇ ಶುಕ್ರಾಚಾರ್ಯರ ನೀತಿಶಾಸ್ತ್ರವನ್ನೂ ಚೆನ್ನಾಗಿ ತಿಳಿದುಕೊಂಡಿರುವೆ. ಆದುದರಿಂದ ನಾನು ಈ ವಿಷಯವನ್ನು ನಿನ್ನಿಂದ ತಿಳಿದುಕೊಳ್ಳಲು ಇಚ್ಛಿಸಿದ್ದೇನೆ. ದಂಡದ ಉತ್ಪತ್ತಿಯು ಹೇಗಾಯಿತು? ಅದು ಹುಟ್ಟುವುದಕ್ಕೆ ಮೊದಲು ಯಾವ ವಸ್ತುವು ಪ್ರಪಂಚದ ರಕ್ಷಣೆಗೆ ಜಾಗರೂಕವಾಗಿದ್ದಿತು? ದಂಡವು ಎಲ್ಲ ವಸ್ತುಗಳಿಗಿಂತಲೂ ಉತ್ಕೃಷ್ಟವಾದುದೆಂದು ಏಕೆ ಹೇಳುತ್ತಾರೆ? ಪ್ರಕೃತ ಆ ದಂಡವು ಕ್ಷತ್ರಿಯನ ಕೈಗೆ ಬಂದುದು ಹೇಗೆ? ಮಹಾಪ್ರಾಜ್ಞನೇ! ಈ ವಿಷಯವನ್ನು ನನಗೆ ಹೇಳು. ನಾನು ನಿನಗೆ ಆಚಾರ್ಯದಕ್ಷಿಣೆಯನ್ನು ಸಲ್ಲಿಸುತ್ತೇನೆ."

"ಮಾಂಧಾತನೇ! ದಂಡವು ಸಂಪೂರ್ಣಜಗತ್ತನ್ನೂ ಕಟ್ಟುಪಾಡಿನಲ್ಲಿಟ್ಟಿರುತ್ತದೆ. ಇದು ಧರ್ಮದ ಸನಾತನಸ್ವರೂಪವಾಗಿದೆ. ಪ್ರಜೆಗಳನ್ನು ವಿನೀತರನ್ನಾಗಿ ಮಾಡುವುದೇ ದಂಡದ ಉದ್ದೇಶ. ಇದು ಲೋಕಸಂಗ್ರಹಕ್ಕೆ ಸಾಧಕವಾದುದು. ಇದು ಹುಟ್ಟಿದುದು ಹೇಗೆಂಬುದನ್ನು ಹೇಳುವೆನು ; ಕೇಳು. ಸರ್ವಲೋಕಪಿತಾಮಹನಾದ ಭಗವಾನ್ ಬ್ರಹ್ಮನು ಒಮ್ಮೆ ಯಜ್ಞವನ್ನು ಮಾಡಲು ಇಚ್ಛಿಸಿದನು. ಆದರೆ ಆ ಸಮಯದಲ್ಲಿ ಬ್ರಹ್ಮನಿಗೆ ತನಗೆ ಸಮಾನರಾದ ಋತ್ವಿಜರೇ ಸಿಕ್ಕಲಿಲ್ಲವೆಂಬ ವಿಷಯವನ್ನು ನಾವು ಕೇಳಿದ್ದೇವೆ. ಆಗ ಬ್ರಹ್ಮನು ಅನೇಕ ವರ್ಷಗಳವರೆಗೆ ತನ್ನ ಶಿರಸ್ಸಿನಲ್ಲಿಯೇ ಗರ್ಭವನ್ನು ಧಾರಣೆಮಾಡಿದನು. ಒಂದು ಸಾವಿರ ವರ್ಷಗಳು ಪೂರ್ಣವಾದ ನಂತರ ಬ್ರಹ್ಮನು ಶೀನಿದಾಗ ಅವನ ತಲೆಯಲ್ಲಿದ್ದ ಗರ್ಭವು ಕೆಳಕ್ಕೆ ಬಿದ್ದಿತು. ಆ ಗರ್ಭದಿಂದ ಒಬ್ಬ ಬಾಲಕನು ಹುಟ್ಟಿದನು. ಬ್ರಹ್ಮನು ಅವನಿಗೆ 'ಕ್ಷುಪ' ಎಂದೇ ಹೆಸರನ್ನಿಟ್ಟನು. ಮುಂದೆ ಮಹಾತ್ಮನಾದ ಬ್ರಹ್ಮನ ಯಜ್ಞಕ್ಕೆ ಕ್ಷುಪಪ್ರಜಾಪತಿಯೇ ಋತ್ವಿಜನಾದನು. ಬ್ರಹ್ಮನ ಆ ಯಜ್ಞವು ಆರಂಭವಾಗುತ್ತಲೇ ಯಜ್ಞವು ಪ್ರತ್ಯಕ್ಷದರ್ಶನ ಪ್ರಧಾನವಾಗಿದ್ದುದರಿಂದ ದಂಡವು ಅಂತರ್ಹಿತವಾಯಿತು. (ಬ್ರಹ್ಮನು ದೃಷ್ಟರೂಪವಾದ ಯಜ್ಞದೀಕ್ಷೆಯನ್ನು ವಹಿಸಿರುವುದರಿಂದ–ಯಜ್ಞವೇ ಬ್ರಹ್ಮನಿಗೆ ಪ್ರಧಾನಕಾರ್ಯವಾಗಿದ್ದುದ–

ರಿಂದ–ಪ್ರಜಾನಿಯಮನರೂಪವಾದ ಅವನಲ್ಲಿದ್ದ ದಂಡಧರ್ಮವು ಲುಪ್ತ ವಾಯಿತು.) ದಂಡವು ಅಂತರ್ಧಾನಹೊಂದಿದೊಡನೆಯೇ ಪ್ರಜೆಗಳಲ್ಲಿ ವರ್ಣಸಂಕರವು ಪ್ರಾರಂಭವಾಯಿತು. ಕಾರ್ಯಾಕಾರ್ಯಗಳ, ಭಕ್ಷ್ಯಾ-ಭಕ್ಷ್ಯಗಳ ವಿವೇಚನೆಯೇ ಜನರಲ್ಲಿ ಇರಲಿಲ್ಲ. ಭಕ್ಷ್ಯಾಭಕ್ಷ್ಯಗಳಲ್ಲಿಯೇ ವಿವೇಚನೆಯಿಲ್ಲದಿದ್ದಾಗ ಪೇಯಾಪೇಯಗಳಲ್ಲಿ ವಿವೇಚನೆಯು ಹೇಗೆ ತಾನೇ ಇರಲು ಸಾಧ್ಯ? ಒಬ್ಬರು ಮತ್ತೊಬ್ಬರನ್ನು ಹಿಂಸಿಸುತ್ತಿದ್ದರು. ಗಮ್ಯಾ ಗಮ್ಯಗಳ ವಿಚಾರವೂ ಆ ಸಮಯದಲ್ಲಿರಲಿಲ್ಲ. ಪರರ ಐಶ್ವರ್ಯವನ್ನೂ ತಮ್ಮದೆಂದೇ ಭಾವಿಸಲಾಗುತ್ತಿತ್ತು. ಪರಸ್ವಾಪಹರಣದಲ್ಲಿ ಜನರಿಗೆ ಯಾವ ವಿಧವಾದ ಸಂಕೋಚವೂ ಇರಲಿಲ್ಲ. ನಾಯಿಗಳು ಮಾಂಸದ ತುಂಡಿಗಾಗಿ ಪರಸ್ಪರವಾಗಿ ಕಚ್ಚಾಡುವಂತೆ–ಜನರು ಧನಕ್ಕಾಗಿ ಪರಸ್ಪರವಾಗಿ ಕಚ್ಚಾಡುತ್ತಿದ್ದರು. ಬಲಿಷ್ಠರಾದವರು ದುರ್ಬಲರನ್ನು ಸಂಹರಿಸುತ್ತಿದ್ದರು. ಮರ್ಯಾದೆಯನ್ನೇ ಮೀರಿದ ಸ್ವೇಚ್ಛಾಚಾರವು ಸರ್ವತ್ರವ್ಯಾಪಿಸಿತು. ಪರಿಸ್ಥಿತಿಯು ಅಷ್ಟು ಹದಗೆಟ್ಟು ಹೋದನಂತರ ಪಿತಾಮಹನಾದ ಬ್ರಹ್ಮನು ಭಗವಂತನಾದ ಮಹಾವಿಷ್ಣುವನ್ನು ಸಂಪೂಜಿಸಿ ವರದನಾದ ದೇವದೇವನಾದ ಮಹಾದೇವನೊಡನೆ ಹೇಳಿದನು:

ಅತ್ರ ತ್ವಮನುಕಮ್ಪಾಂ ವೈ ಕರ್ತುಮರ್ಹಸಿ ಶಂಕರ ।
ಸಂಕರೋ ನ ಭವೇದತ್ರ ಯಥಾ ತದ್ವೈ ವಿಧೀಯತಾಮ್ ॥೨೩॥

“ಶಂಕರನೇ! ಈ ಸಮಯದಲ್ಲಿ ನೀನು ಜಗತ್ತಿನ ವಿಷಯದಲ್ಲಿ ಅನುಕಂಪವನ್ನು ತೋರಿಸುವ ಕೃಪೆಮಾಡು. ಪ್ರಪಂಚದಲ್ಲಿ ವರ್ಣಸಂಕರ ವಾಗದಂತೆ ಉಪಾಯವನ್ನು ಮಾಡು.”

ಬ್ರಹ್ಮನು ಹೀಗೆ ಪ್ರಾರ್ಥಿಸಲಾಗಿ ಶೂಲವೆಂಬ ಹೆಸರಿನ ಶ್ರೇಷ್ಠವಾದ ಶಸ್ತ್ರವನ್ನು ಧಾರಣೆಮಾಡಿರುವ, ಸುರಶ್ರೇಷ್ಠನಾದ ಮಹಾದೇವನು ಸ್ವಲ್ಪ ಕಾಲ ಚಿಂತಿಸಿ ತನ್ನಿಂದಲೇ ದಂಡವನ್ನು ಸೃಷ್ಟಿಸಿದನು. ತಾನೇ ದಂಡದ ರೂಪದಲ್ಲಿ ಪ್ರಕಟವಾದನು. ಶಂಕರನು ಮಾಡಿದ ಧರ್ಮಾಚರಣೆಯನ್ನು ನೋಡಿ ನೀತಿಸ್ವರೂಪಳಾದ ಸರಸ್ವತೀದೇವಿಯು ದಂಡನೀತಿಯನ್ನು ರಚಿಸಿದಳು. ಆ ದಂಡನೀತಿಯು ಮೂರು ಲೋಕಗಳಲ್ಲಿಯೂ ಪ್ರಸಿದ್ಧಿ ಯನ್ನು ಪಡೆಯಿತು. ಭಗವಾನ್ ಶೂಲಪಾಣಿಯು ಪುನಃ ಬಹಳ ಕಾಲದವರೆಗೆ

ಧ್ಯಾನಾಸಕ್ತನಾಗಿದ್ದು ಒಂದೊಂದು ಸಮೂಹಕ್ಕೂ ಒಬ್ಬೊಬ್ಬರನ್ನು ಈಶ್ವರರನ್ನಾಗಿ ಮಾಡಿದನು.

ದೇವಾನಾಮೀಶ್ವರಂ ಚಕ್ರೇ ದೇವಂ ದಶಶತೇಕ್ಷಣಮ್ ।
ಯಮಂ ವೈವಸ್ವತಂ ಚಾಪಿ ಪಿತೄಣಾಮಕರೋತ್ಪ್ರಭುಮ್ ॥೨೭॥

ಸಾವಿರ ಕಣ್ಣುಗಳಿರುವ ಇಂದ್ರದೇವನನ್ನು ದೇವತೆಗಳಿಗೆ ಈಶ್ವರನನ್ನಾಗಿ ಮಾಡಿದನು. ಸೂರ್ಯನ ಪುತ್ರನಾದ ಯಮನನ್ನು ಪಿತೃಗಳಿಗೆ ಪ್ರಭುವನ್ನಾಗಿ ಮಾಡಿದನು.

ಧನಾನಾಂ ರಾಕ್ಷಸಾನಾಂ ಚ ಕುಬೇರಮಪಿ ಚೇಶ್ವರಮ್ ।
ಪರ್ವತಾನಾಂ ಪತಿಂ ಮೇರುಂ ಸರಿತಾಂ ಚ ಮಹೋದಧಿಮ್ ॥೨೮॥

ಕುಬೇರನನ್ನು ಧನಕ್ಕೂ-ರಾಕ್ಷಸರಿಗೂ ಅಧಿಪತಿಯನ್ನಾಗಿಯೂ, ಮೇರುಪರ್ವತವನ್ನು ಪರ್ವತಗಳಿಗೆ ಅಧಿಪತಿಯನ್ನಾಗಿಯೂ, ಮಹೋದಧಿಯನ್ನು ನದಿಗಳಿಗೆ ಅಧಿಪತಿಯನ್ನಾಗಿಯೂ ಮಾಡಿದನು.

ಅಪಾಂ ರಾಜ್ಯೇಽಸುರಾಣಾಂ ಚ ವಿದಧೇ ವರುಣಂ ಪ್ರಭುಮ್ ।
ಮೃತ್ಯುಂ ಪ್ರಾಣೇಶ್ವರಮಥೋ ತೇಜಸಾಂ ಚ ಹುತಾಶನಮ್ ॥೨೯॥

ಶಕ್ತಿಶಾಲಿಯಾದ ವರುಣನನ್ನು ನೀರು ಮತ್ತು ಅಸುರರ ರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡಿದನು. ಮೃತ್ಯುವನ್ನು ಪ್ರಾಣಗಳಿಗೂ, ಯಜ್ಞೇಶ್ವರನನ್ನು ತೇಜಸ್ಸುಗಳಿಗೂ ಅಧಿಪತಿಗಳನ್ನಾಗಿ ಮಾಡಿದನು.

ರುದ್ರಾಣಾಮಪಿ ಚೇಶಾನಂ ಗೋಪ್ತಾರಂ ವಿದಧೇ ಪ್ರಭುಮ್ ।
ಮಹಾತ್ಮಾನಂ ಮಹಾದೇವಂ ವಿಶಾಲಾಕ್ಷಂ ಸನಾತನಮ್ ॥೩೦॥

ವಿಶಾಲನೇತ್ರನಾದ, ಸನಾತನನಾದ, ಮಹಾತ್ಮನಾದ, ಮಹಾದೇವನಾದ ಈಶಾನಮೂರ್ತಿಯನ್ನು ರುದ್ರರಿಗೆ ಅಧಿಪತಿಯನ್ನಾಗಿಯೂ–ರಕ್ಷಕನನ್ನಾಗಿಯೂ ಮಾಡಿದನು.

ವಸಿಷ್ಠಮೀಶಂ ವಿಪ್ರಾಣಾಂ ವಸೂನಾಂ ಜಾತವೇದಸಮ್ ।
ತೇಜಸಾಂ ಭಾಸ್ಕರಂ ಚಕ್ರೇ ನಕ್ಷತ್ರಾಣಾಂ ನಿಶಾಕರಮ್ ॥೩೧॥

ವಸಿಷ್ಠನನ್ನು ಬ್ರಾಹ್ಮಣರಿಗೂ, ಜಾತವೇದಸನನ್ನು (ಅಗ್ನಿಯನ್ನು) ವಸುಗಳಿಗೂ, ಭಾಸ್ಕರನನ್ನು ತೇಜಸ್ಸುಗಳಿಗೂ, ಚಂದ್ರನನ್ನು ನಕ್ಷತ್ರಗಳಿಗೂ ಅಧಿಪತಿಗಳನ್ನಾಗಿ ಮಾಡಿದನು.

ವೀರುಧಾಮಂಶುಮನ್ತಂ ಚ ಭೂತಾನಾಂ ಚ ಪ್ರಭುಂ ವರಮ್ ।
ಕುಮಾರಂ ದ್ವಾದಶಭುಜಂ ಸ್ಕನ್ದಂ ರಾಜಾನಮಾದಿಶತ್ ॥೩೨॥

ಚಂದ್ರನನ್ನು ಓಷಧಿಲತೆಗಳಿಗೆ ಅಧಿಪತಿಯನ್ನಾಗಿ ಮಾಡಿದನು. ಹನ್ನೆರಡು ಭುಜಗಳಿಂದ ವಿಭೂಷಿತನಾದ, ಶಕ್ತಿಶಾಲಿಯಾದ ಸ್ಕಂದಕುಮಾರನನ್ನು ಸಕಲಪ್ರಾಣಿಗಳಿಗೂ ಶ್ರೇಷ್ಠನಾದ ಅಧಿಪತಿಯನ್ನಾಗಿ ಮಾಡಿದನು.

ಕಾಲಂ ಸರ್ವೇಶಮಕರೋತ್ಸಂಹಾರವಿನಯಾತ್ಮಕಮ್ ।
ಮೃತ್ಯೋಶ್ಚತುರ್ವಿಭಾಗಸ್ಯ ದುಃಖಸ್ಯ ಚ ಸುಖಸ್ಯ ಚ ॥೩೩॥

ಸಂಹಾರ-ವಿನಯಾತ್ಮನಾದ (ಸಂಹಾರೋತ್ಪತ್ತಿಗಳಿಗೆ ಕಾರಣನಾದ) ಸರ್ವೇಶ್ವರನಾದ ಕಾಲನನ್ನು ನಾಲ್ಕು ವಿಧವಾದ ಮೃತ್ಯುಗಳಿಗೂ, ಸುಖಕ್ಕೂ ಮತ್ತು ದುಃಖಕ್ಕೂ ಅಧಿಪತಿಯನ್ನಾಗಿ ಮಾಡಿದನು.

ಈಶ್ವರಃ ಸರ್ವದೇವಸ್ತು ರಾಜರಾಜೋ ನರಾಧಿಪಃ ।
ಸರ್ವೇಷಾಮೇವ ರುದ್ರಾಣಾಂ ಶೂಲಪಾಣಿರಿತಿ ಶ್ರುತಿಃ ॥೩೪॥

ಶೂಲಪಾಣಿಯಾದ ಭಗವಾನ್ ಶಿವನು ಸರ್ವದೇವತೆಗಳಿಗೂ ಈಶ್ವರನೆಂದೂ, ಸಕಲರಾಜರಿಗೂ ರಾಜನೆಂದೂ, ಎಲ್ಲ ಮನುಷ್ಯರಿಗೂ ಅಧಿಪತಿಯೆಂದೂ, ಸರ್ವರುದ್ರರಿಗೂ ಅಧೀಶ್ವರನೆಂದೂ ಕೇಳಿದ್ದೇವೆ.

ತಮೇನಂ ಬ್ರಹ್ಮಣಃ ಪುತ್ರಮನುಜಾತಂ ಕ್ಷುಪಂ ದದೌ ।
ಪ್ರಜಾನಾಮಧಿಪಂ ಶ್ರೇಷ್ಠಂ ಸರ್ವಧರ್ಮಭೃತಾಮಪಿ ॥೩೫॥

ಶೂಲಪಾಣಿಯು ಬ್ರಹ್ಮನ ಕಿರಿಯ ಪುತ್ರನಾದ ಕ್ಷುಪನನ್ನು ಎಲ್ಲ ಪ್ರಜೆಗಳಿಗೂ ಮತ್ತು ಎಲ್ಲ ಧರ್ಮಾತ್ಮರಿಗೂ ಶ್ರೇಷ್ಠನಾದ ಅಧಿಪತಿಯನ್ನಾಗಿ ಮಾಡಿದನು.

ಮಹಾದೇವಸ್ತತಸ್ತಸ್ಮಿನ್ವೃತ್ತೇ ಯಜ್ಞೇ ಯಥಾವಿಧಿ ।
ದಣ್ಡಂ ಧರ್ಮಸ್ಯ ಗೋಪ್ತಾರಂ ವಿಷ್ಣವೇ ಸತ್ಕೃತಂ ದದೌ ॥೩೬॥

ಬ್ರಹ್ಮನ ಯಜ್ಞವು ವಿಧಿಪೂರ್ವಕವಾಗಿ ಸಂಪೂರ್ಣವಾದನಂತರ ಮಹಾದೇವನು ಧರ್ಮರಕ್ಷಕನಾದ ಮಹಾವಿಷ್ಣುವಿಗೆ ಸತ್ಕೃತವಾದ ದಂಡವನ್ನು ಕೊಟ್ಟನು.

ವಿಷ್ಣುರಙ್ಗಿರಸೇ ಪ್ರಾದಾದಙ್ಗಿರಾ ಮುನಿಸತ್ತಮಃ ।
ಪ್ರಾದಾದಿನ್ದ್ರಮರೀಚಿಭ್ಯಾಂ ಮರೀಚಿರ್ಭೃಗವೇ ದದೌ ॥೩೭॥

ಭಗವಾನ್ ವಿಷ್ಣುವು ಆ ದಂಡವನ್ನು ಅಂಗಿರಸನಿಗೆ ಕೊಟ್ಟನು. ಮುನಿಶ್ರೇಷ್ಠನಾದ ಅಂಗಿರಸನು ಆ ದಂಡವನ್ನು ಇಂದ್ರನಿಗೂ ಮರೀಚಿಗೂ ಕೊಟ್ಟನು. ಮರೀಚಿಯು ಅದನ್ನು ಭೃಗುವಿಗೆ ಕೊಟ್ಟನು.

ಭೃಗುರ್ದದಾವೃಷಿಭ್ಯಸ್ತು ದಣ್ಡಂ ಧರ್ಮಸಮಾಹಿತಮ್ ।
ಋಷಯೋ ಲೋಕಪಾಲೇಭ್ಯೋ ಲೋಕಪಾಲಾಃ ಕ್ಷುಪಾಯ ಚ ॥

ಕ್ಷುಪಸ್ತು ಮನವೇ ಪ್ರಾದಾದಾದಿತ್ಯತನಯಾಯ ಚ ।
ಪುತ್ರೇಭ್ಯಃ ಶ್ರಾದ್ಧದೇವಸ್ತು ಸೂಕ್ಷ್ಮಧರ್ಮಾರ್ಥಕಾರಣಾತ್ ॥೩೯॥

ಭೃಗುವು ಧರ್ಮದಿಂದ ಸಮಾಹಿತವಾಗಿದ್ದ ಆ ದಂಡವನ್ನು ಋಷಿಗಳಿಗೆ ಕೊಟ್ಟನು. ಋಷಿಗಳು ಲೋಕಪಾಲಕರಿಗೂ, ಲೋಕಪಾಲಕರು ಕ್ಷುಪನಿಗೂ, ಕ್ಷುಪನು ಸೂರ್ಯನ ಮಗನಾದ ಯಮನಿಗೂ (ಶ್ರಾದ್ಧದೇವನಿಗೂ), ಶ್ರಾದ್ಧದೇವನು (ಯಮನು) ಸೂಕ್ಷ್ಮಧರ್ಮಾರ್ಥಗಳ ರಕ್ಷಣೆಗಾಗಿ ಆ ದಂಡ ವನ್ನು ತನ್ನ ಮಕ್ಕಳಿಗೂ ಅನುಕ್ರಮವಾಗಿ ಕೊಟ್ಟರು.

ವಿಭಜ್ಯ ದಣ್ಡಃ ಕರ್ತವ್ಯೋ ಧರ್ಮೇಣ ನ ಯದೃಚ್ಛಯಾ ।
ದುಷ್ಟಾನಾಂ ನಿಗ್ರಹೋ ದಣ್ಡೋ ಹಿರಣ್ಯಂ ಬಾಹ್ಯತಃ ಕ್ರಿಯಾ ॥೪೦॥

ಧರ್ಮಾನುಸಾರವಾಗಿ ನ್ಯಾಯಾನ್ಯಾಯಗಳ ವಿಚಾರಮಾಡಿಯೇ ದಂಡವನ್ನು ಪ್ರಯೋಗಿಸಬೇಕು. ಮನಬಂದಂತೆ ದಂಡವನ್ನು ಪ್ರಯೋಗಿಸ ಬಾರದು. ದುಷ್ಟರನ್ನು ದಮನಮಾಡುವುದೇ ದಂಡದ ಮುಖ್ಯವಾದ ಉದ್ದೇಶವಾಗಿದೆ ; ಸುವರ್ಣದ ಮುದ್ರೆಗಳಿಂದ ಬೊಕ್ಕಸವನ್ನು ತುಂಬುವುದು ಬಹಿರಂಗವಾದ (ಗೌಣವಾದ) ಕರ್ಮ. ಮುಖ್ಯಕರ್ಮವಲ್ಲ. (ಧನ ಸಂಪಾದನೆಯು ದಂಡದ ಗುರಿಯಲ್ಲ. ಪ್ರಜೆಗಳನ್ನು ಅಂಕೆಯಲ್ಲಿಟ್ಟು ಅವರು ಧರ್ಮವನ್ನು ಅನುಸರಿಸುವಂತೆ ಮಾಡುವುದೇ ದಂಡದ ಗುರಿ.)

ವ್ಯಙ್ಗತ್ವಂ ಚ ಶರೀರಸ್ಯ ವಧೋ ನಾಲ್ಪಸ್ಯ ಕಾರಣಾತ್ ।
ಶರೀರಪೀಡಾಸ್ತಾಸ್ತಾಶ್ಚ ದೇಹತ್ಯಾಗೋ ವಿವಾಸನಮ್ ॥೪೧॥

ಅಲ್ಪಾಪರಾಧಕ್ಕಾಗಿ ಪ್ರಜೆಗಳ ಅಂಗಗಳನ್ನು ಛೇದನಮಾಡಬಾರದು ; ಅವರಿಗೆ ಮರಣದಂಡನೆಯನ್ನು ವಿಧಿಸಬಾರದು. ನಾನಾವಿಧವಾದ ಯಾತನೆಗಳನ್ನೂ ಕೊಡಬಾರದು. ದೇಹತ್ಯಾಗಮಾಡಲು ಅವಕಾಶವನ್ನೀಯಬಾರದು. ದೇಶದಿಂದ ಉಚ್ಚಾಟಿಸಲೂ ಬಾರದು.

ತಂ ದದೌ ಸೂರ್ಯಪುತ್ರಸ್ತು ಮನುರ್ವೈ ರಕ್ಷಣಾರ್ಥಕಮ್ ।
ಆನುಪೂರ್ವ್ಯಾಚ್ಚ ದಣ್ಡೋಽಯಂ ಪ್ರಜಾ ಜಾಗರ್ತಿ ಪಾಲಯನ್ ॥

ಹಿಂದೆ ಹೇಳಿದಂತೆ ಸೂರ್ಯನ ಮಗನಾದ ಮನುವು ಪ್ರಜೆಗಳ ರಕ್ಷಣಾರ್ಥವಾಗಿ ಆ ದಂಡವನ್ನು ತನ್ನ ಮಕ್ಕಳಿಗೆ ಕೊಟ್ಟನು. ಆ ದಂಡವು ಅನುಕ್ರಮವಾಗಿ ಉತ್ತರೋತ್ತರ ರಾಜರ ಕೈಸೇರಿ ಪ್ರಜೆಗಳನ್ನು ರಕ್ಷಿಸುತ್ತಾ ಜಾಗ್ರತವಾಗಿದೆ.

ಇನ್ದ್ರೋ ಜಾಗರ್ತಿ ಭಗವಾನಿನ್ದ್ರಾದಗ್ನಿರ್ವಿಭಾವಸುಃ ।
ಅಗ್ನೇರ್ಜಾಗರ್ತಿ ವರುಣೋ ವರುಣಾಚ್ಚ ಪ್ರಜಾಪತಿಃ ॥೪೩॥

ಇಂದ್ರನು ಯಥೋಚಿತವಾಗಿ ದಂಡವನ್ನು ಪ್ರಯೋಗಿಸಲು ಸರ್ವದಾ ಜಾಗರೂಕನಾಗಿರುತ್ತಾನೆ. ಇಂದ್ರನಿಂದ–ಪ್ರಕಾಶಮಾನನಾದ ಅಗ್ನಿಯೂ, ಅಗ್ನಿಯಿಂದ–ವರುಣನೂ, ವರುಣನಿಂದ–ಪ್ರಜಾಪತಿಯೂ ಈ ದಂಡವನ್ನು ಪಡೆದುಕೊಂಡು ಯಥೋಚಿತವಾಗಿ ಪ್ರಯೋಗಿಸಲು ಸರ್ವದಾ ಜಾಗರೂಕರಾಗಿರುತ್ತಾರೆ.

ಪ್ರಜಾಪತೇಸ್ತತೋ ಧರ್ಮೋ ಜಾಗರ್ತಿ ವಿನಯಾತ್ಮಕಃ ।
ಧರ್ಮಾಚ್ಚ ಬ್ರಹ್ಮಣಃ ಪುತ್ರೋ ವ್ಯವಸಾಯಃ ಸನಾತನಃ ॥೪೪॥

ಸಕಲಜಗತ್ತನ್ನೂ ಅಂಕೆಯಲ್ಲಿಟ್ಟುಕೊಂಡಿರುವ ಧರ್ಮವು ಪ್ರಜಾಪತಿಯಿಂದ ದಂಡವನ್ನು ಪಡೆದುಕೊಂಡು ಪ್ರಜೆಗಳ ರಕ್ಷಣೆಯಲ್ಲಿ ಸರ್ವದಾ ಜಾಗರೂಕವಾಗಿದೆ. ಬ್ರಹ್ಮನ ಮಗನಾದ ಸನಾತನನಾದ ವ್ಯವಸಾಯನು ಧರ್ಮನಿಂದ ಆ ದಂಡವನ್ನು ಪಡೆದುಕೊಂಡು ಜಾಗರೂಕನಾಗಿ ಪ್ರಜೆಗಳನ್ನು ರಕ್ಷಿಸುತ್ತಿದ್ದಾನೆ.

ವ್ಯವಸಾಯಾತ್ತತಸ್ತೇಜೋ ಜಾಗರ್ತಿ ಪರಿಪಾಲಯತ್ ।
ಓಷಧ್ಯಸ್ತೇಜಸಸ್ತಸ್ಮಾದೋಷಧೀಭ್ಯಶ್ಚ ಪರ್ವತಾಃ ॥೪೫॥

ಪರ್ವತೇಭ್ಯಶ್ಚ ಜಾಗರ್ತಿ ರಸೋ ರಸಗುಣಾತ್ತಥಾ ।
ಜಾಗರ್ತಿ ನಿರ್ಋತಿರ್ದೇವೀ ಜ್ಯೋತೀಂಷಿ ನಿರ್ಋತೇರಪಿ ॥೪೬॥

ತೇಜಸ್ಸು ವ್ಯವಸಾಯನಿಂದ ದಂಡವನ್ನು ಪಡೆದುಕೊಂಡು ಜಗತ್ತನ್ನು ಪರಿಪಾಲಿಸುತ್ತಾ ಜಾಗರೂಕವಾಗಿದೆ. ತೇಜಸ್ಸಿನಿಂದ ಓಷಧಿಲತೆಗಳೂ, ಓಷಧಿಲತೆಗಳಿಂದ ಪರ್ವತಗಳೂ, ಪರ್ವತಗಳಿಂದ ರಸಗಳೂ, ರಸಗಳಿಂದ ನಿರ್ಋತಿದೇವತೆಯೂ, ನಿರ್ಋತಿದೇವತೆಯಿಂದ ಜ್ಯೋತಿಸ್ಸುಗಳೂ ಆ ದಂಡವನ್ನು ಕ್ರಮವಾಗಿ ಪಡೆದುಕೊಂಡು ಲೋಕದ ರಕ್ಷಣೆಯಲ್ಲಿ ಜಾಗರೂಕ ವಾಗಿವೆ.

ವೇದಾಃ ಪ್ರತಿಷ್ಠಾ ಜ್ಯೋತಿರ್ಭ್ಯಸ್ತತೋ ಹಯಶಿರಾಃ ಪ್ರಭುಃ ।
ಬ್ರಹ್ಮಾ ಪಿತಾಮಹಸ್ತಸ್ಮಾಜ್ಜಾಗರ್ತಿ ಪ್ರಭುರವ್ಯಯಃ ॥೪೭॥

ಜ್ಯೋತಿಸ್ಸುಗಳಿಂದ ದಂಡವನ್ನು ಪಡೆದು ವೇದಗಳು ಪ್ರತಿಷ್ಠಿತ ವಾದುವು. ವೇದಗಳಿಂದ ಭಗವಾನ್ ಹಯಗ್ರೀವನಿಂದ ಅವಿನಾಶಿಯಾದ, ಪಿತಾಮಹನಾದ ಬ್ರಹ್ಮನೂ ಆ ದಂಡವನ್ನು ಪಡೆದುಕೊಂಡು ಲೋಕದ ರಕ್ಷಣೆಯಲ್ಲಿ ಜಾಗರೂಕರಾಗಿದ್ದಾರೆ.

ಪಿತಾಮಹಾನ್ಮಹಾದೇವೋ ಜಾಗರ್ತಿ ಭಗವಾಞ್ಛಿವಃ ।
ವಿಶ್ವೇದೇವಾಃ ಶಿವಾಚ್ಚಾಪಿ ವಿಶ್ವೇಭ್ಯಶ್ಚ ತಥರ್ಷಯಃ ॥೪೮॥
ಋಷಿಭ್ಯೋ ಭಗವಾನ್ಸೋಮಃ ಸೋಮಾದ್ದೇವಾಃ ಸನಾತನಾಃ ।
ದೇವೇಭ್ಯೋ ಬ್ರಾಹ್ಮಣಾ ಲೋಕೇ ಜಾಗ್ರತೀತ್ಯುಪಧಾರಯ ॥೪೯॥

ಮಹಾದೇವನು ಪಿತಾಮಹನಿಂದ ಆ ದಂಡವನ್ನು ಪಡೆದುಕೊಂಡು ಈ ಲೋಕವನ್ನು ಜಾಗರೂಕತೆಯಿಂದ ರಕ್ಷಿಸುತ್ತಿದ್ದಾನೆ. ಶಿವನಿಂದ ವಿಶ್ವೇದೇವತೆಗಳೂ, ವಿಶ್ವೇದೇವತೆಗಳಿಂದ ಋಷಿಗಳೂ, ಋಷಿಗಳಿಂದ ಭಗವಾನ್ ಸೋಮನೂ, ಸೋಮನಿಂದ ಸನಾತನದೇವಗಣಗಳೂ, ಸನಾತನದೇವಗಣಗಳಿಂದ ಬ್ರಾಹ್ಮಣರೂ ಆ ದಂಡವನ್ನು ಅನುಕ್ರಮವಾಗಿ ಪಡೆದುಕೊಂಡು ಲೋಕದ ರಕ್ಷಣೆಯಲ್ಲಿ ಜಾಗರೂಕರಾಗಿರುತ್ತಾರೆ. ಮಹಾರಾಜ! ನೀನು ಈ ವಿಷಯವನ್ನು ಚೆನ್ನಾಗಿ ಅವಧರಿಸು.

ಬ್ರಾಹ್ಮಣೇಭ್ಯಶ್ಚ ರಾಜನ್ಯಾ ಲೋಕಾನ್ರಕ್ಷನ್ತಿ ಧರ್ಮತಃ ।
ಸ್ಥಾವರಂ ಜಙ್ಗಮಂ ಚೈವ ಕ್ಷತ್ರಿಯೇಭ್ಯಃ ಸನಾತನಮ್ ॥೫೦॥

ರಾಜರು ಬ್ರಾಹ್ಮಣರಿಂದ ದಂಡವನ್ನು ಪಡೆದುಕೊಂಡು ಕ್ಷತ್ರಿಯ ಧರ್ಮಾನುಸಾರವಾಗಿ ಲೋಕವನ್ನು ರಕ್ಷಿಸುತ್ತಿದ್ದಾರೆ. ಕ್ಷತ್ರಿಯರಿಂದಲೇ ಸನಾತನವಾದ ಸ್ಥಾವರ-ಜಂಗಮಗಳೂ ರಕ್ಷಿಸಲ್ಪಡುತ್ತಿವೆ.

ಪ್ರಜಾ ಜಾಗರ್ತಿ ಲೋಕೇಽಸ್ಮಿನ್ದಣ್ಡೋ ಜಾಗರ್ತಿ ತಾಸು ಚ ।
ಸರ್ವಂ ಸಂಕ್ಷಿಪತೇ ದಣ್ಡಃ ಪಿತಾಮಹಸಮಪ್ರಭಃ ॥೫೧॥

ಈ ಲೋಕದಲ್ಲಿ ಪ್ರಜಾವರ್ಗವು ಜಾಗರೂಕವಾಗಿದೆ. ಪ್ರಜೆಗಳಲ್ಲಿ ದಂಡವೂ ಜಾಗರೂಕವಾಗಿದೆ. ಬ್ರಹ್ಮನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ದಂಡವು ಎಲ್ಲರನ್ನೂ ಮರ್ಯಾದೆಯೊಳಗೆ ನಿಯಮಿಸುತ್ತದೆ. ಲೋಕಮರ್ಯಾದೆಯನ್ನು ಮೀರಿ ನಡೆಯಲು ಅವಕಾಶವನ್ನೀಯುವುದಿಲ್ಲ.

ಜಾಗರ್ತಿ ಕಾಲಃ ಪೂರ್ವಂ ಚ ಮಧ್ಯೇ ಚಾನ್ತೇ ಚ ಭಾರತ ।
ಈಶ್ವರಃ ಸರ್ವಲೋಕಸ್ಯ ಮಹಾದೇವಃ ಪ್ರಜಾಪತಿಃ ॥೫೨॥

ಭಾರತನೇ! ಕಾಲರೂಪವಾದ ದಂಡವು ಸೃಷ್ಟಿಯ ಮೊದಲಿನಲ್ಲಿಯೂ, ಮಧ್ಯದಲ್ಲಿಯೂ, ಅಂತದಲ್ಲಿಯೂ ಜಾಗರೂಕವಾಗಿಯೇ ಇರುತ್ತದೆ. ದಂಡವು ಸರ್ವಲೋಕೇಶ್ವರನಾದ ಪ್ರಜಾಪತಿಯಾದ ಮಹಾದೇವನ ಸ್ವರೂಪವಾಗಿದೆ. ಅದೇ ಸಮಸ್ತಪ್ರಜೆಗಳನ್ನು ಪಾಲಿಸುವುದೂ ಆಗಿದೆ.

ದೇವದೇವಃ ಶಿವಃ ಸರ್ವೋ ಜಾಗರ್ತಿ ಸತತಂ ಪ್ರಭುಃ ।
ಕಪರ್ದೀ ಶಙ್ಕರೋ ರುದ್ರಃ ಶಿವಃ ಸ್ಥಾಣುರುಮಾಪತಿಃ ॥೫೩॥

ದೇವದೇವನಾದ, ಕಲ್ಯಾಣಸ್ವರೂಪನಾದ, ಸರ್ವಾತ್ಮನಾದ, ಪ್ರಭುವಾದ, ಜಟಾಧಾರಿಯಾದ, ಉಮಾಪತಿಯಾದ, ದುಃಖಹರನಾದ, ಸ್ಥಾಣುಸ್ವರೂಪನಾದ, ಲೋಕಮಂಗಳಕರನಾದ ಶಂಕರನು ದಂಡರೂಪದಲ್ಲಿ ಸದಾ ಜಾಗರೂಕನಾಗಿ ಆವಿರ್ಭವಿಸುತ್ತಾನೆ.

ಹೀಗೆ ದಂಡವು ಆದಿಮಧ್ಯಾಂತಗಳಲ್ಲಿಯೂ ವಿಖ್ಯಾತವಾಗಿದೆ. ಧರ್ಮಜ್ಞನಾದ ರಾಜನು ದಂಡದ ಮೂಲಕವಾಗಿ ನ್ಯಾಯೋಚಿತವಾದ ರೀತಿಯಲ್ಲಿ ವ್ಯವಹರಿಸಬೇಕು."

ಯುಧಿಷ್ಠಿರ! ಯಾವ ರಾಜನು ವಸುಹೋಮನ ಈ ಅಭಿಪ್ರಾಯ

ವನ್ನು ಕೇಳುವನೋ ಮತ್ತು ಆಚರಣೆಗೆ ತರುವನೋ–ಅಂತಹ ರಾಜನು ಸಕಲವಿಧವಾದ ಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ. ಮನುಜಶ್ರೇಷ್ಠನೇ! ಯಾವ ದಂಡವು ಧರ್ಮಾಕ್ರಾಂತವಾದ ಈ ಜಗತ್ತನ್ನು ನಿಯಂತ್ರಿಸುವುದಾಗಿದೆಯೋ–ಅಂತಹ ದಂಡದ ವಿಷಯವಾಗಿ ಎಲ್ಲವನ್ನೂ ನಿನಗೆ ತಿಳಿಸಿರುತ್ತೇನೆ."

೧೨೨ನೆಯ ಅಧ್ಯಾಯವು ಮುಗಿಯಿತು.

೧೨೩ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಕಾಮಂದಕೋಪಾಖ್ಯಾನ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ತಾತ ಧರ್ಮಾರ್ಥಕಾಮಾನಾಂ ಶ್ರೋತುಮಿಚ್ಛಾಮಿ ನಿಶ್ಚಯಮ್ ।
ಲೋಕಯಾತ್ರಾ ಹಿ ಕಾರ್ತ್ಸ್ನ್ಯೇನ ತಿಷ್ಠೇತ್ಯೇಷು ಪ್ರತಿಷ್ಠಿತಾ ॥೧॥

"ಪಿತಾಮಹ! ಧರ್ಮಾರ್ಥ-ಕಾಮಗಳ ವಿಷಯವಾಗಿ ನಿನ್ನ ನಿಶ್ಚಿತ ವಾದ ಅಭಿಪ್ರಾಯವನ್ನು ತಿಳಿಯಲು ಇಚ್ಛಿಸಿದ್ದೇನೆ. ಯಾವುದನ್ನು ಅವಲಂಬಿಸಿ ನಿಂತರೆ ಲೋಕಯಾತ್ರೆಯನ್ನು ಪೂರ್ಣರೂಪದಿಂದ ನಿರ್ವಹಿಸಬಹುದು?

ಧರ್ಮಾರ್ಥಕಾಮಾಃ ಕಿಂಮೂಲಾಸ್ತ್ರಯಾಣಾಂ ಪ್ರಭವಶ್ಚ ಕಃ ।
ಅನ್ಯೋನ್ಯಂ ಚಾನುಷಜ್ಜನ್ತೇ ವರ್ತನ್ತೇ ಚ ಪೃಥಕ್ಪೃಥಕ್ ॥೨॥

ಧರ್ಮಾರ್ಥ-ಕಾಮಗಳ ಮೂಲವು ಯಾವುದು? ಅವುಗಳ ಉತ್ಪತ್ತಿಗೆ ಕಾರಣನಾರು? ಅವು ಕೆಲವು ವೇಳೆ ಒಂದಾಗಿಯೇ ಇರುತ್ತವೆ. ಕೆಲವು ವೇಳೆ ಪ್ರತ್ಯೇಕ-ಪ್ರತ್ಯೇಕವಾಗಿಯೂ ಇರುತ್ತವೆ. ಏಕೆ?"

ಭೀಷ್ಮನು ಹೇಳುತ್ತಾನೆ :

ಯದಾ ತೇ ಸ್ಯುಃ ಸುಮನಸೋ ಲೋಕೇ ಧರ್ಮಾರ್ಥನಿಶ್ಚಯೇ ।
ಕಾಲಪ್ರಭವಸಂಸ್ಥಾಸು ಸಜ್ಜನ್ತೇ ಚ ತ್ರಯಸ್ತದಾ ॥೩॥

"ಮಹಾರಾಜ! ಪ್ರಪಂಚದಲ್ಲಿ ಯಾವಾಗ ಜನರು ಶುದ್ಧಚಿತ್ತ ರಾಗಿರುವರೋ, ಧರ್ಮಪೂರ್ವಕವಾಗಿ ಅರ್ಥಸಿದ್ಧಿಯನ್ನು ಪಡೆದುಕೊಳ್ಳ

ಬೇಕೆಂದು ಆಶಿಸುವರೋ–ಆ ಸಮಯದಲ್ಲಿ ಉಚಿತವಾದ ಕಾಲ, ಕಾರಣ ಮತ್ತು ಕರ್ಮಾನುಷ್ಠಾನಗಳಿಂದಾಗಿ ಧರ್ಮಾರ್ಥ-ಕಾಮಗಳು ಒಂದಾಗಿ ಸೇರಿಕೊಂಡಿರುತ್ತವೆ.

ಧರ್ಮಮೂಲಃ ಸದೈವಾರ್ಥಃ ಕಾಮೋಽರ್ಥಫಲಮುಚ್ಯತೇ ।
ಸಂಕಲ್ಪಮೂಲಾಸ್ತೇ ಸರ್ವೇ ಸಂಕಲ್ಪೋ ವಿಷಯಾತ್ಮಕಃ ॥೪॥

ಧರ್ಮವು ಸರ್ವಕಾಲದಲ್ಲಿಯೂ ಅರ್ಥಪ್ರಾಪ್ತಿಗೆ ಕಾರಣವಾಗಿರುತ್ತದೆ. ಕಾಮವು ಅರ್ಥದ ಫಲರೂಪವಾಗಿರುತ್ತದೆ. ಆದರೆ ಈ ಮೂರಕ್ಕೂ ಮೂಲಕಾರಣವು ಸಂಕಲ್ಪವೇ ಆಗಿರುತ್ತದೆ. ಸಂಕಲ್ಪವು ವಿಷಯರೂಪ ವಾಗಿರುತ್ತದೆ.

ವಿಷಯಾಶ್ಚೈವ ಕಾರ್ತ್ಸ್ನ್ಯೇನ ಸರ್ವ ಆಹಾರಸಿದ್ಧಯೇ ।
ಮೂಲಮೇತತ್ರಿವರ್ಗಸ್ಯ ನಿವೃತ್ತಿರ್ಮೋಕ್ಷ ಉಚ್ಯತೇ ॥೫॥

ಎಲ್ಲ ವಿಷಯಗಳೂ ಪೂರ್ಣವಾಗಿ ಇಂದ್ರಿಯಗಳ ಉಪಭೋಗ ಕ್ಕಾಗಿಯೇ ಇವೆ. ಇವೇ ಧರ್ಮಾರ್ಥ-ಕಾಮಗಳ ಮೂಲವಾಗಿವೆ. ಇವು ಗಳಿಂದ ನಿವೃತ್ತಿಯೇ ಮೋಕ್ಷವೆನಿಸಿಕೊಳ್ಳುತ್ತದೆ.

ಧರ್ಮಾಚ್ಛರೀರಸಂಗುಪ್ತಿರ್ಧರ್ಮಾರ್ಥಂ ಚಾರ್ಥ ಉಚ್ಯತೇ ।
ಕಾಮೋ ರತಿಫಲಶ್ಚಾತ್ರ ಸರ್ವೇ ತೇ ಚ ರಜಸ್ವಲಾಃ ॥೬॥

ಧರ್ಮದಿಂದ ಶರೀರದ ರಕ್ಷಣೆಯಾಗುತ್ತದೆ. ಧರ್ಮದ ಉಪಾರ್ಜನೆ ಗಾಗಿಯೇ ಅರ್ಥದ ಆವಶ್ಯಕತೆಯಿರುವುದೆಂದು ಹೇಳುತ್ತಾರೆ. ರತಿಫಲವನ್ನು ಕೊಡುವುದು ಕಾಮವಾಗಿರುತ್ತದೆ. ಇವೆಲ್ಲವೂ ರಜೋಗುಣಮಯ ವಾಗಿರುತ್ತವೆ.

ಸಂನಿಕೃಷ್ಟಾಂಶ್ಚರೇದೇತಾನ್ನ ಚೈತಾನ್ಮನಸಾ ತ್ಯಜೇತ್ ।
ವಿಮುಕ್ತಸ್ತಪಸಾ ಸರ್ವಾನ್ಧರ್ಮಾದೀನ್ಕಾಮನೈಷ್ಠಿಕಾನ್ ॥೭॥

ಸನ್ನಿಹಿತವಾಗಿರುವ ಧರ್ಮಾರ್ಥ-ಕಾಮಗಳನ್ನು ತನಗೆ ಹಿತವಾಗುವ ರೀತಿಯಲ್ಲಿ ಸೇವಿಸಬೇಕು. ಮನಸ್ಸಿನಿಂದ ಧರ್ಮಾರ್ಥ-ಕಾಮಗಳನ್ನು ತ್ಯಾಗ ಮಾಡಬಾರದು. ತಪಸ್ಸಿನಿಂದಲೂ ಮತ್ತು ವಿಚಾರಪರತೆಯಿಂದಲೂ ಇವು

ಗಳಿಂದ ಮುಕ್ತನಾಗಬೇಕು. ಅರ್ಥಾತ್ ಧರ್ಮಾರ್ಥ-ಕಾಮಗಳನ್ನು ಆಸಕ್ತಿ ರಹಿತನಾಗಿ ಫಲತ್ಯಾಗದ ಮೂಲಕವಾಗಿ ಸೇವಿಸಬೇಕು.

ಶ್ರೇಷ್ಠೇ ಬುದ್ಧಿಸ್ತ್ರಿವರ್ಗಸ್ಯ ಯದಯಂ ಪ್ರಾಪ್ನುಯಾನ್ನರಃ ।
ಕರ್ಮಣಾ ಬುದ್ಧಿಪೂರ್ವೇಣ ಭವತ್ಯರ್ಥೋ ನ ವಾ ಪುನಃ ॥೮॥

ಧರ್ಮಾರ್ಥ-ಕಾಮಗಳಲ್ಲಿರುವ ಬುದ್ಧಿನಿಷ್ಠೆಯು ಶ್ರೇಷ್ಠವಾದ ಮೋಕ್ಷದಲ್ಲಿಯೇ ಇದ್ದರೆ ಮನುಷ್ಯನು ಮೋಕ್ಷವನ್ನೇ ಹೊಂದುತ್ತಾನೆ. ಬುದ್ಧಿಪೂರ್ವಕವಾಗಿ (ಇಂತಹ ಫಲಕ್ಕಾಗಿ ಇಂತಹ ಕರ್ಮವನ್ನು ಮಾಡುತ್ತೇನೆ–ಎಂದು ಸಂಕಲ್ಪಿಸಿ) ಮಾಡುವ ಕರ್ಮಗಳಿಂದ ಫಲವು ಲಭಿಸಿದರೂ ಲಭಿಸಬಹುದು, ಲಭಿಸದಿದ್ದರೂ ಇರಬಹುದು.

ಅರ್ಥಾರ್ಥಮನ್ಯದ್ಭವತಿ ವಿಪರೀತಮಥಾಪರಮ್ ।
ಅನರ್ಥಾರ್ಥಮವಾಪ್ಯಾರ್ಥಮನ್ಯತ್ರಾದ್ಯೋಪಕಾರಕಮ್ ।
ಬುದ್ಧ್ಯಾ ಬುದ್ಧಿರಿಹಾರ್ಥೇನ ತದಜ್ಞಾನನಿಕೃಷ್ಟಯಾ ॥೯॥

'ಅರ್ಥದ ಸಲುವಾಗಿ ಧರ್ಮವನ್ನೇ ಮಾಡಬೇಕಾಗಿಲ್ಲ. ಕೃಷಿ-ಸೇವಾ ವೃತ್ತಿಗಳಿಂದಲೂ ಧನದ ಸಂಪಾದನೆಯಾಗುತ್ತದೆ'–ಎಂದು ಕೆಲವರು ಅಭಿಪ್ರಾಯಪಡುತ್ತಾರೆ. 'ಧನವು ಕೆಲವು ವೇಳೆ ಪ್ರಯತ್ನದಿಂದ ಲಭಿಸುತ್ತದೆ. ಕೆಲವು ವೇಳೆ ದೈವಿಕವಾಗಿ ಸಿಕ್ಕುತ್ತದೆ. ಇಲ್ಲಿ ಧರ್ಮದಿಂದ ಅರ್ಥವನ್ನು ಪಡೆಯುವ ಆವಶ್ಯಕತೆಯೇ ಇಲ್ಲ. ಅದೇ ರೀತಿಯಲ್ಲಿ ಅರ್ಥವಿರುವವನೂ ಧರ್ಮಾತ್ಮನಾಗಿರುವನೆಂಬ ನಿಯಮವೂ ಇಲ್ಲ. ಧನವಂತರು ಪಾಪಮಾಡುತ್ತಲೇ ಇರುತ್ತಾರೆ. ಆದುದರಿಂದ ಅರ್ಥದಿಂದ ಧರ್ಮದ ಸಾಧನೆಯಾಗುವುದಿಲ್ಲ. ಅರ್ಥವಿಲ್ಲದೆ ಧರ್ಮದ ಸಾಧನೆಯಾಗಲಾರದೆಂಬ ನಿಯಮವೂ ಇಲ್ಲ. ಅರ್ಥದ ಆವಶ್ಯಕತೆಯೇ ಇಲ್ಲದೆ ಉಪವಾಸಾದಿವ್ರತಗಳಿಂದಲೂ ಧರ್ಮವು ವರ್ಧಿಸುತ್ತದೆ'–ಇವೇ ಮುಂತಾದ ವಿಚಾರಗಳಿಂದ '**ಧರ್ಮಾದರ್ಥಃ ಅರ್ಥತೋ ಧರ್ಮಃ** ಧರ್ಮದಿಂದ ಅರ್ಥವು ಸಿದ್ಧಿಸುತ್ತದೆ ; ಅರ್ಥದಿಂದ ಧರ್ಮವು ಸಿದ್ಧಿಸುತ್ತದೆ'–ಎಂಬ ಸಿದ್ಧಾಂತದಲ್ಲಿ ವಿಶ್ವಾಸವಿಲ್ಲದ, ಅಜ್ಞಾನದಿಂದ ನಿಕೃಷ್ಟವಾದ ಬುದ್ಧಿಯಿಂದ ಕೂಡಿರುವ ಮೂಢನು ಧರ್ಮಾರ್ಥಗಳ ಫಲವನ್ನು ಪಡೆಯುವುದಿಲ್ಲ.

ಅಪಧ್ಯಾನಮಲೋ ಧರ್ಮೋ ಮಲೋಽರ್ಥಸ್ಯ ನಿಗೂಹನಮ್ ।
ಸಮ್ಪ್ರಮೋದಮಲಃ ಕಾಮೋ ಭೂಯಃ ಸ್ವಗುಣವರ್ಜಿತಃ ॥೧೦॥

ಧರ್ಮದ ಕಾರ್ಯವನ್ನು ಮಾಡಿ ಫಲವನ್ನು ಅಪೇಕ್ಷಿಸುವುದು ಧರ್ಮದ ಮಲವೆನಿಸಿಕೊಳ್ಳುತ್ತದೆ. ದಾನ-ಭೋಗಾದಿಗಳಿಗೆ ವ್ಯಯಿಸದೇ ಕೂಡಿಡುವುದು ಅರ್ಥದ ಮಲವೆನಿಸಿಕೊಳ್ಳುತ್ತದೆ. ವಿಷಯಾದಿಗಳಲ್ಲಿ ಅತ್ಯಾಸಕ್ತಿಯನ್ನು ಹೊಂದುವುದು ಕಾಮದ ಮಲವೆನಿಸಿಕೊಳ್ಳುತ್ತದೆ. ಧರ್ಮಮಾಡಿ ಫಲವನ್ನು ಅಪೇಕ್ಷಿಸುವುದು, ಹಣವನ್ನು ಕೂಡಿಡುವುದು, ಅತಿಯಾಗಿ ಪ್ರೀತಿಸುವುದು–ಇವು ಧರ್ಮಾರ್ಥ-ಕಾಮಗಳ ಸ್ವಾಭಾವಿಕ ಗುಣಗಳೇ ಆಗಿರುತ್ತವೆ. ಈ ಗುಣಗಳನ್ನು ವರ್ಜಿಸಿ ಫಲಾಪೇಕ್ಷೆಯಿಲ್ಲದೇ ಇವುಗಳನ್ನು ಮಾಡಿದರೆ ಇವುಗಳೇ ಕಲ್ಯಾಣಕಾರಕಗಳಾಗುತ್ತವೆ.

ಯುಧಿಷ್ಠಿರ! ಈ ವಿಷಯದಲ್ಲಿ ಕಾಮಂದಕನಿಗೂ–ಆಂಗರಿಷ್ಠರಾಜ ನಿಗೂ ನಡೆದ ಪುರಾತನವಾದ ಸಂವಾದರೂಪವಾದ ಇತಿಹಾಸವನ್ನೂ ಉದಾಹರಿಸುತ್ತಾರೆ.

ಹಿಂದೊಮ್ಮೆ ನರಶ್ರೇಷ್ಠನಾದ ಆಂಗರಿಷ್ಠನು ಸುಖಾಸನದಲ್ಲಿ ಕುಳಿತಿದ್ದ ಕಾಮಂದಕಮಹರ್ಷಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಪ್ರಶ್ನೆಯನ್ನು ಕೇಳಲು ಸಮಯವು ಪ್ರಶಸ್ತವಾಗಿರುವುದೆಂದು ಭಾವಿಸಿ, ಕಾಮಂದಕನನ್ನು ಪ್ರಶ್ನಿಸಿದನು :

ಯಃ ಪಾಪಂ ಕುರುತೇ ರಾಜಾ ಕಾಮಮೋಹಬಲಾತ್ಕೃತಃ ।
ಪ್ರತ್ಯಾಸನ್ನಸ್ಯ ತಸ್ಯರ್ಷೇ ಕಿಂ ಸ್ಯಾತ್ಪಾಪಪ್ರಣಾಶನಮ್ ॥೧೩॥

“ಮಹರ್ಷಿಗಳೇ! ಒಬ್ಬ ರಾಜನು ಕಾಮ-ಮೋಹವಶನಾಗಿ ಪಾಪ ವನ್ನು ಮಾಡುತ್ತಾನೆ. ಆದರೆ ಅವನು ತಾನು ಮಾಡಿದ ಪಾಪಕ್ಕಾಗಿ ಪಶ್ಚಾತ್ತಾಪಪಡುತ್ತಿರುತ್ತಾನೆ. ಆ ಸಮಯದಲ್ಲಿ ಅವನ ಪಾಪವನ್ನು ಹೋಗ ಲಾಡಿಸಿಕೊಳ್ಳುವುದಕ್ಕೆ ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು?

ಅಧರ್ಮಂ ಧರ್ಮ ಇತಿ ಚ ಯೋಽಜ್ಞಾನಾದಾಚರೇನ್ನರಃ ।
ತಂ ಚಾಪಿ ಪ್ರಥಿತಂ ಲೋಕೇ ಕಥಂ ರಾಜಾ ನಿವರ್ತಯೇತ್ ॥೧೪॥

ಯಾವನು ಅಜ್ಞಾನದಿಂದ ಅಧರ್ಮವನ್ನೇ ಧರ್ಮವೆಂದು ಭಾವಿಸಿ

ಆಚರಿಸುತ್ತಿರುತ್ತಾನೆಯೋ–ಅಂತಹ ಲೋಕವಿಖ್ಯಾತನಾದ ಮನುಷ್ಯನನ್ನು ರಾಜನಾದವನು ಯಾವ ರೀತಿಯಲ್ಲಿ ಅಧರ್ಮದಿಂದ ಪರಾಙ್ಮುಖನಾಗು ವಂತೆ ಮಾಡಬೇಕು?"

ಕಾಮಂದಕನು ಉತ್ತರಿಸುತ್ತಾನೆ :

ಯೋ ಧರ್ಮಾರ್ಥೌ ಪರಿತ್ಯಜ್ಯ ಕಾಮಮೇವಾನುವರ್ತತೇ ।
ಸ ಧರ್ಮಾರ್ಥಪರಿತ್ಯಾಗಾತ್ಪ್ರಜ್ಞಾನಾಶಮಿಹಾರ್ಚ್ಛತಿ ॥೧೫॥

"ಮಹಾರಾಜ! ಯಾವನು ಧರ್ಮಾರ್ಥಗಳನ್ನು ಪರಿತ್ಯಜಿಸಿ ಕಾಮವನ್ನೇ ಸೇವಿಸುತ್ತಿರುವನೋ–ಅವನು ಧರ್ಮಾರ್ಥಗಳ ತ್ಯಾಗದಿಂದ ನಷ್ಟ ಬುದ್ಧಿಯವನಾಗುತ್ತಾನೆ (ಬುದ್ಧಿಹೀನನಾಗುತ್ತಾನೆ.)

ಪ್ರಜ್ಞಾನಾಶಾತ್ಮಕೋ ಮೋಹಸ್ತಥಾ ಧರ್ಮಾರ್ಥನಾಶಕಃ ।
ತಸ್ಮಾನ್ನಾಸ್ತಿಕತಾ ಚೈವ ದುರಾಚಾರಶ್ಚ ಜಾಯತೇ ॥೧೬॥

ಬುದ್ಧಿಯ ನಾಶವೆಂಬುದೇ ಮೋಹ. ಆ ಮೋಹವು ಧರ್ಮಾರ್ಥಗಳೆರಡನ್ನೂ ವಿನಾಶಗೊಳಿಸುತ್ತದೆ. ಅದರಿಂದ ಮನುಷ್ಯನಿಗೆ ನಾಸ್ತಿಕತೆಯುಂಟಾಗುತ್ತದೆ. ಮೋಹವಶನಾದವನು ದುರಾಚಾರಿಯೂ ಆಗುತ್ತಾನೆ.

ದುರಾಚಾರಾನ್ಯದಾ ರಾಜಾ ಪ್ರದುಷ್ಟಾನ್ನ ನಿಯಚ್ಛತಿ ।
ತಸ್ಮಾದುದ್ವಿಜತೇ ಲೋಕಃ ಸರ್ಪಾದ್ವೇಶ್ಮಗತಾದಿವ ॥೧೭॥

ಯಾವಾಗ ರಾಜನು ದುಷ್ಟರನ್ನೂ ದುರಾಚಾರಿಗಳನ್ನೂ ಯಥೋಕ್ತವಾದ ಶಿಕ್ಷೆಯನ್ನು ಕೊಟ್ಟು ನಿಯಂತ್ರಿಸುವುದಿಲ್ಲವೋ–ಆಗ ಸರ್ಪವು ಹೊಕ್ಕ ಮನೆಯನ್ನು ಪ್ರವೇಶಿಸಲು ಜನರು ಭಯಪಡುವಂತೆ–ಅಂತಹ ರಾಜನ ದೆಸೆಯಿಂದ ಪ್ರಜೆಗಳು ಉದ್ವಿಗ್ನರಾಗುತ್ತಾರೆ.

ತಂ ಪ್ರಜಾ ನಾನುವರ್ತನ್ತೇ ಬ್ರಾಹ್ಮಣಾ ನ ಚ ಸಾಧವಃ ।
ತತಃ ಸಂಶಯಮಾಪ್ನೋತಿ ತಥಾ ವಧ್ಯತ್ವಮೇತಿ ಚ ॥೧೮॥

ದುಷ್ಟರನ್ನೂ–ದುರಾಚಾರಿಗಳನ್ನೂ ಶಿಕ್ಷಿಸದೇ ಇರುವ ರಾಜನನ್ನು ಪ್ರಜೆಗಳೂ ಅನುಸರಿಸುವುದಿಲ್ಲ. ಬ್ರಾಹ್ಮಣರಾಗಲೀ, ಸಾಧು-ಸತ್ಪುರುಷರಾಗಲೀ ಅಂತಹ ರಾಜರನ್ನು ಅನುಸರಿಸಿ ಹೋಗುವುದಿಲ್ಲ. ಬಳಿಕ ರಾಜನು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಕಡೆಯಲ್ಲಿ ಪ್ರಜೆಗಳೇ ಅಂತಹ ರಾಜನನ್ನು ವಧಿಸುತ್ತಾರೆ.

ಅಪಧ್ವಸ್ತಸ್ತ್ವವಮತೋ ದುಃಖಂ ಜೀವಿತಮೃಚ್ಛತಿ ।
ಜೀವೇಚ್ಚ ಯದಪಧ್ವಸ್ತಸ್ತಚ್ಛುದ್ಧಂ ಮರಣಂ ಭವೇತ್ ॥೧೯॥

ಒಂದು ವೇಳೆ ಪ್ರಜೆಗಳು ಸಂಹರಿಸದಿದ್ದರೂ ರಾಜಪದವಿಯಿಂದಲೇ ಭ್ರಷ್ಟನಾದ ಮತ್ತು ಅವಮಾನಿತನಾದ ಆ ರಾಜನು ದುಃಖಮಯವಾದ ಜೀವನವನ್ನು ಹೊಂದುತ್ತಾನೆ. ರಾಜಪದವಿಯಿಂದ ಭ್ರಷ್ಟನಾದನಂತರವೂ ಅವನು ಜೀವಿಸಿದ್ದರೆ ಆ ಜೀವನವು ಅವನಿಗೆ ಸ್ಪಷ್ಟವಾಗಿ ಮರಣವಾಗಿಯೇ ಪರಿಣಮಿಸುತ್ತದೆ. (ಬದುಕಿದ್ದರೂ ಸತ್ತವನಂತೆಯೇ ಆಗುತ್ತಾನೆ.)

ಅತ್ರೈತದಾಹುರಾಚಾರ್ಯಾಃ ಪಾಪಸ್ಯ ಪರಿಗರ್ಹಣಮ್ ।
ಸೇವಿತವ್ಯಾ ತ್ರಯೀ ವಿದ್ಯಾ ಸತ್ಕಾರೋ ಬ್ರಾಹ್ಮಣೇಷು ಚ ॥೨೦॥

ಅಂತಹ ಅವಸ್ಥೆಯಲ್ಲಿರುವ ರಾಜನು ಮಾಡಬೇಕಾದ ಕರ್ತವ್ಯವನ್ನು ಆಚಾರ್ಯಪುರುಷರು ಹೇಳಿರುತ್ತಾರೆ. ರಾಜನು ತಾನು ಮಾಡಿದ ಪಾಪವನ್ನು ನಿಂದಿಸಬೇಕು. ಅರ್ಥಾತ್ ತಾನು ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಡಬೇಕು. ವೇದಗಳನ್ನು ಅಧ್ಯಯನಮಾಡಬೇಕು. ಬ್ರಾಹ್ಮಣರನ್ನು ಸತ್ಕರಿಸಬೇಕು.

ಮಹಾಮನಾ ಭವೇದ್ಧರ್ಮೇ ವಿವಹೇಚ್ಚ ಮಹಾಕುಲೇ ।
ಬ್ರಾಹ್ಮಣಾಂಶ್ಚಾಪಿ ಸೇವೇತ ಕ್ಷಮಾಯುಕ್ತಾನ್ಮನಸ್ವಿನಃ ॥೨೧॥

ಧರ್ಮಾಚರಣೆಯಲ್ಲಿಯೇ ವಿಶೇಷವಾಗಿ ಮನಸ್ಸನ್ನಿಡಬೇಕು. ಉತ್ತಮ ಕುಲದಿಂದ ಕನ್ಯೆಯನ್ನು ತಂದು ವಿವಾಹಮಾಡಿಕೊಳ್ಳಬೇಕು. ಮನನಶೀಲ ರಾದ, ಕ್ಷಮಾವಂತರಾದ ಬ್ರಾಹ್ಮಣರ ಸೇವೆಯನ್ನು ಮಾಡಬೇಕು.

ಜಪೇದುದಕಶೀಲಃ ಸ್ಯಾತ್ಸತತಂ ಸುಖಮಾಸ್ಥಿತಃ ।
ಧರ್ಮಾನ್ವಿತಾನ್ಸಮ್ಪ್ರವಿಶೇದ್ಬಹಿಃ ಕೃತ್ವೇಹ ದುಷ್ಕೃತೀನ್ ॥೨೨॥

ನೀರಿನಲ್ಲಿ ನಿಂತು ಗಾಯತ್ರೀಮಂತ್ರವನ್ನು ಜಪಿಸಬೇಕು. ಸ್ನಾನಶೀಲ ನಾಗಬೇಕು. ಸರ್ವದಾ ಪ್ರಸನ್ನನಾಗಿರಬೇಕು. ಧರ್ಮಾತ್ಮರಾದ ಪುರುಷರ ಸಹವಾಸವನ್ನು ಮಾಡಬೇಕು. ಪಾಪಿಷ್ಠರಾದವರನ್ನು ರಾಜ್ಯದಿಂದ ಹೊರ ಗಟ್ಟಬೇಕು.

ಪ್ರಸಾದಯೇನ್ಮಧುರಯಾ ವಾಚಾ ವಾಪ್ಯಥ ಕರ್ಮಣಾ ।
ತವಾಸ್ಮೀತಿ ವದೇನ್ನಿತ್ಯಂ ಪರೇಷಾಂ ಕೀರ್ತಯನ್ಗುಣಾನ್ ॥೨೩॥

ಸುಮಧುರವಾದ ಮಾತುಗಳಿಂದಲೂ, ಉತ್ತಮವಾದ ಕಾರ್ಯಗಳಿಂದಲೂ ಎಲ್ಲರನ್ನೂ ಪ್ರಸನ್ನಗೊಳಿಸಬೇಕು. ಇತರರ ಗುಣಗಳನ್ನು ಕೊಂಡಾಡುತ್ತಾ ಎಲ್ಲರೊಡನೆಯೂ 'ನಾನು ನಿಮ್ಮವನಾಗಿದ್ದೇನೆ–ನನ್ನನ್ನು ನಿಮ್ಮವನೆಂದೇ ತಿಳಿದುಕೊಳ್ಳಿರಿ'–ಎಂದು ಹೇಳುತ್ತಿರಬೇಕು.

ಅಪಾಪೋ ಹ್ಯೇವಮಾಚಾರಃ ಕ್ಷಿಪ್ರಂ ಬಹುಮತೋ ಭವೇತ್ ।
ಪಾಪಾನ್ಯಪಿ ಹಿ ಕೃಚ್ಛ್ರಾಣಿ ಶಮಯೇನ್ನಾತ್ರ ಸಂಶಯಃ ॥೨೪॥

ಯಾವ ರಾಜನು ಈ ಪ್ರಕಾರವಾಗಿ ಆಚರಿಸುವನೋ–ಅವನು ಶೀಘ್ರವಾಗಿಯೇ ಪಾಪಗಳಿಂದ ವಿಮುಕ್ತನಾಗಿ ಎಲ್ಲರ ಸಮ್ಮಾನಕ್ಕೂ ಪಾತ್ರನಾಗುತ್ತಾನೆ. ಹೀಗೆ ಮಾಡುವುದರಿಂದ ಅವನು ತನ್ನ ಕಠೋರವಾದ ಪಾಪಗಳನ್ನೂ ಉಪಶಮನಗೊಳಿಸಲು ಸಮರ್ಥನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಗುರವೋ ಹಿ ಪರಂ ಧರ್ಮಂ ಯಂ ಬ್ರೂಯುಸ್ತಂ ತಥಾ ಕುರು ।
ಗುರೂಣಾಂ ಹಿ ಪ್ರಸಾದಾದ್ವೈ ಶ್ರೇಯಃ ಪರಮವಾಪ್ಸ್ಯಸಿ ॥೨೫॥

ಗುರುಜನರು ನಿನಗಾಗಿ ಯಾವ ಶ್ರೇಷ್ಠವಾದ ಧರ್ಮವನ್ನು ಉಪದೇಶಿಸಿರುವರೋ–ಅದನ್ನು ಯಥಾವತ್ತಾಗಿಯೇ ಪರಿಪಾಲಿಸು. ಗುರುಜನರ ಕೃಪೆಯಿಂದಲೇ ನೀನು ಪರಮಶ್ರೇಯಸ್ಸನ್ನು ಹೊಂದುವೆ."

(ಕಾಮಂದಕಮಹರ್ಷಿಯ ಉಪದೇಶವನ್ನು ಕೇಳಿ ಆಂಗರಿಷ್ಠರಾಜನು ಅದರಂತೆಯೇ ಆಚರಿಸಿದನು.)

೧೨೩ನೆಯ ಅಧ್ಯಾಯವು ಮುಗಿಯಿತು.

೧೨೪ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಇಂದ್ರ ಮತ್ತು ಪ್ರಹ್ಲಾದರ ಕಥೆ : ಶೀಲದ ಪ್ರಭಾವ

ಯುಧಿಷ್ಠಿರನು ಹೇಳುತ್ತಾನೆ :

"ನರಶ್ರೇಷ್ಠನೇ! ಪಿತಾಮಹ! ಈ ಪ್ರಪಂಚದಲ್ಲಿ ಎಲ್ಲ ಜನರೂ ಎಲ್ಲಕ್ಕಿಂತಲೂ ಮೊದಲು ಧರ್ಮಾನುರೂಪವಾದ ಶೀಲವನ್ನೇ ಪ್ರಶಂಸೆಮಾಡುತ್ತಾರೆ. ಆದುದರಿಂದ ಈ ವಿಷಯದಲ್ಲಿ ನನಗೆ ದೊಡ್ಡ ಸಂಶಯವು ಮೂಡಿದೆ.

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಒಂದು ವೇಳೆ ಈ ವಿಷಯವನ್ನು ನಾವು ತಿಳಿದುಕೊಳ್ಳುವ ಸಾಧ್ಯತೆಯಿದ್ದರೆ ಧರ್ಮಮೂಲವಾದ ಶೀಲವು ಹೇಗೆ ಲಭಿಸುತ್ತದೆಯೆಂಬ ವಿಷಯವಾಗಿ ಎಲ್ಲ ಸಮಾಚಾರಗಳನ್ನೂ ನಾನು ಕೇಳಿ ತಿಳಿದುಕೊಳ್ಳುವ ಆಶಯದಿಂದಿರುತ್ತೇನೆ. ಶೀಲವು ಹೇಗೆ ಲಭಿಸುತ್ತದೆ? ಧರ್ಮಾನುಸಾರಿಯಾದ ಶೀಲವು ಎಂತಹ ಲಕ್ಷಣವುಳ್ಳದ್ದಾಗಿದೆ? ಇದನ್ನು ಕೇಳಲು ಇಚ್ಛಿಸುತ್ತೇನೆ. ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ಈ ವಿಷಯವನ್ನು ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಮಾನದನೇ! ಹಿಂದೆ ಇಂದ್ರಪ್ರಸ್ಥದಲ್ಲಿ ರಾಜಸೂಯಯಾಗದ ಸಮಯದಲ್ಲಿ ಸಹೋದರರಿಂದ ಕೂಡಿದ್ದ ನಿನ್ನ ಪರಮಾದ್ಭುತವಾದ ಸಂಪತ್ಸಮೃದ್ಧಿಯನ್ನೂ ಮತ್ತು ಉತ್ತಮೋತ್ತಮವಾದ ಆ ಸಭಾಭವನವನ್ನೂ ನೋಡಿ ಸಂತಪ್ತನಾದ ದುರ್ಯೋಧನನು, ಕೌರವಸಭೆಯಲ್ಲಿ ತಂದೆಯಾದ ಧೃತರಾಷ್ಟ್ರನೊಡನೆ ತನ್ನ ಮನಸ್ಸಿನ ಆತಂಕವನ್ನು ವ್ಯಕ್ತಪಡಿಸಿದನು.

ಧೃತರಾಷ್ಟ್ರನು ದುರ್ಯೋಧನನು ಹೇಳಿದುದೆಲ್ಲವನ್ನೂ ಕೇಳಿ ಕರ್ಣನೊಡನೆ ಕುಳಿತಿದ್ದ ಮಗನಿಗೆ ಹೇಳಿದನು :

"ಮಗು! ದುರ್ಯೋಧನ! ನೀನು ಯಾವ ಕಾರಣದಿಂದ ಹೀಗೆ ಪರಿತಪಿಸುತ್ತಿರುವೆ? ಇದನ್ನು ನಾನು ಯಥಾವತ್ತಾಗಿ ತಿಳಿಯಬೇಕಾಗಿದೆ. ಪರಿತಾಪದ ಕಾರಣವನ್ನು ತಿಳಿದನಂತರ ಉಚಿತವೆನಿಸಿದರೆ ನಿನ್ನನ್ನು ಸಮಾಧಾನಗೊಳಿಸಲು ಪ್ರಯತ್ನಿಸುತ್ತೇನೆ. ಪರಪುರಂಜಯನೇ! ಪಾಂಡವರಲ್ಲಿರುವಂತೆಯೇ ನಿನ್ನಲ್ಲಿಯೂ ಮಹೈಶ್ವರ್ಯವಿದೆ. ನಿನ್ನ ಸಮಸ್ತಸಹೋದರರೂ, ಮಿತ್ರರೂ ಮತ್ತು ಸಂಬಂಧಿಗಳೂ ಸರ್ವದಾ ನಿನ್ನ ಸೇವೆಯಲ್ಲಿಯೇ ನಿರತರಾಗಿರುತ್ತಾರೆ. ನೀನು ಬಹುಮೂಲ್ಯವಾದ ಉತ್ತರೀಯಗಳನ್ನೇ ಹೊದೆಯುವೆ. ಮಾಂಸದಿಂದ ಯುಕ್ತವಾದ ಭೋಜನವನ್ನೇ ಊಟಮಾಡುವೆ. ಶ್ರೇಷ್ಠಜಾತಿಯ ಆಜಾನೇಯಾಶ್ವಗಳೇ (ಒಳ್ಳೆಯ ಜಾತಿಯಲ್ಲಿ ಹುಟ್ಟಿದ ಕುದುರೆಗಳೇ) ನಿನ್ನ ರಥವನ್ನು ಎಳೆಯುತ್ತವೆ. ಹೀಗಿದ್ದರೂ ನೀನು ಯಾವ

ಕಾರಣದಿಂದ ಕೃಶನೂ ನಿಸ್ತೇಜನೂ (ಬಿಳಿಚಿಕೊಂಡಿರುವ ಮುಖದವನೂ) ಆಗಿರುವೆ?"

ದುರ್ಯೋಧನನು ಹೇಳುತ್ತಾನೆ :

"ತಂದೆಯೇ! ಯುಧಿಷ್ಠಿರನ ಅರಮನೆಯಲ್ಲಿ ಪ್ರತಿನಿತ್ಯವೂ ಹತ್ತು ಸಾವಿರ ಮಂದಿ ಮಹಾತ್ಮರಾದ ಸ್ನಾತಕರು ಚಿನ್ನದ ಪಾತ್ರೆಗಳಲ್ಲಿ ಊಟ ಮಾಡುತ್ತಾರೆ. ದಿವ್ಯವಾದ ಪುಷ್ಪಗಳಿಂದಲೂ ಫಲಗಳಿಂದಲೂ ಕೂಡಿದ್ದ ಆ ದಿವ್ಯಸಭೆಯನ್ನೂ, ತಿತ್ತಿರಪಕ್ಷಿಗಳಂತೆ ಚಿತ್ರವರ್ಣದ ಕಲ್ಮಾಷಜಾತಿಯ ಕುದುರೆಗಳನ್ನೂ, ವಿಧ-ವಿಧವಾದ ಅಮೂಲ್ಯವಾದ ವಸ್ತ್ರಗಳನ್ನೂ, ಕುಬೇರನ ಐಶ್ವರ್ಯಕ್ಕೆ ಸಮಾನವಾದ ಶುಭದಾಯಕವಾದ ನಮ್ಮ ಶತ್ರುಗಳಾದ ಪಾಂಡವರ ಮಹೈಶ್ವರ್ಯವನ್ನೂ ನೋಡಿ ಶೋಕಸಂತಪ್ತನಾಗಿದ್ದೇನೆ."

ಧೃತರಾಷ್ಟ್ರನು ಹೇಳುತ್ತಾನೆ :

"ಪುತ್ರಕ! ನರವ್ಯಾಘ್ರನೇ! ಯುಧಿಷ್ಠಿನಲ್ಲಿ ಎಷ್ಟು ಐಶ್ವರ್ಯವಿರುವುದೋ ಅಷ್ಟೇ ಐಶ್ವರ್ಯವನ್ನಾಗಲೀ ಅಥವಾ ಅದಕ್ಕಿಂತಲೂ ಮಿಗಿಲಾದ ಐಶ್ವರ್ಯವನ್ನಾಗಲೀ—ಪಡೆದುಕೊಳ್ಳುವ ಇಚ್ಛೆಯಿರುವುದಾದರೆ ಮೊದಲು ನೀನು ಶೀಲವಂತನಾಗು.

ಶೀಲೇನ ಹಿ ತ್ರಯೋ ಲೋಕಾಃ ಶಕ್ಯಾ ಜೇತುಂ ನ ಸಂಶಯಃ ।
ನ ಹಿ ಕಿಂಚಿದಸಾಧ್ಯಂ ವೈ ಲೋಕೇ ಶೀಲವತಾಂ ಭವೇತ್ ॥೧೫॥

ಶೀಲದಿಂದಲೇ ಮೂರು ಲೋಕಗಳನ್ನೂ ಜಯಿಸಲು ಶಕ್ಯವಾಗುತ್ತದೆ. ಲೋಕದಲ್ಲಿ ಶೀಲವಂತರಿಗೆ ಅಸಾಧ್ಯವಾದ ಕಾರ್ಯವೆಂಬುದೇ ಯಾವುದೂ ಇರುವುದಿಲ್ಲ.

ಏಕರಾತ್ರೇಣ ಮಾನ್ಧಾತಾ ತ್ರ್ಯಹೇಣ ಜನಮೇಜಯಃ ।
ಸಪ್ತರಾತ್ರೇಣ ನಾಭಾಗಃ ಪೃಥಿವೀಂ ಪ್ರತಿಪೇದಿರೇ ॥೧೬॥

ಮಾಂಧಾತನು ಒಂದು ದಿನದಲ್ಲಿಯೂ, ಜನಮೇಜಯನು ಮೂರು ದಿನಗಳಲ್ಲಿಯೂ, ನಾಭಾಗನು ಏಳು ದಿನಗಳಲ್ಲಿಯೂ ಭೂಮಂಡಲದ ಸಾಮ್ರಾಜ್ಯವನ್ನು ಪಡೆದುಕೊಂಡರು.

ಏತೇ ಹಿ ಪಾರ್ಥಿವಾಃ ಸರ್ವೇ ಶೀಲವನ್ತೋ ದಯಾನ್ವಿತಾಃ ।
ಅತಸ್ತೇಷಾಂ ಗುಣಕ್ರೀತಾ ವಸುಧಾ ಸ್ವಯಮಾಗತಾ ॥೧೭॥

ಆ ಎಲ್ಲ ರಾಜರೂ ಶೀಲವಂತರೂ–ದಯಾಳುಗಳೂ ಆಗಿದ್ದರು. ಅವರ ಗುಣಗಳ ಮೌಲ್ಯದಿಂದಲೇ ಕ್ರಯಿಸಲ್ಪಟ್ಟ ಭೂದೇವಿಯು ತಾನಾ ಗಿಯೇ ಅವರಿಗೆ ಒಲಿದುಬಂದಿದ್ದಳು.”

ದುರ್ಯೋಧನನು ಕೇಳುತ್ತಾನೆ :

ಕಥಂ ತತ್ಪ್ರಾಪ್ಯತೇ ಶೀಲಂ ಶ್ರೋತುಮಿಚ್ಛಾಮಿ ಭಾರತ ।
ಯೇನ ಶೀಲೇನ ತೈಃ ಪ್ರಾಪ್ತಾ ಕ್ಷಿಪ್ರಮೇವ ವಸುನ್ಧರಾ ॥೧೮॥

“ತಂದೆಯೇ! ಯಾವ ಶೀಲದ ಮೂಲಕವಾಗಿ ಆ ಪೃಥ್ವೀಪಾಲರು ಬಹಳ ಬೇಗ ಈ ಭೂಮಂಡಲವನ್ನು ಪಡೆದುಕೊಂಡರೋ–ಅಂತಹ ಶೀಲವು ಹೇಗೆ ಲಭಿಸುತ್ತದೆಂಬುದನ್ನು ತಿಳಿಯಲು ಅಪೇಕ್ಷಿಸುತ್ತೇನೆ.”

ಧೃತರಾಷ್ಟ್ರನು ಹೇಳುತ್ತಾನೆ :

“ದುರ್ಯೋಧನ! ಈ ವಿಷಯದಲ್ಲಿ ನಾರದರು ಶೀಲದ ವಿಷಯವಾಗಿ ಹೇಳಿದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಾನು ನಿನಗೂ ಹೇಳುತ್ತೇನೆ, ಕೇಳು. ದೈತ್ಯರಾಜನಾದ ಪ್ರಹ್ಲಾದನು ಶೀಲವನ್ನೇ ಆಶ್ರಯಿಸಿ ಮಹಾತ್ಮನಾದ ಮಹೇಂದ್ರನ ರಾಜ್ಯವನ್ನೇ ಜಯಿಸಿದನು. ಇಷ್ಟು ಮಾತ್ರವಲ್ಲ ; ಶೀಲವಂತನಾದ ಪ್ರಹ್ಲಾದನು ಮೂರು ಲೋಕಗಳನ್ನೂ ಸ್ವಾಧೀನಪಡಿಸಿಕೊಂಡನು. ಆ ಸಮಯದಲ್ಲಿ ಮಹಾಬುದ್ಧಿವಂತನಾದ ಇಂದ್ರನು ಬೃಹಸ್ಪತಿಯನ್ನು ಸೇವಿಸುತ್ತಾ ಬದ್ಧಾಂಜಲಿಯಾಗಿ–“**ಶ್ರೇಯ ಇಚ್ಛಾಮಿ ವೇದಿತುಮ್**–ಭಗವನ್! ನಾನು ನನ್ನ ಶ್ರೇಯಸ್ಸಾಧನೆಯ ಉಪಾಯವನ್ನು ನಿಮ್ಮಿಂದ ತಿಳಿದುಕೊಳ್ಳ ಬೇಕೆಂದಿರುತ್ತೇನೆ”–ಎಂದು ಹೇಳಿದನು. ಕುರುಶ್ರೇಷ್ಠನೇ! ಇಂದ್ರನು ಹೀಗೆ ಪ್ರಾರ್ಥಿಸಿದನಂತರ ಕೃಪಾಳುವಾದ ಬೃಹಸ್ಪತಿಯು ಇಂದ್ರನಿಗೆ ಕಲ್ಯಾಣಕಾರಿ ಯಾದ ನಿಃಶ್ರೇಯಸಕ್ಕೆ ಸಾಧನವಾದ ಶ್ರೇಷ್ಠಜ್ಞಾನವನ್ನು ಉಪದೇಶಿಸಿದನು. ಬಳಿಕ ಇಂದ್ರನನ್ನು ಕುರಿತು–“ಇದೇ ಶ್ರೇಯಃಪ್ರಾಪ್ತಿಗೆ ಶ್ರೇಷ್ಠವಾದ ಉಪಾಯ ವಾಗಿದೆ”–ಎಂದು ಹೇಳಿದನು. ಇಂದ್ರನು ತೃಪ್ತನಾಗದೇ ಪುನಃ–“**ಕೋ ವಿಶೇಷೋ ಭವೇತ್?** ಇದಕ್ಕಿಂತಲೂ ವಿಶೇಷವಾದುದು ಯಾವುದಿದೆ?” ಎಂದು ಪ್ರಶ್ನಿಸಿದನು.

"ಸುರಶ್ರೇಷ್ಠನೇ! ಇದಕ್ಕಿಂತಲೂ ವಿಶೇಷವಾದ ಮಹತ್ತ್ವಪೂರ್ಣವಾದ ಜ್ಞಾನವು ಮಹಾತ್ಮನಾದ ಶುಕ್ರಾಚಾರ್ಯನಲ್ಲಿದೆ. ನಿನಗೆ ಮಂಗಳವಾಗಲಿ. ನೀನು ಶುಕ್ರನ ಬಳಿಗೆ ಹೋಗಿ ಮಹತ್ತ್ವಪೂರ್ಣವಾದ ಆ ಜ್ಞಾನವನ್ನು ಪುನಃ ಪಡೆದುಕೋ."

ಬೃಹಸ್ಪತಿಯು ಹೀಗೆ ಹೇಳಿದನಂತರ ಪರಮತೇಜಸ್ವಿಯಾದ, ಮಹಾ ತಪಸ್ವಿಯಾಗಿದ್ದ ಇಂದ್ರನು ಶುಕ್ರಾಚಾರ್ಯನ ಸಮೀಪಕ್ಕೆ ಹೋಗಿ ಅವನನ್ನು ಪ್ರಸನ್ನಗೊಳಿಸಿ ಅವನಿಂದ ತನ್ನ ಶ್ರೇಯಸ್ಸಿಗೆ ಸಾಧನವಾದ ಜ್ಞಾನವನ್ನು ಪಡೆದುಕೊಂಡನು. ಮಹಾತ್ಮನಾದ ಶುಕ್ರನು ಶ್ರೇಯಸ್ಸಿಗೆ ಸಾಧನವಾದ ಉಪಾಯವನ್ನು ಉಪದೇಶಿಸಿದನಂತರ ಪುನಃ ಇಂದ್ರನು ಶುಕ್ರನನ್ನು ಪ್ರಶ್ನಿಸಿದನು: "ಆಚಾರ್ಯರೇ! ಶ್ರೇಯಸ್ಸಿಗೆ ಸಾಧನವಾದ ಬೇರೆ ಯಾವುದಾದರೂ ಉಪಾಯವಿರುವುದೇ?"

ಸರ್ವಜ್ಞನಾದ ಭಾರ್ಗವನು ಅದಕ್ಕೆ ಉತ್ತರವಾಗಿ ಹೇಳಿದನು :

"ಮಹಾತ್ಮನಃ ಪ್ರಹ್ಲಾದಸ್ಯ ವಿಶೇಷೇಣ ಜ್ಞಾನಮಸ್ತಿ–ಮಹಾತ್ಮನಾದ ಪ್ರಹ್ಲಾದನಿಗೆ ಶ್ರೇಯಸ್ಸಾಧನೆಯ ವಿಷಯದಲ್ಲಿ ನಾನು ಹೇಳಿರುವುದಕ್ಕಿಂತಲೂ ವಿಶೇಷವಾದ ಜ್ಞಾನವಿದೆ."

ಶುಕ್ರನು ಹೇಳಿದ ಮಾತನ್ನು ಕೇಳಿ ಇಂದ್ರನು ಸಂತೋಷಭರಿತನಾದನು. ಬಳಿಕ ಬುದ್ಧಿವಂತನಾದ ಇಂದ್ರನು ಬ್ರಾಹ್ಮಣನ ವೇಷವನ್ನು ಧರಿಸಿ ಪ್ರಹ್ಲಾದನ ಬಳಿಗೆ ಹೋಗಿ ಹೇಳಿದನು :

"ಶ್ರೇಯ ಇಚ್ಛಾಮಿ ವೇದಿತುಮ್–ರಾಕ್ಷಸೇಶ್ವರ! ಶ್ರೇಯಃಪ್ರಾಪ್ತಿಗೆ ಉಪಾಯವನ್ನು ನಿನ್ನಿಂದ ತಿಳಿದುಕೊಳ್ಳಲು ಇಚ್ಛಿಸಿದ್ದೇನೆ."

ಪ್ರಹ್ಲಾದನು ಹೇಳಿದನು :

"ದ್ವಿಜಶ್ರೇಷ್ಠನೇ! ಮೂರು ಲೋಕಗಳ ರಾಜ್ಯಭಾರದ ವ್ಯವಸ್ಥೆಯಲ್ಲಿ ನಾನು ಆಸಕ್ತನಾಗಿರುವುದರಿಂದ ನನಗೆ ಸಮಯವೇ ಇಲ್ಲವಾಗಿದೆ. ಆದುದರಿಂದ ನಾನು ನಿನಗೆ ಶ್ರೇಯಃಸಾಧನೆಯ ಉಪಾಯವನ್ನು ಉಪದೇಶಿಸಲು ಸಾಧ್ಯವಿಲ್ಲ."

ಅದಕ್ಕೆ ಇಂದ್ರನು ಉತ್ತರಿಸಿದನು :

"ಮಹಾರಾಜ! ಯಾವ ಕಾಲದಲ್ಲಿ ನಿನಗೆ ಉಪದೇಶಮಾಡಲು

ಸಮಯವು ಸಿಕ್ಕುವುದೋ ಆ ಸಮಯವನ್ನೇ ನಿರೀಕ್ಷಿಸುತ್ತಿದ್ದು ಉತ್ತಮೋತ್ತಮವಾದ, ಆಚರಣೀಯವಾದ ಆ ಪರಮಧರ್ಮವನ್ನು ನಿನ್ನಿಂದ ಉಪದೇಶಪಡೆಯಬೇಕೆಂದಿರುತ್ತೇನೆ."

ದುರ್ಯೋಧನ! ಬ್ರಾಹ್ಮಣನಾಡಿದ ಮಾತನ್ನು ಕೇಳಿ ಪ್ರಹ್ಲಾದನಿಗೆ ಬಹಳ ಸಂತೋಷವಾಯಿತು. ಪ್ರಹ್ಲಾದನು ಬ್ರಾಹ್ಮಣನಿಗೆ ಹಾಗೆಯೇ ಆಗಲೀ–ಎಂದು ಹೇಳಿ ಶುಭಮುಹೂರ್ತದಲ್ಲಿ ಬ್ರಾಹ್ಮಣವೇಷದಲ್ಲಿದ್ದ ಇಂದ್ರನಿಗೆ ಜ್ಞಾನತತ್ತ್ವವನ್ನು ಉಪದೇಶಿಸಿದನು. ಬ್ರಾಹ್ಮಣನಾದರೂ ಪ್ರಹ್ಲಾದನ ವಿಷಯದಲ್ಲಿ ಯಥಾಯೋಗ್ಯವಾದ ಪರಮಶ್ರೇಷ್ಠವಾದ ಗುರುಭಕ್ತಿಯನ್ನೇ ಇಟ್ಟುಕೊಂಡು ಪ್ರಹ್ಲಾದನ ಮನಸ್ಸಿಗೆ ಅನುಸಾರವಾಗಿ ಸರ್ವಪ್ರಕಾರದಿಂದಲೂ ಅವನ ಸೇವೆಯನ್ನು ಮಾಡುತ್ತಿದ್ದನು. ಹೀಗೆಯೇ ಸೇವೆಮಾಡುತ್ತಿರುವಾಗ ಬ್ರಾಹ್ಮಣನು ಪ್ರಹ್ಲಾದನನ್ನು ಪುನಃ ಪುನಃ "ಧರ್ಮಜ್ಞನೇ! ಪರಮಶ್ರೇಷ್ಠವಾದ ಈ ತ್ರೈಲೋಕ್ಯಾಧಿಪತ್ಯವು ನಿನಗೆ ಹೇಗೆ ಲಭಿಸಿತು?"– ಎಂದು ಪ್ರಶ್ನಿಸುತ್ತಿದ್ದನು. ಬ್ರಾಹ್ಮಣನ ಆ ಪ್ರಶ್ನೆಗೆ ಉತ್ತರವಾಗಿ ಪ್ರಹ್ಲಾದನು ಹೇಳಿದನು :

ನಾಸೂಯಾಮಿ ದ್ವಿಜಾನ್ವಿಪ್ರ ರಾಜಾಸ್ಮೀತಿ ಕದಾಚನ ।
ಕಾವ್ಯಾನಿ ವದತಾಂ ತೇಷಾಂ ಸಂಯಚ್ಛಾಮಿ ವಹಾಮಿ ಚ ॥೩೪॥

"ದ್ವಿಜಶ್ರೇಷ್ಠನೇ! ರಾಜನಾಗಿರುವೆನೆಂಬ ಅಭಿಮಾನದಿಂದ ನಾನು ಯಾವಾಗಲೂ ಬ್ರಾಹ್ಮಣರನ್ನು ನಿಂದಿಸುವುದಿಲ್ಲ. ಅವರು ನನಗೆ ಶುಕ್ರ ನೀತಿಯನ್ನು ಉಪದೇಶಮಾಡುವಾಗ ಸಂಯಮದಿಂದಿರುತ್ತಾ ಅವರ ಉಪದೇಶವನ್ನು ನಾನು ಕೇಳುತ್ತೇನೆ. ಅವರ ಆಜ್ಞೆಯನ್ನು ಶಿರಸಾ ವಹಿಸುತ್ತೇನೆ.

ತೇ ವಿಶ್ರಬ್ಧಾಃ ಪ್ರಭಾಷನ್ತೇ ಸಂಯಚ್ಛನ್ತಿ ಚ ಮಾಂ ಸದಾ ।
ತೇ ಮಾಂ ಕಾವ್ಯಪಥೇ ಯುಕ್ತಂ ಶುಶ್ರೂಷುಮನಸೂಯಕಮ್ ॥೩೫॥

ಧರ್ಮಾತ್ಮಾನಂ ಜಿತಕ್ರೋಧಂ ನಿಯತಂ ಸಂಯತೇನ್ದ್ರಿಯಮ್ ।
ಸಮಾಸಿಞ್ಚನ್ತಿ ಶಾಸ್ತಾರಃ ಕ್ಷೌದ್ರಂ ಮಧ್ವಿವ ಮಕ್ಷಿಕಾಃ ॥೩೬॥

ಬ್ರಾಹ್ಮಣರು ನನ್ನಲ್ಲಿ ವಿಶ್ವಾಸವಿಟ್ಟು ಮಾತನಾಡುತ್ತಾರೆ. ನನ್ನನ್ನು

ಯಾವಾಗಲೂ ನಿಯಂತ್ರಿಸುತ್ತಾರೆ. ಶುಕ್ರರು ಹೇಳಿರುವ ನೀತಿಶಾಸ್ತ್ರಾನುಸಾರವಾಗಿ ನಡೆಯುತ್ತಿರುವ, ಬ್ರಾಹ್ಮಣರ ಶುಶ್ರೂಷೆಯಲ್ಲಿಯೇ ನಿರತನಾಗಿರುವ, ಅವರ ಅನುಗ್ರಹದಿಂದಲೇ ದೋಷದೃಷ್ಟಿಯಿಲ್ಲದ, ಧರ್ಮಾತ್ಮನಾದ, ಕ್ರೋಧವನ್ನು ಜಯಿಸಿರುವ, ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ವಶಪಡಿಸಿಕೊಂಡಿರುವ ನನ್ನನ್ನು ನಿಯಂತೃಗಳಾದ ಆ ಬ್ರಾಹ್ಮಣರು–ಜೇನು ಹುಳುಗಳು ಪುಷ್ಪರಸವನ್ನು ತಂದು ಜೇನುಗೂಡಿನಲ್ಲಿ ಸಿಂಪಡಿಸುವಂತೆ–ಶಾಸ್ತ್ರದಿಂದ ಉದ್ಧೃತವಾದ ಅಮೃತಮಯವಾದ ವಾಕ್ಯಗಳಿಂದ ಸಿಂಪಡಿಸುತ್ತಾರೆ.

ಸೋಽಹಂ ವಾಗಗ್ರವಿದ್ಯಾನಾಂ ರಸಾನಾಮವಲೇಹಿತಾ ।
ಸ್ವಜಾತ್ಯಾನಧಿತಿಷ್ಠಾಮಿ ನಕ್ಷತ್ರಾಣೀವ ಚನ್ದ್ರಮಾಃ ॥೩೭॥

ಅವರು ಹೇಳುವ ಶ್ರೇಷ್ಠವಾದ ನೀತಿವಿದ್ಯೆಗಳ ರಸವನ್ನು ನಾನು ಯಾವಾಗಲೂ ಆಸ್ವಾದಿಸುತ್ತಿರುತ್ತೇನೆ. ಅದರ ಫಲವಾಗಿಯೇ ನಾನು–ಚಂದ್ರನು ನಕ್ಷತ್ರಗಳನ್ನು ಅನುಶಾಸನಮಾಡುವಂತೆ–ಸ್ವಜಾತಿಯವರನ್ನು ಅನುಶಾಸನಮಾಡುತ್ತೇನೆ.

ಏತತ್ಪೃಥಿವ್ಯಾಮಮೃತಮೇತಚ್ಚಕ್ಷುರನುತ್ತಮಮ್ ।
ಯದ್ಬ್ರಾಹ್ಮಣಮುಖೇ ಕಾವ್ಯಮೇತಚ್ಛ್ರುತ್ವಾ ಪ್ರವರ್ತತೇ ॥೩೮॥

ಬ್ರಾಹ್ಮಣರ ಮುಖದಿಂದ ಹೊರಡುವ ಯಾವ ಶುಕ್ರನೀತಿವಾಕ್ಯಗಳಿರುವುವೋ–ಅವುಗಳೇ ಈ ಭೂಮಂಡಲದಲ್ಲಿ ಅಮೃತವಾಗಿವೆ. ಸರ್ವೋತ್ತಮವಾದ ನೇತ್ರಗಳಾಗಿವೆ. ರಾಜನಾದವನು ಅಂತಹ ಶುಕ್ರನೀತಿಯನ್ನು ಕೇಳಿ ಆ ಶುಕ್ರನೀತಿಗೆ ಅನುಸಾರವಾಗಿ ವ್ಯವಹರಿಸಬೇಕು. ಅದೇ ಶ್ರೇಯಸ್ಸಿನ ಮಾರ್ಗ"–ಎಂದು ಪ್ರಹ್ಲಾದನು ಬ್ರಾಹ್ಮಣನಿಗೆ ಹೇಳಿದನು.

ಹಾಗೆ ಹೇಳಿದನಂತರವೂ ಶುಶ್ರೂಷೆಯಲ್ಲಿಯೇ ನಿರತನಾಗಿದ್ದ ಬ್ರಾಹ್ಮಣನನ್ನು ಕುರಿತು ಪ್ರಹ್ಲಾದನು ಹೇಳಿದನು :

ಯಥಾವದ್ಗುರುವೃತ್ತ್ಯಾ ತೇ ಪ್ರೀತೋಽಸ್ಮಿ ದ್ವಿಜಸತ್ತಮ ।
ವರಂ ವೃಣೀಷ್ವ ಭದ್ರಂ ತೇ ಪ್ರದಾತಾಸ್ಮಿ ನ ಸಂಶಯಃ ॥೪೦॥

"ಬ್ರಾಹ್ಮಣಶ್ರೇಷ್ಠನೇ! ನಿನ್ನ ಗುರುಶುಶ್ರೂಷಾವೃತ್ತಿಯಿಂದ ನಾನು

ಸುಪ್ರೀತನಾಗಿದ್ದೇನೆ. ನಿನಗೆ ಮಂಗಳವಾಗಲಿ. ವರವನ್ನು ಕೇಳು. ನೀನು ಕೇಳುವ ವರವನ್ನು ಕೊಡುವೆನು. ಇದರಲ್ಲಿ ಸಂದೇಹವೇ ಇಲ್ಲ."

ಪ್ರಹ್ಲಾದನು ಹೀಗೆ ಹೇಳಿದೊಡನೆಯೇ ಬ್ರಾಹ್ಮಣನು '**ಕೃತಂ**'–(ತಾವು ಈ ಮಾತನ್ನು ಹೇಳಿದುದರಿಂದಲೇ ವರವನ್ನು ಕೊಟ್ಟಂತಾಯಿತು.) ಇಷ್ಟು ಮಾತ್ರ ಹೇಳಿದನು ; ಯಾವ ವರವನ್ನೂ ಕೇಳಲಿಲ್ಲ. ಅದರಿಂದ ಪ್ರಹ್ಲಾದನಿಗೆ ಮತ್ತೂ ಸಂತೋಷವಾಯಿತು. ಪುನಃ ಬ್ರಾಹ್ಮಣನನ್ನು ಕುರಿತು ಹೇಳಿದನು. "**ಗೃಹ್ಯತಾಂ ವರಃ** –ನನ್ನಿಂದ ವರವನ್ನು ಅವಶ್ಯವಾಗಿ ಪಡೆದು ಕೊಳ್ಳಲೇಬೇಕು."

ಯದಿ ರಾಜನ್ಪ್ರಸನ್ನಸ್ತ್ವಂ ಮಮ ಚೇದಿಚ್ಛಸಿ ಪ್ರಿಯಮ್ ।
ಭವತಃ ಶೀಲಮಿಚ್ಛಾಮಿ ಪ್ರಾಪ್ತುಮೇಷ ವರೋ ಮಮ ॥೪೨॥

"ಮಹಾರಾಜ! ನೀನು ನನ್ನ ಶುಶ್ರೂಷೆಯಿಂದ ಪ್ರಸನ್ನನಾಗಿರುವುದೇ ಆದರೆ ನನಗೆ ಪ್ರಿಯವನ್ನುಂಟುಮಾಡಬೇಕೆಂಬ ಇಚ್ಛೆಯೂ ನಿನಗಿದ್ದರೆ–ನಿನ್ನಲ್ಲಿರುವ ಶೀಲವನ್ನು ಹೊಂದಲು ನಾನು ಇಚ್ಛಿಸುತ್ತೇನೆ. ಇದೇ ನಾನು ಅಪೇಕ್ಷಿಸುವ ವರವಾಗಿದೆ."

ದುರ್ಯೋಧನ! ಬ್ರಾಹ್ಮಣನು ಅಪೇಕ್ಷಿಸಿದ ವರವನ್ನು ಕೇಳಿ ಪ್ರಹ್ಲಾದನಿಗೆ ಸಂತೋಷವೇನೋ ಆಯಿತು. ಆದರೆ ಮರುಕ್ಷಣದಲ್ಲಿಯೇ ಅವನ ಮನಸ್ಸಿನಲ್ಲಿ ಭಯವೂ ಹುಟ್ಟಿಕೊಂಡಿತು. ಬ್ರಾಹ್ಮಣನು ಅಂತಹ ವರವನ್ನು ಕೇಳಿದಾಗ ಪ್ರಹ್ಲಾದನು ಯೋಚಿಸತೊಡಗಿದನು. ಇಂತಹ ವರ ವನ್ನು ಕೇಳಿದವನು ಸಾಧಾರಣನಾದ ಅಲ್ಪತೇಜಸ್ಸಿನ ಮನುಷ್ಯನಲ್ಲವೆಂದೂ ಪ್ರಹ್ಲಾದನು ನಿಶ್ಚಯಿಸಿದನು. ಇಂತಹ ವರವನ್ನು ಕೇಳಿದುದರಿಂದ ಪ್ರಹ್ಲಾದನಿಗೆ ವಿಸ್ಮಯವೂ ಉಂಟಾಯಿತು. ಆದರೂ 'ಏವಮಸ್ತು–ಹಾಗೆಯೇ ಆಗಲಿ' ಎಂದು ಬ್ರಾಹ್ಮಣನಿಗೆ ಅಭಿವಚನವನ್ನಿತ್ತು ಅವನು ಅಪೇಕ್ಷಿಸಿದ ವರವನ್ನು ಅನುಗ್ರಹಿಸಿದನು. ಆದರೆ ಅದಕ್ಕಾಗಿ ಪ್ರಹ್ಲಾದನು ಪರಮದುಃಖಿತನಾದನು. ವರವನ್ನು ಪ್ರದಾನಮಾಡಿದನಂತರ ಬ್ರಾಹ್ಮಣನು ಹೊರಟುಹೋದನು. ಆಗ ಪ್ರಹ್ಲಾದನಿಗೆ ಮಹಾಚಿಂತೆಯುಂಟಾಯಿತು. ಯೋಚಿಸತೊಡಗಿದನು. ಆದರೆ ಅವನಿಗೆ ಯಾವ ನಿಶ್ಚಯಕ್ಕೂ ಬರಲು

ಸಾಧ್ಯವಾಗಲಿಲ್ಲ. ಪ್ರಹ್ಲಾದನು ಹಾಗೆಯೇ ಚಿಂತಿಸುತ್ತಿದ್ದಾಗ ಪ್ರಹ್ಲಾದನ ಶರೀರದಿಂದ ಅತ್ಯಂತಕಾಂತಿಯುಕ್ತವಾಗಿದ್ದ, ಛಾಯಾಸ್ವರೂಪವಾಗಿದ್ದ ತೇಜಸ್ಸು ಮೂರ್ತಿಮತ್ತಾಗಿ ರೂಪುಗೊಂಡು ಅವನ ಶರೀರವನ್ನು ಬಿಟ್ಟು ಹೊರಟಿತು. ಮಹಾಕಾಯನಾಗಿದ್ದ ದಿವ್ಯವಾದ ತೇಜಸ್ಸಿನಿಂದ ಬೆಳಗುತ್ತಿದ್ದ ಆ ಪುರುಷನು ತನ್ನ ಶರೀರದಿಂದ ಹೊರಬಂದುದನ್ನು ನೋಡಿದ ಪ್ರಹ್ಲಾದನು–'ನೀನಾರು?'–ಎಂದು ಪ್ರಶ್ನಿಸಿದನು. "ನಾನು ಶೀಲನಾಗಿದ್ದೇನೆ. ನೀನು ನನ್ನನ್ನು ತ್ಯಾಗಮಾಡಿರುವೆ. ಆದುದರಿಂದ ನಾನು ನಿನ್ನನು ಬಿಟ್ಟು ಹೋಗುತ್ತಿದ್ದೇನೆ"–ಎಂದು ಆ ಮಹಾಪುರುಷನು ಉತ್ತರಿಸಿದನು. ಎಲ್ಲಿಗೆ ಹೋಗುವೆಯೆಂಬ ಪ್ರಶ್ನೆಗೆ ಉತ್ತರವಾಗಿ ಶೀಲನು ಹೇಳಿದನು :

ತಸ್ಮಿನ್ದ್ವಿಜೋತ್ತಮೇ ರಾಜನ್ವತ್ಸ್ಯಾಮ್ಯಹಮನಿನ್ದಿತೇ ।
ಯೋಽಸೌ ಶಿಷ್ಯತ್ವಮಾಗಮ್ಯ ತ್ವಯಿ ನಿತ್ಯಂ ಸಮಾಹಿತಃ ॥೪೮॥

"ನಿನ್ನಲ್ಲಿ ಶಿಷ್ಯವೃತ್ತಿಯನ್ನು ಅವಲಂಬಿಸಿ ಏಕಾಗ್ರಚಿತ್ತನಾಗಿ ಅನುದಿನವೂ ನಿನ್ನ ಸೇವೆಯನ್ನು ಮಾಡುತ್ತಿದ್ದ ನಿಷ್ಕಳಂಕನಾದ ಆ ದ್ವಿಜಶ್ರೇಷ್ಠನ ಶರೀರದಲ್ಲಿ ನಾನು ವಾಸಮಾಡುತ್ತೇನೆ."

ಹೀಗೆ ಹೇಳಿ ಶೀಲಪುರುಷನು ಅದೃಶ್ಯನಾದನು ಹಾಗೂ ಇಂದ್ರನನ್ನೂ ಪ್ರವೇಶಿಸಿದನು. ಶೀಲಪುರುಷನು ಪ್ರಹ್ಲಾದನ ಶರೀರದಿಂದ ಹೊರಟುಹೋದ ನಂತರ ಅಂತಹುದೇ ರೂಪವನ್ನು ಧರಿಸಿದ್ದ ಮತ್ತೊಬ್ಬ ಮಹಾಪುರುಷನು ಪ್ರಹ್ಲಾದನ ಶರೀರದಿಂದ ಹೊರಬಂದನು. ಆ ಮಹಾಪುರುಷನನ್ನು ಕಂಡೊಡನೆಯೇ ಪ್ರಹ್ಲಾದನು ಅವನನ್ನೂ ಯಾರೆಂದು ಪ್ರಶ್ನಿಸಿದನು. ಪ್ರಹ್ಲಾದನ ಪ್ರಶ್ನೆಗೆ ಉತ್ತರವಾಗಿ ಆ ಮಹಾಪುರುಷನು ಹೇಳಿದನು :

ಧರ್ಮಂ ಪ್ರಹ್ರಾದ ಮಾಂ ವಿದ್ಧಿ ಯತ್ರಾಸೌ ದ್ವಿಜಸತ್ತಮಃ ।
ತತ್ರ ಯಾಸ್ಯಾಮಿ ದೈತ್ಯೇನ್ದ್ರ ಯತಃ ಶೀಲಂ ತತೋ ಹ್ಯಹಮ್ ॥

"ದೈತ್ಯೇಂದ್ರನೇ! ಪ್ರಹ್ಲಾದ! ನನ್ನನ್ನು ಧರ್ಮನೆಂದು ತಿಳಿಯುವವನಾಗು. ಆ ದ್ವಿಜಶ್ರೇಷ್ಠನು ಎಲ್ಲಿರುವನೋ ಅಲ್ಲಿಗೇ ನಾನೂ ಹೋಗುತ್ತೇನೆ. ಶೀಲಪುರುಷನಿರುವೆಡೆಯಲ್ಲಿಯೇ ನಾನೂ ಇರುತ್ತೇನೆ." ಹೀಗೆಂದು ಹೇಳಿ ಅದೃಶ್ಯನಾಗಿ ಬ್ರಾಹ್ಮಣವೇಷವನ್ನು ಧರಿಸಿದ್ದ ಇಂದ್ರನಲ್ಲಿ ಸೇರಿಕೊಂಡನು.

ಮರುಕ್ಷಣದಲ್ಲಿಯೇ ಮಹಾತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಕಾಣುತ್ತಿದ್ದ ಮತ್ತೊಬ್ಬ ಮಹಾಪುರುಷನು ಮಹಾತ್ಮನಾದ ಪ್ರಹ್ಲಾದನ ಶರೀರದಿಂದ ಹೊರಬಂದನು. ಆ ಮಹಾಪುರುಷನನ್ನು ನೋಡಿ ಪ್ರಹ್ಲಾದನು ಯಾರೆಂದು ಪ್ರಶ್ನಿಸಿದನು. ಅದಕ್ಕೆ ಉತ್ತರವಾಗಿ ಆ ಮಹಾದ್ಯುತಿಮಂತನಾದ ಪುರುಷನು ಹೇಳಿದನು :

ಸತ್ಯಂ ವಿದ್ಧ್ಯಸುರೇನ್ದ್ರಾದ್ಯ ಪ್ರಯಾಸ್ಯೇ ಧರ್ಮಮನ್ವಹಮ್ ॥

"ಅಸುರೇಂದ್ರನೇ! ನನ್ನನ್ನು ಸತ್ಯಪುರುಷನೆಂದು ತಿಳಿ. ಧರ್ಮನನ್ನು ಅನುಸರಿಸಿ ನಾನು ಹೋಗುತ್ತಿದ್ದೇನೆ."

ಸತ್ಯಪುರುಷನೂ ಇಂದ್ರನಲ್ಲಿ ಸೇರಿಕೊಂಡನಂತರ ಮತ್ತೊಬ್ಬ ಮಹಾ ಪುರುಷನು ಪ್ರಹ್ಲಾದನ ಶರೀರದಿಂದ ಹೊರಬಂದನು. ಆ ಮಹಾಪುರುಷ ನನ್ನೂ ಪ್ರಹ್ಲಾದನು ಯಾರೆಂದು ಪ್ರಶ್ನಿಸಲಾಗಿ ಆ ಮಹಾಪುರುಷನು ಉತ್ತರಿಸಿದನು :

ವೃತ್ತಂ ಪ್ರಹ್ರಾದ ಮಾಂ ವಿದ್ಧಿ ಯತಃ ಸತ್ಯಂ ತತೋ ಹ್ಯಹಮ್ ॥

"ಪ್ರಹ್ಲಾದ! ನನ್ನನ್ನು ಸದಾಚಾರಪುರುಷನೆಂದು ತಿಳಿ. ಸತ್ಯಪುರುಷನು ಎಲ್ಲಿರುವನೋ ಅಲ್ಲಿಯೇ ನಾನೂ ಇರುತ್ತೇನೆ."

ಸದಾಚಾರಪುರುಷನೂ ಇಂದ್ರನಲ್ಲಿ ಸೇರಿಕೊಂಡನಂತರ ಪ್ರಹ್ಲಾದನ ಶರೀರದಿಂದ ಮಹಾಶಬ್ದವನ್ನು ಮಾಡುತ್ತಾ ಮತ್ತೊಬ್ಬ ಪುರುಷನು ಹೊರ ಬಂದನು. ಪ್ರಹ್ಲಾದನು ಅವನನ್ನೂ ಯಾರೆಂದು ಪ್ರಶ್ನಿಸಲಾಗಿ ಆ ಮಹಾ ಪುರುಷನು ಉತ್ತರಿಸುತ್ತಾ–'ಬಲಂ ವಿದ್ಧಿ ಯತೋ ವೃತ್ತಮಹಂ ತತಃ– ನನ್ನನ್ನು ಬಲಪುರುಷನೆಂದು ತಿಳಿ. ಸದಾಚಾರಪುರುಷನು ಎಲ್ಲಿರುವನೋ ಅಲ್ಲಿಯೇ ನಾನೂ ಇರುತ್ತೇನೆ'–ಎಂದು ಹೇಳಿ ಸದಾಚಾರಪುರುಷನಿದ್ದ ಇಂದ್ರನ ಶರೀರದೊಳಗೆ ಸೇರಿಕೊಂಡನು.

ಬಲಪುರುಷನು ಹೊರಟುಹೋದೊಡನೆಯೇ ಪ್ರಭಾಮಯಿಯಾದ ದೇವಿಯೊಬ್ಬಳು ಪ್ರಹ್ಲಾದನ ಶರೀರದಿಂದ ಹೊರಟಳು. ಅವಳನ್ನೂ ದೈತ್ಯೇಂದ್ರನು ನೀನಾರೆಂದು ಪ್ರಶ್ನಿಸಿದನು. 'ನಾನು ಶ್ರೀದೇವಿಯಾಗಿ ದ್ದೇನೆ'–ಎಂದು ಉತ್ತರಿಸಿದ ಆ ದೇವಿಯು ತಾನು ಎಲ್ಲಿ ಉಪಸ್ಥಿತಳಾಗುವೆ ನೆಂಬ ವಿಷಯವಾಗಿಯೂ ಹೇಳಿದಳು :

ಉಷಿತಾಸ್ಮಿ ಸ್ವಯಂ ವೀರ ತ್ವಯಿ ಸತ್ಯಪರಾಕ್ರಮ ।
ತ್ವಯಾ ತ್ಯಕ್ತಾ ಗಮಿಷ್ಯಾಮಿ ಬಲಂ ಹ್ಯನುಗತಾ ಹ್ಯಹಮ್ ॥೫೮॥

"ಸತ್ಯಪರಾಕ್ರಮಿಯಾದ ವೀರನೇ! ನಾನಾಗಿಯೇ ಬಂದು ನಿನ್ನ ಶರೀರದಲ್ಲಿ ನಿವಾಸಮಾಡಿಕೊಂಡಿದ್ದೆನು. ಈಗ ನೀನು ನನ್ನನ್ನು ತ್ಯಾಗಮಾಡಿರುವೆ. ಆದುದರಿಂದ ನಾನು ನಿನ್ನನ್ನು ಬಿಟ್ಟುಹೋಗುತ್ತಿದ್ದೇನೆ. ಯಾವಾಗಲೂ ನಾನು ಬಲಪುರುಷನನ್ನೇ ಅನುಸರಿಸಿ ಇರತಕ್ಕವಳು."

ಭಾಗ್ಯಲಕ್ಷ್ಮಿಯೂ ತನ್ನನ್ನು ತ್ಯಜಿಸಿ ಹೋಗುತ್ತಿರುವುದನ್ನು ನೋಡಿ ಮಹಾತ್ಮನಾದ ಪ್ರಹ್ಲಾದನ ಮನಸ್ಸನ್ನು ಭಯವು ಆವರಿಸಿತು. ಶ್ರೀದೇವಿಯನ್ನು ಪ್ರಹ್ಲಾದನು ಪುನಃ ಪ್ರಶ್ನಿಸಿದನು :

ತ್ವಂ ಹಿ ಸತ್ಯವ್ರತಾ ದೇವೀ ಲೋಕಸ್ಯ ಪರಮೇಶ್ವರೀ ।
ಕಶ್ಚಾಸೌ ಬ್ರಾಹ್ಮಣಶ್ರೇಷ್ಠಸ್ತತ್ತ್ವಮಿಚ್ಛಾಮಿ ವೇದಿತುಮ್ ॥೫೯॥

"ಕಮಲಾಲಯಳೇ! ನೀನು ನನ್ನನ್ನು ಬಿಟ್ಟು ಎಲ್ಲಿಗೆ ಹೋಗುತ್ತಿರುವೆ? ನೀನು ಸತ್ಯನಿಷ್ಠಳಾದ ದೇವತೆಯಾಗಿರುವೆ. ಸಂಪೂರ್ಣ ಜಗತ್ತಿಗೂ ಪರಮೇಶ್ವರಿಯಾಗಿರುವೆ. ಆ ಬ್ರಾಹ್ಮಣಶ್ರೇಷ್ಠನಾರು? ಈ ವಿಷಯವನ್ನು ನಾನು ಯಥಾವತ್ತಾಗಿ ತಿಳಿಯಲು ಅಪೇಕ್ಷಿಸುತ್ತೇನೆ."

ಶ್ರೀದೇವಿಯು ಹೇಳಿದಳು :

ಸ ಶಕ್ರೋ ಬ್ರಹ್ಮಚಾರೀ ಯಸ್ತ್ವತ್ತಶ್ಚೈವೋಪಶಿಕ್ಷಿತಃ ।
ತ್ರೈಲೋಕ್ಯೇ ತೇ ಯದೈಶ್ವರ್ಯಂ ತತ್ತೇನಾಪಹೃತಂ ಪ್ರಭೋ ॥೬೦॥

"ಪ್ರಭುವೇ! ನೀನು ಯಾರಿಗೆ ಶ್ರೇಯಃಸಾಧನವಾದ ಮಹಾಮಂತ್ರದ ಉಪದೇಶವನ್ನಿತ್ತೆಯೋ–ಅವನೇ ಬ್ರಾಹ್ಮಣರೂಪವನ್ನು ಧರಿಸಿಬಂದಿದ್ದ ಇಂದ್ರನು. ಮೂರು ಲೋಕಗಳಲ್ಲಿಯೂ ನಿನಗೆ ಯಾವ ಐಶ್ವರ್ಯಗಳಿದ್ದುವೋ–ಆ ಸಕಲೈಶ್ವರ್ಯಗಳನ್ನೂ ಇಂದ್ರನು ನಿನ್ನಿಂದ ಅಪಹರಿಸಿಕೊಂಡು ಹೋದನು.

ಶೀಲೇನ ಹಿ ತ್ರಯೋ ಲೋಕಾಸ್ತ್ವಯಾ ಧರ್ಮಜ್ಞ ನಿರ್ಜಿತಾಃ ।
ತದ್ವಿಜ್ಞಾಯ ಸುರೇನ್ದ್ರೇಣ ತವ ಶೀಲಂ ಹೃತಂ ಪ್ರಭೋ ॥೬೧॥

ಧರ್ಮಜ್ಞನೇ! ಶೀಲದ ಮೂಲಕವಾಗಿಯೇ ನೀನು ಮೂರು ಲೋಕ

ಗಳನ್ನೂ ಜಯಿಸಿದ್ದೆ. ಇಂದ್ರನು ಆ ವಿಷಯವನ್ನು ತಿಳಿದುಕೊಂಡು ನಿನ್ನಲ್ಲಿದ್ದ ಆ ಶೀಲವನ್ನೇ ಅಪಹರಿಸಿಬಿಟ್ಟನು.

ಧರ್ಮಃ ಸತ್ಯಂ ತಥಾ ವೃತ್ತಂ ಬಲಂ ಚೈವ ತಥಾಪ್ಯಹಮ್ ।
ಶೀಲಮೂಲಾ ಮಹಾಪ್ರಾಜ್ಞ ಸದಾ ನಾಸ್ತ್ಯತ್ರ ಸಂಶಯಃ ॥೬೨॥

ಮಹಾಪ್ರಾಜ್ಞನೇ! ಧರ್ಮ, ಸತ್ಯ, ಸದಾಚಾರ, ಬಲ ಮತ್ತು ನಾನು ಈ ಎಲ್ಲರೂ ಸರ್ವದಾ ಶೀಲವನ್ನೇ ಆಶ್ರಯಿಸಿದ್ದೇವೆ. ಶೀಲವಿರುವೆಡೆಯಲ್ಲಿಯೇ ನಾವೆಲ್ಲರೂ ಇರುತ್ತೇವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆಂಬುದಾಗಿ ಹೇಳಿ ಲಕ್ಷ್ಮಿಯೂ ಹೊರಟು ಹೋದಳು. ಲಕ್ಷ್ಮಿಯ ಜೊತೆಯಲ್ಲಿಯೇ ಶೀಲ, ಧರ್ಮ, ಸತ್ಯ, ಸದಾಚಾರ, ಬಲ–ಈ ಎಲ್ಲರೂ ಇಂದ್ರನಲ್ಲಿ ಸೇರಿಕೊಂಡರು. ಪ್ರಹ್ಲಾದ ಮತ್ತು ಇಂದ್ರರ ಈ ಇತಿಹಾಸವನ್ನು ಕೇಳಿದನಂತರ ದುರ್ಯೋಧನನು ಪುನಃ ತಂದೆಯನ್ನು ಪ್ರಶ್ನಿಸಿದನು :

ಶೀಲಸ್ಯ ತತ್ತ್ವಮಿಚ್ಛಾಮಿ ವೇತ್ತುಂ ಕೌರವನನ್ದನ ।
ಪ್ರಾಪ್ಯತೇ ಚ ಯಥಾ ಶೀಲಂ ತಂ ಚೋಪಾಯಂ ವದಸ್ವ ಮೇ ॥

"ಕೌರವನಂದನನೇ! ನಾನು ಶೀಲದ ತತ್ತ್ವವನ್ನು ತಿಳಿಯಬೇಕೆಂದಿರುತ್ತೇನೆ. ಶೀಲವು ಹೇಗೆ ಲಭಿಸುತ್ತದೆ? ಶೀಲವನ್ನು ಹೊಂದುವ ಉಪಾಯವನ್ನು ನನಗೆ ತಿಳಿಸು."

ಧೃತರಾಷ್ಟ್ರನು ಹೇಳುತ್ತಾನೆ :

"ದುರ್ಯೋಧನ! ಶೀಲದ ಸ್ವರೂಪವನ್ನೂ ಮತ್ತು ಅದರ ಪ್ರಾಪ್ತಿಯ ಉಪಾಯವನ್ನೂ ಮಹಾತ್ಮನಾದ ಪ್ರಹ್ಲಾದನು ಈ ಹಿಂದೆಯೇ ಹೇಳಿದ್ದಾನೆ. ಶೀಲಪ್ರಾಪ್ತಿಯ ವಿಷಯವನ್ನು ನಾನೂ ಸಂಕ್ಷೇಪವಾಗಿ ಹೇಳುವೆನು ; ಕೇಳು.

ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ ।
ಅನುಗ್ರಹಶ್ಚ ದಾನಂ ಚ ಶೀಲಮೇತತ್ಪ್ರಶಸ್ಯತೇ ॥೬೬॥

ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕಾರ್ಯದಿಂದಾಗಲೀ–

ಯಾವುದೇ ಪ್ರಾಣಿಗೂ ದ್ರೋಹವನ್ನೆಸಗದಿರುವುದು ; ಎಲ್ಲರ ವಿಷಯದಲ್ಲಿಯೂ ದಯಾಪರನಾಗಿರುವುದು ; ಯಥಾಶಕ್ತಿ ದಾನವನ್ನು ಕೊಡುವುದು ಇದನ್ನು ಶೀಲವೆನ್ನುತ್ತಾರೆ. ಎಲ್ಲರೂ ಇಂತಹ ಶೀಲವನ್ನು ಅಥವಾ ಸ್ವಭಾವವನ್ನು ಪ್ರಶಂಸೆಮಾಡುತ್ತಾರೆ.

ಯದನ್ಯೇಷಾಂ ಹಿತಂ ನ ಸ್ಯಾದಾತ್ಮನಃ ಕರ್ಮ ಪೌರುಷಮ್ ।
ಅಪತ್ರಪೇತ ವಾ ಯೇನ ನ ತತ್ಕುರ್ಯಾತ್ಕಥಂಚನ ॥೬೭॥

ತನ್ನ ಯಾವ ಕಾರ್ಯವು ಅಥವಾ ಪೌರುಷವು ಮತ್ತೊಬ್ಬನಿಗೆ ಹಿತವಾಗುವುದಿಲ್ಲವೋ, ಯಾವ ಕಾರ್ಯವನ್ನು ಮಾಡುವುದರಿಂದ ನಾಚಿಕೆಪಟ್ಟುಕೊಳ್ಳಬೇಕಾಗುವುದೋ–ಅಂತಹ ಕಾರ್ಯವನ್ನು ಯಾವುದೇ ಕಾರಣದಿಂದಲೂ ಮಾಡಬಾರದು.

ತತ್ತು ಕರ್ಮ ತಥಾ ಕುರ್ಯಾದ್ಯೇನ ಶ್ಲಾಘ್ಯೇತ ಸಂಸದಿ ।
ಶೀಲಂ ಸಮಾಸೇನೈತತ್ತೇ ಕಥಿತಂ ಕುರುಸತ್ತಮ ॥೬೮॥

ಕುರುಶ್ರೇಷ್ಠನೇ! ಯಾವ ಕಾರ್ಯವನ್ನು ಮಾಡಿದರೆ ಆ ಕಾರ್ಯವನ್ನು ಸತ್ಪುರುಷರ ದೊಡ್ಡ-ದೊಡ್ಡ ಸಭೆಗಳಲ್ಲಿಯೂ ಪ್ರಶಂಸೆಮಾಡುತ್ತಾರೆಯೋ–ಅದೇ ಶೀಲ. ಅಂತಹ ಕಾರ್ಯಗಳನ್ನು ಮಾತ್ರವೇ ಮಾಡಬೇಕು. ದುರ್ಯೋಧನ! ಸಂಕ್ಷೇಪವಾಗಿ ನಾನು ನಿನಗೆ ಶೀಲದ ಸ್ವರೂಪವನ್ನು ಹೇಳಿರುತ್ತೇನೆ.

ಯದ್ಯಪ್ಯಶೀಲಾ ನೃಪತೇ ಪ್ರಾಪ್ನುವನ್ತಿ ಶ್ರಿಯಂ ಕ್ವಚಿತ್ ।
ನ ಭುಞ್ಜತೇ ಚಿರಂ ತಾತ ಸಮೂಲಾಶ್ಚ ನ ಸನ್ತಿ ತೇ ॥೬೯॥

ನರೇಶ್ವರ! ದುಃಶೀಲರಾದವರೂ ಕೆಲವು ವೇಳೆ ರಾಜ್ಯಲಕ್ಷ್ಮಿಯನ್ನು ಪಡೆದುಕೊಳ್ಳಬಹುದು. ಆದರೆ ಅವರು ಆ ಸಂಪತ್ತನ್ನು ಹೆಚ್ಚುಕಾಲ ಉಪಭೋಗಿಸುವುದಿಲ್ಲ. ಸಮೂಲವಾಗಿ ವಿನಾಶಹೊಂದುತ್ತಾರೆ.

ಮಗು! ದುರ್ಯೋಧನ! ನೀನು ಯುಧಿಷ್ಠಿರನಲ್ಲಿರುವುದಕ್ಕಿಂತಲೂ ಅತಿಶಯವಾದ ಸಂಪತ್ತನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯುಳ್ಳವನಾಗಿದ್ದರೆ–ಈ ಉಪದೇಶವನ್ನು ಯಥಾವತ್ತಾಗಿ ಗ್ರಹಿಸಿ ಶೀಲವಂತನಾಗು.”

ಯುಧಿಷ್ಠಿರ! ಧೃತರಾಷ್ಟ್ರನು ಮಗನಾದ ದುರ್ಯೋಧನನಿಗೆ ಈ

ಇತಿಹಾಸವನ್ನು ಹೇಳಿದನು. ನೀನೂ ಅದರಂತೆಯೇ ಆಚರಿಸು ; ಶೀಲವಂತನಾಗು. ಶೀಲದ ಫಲವನ್ನು ನೀನೂ ಪಡೆದುಕೊಳ್ಳುವೆ.”

೧೨೪ನೆಯ ಅಧ್ಯಾಯವು ಮುಗಿಯಿತು.

೧೨೫ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಆಶೆಗೆ ಸಂಬಂಧಿಸಿದಂತೆ ಯುಧಿಷ್ಠಿರನ ಪ್ರಶ್ನೆಗೆ ಸುಮಿತ್ರ-ಋಷಭರ ಇತಿಹಾಸ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

“ಪಿತಾಮಹ! ನೀನು ಮಾನವನಿಗೆ ಶೀಲವೇ ಪ್ರಧಾನವೆಂದು ಹೇಳಿರುವೆ. ನಾನೀಗ ಮತ್ತೊಂದು ವಿಷಯವನ್ನೂ ಕೇಳಬೇಕೆಂದಿರುತ್ತೇನೆ. ‘ಆಶೆ’ ಎಂಬುದು ಹೇಗೆ ಹುಟ್ಟಿತು? ಆಶೆ ಎಂಬುದು ಯಾವುದು? ಇದನ್ನು ನನಗೆ ಹೇಳು. ಈ ಒಂದು ಮಹಾಸಂಶಯವು ನನಗುಂಟಾಗಿದೆ. ಆ ಸಂಶಯವನ್ನು ಪರಿಹರಿಸುವವನು ನೀನಲ್ಲದೇ ಬೇರೆ ಯಾರೂ ಇರುವುದಿಲ್ಲ. ದುರ್ಯೋಧನನ ವಿಷಯದಲ್ಲಿ ನನಗೊಂದು ಮಹತ್ತಾದ ಆಶೆ ಇದ್ದಿತು. ಯುದ್ಧವು ಪ್ರಾರಂಭವಾದೊಡನೆಯೇ ಅವನು ಯುಕ್ತವಾದ ಕಾರ್ಯವನ್ನೇ ಮಾಡುವನೆಂದು ನಾನು ಆಶಿಸಿದ್ದೆನು. ಪ್ರಾಯಶಃ ಎಲ್ಲ ಮನುಷ್ಯರ ಹೃದಯಗಳಲ್ಲಿಯೂ ಯಾವುದಾದರೊಂದು ದೊಡ್ಡ ಆಶೆಯು ಇದ್ದೇ ಇರುತ್ತದೆ. ಆಶೆಯ ಭಂಗವಾಯಿತೆಂದರೆ ಮಹಾದುಃಖವುಂಟಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮರಣವೂ ಸಂಭವಿಸುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ದುರಾತ್ಮನಾದ ಧಾರ್ತರಾಷ್ಟ್ರನೂ ಬುದ್ಧಿಹೀನನಾದ ನನ್ನನ್ನು ಹತಾಶನನ್ನಾಗಿ ಮಾಡಿಬಿಟ್ಟನು. ನಾನೆಷ್ಟು ಮಂದಭಾಗ್ಯನೆಂಬುದನ್ನು ನೀನೇ ನೋಡು.

ಆಶಾಂ ಮಹತ್ತರಾಂ ಮನ್ಯೇ ಪರ್ವತಾದಪಿ ಸದ್ರುಮಾತ್ ।
ಆಕಾಶಾದಪಿ ವಾ ರಾಜನ್ನಪ್ರಮೇಯೈವ ವಾ ಪುನಃ ॥೬॥

ಆಶೆಯು ವೃಕ್ಷಗಳಿಂದ ನಿಬಿಡವಾಗಿರುವ ಪರ್ವತಕ್ಕಿಂತಲೂ ಮಹತ್ತರವಾದುದು. ಆಕಾಶಕ್ಕಿಂತಲೂ ಎತ್ತರವಾದುದು ಅಥವಾ ಅದನ್ನು

ಅಪ್ರಮೇಯವೆಂದೂ (ಅಳೆಯಲು ಅಸಾಧ್ಯವಾದುದೆಂದೂ) ನಾನು ಭಾವಿಸುತ್ತೇನೆ.

ಏಷಾ ಚೈವ ಕುರುಶ್ರೇಷ್ಠ ದುರ್ವಿಚಿನ್ತ್ಯಾ ಸುದುರ್ಲಭಾ ।
ದುರ್ಲಭತ್ವಾಚ್ಚ ಪಶ್ಯಾಮಿ ಕಿಮನ್ಯದ್ದುರ್ಲಭಂ ತತಃ ॥೭॥

ಕುರುಶ್ರೇಷ್ಠನೇ! ಆಶೆಯು ಅಚಿಂತ್ಯವಾದುದು ; ಪರಮದುರ್ಲಭವಾದುದು. ಅದನ್ನು ಜಯಿಸಲು ಬಹಳ ಕಷ್ಟ. ಆಶೆಯು ದುರ್ಲಭವೂ ದುರ್ಜಯವೂ ಆಗಿರುವುದರಿಂದಲೇ ಬಹಳ ದೊಡ್ಡದಾಗಿ ಕಾಣುತ್ತಿದೆ. ಆಶೆಗಿಂತಲೂ ದೊಡ್ಡದೂ ದುರ್ಲಭವೂ ಆದ ವಸ್ತುವು ಬೇರೆ ಯಾವುದಿದೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ನಾನು ಸುಮಿತ್ರರಾಜನ ಮತ್ತು ಋಷಭಮುನಿಯ ಪೂರ್ವೇತಿಹಾಸವನ್ನು ಹೇಳುವೆನು ; ಕೇಳು. ಹೈಹಯರ ವಂಶಕ್ಕೆ ಸೇರಿದ ಸುಮಿತ್ರನೆಂಬ ರಾಜರ್ಷಿಯು ಒಮ್ಮೆ ಬೇಟೆಗಾಗಿ ಕಾಡಿಗೆ ಹೋದನು. ಅಲ್ಲವನು ಬಗ್ಗಿದ ಗಿಣ್ಣುಗಳಿಂದ ಕೂಡಿದ್ದ ಬಾಣದಿಂದ ಒಂದು ಮೃಗವನ್ನು ಗಾಯಗೊಳಿಸಿ ಅದನ್ನು ಹಿಂಬಾಲಿಸಿದನು. ಅಮಿತವಾದ ವೇಗದಿಂದ ಹೋಗುವ ಸಾಮರ್ಥ್ಯವನ್ನು ಹೊಂದಿದ್ದ ಆ ಮೃಗವು ಬಾಣದೊಡನೆಯೇ ಓಡಿಹೋಯಿತು. ರಾಜನೂ ಬಲಪೂರ್ವಕವಾಗಿ ಆ ನಾಯಕ ಮೃಗವನ್ನು ಬಹಳ ಬೇಗ ಹಿಂಬಾಲಿಸಿದನು. ಅತ್ಯಂತವೇಗವಾಗಿ ಓಡುತ್ತಿದ್ದ ಆ ಮೃಗವು ಅಲ್ಲಿಂದ ತಗ್ಗಾಗಿದ್ದ ಪ್ರದೇಶದ ಕಡೆಗೆ ಓಡಿಹೋಯಿತು. ಪುನಃ ಅದು ಸ್ವಲ್ಪ ಹೊತ್ತಿನಲ್ಲಿಯೇ ಸಮವಾಗಿದ್ದ ಮಾರ್ಗವನ್ನು ಹಿಡಿದು ಓಡ ತೊಡಗಿತು. ರಾಜನೂ ಕೂಡ ತಾರುಣ್ಯದಿಂದಲೂ ಎದೆಕೆಚ್ಚಿನಿಂದಲೂ ಸಂಪನ್ನನಾಗಿದ್ದನು. ಕವಚವನ್ನು ಧರಿಸಿ ಧನುರ್ಬಾಣಗಳನ್ನೂ–ಕತ್ತಿಯನ್ನೂ ಹಿಡಿದಿದ್ದ ರಾಜನು ಮೃಗವನ್ನು ಹಿಂಬಾಲಿಸುತ್ತಲೇ ಹೋದನು. ವನಚಾರಿ ಯಾಗಿದ್ದ ಆ ಮೃಗವು ಏಕಾಕಿಯಾಗಿಯೇ ಅನೇಕ ನದೀ-ನದಗಳನ್ನೂ, ಚಿಕ್ಕ- ಚಿಕ್ಕ ಹೊಂಡಗಳನ್ನೂ, ಅರಣ್ಯಗಳನ್ನೂ ದಾಟುತ್ತಾ ಮುಂದೆ-ಮುಂದೆ ಓಡಿಯೋಡಿ ಹೋಗುತ್ತಿದ್ದಿತು. ಆ ಮೃಗವು ಇಚ್ಛಾನುಸಾರವಾಗಿಯೇ ರಾಜನು ತನ್ನ ಹತ್ತಿರಕ್ಕೆ ಬರುವವರೆಗೂ ಸುಮ್ಮನಿದ್ದು, ರಾಜನು–'ಇನ್ನೇನು

ಮೃಗವು ಸಿಕ್ಕಿತು'–ಎಂದು ಭಾವಿಸಿದಾಗ ಪುನಃ ಅತ್ಯಂತವೇಗವಾಗಿ ಬಹಳ ದೂರಕ್ಕೆ ಓಡಿಹೋಗುತ್ತಿದ್ದಿತು. ರಾಜನ ಅನೇಕ ಬಾಣಗಳಿಂದ ಆ ಮೃಗವು ಪ್ರಹರಿಸಲ್ಪಟ್ಟಿದ್ದರೂ ಆಟವಾಡುತ್ತಿರುವುದೋ ಎಂಬಂತೆ ಪುನಃ ಅದು ರಾಜನ ಸಮೀಪಗತವಾಗುತ್ತಿದ್ದಿತು. ವೇಗಶಾಲಿಯಾದ ಆ ನಾಯಕ ಮೃಗವು ಪುನಃ ವೇಗವನ್ನು ಆಶ್ರಯಿಸಿ ಅನೇಕಾನೇಕ ನದೀ-ನದಗಳನ್ನು ದಾಟುತ್ತಾ ಬಹಳ ದೂರಕ್ಕೆ ಹೋಗುತ್ತಿದ್ದಿತು. ಸ್ವಲ್ಪ ಹೊತ್ತಿನಲ್ಲಿಯೇ ಅದು ರಾಜನ ಸಮೀಪದಲ್ಲಿಯೇ ಇರುತ್ತಿದ್ದಿತು. ಮೃಗವು ಹತ್ತಿರದಲ್ಲಿ ಕಾಣಿಸಿಕೊಂಡುದನ್ನು ಗಮನಿಸಿ ಶತ್ರುಸೂದನನಾದ ರಾಜನು ಮರ್ಮವನ್ನು ಭೇದಿಸುವ, ಘೋರವಾದ, ತೀಕ್ಷ್ಣವಾದ ಮತ್ತು ಶ್ರೇಷ್ಠವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಯೋಜಿಸಿದನು. ಅದನ್ನು ನೋಡಿದೊಡನೆಯೇ ಆ ನಾಯಕಮೃಗವು ಬಾಣದ ಮಾರ್ಗವನ್ನು ಅತಿಕ್ರಮಿಸಿ ಒಂದು ಗಾವುದದಷ್ಟು ದೂರಕ್ಕೆ ಓಡಿಹೋಗಿ ಅಲ್ಲಿ ರಾಜನನ್ನು ನೋಡಿ ನಗುತ್ತಿರುವುದೋ–ಎಂಬಂತೆ ನಿಂತುಕೊಂಡಿತು. ಪ್ರಜ್ವಲಿಸುವ ತೇಜಸ್ಸಿನಿಂದ ಕೂಡಿದ್ದ ರಾಜನು ಬಿಟ್ಟ ಆ ಬಾಣವು ನೆಲದ ಮೇಲೆ ಬಿದ್ದು ಹೋಯಿತು. ಬಳಿಕ ಮೃಗವು ಮಹಾರಣ್ಯದೊಳಕ್ಕೆ ಓಡಿಹೋಯಿತು. ರಾಜನೂ ಬಿಡದೇ ಅದನ್ನು ಹಿಂಬಾಲಿಸಿಕೊಂಡೇ ಹೋದನು."

೧೨೫ನೆಯ ಅಧ್ಯಾಯವು ಮುಗಿಯಿತು.

೧೨೬ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಸುಮಿತ್ರರಾಜನು ಮೃಗವನ್ನು ಹುಡುಕುತ್ತಾ ಋಷಿಗಳ ಆಶ್ರಮವನ್ನು ಪ್ರವೇಶಿಸಿದುದು : ಅವರನ್ನು ಆಶೆಯ ವಿಷಯವಾಗಿ ಪ್ರಶ್ನಿಸಿದುದು

ಭೀಷ್ಮನು ಕಥೆಯನ್ನು ಮುಂದುವರಿಸಿ ಹೇಳುತ್ತಾನೆ :

"ಯುಧಿಷ್ಠಿರ! ಸುಮಿತ್ರರಾಜನು ಮೃಗವನ್ನು ಹಿಂಬಾಲಿಸುತ್ತಾ ಮಹಾರಣ್ಯವನ್ನು ಪ್ರವೇಶಿಸಿ ಅಲ್ಲಿದ್ದ ತಪಸ್ವಿಗಳ ಆಶ್ರಮಕ್ಕೆ ಹೋದನು. ಆ ವೇಳೆಗೆ ರಾಜನು ಬಹಳವಾಗಿ ಬಳಲಿದ್ದುದರಿಂದ ಆಶ್ರಮದಲ್ಲಿಯೇ ಕುಳಿತುಕೊಂಡನು. ಆಯಾಸದಿಂದಲೂ–ಹಸಿವಿನಿಂದಲೂ ಬಹಳವಾಗಿ ಪೀಡಿತ

ನಾಗಿದ್ದ, ಧನುರ್ಧಾರಿಯಾಗಿದ್ದ ಸುಮಿತ್ರರಾಜನನ್ನು ನೋಡಿ ಋಷಿಗಳೆಲ್ಲರೂ ಒಟ್ಟಾಗಿ ಸ್ವಾಗತಿಸಿ ಯಥಾವಿಧಿಯಾಗಿ ಸತ್ಕರಿಸಿದರು. ಸುಮಿತ್ರರಾಜನು ಋಷಿಗಳಿತ್ತ ಸ್ವಾಗತ-ಸತ್ಕಾರಗಳನ್ನು ಸ್ವೀಕರಿಸಿ ಎಲ್ಲ ತಪಸ್ವಿಗಳನ್ನೂ ಅವರ ತಪಸ್ಸಿನ ವೃದ್ಧಿಯ ವಿಷಯವಾಗಿ ಪ್ರಶ್ನಿಸಿದನು. ತಪೋಧನರು ರಾಜನ ಪ್ರಶ್ನೆಯನ್ನು ಸಾದರದಿಂದ ಸ್ವಾಗತಿಸಿ ಯಥೋಚಿತವಾದ ಉತ್ತರವನ್ನಿತ್ತು ರಾಜನ ಆಗಮನಕ್ಕೆ ಕಾರಣವನ್ನು ಕೇಳಿದರು :

ಕೇನ ಭದ್ರ ಸುಖಾರ್ಥೇನ ಸಮ್ಪ್ರಾಪ್ತೋಽಸಿ ತಪೋವನಮ್ ।
ಪದಾತಿರ್ಬದ್ಧನಿಸ್ತ್ರಿಂಶೋ ಧನ್ವೀ ಬಾಣೀ ನರೇಶ್ವರ ॥೫॥

"ಕಲ್ಯಾಣಸ್ವರೂಪನೇ! ನರೇಶ್ವರ! ಯಾವ ಸುಖಾಪೇಕ್ಷೆಯಿಂದ ನೀನು ಕತ್ತಿಯನ್ನು ಸೊಂಟಕ್ಕೆ ಬಿಗಿದುಕೊಂಡು ಧನುರ್ಬಾಣಗಳನ್ನೂ ಕೈಯಲ್ಲಿ ಹಿಡಿದು ಪದಾತಿಯಾಗಿ ಈ ತಪೋವನಕ್ಕೆ ಆಗಮಿಸಿರುವೆ?

ಏತದಿಚ್ಛಾಮಹೇ ಶ್ರೋತುಂ ಕುತಃ ಪ್ರಾಪ್ತೋಽಸಿ ಮಾನದ ।
ಕಸ್ಮಿನ್ಕುಲೇ ತು ಜಾತಸ್ತ್ವಂ ಕಿಂ ನಾಮಾ ಚಾಸಿ ಬ್ರೂಹಿ ನಃ ॥೬॥

ಮಾನದನೇ! ನೀನು ಎಲ್ಲಿಂದ ಬಂದಿರುವೆ? ನೀನು ಯಾವ ಕುಲದಲ್ಲಿ ಹುಟ್ಟಿದವನು? ನಿನ್ನ ಹೆಸರೇನು? ಈ ಎಲ್ಲವನ್ನೂ ನಾವು ನಿನ್ನಿಂದಲೇ ಕೇಳಿ ತಿಳಿಯಬೇಕೆಂದಿರುವೆವು. ಈ ಎಲ್ಲ ವಿಷಯಗಳನ್ನೂ ನಮ್ಮೊಡನೆ ಹೇಳು."

ಯುಧಿಷ್ಠಿರ! ಋಷಿಗಳು ಹೀಗೆ ಪ್ರಶ್ನಿಸಿದನಂತರ ರಾಜನು ಆ ಎಲ್ಲ ಬ್ರಾಹ್ಮಣರಿಗೂ ಯಥಾಯೋಗ್ಯವಾಗಿ ಸೇವೆಮಾಡಿ ಯಥೋಚಿತವಾದ ಮಾತುಗಳನ್ನು ಹೇಳಿದನು :

"ಬ್ರಾಹ್ಮಣಶ್ರೇಷ್ಠರೇ! ನಾನು ಹೈಹಯರ ಕುಲದಲ್ಲಿ ಹುಟ್ಟಿದವನು. ಮಿತ್ರರಿಗೆ ಆನಂದದಾಯಕನಾಗಿ 'ಸುಮಿತ್ರ' ಎಂಬ ಅನ್ವರ್ಥನಾಮವನ್ನು ಹೊಂದಿದ್ದೇನೆ. ಸಾವಿರಾರು ಬಾಣಗಳಿಂದ ಮೃಗಗಳ ಸಮೂಹಗಳನ್ನು ಕೊಲ್ಲುತ್ತಾ ಸಂಚರಿಸುತ್ತಿದ್ದೇನೆ. ದೊಡ್ಡದಾದ ಸೈನ್ಯದಿಂದ ರಕ್ಷಿಸಲ್ಪಡುತ್ತಿರುವ ನಾನು ಅಮಾತ್ಯರೊಡನೆಯೂ ಅಂತಃಪುರಸ್ತ್ರೀಯರೊಡನೆಯೂ ಬೇಟೆಯಾಡಲು ಬಂದೆನು. ನಾನು ಹೀಗೆಯೇ ಮೃಗಗಳನ್ನು ಬೇಟೆಯಾಡುತ್ತಿದ್ದಾಗ ನನ್ನ ಬಾಣದಿಂದ ಪ್ರಹೃತವಾದ ಒಂದು ಮೃಗವು ಬಾಣ

ಸಮೇತವಾಗಿ ಇತ್ತಕಡೆಗೆ ಓಡಿಬಂದಿತು. ಓಡಿಯೋಡಿ ಇತ್ತಕಡೆಗೆ ಬಂದ ಆ ಮೃಗವನ್ನೇ ಹಿಂಬಾಲಿಸುತ್ತಿದ್ದ ನಾನು ಈ ಅರಣ್ಯಕ್ಕೆ ಬಂದು ನಿಮ್ಮ ಸಮೀಪಕ್ಕೂ ಬಂದಿರುತ್ತೇನೆ. ನಾನೀಗ ಕಾಂತಿರಹಿತನಾಗಿದ್ದೇನೆ. ಹತಾಶನಾಗಿದ್ದೇನೆ. ಆಯಾಸದಿಂದ ಬಹಳವಾಗಿ ಬಳಲಿದ್ದೇನೆ. ನಾನು ಶ್ರಮದಿಂದ ಸಂಕಟಪಡುತ್ತಾ ಭ್ರಷ್ಟವಾದ ರಾಜಲಕ್ಷಣವುಳ್ಳವನಾಗಿ (ಧ್ವಜಛತ್ರಾದಿ ರಾಜಲಕ್ಷಣರಹಿತನಾಗಿ) ನಿಮ್ಮ ಈ ಆಶ್ರಮಕ್ಕೆ ಬಂದಿರುತ್ತೇನೆ. ಇದಕ್ಕಿಂತಲೂ ನನಗೆ ದುಃಖತರವಾದುದು ಬೇರೆ ಯಾವುದಿದೆ?

ನ ರಾಜಲಕ್ಷಣತ್ಯಾಗೋ ನ ಪುರಸ್ಯ ತಪೋಧನಾಃ ।
ದುಃಖಂ ಕರೋತಿ ತತ್ತೀವ್ರಂ ಯಥಾಶಾ ವಿಹತಾ ಮಮ ॥೧೨॥

ತಪೋಧನರೇ! ರಾಜಲಕ್ಷಣದ ತ್ಯಾಗವಾಗಲೀ, ಪಟ್ಟಣದ ತ್ಯಾಗ ವಾಗಲೀ–ನನಗೀಗ ಅಷ್ಟೊಂದು ತೀವ್ರವಾದ ದುಃಖವನ್ನುಂಟುಮಾಡಿರು ವುದಿಲ್ಲ. ಆದರೆ ನನ್ನ ಭಗ್ನವಾದ ಆಶೆಯು (ಮೃಗವು ಸಿಕ್ಕದೇ ಇರುವುದು) ನನಗೆ ಅತ್ಯಂತ ತೀವ್ರವಾದ ದುಃಖವನ್ನುಂಟುಮಾಡಿದೆ.

ಹಿಮವಾನ್ವಾ ಮಹಾಶೈಲಃ ಸಮುದ್ರೋ ವಾ ಮಹೋದಧಿಃ ।
ಮಹತ್ತ್ವಾನ್ನಾನ್ವಪದ್ಯೇತಾಂ ನಭಸೋ ವಾನ್ತರಂ ತಥಾ ॥೧೩॥
ಆಶಾಯಾಸ್ತಪಸಿ ಶ್ರೇಷ್ಠಾಸ್ತಥಾ ನಾನ್ತಮಹಂ ಗತಃ ।
ಭವತಾಂ ವಿದಿತಂ ಸರ್ವಂ ಸರ್ವಜ್ಞಾ ಹಿ ತಪೋಧನಾಃ ॥೧೪॥

ಮಹಾಪರ್ವತವಾದ ಹಿಮಾಲಯವೂ, ಅಗಾಧವಾದ ಜಲರಾಶಿ ಯಿಂದ ಕೂಡಿರುವ ಸಮುದ್ರವೂ ಎತ್ತರದ ದೃಷ್ಟಿಯಿಂದಲೂ ಮತ್ತು ಮಹತ್ತ್ವದ ದೃಷ್ಟಿಯಿಂದಲೂ ಸರ್ವಥಾ ಆಶೆಗೆ ಸಮಾನವಾದುವುಗಳಾಗು ವುದಿಲ್ಲ. ಸಮುದ್ರಕ್ಕಿಂತಲೂ ಪರ್ವತಕ್ಕಿಂತಲೂ ಆಶೆಯೆಂಬುದೇ ಹೆಚ್ಚು ದೊಡ್ಡದು. ಹಾಗೆಯೇ ಆಕಾಶಪ್ರದೇಶವೂ ಆಶೆಗಿಂತಲೂ ದೊಡ್ಡದಲ್ಲ. ತಪಸ್ಸಿನಲ್ಲಿ ಶ್ರೇಷ್ಠರಾದವರೇ! ಅದರಿಂದಲೇ ಆಶೆಯ ಕೊನೆಯನ್ನು ನಾನು ಮುಟ್ಟಿಲ್ಲ. ನಿಮಗೆ ಈ ಎಲ್ಲ ವಿಷಯಗಳೂ ತಿಳಿದಿವೆ. ತಪೋಧನರು ಸರ್ವಜ್ಞರೇ ಆಗಿರುತ್ತಾರೆ. ನೀವೆಲ್ಲರೂ ಮಹಾಭಾಗ್ಯಶಾಲಿಗಳಾಗಿರುತ್ತೀರಿ. ಆದುದರಿಂದ ನನ್ನ ಮನಸ್ಸಿನಲ್ಲಿ ಉಂಟಾಗಿರುವ ಸಂಶಯದ ವಿಷಯವಾಗಿ

ನಿಮ್ಮನ್ನು ಪ್ರಶ್ನಿಸುತ್ತೇನೆ. ಒಂದು ಕಡೆ ಆಶಾವಂತನಾದ ಮನುಷ್ಯನಿದ್ದಾನೆ. ಮತ್ತೊಂದು ಕಡೆ ಅಂತವೇ ಇಲ್ಲದ ಆಕಾಶವಿದೆ. ಜಗತ್ತಿನಲ್ಲಿ ಮಹತ್ತ್ವದ ದೃಷ್ಟಿಯಿಂದ ಈ ಎರಡರಲ್ಲಿ ನಿಮಗೆ ಯಾವುದು ಹೆಚ್ಚೆಂಬ ಭಾವನೆಯಾಗುತ್ತದೆ? ಆಶಾವಂತನಾದ ಪುರುಷನು ಅಧಿಕನೇ? ಅಂತವನ್ನು ಕಾಣದ ಅಂತರಿಕ್ಷವು ಅಧಿಕವೇ? ನಿಮಗೆ ಹೇಗೆ ತೋರುತ್ತದೆ? ನಾನು ಈ ವಿಷಯವನ್ನು ಯಥಾವತ್ತಾಗಿ ತಿಳಿಯಬೇಕೆಂದಿರುತ್ತೇನೆ. ಇಲ್ಲಿಗೆ ಬಂದಿರುವ ನನಗೆ ದುರ್ಲಭವಾದುದು ಯಾವುದಿದೆ? ಒಂದು ವೇಳೆ ಈ ವಿಷಯವು ಗೋಪ್ಯವಲ್ಲದಿದ್ದರೆ ಒಡನೆಯೇ ಆಶೆಯ ಮಹತ್ತ್ವದ ವಿಷಯವನ್ನು ನನಗೆ ತಿಳಿಸಿರಿ. ದ್ವಿಜಸತ್ತಮರೇ! ಗೋಪ್ಯವಾದ ವಿಷಯಗಳನ್ನು ನಾನು ನಿಮ್ಮಿಂದ ತಿಳಿದುಕೊಳ್ಳಲು ಇಚ್ಛೆಪಡುವುದಿಲ್ಲ. ಒಂದು ವೇಳೆ ನನ್ನ ಪ್ರಶ್ನೆಯಿಂದ ನಿಮ್ಮ ತಪಸ್ಸಿಗೆ ವಿಘ್ನವೇನಾದರೂ ಉಂಟಾಗುವುದಾಗಿದ್ದರೆ ಆಗಲೂ ನಾನು ವಿರಮಿಸುತ್ತೇನೆ. ನಿಮ್ಮೊಡನೆ ಮಾತನಾಡಲು ಅವಕಾಶವಿದ್ದರೆ ನಾನು ಕೇಳಿರುವ ಪ್ರಶ್ನೆಗೆ ಸಮಾಧಾನವನ್ನು ಹೇಳಿರಿ. ನಾನು ಆಶೆಗೆ ಕಾರಣವನ್ನೂ ಮತ್ತು ಅದರ ಸಾಮರ್ಥ್ಯವನ್ನೂ ಯಥಾವತ್ತಾಗಿ ನಿಮ್ಮಿಂದ ಕೇಳಬೇಕೆಂದಿರುತ್ತೇನೆ. ನೀವುಗಳು ನಿತ್ಯತಪಸ್ವಿಗಳಾಗಿರುವಿರಿ. ನೀವೆಲ್ಲರೂ ಸೇರಿ ನನ್ನ ಪ್ರಶ್ನೆಗೆ ಸಮಾಧಾನವನ್ನು ಹೇಳಿರಿ.”

೧೨೬ನೆಯ ಅಧ್ಯಾಯವು ಮುಗಿಯಿತು.

೧೨೭ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಋಷಭಮಹರ್ಷಿಯು ಸುಮಿತ್ರರಾಜನಿಗೆ ವೀರದ್ಯುಮ್ನ ಮತ್ತು ತನುಮುನಿಗಳ ವೃತ್ತಾಂತವನ್ನು ಹೇಳಿದುದು

ಭೀಷ್ಮನು ಸುಮಿತ್ರರಾಜನ ಕಥೆಯನ್ನು ಮುಂದುವರೆಸಿ ಹೇಳುತ್ತಾನೆ :

“ಯುಧಿಷ್ಠಿರ! ಅಲ್ಲಿದ್ದ ಋಷಿಗಳ ಸಮೂಹದಲ್ಲಿಯೇ ಶ್ರೇಷ್ಠನಾದ ಋಷಭ ಎಂಬ ಹೆಸರಿನ ವಿಪ್ರಶ್ರೇಷ್ಠನು ರಾಜನ ಮಾತಿನಿಂದ ವಿಸ್ಮಯಗೊಂಡವನಾಗಿ ಈ ಮಾತನ್ನು ಹೇಳಿದನು :

“ನರಶ್ರೇಷ್ಠನೇ! ಹಿಂದೆ ನಾನು ಪುಣ್ಯತೀರ್ಥಗಳನ್ನೂ ಕ್ಷೇತ್ರಗಳನ್ನೂ ಸಂದರ್ಶಿಸುವ ಸಲುವಾಗಿ ಸಂಚರಿಸುತ್ತಿದ್ದಾಗ ದಿವ್ಯವಾದ

ನರ-ನಾರಾಯಣಾಶ್ರಮಕ್ಕೂ ಹೋದೆನು. ಆ ನರ-ನಾರಾಯಣಾಶ್ರಮದಲ್ಲಿ ರಮಣೀಯವಾದ ಬದರೀವೃಕ್ಷವಿದೆ. ಅಲ್ಲಿಯೇ ಆಕಾಶಗಂಗೆಯ ಕುಂಡವಿದೆ. ಅಲ್ಲಿ ಹಯಗ್ರೀವನು ಸನಾತನವಾದ ವೇದಗಳನ್ನು ಪಠನೆಮಾಡುತ್ತಿದ್ದಾನೆ. ನಾನು ಮೊದಲು ವೈಹಾಯಸಕುಂಡದಲ್ಲಿ ಸ್ನಾನವನ್ನು ಮಾಡಿ, ದೇವತೆಗಳಿಗೂ-ಪಿತೃಗಳಿಗೂ ತರ್ಪಣವನ್ನಿತ್ತು, ಅನಂತರ ನರ-ನಾರಾಯಣ ಮಹರ್ಷಿಗಳು ಆನಂದದಿಂದ ವಾಸಮಾಡುವ ಆ ದಿವ್ಯಾಶ್ರಮವನ್ನು ಪ್ರವೇಶಿಸಿದೆನು. ಅಲ್ಲಿ ನರ-ನಾರಾಯಣಮಹರ್ಷಿಗಳನ್ನು ಸಂದರ್ಶಿಸಿದ ನಂತರ ಆ ಆಶ್ರಮದ ಸಮೀಪದಲ್ಲಿಯೇ ಇದ್ದ ಮತ್ತೊಂದು ಆಶ್ರಮಕ್ಕೆ ತಂಗಲು ಹೋದೆನು. ಅದೇ ಆಶ್ರಮಕ್ಕೆ ನಾರುಮಡಿಯನ್ನೂ ಮತ್ತು ಕೃಷ್ಣಾಜಿನವನ್ನೂ ಧರಿಸಿದ್ದ, ಕೃಶನಾಗಿಯೂ ಅತ್ಯಂತ ಎತ್ತರವಾಗಿಯೂ ಇದ್ದ, ತಪೋಧನನಾದ 'ತನು' ಎಂಬ ಹೆಸರಿನ ಋಷಿಯು ಬರುತ್ತಿದ್ದುದನ್ನು ಕಂಡೆನು. ಮಹಾಬಾಹುವೇ! ಆ ಮಹರ್ಷಿಯ ಶರೀರವು ಇತರ ಮನುಷ್ಯರ ಶರೀರಗಳ ಎತ್ತರಕ್ಕಿಂತಲೂ ಎಂಟು ಪಟ್ಟು ಎತ್ತರವಾಗಿದ್ದಿತು. ಅವನ ಶರೀರವು ಕಿರುಬೆರಳಿನಷ್ಟು ತೆಳುವಾಗಿದ್ದಿತು. ಅಷ್ಟು ಕೃಶವಾದ ಶರೀರವುಳ್ಳವನನ್ನು ನಾನು ಅದುವರೆಗೂ ನೋಡಿಯೇ ಇರಲಿಲ್ಲ. ಅವನ ಕುತ್ತಿಗೆ, ತೋಳುಗಳು, ಕಾಲುಗಳು ಮತ್ತು ಕೇಶಗಳು ಪರಮಾದ್ಭುತವಾಗಿ ಕಾಣುತ್ತಿದ್ದುವು. ಶರೀರಕ್ಕೆ ಅನುರೂಪವಾಗಿಯೇ ಅವನ ಶಿರಸ್ಸು, ಕಣ್ಣುಗಳೂ ಮತ್ತು ಕಿವಿಗಳೂ ಇದ್ದುವು. ಅವನ ಮಾತು ಮತ್ತು ಕೃತಿಗಳು ಸರ್ವಸಾಧಾರಣವಾಗಿದ್ದುವು. ಕೃಶನಾಗಿದ್ದ ಆ ಬ್ರಾಹ್ಮಣನನ್ನು ನೋಡಿ ನಾನು ಭಯಗೊಂಡೆನು ಹಾಗೂ ಅತ್ಯಂತದುಃಖಿತನೂ ಆದೆನು. ಸಮೀಪಸ್ಥನಾದೊಡನೆಯೇ ಅವನ ಪಾದಗಳಿಗೆರಗಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಬದ್ಧಾಂಜಲಿಯಾಗಿ ಅವನ ಮುಂದೆ ನಿಂತುಕೊಂಡೆನು. ನನ್ನ ನಾಮ-ಗೋತ್ರಗಳನ್ನು ತಿಳಿಸಿ ನನ್ನ ತಂದೆಯವರ ಪರಿಚಯವನ್ನೂ ಆ ಋಷಿಗೆ ಮಾಡಿಕೊಟ್ಟೆನು. ಋಷಿಯು ತೋರಿಸಿದ ಆಸನದಲ್ಲಿ ನಾನೂ ಕುಳಿತುಕೊಂಡೆನು. ಬಳಿಕ ಧರ್ಮಾತ್ಮರಲ್ಲಿ ಶ್ರೇಷ್ಠನಾದ ತನುಮಹರ್ಷಿಯು ಋಷಿಗಳ ಮಧ್ಯದಲ್ಲಿ ಕುಳಿತು ಧರ್ಮಾರ್ಥಯುಕ್ತವಾದ ಕಥೆಯನ್ನು ಹೇಳಲು ಉಪಕ್ರಮಿಸಿದನು. ಅವನು ಕಥೆಯನ್ನು ಹೇಳುತ್ತಿರುವಾಗಲೇ ಕಮಲಕ್ಕೆ

ಸಮಾನವಾದ ಕಣ್ಣುಗಳನ್ನು ಹೊಂದಿದ್ದ ರಾಜನೊಬ್ಬನು ಸೈನ್ಯಸಮೇತನಾಗಿ ತನ್ನ ಅಂತಃಪುರದ ಜನರೊಡನೆ ವೇಗವಾದ ಕುದುರೆಗಳ ಮೂಲಕ ಅಲ್ಲಿಗೆ ಬಂದನು. ಆ ರಾಜನ ಮಗನು ಅರಣ್ಯದಲ್ಲಿ ಕಳೆದುಹೋಗಿದ್ದನು. ಮಗನನ್ನೇ ಸ್ಮರಿಸುತ್ತಾ ರಾಜನು ಬಹಳವಾಗಿ ದುಃಖಿಸುತ್ತಿದ್ದನು. ಆ ರಾಜನು ಶ್ರೀಮಂತನಾದ ಮತ್ತು ಮಹಾಯಶಸ್ವಿಯಾದ ವೀರದ್ಯುಮ್ನನಾಗಿದ್ದನು. ಕಳೆದುಹೋಗಿದ್ದ ಅವನ ಮಗನ ಹೆಸರು ಭೂರಿದ್ಯುಮ್ನ. "ನನ್ನ ಮಗನನ್ನು ಇಲ್ಲಿ ಕಾಣುವೆನು ; ನನ್ನ ಮಗನು ಇಲ್ಲಿಯೇ ಇದ್ದಾನೆ ; ಈಗ ನನಗೆ ಸಿಕ್ಕಿಬಿಡುತ್ತಾನೆ"–ಇವೇ ಮುಂತಾದ ಆಶಾಭಾವನೆಗಳಿಂದ ಇಲ್ಲಿಂದಲ್ಲಿಗೂ–ಅಲ್ಲಿಂದಿಲ್ಲಿಗೂ ಸೆಳೆಯಲ್ಪಡುತ್ತಿದ್ದ ವೀರದ್ಯುಮ್ನರಾಜನು ಆ ದಿವಸಗಳಲ್ಲಿ ಅರಣ್ಯದಲ್ಲಿ ಸುತ್ತಾಡುತ್ತಿದ್ದನು.

ದುರ್ಲಭಃ ಸ ಮಯಾ ದ್ರಷ್ಟುಂ ನೂನಂ ಪರಮಧಾರ್ಮಿಕಃ ।
ಏಕಃ ಪುತ್ರೋ ಮಹಾರಣ್ಯೇ ನಷ್ಟ ಇತ್ಯಸಕೃತ್ತದಾ ॥೧೬॥

"ನಿಶ್ಚಯವಾಗಿಯೂ ನನ್ನ ಮಗನು ಪರಮಧಾರ್ಮಿಕನಾಗಿದ್ದನು. ಈಗ ಅವನು ನೋಡಲು ದುರ್ಲಭನಾಗಿದ್ದಾನೆ. ನನಗಿದ್ದ ಏಕಮಾತ್ರ ಪುತ್ರನೂ ಅರಣ್ಯದಲ್ಲಿ ಕಳೆದುಹೋದನಲ್ಲಾ!"–ಹೀಗೆ ಆ ರಾಜನು ಪುನಃ ಪುನಃ ಹೇಳುತ್ತಿದ್ದನು.

ದುರ್ಲಭಃ ಸ ಮಯಾ ದ್ರಷ್ಟುಮಾಶಾ ಚ ಮಹತೀ ಮಮ ।
ತಯಾ ಪರೀತಗಾತ್ರೋಽಹಂ ಮುಮೂರ್ಷುರ್ನಾತ್ರ ಸಂಶಯಃ ॥೧೭॥

"ನನಗೆ ಅವನ ದರ್ಶನವು ದುರ್ಲಭವಾಗಿದ್ದರೂ ಅವನನ್ನು ನೋಡಿಯೇ ತೀರಬೇಕೆಂಬ ಆಸೆಯು ನನಗೆ ಬಹಳವಾಗಿದೆ. ಆ ಆಶೆಯೇ ನನ್ನ ಶರೀರವನ್ನು ಸಂಪೂರ್ಣವಾಗಿ ವ್ಯಾಪಿಸಿದೆ. ನಾನು ಅವನನ್ನು ಕಾಣದಿದ್ದರೆ ಮೃತ್ಯುವನ್ನಾದರೂ ಆಶ್ರಯಿಸುತ್ತೇನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ."

ಸುಮಿತ್ರರಾಜ! ರಾಜನು ಹೇಳಿದ ಮಾತನ್ನು ಕೇಳಿ ಮುನಿಶ್ರೇಷ್ಠ ನಾದ ಭಗವಾನ್ ತನುಮಹರ್ಷಿಯು ತಲೆಯನ್ನು ತಗ್ಗಿಸಿಕೊಂಡು ಮುಹೂರ್ತಕಾಲದವರೆಗೆ ಧ್ಯಾನಾಸಕ್ತನಾಗಿ ಕುಳಿತನು. ಋಷಿಯು ಚಿಂತಿಸು

ತ್ತಿದ್ದುದನ್ನು ನೋಡಿ ಪರಮದುಃಖಿಯಾಗಿದ್ದ ದೀನನಾಗಿದ್ದ ವೀರದ್ಯುಮ್ನ ರಾಜನು ಮೆಲ್ಲ-ಮೆಲ್ಲನೆ ಈ ಮಾತನ್ನು ಹಲವು ಬಾರಿ ಹೇಳಿದನು :

ದುರ್ಲಭಂ ಕಿಂ ನು ದೇವರ್ಷೇ ಆಶಾಯಾಶ್ಚೈವ ಕಿಂ ಮಹತ್ ।
ಬ್ರವೀತು ಭಗವಾನೇತದ್ಯದಿ ಗುಹ್ಯಂ ನ ತೇ ಮಯಿ ॥೨೦॥

"ದೇವರ್ಷಿಗಳೇ! ಯಾವ ವಸ್ತುವು ದುರ್ಲಭವಾದುದು? ಆಶೆಗಿಂತಲೂ ದೊಡ್ಡದು ಯಾವುದು? ಈ ವಿಷಯವನ್ನು ನನ್ನಿಂದ ಗೋಪ್ಯವಾಗಿಡಬೇಕೆಂಬ ಆಶಯವು ನಿಮಗಿಲ್ಲದಿದ್ದರೆ–ಭಗವತ್ಸ್ವರೂಪ ರಾಗಿರುವ ನೀವು ನನ್ನ ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿರಿ."

ಅದಕ್ಕೆ ಉತ್ತರವಾಗಿ ತನುಮಹರ್ಷಿಯು ಹೇಳುತ್ತಾನೆ :

"ವೀರದ್ಯುಮ್ನ! ಈ ನಿನ್ನ ಮಗನು ಹಿಂದೆ ಮೂರ್ಖಬುದ್ಧಿಯನ್ನಾಶ್ರಯಿಸಿ ತನ್ನ ದೌರ್ಭಾಗ್ಯದ ಕಾರಣದಿಂದಾಗಿ ಪೂಜನೀಯನಾದ ಮಹರ್ಷಿಯೊಬ್ಬನನ್ನು ಅವಮಾನಗೊಳಿಸಿದನು. ಹಿಂದೊಮ್ಮೆ ಆ ಮಹರ್ಷಿಯು ನಿನ್ನ ಮಗನ ಬಳಿಗೆ ಹೋಗಿ ಸುವರ್ಣಕಲಶವನ್ನೂ–ನಾರು ಮಡಿಗಳನ್ನೂ ಪ್ರಾರ್ಥಿಸಿದನು. ನಿನ್ನ ಮಗನು ಋಷಿಯನ್ನು ಅವಹೇಳನ ಮಾಡಿದುದಲ್ಲದೇ ಅವನ ಪ್ರಾರ್ಥನೆಯನ್ನೂ ನಡೆಸಿಕೊಡಲಿಲ್ಲ. ಅದರಿಂದಾಗಿ ವಿಪ್ರರ್ಷಿಯು ಖಿನ್ನನೂ–ಹತಾಶನೂ ಆದನು."

ಋಷಭನು ಸುಮಿತ್ರರಾಜನಿಗೆ ಹೇಳುತ್ತಾನೆ :

"ನರಶ್ರೇಷ್ಠನೇ! ತನುಮಹರ್ಷಿಯು ವೀರದ್ಯುಮ್ನರಾಜನಿಗೆ ಹೀಗೆ ಹೇಳಿದ ಕೂಡಲೇ ಧರ್ಮಾತ್ಮನಾದ ವೀರದ್ಯುಮ್ನನು ಲೋಕಪೂಜಿತನಾದ ತನುಮಹರ್ಷಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ನಿನ್ನಂತೆಯೇ ಬಹಳ ಬಳಲಿದವನಾಗಿ ದೌರ್ಬಲ್ಯವನ್ನು ಹೊಂದಿದನು. (ಕುಸಿದು ಹೋದನು.) ಬಳಿಕ ತನುಮಹರ್ಷಿಯು ತಪೋವನದಲ್ಲಿ ಆಚರಿಸಬೇಕಾದ ಶಿಷ್ಟಾಚಾರಕ್ಕೆ ಅನುಸಾರವಾಗಿ ಅರ್ಘ್ಯ-ಪಾದ್ಯಾದಿ ಸಕಲವಸ್ತುಗಳನ್ನೂ ರಾಜನಿಗೆ ಅರ್ಪಿಸಿದನು. ಬಳಿಕ ಸಪ್ತರ್ಷಿಗಳು ಧ್ರುವನಕ್ಷತ್ರವನ್ನು ಸುತ್ತುವರಿದಿರುವಂತೆ–ಆಶ್ರಮದಲ್ಲಿದ್ದ ಮಹರ್ಷಿಗಳೆಲ್ಲರೂ ವೀರದ್ಯುಮ್ನನನ್ನು

ಸುತ್ತುವರಿದು ಕುಳಿತರು. ಆ ಋಷಿಗಳೆಲ್ಲರೂ ಅಪರಾಜಿತನಾದ ವೀರದ್ಯುಮ್ನನನ್ನು ಕುರಿತು ಆಶ್ರಮಕ್ಕೆ ಬಂದುದರ ಪ್ರಯೋಜನ ವೇನೆಂಬುದನ್ನು (ಕಾರಣವೇನೆಂಬುದನ್ನು) ಪ್ರಶ್ನಿಸಿದರು."

೧೨೭ನೆಯ ಅಧ್ಯಾಯವು ಮುಗಿಯಿತು.

೧೨೮ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ತನುಮಹರ್ಷಿಯು ವೀರದ್ಯುಮ್ನನಿಗೆ ಆಶೆಯ ಸ್ವರೂಪವನ್ನು ವರ್ಣಿಸಿದುದು : ಋಷಭಮಹರ್ಷಿಯ ಉಪದೇಶದಿಂದ ಸುಮಿತ್ರನು ಆಶೆಯನ್ನು ತೊರೆದುದು

ಯುಧಿಷ್ಠಿರ! ಋಷಭನು ಸುಮಿತ್ರನಿಗೆ ಹೇಳುತ್ತಾನೆ :

"ಮಹಾರಾಜ! ಋಷಿಗಳು ಕೇಳಿದ ಪ್ರಶ್ನೆಗೆ ವೀರದ್ಯುಮ್ನರಾಜನು ಉತ್ತರಿಸುತ್ತಾನೆ :

"ಋಷಿಸತ್ತಮರೇ! ಸಮಸ್ತದಿಕ್ಕುಗಳಲ್ಲಿಯೂ ಖ್ಯಾತಿಯನ್ನು ಪಡೆ ದಿರುವ ವೀರದ್ಯುಮ್ನನೆಂಬ ಹೆಸರಿನ ರಾಜನೇ ನಾನು. ಕಳೆದುಹೋಗಿರುವ ಭೂರಿದ್ಯುಮ್ನನೆಂಬ ಹೆಸರಿನ ಮಗನನ್ನು ಹುಡುಕಲು ನಾನು ಈ ಅರಣ್ಯಕ್ಕೆ ಬಂದಿರುತ್ತೇನೆ. ವಿಪ್ರಶ್ರೇಷ್ಠರೇ! ಅನಘರೇ! ಅವನು ನನ್ನ ಏಕಮಾತ್ರ ಪುತ್ರನಾಗಿದ್ದಾನೆ. ಅವನಿನ್ನೂ ಬಾಲಕನು. ಈ ಅರಣ್ಯದಲ್ಲಿ ಅವನು ನನಗೆ ಕಾಣಿಸುತ್ತಿಲ್ಲ. ಅವನನ್ನು ಹುಡುಕುವ ಸಲುವಾಗಿಯೇ ನಾನು ಈ ಅರಣ್ಯದಲ್ಲಿ ಸಂಚರಿಸುತ್ತಿದ್ದೇನೆ."

ಸುಮಿತ್ರರಾಜ! ರಾಜನು ಹೀಗೆ ಹೇಳಿದನಂತರ ತನುಮಹರ್ಷಿಯು ಅಧೋಮುಖನಾಗಿ ಕುಳಿತನು. ಬಹಳ ಹೊತ್ತಿನವರೆಗೂ ಮೌನಿಯಾಗಿಯೇ ಇದ್ದನು. ರಾಜನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಹಿಂದೆ ಅದೇ ರಾಜನೇ ತನುಮಹರ್ಷಿಗೆ ವಿಶೇಷವಾದ ಮರ್ಯಾದೆಯನ್ನು ತೋರಿಸಿರ ಲಿಲ್ಲ. ತನುಮಹರ್ಷಿಯ ಆಶೆಯನ್ನು ರಾಜನು ಭಂಗಗೊಳಿಸಿದ್ದನು. ಅದ ರಿಂದ ಖಿನ್ನನಾದ ಋಷಿಯು–ಯಾವುದೇ ಕಾರಣದಿಂದಲೂ ರಾಜರಿಂದಲೂ ಮತ್ತು ಇತರ ವರ್ಣದವರಿಂದಲೂ ಕೊಡಲ್ಪಡುವ ಯಾವುದೇ ವಿಧವಾದ

ದಾನವನ್ನೂ ತೆಗೆದುಕೊಳ್ಳುವುದಿಲ್ಲವೆಂದು ನಿಶ್ಚಯಮಾಡಿ ದೀರ್ಘಕಾಲದ ತಪಸಿನಲ್ಲಿ ನಿರತನಾದನು.

ಆಶಾ ಹಿ ಪುರುಷಂ ಬಾಲಮುತ್ಥಾಪಯತಿ ತಸ್ಥುಷೀ ।
ತಾಮಹಂ ವ್ಯಪನೇಷ್ಯಾಮಿ ಇತಿ ಕೃತ್ವಾ ವ್ಯವಸ್ಥಿತಃ ॥೬॥

'ಬಹಳ ಕಾಲದವರೆಗೂ ಸ್ಥಿರವಾಗಿ ಉಳಿಯುವ ಆಶೆಯು ಮೂರ್ಖನಾದ ಮನುಷ್ಯನನ್ನು ಉದ್ಯಮಶೀಲನನ್ನಾಗಿ ಮಾಡುತ್ತದೆ. ಅಂತಹ ಆಶೆಯನ್ನು ನಾನು ಮನಸ್ಸಿನಿಂದ ಸಂಪೂರ್ಣವಾಗಿ ಕಿತ್ತುಹಾಕುತ್ತೇನೆ'–ಹೀಗೆ ನಿಶ್ಚಯ ಮಾಡಿ ತನುಮಹರ್ಷಿಯು ತಪಸ್ಸಿನಲ್ಲಿ ನಿರತನಾದನು.

ಕಾಲಕರ್ಮಸಂಯೋಗದಿಂದ ಅದೇ ಮಹರ್ಷಿಯ ಬಳಿಗೆ ವೀರದ್ಯುಮ್ನ ರಾಜನು ಬಂದಿದ್ದನು. ಮಹರ್ಷಿಯು ಮಾತನಾಡದೇ ತಲೆತಗ್ಗಿಸಿ ಕುಳಿತುದನ್ನು ನೋಡಿ ವೀರದ್ಯುಮ್ನನು ಪುನಃ ಋಷಿಯನ್ನು ಪ್ರಶ್ನಿಸಿದನು :

ಆಶಾಯಾಃ ಕಿಂ ಕೃಶತ್ವಂ ಚ ಕಿಂ ಚೇಹ ಭುವಿ ದುರ್ಲಭಮ್ ।
ಬ್ರವೀತು ಭಗವಾನೇತತ್ತ್ವಂ ಹಿ ಧರ್ಮಾರ್ಥದರ್ಶಿವಾನ್ ॥೭॥

"ವಿಪ್ರಶ್ರೇಷ್ಠರೇ! ನೀವು ಧರ್ಮಾರ್ಥಗಳ ರಹಸ್ಯಗಳನ್ನು ತಿಳಿದವರಾಗಿರುವಿರಿ. ಆದುದರಿಂದ ನನ್ನ ಪ್ರಶ್ನೆಗಳಿಗೆ ಉತ್ತರನೀಡುವ ಕೃಪೆಮಾಡಿರಿ. ಆಶೆಗಿಂತಲೂ ದೊಡ್ಡದಾದ ದುರ್ಬಲತೆಯು ಯಾವುದಿದೆ? ಈ ಭೂಮಂಡಲದಲ್ಲಿ ದುರ್ಲಭವಾದುದು ಯಾವುದು?"

ಬಳಿಕ ಕೃಶವಾದ ಶರೀರವನ್ನು ಹೊಂದಿದ್ದ, ಪೂಜ್ಯನಾದ ಆ ಬ್ರಾಹ್ಮಣನು ಹಿಂದಿನ ಎಲ್ಲ ವಿಷಯಗಳನ್ನೂ ಸ್ಮರಿಸಿಕೊಂಡು ರಾಜನಿಗೂ ಅದನ್ನು ಜ್ಞಾಪಿಸಿಕೊಡುತ್ತಾ ಹೇಳಿದನು :

ಕೃಶತ್ವೇನ ಸಮಂ ರಾಜನ್ನಾಶಾಯಾ ವಿದ್ಯತೇ ನೃಪ ।
ತಸ್ಯಾ ವೈ ದುರ್ಲಭತ್ವಾಚ್ಚ ಪ್ರಾರ್ಥಿತಾಃ ಪಾರ್ಥಿವಾ ಮಯಾ ॥೮॥

"ಮಹಾರಾಜ! ಆಶೆಗೆ ಸಮಾನವಾದ ದುರ್ಬಲತೆಯು ಬೇರೆ ಯಾವುದೂ ಇರುವುದಿಲ್ಲ. (ಆಶಾವಂತನಿಗೆ ಸದೃಶನಾದ ಕೃಶನು, ದುರ್ಬಲನು ಯಾರೂ ಇರುವುದಿಲ್ಲ.) ನಾನು ಯಾವ ವಸ್ತುವಿನ ಮೇಲೆ ಆಶೆ

ಯನ್ನಿಟ್ಟುಕೊಂಡಿದ್ದೆನೋ–ಆ ವಸ್ತುವು ದುರ್ಲಭವಾಗಿದ್ದುದರಿಂದಲೇ ನಾನು ಎಲ್ಲ ರಾಜರನ್ನೂ ಯಾಚಿಸತೊಡಗಿದೆನು."

ವೀರದ್ಯುಮ್ನನು ಹೇಳುತ್ತಾನೆ :

ಕೃಶಾಕೃಶೇ ಮಯಾ ಬ್ರಹ್ಮನ್ಗೃಹೀತೇ ವಚನಾತ್ತವ ।
ದುರ್ಲಭತ್ವಂ ಚ ತಸ್ಯೈವ ವೇದವಾಕ್ಯಮಿವ ದ್ವಿಜ ॥೧೦॥

"ಬ್ರಾಹ್ಮಣಶ್ರೇಷ್ಠರೇ! ನಿಮ್ಮ ಮಾತಿನಿಂದ ಈ ತತ್ತ್ವವನ್ನು ಗ್ರಹಿಸಿದ್ದೇನೆ. ಯಾರು ಆಶೆಯಿಂದ ಬಂಧಿಸಲ್ಪಟ್ಟಿರುವರೋ–ಅವರು ದುರ್ಬಲರು. ಯಾರು ಆಶೆಯನ್ನು ಜಯಿಸುವರೋ–ಅವರು ಪುಷ್ಟರು. ನಾನು ನಿಮ್ಮ ಮಾತನ್ನು ವೇದವಾಕ್ಯಕ್ಕೆ ಸಮಾನವನ್ನಾಗಿ ತಿಳಿಯುತ್ತೇನೆ. ಮನುಷ್ಯನಿಗೆ ಯಾವ ವಸ್ತುವಿನ ಮೇಲೆ ಆಶೆಯುಂಟಾಗುವುದೋ–ಅದು ದುರ್ಲಭವಾಗುತ್ತದೆ.

ಮಹಾಪ್ರಾಜ್ಞರೇ! ನನ್ನ ಮನಸ್ಸಿನಲ್ಲಿ ಒಂದು ಸಂಶಯವು ಮೂಡಿದೆ. ಅದನ್ನೇ ಪ್ರಶ್ನಿಸುತ್ತಿರುವ ನನಗೆ ಯಥಾವತ್ತಾದ ಉತ್ತರವನ್ನು ಕೊಡುವ ಕೃಪೆಮಾಡಿರಿ.

ತ್ವತ್ತಃ ಕೃಶತರಂ ಕಿಂ ನು ಬ್ರವೀತು ಭಗವಾನಿದಮ್ ।
ಯದಿ ಗುಹ್ಯಂ ನ ತೇ ಕಿಞ್ಚಿದ್ವಿದ್ಯತೇ ಮುನಿಸತ್ತಮ ॥೧೨॥

ಮುನಿಶ್ರೇಷ್ಠರೇ! ನಿಮಗೆ ಯಾವ ವಿಷಯವೂ ಗುಪ್ತವಾಗಿಡುವುದಾಗಿಲ್ಲದಿದ್ದರೆ ಈ ವಿಷಯವನ್ನು ನನಗೆ ಹೇಳಿರಿ. ನಿಮಗಿಂತಲೂ ಕೃಶವಾದ (ದುರ್ಬಲವಾದ) ವಸ್ತುವು ಬೇರೆ ಯಾವುದಿದೆ?"

ಋಷಿಯು ಹೇಳುತ್ತಾನೆ :

ದುರ್ಲಭೋಽಪ್ಯಥವಾ ನಾಸ್ತಿ ಯೋಽರ್ಥೀ ಧೃತಿಮವಾಪ್ನುಯಾತ್ ।
ಸ ದುರ್ಲಭತರಸ್ತಾತ ಯೋಽರ್ಥಿನಂ ನಾವಮನ್ಯತೇ ॥೧೩॥

"ನರೇಶ್ವರ! ಯಾವ ಯಾಚಕನು ಧೈರ್ಯವನ್ನು ತಂದುಕೊಂಡು, ಒಂದು ವಸ್ತುವು ತನಗೆ ಅತ್ಯಂತವಾಗಿ ಅಪೇಕ್ಷಿತವಾಗಿದ್ದರೂ ಅದನ್ನು ಯಾಚಿಸಲು ಹೋಗುವುದಿಲ್ಲವೋ–ಅಂತಹವನು ದುರ್ಲಭನು ಅಥವಾ ಅಂತಹವನು ಇಲ್ಲವೆಂದೇ ಹೇಳಬಹುದು. ಅದೇ ರೀತಿಯಲ್ಲಿ ಯಾಚನೆಗೆ ಬಂದವ

ನನ್ನು ಅವಮಾನಗೊಳಿಸದೇ ಆದರಪೂರ್ವಕವಾಗಿ ಯಾಚಕರ ಇಚ್ಛೆಯನ್ನು ಪೂರ್ಣಗೊಳಿಸುವವನೂ ದುರ್ಲಭತರನೇ ಸರಿ. (ಈ ಪ್ರಪಂಚದಲ್ಲಿ ಆಶೆಯನ್ನು ತೊರೆದವನೂ ದುರ್ಲಭನೇ. ಯಾಚಕನ ಬೇಡಿಕೆಯನ್ನು ಸೌಮನಸ್ಯದಿಂದ ಪೂರ್ಣಗೊಳಿಸುವವನೂ ದುರ್ಲಭನೇ.)

ಸತ್ಕೃತ್ಯ ನೋಪಕುರುತೇ ಪರಂ ಶಕ್ತ್ಯಾ ಯಥಾರ್ಹತಃ ।
ಯಾ ಸಕ್ತಾ ಸರ್ವಭೂತೇಷು ಸಾಶಾ ಕೃಶತರೀ ಮಯಾ ॥೧೪॥

ಆಢ್ಯನೊಬ್ಬನು ಯಾಚಿಸಲು ಬಂದ ಯಾಚಕನನ್ನು ಯಥಾಯೋಗ್ಯವಾಗಿ ಸತ್ಕರಿಸಿ–ತನ್ನ ಆಶೆಯು ಪೂರ್ಣವಾಗುವುದೆಂಬ ಆಶೆಯನ್ನು ಯಾಚಕನಲ್ಲಿ ಹುಟ್ಟಿಸಿ–ಬಳಿಕ ಯಥಾಶಕ್ತಿ ಮತ್ತು ಯಥಾಯೋಗ್ಯನಾಗಿ ಯಾಚಕನು ಅಪೇಕ್ಷಿಸುವುದನ್ನು ಕೊಡುವುದಿಲ್ಲವೋ–ಅಂತಹ ಸಮಯದಲ್ಲಿ ಸರ್ವಭೂತಗಳ ಮನಸ್ಸಿನಲ್ಲಿ (ಯಾಚಕನಾಗಿ ಬಂದವನ ಮನಸ್ಸಿನಲ್ಲಿ) ಯಾವ ಆಶೆಯಿರುವುದೋ ಆ ಆಶೆಯು ನನಗಿಂತಲೂ ಕೃಶವಾಗಿರುತ್ತದೆ.

ಕೃತಘ್ನೇಷು ಚ ಯಾ ಸಕ್ತಾ ನೃಶಂಸೇಷ್ವಲಸೇಷು ಚ ।
ಅಪಕಾರಿಷು ಚಾಸಕ್ತಾ ಸಾಶಾ ಕೃಶತರೀ ಮಯಾ ॥೧೫॥

ಕೃತಘ್ನರಲ್ಲಿ, ಕ್ರೂರಿಗಳಲ್ಲಿ, ಅಲಸರಲ್ಲಿ, ಮತ್ತೊಬ್ಬರಿಗೆ ಕಾರಣವಿಲ್ಲದೇ ಅಪಕಾರವನ್ನು ಮಾಡುವವರಲ್ಲಿ–ಇಟ್ಟಿರುವ ಆಶೆಯು (ಅವರು ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಡುವರೆಂಬ ಭಾವನೆಯು) ಪೂರ್ಣವಾಗುವುದೇ ಇಲ್ಲ. ಆಶಾಮೂಲವಾದ ಚಿಂತೆಯೇ ಅವರನ್ನು ದುರ್ಬಲನನ್ನಾಗಿ ಮಾಡಿಬಿಡುತ್ತದೆ. ಆದುದರಿಂದ ಕೃತಘ್ನರೇ ಮೊದಲಾದವರಲ್ಲಿಟ್ಟಿರುವ ಆಶೆಯು ನನಗಿಂತಲೂ ಕೃಶತರವಾದುದು.

ಏಕಪುತ್ರಃ ಪಿತಾ ಪುತ್ರೇ ನಷ್ಟೇ ವಾ ಪ್ರೋಷಿತೇಽಪಿ ವಾ ।
ಪ್ರವೃತ್ತಿಂ ಯೋ ನ ಜಾನಾತಿ ಸಾಶಾ ಕೃಶತರೀ ಮಯಾ ॥೧೬॥

ಒಬ್ಬನೇ ಒಬ್ಬ ಮಗನನ್ನು ಪಡೆದಿರುವ ತಂದೆಗೆ–ಆ ಒಬ್ಬ ಪುತ್ರನೂ ನಷ್ಟವಾಗಿಹೋದಲ್ಲಿ ಅಥವಾ ಪರದೇಶಕ್ಕೆ ಹೋದಲ್ಲಿ–ಆ ಪುತ್ರನ ಯಾವುದೊಂದು ಸಮಾಚಾರವೂ ತಿಳಿಯದೇ ಇದ್ದಾಗ ಅವನನ್ನು ಕಾಣಬೇಕೆಂಬ ಯಾವ ಆಶೆಯು ಉಂಟಾಗುತ್ತದೆಯೋ–ಆ ಆಶೆಯು ನನಗಿಂತಲೂ ಕೃಶತರವಾಗಿರುತ್ತದೆ.

ಪ್ರಸವೇ ಚೈವ ನಾರೀಣಾಂ ವೃದ್ಧಾನಾಂ ಪುತ್ರಕಾರಿತಾ ।
ತಥಾ ನರೇನ್ದ್ರ ಧನಿನಾಂ ಸಾಶಾ ಕೃಶತರೀ ಮಯಾ ॥೧೭॥

ಮಕ್ಕಳಿಲ್ಲದ ಸ್ತ್ರೀಯರಿಗೆ ವೃದ್ಧಾವಸ್ಥೆಯಲ್ಲಿಯೂ ಮಕ್ಕಳನ್ನು ಪ್ರಸವಿಸಬೇಕೆಂಬ ಯಾವ ಆಶೆಯಿರುತ್ತದೆಯೋ, ಧನಿಕರಿಗೆ ಇನ್ನೂ ಹೆಚ್ಚು ಹೆಚ್ಚು ಧನವನ್ನು ಕೂಡಿಡಬೇಕೆಂಬ ಯಾವ ಆಶೆಯಿರುತ್ತದೆಯೋ–ಆ ಆಶೆಯು ನನಗಿಂತಲೂ ಕೃಶತರವಾಗಿರುತ್ತದೆ.

ಪ್ರದಾನಾಕಾಂಕ್ಷಿಣೀನಾಂ ಚ ಕನ್ಯಾನಾಂ ವಯಸಿ ಸ್ಥಿತೇ ।
ಶ್ರುತ್ವಾ ಕಥಾಸ್ತಥಾಯುಕ್ತಾಃ ಸಾಶಾ ಕೃಶತರೀ ಮಯಾ ॥೧೮॥

ವಯಸ್ಸಿಗೆ ಬಂದ ಪ್ರದಾನಾಕಾಂಕ್ಷಿಣಿಯರಾದ (ತಮ್ಮನ್ನು ಒಳ್ಳೆಯ ವರನಿಗೆ ಕೊಟ್ಟು ಮದುವೆಯನ್ನು ಮಾಡಲಿ–ಎಂಬ ಇಚ್ಛೆಯಿರುವ) ಕನ್ಯೆಯರಿಗೆ ಮನೆಯಲ್ಲಿ ವಿವಾಹಸಂಬಂಧವಾದ ಮಾತು-ಕತೆಗಳನ್ನು ಕೇಳಿದಾಗ ಯಾವ ವಿಧವಾದ ಆಶೆಯುಂಟಾಗುವುದೋ–ಆ ಆಶೆಯು ನನಗಿಂತಲೂ ಕೃಶತರವಾಗಿರುತ್ತದೆ."

ಋಷಭಮಹರ್ಷಿಯು ಹೇಳುತ್ತಾನೆ :

"ಸುಮಿತ್ರನೇ! ತನುಮುನಿಯು ಹೇಳಿದ ಮಾತನ್ನು ಕೇಳಿ ರಾಜನು ತನ್ನ ರಾಣಿಯೊಡನೆ ತಲೆಬಾಗಿ ಋಷಿಯ ಕಾಲುಗಳನ್ನು ಮುಟ್ಟಿ ದೀರ್ಘದಂಡನಮಸ್ಕಾರಮಾಡುತ್ತಾ ಪ್ರಾರ್ಥಿಸಿದನು :

ಪ್ರಸಾದಯೇ ತ್ವಾಂ ಭಗವನ್ಪುತ್ರೇಣೇಚ್ಛಾಮಿ ಸಂಗಮಮ್ ।

ಯದೇತದುಕ್ತಂ ಭವತಾ ಸಮ್ಪ್ರತಿ ದ್ವಿಜಸತ್ತಮ ।
ಸತ್ಯಮೇತನ್ನ ಸಂದೇಹೋ ಯದೇತದ್ವ್ಯಾಹೃತಂ ತ್ವಯಾ ॥೨೦॥

"ಭಗವನ್! ನಾನು ನಿಮ್ಮನ್ನು ಪ್ರಸನ್ನರಾಗುವಂತೆ ಪ್ರಾರ್ಥಿಸುತ್ತೇನೆ. ನಾನು ಮಗನೊಡನೆ ಸೇರಲು ಇಚ್ಛಿಸುತ್ತೇನೆ. ದ್ವಿಜಶ್ರೇಷ್ಠರೇ! ಈಗ ತಾವು ಆಶೆಯ ವಿಷಯವಾಗಿ ಯಾವ ಮಾತನ್ನು ಹೇಳಿರುವಿರೋ–ಅದೆಲ್ಲವೂ ಸತ್ಯವಾದುದು. ಇದರಲ್ಲಿ ಸಂದೇಹವೇ ಇಲ್ಲ."

ರಾಜನು ಹೇಳಿದ ಮಾತನ್ನು ಕೇಳಿ ಧರ್ಮಾತ್ಮರಲ್ಲಿ ಶ್ರೇಷ್ಠನಾದ

ಭಗವಾನ್ ತನುಮಹರ್ಷಿಯು ನಸುನಗುತ್ತಾ ತನ್ನ ತಪಃಪ್ರಭಾವದಿಂದಲೂ ಶಾಸ್ತ್ರಜ್ಞಾನದ ಪ್ರಭಾವದಿಂದಲೂ ರಾಜಕುಮಾರನು ಅಲ್ಲಿಗೇ ಬರುವಂತೆ ಮಾಡಿದನು.

ಧರ್ಮಾತ್ಮರಲ್ಲಿ ಶ್ರೇಷ್ಠನಾದ ತನುಮಹರ್ಷಿಯು ತಪಃಶಕ್ತಿಯಿಂದ ರಾಜಪುತ್ರನನ್ನು ಅಲ್ಲಿಗೆ ಆಮಂತ್ರಿಸಿ ಹಿಂದೆ ಮಾಡಿದ ಅನಾದರಣೆಗಾಗಿ ರಾಜನನ್ನು ನಿಂದಿಸಿ ಅವನಿಗೆ ತನ್ನ ಧರ್ಮಸ್ವರೂಪವನ್ನು ತಿಳಿಯಪಡಿಸಿದನು. ಪಾಪರಹಿತನೂ ಕ್ರೋಧರಹಿತನೂ ಆದ ತನುಮಹರ್ಷಿಯು ತನ್ನ ದಿವ್ಯವಾದ ಮತ್ತು ಪರಮಾದ್ಭುತವಾದ ದಿವ್ಯಸ್ವರೂಪವನ್ನು ರಾಜನಿಗೆ ತೋರಿಸಿ ಸಮೀಪದಲ್ಲಿದ್ದ ಅರಣ್ಯಕ್ಕೆ ಹೊರಟುಹೋದನು.

ಸುಮಿತ್ರರಾಜ! ಈ ಎಲ್ಲವನ್ನೂ ನಾನು ಪ್ರತ್ಯಕ್ಷವಾಗಿಯೇ ನೋಡಿರುವೆನು. ಮುನಿಯ ಮಾತನ್ನು ಈ ನನ್ನ ಕಿವಿಗಳಿಂದಲೇ ಕೇಳಿರುವೆನು. ನೀನೂ ಕೂಡ ಶರೀರವನ್ನು ಅತ್ಯಂತಕೃಶಗೊಳಿಸುವ ಮೃಗದ ಮೇಲಿನ ಆಶೆಯನ್ನು ಶೀಘ್ರವಾಗಿ ಪರಿತ್ಯಜಿಸು."

ಯುಧಿಷ್ಠಿರ! ಮಹಾತ್ಮನಾದ ಋಷಭಮಹರ್ಷಿಯು ಹೀಗೆ ಹೇಳಿದ ನಂತರ ಸುಮಿತ್ರರಾಜನು ಅತ್ಯಂತದುರ್ಬಲವಾದ (ಶರೀರವನ್ನು ಅತಿದುರ್ಬಲಗೊಳಿಸುವ) ಆಶೆಯನ್ನು ತ್ಯಾಗಮಾಡಿದನು. ಹಾಗೆಯೇ ನೀನೂ ಕೂಡ ನನ್ನ ಈ ಮಾತನ್ನು ಕೇಳಿ ಆಶೆಯನ್ನು ತ್ಯಾಗಮಾಡಿ ಹಿಮವತ್ಪರ್ವತದಂತೆ ಸ್ಥೈರ್ಯದಿಂದಿರು. ಮಹಾರಾಜ! ಇಂತಹ ಸಂಕಟದ ಪರಿಸ್ಥಿತಿಯಲ್ಲಿಯೂ ನೀನು ಧರ್ಮಾನುಗುಣವಾದ ಪ್ರಶ್ನೆಗಳನ್ನೇ ಕೇಳುತ್ತಿರುವೆ ಮತ್ತು ಉತ್ತರವನ್ನೂ ಏಕಾಗ್ರಚಿತ್ತನಾಗಿ ಲಾಲಿಸುತ್ತಿರುವೆ. ನಾನು ಹೇಳಿದುದನ್ನು ಕೇಳಿದ ಮೇಲಾದರೂ ದುರ್ಯೋಧನನು ನಿನ್ನೊಡನೆ ಸಂಧಿಯನ್ನು ಮಾಡಿಕೊಳ್ಳದೇ ಇದ್ದುದಕ್ಕಾಗಿ ನೀನು ಪರಿತಪಿಸುವ ಕಾರಣವಿಲ್ಲ."

೧೨೮ನೆಯ ಅಧ್ಯಾಯವು ಮುಗಿಯಿತು.

ಯಮ-ಗೌತಮರ ಸಂವಾದ

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

ನಾಮೃತಸ್ಯೇವ ಪರ್ಯಾಪ್ತಿರ್ಮಮಾಸ್ತಿ ಬ್ರುವತಿ ತ್ವಯಿ ।
ಯಥಾ ಹಿ ಸ್ವಾತ್ಮವೃತ್ತಿಸ್ಥಸ್ತಥಾ ತೃಪ್ತೋಽಸ್ಮಿ ಭಾರತ ॥೧॥

"ಭಾರತನೇ! ಅಮೃತವನ್ನು ಎಷ್ಟು ಕುಡಿಯುತ್ತಿದ್ದರೂ ಹೇಗೆ ತೃಪ್ತಿಯೇ ಆಗುವುದಿಲ್ಲವೋ-ಇನ್ನೂ ಕುಡಿಯಬೇಕೆನ್ನಿಸುವುದೋ- ಹಾಗೆಯೇ ನೀನು ಅಮೃತಕ್ಕೆ ಸಮಾನವಾದ ತತ್ತ್ವಗಳನ್ನು ಹೇಳುತ್ತಿದ್ದರೆ ಸರ್ವದಾ ಕೇಳುತ್ತಲೇ ಇರಬೇಕೆನ್ನಿಸುತ್ತದೆ. 'ಸಾಕು'-ಎನ್ನಿಸುವುದೇ ಇಲ್ಲ. ಯಾವ ರೀತಿಯಲ್ಲಿ ಆತ್ಮದರ್ಶನದಲ್ಲಿಯೇ ನಿಮಗ್ನನಾದ ಯೋಗಿಯು ಪರಮಾನಂದದಿಂದ ತೃಪ್ತನಾಗುವನೋ-ಅದೇ ರೀತಿಯಲ್ಲಿ ನಾನೂ ನಿನ್ನ ಪ್ರವಚನದಿಂದ ತೃಪ್ತನಾಗಿದ್ದೇನೆ.

ತಸ್ಮಾತ್ಕಥಯ ಭೂಯಸ್ತ್ವಂ ಧರ್ಮಮೇವ ಪಿತಾಮಹ ।
ನ ಹಿ ತೃಪ್ತಿಮಹಂ ಯಾಮಿ ಪಿಬನ್ಧರ್ಮಾಮೃತಂ ಹಿ ತೇ ॥೨॥

ಪಿತಾಮಹನೇ! ಆದುದರಿಂದ ಪುನಃ ನೀನು ಧರ್ಮದ ವಿಷಯವನ್ನೇ ಹೇಳು. ನಿನ್ನ ಧರ್ಮೋಪದೇಶರೂಪವಾದ ಅಮೃತವನ್ನು ಪಾನಮಾಡುತ್ತಿದ್ದಂತೆಲ್ಲಾ ಮತ್ತೂ ಪಾನಮಾಡಬೇಕೆಂಬ ಅಭಿಲಾಷೆಯುಂಟಾಗುವುದೇ ಹೊರತು ಎಷ್ಟು ಕೇಳಿದರೂ ತೃಪ್ತಿಯೇ ಉಂಟಾಗುತ್ತಿಲ್ಲ. ಆದುದರಿಂದ ಅಮೃತಕ್ಕೆ ಸಮಾನವಾದ ಧರ್ಮಪ್ರವಚನವನ್ನು ಮುಂದುವರಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಮಹಾತ್ಮನಾದ ಯಮನಿಗೂ ಮತ್ತು ಗೌತಮನಿಗೂ ಹಿಂದೆ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಪಾರಿಯಾತ್ರವೆಂಬ ಪರ್ವತದ ಮೇಲೆ ಮಹರ್ಷಿಗಳಾದ ಗೌತಮರ ದೊಡ್ಡ ಆಶ್ರಮವಿದೆ. ಆ ಆಶ್ರಮದಲ್ಲಿ ಗೌತಮರು ಎಷ್ಟು ಕಾಲದವರೆಗೆ ತಪಸ್ಸುಮಾಡಿಕೊಂಡು ಇದ್ದರೆಂಬುದನ್ನಾ

ದರೂ ಕೇಳು. ಗೌತಮರು ಆ ಪರ್ವತದಲ್ಲಿದ್ದ ಆಶ್ರಮದಲ್ಲಿ ಅರುವತ್ತು ಸಾವಿರ ವರ್ಷಗಳ ಪರ್ಯಂತವಾಗಿ ತಪಸ್ಸು ಮಾಡಿಕೊಂಡಿದ್ದರು. ಒಮ್ಮೆ ಲೋಕಪಾಲನಾದ ಯಮನು ಉಗ್ರವಾದ ತಪಸ್ಸಿನಲ್ಲಿ ನಿರತರಾಗಿದ್ದ, ಮಹಾತ್ಮರಾದ ಗೌತಮರ ಆಶ್ರಮದ ಸಮೀಪಕ್ಕೆ ಬಂದು ಉತ್ತಮ ತಪಸ್ವಿಗಳಾದ ಮಹರ್ಷಿಗಳನ್ನು ನೋಡಿದನು. ಬ್ರಹ್ಮರ್ಷಿಗಳಾದ ಗೌತಮರು, ಬಂದಿರುವವನು ಯಮನೆಂಬುದನ್ನು ಅವನ ತೇಜಸ್ಸಿನಿಂದಲೇ ತಿಳಿದುಕೊಂಡರು. ತಪೋಧನರು ಬದ್ಧಾಂಜಲಿಗಳಾಗಿ ವಿನೀತರಾಗಿ ಯಮನ ಸಮೀಪದಲ್ಲಿ ಕುಳಿತುಕೊಂಡರು. ಧರ್ಮರಾಜನು ಗೌತಮರನ್ನು ಯಥಾಯೋಗ್ಯವಾಗಿ ಸತ್ಕರಿಸಿ 'ನಾನು ತಮಗೆ ಏನು ಮಾಡಿಕೊಡಲಿ?'–ಎಂದು ಪ್ರಶ್ನಿಸಿದನು. ಅನಂತರ ಧರ್ಮಸಂಬಂಧವಾದ ಪ್ರಶ್ನೆಗಳಿಗೆ ಉತ್ತರಿಸಲು ಸಮ್ಮತಿಸಿದನು. ಗೌತಮರು ಪ್ರಶ್ನಿಸಿದರು :

ಮಾತಾಪಿತೃಭ್ಯಾಮಾನೃಣ್ಯಂ ಕಿಂ ಕೃತ್ವಾ ಶಮವಾಪ್ನುಯಾತ್ ।
ಕಥಂ ಚ ಲೋಕಾನಾಪ್ನೋತಿ ಪುರುಷೋ ದುರ್ಲಭಾಞ್ಶುಚೀನ್ ॥

"ಧರ್ಮರಾಜ! ಮನುಷ್ಯನು ಯಾವ ವಿಧವಾದ ಕರ್ಮಗಳನ್ನು ಮಾಡುವುದರಿಂದ ತಾಯಿ-ತಂದೆಗಳ ಋಣದಿಂದ ಮುಕ್ತನಾಗುತ್ತಾನೆ? ಪುರುಷನು ಹೇಗೆ ದುರ್ಲಭವಾದ ಮತ್ತು ಪವಿತ್ರವಾದ ಲೋಕಗಳನ್ನು ಹೊಂದುತ್ತಾನೆ?"

ಯಮನು ಹೇಳುತ್ತಾನೆ :

ತಪಃಶೌಚವತಾ ನಿತ್ಯಂ ಸತ್ಯಧರ್ಮರತೇನ ಚ ।
ಮಾತಾಪಿತ್ರೋರಹರಹಃ ಪೂಜನಂ ಕಾರ್ಯಮಞ್ಜಸಾ ॥೧೦॥

"ಗೌತಮರೇ! ಮನುಷ್ಯನು ತಪಸ್ಸನ್ನು ಮಾಡಬೇಕು. ಬಹಿರಂತಃಶುದ್ಧಿಯುಳ್ಳವನಾಗಿರಬೇಕು. ಸತ್ಯಭಾಷಣರೂಪವಾದ ಧರ್ಮದಲ್ಲಿ ನಿರತನಾಗಿರಬೇಕು. ಇವುಗಳೆಲ್ಲವನ್ನೂ ಆಚರಿಸುತ್ತಾ ನಿತ್ಯವೂ ಮಾತಾ-ಪಿತೃಗಳ ಶುಶ್ರೂಷೆಯನ್ನು ಮಾಡುತ್ತಿರಬೇಕು.

ಅಶ್ವಮೇಧೈಶ್ಚ ಯಷ್ಟವ್ಯಂ ಬಹುಭಿಃ ಸ್ವಾಪ್ತದಕ್ಷಿಣೈಃ ।
ತೇನ ಲೋಕಾನವಾಪ್ನೋತಿ ಪುರುಷೋಽದ್ಭುತದರ್ಶನಾನ್ ॥೧೧॥

ರಾಜನಾದವನು ಪರ್ಯಾಪ್ತವಾದ ದಕ್ಷಿಣೆಗಳಿಂದ ಕೂಡಿರುವ

ಹಲವಾರು ಅಶ್ವಮೇಧಯಾಗಗಳಿಂದ ದೇವತೆಗಳನ್ನು ಸಂತುಷ್ಟಿಗೊಳಿಸಬೇಕು. ಹೀಗೆ ಮಾಡುವುದರಿಂದ ಪುರುಷನು ಅದ್ಭುತ ದೃಶ್ಯಗಳಿಂದ ಸಂಪನ್ನವಾದ ಪುಣ್ಯಲೋಕಗಳನ್ನು ಹೊಂದುತ್ತಾನೆ."

೧೨೯ನೆಯ ಅಧ್ಯಾಯವು ಮುಗಿಯಿತು.

೧೩೦ನೆಯ ಅಧ್ಯಾಯ ರಾಜಧರ್ಮಾನುಶಾಸನಪರ್ವ (ಮುಂದುವರಿದಿದೆ.)

ಆಪತ್ಕಾಲದಲ್ಲಿ ರಾಜನು ಅನುಸರಿಸಬೇಕಾದ ಧರ್ಮ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಮಿತ್ರೈಃ ಪ್ರಹೀಯಮಾಣಸ್ಯ ಬಹ್ವಮಿತ್ರಸ್ಯ ಕಾ ಗತಿಃ ।
ರಾಜ್ಞಃ ಸಂಕ್ಷೀಣಕೋಶಸ್ಯ ಬಲಹೀನಸ್ಯ ಭಾರತ ॥೧॥

"ಪಿತಾಮಹ! ರಾಜನಿಗೆ ಶತ್ರುಗಳು ಅಧಿಕವಾಗಿದ್ದರೆ–ಮಿತ್ರರು ಅವನ ಸಂಗವನ್ನು ಬಿಟ್ಟುಹೋಗುತ್ತಿದ್ದರೆ–ಅವನ ಬೊಕ್ಕಸವು ಕ್ಷೀಣಿಸಿದರೆ–ಅವನು ಸೈನ್ಯದಿಂದಲೂ ಹೀನನಾಗಿದ್ದರೆ–ಅಂತಹ ರಾಜನ ಗತಿಯೇನು? ಅಂತಹ ರಾಜನು ಏನು ಮಾಡಬೇಕು?

ದುಷ್ಟಾಮಾತ್ಯಸಹಾಯಸ್ಯ ಚ್ಯುತಮನ್ತ್ರಸ್ಯ ಸರ್ವತಃ ।
ರಾಜ್ಯಾತ್ಪ್ರಚ್ಯವಮಾನಸ್ಯ ಗತಿಮಗ್ರ್ಯಾಮಪಶ್ಯತಃ ॥೨॥

ದುಷ್ಟರಾದ ಮಂತ್ರಿಗಳು ಯಾವನಿಗೆ ಸಹಾಯಕರಾಗಿರುವರೋ, ದುಷ್ಟರಾದ ಮಂತ್ರಿಗಳಿರುವುದರಿಂದಲೇ ಯಾವನು ಎಲ್ಲ ವಿಧವಾದ ಮಂತ್ರಾಲೋಚನೆಗಳಿಂದಲೂ ಚ್ಯುತನಾಗಿರುವನೋ, ಸರಿಯಾದ ಮಂತ್ರಾಲೋಚನೆಯಿಲ್ಲದಿರುವುದರಿಂದ ಯಾವನು ರಾಜ್ಯದಿಂದಲೇ ಭ್ರಷ್ಟನಾಗಲಿರುವನೋ, ತನ್ನ ಔನ್ನತ್ಯಕ್ಕಾಗಿ ಬೇರೆ ಯಾವ ಉಪಾಯವನ್ನೂ ಕಂಡುಕೊಳ್ಳುವುದಿಲ್ಲವೋ–ಅಂತಹ ರಾಜನು ಏನು ಮಾಡಬೇಕು? ಅಂತಹ ಸಂದರ್ಭದಲ್ಲಿ ಅವನ ಕರ್ತವ್ಯವೇನು?

ಪರಚಕ್ರಾಭಿಯಾತಸ್ಯ ಪರರಾಷ್ಟ್ರಾಣಿ ಮೃದ್ನತಃ ।
ವಿಗ್ರಹೇ ವರ್ತಮಾನಸ್ಯ ದುರ್ಬಲಸ್ಯ ಬಲೀಯಸಾ ॥೩॥

ರಾಜನು ಶತ್ರುಗಳ ಸೈನ್ಯವನ್ನು ಆಕ್ರಮಿಸಿ ಶತ್ರುಗಳ ರಾಜ್ಯಗಳನ್ನು ಧ್ವಂಸಮಾಡುತ್ತಿರುತ್ತಾನೆ. ಅದೇ ಸಮಯದಲ್ಲಿ ಬಲಿಷ್ಠನಾದ

ರಾಜನೊಬ್ಬನು ಯುದ್ಧದಲ್ಲಿ ತೊಡಗಿರುವ ಆ ರಾಜನ ಮೇಲೆ ಆಕ್ರಮಣ ನಡೆಸುತ್ತಾನೆ. ಆ ಸಮಯದಲ್ಲಿ ದುರ್ಬಲನಾಗಿರುವ ರಾಜನು ಏನು ಮಾಡಬೇಕು? ಯಾರನ್ನು ಆಶ್ರಯಿಸಬೇಕು?

ಅಸಂವಿಹಿತರಾಷ್ಟ್ರಸ್ಯ ದೇಶಕಾಲಾವಜಾನತಃ ।
ಅಪ್ರಾಪ್ಯಂ ಚ ಭವೇತ್ಸಾನ್ತ್ವಂ ಭೇದೋ ವಾಪ್ಯತಿಪೀಡನಾತ್ ।
ಜೀವಿತಂ ತ್ವರ್ಥಹೇತುರ್ವಾ ತತ್ರ ಕಿಂ ಸುಕೃತಂ ಭವೇತ್ ॥೪॥

ಯಾವನು ತನ್ನ ರಾಜ್ಯದ ರಕ್ಷಣೆಯನ್ನೇ ಮಾಡಲಾರನೋ, ದೇಶ-ಕಾಲಗಳನ್ನು ಯಾವನು ತಿಳಿದುಕೊಂಡಿಲ್ಲವೋ–ಅಂತಹವನಿಗೆ ಸಾಮೋಪಾಯವು ಸಿದ್ಧಿಸಲಾರದು. ತನಗೇ ಅತಿಪೀಡೆಯಾಗುವುದರಿಂದ ಭೇದ ನೀತಿಯೂ ಪ್ರಯೋಜನವಾಗುವುದಿಲ್ಲ. ಆ ಸಮಯದಲ್ಲಿ ರಾಜನು ಏನು ಮಾಡಬೇಕು? ಜೀವನದ ರಕ್ಷಣೆಯನ್ನು ಮಾಡಿಕೊಳ್ಳಬೇಕೇ? ಅರ್ಥ ಸಾಧನೆಗಾಗಿ ಪ್ರಯತ್ನಿಸಬೇಕೇ? ಯಾವುದನ್ನು ಮಾಡುವುದರಿಂದ ಅವನಿಗೆ ಒಳ್ಳೆಯದಾಗುತ್ತದೆ?–ಈ ಎಲ್ಲ ವಿಷಯಗಳನ್ನೂ ನನಗೆ ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

"ಭರತಶ್ರೇಷ್ಠನೇ! ಯುಧಿಷ್ಠಿರ! ನೀನು ಅತ್ಯಂತರಹಸ್ಯವಾದ ವಿಷಯವನ್ನೇ ಕೇಳಿರುವೆ. ನೀನು ಈ ಪ್ರಶ್ನೆಯನ್ನು ಕೇಳಿರದಿದ್ದರೆ ಈ ಆಪದ್ಧರ್ಮವನ್ನು ನಾನು ಹೇಳುತ್ತಿರಲಿಲ್ಲ.

ಧರ್ಮೋ ಹ್ಯಣೀಯಾನ್ವಚನಾದ್ಬುದ್ಧೇಶ್ಚ ಭರತರ್ಷಭ ।
ಶ್ರುತ್ವೋಪಾಸ್ಯ ಸದಾಚಾರೈಃ ಸಾಧುರ್ಭವತಿ ಸ ಕ್ವಚಿತ್ ॥೬॥

ಭಾರತನೇ! ಧರ್ಮವು ಅತಿಸೂಕ್ಷ್ಮವಾದುದು. ಶಾಸ್ತ್ರವಚನಗಳನ್ನು ಮನನಮಾಡುವುದರಿಂದಲೂ ಬುದ್ಧಿಯಿಂದಲೂ ಧರ್ಮದ ರಹಸ್ಯವು ತಿಳಿಯುತ್ತದೆ. ಶಾಸ್ತ್ರಗಳನ್ನು ಕೇಳಿ ಸದಾಚಾರಗಳಿಂದ ಯುಕ್ತನಾಗಿ ಧರ್ಮವನ್ನು ಉಪಾಸನೆ ಮಾಡುವವನು ಸಾಧುವಾಗುತ್ತಾನೆ. ಆದರೆ ಅಂತಹ ಪುರುಷರು ಅತಿವಿರಳ.

ಕರ್ಮಣಾ ಬುದ್ಧಿಪೂರ್ವೇಣ ಭವತ್ಯಾಢ್ಯೋ ನ ವಾ ಪುನಃ ।
ತಾದೃಶೋಽಯಮನುಪ್ರಶ್ನಃ ಸಂವ್ಯವಸ್ಯಃ ಸ್ವಯಾ ಧಿಯಾ ॥೭॥

ಬುದ್ಧಿಪೂರ್ವಕವಾಗಿ ಕರ್ಮಮಾಡುವುದರಿಂದ ಮನುಷ್ಯನು ಧನಾಢ್ಯನೂ ಆಗಬಹುದು ; ಆಗದೆಯೂ ಇರಬಹುದು. ನೀನು ಕೇಳಿರುವ ಪ್ರಶ್ನೆಯು ಅಂತಹುದಾಗಿದೆ. ನೀನೇ ಈ ವಿಷಯವನ್ನು ಬುದ್ಧಿಯಿಂದ ಚೆನ್ನಾಗಿ ವಿಚಾರಮಾಡಿ ಒಂದು ನಿಶ್ಚಯಕ್ಕೆ ಬರಬಹುದಾಗಿದೆ.

ಉಪಾಯಂ ಧರ್ಮಬಹುಲಂ ಯಾತ್ರಾರ್ಥಂ ಶೃಣು ಭಾರತ ।
ನಾಹಮೇತಾದೃಶಂ ಧರ್ಮಂ ಬುಭೂಷೇ ಧರ್ಮಕಾರಣಾತ್ ॥೮॥

ಆಪತ್ಕಾಲದ ಸಮಯದಲ್ಲಿ ರಾಜರ ಜೀವನದ ರಕ್ಷಣೆಯ ಸಲುವಾಗಿ ಮಾಡಬೇಕಾದ ಬಹುವಿಧವಾದ ಧರ್ಮಗಳಿಂದ ಕೂಡಿದ ಉಪಾಯವನ್ನು ಕೇಳು. ಆದರೆ ಧರ್ಮಾಚರಣೆಯ ಕಾರಣಕ್ಕಾಗಿ (ಸದ್ಧರ್ಮಕ್ಕೆ ವಿರುದ್ಧವಾಗಿರುವುದರಿಂದ) ನಾನು ಇಂತಹ ಧರ್ಮವನ್ನು ಆಚರಿಸಲು ಇಚ್ಛೆಪಡುವುದಿಲ್ಲ.

ದುಃಖಾದಾನ ಇಹ ಹ್ಯೇಷ ಸ್ಯಾತ್ತು ಪಶ್ಚಾತ್ಕ್ಷಯೋಪಮಃ ।
ಅಭಿಗಮ್ಯಮತೀನಾಂ ಹಿ ಸರ್ವಾಸಾಮೇವ ನಿಶ್ಚಯಃ ॥೯॥

ಆಪತ್ತಿನ ಸಮಯದಲ್ಲಿಯೂ ಪ್ರಜೆಗಳಿಗೆ ಕಷ್ಟವಾಗುವ ರೀತಿಯಲ್ಲಿ ತೆರಿಗೆಗಳನ್ನು ತೆಗೆದುಕೊಂಡರೆ ಅದು ರಾಜನ ವಿನಾಶಕ್ಕೇ ಕಾರಣವಾಗುತ್ತದೆ. (**ಪ್ರಜಾಪೀಡನಸಂತಾಪಾತ್ಸಮುದ್ಭೂತೋ ಹುತಾಶನಃ । ರಾಜ್ಞಃ ಪ್ರಾಣಾನ್ಬಲಂ ಕೋಶಂ ನಾದಗ್ಧ್ವಾ ವಿನಿವರ್ತತೇ ॥** ಪ್ರಜಾಪೀಡನ ಸಂತಾಪದಿಂದ ಹುಟ್ಟಿದ ಅಗ್ನಿಯು ರಾಜನ ಪ್ರಾಣಗಳನ್ನೂ, ಚತುರಂಗ ಬಲವನ್ನೂ, ಬೊಕ್ಕಸವನ್ನೂ ಸುಟ್ಟುಹಾಕದೇ ಹಿಂದಿರುಗುವುದಿಲ್ಲ.) ಆಶ್ರಯಿಸಲು ಯೋಗ್ಯವಾದ ಬುದ್ಧಿಯುಳ್ಳ ಎಲ್ಲ ಸತ್ಪುರುಷರ ನಿಶ್ಚಯವೂ ಇದೇ ಆಗಿರುತ್ತದೆ.

ಯಥಾ ಯಥಾ ಹಿ ಪುರುಷೋ ನಿತ್ಯಂ ಶಾಸ್ತ್ರಮವೇಕ್ಷತೇ ।
ತಥಾ ತಥಾ ವಿಜಾನಾತಿ ವಿಜ್ಞಾನಮಥ ರೋಚತೇ ॥೧೦॥

ಮನುಷ್ಯನು ಪ್ರತಿದಿನವೂ ಯಾವ ಯಾವ ರೀತಿಯಲ್ಲಿ ಶಾಸ್ತ್ರಗಳನ್ನು ಅಧ್ಯಯನಮಾಡುವನೋ–ಆಯಾಯಾ ರೀತಿಯಲ್ಲಿಯೇ ಅವನ ಜ್ಞಾನವೂ ವೃದ್ಧಿಹೊಂದುತ್ತಿರುತ್ತದೆ. ಮತ್ತೂ ವಿಶೇಷವಾದ ಜ್ಞಾನವನ್ನು ಸಂಪಾದಿಸಬೇಕೆಂಬ ಅಭಿರುಚಿಯೂ ಉಂಟಾಗುತ್ತದೆ.

ಅವಿಜ್ಞಾನಾದಯೋಗೋ ಹಿ ಪುರುಷಸ್ಯೋಪಜಾಯತೇ ।
ವಿಜ್ಞಾನಾದಪಿ ಯೋಗಶ್ಚ ಯೋಗೋ ಭೂತಿಕರಃ ಪರಃ ॥೧೧॥

ಶಾಸ್ತ್ರಜ್ಞಾನವಿಲ್ಲದಿರುವ ಮನುಷ್ಯನಿಗೆ ಆಪತ್ಕಾಲದಲ್ಲಿ ಆಪತ್ತಿನಿಂದ ಪಾರಾಗುವ ಉಪಾಯವೇ ಹೊಳೆಯುವುದಿಲ್ಲ. ಆದರೆ ಶಾಸ್ತ್ರಜ್ಞಾನವಿರುವವನಿಗೆ ಆಪತ್ಕಾಲದಲ್ಲಿ ಆಪತ್ತಿನಿಂದ ವಿಮುಕ್ತಿಹೊಂದುವ ಉಪಾಯವು ತಿಳಿಯುತ್ತದೆ. ಉಚಿತವಾದ ಉಪಾಯವೇ ಐಶ್ವರ್ಯದ ವೃದ್ಧಿಗೆ ಶ್ರೇಷ್ಠವಾದ ಸಾಧನವಾಗಿದೆ.

ಅಶಙ್ಕಮಾನೋ ವಚನಮನಸೂಯುರಿದಂ ಶೃಣು ।
ರಾಜ್ಞಃ ಕೋಶಕ್ಷಯಾದೇವ ಜಾಯತೇ ಬಲಸಂಕ್ಷಯಃ ॥೧೨॥

ನೀನು ನನ್ನ ಮಾತನ್ನು ಶಂಕಿಸದೇ ಅಸೂಯಾರಹಿತನಾಗಿ ಕೇಳು. ರಾಜನ ಬೊಕ್ಕಸವು ಕ್ಷಯಿಸುವುದರಿಂದಲೇ ಬಲವೂ ಕ್ಷಯಿಸುತ್ತದೆ.

ಕೋಶಂ ಚ ಜನಯೇದ್ರಾಜಾ ನಿರ್ಜಲೇಭ್ಯೋ ಯಥಾ ಜಲಮ್ ।
ಕಾಲಂ ಪ್ರಾಪ್ಯನುಗೃಹ್ಣೀಯಾದೇಷ ಧರ್ಮಃ ಸನಾತನಃ ।
ಉಪಾಯಧರ್ಮಂ ಪ್ರಾಪ್ಯೇಮಂ ಪೂರ್ವೈರಾಚರಿತಂ ಜನೈಃ ॥೧೩॥

ಜಲವಿಲ್ಲದ ಪ್ರದೇಶಗಳಲ್ಲಿ ಬಾವಿಯನ್ನಾದರೂ ತೋಡಿ ನೀರನ್ನು ಹೊರತೆಗೆಯುವಂತೆ–ಆಪತ್ಕಾಲದಲ್ಲಿ ರಾಜನು ಹೆಚ್ಚು ಧನವಂತರಲ್ಲದ ಪ್ರಜೆಗಳಿಂದಲೂ ಸಾಧ್ಯವಾದಷ್ಟು ಧನವನ್ನು ಸಂಗ್ರಹಿಸಿ ಬೊಕ್ಕಸವನ್ನು ತುಂಬಬೇಕು. ಒಳ್ಳೆಯ ಕಾಲವು ಬಂದಾಗ ಆ ಧನದಿಂದಲೇ ಪ್ರಜೆಗಳಿಗೆ ಬೇಕಾದುದನ್ನು ಮಾಡಿಕೊಟ್ಟು ಅನುಗ್ರಹಿಸಬೇಕು. ಇದೇ ಸನಾತನಧರ್ಮವಾಗಿದೆ. ಹಿಂದಿನ ರಾಜರೂ ಆಪತ್ಕಾಲದಲ್ಲಿ ಈ ಉಪಾಯಧರ್ಮವನ್ನೇ ಆಶ್ರಯಿಸಿ ರಾಜ್ಯಭಾರಮಾಡುತ್ತಿದ್ದರು.

ಅನ್ಯೋ ಧರ್ಮಃ ಸಮರ್ಥಾನಾಮಾಪತ್ಸ್ವನ್ಯಶ್ಚ ಭಾರತ ।
ಪ್ರಾಕ್ಕೋಶಾತ್ಪ್ರಾಪ್ಯತೇ ಧರ್ಮೋ ವೃತ್ತಿರ್ಧರ್ಮಾದ್ಗರೀಯಸೀ ॥೧೪॥

ಭಾರತನೇ! ಸಮರ್ಥಶಾಲಿಗಳಾದ ಮನುಷ್ಯರಿಗೇ ಒಂದು ಧರ್ಮವಿದೆ. ಆಪತ್ತಿನಲ್ಲಿರತಕ್ಕವರಿಗೇ ಮತ್ತೊಂದು ಧರ್ಮವಿದೆ. ಕೋಶಸಂಗ್ರಹವಾದ

ನಂತರ ಧರ್ಮಾಚರಣೆಯ ವಿಷಯವು ಬರುತ್ತದೆ. ಅರ್ಥವೇ ಇಲ್ಲದಿದ್ದರೆ ಧರ್ಮಾಚರಣೆಯು ಹೇಗೆ ಸಾಧ್ಯವಾಗುತ್ತದೆ? ಅದೂ ಅಲ್ಲದೇ ಜೀವನ ನಿರ್ವಹಣೆಗೆ ವ್ಯವಸ್ಥೆಮಾಡಿಕೊಳ್ಳುವುದೇ ಧರ್ಮಾಚರಣೆಗಿಂತಲೂ ಶ್ರೇಷ್ಠ ವಾದುದು.

ಧರ್ಮಂ ಪ್ರಾಪ್ಯ ನ್ಯಾಯವೃತ್ತಿಂ ನ ಬಲೀಯಾನ್ನ ವಿನ್ದತಿ ।
ಯಸ್ಮಾದ್ಬಲಸ್ಯೋಪಪತ್ತಿರೇಕಾನ್ತೇನ ನ ವಿದ್ಯತೇ ॥೧೫॥
ತಸ್ಮಾದಾಪತ್ಸ್ವಧರ್ಮೋಽಪಿ ಶ್ರೂಯತೇ ಧರ್ಮಲಕ್ಷಣಃ ।
ಅಧರ್ಮೋ ಜಾಯತೇ ತಸ್ಮಿನ್ನಿತಿ ವೈ ಕವಯೋ ವಿದುಃ ॥೧೬॥

ದುರ್ಬಲನಾದವನು ಧರ್ಮವನ್ನೇ ಅನುಸರಿಸಿದರೂ ನ್ಯಾಯೋಚಿತ ವಾದ ಜೀವನವನ್ನು ನಡೆಸಲು ಸಾಧ್ಯವಾಗುವುದಿಲ್ಲ. ಧರ್ಮಾಚರಣೆಯಿಂದ ಬಲವು ವರ್ಧಿಸುವುದೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಆಪ ತ್ಕಾಲದಲ್ಲಿ ಮಾಡುವ ಅಧರ್ಮವೂ ಧರ್ಮದ ಲಕ್ಷಣಗಳಿಂದ ಕೂಡಿರುತ್ತದೆ. ಸಾಮಾನ್ಯಸಂದರ್ಭಗಳಲ್ಲಿ ಧರ್ಮವಾಗಿರುವುದು ಆಪತ್ಕಾಲದಲ್ಲಿ ಅಧರ್ಮ ವಾಗುತ್ತದೆಯೆಂದು ವಿದ್ವಾಂಸರು ಹೇಳುತ್ತಾರೆ. (ಆಪತ್ಕಾಲದಲ್ಲಿ ಜನರನ್ನು ಪೀಡಿಸಿಯಾದರೂ ಧನಸಂಗ್ರಹವನ್ನು ಮಾಡಬೇಕು. ಜನರನ್ನು ಪೀಡಿಸು ವುದು ಸಾಮಾನ್ಯವಾಗಿ ಅಧರ್ಮವಾಗಿದ್ದರೂ ಆಪತ್ಕಾಲದಲ್ಲಿ ಹಾಗೆ ಮಾಡು ವುದು ಅಧರ್ಮವೆನಿಸುವುದಿಲ್ಲ. ಹಾಗೆ ಮಾಡದಿರುವುದೇ ಅಧರ್ಮವಾಗು ತ್ತದೆ.)

ಅನನ್ತರಂ ಕ್ಷತ್ರಿಯಸ್ಯ ತತ್ರ ಕಿಂ ವಿಚಿಕಿತ್ಸ್ಯತೇ ।
ಯಥಾಸ್ಯ ಧರ್ಮೋ ನ ಗ್ಲಾಯೇನ್ನೇಯಾಚ್ಛತ್ರುವಶಂ ಯಥಾ ।
ತತ್ಕರ್ತವ್ಯಮಿಹೇತ್ಯಾಹುರ್ನಾತ್ಮಾನಮವಸಾದಯೇತ್ ॥೧೭॥

ಆಪತ್ಕಾಲವು ಕಳೆದುಹೋದನಂತರ ಕ್ಷತ್ರಿಯನು ಏನು ಮಾಡ ಬೇಕು? ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೇ? ಮುಂದೆ ಪ್ರಜೆಗಳಿಂದ ಕರವನ್ನು ತೆಗೆದುಕೊಳ್ಳಬಾರದೇ?–ಈ ಸಂಶಯಗಳುಂಟಾಗುತ್ತವೆ. ಇದಕ್ಕೆ ಸಮಾಧಾನವನ್ನು ಹೀಗೆ ಹೇಳಬಹುದಾಗಿದೆ. ಆಪತ್ಕಾಲವು ಕಳೆದುಹೋದ ನಂತರ ಧರ್ಮಕ್ಕೆ ಹಾನಿಯಾಗದಂತೆ ರಾಜನು ವ್ಯವಹರಿಸಬೇಕು. ಪ್ರಾಯ ಶ್ಚಿತ್ತಾದಿಗಳನ್ನು ಮಾಡಿಕೊಳ್ಳಬೇಕು. ಯಜ್ಞ-ಯಾಗಾದಿಗಳನ್ನು ಮಾಡ

ಬೇಕು. ಶತ್ರುವಿಗೆ ಅಧೀನನಾಗಬಾರದು. (ಬೊಕ್ಕಸವನ್ನು ತುಂಬಿಸಿ ತನ್ಮೂಲಕವಾಗಿ ಸೈನ್ಯವನ್ನು ವೃದ್ಧಿಗೊಳಿಸಬೇಕು.) ಪುನಃ ತಾನು ಆಪತ್ತಿಗೆ ಸಿಕ್ಕಿಹಾಕಿಕೊಂಡು ನಾಶವಾಗದಂತೆ ಜಾಗರೂಕನಾಗಿರಬೇಕು. ಹೀಗೆ ಮಾಡುವುದು ರಾಜನ ಕರ್ತವ್ಯವಾಗಿರುವುದೆಂದು ವಿದ್ವಾಂಸರು ಹೇಳುತ್ತಾರೆ.

ಸರ್ವಾತ್ಮನೈವ ಧರ್ಮಸ್ಯ ನ ಪರಸ್ಯ ನ ಚಾತ್ಮನಃ ।
ಸರ್ವೋಪಾಯೈರುಜ್ಜಿಹೀರ್ಷೇದಾತ್ಮಾನಮಿತಿ ನಿಶ್ಚಯಃ ॥೧೮॥

ಆಪತ್ಕಾಲದಲ್ಲಿ ಮನುಷ್ಯನು ತನ್ನ ಅಥವಾ ಇತರರ ಧರ್ಮಾಚರಣೆಯ ಕಡೆಗೆ ಲಕ್ಷ್ಯಕೊಡಬಾರದು. ಸರ್ವೋಪಾಯಗಳಿಂದಲೂ ತನ್ನನ್ನು ಆಪತ್ತಿನಿಂದ ಬಿಡಿಸಿಕೊಳ್ಳಲು ತಾನೇ ಪ್ರಯತ್ನಿಸಬೇಕು. ಇದು ವಿದ್ವಾಂಸರ ನಿಶ್ಚಯವೂ–ಅಭಿಮತವೂ ಆಗಿದೆ.

ತತ್ರ ಧರ್ಮವಿದಾಂ ತಾತ ನಿಶ್ಚಯೋ ಧರ್ಮನೈಪುಣಮ್ ।
ಉದ್ಯಮೋ ನೈಪುಣಂ ಕ್ಷಾತ್ರೇ ಬಾಹುವೀರ್ಯಾದಿತಿ ಶ್ರುತಿಃ ॥೧೯॥

ಧರ್ಮವಿದರ ನಿಶ್ಚಯವು ಹೇಗೆ ಅವರ ಧರ್ಮವಿಷಯಕವಾದ ನೈಪುಣ್ಯವನ್ನು ಸೂಚಿಸುತ್ತದೆಯೋ–ಹಾಗೆಯೇ ಬಾಹುಬಲದಿಂದ ತನ್ನ ಔನ್ನತ್ಯಕ್ಕೆ ಕಾರ್ಯಮಾಡುವುದು ಕ್ಷತ್ರಿಯನ ನಿಪುಣತೆಯನ್ನು ಸೂಚಿಸುತ್ತದೆ ಯೆಂದು ಶ್ರುತಿಯು ಹೇಳುತ್ತದೆ.

ಕ್ಷತ್ರಿಯೋ ವೃತ್ತಿಸಂರೋಧೇ ಕಸ್ಯ ನಾದಾತುಮರ್ಹತಿ ।
ಅನ್ಯತ್ರ ತಾಪಸಸ್ವಾಚ್ಚ ಬ್ರಾಹ್ಮಣಸ್ವಾಚ್ಚ ಭಾರತ ॥೨೦॥

ಭಾರತ! ಕ್ಷತ್ರಿಯನ ಜೀವಿಕೆಗೇ ತೊಂದರೆಯುಂಟಾದರೆ ಬ್ರಾಹ್ಮಣರ ಮತ್ತು ತಪಸ್ವಿಗಳ ಸ್ವತ್ತನ್ನು ಬಿಟ್ಟು ಬೇರೆ ಯಾರಿಂದ ತಾನೇ ತೆಗೆದುಕೊಳ್ಳಲು ಯೋಗ್ಯನಾಗುವುದಿಲ್ಲ? ಬ್ರಾಹ್ಮಣರನ್ನೂ ತಪಸ್ವಿಗಳನ್ನೂ ಬಿಟ್ಟು ಉಳಿದ ಎಲ್ಲ ಜನರಿಂದಲೂ ರಾಜ್ಯನಿರ್ವಹಣೆಗಾಗಿ ಧನವನ್ನು ಸಂಗ್ರಹಿಸಲು ಕ್ಷತ್ರಿಯನು ಅರ್ಹನಾಗಿದ್ದಾನೆ.

ಯಥಾ ವೈ ಬ್ರಾಹ್ಮಣಃ ಸೀದನ್ನಯಾಜ್ಯಮಪಿ ಯಾಜಯೇತ್ ।
ಅಭೋಜ್ಯಾನ್ನಾನಿ ಚಾಶ್ನೀಯಾತ್ತಥೇದಂ ನಾತ್ರ ಸಂಶಯಃ ॥೨೧॥

ಬ್ರಾಹ್ಮಣನು ತನ್ನ ಜೀವಿಕೆಗೆ ಅಭಾವವುಂಟಾಗಿ, ತಾನು ಆಪತ್ತಿನಲ್ಲಿ ಸಿಕ್ಕಿಕೊಂಡಿರುವ ಸಮಯದಲ್ಲಿ–ಯಜ್ಞಮಾಡಲು ಅನಧಿಕಾರಿಗಳಾಗಿರುವವ

ರಿಂದಲೂ ಯಜ್ಞವನ್ನು ಮಾಡಿಸಬಹುದು. ಪ್ರಾಣವನ್ನುಳಿಸಿಕೊಳ್ಳಲು ಅಭೋಜ್ಯವಾದ ಅನ್ನವನ್ನಾದರೂ ತಿನ್ನಬಹುದು. ಹಾಗೆಯೇ ರಾಜನು ಆಪತ್ಕಾಲದಲ್ಲಿ ತಾಪಸರ ಮತ್ತು ಬ್ರಾಹ್ಮಣರ ಧನವನ್ನು ಬಿಟ್ಟು ಯಾರಿಂದ ಬೇಕಾದರೂ ಹೇಗೆ ಬೇಕಾದರೂ ಧನವನ್ನು ಸಂಗ್ರಹಿಸಬಹುದು. ಇದರಲ್ಲಿ ಸಂಶಯವೇ ಇಲ್ಲ.

ಪೀಡಿತಸ್ಯ ಕಿಮದ್ವಾರಮುತ್ಪಥೋ ವಿಧೃತಸ್ಯ ಚ ।
ಅದ್ವಾರತಃ ಪ್ರದ್ರವತಿ ಯದಾ ಭವತಿ ಪೀಡಿತಃ ॥೨೨॥

ಆಪದ್ಗ್ರಸ್ಥನಾದ ಮನುಷ್ಯನಿಗೆ ಹೋಗಬಾರದಾದ ಮಾರ್ಗವು ಯಾವುದು ತಾನೇ ಇರುತ್ತದೆ? ಅವನು ಯಾವ ಕಡೆಯಿಂದ ಓಡಿ ಹೋಗಲು ಸಾಧ್ಯವಾಗುವುದೋ ಅದೇ ಅವನಿಗೆ ದ್ವಾರವಾಗುತ್ತದೆ. ಬಂಧಿಸಲ್ಪಟ್ಟಿರುವವನಿಗೆ ನ್ಯಾಯವಲ್ಲದ ಮಾರ್ಗವೇ ಮಾರ್ಗವಾಗಿರುತ್ತದೆ. ಕುಮಾರ್ಗದಿಂದಲೇ ಅವನು ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಮನುಷ್ಯನು ಯಾವಾಗ ಆಪತ್ತಿನಲ್ಲಿ ಬಿದ್ದು ಪೀಡಿಸಲ್ಪಡುವನೋ– ಆಗ ಆ ಅದ್ವಾರದಿಂದಲೇ (ಅನ್ಯಾಯದ ಮಾರ್ಗದಿಂದಲೇ) ಓಡಿಹೋಗಲು (ಆಪತ್ತಿನಿಂದ ಬಿಡುಗಡೆಯನ್ನು ಹೊಂದಲು) ಪ್ರಯತ್ನಿಸುತ್ತಾನೆ.

ಯಸ್ಯ ಕೋಶಬಲಗ್ಲಾನ್ಯಾ ಸರ್ವಲೋಕಪರಾಭವಃ ।
ಭೈಕ್ಷ್ಯಚರ್ಯಾ ನ ವಿಹಿತಾ ನ ಚ ವಿಟ್ಶೂದ್ರಜೀವಿಕಾ ॥೨೩॥

ಕ್ಷತ್ರಿಯನ ಕೋಶಕ್ಕೂ ಮತ್ತು ಸೈನ್ಯಕ್ಕೂ ಗ್ಲಾನಿಯುಂಟಾಗಿ ದೇಶದ ಎಲ್ಲ ಜನರಿಗೂ ಪರಾಭವವುಂಟಾದಾಗ ಅಂತಹ ಕ್ಷತ್ರಿಯನು ಮೇಲೆ ಹೇಳಿದಂತೆ ಆಪದ್ಧರ್ಮವನ್ನೇ ಆಶ್ರಯಿಸಬೇಕು. ಕ್ಷತ್ರಿಯನಿಗೆ ಭಿಕ್ಷೆಮಾಡುವುದೂ ವಿಹಿತವಲ್ಲ. ವೈಶ್ಯ-ಶೂದ್ರರ ಧರ್ಮದಿಂದ ಜೀವಿಕೆಯನ್ನು ನಡೆಸುವುದೂ ವಿಹಿತವಲ್ಲ.

ಸ್ವಧರ್ಮಾನನ್ತರಾ ವೃತ್ತಿರ್ಜಾತ್ಮಾನನುಪಜೀವತಃ ।
ಜಹತಃ ಪ್ರಥಮಂ ಕಲ್ಪಮನುಕಲ್ಪೇನ ಜೀವನಮ್ ॥೨೪॥

ಆದರೆ ಸ್ವಧರ್ಮಾನುಸಾರವಾಗಿ ಜೀವನನಿರ್ವಹಣೆಯನ್ನು ಮಾಡಲು ಸಾಧ್ಯವಾಗದಿದ್ದರೆ ತನ್ನ ಜಾತಿಯವರನ್ನು ಆಶ್ರಯಿಸಲು ಸಾಧ್ಯವಿಲ್ಲದಿದ್ದರೆ– ಅಂತಹವನಿಗೆ ಸ್ವಧರ್ಮವಲ್ಲದ ವೃತ್ತಿಯಿಂದಾದರೂ ಜೀವನವನ್ನು ನಡೆಸ

ಬಹುದೆಂದು ಹೇಳಿದೆ. ಆಪತ್ಕಾಲದಲ್ಲಿ ಪ್ರಥಮಕಲ್ಪದ ಅರ್ಥಾತ್ ಸ್ವಧರ್ಮಾನುಕೂಲವಾದ ವೃತ್ತಿಯನ್ನು ತ್ಯಾಗಮಾಡಬೇಕಾದ ಸಂದರ್ಭದಲ್ಲಿ ಮನುಷ್ಯನಿಗೆ ತನಗಿಂತಲೂ ಕೆಳಗಿನ ವರ್ಣದವರ ವೃತ್ತಿಯನ್ನು ಅವಲಂಬಿಸಿ ಜೀವನವನ್ನು ನಡೆಸುವ ವಿಧಾನವೂ ವಿಹಿತವಾಗಿದೆ.

ಆಪದ್ಗತೇನ ಧರ್ಮಾಣಾಮನ್ಯಾಯೇನೋಪಜೀವನಮ್ ।
ಅಪಿ ಹ್ಯೇತದ್ಬ್ರಾಹ್ಮಣೇಷು ದೃಷ್ಟಂ ವೃತ್ತಿಪರಿಕ್ಷಯೇ ॥೨೫॥

ಆಪತ್ತಿನಲ್ಲಿ ಸಿಕ್ಕಿಹಾಕಿಕೊಂಡಿರುವವನು ಧರ್ಮಕ್ಕೆ ವಿಪರೀತವಾದ ರೀತಿಯಲ್ಲಿ ಜೀವನವನ್ನು ನಿರ್ವಹಿಸುತ್ತಾನೆ. ಧರ್ಮಾನುಸಾರವಾಗಿ ಜೀವನವನ್ನು ನಡೆಸಲು ಅವನಿಗೆ ಸಾಧ್ಯವಾಗುವುದಿಲ್ಲ. ಸ್ವವರ್ಣಾಶ್ರಮೋಕ್ತವಾದ ವೃತ್ತಿಯಿಂದ ಜೀವನನಿರ್ವಹಣೆಯು ಸಾಧ್ಯವಿಲ್ಲದಾಗ ಬ್ರಾಹ್ಮಣರಲ್ಲಿಯೂ ಈ ವಿಧವಾದ ವ್ಯವಹಾರವು ಕಂಡುಬಂದಿದೆ.

ಕ್ಷತ್ರಿಯೇ ಸಂಶಯಃ ಕಸ್ಮಾದಿತ್ಯೇವಂ ನಿಶ್ಚಿತಂ ಸದಾ ।
ಆದದೀತ ವಿಶಿಷ್ಟೇಭ್ಯೋ ನಾವಸೀದೇತ್ಕಥಂಚನ ॥೨೬॥

ಆಪತ್ಕಾಲದಲ್ಲಿ ಬ್ರಾಹ್ಮಣರೇ ಧರ್ಮಕ್ಕೆ ವಿರುದ್ಧವಾದ ಕಾರ್ಯಗಳನ್ನು ಮಾಡಬಹುದಾಗಿದ್ದರೆ–ಕ್ಷತ್ರಿಯರೂ ಧರ್ಮಕ್ಕೆ ವಿರೋಧವಾದ ಕಾರ್ಯಗಳನ್ನು ಮಾಡಬಹುದೆಂಬುದರಲ್ಲಿ ಸಂಶಯವೇಕೆ? ಆಪತ್ಕಾಲದಲ್ಲಿ ಕ್ಷತ್ರಿಯನು ಹೀಗೆಯೇ ನಡೆದುಕೊಳ್ಳಬೇಕೆಂದು ನಿಶ್ಚಿತವಾಗಿದೆ. ಧನವಂತರಿಂದ ಬಲಾತ್ಕಾರವಾಗಿಯೇ ಆದರೂ ಧನವನ್ನು ಸಂಗ್ರಹಿಸಬೇಕು. ಧನದ ಅಭಾವದಿಂದ ವಿನಾಶಹೊಂದಬಾರದು. (ರಾಜ್ಯವು ನಾಶವಾಗಲು ಅವಕಾಶವನ್ನೀಯಬಾರದು.)

ಹನ್ತಾರಂ ರಕ್ಷಿತಾರಂ ಚ ಪ್ರಜಾನಾಂ ಕ್ಷತ್ರಿಯಂ ವಿದುಃ ।
ತಸ್ಮಾತ್ಸಂರಕ್ಷತಾ ಕಾರ್ಯಮಾದಾನಂ ಕ್ಷತ್ರಬನ್ಧುನಾ ॥೨೭॥

ವಿದ್ವಾಂಸರು ಕ್ಷತ್ರಿಯನನ್ನು ಪ್ರಜೆಗಳ ರಕ್ಷಕನೆಂದೂ–ವಿನಾಶಕನೆಂದೂ ಹೇಳುತ್ತಾರೆ. (ಪ್ರಜೆಗಳನ್ನು ಕೊಲ್ಲುವವನೂ ಕಾಯುವವನೂ ಕ್ಷತ್ರಿಯನೇ.) ಆದುದರಿಂದ ಕ್ಷತ್ರಬಂಧುವು ಪ್ರಜೆಗಳನ್ನು ಸಂರಕ್ಷಿಸುತ್ತಿರುವಾಗಲೇ ಪ್ರಜೆಗಳಿಂದ ಧನವನ್ನು ಸಂಗ್ರಹಿಸಬೇಕು.

ಅನ್ಯತ್ರ ರಾಜನ್ಹಿಂಸಾಯಾ ವೃತ್ತಿರ್ನೇಹಾಸ್ತಿ ಕಸ್ಯಚಿತ್ ।
ಅಪ್ಯರಣ್ಯಸಮುತ್ಥಸ್ಯ ಏಕಸ್ಯ ಚರತೋ ಮುನೇಃ ॥೨೮॥

ಈ ಪ್ರಪಂಚದಲ್ಲಿ ಯಾರೊಬ್ಬರ ಜೀವನವೃತ್ತಿಯೂ ಹಿಂಸೆಯಿಂದ ರಹಿತವಾಗಿಲ್ಲ. ಅರಣ್ಯದಲ್ಲಿಯೇ ಇದ್ದುಕೊಂಡು ಏಕಾಕಿಯಾಗಿ ಸಂಚರಿಸುವ ಮುನಿಯ ವೃತ್ತಿಯೂ ಹಿಂಸೆಯಿಂದ ರಹಿತವಾಗಿರುವುದಿಲ್ಲವೆಂದ ಮೇಲೆ ಬೇರೆಯವರ ವಿಷಯದಲ್ಲಿ ಹೇಳುವುದೇನಿದೆ?

ನ ಶಙ್ಖಲಿಖಿತಾಂ ವೃತ್ತಿಂ ಶಕ್ಯಮಾಸ್ಥಾಯ ಜೀವಿತುಮ್ ।
ವಿಶೇಷತಃ ಕುರುಶ್ರೇಷ್ಠ ಪ್ರಜಾಪಾಲನಮೀಪ್ಸಯಾ ॥೨೯॥

ಕುರುಶ್ರೇಷ್ಠನೇ! ಹಣೆಯಲ್ಲಿ ಬರೆದಿದ್ದುದು ಆಗುತ್ತದೆಂಬ ಭಾವನೆಯನ್ನಿಟ್ಟುಕೊಂಡು ಜೀವನವನ್ನು ನಿರ್ವಹಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಪ್ರಜೆಗಳನ್ನು ಪಾಲನೆಮಾಡುವ ಇಚ್ಛೆಯುಳ್ಳ ರಾಜನು ಅದೃಷ್ಟವನ್ನೇ ನಿರೀಕ್ಷಿಸುತ್ತಾ ಜೀವನವನ್ನು ನಿರ್ವಹಿಸಲು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.

ಪರಸ್ಪರಂ ಹಿ ಸಂರಕ್ಷ್ಯಾ ರಾಜ್ಞಾ ರಾಷ್ಟ್ರೇಣ ಚಾಪದಿ ।
ನಿತ್ಯಮೇವ ಹಿ ಕರ್ತವ್ಯಾ ಏಷ ಧರ್ಮಃ ಸನಾತನಃ ॥೩೦॥

ಆಪತ್ಕಾಲದಲ್ಲಿ ರಾಜನೂ ಮತ್ತು ರಾಷ್ಟ್ರದ ಪ್ರಜೆಗಳೂ ಯಾವಾಗಲೂ ಪರಸ್ಪರವಾಗಿ ಒಬ್ಬರು ಮತ್ತೊಬ್ಬರ ರಕ್ಷಣೆಯನ್ನು ಮಾಡುತ್ತಲೇ ಇರಬೇಕು. ರಾಜನು ಪ್ರಜೆಗಳ ರಕ್ಷಣೆಯನ್ನು ಮಾಡಬೇಕು. ಪ್ರಜೆಗಳು ರಾಜನ ರಕ್ಷಣೆಯನ್ನು ಮಾಡಬೇಕು. ಇದೇ ಸನಾತನಧರ್ಮ.

ರಾಜಾ ರಾಷ್ಟ್ರಂ ಯಥಾಪತ್ಸು ದ್ರವ್ಯೌಘೈರಪಿ ರಕ್ಷತಿ ।
ರಾಷ್ಟ್ರೇಣ ರಾಜಾ ವ್ಯಸನೇ ರಕ್ಷಿತವ್ಯಸ್ತಥಾ ಭವೇತ್ ॥೩೧॥

ರಾಜನು ಯಾವ ರೀತಿಯಲ್ಲಿ ಪ್ರಜೆಗಳು ಸಂಕಟದಲ್ಲಿದ್ದಾಗ ರಾಶಿ-ರಾಶಿಯಾದ ಹಣವನ್ನಾದರೂ ವ್ಯಯಮಾಡಿ ರಕ್ಷಿಸುವನೋ–ಅದೇ ರೀತಿಯಲ್ಲಿ ಪ್ರಜೆಗಳೂ ರಾಜನು ಆಪತ್ತಿನಲ್ಲಿದ್ದಾಗ ಅವನನ್ನು ರಕ್ಷಿಸಬೇಕಾಗುತ್ತದೆ.

ಕೋಶಂ ದಣ್ಡಂ ಬಲಂ ಮಿತ್ರಂ ಯದನ್ಯದಪಿ ಸಂಚಿತಮ್ ।
ನ ಕುರ್ವೀತಾನ್ತರಂ ರಾಷ್ಟ್ರೇ ರಾಜಾ ಪರಿಗತಃ ಕ್ಷುಧಾ ॥೩೨॥

ರಾಜನು ಹಸಿವಿನಿಂದ ಪೀಡಿತನಾಗಿದ್ದರೂ ಜೀವನನಿರ್ವಹಣೆಗೆ ಕಷ್ಟಪಡುತ್ತಿದ್ದರೂ–ಬೊಕ್ಕಸ, ರಾಜದಂಡ, ಸೈನ್ಯ, ಮಿತ್ರರು, ಇನ್ನೂ ಇತರ ಸಂಗ್ರಹಿಸಿದ ವಸ್ತುಗಳು–ಇವುಗಳನ್ನು ಯಾವುದೇ ಕಾರಣದಿಂದಲೂ ದೂರ ಮಾಡಬಾರದು. (ಕ್ಷೀಣಿಸುವುದಕ್ಕೆ ಅವಕಾಶಕೊಡಬಾರದು.)

ಬೀಜಂ ಭಕ್ತೇನ ಸಮ್ಪಾದ್ಯಮಿತಿ ಧರ್ಮವಿದೋ ವಿದುಃ ।
ಅತ್ರೈತಚ್ಛಮ್ಬರಸ್ಯಾಹುರ್ಮಹಾಮಾಯಸ್ಯ ದರ್ಶನಮ್ ॥೩೩॥

ಮನುಷ್ಯನು ತಾನು ತಿನ್ನುವ ಧಾನ್ಯದಿಂದಲಾದರೂ ಬೀಜವನ್ನು ಉಳಿಸಿಕೊಳ್ಳಬೇಕೆಂಬುದು (ಉಪವಾಸವಿರಬೇಕಾಗಿ ಬಂದರೂ ಬೀಜಕ್ಕಾಗಿ ಇಟ್ಟ ಧಾನ್ಯವನ್ನು ಉಪಯೋಗಿಸಬಾರದೆಂಬುದು) ಧರ್ಮವನ್ನು ತಿಳಿದವರ ಅಭಿಪ್ರಾಯವಾಗಿದೆ. ಈ ವಿಷಯದಲ್ಲಿ ಮಹಾಮಾಯಾವಿಯಾದ ಶಂಬರಾಸುರನ ಅಭಿಪ್ರಾಯವನ್ನು ವಿದ್ವಾಂಸರು ಉದಾಹರಿಸುತ್ತಾರೆ :

ಧಿಕ್ತಸ್ಯ ಜೀವಿತಂ ರಾಜ್ಞೋ ರಾಷ್ಟ್ರಂ ಯಸ್ಯಾವಸೀದತಿ ।
ಅವೃತ್ತ್ಯಾನ್ಯಮನುಷ್ಯೋಽಪಿ ಯೋ ವೈದೇಶಿಕ ಇತ್ಯಪಿ ॥೩೪॥

'ಯಾವ ರಾಜನ ರಾಜ್ಯದ ಪ್ರಜೆಗಳೂ ಮತ್ತು ಅಲ್ಲಿಗೆ ಆಗಮಿಸಿರುವ ವಿದೇಶೀಯರೂ ಜೀವನನಿರ್ವಹಣೆಗೆ ಮಾರ್ಗವೇ ಇಲ್ಲದೇ ಕಷ್ಟಪಡುವರೋ–ಅಂತಹ ರಾಜನ ಜೀವನಕ್ಕೆ ಧಿಕ್ಕಾರವಿರಲಿ!'

ರಾಜ್ಞಃ ಕೋಶಬಲಂ ಮೂಲಂ ಕೋಶಮೂಲಂ ಪುನರ್ಬಲಮ್ ।
ತನ್ಮೂಲಂ ಸರ್ವಧರ್ಮಾಣಾಂ ಧರ್ಮಮೂಲಾಃ ಪುನಃ ಪ್ರಜಾಃ ॥೩೫॥

ರಾಜನಿಗೆ ಬೊಕ್ಕಸದ ಬಲವೇ ಮೂಲಭೂತವಾದ ಆಧಾರವಾಗಿದೆ. ಬೊಕ್ಕಸವು ಸೈನ್ಯಕ್ಕೆ ಮೂಲಭೂತವಾಗಿದೆ. ಆ ಸೈನ್ಯವೇ ಸರ್ವಧರ್ಮಗಳನ್ನೂ ರಕ್ಷಿಸಲು ಮೂಲಭೂತವಾಗಿದೆ. ಧರ್ಮವು ಪ್ರಜೆಗಳಿಗೆ ಮೂಲಭೂತವಾಗಿದೆ. (ವರ್ಣಾಶ್ರಮಧರ್ಮಗಳ ಪಾಲನೆಯೇ ಪ್ರಜೆಗಳ ಸುಖಕ್ಕೆ ಮೂಲವಾಗಿದೆ.) ಆದುದರಿಂದ ಸರ್ವಮೂಲವಾದ ಕೋಶವನ್ನು ಅಭಿವೃದ್ಧಿಗೊಳಿಸಬೇಕು.

ನಾನ್ಯಾನಪೀಡಯಿತ್ವೇಹ ಕೋಶಃ ಶಕ್ಯಃ ಕುತೋ ಬಲಮ್ ।
ತದರ್ಥಂ ಪೀಡಯಿತ್ವಾ ಚ ದೋಷಂ ಪ್ರಾಪ್ತುಂ ನ ಸೋಽರ್ಹತಿ ॥

ಇತರರನ್ನು ಪೀಡಿಸದೇ ಧನಸಂಗ್ರಹವು ಸಾಧ್ಯವಾಗುವುದಿಲ್ಲ. ಧನಸಂಗ್ರಹವಾಗದಿದ್ದರೆ ಸೈನ್ಯಸಂಗ್ರಹವು ಹೇಗೆ ತಾನೇ ಸಾಧ್ಯವಾಗುತ್ತದೆ? ಆದುದರಿಂದ ಆಪತ್ಕಾಲದಲ್ಲಿ ಧನಸಂಗ್ರಹಕ್ಕಾಗಿ ರಾಜನು ಪ್ರಜೆಗಳನ್ನು ಪೀಡಿಸಿದರೂ ಪ್ರಜಾಪೀಡನದೋಷಕ್ಕೆ ಭಾಗಿಯಾಗುವುದಿಲ್ಲ.

ಅಕಾರ್ಯಮಪಿ ಯಜ್ಞಾರ್ಥಂ ಕ್ರಿಯತೇ ಯಜ್ಞಕರ್ಮಸು ।
ಏತಸ್ಮಾತ್ಕಾರಣಾದ್ರಾಜಾ ನ ದೋಷಂ ಪ್ರಾಪ್ತುಮರ್ಹತಿ ॥೩೭॥

ಯಜ್ಞಕರ್ಮಗಳಲ್ಲಿ ಯಜ್ಞಸಿದ್ಧಿಗಾಗಿ ಯೋಗ್ಯವಲ್ಲದ ಕಾರ್ಯಗಳನ್ನೂ ಮಾಡಬೇಕಾಗುತ್ತದೆ. ಆದರೆ ಅದನ್ನು ದೋಷವೆಂದು ಯಾರೂ ಪರಿಗಣಿಸುವುದಿಲ್ಲ. ಯಜ್ಞದ ಸಿದ್ಧಿಗಾಗಿ ಅಕಾರ್ಯವನ್ನು ಮಾಡುವುದು ದೋಷವೂ ಆಗುವುದಿಲ್ಲ. ಹೀಗೆಯೇ ಆಪತ್ಕಾಲದಲ್ಲಿ ರಾಜನು ಪ್ರಜೆಗಳನ್ನು ಪೀಡಿಸಿದರೂ ಪ್ರಜಾಪೀಡನದೋಷಕ್ಕೆ ಭಾಗಿಯಾಗುವುದಿಲ್ಲ.

ಅರ್ಥಾರ್ಥಮನ್ಯದ್ಭವತಿ ವಿಪರೀತಮಥಾಪರಮ್ ।
ಅನರ್ಥಾರ್ಥಮಥಾಪ್ಯನ್ಯತ್ತತ್ಸರ್ವಂ ಹ್ಯರ್ಥಕಾರಣಮ್ ।
ಏವಂ ಬುದ್ಧ್ಯಾ ಸಮ್ಪ್ರಪಶ್ಯೇನ್ಮೇಧಾವೀ ಕಾರ್ಯನಿಶ್ಚಯಮ್ ॥೩೮॥

ಆಪತ್ಕಾಲದಲ್ಲಿ ಪ್ರಜಾಪೀಡನವು ಅರ್ಥಸಂಗ್ರಹರೂಪವಾದ ಪ್ರಯೋಜನಕ್ಕೇ ಸಾಧನವಾಗುವುದರಿಂದ ಅರ್ಥಕಾರಿಯಾಗುತ್ತದೆ. ಪ್ರಜೆಗಳನ್ನು ಪೀಡಿಸದೇ ಅರ್ಥಸಂಗ್ರಹಣವನ್ನು ಮಾಡದೇ ಇರುವುದು ರಾಜನಿಗೆ ಅನರ್ಥಕವಾಗುತ್ತದೆ. ಹೀಗೆಯೇ ಅನರ್ಥಕಾರಿಯಾಗಿ ಕಾಣುವ ಸೈನ್ಯ ಸಂಗ್ರಹಾದಿಗಳು ಯುದ್ಧವು ಸನ್ನಿಹಿತವಾದಾಗ ಅರ್ಥಕಾರಿಗಳಾಗುತ್ತವೆ. ವಿಜಯಕ್ಕೆ ಸಾಧಕಗಳಾಗುತ್ತವೆ. ಬುದ್ಧಿವಂತನಾದ ಮನುಷ್ಯನು ಈ ಪ್ರಕಾರ ವಾಗಿ ಬುದ್ಧಿಯಿಂದ ವಿಚಾರಮಾಡಿ ಮಾಡಬೇಕಾದ ಕರ್ತವ್ಯವನ್ನು ನಿಶ್ಚಯಿಸ ಬೇಕು.

ಯಜ್ಞಾರ್ಥಮನ್ಯದ್ಭವತಿ ಯಜ್ಞೋಽನ್ಯಾರ್ಥಸ್ತಥಾ ಪರಃ ।
ಯಜ್ಞಸ್ಯಾರ್ಥಾರ್ಥಮೇವಾನ್ಯತ್ತತ್ಸರ್ವಂ ಯಜ್ಞಸಾಧನಮ್ ॥೩೯॥

ಪಶುವೇ ಮುಂತಾದುವುಗಳು ಯಜ್ಞಾರ್ಥವಾಗಿ ಸಂಗ್ರಹಿಸಲ್ಪಡುತ್ತವೆ. ಯಜ್ಞವು ಚಿತ್ತಸಂಸ್ಕಾರಾರ್ಥರಾಗಿ ಮಾಡಲ್ಪಡುತ್ತದೆ. ಪಶ್ವಾದಿ

ಗಳು, ಯಜ್ಞ, ಸಂಸ್ಕಾರ–ಈ ಮೂರೂ ಅರ್ಥಾರ್ಥವಾಗಿ (ಮೋಕ್ಷಾರ್ಥವಾಗಿ) ಇರುತ್ತವೆ. (ಅಥವಾ ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಎಂದರೆ ಯಜ್ಞಕ್ಕಾಗಿ ಪಶುಗಳು, ಸಂಸ್ಕಾರಕ್ಕಾಗಿ ಯಜ್ಞ–ಹೀಗೆ) ಈ ಎಲ್ಲವೂ ಯಜ್ಞಕ್ಕೆ ಸಾಧನಭೂತಗಳಾಗಿವೆ. ಹೀಗೆಯೇ ದಂಡವು ಕೋಶಸಂಗ್ರಹಕ್ಕಾಗಿ, ಕೋಶವು ಬಲಸಂಗ್ರಹಕ್ಕಾಗಿ, ಸೈನ್ಯವು ಶತ್ರುಪರಾಭವಕ್ಕಾಗಿ, ಕೋಶ, ಬಲ, ಜಯ–ಈ ಮೂರೂ ರಾಷ್ಟ್ರದ ಪುಷ್ಟಿಗಾಗಿ ಇರುತ್ತವೆ.

ಯುಧಿಷ್ಠಿರ! ಧರ್ಮತತ್ತ್ವಪ್ರತಿಪಾದಕವಾದ ಉಪಮೆಯೊಂದನ್ನು ನಾನಿಲ್ಲಿ ಹೇಳುತ್ತೇನೆ. ಕೇಳು :

ಯೂಪಂ ಛಿನ್ದನ್ತಿ ಯಜ್ಞಾರ್ಥಂ ತತ್ರ ಯೇ ಪರಿಪನ್ಥಿನಃ ।
ದ್ರುಮಾಃ ಕೇಚನ ಸಾಮನ್ತಾ ಧ್ರುವಂ ಛಿನ್ದನ್ತಿ ತಾನಪಿ ।
ತೇ ಚಾಪಿ ನಿಪತನ್ತೋಽನ್ಯಾನ್ನಿಘ್ನನ್ತ್ಯೇವ ವನಸ್ಪತೀನ್ ॥೪೧॥

ಬ್ರಾಹ್ಮಣರು ಯಜ್ಞಕ್ಕೋಸ್ಕರ ಯೂಪವನ್ನು ನಿರ್ಮಾಣಮಾಡುವ ಉದ್ದೇಶದಿಂದ ವೃಕ್ಷವನ್ನು ಕಡಿಯುತ್ತಾರೆ. ಯೂಪಾರ್ಥವಾಗಿ ವೃಕ್ಷವನ್ನು ಕತ್ತರಿಸಿ ಹೊರತರುವಾಗ ಹಾದಿಯಲ್ಲಿ ಅಡ್ಡಬರುವ ವೃಕ್ಷಗಳನ್ನೆಲ್ಲಾ ಕತ್ತರಿಸುತ್ತಾರೆ. ಹಾಗೆ ಕತ್ತರಿಸಿದ ವೃಕ್ಷಗಳು ಕೆಳಕ್ಕೆ ಬೀಳುವಾಗ ಅಕ್ಕ-ಪಕ್ಕಗಳಲ್ಲಿರುವ ಅನೇಕವನಸ್ಪತಿಗಳೂ ಹಾಳಾಗುತ್ತವೆ.

ಏವಂ ಕೋಶಸ್ಯ ಮಹತೋ ಯೇ ನರಾಃ ಪರಿಪನ್ಥಿನಃ ।
ತಾನಹತ್ವಾ ನ ಪಶ್ಯಾಮಿ ಸಿದ್ಧಿಮತ್ರ ಪರಂತಪ ॥೪೨॥

ಪರಂತಪನೇ! ಅದೇ ರೀತಿಯಲ್ಲಿ ಪ್ರಜೆಗಳ ರಕ್ಷಣೆಗಾಗಿ ಮಾಡುವ ಮಹತ್ತಾದ ಕೋಶಸಂಗ್ರಹದಲ್ಲಿ ಯಾರು ತಡೆಯನ್ನು ಮಾಡುವರೋ–ಅವರನ್ನು ಸಂಹರಿಸದೇ (ಶಿಕ್ಷಿಸದೇ) ಕೋಶಸಂಗ್ರಹಕಾರ್ಯವು ಸಫಲವಾಗುವುದನ್ನು ನಾನೆಲ್ಲಿಯೂ ಕಂಡಿಲ್ಲ.

ಧನೇನ ಜಯತೇ ಲೋಕಾವುಭೌ ಪರಮಿಮಂ ತಥಾ ।
ಸತ್ಯಂ ಚ ಧರ್ಮವಚನಂ ಯಥಾ ನಾಸ್ತ್ಯಧನಸ್ತಥಾ ॥೪೩॥

ಧನದಿಂದ ಮನುಷ್ಯನು ಇಹಲೋಕ-ಪರಲೋಕಗಳೆರಡನ್ನೂ ಜಯಿಸು

ತ್ತಾನೆ. ಸತ್ಯಧರ್ಮಗಳನ್ನೂ ಸಾಧಿಸುತ್ತಾನೆ. ಆದರೆ ನಿರ್ಧನನು ಅವುಗಳನ್ನು ಸಾಧಿಸಲಾರನು. ನಿರ್ಧನನಾದವನಿಗೆ ಅಸ್ತಿತ್ವವೆಂಬುದೇ ಇರುವುದಿಲ್ಲ.

ಸರ್ವೋಪಾಯೈರಾದದೀತ ಧನಂ ಯಜ್ಞಪ್ರಯೋಜನಮ್ ।
ನ ತುಲ್ಯದೋಷಃ ಸ್ಯಾದೇವಂ ಕಾರ್ಯಾಕಾರ್ಯೇಷು ಭಾರತ ॥೪೪॥

ಯಜ್ಞವೇ ಪ್ರಯೋಜನವಾಗಿ ಉಳ್ಳ ಧನವನ್ನು ಸರ್ವೋಪಾಯಗಳಿಂದಲೂ ಸಂಗ್ರಹಿಸಬೇಕು. (ಧನವಿರುವುದು ಯಜ್ಞಕ್ಕಾಗಿಯೇ.) ಕಾರ್ಯ ಮತ್ತು ಅಕಾರ್ಯಗಳನ್ನು ಮಾಡುವಾಗ ದೋಷವು ಒಂದೇ ರೀತಿಯಲ್ಲಿರುವುದಿಲ್ಲ. ಆಪತ್ಕಾಲದಲ್ಲಿ ಪ್ರಜಾಪೀಡನವೆಂಬ ಅಕಾರ್ಯವನ್ನು ಮಾಡಿದರೂ ದೋಷವಿಲ್ಲ. ಆಪತ್ಕಾಲವಲ್ಲದ ಸಮಯದಲ್ಲಿ ಪ್ರಜಾಪೀಡನವು ಮಹಾದೋಷವಾಗುತ್ತದೆ. ಆಪತ್ಕಾಲದಲ್ಲಿ ತಾನು ಉಳಿದುಕೊಳ್ಳಲು ಯಾವುದಾದರೂ ಮಾರ್ಗದಿಂದ ಧನವನ್ನು ಸಂಗ್ರಹಿಸದಿರುವುದೇ ದೋಷವಾಗುತ್ತದೆ. ಆದುದರಿಂದ ಅಕಾರ್ಯದಿಂದ ದೋಷವುಂಟಾಗುವುದೆಂದಾಗಲೀ, ಒಳ್ಳೆಯ ಕಾರ್ಯದಿಂದ ದೋಷವುಂಟಾಗಲಾರದೆಂದಾಗಲೀ–ಭಾವಿಸಲು ಸಾಧ್ಯವಿಲ್ಲ. ಕಾರ್ಯಾಕಾರ್ಯಗಳು ಕಾಲ-ದೇಶಾನುಗುಣವಾಗಿಯೇ ಇರುತ್ತವೆ. (ಯಜ್ಞದಿಂದ ಮಳೆ ; ಮಳೆಯಿಂದ ಬೆಳೆ ; ಬೆಳೆಯಿಂದ ಪ್ರಜಾಕ್ಷೇಮ–ಈ ಗೀತಾವಾಕ್ಯವು ಇಲ್ಲಿ ಅನುಸಂಧೇಯ.)

ನೈತೌ ಸಮ್ಭವತೋ ರಾಜನ್ಕಥಂಚಿದಪಿ ಪಾರ್ಥಿವ ।
ನ ಹ್ಯರಣ್ಯೇಷು ಪಶ್ಯಾಮಿ ಧನವೃದ್ಧಾನಹಂ ಕ್ವಚಿತ್ ॥೪೫॥

ಮಹಾರಾಜ! ಧನಸಂಗ್ರಹ ಮತ್ತು ಧನದ ತ್ಯಾಗ–ಈ ಎರಡೂ ಒಂದೇ ವ್ಯಕ್ತಿಯಲ್ಲಿ ಒಟ್ಟಿಗೆ ಇರಲು ಸಾಧ್ಯವೇ ಆಗುವುದಿಲ್ಲ. ಅರಣ್ಯದಲ್ಲಿ ವಾಸಮಾಡುತ್ತಿರುವ ತ್ಯಾಗಿಗಳಾದ ಮಹಾತ್ಮರು ಧನವೃದ್ಧರಾಗಿರುವುದನ್ನು (ಧನಿಕರಾಗಿರುವುದನ್ನು) ನಾನು ಇದುವರೆಗೂ ಕಂಡಿಲ್ಲ.

ಯದಿದಂ ದೃಶ್ಯತೇ ವಿತ್ತಂ ಪೃಥಿವ್ಯಾಮಿಹ ಕಿಂಚನ ।
ಮಮೇದಂ ಸ್ಯಾನ್ಮಮೇದಂ ಸ್ಯಾದಿತ್ಯೇವಂ ಕಾಂಕ್ಷತೇ ಜನಃ ॥೪೬॥

ಈ ಪೃಥ್ವಿಯಲ್ಲಿ ಯಾವ ಅಲ್ಪ-ಸ್ವಲ್ಪ ಐಶ್ವರ್ಯವಿರುವುದೋ–ಅದನ್ನು ಜನರು 'ಈ ಐಶ್ವರ್ಯವು ನನ್ನದಾಗಲಿ ; ಈ ಐಶ್ವರ್ಯವು ನನ್ನದಾಗಲಿ'– ಎಂದೇ ಆಶೆಪಡುತ್ತಾರೆ.

ನ ಚ ರಾಜ್ಯಸಮೋ ಧರ್ಮಃ ಕಶ್ಚಿದಸ್ತಿ ಪರಂತಪ ।
ಧರ್ಮಃ ಸಂಶಬ್ದಿತೋ ರಾಜ್ಞಾಮಾಪದರ್ಥಮತೋಽನ್ಯಥಾ ॥೪೭॥

ಪರಂತಪನೇ! ರಾಜನಾದವನಿಗೆ ರಾಜ್ಯದ ರಕ್ಷಣೆಗೆ ಸಮಾನವಾದ ಬೇರೆ ಯಾವ ಧರ್ಮವೂ ಇರುವುದಿಲ್ಲ. ಈಗ ಪ್ರವಚನಮಾಡುತ್ತಿರುವ ಧರ್ಮವು ರಾಜರು ಆಪತ್ಕಾಲದಲ್ಲಿರುವಾಗ ಅನುಸರಿಸಬೇಕಾದ ಆಪದ್ಧರ್ಮವಾಗಿದೆ. ಸಾಮಾನ್ಯಕಾಲದಲ್ಲಿ ಅನುಸರಿಸುವ ಧರ್ಮವು ಇದಲ್ಲ.

ದಾನೇನ ಕರ್ಮಣಾ ಚಾನ್ಯೇ ತಪಸಾನ್ಯೇ ತಪಸ್ವಿನಃ ।
ಬುದ್ಧ್ಯಾ ದಾಕ್ಷ್ಯೇಣ ಚೈವಾನ್ಯೇ ವಿನ್ದನ್ತಿ ಧನಸಂಚಯಾನ್ ॥೪೮॥

ಕೆಲವರು ದಾನದಿಂದ, ಕೆಲವರು ಯಜ್ಞಕರ್ಮವನ್ನು ಮಾಡುವುದರಿಂದ, ತಪಸ್ವಿಗಳು ತಪಸ್ಸನ್ನು ಮಾಡುವುದರಿಂದ, ಕೆಲವರು ಬುದ್ಧಿಯಿಂದ, ಕೆಲವರು ಕಾರ್ಯಕೌಶಲದಿಂದ ಧನರಾಶಿಯನ್ನು ಹೊಂದುತ್ತಾರೆ.

ಅಧನಂ ದುರ್ಬಲಂ ಪ್ರಾಹುರ್ಧನೇನ ಬಲವಾನ್ಭವೇತ್ ।
ಸರ್ವಂ ಧನವತಾ ಪ್ರಾಪ್ಯಂ ಸರ್ವಂ ತರತಿ ಕೋಶವಾನ್ ॥೪೯॥

ನಿರ್ಧನನನ್ನು ದುರ್ಬಲನೆಂದು ಹೇಳುತ್ತಾರೆ. ಧನದಿಂದ ಮನುಷ್ಯನು ಬಲಿಷ್ಠನಾಗುತ್ತಾನೆ. ಧನವಂತರಿಗೆ ಸಕಲವೂ ಲಭಿಸುತ್ತದೆ. ಯಾವನ ಬಳಿಯಲ್ಲಿ ಸಮೃದ್ಧವಾದ ಐಶ್ವರ್ಯವಿರುವುದೋ–ಅವನು ಎಲ್ಲ ಕಷ್ಟಗಳಿಂದಲೂ ಪಾರಾಗುತ್ತಾನೆ.

ಕೋಶೇನ ಧರ್ಮಃ ಕಾಮಶ್ಚ ಪರಲೋಕಸ್ತಥಾ ಹ್ಯಯಮ್ ।
ತಂ ಚ ಧರ್ಮೇಣ ಲಿಪ್ಸೇತ ನಾಧರ್ಮೇಣ ಕದಾಚನ ॥೫೦॥

ಧನಸಂಚಯದಿಂದಲೇ ಧರ್ಮ-ಕಾಮಗಳು, ಇಹಲೋಕ-ಪರಲೋಕಗಳೂ ಸಿದ್ಧಿಸುತ್ತವೆ. ಆದರೆ ಧನವನ್ನು ಧರ್ಮದ ಮೂಲಕವಾಗಿಯೇ ಸಂಗ್ರಹಿಸಬೇಕು. ಯಾವುದೇ ಕಾರಣದಿಂದಲೂ ಅಧರ್ಮದಿಂದ ಧನವನ್ನು ಸಂಗ್ರಹಿಸಬಾರದು.”

೧೩೦ನೆಯ ಅಧ್ಯಾಯವು ಮುಗಿಯಿತು.

ರಾಜಧರ್ಮಾನುಶಾಸನಪರ್ವವು ಮುಗಿಯಿತು.

೨೨ನೆಯ ಸಂಪುಟವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ
ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ
ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು
ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು
ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು
ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಪರಿಶಿಷ್ಟ

(೨೧ನೆಯ ಸಂಪುಟದಿಂದ ಮುಂದುವರಿದುದು.)

೧೪ನೆಯ ಅಧ್ಯಾಯ :–ಮತ್ತೊಂದು ವಿಭಾಗದಲ್ಲಿ ಅರ್ಜುನನಿಗೂ ಅಶ್ವತ್ಥಾಮನಿಗೂ ನಡೆಯುತ್ತಿದ್ದ ಯುದ್ಧದ ವರ್ಣನೆಯು ಈ ಅಧ್ಯಾಯದಲ್ಲಿದೆ. ಅಶ್ವತ್ಥಾಮಾರ್ಜುನರಿಬ್ಬರೂ ಬಹಳ ಹೊತ್ತಿನವರೆಗೆ ಯುದ್ಧ ಮಾಡುತ್ತಾರೆ. ಅಶ್ವತ್ಥಾಮನು ಕುದುರೆಗಳಿಂದಲೂ ಮತ್ತು ಸೂತನಿಂದಲೂ ವಿಹೀನನಾಗುತ್ತಾನೆ. ಆದರೂ ಮುಸಲ, ಪರಿಘಗಳೇ ಮೊದಲಾದ ಆಯುಧಗಳಿಂದ ಯುದ್ಧವನ್ನು ಮುಂದುವರಿಸುತ್ತಲೇ ಇರುತ್ತಾನೆ. ಬಳಿಕ ಅಶ್ವತ್ಥಾಮನು ಸುರಥನೆಂಬುವನ ಮೇಲೆ ಯುದ್ಧಕ್ಕೆ ಹೋಗಿ ಅವನನ್ನು ಸಂಹರಿಸಿದನಂತರ ಅವನ ರಥದಲ್ಲಿಯೇ ಕುಳಿತು ಅರ್ಜುನನೊಡನೆ ಯುದ್ಧವನ್ನು ಮುಂದುವರಿಸುತ್ತಾನೆ. ಅರ್ಜುನನು ಎಲ್ಲರನ್ನೂ ಎದುರಿಸಿ ಅತುಲ ಪರಾಕ್ರಮದಿಂದ ಯುದ್ಧಮಾಡುತ್ತಿರುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೧೫ನೆಯ ಅಧ್ಯಾಯ :–ಮತ್ತೊಂದು ವಿಭಾಗದಲ್ಲಿ ಧೃಷ್ಟದ್ಯುಮ್ನ-ದುರ್ಯೋಧನರು ಯುದ್ಧಮಾಡುತ್ತಿರುತ್ತಾರೆ. ಮುಂದೆ ಶಲ್ಯನಿಗೂ–ಯುಧಿಷ್ಠಿರ, ಭೀಮ, ಸಾತ್ಯಕಿ, ನಕುಲ, ಸಹದೇವರುಗಳಿಗೂ ನಡೆದ ಯುದ್ಧದ ವರ್ಣನೆಯಿದೆ. ಶಲ್ಯನು ಎಲ್ಲರನ್ನೂ ಅತಿಶಯಿಸಿ ಯುದ್ಧಮಾಡುತ್ತಾನೆ. ಈ ಅಧ್ಯಾಯದಲ್ಲಿ ಅರ್ಜುನಾಶ್ವತ್ಥಾಮರ ಯುದ್ಧದ ಪ್ರಸ್ತಾಪವಿಲ್ಲದಿದ್ದರೂ ವಿಷಯಸೂಚಿಯಲ್ಲಿ 'ಅರ್ಜುನಾಶ್ವತ್ಥಾಮರಿಗೂ ದ್ವಂದ್ವಯುದ್ಧ' ಎಂದು ತಪ್ಪಾಗಿ ಬಂದಿರುತ್ತದೆ.

೧೬ನೆಯ ಅಧ್ಯಾಯ :–ಕೃಷ್ಣಾರ್ಜುನರ ಎದುರಿನಲ್ಲಿಯೇ ಪಾಂಡವ ಸೈನಿಕರು ಶಲ್ಯನೇ ಮೊದಲಾದ ಕೌರವರ ಪ್ರಹಾರವನ್ನು ತಡೆಯಲಾಗದೇ ಪಲಾಯನಮಾಡುತ್ತಾರೆ. ಕ್ರುದ್ಧನಾದ ಅರ್ಜುನನು ಕೃಪ-ಕೃತವರ್ಮರನ್ನೂ, ಸಹದೇವನು ಶಕುನಿಯನ್ನೂ, ಶಿಖಂಡಿಯು ಅಶ್ವತ್ಥಾಮನನ್ನೂ, ಭೀಮಸೇನನು ದುರ್ಯೋಧನನನ್ನೂ, ಯುಧಿಷ್ಠಿರನು ಶಲ್ಯನನ್ನೂ–ಎದುರಿಸಿ ಯುದ್ಧಮಾಡುತ್ತಾರೆ. ಶಲ್ಯನು ಮಹಾಸಾಹಸದಿಂದ ಯುದ್ಧಮಾಡುತ್ತಿರುತ್ತಾನೆ. ಶಲ್ಯನ ಪರಾಕ್ರಮವನ್ನು ಮುರಿಯಬೇಕೆಂದು ಸಂಕಲ್ಪಿಸಿದ

ಯುಧಿಷ್ಠಿರನು ನೂತನವ್ಯವಸ್ಥೆಯನ್ನೇ ಏರ್ಪಡಿಸುತ್ತಾನೆ. ನಕುಲ-ಸಹದೇವ-ಶೈನೇಯರು ಯುಧಿಷ್ಠಿರನ ರಥದ ಬಲಭಾಗದ ಚಕ್ರವನ್ನು ರಕ್ಷಿಸುತ್ತಾರೆ. ಧೃಷ್ಟದ್ಯುಮ್ನನು ಎಡಭಾಗದ ಚಕ್ರವನ್ನು ರಕ್ಷಿಸುತ್ತಾನೆ. ರಥದ ಹಿಂಭಾಗದಲ್ಲಿ ಅರ್ಜುನನೂ, ಬಲಭಾಗದಲ್ಲಿ ಭೀಮಸೇನನೂ ಇರುತ್ತಾರೆ. ಯುಧಿಷ್ಠಿರನು ಹೀಗೆ ವ್ಯವಸ್ಥೆಯನ್ನು ಮಾಡಿ, ನೂತನರಥದಲ್ಲಿ ಕುಳಿತು ಶಲ್ಯನೊಡನೆ ಯುದ್ಧದಲ್ಲಿ ತೊಡಗುತ್ತಾನೆ. ಮುಂದೆ ಹೋಗುತ್ತಿದ್ದ ಭೀಮಸೇನನನ್ನು ದುರ್ಯೋಧನನು ಎದುರಿಸಿ ಯುದ್ಧಮಾಡುತ್ತಾನೆ. ಭೀಮನ ಪ್ರಹಾರದಿಂದ ದುರ್ಯೋಧನನು ಮೂರ್ಛಿತನಾಗುತ್ತಾನೆ. ಮರುಕ್ಷಣದಲ್ಲಿಯೇ ಭೀಮನು ಸಾರಥಿಯನ್ನೂ ಸಂಹರಿಸುವುದರಿಂದ ಕುದುರೆಗಳು ಅಂಕೆಯೇ ಇಲ್ಲದೆ ಓಡಿಹೋಗುತ್ತವೆ. ಆ ಸಮಯದಲ್ಲಿ ಅಶ್ವತ್ಥಾಮ-ಕೃಪ-ಕೃತವರ್ಮರು ದುರ್ಯೋಧನನನ್ನು ರಕ್ಷಿಸುತ್ತಾರೆ. ಮುಂದೆ ಯುಧಿಷ್ಠಿರ-ಶಲ್ಯರ ಯುದ್ಧದ ವರ್ಣನೆಯಿದೆ. ಕಟ್ಟಕಡೆಗೆ ಯುಧಿಷ್ಠಿರನು ಶಲ್ಯನ ರಥದ ನಾಲ್ಕು ಕುದುರೆಗಳನ್ನೂ, ಪಾರ್ಶ್ವರಕ್ಷಕರನ್ನೂ, ಧ್ವಜವನ್ನೂ ಕತ್ತರಿಸುತ್ತಾನೆ. ಶಲ್ಯನು ಅಂತಹ ಸ್ಥಿತಿಯಲ್ಲಿದ್ದಾಗ ಅಶ್ವತ್ಥಾಮನು ಶಲ್ಯನನ್ನು ತನ್ನ ರಥದಲ್ಲಿಯೇ ಕುಳ್ಳಿರಿಸಿಕೊಂಡು ಹೊರಟು ಹೋಗುತ್ತಾನೆ. ಯುಧಿಷ್ಠಿರನು ಅವನನ್ನು ಹಿಂಬಾಲಿಸುತ್ತಾನೆ. ಸ್ವಲ್ಪಹೊತ್ತಿನಲ್ಲಿಯೇ ಶಲ್ಯನು ಬೇರೊಂದು ರಥದಲ್ಲಿ ಕುಳಿತು ಯುದ್ಧಸನ್ನದ್ಧನಾಗಿರುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೧೭ನೆಯ ಅಧ್ಯಾಯ :–ಈ ಅಧ್ಯಾಯವು ಶಲ್ಯ-ಯುಧಿಷ್ಠಿರರ ಯುದ್ಧದ ಅದ್ಭುತವರ್ಣನೆಯಿಂದ ಕೂಡಿದೆ. ಇಲ್ಲಿ ಕೆಲವು ವಿರೋಧಾಭಾಸಗಳೂ ಇವೆ. ೨೭ನೆಯ ಶ್ಲೋಕದಲ್ಲಿ ಭೀಮಸೇನನು ಶಲ್ಯನ ಸಾರಥಿಯನ್ನೂ–ಕುದುರೆಗಳನ್ನೂ ಸಂಹರಿಸಿದನು ಎಂದಿದೆ–'**ಕಾಯಾಚ್ಛಿರಃ ಜಘಾನ–ಚಾಶ್ವಾಂಶ್ಚತುರಃ**' (೨೬). ಆದರೆ ಮುಂದಿನ ಶ್ಲೋಕದಲ್ಲಿಯೇ '**ಏಕಂ ಚರನ್ತಂ ಸಮರೇಽತಿವೇಗಂ**–ಯುದ್ಧದಲ್ಲಿ ಅತಿವೇಗದಿಂದ ಸಂಚರಿಸುತ್ತಿದ್ದ ಏಕಾಕಿಯಾಗಿದ್ದ ಶಲ್ಯನನ್ನು'–ಎಂಬುದಾಗಿಯೂ ಇದೆ. ಸೂತಾಶ್ವಗಳನ್ನು ಕಳೆದುಕೊಂಡ ನಂತರ ಚಲಿಸುವುದು ಹೇಗೆ? ನೂತನರಥವನ್ನು ಪಡೆದುಕೊಂಡನೆಂಬುದಕ್ಕೆ ವಾಕ್ಯವಿಲ್ಲ. ರಥದಿಂದಿಳಿದು ಕತ್ತಿಯನ್ನು ಹಿಡಿದು

ಕೊಂಡು ಸಂಹರಿಸಲು ಪ್ರಾರಂಭಿಸಿದನೆಂದೂ ಈ ಮಧ್ಯದಲ್ಲಿ ಹೇಳಿಲ್ಲ. ಇದರ ಮುಂದಿನ ಶ್ಲೋಕದಲ್ಲಿ ಭೀಮಸೇನನು ಶಲ್ಯನ ಕವಚವನ್ನು ಕತ್ತರಿಸಿದನೆಂದು ಹೇಳಿದೆ. ೨೦ನೆಯ ಶ್ಲೋಕದಲ್ಲಿ ಯುಧಿಷ್ಠಿರನು ಶಲ್ಯನ ವಕ್ಷಃಸ್ಥಳವನ್ನೂ ಕವಚವನ್ನೂ ಭೇದಿಸಿದನೆಂದು ಹೇಳಿದೆ. **ಭಿತ್ತ್ವಾ ಹ್ಯುರಸ್ತಪನೀಯಂ ಚ ವರ್ಮ.** (೨೦). ೨೮ನೆಯ ಶ್ಲೋಕದಲ್ಲಿ ಯುದ್ಧ ಭೂಮಿಯ ಸುತ್ತಲೂ ಸಂಚರಿಸುತ್ತಿದ್ದನೆಂದು ಹೇಳಿ, ೨೯-೩೦ನೆಯ ಶ್ಲೋಕಗಳಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು ಶಲ್ಯನು ರಥದಿಂದ ಧುಮುಕಿದನೆಂದು ಹೇಳಿದೆ. **ಪ್ರಗೃಹ್ಯ ಖಡ್ಗಂ ಚ ರಥಾನ್ಮಹಾತ್ಮಾ ಪ್ರಸ್ಕನ್ದ್ಯ ಕುನ್ತೀಸುತಮಭ್ಯಧಾವತ್** (೩೦) ಮುಂದೆ ಭೀಮಸೇನನು ಶಲ್ಯನ ಕತ್ತಿ-ಗುರಾಣಿಗಳೆರಡನ್ನೂ ಕತ್ತರಿಸುತ್ತಾನೆ. **ಅಥಾಸ್ಯ ಚರ್ಮಾಪ್ರತಿಮಂ ನ್ಯಕೃನ್ತತ್-ಖಡ್ಗಂ ಚ ಭಲ್ಲೈರ್ನಿಚಕರ್ತ ಮುಷ್ಟೌ** (೩೨) ಈ ಸಂದರ್ಭದಲ್ಲಿ ಶಲ್ಯನಿಗೆ ರಥವಿಲ್ಲ; ಕತ್ತಿ-ಗುರಾಣಿಗಳೂ ಇಲ್ಲ; ಬರಿಗೈಯಲ್ಲಿದ್ದಾನೆ. ಇಂತಹವನು ಬರಿಗೈಯಿಂದಲೇ ಸಿಂಹದೋಪಾದಿಯಲ್ಲಿ ಯುಧಿಷ್ಠಿರನಿಗೆ ಅಭಿಮುಖವಾಗಿ ಹೋದನೆಂದು ೩೫ನೆಯ ಶ್ಲೋಕದಲ್ಲಿ ಹೇಳಿದೆ. ಹತಾಶ್ವ-ಸೂತನಾಗಿದ್ದ ಯುಧಿಷ್ಠಿರನೂ ಶಲ್ಯನನ್ನು ಆಕ್ರಮಿಸಿದನು ಎಂದು ಮುಂದಿನ ಶ್ಲೋಕದಲ್ಲಿ ಹೇಳಿದೆ. **ಸಮಭ್ಯಧಾವತ್ತಮರಿಂ ಬಲೇನ** (೩೬) **ಯುಧಿಷ್ಠಿರಸ್ಯಾಭಿಮುಖಂ ಜವೇನ । ಸಿಂಹೋ ಯಥಾ ಮೃಗ ಹೇತೋಃ ಪ್ರಯಾತಃ** (೩೫) ಯುಧಿಷ್ಠಿರನಿಂದ ಹತನಾಗಲೆಂದೇ ಹಾಗೆ ಹೋದನೇ? ಮುಂದಿನ ಶ್ಲೋಕಗಳಲ್ಲಿ ಶಕ್ತ್ಯಾಯುಧದ ವರ್ಣನೆ. ಯುಧಿಷ್ಠಿರನು ಶಕ್ತ್ಯಾಯುಧದಿಂದ ಶಲ್ಯನನ್ನು ಪ್ರಹರಿಸಿದ ಪ್ರಕರಣವು ಬರುತ್ತದೆ. ಈ ಸಂದರ್ಭದಲ್ಲಿ ಧರ್ಮರಾಜನೂ ಕುದುರೆಗಳನ್ನು ಕಳೆದುಕೊಂಡಿರುತ್ತಾನೆ. ಕುದುರೆಗಳನ್ನು ಕಳೆದುಕೊಂಡ ಯುಧಿಷ್ಠಿರನು–ನಿರಾಯುಧನಾಗಿದ್ದ, ರಥವೂ ಇಲ್ಲದಿದ್ದ ಶಲ್ಯನನ್ನು ಶಕ್ತ್ಯಾಯುಧದಿಂದ ಪ್ರಹರಿಸಿದನೆಂಬ ತಾತ್ಪರ್ಯವೂ ಇಲ್ಲಿ ಕಾಣುತ್ತದೆ. ಆದರೆ ೫೨ನೆಯ ಶ್ಲೋಕದಲ್ಲಿ ಶಲ್ಯನು ರಥದಿಂದ ಬಿದ್ದನೆಂಬ ವಾಕ್ಯವಿದೆ. **ಪ್ರಸಾರ್ಯ ಬಾಹೂ ಚ ರಥಾದ್ಗತೋ ಗಾಂ.** ಇದನ್ನು ಸಮನ್ವಯಿಸುವುದು ಕಷ್ಟವೇ ಸರಿ. ಎಲ್ಲ ಕಡೆಗಳಲ್ಲಿಯೂ ಕೆಲವು ಪದಗಳನ್ನು ಅಧ್ಯಾಹಾರಮಾಡಿಕೊಳ್ಳ

ಬೇಕಾಗುತ್ತದೆ. ಯುದ್ಧಪ್ರಕರಣಗಳಲ್ಲಿ ಸಾಮಾನ್ಯವಾಗಿ ವಿಷಯಗಳು ಯಥಾವತ್ತಾಗಿಯೇ ಇರುತ್ತವೆಯೇ ಹೊರತು ಅಧ್ಯಾಹಾರಮಾಡಿಕೊಳ್ಳ ಬೇಕಾದ ಪ್ರಸಂಗವೇ ಬರುವುದಿಲ್ಲ. ಆದುದರಿಂದ ಇಲ್ಲಿ ಕೆಲವು ಶ್ಲೋಕಗಳು ಹೆಚ್ಚು ಪಾಠವಿರಬಹುದೆಂಬುದನ್ನು ಊಹಿಸಬಹುದಾಗಿದೆ. ಶಲ್ಯನು ಭೀಮಾದಿಗಳೊಡನೆ ಯುದ್ಧದಲ್ಲಿ ತೊಡಗಿದ್ದಾಗ ಯುಧಿಷ್ಠಿರ ರಾಜನೂ ರಥವನ್ನು ಬದಲಾಯಿಸಿಕೊಳ್ಳದೇ ಸೂತಾಶ್ವರಿಂದ ವಿಹೀನವಾಗಿದ್ದ ರಥದಲ್ಲಿಯೇ ಇದ್ದನೆಂದು ಹೇಳುವುದಾಗಲೀ–ಊಹಿಸುವುದಾಗಲೀ ಸಮಂಜಸವಾಗಿ ಕಾಣುವುದಿಲ್ಲ. ಸೂತಾಶ್ವರನ್ನು ಕಳೆದುಕೊಂಡೊಡನೆಯೇ ಯುಧಿಷ್ಠಿರನು ಯುದ್ಧದಿಂದ ಹಿಂದಿರುಗಬೇಕು ಅಥವಾ ಬೇರೆ ಯಾವುದಾದರೂ ಆಯುಧವನ್ನು ಉಪಯೋಗಿಸಲೇಬೇಕು. ಇದು ಯುದ್ಧಧರ್ಮ. ಆದುದರಿಂದ ೩೫ನೆಯ ಶ್ಲೋಕದ ನಂತರ ೩೭ನೆಯ ಶ್ಲೋಕವು ಬರಬೇಕು. ೩೫ನೆಯ ಶ್ಲೋಕದ ತಾತ್ಪರ್ಯವು ಹೀಗಿದೆ. **ವಾಹಾಂಶ್ಚ ಹತ್ವಾ ವ್ಯಕರೋನ್ಮಹಾತ್ಮಾ ಯೋಧಕ್ಷಯಂ ಧರ್ಮಸುತಸ್ಯ ರಾಜ್ಞಃ**–ಮಹಾತ್ಮನಾದ ಶಲ್ಯನು ಯುಧಿಷ್ಠಿರನ ಕುದುರೆಗಳನ್ನು ಸಂಹರಿಸಿ ಅವನ ಕಡೆಯ ಯೋಧರನ್ನು ಸಂಹರಿಸಲು ಉಪಕ್ರಮಿಸಿದನು. ೩೭ನೆಯ ಶ್ಲೋಕವು ಹೀಗಿದೆ–**ಗೋವಿನ್ದವಾಕ್ಯಂ ತ್ವರಿತಂ ವಿಚಿನ್ತ್ಯ ದಧ್ರೇ ಮತಿಂ ಶಲ್ಯವಿನಾಶನಾಯ । ಸ ಧರ್ಮರಾಜೋ ನಿಹತಾಶ್ವ ಸೂತೋ ರಥೇ ತಿಷ್ಠನ್ ಶಕ್ತಿಮೇವಾಭ್ಯಕಾಂಕ್ಷತ್** (೩೭)

ಆ ಸಮಯದಲ್ಲಿ ಸೂತಾಶ್ವರಹಿತನಾಗಿದ್ದ ಧರ್ಮರಾಜನು, ಶ್ರೀಕೃಷ್ಣನು ಹೇಳಿದ್ದ ಮಾತನ್ನು ಸ್ಮರಣೆಗೆ ತಂದುಕೊಂಡು ಶಲ್ಯನ ವಿನಾಶಕ್ಕಾಗಿ ದೃಢನಿಶ್ಚಯವನ್ನು ಮಾಡಿದನು. ರಥದಲ್ಲಿ ನಿಂತಿದ್ದ ಧರ್ಮರಾಜನು ಶಲ್ಯನ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಿಸಲು ಇಚ್ಛಿಸುತ್ತಾನೆ. ಅಲ್ಲಿಂದ ಮುಂದಕ್ಕೆ ಕಥೆಯು ಸರ್ವಸಮಂಜಸವಾಗಿರುತ್ತದೆ. ಹನ್ನೊಂದು ಶ್ಲೋಕಗಳು ಹೆಚ್ಚು ಪಾಠವಿರಬಹುದೆಂಬ ಊಹೆಗೆ ಅವಕಾಶವಿದೆ. ಆದರೆ ಎಲ್ಲ ಪುಸ್ತಕಗಳಲ್ಲಿಯೂ ಈ ಶ್ಲೋಕಗಳಿವೆ. ಶಲ್ಯನನ್ನು ಸಂಹರಿಸಿದನಂತರ ಯುಧಿಷ್ಠಿರನು ಅವನ ತಮ್ಮನನ್ನೂ ಸಂಹರಿಸುತ್ತಾನೆ. ಸೇನಾಪತಿಯು ಹತನಾದೊಡನೆಯೇ ಕುರುಸೈನಿಕರು ಪಲಾಯನಮಾಡುತ್ತಾರೆ. ಸಾತ್ಯಕಿ

ಕೃತವರ್ಮರ ಯುದ್ಧವು ಪ್ರಾರಂಭವಾಗುತ್ತದೆ. ಸಾತ್ಯಕಿಯು ಕೃತವರ್ಮನ ಕುದುರೆಗಳನ್ನೂ ಪಾರ್ಶ್ವರಕ್ಷಕರನ್ನೂ ಸಂಹರಿಸುತ್ತಾನೆ. ರಥಹೀನನಾಗಿದ್ದ ಕೃತವರ್ಮನನ್ನು ಕೃಪರು ತಮ್ಮ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಾರೆ. ಬಳಿಕ ದುರ್ಯೋಧನನೇ ಪಾಂಡವರನ್ನೆದುರಿಸಿ ಯುದ್ಧಮಾಡುತ್ತಾನೆ. ಕೃತವರ್ಮನೂ ಯುದ್ಧಕ್ಕೆ ಹಿಂದಿರುಗುತ್ತಾನೆ. ಆದರೆ ಯುಧಿಷ್ಠಿರನು ಕ್ಷಣಮಾತ್ರದಲ್ಲಿ ಅವನ ಕುದುರೆಗಳನ್ನು ಸಂಹರಿಸುತ್ತಾನೆ. ಆ ಸಮಯದಲ್ಲಿ ಅಶ್ವತ್ಥಾಮನು ಕೃತವರ್ಮನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಾನೆ. ಕೃಪರು ಯುಧಿಷ್ಠಿರನನ್ನು ಗಾಯಗೊಳಿಸುತ್ತಾರೆ. ಒಟ್ಟಿನಲ್ಲಿ ಶಲ್ಯನ ವಧೆಯಿಂದಾಗಿ ಪಾಂಡವರು ವಿಜಯಗಳಿಸಿ ಜಯಘೋಷಗಳನ್ನು ಮಾಡುತ್ತಾರೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೧೮ನೆಯ ಅಧ್ಯಾಯ :–ಶಲ್ಯನು ನಿಧನಹೊಂದಿದೊಡನೆಯೇ ಅವನ ಅನುಯಾಯಿಗಳಾದ ಏಳು ನೂರು ಮಂದಿ ಯೋಧರು ದುರ್ಯೋಧನನ ಆಜ್ಞೆಯನ್ನು ಉಲ್ಲಂಘಿಸಿಯೇ ಪಾಂಡವರನ್ನು ಆಕ್ರಮಿಸುತ್ತಾರೆ. ಈ ಸಂದರ್ಭದಲ್ಲಿ ಮಾತ್ರ ದುರ್ಯೋಧನನು ಮದ್ರಸೈನಿಕರಿಗೆ ಪಾಂಡವರೊಡನೆ ಯುದ್ಧಕ್ಕೆ ಹೋಗದಂತೆ ತಡೆಯುತ್ತಾನೆ. **ನ ಗನ್ತವ್ಯಂ ನ ಗನ್ತವ್ಯಮಿತಿ ಮದ್ರಾನವಾರಯತ್** (೩). ಆದರೆ ಆ ವೇಳೆಗೆ ಯಾರೂ ದುರ್ಯೋಧನನ ಆಜ್ಞೆಯಂತೆ ನಡೆಯುತ್ತಿರಲಿಲ್ಲ. **ನ ಚಾಸ್ಯ ಶಾಸನಂ ಕೇಚಿತ್ತತ್ರ ಚಕ್ರುರ್ಮಹಾರಥಾಃ** (೧೭). ಬಲವು ಕಡಿಮೆಯಾದೊಡನೆಯೇ ರಾಜನ ಆಜ್ಞೆಯು ಹೇಗೆ ನಡೆಯಲಾರದೆಂಬುದು ಈ ಅಧ್ಯಾಯದಲ್ಲಿ ಚಿತ್ರಿತವಾಗಿದೆ. 'ಎಲ್ಲರೂ ಸೇರಿ ಯುದ್ಧಮಾಡಬೇಕೆಂಬುದು ನಮ್ಮ ನಿಯಮವಾಗಿದ್ದಿತು. ಹೀಗಿದ್ದೂ ಮದ್ರಯೋಧರನ್ನು ಪಾಂಡವರೊಡನೆ ಯುದ್ಧಮಾಡಲು ಏಕೆ ಕಳುಹಿಸಿಕೊಟ್ಟೆ?' ಎಂಬ ಶಕುನಿಯ ಪ್ರಶ್ನೆಗೆ ಉತ್ತರವಾಗಿ–'**ವಾರ್ಯಮಾಣಾ ಮಯಾ ಪೂರ್ವಂ ನೈತೇ ಚಕ್ರುರ್ವಚೋ ಮಮ** (೨೧). 'ನಾನು ಇವರನ್ನು ಯುದ್ಧಕ್ಕೆ ಹೋಗದಂತೆ ತಡೆದರೂ ಇವರು ನನ್ನ ಮಾತನ್ನು ಕೇಳಲಿಲ್ಲ'–ಎಂದು ತನ್ನ ದೌರ್ಬಲ್ಯವನ್ನು ದುರ್ಯೋಧನನೇ ಹೇಳಿಕೊಳ್ಳುತ್ತಾನೆ. ಯುದ್ಧದ ಸಮಯದಲ್ಲಾಗುವ ವಿಪರ್ಯಾಸವನ್ನು

ಶಕುನಿಯು ಹೇಳಿ ದುರ್ಯೋಧನನನ್ನು ಸಮಾಧಾನಗೊಳಿಸುತ್ತಾನೆ. ‘ನ **ಭರ್ತುಃಶಾಸನಂ ವೀರಾ ರಣೇ ಕುರ್ವನ್ತ್ಯಮರ್ಷಿತಾಃ** (೨೨). ಕ್ರೋಧಾಭಿಭೂತರಾದ ಯೋಧರು ಯುದ್ಧಸಮಯದಲ್ಲಿ ಒಡೆಯನ ಆಜ್ಞೆಯನ್ನು ಪರಿಪಾಲಿಸುವುದಿಲ್ಲ.’

ಅನಂತರ ದುರ್ಯೋಧನಪುರಸ್ಸರರಾಗಿ ಎಲ್ಲರೂ ಮದ್ರಸೈನಿಕರಿಗೆ ಬೆಂಬಲಿಗರಾಗಿ ಪಾಂಡವರೊಡನೆ ಯುದ್ಧಮಾಡಲು ಹೋಗುತ್ತಾರೆ. ಆದರೆ ಮದ್ರಸೈನಿಕರಲ್ಲಿ ಒಬ್ಬರನ್ನಾದರೂ ಉಳಿಸಿಕೊಳ್ಳಲು ಕೌರವರಿಗೆ ಸಾಧ್ಯ ವಾಗುವುದಿಲ್ಲ. ಅವರೆಲ್ಲರೂ ಹತರಾದನಂತರ ತಾವೂ ಪೆಟ್ಟುತಿಂದು ಪಲಾಯನಮಾಡುತ್ತಾರೆ.

೧೯ನೆಯ ಅಧ್ಯಾಯ :–ಅಧ್ಯಾಯದ ಪ್ರಾರಂಭದಲ್ಲಿ ಕೌರವಸೈನಿಕರು ದಿಕ್ಕಾಪಾಲಾಗಿ ಓಡಿಹೋದ ವರ್ಣನೆಯಿದೆ. ಬಳಿಕ ಪಾಂಡವ-ಪಾಂಚಾಲ ಸೈನಿಕರು ಪಾಂಡವರನ್ನು ಪ್ರಶಂಸೆಮಾಡುತ್ತಾರೆ. ಧೃತರಾಷ್ಟ್ರನನ್ನು ನಿಂದಿಸು ತ್ತಾರೆ. ಹೀಗೆ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಆ ಸೈನಿಕರು ಪಲಾಯನಮಾಡುತ್ತಿದ್ದ ಕೌರವಸೈನಿಕರನ್ನೇ ಅಟ್ಟಿಸಿಕೊಂಡು ಹೋಗುತ್ತಾರೆ. **ಪ್ರಭಗ್ನಾಂಸ್ತಾವಕಾನ್ಯೋಧಾನ್ ಸೃಂಜಯಾಃ ಪೃಷ್ಠತೋಽನ್ವಯುಃ** (೩೦). ಇಲ್ಲಿಂದ ಮುಂದಕ್ಕೆ ಶಲ್ಯಪರ್ವದ ೩ನೆಯ ಅಧ್ಯಾಯದ ಕಥೆಯೂ ಮತ್ತು ಕರ್ಣಪರ್ವದ ೯೩ನೆಯ ಅಧ್ಯಾಯದ ಕಥೆಯೂ ಪುನರಾವರ್ತಿತವಾಗಿದೆ. ಕರ್ಣಪರ್ವದ ೯೩ನೆಯ ಅಧ್ಯಾಯದಲ್ಲಿಯೂ ಮತ್ತು ಶಲ್ಯಪರ್ವದ ೩ನೆಯ ಅಧ್ಯಾಯದಲ್ಲಿಯೂ ಕರ್ಣನ ಅವಸಾನಾನಂತರದ ಕಥೆಯನ್ನು ವಿವರಿಸುವಾಗ ಕಥೆಯು ಪುನರ್ವಿಮರ್ಶಿತವಾಗಿರುವುದು ಸಹಜವಾಗಿಯೇ ಕಾಣುತ್ತದೆ. ಕರ್ಣನ ಅವಸಾನಾನಂತರದಲ್ಲಿ ಇಂತಹ ಯುದ್ಧವು ನಡೆಯಿತೇ?–ಎಂಬುದು ವಿಮರ್ಶೆಯ ವಿಷಯ. ಶಲ್ಯನ ವಧೆಯಾದನಂತರ ಕರ್ಣನ ವಧೆಯಾದನಂತರದ ವಿಷಯವೇ ಪುನರಾವರ್ತಿತವಾಗಿರುವುದರಲ್ಲಿ ಅಚ್ಚರಿಯೆನಿಸುತ್ತದೆ. ನಿನ್ನೆ ಸಾಯಂಕಾಲ ನಡೆದುದು ಇಂದು ಮಧ್ಯಾಹ್ನದಲ್ಲಿ ಯಥಾಪೂರ್ವವಾಗಿಯೇ ನಡೆಯಲಾರದು. ಕೌರವಸೈನಿಕರೆಲ್ಲರೂ ಓಡಿಹೋದರೆಂದು ಹೇಳಿದ ಮೇಲೆ ಈ ವಿವರಣೆಯು ಪ್ರಾರಂಭವಾಗುತ್ತದೆ. ಎರಡು ಪರ್ಯಾಯಗಳಲ್ಲಿಯೂ ಹಾಗೆಯೇ ಬರುತ್ತದೆ.

ತೇ ಸರ್ವೇ ತಾವಕಾನ್ಪ್ರೇಕ್ಷ್ಯ ದ್ರವತೋಽಪಿ ಪರಾಙ್ಮುಖಾನ್ ।
ಅಭ್ಯವರ್ತನ್ತ ಸಂರಬ್ಧಾನ್ವೃಷಾಞ್ಜಿತ್ವಾ ಯಥಾ ವೃಷಾಃ ॥

ಕರ್ಣ-೯೩-೪೦

ಪ್ರಭಗ್ನಾಂಸ್ತಾವಕಾನ್ಯೋಧಾನ್ ಸೃಂಜಯಾಃ ಪೃಷ್ಠತೋಽನ್ವಯುಃ ॥
ಧನಂಜಯೋ ರಥಾನೀಕಮಭ್ಯವರ್ತತ ವೀರ್ಯವಾನ್ ।
ವಿಶ್ರುತಂ ತ್ರಿಷು ಲೋಕೇಷು ವ್ಯಾಕ್ಷಿಪದ್ಗಾಣ್ಡಿವಂ ಧನುಃ ॥

ಕರ್ಣ-೯೩-೪೨-(ಶಲ್ಯ-೧೯-೬೮)

ಧನಂಜಯೋ ರಥಾನೀಕಮಭ್ಯವರ್ತತ ವೀರ್ಯವಾನ್ ।
ಮಾದ್ರೀಪುತ್ರೌ ಚ ಶಕುನಿಂ ಸಾತ್ಯಕಿಶ್ಚ ಮಹಾರಥಃ ॥

ಶಲ್ಯ-೧೯-೩೧

ಸರ್ವೇ ಪಾರ್ಥಮಯಂ ಲೋಕಂ ಸಂಪಶ್ಯನ್ತೋ ಭಯಾರ್ದಿತಾಃ ।
ಸಮ್ಪ್ರೇಕ್ಷ್ಯ ದ್ರವತಃ ಸರ್ವಾನ್ಭೀಮಸೇನಭಯಾರ್ದಿತಾನ್ ।
ದುರ್ಯೋಧನೋಽಥ ಸ್ವಂ ಸೂತಂ ಹಾ ಹಾ ಕೃತ್ವೇದಮಬ್ರವೀತ್ ॥

ಕರ್ಣ-೯೩-೧೫

ತಾನ್ಪ್ರೇಕ್ಷ್ಯ ದ್ರವತಃ ಸರ್ವಾನ್ಭೀಮಸೇನಭಯಾರ್ದಿತಾನ್ ।
ದುರ್ಯೋಧನಸ್ತದಾ ಸೂತಮಬ್ರವೀದ್ವಿಜಯಾಯ ಚ ॥

ಶಲ್ಯ-೧೯-೩೨

ನಾತಿಕ್ರಮೇಚ್ಚ ಮಾಂ ಪಾರ್ಥೋ ಧನುಷ್ಪಾಣಿಮವಸ್ಥಿತಮ್ ।
ಜಘನೇ ಸರ್ವಸೈನ್ಯಾನಾಂ ಶನೈರಶ್ವಾನ್ಪ್ರಚೋದಯ ॥

ಕರ್ಣ-೯-೧೬

ಮಾಮತಿಕ್ರಮತೇ ಪಾರ್ಥೋ ಧನುಷ್ಪಾಣಿಮವಸ್ಥಿತಮ್ ।
ಜಘನೇ ಸರ್ವಸೈನ್ಯಾನಾಂ ಮಮಾಶ್ವಾನ್ಪ್ರತಿಪಾದಯ ॥

ಶಲ್ಯ-೧೬-೩೩

ಯುಧ್ಯಮಾನಂ ಹಿ ಕೌನ್ತೇಯಂ ಹನಿಷ್ಯಾಮಿ ನ ಸಂಶಯಃ ।
ನೋತ್ಸಹೇನ್ಮಾಮತಿಕ್ರಾನ್ತುಂ ವೇಲಾಮಿವ ಮಹೋದಧಿಃ ॥

ಕರ್ಣ-೯೩-೧೭

ಜಘನೇ ಯುದ್ಧಮಾನಂ ಹಿ ಕೌನ್ತೇಯೋ ಮಾಂ ಸಮನ್ತತಃ ।
ನೋತ್ಸಹೇತ ವ್ಯತಿಕ್ರಾನ್ತುಂ ವೇಲಾಮಿವ ಮಹೋದಧಿಃ ॥

ಶಲ್ಯ-೧೯-೩೪

ಅಕ್ರುಧ್ಯತ ರಣೇ ಭೀಮಸ್ತೈಸ್ತದಾ ಪರ್ಯವಸ್ಥಿತೈಃ ।
ಸೋಽವತೀರ್ಯ ರಥಾತ್ತೂರ್ಣಂ ಗದಾಪಾಣಿರಯುಧ್ಯತ ॥೨೩॥
ಜಾತರೂಪಪರಿಚ್ಛನ್ನಾಂ ಪ್ರಗೃಹ್ಯ ಮಹತೀಂ ಗದಾಮ್ ।
ಅವಧೀತ್ತಾವಕಾನ್ಯೋಧಾನ್ದಣ್ಡಪಾಣಿರಿವಾನ್ತಕಃ ॥೨೫॥

ಕರ್ಣ-ಅಧ್ಯಾಯ-೯೩

ಅಕ್ರುಧ್ಯತ ರಣೇ ಭೀಮಸ್ತೈಸ್ತದಾ ಪರ್ಯವಸ್ಥಿತೈಃ ।
ಸೋಽವತೀರ್ಯ ರಥಾತ್ತೂರ್ಣಂ ಪದಾತಿಃ ಸಮವಸ್ಥಿತಃ ॥೪೨॥
ಜಾತರೂಪಪ್ರತಿಚ್ಛನ್ನಾಂ ಪ್ರಗೃಹ್ಯ ಮಹತೀಂ ಗದಾಮ್ ।
ಅವಧೀತ್ತಾವಕಾನ್ಯೋಧಾನ್ದಣ್ಡಪಾಣಿರಿವಾನ್ತಕಃ ॥೪೮॥

ಶಲ್ಯ-ಅಧ್ಯಾಯ-೧೯

ವಿಪ್ರಹೀಣರಥಾಶ್ಚೈವ ಶರೈಶ್ಚ ಪರಿಕರ್ಷಿತಾಃ ।
ಪಞ್ಚವಿಂಶತಿಸಾಹಸ್ರಾಃ ಕಾಲಮಾರ್ಛನ್ಪದಾತಯಃ ॥೩೪॥

ಕರ್ಣ-೯೩

ವಿಪ್ರಹೀಣರಥಾಶ್ವಾಂಸ್ತಾನವಧೀತ್ಪುರುಷರ್ಷಭಃ ।
ಏಕವಿಂಶತಿಸಾಹಸ್ರಾನ್ಪದಾತೀನ್ಸಮಪೋಥಯತ್ ॥೪೯॥

ಕರ್ಣ-೯೧

ಹತ್ವಾ ತತ್ಪುರುಷಾನೀಕಂ ಭೀಮಃ ಸತ್ಯಪರಾಕ್ರಮಃ ।
ಧೃಷ್ಟದ್ಯುಮ್ನಂ ಪುರಸ್ಕೃತ್ಯ ತಸ್ಥೌ ತತ್ರ ಮಹಾಬಲಃ ॥೨೯॥

ಕರ್ಣ-೯೩

ಹತ್ವಾ ತತ್ಪುರುಷಾನೀಕಂ ಭೀಮಃ ಸತ್ಯಪರಾಕ್ರಮಃ ।
ಧೃಷ್ಟದ್ಯುಮ್ನಂ ಪುರಸ್ಕೃತ್ಯ ನಚಿರಾತ್ಪ್ರತ್ಯದೃಶ್ಯತ ॥೫೦॥

ಶಲ್ಯ-೧೯

ನ ತಂ ದೇಶಂ ಪ್ರಪಶ್ಯಾಮಿ ಯತ್ರ ಯಾತಾ ಭಯಾರ್ದಿತಾಃ ।
ಗತಾನಾಂ ಯತ್ರ ವೈ ಮೋಕ್ಷಃ ಪಾಣ್ಡವಾತ್ಕಿಂ ಗತೇನ ವಃ ॥೫೧॥
ಅಲ್ಪಂ ಚ ಬಲಮೇತೇಷಾಂ ಕೃಷ್ಣೌ ಚ ಭೃಶವಿಕ್ಷತೌ ।
ಅದ್ಯ ಸರ್ವಾನ್ವನಿಷ್ಯಾಮಿ ಧ್ರುವೋ ಹಿ ವಿಜಯೋ ಭವೇತ್ ॥

ಕರ್ಣಪರ್ವ-೧೯

ನ ತಂ ದೇಶಂ ಪ್ರಪಶ್ಯಾಮಿ ಪೃಥಿವ್ಯಾಂ ಪರ್ವತೇಷು ವಾ ।
ಯತ್ರ ಯಾತಾನ್ನವೋ ಹನ್ಯುಃ ಪಾಣ್ಡವಾಃ ಕಿಂ ಸೃತೇನ ವಃ ॥
ಅಲ್ಪಂ ಚ ಬಲಮೇತೇಷಾಂ ಕೃಷ್ಣೌ ಚ ಭೃಶವಿಕ್ಷತೌ ।
ಯದಿ ಸರ್ವತ್ರ ತಿಷ್ಠಾಮೋ ಧ್ರುವಂ ನೋ ವಿಜಯೋ ಭವೇತ್ ॥

ಶಲ್ಯಪರ್ವ-೧೯

ಹೀಗೆ ಎಷ್ಟೋ ಶ್ಲೋಕಗಳು ಯಥಾವತ್ತಾಗಿ ಅಥವಾ ಸ್ವಲ್ಪ ವ್ಯತ್ಯಾಸದಿಂದ ಪುನರಾವರ್ತಿತವಾಗಿವೆ. ಕರ್ಣಸಂಹಾರಾನಂತರದ ದೃಶ್ಯವೇ ಶಲ್ಯನ ಸಂಹಾರವಾದ ನಂತರವೂ ಪುನಃ ಪ್ರತಿಪಾದಿತವಾಗಿದೆ.

೨೦ನೆಯ ಅಧ್ಯಾಯ :–ಮ್ಲೇಚ್ಛರಾಜನಾದ ಸಾಲ್ವನು ತನ್ನ ಆನೆಯೊಡನೆ ಪಾಂಡವರ ಸೈನ್ಯವನ್ನು ಧೂಳೀಪಟಲಮಾಡುತ್ತಾನೆ. ಧೃಷ್ಟದ್ಯುಮ್ನನು ಆನೆಯನ್ನು ಗಾಯಗೊಳಿಸಿ ಓಡಿಸುತ್ತಾನೆ. ಸಾಲ್ವನು ಆನೆಯನ್ನು ಹಿಂದಿರುಗಿಸಿಕೊಂಡು ಧೃಷ್ಟದ್ಯುಮ್ನನ ಮೇಲೆ ನುಗ್ಗಿಸುತ್ತಾನೆ. ಧೃಷ್ಟದ್ಯುಮ್ನನು ರಥದಿಂದ ಕೆಳಕ್ಕೆ ಧುಮುಕುತ್ತಾನೆ. ಆನೆಯು ಧೃಷ್ಟದ್ಯುಮ್ನನ ರಥವನ್ನು ಸೊಂಡಿಲಿನಿಂದ ಎತ್ತಿ ನೆಲಕ್ಕಪ್ಪಳಿಸಿ ಧ್ವಂಸಮಾಡುತ್ತದೆ. ಧೃಷ್ಟದ್ಯುಮ್ನನು ಗದೆಯಿಂದ ಆನೆಯನ್ನು ಸಂಹರಿಸುತ್ತಾನೆ. ಸಾತ್ಯಕಿಯು ಬಾಣದಿಂದ ಸಾಲ್ವನ ಶಿರಸ್ಸನ್ನು ಕತ್ತರಿಸುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೨೧ನೆಯ ಅಧ್ಯಾಯ :–ಸಾಲ್ವನು ಹತನಾದನಂತರ ಕೃತವರ್ಮನು ಕೌರವಸೈನ್ಯವನ್ನು ಸಂಘಟಿಸಿ ಪಾಂಡವರೊಡನೆ ಶೌರ್ಯದಿಂದ ಕಾದಾಡುತ್ತಾನೆ. ಸಾತ್ಯಕಿಯು ಕೃತವರ್ಮನನ್ನು ಎದುರಿಸಲು ಬರುತ್ತಾನೆ. ಎದುರಾಗಿ ಬಂದ ಕ್ಷೇಮಧೂರ್ತಿಯನ್ನು ಸಂಹರಿಸುತ್ತಾನೆ. ಬಳಿಕ ಸಾತ್ಯಕಿ-ಕೃತವರ್ಮರಿಗೆ ಘೋರವಾದ ಯುದ್ಧವು ನಡೆಯುತ್ತದೆ. ಸಾತ್ಯಕಿಯು ಕೃತವರ್ಮನ ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸು

ತ್ತಾನೆ. ಕೃಪರು ಕೃತವರ್ಮನನ್ನು ತಮ್ಮ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಾರೆ. ದುರ್ಯೋಧನನ ಸೈನ್ಯವು ಹಿಮ್ಮೆಟ್ಟುತ್ತದೆ. ದುರ್ಯೋಧನನೊಬ್ಬನೇ ರಣರಂಗದಲ್ಲಿ ನಿಂತು ಪಾಂಡವರೆಲ್ಲರನ್ನೂ ಎದುರಿಸುತ್ತಾನೆ. ಆ ವೇಳೆಗೆ ಪುನಃ ಕೃತವರ್ಮನೂ ನೂತನ ರಥದಲ್ಲಿ ಕುಳಿತು ರಣರಂಗಕ್ಕೆ ಬರುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೨೨ನೆಯ ಅಧ್ಯಾಯ :–ದುರ್ಯೋಧನನೊಬ್ಬನೇ ಪಾಂಡವಯೋಧರೆಲ್ಲರನ್ನೂ ಎದುರಿಸಿ ಯುದ್ಧಮಾಡುವ ಅದ್ಭುತ ವರ್ಣನೆಯಿದೆ. ತಮ್ಮ ರಾಜನ ಪೌರುಷವನ್ನು ನೋಡಿ ಪಲಾಯನಮಾಡಿದ್ದ ಕೌರವಯೋಧರೆಲ್ಲರೂ ಯುದ್ಧಭೂಮಿಗೆ ಹಿಂದಿರುಗುತ್ತಾರೆ. ಬಳಿಕ ಭೀಮನಿಗೂ ಅಶ್ವತ್ಥಾಮನಿಗೂ ಯುದ್ಧವು ಪ್ರಾರಂಭವಾಗುತ್ತದೆ. ಮತ್ತೊಂದು ವಿಭಾಗದಲ್ಲಿ ಶಕುನಿ ಮತ್ತು ಯುಧಿಷ್ಠಿರರಿಗೆ ಯುದ್ಧವಾಗುತ್ತಿರುತ್ತದೆ. ಶಕುನಿಯ ಮಗನಾದ ಉಲೂಕನೂ ನಕುಲನೂ ಮತ್ತೊಂದು ಕಡೆ ಯುದ್ಧಮಾಡುತ್ತಿರುತ್ತಾರೆ. ಯಥಾಪೂರ್ವವಾಗಿ ಸಾತ್ಯಕಿಗೂ ಕೃತವರ್ಮನಿಗೂ ದ್ವಂದ್ವಯುದ್ಧವು ನಡೆಯುತ್ತಿರುತ್ತದೆ. ದುರ್ಯೋಧನನು ಧೃಷ್ಟದ್ಯುಮ್ನನನ್ನೆದುರಿಸಿ ಯುದ್ಧಮಾಡುತ್ತಿರುತ್ತಾನೆ. ಕೃಪರಿಗೂ ದ್ರೌಪದೇಯರಿಗೂ ಕದನವು ನಡೆಯುತ್ತಿರುತ್ತದೆ. ಉಳಿದಂತೆ ಚತುರಂಗಬಲಗಳೆರಡಕ್ಕೂ ಪರಸ್ಪರವಾಗಿ ಯುದ್ಧವಾಗುತ್ತಿರುತ್ತದೆ.

೨೩ನೆಯ ಅಧ್ಯಾಯ :–ಯುದ್ಧವರ್ಣನೆಯೇ ಮುಂದುವರಿಯುತ್ತದೆ. ಯುಧಿಷ್ಠಿರನು ಕೃತವರ್ಮನ ನಾಲ್ಕು ಕುದುರೆಗಳನ್ನು ಸಂಹರಿಸುತ್ತಾನೆ. ಅಶ್ವತ್ಥಾಮನು ಕೃತವರ್ಮನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಾನೆ. ದುರ್ಯೋಧನನು ಯುಧಿಷ್ಠಿರನೊಡನೆ ಯುದ್ಧಮಾಡಲು ಏಳುನೂರು ಯೋಧರನ್ನು ಕಳುಹಿಸುತ್ತಾನೆ. ಪಾಂಡವಪ್ರಮುಖರು ಏಳು ನೂರು ಯೋಧರನ್ನೂ ಸಂಹರಿಸುತ್ತಾರೆ. ಬಳಿಕ ದುರ್ಯೋಧನನಿಗೂ ಪಾಂಡವರಿಗೂ ಘೋರವಾದ ಯುದ್ಧವು ನಡೆಯುತ್ತದೆ. ಶಕುನಿಯು ಹತ್ತು ಸಾವಿರ ಸೈನ್ಯದೊಡನೆ ಪಾಂಡವರನ್ನು ಆಕ್ರಮಿಸುತ್ತಾನೆ. ಯುಧಿಷ್ಠಿರನ ಆಜ್ಞೆಯಂತೆ ಸಹದೇವನು ದ್ರೌಪದೇಯರೊಡನೆ ಶಕುನಿಯನ್ನು ಎದುರಿಸುತ್ತಾನೆ. ಘೋರಯುದ್ಧದ ಅದ್ಭುತವರ್ಣನೆಯಿದೆ. ಶಕುನಿಯು ಉಳಿದ

ಆರು ಸಾವಿರ ಕುದುರೆ ಸೈನ್ಯದೊಡನೆ ಪಲಾಯನಮಾಡುತ್ತಾನೆ. ಪುನಃ ಅವನು ಧೃಷ್ಟದ್ಯುಮ್ನನೊಡನೆ ಯುದ್ಧಮಾಡಲು ಹೋಗುತ್ತಾನೆ. ಅಧ್ಯಾಯದ ಕಡೆಯವರೆಗೂ ಯುದ್ಧದ ಘೋರವರ್ಣನೆಯಿದೆ.

೨೪ನೆಯ ಅಧ್ಯಾಯ :–ಶಕುನಿಯ ಹತ್ತು ಸಾವಿರ ಅಶ್ವಸೈನ್ಯದಲ್ಲಿ ಏಳು ನೂರು ಮಾತ್ರವೇ ಉಳಿದಿತ್ತೆಂದು ಈ ಅಧ್ಯಾಯದ ಮೊದಲಿನಲ್ಲಿ ಹೇಳಿದೆ. ಶಕುನಿಯು ದುರ್ಯೋಧನನನ್ನು ಹುಡುಕಿಕೊಂಡು ಹೊರಡುತ್ತಾನೆ. ದುರ್ಯೋಧನನನ್ನು ನೋಡಿದನಂತರ ಶಕುನಿಯು ತಾನು ಪಾಂಡವರ ಅಶ್ವಸೈನ್ಯವನ್ನು ಜಯಿಸಿ ಬಂದೆನೆಂದು ಹೇಳುತ್ತಾನೆ. ಪ್ರಾಣತ್ಯಾಗಮಾಡದೇ ಯುಧಿಷ್ಠಿರನನ್ನು ಜಯಿಸಲು ಸಾಧ್ಯವಾಗಲಾರದೆಂದು ಹೇಳಿ ಶಕುನಿಯು ದುರ್ಯೋಧನನಿಗೆ ರಥಸೈನ್ಯವನ್ನು ಧ್ವಂಸಮಾಡಲು ಹೇಳುತ್ತಾನೆ. ಶಕುನಿಯ ಮಾತನಿಂದ ಹೃಷ್ಟರಾದ ದುರ್ಯೋಧನನ ಯೋಧರು ಪಾಂಡವಯೋಧರನ್ನು ಪುನಃ ಆಕ್ರಮಿಸುತ್ತಾರೆ. ತನ್ನನ್ನು ಆಕ್ರಮಿಸಲು ಬರುತ್ತಿದ್ದ ದುರ್ಯೋಧನನ ಸೈನ್ಯವನ್ನು ನೋಡಿ ಅರ್ಜುನನು ಶ್ರೀಕೃಷ್ಣನೊಡನೆ ಯುದ್ಧದ ವಿಷಯವನ್ನು ಕುರಿತು ಮಾತನಾಡುತ್ತಾನೆ. ಇಷ್ಟು ಜನಕ್ಷಯವಾದರೂ ದುರ್ಯೋಧನನು ಸಂಧಾನಕ್ಕಾಗಿ ಪ್ರಯತ್ನಿಸದೇ ಇರುವುದಕ್ಕೆ ಅರ್ಜುನನು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾನೆ. ಪ್ರಾಣವಿರುವವರೆಗೂ ದುರ್ಯೋಧನನು ರಾಜ್ಯವನ್ನು ಕೊಡುವುದಿಲ್ಲವೆಂದು ಹೇಳಿದ ವಿದುರನ ಮಾತನ್ನು ಸ್ಮರಿಸಿಕೊಳ್ಳುತ್ತಾನೆ. ಅನಂತರ ಪಾರ್ಥನು ದುರ್ಯೋಧನನ ಸೈನ್ಯವನ್ನು ಧ್ವಂಸಮಾಡಲು ಉಪಕ್ರಮಿಸುತ್ತಾನೆ. ಅಧ್ಯಾಯದ ಕಡೆಯವರೆಗೂ ವಿಧ್ವಂಸನದ ವರ್ಣನೆಯೇ ಇದೆ.

೨೫ನೆಯ ಅಧ್ಯಾಯ :–ಅರ್ಜುನನು ಕುರುಸೇನೆಯನ್ನು ಧ್ವಂಸಮಾಡುತ್ತಿರುತ್ತಾನೆ. ಮುಂದೆ ದುರ್ಯೋಧನನಿಗೂ ಧೃಷ್ಟದ್ಯುಮ್ನನಿಗೂ ನಡೆದ ಯುದ್ಧದ ವರ್ಣನೆಯಿದೆ. ದುರ್ಯೋಧನನು ಧೃಷ್ಟದ್ಯುಮ್ನನ ರಥದ ಕುದುರೆಗಳನ್ನು ಸಂಹರಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಧೃಷ್ಟದ್ಯುಮ್ನನು ದುರ್ಯೋಧನನ ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸುತ್ತಾನೆ. ಬಳಿಕ ದುರ್ಯೋಧನನು ಕುದುರೆಯೊಂದರ ಮೇಲೆ ಕುಳಿತು ಶಕುನಿಯ ಬಳಿಗೆ ಹೋಗುತ್ತಾನೆ. ಅನಂತರ ಮೂರು ಸಾವಿರ

ಗಜಯೋಧರು ಪಾಂಡವರನ್ನು ಆಕ್ರಮಿಸುತ್ತಾರೆ. ಯುಧಿಷ್ಠಿರಾದಿಗಳೆಲ್ಲರೂ ಒಟ್ಟಾಗಿ ಸೇರಿ ಗಜಸೈನ್ಯವನ್ನು ಧ್ವಂಸಗೊಳಿಸುತ್ತಾರೆ. ರಥಸೈನ್ಯದ ಮಧ್ಯದಲ್ಲಿ ದುರ್ಯೋಧನನು ಇಲ್ಲದಿದ್ದುದನ್ನು ಕಂಡು ಅಶ್ವತ್ಥಾಮ-ಕೃಪ-ಕೃತವರ್ಮರು ದುರ್ಯೋಧನನು ಎಲ್ಲಿಗೆ ಹೋದನೆಂದು ಸೈನಿಕರನ್ನು ಪ್ರಶ್ನಿಸುತ್ತಾರೆ. ಶಕುನಿಯ ಬಳಿಗೆ ಹೋದನೆಂದು ಸೈನಿಕರು ತಿಳಿಸುತ್ತಾರೆ. ಪಾಂಡವರಿಂದ ಧ್ವಂಸವಾಗುತ್ತಿದ್ದ ಕೌರವಸೈನ್ಯವನ್ನು ರಕ್ಷಿಸುವ ಪ್ರಯತ್ನವನ್ನು ಮಾಡದೇ ಕೃಪಾಶ್ವತ್ಥಾಮ-ಕೃತವರ್ಮರು ದುರ್ಯೋಧನನನ್ನು ಹುಡುಕುವ ಸಲುವಾಗಿ ಹೊರಟುಹೋಗುತ್ತಾರೆ. ಸಾತ್ಯಕಿಯು ಸಂಜಯನನ್ನು ಸೆರೆಹಿಡಿಯುತ್ತಾನೆ. ಅರಕ್ಷಿತವಾದ ಕೌರವರ ಸೈನ್ಯದಲ್ಲಿ ಬಹುಭಾಗ ನಾಶಹೊಂದುತ್ತದೆ.

೨೬ನೆಯ ಅಧ್ಯಾಯ :–ಭೀಮಸೇನನು ಧೃತರಾಷ್ಟ್ರನ ಹನ್ನೊಂದು ಮಕ್ಕಳನ್ನು ಸಂಹರಿಸುವ ವಿವರಣೆಯಿದೆ. ಬಳಿಕ ಭೀಮಸೇನನು ಏಳು ನೂರು ಗಜಯೋಧರನ್ನೂ, ಒಂದು ಲಕ್ಷ ಪದಾತಿಗಳನ್ನೂ, ಎಂಟುನೂರು ಅಶ್ವಸೈನಿಕರನ್ನೂ ಸಂಹಾರಮಾಡುತ್ತಾನೆ. ಅಳಿದುಳಿದ ಕೌರವಸೈನಿಕರಿಗೆ ಯುದ್ಧಮಾಡುವುದರಲ್ಲಿ ಉತ್ಸಾಹವು ಪೂರ್ಣವಾಗಿ ಕುಗ್ಗಿಹೋಗಿರುತ್ತದೆ.

೨೭ನೆಯ ಅಧ್ಯಾಯ :–ಧೃತರಾಷ್ಟ್ರನ ಮಕ್ಕಳಲ್ಲಿ ಸುದರ್ಶನ ಮತ್ತು ದುರ್ಯೋಧನ ಇಬ್ಬರು ಮಾತ್ರವೇ ಉಳಿದಿರುತ್ತಾರೆ. ಅರ್ಜುನನೊಡನಿದ್ದ ಶ್ರೀಕೃಷ್ಣನು ದುರ್ಯೋಧನನು ಅಶ್ವಸೈನ್ಯದ ಮಧ್ಯದಲ್ಲಿರುವುದನ್ನು ಗುರುತಿಸುತ್ತಾನೆ. ಆ ವೇಳೆಗೆ ದುರ್ಯೋಧನನ ಸೈನ್ಯದಲ್ಲಿ ಅವಶಿಷ್ಟರಾಗಿ ಉಳಿದಿದ್ದವರ ಸಂಖ್ಯೆಯನ್ನು ಅರ್ಜುನನು ಹೇಳುತ್ತಾನೆ. ಶಕುನಿಗೆ ಸೇರಿದ ಐದುನೂರು ಅಶ್ವಗಳು, ಎರಡು ನೂರು ರಥಗಳು, ನೂರಕ್ಕಿಂತಲೂ ಸ್ವಲ್ಪ ಅಧಿಕವಾದ ಆನೆಗಳು, ಮೂರು ಸಾವಿರ ಪದಾತಿಗಳು, ಅಶ್ವತ್ಥಾಮಾ, ಕೃಪ, ಸುಶರ್ಮಾ, ಉಲೂಕ, ಶಕುನಿ, ಕೃತವರ್ಮಾ–ಈ ಮಹಾರಥರೂ ದುರ್ಯೋಧನನ ಪಕ್ಷದಲ್ಲಿ ಉಳಿದಿರುತ್ತಾರೆ. ಅವರೆಲ್ಲರನ್ನೂ ಸಂಹರಿಸುವುದಾಗಿ ಅರ್ಜುನನು ಹೇಳುತ್ತಾನೆ.

ಅರ್ಜುನನ ಪ್ರಾರ್ಥನೆಯಂತೆ ಶ್ರೀಕೃಷ್ಣನು ರಥವನ್ನು ಮುಂದಕ್ಕೆ

ನಡೆಸುತ್ತಲೇ ಸುಶರ್ಮನನ್ನೂ ಶಕುನಿಯನ್ನೂ ಎದುರಿಸುತ್ತಾನೆ. ಸುದರ್ಶನನು ಭೀಮಸೇನನನ್ನು ಎದುರಿಸುತ್ತಾನೆ. ದುರ್ಯೋಧನನು ಸಹದೇವನೊಡನೆ ಯುದ್ಧಮಾಡುತ್ತಾನೆ. ಅರ್ಜುನನು ಸತ್ಯಕರ್ಮಾ, ಸತ್ಯೇಷು ಮತ್ತು ಸುಶರ್ಮರನ್ನೂ–ಅವನ ನಲವತ್ತೈದು ಮಂದಿ ಮಕ್ಕಳನ್ನೂ ಸಂಹರಿಸುತ್ತಾನೆ. ಭೀಮಸೇನನು ಸುದರ್ಶನನನ್ನು ಸಂಹರಿಸುತ್ತಾನೆ. ಇಲ್ಲಿಗೆ ಭೀಮಸೇನನು ೯೯ ಮಂದಿ ಧೃತರಾಷ್ಟ್ರನ ಮಕ್ಕಳನ್ನು ಸಂಹರಿಸಿದಂತಾಗುತ್ತದೆ. ದುರ್ಯೋಧನನೊಬ್ಬನು ಉಳಿದಿರುತ್ತಾನೆ. ಆದರೆ ಮಹಾಭಾರತದಲ್ಲಿ ಉಕ್ತವಾಗಿರುವ ಭೀಮನಿಂದ ಹತರಾದ ಧೃತರಾಷ್ಟ್ರನ ಮಕ್ಕಳ ಹೆಸರನ್ನು ಯಥಾವತ್ತಾಗಿ ತೆಗೆದುಕೊಂಡರೆ ಸಂಖ್ಯೆ ಮತ್ತು ನಾಮಧೇಯಗಳೆರಡೂ ಸಮನ್ವಯವಾಗುವುದಿಲ್ಲ. ಮಹಾಭಾರತದಲ್ಲಿ ಭೀಮನಿಂದ ಹತರಾದ ಧೃತರಾಷ್ಟ್ರನ ಮಕ್ಕಳ ನಾಮಧೇಯಗಳೂ ಮತ್ತು ಸಂಖ್ಯೆಗಳೂ ಹೀಗಿವೆ :

ಭೀಷ್ಮಪರ್ವ :

ಅಧ್ಯಾಯ ೯೪	(1) ಸೇನಾಪತಿ (2) ಜಲಸಂಧಿ (3) ಸುಷೇಣ (4) ಉಗ್ರ (5) ವೀರಬಾಹು (6) ಭೀಮ (7) ಭೀಮರಥ (8) ಸುಲೋಚನ (9) ಸುನಾಭ (10) ಆದಿತ್ಯಕೇತು (11) ಬಹ್ವಾಶೀ (12) ದಂಡಧಾರ (13) ಮಹೋದರ (14) ಅಪರಾಜಿತ (15) ಪಂಡಿತಕ (16) ವಿಶಾಲಾಕ್ಷ
ಅಧ್ಯಾಯ ೯೬	(17) ವ್ಯೂಢೋರಸ್ಕ (18) ಕುಂಡಲಿನ (19) ಅನಾಧೃಷ್ಟಿ (20) ಕುಂಡಭೇದಿ (21) ವೈರಾಟ (22) ದೀರ್ಘಲೋಚನ (23) ದೀರ್ಘಬಾಹು (24) ಸುಬಾಹು (25) ಕನಕಧ್ವಜ (ಭೀಷ್ಮನು ಸೇನಾನಾಯಕನಾಗಿದ್ದಾಗ ೨೫ ಮಂದಿ ಧೃತರಾಷ್ಟ್ರನ ಮಕ್ಕಳು ಭೀಮನಿಂದ ಹತರಾಗುತ್ತಾರೆ.)

ದ್ರೋಣಪರ್ವ:

ಅಧ್ಯಾಯ ೧೨೭	(26) ಕುಂಡಭೇದಿ (27) ಸುಷೇಣ (28) ದೀರ್ಘನೇತ್ರ (29) ವೃಂದಾರಕ (30) ಅಭಯ (31) ರೌದ್ರಕರ್ಮಾ

ಅಧ್ಯಾಯ ೧೨೭ (೩೨) ದುರ್ವಿಮೋಚನ (33) ವಿಂದ (34) ಅನುವಿಂದ (35) ಸುಕರ್ಮ (36) ಸುದರ್ಶನ

ಅಧ್ಯಾಯ ೧೩೩ (37) ದುರ್ಜಯ

ಅಧ್ಯಾಯ ೧೩೪ (38) ದುರ್ಮುಖ

ಅಧ್ಯಾಯ ೧೩೫ (39) ದುರ್ಮರ್ಷಣ (40) ದುಃಸಹ (41) ದುರ್ಮದ (42) ದುರ್ಧರ (43) ಜಯ

ಅಧ್ಯಾಯ ೧೩೬ (44) ಚಿತ್ರ (45) ಉಪಚಿತ್ರ (46) ಚಿತ್ರಾಕ್ಷ (47) ಚಾರುಚಿತ್ರ (48) ಶರಾಸನ (49) ಚಿತ್ರಾಯುಧ (50) ಚಿತ್ರವರ್ಮಾ

ಅಧ್ಯಾಯ ೧೩೭ (51) ಶತ್ರುಂಜಯ (52) ಶತ್ರುಸಹ (53) ಚಿತ್ರ (ಚಿತ್ರಬಾಣ) (54) ಚಿತ್ರಾಯುಧ (ಅಗ್ರಾಯುಧ) (55) ದೃಢ (ದೃಢವರ್ಮಾ) (56) ಚಿತ್ಸೇನ (ಉಗ್ರಸೇನ) (57) ವಿಕರ್ಣ

ಅಧ್ಯಾಯ ೧೫೫ (58) ದುಷ್ಕರ್ಣ (59) ದುರ್ಮದ

ಅಧ್ಯಾಯ ೧೫೭ ನಾಗದತ್ತ (61) ದೃಢರಥ (ದೃಢರಥಾಶ್ರಯ) (62) ಮಹಾಬಾಹು (63) ಅಯೋಭುಜ (ಅಯೋ ಬಾಹು) (64) ದೃಢ (ದೃಢಹಸ್ತ) (65) ಸುಹಸ್ತ (66) ವಿರಜಸ (67) ಪ್ರಮಾಥ (68) ಉಗ್ರ (ಉಗ್ರಶ್ರವಸ) (69) ಅನುಯಾಯೀ (ಅಗ್ರಯಾಯೀ) (ದ್ರೋಣರು ಸೇನಾ ನಾಯಕರಾಗಿದ್ದಾಗ ೪೪ ಮಂದಿ ಧೃತರಾಷ್ಟ್ರನ ಮಕ್ಕಳು ಹತರಾಗುತ್ತಾರೆ.)

ಕರ್ಣಪರ್ವ :

ಅಧ್ಯಾಯ ೫೧ (70) ವಿವಿತ್ಸು (71) ವಿಕಟ (ವಿಕಟಾನನ) (72) ಸಮ (73) ಕ್ರಾಥ (74) ನಂದ (75) ಉಪನಂದ

ಅಧ್ಯಾಯ ೮೩ (76) ದುಃಶಾಸನ

ಅಧ್ಯಾಯ ೮೪ (77) ನಿಷಂಗಿ (78) ಕವಚೀ (79) ಪಾಶೀ (80) ದಂಡಧಾರ ಧನುರ್ಗ್ರಹ (82) ಅಲೋಲುಪ (83) ಶಲ (84) ಸಂಧ (85) ವಾತವೇಗ (86) ಸುವರ್ಚಸ(ಕರ್ಣನು ಸೇನಾನಾಯಕನಾಗಿದ್ದಾಗ 17 ಮಂದಿ ಧೃತರಾಷ್ಟ್ರನ ಮಕ್ಕಳು ಹತರಾಗುತ್ತಾರೆ.)

ಶಲ್ಯಪರ್ವ :

ಅಧ್ಯಾಯ ೨೬ (87) ದುರ್ಮರ್ಷಣ (88) ಶ್ರುತಾಂತ (ಚಿತ್ರಾಂಗ) (89) ಚೈತ್ರ (90) ಭೂರಿಬಲ (ಭೀಮಬಲ) (91) ರವಿ (92) ಜಯತ್ಸೇನ (93) ಸುಜಾತ (94) ದುರ್ವಿಷಹ (ದುರ್ವಿಗಾಹ) (95) ದುರ್ವಿಮೋಚನ ದುಷ್ಪ್ರಧರ್ಷ (97) ಶ್ರುತರ್ವಾ

ಅಧ್ಯಾಯ ೨೭ (98) ಸುದರ್ಶನ

ಇಲ್ಲಿ ಸೂಚಿಸಿರುವ ಹೆಸರುಗಳೆಲ್ಲವೂ ಸಂಖ್ಯಾಪೂರ್ವಕವಾಗಿಯೇ ಉಕ್ತವಾಗಿವೆ. 99ನೆಯ ಹೆಸರು ವಿವಿಂಶತಿ. ಆದರೆ ವಿವಿಂಶತಿಯು ಯುದ್ಧಪ್ರಸಂಗದಲ್ಲಿ ಮರಣಹೊಂದಿದ ವಿಷಯವು ಬಂದಿರುವುದಿಲ್ಲ. ೯೬ನೆಯ ಅಧ್ಯಾಯದ ೩೧ನೆಯ ಶ್ಲೋಕದಲ್ಲಿ ವಿವಿಂಶತಿ, ಚಿತ್ರಸೇನ, ವಿವರ್ಣ–ಇವರು ಮಹಾಸೈನ್ಯದೊಡನೆ ಭೀಮಸೇನನೊಡನೆ ಯುದ್ಧ ಮಾಡಿದರೆಂದು ಹೇಳಿದೆ. ವಿವಿಂಶತಿಶ್ಚಿತ್ರಸೇನೋ ವಿವರ್ಣಶ್ಚ ತವಾತ್ಮಜಃ **ಅಯೋಧಯನ್ಭೀಮಸೇನಂ ಮಹತ್ಯಾ ಸೇನಯಾ ವೃತಾಃ** ll ಇಷ್ಟು ಹೊರತಾಗಿ ಮುಂದೆ ವಿವಿಂಶತಿಯು ಭೀಮಸೇನನೊಡನೆ ಯುದ್ಧಮಾಡಿದ ಮತ್ತು ಅವನಿಂದ ಮೃತನಾದ ಪ್ರಸಂಗವು ಬರುವುದಿಲ್ಲ. ಕರ್ಣಪರ್ವದ ೫ನೆಯ ಅಧ್ಯಾಯದಲ್ಲಿ ಸಂಜಯನು ಧೃತರಾಷ್ಟ್ರನೊಡನೆ ಕೌರವರ ಕಡೆಯಲ್ಲಿ ಹತರಾದ ಪ್ರಮುಖಯೋಧರ ಪಟ್ಟಿಯಲ್ಲಿ ವಿವಿಂಶತಿಯನ್ನೂ ಸೇರಿಸಿ ಹೇಳುತ್ತಾನೆ. ವಿವಿಂಶತಿರ್ಮಹಾರಾಜ ರಾಜಪುತ್ರೋ ಮಹಾಬಲಃ **ಆನರ್ತಯೋಧಾಞ್ಛತಶೋ ನಿಹತ್ಯ ನಿಹತೋ ರಣೇ** (೭) ಸಂಜಯನ

ಈ ಮಾತಿನಿಂದ ವಿವಿಂಶತಿಯು, ದ್ರೋಣರು ಕೌರವಸೈನ್ಯದ ದಂಡನಾಯಕ ರಾಗಿದ್ದಾಗಲೇ ಭೀಮಸೇನನಿಂದ ಮೃತನಾದನೆಂದು ಊಹಿಸಬಹುದಾಗಿದೆ. ನೂರನೆಯವನಾದ ದುರ್ಯೋಧನನೂ ಸೇರಿದಂತೆ ಧೃತರಾಷ್ಟ್ರನ ನೂರು ಮಕ್ಕಳ ನಾಮಧೇಯಗಳೂ ಬಂದಂತಾಗುತ್ತದೆ. ಹಿಂದೆ ಧೃತರಾಷ್ಟ್ರನ ಮಕ್ಕಳನ್ನು ಹೇಳುವಾಗ ಮೂರು ವಿಧವಾದ ಪಾಠಾಂತರಗಳಲ್ಲಿಯೂ ಶತ ಸಂಖ್ಯಾತ ಮಕ್ಕಳಲ್ಲಿ ಯುಯುತ್ಸುವನ್ನೂ ಸೇರಿಸಿರುತ್ತಾರೆ. ಸತ್ತುಹೋಗಿರು ವವರ ಲೆಕ್ಕದಂತೆ ಯುಯುತ್ಸುವನ್ನು ಬಿಟ್ಟು ನೂರು ಮಂದಿಯಾಗುತ್ತಾರೆ. ಸಂಭವಪರ್ವದಲ್ಲಿ **ವೈಶ್ಯಾಪುತ್ರೋ ಯುಯುತ್ಸುಶ್ಚ ಧಾರ್ತರಾಷ್ಟ್ರಃ ಶತಾಧಿಕಃ** ವೈಶ್ಯಸ್ತ್ರೀಯಲ್ಲಿ ಧೃತರಾಷ್ಟ್ರನಿಗೆ ಹುಟ್ಟಿದ ಯುಯುತ್ಸುವು ದುರ್ಯೋಧನಾದಿ ನೂರು ಮಕ್ಕಳಿಗಿಂತಲೂ ಅಧಿಕನಾದವನು ಎಂಬು ದಾಗಿಯೇ ಇದ್ದರೂ ಯುಯುತ್ಸುವನ್ನೂ ಸೇರಿಸಿ ಶತಸಂಖ್ಯೆಯನ್ನೇ ಎಲ್ಲರೂ ಹೇಳಿದ್ದಾರೆ. ವೈಶ್ಯಾಪುತ್ರನಲ್ಲದೇ ಬೇರೆಯೊಬ್ಬ ಯುಯುತ್ಸು ವೆಂಬುವನಿದ್ದನೆಂಬುದಕ್ಕೆ ಇದುವರೆಗೂ ಆಧಾರವು ಸಿಕ್ಕಿಲ್ಲ. ವೈಶ್ಯಾಪುತ್ರ ನಾದ ಯುಯುತ್ಸುವು ಯುದ್ಧಸಮಯದಲ್ಲಿ ಪಾಂಡವರ ಪಕ್ಷಕ್ಕೆ ಸೇರಿ ಕೊಳ್ಳುತ್ತಾನೆ. ಯುಧಿಷ್ಠಿರನು ಮಹಾಪ್ರಸ್ಥಾನಕ್ಕೆ ಹೋಗುವ ಸಮಯ ದಲ್ಲಿಯೂ ಯುಯುತ್ಸುವು ಇರುತ್ತಾನೆ. ಆದುದರಿಂದ ಎಲ್ಲೆಡೆಗಳಲ್ಲಿಯೂ ಹೇಳಿರುವ ಎರಡನೆಯವನಾದ ಯುಯುತ್ಸುವನ್ನು ಬಿಟ್ಟು ನೂರು ಮಂದಿ ಇರಬೇಕಾದುದು ನ್ಯಾಯವಾಗಿದೆ. ಆ ನೂರು ಮಂದಿಯ ಹೆಸರು ಅಸು ನೀಗಿದವರ ಪಟ್ಟಿಯಲ್ಲಿ ಸಿಕ್ಕುತ್ತದೆ. ಗೋರಖಪುರದ ಗೀತಾಪ್ರೆಸ್ಸಿನವರು ಪ್ರಕಟಿಸಿರುವ ಮಹಾಭಾರತನಾಮಾನುಕ್ರಮಣಿಕೆಯಲ್ಲಿ ಯುಯುತ್ಸು ಎಂಬ ಕಡೆ 'ಧೃತರಾಷ್ಟ್ರನಿಂದ ಗಾಂಧಾರೀಗರ್ಭದಲ್ಲಿ ಉತ್ಪನ್ನನಾದವನು'–ಎಂದು ಸೂಚಿಸಿ ಶಾಂತಿ ೬೭-೯೩ ಎಂದು ಅಧ್ಯಾಯ ಶ್ಲೋಕಗಳನ್ನು ನಿರೂಪಿಸಿದ್ದಾರೆ. ಆದರೆ ಶಾಂತಿಪರ್ವದ ೬೭ನೆಯ ಅಧ್ಯಾಯದಲ್ಲಿ ಕೇವಲ ೩೯ ಶ್ಲೋಕಗಳು ಮಾತ್ರವೇ ಇವೆ. ಆದುದರಿಂದ ಬೇರೊಬ್ಬ ಯುಯುತ್ಸುವು ಇದ್ದಿರಲಾರನೆಂದು ತೋರುತ್ತದೆ.

ಸತ್ತವರ ನಾಮಾವಳಿಗೂ ಹಿಂದೆ ಬಂದಿರುವ ಮೂರು ಪಾಠಾಂತರಗಳ ಲ್ಲಿರುವ ಹೆಸರುಗಳಿಗೂ ಸಮನ್ವಯವಾಗುವುದಿಲ್ಲ. ಸತ್ತವರ ಹೆಸರುಗಳಲ್ಲಿ

ಸುಷೇಣ, ಸುದರ್ಶನ, ಉಗ್ರ, ಕುಂಡಭೇದಿ, ದುರ್ವಿಲೋಚನ, ದುರ್ಮರ್ಷಣ, ದುರ್ಮದ, ಚಿತ್ರ, ಚಿತ್ರಾಯುಧ–ಇವುಗಳು ಎರಡು ಬಾರಿ ಬಂದಿರುತ್ತವೆ. ಸಂಭವಪರ್ವದಲ್ಲಿಯೂ ಸಹ ಒಂದೇ ಹೆಸರಿನ ಇಬ್ಬರಿರುವುದು ಕಂಡುಬಂದಿದೆ. ಆದಿಪರ್ವದ ೬೭ನೆಯ ಅಧ್ಯಾಯದಲ್ಲಿ ಉಕ್ತವಾಗಿರುವ ನಾಮಧೇಯಗಳಲ್ಲಿ ದುಷ್ಪ್ರಧರ್ಷ, ದುರ್ಮುಖ, ಮಹಾಬಾಹು–ಈ ಹೆಸರುಗಳು ಎರಡೆರಡು ಬಾರಿ ಬಂದಿವೆ.

ಆದುದರಿಂದ ನಾಲ್ಕಾರು ಹೆಸರುಗಳು ಎರಡು ಸಲ ಬಂದಿರುವುದರಿಂದ ಒಬ್ಬನ ಹೆಸರು ತಪ್ಪಾಗಿ ಎರಡು ಕಡೆಗಳಲ್ಲಿ ಬಂದಿರುವುದೆಂದು ಭಾವಿಸಬೇಕಾಗಿಲ್ಲ. ಒಂದೇ ಹೆಸರಿನ ಇಬ್ಬಿಬ್ಬರಿದ್ದರು–ಎಂದು ನಿಶ್ಚಯಿಸಬಹುದಾಗಿದೆ.

ಉಪಲಬ್ಧವಾಗಿರುವ 3 ಪಟ್ಟಿಗಳಲ್ಲಿ ಆದಿಪರ್ವದ 67ನೆಯ ಅಧ್ಯಾಯದಲ್ಲಿ ಬಂದಿರುವ ಪಟ್ಟಿಯಲ್ಲಿ 56 ಹೆಸರುಗಳು ಮಾತ್ರವೇ ಸತ್ತವರ ನಾಮಧೇಯಗಳಿಗೆ ಅನುಗುಣವಾಗಿದೆ. 116ನೆಯ ಅಧ್ಯಾಯದಲ್ಲಿ ಬಂದಿರುವ ಪಟ್ಟಿಯಲ್ಲಿ 58 ಹೆಸರುಗಳು ಸತ್ತವರ ಹೆಸರಿಗೆ ಅನುಗುಣವಾಗಿದ್ದು ಭಂ.ರಿ. ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಮಹಾಭಾರತದ ಪಟ್ಟಿಯಲ್ಲಿ (ಅಧ್ಯಾಯ 108) 69 ಹೆಸರುಗಳು ಸತ್ತವರ ನಾಮಧೇಯಗಳಿಗೆ ಅನುಗುಣವಾಗಿವೆ. ಮೂರು ಪಟ್ಟಿಯಲ್ಲಿಯೂ ಒಂದೇ ಆಗಿರುವ ಕೆಲವೆಡೆಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಾಗಿರುವ ಹೆಸರುಗಳು ಹೀಗಿವೆ : 1) ದುರ್ಯೋಧನ 2) ದುಷ್ಪ್ರಧರ್ಷ 3) ದುರ್ವಿಲೋಚನ 4) ದುರ್ಮಷಣ 5) ಧನುರ್ಗ್ರಹ 6) ದಂಡಧಾರ 7) ದುಃಶಾಸನ 8) ದೃಢ (ದೃಢಾಯುಧ) 9) ದೃಢರಥ 10) ದುಷ್ಕರ್ಣ 11) ದೃಢ (ದೃಢವರ್ಮಾ) 12) ದುರ್ಮದ 13) ದುಃಸಹ 14) ದುರ್ಮುಖ 15) ದುರ್ಜಯ (ದುಷ್ಪರಾಜಯ) 16) ದೀರ್ಘಬಾಹು 17) ದೀರ್ಘಲೋಚನ 18) ಪಂಡಿತಕ 19) ಪಾಶೀ 20) ಮಹೋದರ 21) ಸುಷೇಣ 22) ಸೇನಾಪತಿ 23) ಸುಲೋಚನ ಸುನಾಭ 25) ಸುಬಾಹು 26) ಸುವರ್ಮಾ 27) ಸುಹಸ್ತ 28) ಸಮ 29) ಸುವರ್ಚಸ 30) ಉಗ್ರ 31) ಉಪಚಿತ್ರ 32) ಉಗ್ರ (ಉಗ್ರಾಯುಧ) 33) ಉಪನಂದ 34) ವೀರಬಾಹು 35) ವಿಶಾಲಾಕ್ಷ 36) ವ್ಯೂಢೋರಸ್ಕ

37) ವಿಂದ 38) ವಿಕರ್ಣ 39) ವಿರಜಸ 40) ವಿವಿತ್ಸು 41) ವಿಕಲ 42) ವಾತವೇಗ 43) ವಿವಿಂಶತಿ 44) ಭೀಮರಥ 45) ಬಹ್ವಾಶೀ 46) ಆದಿತ್ಯಕೇತು 47) ಅಪರಾಜಿತ 48) ಅನಾಧೃಷ್ಟ (ಅನಾಧೃಷ್ಯ) 49) ಅಭಯ 50) ಅನುವಿಂದ 51) ಅಯೋಭುಜ (ಅಯೋಬಾಹು) 52) ಅನುಯಾಯೀ (ಅಗ್ರಯಾಯೀ) 53) ಲೋಲುಪ (ಅಲೋಲುಪ) 54) ಕುಂಡಭೇದೀ 55) ಕನಕಧ್ವಜ 56) ಕುಂಡಭೇದೀ (ಕುಂಡಾಶಿ) 57) ಕವಚೀ 58) ರೌದ್ರವರ್ಮಾ 59) ಶರಾಸನ 60) ಜಲಸಂಧ 61) ಚಿತ್ರ 62) ಚಿತ್ರಾಕ್ಷ 63) ಚಾರುಚಿತ್ರ 64) ಚಿತ್ರವರ್ಮಾ 65) ಚಿತ್ರ (ಚಿತ್ರಬಾಣ) 66) ಚಿತ್ರಾಂಗ 67) ನಾಗದಂಡ (ನಾಗದತ್ತ) 68) ನಂದ 69) ನಿಷಂಗೀ.

ಸ್ವಲ್ಪ ವ್ಯತ್ಯಾಸದಲ್ಲಿ ಹೊಂದಿಕೆಯಾಗುವ ಹೆಸರುಗಳು.

70) ದುರ್ವಿಷಹ-ದುಷ್ಪ್ರಗಾಹ 71) ದುರ್ಧರ-ದುರ್ಧರ್ಷ 72) ಸಂಧ-ಸತ್ಯಸಂಧ 73) ಭೀಮ-ಭೀಮವೇಗ 74) ಭೂಮಿಬಲ-ಭೀಮಬಲ 75) ಕುಂಡಲಿನ-ಕರ್ಣ 76) ಶತ್ರುಸಹ-ಸಹ 77) ಚಿತ್ರಾಯುಧ-ದೃಢಾಯುಧ.

ಒಂದೇ ನಾಮಧೇಯವು ಇಬ್ಬರಿಗೆ ಇರುವ ಹೆಸರುಗಳು.

78) ಸುಷೇಣ 79) ದುರ್ವಿಲೋಚನ 80) ದುರ್ಮರ್ಷಣ 81) ದುರ್ಮದ 82) ಚಿತ್ರಾಯುಧ.

ಉಳಿದ ದೀರ್ಘನೇತ್ರ, ಪ್ರಮಥ, ಮಹಾಬಾಹು, ಸುದರ್ಶನ, ಸುದರ್ಶನ, ವೈರಾಟ, ವೃಂದಾರಕ, ಜಯ, ಜಯತ್ಸೇನ, ಕುಂಡಧಾರ, ಕ್ರಾಥ, ರವಿ, ಶತ್ರುಂಜಯ, ಶಲ, ಶ್ರುತಾಂತ, ಶ್ರುತವರ್ಮಾ, ಚಿತ್ರಸೇನ, ಚೈತ್ರ–ಈ ಹದಿನೆಂಟು ಹೆಸರುಗಳಲ್ಲಿ ಕೆಲವು 69ನೇ ಅಧ್ಯಾಯದ ಪಟ್ಟಿಯಲ್ಲಿಯೂ 116ನೇ ಅಧ್ಯಾಯದಲ್ಲಿರುವ ಪಟ್ಟಿಯಲ್ಲಿಯೂ ಬಂದಿವೆ.

67ನೆಯ ಅಧ್ಯಾಯ 83) ಮಹಾಬಾಹು ; 116ನೆಯ ಅಧ್ಯಾಯ : 84) ಪ್ರಮಥ 85) ವೃಂದಾರಕ 86) ಕ್ರಾಥ (ಕ್ರಥನ) 87) ಶಲ 88) ಕುಂಡಧಾರ.

63ನೆಯ ಅಧ್ಯಾಯದಲ್ಲಿ ಒಂದೆಡೆ ಹೇಳಿರುವ ಧೃತರಾಷ್ಟ್ರನ ಮಕ್ಕಳ ಹನ್ನೊಂದು ಮಹಾರಥಿಗಳ ಹೆಸರಿನಲ್ಲಿ 89) ಜಯ 90) ಚಿತ್ರಸೇನ ಎಂಬ ಹೆಸರುಗಳು ಸೇರಿವೆ. ನೂರು ಮಕ್ಕಳ ಹೆಸರನ್ನು ಹೇಳುವಾಗ ಮೂರು ಪಟ್ಟಿಗಳಲ್ಲಿಯೂ ಈ ಎರಡು ಹೆಸರುಗಳು ಸೇರಿಲ್ಲ. ಬೇರಾವ ಹೆಸರಿನಿಂದ ಕರೆದಿರುವರೋ ತಿಳಿಯದು.

ತಥಾ ಪುತ್ರಶತಂ ಜಜ್ಞೇ ಧೃತರಾಷ್ಟ್ರಸ್ಯ ಧೀಮತಃ ।
ದುರ್ಯೋಧನಪ್ರಭೃತಯೋ ಯುಯುತ್ಸುಃ ಕರಣಸ್ತಥಾ ॥

ತತೋ ದುಃಶಾಸನಶ್ಚೈವ ದುಃಸಹಶ್ಚಾಪಿ ಭಾರತ ।
ದುರ್ಮರ್ಷಣೋ ವಿಕರ್ಣಶ್ಚ ಚಿತ್ರಸೇನೋ ವಿವಿಂಶತಿಃ ॥

ಜಯಃ ಸತ್ಯವ್ರತಶ್ಚೈವ ಪುರುಮಿತ್ರಶ್ಚ ಭಾರತ ।
ವೈಶ್ಯಾಪುತ್ರೋ ಯುಯುತ್ಸುಶ್ಚ ಏಕಾದಶ ಮಹಾರಥಾಃ ॥

॥೧೧೮-೧೧೯-೧೨೦॥

ಉಳಿದ 10 ಹೆಸರುಗಳು (ದೀರ್ಘನೇತ್ರ, ಸುದರ್ಶನ, ಸುದರ್ಶನ, ವೈರಾಟ, ಜಯತ್ಸೇನ, ರವಿ, ಶತ್ರುಂಜಯ, ಶ್ರುತಾಂತ, ಶ್ರುತರ್ವಾ, ಜೈತ್ರ) ಯಾವ ಪಟ್ಟಿಯಲ್ಲಿಯೂ ಸೇರಿರುವುದಿಲ್ಲ.

೨೮ನೆಯ ಅಧ್ಯಾಯ :–ಸಹದೇವನಿಗೂ ಶಕುನಿಗೂ ಘೋರವಾದ ಯುದ್ಧವಾಗುತ್ತದೆ. ಶಕುನಿಯ ಮಗನಾದ ಉಲೂಕನು ಭೀಮಸೇನ ನೊಡನೆ ಯುದ್ಧಮಾಡುತ್ತಿರುತ್ತಾನೆ. ಭೀಕರವಾದ ಯುದ್ಧರಂಗದ ವರ್ಣನೆ ಯಿದೆ. ಶಕುನಿಯು ಪ್ರಾಸಾಯುಧದಿಂದ ಸಹದೇವನನ್ನು ಪ್ರಹರಿಸು ತ್ತಾನೆ. ಆ ಸಮಯದಲ್ಲಿ ಭೀಮಸೇನನು ಅವನ ರಕ್ಷಣೆಗೆ ಬರುತ್ತಾನೆ. ಕೌರವರ ಸೈನ್ಯವು ಪಲಾಯನಮಾಡುತ್ತದೆ. ದುರ್ಯೋಧನನು ಸೈನಿಕ ರನ್ನು ಹುರಿದುಂಬಿಸುತ್ತಾನೆ. ಶಕುನಿಯು ತನ್ನ ಅಶ್ವಸೈನಿಕರೊಡನೆ ಪುನಃ ಯುದ್ಧಕ್ಕೆ ಹಿಂದಿರುಗುತ್ತಾನೆ. ಒಂದು ಕಡೆ ಶಕುನಿ-ಉಲೂಕರೂ ಮತ್ತೊಂದು ಕಡೆ ಭೀಮ-ನಕುಲ-ಸಹದೇವರೂ ನಿಂತು ಯುದ್ಧಮಾಡು ತ್ತಿರುತ್ತಾರೆ. ಸಹದೇವನು ಉಲೂಕನನ್ನು ಸಂಹರಿಸುತ್ತಾನೆ. ಪರಮ ಕ್ರುದ್ಧನಾಗಿ ಯುದ್ಧಮಾಡಲು ಬಂದ ಶಕುನಿಯ ಧನುಸ್ಸನ್ನು ಸಹದೇವನು

ಕತ್ತರಿಸುತ್ತಾನೆ. ಶಕುನಿಯು ಅನುಕ್ರಮವಾಗಿ ಪ್ರಯೋಗಿಸಿದ ಕತ್ತಿ, ಗದೆ, ಶಕ್ತ್ಯಾಯುಧಗಳನ್ನು ಸಹದೇವನು ನಿರರ್ಥಕಗೊಳಿಸುತ್ತಾನೆ. ಭಯಗೊಂಡ ಶಕುನಿಯು ತನ್ನ ಸೈನಿಕರೊಡನೆ ಪಲಾಯನಮಾಡುತ್ತಾನೆ. ಶಕುನಿಯು ಯುದ್ಧದಿಂದ ಹಿಮ್ಮೆಟ್ಟಿದಂತೆ ಸಹದೇವನು ಅವನನ್ನೂ ಅವನ ಸೈನಿಕರನ್ನೂ ತಡೆದು ನಿಲ್ಲಿಸುತ್ತಾನೆ. ಪುನಃ ಯುದ್ಧವು ಪ್ರಾರಂಭವಾಗುತ್ತದೆ. ಸಹದೇವನು, ಪ್ರಾಸಾಯುಧದಿಂದ ಕೂಡಿದ್ದ ಶಕುನಿಯ ತೋಳುಗಳನ್ನು ಕತ್ತರಿಸಿ ಮರುಕ್ಷಣದಲ್ಲಿಯೇ ಅವನ ಶಿರಸ್ಸನ್ನೂ ಕತ್ತರಿಸುತ್ತಾನೆ. ಕೌರವರು ಪಲಾಯನಮಾಡುತ್ತಾರೆ. ಶ್ರೀಕೃಷ್ಣಸಹಿತರಾದ ಪಾಂಡುವಿನ ಮಕ್ಕಳು ಸಂತೋಷಭರಿತರಾಗುತ್ತಾರೆ.

೨೮ನೆಯ ಅಧ್ಯಾಯ :–ಶಕುನಿಯ ಕಡೆಯ ಸೈನಿಕರು ರೊಚ್ಚಿಗೆದ್ದು ಪುನಃ ಯುದ್ಧಮಾಡಲು ಬರುತ್ತಾರೆ. ಅರ್ಜುನನು ಅವರೆಲ್ಲರನ್ನೂ ಸಂಹರಿಸುತ್ತಾನೆ. ದುರ್ಯೋಧನನು ದಿಕ್ಕಾಪಾಲಾಗಿ ಓಡಿಹೋಗಿದ್ದ ತನ್ನ ಸೈನಿಕರನ್ನು ಪುನಃ ಹಿಂದಕ್ಕೆ ಬರಮಾಡಿಕೊಂಡು ಪಾಂಡವರೊಡನೆ ಯುದ್ಧಮಾಡುವಂತೆ ಹುರಿದುಂಬಿಸುತ್ತಾನೆ. ದುರ್ಯೋಧನನ ಆಜ್ಞಾನು ಸಾರವಾಗಿ ಬಂದ ಕೌರವಸೈನಿಕರೆಲ್ಲರನ್ನೂ ಪಾಂಡವರು ಧ್ವಂಸಮಾಡುತ್ತಾರೆ. ದುರ್ಯೋಧನನೊಬ್ಬನೇ ರಣಾಂಗಣದಲ್ಲಿ ಉಳಿದುಕೊಳ್ಳುತ್ತಾನೆ. ಮುಂದೇನು ಮಾಡಬೇಕೆಂಬುದು ತಿಳಿಯದೆ ತಾತ್ಕಾಲಿಕವಾಗಿ ಯುದ್ಧದಿಂದ ಹಿಮ್ಮೆಟ್ಟಲು ನಿಶ್ಚಯಿಸುತ್ತಾನೆ. ಸತ್ತುಹೋಗಿದ್ದ ತನ್ನ ಕುದುರೆಯನ್ನೂ ಬಿಟ್ಟು ಪೂರ್ವದಿಕ್ಕಿಗೆ ಓಡಿಹೋಗುತ್ತಾನೆ.

ಆ ಸಮಯದಲ್ಲಿ ಪಾಂಡವರ ಕಡೆ ಎರಡು ಸಾವಿರ ರಥಗಳೂ, ಏಳುನೂರು ಆನೆಗಳೂ, ಐದು ಸಾವಿರ ಕುದುರೆಗಳೂ ಮತ್ತು ಹತ್ತು ಸಾವಿರ ಪದಾತಿಗಳೂ ಉಳಿದಿದ್ದುವೆಂದು ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ.

[ಮುಂದುವರಿಯುವುದು.]

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.